|| ಓಂ ಓಂ ನಮೋ ನಾರಾಯಣಾಯ|| ಶ್ರೀ ವೇದವ್ಯಾಸಾಯ ನಮಃ ||

## ಶ್ರೀ ಕೃಷ್ಣದ್ವೈಪಾಯನ ವೇದವ್ಯಾಸ ವಿರಚಿತ

# ಶ್ರೀ ಮಹಾಭಾರತ



## ಮುಖ್ಯ ಕಥಾ ಪ್ರಸಂಗಗಳು (ಸಂಪುಟ ೫)

ಡಾ| ಬಿ. ಎಮ್. ರಮೇಶ್




ಬನದಕೊಪ್ಪದ ಶ್ರೀ ಲಕ್ಷ್ಮೀನಾರಾಯಣ ದೇವರು

# ಮುಖ್ಯ ಕಥಾ ಪ್ರಸಂಗಗಳು

ಕರ್ಣ ಪರ್ವ ..................................................................... 5
ಯುದ್ಧದ ಹದಿನೇಳನೇ ರಾತ್ರಿ ಕರ್ಣವಧಶ್ರವಣ; ಧೃತರಾಷ್ಟ್ರಶೋಕ ..... 5
ಹದಿನಾರನೇ ದಿನದ ಯುದ್ಧ: ಕರ್ಣ ಸೇನಾಪತ್ಯ........................... 47
ಹದಿನೇಳನೇ ದಿನದ ಯುದ್ಧ: ಶಲ್ಯನು ಕರ್ಣನ ಸಾರಥಿಯಾದುದು .....166
ಕರ್ಣನ ಕುರಿತಾಗಿ ಯುಧಿಷ್ಠಿರ-ಅರ್ಜುನರಲ್ಲಿ ಮನಸ್ತಾಪ; ಕೃಷ್ಣನು ಅವರನ್ನು ಸಮಾಧಾನಪಡಿಸಿದುದು ....................................371
ಹದಿನೇಳನೇ ದಿನದ ಯುದ್ಧ: ಕರ್ಣವಧೆ.....................................511
ಶಲ್ಯ ಪರ್ವ ..............................................................................583
ದುರ್ಯೋಧನನು ಹತನಾದುದನ್ನು ಕೇಳಿ ಧೃತರಾಷ್ಟ್ರನ ಶೋಕ........583
ಹದಿನೆಂಟನೇ ದಿನದ ಯುದ್ಧ: ಶಲ್ಯ ಸೇನಾಪತ್ಯ ............................598
ಹದಿನೆಂಟನೇ ದಿನದ ಯುದ್ಧ: ಶಲ್ಯ ವಧೆ .....................................626
ಹದಿನೆಂಟನೇ ದಿನದ ಯುದ್ಧ: ದುರ್ಯೋಧನನ ಪಲಾಯನ ............693
ಹದಿನೆಂಟನೇ ದಿನದ ಯುದ್ಧ: ದುರ್ಯೋಧನ ವಧೆ........................788
ಹದಿನೆಂಟನೇ ದಿನದ ಯುದ್ಧ: ಅಶ್ವತ್ಥಾಮನಿಗೆ ಕುರುಸೇನಾಪತ್ಯದ ಅಭಿಷೇಕ...............................................................................931
ಸೌಪ್ತಿಕ ಪರ್ವ .........................................................................939

ರಾತ್ರಿ ಮಲಗಿದ್ದ ಪಾಂಡವ ಸೇನೆಯನ್ನು ಆಕ್ರಮಣಿಸಲು ಅಶ್ವತ್ಥಾಮನು ನಿಶ್ಚಯಿಸಿದುದು.........................................................939
ಹದಿನೆಂಟನೇ ದಿನದ ರಾತ್ರಿ ಅಶ್ವತ್ಥಾಮನು ಪಾಂಡವ ಶಿಬಿರದಲ್ಲಿದ್ದವರೆಲ್ಲರನ್ನೂ ಸಂಹರಿಸಿದುದು ..................................971
ದುರ್ಯೋಧನನ ಪ್ರಾಣತ್ಯಾಗ.........................................1009
ಪಾಂಡವರು ಅಶ್ವತ್ಥಾಮನಿಗೆ ಪ್ರತೀಕಾರವನ್ನೆಸಗಿದುದು................1018

# ಕರ್ಣ ಪರ್ವ




## ಯುದ್ಧದ ಹದಿನೇಳನೇ ರಾತ್ರಿ

## ಕರ್ಣವಧಶ್ರವಣ; ಧೃತರಾಷ್ಟ್ರಶೋಕ

ಕರ್ಣನು ಹತನಾಗಲು ಆ ರಾತ್ರಿಯೇ ದೀನ ಗಾವಲ್ಗಣಿಯು ವಾಯುವೇಗ ಸಮಾನ ಕುದುರೆಗಳನ್ನು ಕಟ್ಟಿದ್ದ ರಥದಲ್ಲಿ ಕುಳಿತು ನಾಗಪುರಕ್ಕೆ ಹೊರಟನು. ಹಸ್ತಿನಾಪುರಕ್ಕೆ ಹೋಗಿ ತುಂಬಾ ಉದ್ವಿಗ್ನಮಾನಸನಾದ ಅವನು ಬಾಂಧವಶೂನ್ಯ ಧೃತರಾಷ್ಟ್ರನ ಬಳಿ

ಹೋದನು. ಅತ್ಯಂತ ದುಃಖದಿಂದ ಕಳೆಗುಂದಿದ್ದ ರಾಜನನ್ನು ಸ್ವಲ್ಪಹೊತ್ತು ನೋಡಿ ಅವನು ರಾಜನ ಪಾದಗಳಲ್ಲಿ ತಲೆಯನ್ನಿಟ್ಟು ಕೈಮುಗಿದು ವಂದಿಸಿದನು. ಯಥಾನ್ಯಾಯವಾಗಿ ಮಹೀಪತಿ ಧೃತರಾಷ್ಟ್ರನನ್ನು ಗೌರವಿಸಿ "ಅಯ್ಯೋ ಕಷ್ಟವೇ!" ಎಂದು ಹೇಳಿ ಅನಂತರ ಈ ಮಾತುಗಳನ್ನಾಡಿದನು:

> "ಕ್ಷಿತಿಪತೇ! ನಾನು ಸಂಜಯ! ನೀನು ಸುಖದಿಂದಿರುವೆಯಷ್ಟೇ? ನಿನ್ನದೇ ದೋಷದಿಂದ ಆಪತ್ತನ್ನು ತಂದುಕೊಂಡು ವಿಮೋಹಿತನಾಗಿಲ್ಲ ತಾನೇ? ವಿದುರ, ದ್ರೋಣ, ಗಾಂಗೇಯ ಮತ್ತು ಕೇಶವರು ಹೇಳಿದ್ದ ಹಿತ ಮಾತುಗಳನ್ನು ಸ್ವೀಕರಿಸದೇ ಇದ್ದುದನ್ನು ನೆನಪಿಸಿಕೊಂಡು ನೀನು ಈಗ ವ್ಯಥೆಪಡುತ್ತಿಲ್ಲ ತಾನೇ? ಪರಶುರಾಮ, ನಾರದ, ಮತ್ತು ಕಣ್ವರು ಸಭಾಂಗಣದಲ್ಲಿ ಹೇಳಿದ್ದ ಹಿತಮಾತುಗಳನ್ನು ಸ್ವೀಕರಿಸದೇ ಇದ್ದುದನ್ನು ಸ್ಮರಿಸಿಕೊಂಡು ಈಗ ನೀನು ವ್ಯಥೆಪಡುತ್ತಿಲ್ಲ ತಾನೇ? ನಿನ್ನದೇ ಹಿತವನ್ನು ಬಯಸುತ್ತಿದ್ದ ಸುಹೃದಯ ಭೀಷ್ಮ ಮತ್ತು ದ್ರೋಣಾದಿಗಳು ಶತ್ರುಗಳಿಂದ ಯುದ್ಧದಲ್ಲಿ ಹತರಾದರೆನ್ನುವುದನ್ನು ನೆನಪಿಸಿಕೊಳ್ಳುತ್ತಾ ನೀನು ವ್ಯಥೆಪಡುತ್ತಿಲ್ಲ ತಾನೇ?"

ಅಂಜಲೀ ಬದ್ಧನಾಗಿ ಈ ರೀತಿ ಹೇಳುತ್ತಿದ್ದ ಸೂತಪುತ್ರನಿಗೆ ರಾಜನು ದುಃಖಾರ್ತನಾಗಿ ದೀರ್ಘ ನಿಟ್ಟುಸಿರು ಬಿಡುತ್ತಾ ಹೇಳಿದನು:

"ಸಂಜಯ! ದಿವ್ಯಾಸ್ತ್ರಗಳನ್ನು ಹೊಂದಿದ್ದ ಶೂರ ಗಾಂಗೇಯ ಮತ್ತು ಪರಮೇಷ್ವಾಸ ದ್ರೋಣರು ಹತರಾಗಲು ನನ್ನ ಮನಸ್ಸಿಗೆ ಬಹಳ ವ್ಯಥೆಯುಂಟಾಗಿತ್ತು. ಹತ್ತುದಿನಗಳ ಪರ್ಯಂತವಾಗಿ ಪ್ರತಿದಿನವೂ ಸಹಸ್ರಾರು ಕವಚಧಾರಿ ಮಹಾರಥರನ್ನು ಸಂಹರಿಸಿದ ತೇಜಸ್ವೀ ವಸುಸಂಭವನನ್ನು ಯಜ್ಞಸೇನನ ಮಗ ಶಿಖಂಡಿಯಿಂದ ರಕ್ಷಿಸಲ್ಪಟ್ಟ ಪಾಂಡವೇಯನು ಸಂಹರಿಸಿದನು ಎಂದು ಕೇಳಿ ನನ್ನ ಮನಸ್ಸಿಗೆ ಬಹಳ ವ್ಯಥೆಯುಂಟಾಯಿತು. ಯಾವ ಮಹಾತ್ಮನಿಗೆ ಭಾರ್ಗವನು ಪರಮಾಸ್ತ್ರವನ್ನು ನೀಡಿದ್ದನೋ, ಯಾರು ಸಾಕ್ಷಾದ್ ಪರಶುರಾಮನಿಂದ ಬಾಲ್ಯದಲ್ಲಿಯೇ ಧನುರ್ವೇದವನ್ನು ಪಡೆದುಕೊಂಡನೋ, ಯಾರ ಪ್ರಸಾದದಿಂದ ಮಹಾಬಲಶಾಲಿ ರಾಜಪುತ್ರ ಕೌಂತೇಯರು ಮತ್ತು ಅನ್ಯ ವಸುಧಾಧಿಪರು ಮಹಾರಥತ್ವವನ್ನು ಹೊಂದಿದರೋ ಆ ಸತ್ಯಸಂಧ ಮಹೇಷ್ವಾಸ ದ್ರೋಣನನ್ನು ಯುದ್ಧದಲ್ಲಿ ಧೃಷ್ಟದ್ಯುಮ್ನನು ಸಂಹರಿಸಿದನು ಎನ್ನುವುದನ್ನು

ಕೇಳಿ ನನ್ನ ಮನಸ್ಸಿಗೆ ಬಹಳ ವ್ಯಥೆಯುಂಟಾಯಿತು. ಅಸ್ತ್ರವಿದ್ಯೆಯಲ್ಲಿ ಮೂರುಲೋಕಗಳಲ್ಲಿಯೂ ಯಾರ ಸಮಾನ ಯಾವ ಪುರುಷನೂ ಇಲ್ಲವೋ ಅಂತಹ ದ್ರೋಣನು ಹತನಾದುದನ್ನು ಕೇಳಿ ನನ್ನವರು ಏನು ಮಾಡಿದರು? ಸಂಶಪ್ತಕ ಸೇನೆಯನ್ನು ಮಹಾತ್ಮ ಪಾಂಡವ ಧನಂಜಯನು ವಿಕ್ರಮದಿಂದ ಯಮಸಾದನಕ್ಕೆ ಕಳುಹಿಸಲು, ಧೀಮತ ದ್ರೋಣಪುತ್ರನ ನಾರಾಯಣಾಸ್ತ್ರವೂ ನಾಶಗೊಳ್ಳಲು, ಅಳಿದುಳಿದ ಸೇನೆಗಳೊಂದಿಗೆ ನನ್ನವರು ಏನು ಮಾಡಿದರು? ದ್ರೋಣನು ಹತನಾದ ನಂತರ ನನ್ನವರು ಪಲಾಯನ ಮಾಡಿ ಸಾಗರದ ಮಧ್ಯೆ ನೌಕೆಯನ್ನು ಕಳೆದುಕೊಂಡವರಂತೆ ಶೋಕಸಾಗರದಲ್ಲಿ ಮುಳುಗಿಹೋಗಿರಬಹುದೆಂದು ನಾನು ಭಾವಿಸುತ್ತೇನೆ. ಸಂಜಯ! ಸೇನೆಗಳು ಚೆಲ್ಲಾಪಿಲ್ಲಿಯಾಗಿ ಓಡಿ ಹೋಗುತ್ತಿರಲು ದುರ್ಯೋಧನ, ಕರ್ಣ, ಭೋಜ ಕೃತವರ್ಮ, ಮದ್ರರಾಜ ಶಲ್ಯ, ದ್ರೌಣಿ, ಕೃಪ, ಮತ್ತು ನನ್ನ ಉಳಿದ ಪುತ್ರರ ಮತ್ತು ಅನ್ಯರ ಮುಖಕಾಂತಿಯು ಹೇಗಿದ್ದಿತು? ರಣದಲ್ಲಿ ಪಾಂಡವರು ಮತ್ತು ನನ್ನವರ ನಡುವೆ ಏನೆಲ್ಲ ನಡೆಯಿತೋ ಅವೆಲ್ಲವನ್ನೂ ನಡೆದಂತೆಯೇ ನನಗೆ ಹೇಳು!”

ಸಂಜಯನು ಹೇಳಿದನು:

“ಮಾರಿಷ! ಪಾಂಡವ ಕೌರವರ ನಡುವೆ ಏನು ನಡೆಯಿತೆನ್ನುವುದನ್ನು ಕೇಳಿ ವ್ಯಥೆಪಡಬಾರದು. ಏಕೆಂದರೆ ದೈವದಿಂದಲೇ ದುಃಖವು ಪ್ರಾಪ್ತವಾದಾಗ ತಿಳಿದವನು ವ್ಯಥೆಪಡುವುದಿಲ್ಲ. ಮನುಷ್ಯನಿಗೆ ನಡೆಯಬಾರದ್ದುದು ನಡೆಯಬಹುದು ಅಥವಾ ಒಳ್ಳೆಯದೇ ಆಗಬಹುದು. ಪ್ರಾಪ್ತವಾಗಿದ್ದುದಕ್ಕೆ ಅಥವಾ ಪ್ರಾಪ್ತವಾಗದೇ ಇದ್ದುದಕ್ಕೆ ತಿಳಿದವನು ವ್ಯಥೆಪಡುವುದಿಲ್ಲ.”

ಧೃತರಾಷ್ಟ್ರನು ಹೇಳಿದನು:

“ಸಂಜಯ! ಇವೆಲ್ಲವೂ ದೈವೇಚ್ಛೆಯಿಂದ ನಡೆಯುತ್ತಿದೆಯೆಂದು ನನಗೆ ಮೊದಲೇ ತಿಳಿದಿದ್ದುದರಿಂದ ಏನನ್ನು ಕೇಳಿದರೂ ನನ್ನ ಮನಸ್ಸು ವ್ಯಥೆಗೊಳ್ಳುವುದಿಲ್ಲ. ನಿನಗಿಷ್ಟವಾದಂತೆ ಹೇಳುತ್ತಾ ಹೋಗು!”

ಸಂಜಯನು ಹೇಳಿದನು:

“ಮಹೇಷ್ವಾಸ ದ್ರೋಣನು ಹತನಾಗಲು ನಿನ್ನ ಮಹಾರಥ ಪುತ್ರರು ಬಾಡಿದ ಮುಖವುಳ್ಳವರಾಗಿ ವಿಷಣ್ಣರಾಗಿ

ಚೇತನವನ್ನೇ ಕಳೆದುಕೊಂಡರು. ಶೋಕಾರ್ತರಾಗಿ ತಲೆ ತಗ್ಗಿಸಿಕೊಂಡಿದ್ದ ಆ ಎಲ್ಲ ಶಸ್ತ್ರಭೃತರೂ ಪರಸ್ಪರರನ್ನು ನೋಡುತ್ತಲೂ ಇರಲಿಲ್ಲ ಮತ್ತು ಪರಸ್ಪರರೊಂದಿಗೆ ಮಾತನಾಡುತ್ತಲೂ ಇರಲಿಲ್ಲ. ಅವರನ್ನು ನೋಡಿ ನಿನ್ನ ಸೇನೆಗಳು ಕೂಡ ವ್ಯಥೆಗೊಂಡವು. ದುಃಖದಿಂದ ನಡುಗುತ್ತಾ ಮೇಲೆ ಆಕಾಶವನ್ನೇ ಮತ್ತೆ ಮತ್ತೆ ನೋಡುತ್ತಿದ್ದರು. ದ್ರೋಣನು ಕೆಳಗುರುಳಿದುದನ್ನು ನೋಡಿ ರಕ್ತದಿಂದ ಸಂಪೂರ್ಣ ತೋಯ್ದು ಹೋಗಿದ್ದ ಶಸ್ತ್ರಗಳು ಸೈನಿಕರ ಕೈಗಳಿಂದ ಕೆಳಗೆ ಜಾರಿ ಬಿದ್ದವು. ಅವರು ಕಟ್ಟಿಕೊಂಡಿದ್ದ ಆಯುಧಗಳೂ ಅನಿಷ್ಟರೀತಿಯಲ್ಲಿ ಜೋಲಾಡುತ್ತಾ ಆಕಾಶದಲ್ಲಿರುವ ನಕ್ಷತ್ರಗಳಂತೆ ಕಾಣುತ್ತಿದ್ದವು. ಹೀಗೆ ಆರ್ತರಾಗಿ ಸತ್ತ್ವವನ್ನೇ ಕಳೆದುಕೊಂಡವರಂತೆ ಸ್ತಬ್ಧವಾಗಿ ನಿಂತಿರುವ ತನ್ನ ಸೇನೆಯನ್ನು ನೋಡಿ ರಾಜಾ ದುರ್ಯೋಧನನು ಅವರಿಗೆ ಹೇಳಿದನು: "ಯುದ್ಧದಲ್ಲಿ ನಿಮ್ಮ ಬಾಹುವೀರ್ಯವನ್ನೇ ಆಶ್ರಯಿಸಿ ನಾನು ಪಾಂಡವರನ್ನು ಯುದ್ಧಕ್ಕೆ ಆಹ್ವಾನಿಸಿದ್ದೆನು. ಅದೇ ಯುದ್ಧವು ಈಗಲೂ ನಡೆಯುತ್ತಿದೆ. ಈಗ ದ್ರೋಣನು ಹತನಾದುದರಿಂದ ನೀವು ವಿಷಣ್ಣರಾಗಿರುವಂತೆ ತೋರುತ್ತಿರುವಿರಿ. ಸಮರದಲ್ಲಿ ಯುದ್ಧಮಾಡುವಾಗ ಸಾಮಾನ್ಯವಾಗಿ ಯೋಧರು

ವಧಿಸಲ್ಪಡುತ್ತಲೇ ಇರುತ್ತಾರೆ. ರಣದಲ್ಲಿ ಯುದ್ಧಮಾಡುವವನಿಗೆ ಜಯವಾಗಲೀ ವಧೆಯಾಗಲೀ ಆಗಿಯೇ ಆಗುತ್ತದೆ. ಅದರಲ್ಲಿ ವಿಚಿತ್ರವಾದುದೇನಿದೆ? ಎಲ್ಲಕಡೆಗಳಿಂದ ಶತ್ರುಗಳನ್ನು ಮುತ್ತಿ ಯುದ್ಧಮಾಡಿ! ಯುದ್ಧದಲ್ಲಿ ದಿವ್ಯಾಸ್ತ್ರಗಳೊಂದಿಗೆ ಸಂಚರಿಸುತ್ತಿರುವ ಮಹೇಷ್ವಾಸ ಮಹಾಬಲ ಮಹಾತ್ಮ ವೈಕರ್ತನ ಕರ್ಣನನ್ನು ನೋಡಿ! ಇವನಿಂದ ಯುದ್ಧದಲ್ಲಿ ಭಯಗೊಂಡ ಕುಂತೀಪುತ್ರ ಧನಂಜಯನು ಕ್ಷುದ್ರಮೃಗವೊಂದು ಸಿಂಹದಿಂದ ಹಿಂದೆಸರಿಯುವಂತೆ ಹಿಂದೆಸರಿಯುತ್ತಾನೆ. ಸಾವಿರ ಆನೆಗಳ ಬಲವಿರುವ ಮಹಾಬಲ ಭೀಮಸೇನನನ್ನು ಕೂಡ ಇವನು ಮಾನುಷ ಯುದ್ಧದಿಂದಲೇ ದುರವಸ್ಥೆಗೆ ಈಡುಮಾಡುವವನಿದ್ದಾನೆ. ಮಾಯಾವೀ ಘಟೋತ್ಕಚನನ್ನು ರಣದಲ್ಲಿ ದಿವ್ಯಾಸ್ತ್ರ ಶಕ್ತಿಯಿಂದ ಸಂಹರಿಸಿ ಭೈರವವಾಗಿ ಕೂಗಿದ ಶೂರ ವೀರ ಸತ್ಯಸಂಧ ಧೀಮತ ಕರ್ಣನ ಬಾಹುಗಳ ಅಕ್ಷಯ್ಯ ಬಲವನ್ನು ಇಂದು ಯುದ್ಧದಲ್ಲಿ ನೋಡುವಿರಿ! ಮಹಾತ್ಮರೇ! ಪಾಂಡು-ಪಾಂಚಾಲ ಸೇನೆಗಳ ಮೇಲೆ ದ್ರೋಣಪುತ್ರ ಮತ್ತು ರಾಧೇಯರಿಬ್ಬರೂ ತಮ್ಮ ವಿಕ್ರಾಂತವನ್ನು ಪ್ರಯೋಗಿಸುವುದನ್ನು ನೀವು ನೋಡಲಿರುವಿರಿ.

ನೀವೆಲ್ಲರೂ ಶೂರರು, ಪ್ರಾಜ್ಞರು, ಉತ್ತಮ ಕುಲದಲ್ಲಿ ಉದ್ಭವಿಸಿದವರು. ಶೀಲವಂತರು ಮತ್ತು ಕೃತಾಸ್ತ್ರರು. ಪರಸ್ಪರರನ್ನು ರಕ್ಷಿಸಲು ಸಮರ್ಥರು.”

ನೃಪನು ಹೀಗೆ ಹೇಳಲು ಮಹಾಬಲ ವೈಕರ್ತನ ಕರ್ಣನು ಜೋರಾಗಿ ಸಿಂಹನಾದಗೈದನು ಮತ್ತು ಯುದ್ಧವನ್ನು ಪ್ರಾರಂಭಿಸಿದನು. ಎಲ್ಲರೂ ನೋಡುತ್ತಿದ್ದಂತೆಯೇ ಅವನು ಸೃಂಜಯ-ಪಾಂಚಾಲ-ಕೇಕಯರು ಮತ್ತು ವಿದೇಹದವರೊಂದಿಗೆ ಮಹಾ ಕದನವನ್ನು ನಡೆಸಿದನು. ಅವನ ಧನುಸ್ಸಿನಿಂದ ಒಂದರ ಅಗ್ರಭಾಗವು ಇನ್ನೊಂದರ ಪುಂಖಗಳಿಗೆ ಅಂಟಿಕೊಂಡು ದುಂಬಿಗಳ ಸಾಲಿನಂತೆ ನೂರಾರು ಬಾಣಗಳು ಹೊರಬರುತ್ತಿದ್ದವು. ಅವನು ಸಹಸ್ರಾರು ಯೋಧರನ್ನು ಸಂಹರಿಸಿ ತರಸ್ವಿಗಳಾಗಿದ್ದ ಪಾಂಚಾಲ-ಪಾಂಡವರನ್ನು ಬಹಳವಾಗಿ ಪೀಡಿಸಿ, ಅರ್ಜುನನಿಂದ ಹತನಾದನು.”

ಇದನ್ನು ಕೇಳಿ ಅಂಬಿಕಾಸುತ ಧೃತರಾಷ್ಟ್ರನು ಶೋಕದ ಅಂತ್ಯವೇನೆನ್ನುವುದನ್ನೇ ಕಾಣದಾಗಿ, ಸುಯೋಧನನೇ ಹತನಾದನೆಂದು ತಿಳಿದು ವಿಹ್ವಲನಾಗಿ ಮೂರ್ಛೆಗೊಂಡ ಆನೆಯಂತೆ ನೆಲದ ಮೇಲೆ

ಬಿದ್ದನು. ವಿಹ್ವಲ ರಾಜಸತ್ತಮನು ಹಾಗೆ ನೆಲದ ಮೇಲೆ ಬೀಳಲು ಸ್ತ್ರೀಯರ ಮಹಾ ಆರ್ತನಾದವುಂಟಾಯಿತು. ಮಹಾಘೋರ ಶೋಕಾರ್ಣವದಲ್ಲಿ ಮುಳುಗುತ್ತಿದ್ದ ಆ ಭರತಸ್ತ್ರೀಯರ ಕೂಗು ಭೂಮಿಯ ಎಲ್ಲದಿಕ್ಕುಗಳನ್ನೂ ತುಂಬಿತು. ರಾಜನ ಬಳಿಬಂದ ಗಾಂಧಾರಿಯೂ ಮತ್ತು ಅಂತಃಪುರದ ಸರ್ವ ಸ್ತ್ರೀಯರೂ ಮೂರ್ಛೆತಪ್ಪಿ ಭೂಮಿಯ ಮೇಲೆ ಬಿದ್ದರು. ಬಹಳವಾಗಿ ರೋದಿಸುತ್ತಾ ಪುನಃ ಪುನಃ ಮೂರ್ಛೆಹೋಗುತ್ತಿದ್ದ ಅವರನ್ನು ಸಂಜಯನು ಅನೇಕರೀತಿಯಲ್ಲಿ ಸಮಾಧಾನಗೊಳಿಸಲು ಪ್ರಯತ್ನಿಸಿದನು. ಸಮಾಧಾನಗೊಳಿಸಲ್ಪಡುತ್ತಿದ್ದರೂ ಕಣ್ಣೀರು ತುಂಬಿದ ಆ ಸ್ತ್ರೀಯರು ಭಿರುಗಾಳಿಗೆ ಸಿಲುಕಿದ ಬಾಳೆಯ ಗಿಡಗಳಂತೆ ನಡುಗಿ ತೂರಾಡುತ್ತಿದ್ದರು. ವಿದುರನೂ ಕೂಡ ನೀರನ್ನು ಸಿಂಪಡಿಸಿ ಪ್ರಜ್ಞಾಚಕ್ಷು ಈಶ್ವರ ರಾಜ ಕೌರವನನ್ನು ಸಮಾಧಾನಗೊಳಿಸತೊಡಗಿದನು. ಮೆಲ್ಲನೆ ಎಚ್ಚೆತ್ತು ಸ್ತ್ರೀಯರನ್ನು ಕೂಡ ಕಂಡ ರಾಜಾ ನೃಪನು ಉನ್ಮತ್ತನಾದವನಂತೆ ಸುಮ್ಮನಾಗಿಯೇ ಕುಳಿತಿದ್ದನು. ಅನಂತರ ತುಂಬಾ ಹೊತ್ತು ಯೋಚಿಸಿ ಪುನಃ ಪುನಃ ನಿಟ್ಟುಸಿರು ಬಿಡುತ್ತಾ ಅವನು ತನ್ನ ಮಕ್ಕಳನ್ನು ಬಹಳವಾಗಿ ನಿಂದಿಸಿದನು ಮತ್ತು ಪಾಂಡವರನ್ನು ಪ್ರಶಂಸಿಸಿದನು. ತನ್ನ ಮತ್ತು ಶಕುನಿ ಸೌಬಲನ ಬುದ್ಧಿಗಳನ್ನು ನಿಂದಿಸುತ್ತಿದ್ದನು. ತುಂಬಾಹೊತ್ತು ಯೋಚಿಸುತ್ತಿದ್ದು ಪುನಃ ಪುನಃ

ನಡುಗುತ್ತಿದ್ದನು. ಪುನಃ ಧೈರ್ಯವನ್ನು ತಂದುಕೊಂಡು ಮನಸ್ಸನ್ನು ಸ್ಥಿರವಾಗಿರಿಸಿಕೊಂಡು ಮತ್ತೆ ಗಾವಲ್ಗಣಿ ಸೂತ ಸಂಜಯನನ್ನು ಪ್ರಶ್ನಿಸಿದನು:

"ಸಂಜಯ! ನೀನು ಹೇಳಿದ ಮಾತುಗಳನ್ನು ನಾನು ಕೇಳಿಸಿಕೊಂಡೆನು. ದುರ್ಯೋಧನನು ಯಮಕ್ಷಯಕ್ಕೆ ಹೋಗಲಿಲ್ಲ ತಾನೇ? ನೀನೀಗ ಹೇಳಿದ ವಿಷಯವನ್ನೇ ಪುನಃ ಯಥಾವತ್ತಾಗಿ ಹೇಳು!"

ಇದನ್ನು ಕೇಳಿದ ಸೂತನು ರಾಜನಿಗೆ ಹೇಳಿದನು:

"ರಾಜನ್! ಮಹಾರಥ ಮಕ್ಕಳೊಂದಿಗೆ, ಮಹೇಷ್ವಾಸ ಸಹೋದರರೊಂದಿಗೆ ಸೂತಪುತ್ರ ವೈಕರ್ತನನು ಹತನಾಗಿ ದೇಹವನ್ನು ತ್ಯಜಿಸಿದನು. ಯಶೋವಂತ ಪಾಂಡವ ಭೀಮಸೇನನು ಸಂಯುಗದಲ್ಲಿ ದುಃಶಾಸನನನ್ನೂ ಸಂಹರಿಸಿ ಕೋಪದಿಂದ ಅವನ ರಕ್ತವನ್ನೂ ಕುಡಿದನು."

ಇದನ್ನು ಕೇಳಿ ಶೋಕವ್ಯಾಕುಲ ಚೇತನನಾದ ಅಂಬಿಕಾಸುತ ಧೃತರಾಷ್ಟ್ರನು ಸೂತ ಸಂಜಯನಿಗೆ ಹೇಳಿದನು:

"ಅಯ್ಯಾ! ನಾನು ಮಾಡಿದ ಅನ್ಯಾಯದಿಂದಾಗಿ ವೈಕರ್ತನನು

ಹತನಾದನೆಂದು ಕೇಳಿ ಶೋಕದಿಂದ ನನ್ನ ಮರ್ಮಸ್ಥಾನಗಳು ಕತ್ತರಿಸಲ್ಪಡುತ್ತಿವೆ. ಕೊರೆಯುತ್ತಿರುವ ಈ ದುಃಖವನ್ನು ಪಾರುಮಾಡಲು ಬಯಸುತ್ತಿರುವ ನನಗೆ ಕುರುಗಳಲ್ಲಿ ಮತ್ತು ಸೃಂಜಯರಲ್ಲಿ ಯಾವ ಪರಮ ಕೃತಾಸ್ತ್ರರು ಜೀವದಿಂದಿರುವವರು ಮತ್ತು ಯಾರು ಮೃತರಾದರು ಎಂದು ಹೇಳು!”

ಸಂಜಯನು ಹೇಳಿದನು:

“ರಾಜನ್! ಹತ್ತು ದಿನಗಳಲ್ಲಿ ಪ್ರತಿದಿನವೂ ಹತ್ತುಸಾವಿರ ಪಾಂಡವ ಯೋಧರನ್ನು ಸಂಹರಿಸಿ ದುರಾಧರ್ಷ ಪ್ರತಾಪವಾನ್ ಶಾಂತನವನು ಹತನಾದನು. ಅನಂತರ ಯುದ್ಧದಲ್ಲಿ ಪಾಂಚಾಲರ ರಥಗುಂಪುಗಳನ್ನು ನಾಶಗೊಳಿಸಿದ ಮಹೇಷ್ವಾಸ ದುರ್ಧರ್ಷ ರುಕ್ಮರಥ ದ್ರೋಣನು ಹತನಾದನು. ಮಹಾತ್ಮ ಭೀಷ್ಮ ಮತ್ತು ದ್ರೋಣರಿಂದ ಹತರಾಗದೇ ಉಳಿದ ಸೇನೆಯ ಅರ್ಧವನ್ನು ಸಂಹರಿಸಿ ವೈಕರ್ತನ ಕರ್ಣನೂ ಹತನಾದನು. ರಾಜಪುತ್ರ ವಿವಿಂಶತಿಯು ರಣದಲ್ಲಿ ನೂರಾರು ಆನರ್ತಯೋಧರನ್ನು ಸಂಹರಿಸಿ ಹತನಾದನು. ಇನ್ನು ನಿನ್ನ ಮಗ ವಿಕರ್ಣನು

ವಾಹನ ಆಯುಧಗಳನ್ನು ಕಳೆದುಕೊಂಡರೂ ಶೂರನಾಗಿ ಕ್ಷತ್ರಧರ್ಮವನ್ನು ಸ್ಮರಿಸಿಕೊಂಡು ಶತ್ರುಗಳಿಗೆ ಎದುರಾಗಿ ನಿಂತು ದುರ್ಯೋಧನನು ಮಾಡಿದ್ದ ಅನೇಕ ಘೋರ ಪರಿಕ್ಲೇಶಗಳನ್ನು ಮತ್ತು ತಾನು ಮಾಡಿದ್ದ ಪ್ರತಿಜ್ಞೆಯನ್ನು ನೆನಪಿಸಿಕೊಂಡ ಭೀಮಸೇನನಿಂದ ಹತನಾದನು. ಅವಂತಿಯ ರಾಜಪುತ್ರ ವಿಂದಾನುವಿಂದರು ದುಷ್ಕರ ಸಾಹಸವನ್ನು ಮಾಡಿ ವೈವಸ್ವತಕ್ಷಯಕ್ಕೆ ಹೋದರು. ಸಿಂಧುರಾಷ್ಟ್ರವೇ ಮುಖ್ಯವಾಗಿ ಹತ್ತು ರಾಷ್ಟ್ರಗಳು ಯಾರ ಅಧೀನದಲ್ಲಿದ್ದವೋ, ಯಾರು ನಿನ್ನ ಶಾಸನದಡಿಯಲ್ಲಿದ್ದನೋ ಆ ವೀರನ ಹನ್ನೊಂದು ಅಕ್ಷೌಹಿಣೀ ಸೇನೆಗಳನ್ನೂ ನಿಶಿತ ಶರಗಳಿಂದ ಸೋಲಿಸಿ ಮಹಾವೀರ್ಯ ಜಯದ್ರಥನನ್ನು ಅರ್ಜುನನು ಸಂಹರಿಸಿದನು. ಹಾಗೆಯೇ ತಂದೆಯ ಶಾಸನಾನುಸಾರವಾಗಿಯೇ ನಡೆಯುತ್ತಿದ್ದ ದುರ್ಯೋಧನನ ಮಗ ತರಸ್ವೀ ಯುದ್ಧದುರ್ಮದ ಲಕ್ಷ್ಮಣನನ್ನು ಸೌಭದ್ರನು ಕೆಳಗುರುಳಿಸಿದನು. ಹಾಗೆಯೇ ದುಃಶಾಸನನ ಮಗ ವೀರ ಬಾಹುಶಾಲೀ ರಣೋತ್ಕಟನು ದ್ರೌಪದೇಯನ ವಿಕ್ರಮ್ಯದಿಂದ ಯಮಸಾದನಕ್ಕೆ ಹೋದನು. ಸಾಗರತೀರದಲ್ಲಿ ವಾಸಿಸುವ ಕಿರಾತರ ಅಧಿಪತಿ, ದೇವರಾಜನ ಸಖ, ಧರ್ಮಾತ್ಮ, ಬಹುಮತದಂತೆ ಪ್ರಿಯ ಸಖ, ಸದಾ

ಕ್ಷತ್ರಧರ್ಮದಲ್ಲಿ ನಿರತ ಮಹೀಪಾಲ ಭಗದತ್ತನು ಧನಂಜಯನ ವಿಕ್ರಮದಿಂದ ಯಮಸಾದನಕ್ಕೆ ಹೋದನು. ಹಾಗೆಯೇ ಕೌರವರ ದಾಯಾದಿ ಮಹಾಯಶಸ್ವಿ, ಸೋಮದತ್ತನ ಮಗ ಶೂರ ಭೂರಿಶ್ರವನು ಯುದ್ಧದಲ್ಲಿ ಸಾತ್ಯಕಿಯಿಂದ ಹತನಾದನು. ಕ್ಷತ್ರಿಯರ ಧನುರ್ಧರ ಅಂಬಷ್ಠ ಶ್ರುತಾಯುವೂ ಕೂಡ ಯುದ್ಧದಲ್ಲಿ ನಿರ್ಭಯದಿಂದ ಹೋರಾಡಿ ಸವ್ಯಸಾಚಿಯಿಂದ ಹತನಾದನು.ಯುದ್ಧದಲ್ಲಿ ಸದಾ ಕೃತಾಸ್ತ್ರನಾಗಿದ್ದ ಯುದ್ಧದುರ್ಮದನಾಗಿದ್ದ ನಿನ್ನ ಮಗ ದುಃಶಾಸನನನ್ನು ಭೀಮಸೇನನು ಕೆಳಗುರುಳಿಸಿದನು. ಅನೇಕ ಸಾವಿರ ಆನೆಗಳ ಅದ್ಭುತ ಸೇನೆಯನ್ನು ಹೊಂದಿದ್ದ ಸುದಕ್ಷಿಣನು ಸಂಗ್ರಾಮದಲ್ಲಿ ಸವ್ಯಸಾಚಿಯಿಂದ ಹತನಾದನು. ಕೋಸಲರ ಅಧಿಪತಿಯು ಅನೇಕ ನೂರು ಶತ್ರುಗಳನ್ನು ಸಂಹರಿಸಿ ಸೌಭದ್ರನ ವಿಕ್ರಮ್ಯದಿಂದ ಯಮಸಾದನಕ್ಕೆ ಹೋದನು. ಭೀಮಸೇನನೊಂದಿಗೆ ಅನೇಕ ಬಾರಿ ಯುದ್ಧಮಾಡಿ ನಿನ್ನ ಮಗ ಮಹಾರಥ ಚಿತ್ರಸೇನನು ಭೀಮಸೇನನಿಂದ ಹತನಾದನು. ಶತ್ರುಗಳ ಭಯವನ್ನು ವರ್ಧಿಸುವ, ಖಡ್ಗ-ಗುರಾಣಿಗಳನ್ನು ಧರಿಸಿದ್ದ ಶ್ರೀಮಾನ್ ಶೂರ ಮದ್ರರಾಜನ ಮಗನು ಸೌಭದ್ರನಿಂದ ಹತನಾದನು.

ಸಮರದಲ್ಲಿ ಕರ್ಣನ ಸಮನಾಗಿದ್ದ ಮಹಾತೇಜಸ್ವಿ ಶೀಘ್ರಾಸ್ತ್ರ, ಕೃತನಿಶ್ಚಯ ವೃಷಸೇನನು ಕರ್ಣನು ನೋಡುತ್ತಿದ್ದಂತೆಯೇ ಅಭಿಮನ್ಯುವಿನ ವಧೆಯನ್ನು ಮತ್ತು ತಾನು ಮಾಡಿದ ಪ್ರತಿಜ್ಞೆಯನ್ನು ನೆನಪಿಸಿಕೊಂಡ ಧನಂಜಯನ ವಿಕ್ರಮದಿಂದಾಗಿ ಯಮಸಾದನಕ್ಕೆ ಹೋದನು. ನಿತ್ಯವೂ ಪಾಂಡವರೊಡನೆ ವೈರವನ್ನು ಸಾಧಿಸಿಕೊಂಡು ಬಂದಿದ್ದ ಪೃಥಿವೀಪತಿ ಶ್ರುತಾಯುಯು ತನ್ನ ವೈರವನ್ನು ಪ್ರಕಟಿಸಿ ಪಾರ್ಥನಿಂದ ಕೆಳಗುರುಳಿಸಲ್ಪಟ್ಟನು. ಸಹೋದರನಂತಿದ್ದ, ಸೋದರಮಾವನ ಮಗ, ಶಲ್ಯಪುತ್ರ ವಿಕ್ರಾಂತ ರುಕ್ಮರಥನನ್ನು ಯುದ್ಧದಲ್ಲಿ ಸಹದೇವನು ಸಂಹರಿಸಿದನು. ವೃದ್ಧನಾಗಿದ್ದ ರಾಜಾ ಭಗೀರಥ ಮತ್ತು ಕೇಕಯ ಬೃಹತ್ಕ್ಷತ್ರ ಇಬ್ಬರು ಪರಾಕ್ರಮಿಗಳೂ, ವಿಕ್ರಾಂತರೂ, ವೀರ್ಯವತ್ತರರೂ ಹತರಾದರು. ಕೃತಪ್ರಜ್ಞ ಮಹಾಬಲ ಭಗದತ್ತನ ಮಗನು ರಣದಲ್ಲಿ ಗಿಡುಗನಂತೆ ಸಂಚರಿಸುತ್ತಾ ನಕುಲನಿಂದ ಹತನಾದನು. ಹಾಗೆಯೇ ನಿನ್ನ ಪಿತಾಮಹ ಬಾಹ್ಲೀಕನು ಬಾಹ್ಲೀಕರೊಂದಿಗೆ ಭೀಮಸೇನನ ವಿಕ್ರಮದಿಂದಾಗಿ ಯಮಸಾದನಕ್ಕೆ ಹೋದನು. ಮಾಗಧ ಜರಾಸಂಧನ ಮಗ ಜಯತ್ಸೇನನು ಯುದ್ಧದಲ್ಲಿ ಮಹಾತ್ಮ ಸೌಭದ್ರನಿಂದ

ಹತನಾದನು. ನಿನ್ನ ಮಹಾರಥ ಮಕ್ಕಳಾದ ದುರ್ಮುಖ ಮತ್ತು ದುಃಸಹರು ಭೀಮಸೇನನ ಗದೆಯಿಂದ ಹತರಾದರು. ದುರ್ಮರ್ಷಣ, ದುರ್ವಿಷಹ ಮತ್ತು ದುರ್ಜಯರು ದುಷ್ಕರ ಕರ್ಮಗಳನ್ನೆಸಗಿ ವೈವಸ್ವತಕ್ಷಯವನ್ನು ಸೇರಿದರು. ನಿನ್ನ ಸಚಿವ ಪರಮ ವೀರ್ಯವಂತ ಸೂತ ವೃಷವರ್ಮನು ಭೀಮಸೇನನ ವಿಕ್ರಮದಿಂದಾಗಿ ಯಮಸಾದನಕ್ಕೆ ಹೋದನು. ಹತ್ತುಸಾವಿರ ಆನೆಗಳ ಬಲವನ್ನು ಹೊಂದಿದ್ದ ಪೌರವಮಹಾರಾಜನು ತನ್ನ ಗಣಗಳೊಂದಿಗೆ ಪಾಂಡುಪುತ್ರ ಸವ್ಯಸಾಚಿಯಿಂದ ಹತನಾದನು. ಎರಡು ಸಾವಿರ ಪ್ರಹಾರಿ ವಸಾಯತರೂ ವಿಕ್ರಾಂತ ಶೂರಸೇನರೂ ಎಲ್ಲರೂ ಯುದ್ಧದಲ್ಲಿ ಕೆಳಗುರುಳಿದರು. ಕವಚಿ ಪ್ರಹರಿ ಮದೋತ್ಕಟ ಅಭೀಷಾಹರೂ, ರಥೋದಾರ ಶಿಬಿಗಳೂ ಕಲಿಂಗರೊಂದಿಗೆ ಹತರಾದರು. ಗೋಕುಲದಲ್ಲಿ ಹುಟ್ಟಿ ಬೆಳೆದಿದ್ದ, ಯುದ್ಧದಲ್ಲಿ ಪರಮ ಕೋವಿದರಾಗಿದ್ದ ಅನೇಕ ಸಹಸ್ರ ಸಂಶಪ್ತಕಗಣಗಳು ಎಲ್ಲರೂ ಪಾರ್ಥನನ್ನು ಎದುರಿಸಿ ವೈವಸ್ವತಕ್ಷಯಕ್ಕೆ ಹೋದರು. ನಿನ್ನ ಬಾವಂದಿರು ಪರಾಕ್ರಾಂತ ರಾಜ ವೃಷಕ ಮತ್ತು ಅಚಲರು ನಿನಗಾಗಿ ಸವ್ಯಸಾಚಿಯಿಂದ ಹತರಾದರು. ಉಗ್ರಕರ್ಮಿ, ಕರ್ಮದಲ್ಲಿ ಹೆಸರುಗಳಿಸಿದ, ಮಹೇಷ್ವಾಸ

ಶಾಲ್ವರಾಜನು ಭೀಮಸೇನನಿಂದ ಕೆಳಗುರುಳಿಸಲ್ಪಟ್ಟನು. ಪರಾಕ್ರಮಿ ಓಘವ ಮತ್ತು ಬೃಹಂತರು ಒಟ್ಟಿಗೇ ಮಿತ್ರನಿಗೋಸ್ಕರ ರಣದಲ್ಲಿ ಹೋರಾಡಿ ವೈವಸ್ವತಕ್ಷಯಕ್ಕೆ ಹೋದರು. ಹಾಗೆಯೇ ರಥಿಗಳಲ್ಲಿ ಶ್ರೇಷ್ಠ ಕ್ಷೇಮಧೂರ್ತಿಯು ಯುದ್ಧದಲ್ಲಿ ಭೀಮಸೇನನ ಗದೆಯಿಂದ ಹತನಾದನು. ಹಾಗೆಯೇ ರಾಜಾ ಜಲಸಂಧನು ರಣದಲ್ಲಿ ಮಹಾ ಕದನವನ್ನಾಡಿ ಸಾತ್ಯಕಿಯಿಂದ ಹತನಾದನು. ಕತ್ತೆಗಳನ್ನು ಕಟ್ಟಿದ್ದ ರಥದಲ್ಲಿ ಸಂಚರಿಸುತ್ತಿದ್ದ ರಾಕ್ಷಸೇಂದ್ರ ಅಲಾಯುಧನು ಘಟೋತ್ಕಚನ ವಿಕ್ರಮದಿಂದಾಗಿ ಯಮಸಾದನವನ್ನು ಸೇರಿದನು. ಸೂತಪುತ್ರ ರಾಧೇಯನೂ, ಅವನ ಮಹಾರಥ ಸಹೋದರರು, ಕೇಕಯರು ಎಲ್ಲರೂ ಸವ್ಯಸಾಚಿಯಿಂದ ಹತರಾದರು. ಮಾಲವರು, ಮದ್ರಕರು, ಉಗ್ರವಿಕ್ರಮಿ ದ್ರವಿಡರು, ಯೌಧೇಯರು, ಲಲಿತರು, ಕ್ಷುದ್ರಕರು, ಉಶೀನರರು, ಮಾವೇಲ್ಲಕರು, ತುಂಡಿಕೇರರು, ಸಾವಿತ್ರೀಪುತ್ರಕರು, ಪೂರ್ವದೇಶದವರು, ಪಶ್ಚಿಮದೇಶದವರು, ಉತ್ತರದವರು, ದಕ್ಷಿಣಾತ್ಯರು ಇವರೆಲ್ಲರೂ ಹತ್ತುಸಾವಿರ ಕಾಲಾಳುಸಮೂಹಗಳೊಂದಿಗೆ ರಥವ್ರಜಗಳೊಂದಿಗೆ, ಶ್ರೇಷ್ಠ ಆನೆಗಳೊಂದಿಗೆ ಹತರಾದರು.

ಉತ್ತಮ ಕುಲದಲ್ಲಿ ಬೆಳೆದು ಪ್ರಯತ್ನಪಡುತ್ತಿದ್ದ ಕವಚ-ವಸ್ತ್ರ-ಭೂಷಣಗಳನ್ನು ಧರಿಸಿದ್ದ ಶೂರರು ಕಾಲದ ಮಹಾತ್ಮೆಯಿಂದಾಗಿ ಧ್ವಜ-ಆಯುಧಗಳೊಂದಿಗೆ ಪಾರ್ಥನಿಂದ ಸಮರದಲ್ಲಿ ಹತರಾದರು. ಹಾಗೆಯೇ ಪರಸ್ಪರರನ್ನು ವಧಿಸಲು ಬಯಸುತ್ತಿದ್ದ ಇನ್ನೂ ಇತರ ಅಮಿತಬಲಶಾಲಿ ಅನೇಕ ರಾಜರುಗಳೂ ತಮ್ಮ ಸೇನೆಗಳೊಂದಿಗೆ ರಣದಲ್ಲಿ ಸಹಸ್ರಾರು ಸಂಖ್ಯೆಗಳಲ್ಲಿ ಹತರಾದರು. ಇದು ನೀನು ಕೇಳಿದ್ದಲ್ಲವೇ? ಕರ್ಣಾರ್ಜುನರ ಸಮಾಗಮದಲ್ಲಿ ಈ ರೀತಿಯ ನಷ್ಟವುಂಟಾಯಿತು. ಆ ಪ್ರಹರಿಗಳಲ್ಲಿ ಶ್ರೇಷ್ಠ ಯುದ್ಧದುರ್ಮದ ಶೂರ ಕರ್ಣನು ಸಮರದ ರಣದಲ್ಲಿ ತ್ರೈಲೋಕ್ಯವಿಶ್ರುತವಾದ ಘೋರ ಮಹಾಯುದ್ಧವನ್ನು ಮಾಡಿ ಮಹೇಂದ್ರನೊಂದಿಗೆ ವೃತ್ರನು ಹೇಗೋ, ರಾಮನೊಂದಿಗೆ ರಾವಣನು ಹೇಗೋ, ಕೃಷ್ಣನಿಂದ ಮುರನು ರಣದಲ್ಲಿ ಕೆಳಗುರುಳಿಸಲ್ಪಟ್ಟು ಹೇಗೆ ಹತನಾದನೋ, ಕಾರ್ತವೀರ್ಯನು ಭಾರ್ಗವ ರಾಮನಿಂದ ಹೇಗೆ ಹತನಾದನೋ, ಹಾಗೆ ಅರ್ಜುನನೊಡನೆ ದ್ವೈರಥಯುದ್ಧಮಾಡಿ ಅಮಾತ್ಯ ಬಾಂಧವರೊಡನೆ ಹತನಾದನು. ಧಾರ್ತರಾಷ್ಟ್ರರಿಗೆ ಯಾರಿಂದ ಜಯದ

ಆಸೆಯಿತ್ತೋ, ಮತ್ತು ಆ ವೈರಕ್ಕೆ ಮುಖ್ಯ ಕಾರಣನು ಯಾರಾಗಿದ್ದನೋ ಅವನನ್ನು ಪಾಂಡವರು ದಾಟಿಬಿಟ್ಟರು! ಹೀಗಾಗುತ್ತದೆಯೆನ್ನುವುದನ್ನು ನೀನು ಮೊದಲು ಯೋಚಿಸಿರಲಿಲ್ಲ. ಹಿತಾಕಾಂಕ್ಷಿಗಳು ಮತ್ತು ಬಂಧುಗಳು ಹೇಳುತ್ತಿದ್ದರೂ ನೀನು ಅವುಗಳಿಗೆ ಗಮನನೀಡದಿದ್ದುದಕ್ಕಾಗಿಯೇ ಈ ಮಹಾ ನಾಶದ ವ್ಯಸನವು ನಿನಗೆ ಪ್ರಾಪ್ತವಾಗಿದೆ. ನಿನ್ನ ರಾಜ್ಯಕಾಮಿ ಪುತ್ರರ ಹಿತವನ್ನೇ ಬಯಸಿದ ನೀನು ಪಾಂಡವರಿಗೆ ಅನೇಕ ಅಹಿತ ಕಾರ್ಯಗಳನ್ನು ಮಾಡಿದುದರ ಈ ಫಲವು ನಿನಗೆ ದೊರಕಿರುವುದು!"

ಧೃತರಾಷ್ಟ್ರನು ಹೇಳಿದನು:

"ಅಯ್ಯಾ ಸಂಜಯ! ಯುದ್ಧದಲ್ಲಿ ಪಾಂಡವರಿಂದ ಹತರಾದ ನನ್ನವರ ಕುರಿತು ನೀನು ಹೇಳಿರುವೆ. ನನ್ನವರಿಂದ ಹತರಾದ ಪಾಂಡವರ ಕುರಿತು ಹೇಳು!"

ಸಂಜಯನು ಹೇಳಿದನು:

"ಯುದ್ಧದಲ್ಲಿ ಮಹಾಬಲ ಕುಂತಯರು ಬಂಧು-

ಅಮಾತ್ಯರೊಂದಿಗೆ ರಣದಲ್ಲಿ ಭೀಷ್ಮನಿಂದ ಕೆಳಗುರುಳಿಸಲ್ಪಟ್ಟರು. ಯುದ್ಧದ ವೀರ್ಯ-ಬಲಗಳಲ್ಲಿ ಕಿರೀಟಿಯ ಸಮನಾದ ಸತ್ಯಜಿತುವು ದ್ರೋಣನಿಂದ ರಣದಲ್ಲಿ ಹತನಾದನು. ಹಾಗೆಯೇ ವೃದ್ಧ ನೃಪರಾಗಿದ್ದ ಪರಾಕ್ರಮಿ ವಿರಾಟ-ದ್ರುಪದರು ಮಕ್ಕಳೊಂದಿಗೆ ದ್ರೋಣನಿಂದ ಹತರಾದರು. ಬಾಲಕನಾಗಿದ್ದರೂ ಸಮರದಲ್ಲಿ ಸವ್ಯಸಾಚಿ, ಕೇಶವ ಮತ್ತು ಬಲದೇವರ ಸಮನೆನಿಸಿಕೊಂಡಿದ್ದ ದುರ್ಧರ್ಷ ರಣ ವಿಶಾರದ ಅಭಿಮನ್ಯುವು ಮಹಾ ಕದನವನ್ನೆಸಗಿ ಷಡ್ರಥರಿಂದ ಸುತ್ತುವರೆಯಲ್ಪಟ್ಟು ಕೆಳಗುರುಳಿದನು. ಕ್ಷತ್ರಧರ್ಮವ್ಯವಸ್ಥಿತ ಆ ವೀರ ಸೌಭದ್ರನನ್ನು ರಣದಲ್ಲಿ ವಿರಥನನ್ನಾಗಿ ಮಾಡಿ ದುಃಶಾಸನನ ಮಗನು ಸಂಹರಿಸಿದನು. ಕೃತಾಸ್ತ್ರ ಮಹೇಷ್ವಾಸ ಯುದ್ಧದುರ್ಮದ ಬೃಹಂತನು ದುಃಶಾಸನನ ವಿಕ್ರಮದಿಂದ ಯಮಸಾದನಕ್ಕೆ ಹೋದನು. ಯುದ್ಧದುರ್ಮದ ಪರಾಕ್ರಮಿ ರಾಜ ಮಣಿಮಾನ್ ಮತ್ತು ದಂಡಧಾರರು ಮಿತ್ರನಿಗಾಗಿ ದ್ರೋಣನಿಂದ ಹತರಾದರು. ಮಹಾರಥ ಭೋಜರಾಜ ಅಂಶುಮಾನನು ಸೇನೆಯೊಂದಿಗೆ ಭಾರದ್ವಾಜ ದ್ರೋಣನ ವಿಕ್ರಮದಿಂದ ಯಮಸಾದನಕ್ಕೆ ಹೋದನು. ಚಿತ್ರಾಯುಧ ಮತ್ತು ಚಿತ್ರಯೋಧಿಗಳು ಮಹಾ

ಕದನವನ್ನೆಸಗಿ ಚಿತ್ರಮಾರ್ಗಗಳಿಂದ ಕರ್ಣನ ವಿಕ್ರಮದಿಂದಾಗಿ ಯುದ್ಧದಲ್ಲಿ ಹತರಾದರು. ಯುದ್ಧದಲ್ಲಿ ವೃಕೋದರನ ಸಮನಾಗಿದ್ದ ದೃಢ ಕೇಕಯವಂಶಜನು ಭ್ರಾತ ಕೇಕಯನ ವಿಕ್ರಮದಿಂದಲೇ ಕೆಳಗುರುಳಿಸಲ್ಪಟ್ಟನು. ಗದಾಯೋಧೀ, ಪ್ರತಾಪವಾನ್, ಪರ್ವತರಾಜ ಜನಮೇಜಯನನ್ನು ನಿನ್ನ ಮಗ ದುರ್ಮುಖನು ಕೆಳಗುರುಳಿಸಿದನು. ಸೂರ್ಯಚಂದ್ರರಂತೆ ಮಿಂಚುತ್ತಿದ್ದ ನರವ್ಯಾಘ್ರ ಜೋಡಿ ರಾಜಕುಮಾರ ರೋಚಮಾನರಿಬ್ಬರನ್ನು ದ್ರೋಣನು ಶರಗಳನ್ನು ಪ್ರಯೋಗಿಸಿ ಸ್ವರ್ಗಕ್ಕೆ ಕಳುಹಿಸಿದನು. ಸವ್ಯಸಾಚಿಯ ಸೋದರ ಮಾವಂದಿರಾದ ನೃಪ ಪುರುಜಿತ್ ಮತ್ತು ಕುಂತಿಭೋಜರು, ಪರಾಕ್ರಾಂತರಾಗಿ ಮತ್ತು ಎದುರಾಳಿಗಳಾಗಿ ಯುದ್ಧಮಾಡುತ್ತಾ, ಅಸಾಧ್ಯ ಕೃತ್ಯಗಳನ್ನೆಸಗಿ ಕೊನೆಗೆ ದ್ರೋಣನ ಸಾಯಕಗಳಿಗೆ ಸಿಲುಕಿ ವೈವಸ್ವತಕ್ಷಯಕ್ಕೆ ಹೋಗಿ ಪುಣ್ಯ ಲೋಕಗಳನ್ನು ಸೇರಿದರು. ಅನೇಕ ಕಾಶೀವಾಸಿಯೋಧರಿಂದ ಪರಿವೃತರಾಗಿದ್ದ ಅಭಿಭೂ ಮತ್ತು ಕಾಶಿರಾಜರು ವಸುದಾನನ ಪುತ್ರನಿಂದ ದೇಹಾವಸಾನಹೊಂದಿದರು. ವೀರ್ಯವಂತರಾದ ಅಮಿತೌಜಸ, ಯುಧಾಮನ್ಯು ಮತ್ತು ಉತ್ತಮೌಜಸರು

ನೂರಾರು ಶೂರರನ್ನು ಸಂಹರಿಸಿ ಕೊನೆಗೆ ರಣದಲ್ಲಿ ಶತ್ರುಗಳಿಂದ ಹತರಾದರು. ಪಾಂಚಾಲ್ಯ ಮಹೇಷ್ವಾಸ ಕ್ಷತ್ರಧರ್ಮ ಮತ್ತು ಕ್ಷತ್ರವರ್ಮ ಇಬ್ಬರೂ ದ್ರೋಣನಿಂದ ಯಮಸಾದನಕ್ಕೆ ಕಳುಹಿಸಲ್ಪಟ್ಟರು. ಶಿಖಂಡಿಯ ಮಗ ಸೇನಾಪತಿ ಕ್ಷತ್ರದೇವನು ಯುದ್ಧದಲ್ಲಿ ನಿನ್ನ ಮೊಮ್ಮಗ ಲಕ್ಷ್ಮಣನಿಂದ ಹತನಾದನು. ರಣದಲ್ಲಿ ಸಂಚರಿಸುತ್ತಿದ್ದ ಮಹಾರಥ ಮಹಾವೀರ್ಯ ತಂದೆ ಸುಚಿತ್ರ ಮತ್ತು ಮಗ ಚಿತ್ರಧರ್ಮರು ದ್ರೋಣನಿಂದ ಹತರಾದರು. ರಣದಲ್ಲಿ ಕದನವನ್ನಾಡಿ ವಾರ್ಧಕ್ಷೇಮಿಯು ಕೌರವ ಬಾಹ್ಲೀಕನಿಂದ ಕೆಳಗುರುಳಿಸಲ್ಪಟ್ಟನು. ಚೇದಿಗಳ ರಥಪ್ರವರ ಧೃಷ್ಟಕೇತುವು ಬಹುಕಷ್ಟಕರ ಕರ್ಮಗಳನ್ನೆಸಗಿ ವೈವಸ್ವತಕ್ಷಯಕ್ಕೆ ಹೋದನು. ಹಾಗೆಯೇ ಪರಾಕ್ರಾಂತ ಸತ್ಯಧೃತಿಯು ಪಾಂಡವರಿಗೋಸ್ಕರ ರಣದಲ್ಲಿ ಯುದ್ಧಮಾಡಿ ಯಮಸಾದನಕ್ಕೆ ಹೋದನು. ಶಿಶುಪಾಲನ ಮಗ ಸುಕೇತುವು ರಣದಲ್ಲಿ ಶತ್ರುಗಳನ್ನು ಸಂಹರಿಸಿ ಯುದ್ಧದಲ್ಲಿ ದ್ರೋಣನಿಂದ ಹತನಾದನು. ಹಾಗೆಯೇ ವೀರ ಸತ್ಯಧೃತಿ, ವೀರ್ಯವಾನ್ ಮದಿರಾಶ್ವ, ಮತ್ತು ವಿಕ್ರಾಂತ ಸೂರ್ಯದತ್ತರು ದ್ರೋಣನ ಸಾಯಕಗಳಿಂದ ಹತರಾದರು. ಯುದ್ಧಮಾಡುತ್ತಿದ್ದ ಪರಾಕ್ರಮೀ

ಶ್ರೇಣಿಮಾನನೂ ಕೂಡ ಅಸಾಧ್ಯ ಕೃತ್ಯಗಳನ್ನೆಸಗಿ ವೈವಸ್ವತಕ್ಷಯಕ್ಕೆ ಹೋದನು. ಹಾಗೆಯೇ ರಣದಲ್ಲಿ ಯುದ್ಧಮಾಡುತ್ತಿದ್ದ ಪರಾಕ್ರಮೀ ಮಾಗಧನು ಭೀಷ್ಮನಿಂದ ಹತನಾದನು. ರಣದಲ್ಲಿ ಅತೀವ ಕದನವಾಡುತ್ತಿದ್ದ ವಸುದಾನನು ಭಾರದ್ವಾಜನ ವಿಕ್ರಮದಿಂದಾಗಿ ಯಮಸಾದನಕ್ಕೆ ಹೋದನು. ನನ್ನನ್ನು ನೀನು ಕೇಳಿದಂತೆ, ಇವರು ಮತ್ತು ಇನ್ನೂ ಅನೇಕ ಪಾಂಡವರ ಮಹಾರಥರು ದ್ರೋಣನ ವಿಕ್ರಮದಿಂದಾಗಿ ಹತರಾದರು."

ಧೃತರಾಷ್ಟ್ರನು ಹೇಳಿದನು:

"ಸೂತ! ಇವರೆಲ್ಲರೂ ನನ್ನ ಸೇನೆಯಲ್ಲಿ ಹತರಾದ ಪ್ರಮುಖರು. ಅಲ್ಲಿ ಇನ್ನೂ ಜೀವಂತವಾಗಿರುವ ಕೆಲವರು ಯಾರು ಎನ್ನುವುದನ್ನು ಹೇಳು. ನೀನು ಹೇಳಿದ ಇವರೇ ಹತರಾಗಿ ಹೋದರೆಂದರೆ ಇನ್ನೂ ಹತರಾಗದೇ ಉಳಿದಿರುವವರು ಕೂಡ ಸ್ವರ್ಗವನ್ನು ಗೆದ್ದರೆಂದೇ ನನಗನ್ನಿಸುತ್ತದೆ!"

ಸಂಜಯನು ಹೇಳಿದನು:

“ರಾಜನ್! ವೀರ ದ್ವಿಜಸತ್ತಮ ದ್ರೋಣನಿಂದ ಚತುರ್ವಿಧದ ವಿಚಿತ್ರ ಶುಭ್ರ ಮತ್ತು ದಿವ್ಯ ಮಹಾಸ್ತ್ರಗಳನ್ನು ಕಲಿತಿರುವ, ಮಾಡಿತೋರಿಸುವ, ಮಹಾರಥ ಕ್ಷಿಪ್ರಹಸ್ತ ದೃಢಾಯುಧ ದೃಢಮುಷ್ಟಿ ದೃಢೇಷು ವೀರ್ಯವಾನ್ ತರಸ್ವೀ ದ್ರೋಣಪುತ್ರನು ನಿನಗೋಸ್ಕರ ಯುದ್ಧಮಾಡಲು ಬಯಸಿ ಯುದ್ಧಸನ್ನದ್ಧನಾಗಿದ್ದಾನೆ. ಸಾತ್ವತರಲ್ಲಿಯೇ ಶ್ರೇಷ್ಠ ಮಹಾರಥ ಆನರ್ತವಾಸೀ ಹೃದಿಕನ ಮಗ ಭೋಜರಾಜ ಕೃತಾಸ್ತ್ರ ಕೃತವರ್ಮನು ಸ್ವಯಂ ನಿನಗೋಸ್ಕರ ಯುದ್ಧಮಾಡಲು ಇಚ್ಛಿಸಿ ವ್ಯವಸ್ಥಿತನಾಗಿದ್ದಾನೆ. ಬಹುಚಿತ್ರಾಸ್ತ್ರಯೋಧೀ ಮಹಾಬಲಶಾಲೀ ಶಾರದ್ವತ ಗೌತಮನೂ ಕೂಡ ಮಹಾಭಾರವನ್ನೂ ಹೊರಬಲ್ಲ ವಿಚಿತ್ರ ಧನುಸ್ಸನ್ನು ಹಿಡಿದು ಯುದ್ಧಮಾಡಲು ಸಿದ್ಧನಾಗಿರುವನು. ಯುದ್ಧದಲ್ಲಿ ಅಲುಗಾಡಿಸಲೂ ಅಸಾಧ್ಯನಾದ, ನಿನ್ನ ಸೇನಾಪತಿಗಳಲ್ಲಿಯೇ ಅಗ್ರಗಣ್ಯನಾದ, ವೇಗಶಾಲಿಯಾದ, ತನ್ನ ಮಾತನ್ನು ಸತ್ಯವನ್ನಾಗಿಸಲು ಯುದ್ಧದಲ್ಲಿ ಕರ್ಣನ ತೇಜೋವಧೆಯನ್ನು ಮಾಡುತ್ತೇನೆಂದು ಯುಧಿಷ್ಠಿರನಿಗೆ ಭರವಸೆಯನ್ನಿತ್ತು ತಂಗಿಯ ಮಕ್ಕಳಾದ ಪಾಂಡವರನ್ನು ಬಿಟ್ಟು ನಿನ್ನ ಕಡೆಗೆ ಆಗಮಿಸಿದ, ಇಂದ್ರನ ಸಮಾನ ಪರಾಕ್ರಮವುಳ್ಳ ದುರಾಧರ್ಷ,

ಋತಾಯನಪುತ್ರ ಶಲ್ಯನು ನಿನ್ನ ಸಲುವಾಗಿ ಯುದ್ಧಮಾಡುವ ಇಚ್ಛೆಯಿಂದ ಸನ್ನದ್ಧನಾಗಿ ನಿಂತಿದ್ದಾನೆ. ನದೀಜ-ಕಾಂಬೋಜ, ವನಾಯುಜ ಮತ್ತು ಬಾಹ್ಲಿಕಗಳೇ ಮೊದಲಾದ ಉತ್ತಮ ಜಾತಿಯ ಸಿಂಧೂದೇಶದ ಮತ್ತು ಪರ್ವತ ಪ್ರದೇಶದ ಕುದುರೆಗಳಿಂದಲೂ ಮತ್ತು ತನ್ನ ಸೇನೆಗಳಿಂದಲೂ ಕೂಡಿದ ಗಾಂಧಾರರಾಜ ಶಕುನಿಯು ನಿನ್ನ ಸಲುವಾಗಿ ಯುದ್ಧಮಾಡುವ ಇಚ್ಛೆಯಿಂದ ಸನ್ನದ್ಧನಾಗಿ ನಿಂತಿದ್ದಾನೆ.

ಕುರುಕುಲಪ್ರವೀರನಾದ ನಿನ್ನ ಮಗ ಕುರುಮಿತ್ರನು ಅಗ್ನಿ ಮತ್ತು ಸೂರ್ಯರ ಕಾಂತಿಗೆ ಸಮಾನ ಕಾಂತಿಯುಳ್ಳ ರಥದಲ್ಲಿ ಕುಳಿತು ಮೋಡವಿಲ್ಲದ ಆಕಾಶದಲ್ಲಿ ಸೂರ್ಯನು ಪ್ರಕಾಶಿಸುವಂತೆ ಪ್ರಕಾಶಿಸುತ್ತಾ ಯುದ್ಧ ಸನ್ನದ್ಧನಾಗಿದ್ದಾನೆ. ಆನೆಗಳ ಸೈನ್ಯದ ಮಧ್ಯದಲ್ಲಿ ತನ್ನ ಸುವರ್ಣಭೂಷಿತ ರಥದಲ್ಲಿ ಕುಳಿತು ನಿನ್ನ ಮಗ ಮಹಾವೀರ್ಯ ದುರ್ಯೋಧನನು ತನ್ನ ಮುಖ್ಯ ಸೇನೆಗಳೊಂದಿಗೆ ಯುದ್ಧಮಾಡಲು ಇಚ್ಛಿಸಿ ರಣದಲ್ಲಿ ಸನ್ನದ್ಧನಾಗಿ ನಿಂತಿದ್ದಾನೆ. ಕಮಲವರ್ಣ ಪುರುಷಶ್ರೇಷ್ಠ ದುರ್ಯೋಧನನು ಸುವರ್ಣಮಯ ವಿಚಿತ್ರಕವಚವನ್ನು ಧರಿಸಿ, ಸ್ವಲ್ಪವೇ ಹೊಗೆಯಿಂದ ಕೂಡಿರುವ ಯಜ್ಞೇಶ್ವರನಂತೆಯೂ ಮೋಡಗಳ ಮಧ್ಯದಲ್ಲಿರುವ ಸೂರ್ಯನಂತೆಯೂ ರಾಜರ

ಮಧ್ಯದಲ್ಲಿ ಪ್ರಕಾಶಿಸುತ್ತಿರುವನು. ಹಾಗೆಯೇ ಕತ್ತಿ-ಗುರಾಣಿಗಳನ್ನು ಕೈಯಲ್ಲಿ ಹಿಡಿದು ಸುಷೇಣನೂ, ನಿನ್ನ ಮಗ ವೀರ ಸತ್ಯಸೇನನೂ ಹೃಷ್ಟಾತ್ಮರಾಗಿ ಸಮರದಲ್ಲಿ ಯುದ್ಧಮಾಡುವ ಇಚ್ಛೆಯಿಂದ ಚಿತ್ರಸೇನನೊಡನೆ ನಿಂತಿದ್ದಾರೆ. ಲಜ್ಜಾವಿನಯಶೀಲ ಬಲಶಾಲೀ ಭಾರತ ರಾಜಪುತ್ರ ಚಿತ್ರಾಯುಧ, ಶ್ರುತಕರ್ಮ, ಜಯ, ಶಲ, ಸತ್ಯವ್ರತ ಮತ್ತು ದುಃಶಲರು ಯುದ್ಧಮಾಡಲು ಬಯಸಿ ನಿಂತಿರುವರು. ಜೂಜುಗಾರರಿಗೆ ಅಧಿಪತಿಯೆನಿಸಿಕೊಂಡಿರುವ, ಶೂರಮಾನೀ, ಪ್ರತಿಯೊಂದು ಯುದ್ಧದಲ್ಲಿಯೂ ಶತ್ರುಗಳನ್ನು ಸಂಹರಿಸುತ್ತಾ ಬಂದಿರುವ, ರಥ-ಗಜಾಶ್ವ-ಪದಾತಿಗಳಿಂದ ಕೂಡಿರುವ ರಾಜಪುತ್ರ ಉಲೂಕನು ನಿನ್ನ ಸಲುವಾಗಿ ಯುದ್ಧಮಾಡಲು ಇಚ್ಛಿಸಿ ಸನ್ನದ್ಧನಾಗಿದ್ದಾನೆ. ಸತ್ಯಸಂಧ ಪ್ರಹಾರಿ ಮಾನಿನಿ ನರಾಗ್ರ ವೀರ ಶ್ರುತಾಯು, ಶ್ರುತಾಯುಧ, ಚಿತ್ರಾಂಗದ, ಮತ್ತು ವೀರ ಚಿತ್ರವರ್ಮರು ಸೇನೆಯಲ್ಲಿ ಸನ್ನದ್ಧರಾಗಿ ನಿಂತಿದ್ದಾರೆ. ಸತ್ಯಸಂಧ ಮಹಾತ್ಮ ಕರ್ಣನ ಮಗನು ನಿನ್ನ ಸಲುವಾಗಿ ಯುದ್ಧಮಾಡುವ ಇಚ್ಛೆಯಿಂದ ರಣಾಂಗಣದಲ್ಲಿ ವ್ಯವಸ್ಥಿತನಾಗಿದ್ದಾನೆ. ಹಾಗೆಯೇ ವರಾರ್ಹ ಲಘುಹಸ್ತ ಅಲ್ಪಧೈರ್ಯವಿರುವವರಿಂದ ಗೆಲ್ಲಲಸಾಧ್ಯ ಕರ್ಣನ

ಇನ್ನಿಬ್ಬರು ಮಕ್ಕಳೂ ನಿನಗಾಗಿ ಯುದ್ಧಮಾಡಲು ನಿಂತಿರುವರು. ಇವರೇ ಮೊದಲಾದ ಪ್ರಮುಖವೀರರಿಂದಲೂ ಮತ್ತು ಅಮಿತ ಪ್ರಭಾವಶಾಲೀ ಯೋಧರಿಂದ ಕೂಡಿಕೊಂಡು ಆನೆಗಳ ಸೇನೆಗಳ ಮಧ್ಯಭಾಗದಲ್ಲಿ ಮಹೇಂದ್ರನಂತೆ ಕುರುರಾಜ ದುರ್ಯೋಧನನು ಜಯವನ್ನು ಬಯಸಿ ವ್ಯವಸ್ಥಿತನಾಗಿದ್ದಾನೆ."

ಧೃತರಾಷ್ಟ್ರನು ಹೇಳಿದನು:

"ಜೀವಂತವಾಗಿರುವವರ ಕುರಿತು ಹೇಳಿರುವೆ. ಇವರನ್ನು ಬಿಟ್ಟು ಅನ್ಯರು ಅಸುನೀಗಿರುವವರೆಂದು ಸ್ಪಷ್ಟವಾಗಿದೆ. ಇದೂವರೆಗಿನ ಆಗುಹೋಗುಗಳಿಂದಲೇ ಮುಂದೇನಾಗಬಹುದೆಂದು ವ್ಯಕ್ತವಾಗಿ, ಅದನ್ನು ನಾನು ಮನಗಂಡಿದ್ದೇನೆ."

ಹೀಗೆ ಹೇಳಿ ಅಂಬಿಕಾಸುತ ಧೃತರಾಷ್ಟ್ರನು ತನ್ನ ಸೇನೆಯಲ್ಲಿ ಪ್ರಮುಖರು ಹತರಾಗಿ ಕೆಲವರು ಮಾತ್ರ ಉಳಿದಿರುವುದನ್ನು ಕೇಳಿ ವ್ಯಾಕುಲಗೊಂಡ ಇಂದ್ರಿಯಗಳುಳ್ಳವನಾಗಿ ಮೂರ್ಛೆಹೋದನು. ಎಚ್ಚರತಪ್ಪುವಾಗಲೇ ಆ ಜಗತೀಪತಿಯು

> “ಸಂಜಯ! ಸ್ವಲ್ಪಕಾಲ ಇಲ್ಲಿಯೇ ಇರು! ಮಹಾ ಅಪ್ರಿಯವಾಗಿರುವುದನ್ನು ಕೇಳಿ ನನ್ನ ಮನಸ್ಸು ವ್ಯಾಕುಲಗೊಂಡಿದೆ!”

ಎಂದು ಹೇಳಿ ಕೂಡಲೇ ಮೂರ್ಛಿತನಾದನು.

ಮೇರುಪರ್ವತವು ಹರಿದುಹೋಯಿತೆಂಬುದು, ಮಹಾಮತಿ ಭಾರ್ಗವನ ಚಿತ್ತವು ಮೋಹಪರವಶವಾಯಿತು ಎನ್ನುವುದು, ಶತ್ರುಗಳಿಂದ ಭೀಮಕರ್ಮಿ ಇಂದ್ರನ ಪರಾಜಯವಾಯಿತೆನ್ನುವುದು, ಮಹಾದ್ಯುತಿ ಭಾನುವು ಆಕಾಶದಿಂದ ಕೆಳಕ್ಕೆ ಬಿದ್ದನೆನ್ನುವುದು, ಅಚಿಂತ್ಯ ಅಕ್ಷಯಾಂಭಸ ಸಮುದ್ರವು ಒಣಗಿಹೋಯಿತೆನ್ನುವುದು, ಮತ್ತು ಪುಣ್ಯ-ಪಾಪಕರ್ಮಗಳೆರಡು ವೈಫಲ್ಯವೆನ್ನುವುದು ಎಷ್ಟು ಭಯಂಕರವಾದುದೋ ಮತ್ತು ಭೂತಗಳನ್ನು ಎಷ್ಟು ಭ್ರಾಂತಿಗೊಳಿಸಬಲ್ಲದೋ ಹಾಗೆ ಅದ್ಭುತವಾಗಿರುವ ಕರ್ಣನ ನಿಧನವನ್ನು ಕೇಳಿ ಅವನು ನಂಬಲೇ ಇಲ್ಲ. ಜನೇಶ್ವರ ಧೃತರಾಷ್ಟ್ರನು ತನ್ನ ನಿಪುಣ ಬುದ್ಧಿಯಿಂದ ಚಿಂತಿಸಿ ಕರ್ಣನ ನಿಧನವಾಗಲಿಲ್ಲವೆಂದೇ ಯೋಚಿಸಿದನು. ಅಂಬಿಕಾಸುತ ಧೃತರಾಷ್ಟ್ರನು ತನ್ನಿಂದಾಗಿ ಮನುಷ್ಯ-ಪ್ರಾಣಿಗಳ ವಿನಾಶವು ನಡೆದುಹೋಯಿತೆಂದು ಭಾವಿಸಿ, ಶೋಕಾಗ್ನಿಯಿಂದ ಸುಡುತ್ತಾ, ಎದೆಯೊಡೆದವನಂತೆ ವಿಲಪಿಸಿದನು.

ಧೃತರಾಷ್ಟ್ರನು ಹೇಳಿದನು:

"ಸಂಜಯ! ಅಧಿರಥನ ಮಗ ವೀರ ಕರ್ಣನು ಸಿಂಹ ಮತ್ತು ಆನೆಗಳ ವಿಕ್ರಮವನ್ನು ಹೊಂದಿದ್ದನು. ಗೂಳಿಯ ಹೆಗಲಿನಂಥಹ ಹೆಗಲನ್ನು ಹೊಂದಿದ್ದ ಅವನ ಕಣ್ಣುಗಳೂ, ನಡಿಗೆಯೂ ಗೂಳಿಯದ್ದಂತೆಯೇ ಇದ್ದವು. ವಜ್ರಸಮ ದೇಹವನ್ನು ಹೊಂದಿದ್ದ ಆ ಯುವಕನು ಗೂಳಿಯೊಡನೆ ಹೋರಾಡುವ ಗೂಳಿಯಂತೆ, ಶತ್ರುವು ಮಹೇಂದ್ರನೇ ಆಗಿದ್ದರೂ, ಯುದ್ಧದಿಂದ ಹಿಂದಿರುಗುತ್ತಿರಲಿಲ್ಲ. ಅವನ ಬಿಲ್ಲಿನ ಶಬ್ಧದಿಂದ ಮತ್ತು ಶರವೃಷ್ಟಿಗಳ ಶಬ್ಧದಿಂದ ರಥ, ಅಶ್ವ, ನರ, ಮಾತಂಗಗಳು ಯುದ್ಧದಲ್ಲಿ ನಿಲ್ಲುತ್ತಿರಲಿಲ್ಲ. ಶತ್ರುಸಂಘಗಳನ್ನು ನಾಶಪಡಿಸಬಲ್ಲ ಅಚ್ಯುತ ಮಹಾಬಾಹು ಕರ್ಣನನ್ನು ಆಶ್ರಯಿಸಿಯೇ ದುರ್ಯೋಧನನು ಮಹಾಬಲ ಪಾಂಡುಪುತ್ರರಿಂದ ವೈರವನ್ನು ಕಟ್ಟಿಕೊಂಡನು. ಅಂಥಹ ರಥಿಗಳಲ್ಲಿ ಪುರುಷವ್ಯಾಘ್ರ, ಶತ್ರುಗಳಿಗೆ ಸಹಿಸಲಸಾಧ್ಯ ವಿಕ್ರಮವುಳ್ಳ ಶ್ರೇಷ್ಠ ಕರ್ಣನು ಯುದ್ಧದಲ್ಲಿ ಪಾರ್ಥನಿಂದ ಹೇಗೆ ಹತನಾದನು? ತನ್ನದೇ ಬಾಹುಬಲಗಳನ್ನು ಆಶ್ರಯಿಸಿದ್ದ ಅವನು ನಿತ್ಯವೂ ಅಚ್ಯುತನನ್ನಾಗಲೀ ಧನಂಜಯನನ್ನಾಗಲೀ

ಅನ್ಯ ವೃಷ್ಣಿಗಳನ್ನಾಗಲೀ ಗಣನೆಗೇ ತೆಗೆದುಕೊಳ್ಳುತ್ತಿರಲಿಲ್ಲ. “ಅಪರಾಜಿತ ಶಾಂಘ್ರ-ಗಾಂಡೀವಧನ್ವಿಗಳನ್ನು ಒಟ್ಟಿಗೇ ದಿವ್ಯ ರಥದಿಂದ ನಾನು ಒಬ್ಬನೇ ಕೆಳಗುರುಳಿಸುತ್ತೇನೆ” ಎಂದು ಅವನು ಸತತವೂ ತಲೆಯನ್ನು ಕೆಳಕ್ಕೆ ಮಾಡಿ ಕುಳಿತಿರುತ್ತಿದ್ದ ರಾಜ್ಯಕಾಮುಕ, ಆತುರ, ಮಂದ, ಲೋಭಮೋಹಿತ ದುರ್ಯೋಧನನಿಗೆ ಹೇಳುತ್ತಿದ್ದನು. ಹಿಂದೆ ಆ ವೀರ ಬಲಿಭೃತನು ಸಮರದಲ್ಲಿ ಅತಿಬಲಶಾಲಿ ಅಮಿತ್ರ ದುರ್ಜಯ ಗಾಂಧಾರರನ್ನು, ಮದ್ರಕರನ್ನು, ಮತ್ಸ್ಯರನ್ನು, ತ್ರಿಗರ್ತರನ್ನು, ತಂಗಣ-ಶಕರನ್ನೂ, ಪಾಂಚಾಲರನ್ನೂ, ವಿದೇಹ-ಕುಣಿಂದರನ್ನೂ, ಕಾಶಿ-ಕೋಸಲರನ್ನೂ, ಸುಹ್ಮಾನಂಗರನ್ನು, ಪುಂಡ್ರರನ್ನೂ, ನಿಷಾದರನ್ನೂ, ವಂಗ-ಕೀಚಕರನ್ನೂ, ವತ್ಸರನ್ನೂ, ಕಲಿಂಗರನ್ನೂ, ತರಲರನ್ನು, ಅಶ್ಮಕರನ್ನೂ, ಋಷಿಕರನ್ನೂ ಗೆದ್ದಿದ್ದನು. ಅಶ್ವಗಳಲ್ಲಿ ಉಚ್ಛೈಶ್ರವವು ಶ್ರೇಷ್ಠವಾದಂತೆ, ರಾಜರಲ್ಲಿ ವೈಶ್ರವಣನು ಶ್ರೇಷ್ಠನಾಗಿರುವಂತೆ, ದೇವತೆಗಳಲ್ಲಿ ಮಹೇಂದ್ರನು ಶ್ರೇಷ್ಠನಾಗಿರುವಂತೆ ಪ್ರಹರಿಗಳಲ್ಲಿ ಕರ್ಣನು ಶ್ರೇಷ್ಠನು. ರಾಜಾ ಮಾಗಧನೂ ಕೂಡ ಸಂಪತ್ತು-ಗೌರವಗಳಿಂದ ಅವನನ್ನು ತನ್ನ ಸಖನನ್ನಾಗಿ ಪಡೆದುಕೊಂಡು ಕೌರವ-ಯಾದವರನ್ನು ಬಿಟ್ಟು ಇತರ ಅನೇಕ

ಪಾರ್ಥಿವ ಕ್ಷತ್ರಿಯರನ್ನು ಬಂಧನದಲ್ಲಿಟ್ಟಿದ್ದನು. ಅಂತಹ ಕರ್ಣನು ಸವ್ಯಸಾಚಿಯಿಂದ ದ್ವೈರಥದಲ್ಲಿ ಹತನಾದನೆಂದು ಕೇಳಿ ಸಾಗರದಲ್ಲಿ ಮುಳುಗಿದವನಂತೆ ನಾನು ಶೋಕಸಾಗರದಲ್ಲಿ ಮುಳುಗಿಹೋಗಿದ್ದೇನೆ. ಈ ತರಹದ ದುಃಖದಿಂದ ಕೂಡ ನನ್ನ ಈ ಹೃದಯವು ಒಡೆದುಹೋಗುತ್ತಿಲ್ಲವಲ್ಲ! ಒಡೆಯದೇ ಇರುವ ನನ್ನ ಈ ಹೃದಯವು ವಜ್ರಕ್ಕಿಂತಲೂ ಗಟ್ಟಿಯಾದುದೆಂದು ಭಾವಿಸುತ್ತೇನೆ. ಕುಲದವರು, ಸಂಬಂಧಿಗಳು ಮತ್ತು ಮಿತ್ರರ ಈ ಪರಾಜಯವನ್ನು ಕೇಳಿಯೂ ನನ್ನಂಥಹ ಬೇರೆ ಯಾವ ಪುರುಷನು ತಾನೆ ಜೀವವನ್ನು ತೊರೆಯದೇ ಇದ್ದಾನು? ವಿಷ, ಅಗ್ನಿ, ಅಥವಾ ಪರ್ವತ ಮೇಲಿನಿಂದ ಪ್ರಪಾತವನ್ನೇ ಆರಿಸಿಕೊಳ್ಳುತ್ತೇನೆ. ಈ ಕಷ್ಟ-ದುಃಖಗಳನ್ನು ಸಹಿಸಲು ಶಕ್ತನಾಗಿಲ್ಲ."

ಸಂಜಯನು ಹೇಳಿದನು:

"ಇಂದು ಸಂತರು ನಿನ್ನನ್ನು ಸಂಪತ್ತು, ಕುಲ, ಯಶಸ್ಸು, ತಪಸ್ಸು ಮತ್ತು ಶ್ರುತಿಗಳಲ್ಲಿ ನಾಹುಷ ಯಯಾತಿಗೆ ಸಮಾನನೆಂದು ಅಭಿಪ್ರಾಯಪಡುತ್ತಾರೆ. ಶ್ರುತಿಗಳಲ್ಲಿ ಮಹರ್ಷಿಗಳ

ಸಮನಾಗಿರುವೆ. ಪಾರ್ಥಿವ! ಕೃತಕೃತ್ಯನಾಗಿರುವೆ. ನಿನ್ನನ್ನು ನೀನು ಸ್ಥಿರಗೊಳಿಸಿಕೋ! ಮನಸ್ಸನ್ನು ವಿಷಾದದಲ್ಲಿ ತೊಡಗಿಸಿಕೊಳ್ಳಬೇಡ!”

ಧೃತರಾಷ್ಟ್ರನು ಹೇಳಿದನು:

“ಪರಶುರಾಮನಂತಿದ್ದ ಕರ್ಣನು ಯುದ್ಧದಲ್ಲಿ ಹತನಾದನೆಂದರೆ ದೈವವೇ ಮೇಲಿನದು ಮತ್ತು ಅನರ್ಥ ಪೌರುಷಕ್ಕೆ ಧಿಕ್ಕಾರ ಎಂದನ್ನಿಸುತ್ತದೆ. ಯುಧಿಷ್ಠಿರನ ಸೇನೆಯನ್ನೂ ಪಾಂಚಾಲರ ರಥರಾಶಿಗಳನ್ನೂ ಸಂಹರಿಸಿ, ಶರವರ್ಷಗಳಿಂದ ದಿಕ್ಕುಗಳನ್ನೂ ಬೆಳಗಿಸಿ, ವಜ್ರಹಸ್ತನು ಅಸುರರನ್ನು ಹೇಗೋ ಹಾಗೆ ರಣದಲ್ಲಿ ಪಾರ್ಥರನ್ನು ಭ್ರಾಂತರನ್ನಾಗಿಸಿ ಹೇಗೆ ತಾನೇ ಆ ಮಹಾರಥನು ಭಿರುಗಾಳಿಯಿಂದ ಬುಡಸಹಿತ ಕಿತ್ತು ಬೀಳಿಸಲ್ಪಟ್ಟ ವೃಕ್ಷದಂತೆ ಹತನಾಗಿ ಮಲಗಿದ್ದಾನೆ? ಸಮುದ್ರದ ದಡವನ್ನೇ ಕಾಣದ ನಾವಿಗನಂತೆ ನಾನು ಈ ಶೋಕಸಾಗರದ ಅಂತ್ಯವನ್ನೇ ಕಾಣದಂತಾಗಿದ್ದೇನೆ. ನನ್ನ ಚಿಂತೆಯು ಹೆಚ್ಚಾಗುತ್ತಿದೆ. ಜೀವನದಲ್ಲಿ ತೀವ್ರ ಜಿಗುಪ್ಸೆಯೂ ಹುಟ್ಟಿಕೊಂಡಿದೆ. ಕರ್ಣನ ನಿಧನ ಮತ್ತು ಫಲ್ಗುನನ ವಿಜಯದ ಕುರಿತು ಕೇಳಿ ಕರ್ಣನ

ವಧೆಯು ನಂಬಲಿಕ್ಕಾಗದೇ ಇರುವಂತಹುದೆಂದು ಭಾವಿಸುತ್ತೇನೆ. ಪುರುಷವ್ಯಾಘ್ರ ಕರ್ಣನು ಹತನಾದನೆಂದು ಕೇಳಿಯೂ ಕೂಡ ಒಡೆದುಹೋಗದೇ ಇರುವ ನನ್ನ ಈ ಸುದೃಢ ಹೃದಯವು ನಿಜವಾಗಿಯೂ ವಜ್ರದಿಂದ ಮಾಡಿದ್ದಾಗಿರಬಹುದು! ಕರ್ಣನು ಹತನಾದನೆಂದು ಕೇಳಿಯೂ ಕೂಡ ಸುದುಃಖಿತನಾದ ನಾನು ಜೀವಿಸಿದ್ದೇನೆಂದರೆ, ಹಿಂದೆ ದೇವತೆಗಳು ನನಗೆ ಸುದೀರ್ಘ ಆಯುಸ್ಸನ್ನು ನೀಡಿರುವುದು ಸತ್ಯ. ಸಂಜಯ! ನನ್ನ ಈ ಜೀವಿತಕ್ಕೇ ಧಿಕ್ಕಾರ! ಇಂದು ನಾನು ಸುಹೃದಯರನ್ನು ಕಳೆದುಕೊಂಡಿದ್ದೇನೆ. ಇಂದು ನಾನು ನಿಂದನೀಯ ದಶೆಯನ್ನು ಹೊಂದಿದ್ದೇನೆ. ಸಾಮಾನ್ಯನಂತೆ ವರ್ತಿಸುತ್ತಿದ್ದೇನೆ. ಮೂಢನಾದ ನಾನು ಸರ್ವರಿಗೂ ಶೋಚನೀಯನಾಗಿದ್ದೇನೆ. ಹಿಂದೆ ಸರ್ವಲೋಕಗಳಿಂದಲೂ ಸತ್ಕೃತನಾಗಿದ್ದ ನಾನು ಹೇಗೆ ತಾನೇ ಶತ್ರುಗಳಿಂದ ಅವಮಾನಿತನಾಗಿ ಜೀವಿಸಬಲ್ಲೆ? ದುಃಖದ ಮೇಲೆ ದುಃಖದ ವ್ಯಸನವು ನನಗೆ ಬಂದೊದಗಿದೆಯಲ್ಲಾ! ಭೀಷ್ಮವಧೆ, ನಂತರ ಮಹಾತ್ಮ ದ್ರೋಣನ ವಧೆ ಹಾಗೂ ಸೂತಪುತ್ರನು ಹತನಾದ ನಂತರ ಯುದ್ಧದಲ್ಲಿ ಉಳಿದುಹೋಗಿರುವವರನ್ನು ಯಾರನ್ನೂ ನಾನು

ಕಾಣುತ್ತಿಲ್ಲ. ಯುದ್ಧದಲ್ಲಿ ಅನೇಕ ಸಾಯಕಗಳನ್ನು ಪ್ರಯೋಗಿಸಿ ಸಂಹರಿಸುತ್ತಿದ್ದ ಆ ಶೂರನೇ ನನ್ನ ಪುತ್ರರಿಗೆ ತೀರಪ್ರಾಯನಾಗಿದ್ದನು. ಆ ಪುರುಷರ್ಷಭನ ಹೊರತಾಗಿ ನನ್ನ ಜೀವಿತದಲ್ಲಿ ಇನ್ನು ಅರ್ಥವೇನಿದೆ? ಸಾಯಕಾರ್ದಿತ ಆ ಅತಿರಥನು ನಿಜವಾಗಿಯೂ ರಥದಿಂದ ಕೆಳಕ್ಕೆ ಬಿದ್ದಿರಬೇಕು! ವಜ್ರಾಯುಧ ಪ್ರಹಾರದಿಂದ ಪರ್ವತಶಿಖರವು ಕೆಳಗುರುಳುವಂತೆ, ಮದಿಸಿದ ಮಾತಂಗದಿಂದ ಕೆಳಗುರುಳಸಲ್ಪಟ್ಟ ಮಾತಂಗದಂತೆ ರುಧಿರೋಕ್ಷಿತನಾಗಿ ಮಲಗಿರುವ ಅವನು ಪೃಥ್ವಿಯನ್ನೇ ಶೋಭೆಗೊಳಿಸಿದ್ದಾನೆ. ಧಾರ್ತರಾಷ್ಟ್ರರಿಗೆ ಬಲವಾಗಿದ್ದ, ಪಾಂಡವರಿಗೆ ಭಯವಾಗಿದ್ದ ಮತ್ತು ಧನುಷ್ಮತರಿಗೆ ಆದರ್ಶಪ್ರಾಯ ಕರ್ಣನು ಅರ್ಜುನನಿಂದ ಹತನಾದನು! ಪುತ್ರರಿಗೆ ಅಭಯಂಕರನಾಗಿದ್ದ ಮತ್ತು ಶಕ್ರನಷ್ಟೇ ಬಲಶಾಲಿಯಾಗಿದ್ದ ಆ ವೀರ ಮಹೇಷ್ವಾಸ ವೀರನು ಹತನಾಗಿ ಮಲಗಿದ್ದಾನೆ! ಹೆಳವನಿಗೆ ಮಾರ್ಗಗಮನಮಾಡಲು ಸಾಧ್ಯವಾಗದಂತೆ, ದರಿದ್ರನ ಆಸೆಗಳು ಪೂರೈಸದಂತೆ, ಜಲಬಿಂದುಗಳು ಬಾಯಾರಿದವನ ಬಾಯಾರಿಕೆಯನ್ನು ಹೋಗಲಾಡಿಸದಂತೆ ದುರ್ಯೋಧನನ ಆಶಯಗಳೂ ಕೈಗೂಡದಂತಾಯಿತು. ಯಾವುದೋ

ರೀತಿಯಲ್ಲಿ ಯೋಚಿಸಿ ಕಾರ್ಯಮಾಡಿದರೆ ಆ ಕಾರ್ಯವು ಬೇರೆಯೇ ರೀತಿಯಲ್ಲಿ ನಡೆದುಹೋಗುತ್ತದೆ. ಅಯ್ಯೋ! ದೈವವೇ ಬಲಶಾಲಿಯು. ಕಾಲವನ್ನು ಮೀರಲು ಸಾಧ್ಯವಿಲ್ಲ! ನನ್ನ ಪುತ್ರ ದುಃಶಾಸನನು ಕೃಪಣನಾಗಿ, ದೀನಾತ್ಮನಾಗಿ, ದೀನಪೌರುಷನಾಗಿ ಪಲಾಯನಮಾಡುತ್ತಿರುವಾಗ ಹತನಾಗಲಿಲ್ಲ ತಾನೇ? ಸಂಯುಗದಲ್ಲಿ ಅವನು ನೀಚರಂತೆ ನಡೆದುಕೊಳ್ಳಲಿಲ್ಲ ತಾನೇ? ಕ್ಷತ್ರಿಯರು ಹತರಾಗುವಂತೆಯೇ ನನ್ನ ಶೂರನೂ ಹತನಾದ ತಾನೇ? ಯುದ್ಧವನ್ನು ಮಾಡಬೇಡ ಎಂದು ಸರ್ವದಾ ಹೇಳುತ್ತಿದ್ದ ಯುಧಿಷ್ಠಿರನ ಪಥ್ಯ-ಔಷಧಗಳಂತಿದ್ದ ಮಾತನ್ನು ಮೂಢ ದುರ್ಯೋಧನನು ಸ್ವೀಕರಿಸಲಿಲ್ಲ. ಶರತಲ್ಪದಲ್ಲಿ ಮಲಗಿದ್ದ ಮಹಾತ್ಮ ಭೀಷ್ಮನು ಪಾನೀಯವನ್ನು ಯಾಚಿಸಲು ಪಾರ್ಥನು ಮೇದಿನೀತಲವನ್ನು ಭೇದಿಸಿದ್ದನು. ಪಾಂಡವನು ಜಲಧಾರೆಯನ್ನು ತಂದಿದ್ದನ್ನು ನೋಡಿ ಆ ಮಹಾಬಾಹುವು "ಮಗನೇ! ಪಾಂಡವರೊಂದಿಗೆ ಶಾಂತಿಸಂಧಾನ ಮಾಡಿಕೋ!" ಎಂದು ಹೇಳಿದ್ದನು. "ಸಂಧಿಯಿಂದ ಶಾಂತಿಯುಂಟಾಗುತ್ತದೆ. ನನ್ನ ಅಂತ್ಯದೊಂದಿಗೆ ನಿಮ್ಮ ಯುದ್ಧದ ಅಂತ್ಯವೂ ಆಗಲಿ. ಪಾಂಡುಸುತರೊಂದಿಗೆ ಭ್ರಾತೃಭಾವದಿಂದ ಪೃಥ್ವಿಯನ್ನು ಭೋಗಿಸು!" ಆ

ದೀರ್ಘದರ್ಶಿಯ ಮಾತಿನಂತೆ ಮಾಡದೇ ಇದ್ದುದರಿಂದಲೇ ಇದು ಪ್ರಾಪ್ತವಾಗಿದೆ ಎಂದು ನನ್ನ ಮಗನು ಈಗ ಶೋಕಿಸುತ್ತಿರಬಹುದು. ನಾನಾದರೋ ದ್ಯೂತದ ಕಾರಣದಿಂದಾಗಿ ಅಮಾತ್ಯ-ಪುತ್ರರನ್ನು ಕಳೆದುಕೊಂಡು, ರೆಕ್ಕೆಗಳನ್ನು ಕಳೆದುಕೊಂಡ ಪಕ್ಷಿಯಂತೆ ಮಹಾ ಕಷ್ಟದಲ್ಲಿ ಸಿಲುಕಿದ್ದೇನೆ. ಆಟವಾಡುತ್ತಿರುವ ಬಾಲಕರು ಪಕ್ಷಿಯನ್ನು ಹಿಡಿದು ಅದರ ರೆಕ್ಕೆಗಳನ್ನು ಹೇಗೆ ಕತ್ತರಿಸಿ ಬಿಟ್ಟು ಬಿಡುತ್ತಾರೋ ಹಾಗೆ ನಾನೂ ಕೂಡ ರೆಕ್ಕೆಗಳನ್ನು ಕಳೆದುಕೊಂಡು ಎಲ್ಲಿಗೆ ಹಾರಿಹೋಗಬೇಕೆಂದು ತಿಳಿಯದೇ ಕಷ್ಟಕ್ಕೊಳಗಾಗಿದ್ದೇನೆ. ಕ್ಷೀಣನಾಗಿದ್ದೇನೆ. ಸರ್ವಸಂಪತ್ತನ್ನೂ ಕಳೆದುಕೊಂಡಿದ್ದೇನೆ. ಬಂಧು-ಬಾಂಧವ ರಹಿತನಾಗಿದ್ದೇನೆ. ಶತ್ರುವಶನಾಗಿ ದೀನನಾಗಿರುವ ನಾನು ಯಾವ ದಿಕ್ಕಿನಲ್ಲಿ ಓಡಿ ಹೋಗಲಿ? ದುರ್ಯೋಧನನ ರಾಜ್ಯವೃದ್ಧಿಗಾಗಿ ಪ್ರಭು ಕರ್ಣನು ಪೃಥ್ವಿಯನ್ನೇ ಗೆದ್ದಿದ್ದನು. ಅವನು ವೀರ್ಯಶಾಲೀ ಸಮರ್ಥ ಶೂರ ಪಾಂಡವರಿಗೆ ಸೋತನು! ಆ ಮಹೇಷ್ವಾಸ ಕರ್ಣನು ಯುದ್ಧದಲ್ಲಿ ಕಿರೀಟಿಯಿಂದ ಹತನಾದಾಗ ಅವನನ್ನು ಯಾವ ವೀರರು ಸುತ್ತುವರೆದಿದ್ದರು ಎನ್ನುವುದನ್ನು ನನಗೆ ಹೇಳು! ಪರಿತ್ಯಕ್ತನಾಗಿ ರಣದಲ್ಲಿ ಏಕಾಂಗಿಯಾಗಿದ್ದಾಗ

ಅವನನ್ನು ಪಾಂಡವರು ಸಂಹರಿಸಲಿಲ್ಲ ತಾನೇ? ಹಿಂದೆ ನೀನು ವೀರನು ಕೆಳಗುರುಳಿಸಲ್ಪಟ್ಟನು ಎಂದು ಹೇಳಿದ್ದೆ! ಸಮರದಲ್ಲಿ ಸರ್ವಶಸ್ತ್ರಭೃತ ಶ್ರೇಷ್ಠ ಭೀಷ್ಮನು ಯುದ್ಧಮಾಡದೇ ಇದ್ದಾಗ ಅವನನ್ನು ಶಿಖಂಡಿಯು ಉತ್ತಮ ಸಾಯಕಗಳಿಂದ ಕೆಳಗುರುಳಿಸಿದನು. ಹಾಗೆಯೇ ಯುದ್ಧದಲ್ಲಿ ಮಹೇಷ್ವಾಸ ದ್ರೋಣನು ಅನೇಕ ಶರಗಳಿಂದ ಗಾಯಗೊಂಡು ಸರ್ವಾಯುಧಗಳನ್ನೂ ಕೆಳಗಿಟ್ಟು ಯೋಗಯುಕ್ತನಾಗಿದ್ದಾಗ ದ್ರೌಪದಿ ಧೃಷ್ಟದ್ಯುಮ್ನನು ಖಡ್ಗವನ್ನು ಮೇಲೆತ್ತಿ ಅವನನ್ನು ಸಂಹರಿಸಿದನು! ವಿಶೇಷ ದುರ್ಬಲರಾಗಿದ್ದಾಗ ಚಲದಿಂದ ಭೀಷ್ಮ-ದ್ರೋಣರು ಕೆಳಗುರುಳಿಸಲ್ಪಟ್ಟರು ಎಂದು ನನಗೆ ನೀನು ಹೇಳಿದ್ದೆ. ಏಕೆಂದರೆ ಸಮರದಲ್ಲಿ ಯುದ್ಧಮಾಡುತ್ತಿದ್ದ ಭೀಷ್ಮ-ದ್ರೋಣರನ್ನು ಸ್ವಯಂ ವಜ್ರಭೃತನೇ ನ್ಯಾಯಮಾರ್ಗದಲ್ಲಿ ಸಂಹರಿಸಲಾರ! ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ಯುದ್ಧದಲ್ಲಿ ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಿದ್ದ ಇಂದ್ರೋಪಮ ವೀರ ಕರ್ಣನನ್ನು ಮೃತ್ಯುವು ಹೇಗೆ ಮುಟ್ಟಿತು? ಯಾರ ಕುಂಡಲಗಳನ್ನು ಸ್ವೀಕರಿಸಿ ಪುರಂದರನು ಪ್ರತಿಯಾಗಿ ಕನಕಭೂಷಣ ವಿದ್ಯುತ್ಪಭೆಯ ದಿವ್ಯ ಶಕ್ತಿಯನ್ನು ನೀಡಿದ್ದನೋ, ಯಾರಲ್ಲಿ

ಕನಕಭೂಷಣ ರೆಕ್ಕೆಯುಳ್ಳ ಸರ್ಪಮುಖದ ದಿವ್ಯ ಶರವಿದ್ದಿತೋ ಆ ಶತ್ರುಹಂತಕ ಅರಿಸೂದನನು ಹೇಗೆ ಹತನಾದನು? ಜಾಮದಗ್ನಿಯಿಂದ ಮಹಾಘೋರ ಬ್ರಹ್ಮಾಸ್ತ್ರವನ್ನು ಕಲಿತುಕೊಂಡು ಭೀಷ್ಮ-ದ್ರೋಣರೇ ಮೊದಲಾದ ಮಹಾರಥ ವೀರರನ್ನು ಕೀಳಾಗಿ ಕಾಣುತ್ತಿದ್ದ, ಶರಪೀಡಿತ ದ್ರೋಣಮುಖ್ಯರು ವಿಮುಖರಾಗುತ್ತಿದ್ದುದನ್ನು ನೋಡಿ ಮಹಾಬಾಹು ಸೌಭದ್ರನ ಕಾರ್ಮುಕವನ್ನು ಶರಗಳಿಂದ ತುಂಡರಿಸಿದ, ಸಾವಿರ ಆನೆಗಳ ಪ್ರಾಣವುಳ್ಳ, ವಾಯುವಿನಂತೆ ವೇಗವುಳ್ಳ, ಅಚ್ಯುತ. ಸಹೋದರ ಭೀಮನನನ್ನು ವಿರಥನನ್ನಾಗಿಸಿ ಅಪಹಾಸ್ಯಮಾಡಿದ, ಸಹದೇವನನ್ನು ಸನ್ನತಪರ್ವ ಶರಗಳಿಂದ ಸೋಲಿಸಿ ವಿರಥನನ್ನಾಗಿ ಮಾಡಿ ಧರ್ಮವನ್ನು ತಿಳಿದು ಕೃಪೆಯಿಂದ ಸಂಹರಿಸದಿದ್ದ, ಸಹಸ್ರ ಮಾಯೆಗಳನ್ನು ಧ್ವಂಸಿಸಿ ರಣೋತ್ಕಟ ರಾಕ್ಷಸೇಂದ್ರ ಘಟೋತ್ಕಚನನ್ನು ಶಕ್ರನಿತ್ತ ಶಕ್ತಿಯಿಂದ ಸಂಹರಿಸಿದ, ಯಾರಿಗೆ ಹೆದರಿ ಧನಂಜಯನು ಇಷ್ಟು ದಿವಸಗಳು ದ್ವೈರಥಯುದ್ಧಕ್ಕೆ ಬಂದಿರಲಿಲ್ಲವೋ ಅಂತಹ ಮಹಾವೀರನು ಹೇಗೆ ರಣದಲ್ಲಿ ಹತನಾದನು? ಅವನ ರಥವು ತುಂಡಾಗಿರದಿದ್ದರೆ, ಧನುಸ್ಸು ತುಂಡಾಗಿರದಿದ್ದರೆ, ಅಥವಾ

ಅಸ್ತ್ರಗಳೇನಾದರೂ ಹಾಳಾಗಿರದಿದ್ದರೆ ಅವನು ಹೇಗೆ ತಾನೆ ಶತ್ರುಗಳಿಂದ ಹತನಾಗುತ್ತಿದ್ದನು? ಮಹಾಧನುಸ್ಸನ್ನು ಟೇಂಕರಿಸುವ, ಘೋರಶರಗಳನ್ನೂ ದಿವ್ಯಾಸ್ತ್ರಗಳನ್ನೂ ಯುದ್ಧದಲ್ಲಿ ಪ್ರಯೋಗಿಸುವ, ಶಾರ್ದೂಲದಂತಹ ವೇಗವುಳ್ಳ ಆ ಪುರುಷಶಾರ್ದೂಲ ಕರ್ಣನನ್ನು ರಣದಲ್ಲಿ ಗೆಲ್ಲಲು ಯಾರುತಾನೆ ಶಕ್ಯರು? ಅವನು ಹತನಾದನೆಂದು ನೀನು ನನಗೆ ಹೇಳುತ್ತಿರುವೆ! ನಿಶ್ಚಯವಾಗಿಯೂ ಅವನ ಧನುಸ್ಸು ತುಂಡಾಗಿದ್ದಿರಬೇಕು ಅಥವಾ ರಥವು ನೆಲದಲ್ಲಿ ಹುಗಿದಿದ್ದಿರಬೇಕು ಅಥವಾ ಅವನ ಅಸ್ತ್ರಗಳು ನಷ್ಟವಾಗಿದ್ದಿರಬಹುದು. ಇವುಗಳಲ್ಲದೇ ಅವನ ನಾಶಕ್ಕೆ ಬೇರೆ ಕಾರಣಗಳನ್ನು ನಾನು ಕಾಣುತ್ತಿಲ್ಲ! ಸಂಜಯ! ಅರ್ಜುನನನ್ನು ಕೊಲ್ಲದೆಯೇ ಪಾದಗಳನ್ನು ತೊಳೆಯಿಸಿಕೊಳ್ಳುವುದಿಲ್ಲವೆಂಬ ಮಹಾಘೋರವ್ರತವು ಯಾವ ಮಹಾತ್ಮನದ್ದಾಗಿತ್ತೋ, ಯಾರ ಭೀತಿಯಿಂದ ಪುರುಷರ್ಷಭ ಧರ್ಮರಾಜ ಯುಧಿಷ್ಠಿರನು ವನದಲ್ಲಿ ಹದಿಮೂರುವರ್ಷಗಳಲ್ಲಿ ನಿತ್ಯವೂ ನಿದ್ದೆಯನ್ನು ಪಡೆದಿರಲಿಲ್ಲವೋ, ಯಾವ ಮಹಾತ್ಮ ವೀರ್ಯವಂತನ ವೀರ್ಯವನ್ನು ಸಮಾಶ್ರಯಿಸಿ ನನ್ನ ಪುತ್ರನು ಪಾಂಡವರ ಭಾರ್ಯೆಯನ್ನು ಬಲಾತ್ಕಾರವಾಗಿ ಸಭೆಗೆ ಎಳೆದು ತಂದನೋ,

ಕುರುಸಂಸದಿಯ ಸಭಾಮಧ್ಯದಲ್ಲಿ ಪಾಂಡವರೂ ಕೂಡ ನೋಡುತ್ತಿದ್ದಂತೆ ಪಾಂಚಾಲಿಯನ್ನು ದಾಸಭಾರ್ಯೆಯೆಂದು ಯಾರು ಕರೆದನೋ, ಗಾಂಡೀವದಿಂದ ಹೊರಡುವ ಉಗ್ರ ಶರಗಳ ಸ್ಪರ್ಶಗಳ ಕುರಿತೂ ಯೋಚಿಸದೇ ಯಾರು ಪಾರ್ಥರು ನೋಡುತ್ತಿದ್ದಂತೆಯೇ "ಕೃಷ್ಣೇ! ನೀನೀಗ ಪತಿಗಳಿಲ್ಲದವಳಾಗಿರುವೆ!" ಎಂದು ಹೇಳಿದ್ದನೋ, ಸ್ವಬಾಹುಬಲವನ್ನು ಆಶ್ರಯಿಸಿದ ಯಾರಿಗೆ ಪುತ್ರ-ಜನಾರ್ದನರೊಡನಿರುವ ಪಾರ್ಥನಮೇಲೆ ಮುಹೂರ್ತಕಾಲವೂ ಭಯವಿದ್ದಿರಲಿಲ್ಲವೋ, ಅಂಥವನನ್ನು ವಾಸವನೊಂದಿಗೆ ದೇವತೆಗಳೂ ವಧಿಸಲಾರರೆಂದು ನನಗನ್ನಿಸಿತ್ತು. ಅಂಥವನು ಪಾಂಡವರಿಂದ ಹೇಗೆ ವಧಿಸಲ್ಪಟ್ಟನು? ಆಧಿರಥನು ಮೌರ್ವಿಯನ್ನು ಮುಟ್ಟುತ್ತಿದ್ದಾಗ ಮತ್ತು ಕೈಚೀಲವನ್ನು ಕಟ್ಟಿಕೊಳ್ಳುತ್ತಿದ್ದಾಗ ಯಾವ ಪುರುಷನೂ ಅವನ ಎದಿರು ನಿಲ್ಲುವ ಧೈರ್ಯಮಾಡುತ್ತಿರಲಿಲ್ಲ. ಈ ಮೇದಿನಿಯು ಸೋಮಸೂರ್ಯರ ಪ್ರಭೆಗಳಿಂದ ಹೀನವಾಗಬಹುದು. ಆದರೆ ಸಮರದಲ್ಲಿ ಪಲಾಯನಮಾಡದಿದ್ದ ಆ ಪುರುಷೇಂದ್ರನ ವಧೆಯು ಅಸಂಭವವು. ಮಂದ ದುರ್ಬುದ್ಧಿ ಪುತ್ರಕ ದುರ್ಯೋಧನನು

ಭ್ರಾತ ದುಃಶಾಸನನ ಸಹಾಯದಿಂದ ವಾಸುದೇವನಾಡಿದುದನ್ನು ಸ್ವೀಕರಿಸದೇ ಈಗ ವೃಷಭಸ್ಕಂದ ಕರ್ಣನು ಕೆಳಗುರುಳಿದುದನ್ನು ಮತ್ತು ದುಃಶಾಸನನು ಹತನಾಗಿದುದನ್ನು ನೋಡಿ ಶೋಕಿಸುತ್ತಿರಬಹುದಲ್ಲವೇ? ವೈಕರ್ತನನು ಸವ್ಯಸಾಚಿಯಿಂದ ದ್ವೈರಥದಲ್ಲಿ ಹತನಾದುದನ್ನು ಕೇಳಿ ಮತ್ತು ವಿಜಯಿ ಪಾಂಡವರನ್ನು ನೋಡಿ ದುರ್ಯೋಧನನು ಏನನ್ನಾದರೂ ಹೇಳಿದನೇ? ಸಂಯುಗದಲ್ಲಿ ದುರ್ಮರ್ಷಣ ಮತ್ತು ವೃಷಸೇನರು ಹತರಾದುದನ್ನು ಕೇಳಿ, ಮಹಾರಥರಿಂದ ವಧಿಸಲ್ಪಡುತ್ತಿದ್ದ ಸೇನೆಯು ಭಗ್ನವಾದುದನ್ನು ನೋಡಿ, ಪಲಾಯನಪರಾಯಣ ರಾಜ ರಥಿಗಳು ಪರಾಙ್ಮುಖರಾಗಿ ಓಡಿ ಹೋಗುತ್ತಿರುವುದನ್ನು ನೋಡಿ ನನ್ನ ಮಗನು ಶೋಕಿಸುತ್ತಿರಬಹುದಲ್ಲವೇ?

ಯಾರ ಮಾತನ್ನೂ ಕೇಳದ, ಅಭಿಮಾನಿಯಾದ, ಬಾಲಬುದ್ಧಿ ಮತ್ತು ಅಸಹನಶೀಲ ದುರ್ಯೋಧನನು ತನ್ನ ಸೇನೆಯು ಉತ್ಸಾಹಹೀನವಾಗಿರುವುದನ್ನು ನೋಡಿ ಏನನ್ನಾದರೂ ಹೇಳಿದನೇ? ಸಂಯುಗದಲ್ಲಿ ಭೀಮಸೇನನು ಭ್ರಾತರನನ್ನು ಕೊಂದು ರಕ್ತವನ್ನು ಕುಡಿಯುತ್ತಿದ್ದಾಗ ದುರ್ಯೋಧನನು

ಏನನ್ನಾದರೂ ಹೇಳಿದನೇ? ಸಭೆಯಲ್ಲಿ “ಕರ್ಣನು ರಣದಲ್ಲಿ ಅರ್ಜುನನನ್ನು ಕೊಲ್ಲುತ್ತಾನೆ” ಎಂದು ಗಾಂಧಾರರಾಜನಿಗೆ ಹೇಳಿದ್ದ ಅವನು, ಕರ್ಣನೇ ಹತನಾಗಲು ಏನು ಹೇಳಿದನು? ಹಿಂದೆ ದ್ಯೂತದಲ್ಲಿ ಪಾಂಡವರನ್ನು ವಂಚಿಸಿ ಹೃಷ್ಟನಾಗಿದ್ದ ಸೌಬಲ ಶಕುನಿಯು ಕರ್ಣನು ಹತನಾದಾಗ ಏನು ಹೇಳಿದನು? ಕರ್ಣನು ಹತನಾದುದನ್ನು ನೋಡಿ ಮಹೇಷ್ವಾಸ ಸಾತ್ವತರ ಮಹಾರಥ ಹಾರ್ದಿಕ್ಯ ಕೃತವರ್ಮನು ಏನು ಹೇಳಿದನು? ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು ಯಾರಿಂದ ಧನುರ್ವೇದದ ಶಿಕ್ಷಣವನ್ನು ಪಡೆಯಲು ಬಯಸುತ್ತಾರೋ ಆ ಧೀಮತ ಯುವಕ ರೂಪಸಂಪನ್ನ ಸುಂದರ ಮಹಾಯಶಸ್ವಿ ದ್ರೋಣಪುತ್ರ ಅಶ್ವತ್ಥಾಮನು ಕರ್ಣನು ಹತನಾದಾಗ ಏನು ಹೇಳಿದನು? ಕರ್ಣನು ಹತನಾಗಲು ಧನುರ್ವೇದದಲ್ಲಿ ಆಚಾರ್ಯತ್ವವನ್ನು ಪಡೆದಿರುವ ಪರಮತತ್ವವಿದು ಶಾರದ್ವತ ಕೃಪನು ಏನು ಹೇಳಿದನು? ಮದ್ರರಾಜ ಮಹೇಷ್ವಾಸ ಸಮಿತಿಶೋಭನ ಶಲ್ಯನು ಕರ್ಣನು ಕೆಳಗುರುಳಿದುದೆಲ್ಲವನ್ನೂ ನೋಡಿದ್ದನು. ಅವನು ಮತ್ತು ಯುದ್ಧಮಾಡಲು ಆಗಮಿಸಿದ್ದ ಪೃಥ್ವಿಯ ರಾಜರು ವೈಕರ್ತನನು ಹತನಾದುದನ್ನು ನೋಡಿ ಏನು ಹೇಳಿದರು? ರಥವ್ಯಾಗ್ರ, ನರರ್ಷಭ ಕರ್ಣನು

ಹತನಾಗಲು ಉಳಿದ ಸೇನೆಯ ಮುಖದಲ್ಲಿ ಯಾರಿದ್ದರು? ರಥಿಗಳಲ್ಲಿ ಶ್ರೇಷ್ಠ ಮದ್ರರಾಜ ಶಲ್ಯನು ವೈಕರ್ತನನ ಸಾರಥ್ಯವನ್ನು ಹೇಗೆ ಸ್ವೀಕರಿಸಿದನು ಎನ್ನುವುದನ್ನು ನನಗೆ ಹೇಳು. ಸಂಯುಗದಲ್ಲಿ ಸೂತಪುತ್ರ ಕರ್ಣನ ಬಲಚಕ್ರವನ್ನು ಯಾರು ರಕ್ಷಿಸುತ್ತಿದ್ದರು? ಎಡಚಕ್ರವನ್ನು ಮತ್ತು ಆ ವೀರನ ಎದುರು ಯಾರು ರಕ್ಷಿಸುತ್ತಿದ್ದರು? ಯಾವ ಶೂರರು ಕರ್ಣನನ್ನು ಕೂಡಿಕೊಂಡು ಯುದ್ಧಮಾಡಿದರು? ಯಾವ ಕ್ಷುದ್ರರು ಭಯದಿಂದ ಓಡಿಹೋದರು? ನೀವೆಲ್ಲರೂ ಒಟ್ಟಿಗೇ ಇರುವಾಗ ಮಹಾರಥ ಕರ್ಣನು ಹತನಾದುದು ಹೇಗೆ? ಪಾಂಡವ ಶೂರರು ಹೇಗೆ ಮಳೆಸುರಿಸುವ ಮೋಡಗಳಂತೆ ಶರವರ್ಷಗಳನ್ನುಂಟುಮಾಡುತ್ತಾ ಆ ಮಹಾರಥನನ್ನು ಎದುರಿಸಿದರು? ಬಾಣಗಳಲ್ಲಿ ಮಹತ್ತರವಾದುದೆಂದು ಪ್ರಸಿದ್ಧವಾಗಿದ್ದ ಆ ಸರ್ಪಮುಖದ ದಿವ್ಯ ಬಾಣವು ಹೇಗೆ ವ್ಯರ್ಥವಾಯಿತು ಎನ್ನುವುದನ್ನು ನನಗೆ ಹೇಳು. ನಮ್ಮವರ ಸೇನೆಗಳ ಮುಖ್ಯಯೋಧನೇ ಹತನಾದನೆಂದರೆ ಏನೂ ಉಳಿಯಲಿಲ್ಲವೆಂದು ನನಗನ್ನಿಸುತ್ತಿದೆ. ನನಗೋಸ್ಕರವಾಗಿ ತಮ್ಮ ಜೀವಗಳನ್ನೇ ಒತ್ತೆಯಿಟ್ಟು ಯುದ್ಧಮಾಡುತ್ತಿದ್ದ ಕುರುಸತ್ತಮ ವೀರ ಮಹೇಷ್ವಾಸ ಭೀಷ್ಮ-ದ್ರೋಣರು

ಹತರಾದರೆಂದು ಕೇಳಿದಾಗಲೇ ನನ್ನ ಜೀವಿತಕ್ಕೆ ಅರ್ಥವಿರಲಿಲ್ಲ. ಯಾರ ಬಾಹುಬಲವು ಸಾವಿರ ಆನೆಗಳಿಗೆ ಸಮನಾಗಿತ್ತೋ ಆ ಆಹವಶೋಭೀ ರಾಧೇಯನು ಹತನಾದುದನ್ನು ನಾನು ಸಹಿಸಿಕೊಳ್ಳಲಾರೆ! ದ್ರೋಣನು ಹತನಾಗಲು ಕೌರವರು ಮತ್ತು ಶತ್ರುಗಳ ನಡುವೆ ನರವೀರರ ಸಂಗ್ರಾಮವು ಹೇಗೆ ನಡೆಯಿತು ಎನ್ನುವುದನ್ನು ನನಗೆ ಹೇಳು. ಕೌಂತೇಯರೊಡನೆ ಕರ್ಣನು ಯಾವರೀತಿಯ ಯುದ್ಧವನ್ನು ಆಯೋಜಿಸಿದನು? ಅವನು ರಣದಲ್ಲಿ ಹೇಗೆ ಹತನಾಗಿ ಶಾಂತನಾದನು ಎನ್ನುವುದನ್ನು ಹೇಳಬೇಕು.”

ಆಗ ಸಂಜಯನು ಧೃತರಾಷ್ಟ್ರನಿಗೆ ಹದಿನಾರು ಮತ್ತು ಹದಿನೇಳನೇ ದಿನಗಳ ಯುದ್ಧದ ಕುರಿತು ಹೇಳತೊಡಗಿದನು.

# ಹದಿನಾರನೇ ದಿನದ ಯುದ್ಧ: ಕರ್ಣ ಸೇನಾಪತ್ಯ

ಆ ದಿನ ಮಹೇಷ್ವಾಸ ದ್ರೋಣನು ಹತನಾಗಲು, ಮಹಾರಥ ದ್ರೋಣಪುತ್ರನು ಮಾಡಿದ ಸಂಕಲ್ಪವು ವ್ಯರ್ಥವಾಗಲು, ಮತ್ತು ಹಾಗೆ

ಕೌರವರ ಸೇನೆಯು ಓಡಿಹೋಗುತ್ತಿರಲು ಪಾರ್ಥ ಯುಧಿಷ್ಠಿರನು ಸಹೋದರರೊಂದಿಗೆ ತನ್ನ ಸೇನೆಯ ವ್ಯೂಹವನ್ನು ರಚಿಸಿ ಸಿದ್ಧನಾದನು. ಅವನು ಹಾಗೆ ಸಿದ್ಧನಾಗಿರುವುದನ್ನು ತಿಳಿದು ನಿನ್ನ ಮಗನು ಓಡಿಹೋಗುತ್ತಿರುವ ತನ್ನ ಸೇನೆಯನ್ನು ನೋಡಿ ಪೌರುಷದ ಮಾತುಗಳಿಂದ ತಡೆದನು. ತನ್ನ ಸೇನೆಯನ್ನು ಬಾಹುವೀರ್ಯದಿಂದ ವ್ಯವಸ್ಥಿತವಾಗಿಸಿ ಸ್ಥಾಪಿಸಿಕೊಂಡು ಬಹಳ ಹೊತ್ತು ಲಬ್ಧಲಕ್ಷ್ಯರಾಗಿದ್ದ ಹೃಷ್ಟರಾಗಿದ್ದ ಪರಿಶ್ರಮಪಟ್ಟು ಯುದ್ಧಮಾಡುತ್ತಿದ್ದ ಪಾಂಡವರೊಂದಿಗೆ ಯುದ್ಧಮಾಡುತ್ತಿದ್ದು, ಸಂಧ್ಯಾಕಾಲವಾಗುತ್ತಿದ್ದಂತೆ ಸೇನೆಗಳು ಹಿಂದೆಸರಿಯುವಂತೆ ಮಾಡಿದನು. ಸೇನೆಗಳು ಹಿಂದಿರುಗುವಂತೆ ಮಾಡಿ ತಾನೂ ಶಿಬಿರವನ್ನು ಪ್ರವೇಶಿಸಿ, ಆತ್ಮಹಿತಕ್ಕಾಗಿ ಕುರುಗಳೊಂದಿಗೆ ರಹಸ್ಯದಲ್ಲಿ ಮಂತ್ರಾಲೋಚನೆಗೈದನು. ಬಹುಮೂಲ್ಯ ರತ್ನಗಂಬಳಿಗಳಿಂದ ಅಚ್ಛಾದಿತ ಪರ್ಯಂಕಗಳಲ್ಲಿಯೂ ಶ್ರೇಷ್ಠ ಸಿಂಹಾಸನಗಳಲ್ಲಿಯೂ ಕುಳಿತಿದ್ದ ಅವರು ಸುಖ ಸುಪ್ಪತ್ತಿಗೆಯ ಮೇಲೆ ಕುಳಿತಿದ್ದ ಅಮರರರಂತೆ ವಿರಾಜಿಸುತ್ತಿದ್ದರು. ಆಗ ರಾಜಾ ದುರ್ಯೋಧನನು ಸಾಂತ್ವಪೂರಕ ಸುಮಧುರ ಮಾತುಗಳಿಂದ ಅಲ್ಲಿದ್ದ ಮಹೇಷ್ವಾಸರಿಗೆ ಸಮಯೋಚಿತ ಈ ಮಾತುಗಳನ್ನಾಡಿದನು:

“ಬುದ್ಧಿವಂತರಲ್ಲಿ ಶ್ರೇಷ್ಠ ನರೋತ್ತಮರೇ! ಪರಿಸ್ಥಿತಿಯು

ಹೀಗಿರುವಾಗ ನಾವೇನು ಮಾಡಬೇಕು? ಮಾಡಬೇಕಾದ ಅತಿಮುಖ್ಯ ಕಾರ್ಯವೇನು ಎನ್ನುವುದನ್ನು ಸಮಾಲೋಚಿಸಿ ಈಗಲೇ ಹೇಳಿ!"

ರಾಜನು ಹೀಗೆ ಹೇಳಲು ಸಿಂಹಾಸನಾರೂಢರಾಗಿದ್ದ ಆ ಯುದ್ಧೋತ್ಸುಕ ನರಸಿಂಹರು ನಾನಾವಿಧದ ಅಂಗಚೇಷ್ಟೆಗಳನ್ನು ಮಾಡಿದರು. ಯುದ್ಧಮಾಡಿಯೇ ಪ್ರಾಣವನ್ನು ತ್ಯಜಿಸಬೇಕೆಂಬ ಅವರ ಮನೋಗತ ಅಭಿಪ್ರಾಯವನ್ನು ಅಂಗಚೇಷ್ಟೆಗಳ ಮೂಲಕವಾಗಿಯೇ ಅರಿತುಕೊಂಡ ಮೇಧಾವೀ ವಾಕ್ಯಜ್ಞ ಆಚಾರ್ಯಪುತ್ರ ಅಶ್ವತ್ಥಾಮನು ರಾಜನ ಮುಖವನ್ನು ನೋಡಿ ಈ ಮಾತನ್ನು ಮುಂದಿರಿಸಿದನು:

"ಅರ್ಥಸಾಧನೆಗೆ ಉಪಾಯಗಳೆಂದು ಪಂಡಿತರು ಹೇಳುವ ರಾಗ (ರಾಜನಲ್ಲಿ ಅನುರಾಗ), ಯೋಗ (ಸಾಧನ ಸಂಪತ್ತಿ), ಧಾಕ್ಷ್ಯ (ದಕ್ಷತೆ-ಸಾಮರ್ಥ್ಯ-ಕುಶಲತೆ), ಮತ್ತು ನಯ (ನೀತಿ, ವಿವೇಕದಿಂದ ಕೂಡಿದ ವ್ಯವಹಾರನೈಪುಣ್ಯತೆ, ರಾಜಕೀಯ ಚತುರತೆ) ಇವೆಲ್ಲವೂ ದೈವವನ್ನೇ ಆಶ್ರಯಿಸಿವೆ. ಹತರಾಗಿ ಹೋದ ನಮ್ಮವರು ಕೂಡ ಲೋಕಪ್ರವೀರರಾಗಿದ್ದರು. ದೇವತೆಗಳಂತೆ ಮಹಾರಥರಾಗಿದ್ದರು. ನೀತಿಮಂತರಾಗಿದ್ದರು, ಯುಕ್ತರೂ ದಕ್ಷರೂ ಆಗಿದ್ದು ನಿನ್ನಲ್ಲೇ ಅನುರಕ್ತರಾಗಿದ್ದರು.

ಆದರೂ ಕೂಡ ನಮ್ಮ ವಿಜಯದ ಕುರಿತು ನಿರಾಶೆಗೊಳ್ಳಲು ಕಾರಣವಿಲ್ಲ. ಎಲ್ಲ ಕಾರ್ಯಗಳೂ ಉತ್ತಮ ನೀತಿಗೆ ಅನುಸಾರವಾಗಿ ನಡೆದುದೇ ಆದರೆ ದೈವವೂ ಸಹ ಅನುಕೂಲವಾಗಿಯೇ ಪರಿಣಮಿಸುತ್ತದೆ. ಆದುದರಿಂದ ನಾವು ನರರಲ್ಲಿ ಪ್ರವರನಾಗಿರುವ, ಸರ್ವಗುಣಗಳಿಂದ ಯುಕ್ತನಾಗಿರುವ ಕರ್ಣನನ್ನೇ ಸೇನಾಪತಿಯನ್ನಾಗಿ ಮಾಡಿ ಶತ್ರುಗಳನ್ನು ಸದೆಬಡಿಯಬಲ್ಲೆವು."

ಆಗ ದುರ್ಯೋಧನನು ಪ್ರೀತಿ ಸಂಸ್ಕಾರಯುಕ್ತವಾದ, ಆತ್ಮಹಿತಕ್ಕೆ ತಕ್ಕುದಾದ, ಶುಭವಾದ ಆ ಪ್ರಿಯ ಮಾತುಗಳನ್ನು ಕೇಳಿ ಪ್ರೀತನಾದನು. ಕರ್ಣನ ಬಾಹುವೀರ್ಯವನ್ನು ಆಶ್ರಯಿಸಿದ ದುರ್ಯೋಧನನು ತನ್ನ ಮನಸ್ಸನ್ನು ಸಮವನ್ನಾಗಿಸಿಕೊಂಡು ರಾಧೇಯನಿಗೆ ಇದನ್ನು ಹೇಳಿದನು:

"ಕರ್ಣ ! ಮಹಾಬಾಹೋ! ನಿನ್ನ ವೀರ್ಯವನ್ನೂ ನನ್ನ ಮೇಲಿರುವ ಪರಮ ಸೌಹಾರ್ದತೆಯನ್ನೂ ನಾನು ತಿಳಿದಿದ್ದೇನೆ. ಹಾಗಿದ್ದರೂ ಈಗ ನಿನಗೆ ಕೆಲವು ಹಿತವಚನಗಳನ್ನು ಹೇಳುತ್ತೇನೆ. ಇದನ್ನು ಕೇಳಿ ನಿನಗಿಷ್ಟವಾದಂತೆ, ನಿನಗೆ ಸೂಕ್ತವೆನಿಸಿದ ಹಾಗೆ ಮಾಡು. ನೀನು ಚೆನ್ನಾಗಿ ತಿಳಿದಿರುವೆ. ನಿತ್ಯವೂ ನನಗೆ ಪರಮ ಆಶ್ರಯನಾಗಿರುವೆ. ನನ್ನ

ಸೇನಾಪತಿಗಳಾಗಿದ್ದ ಅತಿರಥರಾಗಿದ್ದ ಭೀಷ್ಮ-ದ್ರೋಣರಿಬ್ಬರೂ ಹತರಾದರು. ಅವರಿಬ್ಬರಿಗಿಂತಲೂ ಹೆಚ್ಚು ಶಕ್ತಿವಂತನಾಗಿರುವ ನೀನು ನನ್ನ ಸೇನಾಪತಿಯಾಗು! ಮಹೇಷ್ವಾಸರಾಗಿದ್ದರೂ ಅವರಿಬ್ಬರು ವೃದ್ಧರಾಗಿದ್ದರು ಮತ್ತು ಧನಂಜಯನನ್ನು ಅಪೇಕ್ಷಿಸುತ್ತಿದ್ದರು. ನಿನ್ನ ವಚನದಂತೆ ನಾನು ಆ ವೀರರನ್ನು ಸೇನಾಪತಿಗಳನ್ನಾಗಿ ಮಾಡಿ ಗೌರವಿಸಿದೆನು. ತಾನು ಪಾಂಡುಪುತ್ರರಿಗೂ ಪಿತಾಮಹನೆಂಬುದನ್ನು ನೆನಪಿಸಿಕೊಂಡು ಭೀಷ್ಮನು ಹತ್ತು ದಿವಸಗಳೂ ಮಹಾರಣದಲ್ಲಿ ಅವರನ್ನು ರಕ್ಷಿಸಿದನು. ನೀನೂ ಶಸ್ತ್ರತ್ಯಾಗಮಾಡಿರಲು ಮಹಾಯುದ್ಧದಲ್ಲಿ ಫಲ್ಗುನನು ಶಿಖಂಡಿಯನ್ನು ಮುಂದಿರಿಸಿಕೊಂಡು ಪಿತಾಮಹ ಭೀಷ್ಮನನ್ನು ಹೊಡೆದುರುಳಿಸಿದನು. ಆ ಮಹಾಭಾಗನು ಶರಶಯ್ಯೆಯ ಮೇಲೆ ಮಲಗಲು ನಿನ್ನ ಮಾತಿನಂತೆ ದ್ರೋಣನು ನಮ್ಮ ನಾಯಕನಾದನು. ಆ ವೃದ್ಧನೂ ಕೂಡ ಶಿಷ್ಯತ್ವದಿಂದಾಗಿ ಪಾರ್ಥರನ್ನು ರಣದಲ್ಲಿ ರಕ್ಷಿಸಿ ಬೇಗನೇ ಧೃಷ್ಟದ್ಯುಮ್ನನಿಂದ ಹತನಾದನು. ಆ ಇಬ್ಬರು ಪ್ರಧಾನರೂ ಹತನಾದನಂತರ ಎಷ್ಟೇ ಯೋಚಿಸಿದರೂ ಸಮರದಲ್ಲಿ ನಿನಗೆ ಸರಿಸಮನಾದ ಯೋಧ ಬೇರೆ ಯಾರನ್ನೂ ನಾನು ಕಾಣಲಾರೆ. ನಮಗೆ

ವಿಜಯವನ್ನು ತಂದುಕೊಡಲು ನೀನೇ ಶಕ್ತ ಎನ್ನುವುದರಲ್ಲಿ ಸಂಶಯವಿಲ್ಲ. ಈ ಹಿಂದೆ, ಈಗ ಮತ್ತು ಇದರ ಮುಂದೆ ಕೂಡ ನೀನೇ. ಇದನ್ನು ಅರಿತಿರುವೆ. ಧುರಂಧರನಾದ ನೀನು ರಣದಲ್ಲಿ ಯುದ್ಧದ ಭಾರವನ್ನು ಹೊರಬೇಕಾಗಿದೆ. ನೀನೇ ನಿನ್ನನ್ನು ಸೇನಾನಿಯಾಗಿ ಅಭಿಷೇಕಿಸಿಕೋ! ಅವ್ಯಯ ಸ್ಕಂದನು ಹೇಗೆ ದೇವತೆಗಳ ಸೇನಾನಿಯಾದನೋ ಹಾಗೆ ನೀನೂ ಕೂಡ ಧಾರ್ತರಾಷ್ಟ್ರರ ಈ ಸೇನೆಯನ್ನು ಉದ್ಧರಿಸು. ಮಹೇಂದ್ರನು ದಾನವರನ್ನು ಹೇಗೋ ಹಾಗೆ ಸರ್ವ ಶತ್ರುಗಣಗಳನ್ನೂ ಸಂಹರಿಸು. ವಿಷ್ಣುವನ್ನು ನೋಡಿದ ದಾನವರಂತೆ ರಣದಲ್ಲಿ ನಿಂತಿರುವ ಮಹಾರಥ ನಿನ್ನನ್ನು ನೋಡಿ ಪಾಂಡವರು ಪಾಂಚಾಲರೊಂದಿಗೆ ಓಡಿಹೋಗುವರು. ಆದುದರಿಂದ ನೀನು ಈ ಮಹಾಸೇನೆಯ ಸಂಚಾಲಕನಾಗು! ಪ್ರಯತ್ನಶೀಲನಾಗಿ ನೀನು ನಿಂತಿರಲು ಅಮಾತ್ಯರು, ಪಾಂಚಾಲರು ಮತ್ತು ಸೃಂಜಯರೊಂದಿಗೆ ಪಾಂಡವರು ಗತಚೇತನರಾಗುವರು. ಉದಯಿಸುತ್ತಿರುವ ಸೂರ್ಯನು ತನ್ನ ತೀವ್ರ ತೇಜಸ್ಸಿನಿಂದ ಉರಿದು ಹೇಗೆ ಕತ್ತಲೆಯನ್ನು ಅಪಹರಿಸುತ್ತಾನೋ ಹಾಗೆ ನೀನೂ ಕೂಡ ಶತ್ರುಗಳನ್ನು ಇಲ್ಲದಂತೆ ಮಾಡು!”

ಕರ್ಣನು ಹೇಳಿದನು:

> “ಗಾಂಧಾರೇ! ರಾಜನ್! ಹಿಂದೆಯೇ ನಾನು ನಿನ್ನ ಸನ್ನಿಧಿಯಲ್ಲಿ ಪುತ್ರರು ಮತ್ತು ಜನಾರ್ದನರೊಂದಿಗೆ ಪಾಂಡವರನ್ನು ಜಯಿಸುತ್ತೇನೆ ಎಂದು ನಿನಗೆ ಹೇಳಿದ್ದೆ. ನಿನ್ನ ಸೇನಾಪತಿಯಾಗುತ್ತೇನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಮಹಾರಾಜ! ಪಾಂಡವರನ್ನು ಗೆದ್ದೆವೆಂದೇ ತಿಳಿದು ಸ್ಥಿರನಾಗು!”

ಇದನ್ನು ಕೇಳಿದ ನೃಪ ದುರ್ಯೋಧನನು, ಅಮರರು ಸ್ಕಂದನನ್ನು ಹೇಗೋ ಹಾಗೆ ಕರ್ಣನನ್ನು ಸೇನಾಪತಿತ್ವದಿಂದ ಸತ್ಕರಿಸಲು, ದೇವತೆಗಳೊಡನೆ ಶತಕ್ರತುವಿನಂತೆ ರಾಜರೊಡನೆ ಮೇಲೆದ್ದನು. ಆಗ ತಕ್ಷಣವೇ ವಿಧಿದೃಷ್ಟ ಕರ್ಮಗಳಿಂದ ವಿಜಯೈಷಿಣರಾದ ದುರ್ಯೋಧನಪ್ರಮುಖ ರಾಜರು ಹೇಮಕುಂಭಗಳಲ್ಲಿ ಅಭಿಮಂತ್ರಿಸಿದ ನೀರನ್ನು ಆನೆಯ ದಂತಗಳಲ್ಲಿ, ಘೇಂಡಾಮೃಗ ಮತ್ತು ಎತ್ತಿನ ಕೊಂಬುಗಳಲ್ಲಿ ತುಂಬಿಸಿ, ಮಣಿ-ಮುತ್ತುಗಳು, ಪುಣ್ಯ ಗಂಧಗಳು ಮತ್ತು ಔಷಧಗಳೊಂದಿಗೆ, ರೇಷ್ಮೆಯ ವಸ್ತ್ರವನ್ನು ಹೊದೆಸಿದ್ದ ಔದುಂಬರಾಸನದಲ್ಲಿ ಸುಖಾಸೀನನಾಗಿರಿಸಿ ಶಾಸ್ತ್ರೋಕ್ತವಾಗಿ ವಿಧಿವಿತ್ತಾಗಿ ಸಂಭಾರ ಸಂಭ್ರಮಗಳಿಂದ ಅವನನ್ನು ಅಭಿಷೇಕಿಸಿದರು.



"ಗೋವಿಂದನೊಂದಿಗೆ ಮತ್ತು ಅನುಯಾಯಿಗಳೊಂದಿಗೆ ನೀನು ಮಹಾಯುದ್ಧದಲ್ಲಿ ಪಾರ್ಥರನ್ನು ಜಯಿಸು!" ಎಂದು ಬಂದಿಗಳೂ ದ್ವಿಜರೂ ಅವನನ್ನು ಹರಸಿದರು. "ರಾಧೇಯ! ಉದಯಿಸುವ ಸೂರ್ಯನು ತನ್ನ ಉಗ್ರ ಕಿರಣಗಳಿಂದ ಸದಾ ಕತ್ತಲೆಯನ್ನು ಹೇಗೆ ಹೋಗಲಾಡಿಸುತ್ತಾನೋ ಹಾಗೆ ನೀನು ವಿಜಯಕ್ಕಾಗಿ ಪಾಂಚಾರರೊಂದಿಗೆ ಪಾರ್ಥರನ್ನು ಸಂಹರಿಸು! ಉರಿಯುತ್ತಿರುವ ಸೂರ್ಯನನ್ನು ಗೂಬೆಗಳು ಹೇಗೆ ನೋಡಲಾರವೋ ಹಾಗೆ ನಿನ್ನಿಂದ ಬಿಡಲ್ಪಟ್ಟ ಶರಗಳನ್ನು ಕೇಶವನೊಂದಿಗೆ ಅವರೂ ಕೂಡ ನೋಡಲಾರರು. ಸಮರದಲ್ಲಿ ಶಸ್ತ್ರಗಳನ್ನು ಧರಿಸಿರುವ ಮಹೇಂದ್ರನನ್ನು ದಾನವರು ಹೇಗೆ ಎದುರಿಸಲಾರರೋ ಹಾಗೆ ಪಾಂಚಾಲರೊಂದಿಗೆ ಪಾರ್ಥರು ನಿನ್ನ ಎದುರು ನಿಲ್ಲಲು ಶಕ್ತರಾಗುವುದಿಲ್ಲ."

ಹೀಗೆ ಅಭಿಷಿಕ್ತನಾದ ರಾಧೇಯನು ಅಮಿತಪ್ರಭೆಯುಳ್ಳವನಾಗಿ ಪ್ರಭೆಯಿಂದ ಇನ್ನೊಬ್ಬ ದಿವಾಕರನೋ ಎನ್ನುವಂತೆ ತೋರುತ್ತಿದ್ದನು. ಕಾಲಚೋದಿತರಾದ ಧೃತರಾಷ್ಟ್ರನ ಮಕ್ಕಳು ರಾಧೇಯನನ್ನು ಸೇನಾಪತಿಯನ್ನಾಗಿ ಅಭಿಷೇಕಿಸಿ ತಮ್ಮ ಉದ್ದೇಶವು

ಸಿದ್ಧಿಯಾಯಿತೆಂದೇ ಭಾವಿಸಿದರು. ಕರ್ಣನೂ ಕೂಡ ಸೇನಾಪತ್ಯವನ್ನು ಪಡೆದು ಸೂರ್ಯೋದಯವಾಗುತ್ತಿರಲು ಸನ್ನದ್ಧರಾಗುವಂತೆ ಸೇನೆಗಳಿಗೆ ಆಜ್ಞಾಪಿಸಿದನು. ಕೌರವ ಪುತ್ರರಿಂದ ಪರಿವೃತನಾಗಿದ್ದ ಕರ್ಣನು ಅಲ್ಲಿ ತಾರಕಾಮಯ ಸಂಗ್ರಾಮದಲ್ಲಿ ದೇವತೆಗಳಿಂದ ಪರಿವೃತನಾದ ಸ್ಕಂದನಂತೆಯೇ ಶೋಭಿಸಿದನು.

ಕರ್ಣನ ಅಭಿಪ್ರಾಯವನ್ನು ತಿಳಿದ ದುರ್ಯೋಧನನು ಆನಂದದಾಯಕ ಮಂಗಳವಾದ್ಯಗಳೊಂದಿಗೆ ಸೇನೆಗಳಿಗೆ ಪ್ರಸ್ಥಾನಗೊಳ್ಳಲು ಆಜ್ಞಾಪಿಸಿದನು. ಒಮ್ಮೆಲೇ, ಇನ್ನೂ ಕತ್ತಲೆಯಾಗಿರುವಾಗಲೇ ಅವನ ಸೇನೆಯಲ್ಲಿ "ಯುದ್ಧಕ್ಕೆ ಸಿದ್ಧರಾಗಿರಿ! ಮುಂದೆ ನಡೆಯಿರಿ!" ಇವೇ ಮುಂತಾದ ಮಹಾ ನಿನಾದವು ಕೇಳತೊಡಗಿತು. ಯುದ್ಧಕ್ಕೆ ಸಜ್ಜಾಗುತ್ತಿದ್ದ ದೊಡ್ಡ ದೊಡ್ಡ ಸಲಗಗಳ, ಆವರಣಯುಕ್ತವಾದ ರಥಗಳ, ಕೆನೆಯುತ್ತಿದ್ದ ಕುದುರೆಗಳ, ಮತ್ತು ಪರಸ್ಪರರನ್ನು ಅವಸರಪಡಿಸುತ್ತಿದ್ದ ಪದಾತಿ ಯೋಧರ ಕೂಗುಗಳ ತುಮುಲ ಶಬ್ಧವು ಜೋರಾಗಿ ಆಕಾಶವನ್ನೂ ವ್ಯಾಪಿಸಿತು. ಆಗ ಶ್ವೇತಪತಾಕೆಯುಳ್ಳ, ಬಾಲಾರ್ಕನ ಬಣ್ಣದ ಕುದುರೆಗಳುಳ್ಳ, ಹೇಮಪೃಷ್ಠದ ಧನುಸ್ಸುಳ್ಳ, ಆನೆಯ ಹಗ್ಗದ ಚಿಹ್ನೆಯ ಕೇತುವುಳ್ಳ, ಬಾಣಗಳಿಂದ ತುಂಬಿಕೊಂಡಿದ್ದ ಭತ್ತಳಿಕೆಗಳು ಮತ್ತು ಅಂಗದಗಳುಳ್ಳ, ಶತಘ್ನೀ, ಕಿಂಕಿಣೀ, ಶೂಲ ಮತ್ತು

ತೋರಣಗಳನ್ನು ಹೊರಿಸಿದ್ದ, ವಿಮಲ ಆದಿತ್ಯವರ್ಣದ ಕಾರ್ಮುಕವನ್ನು ಹೊತ್ತಿದ್ದ, ಎತ್ತರದಲ್ಲಿ ಹಾರಾಡುತ್ತಿದ್ದ ಪತಾಕೆಯುಳ್ಳ ರಥದಲ್ಲಿ ಸೂತಪುತ್ರನು ಕಾಣಿಸಿಕೊಂಡನು. ಶಂಖವನ್ನು ಊದುತ್ತಾ ಹೇಮಜಾಲಗಳಿಂದ ವಿಭೂಷಿತ ರಥದಲ್ಲಿ ನಿಂತು, ಬಂಗಾರದಿಂದ ವಿಭೂಷಿತ ಮಹಾ ಚಾಪವನ್ನು ಟೇಂಕರಿಸುತ್ತಿದ್ದ, ಕತ್ತಲೆಯನ್ನು ಕಳೆಯಲು ಉದಯಿಸುತ್ತಿದ್ದ ಸೂರ್ಯನಂತಿದ್ದ ರಥಿಗಳಲ್ಲಿ ಶ್ರೇಷ್ಠ ಮಹೇಷ್ವಾಸ ಕರ್ಣನನ್ನು ನೋಡಿ ಅಲ್ಲಿದ್ದ ಸಹಸ್ರಾರು ಕೌರವರಲ್ಲಿ ಯಾರೂ ಭೀಷ್ಮ ಮತ್ತು ದ್ರೋಣ ಮತ್ತು ಇತರರ ಮರಣದ ಕುರಿತು ದುಃಖಿಸಲಿಲ್ಲ. ಶಂಖದ ಶಬ್ಧದೊಂದಿಗೆ ಯೋಧರನ್ನು ಅವಸಪಡಿಸುತ್ತಾ ಕರ್ಣನು ಕೌರವರ ಸೇನೆಗಳನ್ನು ಹೊರಡಿಸಿದನು. ಆಗ ಪಾಂಡವರನ್ನು ಜಯಿಸಲು ಬಯಸಿದ ಶತ್ರುತಾಪನ ಮಹೇಷ್ವಾಸ ಕರ್ಣನು ಮಕರ ವ್ಯೂಹವನ್ನು ರಚಿಸಿ ಮುಂದುವರೆದನು.ಮಕರದ ಬಾಯಿಯಲ್ಲಿ ಕರ್ಣನಿದ್ದನು. ನೇತ್ರಗಳೆರಡರಲ್ಲಿ ಶಕುನಿ ಮತ್ತು ಉಲೂಕರಿದ್ದರು. ಅದರ ಶಿರಸ್ಸಿನಲ್ಲಿ ದ್ರೋಣಪುತ್ರನೂ, ಕುತ್ತಿಗೆಯಲ್ಲಿ ಎಲ್ಲ ಸೋದರರೂ, ಮಧ್ಯದಲ್ಲಿ ಮಹಾ ಬಲದಿಂದ ಆವೃತನಾದ ರಾಜಾ ದುರ್ಯೋಧನನೂ ಇದ್ದರು. ಅದರ ಎಡಭಾಗದಲ್ಲಿ ನಾರಾಯಣರ ಮತ್ತು ಗೋಪಾಲರ ಸೇನೆಗಳೊಂದಿಗೆ ಕೃತವರ್ಮನು ವ್ಯವಸ್ಥಿತನಾಗಿದ್ದನು. ಅದರ ಬಲಕಾಲಿನಲ್ಲಿ ಗೌತಮನು ತ್ರಿಗರ್ತರು

ಮತ್ತು ದಕ್ಷಿಣಾತ್ಯರಿಂದ ಸಂವೃತನಾಗಿ ನಿಂತಿದ್ದನು. ಎಡ ಹಿಮ್ಮಡಿಯ ಭಾಗದಲ್ಲಿ ಮದ್ರದೇಶದ ವಿಶಾಲ ಸೇನೆಯೊಂದಿಗೆ ಶಲ್ಯನು ವ್ಯವಸ್ಥಿತನಾಗಿದ್ದನು. ಬಲಹಿಮ್ಮಡಿಯ ಭಾಗದಲ್ಲಿ ಸುಷೇಣನು ಸಹಸ್ರಾರು ರಥಗಳಿಂದ ಮತ್ತು ನೂರಾರು ಆನೆಗಳಿಂದ ಪರಿವೃತನಾಗಿ ನಿಂತಿದ್ದನು. ಅದರ ಪುಚ್ಛಭಾಗದಲ್ಲಿ ಚಿತ್ರಸೇನ ಮತ್ತು ಚಿತ್ರರು ಮಹಾ ಸೇನೆಗಳಿಂದ ಆವೃತರಾಗಿ ನಿಂತಿದ್ದರು. ಹಾಗೆ ನರವರೋತ್ತಮ ಕರ್ಣನು ಹೊರಡುತ್ತಿರಲು ಧರ್ಮರಾಜನು ಧನಂಜಯನನ್ನು ನೋಡಿ ಹೀಗೆ ಹೇಳಿದನು:

> “ಪಾರ್ಥ! ಕರ್ಣನಿಂದ ನಿರ್ಮಿತವಾದ ಮತ್ತು ಮಹಾರಥ ವೀರರಿಂದ ರಕ್ಷಿಸಲ್ಪಟ್ಟಿರುವ ಧಾರ್ತರಾಷ್ಟ್ರರ ಮಹಾಸೇನೆಯನ್ನು ರಣದಲ್ಲಿ ನೋಡು! ಅತಿವೀರರು ಹತರಾಗಿ ಉಳಿದಿರುವ ಧಾರ್ತರಾಷ್ಟ್ರರ ಈ ಮಹಾಸೇನೆಯು ನಿನಗೆ ತೃಣಸಮಾನವೆಂದು ನನಗನ್ನಿಸುತ್ತಿದೆ. ಅವರಲ್ಲಿ ದೇವಾಸುರಗಂಧರ್ವರಿಗೂ, ಕಿನ್ನರಮಹೋರಗಗಳಿಂದಲೂ, ಮೂರುಲೋಕಗಳ ಚರಾಚರಗಳಿಂದಲೂ ಅಜಯ್ಯನಾಗಿರುವ ಮಹೇಷ್ವಾಸ, ರಥಿಗಳಲ್ಲಿ ಶ್ರೇಷ್ಠ, ಸೂತಪುತ್ರನು ವಿರಾಜಿಸುತ್ತಿದ್ದಾನೆ. ಇಂದು ಅವನನ್ನು ಸಂಹರಿಸಿದರೆ

ವಿಜಯವು ನಿನ್ನದಾಗುವುದು! ಹನ್ನೆರಡು ವರ್ಷಗಳಿಂದಲೂ ನನ್ನಲ್ಲಿ ನಾಟಿರುವ ಈ ಮುಳ್ಳನ್ನು ನೀನು ಇಂದು ಕೀಳಬೇಕು. ಇದನ್ನು ತಿಳಿದು ನಿನಗಿಷ್ಟವಾದ ರೀತಿಯಲ್ಲಿ ಸೇನೆಗಳ ವ್ಯೂಹವನ್ನು ರಚಿಸು!"

ಅಣ್ಣನ ಆ ಮಾತನ್ನು ಕೇಳಿ ಶ್ವೇತವಾಹನ ಪಾಂಡವನು ತನ್ನ ಸೇನೆಯನ್ನು ಕೌರವರಿಗೆ ಪ್ರತಿವ್ಯೂಹವಾಗಿ ಅರ್ಧಚಂದ್ರಾಕಾರದ ವ್ಯೂಹದಲ್ಲಿ ರಚಿಸಿದನು. ಅದರ ಎಡಭಾಗದಲ್ಲಿ ಭೀಮಸೇನನು ವ್ಯವಸ್ಥಿತನಾಗಿದ್ದನು. ಬಲಭಾಗದಲ್ಲಿ ಧೃಷ್ಟದ್ಯುಮ್ನನಿದ್ದನು. ವ್ಯೂಹದ ಮಧ್ಯದಲ್ಲಿ ಕೃಷ್ಣಸಾರಥಿ ಸಾಕ್ಷಾತ್ ಪಾಂಡವನೂ, ಹಿಂದೆ ನಕುಲ ಸಹದೇವರೂ ಧರ್ಮರಾಜನೂ ಇದ್ದರು. ಅರ್ಜುನನ ಚಕ್ರರಕ್ಷಕರಾಗಿದ್ದ ಪಾಂಚಾಲರಾಜಕುಮಾರ ಯುಧಾಮನ್ಯು ಮತ್ತು ಉತ್ತಮೌಜಸರು ಯುದ್ಧದಲ್ಲಿ ಅಜೇಯರಾಗಿದ್ದರು. ಉಳಿದ ವೀರ ನೃಪತಿಯರು ಕವಚಧಾರಿಗಳಾಗಿ ವ್ಯೂಹದಲ್ಲಿ ತಮಗನಿಸಿದಂತೆ, ಉತ್ಸಾಹವಿದ್ದಂತೆ ಮತ್ತು ಸತ್ತ್ವವಿದ್ದಂತೆ ನಿಂತಿದ್ದರು. ಹೀಗೆ ಮಹಾವ್ಯೂಹವನ್ನು ರಚಿಸಿ ಪಾಂಡವರೂ ಕೌರವರೂ ಯುದ್ಧದಲ್ಲಿಯೇ ಮನಸ್ಸನ್ನಿಟ್ಟರು.

ಸೂತಪುತ್ರನು ರಚಿಸಿದ್ದ ಕೌರವ ಸೇನೆಯ ವ್ಯೂಹವನ್ನು ನೋಡಿ ದುರ್ಯೋಧನನು ಅನುಯಾಯಿಗಳೊಂದಿಗೆ ಪಾಂಡವರು

ಹತರಾದರೆಂದೇ ಭಾವಿಸಿದನು. ಹಾಗೆಯೇ ಪಾಂಡವೀ ಸೇನೆಯ ವ್ಯೂಹವನ್ನು ನೋಡಿ ಯುಧಿಷ್ಠಿರನು ಕರ್ಣನೊಂದಿಗೆ ಧಾರ್ತರಾಷ್ಟ್ರರು ಹತರಾದರೆಂದೇ ಭಾವಿಸಿದನು. ಆಗ ಒಮ್ಮೆಲೇ ಶಂಖ, ಭೇರಿ, ಪಣವ, ಅನಕ, ಗೋಮುಖಗಳನ್ನು ಜೋರಾಗಿ ಮೊಳಗಿಸಲು ಎಲ್ಲಕಡೆ ಶಬ್ಧವುಂಟಾಯಿತು. ಎರಡೂ ಸೇನೆಗಳಲ್ಲಿ ಜಯವನ್ನು ಬಯಸಿದ್ದ ಶೂರರ ಸಿಂಹನಾದಗಳ ಮಹಾಗರ್ಜನೆಯು ಕೇಳಿಬಂದಿತು. ಕುದುರೆಗಳ ಹೇಂಕಾರಗಳೂ, ಆನೆಗಳ ಘೀಂಕಾರವೂ, ರಥಗಾಲಿಗಳ ಉಗ್ರ ಶಬ್ಧಗಳೂ ಉದ್ಭವಿಸಿದವು. ವ್ಯೂಹದ ಮುಖದಲ್ಲಿ ಕವಚಧಾರಿಯಾಗಿದ್ದ ಮಹೇಷ್ವಾಸ ಕರ್ಣನನ್ನು ನೋಡಿ ದ್ರೋಣನನ್ನು ಕಳೆದುಕೊಂಡಿದುದರ ವ್ಯಸನವು ಯಾರಿಗೂ ಇಲ್ಲದಂತಾಗಿ ತೋರುತ್ತಿತ್ತು. ಎರಡೂ ಸೇನೆಗಳಲ್ಲಿ ಮಹಾಸತ್ತ್ವಯುತ ಪ್ರಹೃಷ್ಟ ಯುದ್ಧಮಾಡಲು ಬಯಸಿದ್ದ ಅನ್ಯೋನ್ಯರನ್ನು ಸಂಹರಿಸುವ ಛಲವುಳ್ಳ ನರ-ಕುಂಜರಗಳಿದ್ದವು. ಹಾಗೆ ಸಂರಬ್ಧರಾಗಿ ಪ್ರಯತ್ನಪಟ್ಟು ಅನ್ಯೋನ್ಯರನ್ನು ನೋಡುತ್ತಾ ಸೇನೆಗಳ ಮಧ್ಯದಲ್ಲಿ ಕರ್ಣ-ಪಾಂಡವರು ರಾರಾಜಿಸುತ್ತಿದ್ದರು. ಯುದ್ಧಮಾಡುವ ಉತ್ಸಾಹದಿಂದ ನೃತ್ಯಮಾಡುತ್ತಿರುವವೋ ಎನ್ನುವಂತೆ ಪರಸ್ಪರರ ಪಕ್ಷ ಪ್ರಪಕ್ಷಗಳಿಗೆ ತಾಗುತ್ತಾ ಆ ಸೇನೆಗಳೆರಡೂ ಮೇಲೆರಗಿದವು. ಆಗ ಅನ್ಯೋನ್ಯರನ್ನು ಸಂಹರಿಸುವುದರಲ್ಲಿ ದೃಢರಾಗಿದ್ದ ನಾರವಾರಣವಾಜಿಗಳ ಮತ್ತು

ರಥಿಗಳ ಯುದ್ಧವು ಪುನಃ ಪ್ರಾರಂಭವಾಯಿತು.

## ಕ್ಷೇಮಧೂರ್ತಿವಧೆ

ಅನ್ಯೋನ್ಯರನ್ನು ಎದುರಿಸಿದ ಆ ಸೇನೆಗಳ ಆನೆ-ಕುದುರೆ-ಪದಾತಿಗಳು ಪ್ರಹೃಷ್ಟರಾಗಿದ್ದರು. ದೇವಾಸುರರ ಸೇನೆಗಳಂತೆ ಬೆಳಗುತ್ತಿದ್ದ ಆ ಸೇನೆಗಳು ಅತಿ ವಿಶಾಲವಾಗಿದ್ದವು. ಆನೆ-ರಥ-ಕುದುರೆ-ಪದಾತಿಗಳು ದೇಹ-ಪಾಪಗಳನ್ನು ನಾಶಗೊಳಿಸುವ ಪ್ರಹಾರಗಳನ್ನು ಶತ್ರುಗಳ ಮೇಲೆ ಪ್ರಹರಿಸಿದರು. ಪೂರ್ಣಚಂದ್ರ, ಸೂರ್ಯ ಮತ್ತು ಪದ್ಮಗಳ ಕಾಂತಿಯಿಂದ ಸಮನಾಗಿ ಬೆಳಗುತ್ತಿದ್ದ ಎರಡೂ ಕಡೆಯ ನರಸಿಂಹರ ಶಿರಸ್ಸುಗಳು ರಣಭೂಮಿಯನ್ನು ತುಂಬಿಬಿಟ್ಟಿದ್ದವು. ಯುದ್ಧಮಾಡುತ್ತಿದ್ದ ಅವರು ಅರ್ಧಚಂದ್ರ-ಭಲ್ಲ-ಕ್ಷುರಪ್ರ-ಖಡ್ಗ-ಪಟ್ಟಿಷ-ಪರಶುಗಳಿಂದ ಇತರರ ಶಿರಗಳನ್ನು ಕತ್ತರಿಸುತ್ತಿದ್ದರು. ದಪ್ಪ ಸುದೀರ್ಘ ಬಾಹುಗಳಿಂದ ಕತ್ತರಿಸಲ್ಪಟ್ಟ ದಷ್ಟಪುಷ್ಟ ನೀಳ ಬಾಹುಗಳು ಅಂಗದ-ಆಯುಧಗಳ ಸಮೇತವಾಗಿ ರಣಾಂಗಣದಲ್ಲಿ ಬಿದ್ದಿದ್ದವು. ರಕ್ತಲೇಪಿತ ಅಂಗೈಗಳಿಂದಲೂ ಉಗುರುಗಳಿಂದಲೂ ಕೂಡಿದ್ದ ಆ ಬಾಹುಗಳು ಗರುಡನಿಂದ ಪ್ರಹರಿಸಲ್ಪಟ್ಟು ಭೂಮಿಯ ಮೇಲೆ ಬಿದ್ದಿದ್ದ ಐದು ಹೆಡೆಗಳ ಸರ್ಪಗಳಂತೆ ಕಾಣುತ್ತಿದ್ದವು. ಶತ್ರುಗಳಿಂದ ಹೊಡೆಯಲ್ಪಟ್ಟ ವೀರರು ಪುಣ್ಯಗಳು ಕ್ಷೀಣವಾಗಲು ವಿಮಾನಗಳಿಂದ ಬೀಳುವ

ಸ್ವರ್ಗಸದಸ್ಯರಂತೆ ಆನೆ-ಕುದುರೆಗಳ ಭುಜಗಳ ಮೇಲಿಂದ ಕೆಳಕ್ಕೆ ಬೀಳುತ್ತಿದ್ದರು. ರಣದಲ್ಲಿ ವೀರರಾದ ಯೋಧರನ್ನು ಅವರಿಗಿಂತಲೂ ವೀರರಾದವರು ಭಾರವಾದ ಗದೆಗಳಿಂದಲೂ, ಅನ್ಯ ಪರಿಘ-ಮುಸಲಗಳಿಂದಲೂ ಹೊಡೆದು ಕೆಳಕ್ಕೆ ಕೆಡವುತ್ತಿದ್ದರು. ಆ ಪರಮಸಂಕುಲದಲ್ಲಿ ರಥಗಳನ್ನು ರಥಗಳು ಧ್ವಂಸಮಾಡಿದವು. ಮದಿಸಿದ ಆನೆಗಳು ಮದಿಸಿದ ಆನೆಗಳನ್ನು ಮತ್ತು ಹಾಗೆಯೇ ಅಶ್ವಾರೋಹಿಗಳು ಅಶ್ವಾರೋಹಿಗಳನ್ನು ನಾಶಪಡಿಸಿದವು. ರಥಗಳು ಶ್ರೇಷ್ಠರಥಗಳಿಂದ, ಅಶ್ವಾರೋಹಿಗಳು ಮತ್ತು ಪದಾತಿಗಳು ಆನೆಗಳಿಂದ, ಪದಾತಿಗಳು ಅಶ್ವಾರೋಹಿಗಳಿಂದ ಸಂಹರಿಸಲ್ಪಟ್ಟು ಮಲಗಿದವು. ಆನೆಗಳಿಂದ ರಥ-ಕುದುರೆ-ಪದಾತಿಗಳೂ, ರಥಗಳಿಂದ ಆನೆ-ಕುದುರೆ-ಪದಾತಿಗಳೂ, ರಥ-ಪದಾತಿ-ಆನೆ-ಕುದುರೆಗಳಿಂದ ಪದಾತಿ-ರಥ-ಆನೆ-ಕುದುರೆಗಳು ಹತವಾದವು. ರಥ ಮತ್ತು ಕುದುರೆಗಳನ್ನೇರಿದ್ದ ಯೋಧರು ರಥ ಮತ್ತು ಕುದುರೆಗಳ ಮೇಲೆ ಏರಿದ್ದ ಯೋಧರನ್ನು ಕೈಗಳಿಂದಲೂ, ಶಸ್ತ್ರಗಳಿಂದಲೂ, ರಥಗಳಿಂದಲೂ ಹೊಡೆದು ಜೋರಾಗಿ ಕದನವಾಡುತ್ತಿದ್ದರು.

ಹೀಗೆ ಶೂರರಿಂದ ವಧಿಸಲ್ಪಟ್ಟು ಹತರಾಗುತ್ತಿರಲು, ವೃಕೋದರನ ಮುಂದಾಳುತ್ವದಲ್ಲಿ ಪಾರ್ಥರು ಕೌರವ ಸೇನೆಯ ಮೇಲೆ ಎರಗಿದರು.

ಧೃಷ್ಟದ್ಯುಮ್ನ, ಶಿಖಂಡೀ, ದ್ರೌಪದೇಯರು, ಪ್ರಭದ್ರಕರು, ಸಾತ್ಯಕಿ, ಚೇಕಿತಾನ, ಪಾಂಡ್ಯರು, ಔಡ್ರರು, ಮತ್ತು ಕೇರಳರು ಭೀಮನನ್ನು ಹಿಂಬಾಲಿಸಿದ್ದರು. ಮತ್ತಮಾತಂಗದ ವಿಕ್ರಮಗಳುಳ್ಳ ಅವರು ಶಿರೋಭೂಷಣಗಳನ್ನೂ ಆಭರಣಗಳನ್ನೂ ತೊಟ್ಟಿದ್ದರು. ಅವರ ಹಲ್ಲುಗಳು ಕೆಂಪಾಗಿದ್ದವು, ಬಣ್ಣಬಣ್ಣದ ವಸ್ತ್ರಗಳನ್ನು ತೊಟ್ಟಿದ್ದರು. ಸುಗಂಧದ್ರವ್ಯಗಳನ್ನ ಶರೀರಗಳಿಗೆ ಲೇಪಿಸಿಕೊಂಡಿದ್ದರು. ಖಡ್ಗಗಳನ್ನು ಸೊಂಟಕ್ಕೆ ಬಿಗಿದು ಕೊಂಡಿದ್ದರು. ಕೈಗಳಲ್ಲಿ ಪಾಶಗಳನ್ನು ಹಿಡಿದಿದ್ದರು. ಆನೆಗಳನ್ನೂ ತಡೆದು ನಿಲ್ಲಿಸಬಲ್ಲ ಅವರು ಸಮಾನಮೃತ್ಯುವನ್ನು ಬಯಸಿ ಪರಸ್ಪರರಿಂದ ಅಲಗದೇ ಒಟ್ಟಾಗಿಯೇ ಇರುತ್ತಿದ್ದರು. ನವಿಲುಗರಿಗಳಿಂದ ತಲೆಗಳನ್ನು ಅಲಂಕರಸಿಕೊಂಡಿದ್ದರು. ಚಾಪಗಳನ್ನು ಹಿಡಿದಿದ್ದರು. ನೀಳಕೂದಲಿನ, ಪ್ರಿಯ ಮಾತನಾಡುತ್ತಿದ್ದ ಆ ಪದಾತಿ-ಕುದುರೆ ಸವಾರರು ಪರಾಕ್ರಮದಲ್ಲಿ ಘೋರರೂಪಿಗಳಾಗಿದ್ದರು. ಇವರಲ್ಲದೇ ಶೂರರಾದ ಚೇದಿ, ಪಾಂಚಾಲ, ಕೇಕಯ, ಕರೂಷ, ಕೋಸಲ, ಕಾಶಿ, ಮಾಗಧ ಸೇನೆಗಳೂ ಕೌರವ ಸೇನೆಯ ಮೇಲೆ ಆಕ್ರಮಣಮಾಡಿದರು. ಅವರ ರಥಗಳು, ಆನೆಗಳು, ಕುದುರೆಗಳು ಮತ್ತು ಪದಾತಿಗಳು ಹರ್ಷದಿಂದ ನಾನವಿಧವಾಗಿ ಕೂಗಿ, ನಗುತ್ತಾ ಕುಣಿಯುತ್ತಿದ್ದವು. ಅಂತಹ ವಿಶಾಲ ಸೈನ್ಯದ ಮಧ್ಯದಲ್ಲಿ ವೃಕೋದರನು ಆನೆಯ ಮೇಲೆ ಕುಳಿತು ಅನೇಕ ಮಹಾಗಾತ್ರದ ಶ್ರೇಷ್ಠ

ಆನೆಗಳಿಂದ ಪರಿವೃತನಾಗಿ ಶತ್ರು ಸೈನ್ಯದಕಡೆ ಧಾವಿಸುತ್ತಿದ್ದನು.

ವಿಧಿವತ್ತಾಗಿ ಸಜ್ಜಾಗಿದ್ದ ಆ ಉಗ್ರ ಶ್ರೇಷ್ಠ ಆನೆಯು ಸೂರ್ಯನಿಂದ ಕೂಡಿದ ಉದಯಾಚಲದ ಉಚ್ಛ ಶಿಖರದಂತೆ ಪ್ರಕಾಶಿಸುತ್ತಿತ್ತು. ಶ್ರೇಷ್ಠ ರತ್ನಗಳಿಂದ ವಿಭೂಷಿತಗೊಂಡಿದ್ದ ಆ ಮಹಾಗಜದ ಲೋಹಮಯ ಕವಚವು ನಕ್ಷತ್ರಗಳಿಂದ ಕೂಡಿದ ಶರತ್ಕಾಲದ ಅಕಾಶದಂತೆ ಹೊಳೆಯುತ್ತಿತ್ತು. ಸುಂದರ ಮುಕುಟದಿಂದಲೂ ಆಭರಣಗಳಿಂದಲೂ ಸಮಲಂಕೃತ ಭೀಮಸೇನನು ಕೈಯಲ್ಲಿ ತೋಮರ ಪ್ರಾಸಗಳನ್ನು ಹಿಡಿದು ಮಧ್ಯಾಹ್ನದ ಸೂರ್ಯನಂತೆ ಶತ್ರುಗಳನ್ನು ದಹಿಸುತ್ತಾ ಚಲಿಸುತ್ತಿದ್ದನು.

ದೂರದಿಂದಲೇ ಆ ಆನೆಯನ್ನು ನೋಡಿ ಆನೆಯ ಮೇಲಿದ್ದ ಕ್ಷೇಮಧೂರ್ತಿಯು ಉತ್ಸಾಹದಿಂದ ಕೂಗುತ್ತಾ ಭೀಮನನ್ನು ಯುದ್ಧಕ್ಕೆ ಆಹ್ವಾನಿಸುತ್ತಾ ಆಕ್ರಮಣಿಸಿದನು. ವೃಕ್ಷಗಳಿಂದ ತುಂಬಿದ್ದ ಎರಡು ಪರ್ವತಗಳ ಮಧ್ಯೆ ದೈವೀ ಸಂಘಟನೆಯಿಂದ ಸಂಘರ್ಷವಾಗುವ ರೀತಿ ಅವರಿಬ್ಬರ ಆ ಎರಡು ಉಗ್ರರೂಪೀ ಆನೆಗಳ ಮಧ್ಯೆ ಯುದ್ಧವು ನಡೆಯಿತು. ಎರಡು ಆನೆಗಳೂ ಸೆಣಸಾಡುತ್ತಿರಲು ಅವರಿಬ್ಬರು ವೀರರು ಸೂರ್ಯರಶ್ಮಿಗೆ ಸಮಾನ ಕಾಂತಿಗಳುಳ್ಳ ತೋಮರಗಳಿಂದ ಅನ್ಯೋನ್ಯರನ್ನು ಹೊಡೆದು ಸಿಂಹನಾದಗೈದರು. ಆನೆಗಳನ್ನು ಹಿಂದೆ

ಸರಿಸಿಕೊಂಡು ಇಬ್ಬರೂ ಮಂಡಲಾಕಾರವಾಗಿ ತಿರುಗತೊಡಗಿದರು. ಇಬ್ಬರೂ ಧನುಸ್ಸುಗಳನ್ನು ಹಿಡಿದು ಪರಸ್ಪರರನ್ನು ಪ್ರಹರಿಸತೊಡಗಿದರು. ಚಪ್ಪಾಳೆಗಳಿಂದಲೂ, ಟೇಂಕಾರಗಳಿಂದಲೂ ಬಾಣಗಳ ಶಬ್ಧಗಳಿಂದಲೂ ಅವರಿಬ್ಬರೂ ಸುತ್ತಲಿದ್ದ ಜನರನ್ನು ಹರ್ಷಗೊಳಿಸುತ್ತಾ ಸಿಂಹನಾದಗೈದರು. ಗಾಳಿಯಿಂದ ಪರಪರನೆ ಹಾರಾಡುತ್ತಿದ್ದ ಪತಾಕೆಗಳಿಂದ ಕೂಡಿದ ಮತ್ತು ಸೊಂಡಿಲುಗಳನ್ನು ಮೇಲಕ್ಕೆತ್ತಿದ್ದ ಮಹಾ ಗಜಗಳನ್ನು ಬಳಸಿ ಆ ಇಬ್ಬರು ಮಹಾಬಲರೂ ಯುದ್ಧಮಾಡುತ್ತಿದ್ದರು. ವರ್ಷಾಕಾಲದ ಮೇಘಗಳು ಮಳೆಗರೆಯುವಂತೆ ಅವರು ಶಕ್ತಿ-ತೋಮರವರ್ಷಗಳಿಂದ ಪರಸ್ಪರರ ಧನುಸ್ಸುಗಳನ್ನು ತುಂಡರಿಸಿ ಗರ್ಜಿಸಿದರು. ಆಗ ಕ್ಷೇಮಧೂರ್ತಿಯು ತೋಮರದಿಂದ ಭೀಮನ ವಕ್ಷಸ್ಥಳಕ್ಕೆ ಹೊಡೆದು ನಂತರ ವೇಗದಿಂದ ಇನ್ನೂ ಆರು ತೋಮರಗಳಿಂದ ಹೊಡೆದು ಗರ್ಜಿಸಿದನು. ಅಂಗಗಳಲ್ಲಿ ತೋಮರಗಳು ಅಂಟಿಕೊಂಡಿರಲು ಕ್ರೋಧದೀಪ್ತನಾದ ಭೀಮಸೇನನು ಮೇಘಗಳಿಂದ ಮುಚ್ಚಲ್ಪಟ್ಟ ಏಳು ಕುದುರೆಗಳ ರಥದ ಮೇಲೆ ಕುಳಿತಿದ್ದ ಸೂರ್ಯನಂತೆ ಶೋಭಿಸಿದನು. ಆಗ ಭೀಮನು ಭಾಸ್ಕರನ ವರ್ಣದಂತೆ ಹೊಳೆಯುತ್ತಿದ್ದ, ಶೀಘ್ರಗತಿಯ ಲೋಹಮಯ ತೋಮರವನ್ನು ಶತ್ರುವಿನ ಮೇಲೆ ಪ್ರತಿಯಾಗಿ ಪ್ರಯೋಗಿಸಿದನು. ಆಗ ಕುಲೂತಾಧಿಪತಿ ಕ್ಷೇಮಧೂರ್ತಿಯು ಚಾಪವನ್ನು ಬಗ್ಗಿಸಿ ಹೆದೆಯೇರಿಸಿ ಸಾಯಕಗಳಿಂದ

ಆ ತೋಮರವನ್ನು ಹತ್ತು ಭಾಗಗಳನ್ನಾಗಿ ತುಂಡರಿಸಿ ಪಾಂಡವ ಭೀಮನನ್ನು ಶಕ್ತಿಯಿಂದ ಪ್ರಹರಿಸಿದನು. ಕೂಡಲೇ ಪಾಂಡವನು ಮಹಾಮೇಘದ ಗರ್ಜನೆಯುಳ್ಳ ಕಾರ್ಮುಕವನ್ನು ಎತ್ತಿಕೊಂಡು ಶರಗಳಿಂದ ಶತ್ರುವಿನ ಆನೆಯನ್ನು ಪ್ರಹರಿಸಿದನು.

ಭೀಮಸೇನನ ಶರಗಳಿಂದ ಪೀಡಿತ ಆ ಆನೆಯು ನಿಯಂತ್ರಿಸಲ್ಪಟ್ಟರೂ ಭಿರುಗಾಳಿಯಿಂದ ತೂರಲ್ಪಟ್ಟ ಮೇಘದಂತೆ ಓಡಿಹೋಯಿತು. ಭಿರುಗಾಳಿಯಿಂದ ಒಯ್ಯಲ್ಪಡುವ ಮೇಗವನ್ನು ಭಿರುಗಾಳಿಯಿಂದ ಉಡಾಯಿಸಲ್ಪಟ್ಟ ಮತ್ತೊಂದು ಮೇಘವು ಅನುಸರಿಸಿ ಹೋಗುವಂತೆ ಓಡಿಹೋಗುತ್ತಿದ್ದ ಆ ಆನೆಯನ್ನು ಭೀಮಸೇನನ ಆನೆಯು ಹಿಂಬಾಲಿಸಿತು. ತನ್ನ ಆನೆಯನ್ನು ಪ್ರಯತ್ನತಃ ನಿಲ್ಲಿಸಿ ಕ್ಷೇಮಧೂರ್ತಿಯು ಬಾಣಗಳಿಂದ ಬೆನ್ನಟ್ಟಿ ಬರುತ್ತಿದ್ದ ಭೀಮಸೇನನನ್ನು ಅವನ ಆನೆಯೊಂದಿಗೆ ಹೊಡೆದನು. ಆಗ ಭೀಮನು ಕ್ಷುರದಿಂದ ಶತ್ರುವಿನ ಧನುಸ್ಸನ್ನು ತುಂಡರಿಸಿ ಅವನ ಆನೆಯನ್ನೂ ಗಾಯಗೊಳಿಸಿದನು. ಆಗ ಕ್ಷೇಮಧೂರಿಯು ಪರಮ ಕ್ರುದ್ಧನಾಗಿ ನಾರಾಚಗಳಿಂದ ಶತ್ರುವಿನ ಸರ್ವ ಮರ್ಮಗಳನ್ನೂ ಆನೆಯನ್ನೂ ಪ್ರಹರಿಸಿದನು. ತನ್ನ ಆನೆಯು ಕೆಳಕ್ಕೆ ಬೀಳುವುದರೊಳಗೇ ಭೀಮಸೇನನು ಕೆಳಕ್ಕೆ ಧುಮುಕಿ ನೆಲದಮೇಲೆ ಸ್ಥಿರನಾಗಿ ನಿಂತು, ಶತ್ರುವಿನ ಆನೆಯನ್ನು ಗದೆಯಿಂದ ಅಪ್ಪಳಿಸಿ

ಸಂಹರಿಸಿದನು.

ಆ ಆನೆಯಿಂದ ಕೆಳಕ್ಕೆ ಹಾರಿ ಖಡ್ಗವನ್ನೆತ್ತಿ ಓಡಿ ಬರುತ್ತಿದ್ದ ಕ್ಷೇಮಧೂರ್ತಿಯನ್ನು ವೃಕೋದರನು ಅದೇ ಗದೆಯಿಂದ ಸಂಹರಿಸಿದನು. ಖಡ್ಗದ ಸಮೇತವಾಗಿಯೇ ತನ್ನ ಆನೆಯ ಬಳಿಯೇ ಬಿದ್ದು, ವಜ್ರದಿಂದ ಪ್ರಹರಿಸಲ್ಪಟ್ಟ ಗಿರಿಯ ಮೇಲಿಂದ ವಜ್ರಕ್ಕೆ ಸಿಲುಕಿದ ಸಿಂಹದಂತೆ ಅವನು ಅಸುನೀಗಿದನು. ಯಶಸ್ಕರ ಕುಲೂತರ ನೃಪತಿಯು ಹತನಾದುದನ್ನು ನೋಡಿ ಕೌರವ ಸೇನೆಯು ವ್ಯಥಿತಗೊಂಡು ಓಡಿಹೋಯಿತು.

## ವಿಂದಾನುವಿಂದರ ವಧೆ

ಅನಂತರ ಶೂರ ಕರ್ಣನು ಸನ್ನತಪರ್ವ ಶರಗಳಿಂದ ಸಮರದಲ್ಲಿ ಪಾಂಡವರ ಸೇನೆಯನ್ನು ಸಂಹರಿಸಿದನು. ಹಾಗೆಯೇ ಮಹಾರಥ ಪಾಂಡವರು ಕೂಡ ಕ್ರುದ್ಧರಾಗಿ ಕರ್ಣನ ಎದುರೇ ದುರ್ಯೋಧನನ ಸೇನೆಯನ್ನು ಸಂಹರಿಸಿದರು. ಮಹಾಬಾಹು ಕರ್ಣನು ಪಾಂಡವೀ ಸೇನೆಯನ್ನು ಸೂರ್ಯನ ರಶ್ಮಿಗಳಂತೆ ತೀಕ್ಷ್ಣವಾಗಿದ್ದ, ಕಮ್ಮಾರನಲ್ಲಿ ತಯಾರಿಸಿದ್ದ ನಾರಾಚಗಳಿಂದ ಹೊಡೆದನು. ಅಲ್ಲಿ ಕರ್ಣನ ನಾರಾಚಗಳಿಂದ ಹೊಡೆಯಲ್ಪಟ್ಟ ಆನೆಗಳು ಅರಚುತ್ತಿದ್ದವು, ನಿಟ್ಟುಸಿರು ಬಿಡುತ್ತಿದ್ದವು, ನರಳುತ್ತಿದ್ದವು ಮತ್ತು ಹತ್ತೂ ದಿಕ್ಕುಗಳಲ್ಲಿ ಓಡಿ

ಹೋಗುತ್ತಿದ್ದವು. ಸೂತಪುತ್ರನು ಆ ಸೇನೆಯನ್ನು ಹಾಗೆ ವಧಿಸುತ್ತಿರಲು ನಕುಲನು ಕೂಡಲೇ ಸೂತಪುತ್ರನನ್ನು ಆಕ್ರಮಣಿಸಿದನು. ಹಾಗೆಯೇ ಭೀಮಸೇನನು ದ್ರೌಣಿಯನ್ನು ಮತ್ತು ಸಾತ್ಯಕಿಯು ಕೇಕಯ ವಿಂದಾನುವಿಂದರನ್ನು ಎದುರಿಸಿದರು. ಮುಂದುವರೆದು ಬರುತ್ತಿದ್ದ ಶ್ರುತಕರ್ಮನನ್ನು ಚಿತ್ರಸೇನ, ಚಿತ್ರನು ಪ್ರತಿವಿಂಧ್ಯನನ್ನು, ದುರ್ಯೋಧನನು ರಾಜಾ ಯುಧಿಷ್ಠಿರನನ್ನು, ಮತ್ತು ಧನಂಜಯನು ಸಂಶಪ್ತಕಗಣಗಳನ್ನು ಎದುರಿಸಿ ಯುದ್ಧಮಾಡಿದರು. ಆ ವೀರವರಕ್ಷಯ ಯುದ್ಧದಲ್ಲಿ ಧೃಷ್ಟದ್ಯುಮ್ನನು ಕೃಪನನ್ನು ಮತ್ತು ಕೃತವರ್ಮನನ್ನು ಶಿಖಂಡಿಯು ಎದುರಿಸಿದರು. ಹಾಗೆಯೇ ಶ್ರುತಕೀರ್ತಿಯು ಶಲ್ಯನನ್ನು, ಮತ್ತು ಸಹದೇವನು ದುಃಶಾಸನನನ್ನು ಎದುರಿಸಿ ಯುದ್ಧಮಾಡಿದರು.

ಕೇಕಯ ವಿಂದಾನುವಿಂದರಿಬ್ಬರೂ ಶರವರ್ಷಗಳಿಂದ ಸಾತ್ಯಕಿಯನ್ನೂ ಸಾತ್ಯಕಿಯು ಕೇಕಯರನ್ನೂ ಮುಚ್ಚಿಬಿಟ್ಟರು. ಮಹಾಹವದಲ್ಲಿ ಎರಡು ಆನೆಗಳು ಎದುರಾಳೀ ಆನೆಯನ್ನು ತಮ್ಮ ದಂತಗಳಿಂದ ಇರಿಯುವಂತೆ ಆ ಇಬ್ಬರು ಸಹೋದರರೂ ವೀರ ಸಾತ್ಯಕಿಯ ಹೃದಯಕ್ಕೆ ಅತ್ಯಂತ ಗಾಢವಾಗಿ ಪ್ರಹರಿಸಿದರು. ಅವನ ಕವಚವು ಸೀಳಿಹೋಗಲು ಆ ಇಬ್ಬರು ಸಹೋದರರೂ ಸಾತ್ಯಕಿಯನ್ನು ಶರಗಳಿಂದ ಪ್ರಹರಿಸಿದರು. ಸಾತ್ಯಕಿಯಾದರೋ ಜೋರಾಗಿ ನಗುತ್ತಾ ಸರ್ವದಿಕ್ಕುಗಳನ್ನೂ

ಶರವರ್ಷಗಳಿಂದ ಮುಸುಕಿ ಅವರಿಬ್ಬರನ್ನೂ ತಡೆದನು. ಶೈನೇಯನ ಶರವೃಷ್ಟಿಗಳಿಂದ ತಡೆಯಲ್ಪಟ್ಟ ಅವರಿಬ್ಬರೂ ಕೂಡಲೇ ಶೈನೇಯನ ರಥವನ್ನು ಶರಗಳಿಂದ ಮುಚ್ಚಿಬಿಟ್ಟರು. ಶೌರಿಯು ಅವರಿಬ್ಬರ ಚಿತ್ರಿತ ಧನುಸ್ಸುಗಳನ್ನು ಕತ್ತರಿಸಿ ತೀಕ್ಷ್ಣ ದುಃಸ್ಸಹ ಸಾಯಕಗಳಿಂದ ಅವರಿಬ್ಬರನ್ನೂ ಮುಚ್ಚಿಬಿಟ್ಟನು. ಅವರು ಬೇರೆಯೇ ಧನುಸ್ಸುಗಳನ್ನು ಹಿಡಿದು ಮಹಾಶರಗಳಿಂದ ಸಾತ್ಯಕಿಯನ್ನು ಅಚ್ಛಾದಿಸುತ್ತಾ ರಣರಂಗದ ಸುತ್ತ ಶೀಘ್ರವಾಗಿ ಸಂಚರಿಸುತ್ತಿದ್ದರು. ಅವರಿಂದ ಪ್ರಯೋಗಿಸಲ್ಪಟ್ಟ ರಣಹದ್ದಿನ ಮತ್ತು ನವಿಲಿನ ಗರಿಗಳಿಂದ ಶೋಭಿತ ಸ್ವರ್ಣಭೂಷಣ ಮಹಾಬಾಣಗಳು ಎಲ್ಲದಿಕ್ಕುಗಳನ್ನೂ ಪ್ರಕಾಶಿಸುತ್ತಾ ಬೀಳುತ್ತಿದ್ದವು. ಆ ಮಹಾಯುದ್ಧದಲ್ಲಿ ಬಾಣಗಳಿಂದ ಅಂಧಕಾರವು ಕವಿಯಲು ಆ ಮಹಾರಥರು ಅನ್ಯೋನ್ಯರ ಧನುಸ್ಸುಗಳನ್ನು ಕತ್ತರಿಸಿದರು. ಆಗ ಕ್ರುದ್ಧನಾದ ಸಾತ್ವತನು ಅನ್ಯ ಧನುಸ್ಸನ್ನು ಎತ್ತಿಕೊಂಡು ಸಜ್ಜುಗೊಳಿಸಿ ಯುದ್ಧದಲ್ಲಿ ತೀಕ್ಷ್ಣ ಕ್ಷುರಪ್ರದಿಂದ ಅನುವಿಂದನ ಶಿರವನ್ನು ಅಪಹರಿಸಿದನು. ಅತ್ಯಂತ ಪೀಡಿತಗೊಂಡ ಕುಂಡಲಯುಕ್ತ ಆ ಶಿರವು ನಿಹಿತ ಶಂಬರನ ಶಿರದಂತೆ ಮಹಾರಣದಲ್ಲಿ ನೆಲದಮೇಲೆ ಬಿದ್ದು ಕೇಕಯರೆಲ್ಲರನ್ನೂ ಶೋಕಿಸಿತು. ಆ ಬಾಣವು ಭೂಮಿಯನ್ನು ಹೊಕ್ಕಿತು.

ಶೂರ ಸಹೋದರನು ಹತನಾದುದನ್ನು ನೋಡಿ ಮಹಾರಥ ವಿಂದನು

ಇನ್ನೊಂದು ಧನುಸ್ಸನ್ನೆತ್ತಿಕೊಂಡು ಶೈನೇಯನನ್ನು ಪ್ರತಿಯಾಗಿ ಹೊಡೆದನು. ಸ್ವರ್ಣಪುಂಖಗಳ ಶಿಲಾಶಿತ ಶಕ್ತಿಯಿಂದ ಸಾತ್ಯಕಿಯನ್ನು ಹೊಡೆದು ಅವನು ಜೋರಾಗಿ ಗರ್ಜಿಸಿ ನಿಲ್ಲು ನಿಲ್ಲೆಂದು ಹೇಳಿದನು. ಆ ಕ್ರುದ್ಧ ಕೇಕಯ ಮಹಾರಥನು ಪುನಃ ಸಾತ್ಯಕಿಯನ್ನು ಅಗ್ನಿಶಿಖೆಗಳ ಆಕಾರದ ಬಾಣಗಳಿಂದ ಅವನ ಎದೆಗೆ ಗುರಿಯಿಟ್ಟು ಹೊಡೆದನು. ಶರಗಳಿಂದ ಸರ್ವಾಂಗಗಳಲ್ಲಿ ಗಾಯಗೊಂಡ ಸಾತ್ವತನು ಸಮರದಲ್ಲಿ ಹೂಬಿಟ್ಟ ಕಿಂಶುಕವೃಕ್ಷದಂತೆ ರಾರಾಜಿಸಿದನು. ಸಮರದಲ್ಲಿ ಕೇಕಯ ಮಹಾತ್ಮನಿಂದ ಪ್ರಹರಿಸಲ್ಪಟ್ಟ ಸಾತ್ಯಕಿಯು ಕೇಕಯನನ್ನು ನಸುನಗುತ್ತಾ ಇಪ್ಪತ್ತೈದು ಶರಗಳಿಂದ ಹೊಡೆದನು. ಉತ್ತಮ ಭುಜಗಳುಳ್ಳ ಅವರಿಬ್ಬರೂ ಶತಚಂದ್ರಚಿತ್ರಿತ ಗುರಾಣಿಗಳನ್ನು ಹಿಡಿದು ಖಡ್ಗಯುದ್ಧಕ್ಕೆ ಅಣಿಯಾಗಿ ಮಹಾರಣದಲ್ಲಿ ದೇವಾಸುರಯುದ್ಧದಲ್ಲಿ ಮಹಾಬಲ ಜಂಭಾಸುರ-ಶಕ್ರರಂತೆ ವಿರಾಜಿಸಿದರು. ಮಹಾರಣದಲ್ಲಿ ಅವರಿಬ್ಬರೂ ಮಂಡಲಾಕಾರಗಳಲ್ಲಿ ತಿರುಗುತ್ತಿದ್ದು ಅನ್ಯೋನ್ಯರನ್ನು ಕೂಡಲೇ ಖಡ್ಗದಿಂದ ಸಂಹರಿಸಲು ಪ್ರಯತ್ನಿಸಿದರು. ಆಗ ಸಾತ್ವತನು ಕೇಕಯನ ಗುರಾಣಿಯನ್ನು ಎರಡಾಗಿ ಕತ್ತರಿಸಿದನು. ಪಾರ್ಥಿವನೂ ಕೂಡ ಸಾತ್ಯಕಿಯ ಗುರಾಣಿಯನ್ನು ಕತ್ತರಿಸಿದನು. ನೂರಾರು ತಾರಾಗಣಗಳಿಂದ ಆವೃತಗೊಂಡಿದ್ದ ಆ ಗುರಾಣಿಯನ್ನು ತುಂಡರಿಸಿ ಕೇಕಯನು ಗತ-ಪ್ರತ್ಯಾಗತವೇ ಮೊದಲಾದ ಮಂಡಲಗಳಲ್ಲಿ

ಸಂಚರಿಸತೊಡಗಿದನು. ಮಹಾರಣದಲ್ಲಿ ಶ್ರೇಷ್ಠಖಡ್ಗವನ್ನು ಧರಿಸಿ ಸಂಚರಿಸುತ್ತಿದ್ದ ಅವನನ್ನು ಶ್ಯೈನೇಯನು ತ್ವರೆಮಾಡಿ ಬಲಗೈಯಿಂದ ತುಂಡರಿಸಿದನು. ಮಹಾಹವದಲ್ಲಿ ಎರಡಾಗಿ ತುಂಡರಿಸಲ್ಪಟ್ಟ ಮಹೇಷ್ವಾಸ ಕೇಕಯನು ವಜ್ರದಿಂದ ಪುಡಿಮಾಡಲ್ಪಟ್ಟ ಪರ್ವತದಂತೆ ಕವಚದೊಂದಿಗೆ ಬಿದ್ದನು.

ಅವನನ್ನು ರಣದಲ್ಲಿ ಸಂಹರಿಸಿ ರಥಸತ್ತಮ ಶೂರ ಶ್ಯೈನೇಯ ಪರಂತಪ ಯುಧಾಮನ್ಯುವು ಬೇಗನೇ ರಥವನ್ನೇರಿದನು. ವಿಧಿವತ್ತಾಗಿ ಕಲ್ಪಿಸಿದ್ದ ಆ ಅನ್ಯ ರಥವನ್ನೇರಿ ಸಾತ್ಯಕಿಯು ಶರಗಳಿಂದ ಕೇಕಯರ ಮಹಾ ಸೇನೆಯನ್ನು ವಧಿಸಿದನು. ಸಮರದಲ್ಲಿ ವಧಿಸಲ್ಪಡುತ್ತಿರುವ ಕೇಕಯರ ಮಹಾಸೇನೆಯು ಶತ್ರುರಥವನ್ನು ಬಿಟ್ಟು ಹತ್ತು ದಿಕ್ಕುಗಳಲ್ಲಿ ಓಡಿಹೋಯಿತು.

## ಚಿತ್ರಸೇನ-ಚಿತ್ರರ ವಧೆ

ಸಮರದಲ್ಲಿ ಶ್ರುತಕರ್ಮನು ಕ್ರುದ್ಧನಾಗಿ ಮಹೀಪತಿ ಚಿತ್ರಸೇನನನ್ನು ಐವತ್ತು ಶಿಲೀಮುಖ ಶರಗಳಿಂದ ಗಾಯಗೊಳಿಸಿದನು. ಚಿತ್ರಸೇನನು ಒಂಭತ್ತು ನಿಶಿತ ಶರಗಳಿಂದ ಶ್ರುತಕರ್ಮನನ್ನು ಹೊಡೆದು ಐದರಿಂದ ಸೂತನನ್ನು ಹೊಡೆದನು. ಆಗ ಕ್ರುದ್ಧ ಶ್ರುತಕರ್ಮನು ಚಿತ್ರಸೇನನನ್ನು ತೀಕ್ಷ್ಣ ಶರದಿಂದ ಮರ್ಮದೇಶದಲ್ಲಿ ಹೊಡೆದನು. ಆ ಮಧ್ಯದಲ್ಲಿಯೇ

ಶ್ರುತಕೀರ್ತಿಯು ತೊಂಭತ್ತು ಪತ್ರಿಗಳಿಂದ ಚಿತ್ರಸೇನನನ್ನು ಪ್ರಹರಿಸಿದನು. ಆಗ ಸಂಜ್ಞೆಗಳನ್ನು ಪಡೆದ ಚಿತ್ರಸೇನನು ಭಲ್ಲದಿಂದ ಶ್ರುತಕೀರ್ತಿಯ ಧನುಸ್ಸನ್ನು ತುಂಡರಿಸಿ ಏಳು ಶರಗಳಿಂದ ಅವನನ್ನು ಹೊಡೆದನು. ಶ್ರುತಕೀರ್ತಿಯು ವೇಗವನ್ನು ನಾಶಮಾಡುವ ರುಕ್ಮಭೂಷಣ ಚಿತ್ರರೂಪತರ ಅನ್ಯ ಧನುಸ್ಸನ್ನು ತೆಗೆದುಕೊಂಡು ಅಲೆಗಳ ರೂಪದಲ್ಲಿ ಬಾಣಗಳಿಂದ ಚಿತ್ರಸೇನನನ್ನು ಆಕ್ರಮಣಿಸಿದನು. ಶರಗಳಿಂದ ಚಿತ್ರಿತನಾದ ಚಿತ್ರಮಾಲ್ಯಧರ ಯುವಕ ಚಿತ್ರಸೇನನು ಗೋಷ್ಠಿಮಧ್ಯದಲ್ಲಿ ಸ್ವಲಂಕೃತ ಯುವಕನಂತೆ ಶೋಭಿಸಿದನು. ಕೂಡಲೇ ಅವನು ನಾರಾಚಗಳಿಂದ ಶ್ರುತಕರ್ಮನ ಸ್ತನಾಂತರದಲ್ಲಿ ಹೊಡೆದು ಸಮರದಲ್ಲಿ ಕ್ರುದ್ಧನಾಗಿ ನಿಲ್ಲು ನಿಲ್ಲೆಂದು ಹೇಳಿದನು. ಸಮರದಲ್ಲಿ ನಾರಾಚಗಳಿಂದ ಗಾಯಗೊಂಡ ಶ್ರುತಕರ್ಮನಾದರೋ ಧಾತುಗಳನ್ನು ಸುರಿಸುವ ಗಿರಿಯಂತೆ ಬಹಳವಾಗಿ ರಕ್ತವನ್ನು ಸುರಿಸಿದನು. ರುಧಿರಕ್ತಾಂಗನಾದ ದೇಹವೆಲ್ಲಾ ರಕ್ತದಿಂದ ಲೇಪಿತಗೊಂಡಿರಲು ಶ್ರುತಕರ್ಮನು ಹೂಬಿಟ್ಟ ಕಿಂಶುಕದಂತೆ ರಾಜಿಸಿದನು.

ಆಗ ಶ್ರುತಕರ್ಮನು ಸತ್ರುಸಂವರಣವನ್ನು ಮಾಡಿ ಅವನ ಕಾರ್ಮುಕವನ್ನು ಎರಡಾಗಿ ತುಂಡರಿಸಿದನು. ಕೂಡಲೇ ಶ್ರುತಕರ್ಮನು ಧನುಸ್ಸು ತುಂಡಾದ ಚಿತ್ರಸೇನನನ್ನು ಮುನ್ನೂರು ನಾರಾಚಗಳಿಂದ

ಪ್ರಹರಿಸಿದನು. ಆಗ ಆ ಮಹಾತ್ಮ ಸತ್ವರನು ತೀಕ್ಷ್ಣ ಭಲ್ಲದಿಂದ ಶಿರಸ್ತ್ರಾಣದೊಂದಿಗೆ ಅವನ ಶಿರಸ್ಸನ್ನು ತುಂಡರಿಸಿದನು. ದೈವೇಚ್ಛೆಯಿಂದ ಚಂದ್ರನು ಸ್ವರ್ಗದಿಂದ ಚ್ಯುತನಾಗಿ ಮಹೀತಲದಲ್ಲಿ ಬೀಳುವಂತೆ ಕಾಂತಿಯುಕ್ತ ಚಿತ್ರಸೇನನ ಶಿರಸ್ಸು ಭೂಮಿಯ ಮೇಲೆ ಬಿದ್ದಿತು. ರಾಜಾ ಅಭಿಸಾರನು ಹತನಾದುದನ್ನು ಕಂಡು ಚಿತ್ರಸೇನನ ಸೈನಿಕರು ವೇಗದಿಂದ ಆಕ್ರಮಣಿಸಿದರು. ಅಗ ಕ್ರುದ್ಧ ಮಹೇಷ್ವಾಸ ಶ್ರುತಕರ್ಮನು ಅಂತಕಾಲದಲ್ಲಿ ಕ್ರುದ್ಧ ಪ್ರೇತರಾಜನು ಸರ್ವಭೂತಗಳನ್ನು ಹೇಗೋ ಹಾಗೆ ಬಾಣಗಳಿಂದ ತಕ್ಷಣವೇ ಆ ಸೇನೆಯನ್ನು ಓಡಿಸಿ ವಿರಾಜಿಸಿದನು.

ಅನಂತರ ಪ್ರತಿವಿಂದ್ಯನು ಚಿತ್ರನನ್ನು ಐದು ಆಶುಗಗಳಿಂದ ಭೇದಿಸಿ, ಮೂರರಿಂದ ಸಾರಥಿಯನ್ನು ಮತ್ತು ಒಂದು ಬಾಣದಿಂದ ಧ್ವಜವನ್ನು ಪ್ರಹರಿಸಿದನು. ಚಿತ್ರನು ಅವನ ಬಾಹು ಮತ್ತು ಎದೆಗಳಿಗೆ ಸ್ವರ್ಣಪುಂಖಗಳುಳ್ಳ, ಶಿಲಾಧೌತ, ಹದ್ದು-ನವಿಲುಗಳ ಗರಿಗಳುಳ್ಳ ಒಂಭತ್ತು ಭಲ್ಲಗಳಿಂದ ಹೊಡೆದನು. ಪ್ರತಿವಿಂದ್ಯನು ಸಾಯಕಗಳಿಂದ ಅವನ ಧನುಸ್ಸನ್ನು ತುಂಡರಿಸಿ ಐದು ನಿಶಿತ ಬಾಣಗಳಿಂದ ಚಿತ್ರನನ್ನು ಗಾಯಗೊಳಿಸಿದನು. ಆಗ ಚಿತ್ರನು ಹೇಮದಂಡದ ದುರಾಸದ ಅಗ್ನಿಶಿಖೆಯಂತೆ ಘೋರವಾಗಿದ್ದ ಶಕ್ತಿಯನ್ನು ಧೃತರಾಷ್ಟ್ರನ ಮಗ ಚಿತ್ರನ

ಮೇಲೆ ಪ್ರಹರಿಸಿದನು. ಆಕಾಶದಿಂದ ಉಲ್ಕೆಯಂತೆ ತನ್ನ ಮೇಲೆ ಬೀಳುತ್ತಿದ್ದ ಆ ಶಕ್ತಿಯನ್ನು ಕೂಡಲೇ ನಸುನಗುತ್ತಿರುವನೋ ಎನ್ನುವಂತಿದ್ದ ಪ್ರತಿವಿಂಧ್ಯನು ಎರಡಾಗಿ ತುಂಡರಿಸಿದನು. ಪ್ರತಿವಿಂಧ್ಯನ ನಿಶಿತ ಶರಗಳಿಂದ ತುಂಡಾದ ಆ ಶಕ್ತಿಯು ಯುಗಾಂತದಲ್ಲಿ ಸರ್ವಭೂತಗಳನ್ನು ಭಯಗೊಳಿಸುವ ಮಿಂಚಿನಂತೆ ಕೆಳಗೆ ಬಿದ್ದಿತು. ಆ ಶಕ್ತಿಯು ನಾಶವಾದುದನ್ನು ನೋಡಿ ಚಿತ್ರನು ರುಕ್ಮಜಾಲವಿಭೂಷಿತ ಮಹಾಗದೆಯನ್ನು ಹಿಡಿದು ಪ್ರತಿವಿಂಧ್ಯನ ಮೇಲೆ ಎಸೆದನು. ಅದು ಅವನ ಕುದುರೆಗಳನ್ನು ಮತ್ತು ಸಾರಥಿಯನ್ನು ಸಂಹರಿಸಿ ವೇಗದಿಂದ ರಥವನ್ನು ತಳ್ಳಿ ಧರಣಿಯ ಮೇಲೆ ಉರುಳಿಸಿತು. ಅದೇಸಮಯದಲ್ಲಿ ಪ್ರತಿವಿಂಧ್ಯನು ರಥದಿಂದ ಹಾರಿ, ಸ್ವರ್ಣಘಂಟೆಗಳಿಂದ ಅಲಂಕೃತ ಶಕ್ತಿಯನ್ನು ಚಿತ್ರನ ಮೇಲೆ ಎಸೆದನು. ಮೇಲಿಂದ ಬೀಳುತ್ತಿದ್ದ ಅದನ್ನು ಚಿತ್ರನು ಹಿಡಿದನು ಮತ್ತು ಅದನ್ನೇ ಪ್ರತಿವಿಂಧ್ಯನ ಮೇಲೆ ಎಸೆದನು. ಮಹಾಪ್ರಭೆಯುಳ್ಳ ಅದು ರಣದಲ್ಲಿ ಪ್ರತಿವಿಂಧ್ಯನ ಬಲತೋಳನ್ನು ಭೇದಿಸಿ ನೆಲದಮೇಲೆ ಬಿದ್ದಿತು. ಅದು ಬಿದ್ದ ಪ್ರದೇಶವು ಮಿಂಚಿನೋಪಾದಿಯಲ್ಲಿ ಪ್ರಕಾಶಮಾನಗೊಂಡಿತು. ಆಗ ಸಂಕ್ರುದ್ಧನಾಗಿ ಪ್ರತಿವಿಂಧ್ಯನು ಚಿತ್ರನ ವಧೆಯನ್ನು ಬಯಸಿ ಹೇಮಭೂಷಿತ ತೋಮರವನ್ನು ಪ್ರಯೋಗಿಸಿದನು. ಅದು ಅವನ ಕವಚವನ್ನೂ ಹೃದಯವನ್ನೂ ಭೇದಿಸಿ ಕೂಡಲೇ ಮಹಾಸರ್ಪವು ಬಿಲವನ್ನು

ಹೇಗೋ ಹಾಗೆ ಧರಣಿಯನ್ನು ಹೊಕ್ಕಿತು. ತೋಮರದಿಂದ ಪ್ರಹೃತನಾದ ಚಿತ್ರನು ಪರಿಘೋಪಮ ದಪ್ಪ ತೋಳುಗಳನ್ನು ಹರಡಿ ಬಿದ್ದನು. ಚಿತ್ರನು ಹತನಾದುದನ್ನು ನೋಡಿ ಕೌರವ ರಣಶೋಭಿಗಳು ವೇಗದಿಂದ ಪ್ರತಿವಿಂಧ್ಯನನ್ನು ಸುತ್ತುವರೆದು ಆಕ್ರಮಣಿಸಿದರು. ಕಿಂಕಿಣೀಗಂಟೆಗಳುಳ್ಳ ಶತಘ್ನಿಗಳನ್ನೂ ವಿವಿಧ ಬಾಣಗಳನ್ನು ಪ್ರಯೋಗಿಸಿ ಸೂರ್ಯನನ್ನು ಮೋಡಗಳು ಮುಸುಕುವಂತೆ ಅವರು ಪ್ರತಿವಿಂಧ್ಯನನ್ನು ಮುಸುಕಿದರು. ಮಹಾಬಾಹು ಪ್ರತಿವಿಂಧ್ಯನು ವಜ್ರಹಸ್ತನು ಅಸುರೀ ಸೇನೆಯನ್ನು ಹೇಗೋ ಹಾಗೆ ಶರಜಾಲಗಳಿಂದ ಕೌರವ ಸೇನೆಯನ್ನು ಪ್ರಹರಿಸಿ ಓಡಿಸಿದನು. ಪಾಂಡವರಿಂದ ವಧಿಸಲ್ಪಡುತ್ತಿರುವ ಕೌರವರ ಕಡೆಯವರು ಕೂಡಲೇ ಭಿರುಗಾಳಿಯಿಂದ ಚದುರಿಹೋಗುವ ಮೋಡಗಳಂತೆ ಚದುರಿಹೋದರು.

## ಅಶ್ವತ್ಥಾಮ-ಭೀಮಸೇನರ ಯುದ್ಧ

ವಧಿಸಲ್ಪಡುತ್ತಿರುವ ಸೇನೆಯು ಎಲ್ಲಕಡೆ ಪಲಾಯನಮಾಡುತ್ತಿರಲು ದ್ರೌಣಿಯೊಬ್ಬನೇ ಶೀಘ್ರವಾಗಿ ಮಹಾಬಲ ಭೀಮಸೇನನನ್ನು ಆಕ್ರಮಣಿಸಿದನು. ಆಗ ಒಮ್ಮಿಂದೊಮ್ಮೆಲೇ ದೇವಾಸುರ ಯುದ್ಧದಲ್ಲಿ ವೃತ್ರ-ವಾಸವರ ನಡುವೆ ಹೇಗೋ ಹಾಗೆ ಅವರಿಬ್ಬರ ನಡುವೆ ಘೋರ ಯುದ್ಧವು ನಡೆಯಿತು.

ಆಗ ದ್ರೌಣಿಯು ತ್ವರೆಮಾಡಿ ಪರಮ ಯುಕ್ತಿಯಿಂದ ಅಸ್ತ್ರಲಾಘವವನ್ನು ಪ್ರದರ್ಶಿಸುತ್ತಾ ಭೀಮಸೇನನನ್ನು ಪತ್ರಿಗಳಿಂದ ಪ್ರಹರಿಸಿದನು. ಕೂಡಲೇ ಪುನಃ ತೊಂಭತ್ತು ನಿಶಿತ ಶರಗಳಿಂದ ಆ ಲಘುಹಸ್ತನು ಭೀಮಸೇನನನ ಸರ್ವ ಮರ್ಮಗಳಿಗೆ ಗುರಿಯಿಟ್ಟು ಹೊಡೆದನು. ದ್ರೌಣಿಯ ನಿಶಿತ ಶರಗಳಿಂದ ಸಮಾಕೀರ್ಣ ಭೀಮಸೇನನು ಸಮರದಲ್ಲಿ ಕಿರಣಗಳುಳ್ಳ ಭಾಸ್ಕರನಂತೆ ರಾರಾಜಿಸಿದನು. ಆಗ ಚೆನ್ನಾಗಿ ಪ್ರಹರಿಸಿದ ಸಹಸ್ರ ಶರಗಳಿಂದ ಪಾಂಡವನು ದ್ರೋಣಪುತ್ರನನ್ನು ಮುಚ್ಚಿ ಸಿಂಹನಾದಗೈದನು. ಯುದ್ಧದಲ್ಲಿ ಶರಗಳಿಂದ ಶರಗಳನ್ನು ನಾಶಗೊಳಿಸಿ ದ್ರೌಣಿಯು ನಗುತ್ತಿರುವನೋ ಎನ್ನುವಂತೆ ನಾರಾಚಗಳಿಂದ ಪಾಂಡವನ ಹಣೆಗೆ ಹೊಡೆದನು. ವನದಲ್ಲಿ ಮದಿಸಿದ ಖಡ್ಗಮೃಗವು ಕೋಡನ್ನು ಹೊತ್ತಿರುವಂತೆ ಆ ಬಾಣವು ಪಾಂಡವನ ಹಣೆಯನ್ನು ಹೊಕ್ಕ ನಿಂತಿತು. ಆಗ ಪರಾಕ್ರಮೀ ಭೀಮನು ರಣದಲ್ಲಿ ನಸುನಗುತ್ತಿರುವವನಂತೆ ದ್ರೌಣಿಯ ಲಲಾಟಕ್ಕೆ ಮೂರು ನಾರಾಚಗಳಿಂದ ಹೊಡೆದನು. ಹಣೆಗೆ ಚುಚ್ಚಿಕೊಂಡಿದ್ದ ಬಾಣಗಳಿಂದ ಆ ಬ್ರಾಹ್ಮಣನು ವರ್ಷಾಕಾಲದಲ್ಲಿ ಮಳೆಯಿಂದ ತೋಯ್ದ ಮೂರು ಶಿಖರಗಳುಳ್ಳ ಉತ್ತಮ ಪರ್ವತದಂತೆಯೇ ವಿರಾಜಿಸಿದನು. ಆಗ ನೂರು ಶರಗಳಿಂದ ಪಾಂಡವನು ದ್ರೌಣಿಯನ್ನು ಪೀಡಿಸಿದನು. ಆದರೆ ಭಿರುಗಾಳಿಯು ಪರ್ವತವನ್ನು ಅಳ್ಳಾಡಿಸಲು ಸಾಧ್ಯವಾಗದಂತೆ ಅವನನ್ನು ಕಂಪಿಸಲು

ಶಕ್ತನಾಗಲಿಲ್ಲ. ಹಾಗೆಯೇ ದ್ರೌಣಿಯು ಯುದ್ಧದಲ್ಲಿ ಪಾಂಡವನನ್ನು ನೂರು ಶರಗಳಿಂದ ಹೊಡೆದರೂ ಮಹಾಜಲಪ್ರವಾಹವು ಪರ್ವತವನ್ನು ಕದಲಿಸಲಾಗದಂತೆ ಅವನನ್ನು ಕದಲಿಸಲಾಗಲಿಲ್ಲ. ರಥದಲ್ಲಿ ಸಂಚರಿಸುತ್ತಿದ್ದ ಅವರಿಬ್ಬರು ಮಹಾರಥ ಶೂರ ರಣೋತ್ಕಟರು ಅನ್ಯೋನ್ಯರನ್ನು ಘೋರ ಶರಸಂಘಗಳಿಂದ ಮುಚ್ಚುತ್ತಾ ಶೋಭಿಸಿದರು. ಆದಿತ್ಯರಂತೆ ಬೆಳಗುತ್ತಿದ್ದ ಆ ಇಬ್ಬರು ಲೋಕಕ್ಷಯಕಾರಕರೂ ತಮ್ಮದೇ ರಶ್ಮಿಗಳಂತಿದ್ದ ಉತ್ತಮ ಶರಗಳಿಂದ ಅನ್ಯೋನ್ಯರನ್ನು ತಾಪಗೊಳಿಸುತ್ತಿದ್ದರು. ಮಾಡಿದುದಕ್ಕೆ ಪ್ರತೀಕಾರ ಮಾಡುವುದರಲ್ಲಿ ಪ್ರಯತ್ನಿಸುತ್ತಿದ್ದ ಅವರಿಬ್ಬರೂ ಅಭೀತರಾಗಿ ಮಹಾರಣದಲ್ಲಿ ಪ್ರತೀಕಾರಮಾಡುತ್ತಿದ್ದರು. ವ್ಯಾಘ್ರಗಳಂತೆ ಸಂಗ್ರಾಮದಲ್ಲಿ ಸಂಚರಿಸುತ್ತಿದ್ದ ಆ ಇಬ್ಬರು ಮಹಾರಥ ದುರಾಧರ್ಷರು ಶರಗಳೇ ಕೋರೆದಾಡೆಗಳಂತೆಯೂ ಧನುಸ್ಸೇ ಮುಖಗಳಂತಿದ್ದು ಭಯಾನಕರಾಗಿ ಕಾಣುತ್ತಿದ್ದರು. ಗಗನದಲ್ಲಿ ಮೇಘಜಾಲಗಳಿಂದ ಮುಚ್ಚಿಹೋದ ಚಂದ್ರ-ಭಾಸ್ಕರರಂತೆ ಅವರಿಬ್ಬರೂ ಎಲ್ಲಕಡೆ ಶರಜಾಲಗಳಿಂದ ಮುಚ್ಚಿ ಇತರರಿಗೆ ಅದೃಶ್ಯರಾಗಿದ್ದರು. ಕ್ಷಣಮಾತ್ರದಲ್ಲಿ ಆ ಅರಿಂದಮರು ಮೇಘಜಾಲಗಳಿಂದ ವಿಮುಕ್ತರಾಗಿ ದಿವಿಯಲ್ಲಿರುವ ಶಶಿ-ಸೂರ್ಯರಂತೆ ಪುನಃ ಪ್ರಕಾಶಿಸುತ್ತಿದ್ದರು.

ಆಗ ಅಲ್ಲಿ ದ್ರೌಣಿಯು ವೃಕೋದರನನ್ನು ಬಲಭಾಗಕ್ಕೆ ಮಾಡಿಕೊಂಡು ಮಳೆಯ ಧಾರೆಯು ಪರ್ವತವನ್ನು ಹೇಗೋ ಹಾಗೆ ನೂರು ಉಗ್ರ ಬಾಣಗಳಿಂದ ಮುಚ್ಚಿಬಿಟ್ಟನು. ಶತ್ರುವಿನ ಆ ವಿಜಯಲಕ್ಷಣವನ್ನು ಭೀಮನು ಸಹಿಸಿಕೊಳ್ಳಲಿಲ್ಲ. ಪಾಂಡವನೂ ಕೂಡ ತಿರುಗಿ ಅವನನ್ನು ಬಲಭಾಗಕ್ಕೆ ಮಾಡಿಕೊಂಡನು. ಮಹಾಮೃಧದಲ್ಲಿ ಮಂಡಲಗಳನ್ನು ವಿಭಾಗಿಸಿಕೊಂಡು ಗತ-ಪ್ರತ್ಯಾಗತರಾಗಿ ಅವರಿಬ್ಬರ ನಡುವೆ ತುಮುಲ ಯುದ್ಧವು ನಡೆಯಿತು. ಮಂಡಲ-ಸ್ಥಾನ ಮೊದಲಾದ ವಿವಿಧ ಮಾರ್ಗಗಳಲ್ಲಿ ಸಂಚರಿಸುತ್ತಾ ಅವರಿಬ್ಬರೂ ಪೂರ್ಣವಾಗಿ ಸೆಳೆದುಬಿಟ್ಟ ಶರಗಳಿಂದ ಅನ್ಯೋನ್ಯರನ್ನು ಪ್ರಹರಿಸಿದರು. ಆಹವದಲ್ಲಿ ಆ ಇಬ್ಬರು ಮಹಾರಥರೂ ಅನ್ಯೋನ್ಯರನ್ನು ವಧಿಸಲು ಪ್ರಯತ್ನಿಸಿದರು ಮತ್ತು ಅನ್ಯೋನ್ಯರನ್ನು ವಿರಥರನ್ನಾಗಿ ಮಾಡಲು ಪ್ರಯತ್ನಿಸಿದರು. ಆಗ ಸಮರದಲ್ಲಿ ಮಹಾರಥ ದ್ರೌಣಿಯು ಮಹಾಸ್ತ್ರಗಳನ್ನು ಪ್ರಯೋಗಿಸತೊಡಗಿದನು. ಪಾಂಡವನು ಅವುಗಳನ್ನು ಅಸ್ತ್ರಗಳಿಂದಲೇ ನಾಶಗೊಳಿಸಿದನು. ಆಗ ಪ್ರಜಾಸಂಹರಣದಲ್ಲಿ ನಡೆಯುವ ಘೋರ ಗ್ರಹಯುದ್ಧದಂತೆ ಘೋರ ಅಸ್ತ್ರಯುದ್ಧವು ನಡೆಯಿತು. ಅವರು ಪ್ರಯೋಗಿಸುತ್ತಿದ್ದ ಬಾಣಗಳು ದಿಕ್ಕುಗಳನ್ನು ಬೆಳಗಿಸುತ್ತಾ ಸೈನ್ಯಗಳ ಸುತ್ತಲೂ ಬೀಳುತ್ತಿದ್ದವು. ಪ್ರಜಾಸಂಕ್ಷಯದಲ್ಲಿ ಉಲ್ಕಾಪಾತಗಳಾಗುವಂತೆ ಅವರ ಬಾಣಸಂಘಗಳಿಂದ ಆವೃತ

ಆಕಾಶವು ಘೋರವಾಗಿ ಕಂಡಿತು. ಅಲ್ಲಿ ಬಾಣಗಳ ಆಘಾತದಿಂದ ಬೆಂಕಿಯು ಹುಟ್ಟಿಕೊಂಡು ಕಿಡಿ-ಜ್ವಾಲೆಗಳಿಂದ ಕೂಡಿದ ಅದು ಎರಡೂ ಸೇನೆಗಳನ್ನು ಸುಡತೊಡಗಿತು. ಅಲ್ಲಿ ಸಿದ್ಧರು ಈ ಮಾತುಗಳನ್ನು ಆಡತೊಡಗಿದರು:

> “ಎಲ್ಲ ಯುದ್ಧಗಳಲ್ಲಿ ಈ ಯುದ್ಧವು ಅಧಿಕವಾಗಿದೆ. ಎಲ್ಲ ಯುದ್ಧಗಳೂ ಇದರ ಹದಿನಾರನೆಯ ಒಂದು ಭಾಗಕ್ಕೂ ಸಾಟಿಯಾಗಲಾರವು. ಇಂತಹ ಯುದ್ಧವು ಪುನಃ ನಡೆಯಲಾರದು ಮತ್ತು ಈ ಹಿಂದೆ ನಡೆದಿರಲಿಲ್ಲ! ಆಹಾ! ಇಬ್ಬರು ಉಗ್ರಪರಾಕ್ರಮಿಗಳೂ ಸಂಪೂರ್ಣವಾಗಿ ತಿಳಿದುಕೊಂಡಿದ್ದಾರೆ. ಆಹಾ! ಭೀಮನು ಭಯಂಕರ ಬಲವುಳ್ಳವನು. ಇನ್ನೊಬ್ಬನು ಅಸ್ತ್ರಗಳಲ್ಲಿ ಪಳಗಿದವನು. ಇವರಲ್ಲಿ ವೀರ್ಯದ ಸಾರತ್ವಗಳಿವೆ. ಇಬ್ಬರಲ್ಲೂ ಶರೀರಸೌಷ್ಟವವಿದೆ. ಸಮರದಲ್ಲಿ ಇಬ್ಬರೂ ಕಾಲಾಂತಕಯಮರಂತೆ ನಿಂತಿದ್ದಾರೆ! ರಣದಲ್ಲಿ ಈ ಪುರುಷವ್ಯಾಘ್ರರಿಬ್ಬರೂ ಇಬ್ಬರು ರುದ್ರರಂತೆಯೂ, ಇಬ್ಬರು ಭಾಸ್ಕರರಂತೆಯೂ ಅಥವಾ ಇಬ್ಬರು ಯಮರಂತೆಯೂ ಘೋರರಾಗಿ ಕಾಣುತ್ತಿದ್ದಾರೆ!”

ಹೀಗೆ ಮಾತನಾಡಿಕೊಳ್ಳುತ್ತಿದ್ದ ಸಿದ್ಧರ ಮಾತುಗಳು ಪುನಃ ಪುನಃ ಕೇಳಿಬರುತ್ತಿತ್ತು. ಯುದ್ಧದಲ್ಲಿ ಅವರಿಬ್ಬರ ಅದ್ಭುತ ಅಚಿಂತ್ಯ ಕರ್ಮಗಳನ್ನು ನೋಡಿ ಸೇರಿದ್ದ ದಿವೌಕಸರ ಸಿಂಹನಾದಗಳೂ ಕೇಳಿಬರುತ್ತಿದ್ದವು. ಸಮರದಲ್ಲಿ ಪರಸ್ಪರಾಪರಾಧಿಗಳಾಗಿದ್ದ ಆ ಇಬ್ಬರು ಶೂರರೂ ಕ್ರೋಧದಿಂದ ಕಣ್ಣುಗಳನ್ನು ಮೇಲೆತ್ತಿ ಪರಸ್ಪರರನ್ನು ದುರುಗುಟ್ಟಿ ನೋಡುತ್ತಿದ್ದರು. ಕ್ರೋಧದಿಂದ ಕಣ್ಣುಗಳು ಕೆಂಪಾಗಿದ್ದವು. ಮತ್ತು ಕ್ರೋಧದಿಂದ ಅವರ ತುಟಿಗಳು ಅದುರುತ್ತಿದ್ದವು. ಕ್ರೋಧದಿಂದ ಕಟಕಟನೆ ಹಲ್ಲುಕಡಿಯುತ್ತಿದ್ದರು ಮತ್ತು ಅವುಡುಗಳನ್ನು ಕಚ್ಚುತ್ತಿದ್ದರು. ಇಬ್ಬರು ಮಹಾರಥರೂ ಶರವೃಷ್ಟಿಯಿಂದ ಅನ್ಯೋನ್ಯರನ್ನು ಮುಚ್ಚುತ್ತಿದ್ದರು. ಸಮರದಲ್ಲಿ ಶರಗಳ ಮಳೆಸುರಿಸಿ ಶಸ್ತ್ರಗಳಿಂದ ಮಿಂಚುಗಳನ್ನು ಪ್ರಕಟಿಸುತ್ತಿದ್ದರು. ಆ ಮಹಾರಥರಿಬ್ಬರೂ ಅನ್ಯೋನ್ಯರ ಧ್ವಜಗಳನ್ನು ಮತ್ತು ಸಾರಥಿಯರನ್ನು ಹೊಡೆದು ಅನ್ಯೋನ್ಯರ ಕುದುರೆಗಳನ್ನು ಹೊಡೆದು ಪರಸ್ಪರರನ್ನು ಪ್ರಹರಿಸಿದರು. ಆಗ ಕ್ರುದ್ಧರಾದ ಮತ್ತು ಅನ್ಯೋನ್ಯರನ್ನು ವಧಿಸಲಿಚ್ಛಿಸುತ್ತಿದ್ದ ಅವರಿಬ್ಬರೂ ಬಾಣಗಳನ್ನು ಹಿಡಿದು ಕೂಡಲೇ ಅನ್ಯೋನ್ಯರಮೇಲೆ ಎಸೆದರು. ವಜ್ರವೇಗದ ದುರಾಸದ ಆ ಎರಡು ಸಾಯಕಗಳೂ ಉರಿಯುತ್ತಾ ಅವರಿಬ್ಬರನ್ನೂ ಪ್ರಹರಿಸಿತು. ಪರಸ್ಪರರ ಆ ಶರಗಳ ವೇಗದಿಂದ ತುಂಬಾ ಗಾಯಗೊಂಡ ಇಬ್ಬರು ಮಹಾವೀರರೂ ತಮ್ಮ

ರಥಗಳಲ್ಲಿಯೇ ಕುಸಿದು ಬಿದ್ದರು. ಆಗ ದ್ರೋಣಪುತ್ರನು ಅಚೇತನನಾದುದನ್ನು ತಿಳಿದ ಅವನ ಸಾರಥಿಯು ಅವನನ್ನು ಸರ್ವಕ್ಷತ್ರಿಯರೂ ನೋಡುತ್ತಿದ್ದಂತೆ ರಣದಿಂದ ಆಚೆ ಕೊಂಡೊಯ್ದನು. ಹಾಗೆಯೇ ಪುನಃ ಪುನಃ ವಿಹ್ವಲಿಸುತ್ತಿದ್ದ ಶತ್ರುತಾಪನ ಪಾಂಡವನನ್ನು ಕೂಡ ಅವನ ಸಾರಥಿಯು ರಥದಿಂದ ಆಚೆ ಕೊಂಡೊಯ್ದನು.

## ಸಂಶಪ್ತಕರೊಡನೆ ಅರ್ಜುನನ ಯುದ್ಧ

ಅಮಿತ್ರಘ್ನ ಪಾರ್ಥನು ಸಾಗರಸಂನಿಭ ಸಂಶಪ್ತಕಗಣವನ್ನು ಪ್ರವೇಶಿಸಿ ಚಂಡಮಾರುತವು ಸಾಗರವನ್ನು ಅಲ್ಲೋಲಕಲ್ಲೋಲಗೊಳಿಸುವಂತೆ ಕ್ಷೋಭೆಗೊಳಿಸಿದನು. ಸುಂದರ ಕಣ್ಣುಗಳು, ಹುಬ್ಬು, ದಂತಪಂಗ್ತಿಗಳುಳ್ಳ ಪೂರ್ಣಚಂದ್ರದಂತಹ ಮುಖವುಳ್ಳ ವೀರರ ಶಿರಗಳನ್ನು ನಿಶಿತ ಭಲ್ಲಗಳಿಂದ ಧನಂಜಯನು ಕತ್ತರಿಸಿ ನಾಳಗಳಿಲ್ಲದ ಕಮಲಗಳಂತೆ ಭೂಮಿಯ ಮೇಲೆ ಹರಡಿದನು. ದುಂಡುದುಂಡಾಗಿರುವ ಹೂವು-ಚಂದನ-ಅಗರುಗಳಿಂದ ಭೂಷಿತಗೊಂಡಿದ್ದ, ಐದುಹೆಡೆಗಳ ಹಾವುಗಳಂತಿದ್ದ ಅಮಿತ್ರರ ಬಾಹುಗಳನ್ನು ಆಯುಧಗಳೊಂದಿಗೆ ಮತ್ತು ರಕ್ಷಣಾಚೇಲಗಳೊಂದಿಗೆ ಅರ್ಜುನನು ರಣದಲ್ಲಿ ಕ್ಷುರಗಳಿಂದ ಕತ್ತರಿಸಿದನು. ಕುದುರೆಗಳನ್ನೂ, ಕುದುರೆಗಳನ್ನು ಓಡಿಸುತ್ತಿದ್ದ ಸಾರಥಿಗಳನ್ನೂ, ಧ್ವಜಗಳನ್ನೂ, ಚಾಪಗಳನ್ನೂ, ಸಾಯಕಗಳನ್ನೂ,

ರತ್ನದುಂಗುರಳನ್ನು ತೊಟ್ಟಿದ್ದ ಶತ್ರುಗಳ ಕೈಗಳನ್ನೂ ಪಾಂಡವನು ಭಲ್ಲಗಳಿಂದ ಕತ್ತರಿಸಿದನು. ಆನೆಗಳನ್ನೂ, ಕುದುರೆಗಳನ್ನೂ, ರಥಗಳನ್ನೂ, ಅವುಗಳನ್ನೇರಿದವರೊಂದಿಗೆ ಅರ್ಜುನನು ರಣದಲ್ಲಿ ಅನೇಕ ಸಾವಿರ ಶರಗಳಿಂದ ಯಮಕ್ಷಯಕ್ಕೆ ಕಳುಹಿಸಿದನು. ಗೂಳಿಯಂತೆ ಘೀಳಿಡುತ್ತಾ ಬರುತ್ತಿದ್ದ ಆ ಪ್ರವೀರನನ್ನು ಸಂಶಪ್ತಕರು ಹಸುಗಳೊಡನೆ ಸಂಗಮಾಡುವ ಇಚ್ಛೆಯಿಂದ ಗುರುಗುಟ್ಟುವ ಮದಿಸಿದ ಹೋರಿಗಳೋಪಾದಿಯಲ್ಲಿ ಗರ್ಜಿಸುತ್ತಾ ಸಂಹರಿಸುತ್ತಿದ್ದ ಅರ್ಜುನನನ್ನು ಮದಿಸಿದ ಹೋರಿಗಳು ಕೊಂಬುಗಳಿಂದ ಇರಿಯುವಂತೆ ಶರಗಳಿಂದ ಪ್ರಹರಿಸಿದರು. ಆಗ ಅವರ ನಡುವೆ ತ್ರೈಲೋಕ್ಯವಿಜಯದ ಸಮಯದಲ್ಲಿ ದೈತ್ಯರೊಂದಿಗೆ ವಜ್ರಿಯ ಯುದ್ಧವು ಹೇಗೆ ನಡೆಯಿತೋ ಹಾಗೆ ಲೋಮಹರ್ಷಣ ಯುದ್ಧವು ನಡೆಯಿತು.

ಅರ್ಜುನನು ಅಸ್ತ್ರಗಳನ್ನು ಅಸ್ತ್ರಗಳಿಂದಲೇ ತಡೆದು ಅನೇಕ ಬಾಣಗಳಿಂದ ಅವರನ್ನು ಸರ್ವತ ಹೊಡೆದು ಪ್ರಾಣಗಳನ್ನು ಅಪಹರಿಸಿದನು. ರಥಗಳ ತ್ರಿವೇಣು, ಚಕ್ರ ಮತ್ತು ಅಚ್ಚುಮರಗಳು ಭಿನ್ನ-ಭಿನ್ನವಾದವು. ರಥಗಳಲ್ಲಿದ್ದ ಕುದುರೆ-ಸಾರಥಿಗಳೂ ಹತರಾದರು. ರಥಗಳಲ್ಲಿದ್ದ ಆಯುಧಗಳೂ, ಬತ್ತಳಿಕೆಗಳೂ ಧ್ವಂಸವಾದವು. ಧ್ವಜದಂಡಗಳು ಕೆಳಗೆ ಬಿದ್ದವು. ನೊಗದ ಹಗ್ಗಗಳೂ, ಕಡಿವಾಣಗಳೂ

ಹರಿದುಹೋದವು. ಮೂಕಿಯ ಮರಗಳೇ ಇರಲಿಲ್ಲ. ನೊಗದ ಕೆಳಭಾಗದ ಮೂಕೀಕಂಬಗಳೂ ಕಳಚಿ ಬಿದ್ದಿದ್ದವು. ದೊಡ್ಡ ದೊಡ್ಡ ಮೇಘಗಳನ್ನು ಸುಂಟರಗಾಳಿಯು ಛಿದ್ರಗೊಳಿಸುವಂತೆ ಅರ್ಜುನನು ಸಂಶಪ್ತಕರ ರಥಗಳನ್ನು ಚೂರು-ಚೂರು ಮಾಡಿದನು. ನೋಡುವವರಿಗೆ ವಿಸ್ಮಯವನ್ನುಂಟುಮಾಡುವಂತೆ ಮತ್ತು ಶತ್ರುಗಳ ಭಯವನ್ನು ಹೆಚ್ಚಿಸುವಂತೆ ಅರ್ಜುನನು ಸಹಸ್ರಾರು ಮಹಾರಥಗಳನ್ನು ಸಮಮಾಡುವ ಕೃತ್ಯವನ್ನೆಸಗಿದನು. ಸಿದ್ಧ-ದೇವರ್ಷಿಸಂಘಗಳೂ, ಚಾರಣರೂ ಸಂತೋಷಗೊಂಡರು. ದೇವದುಂದುಭಿಗಳು ಮೊಳಗಿದವು. ಕೇಶವಾರ್ಜುನರ ನೆತ್ತಿಯ ಮೇಲೆ ಪುಷ್ಪವೃಷ್ಟಿಯಾಯಿತು. ಅಶರೀರವಾಣಿಯು ಹೀಗೆ ಹೇಳಿತು:

> “ಚಂದ್ರನ ಕಾಂತಿಯನ್ನೂ, ಅಗ್ನಿಯ ದೀಪ್ತಿಯನ್ನೂ, ವಾಯುವಿನ ಬಲವನ್ನೂ, ಸೂರ್ಯನ ತೇಜಸ್ಸನ್ನೂ ಹೊಂದಿರುವ ಒಂದೇ ರಥದಲ್ಲಿ ಕುಳಿತಿರುವ ಈ ವೀರ ಕೇಶವಾರ್ಜುನನು ಬ್ರಹ್ಮ-ರುದ್ರರಂತೆ ಎಲ್ಲರಿಂದಲೂ ಅಜೇಯರಾಗಿದ್ದಾರೆ. ಸರ್ವಭೂತಗಳಿಗೂ ಶ್ರೇಷ್ಠರಾದ ಈ ವೀರರು ನರ-ನಾರಾಯಣರೇ ಆಗಿದ್ದಾರೆ!”

## ಅರ್ಜುನ-ಅಶ್ವತ್ಥಾಮರ ಯುದ್ಧ

ಈ ಮಹದಾಶ್ಚರ್ಯವನ್ನು ನೋಡಿ ಮತ್ತು ಕೇಳಿದ ಅಶ್ವತ್ಥಾಮನು ಸರ್ವಸಿದ್ಧತೆಗಳನ್ನೂ ಮಾಡಿಕೊಂಡು ರಣದಲ್ಲಿ ಕೃಷ್ಣಾರ್ಜುನರೆಡೆಗೆ ಧಾವಿಸಿದನು. ಯಮಕಾಲಾಂತಕನಂತೆ ಶರಗಳನ್ನು ಎರಚುತ್ತಿದ್ದ ಪಾಂಡವನನ್ನು ಬಾಣಸಹಿತ ಕೈಯಿಂದಲೇ ಆಹ್ವಾನಿಸಿ ದ್ರೌಣಿಯು ನಗುತ್ತಾ ಹೇಳಿದನು:

> "ವೀರ! ಒದಗಿರುವ ಯೋಗ್ಯನಾದ ಅತಿಥಿಯಂತೆ ನನ್ನನ್ನು ಭಾವಿಸಿದರೆ ಎಲ್ಲಾ ರೀತಿಯ ಯುದ್ಧಾತಿಥ್ಯವನ್ನು ನೀನು ನನಗೆ ಕೊಡಬಹುದು!"

ಯುದ್ಧಾಸಕ್ತನಾಗಿದ್ದ ಆಚಾರ್ಯಪುತ್ರನಿಂದ ಹೀಗೆ ಆಹ್ವಾನಿಸಲ್ಪಟ್ಟ ಅರ್ಜುನನು ತನ್ನನ್ನೇ ಅಧಿಕನೆಂದು ಭಾವಿಸಿ ಜನಾರ್ದನನಿಗೆ ಹೇಳಿದನು:

> "ಮಹಾಭುಜ! ಸಂಶಪ್ತಕರನ್ನು ನನಗೆ ವಧಿಸಬೇಕಾಗಿದೆ. ಆದರೆ ದ್ರೌಣಿಯು ನನ್ನನ್ನು ಆಹ್ವಾನಿಸುತ್ತಿದ್ದಾನೆ. ಈಗ ಮೊದಲು ನಾನು ಏನು ಮಾಡಬೇಕೆಂದು ನೀನೇ ಹೇಳು!"

ಪಾರ್ಥನು ಹೀಗೆ ಹೇಳಲು ಕೃಷ್ಣನು ವಿಧಿವತ್ತಾಗಿ ಅಹ್ವಾನಿಸಲ್ಪಟ್ಟ ವಾಯು-ಇಂದ್ರರನ್ನು ಯಜ್ಞಕ್ಕೆ ಕೊಂಡೊಯ್ಯುವಂತೆ ಅವನನ್ನು

ದ್ರೋಣಾತ್ಮಜನ ಬಳಿಗೆ ಕೊಂಡೊಯ್ದನು. ಏಕಮನಸ್ಕನಾಗಿ ಕರೆಯುತ್ತಿದ್ದ ದ್ರೌಣಿಗೆ ಕೇಶವನು ಹೇಳಿದನು:

> "ಅಶ್ವತ್ಥಾಮನ್! ಸ್ಥಿರವಾಗಿ ಪ್ರಹರಿಸು ಮತ್ತು ಪ್ರಹರಗಳನ್ನು ಸಹಿಸಿಕೋ! ಯಜಮಾನನನ್ನು ಆಶ್ರಯಿಸಿ ಜೀವಿಸುವವರಿಗೆ ಸ್ವಾಮಿಯ ಅನ್ನದ ಋಣವನ್ನು ತೀರಿಸುವ ಕಾಲವೀಗ ಸನ್ನಿಹಿತವಾಗಿದೆ. ಕ್ಷತ್ರಿಯರ ಜಯಾಪಜಯಗಳು ಸ್ಥೂಲರೂಪದ್ದು. ಆದರೆ ವಿರರ ಜಯಾಪಜಯಗಳು ಸೂಕ್ಷ್ಮವಾದುದು ಮತ್ತು ವಿವಾದಾತ್ಮಕವಾದುದು. ಮೋಹದಿಂದ ನೀನು ಪಾರ್ಥನ ಯಾವ ದಿವ್ಯಾತಿಥ್ಯವನ್ನು ಬಯಸುತ್ತಿದ್ದೀಯೋ ಅದನ್ನು ಇಚ್ಛೆಯಿದ್ದಷ್ಟು ಪಡೆ. ಸ್ಥಿರನಾಗಿದ್ದುಕೊಂಡು ಇಂದು ಪಾಂಡವನೊಡನೆ ಯುದ್ಧಮಾಡು!"

ವಾಸುದೇವನು ಹೀಗೆ ಹೇಳಲು ಹಾಗೆಯೇ ಆಗಲೆಂದು ಹೇಳಿ ದ್ವಿಜೋತ್ತಮನು ಕೇಶವನನ್ನು ಅರವತ್ತು ನಾರಾಚಗಳಿಂದಲೂ ಮತ್ತು ಅರ್ಜುನನನ್ನು ಮೂರರಿಂದಲೂ ಹೊಡೆದನು. ಅದರಿಂದ ಸಂಕೃದ್ಧನಾದ ಅರ್ಜುನನು ಮೂರು ಭಲ್ಲಗಳಿಂದ ಅವನ ಧನುಸ್ಸನ್ನು ಕತ್ತರಿಸಿದನು. ಆಗ ದ್ರೌಣಿಯು ಇನ್ನೂ ಹೆಚ್ಚಿನ ಘೋರತರ ಧನುಸ್ಸನ್ನು

ಎತ್ತಿಕೊಂಡನು. ಕಣ್ಣುಮುಚ್ಚಿ ತೆರೆಯುವುದರೊಳಗ ಧನುಸ್ಸಿಗೆ ಶಿಂಜನಿಯನ್ನು ಬಿಗಿದು ಮೂರು ಅರ್ಜುನ-ಕೇಶವರನ್ನು ಹೊಡೆದನು. ಮೂರು ಬಾಣಗಳಿಂದ ವಾಸುದೇವನನ್ನೂ, ಸಾವಿರದಿಂದ ಪಾಂಡವನನ್ನೂ ಹೊಡೆದನು. ಅನಂತರ ದ್ರೌಣಿಯು ರಣದಲ್ಲಿ ಸಹಸ್ರಾರು ಲಕ್ಷೋಪಲಕ್ಷ ಬಾಣಗಳನ್ನು ಸತತವಾಗಿ ಬಿಟ್ಟು ಅರ್ಜುನನನ್ನು ಅಳ್ಳಾಡದಂತೆ ಮಾಡಿದನು. ಆಗ ಬಾಣಗಳು ಆ ಬ್ರಹ್ಮವಾದಿನಿಯ ಧನುಸ್ಸಿನಿಂದ, ಶಿಂಜನಿಯಿಂದ, ಬೆರಳುಗಳಿಂದ, ಬಾಹುಗಳಿಂದ, ಕೈಗಳಿಂದ, ಎದೆಯಿಂದ, ಮುಖದಿಂದ, ಮೂಗಿನಿಂದ, ಕಿವಿಗಳಿಂದ, ಶಿರಸ್ಸಿನಿಂದ, ಮತ್ತು ಇತರ ಅಂಗಗಳಿಂದ, ಕೂದಲುಗಳಿಂದ, ಕವಚದಿಂದ, ರಥಧ್ವಜದಿಂದ ಸತತವಾಗಿ ಅರ್ಜುನನ ಮೇಲೆ ಬೀಳುತ್ತಿದ್ದವು. ಮಹಾಶರಜಾಲಗಳಿಂದ ಕೇಶವ-ಪಾಂಡವರನ್ನು ಹೊಡೆದು ಮುದಿತನಾದ ದ್ರೌಣಿಯು ಮಹಾಮೇಘವು ಗುಡುಗುವಂತೆ ಜೋರಾಗಿ ಗರ್ಜಿಸಿದನು.

ಅವನ ಆ ನಿನಾದವನ್ನು ಕೇಳಿ ಪಾಂಡವನು ಅಚ್ಯುತನಿಗೆ ಹೇಳಿದನು:

> “ಮಾಧವ! ನನ್ನ ಕುರಿತು ದ್ರೋಣಪುತ್ರನು ತೋರಿಸಿದ ದೌರಾತ್ಮವನ್ನು ನೋಡು! ಶರಗೃಹದಲ್ಲಿ ಇರಿಸಿರುವ ಇವನು ನಾವಿಬ್ಬರೂ ಸತ್ತುಹೋದೆವೆಂದೇ ಭಾವಿಸಿದ್ದಾನೆ. ನನ್ನ ಶಿಕ್ಷಣ

ಮತ್ತು ಬಲಗಳಿಂದ ಇವನ ಸಂಕಲ್ಪವನ್ನು ನಾಶಗೊಳಿಸುತ್ತೇನೆ.”

ಆ ಭರತಶ್ರೇಷ್ಠನು ಅಶ್ವತ್ಥಾಮನು ಬಿಟ್ಟ ಎಲ್ಲ ಬಾಣಗಳನ್ನೂ ಮೂರು ಮೂರು ತುಂಡುಗಳನ್ನಾಗಿ ಕತ್ತರಿಸಿ, ಗಾಳಿಯು ಮಂಜನ್ನು ಕರಗಿಸುವಂತೆ – ನಿರಸನಗೊಳಿಸಿದನು. ಅನಂತರ ಪಾಂಡವನು ಬಾಣಗಳಿಂದ ಅಶ್ವ-ಸೂತ-ರಥ-ಆನೆಗಳಿಂದ ಮತ್ತು ಧ್ವಜ-ಪದಾತಿಗಣಗಳಿಂದ ಕೂಡಿದ್ದ ಸಂಶಪ್ತಕರನ್ನು ಪುನಃ ಗಾಯಗೊಳಿಸಿದನು. ಅಲ್ಲಿ ಯಾರ್ಯಾರು ಯಾವಯಾವ ರೂಪಗಳನ್ನು ಧರಿಸಿದ್ದರೋ ಅವರೆಲ್ಲರೂ ಆಯಾ ಶರಗಳ ರೂಪಗಳನ್ನು ತಾಳಿ ತಾವೂ ಶರಗಳೂ ಒಂದೇ ಎನ್ನುವಂತೆ ಕಂಡುಬಂದರು. ಗಾಂಡೀವದಿಂದ ಕಳುಹಿಸಲ್ಪಟ್ಟ ನಾನಾರೂಪದ ಆ ಪತತ್ರಿಗಳು ಎದಿರು ರಣದಲ್ಲಿ ಒಂದು ಕ್ರೋಶದೂರದಲ್ಲಿ ನಿಂತಿದ್ದ ಆನೆ-ಪುರುಷರನ್ನೂ ಸಂಹರಿಸುತ್ತಿದ್ದವು. ಅವನ ಭಲ್ಲಗಳಿಂದ ಕತ್ತರಿಸಿ ಕೆಳಗುರುಳುತ್ತಿದ್ದ ಮದಭರಿತ ಆನೆಗಳ ಸೊಂಡಿಲುಗಳು ಅರಣ್ಯದಲ್ಲಿ ಕೊಡಲಿಗಳಿಂದ ಕತ್ತರಿಸಿ ಬೀಳಿಸಲ್ಪಡುವ ಬೆಳೆದ ಮರಗಳಂತೆ ತೋರುತ್ತಿದ್ದವು. ಅನಂತರ ಇಂದ್ರನ ವಜ್ರಾಯುಧದಿಂದ ಪ್ರಹೃತಗೊಂಡ ಪರ್ವತಗಳು ಕೆಳಗೆ ಉರುಳಿ ಬೀಳುತ್ತಿದ್ದಂತೆ ಸೊಂಡಿಲುಗಳನ್ನು ಕಳೆದುಕೊಂಡ ಪರ್ವತೋಪಮ ಆನೆಗಳು

ಸವಾರರೊಂದಿಗೆ ಕೆಳಗೆ ಬೀಳುತ್ತಿದ್ದವು. ಗಂಧರ್ವನಗರಗಳಂತಿದ್ದ ವಿಧಿವತ್ತಾಗಿ ಸಜ್ಜುಗೊಳಿಸಿದ್ದ ವಿನೀತ ವೇಗದ ಕುದುರೆಗಳನ್ನು ಕಟ್ಟಿದ್ದ ಯುದ್ಧದುರ್ಮದ ಯೋಧರಿಂದ ಕೂಡಿದ್ದ ರಥಗಳನ್ನು ಧನಂಜಯನು ಶರಗಳಿಂದ ಪುಡಿಪುಡಿಮಾಡುತ್ತಾ ಶತ್ರುಗಳ ಮೇಲೆ ಬಾಣಗಳ ಮಳೆಯನ್ನು ಕರೆದು ಅಲಂಕೃತ ಕುದುರೆಗಳು ಮತ್ತು ಸವಾರರನ್ನು, ಪದಾತಿಗಳನ್ನು ಸಂಹರಿಸಿದನು. ಯುಗಾಂತಸೂರ್ಯನಂತಿದ್ದ ಧನಂಜಯನು ತೀವ್ರ ಶರಪ್ರಖರಕಿರಣಗಳಿಂದ ಶೋಷಿಸಲು ಅಸಾಧ್ಯವಾದ ಸಂಶಪ್ತಕಮಹಾಸಮುದ್ರವನ್ನು ಬತ್ತಿಸಿಬಿಟ್ಟನು.

ಪುನಃ ಮಹಾಶೈಲದಂತಿದ್ದ ದ್ರೌಣಿಯನ್ನು ಸೂರ್ಯಸನ್ನಿಭ ನಾರಾಚಗಳಿಂದ ವಜ್ರಿಯು ಪರ್ವತವನ್ನು ಹೇಗೋ ಹಾಗೆ ಮಹಾವೇಗದಿಂದ ತ್ವರೆಮಾಡಿ ಭೇಧಿಸಿದನು. ಅದರಿಂದ ಕ್ರುದ್ಧನಾದ ಆಚಾರ್ಯಸುತನು ನಾಶಕ ಯುದ್ಧಮಾಡಲು ಉತ್ಸುಕನಾಗಿ ಆಶುಗಗಳಿಂದ ಅಶ್ವ-ಸಾರಥಿಗಳೊಂದಿಗೆ ಅವನನ್ನು ಹೊಡೆಯಲು ಪಾರ್ಥನು ಅವುಗಳನ್ನು ಮಧ್ಯದಲ್ಲಿಯೇ ತುಂಡರಿಸಿದನು. ಮನೆಗೆ ಬಂದ ಅತಿಥಿಯ ಮೇಲೆ ತನ್ನ ಸರ್ವಸ್ವವನ್ನೂ ಸುರಿಯುವಂತೆ ಪರಮಸಂಕ್ರುದ್ಧ ಅಶ್ವತ್ಥಾಮನು ಸಕಲಮಹಾಸ್ತ್ರಗಳನ್ನೂ ಅರ್ಜುನನ ಮೇಲೆ ಸುರಿದನು. ಆಗ ಅಪಾಂಕ್ತೇಯರನ್ನು ಬಿಟ್ಟು ಪಂಕ್ತಿಪಾವನ

ಆರ್ಥಿಗೆ ದಾನನೀಡುವವನಂತೆ ಪಾಂಡವನು ಸಂಶಪ್ತಕರನ್ನು ಬಿಟ್ಟು ದ್ರೌಣಿಯನ್ನು ಆಕ್ರಮಣಿಸಿದನು. ಆಗ ಆಕಾಶದಲ್ಲಿ ಶುಕ್ರ-ಆಂಗೀರಸ ಬೃಹಸ್ಪತಿ ನಕ್ಷತ್ರಗಳ ನಡುವೆ ನಡೆಯುವ ಯುದ್ಧದಂತೆ ಶುಕ್ರ-ಆಂಗಿರಸ ವರ್ಚಸ್ಸಿನ ಅವರಿಬ್ಬರ ನಡುವೆ ಯುದ್ಧವು ನಡೆಯಿತು. ವಕ್ರಗತಿಯಲ್ಲಿ ಸಂಚರಿಸುವ ಗ್ರಹಗಳಂತೆ ಅನ್ಯೋನ್ಯರನ್ನು ಪ್ರದೀಪ್ತಶರಕಿರಣಗಳಿಂದ ಸಂತಾಪಗೊಳಿಸುತ್ತಿರುವ ಅವರಿಬ್ಬರು ಲೋಕಗಳಿಗೇ ಭಯವನ್ನುಂಟುಮಾಡುತ್ತಿದ್ದರು.

ಆಗ ಅರ್ಜುನನು ನಾರಾಚದಿಂದ ಅವನ ಹುಬ್ಬುಗಳ ಮಧ್ಯೆ ಜೋರಾಗಿ ಹೊಡೆದನು. ಅಧರಿಂದ ದ್ರೌಣಿಯು ಊರ್ಧ್ವರಶ್ಮಿ ಸೂರ್ಯನಂತೆ ಪ್ರಕಾಶಿಸಿದನು. ಕೂಡಲೇ ಅಶ್ವತ್ಥಾಮನು ಕೃಷ್ಣರೀರ್ವರನ್ನೂ ನೂರು ಬಾಣಗಳಿಂದ ಚೆನ್ನಾಗಿ ಹೊಡೆದನು. ಆಗ ಅವರು ರಶ್ಮಿಜಾಲಗಳಿಂದ ಪ್ರಖರಗೊಂಡ ಯುಗಾಂತದ ಸೂರ್ಯರಂತೆ ಪ್ರಕಾಶಿಸಿದರು. ಆಗ ವಾಸುದೇವ ರಕ್ಷಿತ ಅರ್ಜುನನು ಸರ್ವತೋಧಾರಾಸ್ತ್ರವನ್ನು ಪ್ರಯೋಗಿಸಿದನು. ಪುನಃ ದ್ರೌಣಾಯನಿಯನ್ನು ವಜ್ರಾಯುಧ, ಅಗ್ನಿ ಮತ್ತು ಯಮದಂಡಗಳಿಗೆ ಸಮಾನ ಪೃಷತ್ಕಗಳಿಂದ ಪ್ರಹರಿಸಿದನು. ಆ ಅತಿತೇಜಸ್ವಿ ರೌದ್ರಕರ್ಮಿಯು ಕೇಶವ ಮತ್ತು ಅರ್ಜುನರ ಮರ್ಮಸ್ಥಾನಗಳಿಗೆ ಮೃತ್ಯುವೂ ವ್ಯಥೆಗೊಳ್ಳುವ ಉತ್ತಮವಾಗಿ

ಪ್ರಯೋಗಿಸಿದ ಅತಿತೀವ್ರವೇಗಗಳ ಬಾಣಗಳಿಂದ ಹೊಡೆದನು. ಅರ್ಜುನನು ದ್ರೌಣಿಯ ಬಾಣಗಳನ್ನು ತಡೆದು ಅವನ ಬಾಣಗಳಿಗಿಂತಲೂ ಎರಡುಪಟ್ಟು ಗುಣಗಳುಳ್ಳ ಸುಂದರ ರೆಕ್ಕೆಗಳ ಬಾಣಗಳಿಂದ ಕೌರವರ ಏಕೈಕ ವೀರನಾಗಿದ್ದ ಅವನನ್ನು ಕುದುರೆಗಳು, ಸಾರಥಿ ಮತ್ತು ಧ್ವಜಗಳೊಂದಿಗೆ ಮುಚ್ಚಿ, ಸಂಶಪ್ತಕ ಸೈನ್ಯವನ್ನು ಆವರಿಸಿ ಆಕ್ರಮಣಿಸಿದನು. ಪರಾಙ್ಮುಖರಾಗದೇ ನಿಂತಿದ್ದ ಶತ್ರುಗಳ ಧನುಸ್ಸುಗಳನ್ನೂ, ಬಾಣಗಳನ್ನೂ, ಬತ್ತಳಿಕೆಗಳನ್ನೂ, ಶಿಂಜಿನಿಗಳನ್ನೂ, ಕೈಗಳನ್ನೂ, ಭುಜಗಳನ್ನೂ, ಕೈಗಳಲ್ಲಿ ಹಿಡಿದಿದ್ದ ಶಸ್ತ್ರಗಳನ್ನೂ, ಚತ್ರಗಳನ್ನೂ, ಧ್ವಜಗಳನ್ನೂ, ಕುದುರೆಗಳನ್ನೂ, ವಸ್ತ್ರಗಳನ್ನೂ, ಮಾಲೆಗಳನ್ನೂ, ಭೂಷಣಗಳನ್ನೂ, ಗುರಾಣಿಗಳನ್ನೂ, ಕವಚಗಳನ್ನೂ, ಮನೋರಥಗಳನ್ನೂ, ಸರ್ವರ ಸುಂದರ ಶಿರಗಳನ್ನೂ ಕೂಡ ಪಾರ್ಥನು ಬಾಣಗಳನ್ನು ಪ್ರಯೋಗಿಸಿ ಕತ್ತರಿಸಿದನು. ಸುಕಲ್ಪಿತವಾಗಿದ್ದ ರಥಕುದುರೆಗಳು ಮತ್ತು ಪ್ರಯತ್ನಪಟ್ಟು ಅವುಗಳಲ್ಲಿ  ಸಮಾಸ್ಥಿತರಾಗಿದ್ದ ನರವೀರರು ನರವೀರ ಪಾರ್ಥನ ಬಾಣಗಣಗಳಿಗೆ ಹೆದರಿಯೇ ರಥಕುದುರೆಗಳೊಂದಿಗೆ ಕೆಳಗುರುಳಿದರು. ಕಮಲ ಸೂರ್ಯ ಮತ್ತು ಪೂರ್ಣಚಂದ್ರರ ಸಮಾನ ಮುಖಗಳುಳ್ಳ, ಕಿರೀಟ ಮಾಲೆ ಮುಕುಟಗಳಿಂದ ವಿಭೂಷಿತ ನರರ ಶಿರಗಳು ಅರ್ಜುನನ ಭಲ್ಲ, ಅರ್ಧಚಂದ್ರ ಮತ್ತು ಕ್ಷುರಗಳಿಂದ ಕತ್ತರಿಸಲ್ಪಟ್ಟು ಭೂಮಿಯ ಮೇಲೆ

ಉರುಳಿದವು.

ಆಗ ದೇವಪತಿಯ ಐರಾವತದಂತಿದ್ದ ಆನೆಗಳಿಂದ ಕೂಡಿದ ಕಲಿಂಗ, ವಂಗ ಮತ್ತು ನಿಷಾದ ವೀರರು ದೇವಾರಿಗಳ ದರ್ಪವನ್ನು ಅಡಗಿಸಿದ ಪಾಂಡವನನ್ನು ಸಂಹರಿಸಲು ಅವನನ್ನು ಆಕ್ರಮಣಿಸಿದರು. ಪಾರ್ಥನು ಅವರ ಆನೆಗಳನ್ನೂ, ಕವಚಗಳನ್ನೂ, ಮರ್ಮಗಳನ್ನೂ, ಕೈಗಳನ್ನೂ, ಧ್ವಜಗಳನ್ನೂ, ಪತಾಕೆಗಳನ್ನೂ ಕತ್ತರಿಸಲು, ಅವರ ಶಿರಗಳು ವಜ್ರದಿಂದ ಪ್ರಹಾರಿಸಲ್ಪಟ್ಟ ಗಿರಿಗಳಂತೆ ಕೆಳಗುರುಳಿದವು. ಅವರು ಹತರಾಗಿ ಹೋಗಲು ವಾಯುವು ಉದಯಿಸುತ್ತಿರುವ ಸೂರ್ಯನ ಬಣ್ಣದ ಕಿರಣಗಳನ್ನು ಮಹಾಮೋಡಗಳಿಂದ ಮುಸುಕುವಂತೆ ಅರ್ಜುನನು ಗುರುಪುತ್ರ ಅಶ್ವತ್ಥಾಮನನ್ನು ಬಾಣಗಳಿಂದ ಮುಸುಕಿದನು. ಆಗ ದ್ರೌಣಿಯು ಅರ್ಜುನನ ಬಾಣಗಳನ್ನು ಬಾಣಗಳಿಂದಲೇ ನಿರಸನಗೊಳಿಸಿ ವರ್ಷಾಕಾಲದ ಕಾರ್ಮುಗಿಲು ಚಂದ್ರ-ಸೂರ್ಯರನ್ನು ಮುಚ್ಚಿ ಗರ್ಜಿಸುವಂತೆ ಅರ್ಜುನ-ವಾಸುದೇವರನ್ನು ಬಾಣಗಳಿಂದ ಮುಸುಕಿ ಗರ್ಜಿಸಿದನು. ಅಸ್ತ್ರಗಳನ್ನು ತುಂಡರಿಸಿ ಅರ್ಜುನನು ಒಡನೆಯೇ ಪುನಃ ಕೌರವ ಸೇನೆಯಲ್ಲಿ ಬಾಣಾಂಧಕಾರವನ್ನು ನಿರ್ಮಿಸಿ ಎಲ್ಲರನ್ನೂ ಸುಂದರ ಪುಂಖಗಳುಳ್ಳ ಬಾಣಗಳಿಂದ ಪ್ರಹರಿಸಿದನು. ಸವ್ಯಸಾಚಿಯು ಬತ್ತಳಿಕೆಯಿಂದ ಬಾಣಗಳನ್ನು

ತೆಗೆದುಕೊಳ್ಳುವುದಾಗಲೀ ಧನುಸ್ಸಿನಲ್ಲಿ ಅನುಸಂಧಾನ ಮಾಡುವುದಾಗಲೀ ಶತ್ರುಗಳ ಮೇಲೆ ಅವುಗಳನ್ನು ಬಿಡುವುದಾಗಲೀ ಕಾಣುತ್ತಲೇ ಇರಲಿಲ್ಲ. ಅವನ ಬಾಣಗಳಿಂದ ಹತಗೊಂಡು ನೇಯಲ್ಪಟ್ಟ ಆನೆಗಳು, ಕುದುರೆಗಳು ಮತ್ತು ಪದಾತಿಗಳ ದೇಹಗಳೂ ರಥಗಳೂ ಮಾತ್ರವೇ ಕಾಣುತ್ತಿದ್ದವು.

ಆಗ ದ್ರೌಣಿಯು ಹತ್ತು ಶ್ರೇಷ್ಠ ನಾರಾಚಗಳನ್ನು ಒಂದೇ ಬಾಣದಂತೆ ಧನುಸ್ಸಿನಲ್ಲಿ ಯೋಜಿಸಿ ಒಂದೇ ಬಾರಿಗೆ ಪ್ರಹರಿಸಿದನು. ಅವುಗಳಲ್ಲಿ ಐದು ಅರ್ಜುನನನ್ನೂ ಐದು ಅಚ್ಯುತನನ್ನೂ ಹೊಡೆದು ಗಾಯಗೊಳಿಸಿದವು. ಕುಬೇರ ಮತ್ತು ಇಂದ್ರರಂತೆ ಸರ್ವಮನುಷ್ಯರ ಮುಖ್ಯರಾಗಿದ್ದ ಅವರು ಅಶ್ವತ್ಥಾಮನ ಬಾಣಗಳಿಂದ ಬಹಳವಾಗಿ ಗಾಯಗೊಂಡರು. ಧನುರ್ವಿದ್ಯೆಯ ಪಾರವನ್ನು ಕಂಡಿರುವ ದ್ರೌಣಿಯಿಂದ ಆ ಅವಸ್ಥೆಗೊಳಗಾದ ಅವರಿಬ್ಬರೂ ಹತರಾದರೆಂದೇ ಅನ್ಯರು ಭಾವಿಸಿದರು. ಆಗ ದಶಾರ್ಹನಾಥನು ಅರ್ಜುನನಿಗೆ ಹೀಗೆ ಹೇಳಿದನು:

> “ಏಕೆ ಪ್ರಮಾದಕ್ಕೊಳಗಾಗಿದ್ದೀಯೆ? ಈ ಯೋಧನನ್ನು ಸಂಹರಿಸು! ಇವನನ್ನು ಈಗಲೂ ಉಪೇಕ್ಷಿಸಿದರೆ ಇವನು ಇನ್ನೂ ಅನೇಕ ದೋಷಗಳನ್ನೆಸಗುವನು. ವ್ಯಾಧಿಗೆ

ಉಪಚಾರವನ್ನು ಸಮಯದಲ್ಲಿ ಮಾಡದಿದ್ದರೆ ಆಗುವಂತೆ ಮುಂದೆ ನಮಗೆ ಕಷ್ಟವಾಗುವುದು!”

ಹಾಗೆಯೇ ಆಗಲೆಂದು ಅಚ್ಯುತನಿಗೆ ಹೇಳಿ ಅರ್ಜುನನು ದ್ರೌಣಿಯನ್ನು ಬಾಣಗಳಿಂದ ಗಾಯಗೊಳಿಸಿದನು ಮತ್ತು ಅವನ ಕುದುರೆಗಳ ಕಡಿವಾಣಗಳನ್ನು ಕತ್ತರಿಸಿ ಕುದುರೆಗಳು ಅವನನ್ನು ರಣದಿಂದ ಅತೀವ ದೂರಕ್ಕೆ ಒಯ್ಯುವಂತೆ ಮಾಡಿದನು. ವೃಷ್ಣಿವೀರ ಮತ್ತು ಧನಂಜಯರಲ್ಲಿ ಜಯವು ನಿಯತವಾಗಿಗೆಯೆಂದು ವಿಮರ್ಶಿಸಿ ನಿರ್ಧರಿಸಿದ ಮತಿವಂತ ಆಂಗಿರಸ ವರಿಷ್ಠ ಅಶ್ವತ್ಥಾಮನು ಪುನಃ ಪಾರ್ಥನೊಂದಿಗೆ ಯುದ್ಧಮಾಡುವುದು ಸರಿಯಲ್ಲವೆಂದು ತಿಳಿದುಕೊಂಡನು. ಮಂತ್ರೌಷಧಿಕ್ರಿಯೆಗಳಿಂದ ದೇಹದ ವ್ಯಾಧಿಗಳು ಪರಿಹಾರವಾಗುವಂತೆ ಪ್ರತಿಕೂಲಕಾರಿ ಅಶ್ವತ್ಥಾಮನು ತನ್ನ ಕುದುರೆಗಳಿಂದಲೇ ದೂರಕ್ಕೊಯ್ಯಲ್ಪಡಲು ಕೇಶವಾರ್ಜುನರು ಗಾಳಿಯಿಂದ ಹಾರಾಡುತ್ತಿದ್ದ ಪತಾಕೆಯುಳ್ಳ ಮತ್ತು ಜಲಪ್ರವಾಹದ ಶಬ್ಧದಂತೆ ಶಬ್ಧಮಾಡುತ್ತಿದ್ದ ರಥದಲ್ಲಿ ಸಂಶಪ್ತಕರಿಗೆ ಅಭಿಮುಖವಾಗಿ ತೆರಳಿದರು.

## ದಂಡಧಾರ-ದಂಡರ ವಧೆ

ಆಗ ಪಾಂಡವರ ಸೇನೆಯ ಉತ್ತರ ಭಾಗದಲ್ಲಿ ದಂಡಧಾರನಿಂದ

ವಧಿಸಲ್ಪಡುತ್ತಿದ್ದ ರಥ-ಗಜ-ಅಶ್ವ-ಪದಾತಿಗಳ ಆರ್ತನಾದವು ಕೇಳಿಬಂದಿತು. ಆಗ ರಥವನ್ನು ಹಿಂದಿರುಗಿಸಿ ಗರುಡ-ವಾಯುಗಳ ವೇಗವುಳ್ಳ ಕುದುರೆಗಳನ್ನು ನಡೆಸುತ್ತಾ ಕೇಶವನು ಅರ್ಜುನನಿಗೆ ಹೇಳಿದನು:

> "ಈ ಮಾಗಧನು ಅತಿ ಪರಾಕ್ರಮಿಯು. ಇವನಲ್ಲಿ ಶತ್ರುಗಳನ್ನು ಮಥಿಸುವ ಆನೆಯೂ ಇದೆ. ಶಿಕ್ಷಣ ಮತ್ತು ಬಲದಲ್ಲಿ ಇವನು ಭಗದತ್ತನಿಗೇನು ಕಡಿಮೆಯವನಲ್ಲ. ಇವನನ್ನು ಸಂಹರಿಸಿದ ನಂತರ ಪುನಃ ನೀನು ಸಂಶಪ್ತಕರನ್ನು ಎದುರಿಸಿವೆಯಂತೆ!"

ಹೀಗೆ ವಾಕ್ಯವನ್ನು ಮುಗಿಸುವುದರೊಂದಿಗೆ ಪಾರ್ಥನನ್ನು ದಂಡಧಾರನ ಬಳಿ ಕೊಂಡೊಯ್ದನು. ಆ ಮಗಧ ಪ್ರವರನು ಅಂಕುಶಗ್ರಹಣದಲ್ಲಿ ಮತ್ತು ಆನೆಯನ್ನು ನಿಯಂತ್ರಿಸುವುದರಲ್ಲಿ ಅದ್ವಿತೀಯನಾಗಿದ್ದನು. ತನ್ನ ಪ್ರಖರ ಕಿರಣಗಳಿಂದ ಇರುವ ಸೂರ್ಯನಂತೆ ಸಹಿಸಲಸಾಧ್ಯನಾಗಿದ್ದನು. ಮೋಡಗಳಿಲ್ಲದ ದಾರುಣ ಕಿರಣಗಳನ್ನು ಹೊಂದಿದ ಪ್ರಳಯಕಾಲದ ಸೂರ್ಯನು ಸಮಗ್ರಭೂಮಂಡವನ್ನೂ ಧ್ವಂಸಮಾಡುವಂತೆ ಅವನು ಶತ್ರುಗಳ ಸೇನೆಗಳನ್ನು ನಾಶಗೊಳಿಸುತ್ತಿದ್ದನು. ಗಜಾಸುರನಿಗೆ ಸಮಾನವಾಗಿದ್ದ, ಚೆನ್ನಾಗಿ ಸಜ್ಜಾಗಿದ್ದ ಮತ್ತು ಮಹಾಮೇಘದಂತೆ ಗರ್ಜಿಸುತ್ತಾ ಅನೇಕ

ಶತ್ರುಗಳನ್ನು ಧ್ವಂಸಗೊಳಿಸುತ್ತಿದ್ದ ಆನೆಯ ಮೇಲೆ ಕುಳಿತು ದಂಡಧಾರನು ರಥ-ಅಶ್ವ-ಮಾತಂಗ ಗಣಗಳನ್ನು ಸಹಸ್ರಾರು ಸಂಖ್ಯೆಗಳಲ್ಲಿ ಬಾಣಗಳನ್ನು ಪ್ರಯೋಗಿಸಿ ಸಂಹರಿಸುತ್ತಿದ್ದನು. ಕಾಲಚಕ್ರದಂತೆ ಅವನ ಆ ಆನೆಯು ಶತ್ರುರಥಗಳ ಮೇಲೆ ತನ್ನೆರಡು ಕಾಲುಗಳನ್ನು ಇಟ್ಟುಕೊಂಡು ರಥದಲ್ಲಿದ್ದ ಯೋಧರನ್ನೂ ಸಾರಥಿಗಳನ್ನೂ ಮತ್ತು ಕುದುರೆಗಳನ್ನೂ ಕಾಲಿನಿಂದ ತುಳಿದು ಸೊಂಡಿಲಿನಿಂದಲೂ ಎತ್ತಿ ಕೆಳಕ್ಕೆ ಕುಕ್ಕಿ ಸಂಹರಿಸುತ್ತಿತ್ತು. ಲೋಹದ ಕವಚಗಳಿಂದ ಭೂಷಿತರಾದ ಕುದುರೆಗಳ ಸವಾರರನ್ನೂ ಪದಾತಿಗಳೊಂದಿಗೆ ಕೆಳಗುರುಳಿಸಿ ಆ ಅನೆಯು ತುಳಿಯುತ್ತಿರಲು ಅದರಿಂದ ಉಂಟಾಗುವ ಶಬ್ಧವು ದೊಡ್ಡ ಬೆಂಡಿನ ಕಾಡನ್ನು ಅದು ತುಳಿಯುತ್ತಿದೆಯೋ ಎನ್ನುವಂತೆ ಕೇಳಿಬರುತ್ತಿತ್ತು.

ಆಗ ಅರ್ಜುನನು ಧನುಷ್ಟೇಂಕಾರಗಳಿಂದಲೂ, ರಥಚಕ್ರಗಳ ಶಬ್ಧಗಳಿಂದಲೂ, ಮೃದಂಗ-ಭೇರಿ ಮತ್ತು ಅನೇಕ ಶಂಖಗಳ ನಿನಾದಗಳೊಂದಿಗೆ ಮತ್ತು ತನ್ನವರ ಸಹಸ್ರಾರು ನರ-ಅಶ್ವ-ಮಾತಂಗಗಳಿಗೆ ಆನಂದವನ್ನೀಯುತ್ತಾ ಉತ್ತಮ ರಥವನ್ನೇರಿ ಆ ಆನೆಯನ್ನು ಆಕ್ರಮಣಿಸಿದನು. ಆಗ ದಂಡಧಾರನು ಅರ್ಜುನನನ್ನು ಹನ್ನೆರಡು ಉತ್ತಮ ಶರಗಳಿಂದ ಮತ್ತು ಜನಾರ್ದನನನ್ನು

ಹದಿನಾರರಿಂದ ಹೊಡೆದನು. ಕುದುರೆಗಳನ್ನೂ ಮೂರು ಮೂರು ಬಾಣಗಳಿಂದ ಹೊಡೆದು ಗರ್ಜಿಸುತ್ತಾ ಗಹ ಗಹಿಸಿ ನಕ್ಕನು. ಆಗ ಪಾರ್ಥನು ಭಲ್ಲಗಳಿಂದ ಬಾಣಗಳಿಂದ ಕೂಡಿದ್ದ ಅವನ ಧನುಸ್ಸನ್ನೂ, ಧ್ವಜವನ್ನೂ, ಅಲಂಕಾರಗಳನ್ನೂ ಕತ್ತರಿಸಿದನು. ಅನಂತರ ಆನೆಯಮೇಲೆ ಕುಳಿತಿದ್ದ ಮಾವಟಿಗರನ್ನೂ ಪಾದರಕ್ಷಕರನ್ನೂ ಸಂಹರಿಸಿ, ಗಿರಿವ್ರಜೇಶ್ವರ ದಂಡಧಾರನನ್ನು ಕುಪಿತಗೊಳಿಸಿದನು. ಕುಂಭಸ್ಥಳದಿಂದ ಮದೋದಕವನ್ನು ಸುರಿಸುತ್ತಿದ್ದ, ವಾಯುವೇಗಕ್ಕೆ ಸಮಾನವೇಗವಿದ್ದ, ಸುತೀಕ್ಷ್ಣ ದಂತಗಳಿದ್ದ ಆ ಮದಿಸಿದ ಆನೆಯಿಂದ ಅರ್ಜುನನನ್ನು ಕ್ಷೋಭೆಗೊಳಿಸಲು ಬಯಸಿ ದಂಡಧಾರನು ತೋಮರಗಳಿಂದ ಜನಾರ್ದನ-ಧನಂಜಯರನ್ನು ಪ್ರಹರಿಸಿದನು. ಕೂಡಲೇ ಪಾಂಡವನು ಆನೆಯ ಸೊಂಡಿಲುಗಳಂತಿದ್ದ ಅವನ ಬಾಹುಗಳನ್ನೂ ಪೂರ್ಣಚಂದ್ರನಂತೆ ಹೊಳೆಯುತ್ತಿದ್ದ ಅವನ ಶಿರಸ್ಸನ್ನೂ ಮೂರು ಕ್ಷುರಗಳಿಂದ ಕತ್ತರಿಸಿದನು ಮತ್ತು ಆನೆಯನ್ನು ನೂರು ಬಾಣಗಳಿಂದ ಪ್ರಹರಿಸಿದನು. ಬಂಗಾರದ ಕವಚವನ್ನು ಧರಿಸಿದ್ದ ಮತ್ತು ಬಂಗಾರದ ಭೂಷಣಗಳಿಂದ ಅಲಂಕೃತವಾಗಿದ್ದ ಆ ಆನೆಯು ಪಾರ್ಥನ ಬಾಣಗಳು ಚುಚ್ಚಿಕೊಳ್ಳಲು ರಾತ್ರಿಯಲ್ಲಿ ದಾವಾಗ್ನಿಯಿಂದ ಸುಡುತ್ತಿದ್ದ ಔಷಧಿವೃಕ್ಷಗಳಿಂದ ಕೂಡಿದ್ದ ಪರ್ವತದಂತೆ ಪ್ರಕಾಶಿಸುತ್ತಿತ್ತು. ಅದು ವೇದನೆಯಿಂದ ಗುಡುಗಿನಂತೆ ಆರ್ತನಾದ ಮಾಡುತ್ತಾ ಎಲ್ಲ ಕಡೆ

ತಿರುಗುತ್ತಾ ನಡುನಡುವೆ ತತ್ತರಿಸಿ ಬೀಳುತ್ತಾ ಓಡಿಹೋಗುತ್ತಿತ್ತು. ಆದರೆ ಬಾಣಗಳು ಶರೀರದಲ್ಲಿ ಆಳವಾಗಿ ನೆಟ್ಟಿಹೋದುದರಿಂದ ಮುಂದೆ ಹೋಗಲಾರದೇ ವಜ್ರಾಯುಧದಿಂದ ಸೀಳಲ್ಪಟ್ಟ ಪರ್ವತದಂತೆ ಮಾವಟಿಗರೊಂದಿಗೆ ಕೆಳಗುರುಳಿ ಬಿದ್ದಿತು.

ರಣದಲ್ಲಿ ಅಣ್ಣನು ಹತನಾಗಲು ದಂಡನು ಇಂದ್ರಾವರಜ ಕೃಷ್ಣ ಮತ್ತು ಧನಂಜಯರನ್ನು ಸಂಹರಿಸಲು ಬಯಸಿ ಹಿಮದಂತೆ ಶುಭ್ರವಾಗಿದ್ದ ಸುವರ್ಣಮಾಲೆಯನ್ನು ತೊಟ್ಟಿದ್ದ ಹಿಮವತ್ಪರ್ವತದ ಶಿಖರೋಪಾದಿಯಲ್ಲಿದ್ದ ಆನೆಯನ್ನೇರಿ ಆಕ್ರಮಣಿಸಿದನು. ಅವನು ಸೂರ್ಯನ ಕಿರಣಗಳಿಗೆ ಸಮಾನವಾದ ಮೂರು ತೋಮರಗಳಿಂದ ಜನಾರ್ದನನನ್ನೂ ಐದರಿಂದ ಅರ್ಜುನನನ್ನು ಹೊಡೆದು ನಾದಗೈದನು. ಆಗ ಪಾಂಡವನು ಅವನ ಬಾಹುಗಳನ್ನು ತುಂಡರಿಸಿದನು. ಕ್ಷುರದಿಂದ ಕತ್ತರಿಸಲ್ಪಟ್ಟ ಆ ಎರಡು ಅಂಗದಯುಕ್ತ ಚಂದನಲೇಪಿತ ಭುಜಗಳು ತೋಮರಗಳೊಂದಿಗೆ ಆನೆಯಿಂದ ಕೆಳಗೆ ಬೀಳುವಾಗ ಗಿರಿಶೃಂಗದಿಂದ ಕೆಳಕ್ಕೆ ಬೀಳುತ್ತಿರುವ ಮಹಾಸರ್ಪಗಳಂತೆ ತೋರುತ್ತಿದ್ದವು. ಕೂಡಲೇ ಕಿರೀಟಿಯ ಅರ್ಧಚಂದ್ರದಿಂದ ಅಪಹೃತಗೊಂಡ ದಂಡನ ಶಿರವು ಆನೆಯ ಮೇಲಿಂದ ನೆಲಕ್ಕೆ ಬಿದ್ದಿತು. ರಕ್ತದಿಂದ ತೋಯ್ದುಹೋಗಿದ್ದ ಅವನ ಶಿರವು ಆನೆಯ ಮೇಲಿಂದ

ಬೀಳುತ್ತಿರುವಾದ ಪಶ್ಚಿಮ ದಿಶೆಯಲ್ಲಿ ಅಸ್ತನಾಗುತ್ತಿರುವ ದಿವಾಕರನಂತೆ ಪ್ರಕಾಶಿಸುತ್ತಿತ್ತು. ನಂತರ ಹಿಮಪರ್ವತಶಿಖರದಂತ್ತಿದ್ದ ಆನೆಯನ್ನು ದಿವಾಕರಕಿರಣಗಳಂತಿದ್ದ ಉತ್ತಮ ಶರಗಳಿಂದ ಪಾರ್ಥನು ಭೇದಿಸಿದನು. ಅದು ಚೀತ್ಕರಿಸುತ್ತಾ ವಜ್ರಾಯುಧದಿಂದ ಪ್ರಹೃತಗೊಂಡ ಹಿಮಾದ್ರಿಕೂಟದಂತೆ ಕೆಳಗುರುಳಿತು. ಆಗ ಅದರಂತೆಯೇ ಇದ್ದ ಇತರ ಉತ್ತಮ ಆನೆಗಳು ಸವ್ಯಸಾಚಿಯನ್ನು ಸಂಹರಿಸಲು ಮುನ್ನುಗ್ಗಿ ಬರಲು ಅರ್ಜುನನು ಆ ಎರಡು ಆನೆಗಳಂತೆ ಇವುಗಳನ್ನೂ ಸಂಹರಿಸಿದನು. ಆಗ ಆ ಮಹಾರಿಪುಬಲವು ಭಗ್ನಗೊಂಡಿತು. ಆನೆಗಳು, ರಥಗಳು, ಕುದುರೆಗಳು, ಮತ್ತು ಪುರುಷ ಗುಂಪುಗಳು ಪರಸ್ಪರರನ್ನು ಕಾದಾಡುತ್ತಾ ರಣದಲ್ಲಿ ಬೀಳುತ್ತಿದ್ದರು. ಪರಸ್ಪರರೊಡನೆ ಯುದ್ಧಮಾಡುತ್ತಾ ಗಾಯಗೊಂಡು ತತ್ತರಿಸುತ್ತಾ ಮನಸ್ಸಿಗೆ ಬಂದಂತೆ ಕೂಗಿಕೊಳ್ಳುತ್ತಾ ಕೆಳಕ್ಕೆ ಬಿದ್ದು ಅಸುನೀಗಿದರು. ಪುರಂದರನನ್ನು ದೇವಗಣಗಳು ಹೇಗೆ ಹಾಗೆ ಅರ್ಜುನನನ್ನು ಸುತ್ತುವರೆದು ಸೈನಿಕರು ಹೀಗೆ ಹೇಳಿದರು:

> “ಪ್ರಜೆಗಳು ಮರಣಕ್ಕೆ ಹೆದರುವಂತೆ ನಾವು ದಂಡಧಾರನಿಗೆ ಹೆದರಿದ್ದೆವು. ವೀರ! ಅಂಥಹ ಶತ್ರುವನ್ನು ನೀನು ಸಂಹರಿಸಿದುದು ಒಳ್ಳೆಯದೇ ಆಯಿತು. ಬಲಿಷ್ಟ ಶತ್ರುಗಳಿಂದ

> ಪೀಡಿತರಾದ ಈ ಜನರನ್ನು ಭಯದಿಂದ ನೀನು ರಕ್ಷಿಸದೇ ಇದ್ದರೆ ಶತ್ರುಗಳನ್ನು ನೀನು ಸಂಹರಿಸಿದುದರಿಂದ ನಮಗುಂಟಾದ ಆನಂದದಂತೆ ನಮ್ಮವರ ಸಂಹಾರದಿಂದಾಗಿ ಶತ್ರುಗಳೇ ಮೋದಿಸುತ್ತಿದ್ದರು.”

ಹೀಗೆ ಪುನಃ ಪುನಃ ಸುಹೃದಯರು ಹೇಳಿದ ಮಾತುಗಳನ್ನು ಕೇಳಿ ಸುಮನಸ್ಕನಾದ ಅರ್ಜುನನು ಯಥಾನುರೂಪವಾಗಿ ಆ ಜನರನ್ನು ಪುರಸ್ಕರಿಸಿ ಪುನಃ ಸಂಶಪ್ತಕಗಣಗಳ ಬಳಿ ಹೋದನು.

## ಸಂಶಪ್ತಕರೊಂದಿಗೆ ಅರ್ಜುನನ ಪುನರ್ಯುದ್ಧ

ವಕ್ರಾನುಗತಿಯಲ್ಲಿರುವ ಅಂಗಾರಕ ಗ್ರಹದಂತೆ ಹಿಂದಿರುಗಿ ಬಂದು ಜಿಷ್ಣುವು ಪುನಃ ಅನೇಕ ಸಂಶಪ್ತಕರನ್ನು ಸಂಹರಿಸಿದನು. ಪಾರ್ಥನ ಬಾಣಗಳಿಂದ ಹತರಾದ ಅಶ್ವ-ರಥ-ಕುಂಜರಗಳು ನಡುಗಿದವು. ಭ್ರಾಂತಗೊಂಡವು. ಕೆಳಕ್ಕೆ ಬಿದ್ದು ಧೂಳು ಮುಕ್ಕಿದವು ಮತ್ತು ಅಂತ್ಯದಲ್ಲಿ ಅಸುವನ್ನು ನೀಗಿದವು. ಸಮರದಲ್ಲಿ ಎದುರಾಗಿ ಯುದ್ಧಮಾಡುತ್ತಿದ್ದ ಅಮಿತ್ರವೀರರ ಕುದುರೆಗಳನ್ನು, ಅವುಗಳ ಕಡಿವಾಣಗಳನು ಹಿಡಿದಿದ್ದ ಸೂತರನ್ನು, ರಥ ಧ್ವಜಗಳನ್ನು, ರಥಿಕರ ಕೈಗಳನ್ನು, ಕೈಗಳಲ್ಲಿ ಹಿಡಿದಿದ್ದ ಶಸ್ತ್ರಗಳನ್ನು, ಬಾಹುಗಳನ್ನು ಮತ್ತು ಶಿರಸ್ಸುಗಳನ್ನು ಕೂಡ ಪಾಂಡವನು ಭಲ್ಲ, ಕ್ಷುರ, ಅರ್ಧಚಂದ್ರ ಮತ್ತು

ವತ್ಸದಂತಬಾಣಗಳಿಂದ ಕತ್ತರಿಸಿದನು. ಹಸುವನ್ನು ಕೂಡಲು ಬಂದ ಗೂಳಿಯನ್ನು ಇತರ ಗೂಳಿಗಳು ಆಕ್ರಮಣಿಸುವಂತೆ ನೂರಾರು ಸಹಸ್ರಾರು ಶೂರರು ಅರ್ಜುನನನ್ನು ಆಕ್ರಮಣಿಸಿದರು. ಆಗ ಅವರ ಮಧ್ಯೆ ತ್ರೈಲೋಕ್ಯವಿಜಯದ ಸಮಯದಲ್ಲಿ ದೈತ್ಯರೊಂದಿಗೆ ವಜ್ರಿಯ ಯುದ್ಧವು ನಡೆದಂತೆ ಲೋಮಹರ್ಷಣ ಯುದ್ಧವು ನಡೆಯಿತು. ಆಗ ಉಗ್ರಾಯುಧನು ಭಯಂಕರ ಸರ್ಪಗಳಂತಿದ್ದ ಮೂರು ಬಾಣಗಳಿಂದ ಅರ್ಜುನನನ್ನು ಪ್ರಹರಿಸಲು, ಕೂಡಲೇ ಅವನು ಉಗ್ರಾಯುಧನ ಶಿರಸ್ಸನ್ನು ದೇಹದಿಂದ ಅಪಹರಿಸಿದನು. ಅದರಿಂದ ಕ್ರುದ್ಧರಾದ ಅವನ ಸೈನಿಕರು ವರ್ಷಾಕಾಲದಲ್ಲಿ ಭಿರುಗಾಳಿಯಿಂದ ಪ್ರೇರಿತಗೊಂಡು ಮೇಘಗಳು ಹಿಮವತ್ಪರ್ವತದ ಮೇಲೆ ಸತತ ಮಳೆಗರೆಯುವಂತೆ ನಾನಾ ಶಸ್ತ್ರಾಸ್ತ್ರಗಳನ್ನು ಸುರಿಸಿ ಅರ್ಜುನನನ್ನು ಮುಚ್ಚಿದರು. ಶತ್ರುಗಳ ಅಸ್ತ್ರಗಳನ್ನು ಅಸ್ತ್ರಗಳಿಂದಲೇ ತಡೆದು ಅರ್ಜುನನು ಶರಗಳಿಗೆ ಅಸ್ತ್ರಗಳನ್ನು ಚೆನ್ನಾಗಿ ಹೂಡಿ ಅನೇಕರಾಗಿದ್ದ ಅವರೆಲ್ಲರನ್ನೂ ಒಟ್ಟಿಗೇ ಸಂಹರಿಸಿದನು. ತ್ರಿವೇಣುಸಮೂಹಗಳನ್ನು ಕತ್ತರಿಸಿದನು. ಪಾರ್ಷ್ಣಿಸಾರಥಿಗಳನ್ನು ಸಂಹರಿಸಿದನು. ಬಾಣಗಳಿಂದ ಕಡಿವಾಣಗಳನ್ನು ತುಂಡರಿಸಿ ರಥಗಳ ಗುಂಪುಗಳು ಎಳೆಯಲ್ಪಟ್ಟು ಎಲ್ಲಕಡೆ ಹರಡಿ ಹೋಗುವಂತೆ ಮಾಡಿದನು. ಅಲ್ಲಿ ವಿಧ್ವಸ್ತಗೊಂಡಿದ್ದ ಆ ಅನೇಕ ಬಹು ಅಮೂಲ್ಯ ರಥಗಳು ಬೆಂಕಿ, ಭಿರುಗಾಳಿ ಮತ್ತು

ಪ್ರವಾಹಕ್ಕೆ ಸಿಲುಕಿದ ಧನವಂತರ ಭವನಗಳಂತೆ ಕಾಣುತ್ತಿದ್ದವು. ವಜ್ರಾಯುಧಕ್ಕೆ ಸಮಾನ ಶರಗಳಿಂದ ಆನೆಗಳ ಕವಚಗಳು ಒಡೆದು ಸಿಡಿಲು-ಗಾಳಿ-ಮತ್ತು ಬೆಂಕಿಗೆ ಸಿಲುಕಿ ಪರ್ವತದ ಮೇಲಿಂದ ಬೀಳುತ್ತಿದ್ದ ಭವನಗಳಂತೆ ಕೆಳಗುರುಳಿ ಬೀಳುತ್ತಿದ್ದವು. ಅರ್ಜುನನ ಬಾಣಗಳಿಂದ ಹೊಡೆಯಲ್ಪಟ್ಟ ಅನೇಕ ಕುದುರೆಗಳು ಸವಾರರೊಂದಿಗೆ ಗಾಯಕೊಂಡು ಬಲಗುಂದಿ ರಕ್ತದಿಂದ ತೋಯ್ದು ನಾಲಿಗೆ ಕರುಳುಗಳು ಹೊರಬಂದು ಬಿದ್ದು ನೋಡಲಿಕ್ಕೂ ಸಾಧ್ಯವಾಗದಂತಿದ್ದವು. ಸವ್ಯಸಾಚಿಯ ನಾರಾಚಗಳಿಂದ ಚುಚ್ಚಲ್ಪಟ್ಟ ನರಾಶ್ವಗಜಗಳು ರಣರಂಗದ ಸುತ್ತಲೂ ತಿರುಗುತ್ತಿದ್ದವು. ತತ್ತರಿಸುತ್ತಿದ್ದವು. ನೋವಿನಿಂದ ಕಿರುಚಿಕೊಳ್ಳುತ್ತಿದ್ದವು ಮತ್ತು ಕೆಳಗೆ ಬಿದ್ದು ಹೊರಳಾಡುತ್ತಿದ್ದವು. ವಜ್ರಾಯುಧದ ವಿಷಕ್ಕೆ ಸಮಾನವಾದ ಅಣಕ ಮತ್ತು ಶಿಲಾಧೌತ ಶರಗಳಿಂದ ಪಾರ್ಥನು ದಾನವರನ್ನು ಇಂದ್ರನು ಹೇಗೋ ಹಾಗೆ ಅವರನ್ನು ಸಂಹರಿಸಿದನು. ಬೆಲೆಬಾಳುವ ಕವಚ-ಆಭರಣಗಳನ್ನೂ ನಾನಾರೂಪದ ಉಡುಪು-ಆಯುಧಗಳನ್ನೂ ಧರಿಸಿದ್ದ ವೀರರು ರಥ-ಧ್ವಜಗಳೊಂದಿಗೆ ಪಾರ್ಥನಿಂದ ಹತರಾಗಿ ಮಲಗಿದರು. ಪರಾಜಿತರಾಗಿ ಪ್ರಾಣಗಳನ್ನು ತೊರೆದ ಆ ಪುಣ್ಯಕರ್ಮಿ ಸತ್ಕುಲಪ್ರಸೂತ ಶಾಸ್ತ್ರಜ್ಞಾನಸಂಪನ್ನರು ತಾವು ಮಾಡಿದ ಕರ್ಮದ ಫಲದಿಂದಾಗಿ ಸ್ವರ್ಗವನ್ನೇ ಸೇರಿದರು.

ಕೋಪಗೊಂಡ ಕೌರವ ಪಕ್ಷದ ನಾನಾ ಜನಪದಾಧ್ಯಕ್ಷ ವೀರರು ತಮ್ಮ ತಮ್ಮ ಗಣಗಳೊಂದಿಗೆ ಅರ್ಜುನನ ರಥಕ್ಕೆ ಮುತ್ತಿಗೆ ಹಾಕಿದರು. ರಥ ಮತ್ತು ಕುದುರೆಗಳ ಮೇಲೇರಿದವರು ಮತ್ತು ಪದಾತಿಗಳು ಅವನನ್ನು ಸಂಹರಿಸಲು ಬಯಸಿ ವಿವಿಧ ಆಯುಧಗಳನ್ನು ಪ್ರಯೋಗಿಸುತ್ತಾ ಅತಿ ಶೀಘ್ರವಾಗಿ ಅರ್ಜುನನ ಮೇಲೆ ಎರಗಿ ಬಿದ್ದರು. ಆಗ ಬೇಗನೇ ಯೋಧರೆಂಬ ಮಹಾಮೋಡಗಳು ಸುರಿಸುತ್ತಿದ್ದ ಆಯುಧಗಳೆಂಬ ಮಳೆಯನ್ನು ಅರ್ಜುನನೆಂಬ ಮಾರುತವು ಕ್ಷಿಪ್ರವಾಗಿ ನಿಶಿತ ಬಾಣಗಳಿಂದ ನಾಶಗೊಳಿಸಿತು. ಮಹಾಶಸ್ತ್ರಗಳೆಂಬ ಅಲೆಗಳಿಂದ ಕೂಡಿದ್ದ ಕುದುರೆ-ಪದಾತಿ-ಆನೆ-ರಥಗಳ ಸೇನೆಯೆಂಬ ಆ ಮಹಾಸಾಗರವನ್ನು ಶಸ್ತ್ರಾಸ್ತ್ರಸೇತುವೆಯ ಮೂಲಕ ಬೇಗನೇ ದಾಟಲು ಬಯಸುತ್ತಿದ್ದ ಪಾರ್ಥನನ್ನು ಉದ್ದೇಶಿಸಿ ವಾಸುದೇವನು ಹೇಳಿದನು:

> “ಪಾರ್ಥ! ಇದೇನು ಆಟವಾಡುತ್ತಿದ್ದೀಯೆ! ಸಂಶಪ್ತಕರನ್ನು
> ಸದೆಬಡಿದು ನಂತರ ಕರ್ಣವಧೆಗೋಸ್ಕರ ತ್ವರೆಮಾಡು!”

ಹಾಗೆಯೇ ಆಗಲೆಂದು ಹೇಳಿ ಅರ್ಜುನನು ಅಳಿದುಳಿದ ಸಂಶಪ್ತಕರನ್ನು ಬಲಪೂರ್ವಕವಾಗಿ ಶಸ್ತ್ರಗಳಿಂದ ಇಂದ್ರನು ದೈತ್ಯರನ್ನು ಹೇಗೋ ಹಾಗೆ ಕ್ಷಿಪ್ರವಾಗಿ ಸಂಹರಿಸಿದನು. ಆ ಸಮಯದಲ್ಲಿ ಅರ್ಜುನನು ಬಾಣಗಳನ್ನು ತೆಗೆದುಕೊಳ್ಳುತ್ತಿದ್ದುದೂ, ಬಿಲ್ಲಿಗೆ ಹೂಡುತ್ತಿದ್ದುದೂ,

ಅಥವಾ ಪ್ರಯೋಗಿಸುತ್ತಿದ್ದಿದೂ ಯಾರಿಗೂ ಕಾಣುತ್ತಿರಲಿಲ್ಲ. ಬಾಣಗಳಿಂದ ಸಾಯುತ್ತಿದ್ದವರು ಮಾತ್ರ ಕಾಣುತ್ತಿದ್ದರು.

## ಕೃಷ್ಣನು ಅರ್ಜುನನಿಗೆ ರಣಭೂಮಿಯನ್ನು ವರ್ಣಿಸಿದುದು

ಆಶ್ಚರ್ಯವೆಂದು ಹೇಳುತ್ತಾ ಗೋವಿಂದನು ಹಂಸ-ಚಂದ್ರರಂತೆ ಬಿಳಿಯಾಗಿದ್ದ ಆ ಕುದುರೆಗಳನ್ನು ಪ್ರಚೋದಿಸುತ್ತಾ ಹಂಸಗಳು ಸರೋವರವನ್ನು ಹೇಗೋ ಹಾಗೆ ಸೇನೆಗಳನ್ನು ಪ್ರವೇಶಿಸಿದನು. ಆಗ ಸಂಗ್ರಾಮಭೂಮಿಯಲ್ಲಿ ನಡೆಯುತ್ತಿರುವ ಆ ಜನಕ್ಷಯವನ್ನು ವೀಕ್ಷಿಸುತ್ತಾ ಗೋವಿಂದನು ಸವ್ಯಸಾಚಿಗೆ ಹೇಳಿದನು:

> “ಪಾರ್ಥ ! ಇಗೋ ದುರ್ಯೋಧನನನು ಮಾಡಿದ ಪೃಥ್ವಿಯ ಪಾರ್ಥಿವರ ಈ ಮಹಾರೌದ್ರ ಮಹಾ ಭರತಕ್ಷಯವು ನಡೆಯುತ್ತಿದೆ. ಧನ್ವಿಗಳ ಬೆಳ್ಳಿಯ ಪಟ್ಟಿಯಿರುವ ಧನುಸ್ಸುಗಳು, ಆಭರಗಳು ಮತ್ತು ಬತ್ತಳಿಕೆಗಳು, ಸುವರ್ಣಮಯ ಪುಂಖಗಳುಳ್ಳ ನತಪರ್ವಣ ಶರಗಳು, ನಾಗಗಳಂತೆ ಪ್ರಯೋಗಿಸಲ್ಪಟ್ಟ ತೈಲದಲ್ಲಿ ತೊಳೆದ ನಾರಾಚಗಳು, ಆನೆಯ ದಂತ ಮತ್ತು ಚಿನ್ನದ ಹಿಡಿಗಳುಳ್ಳ ಖಡ್ಗಗಳು, ಚದುರಿ ಬಿದ್ದಿರುವ ತೋಮರಗಳು, ಚಾಅಪಗಳು ಮತ್ತು ಬಣ್ಣ ಬಣ್ಣದ ಹೇಮ ವಿಭೂಷಣಗಳು, ಕವಚಗಳು, ಬಂಗಾರದ

ಪೃಷ್ಠಭಾಗಗಳಿಂದ ಕೂಡಿದ ಗುರಾಣಿಗಳು, ಸುವರ್ಣದಿಂದ ಮಾಡಿದ ಪ್ರಾಸಗಳು, ಕನಕಭೂಷಿತ ಶಕ್ತಿಗಳು, ಬಂಗಾರದ ಪಟ್ಟಿಗಳಿರುವ ದೊಡ್ಡ ದೊಡ್ಡ ಗದೆಗಳು, ಬಂಗಾರದ ಪಟ್ಟಿಗಳಿರುವ ಹೇಮಭೂಷಿತ ಋಷ್ಟಿಗಳು, ಕನಕ ಚಿತ್ರಗಳ ದಂಡಗಳುಳ್ಳ ಪರಶುಗಳು, ಉಕ್ಕಿನಿಂದ ಮಾಡಿದ ಭಾರವಾದ ಮುಸಲಗಳು, ಚಿತ್ರಚಿತ್ರದ ಶತಘ್ನಿಗಳು, ದೊಡ್ಡ ಪರಿಘಗಳೂ, ಚಕ್ರಗಳೂ, ಬಿಲ್ಲುಗಳೂ, ಮುದ್ಗರಗಳೂ ಅನೇಕ ಸಂಖ್ಯೆಗಳಲ್ಲಿ ರಣದಲ್ಲಿ ಬಿದ್ದಿರುವುದನ್ನು ನೋಡು! ವಿಜಯೇಚ್ಛೆಗಳು ನಾನಾವಿಧದ ಶಸ್ತ್ರಗಳನ್ನು ಹಿಡಿದೇ ಸತ್ತುಹೋಗಿದ್ದರೂ ಆ ತರಸ್ವಿಗಳು ಜೀವಂತವಿರುವರೋ ಎನ್ನುವಂತೆ ಕಾಣುತ್ತಿದ್ದಾರೆ. ಗದೆಗಳಿಂದ ಅಂಗಾಗಳೆಲ್ಲವೂ ಜಜ್ಜಿಹೋದ, ಮುಸಲಗಳಿಂದ ತಲೆಗಳು ಒಡೆದುಹೋದ, ಆನೆ-ಕುದುರೆ-ರಥಗಳಿಂದ ತುಳಿಯಲ್ಪಟ್ಟ ಸಹಸ್ರಾರು ಯೋಧರನ್ನು ನೋಡು! ಬಾಣ, ಶಕ್ತಿ, ಋಷ್ಟಿ, ತೋಮರ, ಖಡ್ಗ, ಪಟ್ಟಿಶ, ಪ್ರಾಸ, ನಖರ, ಲಗುಡಗಳಿಂದ ಶರೀರಗಳು ಒಡೆಯಲ್ಪಟ್ಟು ರಕ್ತದಲ್ಲಿ ಮಡುವಿನಲ್ಲಿ ಮುಳುಗಿಹೋಗಿ ಅಸುನೀಗಿರುವ ಮನುಷ್ಯ-ಗಜ-ವಾಜಿಗಳಿಂದ ಈ ರಣಭೂಮಿಯು ತುಂಬಿಹೋಗಿದೆ. ಚಂದನಾದಿಗಳಿಂದ ಲೇಪಿತಗೊಂಡ ಅಂಗದ-

ಶುಭಭೂಷಣಗಳಿಂದ ಕೂಡಿರುವ, ಕೇಯೂರ, ತಲತ್ರಗಳಿಂದ ಮತ್ತು ಅಂಗುಲಿತ್ರಗಳಿಂದ ಕೂಡಿರುವ ಮತ್ತು ನಾನಾವಿಧದ ಅಲಂಕಾರಗಳಿಮ್ದ ಕೂಡಿದ ಭುಜಾಗ್ರಗಳಿರುವ ಬಾಹುಗಳಿಂದ ಈ ಮೇದಿನಿಯು ಸಂಪನ್ನವಾಗಿದೆ. ಆನೆಗಳ ಸೊಂಡಿಲುಗಳಂತಿರುವ ಆದರೆ ಒಡೆದುಹೋದ ತರಸ್ವಿಗಳ ತೊಡೆಗಳಿಂದ, ಶ್ರೇಷ್ಠ ಚೂಡಾಮಣಿಗಳನ್ನು ಕಟ್ಟಿದ್ದ ಕುಂಡಲಯುಕ್ತವಾದ ಶಿರಗಳಿಂದ ಮತ್ತು ತುಂಡರಿಸಲ್ಪಟ್ಟ ವೃಷಭಾಕ್ಷರಿಂದ ಈ ವಸುಂಧರೆಯು ವಿರಾಜಿಸುತ್ತಿದ್ದಾಳೆ. ರಕ್ತದಿಂದ ತೋಯ್ದುಹೋಗಿರುವ ಕಬಂದಗಳಿಂದ, ದೇಹವು ತುಂಡಾಗಿರುವ ಶಿರೋಧರಗಳಿಂದ ಭೂಮಿಯು ಬೆಂಕಿಯು ಸುಟ್ಟು ಶಾಂತವಾಗಿರುವಂತೆ ತೋರುತ್ತಿದೆ. ಬಂಗಾರದ ಗಂಟೆಗಳುಳ್ಳ ಶುಭ ರಥಗಳು ಬಹುವಿಧವಾಗಿ ಭಗ್ನವಾಗಿರುವುದನ್ನೂ ಅನೇಕ ಅಶ್ವಗಳು ರಕ್ತದಲ್ಲಿ ಮುಳುಗಿರುವುದನ್ನೂ ನೋಡು!

ಯೋಧರ ಬಿಳಿಯ ಮಹಾಶಂಖಗಳು ಹರಡಿ ಬಿದ್ದಿರುವುದನ್ನು, ನಾಲಿಗೆಗಳನ್ನು ಹೊರಚಾಚಿ ಸತ್ತು ಮಲಗಿರುವ ಪರ್ವತೋಪಮ ಆನೆಗಳನ್ನು, ಬಣ್ಣ ಬಣ್ಣದ ವೈಜಯಂತೀ

ಮಾಲೆಗಳು, ಹತರಾಗಿರುವ ಗಜಯೋಧಿಗಳು, ಆನೆಗಳ ಮೇಲೆ ಹೊದ್ದಿಸಿದ್ದ, ಹರಿದು ವಿಚಿತ್ರವಾಗಿ ಕಾಣುತ್ತಿದ್ದ ಕಂಬಳಿಗಳ ರಾಶಿಗಳು, ಕೆಳಗೆ ಬಿದ್ದು ಆನೆಗಳಿಂದ ತುಳಿದು ಒಡೆಯಲ್ಪಟ್ಟ ಅನೇಕ ಗಂಟೆಗಳು, ನೆಲದಮೇಲೆ ಬಿದ್ದಿದ್ದ ಅಂಕುಶಗಳ ವೈಡೂರ್ಯ-ಮಣಿಗಳ ದಂಡಗಳು, ಕುದುರೆಗಳ ಸವಾರಿಯ ಮೇಲೆ ಕಟ್ಟಿದ್ದ ಸುವರ್ಣ ವಿಚಿತ್ರ ಮಣಿಚಿತ್ರಗಳಿಂದ ಕೂಡಿದ ಹಗ್ಗಗಳು, ನೆಲದ ಮೇಲೆ ಬಿದ್ದಿರುವ ಕುದುರೆಗಳಿಗೆ ಹೊದಿಸಿದ್ದ ರಂಕ ಚರ್ಮದ ಜೀನುಗಳು, ನರೇಂದ್ರರ ಕಾಂಚನಸ್ರಜ ವಿಚಿತ್ರ ಚೂಡಾಮಣಿಗಳು, ಚಂದ್ರ-ನಕ್ಷತ್ರಗಳಂತೆ ಹೊಳೆಯುತ್ತಿರುವ ಮುಖಗಳ ಚಾರುಕುಂಡಲಗಳು, ಗಡ್ಡ ಮೀಸೆಗಳಿಂದ ಕೂಡಿದ್ದ ವೀರರ ಸಮಲಂಕೃತ ಮುಖಗಳು ರಕ್ತ ಮಾಂಸಗಳ ಮಡುವಿನಲ್ಲಿ ಮುಳುಗಿಹೋಗಿರುವುದನ್ನು ನೋಡು! ಶಸ್ತ್ರಗಳಿಂದ ಹೊಡೆಯಲ್ಪಟ್ಟು ಕೆಳಗುರುಳಿಸಲ್ಪಟ್ಟು ನರಳುತ್ತಿರುವ ಸಜೀವ ಮನುಷ್ಯರನ್ನು ಎಲ್ಲೆಡೆ ನೋಡು. ಮಹಾಹವದಲ್ಲಿ ನೀನು ಮಾಡಿದುದು ನಿನಗೆ ಅನುರೂಪವೇ ಆಗಿದೆ. ಸ್ವರ್ಗದಲ್ಲಿರುವ ದೇವರಾಜನು ಮಾತ್ರ ಯುದ್ಧದಲ್ಲಿ ನಿನ್ನಂತಹ ಈ ಕೃತ್ಯವನ್ನು ಮಾಡಬಲ್ಲನು.”

ಈ ರೀತಿ ಕೃಷ್ಣನು ಕಿರೀಟಿಗೆ ಯುದ್ಧಭೂಮಿಯನ್ನು ತೋರಿಸುತ್ತಾ ಹೋಗುತ್ತಿರಲು ದುರ್ಯೋಧನನ ಸೇನೆಯ ಕಡೆಯಿಂದ ಒಂದು ಮಹಾಶಬ್ಧವನ್ನು - ಭೇರೀ-ಪಣವಗಳೊಂದಿಗೆ ಮಿಶ್ರಿತ ಶಂಖದುಂದುಭಿಗಳ ನಿರ್ಘೋಷವನ್ನೂ, ರಥ-ಅಶ್ವ-ಗಜಗಳ ನಾದವನ್ನೂ, ದಾರುಣ ಶಸ್ತ್ರಗಳ ಶಬ್ಧಗಳನ್ನೂ - ಕೇಳಿದನು. ಗಾಳಿಯ ವೇಗದ ಕುದುರೆಗಳೊಂದಿಗೆ ಆ ಸೇನೆಯನ್ನು ಪ್ರವೇಶಿಸಿ ಕೃಷ್ಣನು ಕೌರವ ಸೇನೆಯನ್ನು ಪಾಂಡ್ಯನು ಮರ್ದಿಸುತ್ತಿರುವುದನ್ನು ಕಂಡು ಅಚ್ಚರಿಗೊಂಡನು.

## ಅಶ್ವತ್ಥಾಮನಿಂದ ಪಾಂಡ್ಯನ ವಧೆ

ಆಯುಷ್ಯ ಮುಗಿದವರನ್ನು ಅಂತಕನು ಹೇಗೋ ಹಾಗೆ ಧನುರ್ಧಾರಿಪ್ರವರ ಪಾಂಡ್ಯನು ಯುದ್ಧದಲ್ಲಿ ನಾನಾವಿಧದ ಬಾಣಗಳಿಂದ ಶತ್ರುಸಮೂಹಗಳನ್ನು ಸತತವಾಗಿ ನಾಶಗೊಳಿಸುತ್ತಿದ್ದನು. ಆ ಪ್ರಹರಿಗಳಲ್ಲಿ ಶ್ರೇಷ್ಠನು ನಿಶಿತ ಶರಗಳಿಂದ ಗಜ-ವಾಜಿ-ಮನುಷ್ಯರ ಶರೀರಗಳನ್ನು ಭೇದಿಸಿ ವಿದೇಹಿಗಳನ್ನಾಗಿ ಮಾಡುತ್ತಿದ್ದನು. ಶಕ್ರನು ಅಸುರರನ್ನು ಹೇಗೋ ಹಾಗೆ ಪಾಂಡ್ಯನು ಶತ್ರುಪ್ರವೀರರು ಪ್ರಯೋಗಿಸುತ್ತಿದ್ದ ನಾನಾ ಶಸ್ತ್ರಗಳನ್ನು ಸಾಯಕಗಳಿಂದ ತುಂಡುಮಾಡಿ ಅವರನ್ನು ಪುನಃ ಆಕ್ರಮಣಿಸುತ್ತಿದ್ದನು.

ದ್ರೋಣ, ಭೀಷ್ಮ, ಕೃಪ, ದ್ರೌಣಿ, ಕರ್ಣ, ಅರ್ಜುನ ಮತ್ತು ಜನಾರ್ದನರನ್ನು ವಿದ್ಯಾಸಂಪೂರ್ಣರೆಂದೂ ಯುದ್ಧದಲ್ಲಿ ಧನುಶ್ರೇಷ್ಠರೆಂದೂ ತಿಳಿಯುತ್ತಾರೆ. ಆದರೆ ಪಾಂಡ್ಯನು ಕರ್ಣಭೀಷ್ಮರನ್ನು ತನ್ನ ಸಮಾನರೆಂದೂ ವಾಸುದೇವಾರ್ಜುನರು ತನಗಿಂತಲೂ ಕಡಿಮೆಯವರೆಂದೂ ತಿಳಿದುಕೊಂಡಿದ್ದನು. ಆ ಪಾಂಡ್ಯ ನೃಪತಿಶ್ರೇಷ್ಠನು ಅಂತಕನಂತೆ ಕರ್ಣನ ಸೇನೆಯನ್ನು ವಧಿಸಲು ಪ್ರಾರಂಭಿಸಿದನು. ಕರ್ಣನ ಶ್ರೇಷ್ಠ ರಥ-ಕುದುರೆ-ಪದಾತಿ-ಆನೆಗಳಿಂದ ಕೂಡಿದ ಮಹಾಸೇನೆಯು ಪಾಂಡ್ಯನಿಂದ ಧ್ವಂಸಗೊಳಿಸಲ್ಪಟ್ಟು ಕುಂಬಾರನ ಚಕ್ರದೋಪಾದಿಯಲ್ಲಿ ರಣಾಂಗಣದ ಸುತ್ತಲೂ ಸುತ್ತತೊಡಗಿತು. ಭಿರುಗಾಳಿಯು ಮೇಘಗಳನ್ನು ಚದುರಿಸುವಂತೆ ಪಾಂಡ್ಯನು ಚೆನ್ನಾಗಿ ಪ್ರಯೋಗಿಸಿದ ಬಾಣಗಳಿಂದ ಕುದುರೆಗಳು-ಸೂತರು-ಧ್ವಜಗಳೊಂದಿಗೆ ಶತ್ರುಗಳ ರಥಗಳನ್ನು ಚದುರಿಸಿದನು. ವಜ್ರಿಯು ಶತ್ರುಗಳನ್ನು ಸದೆಬಡಿಯುವಂತೆ ಅವನು ಗಜಸೇನೆಗಳನ್ನು ಪತಾಕೆಗಳಿಂದಲೂ ಆಯುಧಗಳಿಂದಲೂ ಮತ್ತು ಧ್ವಜಗಳಿಂದಲೂ ವಿಹೀನರನ್ನಾಗಿಸಿ ಧ್ವಂಸಮಾಡಿದನು. ಶಕ್ತಿ-ಪ್ರಾಸ-ಭತ್ತಳಿಕೆಗಳೊಡನೆ ಅಶ್ವಾರೋಹಿಗಳನ್ನೂ ಕುದುರೆಗಳನ್ನೂ ಹಾಗೆಯೇ ಕ್ರೂರರೂ, ಸಂಗ್ರಾಮ ಕರ್ಕಶರೂ ಆದ ಪುಲಿಂದ-ಖಶ-ಬಾಹ್ಲೀಕ-ನಿಷಾದ-ಆಂಧ್ರ-ಕುಂತಲ-ದಾಕ್ಷಿಣಾತ್ಯ-ಭೋಜರನ್ನು ಬಾಣಗಳಿಂದ

ಕವಚವಿಹೀನರನ್ನಾಗಿಸಿ ಪಾಂಡ್ಯನು ಅವರನ್ನು ಪ್ರಾಣರಹಿತರನ್ನಾಗಿಯೂ ಮಾಡಿದನು. ಆಹವದಲ್ಲಿ ಸ್ವಲ್ಪವೂ ಭ್ರಾಂತಗೊಳ್ಳದೇ ಚತುರಂಗಬಲವನ್ನು ಬಾಣಗಳಿಂದ ಸಂಹರಿಸುತ್ತಿದ್ದ ಪಾಂಡ್ಯನನ್ನು ನೋಡಿ ಅಸಂಭ್ರಾಂತ ದ್ರೌಣಿಯು ಆಕ್ರಮಣಿಸಿದನು. ಪ್ರಹರಿಗಳಲ್ಲಿ ಶ್ರೇಷ್ಠ ಅಶ್ವತ್ಥಾಮನು ಭಯವಿಲ್ಲದೇ ನರ್ತಿಸುತ್ತಿದ್ದ ಪಾಂಡ್ಯನನ್ನು ಸಂಬೋಧಿಸುತ್ತಾ ತಾನೂ ಸಹ ಅವನ ಪರಾಕ್ರಮವನ್ನು ನೋಡಿ ಭಯಪಟ್ಟಿಲ್ಲವೆಂದು ತೋರಿಸಿಕೊಳ್ಳುತ್ತಾ ಸುಮಧುರ ಮಾತುಗಳಿಂದ ಮಂದಹಾಸಪೂರ್ವಕವಾಗಿ ಯುದ್ಧಕ್ಕೆ ಅಹ್ವಾನಿಸುತ್ತಾ ಹೇಳಿದನು:

> “ರಾಜನ್! ಸುದೀರ್ಘವಾಗಿ ಸೆಳೆಯಲ್ಪಟ್ಟ ಮೌರ್ವಿಯುಳ್ಳ ಮಹಾಧನುಸ್ಸನ್ನು ಮುಷ್ಟಿಯಿಂದ ಹಿಡಿದು ಅಗಲವಾಗಿ ಮಾಡಲ್ಪಟ್ಟ ಎರಡು ತೋಳುಗಳಿಂದಲೂ ಟೇಂಕರಿಸುತ್ತಿರುವಾಗ ನೀನು ಗರ್ಜಿಸುವ ಮಹಾಮೇಘದಂತೆ ಪ್ರಕಾಶಿಸುವೆ! ಮಹಾವೇಗದಿಂದ ಶರವರ್ಷಗಳಿಂದ ಶತ್ರುಸೇನೆಯನ್ನು ಮುಚ್ಚುತ್ತಿರುವ ನಿನ್ನನ್ನು ಎದುರಿಸುವ ಅನ್ಯ ಪ್ರತಿವೀರನನ್ನು ಈ ಯುದ್ಧದಲ್ಲಿ ನಾನು ಕಾಣಲಾರೆ. ಅರಣ್ಯದಲ್ಲಿ ಮೃಗಸಂಘಗಳನ್ನು ನಿರ್ಭೀತ ಭೀಮಬಲ

ಹರಿಯಂತೆ ನೀನು ಅನೇಕ ರಥ-ಗಜ-ಪದಾತಿ-ಅಶ್ವಗಳನ್ನು ಪ್ರಮಥಿಸುತ್ತಿದ್ದೀಯೆ. ಮಹಾರಥಘೋಷದಿಂದ ಭೂಮಿ-ಆಕಾಶಗಳನ್ನು ಪ್ರತಿಧ್ವನಿಸುತ್ತಾ ನೀನು ಶರತ್ಕಾಲದಲ್ಲಿ ಗರ್ಜಿಸುವ ಸಸ್ಯನಾಶಕ ಮೇಘದಂತೆ ಪ್ರಕಾಶಿಸುತ್ತಿರುವೆ. ಸರ್ಪವಿಷೋಪಮ ತೀಕ್ಷ್ಣಶರಗಳನ್ನು ಬಿಡುತ್ತಾ ಅಂಧಕನು ತ್ರ್ಯಂಬಕನೊಡನೆ ಹೇಗೋ ಹಾಗೆ ನನ್ನೊಬ್ಬನೊಡನೆಯೇ ಯುದ್ಧಮಾಡು!”

“ಹಾಗೆಯೇ ಆಗಲಿ! ಪ್ರಹರಿಸು!” ಎಂದು ಹೇಳಿ ಮಲಯಧ್ವಜ ಪಾಂಡ್ಯನು ದ್ರೋಣತನಯನನ್ನು ಕರ್ಣಿಗಳಿಂದ ಹೊಡೆದನು. ದ್ರೌಣಿಯು ನಸುನಗುತ್ತಾ ಮರ್ಮಗಳನ್ನು ಭೇದಿಸುವ ಅಗ್ನಿಶಿಖಗಳಂತಿದ್ದ ಉಗ್ರ ಬಾಣಗಳಿಂದ ಪಾಂಡ್ಯನನ್ನು ಗಾಯಗೊಳಿಸಿದನು. ಅನಂತರ ಅಶ್ವತ್ಥಾಮನು ಅನ್ಯ ಒಂಭತ್ತು ಕಂಕವಾಸಸ ತೀಕ್ಷ್ಣ ನಾರಾಚಗಳನ್ನು ಹತ್ತನೆಯ ಗತಿಯನ್ನುಪಯೋಗಿಸಿ ಪ್ರಯೋಗಿಸಿದನು. ಅವುಗಳನ್ನು ಐದರಿಂದ ತುಂಡರಿಸಿ ಐದು ನಿಶಿತ ಶರಗಳಿಂದ ಪಾಂಡ್ಯನು ಅಶ್ವತ್ಥಾಮನ ನಾಲ್ಕೂ ಕುದುರೆಗಳನ್ನೂ ಹೊಡೆಯಲು ಅವು ಕೂಡಲೇ ಅಸುನೀಗಿದವು. ಪಾಂಡ್ಯನು ನಿಶಿತ ಶರಗಳಿಂದ ದ್ರೋಣಸುತನ ಬಾಣಗಳನ್ನು ಕತ್ತರಿಸಿ ಅವನ ಧನುಸ್ಸಿನ

ಶಿಂಜನಿಯನ್ನೂ ಕತ್ತರಿಸಿದನು. ದ್ರೌಣಿಯು ಕೂಡಲೇ ಧನುಸ್ಸಿಗೆ ಇನ್ನೊಂದು ಮೌರ್ವಿಯನ್ನು ಬಿಗಿದು ಪಾಂಡ್ಯನ ಮೇಲೆ ಸಹಸ್ರಾರು ಶರಗಳನ್ನು ಪ್ರಯೋಗಿಸಿ, ಆಕಾಶ ಮತ್ತು ದಿಕ್ಕುಗಳನ್ನು ಬಾಣಗಳಿಂದ ದಟ್ಟವಾಗಿ ತುಂಬಿಸಿದನು. ಆಗ ಪಾಂಡ್ಯನು ದ್ರೌಣಿಯ ಬಾಣಗಳು ಅಕ್ಷಯವಾದುದೆಂದು ತಿಳಿದೂ ಅವುಗಳೆಲ್ಲವನ್ನೂ ತನ್ನ ಬಾಣಗಳಿಂದ ನಿರಸನಗೊಳಿಸಿದನು. ಹೀಗೆ ಶತ್ರುವು ದ್ರೌಣಿಯು ಪ್ರಯೋಗಿಸಿದ ಬಾಣಗಳೆಲ್ಲವನ್ನೂ ಪ್ರಯತ್ನಪಟ್ಟು ಕತ್ತರಿಸಿ ನಿಶಿತ ಶರಗಳಿಂದ ಅವನ ಚಕ್ರರಕ್ಷಕರನ್ನೂ ಸಂಹರಿಸಿದನು. ಆಗ ಅವನ ಹಸ್ತಲಾಘವವನ್ನು ನೋಡಿ ದ್ರೋಣಸುತನು ಧನುಸ್ಸನ್ನು ಮಂಡಲಾಕಾರವನ್ನಾಗಿಸಿ ಪೂಷನ ತಮ್ಮ ಪರ್ಜನ್ಯನು ಹೇಗೋ ಹಾಗೆ ಪಾಂಡ್ಯನ ಮೇಲೆ ಬಾಣಗಳ ಮಳೆಗರೆದನು. ದ್ರೌಣಿಯು ಎಂಟು ಎತ್ತುಗಳಿಂದ ಎಳೆಯಲ್ಪಡುವ ಎಂಟು ಬಂಡಿಗಳಲ್ಲಿ ತುಂಬಿ ತರಬಹುದಾದಷ್ಟು ಆಯುಧಗಳನ್ನು ದಿನದ ಎಂಟನೆಯ ಒಂದು ಭಾಗದಷ್ಟು ಕಾಲದಲ್ಲಿ (ಅರ್ಧಯಾಮದಲ್ಲಿ ಅಥವಾ ಒಂದು ಘಂಟೆಯಲ್ಲಿ) ಪಾಂಡ್ಯನ ಮೇಲೆ ಸುರಿಸಿದನು. ಅಂತಕನಂತೆ ಕ್ರುದ್ಧನಾದ ಅಶ್ವತ್ಥಾಮನು ಕಾಲಾಂತಕನಂತಿದ್ದನು. ಆಗ ಅವನನ್ನು ಅಲ್ಲಿ ಯಾರ್ಯಾರು ನೋಡುತ್ತಿದ್ದರೋ ಅವರೆಲ್ಲರೂ ಪ್ರಾಯಶಃ ಮೂರ್ಛೆಯೇ ಹೋಗುತ್ತಿದ್ದರು! ವರ್ಷಾಕಾಲದಲ್ಲಿ ಪರ್ಜನ್ಯನು ಪರ್ವತ-ವೃಕ್ಷಗಳ

ಸಹಿತ ಭೂಮಿಯನ್ನು ಮಳೆಯಿಂದ ಮುಚ್ಚಿ ಬಿಡುವಂತೆ ಆಚಾರ್ಯ ಪುತ್ರನು ಪಾಂಡ್ಯನ ಸೇನೆಯನ್ನು ಬಾಣಗಳ ವೃಷ್ಟಿಯಿಂದ ಅಭಿಷೇಚಿಸಿದನು. ದ್ರೌಣಿಯೆಂಬ ಪರ್ಜನ್ಯನು ಪ್ರಯೋಗಿಸಿದ ಸಹಿಸಲಸಾಧ್ಯ ಆ ಬಾಣವೃಷ್ಟಿಯನ್ನು ಭಿರುಗಾಳಿಯಂತಿದ್ದ ಪಾಂಡ್ಯನು ಬೇಗನೇ ವಾಯುವ್ಯಾಸ್ತ್ರದಿಂದ ನಿರಸನಗೊಳಿಸಿ ಆನಂದದಿಂದ ಸಿಂಹನಾದಗೈದನು. ಸಿಂಹನಾದ ಮಾಡುತ್ತಿದ್ದ ಅವನ ಚಂದನ-ಅಗರುಗಳಿಂದ ಭೂಷಿತ ಮಲಯಪರ್ವತದಂತಿದ್ದ ಕೇತುವನ್ನು ದ್ರೌಣಿಯು ಕತ್ತರಿಸಿ ಅವನ ನಾಲ್ಕು ಕುದುರೆಗಳನ್ನೂ ಸಂಹರಿಸಿದನು. ಸೂತನನ್ನು ಒಂದು ಬಾಣದಿಂದ ಸಂಹರಿಸಿ, ಅರ್ಧಚಂದ್ರದಿಂದ ಅವನ ಮಹಾಮೋಡದಂತೆ ಗರ್ಜಿಸುತ್ತಿದ್ದ ಧನುಸ್ಸನ್ನು ಕತ್ತರಿಸಿ, ಅವನ ರಥವನ್ನು ಎಳ್ಳುಕಾಳಿನಷ್ಟು ಪುಡಿ ಪುಡಿ ಮಾಡಿದನು. ಅಸ್ತ್ರಗಳಿಂದ ಅಸ್ತ್ರಗಳನ್ನು ತಡೆದು, ಸರ್ವಾಯುಧಗಳನ್ನು ತುಂಡರಿಸಿ ದ್ರೌಣಿಯು ಕೈಗೆ ಸಿಕ್ಕಿದರೂ ಹಿತವಲ್ಲವೆಂದು ಇನ್ನೂ ಯುದ್ಧಮಾಡಲು ಬಯಸಿ ಅವನನ್ನು ಕೊಲ್ಲಲಿಲ್ಲ.

ಆಗ ಮಾವುತನನ್ನು ಕಳೆದುಕೊಂಡಿದ್ದ, ಸುಕಲ್ಪಿತವಾಗಿದ್ದ ಶ್ರೇಷ್ಠ ಆನೆಯೊಂದು ಅಲ್ಲಿಗೆ ತ್ವರೆಮಾಡಿ ಬರಲು ಯುದ್ಧನಿಪುಣ ಮಲಯೇಶ್ವರ ಪಾಂಡ್ಯನು ಆ ಮಹಾಗಜವನ್ನು ಸಿಂಹವು

ಪರ್ವತಶಿಖರವನ್ನೇರುವಂತೆ ಹತ್ತಿ ಕುಳಿತುಕೊಂಡನು. ಆ ಅದ್ರಿಪತೀಶ್ವರನು ಭಾಸ್ಕರರಶ್ಮಿಸನ್ನಿಭ ತೋಮರವನ್ನು ಬಲ, ಅಸ್ತ್ರಪ್ರಹರಣ, ಉತ್ತಮ ಪ್ರಯತ್ನ ಮತ್ತು ಕೋಪಗಳಿಂದ ಪ್ರೇರಿತನಾಗಿ ಶೀಘ್ರವಾಗಿ ಆನೆಯನ್ನು ನಿಯಂತ್ರಿಸುತ್ತಾ ಗುರುಸುತನ ಮೇಲೆ ಎಸೆದು ಜೋರಾಗಿ ಗರ್ಜಿಸಿದನು. ಶ್ರೇಷ್ಠ ಮಣಿಗಳಿಂದಲೂ, ಉತ್ತಮ ವಜ್ರಗಳಿಂದಲೂ, ವಸ್ತ್ರ, ಸುವರ್ಣ, ಮುಕ್ತಗಳಿಂದ ಅಲಂಕೃತಗೊಂಡಿದ್ದ ದ್ರೌಣಿಯ ಕಿರೀಟವನ್ನು ದ್ರೌಣಿಯು "ನೀನು ಹತನಾದೆ!" ಎಂದು ಕೂಗಿ ಹೇಳುತ್ತಾ ತೋಮರದಿಂದ ಪ್ರಹರಿಸಿ ಜೋರಾಗಿ ನಕ್ಕನು. ಸೂರ್ಯ-ಚಂದ್ರ-ಅಗ್ನಿಗಳ ತೇಜಸ್ಸುಳ್ಳ ಆ ಕಿರೀಟವು ತೋಮರದ ಜೋರಾದ ಹೊಡೆತದಿಂದ ಚೂರು ಚೂರಾಗಿ ಮಹೇಂದ್ರನ ವಜ್ರದ ಆಘಾತಕ್ಕೆ ಒಳಗಾದ ಮಹಾವನ ಸಮೇತ ಪರ್ವತ ಶಿಖರವು ಬೀಳುವಂತೆ ಭೂಮಿಯ ಮೇಲೆ ಬಿದ್ದಿತು. ಆಗ ಅಶ್ವತ್ಥಾಮನು ಕಾಲಿನಿಂದ ತುಳಿಯಲ್ಪಟ್ಟ ನಾಗರಾಜನಂತೆ ಅತ್ಯಂತ ಕುಪಿತನಾಗಿ ಪ್ರಜ್ವಲಿಸಿದನು. ಅಂತಕನ ದಂಡಗಳಂತಿದ್ದ ಹದಿನಾಲ್ಕು ಶತ್ರುಗಳ ಅಂತಕ ಬಾಣಗಳನ್ನು ಅವನು ತೆಗೆದುಕೊಂಡನು. ಐದು ಬಾಣಗಳಿಂದ ಆ ಆನೆಯ ನಾಲ್ಕು ಕಾಲುಗಳನ್ನೂ ಸೊಂಡಿಲನ್ನೂ ತುಂಡರಿಸಿದನು. ಮೂರರಿಂದ ನೃಪನ ಬಾಹುಗಳನ್ನು ಮತ್ತು ಶಿರಗಳನ್ನು ಕತ್ತರಿಸಿದನು. ಆರರಿಂದ ಪಾಂಡ್ಯರಾಜನ ಅನುಯಾಯೀ ಆರು ಮಹಾರಥರನ್ನೂ

ಸಂಹರಿಸಿದನು. ಸುದೀರ್ಘವೂ, ದುಂಡಾಗಿಯೂ ಇದ್ದ ಶ್ರೇಷ್ಠ ಚಂದನಲೇಪಿತವಾಗಿದ್ದ, ಸುವರ್ಣಮುಕ್ತಾಮಣಿವಜ್ರವಿಭೂಷಿತವಾಗಿದ್ದ ಆ ನೃಪನ ಭುಜಗಳೆರಡೂ ಗರುಡನಿಂದ ಹತಗೊಂಡ ಉರಗಗಳಂತೆ ಧರಣಿಯ ಮೇಲೆ ಬಿದ್ದವು. ಪೂರ್ಣಚಂದ್ರನ ಪ್ರಭೆಯಿದ್ದ, ರೋಷದಿಂದ ಕೆಂಪಾದ ಕಣ್ಣುಗಳಿದ್ದ, ಸುಂದರ ಮೂಗಿದ್ದ ಅವನ ಶಿರಸ್ಸು ಕೂಡ ಕುಂಡಲಗಳೊಂದಿಗೆ ಭೂಮಿಯ ಮೇಲೆ ಬಿದ್ದು ವಿಶಾಖಾನಕ್ಷತ್ರಗಳ ಮಧ್ಯೆಯಿರುವ ಶಶಿಯಂತೆ ಪ್ರಕಾಶಿಸಿತು. ಆಗ ವಿದ್ಯೆಯಿಂದ ಪರಿಪೂರ್ಣನಾಗಿದ್ದ ಮತ್ತು ಮಾಡಬೇಕಾದುದನ್ನು ಮಾಡಿ ಮುಗಿಸಿದ ಅಶ್ವತ್ಥಾಮನನ್ನು ಸುಹೃದಯರಿಂದ ಆವೃತನಾಗಿದ್ದ ನೃಪ ದುರ್ಯೋಧನನು ಸಂತೋಷಭರಿತನಾಗಿ ಬಲಿಯನ್ನು ಗೆದ್ದ ವಿಷ್ಣುವನ್ನು ಅಮರೇಶ್ವರನು ಹೇಗೋ ಹಾಗೆ ಪೂಜಿಸಿ ಗೌರವಿಸಿದನು.

## ಕರ್ಣ ಯುದ್ಧ

ಅತಿಮಾನ್ಯ ಪಾಂಡ್ಯರಾಜನು ಕೆಳಗುರುಳಿಸಲ್ಪಡಲು ಕೃಷ್ಣನು ಅರ್ಜುನನಿಗೆ ಪಾಂಡವರಿಗೆ ಹಿತಕರವಾಗುವ ಈ ಮಾತುಗಳನ್ನಾಡಿದನು:

“ಅಶ್ವತ್ಥಾಮನ ಸಂಕಲ್ಪದಂತೆ ಕರ್ಣನು ಸೃಂಜಯರನ್ನು

ಸಂಹರಿಸಿ ಅಶ್ವ-ನರ-ಗಜಗಳ ಮಹಾ ಕದನವನ್ನೇ ಎಸಗಿದ್ದಾನೆ.”

ವಾಸುದೇವನು ಇದನ್ನು ಹೇಳಲು, ಅದನ್ನು ಕೇಳಿದ ಮತ್ತು ನೋಡಿದ ಅರ್ಜುನನು ಅಣ್ಣನಿಗೊದಗಿದ ಮಹಾ ಘೋರ ಭಯದಿಂದಾಗಿ “ಹೃಷೀಕೇಶ ! ಕುದುರೆಗಳನ್ನು ಮುಂದೆ ನಡೆಸು !” ಎಂದನು. ಆಗ ಹೃಷೀಕೇಶನು ರಥವನ್ನು ಮುಂದುವರೆಸಿದನು. ಪುನಃ ಅಲ್ಲಿ ದಾರುಣ ಸಂಗ್ರಾಮವು ಪ್ರಾರಂಭವಾಯಿತು. ಆಗ ಪುನಃ ಯಮರಾಷ್ಟ್ರವಿವರ್ಧನ ಸಂಗ್ರಾಮವು ಕರ್ಣ ಮತ್ತು ಪಾಂಡವರ ನಡುವೆ ಪ್ರಾರಂಭವಾಯಿತು.

ಪರಸ್ಪರರನ್ನು ಸಂಹರಿಸಲು ಬಯಸಿದ ಅವರು ಧನುಸ್ಸು, ಬಾಣ, ಪರಿಘ, ಖಡ್ಗ, ತೋಮರ, ಪಟ್ಟಿಶ, ಮುಸಲ, ಭುಶುಂಡೀ, ಶಕ್ತಿ, ಋಷ್ಟಿ, ಪರಶು, ಗದ, ಪ್ರಾಸ, ಕುಂತ, ಭಿಂಡಿಪಾಲ ಮತ್ತು ಮಹಾ ಅಂಕುಶಗಳನ್ನು ಹಿಡಿದು ಎಸೆಯುತ್ತಿದ್ದರು. ಬಾಣ-ಶಿಂಜಿನಿ-ಧನುಸ್ಸುಗಳ ಶಬ್ಧದಿಂದ ಆಕಾಶ-ದಿಕ್ಕು-ಉಪದಿಕ್ಕುಗಳನ್ನು ಮೊಳಗಿಸುತ್ತಾ, ರಥಚಕ್ರಗಳ ಘೋಷದಿಂದ ಭೂಮಿಯನು ಮೊಳಗಿಸುತ್ತಾ, ಸಿಂಹನಾದಗೈಯುತ್ತಾ ಅವರು ಶತ್ರುಗಳ ಮೇಲೆ ಆಕ್ರಮಣಿಸಿದರು. ಆ ಮಹಾಘೋರ ಕಲಹದ ಕೊನೆಗಾಣಬೇಕೆಂಬ ಇಚ್ಛೆಯಿಂದ ವೀರರು ಆ ಮಹಾಶಬ್ಧದಿಂದ ಸಂಪ್ರಹೃಷ್ಟರಾಗಿ ವೀರತನದಿಂದ ಸಂಗ್ರಾಮವನ್ನು

ನಡೆಸಿದರು. ಧನುಸ್ಸಿನ ಟೇಂಕಾರಗಳು, ಆನೆಗಳ ಘೀಳುಗಳು, ಹೊಡೆಯುವವರ ಮತ್ತು ಬೀಳುವವರ ನಿನಾದವು ಅತಿಯಾಗಿತ್ತು. ಬಾಣಗಳ ಶಬ್ಧಗಳು ಮತ್ತು ಶೂರರ ವಿವಿಧ ಗರ್ಜನೆಗಳ ಶಬ್ಧಗಳನ್ನು ಕೇಳಿ ಕೆಲವರು ನಡುಗಿದರು, ಅಸುನೀಗಿದರು ಮತ್ತು ಕೆಲವರು ಮೂರ್ಛೆ ಹೋದರು. ರಣದಲ್ಲಿ ಹಾಗೆ ಸಿಂಹನಾದಗೈಯುತ್ತಾ ಶಸ್ತ್ರವೃಷ್ಟಿಯನ್ನು ಸುರಿಸುತ್ತಿದ್ದ ಅನೇಕ ಸೈನಿಕರನ್ನು ಕರ್ಣನು ಬಾಣಗಳಿಂದ ಸದೆಬಡಿದನು. ಕರ್ಣನು ಶರಗಳಿಂದ ಅಶ್ವ-ಸೂತ-ಧ್ವಜಗಳೊಂದಿಗೆ ಪಾಂಚಾಲ ವೀರರ ಐದು, ನಂತರ ಹತ್ತು ಮತ್ತು ಐದು ರಥಗಳನ್ನು ಯಮಕ್ಷಯಕ್ಕೆ ಕಳುಹಿಸಿದನು. ಪಾಂಡವ ಯೋಧಮುಖ್ಯರು ರಣದಲ್ಲಿ ಶೀಘ್ರವಾಗಿ ಅಸ್ತ್ರಗಳಿಂದ ಆಕಾಶವನ್ನು ಮುಚ್ಚುತ್ತಾ ಕರ್ಣನನ್ನು ಎಲ್ಲಕಡೆಗಳಿಂದ ಸುತ್ತುವರೆದರು. ಆಗ ಕರ್ಣನು ಶರವರ್ಷಗಳಿಂದ ಅಲ್ಲೋಲಕಲ್ಲೋಲಗೊಳಿಸುತ್ತಾ ಕಮಲ-ಪಕ್ಷಿಗಳಿಂದ ಕೂಡಿದ ಸರೋವರವನ್ನು ಸಲಗವು ಹೇಗೋ ಹಾಗೆ ಶತ್ರುಸೇನೆಯನ್ನು ಹೊಕ್ಕನು. ಶತ್ರುಸೇನೆಯ ಮಧ್ಯಹೋಗಿ ರಾಧೇಯನು ಉತ್ತಮ ಧನುಸ್ಸನ್ನು ಟೇಂಕರಿಸುತ್ತಾ ನಿಶಿತ ಬಾಣಗಳಿಂದ ಶಿರಗಳನ್ನು ಕತ್ತರಿಸುತ್ತಾ ಬೀಳಿಸುತ್ತಿದ್ದನು. ಉಸಿರಿಲ್ಲದ ಶರೀರಗಳಿಂದಲೋ ಎನ್ನುವಂತೆ ಸೈನಿಕರ ಕವಚ-ಗುರಾಣಿಗಳನ್ನು ತುಂಡರಿಸುವ ಕರ್ಣನ ಎರಡನೆಯ ಬಾಣವನ್ನು ಯಾರಿಗೂ ಸಹಿಸಿಕೊಳ್ಳಲಾಗುತ್ತಿರಲಿಲ್ಲ. ಚಾವಟಿಯಿಂದ

ಕುದುರೆಯನ್ನು ಹೊಡೆಯುವ ಹಾಗೆ ಅವನು ಧನುಸ್ಸಿನ ಶಿಂಜನಿಯಿಂದ ಪ್ರಯೋಗಿಸಿದ ಶರಗಳಿಂದ ಕವಚಗಳೊಂದಿಗೆ ಶರೀರಗಳನ್ನು ಮಥಿಸಿ ಸಂಹರಿಸಿದನು. ಸಿಂಹವು ಮೃಗಗಣಗಳನ್ನು ಕೂಡಲೇ ಕೊಲ್ಲುವಂತೆ ಕರ್ಣನು ತನ್ನ ಶರಕ್ಕೆ ಗೋಚರರಾದ ಪಾಂಡು-ಸೃಂಜಯ-ಪಾಂಚಾಲರನ್ನು ಸಂಹರಿಸಿದನು. ಆಗ ಪಾಂಚಾಲಪುತ್ರರು, ದ್ರೌಪದೇಯರು, ನಕುಲ-ಸಹದೇವರು ಮತ್ತು ಯುಯುಧಾನ ಸಾತ್ಯಕಿಯರು ಒಟ್ಟಿಗೇ ಕರ್ಣನನ್ನು ಆಕ್ರಮಣಿಸಿದರು.

ಪರಿಶ್ರಮದಿಂದ ಹೋರಾಡುತ್ತಿದ್ದ ಕುರು-ಪಾಂಡವ-ಸೃಂಜಯ ಯೋಧರು ತಮ್ಮ ಪ್ರಿಯ ಜೀವಗಳ ಮೇಲಿನ ಆಸೆಯನ್ನೂ ತೊರೆದು ಪರಸ್ಪರರ ಮೇಲೆ ಎರಗಿದರು. ಸುಸನ್ನದ್ಧ ಕವಚಧಾರೀ ಶಿರಸ್ತ್ರಾಣ-ಭೂಷಣಧಾರೀ ಮಹಾರಥರು ಗರ್ಜಿಸುತ್ತಾ, ಕರೆಯುತ್ತಾ ಮತ್ತು ಕುಪ್ಪಳಿಸುತ್ತಾ ಕಾಲದಂಡಗಳಂಥಹ ಗದೆ-ಮುಸಲ-ಪರಿಘ ಮತ್ತು ಅನ್ಯ ಆಯುಧಗಳನ್ನು ಮೇಲೆತ್ತಿ ಆಕ್ರಮಣಿಸುತ್ತಿದ್ದರು. ಆಗ ಅನ್ಯೋನ್ಯರನ್ನು ಹೊಡೆದು ಕೆಳಗುರುಳಿಸಲು ಅವರು ಶರೀರರಿಂದ ರಕ್ತವನ್ನು ಕಾರುತ್ತಾ ಮೆದುಳು ಕಣ್ಣುಗಳನ್ನು ಕಳೆದುಕೊಂಡು ಯುದ್ಧದಲ್ಲಿ ಬೀಳುತ್ತಿದ್ದರು. ಶಸ್ತ್ರಗಳಿಂದ ಎಲ್ಲಾಕಡೆ ಚುಚ್ಚಲ್ಪಟ್ಟ ಕೆಲವರು ಜೀವವಿಲ್ಲದಿದ್ದರೂ ರಕ್ತದಿಂದ ತೋಯ್ದು ದಾಳಿಂಬೇಹಣ್ಣಿನಂತಹ ಹಲ್ಲುಗಳಿಂದ

ಹೊಳೆಯುತ್ತಾ ಜೀವಂತವಿದ್ದಾರೋ ಎನ್ನುವಂತೆ ನಿಂತಿದ್ದರು. ಕ್ರುದ್ಧ ಯೋಧರು ಪರಸ್ಪರರನ್ನು ಪಟ್ಟಿಶ, ಖಡ್ಗ, ಶಕ್ತಿ, ಭಿಂಡಿಪಾಲ, ನಖರ, ಪ್ರಾಸ ಮತ್ತು ತೋಮರಗಳಿಂದ ಕತ್ತರಿಸುತ್ತಿದ್ದರು, ದೂರಕ್ಕೆಸೆಯುತ್ತಿದ್ದರು, ತುಂಡು ತುಂಡು ಮಾಡುತ್ತಿದ್ದರು ಹಾಗೂ ಸಂಹರಿಸುತ್ತಿದ್ದರು. ಚಂದನವೃಕ್ಷವು ಕತ್ತರಿಸಿದಾಗ ಕೆಂಪುಬಣ್ಣದ ರಸವನ್ನು ಸುರಿಸುವಂತೆ ಅನ್ಯೋನ್ಯರಿಂದ ಕಡಿಯಲ್ಪಟ್ಟವರು ರಕ್ತವನ್ನು ಸುರಿಸುತ್ತಾ ಕೆಳಗುರುಳುತ್ತಿದ್ದರು. ಸಹಸ್ರಾರು ಸಂಖ್ಯೆಗಳಲ್ಲಿ ರಥಗಳು ರಥಗಳಿಂದಲೂ, ಆನೆಗಳು ಆನೆಗಳಿಂದಲೂ, ಮನುಷ್ಯರು ನವಶ್ರೇಷ್ಠರಿಂದಲೂ, ಕುದುರೆಗಳು ಕುದುರೆಗಳೂ ಹತಗೊಂಡು ಕೆಳಗುರುಳಿತ್ತಿದ್ದವು. ಧ್ವಜಗಳು, ಶಿರಸ್ಸುಗಳು, ಛತ್ರಗಳು, ಆನೆಯ ಸೊಂಡಿಲುಗಳು, ಮನುಷ್ಯರ ಭುಜಗಳು, ಕ್ಷುರ-ಭಲ್ಲ-ಅರ್ಧಚಂದ್ರ ಶಸ್ತ್ರಗಳು ತುಂಡಾಗಿ ಬಿದ್ದಿದ್ದವು. ಯುದ್ಧದಲ್ಲಿ ನರರು, ಆನೆಗಳು, ರಥಗಳು, ಕುದುರೆಗಳು ಸದೆಬಡಿಯುತ್ತಿದ್ದವು. ಸಹಸ್ರಾರು ಆನೆಗಳು ಶೂರರು ಕೈಗಳನ್ನು ಮತ್ತು ಸೊಂಡಿಲುಗಳನ್ನು ಅಶ್ವಾರೋಹಿಗಳಿಂದ ಕಳೆದುಕೊಂಡರು. ಸೀಳಿಹೋದ ಪರ್ವತಗಳಂತೆ ಪತಾಕೆ-ಧ್ವಜಗಳ ಸಹಿತವಾಗಿ ಪದಾತಿಗಳು, ಅನೆಗಳು ಮತ್ತು ರಥಗಳು ಕೆಳಗುರುಳಿದವು.

ಪ್ರಹರಿಸಿ ಸಂಹರಿಸುವವರು ಕೂಡ ಎಲ್ಲ ಕಡೆ ಬೀಳುತ್ತಿದ್ದರು.

ಅಶ್ವಾರೋಹಿಗಳು ತ್ವರೆಮಾಡಿ ಪದಾತಿಗಳನ್ನು ಸಂಹರಿಸುತ್ತಿದ್ದರು. ಪದಾತಿ ಸಂಘಗಳೂ ಅಶ್ವಾರೋಹಿಗಳನ್ನು ಕೊಂದು ರಣದಲ್ಲಿ ಮಲಗಿಸುತ್ತಿದ್ದರು. ಹತರಾಗಿ ಕೆಳಗೆ ಬಿದ್ದಿರುವ ಯೋಧರ ಮುಖಗಳೂ ದೇಹಗಳೂ ಹೊಸಕಿದ ಕಮಲಗಳಂತೆ ಮತ್ತು ಬಾಡಿಹೋದ ಹಾರಗಳಂತೆ ಕಾಣುತ್ತಿದ್ದವು. ಆನೆ, ಕುದುರೆ ಮತ್ತು ಮನುಷ್ಯರ ಅತ್ಯಂತ ಸುಂದರ ರೂಪಗಳು ಆ ಸಮಯದಲ್ಲಿ ಕೆಸರಿನಲ್ಲಿ ಬಿದ್ದ ವಸ್ತ್ರಗಳಂತೆ ಕಣ್ಣಿಂದ ನೋಡಲಾರದಷ್ಟು ವಿಕಾರವಾಗಿದ್ದವು.

## ಗಜಸೇನೆಯೊಂದಿಗೆ ಪಾಂಡವರ ಯುದ್ಧ

ದುರ್ಯೋಧನನು ಪ್ರಚೋದಿಸಿದ ಮಾವುತರು ತಮ್ಮ ಆನೆಗಳೊಂದಿಗೆ ಧೃಷ್ಟದ್ಯುಮ್ನನನ್ನು ಸಂಹರಿಸುವ ಇಚ್ಛೆಯಿಂದ ಪರಮಕ್ರುದ್ಧರಾಗಿ ಪಾರ್ಷತನನ್ನು ಆಕ್ರಮಣಿಸಿದರು. ಪೂರ್ವ ಮತ್ತು ದಕ್ಷಿಣ ದೇಶಗಳ ಶ್ರೇಷ್ಠ ಗಜಯೋಧರು, ಅಂಗ-ವಂಗ-ಪುಂಡ್ರ-ಮಾಗಧ-ತಾಮ್ರಲಿಪ್ತ-ಮೇಖಲ-ಕೋಶಲ-ಮದ್ರ-ದಶಾರ್ಣ-ನಿಷಧರು ಗಜಯುದ್ಧದಲ್ಲಿ ಕುಶಲರಾದ ಕಲಿಂಗರೊಂದಿಗೆ ಎಲ್ಲರೂ ಶರ-ತೋಮರ-ನಾರಾಚಗಳಿಂದ ಮಳೆಸುರಿಸುವ ಮೋಡಗಳಂತೆ ಪಾಂಚಾಲಾಚಲವನ್ನು ಯುದ್ಧದಲ್ಲಿ ತೋಯಿಸಿದರು. ಶತ್ರುಗಳನ್ನು ಮರ್ದಿಸಲು ಮಾವುತರ ಹಿಮ್ಮಡಿ-ಹೆಬ್ಬೆರಳು ಮತ್ತು ಅಂಕುಶಗಳ

ಶಿವಿತದಿಂದ ಪ್ರಚೋದಿಸಲ್ಪಟ್ಟ ಆ ಆನೆಗಳನ್ನು ಪಾರ್ಷತನು ನಾರಾಚ ಬಾಣಗಳಿಂದ ಮುಚ್ಚಿಬಿಟ್ಟನು. ಗಿರಿಗಳಂತಿದ್ದ ಆ ಆನೆಗಳಲ್ಲಿ ಪ್ರತಿಯೊಂದನ್ನೂ ಹತ್ತು-ಆರು ಮತ್ತು ಎಂಟು ಬಾಣಗಳಿಂದ ಗಾಯಗೊಳಿಸಿ ಧೃಷ್ಟದ್ಯುಮ್ನನು ಮೇಘಗಳು ಸೂರ್ಯನನ್ನು ಮುಚ್ಚುವಂತೆ ಮುಚ್ಚಿಬಿಟ್ಟನು. ಅವನನ್ನು ನೋಡಿದ ಪಾಂಡು-ಪಾಂಚಾಲರು – ನಕುಲ, ಸಹದೇವ, ದ್ರೌಪದೇಯರು, ಪ್ರಭದ್ರಕರು, ಸಾತ್ಯಕಿ, ಶಿಖಂಡಿ ಮತ್ತು ಚೇಕಿತಾನರು – ಶಿಂಜಿನಿ ಮತ್ತು ಬಾಣಗಳ ಶಬ್ಧಗಳೊಂದಿಗೆ ಸಿಂಹನಾದಗೈಯುತ್ತಾ ಆ ಆನೆಗಳ ಮೇಲೆ ನಿಶಿತಾಯುಧಗಳ ಮಳೆಗಳನ್ನೇ ಸುರಿಸಿದರು. ಮ್ಲೇಚ್ಛರಿಂದ ಕಳುಹಿಸಲ್ಪಟ್ಟ ಆ ಕುಪಿತ ಆನೆಗಳು ಮನುಷ್ಯರನ್ನು, ಕುದುರೆಗಳನ್ನು ಮತ್ತು ರಥಗಳನ್ನೂ ಕೂಡ ಸೊಂಡಿಲುಗಳಿಂದ ಮೇಲೆತ್ತಿ ಕಾಲಿನಿಂದ ತುಳಿಯುತ್ತಿದ್ದವು. ದಂತಗಳ ಅಗ್ರಭಾಗದಿಂದ ಇರಿಯುತ್ತಿದ್ದವು. ಸೊಂಡಲಿಗೆ ಸುತ್ತಿಹಾಕಿ ಎಸೆಯುತ್ತಿದ್ದವು. ಅನ್ಯರು ದಂತಗಳ ಅಗ್ರಭಾಗಕ್ಕೆ ಸಿಕ್ಕಿಹಾಕಿಕೊಂಡು ಭಯಂಕರವಾಗಿ ಕೆಳಗೆ ಬೀಳುತ್ತಿದ್ದರು. ಆಗ ಸಾತ್ಯಕಿಯು ಎದುರಿದ್ದ ವಂಗದೇಶದ ಆನೆಯ ಮರ್ಮಸ್ಥಾನಗಳನ್ನು ಉಗ್ರವೇಗದ ನಾರಾಚಗಳಿಂದ ಸೀಳಿ ಕೆಳಕ್ಕುರುಳಿಸಿದನು. ಆ ಆನೆಯನ್ನು ಬಿಟ್ಟು ಕೆಳಗೆ ಹಾರುತ್ತಿದ್ದ ವಂಗರಾಜನನ್ನು ಸಾತ್ಯಕಿಯು ನಾರಾಚದಿಂದ ಪ್ರಹರಿಸಿ ನೆಲಕ್ಕೆ

ಕೆಡವಿದನು. ಚಲಿಸುವ ಪರ್ವತದಂತೆ ತನ್ನ ಮೇಲೆ ಬೀಳುತ್ತಿದ್ದ ಪುಂಡ್ರನ ಆನೆಯನ್ನು ಸಹದೇವನು ಮೂರು ನಾರಾಚಗಳಿಂದ ಗಾಯಗೊಳಿಸಿದನು. ಪುನಃ ಸಹದೇವನು ಆ ಆನೆಯನ್ನು ಪತಾಕೆ, ಮಾವುತ, ಕವಚ, ಧ್ವಜ ಮತ್ತು ಪ್ರಾಣಗಳಿಂದ ವಿಹೀನವನ್ನಾಗಿಸಿ ಅಂಗನ ಕಡೆ ಧಾವಿಸಿದನು. ನಕುಲನಾದರೋ ಸಹದೇವನನ್ನು ತಡೆದು ತಾನೇ ಮೂರು ಯಮದಂಡ ಸದೃಶ ನಾರಾಚಗಳಿಂದ ಅಂಗನನ್ನು ಪ್ರಹರಿಸಿ, ಅವನ ಆನೆಯನ್ನು ನೂರು ಬಾಣಗಳಿಂದ ಹೊಡೆದನು. ಆಗ ಅಂಗನು ಸೂರ್ಯನ ಕಿರಣಗಳಿಗೆ ಸಮತೇಜಸ್ಸುಳ್ಳ ಎಂಟುನೂರು ತೋಮರಗಳನ್ನು ನಕುಲನ ಮೇಲೆ ಪ್ರಯೋಗಿಸಲು, ನಕುಲನು ಅವು ಒಂದೊಂದನ್ನೇ ಮೂರು ಮೂರು ಭಾಗಗಳಾಗಿ ತುಂಡರಿಸಿದನು. ಕೂಡಲೇ ಪಾಂಡವ ನಕುಲನು ಅವನ ಶಿರವನ್ನು ಅರ್ಧಚಂದ್ರದಿಂದ ಕತ್ತರಿಸಲು ಆನೆಯೊಂದಿಗೆ ಆ ಮ್ಲೇಚ್ಛ ಅಂಗನು ಹತನಾಗಿ ಕೆಳಕ್ಕುರಿಳಿದನು. ಹಸ್ತಿಶಿಕ್ಷಾವಿಶಾರದ ಅಂಗನು ಹತನಾಗಲು ಅಂಗದೇಶದ ಸೈನಿಕರು ಕ್ರುದ್ಧರಾಗಿ ಮಹಾಮಾತ್ರದ ಆನೆಗಳ ಸಂಕುಲಗಳೊಂದಿಗೆ ನಕುಲನನ್ನು ಆಕ್ರಮಣಿಸಿದರು.

ಚಲಿಸುತ್ತಿರುವ ಪತಾಕೆಗಳಿಂದ ಮತ್ತು ಬಂಗಾರದ ಹಗ್ಗ ಮತ್ತು ಕವಚಗಳಿಂದ ಕೂಡಿ ಶತ್ರುಗಳನ್ನು ಧ್ವಂಸಮಾಡಲು

ತ್ವರೆಮಾಡಿಬರುತ್ತಿದ್ದ ಆ ಪ್ರಮುಖ ಆನೆಗಳು ಉರಿಯುತ್ತಿರುವ ಪರ್ವತಗಳಂತೆ ತೋರುತ್ತಿದ್ದವು. ನಕುಲನನ್ನು ಕೊಲ್ಲಲೋಸುಗ ಆ ಆನೆಗಳೊಂದಿಗೆ ಮೇಕಲೋತ್ಕಲ-ಕಲಿಂದ-ನಿಷಧ-ತಾಮ್ರಲಿಪ್ತ ಯೋಧರು ಶರ-ತೋಮರಗಳ ಮಳೆಯನ್ನೇ ಸುರಿಸುತ್ತಾ ಆಕ್ರಮಣಿಸಿದರು. ಮೋಡಗಳಿಂದ ದಿವಾಕರನು ಹೇಗೋ ಹಾಗೆ ಅವುಗಳಿಂದ ಅಚ್ಛಾದಿತನಾಗಿದ್ದ ನಕುಲನನ್ನು ನೋಡಿ ಪಾಂಡವ-ಪಾಂಚಾಲ-ಸೋಮಕ ಯೋಧರು ಕುಪಿತರಾಗಿ ಎದುರಾಳಿಗಳ ಮೇಲೆ ಎರಗಿದರು. ಆಗ ಅಲ್ಲಿ ಸಹಸ್ರಾರು ಶರ-ತೋಮರಗಳ ಮಳೆಸುರಿಸುವ ರಥಿಗಳ ಮತ್ತು ಗಜಾರೋಢರ ನಡುವೆ ಯುದ್ಧವು ನಡೆಯಿತು. ನಾರಾಚಗಳಿಂದ ಆನೆಗಳ ಕುಂಭಗಳು, ವಿವಿಧ ಕವಚಗಳು ಒಡೆದುಹೋದವು. ದಂತಗಳೂ ಆಭರಣಗಳೂ ತುಂಡಾದವು. ಅವುಗಳಲ್ಲಿ ಎಂಟು ಮಹಾಗಜಗಳನ್ನು ಅರವತ್ತೆಂಟು ಸುತೇಜಸ ಬಾಣಗಳಿಂದ ಸಹದೇವನು ಸಂಹರಿಸಲು ಅವು ಮಾವುತರೊಡನೆ ಕೆಳಕ್ಕುರುಳಿದವು. ನಕುಲನೂ ಕೂಡ ತನ್ನ ಉತ್ತಮ ಧನುಸ್ಸನ್ನು ಬಗ್ಗಿಸಿ ವೇಗವಾಗಿ ಚಲಿಸುವ ನಾರಾಚಗಳಿಂದ ಅನೇಕ ಆನೆಗಳನ್ನು ಸಂಹರಿಸಿದನು. ಅನಂತರ ಧೃಷ್ಟದ್ಯುಮ್ನ-ಸಾತ್ಯಕಿಯರು, ದ್ರೌಪದೇಯರು, ಪ್ರಭದ್ರಕರು ಮತ್ತು ಶಿಖಂಡಿಯು ಮಹಾಗಜಗಳನ್ನು ಶರವೃಷ್ಟಿಗಳಿಂದ ಅಭಿಷೇಕಿಸಿದರು. ಶತ್ರುಗಳ ಆ ಆನೆಗಳೆಂಬ

ಪರ್ವತಗಳು ಪಾಂಡುಯೋಧರೆಂಬ ಮೇಘಗಳಿಂದ ಸುತ್ತುವರೆಯಲ್ಪಟ್ಟು, ಬಾಣಗಳ ಮಳೆಗಳಿಂದ ಹತಗೊಂಡು ವಜ್ರವೃಷ್ಟಿಗೆ ಗುರಿಯಾದ ಗಿರಿಗಳಂತೆ ಕೆಳಕ್ಕುರುಳಿದವು. ಹೀಗೆ ಕೌರವ ಸೇನೆಯ ಆನೆಗಳನ್ನು ಸಂಹರಿಸಿದ ಆ ಪಾಂಡುನರಕುಂಜರರು ದಡವೊಡೆದ ನದಿಯಂತೆ ಹರಿದು ಓಡಿ ಹೋಗುತ್ತಿದ್ದ ಶತ್ರು ಸೇನೆಗಳನ್ನು ನೋಡಿದರು. ಪಾಂಡುಪುತ್ರನ ಸೈನಿಕರು ಆ ಸೇನೆಯನ್ನು ನೋಡಿ ಸಂಪೂರ್ಣವಾಗಿ ಅದನ್ನು ಅಲ್ಲೋಲಕಲ್ಲೋಲಗೊಳಿಸಿ ಪುನಃ ಕರ್ಣನನ್ನೇ ಆಕ್ರಮಿಸಿದರು.

## ಸಹದೇವ-ದುಃಶಾಸನರ ಯುದ್ಧ

ಕ್ರುದ್ಧನಾಗಿ ಕೌರವ ವಾಹಿನಿಯನ್ನು ಸುಡುತ್ತಿದ್ದ ಸಹದೇವನನ್ನು ಭ್ರಾತಾ ದುಃಶಾಸನನು ಎದುರಿಸಿದನು. ಮಹಾಯುದ್ಧದಲ್ಲಿ ಅವರಿಬ್ಬರೂ ತೊಡಗಿರುವುದನ್ನು ನೋಡಿ ಅಲ್ಲಿದ್ದ ನರಾಧಿಪರು ತಮ್ಮ ಅಂಗವಸ್ತ್ರಗಳನ್ನು ಮೇಲಕ್ಕೆ ಹಾರಿಸಿ ಸಿಂಹನಾದಗೈದರು. ಆಗ ದುಃಶಾಸನನು ಕ್ರುದ್ಧನಾಗಿ ಪಾಂಡುಪುತ್ರನ ವಕ್ಷಸ್ಥಳವನ್ನು ಮೂರು ಬಾಣಗಳಿಂದ ಹೊಡೆದನು. ಸಹದೇವನು ಆಗ ನಾರಾಚದಿಂದ ದುಃಷಾಸನನನ್ನು ಹೊಡೆದು ಪುನಃ ಎಪ್ಪತ್ತರಿಂದ ಅವನನ್ನೂ ಮತ್ತು ಮೂರರಿಂದ ಅವನ ಸಾರಥಿಯನ್ನೂ ಹೊಡೆದನು. ಆಗ ದುಃಶಾಸನನು

ಸಹದೇವನ ಚಾಪವನ್ನು ಕತ್ತರಿಸಿ ಅವನ ಬಾಹು-ಎದೆಗಳಿಗೆ ಎಪ್ಪತ್ತುಮೂರು ಬಾಣಗಳಿಂದ ಹೊಡೆದನು. ಆಗ ಯೋಧಶ್ರೇಷ್ಠ ಸಹದೇವನು ಕ್ರುದ್ಧನಾಗಿ ಖಡ್ಗವನ್ನು ಹಿಡಿದು ತಿರುಗಿಸಿ ದುಃಶಾಸನನ ಕಡೆ ಎಸೆದನು. ಆ ಮಹಾಖಡ್ಗವು ಅವನ ಧನುರ್ಬಾಣ-ಶಿಂಜಿನಿಗಳನ್ನು ಕತ್ತರಿಸಿ ಅಂಬರದಿಂದ ಚ್ಯುತಗೊಂಡು ಬೀಳುವ ಸರ್ಪದಂತೆ ಭೂಮಿಯ ಮೇಲೆ ಬಿದ್ದಿತು. ಅನಂತರ ಸಹದೇವನು ಇನ್ನೊಂದು ಧನುಸ್ಸನ್ನೆತ್ತಿಕೊಂಡು ದುಃಶಾಸನನ ಮೇಲೆ ಅಂತಕರ ಬಾಣವನ್ನು ಪ್ರಯೋಗಿಸಿದನು. ಮೇಲೆ ಬೀಳುತ್ತಿದ್ದ ಆ ಯಮದಂಡದ ಕಾಂತಿಯನ್ನು ಹೊಂದಿದ್ದ ವಿಶಿಖವನ್ನು ಕೌರವನು ಹರಿತ ಖಡ್ಗದಿಂದ ಎರಡು ಭಾಗಗಳಾಗಿ ಕತ್ತರಿಸಿದನು. ತನ್ನ ಮೇಲೆ ಬೀಳಲಿದ್ದ ಆ ಖಡ್ಗವನ್ನು ಸಮರದಲ್ಲಿ ಸಹದೇವನು ನಸುನಗುತ್ತಲೇ ನಿಶಿತ ಶರಗಳಿಂದ ಕೂಡಲೇ ಕತ್ತರಿಸಿ ಕೆಡವಿದನು. ಆಗ ದುಃಶಾಸನನು ಬೇಗನೇ ಸಹದೇವನ ರಥದ ಮೇಲೆ ಅರವತ್ನಾಲ್ಕು ಬಾಣಗಳನ್ನು ಎರಚಿದನು. ವೇಗದಿಂದ ಬೀಳುತ್ತಿದ್ದ ಆ ಅನೇಕ ಶರಗಳಲ್ಲಿ ಒಂದೊಂದನ್ನೂ ಸಹದೇವನು ಐದೈದು ಬಾಣಗಳಿಂದ ಕತ್ತರಿಸಿದನು. ದುಃಶಾಸನನು ಕಳುಹಿಸಿದ ಮಹಾಬಾಣಗಳೆಲ್ಲವನ್ನೂ ತಡೆದು ಮಾದ್ರೀಪುತ್ರನು ಅವನ ಮೇಲೆ ಅನೇಕ ಬಾಣಗಳನ್ನು ಸುರಿಸಿದನು. ಆಗ ಸಹದೇವನು ಕ್ರುದ್ಧನಾಗಿ ಮೃತ್ಯುಕಾಲಾಂತಕನಂತಿರುವ ಘೋರ

ಶರವನ್ನು ತೆಗೆದುಕೊಂಡು ಚಾಪವನ್ನು ಬಲದಿಂದ ಎಳೆದು ದುಃಶಾಸನನ ಮೇಲೆ ಪ್ರಯೋಗಿಸಿದನು. ಅದು ವೇಗದಿಂದ ಅವನ ಮಹಾ ಕವಚವನ್ನು ಭೇದಿಸಿ ಸರ್ಪವು ಬಿಲವನ್ನು ಹೊಗುವಂತೆ ಧರಣಿಯನ್ನು ಬೇದಿಸಿ ಹೊಕ್ಕಿತು. ಆಗ ದುಃಶಾಸನನು ಮೂರ್ಛಿತನಾದನು. ಅವನು ಮೂರ್ಛಿತನಾದುದನ್ನು ನೋಡಿ ಅವನ ಸಾರಥಿಯು ನಿಶಿತಶರಗಳಿಂದ ಪ್ರಹರಿಸಲ್ಪಟ್ಟು ಭಯಭೀತನಾಗಿ ತ್ವರೆಮಾಡಿ ರಥವನ್ನು ದೂರಕ್ಕೊಯ್ದುಕೊಂಡು ಹೋದನು.

ರಣದಲ್ಲಿ ದುರ್ಯೋಧನನ ಬಲವನ್ನು ಪರಾಜಯಗೊಳಿಸಿ ಪ್ರಹೃಷ್ಟನಾದ ಪಾಂಡವನು ಎಲ್ಲಕಡೆಗಳಿಂದಲೂ ಸೈನಿಕರನ್ನು ಸದೆಬಡಿದನು. ರೋಷಗೊಂಡ ಮನುಷ್ಯನು ಕೆಂಜಿಗಗಳಿರುವ ಎಲೆಗಳ ಗೂಡನ್ನು ನೆಲಕ್ಕೆ ತಿಕ್ಕಿ ಹಾಕುವಂತೆ ಸಹದೇವನು ಕೌರವೀ ಸೇನೆಯನ್ನು ನಾಶಗೊಳಿಸಿದನು.

## ನಕುಲ-ಕರ್ಣರ ಯುದ್ಧ; ಕುಂತಿಗೆ ಕೊಟ್ಟ ಮಾತನ್ನು ಸ್ಮರಿಸಿ ಕರ್ಣನು ನಕುಲನನ್ನು ವಧಿಸದೆಯೇ ಅಪಮಾನಿಸಿದುದು

ಯುದ್ಧದಲ್ಲಿ ರಭಸವಾಗಿ ಸೇನೆಗಳನ್ನು ಸೀಳುತ್ತಿದ್ದ ನಕುಲನನ್ನು ವೈಕರ್ತನ ಕರ್ಣನು ತಡೆದನು. ಆಗ ನಕುಲನು ಕರ್ಣನಿಗೆ ನಗುತ್ತಾ ಹೇಳಿದನು:

“ಬಹಳಕಾಲದ ನಂತರ ನಾನು ದೇವತೆಗಳ ಸೌಮ್ಯದೃಷ್ಟಿಗೆ ಪಾತ್ರನಾಗಿದ್ದೇನೆ! ರಣದಲ್ಲಿ ಪಾಪಿ ನಿನ್ನನ್ನು ನೋಡುತ್ತಿದ್ದೇನಲ್ಲ! ಏಕೆಂದರೆ ನೀನೇ ಈ ವೈರ, ಕಲಹ ಮತ್ತು ಅನರ್ಥಗಳಿಗೆ ಮೂಲ ಕಾರಣನು. ನಿನ್ನ ದೋಷಗಳಿಂದಲೇ ಕುರುಗಳು ಪರಸ್ಪರರೊಡನೆ ಹೊಡೆದಾಡಿ ಕ್ಷೀಣರಾಗುತ್ತಿದ್ದಾರೆ! ಇಂದು ನಿನ್ನನ್ನು ಸಮರದಲ್ಲಿ ಸಂಹರಿಸಿ ವಿಜ್ವರನೂ ಕೃತಕೃತ್ಯನೂ ಆಗುತ್ತೇನೆ!”

ಹೀಗೆ ಹೇಳಿದ ನಕುಲನಿಗೆ ಸೂತನಂದನನು ಉತ್ತರಿಸಿದನು:

“ನೀನು ಹೇಳಿದುದು ರಾಜಪುತ್ರನಿಗೂ ಅದರನ್ನೂ ವಿಶೇಷವಾಗಿ ನಿನ್ನಂತ ಧನ್ವಿಗೆ ತಕ್ಕುದಾಗಿದೆ. ಬಾಲಕನೇ! ಪ್ರಹರಿಸು! ರಣದಲ್ಲಿ ನಿನ್ನ ಪೌರುಷವನ್ನು ನಾನು ನೋಡುತ್ತೇನೆ! ರಣದಲ್ಲಿ ಕರ್ಮಗಳನ್ನೆಸಗಿ ನಂತರ ಕೊಚ್ಚಿಕೊಳ್ಳುವಿಯಂತೆ! ಶೂರರಾದವರು ಏನನ್ನೂ ಮಾತನಾಡದೇ ಸಮರದಲ್ಲಿ ಶಕ್ತಿಯನ್ನುಪಯೋಗಿಸಿ ಯುದ್ಧಮಾಡುತ್ತಾರೆ. ನೀನೂ ಕೂಡ ನನ್ನೊಡನೆ ಶಕ್ತಿಯನ್ನು ಬಳಸಿ ಯುದ್ಧಮಾಡು. ಇಂದು ನಿನ್ನ ದರ್ಪವನ್ನು ನಾಶಗೊಳಿಸುತ್ತೇನೆ!”

ಹೀಗೆ ಹೇಳಿ ತಕ್ಷಣವೇ ಸೂತಜನು ಪಾಂಡುಪುತ್ರನನ್ನು ಎಪ್ಪತ್ತು ಮೂರು ಶಿಲೀಮುಖಗಳಿಂದ ಗಾಯಗೊಳಿಸಿದನು. ಸೂತಪುತ್ರನಿಂದ ಗಾಯಗೊಂಡ ನಕುಲನಾದರೋ ಸರ್ಪವಿಷೋಪಮ ಎಂಭತ್ತು ಬಾಣಗಳಿಂದ ಸೂತಪುತ್ರನನ್ನು ಹೊಡೆದನು. ಆಗ ಕರ್ಣನು ಸ್ವರ್ಣಪುಂಖ ಶಿಲಾಶಿತಗಳಿಂದ ನಕುಲನ ಧನುಸ್ಸನ್ನು ಕತ್ತರಿಸಿ ಮೂವತ್ತು ಬಾಣಗಳಿಂದ ಪಾಂಡವನನ್ನು ಹೊಡೆದನು. ವಿಷದ ಹಲ್ಲುಗಳುಳ್ಳ ಸರ್ಪಗಳು ಭೂಮಿಯನ್ನು ಕೊರೆದು ನೀರನ್ನು ಕುಡಿಯುವಂತೆ ಆ ಬಾಣಗಳು ನಕುಲನ ಕವಚವನ್ನು ಭೇದಿಸಿ ಶರೀರವನ್ನು ಹೊಕ್ಕು ರಕ್ತವನ್ನು ಕುಡಿದವು. ಕೂಡಲೇ ನಕುಲನು ಇನ್ನೊಂದು ಬಂಗಾರದ ಹಿಂಭಾಗವುಳ್ಳ ದುರಾಸದ ಧನುಸ್ಸನ್ನು ಎತ್ತಿಕೊಂಡು ಕರ್ಣನನ್ನು ಇಪ್ಪತ್ತು ಬಾಣಗಳಿಂದಲೂ ಅವನ ಸಾರಥಿಯನ್ನು ಮೂರರಿಂದಲೂ ಹೊಡೆದನು. ಆಗ ನಕುಲನು ಕ್ರುದ್ಧನಾಗಿ ತೀಕ್ಷ್ಣ ಕ್ಷುರಪ್ರದಿಂದ ಕರ್ಣನ ಧನುಸ್ಸನ್ನು ಕತ್ತರಿಸಿದನು. ಕೂಡಲೇ ನಗುತ್ತಾ ಆ ವೀರನು ಧನುಸ್ಸು ತುಂಡಾಗಿದ್ದ ಸರ್ವಲೋಕಮಹಾರಥ ಕರ್ಣನನ್ನು ಮುನ್ನೂರು ಸಾಯಕಗಳಿಂದ ಪ್ರಹರಿಸಿದನು. ಪಾಂಡುಪುತ್ರನು ಕರ್ಣನನ್ನು ಹೀಗೆ ಗಾಯಗೊಳಿಸಿದುದನ್ನು ನೋಡಿ ದೇವತೆಗಳೊಂದಿಗೆ ರಥಿಗಳೆಲ್ಲರೂ ಪರಮ ವಿಸ್ಮಿತರಾದರು. ಕೂಡಲೇ ಕರ್ಣನು ಇನ್ನೊಂದು ಧನುಸ್ಸನ್ನು

ಎತ್ತಿಕೊಂಡು ಐದು ಬಾಣಗಳಿಂದ ನಕುಲನ ಕೊರಳಿಗೆ ಹೊಡೆದನು. ಆದಿತ್ಯನು ತನ್ನ ರಶ್ಮಿಗಳಿಂದ ಭುವನಗಳನ್ನು ಪ್ರಭೆಸೂಸಿ ಬೆಳಗುವಂತೆ ಮಾದ್ರೀಪುತ್ರನು ಕೊರಳಿಗೆ ನಾಟಿದ ಆ ಬಾಣಗಳಿಂದ ಪ್ರಕಾಶಿಸಿದನು. ಆಗ ನಕುಲನು ಕರ್ಣನನ್ನು ಏಳು ಆಯಸಗಳಿಂದ ಪ್ರಹರಿಸಿ ಅವನ ಧನುಸ್ಸಿನ ಅಗ್ರಭಾಗವನ್ನು ಪುನಃ ಕತ್ತರಿಸಿದನು. ಕರ್ಣನಾದರೋ ಸಮರದಲ್ಲಿ ಇನ್ನೂ ವೇಗವತ್ತರವಾದ ಬೇರೊಂದು ಕಾರ್ಮುಕವನ್ನು ತೆಗೆದುಕೊಂಡು ನಕುಲನ ಸುತ್ತಲೂ ಬಾಣಗಳನ್ನು ಸುರಿಸಿ ದಿಕ್ಕುಗಳನ್ನು ಮುಚ್ಚಿದನು. ಕರ್ಣನ ಚಾಪದಿಂದ ಹೊರಟ ಶರಗಳಿಂದ ಮುಸುಕಲ್ಪಟ್ಟ ಮಹಾರಥ ನಕುಲನು ಶೀಘ್ರವಾಗಿ ಆ ಶರಗಳನ್ನು ಶರಗಳಿಂದಲೇ ತುಂಡರಿಸಿದನು. ಆಕಾಶದಲ್ಲಿ ಹಾರಾಡುತ್ತಿರುವ ಮಿಣುಕುಹುಳುಗಳ ಜಾಲಗಳಂತೆ ಹಾರಾಡುತ್ತಿದ್ದ ಬಾಣಗಳಿಂದ ತುಂಬಿದ ಜಾಲಗಳುಳ್ಳಂತೆ ಆಕಾಶವು ಕಂಡಿತು. ಅವರಿಬ್ಬರ ಬಿಲ್ಲುಗಳಿಂದ ಚ್ಯುತವಾದ ನೂರಾರು ಬಾಣಗಳು ಮಿಡಿತೆಹುಳುಗಳ ಸಮೂಹಗಳು ಆಕಾಶವನ್ನು ಮುಚ್ಚಿವವೋ ಎನ್ನುವಂತೆ ತೋರುತ್ತಿದ್ದವು.

ಬಾರಿಬಾರಿಗೂ ಬಿಲ್ಲುಗಳಿಂದ ಸಾಲುಸಾಲಾಗಿ ಹೊರಡುತ್ತಿದ್ದ ಸುವರ್ಣಮಯ ಬಾಣಗಳು ಸಾಲುಸಾಲಾಗಿ ಹಾರುತ್ತಿರುವ

ಕ್ರೌಂಚಪಕ್ಷಿಗಳಂತೆ ಕಾಣುತ್ತಿದ್ದವು. ಆಕಾಶವು ಬಾಣಜಾಲಗಳಿಂದ ಮುಚ್ಚಿಹೋಗಿ ದಿವಾಕರನು ಕಾಣದಂತಾಗಲು, ಆಕಾಶದಿಂದ ಭೂಮಿಯ ಮೇಲೆ ಏನೊಂದೂ ಬೀಳುತ್ತಿರಲಿಲ್ಲ. ಶರಸಂಘಗಳಿಂದ ಸುತ್ತಲಿನ ಎಲ್ಲ ಮಾರ್ಗಗಳೂ ತಡೆಯಲ್ಪಟ್ಟಿರಲು ಆ ಇಬ್ಬರು ಮಹಾಭಾಗರೂ ಉದಯಿಸುತ್ತಿರುವ ಬಾಲಸೂರ್ಯಗಳಂತೆ ವಿರಾಜಿಸಿದರು. ಕರ್ಣನ ಚಾಪದಿಂದ ಚ್ಯುತಗೊಂಡ ಬಾಣಗಳಿಂದ ಪ್ರಹರಿಸಲ್ಪಟ್ಟ ಸೋಮಕರು ಶರಾರ್ದಿತರಾಗಿ ವೇದನೆಯಿಂದ ಆರ್ತರಾಗಿ ನರಳುತ್ತಿದ್ದರು. ಹಾಗೆಯೇ ನಕುಲನ ಬಾಣಗಳಿಂದ ವಧಿಸಲ್ಪಡುತ್ತಿದ್ದ ಕೌರವ ಸೇನೆಯು ಭಿರುಗಾಳಿಗೆ ಸಿಲುಕಿದ ಮೋಡಗಳಂತೆ ದಿಕ್ಕಾಪಾಲಾಗಿ ಚದುರಿಹೋಯಿತು. ಅವರಿಬ್ಬರ ದಿವ್ಯ ಮಹಾಶರಗಳಿಂದ ಪೀಡಿಸಲ್ಪಟ್ಟ ಎರಡೂ ಸೇನೆಗಳೂ ಬಾಣಗಳು ಬೀಳುವ ಪ್ರದೇಶವನ್ನು ಬಿಟ್ಟು ದೂರ ನಿಂತು ಯುದ್ಧವನ್ನು ನೋಡತೊಡಗಿದವು. ಜನರು ಕರ್ಣ ಮತ್ತು ಪಾಂಡವನ ಶರಗಳಿಂದ ದೂರನಿಲ್ಲಲಾಗಿ ಆ ಇಬ್ಬರು ಮಹಾತ್ಮರೂ ಪರಸ್ಪರರನ್ನು ಶರವೃಷ್ಟಿಗಳಿಂದ ಮುಚ್ಚಿದರು. ರಣಮೂರ್ಧನಿಯಲ್ಲಿ ತಮ್ಮ ತಮ್ಮ ದಿವ್ಯಾಸ್ತ್ರಗಳನ್ನು ಪ್ರದರ್ಶಿಸುತ್ತಾ ಪರಸ್ಪರರನ್ನು ವಧಿಸಲಿಚ್ಛಿಸಿ ಪರಸ್ಪರರನ್ನು ಬಾಣಗಳಿಂದ ಆಚ್ಛಾದಿಸಿದರು. ನಕುಲನು ಪ್ರಯೋಗಿಸಿದ ರಣಹದ್ದು ಮತ್ತು ನವಿಲುಗಳ ಗರಿಗಳಿಂದ ಕೂಡಿದ

ಬಾಣಗಳು ಕರ್ಣನನ್ನು ಆಚ್ಛಾದಿಸಿ ಆಕಾಶದಲ್ಲಿಯೇ ನಿಂತುಬಿಡುತ್ತಿದ್ದವು.

ಮಳೆಗಾಲದ ಪ್ರಾರಂಭದಲ್ಲಿ ಸೂರ್ಯಚಂದ್ರರು ಮೋಡಗಳಿಂದ ಮುಸುಕಿಕೊಂಡ ಹಾಗೆ ಶರಗಳಿಂದಲೇ ನಿರ್ಮಿತ ಮನೆಗಳನ್ನು ಪ್ರವೇಶಿಸಿದ ಅವರಿಬ್ಬರು ಯಾರಿಗೂ ಕಾಣುತ್ತಿರಲಿಲ್ಲ. ಆಗ ರಣದಲ್ಲಿ ಕರ್ಣನು ಕ್ರುದ್ಧನಾಗಿ ಮುಖವನ್ನು ಘೋರತರವಾಗಿಸಿಕೊಂಡು ಪಾಂಡವನನ್ನು ಎಲ್ಲಕಡೆಗಳಿಂದ ಶರವೃಷ್ಟಿಗಳಿಂದ ಮುಚ್ಚಿಬಿಟ್ಟನು. ಮೋಡಗಳಿಂದ ಮುಸುಕಲ್ಪಟ್ಟ ಭಾಸ್ಕರನು ಹೇಗೋ ಹಾಗೆ ಸಮರದಲ್ಲಿ ಸೂತಪುತ್ರನಿಂದ ಮುಸುಕಲ್ಪಟ್ಟ ಪಾಂಡವನು ಸ್ವಲ್ಪವೂ ವ್ಯಥೆಪಡಲಿಲ್ಲ. ಆಧಿರಥಿಯು ಗಹಗಹಿಸಿ ನಗುತ್ತಾ ನೂರಾರು ಸಾವಿರಾರು ಶರಜಾಲಗಳನ್ನು ಸಮರದಲ್ಲಿ ಪ್ರಯೋಗಿಸತೊಡಗಿದನು. ಆ ಮಹಾತ್ಮನ ಬಾಣಗಳಿಂದ ಎಲ್ಲವು ಅಂಧಕಾರಮಯವಾಯಿತು. ಸತತವಾಗಿ ಬೀಳುತ್ತಿದ್ದ ಆ ಉತ್ತಮ ಶರಗಳಿಂದಾಗಿ ಮೋಡಗಳೇ ಕವಿದಂತೆ ತೋರುತ್ತಿತ್ತು. ಆಗ ಕರ್ಣನು ನಸುನಗುತ್ತಾ ನಕುಲನ ಧನುಸ್ಸನ್ನು ಕತ್ತರಿಸಿ ರಥಪೀಠದಿಂದ ಅವನ ಸಾರಥಿಯನ್ನೂ ಕೆಡವಿದನು. ಆಗ ಅವನು ನಾಲ್ಕು ನಿಶಿತ ಶರಗಳಿಂದ ನಕುಲನ ನಾಲ್ಕು ಕುದುರೆಗಳನ್ನೂ ಬೇಗನೇ ಯಮಸದನಕ್ಕೆ ಕಳುಹಿಸಿದನು. ಕೊನೆಗೆ

ನಕುಲನ ರಥವನ್ನು ತಕ್ಷಣವೇ ಶರಗಳಿಂದ ಹೊಡೆದು ಎಳ್ಳಿನ ಕಾಳುಗಳಷ್ಟು ನುಚ್ಚುನೂರು ಮಾಡಿಬಿಟ್ಟನು. ಅವನ ಪತಾಕೆಯನ್ನೂ, ಇಬ್ಬರು ಚಕ್ರರಕ್ಷಕರನ್ನೂ, ಧ್ವಜ, ಖಡ್ಗ, ಶತಚಂದ್ರಗಳಿರುವ ಅವನ ಕವಚ ಮತ್ತು ಸರ್ವ ಉಪಕರಣಗಳನ್ನು ಕೂಡ ಧ್ವಂಸಮಾಡಿದನು. ಕುದುರೆ, ರಥ ಮತ್ತು ಕವಚಗಳನ್ನು ಕಳೆದುಕೊಂಡ ನಕುಲನು ಕೂಡಲೆ ರಥದಿಂದ ಇಳಿದು ಪರಿಘವನ್ನು ಹಿಡಿದು ನಿಂತನು. ಅವನು ಹಿಡಿದಿದ್ದ ಆ ಮಹಾಘೋರ ಪರಿಘವನ್ನು ಸೂತಜನು ಸಾಯಕಗಳಿಂದ ನೂರಾರು ಸಹಸ್ರಾರು ತುಂಡುಗಳನ್ನಾಗಿಸಿ ನಾಶಗೊಳಿಸಿದನು. ನಿರಾಯುಧನಾದ ನಕುಲನನ್ನು ನೋಡಿ ಕರ್ಣನು ಸನ್ನತಪರ್ವ ಶರಗಳಿಂದ ಬಹಳವಾಗಿ ಪ್ರಹರಿಸಿದನು. ಆದರೂ ಅವನು ಅವನನ್ನು ಹೆಚ್ಚಾಗಿ ಪೀಡಿಸಲಿಲ್ಲ.

ಸಮರದಲ್ಲಿ ತನಗಿಂತ ಹೆಚ್ಚು ಕೃತಾಸ್ತ್ರನೂ ಬಲಶಾಲಿಯೂ ಆದ ಕರ್ಣನಿಂದ ಪ್ರಹರಿಸಲ್ಪಟ್ಟ ನಕುಲನು ವ್ಯಾಕುಲನಾಗಿ ಕೂಡಲೇ ಪಲಾಯನಗೈದನು. ಅವನನ್ನು ಬೆನ್ನಟ್ಟಿ ಹೋಗಿ ರಾಧೇಯನು ಪುನಃ ಪುನಃ ನಗುತ್ತಾ ಮೌರ್ವಿಯಿಂದ ಕೂಡಿದ್ದ ಧನುಸ್ಸನ್ನೇ ನಕುಲನ ಕೊರಳಿಗೆ ಹಾಕಿದನು. ಕುತ್ತಿಗೆಯಲ್ಲಿ ಕರ್ಣನ ಮಹಾಧನುಸ್ಸನ್ನು ಧರಿಸಿದ್ದ ನಕುಲನು ಆಕಾಶದಲ್ಲಿ ಪರಿಧಿಯ ಪ್ರಭೆಯಿಂದ ಕೂಡಿದ ಚಂದ್ರನಂತೆಯೂ ಕಾಮನಬಿಲ್ಲಿನಿಂದ ಶೋಭಿತವಾದ

ಮೇಘದಂತೆಯೂ ಕಾಣಿಸಿದನು. ಆಗ ಅವನಿಗೆ ಕರ್ಣನು ಹೇಳಿದನು:

> “ವ್ಯರ್ಥವಾಗಿ ಕೊಚ್ಚಿಕೊಂಡೆಯಲ್ಲವೇ? ನನ್ನಿಂದ ಪುನಃ ಪುನಃ ಪ್ರಹೃತನಾಗುತ್ತಿರುವ ನೀನು ಈಗಲೂ ಹೃಷ್ಟನಾಗಿರುವೆಯಾ ಹೇಳು! ಪಾಂಡವ! ನಿನಗಿಂತಲೂ ಹಿರಿಯರೊಂದಿಗೆ ಮತ್ತು ಬಲವಂತರೊಂದಿಗೆ ಯುದ್ಧಮಾಡಬೇಡ! ನಿನ್ನಂತೆಯೇ ಇರುವವರೊಡನೆ ಮಾತ್ರ ಯುದ್ಧಮಾಡು. ನಾಚಿಕೊಳ್ಳಬೇಡ! ಮನೆಗಾದರೂ ಹೋಗು ಅಥವಾ ಕೃಷ್ಣ-ಪಲ್ಗುನರಿರುವಲ್ಲಿಗಾದರೂ ಹೋಗು!”

ಹೀಗೆ ಹೇಳಿ ಕರ್ಣನು ಅವನನ್ನು ಬಿಟ್ಟುಬಿಟ್ಟನು. ವಧಿಸಲು ಅವಕಾಶವಿದ್ದರೂ ಸೂತನಂದನನು ಅವನನ್ನು ವಧಿಸಲಿಲ್ಲ. ಕುಂತಿಗೆ ಕೊಟ್ಟ ಮಾತನ್ನು ಸ್ಮರಿಸಿದೊಂಡು ಅವನನ್ನು ಹಾಗೆಯೇ ಬಿಟ್ಟು ಬಿಟ್ಟನು. ಸೂತಪುತ್ರನಿಂದ ಬಿಡುಗಡೆಹೊಂದಿದ ಪಾಂಡವನು ನಾಚಿಕೆಗೊಂಡವನಾಗಿ ಯುಧಿಷ್ಠಿರನ ರಥದ ಕಡೆ ಹೋದನು. ಅವನ ರಥವನ್ನೇರಿ ಸೂತಪುತ್ರನ ಪ್ರತಾಪಕ್ಕೆ ಸಿಲುಕಿದ್ದ ನಕುಲನು ಮಡಿಕೆಯಲ್ಲಿಟ್ಟಿದ್ದ ಸರ್ಪದಂತೆ ದುಃಖಸಂತಪ್ತನಾಗಿ ನಿಟ್ಟುಸಿರುಬಿಡುತ್ತಿದ್ದನು.

## ಕರ್ಣನು ಪಾಂಚಾಲರ ರಥಸೇನೆಯನ್ನು ನಾಶಗೊಳಿಸಿದ್ದುದು

ರಣದಲ್ಲಿ ನಕುಲನನ್ನು ಬಿಟ್ಟು ಚಂದ್ರವರ್ಣದ ಕುದುರೆಗಳಿಂದ ಮತ್ತು ಎತ್ತರದಲ್ಲಿ ಹಾರಾಡುತ್ತಿದ್ದ ಪತಾಕೆಯುಳ್ಳ ರಥದಲ್ಲಿ ಕುಳಿತು ಕರ್ಣನು ತ್ವರೆಮಾಡಿ ಪಾಂಚಾಲರಿದ್ದಲ್ಲಿಗೆ ಬಂದನು. ಸೇನಾಪತಿಯು ಪಾಂಚಾಲರ ರಥಸಮೂಹಗಳ ಕಡೆ ಹೋದುದನ್ನು ನೋಡಿ ಪಾಂಡವರ ಸೇನೆಯಲ್ಲಿ ಮಹಾ ಆಕ್ರಂದನವುಂಟಾಯಿತು. ದಿನಕರನು ನಡುನೆತ್ತಿಗೆ ಬರಲಾಗಿ ಸೂತನಂದನನು ಅಲ್ಲಿ ಚಕ್ರದಂತೆಯೇ ಸಂಚರಿಸುತ್ತಾ ಕದನವನ್ನಾಡಿದನು.

ಕೆಲವು ರಥಗಳ ಚಕ್ರಗಳು ಮುರಿದವು. ಕೆಲವರ ಧ್ವಜ-ಪತಾಕೆಗಳು ಮುರಿದವು. ಕುದುರೆಗಳೂ ಸಾರಥಿಗಳೂ ಹತರಾದರು. ಅಚ್ಚುಮರಗಳು ಮುರಿದುಬಿದ್ದವು. ಹೀಗೆ ಪಾಂಚಾಲರ ರಥಸಮೂಹವು ನಾಶಗೊಂಡಿತು. ಮಹಾವನದಲ್ಲಿ ದವಾಗ್ನಿಯಿಂದ ಸುಡಲ್ಪಡುತ್ತಿರುವವರೋ ಎನ್ನುವಂತೆ ಮದಿಸಿದ ಆನೆಗಳು ಅಲ್ಲಲ್ಲಿ ಸಂಭ್ರಾಂತಗೊಂಡು ಓಡುತ್ತಿದ್ದವು. ಕುಂಭಗಳೊಡೆದು ಮತ್ತು ಸೊಂಡಿಲುಗಳು ಕತ್ತರಿಸಲ್ಪಟ್ಟು ಆನೆಗಳು ರಕ್ತವನ್ನು ಸುರಿಸುತ್ತಿದ್ದವು. ಮಹಾತ್ಮ ಕರ್ಣನಿಂದ ವಧಿಸಲ್ಪಡುತ್ತಿದ್ದ ಆ ಆನೆಗಳ ಅಂಗಾಂಗಗಳೂ ಸೊಂಡಿಲುಗಳೂ ತುಂಡಾಗಿ ಚದುರಿಹೋದ ಮೋಡಗಳಂತೆ ಕೆಳಗೆ

ಬೀಳುತ್ತಿದ್ದವು. ಇತರ ಆನೆಗಳು ನೂರಾರು ನಾರಾಚ-ತೋಮರಗಳಿಂದ ಪೀಡಿತಗೊಂಡು ದೀಪದ ಹುಳುಗಳು ಬೆಂಕಿಯಲ್ಲಿ ಬೀಳುವಂತೆ ಕರ್ಣನನ್ನೇ ಎದುರಿಸಿ ಬಂದು ಬೀಳುತ್ತಿದ್ದವು. ಇನ್ನು ಇತರ ಮಹಾಗಜಗಳು ಜೋರಾಗಿ ಕೂಗಿಕೊಳ್ಳುತ್ತಾ ಪರ್ವತಗಳು ನೀರನ್ನು ಸ್ರವಿಸುವಂತೆ ರಕ್ತವನ್ನು ಸುರಿಸುತ್ತಾ ಓಡಿ ಹೋಗುತ್ತಿದ್ದವು. ಕುದುರೆಗಳ ಎದೆಮುಚ್ಚುವ ಕವಚಗಳು, ಬಾಲಬಂಧಗಳು, ಬೆಳ್ಳಿ-ಕಂಚು-ಸುವರ್ಣಗಳಿಂದ ಮಾಡಿದ ಭೂಷಣಗಳು ತುಂಡಾಗಿ ಬಿದ್ದಿದ್ದವು. ಕುದುರೆಗಳ ಕಡಿವಾಣಗಳೇ ಇರಲಿಲ್ಲ. ಕುದುರೆಗಳ ಮೇಲಿದ್ದ ಚಾಮರಗಳೂ, ರತ್ನಗಂಬಳಿಗಳೂ, ಬತ್ತಳಿಕೆಗಳೂ ಕೆಳಗೆ ಬಿದ್ದುಹೋಗಿದ್ದವು. ಯುದ್ಧಶೋಭನ ಶೂರ ಕುದುರೆಸವಾರರೂ ಹತರಾಗಿದ್ದರು. ಅಲ್ಲಿ ರಣದಲ್ಲಿ ಉತ್ತಮ ಕುದುರೆಗಳು ಸುತ್ತಲೂ ತಿರುಗಾಡುತ್ತಿರುವುದನ್ನು ನೋಡಿದೆವು. ಕವಚ ಉಷ್ಣೀಷಗಳನ್ನು ಧರಿಸಿದ್ದ ಕುದುರೆಯೋಧರು ಪ್ರಾಸ, ಖಡ್ಗ, ಋಷ್ಟಿ ಇವೇ ಮೊದಲಾದ ಆಯುಧಗಳಿಂದ ವಿಹೀನರಾಗಿ ಬೀಳುತ್ತಿದ್ದರು. ರಥಿಗಳು ಹತರಾಗಿ ವೇಗವಾಗಿ ಹೋಗುವ ಕುದುರೆಗಳನ್ನು ಕಟ್ಟಲ್ಪಟ್ಟು ಅಲ್ಲಲ್ಲಿ ತಿರುಗುತ್ತಿದ್ದ ಹೇಮಭೂಷಿತ ರಥಗಳು ಕಾಣುತ್ತಿದ್ದವು. ಅವುಗಳ ಅಚ್ಚುಮರಗಳು ಮತ್ತು ಮೂಕಿಗಳು ಮುರಿದುಹೋಗಿದ್ದವು. ಕೆಲವು ರಥಗಳ ಚಕ್ರಗಳೂ ಮುರಿದಿದ್ದವು. ಪತಾಕೆ-ಧ್ವಜಗಳಿಲ್ಲದೇ ಇದ್ದ ಸುಂದರ

ಈಷಾದಂಡಗಳು ಮುರಿದುಹೋಗಿದ್ದ ಅನೇಕ ರಥಗಳು ಕಂಡವು. ಸೂರ್ಯಪುತ್ರನ ಶರಗಳಿಂದ ಪೀಡಿತರಾದ ರಥಿಗಳು ರಥಗಳಿಂದ ವಿಹೀನರಾಗಿ, ಶಸ್ತ್ರಗಳನ್ನು ಕಳೆದುಕೊಂಡು, ಅನ್ಯರು ಶಸ್ತ್ರಗಳೊಂದಿಗೆ ಹತರಾಗಿ, ನಕ್ಷತ್ರಜಾಲಗಳ ಚಿಹ್ನೆಗಳುಳ್ಳ ಪತಾಕೆಗಳಿಂದ ಅಲಂಕೃತರಾಗಿ ಉತ್ತಮ ಘಂಟೆಗಳಿಂದ ಸುಶೋಭಿತರಾಗಿ ಎಲ್ಲಕಡೆ ಓಡಿ ಹೋಗುತ್ತಿದ್ದರು.

ನಾನಾವರ್ಣದ ವಿಚಿತ್ರ ಪತಾಕೆಗಳಿಂದ ಅಲಂಕೃತರಾದ ಪದಾತಿಗಳು ಎಲ್ಲ ಕಡೆ ಓಡಿಹೋಗುತ್ತಿದ್ದರು. ಕರ್ಣನ ಧನುಸ್ಸಿನಿಂದ ಹೊರಟ ಬಾಣಗಳಿಂದ ತುಂಡಾಗಿ ಬೀಳುತ್ತಿದ್ದ ಅನೇಕ ಶಿರ-ಬಾಹು-ತೊಡೆ ಮತ್ತು ಕತ್ತರಿಸಲ್ಪಟ್ಟ ಇತರ ಅಂಗಾಂಗಗಳು ಅಲ್ಲಿ ಕಾಣುತ್ತಿದ್ದವು. ಕರ್ಣನ ನಿಶಿತ ಸಾಯಕ ಶರಗಳಿಂದ ಹತರಾಗುತ್ತಿದ್ದ ಯೋಧರು ರೌದ್ರರಾಗಿ ಮಹಾ ಭಯಂಕರರಾಗಿ ಕಾಣುತ್ತಿದ್ದರು. ದೀಪದ ಹುಳುಗಳು ಬೆಂಕಿಯಲ್ಲಿ ಬೀಳುವಂತೆ ಸಮರದಲ್ಲಿ ಸೂತಪುತ್ರನಿಂದ ವಧಿಸಲ್ಪಡುತ್ತಿದ್ದ ಸೃಂಜಯರು ಅವನಿಗೇ ಅಭಿಮುಖರಾಗಿ ಬಂದು ಬೀಳುತ್ತಿದ್ದರು. ಅಲ್ಲಲ್ಲಿ ಸೇನೆಗಳನ್ನು ಸುಡುತ್ತಿದ್ದ ಆ ಮಹಾರಥ ಕರ್ಣನನ್ನು ಯುಗಾಂತ ಕಾಲದಲ್ಲಿ ಪ್ರಚಂಡ ಅಗ್ನಿಯಿಂದ ಪ್ರಾಣಿಗಳು ದೂರವಿರುವಂತೆ ಕ್ಷತ್ರಿಯರು ಬಿಟ್ಟು ದೂರಸರಿಯುತ್ತಿದ್ದರು.

ಹತರಾಗದೇ ಉಳಿದು ಓಡಿ ಹೋಗುತ್ತಿದ್ದ ಪಾಂಚಾಲ ವೀರರನ್ನು ಕರ್ಣನು ಬೆನ್ನಟ್ಟಿ ಹೋಗಿ ಶರಗಳನ್ನು ಎರಚಿ ಅವರ ಕವಚ-ಧ್ವಜಗಳನ್ನು ಕತ್ತರಿಸಿ ಹಾಕಿದನು. ಸೂತಪುತ್ರನು ಮಧ್ಯಾಹ್ನದ ಸಮಯದಲ್ಲಿ ಸೂರ್ಯನು ಭೂತಗಳನ್ನು ಹೇಗೆ ಪರಿತಪಿಸುತ್ತಾನೋ ಹಾಗೆ ಅವರನ್ನು ಬಾಣಗಳಿಂದ ಪರಿತಾಪಗೊಳಿಸಿದನು.

## ಯುಯುತ್ಸು-ಉಲೂಕರ ಯುದ್ಧ

ಮಹಾಸೇನೆಯನ್ನು ಓಡಿಹೋಗುವಂತೆ ಮಾಡುತ್ತಿದ್ದ ನಿನ್ನ ಪುತ್ರ ಯುಯುತ್ಸುವನ್ನು ಉಲೂಕನು ತಕ್ಷಣವೇ ಆಕ್ರಮಣಿಸಿ ನಿಲ್ಲು ನಿಲ್ಲೆಂದು ಹೇಳಿದನು. ಆಗ ಯುಯುತ್ಸುವಾದರೋ ನಿಶಿತ ಬಾಣಗಳಿಂದ ಇಂದ್ರನು ವಜ್ರದಿಂದ ಪರ್ವತವನ್ನು ಹೊಡೆಯುವಂತೆ ಉಲೂಕನನ್ನು ಹೊಡೆದನು. ಆಗ ಉಲೂಕನಾದರೋ ಯುಯುತ್ಸುವಿನ ಮೇಲೆ ಕ್ರುದ್ಧನಾಗಿ ಕ್ಷುರಪ್ರದಿಂದ ಧನುಸ್ಸನ್ನು ಕತ್ತರಿಸಿ ಕರ್ಣಿಗಳಿಂದ ಹೊಡೆಯತೊಡಗಿದನು. ಸಂರಕ್ತಲೋಚನನಾದ ಯುಯುತ್ಸುವು ತುಂಡಾದ ಧನುಸ್ಸನ್ನು ಎಸೆದು ವೇಗವತ್ತರವಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡನು. ಅವನು ಶಕುನಿಯ ಮಗನನ್ನು ಅರವತ್ತು ಬಾಣಗಳಿಂದ ಹೊಡೆದನು. ಸಾರಥಿಯನ್ನು ಮೂರರಿಂದ ಹೊಡೆದು ಇನ್ನೊಮ್ಮೆ ಉಲೂಕನನ್ನು ಪ್ರಹರಿಸಿದನು. ಉಲೂಕನಾದರೋ

ಕ್ರುದ್ಧನಾಗಿ ಯುಯುತ್ಸುವನ್ನು ಇಪ್ಪತ್ತು ಹೇಮಭೂಷಿತ ಬಾಣಗಳಿಂದ ಹೊಡೆದು ಅವನ ಕಾಂಚನಧ್ವಜವನ್ನೂ ತುಂಡರಿಸಿದನು. ದಂಡವು ತುಂಡಾದ ಆ ಕಾಂಚನೋಜ್ವಲ ಮಹಾಧ್ವಜವು ಛಿನ್ನ-ಛಿನ್ನವಾಗಿ ಯುಯುತ್ಸುವಿನ ಎದುರಿನಲ್ಲಿಯೇ ಬಿದ್ದಿತು. ಧ್ವಜವು ಧ್ವಂಸವಾದುದನ್ನು ನೋಡಿ ಕ್ರೋಧಮೂರ್ಛಿತನಾದ ಯುಯುತ್ಸುವು ಐದು ಬಾಣಗಳಿಂದ ಉಲೂಕನ ವಕ್ಷಸ್ಥಳಕ್ಕೆ ಹೊಡೆದನು. ಉಲೂಕನು ಒಮ್ಮೆಲೇ ತನ್ನ ತೈಲಧೌತ ಭಲ್ಲದಿಂದ ಯುಯುತ್ಸುವಿನ ಸಾರಥಿಯ ಶಿರವನ್ನು ಕತ್ತರಿಸಿದನು. ಅವನ ನಾಲ್ಕು ಕುದುರೆಗಳನ್ನೂ ಸಂಹರಿಸಿ ಅವನನ್ನು ಐದು ಬಾಣಗಳಿಂದ ಗಾಯಗೊಳಿಸಿದನು. ಹೀಗೆ ಬಲವತ್ತರವಾಗಿ ಪ್ರಹರಿಸಲ್ಪಟ್ಟ ಯುಯುತ್ಸುವು ಇನ್ನೊಂದು ರಥವನ್ನೇರಿ ಪಲಾಯನಮಾಡಿದನು.

ರಣದಲ್ಲಿ ಯುಯುತ್ಸುವನ್ನು ಜಯಿಸಿ ಉಲೂಕನು ತ್ವರೆಮಾಡಿ ನಿಶಿತ ಶರಗಳಿಂದ ಪಾಂಚಾಲರನ್ನು ಮತ್ತು ಸೃಂಜಯರನ್ನು ಸಂಹರಿಸುತ್ತಾ ಹೊರಟನು.

## ಶ್ರುತಕರ್ಮ-ಶತಾನೀಕರ ಯುದ್ಧ

ಧೃತರಾಷ್ಟ್ರನ ಮಗ ಶ್ರುತಕರ್ಮನು ಗಾಬರಿಗೊಳ್ಳದೇ ನಿಮಿಷಾರ್ಧದಲ್ಲಿ ಶತಾನೀಕನನ್ನು ಕುದುರೆಗಳು, ಸಾರಥಿ ಮತ್ತು

ರಥಗಳಿಂದ ವಿಹೀನನನ್ನಾಗಿ ಮಾಡಿದನು. ಶತಾನೀಕನು ಕುದುರೆಗಳು ಹತವಾಗಲು ರಥದಮೇಲೆಯೇ ನಿಂತು ಕ್ರುದ್ಧನಾಗಿ ಶ್ರುತಕರ್ಮನ ಮೇಲೆ ಗದೆಯನ್ನು ಎಸೆದನು. ಆ ಗದೆಯು ಶ್ರುತಕರ್ಮನ ರಥವನ್ನು ಕುದುರೆ-ಸಾರಥಿಯೊಂದಿಗೆ ಭಸ್ಮೀಭೂತವನ್ನಾಗಿ ಮಾಡಿ ಸೀಳಿಬಿಡುವುದೋ ಎನ್ನುವಂತೆ ಭೂಮಿಯ ಮೇಲೆ ಬಿದ್ದಿತು. ಯುದ್ಧಾರ್ತಿಗಳಾಗಿದ್ದ ಆ ಇಬ್ಬರು ವಿರಥ ವೀರ ಕುರುಗಳ ಕೀರ್ತಿವರ್ಧನರು ಪರಸ್ಪರರನ್ನು ನೋಡುತ್ತಾ ಹಿಂದೆಸರಿದರು. ಸಂಭ್ರಾಂತನಾದ ಶ್ರುತಕರ್ಮನಾದರೋ ವಿವಿತ್ಸುವಿನ ರಥವನ್ನು ಏರಿದನು. ಶತಾನೀಕನೂ ಕೂಡ ತ್ವರೆಮಾಡಿ ಪ್ರತಿವಿಂಧ್ಯನ ರಥಕ್ಕೆ ಹೋದನು.

## ಶಕುನಿ-ಸುತಸೋಮರ ಯುದ್ಧ

ಸುತಸೋಮನಾದರೋ ಶಕುನಿಯನ್ನು ನಿಶಿತ ಶರಗಳಿಂದ ಹೊಡೆದನು. ಆದರೂ ಭೀರುಗಾಳಿಯು ಪರ್ವತವನ್ನು ಹೇಗೆ ಅಲುಗಾಡಿಸುವುದಿಲ್ಲವೋ ಹಾಗೆ ಶಕುನಿಯು ಸಂರಬ್ಧನಾಗಿ ಕಂಪಿಸಲಿಲ್ಲ. ತನ್ನ ತಂದೆಯ ಅತ್ಯಂತ ವೈರಿ ಶಕುನಿಯನ್ನು ನೋಡಿ ಸುತಸೋಮನಾದರೋ ಅನೇಕ ಸಹಸ್ರ ಶರಗಳಿಂದ ಅವನನ್ನು ಮುಸುಕಿದನು. ಅಸ್ತ್ರಗಳಲ್ಲಿ ಹಸ್ತಲಾಘವವನ್ನು ಹೊಂದಿದ್ದ

ಚಿತ್ರಯೋಧೀ ವಿಜಯಶ್ರೀಯಿಂದ ಸುಶೋಭಿತನಾಗಿದ್ದ ಶಕುನಿಯು ಆ ಶರಗಳನ್ನು ತಕ್ಷಣವೇ ಅನ್ಯ ಪತತ್ರಿಗಳಿಂದ ತುಂಡರಿಸಿದನು. ಆ ಶರಗಳನ್ನು ನಿಶಿತ ಶರಗಳಿಂದ ತಡೆದು ಸುಸಂಕ್ರುದ್ಧ ಶಕುನಿಯು ಸುತಸೋಮನನ್ನು ಮೂರು ಶರಗಳಿಂದ ಗಾಯಗೊಳಿಸಿದನು. ಆಗ ಶಕುನಿಯು ಶರಗಳಿಂದ ಸುತಸೋಮನ ಕುದುರೆಗಳು, ಧ್ವಜ ಮತ್ತು ಸೂತರನ್ನು ಎಳ್ಳಿನಷ್ಟು ನುಚ್ಚುನೂರುಮಾಡಿದನು. ಆಗ ಅಲ್ಲಿದ್ದ ಜನರು ಹರ್ಷಸೂಚಕವಾಗಿ ಕೂಗಿದರು. ಹತಾಶ್ವನೂ ವಿರಥನೂ, ಚಿನ್ನಧನ್ವಿಯೂ ಆದ ಸುತಸೋಮನು ಶ್ರೇಷ್ಠ ಧನುಸ್ಸನ್ನು ಹಿಡಿದು ರಥದಿಂದಿಳಿದು ಭೂಮಿಯ ಮೇಲೆ ನಿಂತನು. ಸ್ವರ್ಣಪುಂಖಗಳ ಶಿಲಾಶಿತ ಸಾಯಕಗಳನ್ನು ಪ್ರಯೋಗಿಸುತ್ತಾ ಅವನು ಶಕುನಿಯ ರಥವನ್ನೇ ಮುಚ್ಚಿಬಿಟ್ಟನು. ಮಿಡಿತೆಗಳೋಪಾದಿಯಲ್ಲಿ ಮಹಾರಥವನ್ನು ಸಮೀಪಿಸುತ್ತಿದ್ದ ಆ ಶರವ್ರಾತವನ್ನು ರಥದಲ್ಲಿ ಕುಳಿತಿದ್ದ ಸೌಬಲನು ನೋಡಿಯೂ ಕೂಡ ಸ್ವಲ್ಪವಾದರೂ ವ್ಯಥೆಪಡಲಿಲ್ಲ. ಶಕುನಿಯು ಆ ಶರಗಳ ಮಳೆಯನ್ನು ಶರಗಳಿಂದಲೇ ಧ್ವಂಸಗೊಳಿಸಿದನು.

ಸುತಸೋಮನಾದರೋ ಪದಾತಿಯಾಗಿಯೇ ರಥಸ್ಥನಾಗಿದ್ದ ಆ ನೃಪತಿಯೊಡನೆ ಯುದ್ಧಮಾಡುತ್ತಿದ್ದನು. ಅವನ ಆ ನಂಬಲಸಾಧ್ಯ ಅದ್ಭುತ ಕೃತ್ಯವನ್ನು ನೋಡಿ ಇತರ ಯೋಧರೂ ಆಕಾಶದಲ್ಲಿ ನೆರೆದಿದ್ದ

ಸಿದ್ಧರೂ ಹರ್ಷಿತರಾದರು. ಆ ಸಮಯದಲ್ಲಿ ಶಕುನಿಯು ಮಹಾವೇಗದ ತೀಕ್ಷ್ಣ ಸನ್ನತಪರ್ತ ಭಲ್ಲಗಳಿಂದ ಸುತಸೋಮನ ಧನುಸ್ಸನ್ನೂ ಬತ್ತಳಿಕೆಯನ್ನೂ ಸಂಪೂರ್ಣವಾಗಿ ನಾಶಗೊಳಿಸಿದನು. ಧನುಸ್ಸು ತುಂಡಾದ ಸುತಸೋಮನು ವೈಡೂರ್ಯಮಣಿ ಮತ್ತು ನೀಲಕಮಲಗಳ ಬಣ್ಣದ ಆನೆಯ ದಂತದ ಹಿಡಿಯಿದ್ದ ಖಡ್ಗವನ್ನು ಮೇಲೆತ್ತಿ ಸಿಂಹನಾದಗೈದನು. ಶುದ್ಧ ಆಕಾಶದ ಕಾಂತಿಯಿದ್ದ ಆ ಖಡ್ಗವನ್ನು ತಿರುಗಿಸುತ್ತಿದ್ದ ಸುತಸೋಮನನ್ನು ಶಕುನಿಯು ಕಾಲನೆಂದೇ ಭಾವಿಸಿದನು. ಶಿಕ್ಷಾಬಲಸಮನ್ವಿತ ಖಡ್ಗಧಾರೀ ಸುತಸೋಮನು ಹದಿನಾಲ್ಕು ಸಾವಿರ ಮಂಡಲಗಳಲ್ಲಿ ಸಂಚರಿಸುತ್ತಿದ್ದನು. ಸೌಬಲನಾದರೋ ಅವನ ಮೇಲೆ ಶರಗಳನ್ನು ಪ್ರಯೋಗಿಸಲು ಬೀಳುವುದರೊಳಗೇ ಸುತಸೋಮನು ಶ್ರೇಷ್ಠ ಖಡ್ಗದಿಂದ ಅವುಗಳನ್ನು ತುಂಡರಿಸಿದನು. ಆಗ ಸೌಬಲನು ಕ್ರುದ್ಧನಾಗಿ ಸುತಸೋಮನ ಮೇಲೆ ಸರ್ಪವಿಷಗಳಿಗೆ ಸಮಾನ ಶರಗಳನ್ನು ಪ್ರಯೋಗಿಸಿದನು. ಗರುಡನ ವೀರ್ಯ ಸಮದ್ಯುತಿ ಸುತಸೋಮನು ತನ್ನ ಶಿಕ್ಷಣ ಮತ್ತು ಬಲಗಳಿಂದ ಆ ಬಾಣಗಳನ್ನು ಖಡ್ಗದಿಂದ ತುಂಡರಿಸಿ ಯುದ್ಧದಲ್ಲಿ ತನ್ನ ಹಸ್ತಲಾಘವವನ್ನು ತೋರಿಸಿದನು. ಆಗ ಮಂಡಲಾವರ್ತದಲ್ಲಿ ಸಂಚರಿಸುತ್ತಿದ್ದ ಶಕುನಿಯು ತೀಕ್ಷ್ಣ ಕ್ಷುರಪ್ರದಿಂದ ಸುತಸೋಮನ ಸುಪ್ರಭ ಖಡ್ಗವನ್ನು ಕತ್ತರಿಸಿದನು. ತುಂಡಾದ ಆ ಮಹಾಖಡ್ಗವು ಕೂಡಲೇ

ಭೂಮಿಯ ಮೇಲೆ ಬಿದ್ದಿತು. ಆ ಖಡ್ಗದ ಸುಂದರ ಹಿಡಿಯು ಮಾತ್ರ ಸುತಸೋಮನ ಕೈಯಲ್ಲಿಯೇ ಉಳಿಯಿತು. ತನ್ನ ಖಡ್ಗವು ತುಂಡಾಯಿತೆಂದು ತಿಳಿದ ಮಹಾರಥ ಸುತಸೋಮನು ಕೂಡಲೇ ಆರು ಹೆಜ್ಜೆ ಮುಂದೆ ಹೋಗಿ ತನ್ನ ಕೈಯಲ್ಲಿ ಉಳಿದಿದ್ದ ಆ ಖಡ್ಗದ ಅರ್ಧಭಾಗದಿಂದಲೇ ಶಕುನಿಯನ್ನು ಪ್ರಹರಿಸಿದನು. ಸ್ವರ್ಣವಜ್ರವಿಭೂಷಿತ ಆ ಖಡ್ಗದ ತುಂಡು ಮಹಾತ್ಮ ಶಕುನಿಯ ಉತ್ತಮ ಚಾಪವನ್ನು ತುಂಡರಿಸಿ ತಕ್ಷಣವೇ ರಣಭೂಮಿಯ ಮೇಲೆ ಬಿದ್ದಿತು. ಆಗ ಸುತಸೋಮನು ಶ್ರುತಕೀರ್ತಿಯ ಮಹಾರಥವನ್ನು ಹತ್ತಿದನು.

ಸೌಬಲನೂ ಕೂಡ ಇನ್ನೊಂದು ದುಃಸ್ಸಹ ಘೋರ ಧನುಸ್ಸನ್ನು ತೆಗೆದುಕೊಂಡು ಪಾಂಡವ ಸೇನೆಯನ್ನು ಹೊಕ್ಕು ಅನೇಕ ಶತ್ರುಗಳನ್ನು ಸಂಹರಿಸಿದನು. ಆಗ ಸಮರದಲ್ಲಿ ಭೀತಿಯೇ ಇಲ್ಲದವನಂತೆ ಸಂಚರಿಸುತ್ತಿದ್ದ ಸೌಬಲನನ್ನು ನೋಡಿ ಪಾಂಡವರ ಕಡೆಯಲ್ಲಿ ಮಹಾ ಕೋಲಾಹಲವುಂಟಾಯಿತು. ಶಸ್ತ್ರಗಳನ್ನು ಹೊಂದಿದ್ದ ದರ್ಪಿತ ಪಾಂಡವರ ಮಹಾ ಸೇನೆಗಳು ಸೌಬಲನಿಂದ ಓಡಿಸಲ್ಪಟ್ಟವು. ದೈತ್ಯಸೇನೆಯನ್ನು ದೇವರಾಜನು ಹೇಗೆ ಮರ್ದಿಸಿದನೋ ಹಾಗೆ ಪಾಂಡವೀ ಸೇನೆಯು ಸೌಬಲನಿಂದ ನಾಶಗೊಂಡಿತು.

## ಕೃಪ-ಧೃಷ್ಟದ್ಯುಮ್ನರ ಯುದ್ಧ

ವನದಲ್ಲಿ ಶರಭವು ದರ್ಪಿತ ಆನೆಯನ್ನು ಹೊಡೆದಾಡಿ ತಡೆಯುವಂತೆ ಕೃಪನು ಧೃಷ್ಟದ್ಯುಮ್ನನನ್ನು ತಡೆದನು. ಗೌತಮನಿಂದ ತಡೆಯಲ್ಪಟ್ಟ ಪಾರ್ಷತನಿಗೆ ಒಂದು ಹೆಜ್ಜೆಯನ್ನೂ ಮುಂದಿಡಲು ಸಾಧ್ಯವಾಗಲಿಲ್ಲ. ಧೃಷ್ಟದ್ಯುಮ್ನನ ರಥದ ಬಳಿ ಗೌತಮನ ರೂಪವನ್ನು ಕಂಡು ಸರ್ವಭೂತಗಳೂ ಪ್ರಳಯವೇ ಪ್ರಾಪ್ತವಾಯಿತೋ ಎಂದುಕೊಂಡು ನಡುಗಿದವು. ವಿಮನಸ್ಕರಾಗಿದ್ದ ರಥಿಗಳೂ ಕುದುರೆಸವಾರರೂ ತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದರು:

> "ದ್ರೋಣನ ನಿಧನದಿಂದಾಗಿ ಕೃಪನು ತುಂಬಾ ಸಂಕ್ರುದ್ಧನಾಗಿದ್ದಾನೆ. ಮಹಾತೇಜಸ್ವಿ, ದಿವ್ಯಾಸ್ತ್ರವಿದು, ಉದಾರಬುದ್ಧಿಯ ಶಾರದ್ವತ ಗೌತಮನಿಂದ ಇಂದು ಧೃಷ್ಟದ್ಯುಮ್ನನಿಗೆ ಒಳ್ಳೆಯದೇನಾದರೂ ಆಗಬಹುದೇ? ಈ ಸಂಪೂರ್ಣ ಸೇನೆಯು ಮಹಾಭಯದಿಂದ ಬಿಡುಗಡೆ ಹೊಂದಬಲ್ಲದೇ? ಈ ಬ್ರಾಹ್ಮಣನು ಸೇರಿರುವ ನಮ್ಮೆಲ್ಲರನ್ನೂ ಸಂಹರಿಸದೇ ಬಿಟ್ಟಾನೆಯೇ? ಅವನ ಈ ರೂಪವು ಅಂತಕನ ರೂಪದಂತೆಯೇ ತೋರುತ್ತಿದೆ. ಇಂದು ಕೃಪನೂ ಕೂಡ ಯುದ್ಧದಲ್ಲಿ ಭಾರದ್ವಾಜ ದ್ರೋಣನ ಪದವಿಯಲ್ಲಿ

ಹೋಗುತ್ತಿದ್ದಾನೆ. ಆಚಾರ್ಯನು ಕ್ಷಿಪ್ರಹಸ್ತನು. ಯುದ್ಧದಲ್ಲಿ ಸದಾ ವಿಜಯಗಳಿಸುವವನು. ಅಸ್ತ್ರವಾನನೂ ವೀರ್ಯಸಂಪನ್ನನೂ ಆದ ಇವನು ಕ್ರೋಧಸಮನ್ವಿತನಾಗಿದ್ದಾನೆ. ಈ ಯುದ್ಧದಲ್ಲಿ ಪಾರ್ಷತನು ವಿಮುಖನಾಗುತ್ತಾನೆ ಎಂದೇ ಕಂಡುಬರುತ್ತಿದೆ!”

ಹೀಗೆ ವಿವಿಧ ರೀತಿಯಲ್ಲಿ ಕೌರವರು ಮತ್ತು ಪಾಂಡವರು ಮಾತನಾಡಿಕೊಳ್ಳುತ್ತಿದ್ದರು.

ಆಗ ಕೋಪದಿಂದ ನಿಟ್ಟುಸಿರು ಬಿಡುತ್ತಾ ಕೃಪನು ಪಾರ್ಷತನಿಗೆ ಎಲ್ಲ ಕಡೆಗಳಿಂದ ಪ್ರಹರಿಸಿ ನಿಶ್ಚೇಷ್ಟನನ್ನಾಗಿಸಿದನು. ಗೌತಮನಿಂದ ವಧಿಸಲ್ಪಡುತ್ತಿದ್ದ ಧೃಷ್ಟದ್ಯುಮ್ನನು ಮೋಹಿತನಾಗಿ ಯುದ್ದದಲ್ಲಿ ಏನು ಮಾಡಬೇಕೆನ್ನುವುದನ್ನೇ ತಿಳಿಯದಾದನು. ಆಗ ಅವನ ಸಾರಥಿಯು ಅವನನ್ನು ಪ್ರಶ್ನಿಸಿದನು:

“ಪಾರ್ಷತ! ಏನು ಕ್ಷೇಮದಿಂದಿರುವೆಯಾ? ಯುದ್ಧದಲ್ಲಿ ನೀನು ಈ ರೀತಿ ವ್ಯಸನದಲ್ಲಿರುವುದನ್ನು ನಾನು ಇದೂವರೆಗೂ ನೋಡಿರಲಿಲ್ಲ! ದ್ವಿಜಮುಖ್ಯನು ನಿನ್ನ ಮರ್ಮಗಳನ್ನೇ ಗುರಿಯಿಟ್ಟು ಪ್ರಯೋಗಿಸಿದ ಮರ್ಮಭೇದಿ ಬಾಣಗಳು ದೈವಯೋಗದಿಂದ ನಿನ್ನ ಮರ್ಮಗಳ ಮೇಲೆ ಬೀಳಲಿಲ್ಲ.

ವೇಗವಾಗಿ ಸಾಗರದ ಕಡೆ ಹರಿಯುತ್ತಿರುವ ನದಿಯನ್ನು ಹಿಂದೆ ಸರಿಸುವಂತೆ ನಿನ್ನ ರಥವನ್ನು ನಾನು ಬೇಗ ಹಿಂದಿರುಗಿಸುತ್ತೇನೆ. ನಿನ್ನ ವಿಕ್ರಮವನ್ನು ಕುಂದಿಸಿರುವ ಈ ಬ್ರಾಹ್ಮಣನು ಅವಧ್ಯನೆಂದು ನನಗನ್ನಿಸುತದೆ."

ಆಗ ಧೃಷ್ಟದ್ಯುಮ್ನನು ಮೆಲ್ಲನೇ ಈ ಮಾತುಗಳನ್ನಾಡಿದನು:

"ಅಯ್ಯಾ! ನನ್ನ ಮನಸ್ಸು ಭ್ರಮೆಗೊಂಡಿದೆ. ಶರೀರವು ಬೆವರುತ್ತಿದೆ. ಶರೀರವು ನಡುಗುತ್ತಿದೆ. ರೋಮಹರ್ಷಣವಾಗುತ್ತಿರುವುದನ್ನೂ ನೋಡು. ಸಾರಥೇ! ಯುದ್ಧದಲ್ಲಿ ಈ ಬ್ರಾಹ್ಮಣನನ್ನು ಬಿಟ್ಟು ನಿಧಾನವಾಗಿ ನನ್ನನ್ನು ಅರ್ಜುನ ಅಥವಾ ಭೀಮಸೇನನು ಯುದ್ಧಮಾಡುತ್ತಿರುವಲ್ಲಿಗೆ ಕರೆದುಕೊಂಡು ಹೋಗು! ಇದೇ ಇಂದು ನನಗೆ ಕ್ಷೇಮವನ್ನುಂಟುಮಾಡುತ್ತದೆ ಎಂದು ನನ್ನ ದೃಢ ನಂಬಿಕೆಯಾಗಿದೆ."

ಆಗ ಸಾರಥಿಯು ತ್ವರೆಯಾಗಿ ಕುದುರೆಗಳನ್ನು ಭೀಮನು ಕೌರವ ಸೈನಿಕರೊಂದಿಗೆ ಯುದ್ಧಮಾಡುತ್ತಿರುವಲ್ಲಿಗೆ ತಲುಪಿಸಿದನು. ಹಾಗೆ ಓಡಿ ಹೋಗುತ್ತಿರುವ ಧೃಷ್ಟದ್ಯುಮ್ನನ ರಥವನ್ನು ನೋಡಿ ಗೌತಮನು ನೂರಾರು ಶರಗಳನ್ನು ಎರಚುತ್ತಾ ಅವನನ್ನೇ ಹಿಂಬಾಲಿಸಿ ಹೋದನು.

ಮಹೇಂದ್ರನು ಶಂಬರನನ್ನು ಹೇಗೋ ಹಾಗೆ ಪಾರ್ಷತನನ್ನು ಬೆನ್ನಟ್ಟಿ ಹೋಗಿ ಕೃಪನು ಪುನಃ ಪುನಃ ಶಂಖವನ್ನು ಮೊಳಗಿಸಿದನು.

## ಕೃತವರ್ಮ-ಶಿಖಂಡಿಯರ ಯುದ್ಧ

ಪುನಃ ಪುನಃ ನಗುತ್ತಿರುವನೋ ಎಂದು ತೋರುತ್ತಾ ಹಾರ್ದಿಕ್ಯ ಕೃತವರ್ಮನು ಭೀಷ್ಮನ ಮೃತ್ಯು ದುರಾಸದ ಶಿಖಂಡಿಯನ್ನು ತಡೆದನು. ಹಾರ್ದಿಕ್ಯನನ್ನು ಎದುರಿಸಿ ಶಿಖಂಡಿಯು ಐದು ನಿಶಿತ ಭಲ್ಲಗಳಿಂದ ಅವನ ಜತ್ರುಪ್ರದೇಶವನ್ನು ಪ್ರಹರಿಸಿದನುಮಹಾರಥ ಕೃತವರ್ಮನಾದರೋ ಸಂಕ್ರುದ್ಧನಾಗಿ ಅರವತ್ತು ಬಾಣಗಳಿಂದ ಹೊಡೆದು ಒಂದೇ ಬಾಣದಿಂದ ನಗುತ್ತಾ ಅವನ ಧನುಸ್ಸನ್ನು ಕತ್ತರಿಸಿದನು. ದ್ರುಪದಾತ್ಮಜನಾದರೋ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಸಂಕ್ರುದ್ಧನಾಗಿ ಹಾರ್ದಿಕ್ಯನಿಗೆ ನಿಲ್ಲು ನಿಲ್ಲೆಂದು ಕೂಗಿ ಹೇಳಿದನು. ಅವನು ರುಕ್ಮಪುಂಖಗಳ ಸುತೇಜಯುಕ್ತ ತೊಂಬತ್ತು ಬಾಣಗಳನ್ನು ಕೃತವರ್ಮನ ಮೇಲೆ ಪ್ರಯೋಗಿಸಿದನು. ಅವು ಅವನ ಕವಚಕ್ಕೆ ತಾಗಿ ಕೆಳಗೆ ಬಿದ್ದವು. ಅವೆಲ್ಲವೂ ವ್ಯರ್ಥವಾಗಿ ಭೂಮಿಯ ಮೇಲೆ ಬಿದ್ದುದನ್ನು ನೋಡಿದ ಶಿಖಂಡಿಯು ತೀಕ್ಷ್ಣ ಕ್ಷುರಪ್ರದಿಂದ ಕೃತವರ್ಮನ ಧನುಸ್ಸನ್ನು ತುಂಡರಿಸಿದನು. ಧನುಸ್ಸು ತುಂಡಾಗಿ ಕೋಡುಗಳು ತುಂಡಾಗಿದ್ದ ಹೋರಿಯಂತೆ ಕಾಣುತ್ತಿದ್ದ ಕೃತವರ್ಮನ

ತೋಳುಗಳು ಮತ್ತು ಎದೆಗೆ ಕ್ರುದ್ಧನಾದ ಶಿಖಂಡಿಯು ಎಂಭತ್ತು ಮಾರ್ಗಣಗಳಿಂದ ಪ್ರಹರಿಸಿದನು. ಮಾರ್ಗಣಗಳಿಂದ ಕ್ಷತವಿಕ್ಷತನಾದ ಕೃತವರ್ಮನಾದರೋ ಕ್ರುದ್ಧನಾಗಿ ಮಾರ್ಗಣಗಣಗಳಿಂದ ಕೂಡಿದ್ದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಶ್ರೇಷ್ಠ ಬಾಣಗಳಿಂದ ಶಿಖಂಡಿಯ ಹೆಗಲಿಗೆ ಹೊಡೆದನು. ಹೆಗಲಿನ ಮೇಲೆ ಚುಚ್ಚಿಕೊಂಡಿದ್ದ ಬಾಣಗಳಿಂದ ಶಿಖಂಡಿಯು ಕವಲೊಡೆದ ರೆಂಬೆಗಳಿಂದ ಕೂಡಿದ ಮಹಾ ವೃಕ್ಷದಂತೆ ರಾರಾಜಿಸಿದನು. ಅನ್ಯೋನ್ಯರನ್ನು ಚೆನ್ನಾಗಿ ಪ್ರಹರಿಸಿ ರಕ್ತವನ್ನು ಸುರಿಸುತ್ತಿದ್ದ ಅವರಿಬ್ಬರೂ ಅನ್ಯೋನ್ಯರನ್ನು ಕೋಡುಗಳಿಂದ ತಿವಿದು ಹೋರಾಡುತ್ತಿರುವ ಹೋರಿಗಳಂತೆ ರಾರಾಜಿಸಿದರು. ಅನ್ಯೋನ್ಯರ ವಧೆಗೆ ಪ್ರಯತ್ನಿಸುತ್ತಾ ಆ ಇಬ್ಬರು ಮಹಾರಥರೂ ರಥಗಳಲ್ಲಿ ಸಹಸ್ರಾರು ಮಂಡಲಗಳಲ್ಲಿ ಸಂಚರಿಸುತ್ತಿದ್ದರು. ಕೃತವರ್ಮನು ಪಾರ್ಷತನನ್ನು ಎಪ್ಪತ್ತು ಸ್ವರ್ಣಪುಂಖಗಳ ಶಿಲಾಶಿತ ನಿಶಿತ ಶರಗಳಿಂದ ಹೊಡೆದನು. ಆಗ ಭೋಜನು ತ್ವರೆಮಾಡಿ ಜೀವಿತಾಂತಕರವಾದ ಘೋರ ಬಾಣವನ್ನು ಶಿಖಂಡಿಯ ಮೇಲೆ ಪ್ರಯೋಗಿಸಿದನು.

ಅದರಿಂದ ಪ್ರಹರಿಸಲ್ಪಟ್ಟ ಶಿಖಂಡಿಯು ಮೂರ್ಛಿತನಾದನು. ಮೂರ್ಛಿತನಾಗಿ ಅವನು ಧ್ವಜದಂಡದ ಆಶ್ರಯವನ್ನು ಪಡೆದು ಒರಗಿ

ಕುಳಿತುಕೊಂಡನು. ಹಾರ್ದಿಕ್ಯನ ಶರದಿಂದ ಸಂತಪ್ತನಾಗಿ ಪುನಃ ಪುನಃ ನಿಟ್ಟುಸಿರು ಬಿಡುತ್ತಿದ್ದ ಆ ಶಿಖಂಡಿಯನ್ನು ಅವನ ಸಾರಥಿಯು ರಣದಿಂದ ದೂರ ಕೊಂಡೊಯ್ದನು. ದ್ರುಪದನ ಶೂರ ಸುತನು ಹೀಗೆ ಪರಾಜಿತನಾಗಲು ವಧಿಸಲ್ಪಡುತ್ತಿರುವ ಪಾಂಡವೀ ಸೇನೆಯು ಎಲ್ಲ ಕಡೆ ಪಲಾಯನಗೈಯಿತು.

## ಅರ್ಜುನನ ಯುದ್ಧ

ಭಿರುಗಾಳಿಯು ಹತ್ತಿಯ ರಾಶಿಯನ್ನು ಎಲ್ಲಕಡೆ ಚದುರಿಸಿ ಹಾಳುಮಾಡುವಂತೆ ಶ್ವೇತಾಶ್ವನು ಕೌರವ ಸೇನೆಯನ್ನು ಧ್ವಂಸಗೊಳಿಸುತ್ತಿದ್ದನು. ತ್ರಿಗರ್ತರು, ಶಿಬಿಗಳು, ಕೌರವರು, ಶಾಲ್ವರು, ಸಂಶಪ್ತಕರು ಮತ್ತು ನಾರಾಯಣ ಸೇನೆಗಳು ಒಟ್ಟಿಗೇ ಅವನನ್ನು ಎದುರಿಸಿ ಯುದ್ಧಮಾಡಿದರು. ತ್ರಿಗರ್ತರಾಜನು ಸತ್ಯಸೇನ, ಸತ್ಯಕೀರ್ತಿ, ಮಿತ್ರದೇವ, ಶ್ರುತಂಜಯ, ಸೌಶ್ರುತಿ, ಚಿತ್ರಸೇನ ಮತ್ತು ಮಿತ್ರವರ್ಮರೆಂಬ ಸಹೋದರರೊಂದಿಗೆ ಮತ್ತು ಯುದ್ಧದಲ್ಲಿ ನಾನಾ ಶಸ್ತ್ರಗಳನ್ನು ಧರಿಸಿದ್ದ ಮಹೇಷ್ವಾಸ ಪುತ್ರರೊಂದಿಗೆ ಕದನವಾಡುತ್ತಿದ್ದನು. ಅವರು ಸಮುದ್ರವನ್ನು ಮುತ್ತಿಡುವ ಚಂಡಮಾರುತದಂತೆ ಶರಗಳ ಭಿರುಗಾಳಿಯನ್ನೇ ಎರಚುತ್ತಾ ಯುದ್ಧದಲ್ಲಿ ಅರ್ಜುನನನ್ನು ಆಕ್ರಮಣಿಸಿದರು. ನೂರು ಸಾವಿರ

ಸಂಖ್ಯೆಗಳಲ್ಲಿದ್ದ ಆ ಯೋಧರು ಎಲ್ಲರೂ ಅರ್ಜುನನನ್ನು ಎದುರಿಸಿ ಗರುಡನನ್ನು ನೋಡಿದ ಸರ್ಪಗಳು ಬಿಲವನ್ನು ಹೊಗುವಂತೆ ಯಮನ ಆಲಯಕ್ಕೆ ತೆರಳಿದರು. ಅಗ್ನಿಯಿಂದ ಸುಡಲ್ಪಡುತ್ತಿದ್ದರೂ ಪತಂಗದ ಹುಳುಗಳು ಅಗ್ನಿಯನ್ನೇ ಹೊಗುವಂತೆ ಸಮರದಲ್ಲಿ ವಧಿಸಲ್ಪಡುತ್ತಿದ್ದ ಅವರು ಅರ್ಜುನನನ್ನು ಬಿಟ್ಟು ಓಡಿ ಹೋಗಲಿಲ್ಲ. ಅರ್ಜುನನನ್ನು ಸತ್ಯಸೇನನು ಮೂರು ಬಾಣಗಳಿಂದ ಹೊಡೆದನು. ಮಿತ್ರದೇವನು ಅರವತ್ಮೂರು, ಚಂದ್ರದೇವನು ಏಳು, ಮಿತ್ರವರ್ಮನು ಎಪ್ಪತ್ಮೂರು, ಸೌಶ್ರುತಿಯು ಐದು, ಶತ್ರುಂಜಯನು ಇಪ್ಪತ್ತು ಮತ್ತು ಸುಶರ್ಮನು ಒಂಭತ್ತು ಶರಗಳಿಂದ ಅವನನ್ನು ಹೊಡೆದರು. ಆಗ ಅರ್ಜುನನು ಶಿಲಾಶಿತ ಶರಗಳಿಂದ ಶತ್ರುಂಜಯನನ್ನು ಸಂಹರಿಸಿ, ಕಿರೀಟದೊಂದಿಗೆ ಸುಶ್ರುತನ ಶಿರವನ್ನು ಕಾಯದಿಂದ ಅಪಹರಿಸಿದನು. ನಂತರ ತ್ವರೆಮಾಡಿ ಶರಗಳಿಂದ ಚಂದ್ರದೇವನನ್ನು ಯಮಕ್ಷಯಕ್ಕೆ ಕಳುಹಿಸಿದನು. ನಂತರ ಅವನು ಆ ಮಹಾರಥರಲ್ಲಿ ಒಬ್ಬೊಬ್ಬರನ್ನೂ ಐದು ಐದು ಬಾಣಗಳಿಂದ ಹೊಡೆದು ತಡೆದನು.

ಸತ್ಯಸೇನನನಾದರೋ ಸಂಕ್ರುದ್ಧನಾಗಿ ಮಹಾ ತೋಮರವನ್ನು ರಣದಲ್ಲಿ ಕೃಷ್ಣನನ್ನೇ ಗುರಿಯಿಟ್ಟು ಪ್ರಯೋಗಿಸಿ ಸಿಂಹನಾದಗೈದನು. ಉಕ್ಕಿನಿಂದ ಮಾಡಲ್ಪಟ್ಟಿದ್ದ ಆ ಮಹಾಚಂಡ ತೋಮರವು ಮಾದವನ

ಎಡಭುಜವನ್ನು ಗಾಯಗೊಳಿಸಿ ಭೂಮಿಯ ಮೇಲೆ ಬಿದ್ದಿತು. ಗಾಯಗೊಂಡ ಕೃಷ್ಣನ ಕೈಗಳಿಂದ ಮಹಾರಣದಲ್ಲಿ ಚಾವಟಿ ಮತ್ತು ಕಡಿವಾಣಗಳು ಜಾರಿ ಕೆಳಕ್ಕೆ ಬಿದ್ದವು. ಕೃಷ್ಣನು ಪುನಃ ಚಾವಟಿ ಮತ್ತು ಕಡಿವಾಣಗಳನ್ನು ಹಿಡಿದು ಆ ಅಶ್ವಗಳನ್ನು ಸತ್ಯಸೇನನ ರಥದ ಕಡೆ ಓಡಿಸಿದನು.

ಧನಂಜಯನು ಗಾಯಗೊಂಡಿದ್ದ ವಿಷ್ವಕ್ಸೇನನನ್ನು ನೋಡಿ ಸತ್ಯಸೇನನನ್ನು ತೀಕ್ಷ್ಣ ಶರಗಳಿಂದ ಗಾಯಗೊಳಿಸಿದನು. ನಂತರ ಅವನ ಸೇನೆಯ ಮಧ್ಯಭಾಗದಲ್ಲಿಯೇ ನಿಶಿತ ಬಾಣಗಳಿಂದ ಕುಂಡಲಗಳಿಂದ ಶೋಭಿಸುತ್ತಿದ್ದ ರಾಜನ ಮಹಾಶಿರವನ್ನು ದೇಹದಿಂದ ಕತ್ತರಿಸಿದನು. ಅವನನ್ನು ಸಂಹರಿಸಿ ಅರ್ಜುನನು ನಿಶಿತ ಬಾಣಗಳಿಂದ ಮಿತ್ರವರ್ಮನನ್ನು ಮುಚ್ಚಿ ತೀಕ್ಷ್ಣ ವತ್ಸದಂತದಿಂದ ಅವನ ಸಾರಥಿಯನ್ನು ಸಂಹರಿಸಿದನು. ಪುನಃ ಸಂಕ್ರುದ್ಧನಾದ ಅವನು ನೂರಾರು ಶರಗಳಿಂದ ಸಂಶಪ್ತಕ ಗಣಗಳನ್ನು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ಉರುಳಿಸಿದನು. ಆ ಮಹಾಯಶಸ್ವಿಯು ರಜತಪುಂಖದ ಕ್ಷುರಪ್ರದಿಂದ ಮಹಾತ್ಮ ಮಿತ್ರದೇವ ರಾಜನ ಶಿರವನ್ನು ತುಂಡರಿಸಿದನು. ಸಂಕ್ರುದ್ಧನಾಗಿ ಸುಶರ್ಮನನ್ನು ಕೂಡ ವಕ್ಷಸ್ಥಳದಲ್ಲಿ ಹೊಡೆದನು.

ಆಗ ಕ್ರುದ್ಧ ಸಂಶಪ್ತಕರೆಲ್ಲರೂ ಧನಂಜಯನನ್ನು ಸುತ್ತುವರೆದು ಹತ್ತು ದಿಕ್ಕುಗಳೂ ಮೊಳಗುವಂತೆ ಸಿಂಹನಾದಗೈಯುತ್ತಾ ಶಸ್ತ್ರಗಳ ಮಳೆಯನ್ನೇ ಸುರಿಸಿದರು. ಅವರಿಂದ ಹಾಗೆ ಪೀಡಿಸಲ್ಪಟ್ಟ ಅರ್ಜುನನು ಐಂದ್ರಾಸ್ತ್ರವನ್ನು ಪ್ರಕಟಿಸಿದನು. ಅದರಿಂದ ಸಹಸ್ರಾರು ಬಾಣಗಳು ಪ್ರಾದುರ್ಭವಿಸಿದವು. ಕೂಡಲೇ ಯುದ್ಧದಲ್ಲಿ ಕತ್ತರಿಸಲ್ಪಡುತ್ತಿದ್ದ ಧ್ವಜಗಳ, ಧನುಸ್ಸುಗಳ, ಪತಾಕೆಗಳೊಂದಿಗೆ ರಥಗಳ, ಶರಗಳೊಂದಿಗೆ ತುಂಡಾಗುತ್ತಿದ್ದ ಬತ್ತಳಿಕೆಗಳ, ರಥದ ನೊಗಗಳು, ತೋಳುಮರಗಳ, ಚಕ್ರಗಳ ಶಬ್ಧಗಳು ಕೇಳಿಬಂದವು. ಕಲ್ಲುಗಳು ಬೀಳುವ, ಪ್ರಾಸ-ಋಷ್ಟಿಗಳು ಬೀಳುವ, ಗದ-ಪರಿಘ-ಶಕ್ತಿ-ತೋಮರಳು ಬೀಳುವ, ಶತಘ್ನಿ-ಚಕ್ರಗಳು ಬೀಳುವ, ತೋಳುಗಳು-ತೊಡೆಗಳು ಬೀಳುವ, ಕಂಟಸೂತ್ರ-ಅಂಗದ-ಕೇಯೂರಗಳು ಬೀಳುವ, ಹಾರ-ಕಿರೀಟ-ಕವಚಗಳು ಬೀಳುವ, ಚತ್ರ-ಚಾಮರಗಳು ಬೀಳುವ, ಮುಕುಟಗಳೊಂದಿಗೆ ಶಿರಗಳು ಬೀಳುವ ಮಹಾ ಶಬ್ಧಗಳು ಅಲ್ಲಲ್ಲಿ ಕೇಳಿಬಂದವು. ಆಕಾಶದಲ್ಲಿ ಹಾರಿ ಬೀಳುತ್ತಿದ್ದ ಸುಂದರ ಕುಂಡಲಗಳು ಮತ್ತು ಕಣ್ಣುಗಳಿಂದ ಪೂರ್ಣಚಂದ್ರನಂತೆ ಹೊಳೆಯುತ್ತಿದ್ದ ಶಿರಸ್ಸುಗಳು ಆಕಾಶದಲ್ಲಿ ರಾರಾಜಿಸುವ ನಕ್ಷತ್ರಗಳಂತೆ ತೋರಿದವು. ಹತರಾಗಿ ಬಿದ್ದಿದ್ದ ಚಂದನ ಲೇಪಿತ ಶರೀರಗಳಿಂದ, ಸುಂದರ ಹಾರಗಳಿಂದ, ಮತ್ತು ಸುಂದರ ವಸ್ತ್ರಗಳಿಂದ ರಣಭೂಮಿಯು ಗಂಧರ್ವನಗರಿಯಂತೆ

ಘೋರವಾಗಿ ಕಾಣುತ್ತಿತ್ತು. ಚೂರಾದ ಪರ್ವತಗಳಂತೆ ಹತರಾಗಿ ಬಿದ್ದಿದ್ದ ಕ್ಷತ್ರಿಯ ರಾಜಪುತ್ರರು, ಆನೆಗಳು, ಮತ್ತು ಕುದುರೆಗಳಿಂದಾಗಿ ರಣಭೂಮಿಯು ಅಗಮ್ಯವಾಗಿ ಕಾಣುತ್ತಿತ್ತು. ಅಮಿತ ಸಂಖ್ಯೆಗಳಲ್ಲಿ ಶತ್ರುಗಳನ್ನೂ ಆನೆಗಳನ್ನೂ ಭಲ್ಲಗಳಿಂದ ಸಂಹರಿಸುತ್ತಿದ್ದ ಪಾಂಡವನ ರಥಚಕ್ರವು ಹೋಗಲೂ ದಾರಿಯಿಲ್ಲದಂತಾಯಿತು. ರಕ್ತದ ಕೆಸರಿನಿಂದ ಕೂಡಿದ್ದ ಆ ರಣಾಂಗಣದಲ್ಲಿ ಸಂಚರಿಸುತ್ತಿದ್ದ ಅರ್ಜುನನ ರಥಚಕ್ರಗಳು ಕೆಸರಿನಲ್ಲಿ ಹೂತುಕೊಂಡವು.

ಹುಗಿದುಹೋಗಿದ್ದ ಚಕ್ರಗಳು ಕುದುರೆಗಳನ್ನು ಬಹಳ ಆಯಾಸಗೊಳಿಸುತ್ತಿದ್ದವು. ಮನಸ್ಸು ಮತ್ತು ವಾಯುಗಳ ವೇಗವುಳ್ಳ ಆ ಕುದುರೆಗಳು ಮಹಾ ಪ್ರಯತ್ನಪಟ್ಟು ಹೋಗುತ್ತಿದ್ದವು. ಧನ್ವಿ ಪಾಂಡುಪುತ್ರನಿಂದ ವಧಿಸಲ್ಪಟ್ಟ ಆ ಸೈನದಲ್ಲಿ ಅಳಿದುಳಿದ ಎಲ್ಲರೂ ಅಲ್ಲಿ ನಿಲ್ಲದೇ ಪ್ರಾಯಶಃ ವಿಮುಖರಾಗಿದ್ದರು. ಆ ಅನೇಕ ಸಂಶಪ್ತಕ ಗಣಗಳನ್ನು ಗೆದ್ದು ಜಿಷ್ಣು ಅರ್ಜುನನು ಹೊಗೆಯಿಲ್ಲದ ಅಗ್ನಿಯಂತೆ ಪ್ರಜ್ವಲಿಸಿ ರಾರಾಜಿಸಿದನು.

## ಯುಧಿಷ್ಠಿರ-ದುರ್ಯೋಧನರ ಯುದ್ಧ

ಅನೇಕ ಶರಗಳನ್ನು ಪ್ರಯೋಗಿಸುತ್ತಿದ್ದ ಯುಧಿಷ್ಠಿರನನ್ನು ಸ್ವಯಂ ರಾಜಾ ದುರ್ಯೋಧನನು ನಿರ್ಭಯನಾಗಿ ಎದುರಿಸಿದನು. ತನ್ನ ಮೇಲೆ

ಒಮ್ಮಿಂದೊಮ್ಮೆಲೇ ಆಕ್ರಮಣಿಸಿದ ದುರ್ಯೋಧನನನ್ನು ಬೇಗನೆ ಬಾಣಗಳಿಂದ ಹೊಡೆದು ಧರ್ಮರಾಜನು “ನಿಲ್ಲು! ನಿಲ್ಲು!” ಎಂದು ಹೇಳಿದನು. ದುರ್ಯೋಧನನು ತುಂಬಾ ಕ್ರೋಧಿತನಾಗಿ ಯುಧಿಷ್ಠಿರನನ್ನು ಒಂಭತ್ತು ನಿಶಿತ ಶರಗಳಿಂದ ಮತ್ತು ಅವನ ಸಾರಥಿಯನ್ನು ಭಲ್ಲದಿಂದ ಹೊಡೆದನು. ಆಗ ರಾಜಾ ಯುಧಿಷ್ಠಿರನು ದುರ್ಯೋಧನನ ಮೇಲೆ ಹದಿಮೂರು ಶಿಲಾಶಿತ ಶಿಲೀಮುಖ ಹೇಮಪುಂಖಗಳುಳ್ಳ ಬಾಣಗಳನ್ನು ಪ್ರಯೋಗಿಸಿದನು. ಆ ಮಹಾರಥನು ನಾಲ್ಕು ಬಾಣಗಳಿಂದ ಅವನ ನಾಲ್ಕು ಕುದುರೆಗಳನ್ನು ಸಂಹರಿಸಿ ಐದನೆಯ ಬಾಣದಿಂದ ಸಾರಥಿಯ ಶಿರವನ್ನು ಕಾಯದಿಂದ ಬೇರ್ಪಡಿಸಿ ಕೆಡವಿದನು. ಆರನೆಯದರಿಂದ ಯುಧಿಷ್ಠಿರನು ದುರ್ಯೋಧನನ ಧ್ವಜವನ್ನು, ಏಳನೆಯದರಿಂದ ಧನುಸ್ಸನ್ನೂ, ಎಂಟನೆಯದರಿಂದ ಖಡ್ಗವನ್ನೂ ಭೂಮಿಯ ಮೇಲೆ ಕೆಡವಿಸಿದನು. ನಂತರ ಐದು ಬಾಣಗಳಿಂದ ಧರ್ಮರಾಜನು ದುರ್ಯೋಧನನನ್ನು ಜೋರಾಗಿ ಗಾಯಗೊಳಿಸಿದನು. ದುರ್ಯೋಧನನು ಕುದುರೆಗಳು ಸತ್ತುಹೋಗಿದ್ದ ರಥದಿಂದ ಕೆಳಕ್ಕೆ ಹಾರಿ ಭೂಮಿಯ ಮೇಲೆಯೇ ನಿಂತುಕೊಂಡನು. ಹಾಗೆ ಅವನು ಕಷ್ಟಕ್ಕೀಡಾದುದನ್ನು ನೋಡಿ ಕರ್ಣ-ಅಶ್ವತ್ಥಾಮ-ಕೃಪಾದಿಗಳು ಒಂದಾಗಿ ನರಾಧಿಪನನ್ನು ರಕ್ಷಿಸಲು ಧಾವಿಸಿ ಬಂದರು. ಕೂಡಲೇ ಪಾಂಡುಸುತರೆಲ್ಲರೂ ಯುಧಿಷ್ಠಿರನನ್ನು

ಸುತ್ತುವರೆದು ಅವನನ್ನೇ ಅನುಸರಿಸಿ ಯುದ್ಧದಲ್ಲಿ ತೊಡಗಿದರು.

ಕೂಡಲೇ ಆ ಮಹಾಯುದ್ಧದಲ್ಲಿ ಸಹಸ್ರಾರು ರಣವಾದ್ಯಗಳು ಮೊಳಗಿದವು. ರಣಾಂಗಣದ ಸುತ್ತಲೂ ಕಿಲಾಕಿಲಾ ಶಬ್ಧವು ಕೇಳಿಬಂದಿತು. ಸಮರದಲ್ಲಿ ಪಾಂಚಾಲರು ಕೌರವರೊಂದಿಗೆ ಯುದ್ಧದಲ್ಲಿ ತೊಡಗಿದರು. ಪದಾತಿಗಳು ಪದಾತಿಗಳೊಡನೆಯೂ, ಆನೆಗಳು ಆನೆಗಳೊಡನೆಯೂ, ರಥಗಳು ರಥಗಳೊಡನೆಯೂ, ಕುದುರೆಗಳು ಇತರ ಕುರುರೆಸವಾರರೊಂದಿಗೂ ಹೋರಾಡಿದರು. ಆ ಸಮರದಲ್ಲಿ ವಿಸ್ಮಯಕಾರಕ, ಯೋಚಿಸಲೂ ಅಸಾಧ್ಯವಾದ, ಉತ್ತಮ ಶಸ್ತ್ರಗಳನ್ನುಪಯೋಗಿಸಿದ ಪ್ರೇಕ್ಷಣೀಯ ದ್ವಂದ್ವಯುದ್ಧಗಳು ನಡೆದವು. ಪರಸ್ಪರರನ್ನು ವಧಿಸಲು ಬಯಸಿ ಯೋಧವ್ರತವನ್ನು ಅನುಷ್ಠಾನಗೈಯುತ್ತಿರುವ ಅವರು ಸಮರದಲ್ಲಿ ಅತ್ಯಂತವೇಗವಾಗಿ ಅನ್ಯೋನ್ಯರನ್ನು ಸಂಹರಿಸುತ್ತಿದ್ದರು. ಯಾವುದೇ ಕಾರಣಕ್ಕೂ ಅವರು ಯುದ್ಧದಲ್ಲಿ ಬೆನ್ನುತೋರಿಸುತ್ತಿರಲಿಲ್ಲ. ಮುಹೂರ್ತಕಾಲ ಮಾತ್ರ ಆ ಯುದ್ಧವು ನೋಡಲು ಮಧುರವಾಗಿತ್ತು. ಆದರೆ ಕೂಡಲೇ ಅದು ಮರ್ಯಾದೆಗಳಿಲ್ಲದೇ ಉನ್ಮತ್ತರು ಯುದ್ಧಮಾಡುತ್ತಿರುವರೋ ಎನ್ನುವಂತೆ ಪರಿಣಮಿಸಿತು. ರಣಮೂರ್ಧನಿಯಲ್ಲಿ ರಥಸೇನಾನಿಗಳು ಗಜಸೇನಾನಿಗಳನ್ನು ಎದುರಿಸಿ ಸನ್ನತಪರ್ವ ಶರಗಳಿಂದ ಕಾಲನಿಗೆ

ಕಳುಹಿಸತೊಡಗಿದರು. ಅನೇಕ ಆನೆಗಳು ಕುದುರೆಗಳನ್ನು ಆಕ್ರಮಿಸಿ ನಾಶಗೊಳಿಸುತ್ತಿದ್ದವು. ಅಲ್ಲಲ್ಲಿ ಆಗಾಗ ಕುದುರೆಗಳು ಉಗ್ರವಾಗಿ ಓಡಿಹೋಗುತ್ತಿದ್ದವು. ಅನೇಕ ಆನೆಗಳು ಕುದುರೆಗಳನ್ನು ಆಕ್ರಮಿಸಿ ಅವುಗಳನ್ನು ದಂತಗಳಿಂದ ಸೀಳಿದವು ಮತ್ತು ಇತರ ಕುದುರೆಗಳನ್ನು ಕಾಲಿನಿಂದ ತುಳಿದು ಜಜ್ಜಿದವು. ಅವುಗಳು ಅಶ್ವಾರೋಹಿಗಳನ್ನು ಮತ್ತು ಅಶ್ವಗಳನ್ನು ರಣದಲ್ಲಿ ದಂತಗಳಿಂದ ಸೀಳುತ್ತಿದ್ದವು. ಇತರ ಆನೆಗಳು ಅವುಗಳನ್ನು ವೇಗದಿಂದ ಮೇಲೆತ್ತಿ ಅತಿ ದೂರದ ವರೆಗೆ ಎಸೆಯುತ್ತಿದ್ದವು. ಪದಾತಿಗಳಿಂದ ಹೊಡೆಯಲ್ಪಟ್ಟ ಆನೆಗಳು ಘೀಳಿಡುತ್ತಾ ಸುತ್ತಲೂ ಓಡಿಹೋಗುತ್ತಿದ್ದವು. ಹತ್ತು ದಿಕ್ಕುಗಳಲ್ಲಿ ಓಡುತ್ತಿದ್ದ ಆನೆಗಳು ಘೋರವಾಗಿ ಆರ್ತಸ್ವರಗೈಯುತ್ತಿದ್ದವು. ಮಹಾರಣದಲ್ಲಿ ಓಡಿಹೋಗುತ್ತಿದ್ದ ಆನೆಗಳಿಂದ ಕಾಲಿಗೆ ಸಿಲುಕಿದ ಪದಾತಿಗಳು ಆಭರಣಗಳನ್ನೂ ಕೂಡಲೇ ಕಳಚಿ ಎಸೆದು ಹಾರಿಕೊಂಡು ಓಡಿ ಹೋಗುತ್ತಿದ್ದರು. ಆ ಆಭರಣಗಳನ್ನು ತಮ್ಮ ಮೇಲೆ ಪ್ರಯೋಗಿಸುತ್ತಿದ್ದಾರೆಂದು ಭಾವಿಸಿ ಮಹಾಗಜಗಳು ಆ ಚಿತ್ರ ಆಭರಣಗಳನ್ನು ತುಳಿದು ಪುಡಿ ಪುಡಿ ಮಾಡುತ್ತಿದ್ದವು. ಇತರ ಪದಾತಿಗಳು ಪ್ರಾಸ-ತೋಮರ-ಶಕ್ತಿಗಳಿಂದ ಆನೆಗಳ ಕುಂಭಸ್ಥಳಗಳನ್ನೂ, ದಂತಗಳನ್ನೂ ಹಿಡಿದು ತಿವಿಯುತ್ತಿದ್ದರು. ಪಕ್ಕದಲ್ಲಿದ್ದ ರಥಿಗಳು ಮತ್ತು ಅಶ್ವಾರೂಢರು ಕೆಲವರು ಗದೆಗಳನ್ನು

ಹಿಡಿದು ಆನೆಗಳ ಪಕ್ಕೆಗಳನ್ನು ತುಂಬಾ ದಾರುಣವಾಗಿ ಹೊಡೆಯಲು ಅವು ಒಡೆದು ಭೂಮಿಯ ಮೇಲೆ ಬೀಳುತ್ತಿದ್ದವು.

ಇತರ ಮಹಾಗಜಗಳು ಕವಚ ಮತ್ತು ಪತಾಕೆಗಳೊಂದಿಗೆ ರಥ ಮತ್ತು ಅಶ್ವಾರೋಹಿಗಳನ್ನು ಮೇಲೆತ್ತಿ ಭೂಮಿಯ ಮೇಲೆ ವೇಗದಿಂದ ಎಸೆಯುತ್ತಿದ್ದವು. ಆ ಘೋರರೂಪದ ಮಹಾಯುದ್ಧದಲ್ಲಿ ಆನೆಗಳು ರಥವನ್ನು ಆಕ್ರಮಣಿಸಿ ಸೊಂಡಿಲಿನಿಂದ ಮೇಲೆತ್ತಿ ಕೂಡಲೇ ಎಸೆಯುತ್ತಿದ್ದವು. ಮಹಾಗಜಗಳೂ ಕೂಡ ನಾರಾಚಗಳಿಂದ ವಧಿಸಲ್ಪಟ್ಟು ವಜ್ರದಿಂದ ಭಗ್ನವಾದ ಪರ್ವತ ಶಿಖರಗಳಂತೆ ಮಹೀತಲದಲ್ಲಿ ಬೀಳುತ್ತಿದ್ದವು. ಯೋಧರು ಯೋಧರನ್ನು ಯುದ್ಧದಲ್ಲಿ ಎದುರಿಸಿ ಅನ್ಯೋನ್ಯರ ಕೂದಲುಗಳನ್ನು ಎಳೆದು ಮುಷ್ಟಿಗಳಿಂದ ಹೊಡೆದು ಕೆಳಗೆ ಬೀಳಿಸುತ್ತಿದ್ದರು. ಇತರರು ಎರಡು ಭುಜಗಳನ್ನೂ ಮೇಲೆತ್ತಿ ಭೂಮಿಯ ಮೇಲೆ ಬೀಳಿಸುತ್ತಿದ್ದರು. ಚಡಪಡಿಸುತ್ತಿದ್ದವರ ಎದೆಯಮೇಲೆ ಕಾಲಿಟ್ಟು ತಲೆಗಳನ್ನು ಕತ್ತರಿಸುತ್ತಿದ್ದರು. ಅನ್ಯರು ಮೃತರಾದವರನ್ನು ಕಾಲುಗಳಿಂದ ಒದೆದು ತುಳಿಯುತ್ತಿದ್ದರು. ಇನ್ನೂ ಕೆಲವರು ಜೀವವಿದ್ದವರ ಶರೀರಗಳಲ್ಲಿ ಆಯುಧಗಳನ್ನು ನಾಟಿಸಿ ಕೊಲ್ಲುತ್ತಿದ್ದರು. ಅಲ್ಲಿ ಯೋಧರ ಮಹಾ ಮುಷ್ಟಿಯುದ್ಧವೂ ನಡೆಯಿತು. ಹಾಗೆಯೇ ಕೇಶಗಳನ್ನು ಹಿಡಿದು ಕೇವಲ ಉಗ್ರ ಬಾಹುಯುದ್ಧಗಳೂ

ನಡೆದವು. ಇನ್ನೊಬ್ಬರೊಡನೆ ಯುದ್ಧದಲ್ಲಿ ಸಮಾಸಕ್ತರಾಗಿದ್ದಾಗ ಇತರರು ತಿಳಿಸದೆಯೇ ನಾನಾ ಶಸ್ತ್ರಗಳಿಂದ ಸಮರದಲ್ಲಿ ಬಹಳಷ್ಟು ಜನರನ್ನು ವಧಿಸಿದರು. ಹೀಗೆ ಪರಸ್ಪರರನ್ನು ಹತ್ತಿಕೊಂಡು ಸಂಕುಲ ಯುದ್ಧವು ನಡೆಯುತ್ತಿರಲು ನೂರಾರು ಸಹಸ್ರಾರು ಕಬಂಧಗಳು ಮೇಲೆ ಎದ್ದು ನಿಂತವು. ರಕ್ತದಿಂದ ತೋಯ್ದುಹೋಗಿದ್ದ ಶಸ್ತ್ರಗಳು ಮತ್ತು ಕವಚಗಳು ಕೂಡ ರಕ್ತದಿಂದ ಕೆಂಪುಬಣ್ಣವನ್ನು ತಳೆದಿದ್ದ ವಸ್ತ್ರಗಳಂತೆಯೇ ತೋರಿದವು. ಹೀಗೆ ಅತ್ಯಂತ ದಾರುಣ ಸಂಕುಲ ಮಹಾಯುದ್ಧವು ನಡೆಯುತ್ತಿರಲು ಹುಚ್ಚೆದ್ದ ರಂಗಮಂಚದಂತೆ ಶಬ್ಧಗಳಿಂದ ಜಗತ್ತೇ ತುಂಬಿಕೊಂಡಿತು. ಯುದ್ಧಮಾಡಬೇಕೆಂದು ಯುದ್ಧಮಾಡುತ್ತಿದ್ದ ಜಯಾಭಿಲಾಷೀ ರಾಜರು ಶರಾತುರರಾಗಿ ತಮ್ಮವರು ಯಾರು ಮತ್ತು ಶತ್ರುಗಳು ಯಾರು ಎನ್ನುವುದನ್ನು ತಿಳಿದುಕೊಳ್ಳದೇ ಯುದ್ಧಮಾಡುತ್ತಿದ್ದರು. ಕೌರವರು ಕೌರವರನ್ನೇ ಸಂಹರಿಸುತ್ತಿದ್ದರು. ಎದುರಾದ ಶತ್ರುಗಳನ್ನು ಕೂಡ ಸಂಹರಿಸುತ್ತಿದ್ದರು. ಎರಡೂ ಸೇನೆಗಳ ವೀರರಲ್ಲಿ ಒಂದು ತರಹದ ವ್ಯಾಕುಲತೆಯು ಹುಟ್ಟಿಕೊಂಡಿತು. ಭಗ್ನರಥಗಳಿಂದ, ಕೆಳಗುರುಳಿದ ಆನೆಗಳಿಂದ, ಬಿದ್ದ ಕುದುರೆಗಳಿಂದ, ಉರುಳಿಸಲ್ಪಟ್ಟ ಪದಾತಿಗಳಿಂದ ಮತ್ತು ಮಾಂಸ-ರಕ್ತಗಳ ಕೆಸರಿನಿಂದ ರಣಭೂಮಿಯು ಅಗಮ್ಯವಾಗಿ ಪರಿಣಮಿಸಿತು. ಕ್ಷಣದಲ್ಲಿಯೇ ರಕ್ತದ ನದಿಯು ಹರಿಯತೊಡಗಿತು.

ಪಾಂಚಾಲರನ್ನು ಕರ್ಣನೂ, ತ್ರಿಗರ್ತರನ್ನು ಧನಂಜಯನೂ ಮತ್ತು ಕುರುಗಳನ್ನೂ ಅವರ ಗಜಸೇನೆಗಳನ್ನೂ ಭೀಮಸೇನನು ಸರ್ವಶಃ ವಧಿಸಿದರು. ಈ ರೀತಿ ಅಪರಾಹ್ಣದಲ್ಲಿ ವಿಪುಲ ಜಯವನ್ನು ಬಯಸುತ್ತಿದ್ದ ಕುರು-ಪಾಂಡವಸೇನೆಗಳ ನಾಶವು ನಡೆಯಿತು.

ಭಾಗಶಃ ಸೇನೆಗಳು ಯುದ್ಧದಲ್ಲಿ ತೊಡಗಿರಲು ದುರ್ಯೋಧನನು ಇನ್ನೊಂದು ರಥವನ್ನು ಏರಿದನು. ವಿಷಭರಿತ ಸರ್ಪದಂತೆ ಮಹಾ ಕ್ರೋಧದಿಂದ ಆವಿಷ್ಟನಾದ ದುರ್ಯೋಧನನು ಯುಧಿಷ್ಠಿರನನ್ನು ನೋಡಿ ಸೂತನಿಗೆ ಹೇಳಿದನು:

“ಬೇಗ ಹೋಗು! ಹೋಗು! ಸಾರಥೇ! ಶ್ವೇತ ಛತ್ರದಡಿಯಲ್ಲಿ ಕವಚಧರಿಸಿ ನಿಂತಿರುವ ರಾಜ ಪಾಂಡವನಿರುವಲ್ಲಿಗೆ ಬೇಗನೆ ನನ್ನನ್ನು ಕೊಂಡೊಯ್ಯಿ!”

ರಾಜನಿಂದ ಹಾಗೆ ಪ್ರಚೋದಿಸಲ್ಪಟ್ಟ ಸೂತನು ರಾಜನ ಉತ್ತಮ ರಥವನ್ನು ಯುಧಿಷ್ಠಿರನ ಎದುರಾಗಿ ಕೊಂಡೊಯ್ದನು. ಆಗ ಯುಧಿಷ್ಠಿರನು ಮದಿಸಿದ ಸಲಗದಂತೆ ಕ್ರುದ್ಧನಾಗಿ ಸುಯೋಧನನಿರುವಲ್ಲಿಗೆ ಹೋಗು ಎಂದು ಸಾರಥಿಯನ್ನು ಪ್ರಚೋದಿಸಿದನು. ಅವರಿಬ್ಬರು ವೀರ ಸಹೋದರರು ಯುದ್ಧದಲ್ಲಿ ಸಂಘರ್ಷಿಸಿ ಶರಗಳಿಂದ ಅನ್ಯೋನ್ಯರನ್ನು ಗಾಯಗೊಳಿಸಿದರು. ಆಗ

ದುರ್ಯೋಧನನು ಧರ್ಮಶೀಲನ ಧನುಸ್ಸನ್ನು ಶಿಲಾಶಿತ ಭಲ್ಲದಿಂದ ತುಂಡರಿಸಿದನು. ಆ ಕೃತ್ಯವನ್ನು ಸಂಕ್ರುದ್ಧನಾದ ಯುಧಿಷ್ಠಿರನು ಸಹಿಸಿಕೊಳ್ಳಲಿಲ್ಲ. ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ಧರ್ಮಪುತ್ರನು ತುಂಡಾದ ಧನುಸ್ಸನ್ನು ಎಸೆದು ಇನ್ನೊಂದು ಧನುಸ್ಸನ್ನು ಎತ್ತಿಕೊಂಡನು. ಅವನು ದುರ್ಯೋಧನನ ಧ್ವಜ ಮತ್ತು ಧನುಸ್ಸುಗಳನ್ನು ತುಂಡರಿಸಿಸನು. ದುರ್ಯೋಧನನಾದರೋ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಪಾಂಡವನಿಗೆ ತಿರುಗಿ ಹೊಡೆದನು. ಪರಸ್ಪರರನ್ನು ಗೆಲ್ಲಲು ಬಯಸಿ ಕ್ರುದ್ಧ ಸಿಂಹಗಳಂತೆ ರೋಷಗೊಂಡ ಅವರಿಬ್ಬರು ಅನ್ಯೋನ್ಯರ ಮೇಲೆ ಶರವರ್ಷಗಳನ್ನು ಸುರಿಸಿದರು.

ಗೂಳಿಗಳಂತೆ ಗರ್ಜಿಸುತ್ತಾ ಅನ್ಯೋನ್ಯರನ್ನು ಪ್ರಹರಿಸುತ್ತಿದ್ದ ಆ ಮಹಾರಥರಿಬ್ಬರೂ ಪರಸ್ಪರರನ್ನು ದುರುಗುಟ್ಟಿ ನೋಡುತ್ತಾ ಸುತ್ತುತ್ತಿದ್ದರು. ಕಿವಿಯ ತುದಿಯವರೆಗೂ ಸೆಳೆದು ಬಿಡುತ್ತಿದ್ದ ಬಾಣಗಳಿಂದ ಅನ್ಯೋನ್ಯರನ್ನು ಬಹಳವಾಗಿ ಗಾಯಗೊಳಿಸಿದ ಅವರಿಬ್ಬರೂ ಹೂಬಿಟ್ಟ ಮುತ್ತುಗದ ಮರಗಳಂತೆ ರಾರಾಜಿಸುತ್ತಿದ್ದರು. ಮಹಾಯುದ್ಧದಲ್ಲಿ ಅವರಿಬ್ಬರೂ ಮತ್ತೆ ಮತ್ತೆ ಸಿಂಹನಾದಗೈಯುತ್ತಾ ಅನ್ಯೋನ್ಯರನ್ನು ಬೆದರಿಸುತ್ತಿದ್ದರು. ಚಪ್ಪಾಳೆಗಳನ್ನು ತಟ್ಟುತ್ತಾ

ಧನುಸ್ಸನ್ನು ಟೇಂಕರಿಸಿ ಶಬ್ಧಮಾಡುತ್ತಿದ್ದರು. ಆ ರಥಸತ್ತಮರಿಬ್ಬರೂ ಶಂಖಗಳನ್ನು ಊದಿ ಶಬ್ಧಮಾಡುತ್ತಿದ್ದರು. ಅನ್ಯೋನ್ಯರನ್ನು ಬಹಳವಾಗಿ ಪೀಡಿಸುತ್ತಿದ್ದರು. ಆಗ ರಾಜಾ ಯುಧಿಷ್ಠಿರನು ಕ್ರುದ್ಧನಾಗಿ ವಜ್ರವೇಗವುಳ್ಳ ಮೂರು ದುರಾಸದ ಶರಗಳಿಂದ ದುರ್ಯೋಧನನ ಎದೆಗೆ ಹೊಡೆದನು. ಅದಕ್ಕೆ ಪ್ರತಿಯಾಗಿ ಕೂಡಲೇ ದುರ್ಯೋಧನನು ಐದು ಶಿಲಾಶಿತ ಹೇಮಪುಂಖ ನಿಶಿತ ಬಾಣಗಳಿಂದ ಮಹೀಪತಿಯನ್ನು ಹೊಡೆದನು. ಆಗ ದುರ್ಯೋಧನನು ಮಹಾ ಉಲ್ಕೆಯಂತಿದ್ದ ತೀಕ್ಷ್ಣವಾದ ಸಂಪೂರ್ಣ ಉಕ್ಕಿನಿಂದ ಮಾಡಿದ್ದ ಶಕ್ತ್ಯಾಯುಧವನ್ನು ಪ್ರಯೋಗಿಸಿದನು. ಬೀಳುತ್ತಿದ್ದ ಆ ಶಕ್ತಿಯನ್ನು ಧರ್ಮರಾಜನು ಒಮ್ಮೆಲೇ ಶಿಲಾಶಿತ ಬಾಣಗಳಿಂದ ತುಂಡರಿಸಿ, ದುರ್ಯೋಧನನನ್ನು ಏಳರಿಂದ ಹೊಡೆದನು. ಹೇಮದಂಡದ ಆ ಮಹಾಘನ ಶಕ್ತ್ಯಾಯುಧವು ಕೆಳಗೆ ಬಿದ್ದಿತು. ಕೆಳಗೆ ಬೀಳುತ್ತಿದ್ದ ಅದು ಶಿಖಿಯಿಂದ ಉತ್ಪನ್ನವಾದ ಮಹಾ ಉಲ್ಕೆಯಂತೆ ವಿರಾಜಿಸಿತು. ಶಕ್ತಿಯು ನಾಶವಾದುದನ್ನು ನೋಡಿದ ದುರ್ಯೋಧನನು ನಿಶಿತವಾದ ಒಂಭತ್ತು ಭಲ್ಲಗಳಿಂದ ಯುಧಿಷ್ಠಿರನನ್ನು ಹೊಡೆದನು. ಯುಧಿಷ್ಠಿರನು ಆ ಬಲಶಾಲಿಯಿಂದ ಅತಿಯಾಗಿ ಗಾಯಗೊಂಡನು. ಅವನು ಬಾಣವೊಂದನ್ನು ಹಿಡಿದು ದುರ್ಯೋಧನನಿಗೆ ಗುರಿಯಿಟ್ಟನು. ಆ ಉಗ್ರ ಬಾಣವನ್ನು ಧನುಸ್ಸಿಗೆ ಹೂಡಿ ಕ್ರುದ್ಧನಾದ ರಾಜನು ರಾಜನ ಮೇಲೆ ಪ್ರಯೋಗಿಸಿದನು. ಆ

ಬಾಣವು ದುರ್ಯೋಧನನಿಗೆ ತಾಗಿ, ರಾಜನನ್ನು ಮೂರ್ಛೆಗೊಳಿಸಿ, ಭೂಮಿಯನ್ನು ಸೀಳಿ ಹೊಕ್ಕಿಕೊಂಡಿತು.

ಆಗ ದುರ್ಯೋಧನನು ಕ್ರುದ್ಧನಾಗಿ ಕಲಹವನ್ನು ಕೊನೆಗೊಳಿಸಬೇಕೆಂದು ಬಯಸಿ ಗದೆಯನ್ನು ಮೇಲೆತ್ತಿಕೊಂಡು ವೇಗದಿಂದ ಪಾಂಡವನ ಕಡೆ ಧಾವಿಸಿ ಎರಗಿದನು. ದಂಡವನ್ನು ಹಿಡಿದ ಅಂತಕನಂತೆ ಗದೆಯನ್ನು ಮೇಲೆತ್ತಿ ಬರುತ್ತಿದ್ದ ದುರ್ಯೋಧನನನ್ನು ನೋಡಿ ಧರ್ಮರಾಜನು ಮಹಾವೇಗವುಳ್ಳ, ಮಹಾ ಉಲ್ಕೆಯಂತೆ ಉರಿದು ಬೆಳಗುತ್ತಿದ್ದ ಮಹಾಶಕ್ತಿಯನ್ನು ಪ್ರಯೋಗಿಸಿದನು. ಅದು ರಥಸ್ಥ ದುರ್ಯೋಧನ ಕವಚವನ್ನು ಸೀಳಿ ಗಾಯಗೊಳಿಸಿತು. ಅದರಿಂದ ತುಂಬಾ ಸಂವಿಗ್ನ ಹೃದಯನಾದ ಅವನು ಕೆಳಗೆ ಬಿದ್ದು ಮೂರ್ಛಿತನಾದನು. ಆಗ ವ್ಯಸನಸಮುದ್ರದಲ್ಲಿ ಮುಳುಗಿಹೋಗಿದ್ದ ದುರ್ಯೋಧನನ ಬಳಿಗೆ ತ್ವರೆಮಾಡಿ ಕೃತವರ್ಮನು ಸಮೀಪಿಸಿದನು. ಭೀಮನೂ ಕೂಡ ಹೇಮಪರಿಷ್ಕೃತ ಮಹಾಗದೆಯನ್ನು ಹಿಡಿದು ವೇಗದಿಂದ ಯುದ್ಧದಲ್ಲಿ ಕೃತವರ್ಮನನ್ನು ಆಕ್ರಮಣಿಸಿದನು. ಹೀಗೆ ಶತ್ರುಗಳೊಡನೆ ಕೌರವರ ಯುದ್ಧವು ನಡೆಯಿತು.

## ಹದಿನಾರನೆಯ ದಿನದ ಯುದ್ಧ ಸಮಾಪ್ತಿ

ಆಗ ಯುದ್ಧದುರ್ಮದರಾದ ಕೌರವರು ಕರ್ಣನನ್ನು

ಮುಂದೆಮಾಡಿಕೊಂಡು ಪುನಃ ಹಿಂದಿರುಗಿ ದೇವಾಸುರಸಮಾನ ಸಂಗ್ರಾಮವನ್ನು ನಡೆಸಿದರು. ಆನೆ-ರಥ-ಸೈನಿಕ-ಅಶ್ವ-ಶಂಖಗಳ ಶಬ್ಧಗಳಿಂದ ಹರ್ಷಿತರಾದ ಅವರು ರಥ-ಗಜ-ಅಶ್ವ-ಪದಾತಿ ಸೈನಿಕರು ಶತ್ರುಗಳನ್ನು ಎದುರಿಸಿ ವಿವಿಧ ಶಸ್ತ್ರಗಳನ್ನು ಪ್ರಯೋಗಿಸಿ ಪ್ರಹರಿಸಿದರು. ಆ ಮಹಾಯುದ್ಧದಲ್ಲಿ ಆನೆ-ರಥ-ಕುದುರೆಗಳನ್ನೇರಿದ ಶ್ರೇಷ್ಠ ಪುರುಷರು ಬಾಣ-ಪರಶು-ಖಡ್ಗ-ಪಟ್ಟಿಶಗಳಿಂದಲೂ ಅನೇಕ ವಿಧದ ಬಾಣಗಳಿಂದಲೂ ಪುರುಷರನ್ನು ಸಂಹರಿಸುತ್ತಿದ್ದರು. ಕಮಲ-ಸೂರ್ಯ-ಚಂದ್ರರ ಕಾಂತಿಗೆ ಸಮಾನ ಕಾಂತಿಯುಳ್ಳ ಬಿಳಿಯ ಹಲ್ಲುಗಳ ಸಾಲುಗಳಿಂದ, ಮೂಗು ಮತ್ತು ಕಣ್ಣುಗಳಿಂದ ಶೋಭಿಸುತ್ತಿದ್ದ ಸುಂದರ ಮುಖಗಳಿಂದ, ಸುಂದರ ಮುಕುಟ-ಕುಂಡಲಗಳಿಂದ ಕೂಡಿದ ಪುರುಷರ ಶಿರಗಳಿಂದ ರಣಭೂಮಿಯು ಶೋಭಿಸುತ್ತಿತ್ತು. ನೂರಾರು ಪರಿಘ, ಮುಸುಲ, ಶಕ್ತಿ, ತೋಮರ, ನಖರ, ಭುಶಂಡಿ ಮತ್ತು ಗದೆಗಳಿಂದ ಗಾಯಗೊಂಡ ಮನುಷ್ಯರು, ಆನೆಗಳು ಮತ್ತು ಕುದುರೆಗಳಿಂದಾಗಿ ರಣಭೂಮಿಯಲ್ಲಿ ರಕ್ತದ ಪ್ರವಾಹವೇ ಹರಿಯಿತು. ಜಜ್ಜಲ್ಪಟ್ಟಿದ್ದ ಮನುಷ್ಯರು, ರಥಗಳು, ಆನೆಗಳು ಮತ್ತು ಕುದುರೆಗಳು ನೋಡಲು ಅತಿ ಭಯಂಕರವಾಗಿ ಕಾಣುತ್ತಿದ್ದವು. ಶತ್ರುಗಳಿಂದ ಹತವಾಗಿದ್ದ ಆ ಸೇನೆಗಳಿಂದ ರಣಭೂಮಿಯು ಪ್ರಳಯಕಾಲದಲ್ಲಿನ ಯಮರಾಜ್ಯದಂತೆ ಕಾಣುತ್ತಿತ್ತು. ಅನಂತರ ಕೌರವ ಸೈನಿಕರು ಮತ್ತು

ಧೃತರಾಷ್ಟ್ರನ ಮಕ್ಕಳು ರಣದಲ್ಲಿ ಅಮಿತಬಲವನ್ನು ಮುಂದಿರಿಸಿಕೊಂಡು ಶಿನಿಯ ಮೊಮ್ಮಗನನ್ನು ಆಕ್ರಮಣಿಸಿದರು. ಅಮರಾಸುರ ಸೇನೆಗಳಂತಿದ್ದ, ಸಮುದ್ರದ ಭೋರ್ಗರೆಯಂತೆ ಗರ್ಜಿಸುತ್ತಿದ್ದ, ಶ್ರೇಷ್ಠ ನರ-ಅಶ್ವ-ರಥ-ಆನೆಗಳಿಂದ ಕೂಡಿದ ಕೌರವ ಸೇನೆಯು ರಕ್ತರಂಜಿತವಾಗಿಯೂ ಭಯಂಕರವಾಗಿಯೂ ಪ್ರಕಾಶಿಸುತ್ತಿತ್ತು.

ಕರ್ಣನು ಯುದ್ಧದಲ್ಲಿ ದಿನಕರಕಿರಣಗಳ ಪ್ರಭೆಯುಳ್ಳ ಪೃಷತಗಳಿಂದ ಶಿನಿಪ್ರವೀರನನ್ನು ಪ್ರಹರಿಸಿದನು. ಶಿನಿವೃಷಭನೂ ಕೂಡ ರಣದಲ್ಲಿ ಸರ್ಪವಿಷಸಮಪ್ರಭೆಯುಳ್ಳ ವಿವಿಧ ಶರಗಳಿಂದ ತ್ವರೆಮಾಡಿ ಕರ್ಣನನ್ನು ಅವನ ರಥ-ಕುದುರೆಗಳು ಮತ್ತು ಸಾರಥಿಯರನ್ನೂ ಸೇರಿಸಿ, ಪ್ರಹರಿಸಿದನು. ಶಿನಿವೃಷಭನ ಶರಪೀಡಿತ ರಥರ್ಷಭ ವಸುಷೇಣನ ಬಳಿಗೆ ಕೌರವ ಅತಿರಥರು ಆನೆ-ರಥ-ಅಶ್ವ-ಪದಾತಿಗಳೊಂದಿಗೆ ಧಾವಿಸಿಬಂದರು. ಆಗ ಅತಿವೇಗಶಾಲಿಗಳಾದ ದ್ರುಪದಸುತ ಮತ್ತು ಅವನ ಸಖರು ಸಮುದ್ರದಂತಿದ್ದ ಶತ್ರು ಸೇನೆಯನ್ನು ಆಕ್ರಮಣಿಸಿ, ಮಹಾ ಪುರುಷ-ರಥ-ಅಶ್ವ-ಗಜಕ್ಷಯವನ್ನು ನಡೆಸಿದರು.

ಅನಂತರ ಪುರುಷಶ್ರೇಷ್ಠ ಅರ್ಜುನ-ಕೇಶವರು ಆಹ್ನಿಕವನ್ನು ಪೂರೈಸಿ ಯಥಾವಿಧಿಯಾಗಿ ಪ್ರಭು ಭವನನ್ನು ಪೂಜಿಸಿ ಶತ್ರುವಧೆಗೈಯುವ ನಿಶ್ಚಯಮಾಡಿಕೊಂಡು ಕೌರವ ಸೇನೆಯ ಕಡೆ ಧಾವಿಸಿ ಬಂದರು.

ಗುಡುಗಿನಂತೆ ಶಬ್ಧಮಾಡುತ್ತಿದ್ದ, ಗಾಳಿಯಿಂದ ಬೀಸುತ್ತಿದ್ದ ಪಾತಕೆಗಳಿಂದ ಯುಕ್ತವಾದ, ಬಿಳಿಯ ಕುದುರೆಗಳು ಎಳೆದು ತರುತ್ತಿದ್ದ ಅವರ ರಥವು ಹತ್ತಿರಬರುತ್ತಿರುವುದನ್ನು ಶತ್ರುಗಳು ಉತ್ಸಾಹಶೂನ್ಯರಾಗಿ ನೋಡಿದರು. ಅನಂತರ ಅರ್ಜುನನು ರಣದಲ್ಲಿ ನರ್ತಿಸುತ್ತಿರುವನೋ ಎನ್ನುವಂತೆ ಗಾಂಡೀವವನ್ನು ಟೇಂಕರಿಸಿ ಶರಸಾಲುಗಳಿಂದ ಆಕಾಶವನ್ನೂ, ದಿಕ್ಕು-ಉಪದಿಕ್ಕುಗಳನ್ನೂ ತುಂಬಿಸಿದನು. ಬಿರುಗಾಳಿಯು ಮೇಘಮಂಡಲವನ್ನು ಚದುರಿಸಿಬಿಡುವಂತೆ ಅವನು ಬಾಣಗಳಿಂದ ವಿಮಾನದಂತಿರುವ ರಥಗಳನ್ನು, ಅವುಗಳ ಯಂತ್ರ, ಆಯುಧ, ಧ್ವಜಗಳೊಂದಿಗೆ ಮತ್ತು ಸಾರಥಿಗಳೊಂದಿಗೆ ದಿಕ್ಕಾಪಾಲಾಗಿ ಮಾಡಿದನು. ಅರ್ಜುನನು ಪತಾಕೆ-ಆಯುಧ-ಧ್ವಜ ಸಹಿತ ಆನೆಗಳನ್ನು, ಮಾವುತರನ್ನು, ಕುದುರೆಗಳನ್ನೂ, ಕುದುರೆಸವಾರರನ್ನೂ ಬಾಣಗಳಿಂದ ಯಮಕ್ಷಯಕ್ಕೆ ಕಳುಹಿಸಿದನು. ಅಂತಕನಂತೆ ಕ್ರುದ್ಧ ತಡೆಯಲಸಾಧ್ಯ ಆ ಮಹಾರಥನನ್ನು ದುರ್ಯೋಧನನು ಓರ್ವನೇ ವಿವಿಧ ಬಾಣಗಳಿಂದ ಪ್ರಹರಿಸಿ ಆಕ್ರಮಣಿಸಿದನು. ಅರ್ಜುನನು ಅವನ ಧನುಸ್ಸನ್ನೂ, ಸೂತನನ್ನೂ, ಕೇತುವನ್ನೂ, ಕುದುರೆಗಳನ್ನೂ ಏಳು ಸಾಯಕಗಳಿಂದ ನಾಶಗೊಳಿಸಿ ಒಂದೇ ಒಂದು ಪತ್ರಿಯಿಂದ ಅವನ ಚತ್ರವನ್ನೂ ತುಂಡರಿಸಿದನು. ದುರ್ಯೋಧನನನ್ನು ಸಂಹರಿಸಲು ಒಂಭತ್ತನೆಯ ಶ್ರೇಷ್ಠ

ಬಾಣವೊಂದನ್ನು ಅವನು ತೆಗೆದು ಪ್ರಹರಿಸಲು ದ್ರೌಣಿಯು ಅದನ್ನು ಏಳು ಭಾಗಗಳನ್ನಾಗಿ ತುಂಡರಿಸಿದನು. ಆಗ ಅರ್ಜುನನು ದ್ರೌಣಿಯ ಧನುಸ್ಸನ್ನು ತುಂಡರಿಸಿ ಮತ್ತು ಶ್ರೇಷ್ಠ ಕುದುರೆಗಳನ್ನು ಬಾಣಗಳಿಂದ ಸಂಹರಿಸಿ ಕೃಪನ ಉಗ್ರ ಧನುಸ್ಸನ್ನೂ ತುಂಡರಿಸಿದನು. ಹಾರ್ದಿಕ್ಯನ ಧನುಸ್ಸು ಧ್ವಜಗಳನ್ನು ತುಂಡರಿಸಿ, ಅಶ್ವಗಳನ್ನು ಸಂಹರಿಸಿ, ದುಃಶಾಸನನ ಬಿಲ್ಲನ್ನು ಕತ್ತರಿಸಿಸಿ ಅರ್ಜುನನು ರಾಧೇಯನನ್ನು ಆಕ್ರಮಣಿಸಿದನು. ಕೂಡಲೇ ಕರ್ಣನು ತ್ವರೆಮಾಡಿ ಸಾತ್ಯಕಿಯನ್ನು ಬಿಟ್ಟು ಮೂರು ಶರಗಳಿಂದ ಅರ್ಜುನನನ್ನು ಹೊಡೆದು, ಇಪ್ಪತ್ತರಿಂದ ಮತ್ತು ಪುನಃ ಮೂರು ಶರಗಳಿಂದ ಕೃಷ್ಣ-ಪಾರ್ಥರನ್ನು ಹೊಡೆದನು. ಕೂಡಲೇ ಸಾತ್ಯಕಿಯು ಬಂದು ಕರ್ಣನನ್ನು ನಿಶಿತ ಶರಗಳಿಂದ ಹೊಡೆದು ಪುನಃ ಅವನನ್ನು ನೂರಾ ತೊಂಭತ್ತೊಂಭತ್ತು ಉಗ್ರ ಶರಗಳಿಂದ ಪ್ರಹರಿಸಿದನು. ಆಗ ಪಾಂಡವ ಪ್ರವೀರರೆಲ್ಲರೂ ಕರ್ಣನನ್ನು ಪೀಡಿಸತೊಡಗಿದರುಃ ಯುಧಾಮನ್ಯು, ಶಿಖಂಡೀ, ದ್ರೌಪದೇಯರು, ಪ್ರಭದ್ರಕರು, ಉತ್ತಮೌಜ, ಯುಯುತ್ಸು, ಯಮಳರು, ಪಾರ್ಷತ, ಚೇದಿ-ಕರೂಷ-ಮತ್ಸ್ಯರು, ಕೇಕಯರು, ಚೇಕಿತಾನರು, ಮತ್ತು ಧರ್ಮರಾಜ. ಉಗ್ರವಿಕ್ರಮ ರಥ-ಅಶ್ವ-ಗಜ-ಪದಾತಿಸೇನೆಗಳೊಡನೆ ಇವರುಗಳು ರಣದಲ್ಲಿ ಕರ್ಣನನ್ನು ಸುತ್ತುವರೆದು ನಾನಾ ಶಸ್ತ್ರಗಳಿಂದ ಮುಚ್ಚಿಬಿಟ್ಟರು. ಎಲ್ಲರೂ ಕರ್ಣನ ವಧೆಯನ್ನೇ

ಉದ್ದೇಶವನ್ನಾಗಿಟ್ಟುಕೊಂಡು ಉಗ್ರ ಮಾತುಗಳನ್ನಾಡುತ್ತಾ ಸುತ್ತುವರೆದರು. ಅವರ ಆ ಶಸ್ತ್ರವೃಷ್ಟಿಯನ್ನು ನಿಶಿತ ಶರಗಳಿಂದ ಚೂರು ಚೂರಾಗಿ ಮಾಡಿ ಕರ್ಣನು ಬಿರುಗಾಳಿಯು ಮರಗಳನ್ನು ಬುಡಮೇಲಾಗಿ ಕಿತ್ತೆಸೆಯುವಂತೆ ಅವರೆಲ್ಲರನ್ನೂ ಬೀಳಿಸಿದನು. ಸಂಕ್ರುದ್ಧನಾದ ಕರ್ಣನು ರಥಿಗಳನ್ನೂ, ಮಹಾಗಾತ್ರದ ಆನೆಗಳನ್ನೂ, ಸವಾರರೊಂದಿಗೆ ಕುದುರೆಗಳನ್ನೂ, ಶರವ್ರಾತಗಳನ್ನೂ ನಾಶಗೊಳಿಸುತ್ತಿರುವುದು ಕಾಣುತ್ತಿತ್ತು. ಕರ್ಣನ ಅಸ್ತ್ರತೇಜಸ್ಸಿನಿಂದ ವಧಿಸಲ್ಪಡುತ್ತಿರುವ ಪಾಂಡವರ ಸೇನೆಯ ದೇಹಗಳು ತುಂಡಾಗಿ ನಾಶಗೊಂಡಿದವು. ಪ್ರಾಯಶಃ ಪರಾಙ್ಮುಖರಾದರು.

ಕೂಡಲೆ ಸ್ವಯಂ ಅರ್ಜುನನು ಕರ್ಣನ ಅಸ್ತ್ರಗಳನ್ನು ಅಸ್ತ್ರಗಳಿಂದ ನಾಶಗೊಳಿಸಿದನು ಮತ್ತು ಶರವೃಷ್ಟಿಯಿಂದ ಆಕಾಶ, ದಿಕ್ಕುಗಳು ಮತ್ತು ಭೂಮಿಯನ್ನು ತುಂಬಿಸಿಬಿಟ್ಟನು. ಅವನ ಬಾಣಗಳು ಮುಸಲಗಳಂತೆ, ಶತ್ರಘ್ನಗಳಂತೆ ಮತ್ತು ಇನ್ನು ಉಳಿದವು ಉಗ್ರ ವಜ್ರಗಳಂತೆ ಬೀಳುತ್ತಿದ್ದವು. ಅವುಗಳಿಂದ ವಧಿಸಲ್ಪಡುತ್ತಿರುವ ಪದಾತಿ-ಅಶ್ವ-ರಥ-ಗಜಗಳಿಂದೊಡಗೂಡಿದ ಆ ಸೈನ್ಯವು ಕಣ್ಣುಮುಚ್ಚಿ ಗಟ್ಟಿಯಾಗಿ ಕೂಗುತ್ತಾ ಚಡಪಡಿಸತೊಡಗಿತು. ಶರಗಳಿಂದ ವಧಿಸಲ್ಪಡುತ್ತಿರುವ ಅಶ್ವ-ನರ-ಗಜಗಳು ಯುದ್ಧದಲ್ಲಿ ನಿಶ್ಚಿತ ಕೈವಲ್ಯವನ್ನು ಪಡೆದರು. ಅನ್ಯರು ಭೀತರಾಗಿ ಪಲಾಯನಗೈದರು. ಈ ರೀತಿ ಜಯೈಷಿಗಳು

ಯುದ್ಧದಲ್ಲಿ ತೊಡಗಿರಲು ಭಾನುಮತನು ಅಸ್ತಾಚಲವನ್ನು ಸೇರಿ ಕಾಣದಂತಾದನು. ಕತ್ತಲೆಯಿಂದ ಮತ್ತು ವಿಶೇಷವಾದ ಧೂಳಿನಿಂದಾಗಿ ಅಲ್ಲಿ ಶುಭಾಶುಭವಾದ ಏನೂ ಕಾಣದಂತಾಯಿತು. ರಾತ್ರಿಯುದ್ಧಕ್ಕೆ ಹೆದರಿದ್ದ ಆ ಮಹೇಷ್ವಾಸರು ಸರ್ವವಾಹನಗಳೊಂದಿಗೆ ಹಿಂದೆಸರಿಯಲು ಪ್ರಾರಂಭಿಸಿದರು. ಆ ದಿನಕ್ಷಯದಲ್ಲಿ ಕೌರವರು ಹೊರಟುಹೋಗಲು ಜಯವನ್ನು ಗಳಿಸಿ ಸುಮನಸ್ಕರಾದ ಪಾರ್ಥರು ವಿವಿಧ ಮಂಗಳವಾದ್ಯಗಳನ್ನು ನುಡಿಸುತ್ತಾ, ಸಿಂಹನಾದಗಳಿಂದ ನರ್ತಿಸುತ್ತಾ, ಶತ್ರುಗಳನ್ನು ಹಾಸ್ಯಮಾಡುತ್ತಾ, ಕೃಷ್ಣಾರ್ಜುನರನ್ನು ಸ್ತುತಿಸುತ್ತಾ ತಮ್ಮ ಶಿಬಿರಕ್ಕೆ ತೆರಳಿದರು. ಆ ವೀರರಿಂದ ಹಿಂದೆಕರೆಸಲ್ಪಟ್ಟ ಸೈನಿಕರು ಮತ್ತು ನರೇಶ್ವರರೆಲ್ಲರೂ ಪಾಂಡವೇಯರನ್ನು ಆಶೀರ್ವದಿಸಿ ವಿಶ್ರಮಿಸಿದರು. ಹಿಂದೆಸರಿದ ಕುರುಪಾಂಡವ ನರೇಶ್ವರರು ಪ್ರಹೃಷ್ಟರಾಗಿ ಶಿಬಿರಗಳಿಗೆ ತೆರಳಿ ರಾತ್ರಿಯನ್ನು ಕಳೆದರು. ರುದ್ರನ ಕ್ರೀಡಾಸ್ಥಳದಂತಿರುವ ಘೋರ ರಣಭೂಮಿಗೆ ಯಕ್ಷ-ರಾಕ್ಷಸ-ಪಿಶಾಚಿ ಗಣಗಳು ಹೋಗಿ ಸೇರಿಕೊಂಡವು.

# ಹದಿನೇಳನೇ ದಿನದ ಯುದ್ಧ: ಶಲ್ಯನು ಕರ್ಣನ ಸಾರಥಿಯಾದುದು

ಪ್ರಹಾರಗಳಿಂದ ಹತರಾಗಿ, ವಿಧ್ವಸ್ಥರಾಗಿದ್ದ, ಕವಚ-ಆಯುಧ-ವಾಹನಗಳಿಂದ ವಿಹೀನರಾಗಿದ್ದ, ಶತ್ರುಗಳಿಂದ ಸೋತಿದ್ದ ಮಾನಿನಿಗಳಾದ ಕೌರವರು, ಹಲ್ಲುಗಳು ಕಿತ್ತು ವಿಷವನ್ನು ಕಳೆದುಕೊಂಡ ಮತ್ತು ಕಾಲಿನಿಂದ ಮೆಟ್ಟಲ್ಪಟ್ಟ ಸರ್ಪಗಳಂತೆ, ಶಿಬಿರದಲ್ಲಿ ಕುಳಿತು ದೀನಸ್ವರದಲ್ಲಿ ಮಾತನಾಡಿಕೊಳ್ಳುತ್ತಾ ಮಂತ್ರಾಲೋಚನೆ ಮಾಡಿದರು. ಆಗ ಕ್ರುದ್ಧ ಸರ್ಪದಂತೆ ನಿಟ್ಟುಸಿರು ಬಿಡುತ್ತಾ ಕರ್ಣನು ಕೈಯಿಂದ ಕೈಯನ್ನು ಉಜ್ಜಿಕೊಳ್ಳುತ್ತಾ ದುರ್ಯೋಧನನನ್ನು ನೋಡಿ ಅವರಿಗೆ ಹೇಳಿದನು:

> "ಅರ್ಜುನನು ಸದಾ ಪ್ರಯತ್ನಶೀಲನು, ದೃಢನ, ದಕ್ಷನು ಮತ್ತು ಧೃತಿಮಾನನು. ಅಧೋಕ್ಷಜನೂ ಕೂಡ ಅವನಿಗೆ ಕಾಲಕ್ಕೆ ತಕ್ಕಂತೆ ಸಲಹೆಗಳನ್ನು ನೀಡುತ್ತಿದ್ದಾನೆ. ಅವನು ಅಸ್ತ್ರಗಳನ್ನು ಬಿಡುತ್ತಿರುವ ವೇಗದಿಂದಾಗಿ ಇಂದು ನಾವು ವಂಚಿತರಾದೆವು. ನಾಳೆ ನಾನು ಅವನ ಸಂಕಲ್ಪವೆಲ್ಲವನ್ನೂ ನಿರರ್ಥಕಗೊಳಿಸುತ್ತೇನೆ!"

ಅದಕ್ಕೆ "ಹಾಗೆಯೇ ಆಗಲಿ!" ಎಂದು ಹೇಳಿ ದುರ್ಯೋಧನನು ನೃಪೋತ್ತಮರಿಗೆ ಅನುಮತಿಯನ್ನಿತ್ತನು. ರಾತ್ರಿಯನ್ನು ಸುಖವಾಗಿ ಕಳೆದು ಅವರು ಹೃಷ್ಟರಾಗಿ ಯುದ್ಧಕ್ಕೆ ಮರಳಿದರು. ಬೃಹಸ್ಪತಿ ಮತ್ತು

ಉಶನನ ಸಿದ್ಧಾಂತದಂತೆ ಧರ್ಮರಾಜನು ಪ್ರಯತ್ನಪಟ್ಟು ರಚಿಸಿದ್ದ ದುರ್ಜಯ ವ್ಯೂಹವನ್ನು ಅವರು ನೋಡಿದರು. ಕೂಡಲೇ ದುರ್ಯೋಧನನು ಸತತವೂ ತನಗೆ ವಿಜಯವನ್ನು ದೊರಕಿಸುವುದರಲ್ಲಿ ನಿರತನಾದ, ಶತ್ರುಗಳಿಗೆ ವಿರುದ್ಧವಾದುದನ್ನು ಮಾಡಬಲ್ಲ, ವೃಷಭಸ್ಕಂಧ ಕರ್ಣನನ್ನು ಸ್ಮರಿಸಿದನು. ಯುದ್ಧದಲ್ಲಿ ಪುರಂದರನ ಸಮನಾಗಿದ್ದ, ಬಲದಲ್ಲಿ ಮರುದ್ಗಣಗಳ ಸಮನಾಗಿದ್ದ, ವೀರ್ಯದಲ್ಲಿ ಕಾರ್ತವೀರ್ಯನ ಸಮನಾಗಿದ್ದ ಮಹೇಷ್ವಾಸ ಸೂತ್ರಪುತ್ರ ಕರ್ಣನನ್ನು, ಅತ್ಯಂತ ಕಷ್ಟದಲ್ಲಿರುವವನು ಬಂಧವನ್ನು ನೆನಪಿಸಿಕೊಳ್ಳುವಂತೆ, ರಾಜ ದುರ್ಯೋಧನನು ಮನಸ್ಸಿಗೆ ತಂದುಕೊಂಡನು.

ರಾತ್ರಿಕಳೆದು ಬೆಳಗಾಗಲು ಮಹಾಬಾಹು ಕರ್ಣನು ಸಮಾಲೋಚನೆಗೆಂದು ರಾಜ ದುರ್ಯೋಧನನಲ್ಲಿಗೆ ಬಂದು ಹೀಗೆ ಹೇಳಿದನು:

> “ರಾಜನ್! ಇಂದು ನಾನು ಯಶಸ್ವಿ ಪಾಂಡವನನ್ನು ಎದುರಿಸುತ್ತೇನೆ. ಆ ವೀರನನ್ನು ಸಂಹರಿಸುತ್ತೇನೆ ಅಥವಾ ಅವನು ನನ್ನನ್ನು ಸಂಹರಿಸುತ್ತಾನೆ. ಇದೂವರೆಗೆ ನನಗೆ ಮತ್ತು ಪಾರ್ಥನಿಗೆ ಅನೇಕ ಕಾರ್ಯಗಳಿದ್ದವು. ಆದುದರಿಂದ ನನ್ನ ಮತ್ತು ಅರ್ಜುನನ ಸಮಾಗಮವಾಗಲಿಲ್ಲ. ಪ್ರಜ್ಞೆಗೆ ಬಂದಂತೆ

ನಾನು ಹೇಳುವ ಈ ಮಾತನ್ನು ಕೇಳು. ರಣದಲ್ಲಿ ಪಾರ್ಥನನ್ನು ಸಂಹರಿಸದೆಯೇ ನಾನು ಹಿಂದಿರುಗುವುದಿಲ್ಲ! ಸೇನೆಯಲ್ಲಿನ ಪ್ರಮುಖರು ಹತರಾಗಿ ಹೋಗಿರುವುದರಿಂದ ಮತ್ತು ನನ್ನಲ್ಲಿ ಶಕ್ರನಿತ್ತ ಶಕ್ತಿಯು ಈಗ ಇಲ್ಲವಾಗಿರುವುದರಿಂದ ಪಾರ್ಥನು ಇಂದು ನನ್ನನ್ನೇ ಎದುರಿಸಿ ಯುದ್ಧಮಾಡುವವನಿದ್ದಾನೆ. ಆದುದರಿಂದ ಶ್ರೇಯಸ್ಕರವಾದ ಏನನ್ನು ನಾನು ಹೇಳುವವನಿದ್ದೇನೋ ಅದನ್ನು ಕೇಳು. ಆಯುಧ, ವೀರ್ಯ ಮತ್ತು ದ್ರವ್ಯಗಳಲ್ಲಿ ನಾನು ಮತ್ತು ಅರ್ಜುನರು ಸಮನಾಗಿದ್ದೇವೆ. ಆದರೆ ದೊಡ್ಡ ಕಾಯಗಳುಳ್ಳವುಗಳನ್ನು ಹೊಡೆಯುವುದರಲ್ಲಿ, ದೂರ ಬಾಣಪ್ರಯೋಗಮಾಡುವುದರಲ್ಲಿ, ಯುದ್ಧಕೌಶಲದಲ್ಲಿ, ದಿವ್ಯಾಸ್ತ್ರಪ್ರಯೋಗಗಳಲ್ಲಿ ಸವ್ಯಸಾಚಿಯು ನನ್ನ ಸಮನಲ್ಲ. ಸರ್ವ ಆಯುಧಗಳಲ್ಲಿ ಮಹಾಮಾತ್ರವೆಂದೆನಿಸಿಕೊಂಡಿರುವ ವಿಜಯ ಎಂಬ ಹೆಸರಿನ ನನ್ನ ಈ ಧನುಸ್ಸನ್ನು ವಿಶ್ವಕರ್ಮನು ಇಂದ್ರನಿಗೆ ಪ್ರಿಯವನ್ನುಂಟುಮಾಡಲು ಬಯಸಿಯೇ ನಿರ್ಮಿಸಿದ್ದನು. ಇದರಿಂದಲೇ ಶತಕ್ರತುವು ದೈತ್ಯಗಣಗಳನ್ನು ಜಯಿಸಿದನು. ಇದರ ಘೋಷದಿಂದ ದೈತ್ಯರಿಗೆ ದಿಕ್ಕುಗಳೇ ತೋಚುತ್ತಿರಲಿಲ್ಲ. ಪರಮಸಮ್ಮತವಾದ ಇದನ್ನು ಶಕ್ರನು

ಭಾರ್ಗವನಿಗೆ ನೀಡಿದನು. ಆ ದಿವ್ಯ ಉತ್ತಮ ಧನುಸ್ಸನ್ನು ಭಾರ್ಗವನು ನನಗೆ ನೀಡಿದನು. ಸಮರದಲ್ಲಿ ಕೂಡಿ ಬಂದಿದ್ದ ಸರ್ವ ದೈತ್ಯರನ್ನೂ ಯಾವುದನ್ನು ಹಿಡಿದು ಎದುರಿಸಿದ್ದನೋ ಅದೇ ಧನುಸ್ಸಿನಿಂದ ನಾನು ಅರ್ಜುನನೊಡನೆ ಯುದ್ಧಮಾಡುತ್ತೇನೆ. ಪರಶುರಾಮದತ್ತ ಧನುಸ್ಸು ಘೋರವಾದುದು; ಗಾಂಡೀವಕ್ಕಿಂತಲೂ ವಿಶೇಷವಾದುದು! ಈ ಧನುಸ್ಸಿನಿಂದಲೇ ರಾಮನು ಪೃಥ್ವಿಯನ್ನು ೨೧ ಬಾರಿ ಜಯಿಸಿದ್ದನು. ಯಾವ ಧನುಸ್ಸಿನ ದಿವ್ಯ ಕರ್ಮಗಳನ್ನು ಭಾರ್ಗವನು ಹೇಳಿ ನನಗೆ ದಯಪಾಲಿಸಿದ್ದನೋ ಅದೇ ಧನುಸ್ಸಿನಿಂದಲೇ ನಾನು ಪಾಂಡವ ಅರ್ಜುನನೊಡನೆ ಯುದ್ಧಮಾಡುತ್ತೇನೆ. ದುರ್ಯೋಧನ! ಇಂದು ಸಮರದಲ್ಲಿ ನಾನು ಅರ್ಜುನನನ್ನು ಸಂಹರಿಸಿ ಬಾಂಧವರೊಂದಿಗೆ ನಿನ್ನನ್ನು ಸಂತೋಷಗೊಳಿಸುತ್ತೇನೆ! ಇಂದು ಈ ಭೂಮಿಯು ಪರ್ವತ-ವನ-ದ್ವೀಪಗಳು ಮತ್ತು ಸಾಗರಗಳೊಂದಿಗೆ ನಿನ್ನ ಪುತ್ರ ಪೌತ್ರರಲ್ಲಿ ಪ್ರತಿಷ್ಠಳಾಗಿರುತ್ತಾಳೆ! ಉತ್ತಮ ಧರ್ಮದಲ್ಲಿಯೇ ಅನುರಕ್ತನಾಗಿರುವವನಿಗೆ ಆತ್ಮಸಿದ್ಧಿಯಾಗಿರುವವನು ಹೇಗೋ ಹಾಗೆ ಇಂದು ನಾನು ವಿಶೇಷವಾಗಿ ನಿನ್ನ ಪ್ರೀತಿಗೋಸ್ಕರ ಮಾಡುವವುಗಳಲ್ಲಿ ಅಸಾಧ್ಯವೆನ್ನುವುದೇ ಇಲ್ಲವೆಂದು ತಿಳಿ.

ಹುಲ್ಲುಮೆದೆಯು ಅಗ್ನಿಯನ್ನು ಹೇಗೋ ಹಾಗೆ ಸಮರದಲ್ಲಿ ನನ್ನನ್ನು ಅರ್ಜುನನು ಸಹಿಸಿಕೊಳ್ಳಲಾರ. ಫಲ್ಗುನನಿಗಿಂತ ಯಾವುದರಲ್ಲಿ ನಾನು ಕಡಿಮೆ ಎನ್ನುವುದನ್ನು ಕೂಡ ಹೇಳುವುದು ಇಲ್ಲಿ ಅವಶ್ಯಕವಾಗಿದೆ. ಅವನ ಧನುಸ್ಸಿನ ಮೌರ್ವಿ ಮತ್ತು ಅಕ್ಷಯ ಬತ್ತಳಿಕೆಗಳು ದಿವ್ಯವಾದವುಗಳು. ಅವನ ದಿವ್ಯವಾದ ಶ್ರೇಷ್ಠ ಗಾಂಡಿವ ಧನುಸ್ಸು ಯುದ್ಧದಲ್ಲಿ ಅಜರವಾದುದು. ನನ್ನಲ್ಲಿ ಕೂಡ ಮಹಾದಿವ್ಯವಾದ ಉತ್ತಮ ವಿಜಯ ಧನುಸ್ಸಿದೆ. ದನುಸ್ಸಿನ ವಿಷಯದಲ್ಲಿ ನಾನು ಪಾರ್ಥನಿಗಿಂತ ಅಧಿಕನಾಗಿದ್ದೇನೆ. ವೀರ ಪಾಂಡವನು ನನಗಿಂತಲೂ ಯಾವುದರಲ್ಲಿ ಅಧಿಕ ಎನ್ನುವುದನ್ನು ಕೇಳು. ಸರ್ವಲೋಕನಮಸ್ಕೃತ ದಾಶಾರ್ಹನು ಅವನ ರಥದ ಕುದುರೆಗಳ ಕಡಿವಾಣಗಳನ್ನು ಹಿಡಿದಿದ್ದಾನೆ. ಅವನ ಆ ಕಾಂಚನಭೂಷಣ ದಿವ್ಯ ರಥವು ಅಗ್ನಿದತ್ತವಾದುದು. ಅವನ ರಥದ ಯಾವುದೇ ಭಾಗವನ್ನಾಗಲೀ ತುಂಡುಮಾಡಲು ಸಾಧ್ಯವಿಲ್ಲ. ಅವನ ಕುದುರೆಗಳು ಮನಸ್ಸಿನಷ್ಟೇ ವೇಗವುಳ್ಳವುಗಳು. ದಿವ್ಯ ದ್ಯುತಿಮಾನ ವಿಸ್ಮಯಂಕರ ವಾನರನೇ ಅವನ ಧ್ವಜದಲ್ಲಿದ್ದಾನೆ. ಜಗತ್ತಿನ ಸೃಷ್ಟಾ ಕೃಷ್ಣನೇ ಅವನ ರಥವನ್ನು ರಕ್ಷಿಸುತ್ತಿದ್ದಾನೆ. ಇಂತಹ ದ್ರವ್ಯಗಳಿಂದ

ನಾನು ಹೀನನಾಗಿದ್ದರೂ ಪಾಂಡವನೊಡನೆ ಯುದ್ಧಮಾಡಲು ಬಯಸುತ್ತೇನೆ. ಈ ಸಮಿತಿಶೋಭನ ವೀರ ಶಲ್ಯನು ಕೃಷ್ಣನ ಸದೃಶನಾಗಿದ್ದಾನೆ. ಒಂದುವೇಳೆ ಅವನು ನನ್ನ ಸಾರಥ್ಯವನ್ನು ಮಾಡಿದರೆ ನನಗೆ ವಿಜಯವಾಗುತ್ತದೆಯೆನ್ನುವುದು ನಿಶ್ಚಯ! ಶತ್ರುಗಳಿಂದ ಜಯಿಸಲು ಸುಲಭಸಾಧ್ಯನಲ್ಲದ ಆ ಶಲ್ಯನು ನನ್ನ ಸಾರಥಿಯಾಗಲಿ. ರಣಹದ್ದಿನ ಗರಿಗಳನ್ನು ಕೂಡಿದ ನಾರಾಚಗಳನ್ನು ತುಂಬಿಸಿದ ಬಂಡಿಗಳು ನನ್ನ ಹಿಂದೆ ಬರಲಿ. ಉತ್ತಮ ಕುದುರೆಗಳನ್ನು ಕಟ್ಟಿದ ರಥಗಳು ನನ್ನ ಹಿಂದೆಯೇ ಸತತವಾಗಿ ಬರುತ್ತಿರಲಿ. ಹೀಗೆ ನಾನು ಗುಣಗಳಲ್ಲಿ ಪಾರ್ಥನಿಗಿಂತ ಅಧಿಕನಾಗುವೆನು. ನಾನು ಅರ್ಜುನನಿಗಿಂತ ಅಧಿಕನಾಗಿರುವುದಕ್ಕಿಂತ ಶಲ್ಯನು ಕೃಷ್ಣನಿಗೆ ಅಧಿಕನಾಗಿರುವನು. ಹೇಗೆ ದಾಶಾರ್ಹನು ಅಶ್ವಹೃದಯವನ್ನು ತಿಳಿದುಕೊಂಡಿರುವನೋ ಹಾಗೆ ಶಲ್ಯನೂ ಕೂಡ ಕುದುರೆಗಳನ್ನು ತಿಳಿದಿದ್ದಾನೆ. ಮದ್ರರಾಜನ ಬಾಹುವೀರ್ಯಕ್ಕೆ ಸಮನಾದವನು ಯಾರೂ ಇಲ್ಲ. ಹಾಗೆಯೇ ಅಸ್ತ್ರಗಳಲ್ಲಿ ನನ್ನ ಸಮನಾದ ಧನುರ್ಧರನು ಎಲ್ಲಿಯೂ ಇಲ್ಲ. ಕುದುರೆಯನ್ನು ಓಡಿಸುವುದರಲ್ಲಿ ಶಲ್ಯನಿಗೆ ಸಮನಾದವನು ಯಾರೂ ಇಲ್ಲ. ಆದುದರಿಂದ ಅವನು ನನ್ನ ರಥವನ್ನು ಓಡಿಸುವವನಾದರೆ

ನನ್ನ ರಥವು ಪಾರ್ಥನ ರಥಕ್ಕಿಂತ ಅಧಿಕವಾಗುವುದು. ನನ್ನ ಈ ಒಂದು ಕೆಲಸವನ್ನು ಮಾಡಿಕೊಡಬೇಕೆಂದು ಬಯಸುತ್ತೇನೆ. ಇದೊಂದನ್ನು ಮಾಡಿದರೆ ನನ್ನ ಸರ್ವಕಾಮಗಳನ್ನೂ ಸಫಲಗೊಳಿಸಿದಂತಾಗುತ್ತದೆ. ಆಗ ನಾನು ಸಮರದಲ್ಲಿ ಏನು ಮಾಡಬಲ್ಲೆ ಎನ್ನುವುದನ್ನು ನಿನಗೆ ತೋರಿಸುತ್ತೇನೆ. ಇಂದು ಸರ್ವಥಾ ಸೇರಿರುವ ಪಾಂಡವರೆಲ್ಲರನ್ನೂ ಯುದ್ಧದಲ್ಲಿ ಜಯಿಸುತ್ತೇನೆ."

ದುರ್ಯೋಧನನು ಹೇಳಿದನು:

"ಕರ್ಣ ! ನೀನು ಬಯಸಿರುವಂತೆ ಎಲ್ಲವನ್ನೂ ಮಾಡುತ್ತೇನೆ. ಕುದುರೆಗಳೊಂದಿಗೆ ಸಜ್ಜಾಗಿದ್ದ ರಥಗಳು ನಿನ್ನನ್ನು ಅನುಸರಿಸಿ ಬರುತ್ತವೆ. ಗಾರ್ಧ್ರಪಕ್ಷಗಳ ನಾರಾಚಗಳನ್ನು ಹೊತ್ತ ಬಂಡಿಗಳು ಮತ್ತು ನಾವೆಲ್ಲ ಸರ್ವ ಪಾರ್ಥಿವರೂ ನಿನ್ನನ್ನು ಅನುಸರಿಸಿ ಬರುತ್ತೇವೆ !"

## ದುರ್ಯೋಧನನು ಶಲ್ಯನಿಗೆ ಕರ್ಣನ ಸಾರಥಿಯಾಗುವಂತೆ ಕೇಳಿದುದು

ದುರ್ಯೋಧನನು ಹೀಗೆ ಹೇಳಿ ಮದ್ರರಾಜನಲ್ಲಿಗೆ ಹೋಗಿ



ವಿನಯದಿಂದ ಅವನಿಗೆ ಹೀಗೆ ಹೇಳಿದನು:

“ಮದ್ರೇಶ್ವರ! ನೃಪತಿಸಿಂಹರ ಮಧ್ಯದಲ್ಲಿ ನಿನ್ನನ್ನು ಆರಿಸಿಕೊಂಡ ಕರ್ಣನಾಡಿದ ಈ ಮಾತನ್ನು ಕೇಳಿದ್ದೀಯೆ. ಪಾರ್ಥರ ವಿನಾಶಕ್ಕಾಗಿ ಮತ್ತು ನನ್ನ ಹಿತಕ್ಕಾಗಿ ಒಳ್ಳೆಯ ಮನಸ್ಸಿನಿಂದ ನೀನು ಸಾರಥ್ಯವನ್ನು ಮಾಡಬೇಕು. ಕರ್ಣನ ಕುದುರೆಗಳ ಕಡಿವಾಣಗಳನ್ನು ಹಿಡಿಯಬಲ್ಲ, ನಿನಗೆ ಸರಿಸಾಟಿಯಾದ, ಇನ್ನೊಬ್ಬನು ಈ ಲೋಕದಲ್ಲಿಯೇ ಇಲ್ಲ. ಬ್ರಹ್ಮನು ಶಂಕರನನ್ನು ಹೇಗೋ ಹಾಗೆ ನೀನು ಕರ್ಣನನ್ನು ಸರ್ವತಃ ರಕ್ಷಿಸಬೇಕು. ಕಡಿವಾಣಗಳನ್ನು ಹಿಡಿಯುವವರಲ್ಲಿ ಶ್ರೇಷ್ಠ ಕೃಷ್ಣನು ಹೇಗೆ ಪಾರ್ಥನ ಸಚಿವನೋ ಹಾಗೆ ನೀನೂ ಕೂಡ ರಾಧೇಯನನ್ನು ಸರ್ವತಃ ಪರಿಪಾಲಿಸು. ಭೀಷ್ಮ, ದ್ರೋಣ, ಕೃಪ, ಕರ್ಣ, ನೀನು, ನಾನು, ಭೋಜ, ಶಕುನಿ ಮತ್ತು ದ್ರೌಣಿ – ಈ ಒಂಭತ್ತು ಮಂದಿ ನಮ್ಮ ಬಲಶಾಲಿಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದರಂತೆ ಪಾಂಡವ ಸೇನೆಯನ್ನು ಒಂಭತ್ತು ಪಾಲುಗಳನ್ನಾಗಿ ಮಾಡಿಕೊಂಡಿದ್ದೆವು. ಈಗ ಭೀಷ್ಮನ ಮತ್ತು ಮಹಾತ್ಮ ದ್ರೋಣನ ಭಾಗಗಳು ಉಳಿದಿಲ್ಲ. ಅವರಿಬ್ಬರೂ ತಮ್ಮ ತಮ್ಮ ಪಾಲುಗಳನ್ನೂ ಮೀರಿ ನನ್ನ

ಶತ್ರುಗಳನ್ನು ಸಂಹರಿಸಿದ್ದಾರೆ. ವೃದ್ಧರಾಗಿದ್ದ ಆ ಇಬ್ಬರು ನರವ್ಯಾಘ್ರರೂ ಛಲದಿಂದ ಸಂಹರಿಸಿ, ಅಸಾಧ್ಯಕರ್ಮಗಳನ್ನೆಸಗಿ ಸ್ವರ್ಗಕ್ಕೆ ಹೋದರು. ಹಾಗೆಯೇ ಅನ್ಯ ಪುರುಷವ್ಯಾಘ್ರರೂ ಶತ್ರುಗಳಿಂದ ಯುದ್ಧದಲ್ಲಿ ಹತರಾದರು. ನಮ್ಮ ಕಡೆಯ ಅನೇಕರು ಯಥಾಶಕ್ತಿಯಾಗಿ ಅನೇಕ ಕಠಿಣ ಕರ್ಮಗಳನ್ನೆಸಗಿ ರಣದಲ್ಲಿ ಪ್ರಾಣಗಳನ್ನು ತ್ಯಜಿಸಿ ಸ್ವರ್ಗದ ಕಡೆ ಹೊರಟುಹೋಗಿದ್ದಾರೆ. ಮಹಾಬಾಹು ಕರ್ಣನೊಬ್ಬನೇ ಮತ್ತು ಸರ್ವಲೋಕಮಹಾರಥನಾದ ನೀನು ನನ್ನ ಪ್ರಿಯಹಿತಗಳಲ್ಲಿ ನಿರತನಾಗಿದ್ದೀರಿ. ಮದ್ರಜನಾಧಿಪ! ನನ್ನ ಜಯದ ಆಸೆಯು ವಿಪುಲವಾಗಿ ನಿನ್ನನ್ನವಲಂಬಿಸಿದೆ. ಸಮರದಲ್ಲಿ ಕೃಷ್ಣನು ಪಾರ್ಥನ ಕುದುರೆಗಳ ಕಡಿವಾಣಗಳನ್ನು ಹಿಡಿಯುವವನಾಗಿ, ಅವನಿಂದ ರಕ್ಷಿತನಾದ ಪಾರ್ಥನು ರಣದಲ್ಲಿ ಯಾವ ಯಾವ ಮಹಾದ್ಭುತ ಕರ್ಮಗಳನ್ನು ಮಾಡುತ್ತಿದ್ದಾನೆ ಎನ್ನುವುದನ್ನು ಪ್ರತ್ಯಕ್ಷವಾಗಿಯೇ ನೀನು ಕಂಡಿರುವೆ! ಹಿಂದೆ ಅರ್ಜುನನು ಸಮರದಲ್ಲಿ ಈ ರೀತಿ ಶತ್ರುಗಳನ್ನು ಸಂಹರಿಸುತ್ತಿರಲಿಲ್ಲ! ಈಗ ಯುದ್ಧದಲ್ಲಿ ಪ್ರತಿದಿನವೂ ಅವನು ಶತ್ರುಗಳನ್ನು ಓಡಿಸುತ್ತಿರುವುದು ಕಾಣುತ್ತಿದೆ. ನಾವು ಮಾಡಿಕೊಂಡಿದ್ದ ಪಾಲುಗಳಲ್ಲಿ ನಿನ್ನ ಮತ್ತು

ಕರ್ಣನ ಪಾಲುಗಳು ಉಳಿದುಕೊಂಡಿವೆ. ಯುದ್ಧದಲ್ಲಿ ಕರ್ಣನೊಂದಿಗೆ ಒಟ್ಟಾಗಿ ನಿನ್ನ ಪಾಲಿನ ಭಾಗವನ್ನೂ ನಾಶಪಡಿಸು. ಸೂರ್ಯ ಮತ್ತು ಅರುಣರನ್ನು ನೋಡಿ ಕತ್ತಲೆಯು ಹೇಗೆ ನಾಶವಾಗುತ್ತದೆಯೋ ಹಾಗೆ ನಿಮ್ಮಿಬ್ಬರನ್ನು ನೋಡಿ ಪಾಂಚಾಲರು ಮತ್ತು ಸೃಂಜಯರೊಂದಿಗೆ ಕೌಂತೇಯರು ನಾಶವಾಗುತ್ತಾರೆ. ಕರ್ಣನು ರಥಿಗಳಲ್ಲಿ ಶ್ರೇಷ್ಠನು. ನೀನು ಸಾರಥಿಗಳಲ್ಲಿ ಶ್ರೇಷ್ಠನು. ನಿಮ್ಮಿಬ್ಬರ ಜೋಡಿಯಂಥಹುದು ಲೋಕದಲ್ಲಿ ಎಂದೂ ಇರಲಿಲ್ಲ, ಮುಂದೆ ಇರಲಿಕ್ಕಿಲ್ಲ. ಸರ್ವಾವಸ್ಥೆಗಳಲ್ಲಿ ವಾರ್ಷ್ಣೇಯನು ಹೇಗೆ ಪಾಂಡವನನ್ನು ರಕ್ಷಿಸುತ್ತಿರುವನೋ ಹಾಗೆ ರಣದಲ್ಲಿ ನೀನು ವೈಕರ್ತನ ಕರ್ಣನನ್ನು ರಕ್ಷಿಸಬೇಕು. ನಿನ್ನ ಸಾರಥ್ಯದಿಂದ ಇವನು ಅಜೇಯನಾಗುತ್ತಾನೆ. ರಣದಲ್ಲಿ ಇವನು ಶಕ್ರನೊಡನೆ ಬಂದ ದೇವತೆಗಳನ್ನೂ ಎದುರಿಸಬಲ್ಲನು. ಇನ್ನು ಪಾಂಡವೇಯರ ವಿಷಯದಲ್ಲೇನು? ನನ್ನ ಈ ಮಾತಿನಲ್ಲಿ ಶಂಕೆಪಡದಿರು!”

ದುರ್ಯೋಧನನ ಮಾತನ್ನು ಕೇಳಿ ಶಲ್ಯನು ಕ್ರೋಧಸಮನ್ವಿತನಾಗಿ, ಹುಬ್ಬುಗಳನ್ನು ಗಂಟಿಕ್ಕಿ, ಕೈಗಳೆರಡನ್ನು ಪುನಃ ಪುನಃ ಕೊಡವಿದನು. ಕೆಂಪಾದ ಕಣ್ಣುಗಳನ್ನು ತಿರುಗಿಸುತ್ತಾ, ಕುಲ-ಐಶ್ವರ್ಯ-ವಿದ್ಯೆ-

ಬಲಗಳಿಂದ ದರ್ಪಿತನಾಗಿದ್ದ ಮಹಾಭುಜ ಶಲ್ಯನು ಈ ಮಾತುಗಳನ್ನಾಡಿದನು:

"ಗಾಂಧಾರೇ! ಸ್ವಲ್ಪವೂ ಪರಿಶಂಕಿಸದೇ ವಿಸ್ತಬ್ಧನಾಗಿ ಸಾರಥ್ಯವನ್ನು ಮಾಡು ಎಂದು ನನಗೆ ಹೇಳಿ ನನ್ನನ್ನು ಅಪಮಾನಿಸುತ್ತಿರುವೆ! ಕರ್ಣನು ನನಗಿಂತಲೂ ಅಧಿಕನೆಂದು ತಿಳಿದು ಅವನನ್ನು ಪ್ರಶಂಸಿಸುತ್ತಿದ್ದೀಯೆ! ಆದರೆ ಯುದ್ಧದಲ್ಲಿ ರಾಧೇಯನು ನನ್ನ ಸಮಾನನೆಂದು ನಾನು ಒಪ್ಪಿಕೊಳ್ಳುವುದಿಲ್ಲ! ನನಗೆ ಶತ್ರುಸೇನೆಯ ಹೆಚ್ಚಿನ ಪಾಲನ್ನೇ ವಹಿಸಿಕೊಡು. ಸಮರದಲ್ಲಿ ನಾನು ಆ ಭಾಗವನ್ನು ಸಂಹರಿಸಿ ಎಲ್ಲಿಂದ ಬಂದಿದ್ದೆನೋ ಅಲ್ಲಿಗೆ ಹೊರಟುಹೋಗುತ್ತೇನೆ. ಅಥವಾ ನಾನೊಬ್ಬನೇ ಯುದ್ಧಮಾಡುತ್ತೇನೆ. ಸಂಗ್ರಾಮದಲ್ಲಿ ಶತ್ರುಗಳನ್ನು ಸುಡುವ ನನ್ನ ವೀರ್ಯವನ್ನು ಇಂದು ನೋಡು! ನನ್ನಂಥಹ ಪುರುಷರು ಹೃದಯದಲ್ಲಿ ಆಸೆಗಳನ್ನಿಟ್ಟುಕೊಂಡು ಯುದ್ಧದಲ್ಲಿ ತೊಡಗುವುದಿಲ್ಲ. ನನ್ನ ಮೇಲೆ ಅಧಿಕ ಶಂಕೆಪಡಬೇಡ! ಯುದ್ಧದಲ್ಲಿ ನನ್ನನ್ನು ಅಪಮಾನಗೊಳಿಸುವ ಕೆಲಸವನ್ನೆಂದೂ ಮಾಡಬೇಡ! ವಜ್ರಸಂಹನದಂತಿರುವ ನನ್ನ ಈ ಭುಜಗಳನ್ನಾದರೂ ನೀನು ನೋಡು! ಚಿತ್ರಿತವಾಗಿರುವ

ನನ್ನ ಧನುಸ್ಸನ್ನು ಮತ್ತು ಸರ್ಪವಿಷಗಳಂತಿರುವ ನನ್ನ ಬಾಣಗಳನ್ನೂ ನೋಡು! ಗಾಳಿಯ ವೇಗದಲ್ಲಿ ಹೋಗುವ ಕುದುರೆಗಳುಳ್ಳ ನನ್ನ ಈ ಸುಂದರ ರಥವನ್ನೂ ನೋಡು! ಹೇಮಪಟ್ಟಿಗಳಿಂದ ವಿಭೂಷಿತವಾದ ನನ್ನ ಈ ಗದೆಯನ್ನೂ ನೋಡು! ಕ್ರುದ್ಧನಾದರೆ ಈ ಭೂಮಿಯನ್ನು ಸೀಳಿಯೇನು! ಪರ್ವತಗಳನ್ನು ಪುಡಿಪುಡಿಮಾಡಿಯೇನು! ನನ್ನ ತೇಜಸ್ಸಿನಿಂದ ಸಮುದ್ರಗಳನ್ನೂ ಒಣಗಿಸಬಲ್ಲೆನು! ಅರಿನಿಗ್ರಹದಲ್ಲಿ ಸಮರ್ಥನಾದ ನನ್ನ ಈ ರೀತಿಯ ಪರಾಕ್ರಮವನ್ನು ತಿಳಿದೂ ನೀನು ನೀಚ ಅಧಿರಥನ ಸಾರಥ್ಯಕ್ಕೆ ನನ್ನನ್ನು ಏಕೆ ನಿಯೋಜಿಸುತ್ತಿರುವೆ? ಈ ಕೀಳು ವೃತ್ತಿಯಲ್ಲಿ ನನ್ನನ್ನು ತೊಡಗಿಸುವುದು ನಿನಗೆ ಖಂಡಿತವಾಗಿಯೂ ಯೋಗ್ಯವೆನಿಸುವುದಿಲ್ಲ. ಶ್ರೇಯಾವಂತನಾಗಿದ್ದುಕೊಂಡು ನಾನು ಇಂತಹ ಪಾಪಿ ಪುರುಷನ ಸೇವೆಮಾಡಲು ಇಷ್ಟಪಡುವುದಿಲ್ಲ. ಪ್ರೀತಿಯಿಂದ ಬಂದು ಆಜ್ಞಾಧಾರಕನಾಗಿರುವ ಹಿರಿಯವನ್ನು ಪಾಪಿಯ ವಶದಲ್ಲಿ ಕೊಡುವವನಿಗೆ ಉಚ್ಛನನ್ನು ನೀಚನನ್ನಾಗಿಯೂ ನೀಚನನ್ನು ಉಚ್ಛನನ್ನಾಗಿಯೂ ಮಾಡುವವನಿಗೆ ದೊರೆಯುವ ಮಹಾ ಪಾಪವು ದೊರೆಯುತ್ತದೆ. ಬ್ರಹ್ಮನು ಬ್ರಾಹ್ಮಣರನ್ನು ತನ್ನ

ಮುಖದಿಂದಲೂ, ಕ್ಷತ್ರಿಯರನ್ನು ಭುಜಗಳಿಂದಲೂ, ವೈಶ್ಯರನ್ನು ತೊಡೆಗಳಿಂದಲೂ ಮತ್ತು ಶೂದ್ರರನ್ನು ಪಾದಗಳಿಂದಲೂ ಸೃಷ್ಟಿಸಿದನೆಂದು ಶೃತಿಯಿದೆ. ಈ ನಾಲ್ಕು ವರ್ಣಗಳ ಪರಸ್ಪರ ಸಂಕರದಿಂದ ಅನುಲೋಮ-ವಿಲೋಮ ವರ್ಣಗಳ ಉತ್ಪತ್ತಿಯಾಗುತ್ತದೆ. ಕ್ಷತ್ರಿಯರು ರಕ್ಷಕರೆಂದೂ, ಕಪ್ಪ-ಕಾಣಿಕೆಗಳ ಸಂಗ್ರಹೀತಾರರೆಂದೂ, ದಾನ-ಧರ್ಮಗಳನ್ನು ಮಾಡುವವರೆಂದೂ ವಿಹಿತವಾಗಿದೆ. ಯಜ್ಞಮಾಡಿಸುವರು, ಅಧ್ಯಾಪನೆ ಮಾಡುವವರು ಮತ್ತು ವಿಶುದ್ಧ ದಾನಗಳನ್ನು ಸ್ವೀಕರಿಸುವವರು ವಿಪ್ರರು. ಲೋಕಗಳ ಅನುಗ್ರಹಕ್ಕಾಗಿ ಬ್ರಹ್ಮನು ಇದನ್ನು ಭುವಿಯಲ್ಲಿ ಸ್ಥಾಪಿಸಿದನು. ಕೃಷಿ, ಪಶುಪಾಲನೆ ಮತ್ತು ದಾನಗಳು ವೈಶ್ಯರಿಗೆ, ಮತ್ತು ಬ್ರಾಹ್ಮಣ-ಕ್ಷತ್ರಿಯ-ವೈಶ್ಯರೆಲ್ಲರ ಸೇವೆಗಳು ಶೂದ್ರರಿಗೆ ವಿಹಿತವಾಗಿವೆ. ಬ್ರಾಹ್ಮಣ-ಕ್ಷತ್ರಿಯರಿಗೆ ಸೂತರು ಪರಿಚಾರಕರೆಂದು ವಿಹಿತವಾಗಿದೆ. ಇದಕ್ಕೆ ವಿರುದ್ಧವಾದುದು ಎಲ್ಲಿಯೂ ಇಲ್ಲ. ನನ್ನ ಈ ಮಾತನ್ನು ಕೇಳು! ನಾನಾದರೋ ರಾಜರ್ಷಿಕುಲದಲ್ಲಿ ಹುಟ್ಟಿ ಪಟ್ಟಾಭಿಷಿಕ್ತನಾಗಿದ್ದೇನೆ. ಮಹಾರಥನೆಂದು ಪ್ರಸಿದ್ಧನಾಗಿದ್ದೇನೆ. ವಂದಿಮಾಗಧರ ಸೇವೆ-ಸ್ತುತಿಗಳಿಗೆ ಪಾತ್ರನಾಗಿದ್ದೇನೆ. ಇಂತಹ ಅರಿಕುಲಮರ್ಧನನಾಗಿರುವ

ನಾನು ಸಂಗ್ರಾಮದಲ್ಲಿ ಸೂತಪುತ್ರನ ಸಾರಥ್ಯವನ್ನು ಮಾಡುವುದಿಲ್ಲ. ಅಪಮಾನಿತನಾಗಿ ನಾನು ಎಂದೂ ಯುದ್ಧಮಾಡುವುದಿಲ್ಲ. ಅಪ್ಪಣೆಕೊಡು. ಇಂದೇ ನಾನು ನನ್ನ ದೇಶಕ್ಕೆ ಹೊರಟುಹೋಗುತ್ತೇನೆ!"

ಹೀಗೆ ಹೇಳಿ ಶಲ್ಯನು ಮೇಲೆದ್ದು ರಾಜಮಧ್ಯದಿಂದ ಬೇಗನೇ ಹೊರಟುಹೋದನು. ದುರ್ಯೋಧನನು ಅವನ ಮೇಲಿನ ಪ್ರೀತಿಯಿಂದಲೂ ಗೌರವದಿಂದಲೂ ಅವನನ್ನು ತಡೆದು ವಿನೀತನಾಗಿ ಸರ್ವಾರ್ಥಸಾಧಕವಾದ ಈ ಮಧುರ ಮತ್ತು ಸೌಮ್ಯ ಮಾತುಗಳನ್ನಾಡಿದನು:

"ಶಲ್ಯ! ಜನೇಶ್ವರ! ಇದರ ಕುರಿತು ನೀನು ತಿಳಿದುಕೊಂಡಿರುವುದೇ ಸರಿ ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ ನನ್ನ ಈ ಒಂದು ಅಭಿಪ್ರಾಯವನ್ನೂ ಕೇಳು. ಕರ್ಣನು ನಿನಗಿಂತಲೂ ಅಧಿಕನಲ್ಲ ಎನ್ನುವುದರಲ್ಲಿ ಯಾವುದೇ ರೀತಿಯ ಶಂಕೆಯೂ ಇಲ್ಲ. ರಾಜಾ ಮದ್ರೇಶ್ವರನು ಇದನ್ನು ಸುಳ್ಳಾಗಿಸುವ ಕಾರ್ಯವೇನನ್ನೂ ಮಾಡಲಾರನು ಎನ್ನುವುದೂ ನಿಶ್ಚಯವಾದುದೇ. ನಿನ್ನ ಪೂರ್ವಜ ಪುರುಷೋತ್ತಮರೆಲ್ಲರೂ ಸತ್ಯವನ್ನೇ ಹೇಳುತ್ತಿದ್ದರು. ಆದುದರಿಂದಲೇ ನಿನ್ನನ್ನು

ಆರ್ತಾಯನಿ ಎಂದು ಕರೆಯುತ್ತಾರೆಂದು ನನ್ನ ಅನಿಸಿಕೆ. ಶತ್ರುಗಳಿಗೆ ನೀನು ಮುಳ್ಳಂತಿರುವೆಯಾದುದರಿಂದ ನಿನ್ನನ್ನು ಭುವಿಯಲ್ಲಿ ಶಲ್ಯ ಎಂದು ಕರೆಯುತ್ತಾರೆ. ನನಗೋಸ್ಕರವಾಗಿ ಹಿಂದೆ ನೀನು ಹೇಳಿದಂತೆ ಮತ್ತು ಈಗ ನೀನು ಹೇಳುವಂತೆಯೇ ಮಾಡು! ನಿನಗೆ ಸಮನಾಗಿ ರಾಧೇಯನೂ ಇಲ್ಲ. ನಾನೂ ಕೂಡ ನಿನ್ನ ಸಮನಿಲ್ಲ. ಆದುದರಿಂದಲೇ ಸಂಗ್ರಾಮದಲ್ಲಿ ಅಶ್ವವಿಧ್ಯೆಯಲ್ಲಿ ಅಗ್ರಗಣ್ಯನಾಗಿರುವ ನಿನ್ನನ್ನೇ ಸಾರಥಿಯನ್ನಾಗಿ ಆರಿಸಿದ್ದೇನೆ. ಕರ್ಣನು ಹೇಗೆ ಗುಣದಲ್ಲಿ ಧನಂಜಯನಿಗಿಂತ ಅಧಿಕನೋ ಹಾಗೆಯೇ ನೀನೂ ಕೂಡ ವಾಸುದೇವನಿಗಿಂತಲೂ ಅಧಿಕನೆಂದು ಲೋಕವು ಮನ್ನಿಸುತ್ತದೆ. ಅಸ್ತ್ರಗಳಲ್ಲಿ ಕರ್ಣನು ಹೇಗೆ ಪಾರ್ಥನಿಗಿಂತಲೂ ಅಧಿಕನೋ ಹಾಗೆ ನೀನೂ ಕೂಡ ಅಶ್ವಯಾನದಲ್ಲಿ ಕೃಷ್ಣನಿಗಿಂತಲೂ ಅಧಿಕ ಬಲಶಾಲಿಯಾಗಿರುವೆ. ಅಶ್ವಹೃದಯವನ್ನು ಎಷ್ಟು ಮಹಾಮನಸ್ವಿ ವಾಸುದೇವನು ತಿಳಿದಿರುವನೋ ಅದಕ್ಕೂ ಎರಡು ಗುಣ ಹೆಚ್ಚು ನಿನಗೆ ತಿಳಿದಿದೆ ಎನ್ನುವುದರಲ್ಲಿ ಸಂಶಯವೇ ಇಲ್ಲ."

ಶಲ್ಯನು ಹೇಳಿದನು:

“ಗಾಂಧಾರೇ! ಸೈನ್ಯದ ಮಧ್ಯದಲ್ಲಿ ನಾನು ದೇವಕೀಪುತ್ರನಿಗಿಂತಲೂ ವಿಶಿಷ್ಟನೆಂದು ಹೇಳಿದುದಕ್ಕೆ ನಾನು ನಿನ್ನ ಮೇಲೆ ಪ್ರೀತನಾಗಿದ್ದೇನೆ. ನೀನು ಇಚ್ಛಿಸಿರುವಂತೆ ಪಾಂಡವಾಗ್ರನೊಡನೆ ಯುದ್ಧಮಾಡುವ ಯಶಸ್ವಿ ರಾಧೇಯನ ಸಾರಥ್ಯವನ್ನು ವಹಿಸಿಕೊಳ್ಳುತ್ತೇನೆ. ಆದರೆ ನನ್ನದೊಂದು ನಿಬಂಧನೆಯಿದೆ. ನಾನು ವೈಕರ್ತನನ ಬಳಿಯಿರುವಾಗ ನಾನು ಅವನೊಡನೆ ನನಗೆ ಇಷ್ಟವಾದಂತೆ ಮಾತನಾಡುತ್ತೇನೆ!”

ದುರ್ಯೋಧನನು ಹೇಳಿದನು:

“ಲೋಕಧಾತಾ ಪಿತಾಮಹ ಭಗವಾನ್ ಬ್ರಹ್ಮನು ಹೇಗೋ ಹಾಗೆ ನೀನು ಮಹಾತ್ಮ ರಾಧೇಯನ ಕುದುರೆಗಳನ್ನು ನಡೆಸು. ಏಕೆಂದರೆ ನೀನು ಕೃಷ್ಣನಿಗೂ ಕರ್ಣನಿಗೂ ವಿಶೇಷವಾಗಿ ಫಲ್ಗುನನಿಗೂ ವಿಶಿಷ್ಟನಾದವನು. ಅದರಲ್ಲಿ ವಿಚಾರಮಾಡುವಂಥದೇನೂ ಇಲ್ಲ. ಯುದ್ಧದಲ್ಲಿ ಈ ಕರ್ಣನು ರುದ್ರಕಲ್ಪನು. ನೀನು ಬ್ರಹ್ಮನಿಗೆ ಸಮನಾಗಿರುವೆ. ಅವರಿಬ್ಬರೂ ಹೇಗೆ ಅಸುರರನ್ನು ಗೆದ್ದರೋ ಹಾಗೆ ನೀವಿಬ್ಬರೂ ನನ್ನ ಶತ್ರುಗಳನ್ನು ಗೆಲ್ಲಲು ಶಕ್ಯರಾಗಿರುವಿರಿ. ಶಲ್ಯ! ಇಂದು ಈ ಕರ್ಣನು ಹೇಗೆ ಕೃಷ್ಣನು ಸಾರಥಿಯಾಗಿರುವ ಶ್ವೇತಾಶ್ವ

ಕೌಂತೇಯನನ್ನು ಸದೆಬಡಿದು ಕೊಲ್ಲುವನೋ ಹಾಗೆ ನೀನೂ ಕೂಡ ಶೀಘ್ರವಾಗಿ ಕಾರ್ಯವನ್ನು ಕೈಗೊಳ್ಳಬೇಕಾಗಿದೆ. ರಾಜ್ಯ ಮತ್ತು ನಾವೆಲ್ಲರೂ ನೀನು ಮತ್ತು ಕರ್ಣರನ್ನೇ ಅವಲಂಬಿಸಿದ್ದೇವೆ.

ಭಾರ್ಗವ ರಾಮನು ಸರ್ವ ಧನುರ್ವೇದವನ್ನು ಮಹಾತ್ಮ ಕರ್ಣನ ಮೇಲೆ ಸುಪ್ರೀತನಾಗಿ ಅಂತರಾತ್ಮದಿಂದ ಅವನಿಗೆ ದಯಪಾಲಿಸಿದನು. ಕರ್ಣನಲ್ಲಿ ಸ್ವಲ್ಪವಾದರೂ ದೋಷಗಳಿದಿದ್ದರೆ ಭೃಗುನಂದನನು ಅವನಿಗೆ ಆ ದಿವ್ಯಾಸ್ತ್ರಗಳನ್ನು ದಯಪಾಲಿಸುತ್ತಿರಲಿಲ್ಲ. ಕರ್ಣನು ಸೂತಕುಲದಲ್ಲಿ ಹುಟ್ಟಿದವನೆಂದು ನಾನು ಎಂದೂ ಭಾವಿಸುವುದಿಲ್ಲ. ಅವನು ಕ್ಷತ್ರಿಯ ಕುಲದಲ್ಲಿ ಜನಿಸಿದ ದೇವಪುತ್ರನೆಂದೇ ತಿಳಿಯುತ್ತೇನೆ. ಕುಂಡಲ, ಕವಚಗಳಿಂದ ಹುಟ್ಟಿದ ಆದಿತ್ಯಸದೃಶನಾದ ಈ ದೀರ್ಘಬಾಹು ಮಹಾರಥ ವ್ಯಾಘ್ರದಂತಿರುವವನು ಜಿಂಕೆಯಲ್ಲಿ ಹೇಗೆ ಹುಟ್ಟಿಯಾನು? ಅವನ ಭುಜಗಳನ್ನು ನೋಡು. ಗಜರಾಜನ ಸೊಂಡಿಲಿನಂತೆ ದಪ್ಪವಾಗಿವೆ! ಸರ್ವಶತ್ರುಗಳನ್ನೂ ಸಂಹರಿಸಬಲ್ಲ ಅವನ ವಿಶಾಲ ವಕ್ಷಃಸ್ಥಳವನ್ನು ನೋಡು!

ತ್ರಿಪುರ ಸಂಹಾರದ ಸಮಯದಲ್ಲಿ ರುದ್ರನು ರಥಿಯಾಗಿರುವಾಗ ಸರ್ವಲೋಕಪಿತಾಮಹ ದೇವ ಭಗವಾನ್ ಬ್ರಹ್ಮನು ಸಾರಥ್ಯವನ್ನು ಮಾಡಿದನು. ರಥಿಗಿಂತಲೂ ಅಧಿಕ ವೀರನು ರಥಸಾರಥಿಯಾಗುವುದು ಕರ್ತವ್ಯ. ಆದುದರಿಂದ ಪುರುಷವ್ಯಾಘ್ರ! ನೀನು ಯುದ್ಧದಲ್ಲಿ ತುರಗಗಳನ್ನು ನಿಯಂತ್ರಿಸು!”

## ಶಲ್ಯನು ಕರ್ಣನ ಸಾರಥ್ಯವನ್ನು ಸ್ವೀಕರಿಸಿದುದು

ಆಗ ಅಮಿತ್ರಘ್ನ ಮದ್ರಾಧಿಪ ಶಲ್ಯನು ಪ್ರೀತನಾಗಿ ದುರ್ಯೋಧನನನ್ನು ಬಿಗಿದಪ್ಪಿ ಹೀಗೆ ಹೇಳಿದನು:

“ಪ್ರಿಯದರ್ಶನ! ಗಾಂಧಾರೇ! ನೀನು ಏನನ್ನು ಬಯಸುತ್ತೀಯೋ ನಿನ್ನ ಪ್ರಿಯವಾದುದು ಏನಿದೆಯೋ ಅವೆಲ್ಲವನ್ನೂ ನಾನು ಮಾಡುತ್ತೇನೆ. ನಾನು ಎಲ್ಲಿ ಯಾವ ಕಾರ್ಯಕ್ಕೆ ಯೋಗ್ಯನಾಗಿರುವೆನೋ ಆ ಕಾರ್ಯವನ್ನೇ ನೀನು ನನಗೆ ಯೋಜಿಸಿದ ನಂತರ ಅದನ್ನು ನಾನು ಸಂಪೂರ್ಣಮನಸ್ಸಿನಿಂದ ಮಾಡುತ್ತೇನೆಂದು ಮಾತುಕೊಡುತ್ತೇನೆ. ಹಿತವನ್ನು ಬಯಸಿ ನಾನು ಕರ್ಣನಿಗೆ ಹೇಳುವ ಪ್ರಿಯ ಮತ್ತು ಅಪ್ರಿಯ ಮಾತುಗಳನ್ನು ಎಲ್ಲವನ್ನೂ

ನೀನು, ಕರ್ಣ ಮತ್ತು ಎಲ್ಲರೂ ಕ್ಷಮಿಸಬೇಕು!"

ಕರ್ಣನು ಹೇಳಿದನು:

"ಮದ್ರರಾಜ! ಈಶಾನನಿಗೆ ಬ್ರಹ್ಮನು ಹೇಗೋ ಮತ್ತು ಪಾರ್ಥನಿಗೆ ಕೇಶವನು ಹೇಗೋ ಹಾಗೆ ನೀನು ನಿತ್ಯವೂ ನನ್ನ ಹಿತದಲ್ಲಿ ಯುಕ್ತನಾಗಿ ಸಂತೋಷಗೊಳಿಸು!"

ಶಲ್ಯನು ಹೇಳಿದನು:

"ತನ್ನನ್ನು ತಾನೇ ನಿಂದಿಸಿಕೊಳ್ಳುವುದು, ತನ್ನನ್ನು ತಾನೇ ಹೊಗಳಿಕೊಳ್ಳುವುದು, ಇತರರನ್ನು ನಿಂದಿಸುವುದು ಮತ್ತು ಇತರರನ್ನು ಹೊಗಳುವುದು ಇವು ನಾಲ್ಕು ಆರ್ಯರು ಆಚರಿಸಬಾರದಂತಹ ವ್ಯವಹಾರಗಳು. ಇದನ್ನು ತಿಳಿದಿದ್ದರೂ, ನಿನಗೆ ವಿಶ್ವಾಸವುಂಟಾಗಲೆಂಬ ಕಾರಣದಿಂದ, ಸ್ವಪ್ರಶಂಸಾರೂಪವಾದ ಮಾತುಗಳನ್ನು ಹೇಳುತ್ತೇನೆ. ಕೇಳು. ನಾನು ಅಪ್ರಮಾದತೆ, ಅಶ್ವಸಂಚಾಲಜ್ಞಾನ, ವಿದ್ಯೆ ಮತ್ತು ಚಿಕಿತ್ಸೆ ಇವುಗಳಲ್ಲಿ ಶಕ್ರನ ಸಾರಥಿ ಮಾತಲಿಯಷ್ಟೇ ಯೋಗ್ಯ ಸಾರಥಿಯು. ಸಂಗ್ರಾಮದಲ್ಲಿ ಪಾರ್ಥನೊಡನೆ ನೀನು ಯುದ್ಧಮಾಡುವಾಗ ನಿನ್ನ ಕುದುರೆಗಳನ್ನು ನಾನು ನಡೆಸುತ್ತೇನೆ.

ನಿನ್ನ ಆತಂಕವನ್ನು ದೂರಮಾಡು !”

ದುರ್ಯೋಧನನು ಹೇಳಿದನು:

“ಕರ್ಣ ! ಇಗೋ ಕೃಷ್ಣನಿಗಿಂತಲೂ ಅಧಿಕನಾದ, ದೇವೇಂದ್ರನ ಸಾರಥಿ ಮಾತಲಿಗಿಂತಲೂ ಹೆಚ್ಚಿನವನಾದ ಮದ್ರರಾಜನು ನಿನ್ನ ಸಾರಥ್ಯವನ್ನು ಮಾಡುತ್ತಾನೆ. ಯಾವರೀತಿಯಲ್ಲಿ ಇಂದ್ರನ ಕುದುರೆಗಳ ಕಡಿವಾಣಗಳನ್ನು ಮಾತಲಿಯು ಹಿಡಿಯುತ್ತಾನೋ ಹಾಗೆ ಶಲ್ಯನು ನಿನ್ನ ರಥದ ಕುದುರೆಗಳ ಕಡಿವಾಣಗಳನ್ನು ಹಿಡಿದು ರಥವನ್ನು ನಿಯಂತ್ರಿಸುತ್ತಾನೆ. ಯೋಧನಾದ ನೀನು ಮತ್ತು ಸಾರಥಿಯಾಗಿ ಮದ್ರರಾಜನು ರಥದಲ್ಲಿ ಕುಳಿತಿರಲು ನಿನ್ನ ಶ್ರೇಷ್ಠ ರಥವು ಯುದ್ಧದಲ್ಲಿ ಖಂಡಿತವಾಗಿಯೂ ಪಾರ್ಥನನ್ನು ಇಲ್ಲದಂತಾಗಿಸುತ್ತದೆ.”

ಆಗ ಸಂಗ್ರಾಮದಲ್ಲಿ ಉತ್ತಮ ಹಯಗಳನ್ನು ನಡೆಸುತ್ತಿದ್ದ ತರಸ್ವಿಯಾಗಿದ್ದ ಮದ್ರರಾಜನಿಗೆ ದುರ್ಯೋಧನನು ಪುನಃ ಹೇಳಿದನು:

“ನಿನ್ನಿಂದ ರಕ್ಷಿತನಾದ ರಾಧೇಯನು ಧನಂಜಯನನ್ನು ಗೆಲ್ಲುತ್ತಾನೆ !”

ಹೀಗೆ ಹೇಳಲು ಶಲ್ಯನು ಹಾಗೆಯೇ ಆಗಲೆಂದು ರಥವನ್ನು ಮುಟ್ಟಿ

ಹೇಳಿದನು.

ಶಲ್ಯನನ್ನು ಪಡೆದ ಕರ್ಣನು ಸುಮನಸ್ಕನಾಗಿ ತನ್ನ ಸಾರಥಿಗೆ ಹೇಳಿದನು: “ಸೂತ! ನನ್ನ ರಥವನ್ನು ಒಡನೆಯೇ ಸಜ್ಜುಗೊಳಿಸು!”

## ಶಲ್ಯನು ಕರ್ಣನ ತೇಜೋವಧೆಗೈದುದು

ಆಗ ಗಂಧರ್ವನಗರದಂತೆ ವಿಶಾಲವಾಗಿದ್ದ ಆ ಶ್ರೇಷ್ಠ ರಥವನ್ನು ತನ್ನ ಸ್ವಾಮಿಗಾಗಿ ವಿಧಿವತ್ತಾಗಿ ಸಜ್ಜುಗೊಳಿಸಿ ಸಾರಥಿಯು “ಜಯವಾಗಲಿ!” ಎಂದು ನಿವೇದಿಸಿದನು. ಅದಕ್ಕೆ ಮೊದಲೇ ಬ್ರಹ್ಮವಿದರಿಂದ ಪರಿಶುದ್ಧಗೊಳಿಸಿ ಸಮೃದ್ಧವಾಗಿದ್ದ ಆ ರಥವನ್ನು ಕರ್ಣನು ಯಥಾವಿಧಿಯಾಗಿ ಅರ್ಚಿಸಿದನು. ಪ್ರಯತ್ನಿಸಿ ಭಾಸ್ಕರನನ್ನು ಉಪಾಸಿಸಿ ಪ್ರದಕ್ಷಿಣೆಯನ್ನು ಮಾಡಿ ಸಮೀಪದಲ್ಲಿದ್ದ ಮದ್ರರಾಜನಿಗೆ ಮೊದಲು ರಥವನ್ನೇರುವಂತೆ ಹೇಳಿದನು. ಆಗ ಮಹಾತೇಜಸ್ವಿ ಶಲ್ಯನು ಸಿಂಹವು ಪರ್ವತವನ್ನೇರುವಂತೆ ಕರ್ಣನ ಆ ಅತಿದೊಡ್ಡ ದುರ್ಧರ್ಷ ರಥಪ್ರವರವನ್ನು ಏರಿದನು. ಶಲ್ಯನು ಕುಳಿತಿದ್ದ ತನ್ನ ಉತ್ತಮ ರಥವನ್ನು ಕರ್ಣನು ಮಿಂಚಿನಿಂದ ಕೂಡಿದ ಮೋಡಗಳ ಮೇಲೆ ದಿವಾಕರನು ಏರುವಂತೆ ಏರಿ ಕುಳಿತುಕೊಂಡನು. ಆದಿತ್ಯ-ಅಗ್ನಿಯರಂತೆ ಬೆಳಗುತ್ತಿದ್ದ ಅವರಿಬ್ಬರೂ ಒಂದೇ ರಥವನ್ನು ಏರಿರಲು ಆಕಾಶದಲ್ಲಿ ಮೇಘವನ್ನೇರಿರುವ ಸೂರ್ಯ-ಅಗ್ನಿಯರಂತೆ ಹೊಳೆಯುತ್ತಿದ್ದರು.

ಅಧ್ವರದಲ್ಲಿ ಋತ್ವಿಕರು ಸದಸ್ಯರಿಂದ ಇಂದ್ರ-ಅಗ್ನಿಯರನ್ನು ಸ್ತೋತ್ರಿಸುವಂತೆ ದ್ಯುತಿಮತ್ತರಾದ ಆ ಇಬ್ಬರು ವೀರರನ್ನು ಸಂಸ್ತುತಿಸುತ್ತಿದ್ದರು. ಶಲ್ಯನಿಂದ ನಿಯಂತ್ರಿಸಲ್ಪಟ್ಟ ಆ ರಥದಲ್ಲಿ ಕುಳಿತಿದ್ದ ಕರ್ಣನು ಘೋರ ಧನುಸ್ಸನ್ನು ಟೇಂಕರಿಸಿ ಪರಿವೇಷಿತನಾದ ಭಾಸ್ಕರನಂತೆ ಕಾಣುತ್ತಿದ್ದನು. ಆ ಶ್ರೇಷ್ಠ ರಥದಲ್ಲಿ ಕುಳಿತಿದ್ದ ಶರಗಳೇ ಕಿರಣಗಳಾಗಿದ್ದ ಪುರುಷವ್ಯಾಘ್ರ ಕರ್ಣನು ಮಂದರ ಪರ್ವತವನ್ನೇರಿದ ಸೂರ್ಯನಂತೆ ಪ್ರಕಾಶಿಸುತ್ತಿದ್ದನು. ಆ ರಥದಲ್ಲಿ ಕುಳಿತು ಪ್ರಯಾಣಿಸುತ್ತಿದ್ದ ಆ ಮಹಾವೀರ ಅಮಿತತೇಜಸ್ವಿ ರಾಧೇಯನಿಗೆ ದುರ್ಯೋಧನನು ಈ ಮಾತುಗಳನ್ನಾಡಿದನು:

> “ವೀರ! ಆಧಿರಥೇ! ದ್ರೋಣ-ಬೀಷ್ಮ ಇಬ್ಬರೂ ಮಾಡಿರದಂತಹ ದುಷ್ಕರ ಕರ್ಮವನ್ನು ನೀನು ಯುದ್ಧದಲ್ಲಿ ಸರ್ವಧನ್ವಿಗಳೂ ನೋಡುತ್ತಿರುವಂತೆ ಮಾಡು! ಮಹಾರಥರಾದ ಭೀಷ್ಮ-ದ್ರೋಣರು ಅರ್ಜುನ-ಭೀಮಸೇನರನ್ನು ನಿಶ್ಚಯವಾಗಿಯೂ ಸಂಹರಿಸುತ್ತಾರೆಂದು ನನ್ನ ಮನೋಗತವಾಗಿತ್ತು. ಅವರಿಬ್ಬರೂ ಮಾಡಿರದ ವೀರಕರ್ಮವನ್ನು ಮಹಾಯುದ್ಧದಲ್ಲಿ ವಜ್ರಪಾಣಿಯು ಶತ್ರುಗಳೊಂದಿಗೆ ಹೇಗೋ ಹಾಗೆ ಮಾಡು! ಸೆರೆಹಿಡಿ ಅಥವಾ

ಧನಂಜಯನನನ್ನಾಗಲೀ, ಭೀಮಸೇನನನ್ನಾಗಲೀ, ಮಾದ್ರೀಪುತ್ರರಾದ ಯಮಳರನ್ನಾಗಲೀ ಸಂಹರಿಸು! ನಿನಗೆ ಜಯವಾಗಲಿ! ಮಂಗಳವಾಗಲಿ! ಹೋಗು! ಪಾಂಡುಪುತ್ರರ ಸೇನೆಗಳೆಲ್ಲವನ್ನೂ ಭಸ್ಮಮಾಡು!"

ಆಗ ಆಕಾಶದಲ್ಲಿ ಮೋಡಗಳು ಗುಡುಗುವಂತೆ ಸಹಸ್ರಾರು ಲಕ್ಷಗಟ್ಟಲೆ ಭೇರಿ-ವಾದ್ಯಗಳು ಮೊಳಗಿದವು. ದುರ್ಯೋಧನನ ಆ ಮಾತನ್ನು ಸ್ವೀಕರಿಸಿ ರಥಸ್ಥನಾಗಿದ್ದ ರಾಧೇಯನು ಶಲ್ಯನಿಗೆ ಹೇಳಿದನು:

"ಮಹಾಬಾಹೋ! ಎಲ್ಲಿ ಧನ್ವಿ ಧನಂಜಯ, ಭೀಮಸೇನ, ಯಮಳರಿಬ್ಬರು ಮತ್ತು ರಾಜಾ ಯುಧಿಷ್ಠಿರನಿರುವರೋ ಅಲ್ಲಿಗೆ ಅಶ್ವಗಳನ್ನು ಓಡಿಸು! ಲಕ್ಷಗಟ್ಟಲೆ ಕಂಕಪತ್ರ ಬಾಣಗಳನ್ನು ಬಿಡುವ ನನ್ನ ಬಾಹುವೀರ್ಯವನ್ನು ಇಂದು ಧನಂಜಯನು ನೋಡಲಿ! ಇಂದು ನಾನು ದುರ್ಯೋಧನನ ಜಯಕ್ಕಾಗಿ ಮತ್ತು ಪಾಂಡವರ ವಿನಾಶಕ್ಕಾಗಿ ಪರಮತೇಜಸ್ಸಿನ ಶರಗಳನ್ನು ಪ್ರಯೋಗಿಸುತ್ತೇನೆ!"

ಶಲ್ಯನು ಹೇಳಿದನು:

"ಸೂತಪುತ್ರ! ಸರ್ವಾಸ್ತ್ರಗಳನ್ನು ತಿಳಿದಿರುವ,

> ಮಹೇಷ್ವಾಸರೂ, ಮಹಾರಥರೂ, ಯುದ್ಧದಿಂದ ಪಲಾಯನಮಾಡದವರೂ, ಅಜೇಯರೂ ಮತ್ತು ಸತ್ಯವಿಕ್ರಮಿಗಳೂ ಆದ ಆ ಎಲ್ಲ ಪಾಂಡವರನ್ನು ನೀನು ಹೇಗೆತಾನೇ ಕೀಳಾಗಿ ತಿಳಿಯುವೆ? ಅವರು ಸಾಕ್ಷಾತ್ ಶತಕ್ರತುವಿಗೂ ಭಯವನ್ನುಂಟುಮಾಡಬಲ್ಲರು. ಸಿಡಿಲಿನಂತೆ ಮೊಳಗುವ ಗಾಂಡೀವದ ಘೋಷವನ್ನು ಕೇಳಿದನಂತರ ನೀನು ಈ ರೀತಿ ಮಾತನಾಡುವುದಿಲ್ಲ!”

ಮದ್ರರಾಜನಾಡಿದ ಆ ಮಾತನ್ನು ಅನಾದರಿಸಿ ಕರ್ಣನು ಶಲ್ಯನಿಗೆ “ರಥವನ್ನು ಮುಂದುವರಿಸು!” ಎಂದು ಮಾತ್ರ ಹೇಳಿದನು. ಯುದ್ಧಮಾಡಲು ಉತ್ಸುಕನಾಗಿ ಸಜ್ಜಾಗಿದ್ದ ಮಹೇಷ್ವಾಸ ಕರ್ಣನನ್ನು ನೋಡಿ ಕುರುಗಳೆಲ್ಲರೂ ಹೃಷ್ಟರೂಪರಾಗಿ ಜಯಕಾರ ಮಾಡಿದರು. ಆಗ ದುಂದುಭಿಘೋಷಗಳೊಂದಿಗೆ, ಭೇರಿಗಳ ನಿನಾದದೊಂದಿಗೆ, ಬಾಣಗಳ ಶಬ್ಧಗಳೊಂದಿಗೆ, ಮತ್ತು ತರಸ್ವಿಗಳ ವಿವಿಧ ಗರ್ಜನೆಗಳೊಂದಿಗೆ ಕೌರವರು ಯುದ್ಧಕ್ಕೆ ಹೊರಟರು. ಹಾಗೆ ಮುದಿತರಾದ ಯೋಧರು ಮತ್ತು ಕರ್ಣನು ಹೊರಡಲು ಪೃಥ್ವಿಯು ನಡುಗಿ ವಿಸ್ವರದಲ್ಲಿ ಕೂಗಿತು. ಸೂರ್ಯನಿಂದ ಸಪ್ತಮಹಾಗ್ರಹಗಳು ಹೊರಬರುತ್ತಿರುವುದು ಕಂಡುಬಂದಿತು. ಉಲ್ಕಾಪಾತಗಳಾದವು. ಎಲ್ಲ

ದಿಕ್ಕುಗಳಲ್ಲಿಯೂ ಬೆಂಕಿಯು ಬೀಳುತ್ತಿತ್ತು. ಮೋಡಗಳಿಲ್ಲದ ಆಕಾಶದಲ್ಲಿ ಸಿಡಿಲಿನ ಶಬ್ಧವು ಕೇಳಿಬಂದಿತು. ದಾರುಣ ಚಂಡಮಾರುತವು ಬೀಸತೊಡಗಿತು. ಮಹಾಭಯವನ್ನು ಸೂಚಿಸುವಂತೆ ಅನೇಕ ಸಂಖ್ಯೆಗಳಲ್ಲಿ ಮೃಗಪಕ್ಷಿಗಣಗಳು ಕೌರವ ಸೇನೆಯನ್ನು ಅಪ್ರದಕ್ಷಿಣೆಮಾಡಿ ಹೋಗುತ್ತಿದ್ದವು. ಕರ್ಣನು ಹೊರಟಾಗ ಅವನ ಕುದುರೆಗಳು ಮುಕ್ಕರಿಸಿ ನೆಲದಮೇಲೆ ಬಿದ್ದವು. ಅಂತರಿಕ್ಷದಿಂದ ಭಯಾನಕವಾದ ಅಸ್ಥಿವರ್ಷವುಂಟಾಯಿತು. ಶಸ್ತ್ರಗಳು ಉರಿಯುತ್ತಿದ್ದವು. ಧ್ವಜಗಳು ಕಂಪಿಸಿದವು. ವಾಹನಗಳು ಕಣ್ಣೀರು ಸುರಿಸುತ್ತಿದ್ದವು. ಕೌರವರ ವಿನಾಶವನ್ನು ಸೂಚಿಸುವ ಇನ್ನೂ ಇತರ ಅನೇಕ ಉತ್ಪಾತಗಳು ಅಲ್ಲಿ ಕಾಣಿಸಿಕೊಂಡವು. ಆದರೆ ದೈವಮೋಹಿತರಾಗಿದ್ದ ಅವರೆಲ್ಲರೂ ಅದನ್ನು ಗಣನೆಗೆ ತಂದುಕೊಳ್ಳಲಿಲ್ಲ. ಭುವಿಯಲ್ಲಿದ್ದ ನರರು ಹೊರಟಿದ್ದ ಸೂತಪುತ್ರನಿಗೆ “ಜಯವಾಗಲಿ!” ಎಂದು ಘೋಷಿಸಿದರು. ಕೌರವರು ಪಾಂಡವರನ್ನು ಗೆದ್ದರೆಂದೇ ಭಾವಿಸಿದರು.

ಆಗ ರಥಸ್ಥನಾಗಿ ಅಗ್ನಿಯ ತೇಜಸ್ಸಿಗೆ ಸಮಾನ ತೇಜಸ್ಸಿನಿಂದ ಬೆಳಗುತ್ತಿದ್ದ ಪರವೀರಹಂತಕ, ರಥಕುಂಜರ, ವೃಷ ವೈಕರ್ತನನು ಭೀಷ್ಮ-ದ್ರೋಣರ ವೀರ್ಯವು ಅಸ್ತವಾದುದನ್ನು ನಿರೀಕ್ಷಿಸಿದನು.

ಪಾರ್ಥನ ಆ ಅಪ್ರತಿಮ ಕರ್ಮಗಳನ್ನು ನೋಡಿ ಅಭಿಮಾನ-ದರ್ಪಗಳಿಂದ ಪ್ರಜ್ವಲಿಸುತ್ತಿದ್ದ ಕರ್ಣನು ಕ್ರೋಧದಿಂದ ಉರಿಯುತ್ತಿರುವನೋ ಎನ್ನುವಂತೆ ಸುದೀರ್ಘವಾಗಿ ನಿಟ್ಟುಸಿರು ಬಿಡುತ್ತಾ ಶಲ್ಯನನ್ನು ಉದ್ದೇಶಿಸಿ ಹೇಳಿದನು:

"ಧನುಸ್ಸನ್ನು ಹಿಡಿದು ರಥಸ್ಥನಾಗಿರುವ ನಾನು ಕ್ರುದ್ಧನಾದ ಮಹೇಂದ್ರನಿಗೂ ಹೆದರುವುದಿಲ್ಲ. ಭೀಷ್ಮಪ್ರಮುಖರು ರಣದಲ್ಲಿ ಮಲಗಿರುವುದನ್ನು ನೋಡಿಯೂ ನನ್ನ ಮನಸ್ಸು ಸ್ಥಿರವಾಗಿಯೇ ಇದೆ. ಅನಿಂದಿತರಾದ ಭೀಷ್ಮ-ದ್ರೋಣರು ಮಹೇಂದ್ರ-ವಿಷ್ಣುವಿನಂತಿದ್ದರು. ರಥಾಶ್ವಗಜ ಸಮೂಹಗಳನ್ನು ಪ್ರಮಥಿಸುತ್ತಿದ್ದರು. ಅವಧ್ಯರಂತಿದ್ದ ಅವರು ಶತ್ರುಗಳಿಂದ ಹತರಾಗಿರುವರಾದರೂ ಇಂದು ರಣದಲ್ಲಿ ನನಗೆ ಭಯವುಂಟಾಗಿಲ್ಲ. ಮಹಾಸ್ತ್ರವಿದು ಬ್ರಾಹ್ಮಣಪುಂಗವ ಗುರು ದ್ರೋಣನು ಅತಿಬಲಾನ್ವಿತ ನರಾಧಿಪರು ಮತ್ತು ನರಾಶ್ವಮಾತಂಗರಥಗಳು ಶರಗಳಿಂದ ಹತರಾಗುತ್ತಿರುವುದನ್ನು ನೋಡಿಯೂ ಏಕೆ ಸರ್ವ ಶತ್ರುಗಳನ್ನೂ ವಧಿಸಲಿಲ್ಲ? ಮಹಾಹವದಲ್ಲಿ ಆ ದ್ರೋಣನನ್ನು ಸ್ಮರಿಸಿಕೊಂಡು ಸತ್ಯವನ್ನು ಹೇಳುತ್ತಿದ್ದೇನೆ. ಕುರುಗಳೇ! ಕೇಳಿರಿ! ರಣದಲ್ಲಿ ಮೃತ್ಯುವಿನಂತೆ ಉಗ್ರರೂಪದಲ್ಲಿ

ಮುಂದುವರೆಯುತ್ತಿರುವ ಅರ್ಜುನನನ್ನು ನಾನಲ್ಲದೇ ಬೇರೆ ಯಾರೂ ಎದುರಿಸಲಾರರು! ದ್ರೋಣನಲ್ಲಿ ಶಿಕ್ಷಣ, ಪ್ರಸಾದ, ಬಲ, ಧೃತಿ, ಸನ್ನತಿ ಮತ್ತು ಮಹಾಸ್ತ್ರಗಳಿದ್ದವು. ಆದರೂ ಆ ಮಹಾತ್ಮನು ಮೃತ್ಯುವಶನಾದನೆಂದರೆ ಅನ್ಯ ಸರ್ವರೆಲ್ಲರೂ ಇಂದು ಅಸನ್ನಮರಣರಾಗಿರುವರೆಂದೇ ನಾನು ಭಾವಿಸುತ್ತೇನೆ. ನಾವೆಷ್ಟೇ ಚಿಂತಿಸಿದರೂ ಲೋಕದಲ್ಲಿ ಕರ್ಮಗಳು ಅನಿತ್ಯ ಎನ್ನುವುದು ಸತ್ಯ. ಭೀಷ್ಮ-ದ್ರೋಣರೇ ಹತರಾದಮೇಲೆ ನಾಳೆ ಸೂರ್ಯೋದಯವಾಗುವವರೆಗೆ ನಾನು ಜೀವಿಸಿಯೇ ಇರುವೆನೆಂದು ಯಾರು ತಾನೇ ನಿಸ್ಸಂದೇಹವಾಗಿ ಭಾವಿಸಬಲ್ಲನು? ಅಸ್ತ್ರಗಳು, ಬಲ, ಪರಾಕ್ರಮ, ಕ್ರಿಯೆ, ಉತ್ತಮ ನೀತಿ, ಅಥವಾ ಪರಮಾಯುಧಗಳೂ ಮನುಷ್ಯನ ಸುಖಕ್ಕೆ ಸಾಧನಗಳಾಗಲಾರವು. ಈ ಎಲ್ಲ ಗುಣಗಳಿದ್ದ ಗುರು ದ್ರೋಣನೇ ಶತ್ರುಗಳಿಂದ ಯುದ್ಧದಲ್ಲಿ ಹತನಾದನಲ್ಲವೇ? ಹುತಾಶನ ಮತ್ತು ಆದಿತ್ಯರ ಸಮಾನ ತೇಜಸ್ಸಿದ್ದ, ಪರಾಕ್ರಮದಲ್ಲಿ ವಿಷ್ಣು-ಪುರಂದರರಂತಿದ್ದ, ನೀತಿಯಲ್ಲಿ ಸದಾ ಬೃಹಸ್ಪತಿ ಮತ್ತು ಶುಕ್ರರಿಗೆ ಸಮನಾಗಿದ್ದ ದ್ರೋಣನನ್ನು ಅವನಲ್ಲಿದ್ದ ದುಃಸ್ಸಹ ಅಸ್ತ್ರಗಳೂ ರಕ್ಷಿಸಲಿಲ್ಲ! ಸ್ತ್ರೀ-ಕುಮಾರರು ಆರ್ತರಾಗಿ ರೋಧಿಸುತ್ತಿರುವಾಗ ಮತ್ತು ಧಾರ್ತರಾಷ್ಟ್ರನ

ಪೌರುಷವು ಪರಾಜಯಗೊಳ್ಳುವಾಗ ಅವರನ್ನು ರಕ್ಷಿಸುವುದು ನನ್ನ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಶಲ್ಯ! ಶತ್ರುಗಳ ಸೇನೆಯಿದ್ದಲ್ಲಿಗೆ ನನ್ನನ್ನು ಕೊಂಡೊಯ್ಯಿ! ಎಲ್ಲಿ ಸತ್ಯಸಂಧ ರಾಜಾ ಪಾಂಡವ, ಭೀಮಸೇನ-ಅರ್ಜುನರು, ವಾಸುದೇವ, ಸೃಂಜಯರು ಮತ್ತು ಸಾತ್ಯಕಿ, ಹಾಗೂ ಯಮಳರಿರುವರೋ ಅಲ್ಲಿಗೆ ನಾನಲ್ಲದೇ ಬೇರೆ ಯಾರು ತಾನೇ ಹೋಗಿ ಅವರನ್ನು ಎದುರಿಸಬಲ್ಲರು? ಆದುದರಿಂದ ಬೇಗನೇ ಕೊಂಡೊಯ್ಯಿ! ರಣದಲ್ಲಿ ನಾನು ಪಾಂಚಾಲ-ಪಾಂಡವ-ಸೃಂಜಯರನ್ನು ಒಟ್ಟಿಗೇ ಸಂಹರಿಸುತ್ತೇನೆ ಅಥವಾ ದ್ರೋಣನು ಹೋದಲ್ಲಿಗೆ ಹೊರಟುಹೋಗುತ್ತೇನೆ. ಆ ಶೂರರ ಮಧ್ಯ ಹೋಗಿ ನಾನು ಯುದ್ಧಮಾಡುವುದಿಲ್ಲವೆಂದು ತಿಳಿಯಬೇಡ! ಮಿತ್ರದ್ರೋಹವನ್ನು ನಾನು ಸಹಿಸಿಕೊಳ್ಳಲಾರೆ. ಪ್ರಾಣವನ್ನಾದರೂ ತೊರೆದು ದ್ರೋಣನನ್ನು ಹಿಂಬಾಲಿಸುತ್ತೇನೆ! ಪ್ರಾಜ್ಞನೇ ಆಗಿರಲಿ ಮೂಢನೇ ಆಗಿರಲಿ ಜೀವನದ ಅಂತ್ಯದಲ್ಲಿ ಪ್ರಾಣಹೋದಾಗ ಅಂತಕ ಯಮನ ಸತ್ಕಾರವನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ! ಇದನ್ನು ತಿಳಿದ ನಾನು ಪಾರ್ಥನನ್ನು ಎದುರಿಸುತ್ತೇನೆ. ಅದೃಷ್ಟವನ್ನು

ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ! ದುರ್ಯೋಧನನು ಸತತವೂ ನನಗೆ ಕಲ್ಯಾಣವುಂಟುಮಾಡುವುದರಲ್ಲಿಯೇ ನಿರತನಾಗಿದ್ದಾನೆ. ಅವನ ಉದ್ದೇಶಸಾಧನೆಗಾಗಿ ನಾನು ಪ್ರಿಯವಾದ ಭೋಗಗಳನ್ನೂ, ತ್ಯಜಿಸಲು ಕಷ್ಟಕರವಾದ ಜೀವವನ್ನೂ, ತ್ಯಾಗಮಾಡುತ್ತೇನೆ, ಪರಶುರಾಮನು ನನಗೆ ಈ ವೈಯಾಘ್ರಚರ್ಮದಿಂದ ಅಚ್ಛಾದಿತವಾಗಿರುವ, ಉತ್ತಮಾಶ್ವಗಳಿಂದ ಯುಕ್ತವಾಗಿರುವ, ಸುವರ್ಣಮಯವಾದ ಮೂರು ಕೋಶಗಳುಳ್ಳ, ಬೆಳ್ಳಿಯ ಮೂರು ವೇಣುಗಳಿರುವ, ಈ ಶ್ರೇಷ್ಠ ರಥವನ್ನು ನನಗೆ ದಯಪಾಲಿಸಿದ್ದಾನೆ. ಶಲ್ಯ! ವಿಚಿತ್ರ ಧನುಸ್ಸುಗಳನ್ನೂ, ಧ್ವಜ, ಗದೆ, ಉಗ್ರರೂಪದ ಸಾಯಕಗಳನ್ನೂ, ಖಡ್ಗ, ಉರಿಯುತ್ತಿರುವ ಪರಮಾಯುಧವನ್ನೂ, ಉಗ್ರ ಧ್ವನಿಯನ್ನು ನೀಡುವ ಶುಭ್ರ ಶಂಖವನ್ನೂ ನೋಡು! ಸಿಡಿಲಿನಂತೆ ಶಬ್ಧಗಳನ್ನುಂಟುಮಾಡಬಲ್ಲ ಪತಾಕೆಗಳಿಂದ, ಬಿಳಿಯ ಕುದುರೆಗಳಿಂದ, ಶುಭ ಬತ್ತಳಿಕೆಗಳಿಂದ ಶೋಭಿತವಾದ ಈ ರಥಶ್ರೇಷ್ಠ ರಥವನ್ನು ಏರಿ ನಾನು ಬಲವನ್ನುಪಯೋಗಿಸಿ ರಣದಲ್ಲಿ ಅರ್ಜುನನನ್ನು ಸಂಹರಿಸುತ್ತೇನೆ! ಒಂದುವೇಳೆ ಸಮರದಲ್ಲಿ ಸರ್ವಹರ ಮೃತ್ಯುವೇ ಅಪ್ರಮತ್ತನಾಗಿ

ಪಾಂಡುಪುತ್ರನನ್ನು ರಕ್ಷಿಸಿದರೂ ನಾನು ಅವನೊಂದಿಗೆ ಯುದ್ಧಮಾಡಿ ಅವನನ್ನೇ ಸಂಹರಿಸುತ್ತೇನೆ ಅಥವಾ ಭೀಷ್ಮನಂತೆ ಯಮನ ಮುಖದಲ್ಲಿ ಹೋಗುತ್ತೇನೆ! ಮಾತನಾಡಲು ಇನ್ನು ಹೆಚ್ಚೇನಿದೆ? ಇಂದು ತಮ್ಮ ತಮ್ಮ ಗಣಗಳೊಡನೆ ಯಮ, ವರುಣ, ಕುಬೇರ ಅಥವಾ ವಾಸವನೇ ಬಂದರೂ ಮಹಾಹವದಲ್ಲಿ ನಾನು ಪಾಂಡವನನ್ನು ಸಂಹರಿಸುತ್ತೇನೆ!”

ಹೀಗೆ ರಣರಭಸನು ಮಾತಿನಲ್ಲಿಯೇ ಕೊಚ್ಚಿಕೊಳ್ಳುವುದನ್ನು ಕೇಳಿದ ಮದ್ರರಾಜನು ಅವೆಲ್ಲವೂ ಪೊಳ್ಳುಮಾತುಗಳೆಂದು ಸೂಚಿಸುವಂತೆ ಜೋರಾಗಿ ನಕ್ಕು ಅವಮಾನಿಸಿ ಮುಂದೆ ಮಾತನಾಡದಂತೆ ತಡೆದನು. ಅವನ ಮಾತುಗಳಿಗೆ ಯಥೋಚಿತವಾದ ಉತ್ತರವನ್ನೂ ಹೇಳತೊಡಗಿದನು.

“ನಿಲ್ಲಿಸು! ಕರ್ಣ! ಈ ರೀತಿ ಕೊಚ್ಚಿಕೊಳ್ಳುವುದನ್ನು ನಿಲ್ಲಿಸು! ನೀನು ಮಾತನಾಡುವುದರಲ್ಲಿ ಅತಿರಭಸನಾಗಿರುವೆ. ನರವರನಾದ ಧನಂಜಯನೆಲ್ಲಿ? ತಿಳಿಯದೇ ಮಾತನಾಡುವ ನೀನೆಲ್ಲಿ? ಅಮರರಾಜನಿಂದ ರಕ್ಷಿತವಾದ ತ್ರಿದಿವದಂತೆ ಉಪೇಂದ್ರ ಕೃಷ್ಣನಿಂದ ಪಾಲಿತವಾದ ಯದುಸದನವನ್ನು

ಬಲಪೂರ್ವಕವಾಗಿ ಅಲ್ಲೋಲಕಲ್ಲೋಲಗೊಳಿಸಿ ಪುರುಷಶ್ರೇಷ್ಠ ಕೃಷ್ಣನ ತಂಗಿಯನ್ನು ಅರ್ಜುನನಲ್ಲದೇ ಬೇರೆ ಯಾರು ತಾನೇ ಅಪಹರಿಸುತ್ತಿದ್ದರು? ಸುರಪತಿವೀರ್ಯಸಮನಾದ ಪ್ರಭಾವಂತನಾದ ಅರ್ಜುನನಲ್ಲದೇ ಬೇರೆ ಯಾರು ತಾನೇ ಮೃಗವಧೆಯ ಕಲಹದಲ್ಲಿ ತ್ರಿಭುವನಸೃಷ್ಟ ಈಶ್ವರೇಶ್ವರ ಭವನನ್ನೇ ಯುದ್ಧಕ್ಕೆ ಆಹ್ವಾನಿಸುತ್ತಿದ್ದನು? ಅಗ್ನಿಯ ಮೇಲಿನ ಗೌರವದಿಂದಾಗಿ ಅರ್ಜುನನು ಅಸುರ-ಸುರ-ಮಹೋರಗ-ನರರು, ಗರುಡ-ಪಿಶಾಚ-ಯಕ್ಷ-ರಾಕ್ಷಸರನ್ನೂ ಬಾಣಗಳಿಂದ ಸೋಲಿಸಿ ಅವನಿಗಿಷ್ಟವಾದ ಹವಿಸ್ಸನ್ನಿತ್ತನು. ಧೃತರಾಷ್ಟ್ರಸುತನು ಶತ್ರುಗಳಿಂದ ಅಪಹರಿಸಲ್ಪಟ್ಟಾಗ ಅರ್ಜುನನು ಅವನನ್ನು ಬಿಡುಗಡೆಗೊಳಿಸಿದುದು ನಿನ್ನ ಸ್ಮರಣೆಯಲ್ಲಿಲ್ಲವೇ? ಆಗ ಆ ನರೋತ್ತಮನು ಸೂರ್ಯನ ಕಿರಣಗಳಿಗೆ ಸಮಾನ ಅನೇಕ ಬಾಣಗಳಿಂದ ಶತ್ರುಗಳನ್ನು ಸಂಹರಿಸಿದನು. ಮೊಟ್ಟಮೊದಲನೆಯದಾಗಿ ನೀನೇ ಪಲಾಯನಮಾಡಿರಲು ಪಾಂಡವರು ಗಂಧರ್ವರನ್ನು ಸೋಲಿಸಿ ಕಲಹಪ್ರಿಯ ದುರ್ಯೋಧನನನ್ನು ಬಿಡುಗಡೆಗೊಳಿಸಿದುದು ನಿನಗೆ ನೆನಪಿಲ್ಲವೇ? ಪುನಃ ಗೋಗ್ರಹಣದ ಸಮಯದಲ್ಲಿ

> ಬಲವಾಹನಗಳಿಂದ ಸಮುದಿತವಾದ ದ್ರೋಣ-ಅಶ್ವತ್ಥಾಮ-ಭೀಷ್ಮರೊಂದಿಗೆ ನಿನ್ನನ್ನೂ ಆ ಪುರುಷವರೇಣ್ಯನು ಜಯಿಸಲಿಲ್ಲವೇ? ಸೂತಜ! ಈಗ ನಿನ್ನ ವಧೆಗಾಗಿಯೇ ಪುನಃ ಮತ್ತೊಂದು ಉತ್ತಮ ಯುದ್ಧವು ಸನ್ನಿಹಿತವಾಗಿದೆ. ನೀನು ಶತ್ರುಭಯದಿಂದ ಪಲಾಯನಮಾಡದೇ ಇದ್ದರೆ ಸಮರಗತನಾದ ನೀನು ಇಂದು ಹತನಾಗುವೆ!”

ಈ ರೀತಿ ಮದ್ರಪತಿಯು ಕೌರವರ ಶತ್ರುವನ್ನು ಹೊಗಳಿ ಅತಿ ಕ್ರೂರ ಮಾತುಗಳನ್ನಾಡಲು ಅತ್ಯಂತ ರೋಷಗೊಂಡ ಕುರುಸೇನಾಪತಿ ಕರ್ಣನು ಮದ್ರರಾಜನಿಗೆ ಹೇಳಿದನು:

> “ಇರಲಿ! ಇರಲಿ! ಶತ್ರುವನ್ನು ಹೀಗೇಕೆ ಹೊಗಳುತ್ತಿರುವೆ? ನನ್ನ ಮತ್ತು ಅವನ ಯುದ್ಧವು ಪ್ರಾರಂಭವಾಗುತ್ತಿದೆಯಲ್ಲವೇ? ಯುದ್ಧದಲ್ಲಿ ಅವನೇನಾದರೂ ನನ್ನನ್ನು ಜಯಿಸಿದರೆ ನೀನು ಹೇಳಿದುದು ಸುಶ್ಲಾಘನೆಯಾಗುತ್ತದೆ!”

ಹಾಗೆಯೇ ಆಗಲೆಂದು ಹೇಳಿ ಮದ್ರೇಶನು ಮುಂದೆ ಏನೂ ಮಾತನಾಡಲಿಲ್ಲ. ಯುದ್ಧೋತ್ಸುಕನಾಗಿದ್ದ ಕರ್ಣನು “ಮದ್ರೇಶ! ಮುಂದೆ ಹೋಗು!” ಎಂದು ಹೇಳಿದನು. ಆಗ ಶಲ್ಯನ ಸಾರಥ್ಯದಲ್ಲಿದ್ದ ಶ್ವೇತಾಶ್ವಗಳ ಆ ರಥವು ಕತ್ತಲೆಯನ್ನು ಕೊನೆಗೊಳಿಸುವ ಸೂರ್ಯನಂತೆ

ಸಮರದಲ್ಲಿ ಶತ್ರುಗಳನ್ನು ಕೊನೆಗೊಳಿಸುತ್ತಾ ಮುಂದುವರೆಯಿತು. ವ್ಯಾಘ್ರಚರ್ಮದಿಂದ ಆಚ್ಛಾದಿತವಾಗಿದ್ದ ಆ ರಥದಲ್ಲಿ ಕುಳಿತು ಪ್ರಯಾಣಿಸುತ್ತಿದ್ದ ಕರ್ಣನು ಪ್ರೀತನಾಗಿ ಪಾಂಡವರ ಸೇನೆಯನ್ನು ಅವಲೋಕಿಸಿ ತ್ವರೆಯಿಂದ ಧನಂಜಯನೆಲ್ಲಿರುವನೆಂದು ಕೇಳತೊಡಗಿದನು. ಕೌರವ ಸೇನೆಯಲ್ಲಿ ಪ್ರಯಾಣಿಸುತ್ತಿದ್ದ ಕರ್ಣನು ಹರ್ಷನಾಗಿ ಸಮರದಲ್ಲಿ ಒಬ್ಬೊಬ್ಬರನ್ನೂ ನೋಡಿ ಪಾಂಡವ ಅರ್ಜುನನ ಕುರಿತು ಕೇಳುತ್ತಿದ್ದನು.

> “ಇಂದು ಮಹಾತ್ಮ ಶ್ವೇತವಾಹನನನ್ನು ನನಗೆ ತೋರಿಸಿಕೊಟ್ಟವರಿಗೆ ನಾನು ಅವನ ಮನಸ್ಸು ಇಚ್ಛಿಸುವಷ್ಟು ಧನವನ್ನು ನೀಡುತ್ತೇನೆ! ಅದೂ ಕೂಡ ಕಡಿಮೆಯಾಯಿತೆಂದು ತಿಳಿದರೆ ರತ್ನವು ತುಂಬಿರುವ ಬಂಡಿಯನ್ನೇ ನೀಡುತ್ತೇನೆ. ಅದೂ ಸಾಲದೆಂದಾದರೆ ಸುವರ್ಣಮಯವಾದ ಆನೆಗಳಂತೆ ದಷ್ಟ-ಪುಷ್ಟವಾಗಿರುವ ಆರು ಎತ್ತುಗಳನ್ನೇ ಕೊಡುತ್ತೇನೆ. ಜೊತೆಗೆ ಅಂಥವನಿಗೆ ಶ್ಯಾಮಲವರ್ಣದ ಸುವರ್ಣಮಯ ಕಂಠಾಭರಣಗಳನ್ನು ಧರಿಸಿರುವ ಗೀತ-ವಾದ್ಯವಿದುಷಿಯರಾದ ಆಭರಣಗಳಿಂದ ಸಮಲಂಕೃತರಾದ ನೂರು ಯುವತಿಯರನ್ನೂ ಕೊಡುತ್ತೇನೆ. ಅದೂ ಕೂಡ ಕಡಿಮೆಯೆನಿಸಿದರೆ ಅರ್ಜುನನನ್ನು ತೋರಿಸುವ ಪುರುಷನಿಗೆ

ಬೇರೆಯೇ ವರವಾಗಿ ಐದುನೂರು ಶ್ವೇತ ಕುದುರೆಗಳನ್ನು ಕೊಡುತ್ತೇನೆ. ಅದರ ಮೇಲೆ ಇನ್ನೂ ಬಂಗಾರದಹೊದಿಕೆಯನ್ನುಳ್ಳ, ಮಣಿಕುಂಡಲಗಳನ್ನುಳ್ಳ, ಸುಂದರ ಹಲ್ಲುಗಳುಳ್ಳ ಎಂಟು ನೂರು ಕುದುರೆಗಳನ್ನು ಕೊಡುತ್ತೇನೆ. ಧನಂಜಯನ ಸುಳಿವು ಕೊಟ್ಟವನಿಗೆ ಶುಭ್ರ, ಸುವರ್ಣಮಯ, ಅಲಂಕೃತ, ಕಾಂಬೋಜದ ಕುದುರೆಗಳಿಂದ ಯುಕ್ತವಾದ ರಥವನ್ನು ಕೊಡುತ್ತೇನೆ. ಅದಕ್ಕೂ ಹೊರತಾಗಿ ಅವನಿಗೆ ಕಾಂಚನದ ಅನೇಕ ಹೊದಿಕೆಗಳನ್ನು ಹೊದಿಸಿದ್ದ, ಹೇಮಮಾಲೆಗಳನ್ನು ತೊಡಿಸಿದ್ದ, ಶತ್ರುಗಳ ಮೇಲೆ ಎರಗುವಂತೆ ಮಾವುತರಿಂದ ಪಳಗಿಸಲ್ಪಟ್ಟ ಆರು ನೂರು ಆನೆಗಳನ್ನು ಕೊಡುತ್ತೇನೆ. ಅದರಿಂದಲೂ ತೃಪ್ತನಾಗದಿದ್ದರೆ ಅರ್ಜುನನನ್ನು ತೋರಿಸಿಕೊಟ್ಟವನಿಗೆ ಇಷ್ಟವಾದ ಬೇರೊಂದು ವರವನ್ನು ಕೊಡುತ್ತೇನೆ. ಮಕ್ಕಳು, ಹೆಂಡತಿ, ವಿಹಾರಸ್ಥಾನಗಳು, ಈ ಎಲ್ಲವನ್ನೂ ಮತ್ತು ನನ್ನಲ್ಲಿರುವ ಎಲ್ಲ ಐಶ್ವರ್ಯವನ್ನೂ ಅವನಿಗೆ ಕೊಡುತ್ತೇನೆ. ಕೃಷ್ಣರಿಬ್ಬರನ್ನೂ ಒಟ್ಟಿಗೇ ಸಂಹರಿಸಿ ಅವರ ಸಂಪತ್ತೆಲ್ಲವನ್ನೂ ನಾನು ಇಂದು ಕೇಶವಾರ್ಜುನರು ಎಲ್ಲಿರುವರೆಂದು ಹೇಳುವವನಿಗೆ ಕೊಡುತ್ತೇನೆ!"

ಇಂತಹದೇ ಮಾತುಗಳನ್ನು ರಣರಂಗದಲ್ಲಿ ಬಹಳ ಬಾರಿ ಹೇಳುತ್ತಾ

ಕರ್ಣನು ಸಾಗರಸಂಭೂತ, ಸುಸ್ವರವುಳ್ಳ, ಉತ್ತಮ ಶಂಖವನ್ನು ಊದಿದನು. ಸೂತಪುತ್ರನ ಆ ಯುಕ್ತ ಮಾತುಗಳನ್ನು ಕೇಳಿದ ದುರ್ಯೋಧನನು ತನ್ನ ಅನುಯಾಯಿಗಳೊಂದಿಗೆ ಪ್ರಹೃಷ್ಟನಾದನು. ಆಗ ದುಂದುಭಿ-ಮೃದಂಗಗಳ ನಿನಾದವು ಎಲ್ಲೆಡೆ ಮೊಳಗಿದವು. ಅಲ್ಲಿ ಆನೆಗಳ ಘೀಂಕಾರವೂ ಯೋಧರ ಸಿಂಹನಾದವೂ ಕೇಳಿಬಂದಿತು. ಕೌರವ ಸೇನೆಯಲ್ಲಿ ಆಗ ಸಂಪ್ರಹೃಷ್ಟರಾದ ಯೋಧರ ಕೂಗಾಟವು ಕೇಳಿಬಂದಿತು. ಹೀಗೆ ಸಂತೋಷಭರಿತ ಸೈನ್ಯದಲ್ಲಿ ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುತ್ತಿದ್ದ ರಾಧೇಯನಿಗೆ ಮದ್ರರಾಜನು ನಗುತ್ತಾ ಈ ಮಾತನ್ನಾಡಿದನು:

> “ಸೂತಪುತ್ರ! ಇಂದು ನೀನು ಅಭಿಮಾನದಿಂದ ಸುವರ್ಣಮಯ ಆನೆಗಳಂತಿರುವ ಆರು ಎತ್ತುಗಳನ್ನು ಯಾರಿಗೂ ಕೊಡಬೇಕಾಗಿಲ್ಲ. ನೀನೇ ಧನಂಜಯನನ್ನು ನೋಡುವೆ! ಬಾಲಕನಂತೆ ನೀನು ಸಂಪತ್ತನ್ನು ವ್ಯವಮಾಡಲು ಹೊರಟಿರುವೆ! ಯಾವ ರೀತಿಯ ಪ್ರಯತ್ನವನ್ನೂ ಪಡೆಯದೇ ನೀನು ಇಂದು ಧನಂಜಯನನ್ನು ನೋಡುವಿಯಂತೆ! ಕಡುಮೂಢನಂತೆ ನೀನು ನಿನ್ನಲ್ಲಿರುವ ಅಪಾರ ಸಂಪತ್ತನ್ನು ಸ್ವಲ್ಪವೋ ಎನ್ನುವಂತೆ ತ್ಯಾಗಮಾಡಲು ಹೊರಟಿರುವೆ!

ಮೋಹವಶನಾದ ನೀನು ಅಪಾತ್ರರಿಗೆ ದಾನ ಮಾಡುವುದರಿಂದ ಉಂಟಾಗುವ ದೋಷಗಳನ್ನು ತಿಳಿತುಕೊಂಡಿಲ್ಲ! ನೀನು ಕೊಡಲು ಹೊರಟಿರುವ ಬಹು ಸಂಪತ್ತಿನಿಂದ ಅನೇಕ ವಿಧದ ಯಜ್ಞಗಳನ್ನು ಮಾಡಬಹುದು. ಆ ಸಂಪತ್ತಿನಿಂದ ಯಜ್ಞಗಳನ್ನು ನಡೆಸು! ಮೋಹಪರವಶನಾಗಿ ಕೃಷ್ಣಾರ್ಜುನರನ್ನು ಸಂಹರಿಸುವ ನಿನ್ನ ಈ ಪ್ರಯತ್ನವು ವ್ಯರ್ಥವೇ ಸರಿ! ಹೋರಾಟದಲ್ಲಿ ಒಂದು ಗುಳ್ಳೇನರಿಯು ಎರಡು ಸಿಂಹಗಳನ್ನು ಸಂಹರಿಸಿದುದನ್ನು ಇದೂವರೆಗೂ ಕೇಳಿಲ್ಲ! ಇದೂವರೆಗೆ ಯಾರೂ ಬಯಸದೇ ಇರುವುದನ್ನು ನೀನು ಬಯಸುತ್ತಿರುವೆ! ನಿನಗೆ ಸುಹೃದಯರ್ಯಾರೂ ಇಲ್ಲವೆಂದು ತೋರುತ್ತದೆ! ಏಕೆಂದರೆ ಬೆಂಕಿಯಲ್ಲಿ ಬೀಳಲು ಮುಂದಾಗುತ್ತಿರುವ ನಿನ್ನನ್ನು ಯಾರೂ ತಡೆಯುತ್ತಿಲ್ಲ! ಕಾಲ-ಕಾರ್ಯಗಳನ್ನು ನೀನು ತಿಳಿದಿಲ್ಲ. ನೀನು ಕಾಲಪಕ್ವನಾಗಿರುವೆ ಎನ್ನುವುದರಲ್ಲಿ ಸಂಶಯವಿಲ್ಲ. ಇಲ್ಲದಿದ್ದರೆ ಯಾರುತಾನೇ ಕೇಳಲು ಅಸಾಧ್ಯವಾದ ಈ ಅಬದ್ಧಮಾತುಗಳನ್ನಾಡುತ್ತಾನೆ? ಕುತ್ತಿಗೆಗೆ ಕಲ್ಲನ್ನು ಕಟ್ಟಿಕೊಂಡು ಎರಡು ತೋಳುಗಳಿಂದ ಸಮುದ್ರವನ್ನು ದಾಟಲು ಹೊರಟಿರುವವನಂತೆ ಅಥವಾ ಪರ್ವತದಿಂದ ಕೆಳಗೆ ಧುಮುಕಲು ಹೊರಟಿರುವವನಂತೆ

ನೀನು ಮಾಡತೊಡಗಿರುವೆ! ನೀನು ಶ್ರೇಯಸ್ಸನ್ನು ಬಯಸುವವನಾದರೆ ಸರ್ವಯೋಧರೊಂದಿಗೆ, ಸೇನಾವ್ಯೂಹದಿಂದ ಸುರಕ್ಷಿತನಾಗಿದ್ದುಕೊಂಡು ಧನಂಜಯನೊಡನೆ ಯುದ್ಧಮಾಡು. ಧಾರ್ತರಾಷ್ಟ್ರನ ಹಿತಕ್ಕಾಗಿ ಹೀಗೆ ಹೇಳುತ್ತಿದ್ದೇನೆ. ನಿನ್ನನ್ನು ಹಿಂಸಿಸಬೇಕೆಂದಲ್ಲ! ನಿನಗೆ ಜೀವಂತವಾಗಿರುವ ಆಸೆಯಿರುವುದಾದರೆ ನನ್ನ ಮಾತಿನಲ್ಲಿ ವಿಶ್ವಾಸವನ್ನಿಟ್ಟು ಅದರಂತೆ ನಡೆ!"

ಕರ್ಣನು ಹೇಳಿದನು:

"ಸ್ವವೀರ್ಯವನ್ನು ಆಶ್ರಯಿಸಿಯೇ ನಾನು ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸುತ್ತೇನೆ. ನೀನಾದರೋ ಮಿತ್ರನಮುಖವಾಡವನ್ನು ಧರಿಸಿರುವ ನನ್ನ ಶತ್ರುವಾಗಿರುವೆ! ನನ್ನಲ್ಲಿ ಭಯವನ್ನುಂಟುಮಾಡಲು ಬಯಸುತ್ತಿರುವೆ! ಆದರೆ ನನ್ನ ಈ ಅಭಿಪ್ರಾಯದಿಂದ ಯಾರೂ ನನ್ನನ್ನು ತಡೆಯಲಾರರು! ವಜ್ರವನ್ನು ಎತ್ತಿಕೊಂಡು ಇಂದ್ರನೇ ಬಂದರೂ ನಾನು ನನ್ನ ಸಂಕಲ್ಪದಿಂದ ಚ್ಯುತನಾಗುವುದಿಲ್ಲ. ಇನ್ನು ಮರ್ತ್ಯರೇನು ಮಾಡಿಯಾರು?"

ಹೀಗೆ ಕರ್ಣನು ವಾಕ್ಯವನ್ನು ಮುಗಿಸುತ್ತಿದ್ದಂತೆಯೇ ಶಲ್ಯನು ಕರ್ಣನನ್ನು

ಅತ್ಯಂತ ಕುಪಿತನನ್ನಾಗಿಸುವ ಉದ್ದೇಶದಿಂದ ಪುನಃ ಉತ್ತರಿಸಿದನು:

"ವೇಗಯುಕ್ತವಾದ ಮೌರ್ವಿಯಿಂದ ಹಸ್ತಕೌಶಲದಿಂದ ಪ್ರಯೋಗಿಸಲ್ಪಟ್ಟ ಫಲ್ಗುನನ ಕಂಕಪತ್ರ ಶಿತಾಗ್ರ ಬಾಣಗಳು ನಿನ್ನ ಶರೀರದಲ್ಲಿ ನಾಟುವಾಗ ನೀನು ಅರ್ಜುನನ ವಿಷಯದಲ್ಲಿ ಈಗ ಆಡುತ್ತಿರುವ ಮಾತಿಗೆ ಪಶ್ಚಾತ್ತಾಪ ಪಡುತ್ತೀಯೆ. ಸೂತಪುತ್ರ! ಯಾವಾಗ ಪಾರ್ಥ ಸವ್ಯಸಾಚಿಯು ದಿವ್ಯ ಧನುಸ್ಸನ್ನೆತ್ತಿಕೊಂಡು ಸೇನೆಗಳನ್ನು ದಿಗ್ಭ್ರಮೆಗೊಳಿಸುತ್ತಾ ನಿನ್ನನ್ನು ನಿಶಿತ ಪೃಷತ್ಕಗಳಿಂದ ನಿನ್ನನ್ನು ಮರ್ದಿಸುತ್ತಾನೋ ಆಗ ನೀನು ಪಶ್ಚಾತ್ತಾಪ ಪಡುತ್ತೀಯೆ. ತಾಯಿಯ ತೊಡೆಯಮೇಲೆ ಮಲಗಿರುವ ಬಾಲಕನು ಚಂದ್ರನನ್ನು ಅಪಹರಿಸಲು ಇಚ್ಛಿಸುವಂತೆ ಮೋಹಪರವಶನಾದ ನೀನು ರಥಸ್ಥನಾಗಿ ಹೋರಾಡುತ್ತಿರುವ ಅರ್ಜುನನನ್ನು ಇಂದು ಜಯಿಸಲು ಇಚ್ಛಿಸುತ್ತಿರುವೆ! ಸುತೀಕ್ಷ್ಣ ಅಲಗುಗಳುಳ್ಳ ತ್ರಿಶೂಲವನ್ನು ಅಪ್ಪಿಕೊಂಡು ನೀನು ಅಂಗಾಂಗಗಳನ್ನು ಚುಚ್ಚಿಕೊಳ್ಳುತ್ತಿರುವೆ. ಆ ಸುತೀಕ್ಷ್ಣ ಅಲಗುಗಳಂತಿರುವ ಅರ್ಜುನನೊಡನೆ ನೀನು ಇಂದು ಯುದ್ಧಮಾಡಬಯಸುತ್ತಿರುವೆ! ಬುದ್ಧಿಯಿಲ್ಲದ,

ಆತುರಬುದ್ಧಿಯ ಎಳೆಯ ಕ್ಷುದ್ರಮೃಗವೊಂದು ಕುಪಿತವಾಗಿರುವ ಕೇಸರಯುಕ್ತ ವಿಶಾಲ ಸಿಂಹವನ್ನು ಜಗಳಕ್ಕೆ ಕರೆಯುವಂತೆ ನೀನು ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸುತ್ತಿರುವೆ! ಕೇಸರಿಯಂತಿರುವ ಮಹಾವೀರ್ಯ ರಾಜಪುತ್ರನನ್ನು ಅಹ್ವಾನಿಸಬೇಡ! ವನದಲ್ಲಿ ಹೊಟ್ಟೆತುಂಬಿ ತೃಪ್ತವಾದ ಗುಳ್ಳೇನರಿಯಂತೆ ನೀನು ಪಾರ್ಥನನ್ನು ಎದುರಿಸಿ ನಾಶಹೊಂದಬೇಡ! ಈಷಾದಂಡತಂಥಹ ಕೋರೆದಾಡೆಗಳಿರುವ ಮದೋದಕವನ್ನು ಸುರಿಸುತ್ತಿರುವ ಮಹಾಗಜವನ್ನು ಮೊಲವೊಂದು ಜಗಳಕ್ಕೆ ಕರೆಯುವಂತೆ ನೀನು ಧನಂಜಯನನ್ನು ಯುದ್ಧಕ್ಕೆ ಆಹ್ವಾನಿಸುತ್ತಿರುವೆ! ಬಿಲದಲ್ಲಿರುವ ಮಹಾವಿಷವನ್ನು ತುಂಬಿಕೊಂಡಿರುವ ಕೃಷ್ಣಸರ್ಪವನ್ನು ಮೂರ್ಖನಾಗಿ ಕೋಲಿನಿಂದ ಚುಚ್ಚುವಂತೆ ನೀನು ಪಾರ್ಥನೊಡನೆ ಯುದ್ಧಮಾಡಲು ಬಯಸುತ್ತಿರುವೆ! ಮೂಢತ್ವದಿಂದ ಗುಳ್ಳೆನರಿಯೊಂದು ಕ್ರುದ್ಧವಾದ ಕೇಸರಿಯುಕ್ತ ಸಿಂಹವನ್ನು ಅತಿಕ್ರಮಿಸಿ ಕೂಗುವಂತೆ ನೀನು ನರಸಿಂಹ ಪಾಂಡವನನ್ನು ಕೂಗಿ ಕರೆಯುತ್ತಿರುವೆ! ಸುಪರ್ಣ ಪತಗಶ್ರೇಷ್ಠ ತರಸ್ವಿ ವೈನತೇಯನನ್ನು ತನ್ನ ಮೇಲೆ ಬಂದು ಬೀಳಲು ಆಹ್ವಾನಿಸುತ್ತಿರುವವನಂತೆ ನೀನು ಪಾರ್ಥ ಧನಂಜಯನನ್ನು

ಕರೆಯುತ್ತಿರುವೆ! ಜಲಜಂತುಗಳಿಂದ ಸಮೃದ್ಧವಾಗಿ ಚಂದ್ರೋದಯದಲ್ಲಿ ಉಕ್ಕಿಬಂದು ಎತ್ತರ ಅಲೆಗಳಿಂದ ಕೂಡಿದ ಸಮುದ್ರವನ್ನೇ ನೀನು ದೋಣಿಯಿಲ್ಲದೇ ಈಜಿ ದಾಟಲು ಬಯಸುತ್ತಿರುವೆ! ದುಂದುಭಿಯ ನಿನಾದದಂತೆ ಗಂಭೀರ ಕಂಠಧ್ವನಿಯಿರುವ, ಚೂಪಾದ ಕೊಂಬುಗಳಿರುವ, ಆಕ್ರಮಣಿಸಲು ಬರುವ ಋಷಭದಂತಿರುವ ಧನಂಜಯ ಪಾರ್ಥನನ್ನು ನೀನು ಯುದ್ಧಕ್ಕೆ ಆಹ್ವಾನಿಸುತ್ತಿದ್ದೀಯೆ! ಮಹಾಮೇಘದ ಮಹಾ ಗುಡುಗನ್ನು ನೀನು ಪ್ರತಿಧ್ವನಿಸುತ್ತಿರುವೆ! ಬೇಕಾದಷ್ಟು ಬಾಣಗಳ ಮಳೆಸುರಿಸುವ ನರಪರ್ಜನ್ಯ ಅರ್ಜುನನ ಎದುರು ಗರ್ಜಿಸುತ್ತಿರುವೆ! ಮನೆಯಲ್ಲಿಯೇ ಕಟ್ಟಿಹಾಕಿದ ನಾಯಿಯೊಂದು ವನದಲ್ಲಿರುವ ಹುಲಿಯ ಎದುರು ಬೊಗಳುವಂತೆ ನೀನು ನರವ್ಯಾಘ್ರ ಧನಂಜಯನ ಎದುರು ಬೊಗಳುತ್ತಿರುವೆ! ವನದಲ್ಲಿ ಮೊಲಗಳ ಹಿಂಡುಗಳ ಮಧ್ಯೆ ವಾಸಿಸುವ ಗುಳ್ಳೇನರಿಯೂ ಕೂಡ ಸಿಂಹವನ್ನು ಕಾಣುವವರೆಗೆ ತಾನೇ ಸಿಂಹ ಎಂದು ಭಾವಿಸುಕೊಳ್ಳುತ್ತದೆ. ಹಾಗೆ ಶತ್ರುದಮನ ನರವ್ಯಾಘ್ರ ಧನಂಜನನ್ನು ಇನ್ನೂ ನೋಡದಿರುವ ನೀನೂ ಕೂಡ ನೀನೇ ಸಿಂಹ ಎಂಬ ಅಭಿಮಾನದಿಂದಿರುವೆ! ಎಲ್ಲಿಯವರೆಗೆ ನೀನು

ಒಂದೇರಥದಲ್ಲಿ ಸೂರ್ಯಚಂದ್ರರಂತೆ ಪ್ರಕಾಶಮಾನರಾಗಿ ಕುಳಿತಿರುವ ಕೃಷ್ಣಾರ್ಜುನರನ್ನು ನೋಡುವುದಿಲ್ಲವೋ ಅಲ್ಲಿಯವರೆಗೆ ನೀನು ನಿನ್ನನ್ನೇ ವ್ಯಾಘ್ರವೆಂದು ತಿಳಿದುಕೊಂಡುಬಿಟ್ಟಿದ್ದೀಯೆ! ಎಲ್ಲಿಯವರೆಗೆ ನೀನು ಮಹಾಯುದ್ಧದಲ್ಲಿ ಗಾಂಡೀವದ ನಿರ್ಘೋಷವನ್ನು ಕೇಳುವುದಿಲ್ಲವೋ ಅಲ್ಲಿಯವರೆಗೆ ನಿನಗಿಷ್ಟಬಂದಂತೆ ಮಾತನಾಡಿಕೊಂಡಿರಬಹುದು! ರಥಶಬ್ಧ ಮತ್ತು ಧನುಸ್ಸಿನ ಟೇಂಕಾರಗಳಿಂದ ಹತ್ತೂ ದಿಕ್ಕುಗಳನ್ನೂ ಮೊಳಗಿಸುತ್ತಾ ಸಿಂಹದಂತೆ ಗರ್ಜಿಸುವ ಅರ್ಜುನನನ್ನು ನೋಡಿ ನೀನು ಗುಳ್ಳೇನರಿಯಾಗಿಬಿಡುವೆಯಂತೆ! ನೀನು ಯಾವಾಗಲೂ ಗುಳ್ಳೇನರಿಯಂತೆಯೇ ಮತ್ತು ಧನಂಜಯನು ಯಾವಾಗಲೂ ಸಿಂಹದಂತೆಯೇ! ವೀರರನ್ನು ದ್ವೇಷಿಸುವ ನೀನು ಯಾವಾಗಲೂ ಗುಳ್ಳೇನರಿಯಂತೆಯೇ ಇರುವೆ! ಬಲಾಬಲಗಳ ತುಲನೆಯಲ್ಲಿ ಅರ್ಜುನನಿಗೂ ಮತ್ತು ನಿನಗೂ ಬೆಕ್ಕು-ಇಲಿಗಳ ಸಾಮ್ಯವಿದೆ. ಹುಲಿ ಮತ್ತು ನಾಯಿಗಳ ಸಾಮ್ಯವಿದೆ. ಸಿಂಹ ಮತ್ತು ಗುಳ್ಳೇನರಿಗಳ ಸಾಮ್ಯವಿದೆ. ಆನೆ ಮತ್ತು ಮೊಲಗಳ ಸಾಮ್ಯವಿದೆ. ಅರ್ಜುನನಿಗಿಂತ ನೀನು ಅತ್ಯಂತ ದುರ್ಬಲನು. ಹಾಗೆಯೇ ನೀನು ಮತ್ತು ಪಾರ್ಥನೂ ಮಾಡಿರುವ

ಸತ್ಕರ್ಮಗಳಲ್ಲಿ ಸುಳ್ಳು-ಸತ್ಯಗಳ ಮತ್ತು ವಿಷ-ಅಮೃತಗಳ ನಡುವಿನ ಅಂತರದಷ್ಟೇ ವ್ಯತ್ಯಾಸಗಳುಂಟು!”

ಶಲ್ಯನು ಮಾತುಗಳಿಂದ ಈ ರೀತಿ ಕರ್ಣನನ್ನು ನಿಂದಿಸಲು, ಮಾತಿನ ಬಾಣಗಳನ್ನು ಬಿಡುತ್ತಾನೆಂದೇ ಇವನಿಗೆ ಶಲ್ಯನೆಂಬ ಹೆಸರು ಬಂದಿರಬಹುದೆಂದು ಭಾವಿಸಿ, ಅತ್ಯಂತ ಕ್ರೋಧಿತನಾಗಿ ರಾಧೇಯನು ಹೇಳಿದನು:

“ಶಲ್ಯ! ಗುಣವಂತನಾದವನು ಮಾತ್ರವೇ ಗುಣವಂತರ ಸದ್ಗುಣಗಳನ್ನು ತಿಳಿದುಕೊಳ್ಳುತ್ತಾನೆ. ಗುಣಹೀನನಾದವನು ಖಂಡಿತ ತಿಳಿದುಕೊಂಡಿರಲಾರನು! ನಿನ್ನಂತಹ ಗುಣಹೀನನಿಗೆ ಗುಣಾಗುಣಗಳ ಪರಿಜ್ಞಾನವಾದರೂ ಹೇಗಿರಬೇಕು! ಅರ್ಜುನನ ಮಹಾಸ್ತ್ರಗಳು, ಅವನ ಕ್ರೋಧ, ವೀರ್ಯ, ಧನುಸ್ಸು ಮತ್ತು ಶರಗಳ ಕುರಿತು ನನಗೆ ಗೊತ್ತಿರುವಷ್ಟು ನಿನಗೆ ಗೊತ್ತಿರಲಿಕ್ಕಿಲ್ಲ! ನನ್ನ ಮತ್ತು ಪಾಂಡವನ ವೀರ್ಯಗಳ ಕುರಿತು ನನಗೆ ಚೆನ್ನಾಗಿ ಗೊತ್ತಿರುವುದರಿಂದಲೇ ನಾನು ಅವನನ್ನು ಯುದ್ಧಕ್ಕೆ ಆಹ್ವಾನಿಸುತ್ತಿದ್ದೇನೆ! ಪತಂಗವು ಅಗ್ನಿಯಲ್ಲಿ ಹೋಗಿ ಬೀಳುವಂತಲ್ಲ! ನನ್ನಲ್ಲೊಂದು ಚೆನ್ನಾಗಿ ಶುದ್ಧಗೊಳಿಸಲ್ಪಟ್ಟ, ರಣಹದ್ದಿನ ರೆಕ್ಕೆಗಳಿಂದ ಸುಲಂಕೃತವಾಗಿರುವ ಮತ್ತು ರಕ್ತವೇ

ಭೋಜನೆಯಾಗಿರುವ ಒಂದು ಬಾಣವಿದೆ. ಇದನ್ನು ಪ್ರತ್ಯೇಕವಾಗಿ ತೂಣೀರದಲ್ಲಿ ಇಟ್ಟುಕೊಂಡಿದ್ದೇನೆ! ಅನೇಕ ವರ್ಷಗಳಿಂದಲೂ ಚಂದನಲೇಪದಿಂದ ಪೂಜೆಗೊಳ್ಳುತ್ತಿರುವ ನರಾಶ್ವಗಜಸಮೂಹಗಳನ್ನು ಒಂದೇ ಪ್ರಯೋಗದಲ್ಲಿ ಧ್ವಂಸಮಾಡಬಲ್ಲ ಉಗ್ರ ವಿಷವಾನ್ ಬಾಣವು ಗಂಧದ ಪುಡಿಯಲ್ಲಿಯೇ ಮಲಗಿದೆ. ನನ್ನಲ್ಲಿರುವ ಈ ಸರ್ಪಾಸ್ತ್ರವು ಓರ್ವ ವೀರನನ್ನು ಸಂಹರಿಸುವಂಥದ್ದು. ಈ ಮಹಾರೌದ್ರ ಬಾಣವು ಕವಚ-ಅಸ್ಥಿಗಳನ್ನು ಸೀಳಿಕೊಂಡು ಹೋಗಬಲ್ಲದು. ಕ್ರುದ್ಧನಾದರೆ ಇದರಿಂದ ಮಹಾಗಿರಿ ಮೇರುವನ್ನೇ ಭೇದಿಸಬಲ್ಲೆ! ಫಲ್ಗುಣ ಮತ್ತು ದೇವಕೀಪುತ್ರ ಈ ಈರ್ವರು ಕೃಷ್ಣರ ಹೊರತು ಬೇರೆ ಯಾರಮೇಲೂ ಇದನ್ನು ನಾನು ಪ್ರಯೋಗಿಸುವುದಿಲ್ಲ ಎಂಬ ಈ ಸತ್ಯವನ್ನು ನೀನು ಕೇಳಿಕೋ! ಅಂತಹ ಬಾಣವಿದೆ ಎನ್ನುವ ಧೈರ್ಯದಿಂದಲೇ ನಾನು ವಾಸುದೇವ-ಧನಂಜಯರೊಡನೆ ಯುದ್ಧಮಾಡಲು ಹೊರಟಿದ್ದೇನೆ. ಇದು ಪರಮಸಂಕ್ರುದ್ಧನಾದ ನನಗೆ ತಕ್ಕುದಾಗಿಯೇ ಇದೆ. ವಾಸುದೇವರ ಸರ್ವ ಸಂಪತ್ತೂ ಕೃಷ್ಣನಲ್ಲಿ ಪ್ರತಿಷ್ಠಿತವಾಗಿವೆ. ಹಾಗೆಯೇ ಪಾಂಡುಪುತ್ರರು ಎಲ್ಲರ ಜಯವು ಪಾರ್ಥ ಅರ್ಜುನನಲ್ಲಿ ಪ್ರತಿಷ್ಠಿತವಾಗಿದೆ.

ಅಂತಹ ಇಬ್ಬರನ್ನೂ ಎದುರಿಸಿ ಯಾರು ತಾನೇ ಹಿಂದಿರುಗಿ ಬರಬಲ್ಲರು? ಅವರಿಬ್ಬರು ಪುರುಷವ್ಯಾಘ್ರರೂ ಒಟ್ಟಿಗೇ ರಥದಲ್ಲಿ ಕುಳಿತು ನನ್ನೊಬ್ಬನೊಡನೆಯೇ ಯುದ್ಧಮಾಡಲು ಬರುತ್ತಾರೆ. ನನ್ನ ಜನ್ಮವು ಎಷ್ಟು ಶ್ರೇಷ್ಠವೆನ್ನುವುದೆಂದು ನೀನೇ ನೋಡು! ಸೋದರಮಾವ ಮತ್ತು ಸೋತರತ್ತೆಯ ಮಕ್ಕಳಾಗಿ ಸಹೋದರರಂತೆ ಮತ್ತು ದಾರದಲ್ಲಿ ಪೋಣಿಸಿದ ಮಣಿಗಳಂತೆ ಒಟ್ಟಿಗೇ ಇರುವ ಅವರಿಬ್ಬರೂ ನನ್ನಿಂದ ಹತರಾಗುವುದನ್ನು ನೋಡುವೆಯಂತೆ! ಹೇಡಿಗಳಿಗೆ ನಡುಗನ್ನು ಹುಟ್ಟಿಸುವ ಅರ್ಜುನನ ಗಾಂಡೀವ, ಕೃಷ್ಣನ ಚಕ್ರ, ಗರುಡ ಮತ್ತು ಕಪಿಧ್ವಜಗಳು ನನಗೆ ಹರ್ಷವನ್ನುಂಟು ಮಾಡುತ್ತವೆ! ನೀನಾದರೋ ದುಷ್ಟಸ್ವಭಾವದವನು. ಮೂಢನು. ಮಹಾಯುದ್ಧಗಳ ಕುರಿತು ತಿಳಿಯದವನು. ಭಯದಿಂದ ತತ್ತರಿಸಿದ್ದೀಯೆ! ಅದರಿಂದಾಗಿ ಬಹಳ ಅಬದ್ಧವಾಗಿ ಮಾತನಾಡುತ್ತಿರುವೆ!

ಕೆಟ್ಟದೇಶದಲ್ಲಿ ಹುಟ್ಟಿದವನೇ! ನೀನು ಯಾವುದೋ ಸ್ವಾರ್ಥ ಕಾರಣದಿಂದಲೇ ಅವರಿಬ್ಬರನ್ನೂ ಸ್ತುತಿಸುತ್ತಿರುವೆ! ಇಂದು ನಾನು ಸಮರದಲ್ಲಿ ಅವರಿಬ್ಬರನ್ನೂ ಸಂಹರಿಸಿ

ಬಾಂಧವರೊಂದಿಗೆ ನಿನ್ನನ್ನೂ ಸಂಹರಿಸುತ್ತೇನೆ! ಪಾಪದೇಶದಲ್ಲಿ ಹುಟ್ಟಿದವನೇ! ದುರ್ಬುದ್ಧೇ! ಕ್ಷುದ್ರ! ಕ್ಷತ್ರಿಯಪಾಂಸನ! ಸುಹೃದಯನಾಗಿದ್ದುಕೊಂಡು ನೀನು ಶತ್ರುಗಳಾದ ಕೃಷ್ಣಾರ್ಜುನರ ಕುರಿತು ನನ್ನನ್ನೇಗೆ ಹೆದರಿಸುತ್ತಿದ್ದೀಯೆ? ಅವರಾದರೋ ಇಂದು ನನ್ನನ್ನು ಸಂಹರಿಸುತ್ತಾರೆ ಅಥವಾ ನಾನಾದರೋ ಅವರಿಬ್ಬರನ್ನೂ ಸಂಹರಿಸುತ್ತೇನೆ. ನನ್ನ ಬಲವನ್ನು ಚೆನ್ನಾಗಿ ತಿಳಿದುಕೊಂಡಿರುವ ನಾನು ಕೃಷ್ಣಾರ್ಜುನರಿಗೆ ಹೆದರುವವನಲ್ಲ! ಸಹಸ್ರ ವಾಸುದೇವರಾಗಲೀ ಅಥವಾ ನೂರು ಫಲ್ಗುನರಾಗಲೀ ಬಂದರೂ ಕೂಡ ನಾನೊಬ್ಬನೇ ಅವರನ್ನು ಸಂಹರಿಸುತ್ತೇನೆ! ನೀನು ಬಾಯಿಮುಚ್ಚಿಕೋ! ಕ್ರೀಡೆಗೆಂದು ಸ್ತ್ರೀ-ಬಾಲಕ-ವೃದ್ಧರು ಮತ್ತು ಶಿಷ್ಯರು ಒಂದು ಹಾಡನ್ನು ಹಾಡುತ್ತಾರೆ! ದುರಾತ್ಮ ಮದ್ರಕರ ಮೇಲಿರುವ ಈ ಹಾಡನ್ನು ಕೇಳು! ಹಿಂದೆ ರಾಜಸನ್ನಿಧಿಗಳಲ್ಲಿ ಬ್ರಾಹ್ಮಣರು ಏನನ್ನು ಹೇಳುತ್ತಿದ್ದರೋ ಅದನ್ನು ಏಕಮನಸ್ಕನಾಗಿ ಕೇಳಿ ಬಾಯಿಮುಚ್ಚು ಅಥವಾ ಅದಕ್ಕೆ ಉತ್ತರವಾಗಿಯಾದರೂ ಮಾತನಾಡು!

ಮದ್ರದೇಶದವರು ಯಾವಾಗಲೂ

ಮಿತ್ರದ್ರೋಹಿಗಳಾಗಿರುತ್ತಾರೆ. ನಿಷ್ಕಾರಣವಾಗಿ ನಮ್ಮನ್ನು ಯಾರಾದರೂ ದ್ವೇಷಿಸಿದರೆ ಅವರು ಹೆಚ್ಚುಭಾಗ ಮದ್ರಕರೇ ಆಗಿರುತ್ತಾರೆ! ಕ್ಷುದ್ರವಾಗಿ ಮಾತನಾಡುವ ನರಾಧಮ ಮದ್ರಕರಲ್ಲಿ ಸೌಹಾರ್ದಭಾವನೆಯು ಇರುವುದೇ ಇಲ್ಲ! ಮದ್ರಕರು ನಿತ್ಯವೂ ದುರಾತ್ಮರು ಮತ್ತು ಸರ್ವದಾ ಕುಟಿಲರೂ ಸುಳ್ಳುಗಾರರೂ ಆಗಿರುತ್ತಾರೆ. ದುರಾತ್ಮತೆಯು ಮದ್ರಕರನ್ನು ಸಾಯುವವರೆಗೂ ಬಿಡುವುದಿಲ್ಲವೆಂದು ನಾವು ಕೇಳಿದ್ದೇವೆ! ಹಿಟ್ಟು-ಮೀನುಗಳನ್ನು ತಿನ್ನುವ, ಶಿಷ್ಟಾಚಾರಹೀನ ಮದ್ರಕರ ಮನೆಗಳಲ್ಲಿ ತಂದೆ-ಮಗ-ತಾಯಿ-ಅತ್ತೆ-ಮಾವ-ಸೋದರಮಾವ-ಅಳಿಯ-ಮಗಳು-ಅಣ್ಣತಮ್ಮಂದಿರು-ಮೊಮ್ಮಗ-ಇತರ ಬಾಂಧವರು-ಸ್ನೇಹಿತರು-ಹೊರಗಿನಿಂದ ಬಂದವರು- ದಾಸದಾಸಿಯರು ಇವರೆಲ್ಲರೂ ತಮಗಿಷ್ಟಬಂದಂತೆ ಯಾವುದೇ ಕಟ್ಟುಪಾಡುಗಳೂ ಇಲ್ಲದೇ ಪರಸ್ಪರರೊಡನೆ ವ್ಯವಹರಿಸುತ್ತಾರೆ. ಪರಿಚಿತರು, ಅಪರಿಚಿತರು ಎಂಬ ಬೇಧಗಳಿಲ್ಲದೇ ಸ್ತ್ರೀಯರು ಪುರುಷರೊಂದಿಗೆ ಸ್ವ ಇಚ್ಛೆಯಿಂದ ಬೆರೆಯುತ್ತಾರೆ; ಮದ್ಯಸೇವಿಸಿ ಗೋಮಾಂಸ ತಿಂದು ಕುಣಿಯುತ್ತಾರೆ ಮತ್ತು ಆನಂದಿಸುತ್ತಾರೆ. ಅನ್ಯೋನ್ಯ ಕಾಮಪ್ರಲಾಪಿಗಳಾದ ಅವರಲ್ಲಿ

ಧರ್ಮವು ಹೇಗಿರಬೇಕು? ಮದಿಸಿದ ಮದ್ರಕರು ಅಶುಭಕರ್ಮಗಳಿಗೆ ಪ್ರಖ್ಯಾತರು. ಮದ್ರಕರಲ್ಲಿ ವೈರವನ್ನೂ ಕಟ್ಟಿಕೊಳ್ಳಬಾರದು ಸೌಹಾರ್ದತೆಯನ್ನೂ ಬೆಳೆಸಬಾರದು! ಮದ್ರಕರು ಚಪಲರು. ಮದ್ರಕರೊಂದಿಗೆ ಸಂಬಂಧವನ್ನಿಟ್ಟುಕೊಳ್ಳಬಾರದು. ಮದ್ರಕರಲ್ಲಿ ಮತ್ತು ಗಾಂಧಾರದೇಶದವರಲ್ಲಿ ಶೌಚವೆನ್ನುವುದು ಏನೂ ಇಲ್ಲ. ಅವರನ್ನು ಸ್ಪರ್ಶಿಸಲೂ ಬಾರದು! ರಾಜನೇ ಯಾಜಕನಾಗಿರುವ ಯಾಗದಲ್ಲಿ ನೀಡುವ ದಾನ-ಹವಿಸ್ಸುಗಳು ನಷ್ಟವಾಗುವಂತೆ, ಶೂದ್ರರಿಗೆ ಸಂಸ್ಕಾರಗಳನ್ನು ಮಾಡಿಸುವ ವಿಪ್ರನು ಹೇಗೆ ಪರಾಭವಗೊಳ್ಳುವನೋ ಹಾಗೆ ನಿತ್ಯವೂ ಬ್ರಹ್ಮದ್ವೇಷಿ ಮದ್ರಕರು ಪರಾಭವಹೊಂದುವರು. ಅಥರ್ವ ಮಂತ್ರದಿಂದ ಶಾಂತಿಮಾಡುವವರೆಲ್ಲರೂ "ಮದ್ರಕರಲ್ಲಿ ಸೌಹಾರ್ದಭಾವವು ಸ್ವಲ್ಪವೂ ಇಲ್ಲದಿರುವಂತೆ ಚೇಳಿನಲ್ಲಿಯೂ ವಿಷವಿಲ್ಲ!" ಎಂದು ಚೇಳಿನ ವಿಷವನ್ನು ಹೋಗಲಾಡಿಸುತ್ತಾ ಹೇಳುತ್ತಾರೆ. ತಿಳಿದ ವೈದ್ಯರು ಈ ರೀತಿಯಲ್ಲಿ ಮಾಡಲು ಸತ್ಯವಾಗಿಯೂ ಚೇಳುವಿನ ವಿಷವು ಕಡಿಮೆಯಾಗುವುದು ಸತ್ಯವಾಗಿ ಕಾಣುತ್ತದೆ. ಇವಲ್ಲದೇ ಮದ್ರಕರ ಕುರಿತು ಇನ್ನೂ ಇತರ ವಿಷಯಗಳಿವೆ.

ಸಾವಧಾನಚಿತ್ತನಾಗಿ ಕೇಳು.

ಮದ್ಯಮೋಹಿತ ಮದ್ರಕ ಸ್ತ್ರೀಯರು ವಸ್ತ್ರಗಳನ್ನೂ ಕಳಚಿ ನರ್ತಿಸುತ್ತಾರೆ. ಸಂಭೋಗದಲ್ಲಿ ಕೂಡ ಅವರು ಯಾವುದೇ ಸಂಯಮಗಳಿಲ್ಲದೇ ಬೇಕಾದಂತೆ ವರ್ತಿಸುತ್ತಾರೆ. ಅಂಥಹ ಸ್ತ್ರೀಯರಲ್ಲಿ ಹುಟ್ಟಿದ ಮದ್ರಕ ಪುತ್ರನು ಹೇಗೆ ತಾನೇ ಇತರರಿಗೆ ಧರ್ಮದ ಕುರಿತು ಹೇಳಲು ಅರ್ಹನಾಗುತ್ತಾನೆ? ಮರುಭೂಮಿಯಲ್ಲಿರುವ ಒಂಟೆಗಳಂತೆ ನಿಂತುಕೊಂಡೇ ಮೂತ್ರವಿಸರ್ಜನೆ ಮಾಡುವ ಧರ್ಮಭ್ರಷ್ಟ ನಿರ್ಲಜ್ಜ ಮದ್ರರ ಸ್ತ್ರೀಯಲ್ಲಿ ಹುಟ್ಟಿದ ನೀನು ನನಗೆ ಧರ್ಮೋಪದೇಶಮಾಡಲು ಹೊರಟಿರುವೆ! ಮದ್ರದೇಶದ ಸ್ತ್ರೀಯರಲ್ಲಿ ಯಾರಾದರೂ ಗಂಜಿಯನ್ನು ಕೇಳಿದರೆ ಕೊಡಲು ಇಷ್ಟವಿಲ್ಲದಿದ್ದರೆ ತಮ್ಮ ನಿತಂಬಗಳನ್ನು ಕೆರೆದುಕೊಳ್ಳುತ್ತಾ “ನನ್ನನ್ನು ಯಾವನೂ ಗಂಜಿಯನ್ನು ಕೇಳಬಾರದು ಏಕೆಂದರೆ ಅದು ನನಗೆ ಅತ್ಯಂತ ಪ್ರಿಯವಾದುದು! ಬೇಕಾದರೆ ಮಗನನ್ನಾದರೂ ಪತಿಯನ್ನಾದರೂ ಕೊಟ್ಟುಬಿಡುತ್ತೇನೆ. ಆದರೆ ಎಲ್ಲಕ್ಕಿಂತಲೂ ಪ್ರಿಯವಾದ ಗಂಜಿಯನ್ನು ಮಾತ್ರ ಕೊಡುವುದಿಲ್ಲ!” ಎಂದು ಕಠೋರವಾಗಿ ಮಾತನಾಡುವಳು. ಮದ್ರಕ ಸ್ತ್ರೀಯರು

ಬಿಳುಪಾಗಿರುತ್ತಾರೆ, ಸ್ಥೂಲವಾಗಿರುತ್ತಾರೆ, ನಿರ್ಲಜ್ಜರಾಗಿರುತ್ತಾರೆ ಮತ್ತು ಕಂಬಳಿಗಳನ್ನು ಹೊದ್ದಿರುತ್ತಾರೆ. ಆ ಹೊಟ್ಟೆಬಾಕರು ಶೌಚಾಚಾರಗಳನ್ನು ಬಿಟ್ಟಿರುತ್ತಾರೆ ಎಂದು ಕೇಳಿದ್ದೇವೆ! ಕೂದಲಿನಿಂದ ಉಗುರಿನವರೆಗೂ ಮದ್ರದೇಶದ ಸ್ತ್ರೀ-ಪುರುಷರ ಕುರಿತು ನಾವು ಅಥವಾ ಇತರರು ಇನ್ನೂ ಅನೇಕ ವಿಷಯಗಳನ್ನು ಹೇಳಬಹುದು! ಮದ್ರ-ಸಿಂಧು ಮತ್ತು ಸೌವೀರದೇಶಗಳಲ್ಲಿ ಜನರು ಧರ್ಮವೆಂದರೆ ಏನೆನ್ನುವುದನ್ನೇ ತಿಳಿಯರು! ಪಾಪಾದೇಶಗಳಲ್ಲಿ ಹುಟ್ಟಿದ ಆ ಮ್ಲೇಚ್ಛರಿಗೆ ಧರ್ಮವೆಂದರೆ ಏನೆನ್ನುವುದನ್ನೇ ತಿಳಿಯದು!

ಯುದ್ಧದಲ್ಲಿ ಮಡಿದು ಸತ್ಪುರುಷರಿಂದ ಸುಪೂಜಿತನಾಗಿ ರಣದಲ್ಲಿ ಮಲಗುವುದೇ ಕ್ಷತ್ರಿಯನ ಮುಖ್ಯಧರ್ಮವೆಂದು ನಾವು ತಿಳಿದುಕೊಂಡಿದ್ದೇವೆ. ಆಯುಧಗಳನ್ನು ಪಡೆದು ಪ್ರಯೋಗಿಸುವ ನನಗೆ ಪ್ರಥಮ ಸಂಕಲ್ಪವು ಯುದ್ಧದಲ್ಲಿ ನಿಧನ ಮತ್ತು ಸ್ವರ್ಗ! ದುರ್ಯೋಧನನ ಪ್ರಿಯ ಸಖನಾಗಿದ್ದೇನೆ. ಅವನಿಗಾಗಿಯೇ ನನ್ನ ಈ ಪ್ರಾಣ ಮತ್ತು ಸಂಪತ್ತು ಎನ್ನುವುದನ್ನು ತಿಳಿ! ಪಾಪದೇಶದಲ್ಲಿ ಹುಟ್ಟಿದವನೇ! ನಮ್ಮಲ್ಲಿ ಅಮಿತ್ರತ್ವವನ್ನು ಉಂಟುಮಾಡಲು ಪಾಂಡವರೇ ನಿನ್ನನ್ನು

ನಮ್ಮ ಪಕ್ಷದಲ್ಲಿ ಇರಿಸಿರುವರೆಂದು ವ್ಯಕ್ತವಾಗುತ್ತಿದೆ. ಶತ್ರುವಿನಂತೆಯೇ ನೀನು ವರ್ತಿಸುತ್ತಿರುವೆ! ನಾಸ್ತಿಕರಿಂದ ಧರ್ಮಜ್ಞನನ್ನು ಧರ್ಮದಿಂದ ವಿಮುಖನನ್ನಾಗಿ ಮಾಡಲು ಅಸಾಧ್ಯವು ಹೇಗೋ ಹಾಗೆ ನಿನ್ನಂಥಹ ನೂರು ಜನರು ಎಷ್ಟೇ ಬಯಸಿದರೂ ನನ್ನನ್ನು ಸಂಗ್ರಾಮದಿಂದ ವಿಮುಖನನ್ನಾಗಿ ಮಾಡಲು ಸಾಧ್ಯವಿಲ್ಲ! ಬಿಸಿಲಿನ ತಾಪದಿಂದ ಬಳಲಿದ ಜಿಂಕೆಯಂತೆ ನೀನು ಬೇಕಾದಷ್ಟು ವಿಲಪಿಸು. ಕ್ಷತ್ರಿಯ ಧರ್ಮದಲ್ಲಿ ನಿರತನಾಗಿರುವ ನನ್ನನ್ನು ಮಾತ್ರ ನೀನು ಭಯಪಡಿಸಲಾರೆ! ಯುದ್ಧದಿಂದ ಹಿಂದಿರುಗದೇ ದೇಹತ್ಯಾಗಮಾಡುವ ನರಸಿಂಹರಿಗೆ ಯಾವ ಸದ್ಗತಿಯು ದೊರೆಯುತ್ತದೆ ಎನ್ನುವುದನ್ನು ನನ್ನ ಗುರು ಪರಶುರಾಮನು ಹೇಳಿದುದು ನೆನಪಿಗೆ ಬರುತ್ತಿದೆ! ಪುರೂರವನ ಉತ್ತಮ ನಡತೆಯಂತೆ ನನ್ನವರನ್ನು ಉದ್ಧರಿಸಲೂ ಶತ್ರುಗಳನ್ನು ವಧಿಸಲೂ ನಾನು ಸನ್ನದ್ಧನಾಗಿ ನಿಂತಿದ್ದೇನೆ ಎನ್ನುವುದನ್ನು ತಿಳಿದುಕೋ! ನನ್ನ ಈ ಅಭಿಪ್ರಾಯದಿಂದ ಚ್ಯುತಗೊಳಿಸುವ ಯಾವುದೇ ಪ್ರಾಣಿಯನ್ನು ಈ ಮೂರು ಲೋಕಗಳಲ್ಲಿಯೂ ನಾನು ಕಂಡಿಲ್ಲ! ಇದನ್ನು ತಿಳಿದವನಾದರೂ ನೀನು ಏಕೆ ಅಧಿಕವಾಗಿ ಮಾತನಾಡುತ್ತೀಯೆ? ಸುಮ್ಮನೇ ಕುಳಿತುಕೋ!

ಇನ್ನೂ ನೀನು ಮಾತನಾಡುವುದನ್ನು ಮುಂದುವರೆಸಿದರೆ ನಿನ್ನನ್ನು ಕೊಂದು ಮಾಂಸಾಶೀ ಪ್ರಾಣಿಗಳಿಗೆ ಕೊಡುತ್ತೇನೆ. ಎಚ್ಚರದಿಂದಿರು! ಧಾರ್ತರಾಷ್ಟ್ರನ ಗೆಲುವಿನ ಮೇಲೆ ನನ್ನ ಮನಸ್ಸನ್ನು ಕೇಂದ್ರೀಕರಿಸಿರುವುದರಿಂದ ಮತ್ತು ಕೊಟ್ಟ ಮಾತಿನಂತೆ ನಡೆದುಕೊಳ್ಳಲಿಲ್ಲವೆಂಬ ಅಪಮಾನವು ಬರಬಾರದು ಎಂಬ ಭಯದಿಂದ ನಾನು ನಿನ್ನನ್ನು ಕೊಲ್ಲದೇ ಇನ್ನೂ ಜೀವದಿಂದಿರಿಸಿದ್ದೇನೆ! ಪುನಃ ಈ ರೀತಿಯ ಮಾತುಗಳನ್ನು ನೀನು ಆಡಿದರೆ ವಜ್ರಸಮಾನ ಗದೆಯಿಂದ ನಿನ್ನ ಶಿರಸ್ಸನ್ನು ಬೀಳಿಸುತ್ತೇನೆ! ಕೆಟ್ಟದೇಶದಲ್ಲಿ ಹುಟ್ಟಿದವನೇ! ಕರ್ಣನು ಸಾಯುತ್ತಾನೆ ಅಥವಾ ಕರ್ಣನು ಕೃಷ್ಣಾರ್ಜುನರನ್ನು ಸಂಹರಿಸುತ್ತಾನೆ ಎನ್ನುವುದನ್ನು ಇಂದು ಜನರು ಕೇಳುತ್ತಾರೆ ಮತ್ತು ನೋಡುತ್ತಾರೆ!”

ಹೀಗೆ ಹೇಳಿ ರಾಧೇಯನು ಆತಂಕಗೊಳ್ಳದೇ ಮದ್ರರಾಜನಿಗೆ ಪುನಃ “ಮುಂದೆ ಹೋಗು! ಬೇಗ ಹೋಗು!” ಎಂದು ಹೇಳಿದನು.

ಯುದ್ಧಾಭಿನಂದಿನ ಆಧಿರಥ ಕರ್ಣನ ಮಾತನ್ನು ಕೇಳಿ ಶಲ್ಯನು ಪುನಃ ಕರ್ಣನಿಗೆ ನಿದರ್ಶನಗಳನ್ನು ಉದಾಹರಿಸುತ್ತಾ ಹೇಳಿದನು:

“ಮದ್ಯದ ಮತ್ತಿನಲ್ಲಿರುವಂತೆ ತೋರುತ್ತಿದ್ದೀಯೆ.

ಸ್ನೇಹಭಾವದಿಂದ ನಿನ್ನ ಆ ಪ್ರಮಾದವನ್ನು ಕೊನೆಗೊಳಿಸುವಂತೆ ನಿನಗೆ ಚಿಕಿತ್ಸೆಯನ್ನು ಮಾಡುತ್ತೇನೆ. ನೀಚ! ಕರ್ಣ! ನಾನು ಈಗ ಹೇಳಲಿರುವ ಕಾಗೆಯ ದೃಷ್ಟಾಂತವನ್ನು ಚೆನ್ನಾಗಿ ಕೇಳು. ಇದನ್ನು ಕೇಳಿದನಂತರ ನಿನಗಿಷ್ಟಬಂದಂತೆ ಮಾಡು! ನಾನು ನಿನಗೆ ಯಾವುದೇ ರೀತಿಯ ಅಪರಾಧವನ್ನೆಸಗಿದುದೂ ನೆನಪಿಲ್ಲ. ನೀನು ಏಕೆ ಅನಪರಾಧಿಯಾಗಿರುವ ನನ್ನನ್ನು ಕೊಲ್ಲಲು ಬಯಸುತ್ತಿರುವೆ? ರಥದಲ್ಲಿ ಸಾರಥಿಯಾಗಿ ಕುಳಿತಿರುವ ಹಿತೈಷಿಣಿ ರಾಜನಾದ ನಾನು ನಿನಗೆ ಹಿತವಾಗುವಂತೆ ತಿಳಿದುದ್ದನ್ನು ಹೇಳಬೇಕಾದುದು ಅವಶ್ಯಕವಾಗಿದೆ. ಸಮ-ವಿಷಮ ಪ್ರದೇಶಗಳು, ರಥಿಗಳ ಬಲಾಬಲಗಳು, ಸತತವೂ ರಥಿಗಳ ಮತ್ತು ಕುದುರೆಗಳ ಶ್ರಮ-ಖೇದಗಳು, ಆಯುಧದ ಪರಿಜ್ಞಾನ, ಮೃಗಪಕ್ಷಿಗಳ ಸೂಚನೆಗಳ ಅರಿವು, ಭಾರ-ಅತಿಭಾರಗಳು, ಬಾಣಗಳಿಂದುಂಟಾದ ಗಾಯಗಳ ಚಿಕಿತ್ಸೆ, ಅಸ್ತ್ರಪ್ರಯೋಗ, ಯುದ್ಧ ನಿಮಿತ್ತಗಳು ಈ ಎಲ್ಲವನ್ನೂ ಚೆನ್ನಾಗಿ ತಿಳಿದುಕೊಂಡಿರುವ ನಾನು ರಥಕುಟುಂಬಕ್ಕೇ ಸೇರಿದವನು. ಪುನಃ ನಿನಗೆ ನಿದರ್ಶನರೂಪಕವಾಗಿರುವ ಈ ಕಥೆಯನ್ನು ಹೇಳುತ್ತೇನೆ.”

## ಹಂಸ-ಕಾಕೀಯ ವೃತ್ತಾಂತ

ಶಲ್ಯನು ತನ್ನ ಮಾತನ್ನು ಮುಂದುವರಿಸಿ ಹೇಳಿದನು:

“ಸಮುದ್ರತೀರದ ಧರ್ಮಪ್ರಧಾನ ರಾಜನ ರಾಷ್ಟ್ರದಲ್ಲಿ ಧನಧಾನ್ಯವಂತನಾದ, ಯಜ್ಞಗಳನ್ನಾಚರಿಸುವ ದಾನಪತಿ ಶುಚಿಯು ಸ್ವಕರ್ಮಗಳಲ್ಲಿ ನಿರತನಾಗಿದ್ದನು. ಅನೇಕ ಪುತ್ರರನ್ನು ಮತ್ತು ಪ್ರಿಯ ಪತ್ನಿಯನ್ನು ಹೊಂದಿದ್ದ ಆ ಸರ್ವಭೂತಾನುಕಂಪನನು ನಿರ್ಭಯನಾಗಿ ವಾಸಿಸುತ್ತಿದ್ದನು. ಅವನ ಯಶಸ್ವೀ ಬಾಲಕ ಕುಮಾರ ಪುತ್ರರು ತಿಂದು ಮಿಕ್ಕ ಅನ್ನವನ್ನೇ ಸೇವಿಸುತ್ತಾ ಜೀವಿಸುತ್ತಿದ್ದ ಕಾಗೆಯೊಂದು ಅಲ್ಲಿತ್ತು. ಅದಕ್ಕೆ ಸದಾ ವೈಶ್ಯಪುತ್ರ ಕುಮಾರಕರು ಮಾಂಸ, ಅನ್ನ, ಮೊಸರು, ಹಾಲು, ಪಾಯಸ, ಜೇನುತುಪ್ಪ, ತುಪ್ಪ ಇವುಗಳನ್ನು ಕೊಡುತ್ತಿದ್ದರು. ವೈಶ್ಯಪುತ್ರ ಕುಮಾರಕರ ಉಚ್ಛಿಷ್ಟವನ್ನು ತಿಂದು ಕೊಬ್ಬಿಹೋಗಿದ್ದ ಆ ಕಾಗೆಯು ತನಗೆ ಸಮಾನ ಮತ್ತು ತನಗಿಂತಲೂ ಶ್ರೇಷ್ಠ ಪಕ್ಷಿಗಳನ್ನು ತಿರಸ್ಕಾರದಿಂದ ಕಾಣುತ್ತಿತ್ತು. ಒಮ್ಮೆ ಆ ಸಮುದ್ರತೀರಕ್ಕೆ ಗರುಡನಂತೆಯೇ ಹಾರುತ್ತಿದ್ದ ಪ್ರಹೃಷ್ಟ ಹಂಸಗಳು ಹಾರಿ ಬಂದವು. ಆ ಹಂಸಗಳನ್ನು ನೋಡಿದ ಕುಮಾರರು ಕಾಗೆಗೆ “ವಿಹಂಗಮ! ಪಕ್ಷಿಗಳಲ್ಲೆಲ್ಲಾ



ನೀನೇ ವಿಶಿಷ್ಟನಾಗಿದ್ದೀಯೆ!” ಎಂದು ಹೇಳಿದರು. ಅಲ್ಪಬುದ್ಧಿಯ ಕುಮಾರ ಈ ರೀತಿಯ ಸುಳ್ಳಿನಿಂದ ವಂಚಿಸಲ್ಪಟ್ಟ ಕಾಗೆಯು ತನ್ನದೇ ಮೂರ್ಖತನ ಮತ್ತು ದರ್ಪದಿಂದ ಅವರ ಮಾತು ಸತ್ಯವೆಂದೇ ಭಾವಿಸಿಬಿಟ್ಟಿತು. ಅವರಲ್ಲಿ ಶ್ರೇಷ್ಠನು ಯಾರೆಂದು ತಿಳಿಯಲೋಸುಗ ಉಚ್ಚಿಷ್ಟದರ್ಪಿತ ಕಾಗೆಯು ಬಹುದೂರ ಹಾರಬಲ್ಲ ಆ ಪಕ್ಷಿಗಳಿದ್ದಲ್ಲಿಗೆ ಬಂದಿತು. ಅವುಗಳಲ್ಲಿ ಯಾವುದನ್ನು ಶ್ರೇಷ್ಠವೆಂದು ಆರಿಸಿಕೊಂಡಿತೋ ಅದರ ಬಳಿಹೋಗಿ ದುರ್ಬುದ್ಧಿ ಕಾಗೆಯು “ನಾವಿಬ್ಬರೂ ಹಾರೋಣ!” ಎಂದು ಹಾರುವ ಸ್ಪರ್ಧೆಗೆ ಕರೆಯಿತು.

ಬಹಳವಾಗಿ ಮಾತನಾಡುತ್ತಿದ್ದ ಆ ಕಾಗೆಯ ಮಾತನ್ನು ಕೇಳಿ ಅಲ್ಲಿ ಸೇರಿದ್ದ ಬಲಶಾಲಿ ಪಕ್ಷಿಶ್ರೇಷ್ಠ ಹಂಸಗಳೆಲ್ಲವೂ ನಕ್ಕವು. ಆ ಚಕ್ರಾಂಗ ಪಕ್ಷಿಗಳು ಕಾಗೆಗೆ ಈ ರೀತಿ ಹೇಳಿದವು: “ನಾವು ಮಾನಸಸರೋವರದಲ್ಲಿ ವಾಸಿಸುವವ ಹಂಸಗಳು. ಪೃಥ್ವಿಯಲ್ಲಿ ಸಂಚರಿಸುತ್ತಿರುತ್ತೇವೆ. ಬಹಳ ದೂರದವರೆಗೆ ಹಾರಿಹೋಗಬಲ್ಲ ಸಾಮರ್ಥ್ಯವಿರುವುದರಿಂದಲೇ ನಿತ್ಯವೂ ನಮ್ಮನ್ನು ಪಕ್ಷಿಗಳಲ್ಲಿಯೇ ಶ್ರೇಷ್ಠರೆಂಬ ಮಾನ್ಯತೆಯಿದೆ.

ದುರ್ಮತಿ ಕಾಗೆಯೇ! ಬಲಿಷ್ಟ ವಜ್ರಾಂಗ ಮತ್ತು ದೂರಹಾರಬಲ್ಲ ಹಂಸದೊಂದಿಗೆ ನೀನು ಹೇಗೆ ಸ್ಪರ್ಧಿಸುವೆ? ಕಾಗೆಯಾಗಿದ್ದುಕೊಂಡು ನಮ್ಮೊಡನೆ ಹಾರುವುದಕ್ಕೆ ಹೇಗೆ ಕರೆಯುತ್ತಿರುವೆ? ನಮ್ಮೊಡನೆ ನೀನು ಹೇಗೆ ಹಾರುವೆಯೆನ್ನುವುದನ್ನಾದರೂ ಮೊದಲು ಹೇಳು."

ಹಂಸಗಳ ಆ ಮಾತನ್ನು ಪುನಃ ಪುನಃ ನಿಂದನೆಮಾಡುತ್ತಾ ಮೂಢ ಕಾಗೆಯು ತನ್ನ ಜಾತಿಗತ ಲಘುತ್ವದಿಂದ ತನ್ನ ಬಲದ ವಿಷಯದಲ್ಲಿ ಕೊಚ್ಚಿಕೊಳ್ಳುತ್ತಾ ಹೀಗೆ ಉತ್ತರಿಸಿತು: "ನೂರೊಂದು ಪಾತಗಳಲ್ಲಿ ಹಾರಬಲ್ಲೆ ಎನ್ನುವುದರಲ್ಲಿ ಸಂಶಯವಿಲ್ಲ! ಒಂದೊಂದು ನೂರು ಯೋಜನವನ್ನೂ ವಿವಿಧ ವಿಚಿತ್ರ ಗತಿಯಲ್ಲಿ ಹಾರಬಲ್ಲೆ! ಉಡ್ಡೀನ (ಮೇಲಕ್ಕೆ ಹಾರುವುದು), ಅವಡೀನ (ಕೆಳಕ್ಕೆ ಹಾರುವುದು), ಪ್ರಡೀನ (ನಾಲ್ಕು ದಿಕ್ಕುಗಳಿಗೂ ಹಾರುವುದು), ಡೀನ (ಸಾಧಾರಣವಾಗಿ ಹಾರುವುದು), ನಿಡೀನ (ನಿಧಾನವಾಗಿ ಹಾರುವುದು), ಸಂಡೀನ (ಲಲಿತಗತಿಯಿಂದ ಹಾರುವುದು), ತಿರ್ಯಗ್ಡೀನ (ಅಡ್ಡವಾಗಿ ಹಾರುವುದು), ವಿಡೀನ (ಮತ್ತೊಂದು ಪಕ್ಷಿಯು ಹಾರುತ್ತಿರುವಂತೆಯೇ ಹಾರುವುದು),

ಪರಿಡೀನ (ಹತ್ತು ದಿಕ್ಕುಗಳಲ್ಲಿಯೂ ಹಾರುವುದು), ಪರಾಡೀನ (ಹಿಂದಕ್ಕೆ ಹಾರುವುದು), ಸುಡೀನ (ಸ್ವರ್ಗದ ಕಡೆ ಹಾರುವುದು), ಅತಿಡೀನ (ಪ್ರಚಂಡವಾಗಿ ಹಾರುವುದು), ಮಹಾಡೀನ (ಬಹಳ ವೇಗವಾಗಿ ಹಾರುವುದು), ನಿಡೀನ (ರೆಕ್ಕೆಗಳನ್ನು ಅಲ್ಲಾಡಿಸದೆಯೇ ಹಾರುವುದು), ಪರಿಡೀನ, ಗತ (ಯಾವುದೋ ಲಕ್ಷ್ಯವನ್ನು ಗುರಿಯಿಟ್ಟು ಹಾರುವುದು), ಆಗತ (ಲಕ್ಷ್ಯವನ್ನು ತಲುಪಿ ಪುನಃ ಹೊರಟಿದ್ದ ಸ್ಥಳಕ್ಕೇ ಹಿಂದಿರುಗುವುದು), ಪ್ರತಿಗತ (ಹೊರಳಿಕೊಂಡು ಬರುವುದು), ಬಹ್ವಿ ಮತ್ತು ನಿಕೂಡೀನಿಕ ಇವೆಲ್ಲವುಗಳನ್ನೂ ನೀವು ನೋಡುತ್ತಿದ್ದಂತೆಯೇ ಮಾಡಬಲ್ಲೆ! ಇಂದು ನನ್ನ ಬಲವನ್ನು ನೋಡಿವಿರಂತೆ!”

ಕಾಗೆಯು ಹೀಗೆ ಹೇಳಲು, ಅವುಗಳಲ್ಲಿಯ ಒಂದು ಹಂಸವು ನಗುತ್ತಾ ಹೇಳಿತು: “ಕಾಗೆಯೇ! ನೀನು ನೂರಾಒಂದು ಪತನಕ್ರಮಗಳನ್ನೂ ಬಲ್ಲೆ ಎನ್ನುವುದು ನಿಶ್ಚಯವಾದುದು. ಏಕೆಂದರೆ ಎಲ್ಲ ಪಕ್ಷಿಗಳೂ ಒಂದೇ ಪತನಕ್ರಮವನ್ನು ಅನುಸರಿಸುತ್ತವೆ. ಅದೇ ಪತನಕ್ರಮವನ್ನು ನಾನು ಕೂಡ ಅನುಸರಿಸುತ್ತೇನೆ. ಬೇರೆ ಯಾವುದೂ ನನಗೆ ತಿಳಿದಿಲ್ಲ. ನಿನಗೆ

ಇಷ್ಟವಾಗಿರುವ ಯಾವುದಾದರೂ ಪತನಕ್ರಮವನ್ನುಸರಿಸಿ ಹಾರು !" "ಒಂದೇ ಪಾತದಿಂದ ಈ ಹಂಸವು ನೂರುಪಾತನ ಕ್ರಮಗಳನ್ನು ತಿಳಿದಿರುವ ಕಾಗೆಯನ್ನು ಜಯಿಸೀತು !" ಎಂದು ಅಲ್ಲಿ ಸೇರಿದ್ದ ಇತರ ಕಾಗೆಗಳೂ ಅಪಹಾಸ್ಯಮಾಡಿದವು. "ಶೀಘ್ರವಾಗಿ ಹಾರಬಲ್ಲ ಈ ಬಲಿಷ್ಠ ಕಾಗೆಯು ನೂರರಲ್ಲಿ ಒಂದೇ ಪತನಕ್ರಮದಿಂದ ಹಂಸವನ್ನು ಉರುಳಿಸಿಬಿಡುತ್ತದೆ !" ಅನಂತರ ಆ ಹಂಸ-ವಾಯಸಗಳು ಸ್ಪರ್ಧೆಗೆ ಇಳಿದರು: ಚಕ್ರಾಂಗವು ಒಂದೇ ಪತನಕ್ರಮವನ್ನು ಬಳಸಿತು ಮತ್ತು ಕಾಗೆಯು ನೂರು ಪತನಕ್ರಮವನ್ನು ಬಳಸಿತು. ಚಕ್ರಾಂಗ ಹಂಸವು ಹಾರಿತು. ಆಗ ಕಾಗೆಯೂ ಕೂಡ ನೋಡುವವರನ್ನು ವಿಸ್ಮಯಗೊಳಿಸಲು ತನಗೆ ತಿಳಿದಿದ್ದ ಎಲ್ಲ ಪತನ ಕ್ರಮಗಳನ್ನು ತೋರಿಸುತ್ತಾ ಹಾರಿತು. ಕಾಗೆಯ ವಿಚಿತ್ರ ಪತನಕ್ರಮಗಳನ್ನು ನೋಡಿ ಮುದಿತರಾದ ಕಾಗೆಗಳು ಜೋರು ಸ್ವರಮಾಡಿ ಅದನ್ನು ಪ್ರೋತ್ಸಾಹಿಸುತ್ತಿದ್ದವು. ಅಪ್ರಿಯವಾಗಿ ಮಾತನಾಡಿ ಹಂಸವನ್ನು ಅಪಹಾಸ್ಯಮಾಡುತ್ತಿದ್ದವು. ಅಲ್ಲಿಂದಿಲ್ಲಿಗೆ ಹಾರುತ್ತಾ ಹಂಸವು ನಿಧಾನವಾಯಿತೆಂದು ಹೇಳುತ್ತಿದ್ದವು. ಮರಗಳಿಂದ ಕೆಳಕ್ಕೆ ಮತ್ತು ನೆಲದಿಂದ ಮೇಲಕ್ಕೆ ಹಾರುತ್ತಿದ್ದವು ಮತ್ತು ವಿವಿಧವಾಗಿ ಕೂಗುತ್ತಾ ಕಾಗೆಗೆ

ಜಯಕಾರಹಾಕುತ್ತಿದ್ದವು. ಹಂಸವಾದರೋ ಮೃದುಗತಿಯೊಂದರಲ್ಲಿಯೇ ಹಾರಲು ತೊಡಗಿತು.

ಕ್ಷಣಕಾಲ ಕಾಗೆಯೇ ಮುಂದೆಯಿದ್ದಂತೆ ತೋರಿತು! ಹಂಸದ ಹಾರುವಿಕೆಯನ್ನು ಅಪಹಾಸ್ಯಮಾಡುತ್ತ "ಸ್ಪರ್ಧಿಸಲು ಹಾರಿಹೋದ ನಿಮ್ಮ ಈ ಹಂಸವು ಹಿಂದೆಯೇ ಉಳಿದುಕೊಂಡಿದೆ!" ಎಂದು ಕೂಗಿ ಹಂಸಗಳಿಗೆ ಕಾಗೆಗಳು ಹೇಳಿದವು. ಅದನ್ನು ಕೇಳಿದ ಹಂಸವು ವೇಗದಿಂದ ಪಶ್ಚಿಮ ದಿಕ್ಕಿನಲ್ಲಿ ಮೇಲೆ ಮೇಲೆ ಹಾರಿ ವರುಣಾಲಯ ಸಾಗರವನ್ನು ತಲುಪಿ ಅದರ ಮೇಲೆ ಹಾರತೊಡಗಿತು. ಆಗ ಕಾಗೆಯನ್ನು ಭಯವು ಪ್ರವೇಶಿಸಿತು. ಶ್ರಮಾನ್ವಿತ ಕಾಗೆಯು ವಿಚೇತಸನಾಗಿ ಇಳಿಯಲು ಆ ಜಲಾರ್ಣವದಲ್ಲಿ ಯಾವ ದ್ವೀಪ-ಮರಗಳನ್ನೂ ಕಾಣದೇ ವಿಶ್ರಾಂತಿಗೆ ಎಲ್ಲಿ ಇಳಿಯಲಿ ಎಂದು ಯೋಚಿಸತೊಡಗಿತು. ಬಹುಸತ್ತ್ವಗಣಾಲಯವಾಗಿರುವ ಈ ಸಮುದ್ರವನ್ನು ದಾಟಲು ಅಸಾಧ್ಯ. ನೂರಾರು ಮಹಾಪ್ರಾಣಿಗಳು ಈ ನೀರಿನಲ್ಲಿವೆ ಮತ್ತು ಇದು ಆಕಾಶಕ್ಕಿಂತಲೂ ದೊಡ್ಡದಾಗಿ ತೋರುತ್ತಿದೆ! ದಿಕ್ಕುಗಳಲ್ಲೆಲ್ಲಾ ನೀರನ್ನೇ ತುಂಬಿಸಿಕೊಂಡಿರುವ ಸಮುದ್ರದ ವಿಶೇಷ

ಗಾಂಭೀರ್ಯವನ್ನು ಸಮುದ್ರದಲ್ಲಿರುವವರಿಗೇ ತಿಳಿದುಕೊಳ್ಳಲು ಅಸಾಧ್ಯ! ಸ್ವಲ್ಪವೇ ದೂರ ಹಾರಿರುವ ಕಾಗೆಗೆ ಹೇಗೆ ತಾನೇ ಅದು ತಿಳಿಯಬೇಕು? ಮುಹೂರ್ತಕಾಲದಲ್ಲಿಯೇ ಕಾಗೆಯನ್ನು ದಾಟಿ ಹೋಗಿದ್ದ ಹಂಸವು ಕಾಗೆಯು ಹಿಂದೆ ಬರುತ್ತಿರುವುದನ್ನು ಕಾಣದೇ ಹೋದಾಗ ಹಿಂದಿರುಗಲು ಕಾಗೆಗೆ ಶಕ್ಯವಾಗಲಾರದು ಎಂದು ತಿಳಿದು ಕಾಗೆಯ ನಿರೀಕ್ಷಣೆಯಲ್ಲಿ ಆಕಾಶದಲ್ಲಿಯೇ ಕಾಯತೊಡಗಿತು. ಕಾಗೆಯು ನಿಃಶಕ್ತನಾಗುತ್ತಿರುವುದನ್ನು ಕಂಡ ಹಂಸವು ಸತ್ಪುರುಷರು ನಡೆದುಕೊಳ್ಳಬೇಕಾದ ರೀತಿಯನ್ನು ಸ್ಮರಿಸಿಕೊಂಡು ಮುಳುಗುತ್ತಿದ್ದ ಕಾಗೆಯನ್ನು ಮೇಲೆತ್ತಬೇಕೆಂದು ನಿಶ್ಚಯಿಸಿ ಹೇಳಿತು: "ಪದೇ ಪದೇ ನೀನು ಅನೇಕ ಪತನಕ್ರಮಗಳ ಬಗ್ಗೆ ಮಾತನಾಡುತ್ತಿದ್ದೆ. ಆದರೆ ಈ ರೀತಿಯ ಪತನಕ್ರಮವನ್ನು ಮಾತ್ರ ರಹಸ್ಯವಾಗಿಟ್ಟುಕೊಂಡು ನಮಗೆ ಹೇಳಲೇ ಇಲ್ಲ! ಕಾಗೆಯೇ! ನೀನು ಈಗ ಕಷ್ಟಪಟ್ಟು ಹಾರುತ್ತಾ ರೆಕ್ಕೆಗಳಿಂದ ಮತ್ತು ಪುನಃ ಪುನಃ ಕೊಕ್ಕೆಯಿಂದ ನೀರನ್ನು ಸ್ಪರ್ಶಿಸುತ್ತಿರುವ ನಿನ್ನ ಈ ಪತನ ಕ್ರಮದ ಹೆಸರೇನು?" ಕಾಗೆಯು ರೆಕ್ಕೆಗಳೆರಡರಿಂದ ಮತ್ತು ಕೊಕ್ಕಿನಿಂದ ಸಮುದ್ರದ ನೀರನ್ನು ಮುಟ್ಟುತ್ತಿತ್ತು. ತುಂಬಾ ಬಳಲಿದ್ದ ಕಾಗೆಯು

ಒಮ್ಮೆಲೇ ನೀರಿನೊಳಗೆ ಬಿದ್ದಿತು ಕೂಡ.

ಹಂಸವು ಹೇಳಿತು: "ಕಾಗೆಯೇ! ನೂರಾ ಒಂದು ಪತನಕ್ರಮಗಳನ್ನು ತಿಳಿದಿದ್ದೆಯೆಂದು ಕೊಚ್ಚಿಕೊಳ್ಳುತ್ತಿದ್ದೆ! ಹಿಂದೆ ನಾನಾವಿಧದಲ್ಲಿ ಮಾತನಾಡಿದುದು ಅನೃತವಾಯಿತೇ?"

ಕಾಗೆಯು ಹೇಳಿತು: "ಹಂಸ! ಉಚ್ಛಿಷ್ಟವನ್ನು ತಿಂದು ಕೊಬ್ಬಿದ್ದ ನಾನು ನನ್ನನ್ನು ಗರುಡನೆಂದೇ ತಿಳಿದುಕೊಂಡು ಅನೇಕ ಕಾಗೆಗಳನ್ನು ಮತ್ತು ಇತರ ಪಕ್ಷಿಗಳನ್ನು ಅಪಮಾನಿಸಿದ್ದೇನೆ. ಪ್ರಾಣಗಳೊಂದಿಗೆ ನಿನ್ನಲ್ಲಿಗೆ ಶರಣು ಬಂದಿದ್ದೇನೆ. ನನ್ನನ್ನು ದ್ವೀಪದ ತೀರಕ್ಕೆ ತಲುಪಿಸು! ಒಂದುವೇಳೆ ನಾನು ಕ್ಷೇಮವಾಗಿ ಸ್ವದೇಶಕ್ಕೆ ಪುನಃ ತೆರಳಿದರೆ ನಾನು ಇನ್ನು ಮುಂದೆ ಯಾರನ್ನೂ ಅಪಮಾನಿಸುವುದಿಲ್ಲ! ಈ ಆಪತ್ತಿನಿಂದ ನನ್ನನ್ನು ಉದ್ಧರಿಸು!"

ಹೀಗೆ ಹೇಳಿದ ಮಹಾಸಾಗರದಲ್ಲಿ ಮುಳುಗಿಹೋಗುತ್ತಿದ್ದ ದೀನ, ಶಕ್ತಿಯಿಲ್ಲದೇ ಕಾ ಕಾ ಎಂದು ಕೂಗುತ್ತಾ ಕಾಗೆಯು ನೀರಿನಲ್ಲಿ ನರಳುತ್ತಿರುವುದನ್ನು ಸಹಿಸಿಕೊಳ್ಳಲಾಗದೇ ಹಂಸವು ನಡುಗುತ್ತಿದ್ದ ಕಾಗೆಯನ್ನು ಕಾಲುಗಳಿಂದ ಹಿಡಿದು ಮೇಲೆತ್ತಿ ಮೆಲ್ಲನೆ ತನ್ನ ಬೆನ್ನಮೇಲೆ ಹಾಕಿಕೊಂಡಿತು. ಬಳಲಿ

ಮೂರ್ಛೆಹೋಗಿದ್ದ ಆ ಕಾಗೆಯನ್ನು ಬೆನ್ನಿನಮೇಲಿರಿಸಿಕೊಂಡು ಹಂಸವು ಸ್ಪರ್ಧೆಗಾಗಿ ಎಲ್ಲಿಂದ ಹಾರಿದ್ದರೋ ಆ ದ್ವೀಪಕ್ಕೆ ಪುನಃ ಬಂದಿತು. ಕಾಗೆಯನ್ನು ಅಲ್ಲಿಗೆ ತಂದಿರಿಸಿ ಆರೈಕೆಮಾಡಿ ಪಕ್ಷಿ ಹಂಸವು ಮನೋವೇಗದಲ್ಲಿ ತನಗಿಷ್ಟವಾದ ಪ್ರದೇಶಕ್ಕೆ ಹೊರಟುಹೋಯಿತು.

ವೈಶ್ಯಕುಲದವರ ಉಚ್ಛಿಷ್ಟಭೋಜನವನ್ನುಂಡು ಆ ಕಾಗೆಯಂತೆ ನೀನೂ ಕೂಡ ಧಾರ್ತರಾಷ್ಟ್ರರ ಎಂಜಲೂಟವನ್ನು ಉಂಡು ನಿನಗೆ ಸಮನಾದವರ ಮತ್ತು ಶ್ರೇಷ್ಠರಾದವರೆಲ್ಲರನ್ನೂ ಅಪಮಾನಗೊಳಿಸುತ್ತಿರುವೆ! ಅಂದು ವಿರಾಟನಗರದಲ್ಲಿ ದ್ರೋಣ-ದ್ರೌಣಿ-ಕೃಪ-ಭೀಷ್ಮ ಮತ್ತು ಅನ್ಯ ಕೌರವರಿಂದ ರಕ್ಷಿತನಾಗಿದ್ದಾಗಲೂ, ಒಂಟಿಗನಾಗಿದ್ದ ಪಾರ್ಥನನ್ನು ನೀನು ಏಕೆ ಸಂಹರಿಸಲಿಲ್ಲ? ಅಂದು ಕಿರೀಟಿಯು ಸಿಂಹವು ಗುಳ್ಳೇನರಿಯನ್ನು ಭಯಪಡಿಸುವಂತೆ ಏಕಾಂಗಿಯಾಗಿ ನಿಮ್ಮೆಲ್ಲರನ್ನೂ ಪ್ರತ್ಯೇಕವಾಗಿ ಮತ್ತು ಸಾಮೂಹಿಕವಾಗಿ ಚದುರಿಸಿ ಪರಾಜಯಗೊಳಿಸುವಾಗ ನಿನ್ನ ವೀರ್ಯವು ಎಲ್ಲಿಗೆ ಹೋಗಿತ್ತು? ವಿಜಯಿ ಸವ್ಯಸಾಚಿಯು ನಿನ್ನ ಸಹೋದರನನ್ನು ಸಂಹರಿಸಿದುದನ್ನು ನೋಡಿಯೂ ಕೂಡ ಕುರುವೀರರು

ನೋಡುತ್ತಿದ್ದಂತೆಯೇ ಮೊದಲು ಪಲಾಯನಮಾಡಿದವನು ನೀನೇ ಅಲ್ಲವೇ? ಹಾಗೆಯೇ ದ್ವೈತವನದಲ್ಲಿ ಗಂಧರ್ವರು ಆಕ್ರಮಿಸಿದಾಗ ಎಲ್ಲ ಕುರುಗಳನ್ನೂ ಬಿಟ್ಟು ಮೊದಲು ಪಲಾಯನಮಾಡಿದವನು ನೀನೇ ಅಲ್ಲವೇ? ರಣದಲ್ಲಿ ಚಿತ್ರಸೇನನೇ ಮುಖ್ಯನಾಗಿದ್ದ ಗಂಧರ್ವಸೇನೆಯನ್ನು ಸಂಹರಿಸಿ ಗೆದ್ದು ಪಾರ್ಥನು ಪತ್ನಿಯೊಡನೆ ದುರ್ಯೋಧನನನ್ನು ಬಿಡುಗಡೆಗೊಳಿಸಿದ್ದನು. ಪುರಾಣಪುರುಷರಾದ ಪಾರ್ಥ-ಕೇಶವರ ಪುನಃ ಪ್ರಭಾವವನ್ನು ರಾಜಸಂಸದಿಯ ಸಭೆಯಲ್ಲಿ ಪರಶುರಾಮನೇ ವರ್ಣಿಸಿದ್ದನು. ಮಹೀಕ್ಷಿತರ ಸನ್ನಿಧಿಯಲ್ಲಿ ದ್ರೋಣ-ಭೀಷ್ಮರೂ ಕೂಡ ಕೃಷ್ಣಾರ್ಜುನರು ಅವಧ್ಯರು ಎಂದು ಸತತವೂ ಹೇಳುತ್ತಿದ್ದುದನ್ನು ನೀನೂ ಕೇಳಿರುವೆ. ಏನೇನನ್ನು ಮಾಡುವುದರಲ್ಲಿ ಧನಂಜಯನು ನಿನಗಿಂತಲೂ ಅತಿರಿಕ್ತ ಎನ್ನುವುದನ್ನು ನಾನು ನಿನಗೆ ಹೇಳುತ್ತಿದ್ದೇನೆ.

ಸರ್ವಪ್ರಾಣಿಗಳಲ್ಲಿಯೂ ಬ್ರಾಹ್ಮಣನು ಹೇಗೆ ಶ್ರೇಷ್ಠನೋ ಹಾಗೆ ಅರ್ಜುನನು ನಿನಗಿಂತಲೂ ಅಧಿಕನು. ಈಗಲೇ ನೀನು ಪ್ರಧಾನ ರಥದಲ್ಲಿ ಕುಳಿತಿರುವ ವಸುದೇವನ ಪುತ್ರ ಮತ್ತು ಪಾಂಡವ ಧನಂಜಯರನ್ನು ನೋಡುವಿಯಂತೆ! ದೇವಾಸುರ

ಮನುಷ್ಯರಲ್ಲಿ ಪ್ರಖ್ಯಾತರಾದ ಈ ನರರ್ಷಭರಿಬ್ಬರೂ ಪ್ರಕಾಶದಲ್ಲಿ ಸೂರ್ಯಚಂದ್ರರಿಗೆ ಸಮಾನರಾದವರೆಂದು ವಿಖ್ಯಾತರಾಗಿದ್ದಾರೆ. ಅವರನ್ನು ಅಪಮಾನಗೊಳಿಸಬೇಡ. ಅಚ್ಯುತ-ಅರ್ಜುನರು ಈ ರೀತಿ ನರಸಿಂಹರೆಂದು ತಿಳಿದು ಅವರನ್ನು ಮಾತುಗಳಿಂದ ಅವಮಾನಿಸಬೇಡ. ಕೊಚ್ಚಿಕೊಳ್ಳುವುದನ್ನು ನಿಲ್ಲಿಸಿ ಸುಮ್ಮನಾಗು!"

ಮದ್ರಾಧಿಪತಿಯ ಅಪ್ರಿಯಮಾತುಗಳನ್ನು ಕೇಳಿದ ಯುದ್ಧದಲ್ಲಿ ಹಿಮ್ಮೆಟ್ಟದಿರುವ ಆಧಿರಥಿಯು ಶಲ್ಯನಿಗೆ ಈ ಮಾತುಗಳನ್ನಾಡಿದನು:

"ಅರ್ಜುನ-ವಾಸುದೇವರು ಎಂಥಹರೆನ್ನುವುದು ನನಗೂ ತಿಳಿದಿದೆ. ಅರ್ಜುನನ ರಥದ ಕುದುರೆಗಳನ್ನು ಓಡಿಸುವ ಶೌರಿಯ ಬಲವನ್ನೂ ಪಾಂಡವನಲ್ಲಿರುವ ಮಹಾಸ್ತ್ರಗಳನ್ನೂ ನಾನು ಯಥಾವತ್ತಾಗಿ ತಿಳಿದಿರುತ್ತೇನೆ. ಆದರೆ ಅವುಗಳನ್ನು ನೀನು ಪರೋಕ್ಷವಾಗಿ ಮಾತ್ರ ತಿಳಿದುಕೊಂಡು ನನಗಿಂದು ಹೇಳುತ್ತಿದ್ದೀಯೆ! ಅವರಿಬ್ಬರನ್ನೂ ಪ್ರತ್ಯಕ್ಷವಾಗಿ ತಿಳಿದಿಕೊಂಡಿರುವ ನಾನು ಶಸ್ತ್ರಭೃತರಲ್ಲಿ ವರಿಷ್ಠರಾದ ಅವರೊಂದಿಗೆ ಸ್ವಲ್ಪವೂ ಭೀತಿಯಿಲ್ಲದೇ ಹೋರಾಡುತ್ತೇನೆ. ಆದರೆ ಬ್ರಾಹ್ಮಣಸತ್ತಮ ರಾಮನು ಹೇಳಿದ ಮಾತುಗಳು

ನನ್ನನ್ನು ಇಂದು ಅತ್ಯಂತ ಅಧಿಕವಾಗಿ ಪರಿತಾಪಗೊಳಿಸುತ್ತಿವೆ.

ಹಿಂದೆ ನಾನು ದಿವ್ಯಾಸ್ತ್ರಗಳನ್ನು ಬಯಸಿ ಬ್ರಾಹ್ಮಣನ ವೇಷದಲ್ಲಿ ರಾಮನೊಂದಿಗೆ ವಾಸಿಸುತ್ತಿದ್ದೆನು. ಅಲ್ಲಿಯೂ ಸಹ ಅರ್ಜುನನ ಹಿತಾರ್ಥಿ ದೇವರಾಜನಿಂದ ನನಗೆ ವಿಘ್ನವುಂಟಾಯಿತು. ಅವನು ವಿರೂಪ ಕೀಟವಾಗಿ ನನ್ನ ತೊಡೆಯನ್ನೇರಿ ಕೊರೆದು ದೇಹವನ್ನು ಪ್ರವೇಶಿಸಿದ್ದನು. ಗುರುವಿನ ಭಯದಿಂದಾಗಿ ನಾನು ಆಗ ಸ್ವಲ್ಪವಾದರೂ ಕದಲಲೇ ಇಲ್ಲ. ಅನಂತರ ಎಚ್ಚರಗೊಂಡ ವಿಪ್ರ ರಾಮನು ಆ ದೃಶ್ಯವನ್ನು ಕಂಡನು. ನಾನು ಯಾರೆಂದು ಅವನು ಕೇಳಲು, ಸೂತನೆಂದು ನಾನು ಅವನಿಗೆ ಹೇಳಿದೆನು. ಆಗ ಆ ಮಹರ್ಷಿಯು ನನ್ನನ್ನು ಶಪಿಸಿದನು: “ಸೂತ! ವಂಚನೆಯಿಂದ ಪಡೆದುಕೊಂಡಿರುವ ಈ ಅಸ್ತ್ರವು ಕರ್ಮಕಾಲದಲ್ಲಿ ನಿನಗೆ ಹೊಳೆಯುವುದಿಲ್ಲ! ನಿನ್ನ ಮೃತ್ಯುಕಾಲದಲ್ಲಿಯೂ ನಿನಗಿದು ಸ್ಮರಣೆಗೆ ಬರುವುದಿಲ್ಲ. ಏಕೆಂದರೆ ಅಬ್ರಾಹ್ಮಣರಲ್ಲಿ ಈ ಬ್ರಹ್ಮಾಸ್ತ್ರವು ಶಾಶ್ವತವಾಗಿ ಇರುವುದಿಲ್ಲ.”

ಇಂದಿನ ಈ ಭಯಂಕರ ತುಮುಲ ಸಂಗ್ರಾಮದಲ್ಲಿ ನನಗೆ ಆ ಶಸ್ತ್ರವು ದೊರಕದೆಯೂ ಇರಬಹುದು. ವರುಣನು

ಪ್ರಜೆಗಳನ್ನು ಮುಳುಗಿಸಲು ತನ್ನ ಅಲೆಗಳನ್ನೇ ಪ್ರಕಟಿಸುತ್ತಾನೆ. ಆದರೆ ಆ ಸಮುದ್ರದ ಅಲೆಗಳನ್ನು ಕೂಡ ತೀರವು ತಡೆಯುತ್ತದೆ. ಆಕರ್ಣಾಂತವಾಗಿ ಬಿಲ್ಲನ್ನು ಸೆಳೆದು ಅಮೋಘ ಬಾಣಸಂಘಗಳನ್ನು ಬಿಡುವ ಲೋಕೋತ್ತಮ ಕುಂತೀಪುತ್ರನನ್ನು ಇಂದು ನಾನು ಎದುರಿಸಿ ಪಾರ್ಥನೆಂಬ ಅಲೆಯನ್ನು ಬಾಣಗಳೆಂಬ ತೀರದಿಂದ ತಡೆಯುತ್ತೇನೆ. ಆ ಅರ್ಜುನನನ್ನು ನಾನು ಇಂದಿನ ಸುಘೋರ ಯುದ್ಧದಲ್ಲಿ ಎದುರಿಸಿಸುತ್ತೇನೆ. ನೋಡು! ಅತಿಮಾನಿನಿ ಪಾಂಡವನು ಯುದ್ಧಕಾಮುಕನು. ನನ್ನ ಮೇಲೆ ಅಮಾನುಷ ಮಹಾಸ್ತ್ರಗಳನ್ನು ಪ್ರಯೋಗಿಸುತ್ತಾನೆ. ಯುದ್ಧದಲ್ಲಿ ಅವನ ಅಸ್ತ್ರಗಳನ್ನು ಅಸ್ತ್ರಗಳಿಂದ ನಿರಸನಗೊಳಿಸಿ ಉತ್ತಮ ಶರಗಳಿಂದ ಪಾರ್ಥನನ್ನು ಕೆಡವುತ್ತೇನೆ. ದಿವಾಕರನಂತೆ ಎಲ್ಲ ದಿಕ್ಕುಗಳನ್ನೂ ಬಾಣಗಳೆಂಬ ಕಿರಣಗಳಿಂದ ಪರಿತಾಪ ಗೊಳಿಸುವ ಉಗ್ರ ಧನಂಜಯನನ್ನು ಬಾಣಗಳಿಂದ ಮುಚ್ಚಿಬಿಡುತ್ತೇನೆ! ಪ್ರಜ್ವಲಿಸುವ ಧೂಮಶಿಖ ವೈಶ್ವಾನರನಂತೆ ತೇಜಸ್ಸಿನಿಂದ ಈ ಲೋಕವನ್ನು ಸುಡುತ್ತಿರುವ ಪಾರ್ಥನನ್ನು ಯುದ್ಧದಲ್ಲಿ ಶರವರ್ಷಗಳಿಂದ ಶಾಂತಗೊಳಿಸುತ್ತೇನೆ. ವೃಕ್ಷಗಳನ್ನೇ ಬುಡದೊಂದಿಗೆ ಕಿತ್ತು ಬಿಸಾಕುವ ವೇಗವಾದ ಉಗ್ರ

ಚಂಡಮಾರುತವನ್ನು ಹಿಮವತ್ಪರ್ವತವು ಹೇಗೆ ಸಹಿಸಿಕೊಳ್ಳುವುದೋ ಹಾಗೆ ಕ್ರುದ್ಧನಾದ, ಶತ್ರುಸೈನ್ಯಗಳನ್ನು ಮಥಿಸುವ, ಬಲವಂತ ಪ್ರಹಾರಿ, ಮತ್ತು ಅಸಹನಶಾಲಿ ಧನಂಜಯನನ್ನು ನಾನು ಯುದ್ಧದಲ್ಲಿ ಎದುರಿಸುತ್ತೇನೆ. ಖಾಂಡವಪ್ರಸ್ಥದಲ್ಲಿ ದೇವತೆಗಳೂ ಸೇರಿ ಎಲ್ಲ ಪ್ರಾಣಿಗಳನ್ನೂ ಜಯಿಸಿದ ಸವ್ಯಸಾಚಿಯೊಡನೆ ನನ್ನೊಬ್ಬನನ್ನು ಬಿಟ್ಟು ಜೀವವನ್ನು ರಕ್ಷಿಸಿಕೊಳ್ಳುವ ಯಾವ ಮನುಷ್ಯನು ತಾನೇ ಯುದ್ಧಮಾಡಬಲ್ಲನು? ಆ ಪಾಂಡವನ ಪುರುಷವನ್ನು ನಾನೇ ಕ್ಷತ್ರಿಯರ ಸಮಿತಿಗಳಲ್ಲಿ ಹೃಷ್ಟನಾಗಿ ವರ್ಣಿಸಬಲ್ಲೆ. ಮೂರ್ಖ ಮೂಢಚೇತನನಾದ ನೀನು ನನಗೇಕೆ ಅರ್ಜುನನ ಪೌರುಷದ ಕುರಿತು ಹೇಳುತ್ತಿರುವೆ? ಅಪ್ರಿಯನೂ, ನಿಷ್ಠುರನೂ, ಕ್ಷುದ್ರನೂ, ಕ್ಷಮಾಶೂನ್ಯನೂ, ಕ್ಷಮಾವಂತರನ್ನು ನಿಂದಿಸುವನೂ ಆದ ಪುರುಷನನ್ನು ಮತ್ತು ಅವನಂತಿರುವ ನೂರಾರು ಜನರನ್ನು ನಾನು ಸಂಹರಿಸಿಬಿಡುತ್ತೇನೆ. ಆದರೆ ಕಾಲವಶದಿಂದ ನಿನ್ನನ್ನು ನಾನು ಕ್ಷಮಿಸುತ್ತಿದ್ದೇನೆ. ಪಾಪಕರ್ಮಿಯೇ! ಪಾಂಡವನಿಗೋಸ್ಕರವಾಗಿಯೇ ನೀನು ನನ್ನೊಡನೆ ಈ ರೀತಿ ಮಾತನಾಡಿ ನಿನ್ನ ಮೂಢತನವನ್ನು ಪ್ರದರ್ಶಿಸುತ್ತಿರುವೆ! ನನ್ನೊಡನೆ ಸರಳತೆಯಿಂದ ವರ್ತಿಸಬೇಕಾಗಿರುವ ನೀನು

ಕುಟಿಲತನದಿಂದ ವರ್ತಿಸುತ್ತಿರುವೆ. ಏಳು ಹೆಜ್ಜೆಗಳು ಜೊತೆಯಲ್ಲಿ ನಡೆದರೆ ಪರಸ್ಪರ ಮೈತ್ರಿಯು ಬೆಳೆಯುವುದೆಂಬುದನ್ನು ಮಿತ್ರದ್ರೋಹಿಯಾದ ನೀನು ಇಂದು ಸುಳ್ಳನ್ನಾಗಿಸಿರುವೆ! ಅತಿದಾರುಣ ಮೃತ್ಯುಮಯ ಕಾಲವು ಬಂದೊದಗಿದೆ. ದುರ್ಯೋಧನನೂ ಯುದ್ಧಭೂಮಿಗೆ ಆಗಮಿಸಿದ್ದಾನೆ. ಅವನ ಅರ್ಥಸಿದ್ಧಿಯಾಗಲೆಂದು ನನ್ನ ಮನೋಕಾಂಕ್ಷೆಯಾದರೆ, ನಿನ್ನ ಮನಸ್ಸು ಬೇರೆ ಯಾವುದರಲ್ಲಿಯೋ ತೊಡಗಿರುವುದಂತೆ ಮಾತನಾಡುತ್ತಿದ್ದೀಯೆ!

ಮಿದ, ನಂದ, ಪ್ರೀ, ತ್ರಾ, ಮಿ ಅಥವಾ ಮುದ್ ಧಾತುಗಳಿಂದ ನಿಪಾತನದ ಮೂಲಕ ಮಿತ್ರ ಶಬ್ಧದ ಸಿದ್ಧಿಯಾಗುತ್ತದೆ ಎಂದು ಹಿಂದೆ ವಿಪ್ರರು ಹೇಳಿರುತ್ತಾರೆ. ಈ ಶಬ್ಧದ ಸಂಪೂರ್ಣ ಅರ್ಥವು ನನಗೆ ಮತ್ತು ದುರ್ಯೋಧನನಿಗೆ ತಿಳಿದಿವೆ. ಶದ್, ಶಾಸ್, ಶೋ, ಶೃ, ಶ್ರಸ್ ಅಥವ್ವಾ ಷದ್ ಮತ್ತು ನಾನಾಪ್ರಕಾರದ ಉಪಸರ್ಗಗಳಿಂದ ಯುಕ್ತವಾದ ಸೂದ್ ಧಾತುಗಳಿಂದ ಶತ್ರು ಶಬ್ಧದ ಸಿದ್ಧಿಯಾಗುತ್ತದೆ. ನನ್ನ ವಿಷಯದಲ್ಲಿ ಈ ಎಲ್ಲ ಧಾತುಗಳ ತಾತ್ಪರ್ಯವನ್ನೂ ನೀನು

ಪ್ರಾಯಶಃ ಉಪಯೋಗಿಸುತ್ತಿರುವೆ. ದುರ್ಯೋಧನನಿಗೆ ಪ್ರಿಯವನ್ನುಂಟುಮಾಡಲು ಮತ್ತು ನಿನಗೆ ಅಪ್ರಿಯವಾದುದನ್ನು ಮಾಡಲು, ನನ್ನ ಯಶಕ್ಕಾಗಿ ಮತ್ತು ಈಶ್ವರನಿಗಾಗಿ ನಾನು ಪಾಂಡವ-ವಾಸುದೇವರನ್ನು ಹೋರಾಡುತ್ತೇನೆ. ನನ್ನ ಯುದ್ಧಕರ್ಮವನ್ನು ಇಂದು ನೀನು ನೋಡು! ಇಂದು ನನ್ನ ಉತ್ತಮ ಬ್ರಹ್ಮಾಸ್ತ್ರಗಳನ್ನೂ, ದಿವ್ಯಾಸ್ತ್ರ ಮಾನುಷ್ಯಾಸ್ತ್ರಗಳನ್ನೂ ನೋಡು! ಮದಿಸಿದ ಆನೆಯು ಇನ್ನೂ ಹೆಚ್ಚು ಮದದಿಂದ ಕೂಡಿದ ಆನೆಯೊಂದಿಗೆ ಸೆಣಸಾಡುವಂತೆ ಉಗ್ರವೀರ್ಯ ಅರ್ಜುನನನೊಡನೆ ಯುದ್ಧಮಾಡುತ್ತೇನೆ. ಅಜೇಯವೂ ಅಪ್ರತಿಮವೂ ಆದ ಬ್ರಹ್ಮಾಸ್ತ್ರವನ್ನು ಮನಸ್ಸಿನಲ್ಲಿಯೇ ಸ್ಮರಿಸಿಜಯಕ್ಕಾಗಿ ಪಾರ್ಥನ ಮೇಲೆ ಪ್ರಯೋಗಿಸುತ್ತೇನೆ. ಇಂದು ಯುದ್ಧದಲ್ಲಿ ನನ್ನ ರಥದ ಚಕ್ರವು ಹಳ್ಳದಲ್ಲಿ ಬೀಳದೆಯೇ ಹೋದರೆ ಅರ್ಜುನನು ಅದರಿಂದ ತಪ್ಪಿಸಿಕೊಳ್ಳಲಾರನು. ದಂಡಪಾಣಿ ವೈವಸ್ವತ ಯಮನಿಗಾಗಲೀ, ಪಾಶವನ್ನು ಹಿಡಿದ ವರುಣನಿಗಾಗಲೇ, ಗದಾಧರ ಧನಪತಿ ಕುಬೇರನಿಗಾಗಲೀ, ವಜ್ರದೊಂದಿಗೆ ವಾಸವನನ್ನಾಗಲೀ ಮತ್ತು ಇತರ ಅನ್ಯ ಶತ್ರುಗಳಿಗಾಗಲೀ ನಾನು ಭಯಪಡುವವನಲ್ಲ. ಇದನ್ನು ಚೆನ್ನಾಗಿ ತಿಳಿದುಕೋ!

ಅವರಿಬ್ಬರಲ್ಲಿಯೂ ನನಗೆ ಭಯವಿಲ್ಲ! ಪಾರ್ಥನಿಗಾಗಲೀ ಜನಾರ್ದನಿಗಾಗಲೀ ನಾನು ಹೆದರುವುದಿಲ್ಲ. ಅವರಿಬ್ಬರೊಡನೆ ನನ್ನ ಯುದ್ಧವು ಇಂದು ನಡೆದೇ ನಡೆಯುತ್ತದೆ. "ಸಂಗ್ರಾಮದಲ್ಲಿ ಯುದ್ಧಮಾಡುತ್ತಿರುವಾಗ ಭಯಂಕರ ಪರಿಸ್ಥಿತಿಯು ಬಂದೊದಗಿದಾಗ ನಿನ್ನ ರಥಚಕ್ರವು ಹಳ್ಳದಲ್ಲಿ ಬೀಳಲಿ!" ಎಂದು ನನಗೆ ಓರ್ವ ಬ್ರಾಹ್ಮಣನು ಹೇಳಿದ್ದನು. ಬ್ರಾಹ್ಮಣನ ಆ ಬಲಶಾಲಿ ಪ್ರಹರಕ್ಕೆ ನಾನು ಭಯಪಟ್ಟಿದ್ದೇನೆ. ಚಂದ್ರನನ್ನೇ ರಾಜನನ್ನಾಗಿ ಪಡೆದಿರುವ ಬ್ರಾಹ್ಮಣರು ಶಾಪಾನುಗ್ರಹಗಳಿಂದ ಇತರರ ಸುಖದುಃಖಗಳಿಗೆ ಈಶ್ವರಪ್ರಾಯರಾಗಿರುತ್ತಾರೆ.

ನಿರ್ಜನ ವನದಲ್ಲಿ ತಿರುಗಾಡುತ್ತಿರುವಾಗ ಪ್ರಮತ್ತನಾಗಿ ಬಾಣದಿಂದ ತಪಸ್ಸೇ ನಿಧಿಯಾಗಿದ್ದ ಆ ಬ್ರಾಹ್ಮಣನ ಹೋಮಧೇನುವಿನ ಕರುವನ್ನು ನಾನು ಸಂಹರಿಸಿದ್ದೆ. ಏಳುನೂರು ಆನೆಗಳನ್ನೂ ನೂರಾರು ದಾಸಿ-ದಾಸರನ್ನೂ ಆ ದ್ವಿಜಮುಖ್ಯನಿಗೆ ಕೊಟ್ಟರೂ ಅವನು ನನ್ನ ಮೇಲೆ ಪ್ರಸನ್ನನಾಗಲಿಲ್ಲ. ಬಿಳಿಯ ಕರುಗಳಿದ್ದ ಹದಿನಾಲ್ಕು ಸಾವಿರ ಕಪ್ಪು ಬಣ್ಣದ ಹಸುಗಳನ್ನು ಕೊಟ್ಟರೂ ಆ ದ್ವಿಜಸತ್ತಮನ

ಅನುಗ್ರಹವು ದೊರಕಲಿಲ್ಲ. ಸತ್ಕರಿಸಿ ಸರ್ವಕಾಮಗಳಿಂದ ಸಂಪನ್ನವಾಗಿದ್ದ ಮನೆಯನ್ನೂ ನನ್ನಲ್ಲಿದ್ದ ಎಲ್ಲ ಸಂಪತ್ತನ್ನೂ ಕೊಟ್ಟರೂ ಅವನು ಅವುಗಳನ್ನು ಬಯಸಲಿಲ್ಲ. ಪ್ರಯತ್ನಪಟ್ಟು ನನ್ನ ಅಪರಾಧಕ್ಕೆ ಕ್ಷಮೆಯನ್ನು ಬೇಡುತ್ತಿದ್ದ ನನಗೆ "ಸೂತ! ನಾನು ಹೇಳಿದಂತೆಯೇ ನಡೆಯುತ್ತದೆ. ಬೇರೆ ರೀತಿಯಲ್ಲಿ ನಡೆಯುವುದು ಸಾಧ್ಯವೇ ಇಲ್ಲ!" ಎಂದು ಹೇಳಿ ಬಿಟ್ಟನು. "ಅಸತ್ಯವನ್ನಾಡುವುದು ಪ್ರಜೆಗಳನ್ನು ನಾಶಗೊಳಿಸುತ್ತದೆ ಮತ್ತು ಪಾಪವನ್ನೂ ಕೊಡುತ್ತದೆ. ಆದುದರಿಂದ ಧರ್ಮರಕ್ಷಣಾರ್ಥವಾಗಿ ಸುಳ್ಳನ್ನು ಹೇಳಬಾರದು. ಬ್ರಾಹ್ಮಣರಿಗೆ ಪ್ರಾಪ್ತವಾಗಬಲ್ಲ ಉತ್ತಮ ಗತಿಯನ್ನು ಲೋಭಗೊಳಿಸಿ ನಾಶಗೊಳಿಸಬೇಡ. ನೀನು ಪ್ರಾಯಶ್ಚಿತ್ತವನ್ನು ಮಾಡಿಕೊಂಡಾಗಿದೆ. ನನ್ನ ಮಾತನ್ನು ಸುಳ್ಳನ್ನಾಗಿಸಲು ಲೋಕದಲ್ಲಿ ಸಾಧ್ಯವಿಲ್ಲ. ನಾನು ಹೇಳಿದುದನ್ನು ನೀನು ಪಡೆದೇ ಪಡೆಯುತ್ತೀಯೆ."

ನೀನು ನನ್ನನ್ನು ನಿಂದಿಸುತ್ತಿರುವೆಯಾದರೂ ನಿನ್ನ ಮೇಲಿನ ಸುಹೃದ್ಭಾವದಿಂದ ನಾನು ನಿನಗೆ ಇದನ್ನು ಹೇಳಿರುವೆನು. ಆದರೂ ನೀನು ನನ್ನನ್ನು ನಿಂದಿಸುತ್ತಲೇ ಇರುವೆ

ಎನ್ನುವುದನ್ನೂ ತಿಳಿದುಕೊಂಡಿದ್ದೇನೆ. ನೀನಾಡಿದುದಕ್ಕೆ ಉತ್ತರವನ್ನೂ ಕೊಡುತ್ತೇನೆ. ಕೇಳು.”

ಉತ್ತರವಾಗಿ ಮಾತನಾಡುತ್ತಿದ್ದ ಅರಿಂದಮ ಮದ್ರರಾಜನನ್ನು ತಡೆದು ರಾಧೇಯನು ಪುನಃ ಮಾತನಾಡಿದನು:

“ಶಲ್ಯ! ನಿದರ್ಶನಗಳನ್ನಿತ್ತು ಪ್ರಯತ್ನಪಟ್ಟು ನನ್ನನ್ನು ಹಳಿದು ಮಾತನಾಡುತ್ತಿದ್ದೀಯೆ! ನಿನ್ನ ಮಾತಿನಿಂದ ಯುದ್ಧದಲ್ಲಿ ನನ್ನನ್ನು ಹೆದರಿಸಲು ಶಕ್ಯವಿಲ್ಲ. ವಾಸವನೊಡಗೂಡಿ ಸರ್ವ ದೇವತೆಗಳೂ ನನ್ನೊಡನೆ ಯುದ್ಧಮಾಡಿದರೂ ಅದರಲ್ಲಿ ನನಗೆ ಭಯವಿಲ್ಲದಿರುವಾಗ ಇನ್ನು ಕೇಶವನೊಂದಿಗಿರುವ ಪಾರ್ಥನಿಂದ ಎಂಥಹ ಭಯ? ಕೇವಲ ಮಾತಿನಿಂದ ನನ್ನನ್ನು ಹೆದರಿಸಲು ಎಂದೂ ಶಕ್ಯವಾಗಲಾರದು. ಹೀಗೆ ರಣದಲ್ಲಿ ನಿನ್ನಿಂದ ಬೆದರುವವರು ಬೇರೆ ಯಾರಾದರೂ ಇದ್ದರೆ ಅವರ ಬಳಿ ಹೋಗು! ದುರ್ಮತೇ! ಈ ರೀತಿಯ ಕಠೋರ ಮಾತುಗಳು ನೀಚನಿಗೇ ಬಲವನ್ನು ಕೊಡುವಂಥಹುವು. ನನ್ನಲ್ಲಿರುವ ಸದ್ಗುಣಗಳನ್ನು ಪಡೆಯಲು ಅಸಮರ್ಥನಾಗಿರುವ ನೀನು ಬಹಳವಾಗಿ ಮಾತನಾಡುತ್ತಿರುವೆ! ಕರ್ಣನು ಹುಟ್ಟಿರುವುದು ಭಯಪಡುವುದಕ್ಕಲ್ಲ. ನಾನು ಹುಟ್ಟಿರುವುದು

ವಿಕ್ರಮ-ಯಶಸ್ಸುಗಳಿಗಾಗಿ!

ಧೃತರಾಷ್ಟ್ರನ ಸನ್ನಿಧಿಯನ್ನು ಹೇಳಿದುದನ್ನು ಮತ್ತು ನಾನು ಕೇಳಿದುದನ್ನು ಏಕಾಗ್ರಚಿತ್ತನಾಗಿ ಕೇಳು. ಬ್ರಾಹ್ಮಣರು ವಿವಿಧ ವಿಚಿತ್ರ ದೇಶಗಳು ಮತ್ತು ರಾಜರ ಪೂರ್ವವೃತ್ತಾಂತಗಳನ್ನು ಹೇಳುತ್ತಾ ಧೃತರಾಷ್ಟ್ರನನ್ನು ಉಪಾಸಿಸುತ್ತಿದ್ದರು. ಅಲ್ಲಿ ಪುರಾಣ ವೃತ್ತಾಂತಗಳನ್ನು ಹೇಳುತ್ತಿದ್ದ ಓರ್ವ ದ್ವಿಜೋತ್ತಮನು ಬಾಹ್ಲೀಕ ಮತ್ತು ಮದ್ರ ದೇಶಗಳನ್ನು ಹಳಿಯುತ್ತಾ ಈ ಮಾತುಗಳನ್ನಾಡಿದ್ದನು: “ಹಿಮಾಲಯ, ಗಂಗೆ, ಯಮುನಾ, ಸರಸ್ವತಿ ಮತ್ತು ಕುರುಕ್ಷೇತ್ರಗಳ ಗಡಿಗಳ ಹೊರಗಿರುವ ಮತ್ತು ಆರನೆಯದಾದ ಸಿಂಧು ಮತ್ತು ಐದು ನದಿಗಳ ಮಧ್ಯೆ ವಾಸಿಸುತ್ತಿರುವ ಬಾಹ್ಲೀಕರನ್ನು ಧರ್ಮಬಾಹಿರರೆಂದೂ ಅಶುಚಿಗಳೆಂದೂ ವರ್ಜಿಸಬೇಕು. ರಾಜಕುಲದ್ವಾರದಲ್ಲಿದ್ದ ಗೋವರ್ಧನ ಎಂಬ ವಟವೃಕ್ಷವನ್ನೂ ಸುಭಾಂಡ ಎನ್ನುವ ಚೌಕವನ್ನೂ ನಾನು ಬಾಲ್ಯದಿಂದ ಜ್ಞಾಪಕದಲ್ಲಿಟ್ಟುಕೊಂಡಿದ್ದೇನೆ. ಯಾವುದೋ ಗೂಢ ಕಾರ್ಯಕ್ಕಾಗಿ ನಾನು ಬಾಹ್ಲೀಕರಲ್ಲಿ ಉಳಿದುಕೊಂಡಿದ್ದೆನು. ಆಗ ಅಲ್ಲಿ ಅವರೊಂದಿಗೆ

ವ್ಯವಹರಿಸುತ್ತಾ ಅವರ ಸಮಾಚಾರಗಳೆಲ್ಲವನ್ನೂ ನಾನು ತಿಳಿದುಕೊಂಡೆನು. ಶಾಕಲವೆಂಬ ಹೆಸರಿನ ನಗರ, ಆಪಗಾ ಎಂಬ ಹೆಸರಿನ ನದಿಯ ಬಳಿಯಿರುವ ಜರ್ತಿಕಾ ಎಂಬ ಹೆಸರಿನ ಬಾಹ್ಲೀಕರ ನಡತೆಗಳು ಅತಿ ನಿಂದನೀಯವಾದವುಗಳು. ಧಾನ್ಯ-ಬೆಲ್ಲಗಳಿಂದ ಮಾಡಿದ ಮದ್ಯವನ್ನು ಕುಡಿಯುತ್ತಾ, ಬೆಳ್ಳುಳ್ಳಿಯೊಂದಿಗೆ ಗೋಮಾಂಸ-ಅಪೂಪ-ಮಾಂಸ-ಯವಾನ್ನಗಳನ್ನು ತಿನ್ನುವ ಅವರು ಶೀಲವರ್ಜಿತರು. ಅಲ್ಲಿಯ ಸ್ತ್ರೀಯರು ನಗರ ದ್ವಾರಗಳಲ್ಲಿ, ಪ್ರಾಕಾರಗಳಲ್ಲಿ ಮಾಲೆ-ಗಂಧಗಳನ್ನು ಧರಿಸದೆಯೇ ಮತ್ತರಾಗಿ ನಗ್ನರಾಗಿ ನಗುತ್ತಾ, ಹಾಡುತ್ತಾ, ಕುಣಿಯುತ್ತಿರುತ್ತಾರೆ. ಅಮಲಿನಲ್ಲಿರುವ ಮದೋತ್ಕಟೆಯರು ಕತ್ತೆ ಮತ್ತು ಒಂಟೆಗಳ ಕಿರುಚಾಟದ ಧ್ವನಿಯಲ್ಲಿ ವಿವಿಧ ಗೀತೆಗಳನ್ನು ಹಾಡುತ್ತಾ ಅನ್ಯೋನ್ಯರನ್ನು ಬಹಿರಂಗವಾಗಿ ಕರೆಯುತ್ತಿರುತ್ತಾರೆ. “ಅಯ್ಯೋ! ಹತಳಾದೆ! ಅಯ್ಯೋ ಹತಳಾದೆ! ಸ್ವಾಮಿ ಅಥವಾ ಗಂಡನಿಂದ ಹತಳಾದೆ!” ಎಂದು ಕೂಗಿಕೊಳ್ಳುತ್ತಾ ಆ ಮಂದೆಯರು ಪರ್ವ-ಉತ್ಸವಗಳಲ್ಲಿ ನರ್ತಿಸುತ್ತಿರುತ್ತಾರೆ. ಕುರುಜಾಂಗಲದಲ್ಲಿ ವಾಸಿಸುತ್ತಿದ್ದ ಯಾವನೋ ಒಬ್ಬ ಬಾಹ್ಲೀಕ ಮುಖ್ಯನು ಅತಿ ಸಂತೋಷವಿಲ್ಲದ ತನಗೆ ನಂಟಿದ್ದ ಸ್ತ್ರೀಯಳ

ಕುರಿತು ಹೇಳುತ್ತಿದ್ದನು: “ಆ ಎತ್ತರ ಶರೀರದ ಬಿಳುಪಾಗಿರುವ ಸೂಕ್ಷ್ಮವಸ್ತ್ರವನ್ನು ಧರಿಸಿರುವ ಅವಳು ಕುರುವಾಸಿಯಾಗಿರುವ ಈ ಬಾಹ್ಲೀಕನನ್ನು ನಿಜವಾಗಿಯೂ ಸ್ಮರಿಸಿಕೊಳ್ಳುತ್ತ ಮಲಗಿರಬಹುದು! ಶತದ್ರು-ಇರಾವತೀ ನದಿಗಳನ್ನು ದಾಟಿ ನನ್ನ ದೇಶಕ್ಕೆ ಹೋಗಿ ಸ್ಥೂಲ ಜನನೇಂದ್ರಿಯವುಳ್ಳ ಸುಂದರ ಸ್ತ್ರೀಯನ್ನು ಯಾವಾಗ ನೋಡುತ್ತೇನೆ? ಯಾರ ಅಪಾಂಗಗಳು ಮಣಿಶಿಲಾಲೇಪನದಿಂದ ಉಜ್ವಲವಾಗಿ ಕಾಣುತ್ತವೆಯೋ, ಯಾರ ಎರಡು ಕಣ್ಣುಗಳೂ ಲಲಾಟವು ಅಂಜನದಿಂದ ಸುಶೋಭಿತವಾಗಿವೆಯೋ, ಯಾರು ಕಂಬಲ-ಮೃಗಚರ್ಮಗಳನ್ನು ಧರಿಸಿರುವರೋ ಅಂತಹ ಗೌರಾಂಗ, ಪ್ರಿಯದರ್ಶನೆ ಸುಂದರಿಯರು ಭೇರೀ-ಮೃದಂಗ-ಶಂಖ-ಮರ್ದಲ ವಾದ್ಯಗಳ ಸಹಿತ ನೃತ್ಯಮಾಡುವುದನ್ನು ನಾನು ಯಾವಾಗ ನೋಡುವೆನು? ಮದೋನ್ಮತ್ತರಾದ ನಾವು ಕತ್ತೆ, ಒಂಟೆ ಮತ್ತು ಹೇಸರಗತ್ತೆಗಳ ಮೇಲೆ ಬನ್ನೀಮರ-ಗೋನುಮರ-ಬಿದಿರುಮೆಳೆಗಳ ಅರಣ್ಯಗಳಲ್ಲಿ ಯಾವಾಗ ಸುಖಪ್ರಯಾಣ ಮಾಡುತ್ತೇವೆ? ಮಜ್ಜಿಗೆಯಿಂದ ಕೂಡಿದ ಕಚ್ಚಾಯಗಳನ್ನೂ ಹಿಟ್ಟಿನುಂಡೆಗಳನ್ನೂ ತಿನ್ನುತ್ತಾ ಬಲಿಷ್ಠರಾಗಿ ಹಾದಿಯಲ್ಲಿ ಸಿಕ್ಕುವ ಹಾದಿಗರ ಮೇಲೆ ಬೀಳುತ್ತಾ ಅವರ

ಬಟ್ಟೆ-ಬರೆಗಳನ್ನು ದೋಚಿಕೊಂಡು ಅವರಿಗೆ ಯಾವಾಗ ಪೆಟ್ಟುಗಳನ್ನು ಕೊಡುವೆವು?” ಇಂತಹ ಹೀನ ವರ್ತನೆಗಳಿರುವ ದುರಾತ್ಮ ಬಾಹ್ಲೀಕರೊಂದಿಗೆ ಬುದ್ಧಿಯಿರುವ ಯಾವ ಮನುಷ್ಯನು ತಾನೇ ಒಂದು ಮುಹೂರ್ತಕಾಲವಾದರೂ ವಾಸಿಸಿರಬಲ್ಲನು?”

ನಿರರ್ಥಕ ಆಚಾರ-ವಿಚಾರಗಳುಳ್ಳ ಬಾಹ್ಲೀಕರ ಕುರಿತು ಈ ರೀತಿಯಾಗಿ ಬ್ರಾಹ್ಮಣನು ಹೇಳಿದ್ದನು. ಅವರ ಪಾಪ-ಪುಣ್ಯಗಳ ಆರನೆಯ ಒಂದು ಭಾಗಕ್ಕೆ ಅವರ ರಾಜನಾಗಿರುವ ನೀನು ಅರ್ಹನಾಗಿರುವೆ! ಹೀಗೆ ಹೇಳಿದ ನಂತರವೂ ಆ ಬ್ರಾಹ್ಮಣನು ಉದ್ಧತರಾದ ಬಾಹ್ಲೀಕರ ಕುರಿತು ಇನ್ನೂ ಅನೇಕ ವಿಷಯಗಳನ್ನು ಹೇಳಿದನು. ಅವುಗಳನ್ನು ಹೇಳುತ್ತೇನೆ. ಕೇಳು. “ಅಲ್ಲಿ ಶಾಕಲನಗರದಲ್ಲಿರುವ ರಾಕ್ಷಸಿಯೋರ್ವಳು ಕೃಷ್ಣಪಕ್ಷದ ಚತುರ್ದಶಿಯ ರಾತ್ರಿ ಸದಾ ದುಂದುಭಿಯನ್ನು ಬಾರಿಸುತ್ತಾ ಹೀಗೆ ಹಾಡುತ್ತಿರುತ್ತಾಳೆ: “ನಾನು ವಸ್ತ್ರಾಲಂಕಾರಭೂಷಿತೆಯಾಗಿ ಗೋಮಾಂಸವನ್ನು ತಿಂದು ಬೆಲ್ಲದಿಂದ ಮಾಡಿದ ಸುರೆಯನ್ನು ಕುಡಿದು ತೃಪ್ತಳಾಗಿ, ಸ್ಥೂಲಕಾಯರಾದ ಹೊಂಬಣ್ಣದ ಸ್ತ್ರೀಯರೊಂದಿಗೆ ಬೊಗಸೆ

ಈರುಳ್ಳಿಯೊಡನೆ ಕುರಿಮಾಂಸವನ್ನು ತಿನ್ನುತ್ತಾ ಈ ಶಾಕಲನಗರದಲ್ಲಿ ಬಾಹ್ಲೀಕರ ಗೀತೆಯನ್ನು ಪುನಃ ಎಂದು ಹಾಡುತ್ತೇನೆ?" "ಹಂದಿ, ಕೋಳಿ, ಹಸು, ಕತ್ತೆ, ಒಂಟೆ, ಕುರಿ – ಇವುಗಳ ಮಾಂಸವನ್ನು ತಿನ್ನದಿರುವವರ ಜನ್ಮವು ವ್ಯರ್ಥವೇ ಸರಿ!" ಹೀಗೆ ಶಾಕಲಪುರವಾಸಿ ಅಬಾಲವೃದ್ಧರೂ ನರನಾರಿಯರೂ ಮದಿರೆಯ ಅಮಲಿನಲ್ಲಿ ಕೂಗಿ ಹಾಡುತ್ತಿರುತ್ತಾರೆ. ಅಂಥವರಲ್ಲಿ ಧರ್ಮವು ಹೇಗೆ ತಾನೆ ಇರಬಲ್ಲದು? ಶಲ್ಯ! ಇದನ್ನು ಅರ್ಥಮಾಡಿಕೋ! ಇನ್ನೂ ಇದೆ. ಕುರುಸಂಸದಿಯಲ್ಲಿ ನಮಗೆ ಅನ್ಯ ಬ್ರಾಹ್ಮಣನು ಹೇಳಿದುದನ್ನೂ ನಿನಗೆ ಹೇಳುತ್ತೇನೆ. "ಶತದ್ರು, ವಿಪಾಶಾ, ಇರಾವತೀ, ಚಂದ್ರಭಾಗಾ, ವಿತಸ್ತಾ ಈ ಐದು ನದಿಗಳೂ ಸಿಂಧೂ ನದಿಯೊಡನೆ ಹರಿಯುತ್ತವೆ. ಆ ಅರಟ್ಟ ಎಂಬ ದೇಶದಲ್ಲಿ ಧರ್ಮಗಳು ನಷ್ಟವಾಗಿಹೋಗಿದೆ. ಅವುಗಳನ್ನು ತ್ಯಜಿಸಬೇಕು. ಸಂಸ್ಕಾರಹೀನರಾದ, ಅನ್ಯೈತಿಕ ಮಾರ್ಗದಿಂದ ಹುಟ್ಟಿದ, ಯಜ್ಞಾದಿಕರ್ಮಗಳನ್ನು ಮಾಡದಿರುವ, ಪ್ರಣಷ್ಟ ಧರ್ಮಕರ್ಮಗಳಿರುವ ಬಾಹ್ಲೀಕರು ನೀದುವ ಹವ್ಯಕವ್ಯಗಳನ್ನು ಪಿತೃಗಳಾಗಲೀ, ಬ್ರಾಹ್ಮಣರಾಗಲೀ ಸ್ವೀಕರಿಸುವುದಿಲ್ಲವೆಂದು ನಾವು ಕೇಳಿದ್ದೇವೆ."

ಸಾಧುಸಂಸದಿಯಲ್ಲಿ ಬ್ರಾಹ್ಮಣನೊಬ್ಬನು ಈ ರೀತಿ ಹೇಳಿದ್ದನು: “ದಯಾಹೀನ ಬಾಹ್ಲೀಕರು ಹಿಟ್ಟು-ಮದ್ಯಗಳಿಂದ ದೂಷಿತವಾಗಿರುವ, ನಾಯಿನೆಕ್ಕಿರುವ ಮರದ ಮರಿಗೆಗಳಲ್ಲಿಯೂ ಮಣ್ಣಿನ ಶರಾವೆಗಳಲ್ಲಿಯೂ ಊಟ ಮಾಡುತ್ತಾರೆ. ಕುರಿ, ಒಂಟೆ, ಮತ್ತು ಕತ್ತೆಗಳ ಹಾಲನ್ನು ಕುಡಿಯುತ್ತಾರೆ. ಆ ಹಾಲಿನಿಂದಾದ ಮೊಸರು-ಬೆಣ್ಣೆ-ತುಪ್ಪಗಳನ್ನೂ ತಿನ್ನುತ್ತಾರೆ ಮತ್ತು ಕುಡಿಯುತ್ತಾರೆ. ಸಂಕರ ಜಾತಿಯ ಮಕ್ಕಳುಳ್ಳ, ಸಕಲರ ಆಹಾರವನ್ನೂ ತಿನ್ನುವ, ಎಲ್ಲ ಪ್ರಾಣಿಗಳ ಹಾಲನ್ನೂ ಕುಡಿಯುವ ನೀಚ ಅರಟ್ಟ ಎಂಬ ಹೆಸರಿನ ಬಾಹ್ಲೀಕರನ್ನು ವಿಧ್ವಾಂಸನಾದವನು ವರ್ಜಿಸಬೇಕು.” ಶಲ್ಯ! ಇದನ್ನು ಅರ್ಥಮಾಡಿಕೋ! ಇನ್ನೂ ಇದೆ.

ಕುರುಸಂಸದಿಯಲ್ಲಿ ನಮಗೆ ಅನ್ಯ ಬ್ರಾಹ್ಮಣನು ಹೇಳಿದುದನ್ನೂ ನಿನಗೆ ಹೇಳುತ್ತೇನೆ. “ಯುಗಂಧರೆಯಲ್ಲಿ ಹಾಲುಕುಡಿದು, ಅಚ್ಯುತಸ್ಥಳದಲ್ಲಿ ಉಳಿದು, ಭೂತಿಲಯದಲ್ಲಿ ಸ್ನಾನಮಾಡಿದವನು ಹೇಗೆ ತಾನೇ ಸ್ವರ್ಗಕ್ಕೆ ಹೋಗುತ್ತಾನೆ? ಪರ್ವತದಿಂದ ಹರಿದುಬರುವ ಐದು ನದಿಗಳು ಎಲ್ಲಿ ಹರಿಯುತ್ತವೆಯೋ ಅಲ್ಲಿ ಅರಟ್ಟ ಎಂಬ ಹೆಸರಿನ

ಬಾಹ್ಲೀಕರಿದ್ದಾರೆ. ಆರ್ಯರಾದವರು ಅವರೊಡನೆ ಎರಡು ದಿವಸಗಳು ಸಹ ತಂಗಬಾರದು. ವಿಪಾಶಾ ನದಿಯಲ್ಲಿ ಬಹಿ ಮತ್ತು ಹ್ಲೀಕ ಎಂಬ ಹೆಸರಿನ ಎರಡು ಪಿಶಾಚಿಗಳಿವೆ. ಅವರ ಸಂತಾನವೇ ಬಾಹ್ಲೀಕರು. ಇವರು ಪ್ರಜಾಪತಿಯ ಸೃಷ್ಟಿಗೆ ಸೇರಿದವರಿಲ್ಲ. ಧರ್ಮದೂಷಿತವಾದ ಕಾರಸ್ಕರ, ಮಹಿಷಕ, ಕಲಿಂಗ, ಕೀಕಟಾಟ, ಕರ್ಕೋಟಕ ಮತ್ತು ವೀರಕರನ್ನು ವಿವರ್ಜಿಸಬೇಕು. ದೊಡ್ಡ ಮರದ ಕಾಂಡದಂತಹ ಸೊಂಟದ ರಾಕ್ಷಸಿಯೊಬ್ಬಳು ತೀರ್ಥಯಾತ್ರೆಗೆ ಹೊರಟಿದ್ದವನ ಮನೆಯಲ್ಲಿ ಒಂದು ರಾತ್ರಿ ತಂಗಿದ್ದು ಅವನೊಡನೆ ಈ ಮಾತನ್ನು ಹೇಳಿದ್ದಳು: “ಸಿಂಧು-ಸೌವೀರಗಳ ನಡುವೆ ವಾಸಿಸುವ ಅರಟ್ಟಾ ಹೆಸರಿನ ದೇಶದಲ್ಲಿರುವ ಬಾಹ್ಲೀಕರೆಂಬ ಹೆಸರಿನ ಜನಾಂಗವು ಹೀನವಾದುದು!” ಶಲ್ಯ! ಇದನ್ನು ಅರ್ಥಮಾಡಿಕೋ! ಇನ್ನೂ ಇದೆ. ನಿನಗೆ ಹೇಳುತ್ತೇನೆ. ನಾನು ಹೇಳುವುದನ್ನು ಸಂಪೂರ್ಣವಾಗಿ ಏಕಾಗ್ರಮನಸ್ಕನಾಗಿ ಕೇಳು!

ಹಿಂದೆ ಓರ್ವ ಬ್ರಾಹ್ಮಣನು ಶಿಲ್ಪಿಯ ಮನೆಗೆ ಅತಿಥಿಯಾಗಿ ಬಂದಿದ್ದನು. ಅಲ್ಲಿಯ ಆಚಾರವನ್ನು ನೋಡಿ ಪ್ರೀತನಾಗಿ ಅವನು ಶಿಲ್ಪಿಗೆ ಹೇಳಿದನು: “ನಾನು ಬಹಳಕಾಲ ಹಿಮಲಯ

ಶಿಖರದಲ್ಲಿ ಏಕಾಂಗಿಯಾಗಿ ವಾಸಿಸಿದ್ದೆನು. ಮತ್ತು ಅನೇಕ ದೇಶಗಳನ್ನೂ, ನಾನಾ ಧರ್ಮಗಳನ್ನು ಅನುಸರಿಸುವವರನ್ನೂ ನೋಡಿದ್ದೇನೆ. ಇವುಗಳಲ್ಲಿ ಯಾವುದರಲ್ಲಿಯೂ ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಪ್ರಜೆಗಳಿಲ್ಲ. ವೇದಪಾರಗರು ಹೇಳಿರುವ ಧರ್ಮವನ್ನೇ ಅವರೆಲ್ಲರೂ ಅನುಸರಿಸುತ್ತಾರೆ. ನಾನಾ ಧರ್ಮಾಚರಣೆಗಳುಳ್ಳ ದೇಶಗಳಲ್ಲಿ ಸಂಚರಿಸುತ್ತಾ ನಾನು ಬಾಹ್ಲೀಕ ದೇಶಕ್ಕೆ ಬಂದೆನು. ಮಹಾರಾಜ! ಅಲ್ಲಿಯ ಈ ವಿಷಯವನ್ನು ಕೇಳು! ಅಲ್ಲಿ ಮೊದಲು ಬ್ರಾಹ್ಮಣನಾಗಿದ್ದವನು ಅನಂತರ ಕ್ಷತ್ರಿಯನಾಗುತ್ತಾನೆ. ಅನಂತರ ವೈಶ್ಯನಾಗುತ್ತಾನೆ ಮತ್ತು ಶೂದ್ರನೂ ಆಗುತ್ತಾನೆ. ಅನಂತರ ನಾಪಿತನಾಗಿ ಪುನಃ ಬ್ರಾಹ್ಮಣನೂ ಆಗುತ್ತಾನೆ. ಬ್ರಾಹ್ಮಣನಾಗಿದ್ದವನು ಅಲ್ಲಿಯೇ ಪುನಃ ದಾಸನೂ ಆಗುತ್ತಾನೆ. ಒಂದೇ ಕುಲದಲ್ಲಿ ವಿಪ್ರರೂ ಉಳಿದ ಅನ್ಯರು ಕಾಮಚಾರಿಗಳೂ ಆಗಿರಬಹುದು. ಗಾಂಧಾರ, ಮದ್ರಕ ಮತ್ತು ಬಾಹ್ಲೀಕರು ಸಾಮಾನ್ಯವಾಗಿ ಅಲ್ಪಚೇತಸರು. ಆ ದೇಶವೇ ಧರ್ಮಸಂಕರ ಕಾರಕವಾದುದು ಎಂದು ಕೇಳಿದೆನು. ಇಡೀ ಪೃಥ್ವಿಯನ್ನು ತಿರುಗಾಡಿದರೂ ಬಾಹ್ಲೀಕದಲ್ಲಿ ಮಾತ್ರ ಈ ವಿಪರ್ಯಾಸವನ್ನು ಕಾಣಬಹುದು.” ಶಲ್ಯ! ಇದನ್ನು

ಅರ್ಥಮಾಡಿಕೋ! ಇನ್ನೂ ಇದೆ.

ಬಾಹ್ಲೀಕರನ್ನು ಹೀಗಳೆಯುವ ಇನ್ನೊಬ್ಬನು ಹೇಳಿದ ಮಾತನ್ನು ನಿನಗೆ ಹೇಳುತ್ತೇನೆ. “ಹಿಂದೊಮ್ಮೆ ದರೋಡೆಕೋರರು ಅರಟ್ಟ ದೇಶದಿಂದ ಸಾಧ್ವಿಯೊಬ್ಬಳನ್ನು ಅಪಹರಿಸಿಕೊಂಡು ಹೋಗಿ ಅಧರ್ಮತಃ ಅವಳೊಂದಿಗೆ ಕೂಡಿದರು. ಅದರಿಂದ ಕುಪಿತಳಾದ ಅವಳು ಅವರನ್ನು ಶಪಿಸಿದಳು: “ಇನ್ನೂ ಬಾಲಕಿಯಾಗಿರುವ, ಬಂಧು-ಬಾಂಧವರನ್ನು ಹೊಂದಿರುವ ನನ್ನನ್ನು ಅಪಹರಿಸಿ ಅಧರ್ಮದಿಂದ ನನ್ನೊಡನೆ ಸೇರಿದುದಕ್ಕಾಗಿ ಇನ್ನು ಮುಂದೆ ನಿಮ್ಮ ಕುಲದಲ್ಲಿ ಹುಟ್ಟುವ ಸ್ತ್ರೀಯರೆಲ್ಲರೂ ವ್ಯಭಿಚಾರಿಣಿಯರಾಗುತ್ತಾರೆ. ನರಾಧಮರೇ! ಈ ಘೋರ ಪಾಪದಿಂದ ನಿಮಗೆ ಮುಕ್ತಿಯೇ ಇಲ್ಲ!” ಬಹುಷಃ ಬಾಹ್ಲೀಕವನ್ನು ಬಿಟ್ಟು ಬೇರೆ ಎಲ್ಲ ನಾನಾ ದೇಶಗಳಲ್ಲಿಯೂ – ಕುರುಗಳು, ಪಾಂಚಾಲರು, ಶಾಲ್ವರು, ಮತ್ಸ್ಯರು, ನೈಮಿಷರು, ಕೋಸಲರು, ಕಾಶಿದೇಶೀಯರು, ಅಂಗರು, ಕಳಿಂಗರು, ಮಹಧರು, ಚೇದಿದೇಶೀಯರು ಮಹಾಭಾಗರು ಮತ್ತು ಶಾಶ್ವತ ಧರ್ಮವನ್ನು ತಿಳಿದವರು. ಮತ್ಸ್ಯದೇಶದಿಂದ ಹಿಡಿದು ಕುರುಪಾಂಚಾಲ ದೇಶದ ವರೆಗೂ, ನೈಮಿಷಾರಣ್ಯದಿಂದ

ಹಿಡಿದು ಚೇದಿ ದೇಶದ ವರೆಗೂ ಇರುವ ದೇಶಗಳಲ್ಲಿ ವಾಸಿಸುವ ಜನರು, - ಮದ್ರದೇಶದವರು ಮತ್ತು ಪಂಚನದ ದೇಶದವರನ್ನು ಬಿಟ್ಟು – ಸಂತರಾಗಿದ್ದು ಪುರಾಣ ಧರ್ಮದಂತೆ ಜೀವನ ನಡೆಸುತ್ತಾರೆ. ನೀನು ಆ ಜನರ ರಕ್ಷಕ ಮತ್ತು ರಾಜನಾಗಿದ್ದುಕೊಂಡು ಅವರ ಶುಭ-ದುಷ್ಕೃತಗಳಲ್ಲಿ ಆರನೆಯ ಒಂದು ಭಾಗಕ್ಕೆ ಅರ್ಹನಾಗಿರುವೆ. ಇದನ್ನು ತಿಳಿದು ಧರ್ಮದ ವಿಷಯದಲ್ಲಿ ಬೇರೆ ಯಾವ ಮಾತನ್ನೂ ಆಡನಾಡದೇ ಜಡನಾಗಿ ಸುಮ್ಮನಿದ್ದುಬಿಡು! ಅಥವಾ ಅವರನ್ನು ರಕ್ಷಿಸದೇ ಇರುವ ನೀನು ಕೇವಲ ಅವರ ದುಷ್ಕೃತಗಳಿಗೆ ಭಾಗಿಯಾಗುವೆ. ಪ್ರಜೆಗಳನ್ನು ರಕ್ಷಿಸುವವನಿಗೆ ಮಾತ್ರ ಅವರ ಪುಣ್ಯಗಳ ಭಾಗವು ದೊರೆಯುತ್ತದೆ. ಆದರೆ ನೀನು ಆ ಪುಣ್ಯಗಳ ಭಾಗಧಾರಿಯಲ್ಲ!

ಹಿಂದೆ ಸರ್ವದೇಶಗಳಲ್ಲಿ ಶಾಶ್ವತವಾಗಿರುವ ಧರ್ಮವನ್ನು ಗೌರವಿಸುತ್ತಾ ಪಿತಾಮಹನು ಪಾಂಚನದ ದೇಶಗಳ ಧರ್ಮವನ್ನು ನೋಡಿ ಧಿಕ್ಕಾರ ಎಂದಿದ್ದನು. ಅಶುಭ ಕರ್ಮಗಳನ್ನು ಮಾಡುವ ಇವರು ಸಂಸ್ಕಾರ ಹೀನರು ಎಂದು ಪಾಂಚನದರ ಧರ್ಮವನ್ನು ಪಿತಾಮಹನು

ಅವಮಾನಿಸಿದ್ದನು. ಇದನ್ನು ಅರ್ಥಮಾಡಿಕೋ. ಇನ್ನೂ ಇದೆ. ನಿನಗೆ ಹೇಳುತ್ತೇನೆ! ಕಲ್ಮಾಷಪಾದನು ರಾಕ್ಷಸನಾಗಿದ್ದಾಗ ಸರೋವರವೊಂದರಲ್ಲಿ ಮುಳುಗಿ ಹೀಗೆ ಹೇಳಿದ್ದನು: "ಕ್ಷತ್ರಿಯನಿಗೆ ಭಿಕ್ಷಾವೃತ್ತಿಯು ಹೊಲಸು. ಬ್ರಾಹ್ಮಣನಿಗೆ ಸುಳ್ಳು ಹೇಳುವುದು ಹೊಲಸು. ಪೃಥ್ವಿಯಲ್ಲಿ ಬಾಹ್ಲೀಕರು ಹೊಲಸು ಜನರು. ಮತ್ತು ಸ್ತ್ರೀಯರಲ್ಲಿ ಮದ್ರ ಸ್ತ್ರೀಯರು ದೋಷಯುಕ್ತರು." ಮುಳುಗುತ್ತಿದ್ದ ಅವನನ್ನು ಮೇಲಕ್ಕೆತ್ತಿ ಓರ್ವ ನಿಶಾಚರನು ಕೇಳಲು ಅವನು ಹೇಳಿದುದನ್ನು ಕೇಳು: "ಮನುಷ್ಯರಲ್ಲಿ ಮ್ಲೇಚ್ಛರು ಹೊಲಸರು. ಮ್ಲೇಚ್ಛರಲ್ಲಿ ಹೆಂಡವನ್ನು ಮಾರುವವನು ಅಥವಾ ಇಳಿಸುವವನು ಹೊಲಸು. ಹೆಂಡಮಾರುವವರಲ್ಲಿ ನಪುಂಸಕರು ಹೊಲಸು. ನಪುಂಸಕರಲ್ಲಿ ರಾಜಪುರೋಹಿತರು ಹೊಲಸು. ನೀನೇನಾದರೂ ನನ್ನನ್ನು ಉದ್ಧರಿಸದಿದ್ದರೆ ಅಂತಹ ರಾಜಪುರೋಹಿತರಿಗೂ, ಕ್ಷತ್ರಿಯರನ್ನೇ ಪುರೋಹಿತನನ್ನಾಗಿ ಇಟ್ಟುಕೊಂಡವರಿಗೂ, ಮದ್ರಕರಿಗೂ ಇರುವ ಮಹಾದೋಷಗಳು ನಿನ್ನದಾಗುವವು. ರಾಕ್ಷಸರ ಉಪದ್ರವವಿರುವವರಿಗೆ ಮತ್ತು ವಿಷದಿಂದ ವೀರ್ಯವು ಹತವಾಗಿರುವವರಿಗೆ ರಾಕ್ಷಸರ ಉಪದ್ರವವನ್ನು

ತಪ್ಪಿಸಿಕೊಳ್ಳಲು ಮತ್ತು ವಿಷದ ಪ್ರಭಾವವನ್ನು ಹೋಗಲಾಡಿಸಲು ರಾಕ್ಷಸಭೈಷಜವೆಂಬ ಈ ಸಿದ್ಧವಚನವಿದೆ: “ಪಾಂಚಾಲರು ಬ್ರಹ್ಮಕರ್ಮ ಮಾಡುವವರು. ಕೌರವೇಯರು ಸ್ವಧರ್ಮನಿರತರು. ಮತ್ಸ್ಯರು ಸತ್ಯವಾದಿಗಳು. ಶೂರಸೇನರು ಯಾಜ್ಞಿಕರು. ಪೂರ್ವದೇಶದವರು ದಾಸರು ಮತ್ತು ದಕ್ಷಿಣದೇಶದವರು ವೃಷಲರು. ಬಾಹ್ಲೀಕ ದೇಶದವರು ಕಳ್ಳರು ಮತ್ತು ಸೌರಾಷ್ಟ್ರದವರು ವರ್ಣಸಂಕರರು. ಕೃತಘ್ನತೆ, ಪರರ ವಿತ್ತವನ್ನು ಅಪಹರಿಸುವುದು, ಸುರಾಪಾನ, ಗುರುಪತ್ನಿಯರೊಡನೆ ಸಮಾಗಮ ಮತ್ತು ಕಠೋರವಾಗಿರುವುದು ಇವುಗಳು ಯಾರ ಧರ್ಮವಾಗಿವೆಯೋ ಅಂತಹ ಪಂಚನದ ದೇಶದ ಅರಟ್ಟಕರಿಗೆ ಅಧರ್ಮವೆಂಬುದೇ ಇಲ್ಲ. ಅವರಿಗೆ ಧಿಕ್ಕಾರವಿರಲಿ! ಪಾಂಚಾಲ, ಕೌರವ, ನೈಮಿಷ, ಮತ್ತು ಮತ್ಸ್ಯದೇಶಗಳ ಜನರು ಧರ್ಮವನ್ನು ತಿಳಿದವರು. ಕಲಿಂಗರು, ಅಂಗರು, ಮತ್ತು ಮಾಗಧರ ವೃದ್ಧರು ಶಿಷ್ಟಾಚಾರ ಧರ್ಮಾಚಾರಗಳಿಂದ ಜೀವನ ನಡೆಸುತ್ತಾರೆ. ಜಾತವೇದನೇ ಮೊದಲಾದ ದೇವತೆಗಳು ಪೂರ್ವದಿಕ್ಕನ್ನು ಆಶ್ರಯಿಸಿದ್ದಾರೆ. ಯಮನಿಂದ ರಕ್ಷಿಸಲ್ಪಟ್ಟಿರುವ ಶುಭಕರ್ಮಿ ಪಿತೃಗಳು

ದಕ್ಷಿಣದಿಕ್ಕನ್ನು ಆಶ್ರಯಿಸಿದ್ದಾರೆ. ಅಸುರರನ್ನು ಪಾಲಿಸುತ್ತಾ ಬಲಶಾಲೀ ವರುಣನು ಪಶ್ಚಿಮ ದಿಕ್ಕನ್ನು ಪಾಲಿಸುತ್ತಾನೆ. ಬ್ರಹ್ಮಣ್ಯ ಭಗವಾನ್ ಸೋಮನು ಬ್ರಾಹ್ಮಣರೊಂದಿಗೆ ಉತ್ತರ ದಿಕ್ಕನ್ನು ರಕ್ಷಿಸುತ್ತಾನೆ. ಪಿಶಾಚಿಗಳು ಹಿಮವತ್ಪರ್ವತವನ್ನೂ ಗುಹ್ಯಕರು ಗಂಧಮಾದನಪರ್ವತವನ್ನೂ ರಕ್ಷಿಸುತ್ತಾರೆ. ಲೋಕದಲ್ಲಿರುವ ಸರ್ವ ಭೂತಗಳನ್ನೂ ನಿಶ್ಚಯವಾಗಿ ಜನಾರ್ದನ ವಿಷ್ಣುವು ರಕ್ಷಿಸುತ್ತಾನೆ. ಮಗಧರು ಇಂಗಿತದಿಂದ ಮತ್ತು ಕೋಸಲರು ದೃಷ್ಟಿಮಾತ್ರದಿಂದ ತಿಳಿದುಕೊಳ್ಳಬಲ್ಲರು. ಕುರು-ಪಾಂಚಾಲರು ಅರ್ಧಮಾತಿನಿಂದಲೇ ಸಂಪೂರ್ಣ ವಿಷಯವನ್ನು ಗ್ರಹಿಸಿಕೊಂಡುಬಿಡುತ್ತಾರೆ. ಶಾಲ್ವದೇಶದವರು ವಿಷಯವನ್ನು ಸಂಪೂರ್ಣವಾಗಿ ಹೇಳಿದನಂತರವೇ ಗ್ರಹಿಸಿಕೊಳ್ಳಬಲ್ಲರು. ಆದರೆ ಪರ್ವತದೇಶದವರು ವಿಷಯವನ್ನು ಸಂಪೂರ್ಣವಾಗಿ ಹೇಳಿದಾಗಲೂ ಗ್ರಹಿಸಲಾರರು. ಯವನರು ಸರ್ವಜ್ಞರೂ, ವಿಶೇಷವಾಗಿ ಶೂರರೂ ಆಗಿದ್ದಾರೆ. ಮ್ಲೇಚ್ಛರು ತಮ್ಮದನ್ನು ಚೆನ್ನಾಗಿ ತಿಳಿದುಕೊಂಡವರಾಗಿದ್ದುಕೊಂಡು ಇತರ ಜನರಲ್ಲಿ ಅನುರಕ್ತಿಯನ್ನು ಹೊಂದಿರುವವರಲ್ಲ. ಬಾಹ್ಲೀಕರು ಹೇಳಿದುದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ ಮತ್ತು

ಕೆಲವು ಮದ್ರಕರಿಗೆ ಏನೂ ತಿಳಿಯುವುದಿಲ್ಲ.

ಶಲ್ಯ! ಅಂಥವನಾಗಿರುವ ನೀನು ನನಗೆ ಯಾವ ಉತ್ತರವನ್ನೂ ಕೊಡಬೇಕಾಗಿಲ್ಲ. ಇದನ್ನು ತಿಳಿದುಕೊಂಡು ಪುನಃ ಪ್ರತಿಕೂಲ ಮಾತುಗಳನ್ನು ಆಡಬೇಡ! ನಿನ್ನನ್ನೇ ಮೊದಲು ಸಂಹರಿಸಿ ನಂತರ ಕೇಶವಾರ್ಜುನರನ್ನು ಸಂಹರಿಸುವಂತಾಗದಿರಲಿ!”

ಶಲ್ಯನು ಹೇಳಿದನು:

“ಕರ್ಣ! ನೀನು ಅಧಿಪತಿಯಾಗಿರುವ ಅಂಗದೇಶದಲ್ಲಿ ರೋಗಿಗಳನ್ನು ಪರಿತ್ಯಜಿಸುತ್ತಾರೆ ಮತ್ತು ತಮ್ಮ ಪತ್ನಿ-ಮಕ್ಕಳನ್ನು ಮಾರುತ್ತಾರೆ. ರಥಾತಿರಥರನ್ನು ಎಣಿಸುವಾಗ ಭೀಷ್ಮನು ಹೇಳಿದ ನಿನ್ನಲ್ಲಿರುವ ದೋಷಗಳನ್ನು ತಿಳಿದುಕೊಂಡು ಶಾಂತನಾಗು. ಕ್ರೋಧಿಸಬೇಡ. ಎಲ್ಲ ಕಡೆಗಳಲ್ಲಿ ಬ್ರಾಹ್ಮಣರಿರುತ್ತಾರೆ. ಎಲ್ಲಕಡೆ ಕ್ಷತ್ರಿಯರೂ, ಹಾಗೆ ವೈಶ್ಯರು, ಶೂದ್ರರು, ಮತ್ತು ಸಾಧು ಸುವ್ರತ ಸ್ತ್ರೀಯರೂ ಇರುತ್ತಾರೆ. ದೇಶ ದೇಶಗಳಲ್ಲಿಯೂ ಪುರುಷರು ಪುರುಷರೊಂದಿಗೆ ಉಪಹಾಸ್ಯ ಮಾಡುತ್ತಾ, ಕಚ್ಚಾಡುತ್ತಾ, ಸ್ತ್ರೀಯರೊಂದಿಗೆ ರಮಿಸುತ್ತಾರೆ. ಮತ್ತೊಬ್ಬರ ದೋಷಕಥನದಲ್ಲಿ ಎಲ್ಲರೂ ಯಾವಾಗಲೂ ನಿಪುಣರಾಗಿಯೇ

ಇರುತ್ತಾರೆ. ತಮ್ಮಲ್ಲಿರುವ ದೋಷಗಳನ್ನು ತಿಳಿದುಕೊಳ್ಳುವುದೇ ಇಲ್ಲ. ಒಂದುವೇಳೆ ತಿಳಿದುಕೊಂಡರೂ ತಿಳಿಯದವರಂತೆಯೇ ನಡೆದುಕೊಳ್ಳುತ್ತಾರೆ.”

ಕರ್ಣನಾದರೋ ಉತ್ತರವನ್ನು ನೀಡಲಿಲ್ಲ. ಶಲ್ಯನೂ ಕೂಡ ಶತ್ರುಗಳನ್ನು ಎದುರಿಸಿ ನಡೆದನು. ರಾಧೇಯನು ನಸುನಗುತ್ತಾ “ಮುಂದೆ ಹೋಗು!” ಎಂದು ಶಲ್ಯನನ್ನು ಪ್ರಚೋದಿಸಿದನು.

## ಹದಿನೇಳನೇ ದಿನದ ಯುದ್ಧ

ಧೃಷ್ಟದ್ಯುಮ್ನನಿಂದ ರಕ್ಷಿತ ಶತ್ರುಸೇನೆಯಿಂದ ಭೇದಿಸಲು ಅಸಾಧ್ಯವಾದ ಪಾರ್ಥರ ಅಪ್ರತಿಮ ವ್ಯೂಹವನ್ನು ನೋಡಿ ಕರ್ಣನು ರಥಘೋಷ-ಸಿಂಹನಾದ-ವಾದ್ಯನಿನಾದಗಳೊಂದಿಗೆ ಮೇದಿನಿಯನ್ನು ನಡುಗಿಸುತ್ತಾ ಮುಂದುವರೆದನು. ಕ್ರೋಧದಿಂದ ನಡುಗುತ್ತಾ ಆ ಮಹಾತೇಜಸ್ವಿಯು ಯಥಾವತ್ತಾಗಿ ಪ್ರತಿವ್ಯೂಹವನ್ನು ರಚಿಸಿ ಅಸುರೀಸೇನೆಯನ್ನು ಮಘವಾನನು ಹೇಗೋ ಹಾಗೆ ಪಾಂಡವೀ ಸೇನೆಯನ್ನು ವಧಿಸುತ್ತಾ ಯುಧಿಷ್ಠಿರನನ್ನೂ ಗಾಯಗೊಳಿಸಿ ಅವನನ್ನು ತನ್ನ ಬಲಕ್ಕೆ ಮಾಡಿಕೊಂಡನು.

ಕೃಪ, ಮಾಗಧ, ಮತ್ತು ಕೃತವರ್ಮರು ಸೇನೆಯ ಎಡಭಾಗದಲ್ಲಿದ್ದರು.

ಅವರ ಬಲಭಾಗದಲ್ಲಿ ಶಕುನಿ-ಉಲೂಕರು ಥಳಥಳಿಸುವ ಪ್ರಾಸಗಳನ್ನು ಹಿಡಿದಿದ್ದ ಕುದುರೆ ಸವಾರರೊಂದಿಗೆ ಕೌರವ ಸೇನೆಯನ್ನು ರಕ್ಷಿಸುತ್ತಿದ್ದರು. ಗಾಂಧಾರ ಸೈನಿಕರೂ, ಪರ್ವತದೇಶದವರೂ, ಪಿಶಾಚಿಗಳಂತೆ ದುರ್ದರ್ಶರಾದ ಮೂವತ್ನಾಲ್ಕು ಸಾವಿರ ಸಂಶಪ್ತಕ ರಥಿಗಳು ಕೃಷ್ಣಾರ್ಜುನರನ್ನು ಸಂಹರಿಸಲು ಬಯಸಿ ಕೌರವರೊಂದಿಗೆ ಕೂಡಿಕೊಂಡು ವ್ಯೂಹದ ಎಡಭಾಗವನ್ನು ರಕ್ಷಿಸುತ್ತಿದ್ದರು. ಅವರ ಪ್ರಪಕ್ಷದಲ್ಲಿ ಶಕರು ಮತ್ತು ಯವನರೊಂದಿಗೆ ಕಾಂಬೋಜರು ಸೂತಪುತ್ರನ ನಿರ್ದೇಶನದಂತೆ ರಥ-ಕುದುರೆ-ಪಾದಾತಿಗಳೊಂದಿಗೆ ಅರ್ಜುನ-ಕೇಶವರನ್ನು ಆಹ್ವಾನಿಸುತ್ತಾ ನಿಂತಿದ್ದರು. ಸೇನೆಯ ಮಧ್ಯಭಾಗದಲ್ಲಿ ಚಿತ್ರಿತ ಕವಚವನ್ನೂ ಅಂಗದ-ಮಾಲೆಗಳನ್ನೂ ಧರಿಸಿದ್ದ ಕರ್ಣನು ಸೇನೆಯ ಮುಂಬಾಗವನ್ನು ರಕ್ಷಿಸುತ್ತಾ ನಿಂತಿದ್ದನು. ಕುಪಿತ ಪುತ್ರರಿಂದ ರಕ್ಷಿಸಲ್ಪಟ್ಟಿದ್ದ ಆ ಶಸ್ತ್ರಭೃತರಲ್ಲಿ ಶ್ರೇಷ್ಠ ಸೇನಾಪತಿ ವೀರ ಕರ್ಣನು ಸೇನೆಯನ್ನು ನಡೆಸುತ್ತಾ ಸುಶೋಭಿಸಿದನು. ಉಕ್ಕಿನಂಥಹ ಮಹಾಬಾಹುಗಳುಳ್ಳ ಸೂರ್ಯ-ಅಗ್ನಿಗಳ ತೇಜಸ್ಸುಳ್ಳ, ಕಂದು-ಹಳದೀ ಬಣ್ಣದ ಕಣ್ಣುಗಳುಳ್ಳ ನೋಡಲು ಸುಂದರನಾಗಿದ್ದ ದುಃಶಾಸನನು ಮಹಾಗಜದ ಭುಜದ ಮೇಲೆ ಕುಳಿತು ವ್ಯೂಹದ ಹಿಂಬಾಗವನ್ನು ರಕ್ಷಿಸುತ್ತಿದ್ದನು. ಅವನನ್ನು ಅನುಸರಿಸಿ ಸ್ವಯಂ ದುರ್ಯೋಧನ ನೃಪನು ವಿಚಿತ್ರ ಅಶ್ವಸೇನೆಗಳು ಮತ್ತು

ಸಹೋದರರಿಂದ ರಕ್ಷಿತನಾಗಿ ಮದ್ರಕ-ಕೇಕಯರಿಂದ ರಕ್ಷಿತನಾಗಿ ದೇವತೆಗಳಿಂದ ಸುತ್ತುವರೆಯಲ್ಪಟ್ಟ ಶತಕ್ರತುವಂತೆ ಶೋಭಿಸುತ್ತಾ ನಡೆದನು. ಅಶ್ವತ್ಥಾಮ ಮತ್ತು ಕುರುಗಳ ಪ್ರಮುಖ ಮಹಾರಥರು ಹಾಗೂ ನಿತ್ಯಮತ್ತ ಆನೆಗಳು, ಶೂರ ಮ್ಲೇಚ್ಛರು ವರ್ಷಾಕಾಲದ ಮೋಡಗಳಂತೆ ಬಾಣಗಳ ಮಳೆಸುರಿಸುತ್ತಾ ರಥಸೇನೆಯನ್ನು ಅನುಸರಿಸಿ ಹೋಗುತ್ತಿದ್ದರು. ಆ ಮದಗಜಗಳು ವೈಜಯಂತಿಯಂತೆ ಹೊಳೆಯುತ್ತಿದ್ದ ಧ್ವಜಗಳಿಂದಲೂ ಪರಮಾಯುಧಗಳಿಂದಲೂ ಕುಳಿತಿದ್ದ ಮಾವುಟಿಗರಿಂದಲೂ ವೃಕ್ಷಗಳಿಂದ ಕೂಡಿದ ಪರ್ವತಗಳಂತೆ ಶೋಭಿಸುತ್ತಿದ್ದವು. ಆ ಆನೆಗಳ ಪಾದರಕ್ಷಕರಾದ ಸಹಸ್ರಾರು ಪಾದತಿಗಳು ಪಟ್ಟಿಷ-ಖಡ್ಗಗಳನ್ನು ಹಿಡಿದು ಶೂರರೂ ಯುದ್ಧದಿಂದ ಹಿಂದಿರುಗದವರೂ ಆಗಿದ್ದರು. ಅಧಿಕವಾಗಿ ಸಮಲಂಕೃತವಾಗಿದ್ದ, ಮಾವುಟಿಗರು ಮತ್ತು ರಥಗಳಿಂದ ಕೂಡಿದ್ದ ಆ ವ್ಯೂಹರಾಜವು ದೇವಾಸುರರ ಸೇನೆಗಳಂತೆ ಕಾಣುತ್ತಿತ್ತು. ಬೃಹಸ್ಪತಿಯ ಹೇಳಿಕೆಯಂತೆಯೇ ನಾಯಕನಿಂದ ರಚಿಸಲ್ಪಟ್ಟ ಆ ಮಹಾವ್ಯೂಹವು ನರ್ತಿಸುತ್ತಿರುವಂತೆ ಕಾಣುತ್ತಿದ್ದು ಶತ್ರುಗಳಲ್ಲಿ ಭಯವನ್ನುಂಟುಮಾಡುತ್ತಿತ್ತು. ಅದರ ಪಕ್ಷ-ಪ್ರಪಕ್ಷಗಳಲ್ಲಿದ್ದ ಯುದ್ಧೋತ್ಸಾಹೀ ಅಶ್ವ-ರಥ-ಆನೆಗಳು ಮಳೆಗಾಲದ ಮೋಡಗಳು ಮಳೆಗರೆಯುವಂತೆ ಶತ್ರುಸೇನೆಗಳ ಮೇಲೆ ಬೀಳುತ್ತಿದ್ದವು.

ಸೇನಾಮುಖದಲ್ಲಿ ಕರ್ಣನನ್ನು ನೋಡಿ ರಾಜಾ ಯುಧಿಷ್ಠಿರನು ಏಕವೀರ ಧನಂಜಯನಿಗೆ ಇಂತೆಂದನು:

> "ಅರ್ಜುನ! ಕರ್ಣನು ರಚಿಸಿದ ಮಹಾವ್ಯೂಹವನ್ನು ನೋಡು! ಅಮಿತ್ರರ ಈ ಮಹಾಬಲವನ್ನು ಚೆನ್ನಾಗಿ ನೋಡಿ ಅವರಿಗೆ ಪ್ರತಿಯಾಗಿ ಯಾವುದು ಸರಿಯಾದುದೋ ಅದನ್ನು ಆಲೋಚಿಸಿ ಯುದ್ಧ ನೀತಿಯನ್ನು ಬಳಸುವವನ್ನಾಗು!"

ರಾಜನು ಹೀಗೆ ಹೇಳಲು ಅರ್ಜುನನು ಅಂಜಲೀ ಬದ್ಧನಾಗಿ ನೃಪನಿಗೆ ಹೇಳಿದನು: "ನೀನು ಹೇಳಿದುದೆಲ್ಲವೂ ಸರಿಯೇ! ಸುಳ್ಳಲ್ಲ! ಭಾರತ!"

ಯುಧಿಷ್ಠಿರನು ಹೇಳಿದನು:

> "ನೀನು ರಾಧೇಯನನ್ನು, ಭೀಮಸೇನನು ಸುಯೋಧನನನ್ನು, ನಕುಲನು ವೃಷಸೇನನನ್ನು, ಸಹದೇವನು ಸೌಬಲನನ್ನು, ಶತಾನೀಕನು ದುಃಶಾಸನನನ್ನು, ಸಾತ್ಯಕಿಯು ಕೃತವರ್ಮನನ್ನು, ಹಾಗೆಯೇ ಧೃಷ್ಟದ್ಯುಮ್ನನು ದ್ರೌಣಿಯನ್ನು ಮತ್ತು ಸ್ವಯಂ ನಾನು ಕೃಪನನ್ನು ಹೋರಾಡೋಣ. ದ್ರೌಪದೇಯರು ಶಿಖಂಡಿಯೊಡಗೂಡಿ ಉಳಿದಿರುವ ಧಾರ್ತರಾಷ್ಟ್ರರೊಂದಿಗೆ ಯುದ್ಧಮಾಡಲಿ. ಹೀಗೆ ನಮ್ಮ ಕಡೆಯವರು

ಶತ್ರುಸೇನೆಗಳೊಡನೆ ಯುದ್ಧಮಾಡಿ ಶತ್ರುಗಳನ್ನು ಸಂಹರಿಸಲಿ!”

ಧರ್ಮರಾಜನು ಹೀಗೆ ಹೇಳಲು ಧನಂಜಯನು ಹಾಗೆಯೇ ಆಗಲೆಂದು ಹೇಳಿ ತನ್ನ ಸೇನೆಗಳಿಗೆ ಆದೇಶವನ್ನಿತ್ತು ವ್ಯೂಹದ ಅಗ್ರಭಾಗದಲ್ಲಿ ತಾನೇ ಉಪಸ್ಥಿತನಾದನು.

ದುರ್ಯೋಧನನ ದುರ್ನೀತಿಯಿಂದಾಗಿ ರಚಿಸಿದ ವ್ಯೂಹಕ್ಕೆ ಪ್ರತಿಯಾಗಿ ಮಹಾಬಲ ಅರ್ಜುನನು ತನ್ನ ಸೇನೆಯನ್ನೂ ವ್ಯೂಹಕ್ರಮದಲ್ಲಿ ನಿಲ್ಲಿಸಿದನು. ಕುದುರೆಸವಾರರು, ಗಜಸ್ಯೆನಿಕರು, ಪದಾತಿಗಳು ಮತ್ತು ರಥಸಂಕುಲಗಳಿಂದ ಕೂಡಿದ್ದ ಮತ್ತು ಧೃಷ್ಟದ್ಯುಮ್ನನ ನಾಯಕತ್ವದಲ್ಲಿದ್ದ ಆ ಮಹಾಸೇನೆಯು ಶೋಭಿಸುತ್ತಿತ್ತು. ಪಾರಿವಾಳಗಳ ಬಣ್ಣದ ಕುದುರೆಗಳನ್ನು ಹೊಂದಿದ್ದ, ಚಂದ್ರಾದಿತ್ಯ ಸಮದ್ಯುತಿ ಧನ್ವೀ ಪಾರ್ಷತ ಧೃಷ್ಟದ್ಯುಮ್ನನು ಮೂರ್ತಿಮತ್ತಾಗಿ ನಿಂತಿರುವ ಕಾಲನಂತೆಯೇ ಪ್ರಕಾಶಿಸುತ್ತಿದ್ದನು. ಭಯಂಕರರಾಗಿ ಕಾಣುತ್ತಿದ್ದ ಯುದ್ಧೋತ್ಸುಕ ದ್ರೌಪದೇಯರು ಸೈನಿಕರೊಂದಿಗೆ ತಾರಾಗಣಗಳು ಚಂದ್ರನನ್ನು ಹೇಗೋ ಹಾಗೆ ಪಾರ್ಷತನನ್ನು ರಕ್ಷಿಸುತ್ತಿದ್ದರು.

ಅದ್ಭುತವಾಗಿ ಕಾಣುತ್ತಿದ್ದ ಅರ್ಜುನನ ರಥವು ಬರುತ್ತಿರುವುದನ್ನು ಕಂಡು ಶಲ್ಯನು ಯುದ್ಧದುರ್ಮದ ಆಧಿರಥಿ ಕರ್ಣನಿಗೆ ಪುನಃ

ಹೇಳಿದನು:

“ಯಾರನ್ನು ನೀನು ಎಲ್ಲಿದ್ದಾನೆಂದು ಕೇಳುತ್ತಿದ್ದೆಯೋ ಆ ಶ್ವೇತಾಶ್ವ ಕೃಷ್ಣಸಾರಥಿ ಕೌಂತೇಯನು ಶತ್ರುಗಳನ್ನು ಸಂಹರಿಸಿ ಇಗೋ ಇಲ್ಲಿಗೇ ಬರುತ್ತಿದ್ದಾನೆ. ಅವರ ರಥಚಕ್ರಗಳು ಅತಿದೊಡ್ಡ ತುಮುಲ ಶಬ್ಧವನ್ನುಂಟುಮಾಡುತ್ತಿದೆ. ರಥಚಲನದಿಂದ ಮೇಲೆದ್ದ ಧೂಳು ಆಕಾಶವನ್ನೂ ಆವರಿಸಿ ನಿಂತಿದೆ. ರಥಚಕ್ರಗಳ ಸಂಘಟ್ಟನೆಯಿಂದ ಮೇದಿನಿಯೂ ಕಂಪಿಸುತ್ತಿದೆ. ನಿನ್ನ ಸೇನೆಯ ಸುತ್ತಲೂ ಚಂಡಮಾರುತವು ಬೀಸುತ್ತಿದೆ. ಮಾಂಸಾಶೀ ಮೃಗಗಳು ಸುತ್ತಾಡುತ್ತಿವೆ. ಮೃಗಗಳು ಭೈರವ ಕೂಗನ್ನು ಕೂಗುತ್ತಿವೆ. ಮಹಾಘೋರ, ಭಯಂಕರ, ಲೋಮಹರ್ಷಣ, ಮೇಘಸಂಕಾಶ ಕಬಂಧ ಕೇತುಗ್ರಹವು ಸೂರ್ಯನನ್ನು ಆವರಿಸಿ ನಿಂತಿದೆ! ಅಲ್ಲಿ ನೋಡು! ನಾಲ್ಕು ದಿಕ್ಕುಗಳಲ್ಲಿಯೂ ಬಹುವಿಧದ ಮೃಗ ಸಮೂಹಗಳು, ಬಲಶಾಲೀ ಮದಿಸಿದ ಹುಲಿಗಳೂ ಸೂರ್ಯನನ್ನೇ ದಿಟ್ಟಿಸಿ ನೋಡುತ್ತಿವೆ! ಸಹಸ್ರಾರು ಘೋರ ರಣಹದ್ದುಗಳೂ ಹದ್ದುಗಳೂ ಒಂದೇ ಕಡೆ ಸೇರಿ ಪರಸ್ಪರರನ್ನು ವೀಕ್ಷಿಸುತ್ತಾ ಕೂಗುತ್ತಿವೆ! ನಿನ್ನ ಮಹಾರಥದ

ಮೇಲೆ ಹಾರಿಸಿರುವ ಬಣ್ಣ-ಬಣ್ಣದ ಶ್ರೇಷ್ಠ ಚಾಮರಗಳು ಇದ್ದಕ್ಕಿದ್ದಂತೆಯೇ ಪ್ರಜ್ವಲಿಸುತ್ತಿವೆ. ಧ್ವಜವೂ ಕಂಪಿಸುತ್ತಿದೆ. ಆಕಾಶದಲ್ಲಿ ಗರುಡನಂತೆ ಹಾರಿಹೋಗುವ ಮಹಾಕಾಯದ ಮಹಾವೇಗದ ನಿನ್ನ ಕುದುರೆಗಳು ಥರಥರನೆ ನಡುಗುತ್ತಿರುವುದನ್ನು ನೋಡು! ಇಂತಹ ನಿಮಿತ್ತಗಳು ಕಾಣುತ್ತಿರಲು ನಿಶ್ಚಯವಾಗಿಯೂ ಇಂದು ನೂರಾರು ಸಹಸ್ರಾರು ಪಾರ್ಥಿವರು ಹತರಾಗಿ ಭೂಮಿಯ ಮೇಲೆ ಮಲಗುತ್ತಾರೆ! ಎಲ್ಲೆಡೆಯಲ್ಲಿಯೂ ಶಂಖ, ಅನಕ ಮತ್ತು ಮೃದಂಗಗಳ ಲೋಮಹರ್ಷಣ ತುಮುಲ ಶಬ್ಧಗಳು ಕೇಳಿಬರುತ್ತಿವೆ! ಬಾಣಗಳ ಶಬ್ಧವನ್ನೂ, ಬಹುವಿಧದ ನರ-ಅಶ್ವ-ರಥಗಳ ಶಬ್ಧಗಳನ್ನೂ, ಮಹಾತ್ಮರ ಧನುಸ್ಸಿನ ಟೇಂಕಾರ ಮತ್ತು ಚಪ್ಪಾಳೆಯ ಶಬ್ಧಗಳನ್ನೂ ಕೇಳು! ಅವನ ರಥದ ಧ್ವಜದಂಡಗಳ ಮೇಲೆ ಸುವರ್ಣ-ರಜತಗಳಿಂದ ಚಿತ್ರಿತವಾದ ಬಟ್ಟೆಗಳಿಂದ ಶಿಲ್ಪಿಗಳು ನಿರ್ಮಿಸಿದ ನಾನಾವರ್ಣಗಳ ಪತಾಕೆಗಳು ಗಾಳಿಯಲ್ಲಿ ಹಾರಾಡಿ ಬಹಳವಾಗಿ ಪ್ರಕಾಶಿಸುತ್ತಿವೆ! ಬಂಗಾರದ ಚಂದ್ರ, ನಕ್ಷತ್ರ ಮತ್ತು ಸೂರ್ಯರಿರುವ ಕಿಂಕಿಣೀಯುಕ್ತ ಅರ್ಜುನನ ಪತಾಕೆಗಳು ಮೋಡಗಳಲ್ಲಿರುವ ಮಿಂಚಿನಂತೆ ರಾರಾಜಿಸುತ್ತಿರುವುದನ್ನು

ನೋಡು! ಗಾಳಿಗೆ ಸಿಲುಕಿದ ಅವನ ಧ್ವಜಗಳು ಕಣ-ಕಣ ಶಬ್ಧಮಾಡುತ್ತಿವೆ. ಪತಾಕೆಗಳುಳ್ಳ ಆ ರಥಗಳು ಮಹಾತ್ಮ ಪಾಂಚಾಲರದ್ದು. ನಿನ್ನ ಕಡೆಯ ಆನೆ-ಕುದುರೆ-ರಥ-ಪದಾತಿಗಳ ಗುಂಪುಗಳನ್ನು ಸಂಹರಿಸುತ್ತಿರುವ ಅವನ ಧ್ವಜಾಗ್ರವು ಕಾಣಿಸುತ್ತಿದೆ. ಧನುಸ್ಸಿನ ಟೇಂಕಾರವೂ ಕೇಳಿಸುತ್ತಿದೆ. ನೀನು ಎಲ್ಲಿರುವನೆಂದು ಕೇಳುತ್ತಿದ್ದ ಆ ವೀರ ಶ್ವೇತಾಶ್ವ ಕೃಷ್ಣಸಾರಥಿ, ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುತ್ತಿರುವ ಅರ್ಜುನನನ್ನೇ ನೀನು ಇಂದು ನೋಡುವೆ! ಇಂದು ಒಂದೇ ರಥದಲ್ಲಿ ಕುಳಿತಿರುವ ಆ ಇಬ್ಬರು ಪುರುಷವ್ಯಾಘ್ರ, ಲೋಹಿತಾಕ್ಷ, ಪರಂತಪ ವಾಸುದೇವ-ಅರ್ಜುನರನ್ನು ನೀನು ನೋಡುವೆ! ಯಾರ ಸಾರಥಿಯು ವಾರ್ಷ್ಣೇಯನೋ ಮತ್ತು ಯಾರ ಧನುಸ್ಸು ಗಾಂಡೀವವೋ ಆ ಅರ್ಜುನನನ್ನು ನೀನು ಸಂಹರಿಸಿದೆಯಾದರೆ ನೀನೇ ನಮಗೆ ರಾಜನಾಗುವೆ! ಸಂಶಪ್ತಕರಿಂದ ಆಹ್ವಾನಿತರಾಗಿ ಅವರನ್ನೇ ಎದುರಿಸಿ ಅವನು ಹೋಗಿದ್ದನು. ಬಲಿಷ್ಟ ಅರ್ಜುನನು ಸಂಗ್ರಾಮದಲ್ಲಿ ಶತ್ರುಗಳೊಡನೆ ಕದನವಾಡುತ್ತಾನೆ!”

ಹೀಗೆ ಹೇಳುತ್ತಿರುವ ಮದ್ರೇಶನ ಮೇಳೆ ಕರ್ಣನು ಕೋಪಗೊಂಡು

ಇಂತೆಂದನು:

“ನೋಡು! ಕ್ರುದ್ಧ ಸಂಶಪ್ತಕರು ಅವನನ್ನು ಎಲ್ಲಕಡೆಗಳಿಂದ ಮುತ್ತಿಗೆ ಹಾಕಿದ್ದಾರೆ! ಮೋಡಗಳಿಂದ ಮುಸುಕಲ್ಪಟ್ಟ ಸೂರ್ಯನಂತೆ ಪಾರ್ಥನು ಕಾಣುತ್ತಲೇ ಇಲ್ಲ! ಶಲ್ಯ! ಇದೇ ಅರ್ಜುನನ ಅಂತ್ಯವೆಂದು ಸೇನೆಗಳು ಶೋಕಸಾಗರದಲ್ಲಿ ಮುಳುಗಿವೆ!”

ಶಲ್ಯನು ಹೇಳಿದನು:

“ವರುಣನನ್ನು ನೀರಿನಿಂದ ಅಥವಾ ಇಂಧನದಿಂದ ಪಾವಕನನ್ನು ಯಾರುತಾನೇ ನಾಶಗೊಳಿಸಬಲ್ಲರು? ಯಾರುತಾನೇ ವಾಯುವನ್ನು ಬಂಧಿಸಬಲ್ಲರು ಅಥವಾ ಮಹಾರ್ಣವವನ್ನು ಯಾರುತಾನೇ ಕುಡಿದುಬಿಡಬಲ್ಲರು? ಯುದ್ಧದಲ್ಲಿ ಪಾರ್ಥನನ್ನು ನಿಗ್ರಹಿಸುವುದೂ ಇದೇ ರೀತಿಯದೆಂದು ನನಗನ್ನಿಸುತ್ತದೆ. ಇಂದ್ರನ ಸಹಿತರಾಗಿ ಸುರಾಸುರರೆಲ್ಲರಿಗೂ ಅರ್ಜುನನನ್ನು ಗೆಲ್ಲಲು ಶಕ್ಯವಿಲ್ಲ. ಅಥವಾ ಅವನನ್ನು ಗೆಲ್ಲುತ್ತೇನೆ ಎಂದು ಹೇಳುವುದರಿಂದಲೇ ನಿನಗೆ ಸಂತೋಷವಾಗುವುದಾದರೆ ಹಾಗೆ ಹೇಳಿ ಸಂತೋಷಪಡು! ಯುದ್ಧದಲ್ಲಿ ಇವನನ್ನು ಗೆಲ್ಲಲು ಶಕ್ಯವಿಲ್ಲ.

ನಿನ್ನ ಮನೋರಥವನ್ನು ಬದಲಾಯಿಸಿಕೋ! ಅರ್ಜುನನನ್ನು ಯಾರು ಸಮರದಲ್ಲಿ ಜಯಿಸಬಲ್ಲನೋ ಅವನು ಎರಡೂ ಬಾಹುಗಳಿಂದಲೇ ಭೂಮಿಯನ್ನು ಎತ್ತಬಲ್ಲನು. ಕ್ರುದ್ಧನಾಗಿ ಇರುವವುಗಳೆಲ್ಲವನ್ನೂ ದಹಿಸಬಲ್ಲನು. ಮತ್ತು ಸ್ವರ್ಗದಿಂದ ದೇವತೆಗಳನ್ನು ಬೀಳಿಸಬಲ್ಲನು. ಭಯಂಕರ, ಅಕ್ಲಿಷ್ಟಕಾರಿ, ಮೇರು ಪರ್ವತದಂತೆ ಅಚಲನಾಗಿ ಪ್ರಕಾಶಿಸುತ್ತಿರುವ ಮಹಾಬಾಹು ಕುಂತೀಸುತ ವೀರನನ್ನು ನೋಡು! ಅಸಹನಶೀಲ, ನಿತ್ಯಕೋಪಿಷ್ಟ, ವಿಜಯೇಚ್ಛು ವೀರ್ಯವಾನ್ ಭೀಮನು ಇಗೋ ಹಿಂದಿನ ವೈರವನ್ನು ನೆನಪಿಸಿಕೊಳ್ಳುತ್ತಾ ಯುದ್ಧಕ್ಕೆ ನಿಂತಿದ್ದಾನೆ! ಇಗೋ! ಶತ್ರುಗಳನ್ನು ನಾಶಗೊಳಿಸುವ ಪರಪುರಂಜಯ ಧರ್ಮಭೃತರಲ್ಲಿ ಶ್ರೇಷ್ಠ ಧರ್ಮರಾಜ ಯುಧಿಷ್ಠಿರನು ಯುದ್ಧಕ್ಕೆ ಅಣಿಯಾಗಿ ನಿಂತಿದ್ದಾನೆ! ಇಗೋ! ಅಶ್ವಿನಿಗಳಂತಿರುವ ನಕುಲ ಸಹದೇವ ಸೋದರರಿಬ್ಬರು ದುರ್ಜಯ ಪುರುಷವ್ಯಾಘ್ರರೂ ಯುದ್ಧಕ್ಕೆ ನಿಂತಿದ್ದಾರೆ! ಯುದ್ಧದಲ್ಲಿ ಅರ್ಜುನನಿಗೆ ಸಮನಾದ ಕೃಷ್ಣೆಯ ಎಲ್ಲ ಐವರು ಮಕ್ಕಳೂ ಐದು ಪರ್ವತಗಳಂತೆ ಯುದ್ಧಕ್ಕೆ ಅಣಿಯಾಗಿ ನಿಂತಿರುವುದು ಕಾಣುತ್ತಿದೆ! ಇಗೋ! ಧೃಷ್ಟದ್ಯುಮ್ನನ ನೇತೃತ್ವದಲ್ಲಿ ಪರಿಪುಷ್ಟ, ಸತ್ಯಜಿತ, ಪರಮೌಜಸ ವೀರ

ದ್ರುಪದ ಪುತ್ರರೂ ನಿಂತಿದ್ದಾರೆ!”

ಆ ಇಬ್ಬರು ಪುರುಷಸಿಂಹರೂ ಹೀಗೆ ಮಾತನಾಡಿಕೊಳ್ಳುತ್ತಿರಲು ಆ ಎರಡು ಸೇನೆಗಳೂ ಗಂಗೆ-ಯಮುನೆಯರಂತೆ ವೇಗದಿಂದ ಪರಸ್ಪರರೊಡನೆ ಸಮ್ಮಿಳಿತವಾದವು.

## ಅರ್ಜುನ-ಸಂಶಪ್ತಕರ ಯುದ್ಧ

ಹೀಗೆ ಸೇನೆಗಳನ್ನು ವ್ಯೂಹಕ್ರಮದಲ್ಲಿರಿಸಿ ಅರ್ಜುನನು ರಣದಲ್ಲಿ ಸಂಶಪ್ತಕರನ್ನು ನೋಡಿ ಕ್ರುದ್ಧನಾಗಿ ಗಾಂಡೀವ ಧನುಸ್ಸನ್ನು ಟೇಂಕರಿಸುತ್ತಾ ಅವರನ್ನು ಆಕ್ರಮಣಿಸಿದನು. ಆಗ ಪಾರ್ಥನನ್ನು ವಧಿಸಲು ಬಯಸಿದ್ದ ಸಂಶಪ್ತಕರು ವಿಜಯದ ಸಂಕಲ್ಪದಿಂದ ಅವನನ್ನು ಮುತ್ತಿದರು. ಅನೇಕ ಅಶ್ವಸಂಘಗಳನ್ನೂ, ಮದಿಸಿದ ಆನೆಗಳ ಸಂಕುಲಗಳನ್ನೂ, ಶೂರರಾದ ಪದಾತಿಸೈನಿಕರನ್ನೂ ಹೊಂದಿದ್ದ ಆ ಸೇನೆಯು ಅರ್ಜುನನನ್ನು ಆಕ್ರಮಣಿಸಿತು. ಆಗ ಅರ್ಜುನನು ಶತ್ರುಗಳ ರಥಗಳನ್ನೂ, ಕುದುರೆಗಳನ್ನೂ, ಧ್ವಜಗಳನ್ನೂ, ಆನೆಗಳನ್ನೂ, ಪದಾತಿಗಳನ್ನೂ, ರಥಪತಿಗಳನ್ನೂ, ಬಾಣಗಳನ್ನೂ, ಧನುಸ್ಸುಗಳನ್ನೂ, ಖಡ್ಗಗಳನ್ನೂ, ಚಕ್ರಗಳನ್ನೂ, ಪರಶ್ವಾಯುಧಗಳನ್ನೂ, ಆಯುಧಗಳನ್ನು ಮೇಲಿತ್ತಿದ್ದ ಬಾಹುಗಳನ್ನೂ, ಮೇಲೆತ್ತಿದ್ದ ಆಯುಧಗಳನ್ನೂ, ಶಿರಗಳನ್ನೂ, ಸಹಸ್ರಾರು ಸಂಖ್ಯೆಗಳನ್ನು ತುಂಡರಿಸಿದನು. ಪಾತಾಳದ

ಸುಳಿಯಂತಿದ್ದ ಆ ಸೇನೆಯ ಸುಳಿಯೊಳಗೆ ಸಿಲುಕಿದ್ದ ಅವನ ರಥವು ಮುಳುಗಿಹೋಯಿತೆಂದು ತಿಳಿದು ಸಂಶಪ್ತಕರು ಸಂತೋಷದಿಂದ ಸಿಂಹನಾದಗೈದರು. ಕ್ರುದ್ಧ ರುದ್ರನು ಪಶುಗಳನ್ನು ಹೇಗೋ ಹಾಗೆ ಬೀಭತ್ಸುವು ಪೂರ್ವದಿಕ್ಕಿನಲ್ಲಿದ್ದ ಶತ್ರುಗಳನ್ನು ಸಂಹರಿಸಿ, ಉತ್ತರ-ದಕ್ಷಿಣ-ಪಶ್ಚಿಮದಿಕ್ಕುಗಳಲ್ಲಿದ್ದವರನ್ನೂ ಸಂಹರಿಸಿದನು.

## ಕರ್ಣ-ಪಾಂಚಾಲರ ಯುದ್ಧ

ಅದೇ ಸಮಯದಲ್ಲಿ ಕೌರವರೊಡನೆ ಪಾಂಚಾಲ-ಚೇದಿ-ಸೃಂಜಯರ ಪರಮದಾರುಣ ಸಂಗ್ರಾಮವು ನಡೆಯಿತು. ಯುದ್ಧದುರ್ಮದ ಕೃಪ-ಕೃತವರ್ಮ-ಶಕುನಿಯರು ರಥಸೇನೆಗಳನ್ನು ಧ್ವಂಸಹೊಳಿಸಬಲ್ಲ ಹೃಷ್ಟರೂ ಕುಪಿತರೂ ಆಗಿದ್ದ ವೀರ ಸೇನೆಗಳೊಂದಿಗೆ ಕೋಸಲ-ಕಾಶಿ=ಮತ್ಸ್ಯ-ಕರೂಷ-ಕೇಕಯ-ಶೂರಸೇನೆಗಳೊಡನೆ ಯುದ್ಧದಲ್ಲಿ ತೊಡಗಿದರು. ಅವರ ಆ ಅಂತ್ಯಕರ ಯುದ್ಧವು ಶೂದ್ರ-ವೈಶ್ಯ-ಕ್ಷತ್ರಿಯ ವೀರರ ದೇಹ-ಪಾಪ-ಪ್ರಾಣಾಪಹಾರಕವೂ ಧರ್ಮಸಮ್ಮತವೂ ಸ್ವರ್ಗಪ್ರಾಪಕವೂ ಯಶಸ್ಕರವೂ ಆಗಿತ್ತು.

ಸಹೋದರರಿಂದೊಡಗೂಡಿದ ಕುರುವೀರ ದುರ್ಯೋಧನನು ಕೂಡ ಕುರುಪ್ರವೀರರಿಂದ ಮತ್ತು ಮದ್ರ ಮಹಾರಥರಿಂದ ರಕ್ಷಿತನಾಗಿ, ಪಾಂಚಾಲ-ಚೇದಿಗಳೊಂದಿಗೆ ಮತ್ತು ಸಾತ್ಯಕಿ-ಪಾಂಡವರೊಂದಿಗೆ

ರಣದಲ್ಲಿ ಯುದ್ಧಮಾಡುತ್ತಿದ್ದ ಕರ್ಣನನ್ನು ರಕ್ಷಿಸುತ್ತಿದ್ದನು. ಕರ್ಣನಾದರೋ ನಿಶಿತಬಾಣಗಳಿಂದ ಮಹಾಸೇನೆಯನ್ನು ಸಂಹರಿಸಿ ರಥಶ್ರೇಷ್ಠರನ್ನು ಸದೆಬಡಿದು ಯುಧಿಷ್ಠಿರನನ್ನು ಪೀಡಿಸಿದನು. ಕರ್ಣನು ಸಾವಿರಾರು ಶತ್ರುಗಳನ್ನು ಅಸ್ತ್ರ-ಆಯುಧ-ದೇಹ-ಪ್ರಾಣಗಳಿಂದ ವಿಹೀನರನ್ನಾಗಿಸಿ ಅವರಿಗೆ ಸ್ವರ್ಗ-ಯಶಸ್ಸುಗಳು ದೊರಕುವಂತೆ ಮಾಡಿ ತನ್ನವರಿಗೆ ಮಹಾನಂದವನ್ನುಂಟುಮಾಡಿದನು.

ಧೃಷ್ಟದ್ಯುಮ್ನನ ನಾಯಕತ್ವದಲ್ಲಿ ವ್ಯವಸ್ಥಿತರಾಗಿದ್ದ ಪಾರ್ಥರನ್ನು ನೋಡಿ ಶತ್ರುಕರ್ಶನ ಕರ್ಣನು ತ್ವರೆಮಾಡಿ ಪಾಂಚಾಲರನ್ನು ಆಕ್ರಮಣಿಸಿದನು. ಪಾಂಚಾಲರು ವೇಗದಿಂದ ಬರುತ್ತಿದ್ದ ಕರ್ಣನನ್ನು ಸಾಗರವನ್ನು ಸೇರುವ ಹಂಸಗಳಂತೆ ರಭಸದಿಂದ ಆಕ್ರಮಣಿಸಿದರು. ಆಗ ಸಹಸ್ರಾರು ಶಂಖಗಳ ಹೃದಯಂಗಮ ಧ್ವನಿಯುಂಟಾಯಿತು. ಎರಡೂ ಕಡೆಗಳಿಂದ ಭೇರಿಗಳ ದಾರುಣ ಶಬ್ಧವು ಕೇಳಿಬಂದಿತು. ಆಗ ನಾನಾ ವಾದ್ಯಗಳ ನಾದಗಳು, ಆನೆ-ಕುದುರೆ-ರಥಗಳ ನಿಸ್ವನಗಳು, ವೀರರ ಸಿಂಹನಾದಗಳು ದಾರುಣವಾಗಿದ್ದವು. ಪರ್ವತ-ವೃಕ್ಷ-ಸಾಗರಗಳಿಂದ ಕೂಡಿದ ಭೂಮಿ, ಗಾಳಿ-ಮೇಘಗಳಿಂದ ಕೂಡಿದ ಆಕಾಶ ಮತ್ತು ಸೂರ್ಯ-ಚಂದ್ರ-ಗ್ರಹ-ನಕ್ಷತ್ರಗಳಿಂದ ಕೂಡಿದ ಆಕಾಶ ಎಲ್ಲವೂ ತಿರುಗುತ್ತಿರುವವೋ ಎನ್ನುವಂತೆ ಕಾಣುತ್ತಿತ್ತು. ಆ ಶಬ್ಧವನ್ನು

ಕೇಳಿದ ಸರ್ವಭೂತಗಳೂ ವ್ಯಥೆಗೊಂಡವು. ಅಲ್ಪಸತ್ತ್ವವುಳ್ಳ ಪ್ರಾಣಿಗಳು ಅದನ್ನು ಕೇಳಿ ಪ್ರಾಯಶಃ ಸತ್ತೇ ಹೋದವು.

ಆಗ ಕರ್ಣನು ಅತಿಕುಪಿತನಾಗಿ ಶೀಘ್ರವಾಗಿ ಅಸ್ತ್ರಗಳನ್ನು ಪ್ರಯೋಗಿಸಿ ಪಾಂಡವ ಸೇನೆಯನ್ನು ಇಂದ್ರನು ಅಸುರೀ ಸೇನೆಯನ್ನು ಹೇಗೋ ಹಾಗೆ ಸಂಹರಿಸಿದನು. ಅವನ ವೇಗದಿಂದ ಪಾಂಡವ ರಥಸೇನೆಯನ್ನು ಪ್ರವೇಶಿಸಿ, ಶರಗಳನ್ನು ಪ್ರಯೋಗಿಸುತ್ತಾ ಎಪ್ಪತ್ತೇಳು ಪ್ರಭದ್ರಕ ವೀರರನ್ನು ಸಂಹರಿಸಿದನು. ಅನಂತರ ಆ ರಥಶ್ರೇಷ್ಠನು ಸುಂದರ ಪುಂಖಗಳುಳ್ಳ ಇಪ್ಪತ್ತೈದು ನಿಶಿತ ಬಾಣಗಳಿಂದ ಇಪ್ಪತ್ತೈದು ಪಾಂಚಾಲರನ್ನು ವಧಿಸಿದನು. ಆ ವೀರನು ಸುವರ್ಣಪುಂಖಗಳುಳ್ಳ ಶತ್ರುಗಳ ದೇಹವನ್ನು ಸೀಳಬಲ್ಲ ನಾರಾಚಗಳಿಂದ ನೂರಾರು ಸಹಸ್ರಾರು ಚೇದಿವೀರರನ್ನು ಸಂಹರಿಸಿದನು. ಅತಿಮಾನುಷ ಕರ್ಮಗಳನ್ನೆಸಗುತ್ತಿದ್ದ ಕರ್ಣನನ್ನು ಪಾಂಚಾಲರ ರಥಗುಂಪುಗಳು ಸುತ್ತುವರೆದವು. ಆಗ ವೈಕರ್ತನ ಕರ್ಣನು ಐದು ಸಹಿಸಲಸಾಧ್ಯ ವಿಶಿಖಗಳನ್ನು ಹೂಡಿ ಐವರು ಪಾಂಚಾಲರನ್ನು ವಧಿಸಿದನು. ಭಾನುದೇವ, ಚಿತ್ರಸೇನ, ಸೇನಾಬಿಂದು, ತಪನ ಮತ್ತು ಶೂರಸೇನ – ಈ ಐವರು ಪಾಂಚಾಲರನ್ನು ಅವನು ಸಂಹರಿಸಿದನು. ಸಾಯಕಗಳಿಂದ ಪಾಂಚಾಲ ಶೂರರು ವಧಿಸಲ್ಪಡಲು ಪಾಂಚಾಲರ ಮಹಾ

ಹಾಹಾಕಾರವುಂಟಾಯಿತು. ಹಾಹಾಕಾರಮಾಡುತ್ತಾ ದಿಕ್ಕುಗಳಲ್ಲಿ ಸೇರುತ್ತಿದ್ದ ಅವರನ್ನು ಕರ್ಣನು ಪುನಃ ಪತತ್ರಿಭಿಗಳಿಂದ ಸಂಹರಿಸಿದನು. ಕರ್ಣನ ಪುತ್ರರಾದ ಸುಷೇಣ-ಸತ್ಯಸೇನರು ಅವನ ಚಕ್ರರಕ್ಷಕರಾಗಿದ್ದು, ಪ್ರಾಣಗಳನ್ನೂ ಪಣವನ್ನಾಗಿಟ್ಟು ಹೋರಾಡುತ್ತಿದ್ದರು. ಕರ್ಣನ ಹಿಂಬಾಗದ ರಕ್ಷಕನಾಗಿದ್ದ ಅವನ ಜ್ಯೇಷ್ಠ ಪುತ್ರ ಮಹಾರಥ ವೃಷಸೇನನು ಸ್ವಯಂ ಕರ್ಣನನ್ನು ಹಿಂದಿನಿಂದ ರಕ್ಷಿಸುತ್ತಿದ್ದನು.

ಆಗ ಪ್ರಹಾರಿಗಳೂ ಕವಚಧಾರಿಗಳೂ ಆದ ಧೃಷ್ಟದ್ಯುಮ್ನ, ಸಾತ್ಯಕಿ, ದ್ರೌಪದೇಯರು, ವೃಕೋದರ, ಜನಮೇಜಯ, ಶಿಖಂಡೀ ಮತ್ತು ಪ್ರಭದ್ರಕ ಪ್ರವೀರರು, ಚೇದಿ-ಕೇಕಯ-ಪಾಂಚಾಲರು, ನಕುಲ-ಸಹದೇವರು ಮತ್ತು ಮತ್ಸ್ಯರು ರಾಧೇಯನನ್ನು ಕೊಲ್ಲಲು ಬಯಸಿ ಅವನನ್ನು ಸುತ್ತುವರೆದರು. ಮೋಡಗಳು ಗಿರಿಯನ್ನು ಮಳೆಯಿಂದ ಹೇಗೋ ಹಾಗೆ ಅವರು ಕರ್ಣನ ಮೇಲೆ ವಿವಿಧ ಶಸ್ತ್ರಗಳು ಮತ್ತು ಶರಧಾರೆಗಳನ್ನು ಸುರಿಸಿ ಅಭಿಷೇಚಿಸಿದರು. ತಂದೆಯನ್ನು ರಕ್ಷಿಸಲೋಸುಗ ಪ್ರಹಾರಿಗಳಾದ ವೀರ ಕರ್ಣಪುತ್ರ ಸುಷೇಣನು ಕೌರವರ ಕಡೆಯ ಇತರರೊಂದಿಗೆ ವೀರರನ್ನು ತಡೆದನು. ಸುಷೇಣನು ಭಲ್ಲದಿಂದ ಭೀಮಸೇನನ ಧನುಸ್ಸನ್ನು ಕತ್ತರಿಸಿ, ಏಳು ನಾರಾಚಗಳಿಂದ

ಭೀಮನ ಎದೆಗೆ ಹೊಡೆದು ಸಿಂಹನಾದಗೈದನು. ಕೂಡಲೇ ವೃಕೋದರನು ಇನ್ನೊಂದು ದೃಢ ಧನುಸ್ಸನ್ನು ಎತ್ತಿಕೊಂಡು ಸಜ್ಜುಗೊಳಿಸಿ ಸುಷೇಣನ ಧನುಸ್ಸನ್ನು ತುಂಡರಿಸಿದನು. ಭೀಮನು ಕ್ರುದ್ಧನಾಗಿ ನರ್ತಿಸುತ್ತಿರುವನೋ ಎನ್ನುವಂತೆ ಕರ್ಣನನ್ನು ಎಪ್ಪತ್ಮೂರು ಬಾಣಗಳಿಂದ ಪ್ರಹರಿಸಿದನು. ಸುಹೃದಯರ ಮಧ್ಯದಲ್ಲಿ ಅವರು ನೋಡುತ್ತಿರುವಂತೆಯೇ ಭೀಮನು ಹತ್ತು ಬಾಣಗಳಿಂದ ಕುದುರೆ-ಸಾರಥಿ-ಧ್ವಜ-ಆಯುಧಗಳೊಡನೆ ಕರ್ಣಪುತ್ರ ಸತ್ಯಸೇನನನ್ನು ಬೀಳಿಸಿದನು. ಕ್ಷುರದಿಂದ ಕತ್ತರಿಸಲ್ಪಟ್ಟ ಅವನ ಚಂದ್ರನಿಭಾನನ ಶಿರವು ನಾಳದಿಂದ ಬೇರ್ಪಡಿಸಲ್ಪಟ್ಟ ಕಮಲದಂತೆ ಸುಂದರವಾಗಿ ಕಾಣುತ್ತಿತ್ತು. ಕರ್ಣಸುತನನ್ನು ಸಂಹರಿಸಿ ಭೀಮನು ಪುನಃ ಕೌರವರನ್ನು ಆಕ್ರಮಣಿಸಿದನು. ಕೃಪ ಮತ್ತು ಹಾರ್ದಿಕ್ಯರ ಬಿಲ್ಲುಗಳನ್ನು ತುಂಡರಿಸಿ ಅವರನ್ನು ಪುನಃ ಪ್ರಹರಿಸಿದನು. ದುಃಶಾಸನನ್ನು ಮೂರು ಬಾಣಗಳಿಂದ ಮತ್ತು ಶಕುನಿಯನ್ನು ಆರು ಆಯಸಗಳಿಂದ ಹೊಡೆದು ಉಲೂಕ ಮತ್ತು ಪತತ್ರಿಯರನ್ನು ವಿರಥರನ್ನಾಗಿಸಿದನು. “ಹೇ ಸುಷೇಣ! ನೀನೀಗ ಹತನಾದೆ!” ಎಂದು ಹೇಳುತ್ತಾ ಭೀಮನು ಸಾಯಕವನ್ನು ಹಿಡಿದು ಪ್ರಯೋಗಿಸಲು ಕರ್ಣನು ಅದನ್ನು ತುಂಡರಿಸಿ ಮೂರು ಬಾಣಗಳಿಂದ ಭೀಮನನ್ನು ಹೊಡೆದನು. ಆಗ ಭೀಮನು ಇನ್ನೊಂದು ಸುಪರ್ವಣ ಸುತೇಜನ ಬಾಣವನ್ನು ತೆಗೆದು ಸುಷೇಣನ ಮೇಲೆ

ಪ್ರಯೋಗಿಸಲು ಕರ್ಣನು ಅದನ್ನೂ ಕೂಡ ತುಂಡರಿಸಿದನು. ಪುತ್ರನನ್ನು ರಕ್ಷಿಸಲೋಸುಗ ಮತ್ತು ಕ್ರೂರ ಭೀಮಸೇನನನ್ನು ವಧಿಸಲು ಬಯಸಿದ ಕರ್ಣನು ಪುನಃ ಎಪ್ಪತ್ಮೂರು ಕ್ರೂರ ರಥೇಷುಗಳಿಂದ ಪ್ರಹರಿಸಿದನು. ಸುಷೇಣನಾದರೋ ಭಾರವನ್ನು ಹೊರಬಲ್ಲ ಉತ್ತಮ ಧನುಸ್ಸನ್ನು ಹಿಡಿದು ನಕುಲನ ಎದೆಗೆ ಐದು ಬಾಣಗಳಿಂದ ಪ್ರಹರಿಸಿದನು.

ನಕುಲನು ಅವನನ್ನು ಎಪ್ಪತ್ತು ದೃಢ ಬಾಣಗಳಿಂದ ಹೊಡೆದು ಜೋರಾಗಿ ಗರ್ಜಿಸಿದನು. ಅದು ಕರ್ಣನಿಗೂ ಭಯವನ್ನುಂಟುಮಾಡಿತು. ಮಹಾರಥ ಸುಷೇಣನು ಹತ್ತು ಆಶುಗಗಳಿಂದ ನಕುಲನನ್ನು ಹೊಡೆದು ಶೀಘ್ರವಾಗಿ ಕ್ಷುರಪ್ರದಿಂದ ಅವನ ಧನುಸ್ಸನ್ನು ತುಂಡರಿಸಿದನು. ಕೂಡಲೇ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ನಕುಲನು ಕ್ರೋಧಮೂರ್ಛಿತನಾಗಿ ಸುಷೇಣನನ್ನು ಅನೇಕ ಬಾಣಗಳಿಂದ ತಡೆದನು. ಆ ಪರವೀರಹನು ಬಾಣಗಳಿಂದ ದಿಕ್ಕುಗಳನ್ನು ಆಚ್ಛಾದಿಸಿ, ಮೂರು ಬಾಣಗಳಿಂದ ಸುಷೇಣನನ್ನೂ ಅವನ ಸಾರಥಿಯನ್ನೂ ಪ್ರಹರಿಸಿ, ಸುದೃಢ ಭಲ್ಲದಿಂದ ಅವನ ಧನುಸ್ಸನ್ನು ಮೂರು ಭಾಗಗಳನ್ನಾಗಿ ತುಂಡರಿಸಿದನು. ಆಗ ಕ್ರೋಧಮೂರ್ಛಿತನಾದ ಸುಷೇಣನು ಇನ್ನೊಂದು ಧನುಸ್ಸನ್ನೆತ್ತಿಕೊಂಡು ಆರು ಬಾಣಗಳಿಂದ ನಕುಲನನ್ನು ಮತ್ತು ಏಳರಿಂದ ಸಹದೇವನನ್ನು

ಪ್ರಹರಿಸಿದನು. ದೇವಾಸುರರ ಯುದ್ಧದಂತಿದ್ದ ಆ ಯುದ್ಧವು ಮಹಾ ಘೋರವಾಗಿತ್ತು. ಅನ್ಯೋನ್ಯರನ್ನು ವಧಿಸಲೋಸುಗ ವೇಗವಾಗಿ ಸಾಯಕಗಳನ್ನು ಪ್ರಯೋಗಿಸಲಾಗುತ್ತಿತ್ತು.

ಸಾತ್ಯಕಿಯು ಮೂರು ಶರಗಳಿಂದ ವೃಷಸೇನನ ಸಾರಥಿಯನ್ನು ಸಂಹರಿಸಿ, ಭಲ್ಲದಿಂದ ಅವನ ಧನುಸ್ಸನ್ನು ತುಂಡರಿಸಿದನು ಮತ್ತು ಏಳು ಬಾಣಗಳಿಂದ ಅವನ ಕುದುರೆಗಳನ್ನು ಹೊಡೆದನು. ಒಂದು ಬಾಣದಲ್ಲಿ ಧ್ವಜವನ್ನು ಕಿತ್ತುಹಾರಿಸಿದನು ಮತ್ತು ಮೂರು ಬಾಣಗಳಿಂದ ಅವನ ಎದೆಗೆ ಹೊಡೆದನು. ಆಗ ವೃಷಸೇನನು ತನ್ನ ರಥದಲ್ಲಿಯೇ ಮುಹೂರ್ತಕಾಲ ಕುಸಿದುಬಿದ್ದನು. ಪುನಃ ಎಚ್ಚೆತ್ತು ಶೈನೇಯನನ್ನು ಕೊಲ್ಲಲು ಬಯಸಿ ಕತ್ತಿ-ಗುರಾಣಿಗಳನ್ನು ಹಿಡಿದು ಅವನ ಮೇಲೆ ಎರಗಿದನು. ವೃಷಸೇನನು ಮುಂದೆ ಹಾರಿಬರುತ್ತಿರಲು ಸಾತ್ಯಕಿಯು ಶೀಘ್ರವಾಗಿ ಹತ್ತು ವರಾಹಕರ್ಣ ಶರಗಳಿಂದ ಅವನ ಖಡ್ಗ-ಗುರಾಣಿಗಳನ್ನು ತುಂಡರಿಸಿದನು. ವೃಷಸೇನನು ವಿರಥನೂ ನಿರಾಯುಧನೂ ಆದುದನ್ನು ನೋಡಿದ ದುಃಶಾಸನನು ಶೀಘ್ರವಾಗಿ ಅವನನ್ನು ತನ್ನ ರಥದಲ್ಲಿ ಏರಿಸಿಕೊಂಡು ಅಲ್ಲಿಂದ ಹೊರಟುಹೋದನು.

ವೃಷಸೇನನು ಇನ್ನೊಂದು ರಥದಲ್ಲಿ ಕುಳಿತು ಪುನಃ ಯುದ್ಧದಲ್ಲಿ ಕರ್ಣನ ಹಿಂಬಾಗವನ್ನು ರಕ್ಷಿಸತೊಡಗಿದನು. ಶೈನೇಯನಾದರೋ

ಒಂಭತ್ತು ಆಶುಗಗಳಿಂದ ದುಃಶಾಸನನನ್ನು ಸಾರಥಿಯಿಲ್ಲದಂತೆಯೂ ವಿರಥನನ್ನಾಗಿಯೂ ಮಾಡಿ ಅವನ ಹಣೆಗೆ ಮೂರು ಬಾಣಗಳನ್ನು ಪ್ರಯೋಗಿಸಿದನು. ದುಃಶಾಸನನು ವಿಧಿವತ್ತಾಗಿ ಸಜ್ಜಾಗಿದ್ದ ಇನ್ನೊಂದು ರಥವನ್ನೇರಿ ಪುನಃ ಕರ್ಣನ ಬಲವನ್ನು ವೃದ್ಧಿಸುತ್ತಾ ಪಾಂಡವರೊಂದಿಗೆ ಹೋರಾಡಿದನು.

ಅನಂತರ ಧೃಷ್ಟದ್ಯುಮ್ನನು ಹತ್ತು, ದ್ರೌಪದೇಯರು ಎಪ್ಪತ್ಮೂರು, ಯುಯುಧಾನನು ಏಳು, ಭೀಮಸೇನನು ಅರವತ್ನಾಲ್ಕು, ಸಹದೇವನು ಏಳು, ನಲುಕಲನು ಮೂವತ್ತು, ಶತಾನೀಕನು ಏಳು, ವೀರ ಶಿಖಂಡಿಯು ಹತ್ತು ಮತ್ತು ಧರ್ಮರಾಜನು ನೂರು ಬಾಣಗಳಿಂದ ಕರ್ಣನನ್ನು ಪ್ರಹರಿಸಿದರು. ಜಯಕ್ಕೆ ಆಸೆಪಡುತ್ತಿದ್ದ ಇವರು ಮತ್ತು ಅನ್ಯ ಪ್ರವೀರರು ಅ ಮಹಾಯುದ್ಧದಲ್ಲಿ ಸೂತಪುತ್ರನನ್ನು ಪ್ರಹರಿಸಿದರು. ಅದಕ್ಕೆ ಪ್ರತಿಯಾಗಿ ಅರಿಂದಮ ವೀರ ಸೂತಪುತ್ರನು ಸುಂದರ ರಥದಲ್ಲಿ ಸಂಚರಿಸುತ್ತಾ  ಹತ್ತು ಹತ್ತು ನಿಶಿತ ವಿಶಿಖಗಳಿಂದ ಅವರೆಲ್ಲರನ್ನೂ ಹೊಡೆದನು. ಅಲ್ಲಿ ಕರ್ಣನ ಅಸ್ತ್ರವೀರ್ಯವನ್ನೂ ಹಸ್ತಲಾಘವವೂ ಕಂಡುಬರುತ್ತಿತ್ತು. ಅದೊಂದು ಅದ್ಭುತವೇ ಆಗಿದ್ದಿತು. ಆ ಮಹಾರಥನು ಬಾಣಗಳನ್ನು ತೆಗೆದುಕೊಳ್ಳುವುದಾಗಲೀ, ಧನುಸ್ಸಿಗೆ ಹೂಡಿದುದಾಗಲೀ, ಮತ್ತು ಬಾಣಪ್ರಯೋಗಿಸಿದುದಾಗಲೀ ಯಾರಿಗೂ

ಕಾಣಿಸುತ್ತಿರಲಿಲ್ಲ. ಆಕಾಶ-ಭೂಮಿ-ದಿಕ್ಕುಗಳೆಲ್ಲವೂ ಅವನ ನಿಶಿತ ಬಾಣಗಳಿಂದ ತುಂಬಿಹೋದವು. ಆ ಪ್ರದೇಶವು ಅರುಣೋದಯಕಾಲದಂತೆ ಕೆಂಪಾಗಿ ಕಾಣುತ್ತಿತ್ತು. ರಾಧೇಯನು ಚಾಪವನ್ನು ಹಿಡಿದು ನರ್ತಿಸುತ್ತಿರುವನೋ ಎನ್ನುವಂತೆ ತೋರುತ್ತಿದ್ದನು. ಅವನನ್ನು ಪ್ರಹರಿಸಿದ ಪ್ರತಿಯೊಬ್ಬನನ್ನೂ ಕರ್ಣನು ಅವರು ಬಿಟ್ಟ ಶರಗಳಿಗಿಂತ ಮೂರುಪಟ್ಟು ಶರಗಳಿಂದ ಪ್ರಹರಿಸುತ್ತಿದ್ದನು. ಪುನಃ ಕರ್ಣನು ಹತ್ತು ಹತ್ತು ಬಾಣಗಳಿಂದ ಅವರ ಕುದುರೆ-ಸಾರಥಿ-ಧ್ವಜ-ಚತ್ರಗಳನ್ನು ಪ್ರಹರಿಸಿ ಜೋರಾಗಿ ಸಿಂಹನಾದಗೈದನು. ಆಗ ಅವರು ಅವನಿಗೆ ಮುಂದೆ ಹೋಗಲು ದಾರಿಕೊಟ್ಟರು. ಶರವೃಷ್ಟಿಗಳಿಂದ ಆ ಮಹೇಷ್ವಾಸರನ್ನು ಸದೆಬಡಿದು ಶತ್ರುಕರ್ಶನ ರಾಧೇಯನು ರಾಜಾ ಯುಧಿಷ್ಠಿರನ ಸೇನೆಯನ್ನು ಪ್ರವೇಶಿಸಿದನು.

## ಕರ್ಣ-ಯುಧಿಷ್ಠಿರರ ಯುದ್ಧ; ಯುಧಿಷ್ಠಿರನ ಪಲಾಯನ

ರಾಧೇಯನು ಚೇದಿಗಳ ಮುನ್ನೂರು ರಥಗಳನ್ನು ನಾಶಗೊಳಿಸಿ ನಿಶಿತ ಬಾಣಗಳಿಂದ ಯುಧಿಷ್ಠಿರನನ್ನು ಪ್ರಹರಿಸಿದನು. ಆಗ ರಾಧೇಯನಿಂದ ಯುಧಿಷ್ಠಿರನನ್ನು ರಕ್ಷಿಸಲೋಸುಗ ಸಾತ್ಯಕಿಯೊಡನೆ ಶಿಖಂಡಿಯು ರಾಜನನ್ನು ಸುತ್ತುವರೆದರು. ಹಾಗೆಯೇ ಕೌರವ ಮಹೇಷ್ವಾಸರ ಸೇನೆಗಳೂ ಕರ್ಣನನ್ನು ಎಲ್ಲಕಡೆಗಳಿಂದಲೂ ರಕ್ಷಿಸುತ್ತಿದ್ದರು. ನಾನಾ

ವಾದ್ಯಗಳು ಮೊಳಗಿದವು. ಗರ್ಜನೆಗಳು ಕೇಳಿಬಂದವು. ಶೂರರು ಸಿಂಹನಾದಗೈದರು. ನಂತರ ಪುನಃ ಅಭೀತ ಕುರುಪಾಂಡವರ ನಡುವೆ - ಯುಧಿಷ್ಠಿರನ ನಾಯಕತ್ವದಲ್ಲಿದ್ದ ಪಾರ್ಥರು ಮತ್ತು ಸೂತಪುತ್ರನ ನಾಯಕತ್ವದಲ್ಲಿದ್ದ ಕೌರವರ ನಡುವೆ ಯುದ್ಧವು ನಡೆಯಿತು.

ಆ ಸೇನೆಯನ್ನು ಭೇದಿಸಿ ಕರ್ಣನು ಸಹಸ್ರಾರು ರಥ-ಆನೆ-ಕುದುರೆ-ಪದಾತಿ ಸೇನೆಗಳಿಂದ ಪರಿವೃತನಾದ ಧರ್ಮರಾಜನನ್ನು ಆಕ್ರಮಣಿಸಿದನು. ಕರ್ಣನು ಸ್ವಲ್ಪವೂ ಗಾಬರಿಗೊಳ್ಳದೇ ಶತ್ರುಗಳು ಸುರಿಸುತ್ತಿದ್ದ ಸಹಸ್ರಾರು ನಾನಾ ಆಯುಧಗಳನ್ನು ನೂರಾರು ಉಗ್ರ ಬಾಣಗಳಿಂದ ತುಂಡರಿಸಿದನು. ಅವನು ಎಲ್ಲಕಡೆ ಶತ್ರುಗಳ ಶಿರಗಳನ್ನೂ, ಬಾಹುಗಳನ್ನೂ, ತೊಡೆಗಳನ್ನೂ ಕತ್ತರಿಸಿದನು. ಅವರು ಭಗ್ನರಾಗಿ ಭೂಮಿಯ ಮೇಲೆ ಬಿದ್ದರು. ಅನ್ಯರು ಪಲಾಯನಗೈದರು. ಆಗ ಸಾತ್ಯಕಿಯಿಂದ ಪ್ರಚೋದಿತರಾದ ದ್ರವಡ-ಆಂದ್ರ-ನಿಷಾದ ಪದಾತಿಗಳು ಯುದ್ಧದಲ್ಲಿ ಕರ್ಣನನ್ನು ಸಂಹರಿಸಲು ಬಯಸಿ ಅವನನ್ನು ಪುನಃ ಆಕ್ರಮಿಸಿದರು. ಕರ್ಣನ ಸಾಯಕಗಳಿಂದ ಪ್ರಹರಿಸಲ್ಪಟ್ಟ ಅವರು ಬಾಹುಗಳು, ಶಿರಗಳು ಮತ್ತು ಕಿರೀಟಗಳನ್ನು ಕಳೆದುಕೊಂಡು ಕತ್ತರಿಸಲ್ಪಟ್ಟ ಶಾಲವೃಕ್ಷಗಳ ವನದಂತೆ ಭೂಮಿಯ ಮೇಲೆ ಬಿದ್ದರು. ಹೀಗೆ ಹತರಾದ ನೂರಾರು ಸಹಸ್ರಾರು ಲಕ್ಷಗಟ್ಟಲೆ ಯೋಧರು ತಮ್ಮ

ದೇಹಗಳಿಂದ ಭೂಮಿಯನ್ನೂ ಯಶಸ್ಸುಗಳಿಂದ ದಿಕ್ಕುಗಳನ್ನೂ ತುಂಬಿಬಿಟ್ಟರು. ಆಗ ರಣರಂಗದಲ್ಲಿ ಕ್ರುದ್ಧನಾದ ಅಂತಕನಂತಿದ್ದ ಕರ್ಣನನ್ನು ಪಾಂಡವ-ಪಾಂಚಾಲರು ವ್ಯಾಧಿಯನ್ನು ಮಂತ್ರೌಷಧಿಗಳಿಂದ ಹೇಗೋ ಹಾಗೆ ತಡೆದರು. ಅತಿಯಾಗಿ ಉಲ್ಬಣಿಸಿದ ವ್ಯಾಧಿಯು ಮಂತ್ರೌಷಧಿಕೂ ನಿಲುಕದಂತೆ ಕರ್ಣನು ಅವರನ್ನು ಸದೆಬಡಿದು ಪುನಃ ಯುಧಿಷ್ಠಿರನನ್ನು ಆಕ್ರಮಣಿಸಿದನು. ಆದರೆ ರಾಜನನ್ನು ರಕ್ಷಿಸುವ ಛಲದಿಂದ ತಡೆಯುತ್ತಿರುವ ಪಾಂಡವ-ಪಾಂಚಾಲ-ಕೇಕಯರನ್ನು ಮೃತ್ಯುವು ಬ್ರಹ್ಮವಿದನನ್ನು ಹೇಗೋ ಹಾಗೆ ಅವರನ್ನು ಅತಿಕ್ರಮಿಸಲು ಶಕ್ತನಾಗಲಿಲ್ಲ. ಆಗ ಅನತಿದೂರದಲ್ಲಿಯೇ ತಡೆಯಲ್ಪಟ್ಟು ನಿಂತಿದ್ದ ಕರ್ಣನಿಗೆ ಕ್ರೋಧಸಂರಕ್ತಲೋಚನ ಪರವೀರಘ್ನ ಯುಧಿಷ್ಠಿರನು ಇಂತೆಂದನು:

> “ಕರ್ಣ! ಕರ್ಣ! ಶೂನ್ಯದೃಷ್ಟಿಯವನೇ! ಸೂತಪುತ್ರ! ನನ್ನ ಮಾತನ್ನು ಕೇಳು! ಧಾರ್ತರಾಷ್ಟ್ರನ ಅಭಿಪ್ರಾಯದಂತೆ ನಡೆದುಕೊಳ್ಳುವ ನೀನು ಸದಾ ಸಂಗ್ರಾಮದಲ್ಲಿ ಯಶಸ್ವಿ ಫಲ್ಗುನನೊಂದಿಗೆ ಸ್ಪರ್ಧಿಸುತ್ತೀಯೆ ಮತ್ತು ನಿತ್ಯವೂ ನಮ್ಮನ್ನು ಬಾಧಿಸುತ್ತಿದ್ದೀಯೆ! ನಿನ್ನಲ್ಲಿ ಎಷ್ಟು ಬಲವಿದೆಯೋ, ಎಷ್ಟು ವೀರ್ಯವಿದೆಯೋ, ಪಾಂಡವರ ಮೇಲೆ ಎಷ್ಟು

ದ್ವೇಷವಿದೆಯೋ ಅವೆಲ್ಲವನ್ನೂ ಇಂದು
ಮಹಾಪೌರುಷವನ್ನಾಶ್ರಯಿಸಿ ತೋರಿಸು!”

ಹೀಗೆ ಹೇಳಿ ಯುಧಿಷ್ಠಿರನು ಹತ್ತು ಸುವರ್ಣಪುಂಖಗಳುಳ್ಳ ಲೋಹಮಯ ಬಾಣಗಳಿಂದ ಕರ್ಣನನ್ನು ಪ್ರಹರಿಸಿದನು. ಅವನನ್ನು ಪ್ರತಿಯಾಗಿ ಸೂತಪುತ್ರನು ನಗುತ್ತಿರುವನೋ ಎನ್ನುವಂತೆ ಒಂಭತ್ತು ವತ್ಸದಂತಗಳಿಂದ ಹೊಡೆದನು. ಅನಂತರ ಆ ಶೂರನು ಯುಧಿಷ್ಠಿರನ ಚಕ್ರರಕ್ಷಕರಾಗಿದ್ದ ಇಬ್ಬರು ಪಾಂಚಾಲರನ್ನು ಸನ್ನತಪರ್ವ ಕ್ಷುರಗಳಿಂದ ಸಂಹರಿಸಿದನು. ಧರ್ಮರಾಜನ ರಥದ ಪಕ್ಕಗಳಲ್ಲಿ ಬಿದ್ದಿದ್ದ ಆ ಇಬ್ಬರು ಪ್ರವೀರರೂ ಚಂದ್ರನ ಬಳಿಯಲ್ಲಿದ್ದ ಪುನರ್ವಸು ನಕ್ಷತ್ರಗಳಂತೆ ಶೋಭಿಸುತ್ತಿದ್ದರು. ಪುನಃ ಯುಧಿಷ್ಠಿರನು ಕರ್ಣನನ್ನು ಮೂವತ್ತು ಬಾಣಗಳಿಂದ ಪ್ರಹರಿಸಿ, ಸುಷೇಣ-ಸತ್ಯಸೇನರನ್ನು ಮೂರು ಮೂರು ಬಾಣಗಳಿಂದ ಹೊಡೆದನು. ಶಲ್ಯನನ್ನು ತೊಂಭತ್ತು ಮತ್ತು ಸೂತಜನನ್ನು ಎಪ್ಪತ್ಮೂರು ಬಾಣಗಳಿಂದ ಹೊಡೆದು ಯುಧಿಷ್ಠಿರನು ಚಕ್ರರಕ್ಷಕರನ್ನು ಮೂರು ಮೂರು ಜಿಹ್ಮಗಗಳಿಂದ ಪ್ರಹರಿಸಿದನು. ಆಗ ಕರ್ಣನು ಗಹಗಹಿಸಿ ನಗುತ್ತಾ ಧನುಸ್ಸನ್ನು ಜಗ್ಗಿಸುತ್ತಾ ಭಲ್ಲದಿಂದ ಯುಧಿಷ್ಠಿರನನ್ನು ಹೊಡೆದು, ಪುನಃ ಅರವತ್ತರಿಂದ ಪ್ರಹರಿಸಿ ಸಿಂಹಗರ್ಜನೆ ಮಾಡಿದನು. ಆಗ ಪಾಂಡವರ ಪ್ರವೀರರು ಸೂತಪುತ್ರನ

ಪೀಡೆಗೊಳಗಾಗಿದ್ದ ಯುಧಿಷ್ಠಿರನನ್ನು ಸಮೀಪಿಸಿ ಶರಗಳಿಂದ ಕರ್ಣನನ್ನು ಆಕ್ರಮಣಿಸಿದರು. ಸಾತ್ಯಕಿ, ಚೇಕಿತಾನ, ಯುಯುತ್ಸು, ಪಾಂಡ್ಯ, ಧೃಷ್ಟದ್ಯುಮ್ನ, ಶಿಖಂಡೀ, ದ್ರೌಪದೇಯರು, ಪ್ರಭದ್ರಕರು, ಯಮಳರು, ಭೀಮಸೇನ, ಶಿಶುಪಾಲನ ಮಗ, ಕಾರೂಷರು, ಅಳಿದುಳಿದ ಮತ್ಸ್ಯರು, ಕೇಕಯರು, ಕಾಶಿ-ಕೋಸಲರು – ಈ ವೀರರು ತ್ವರೆಮಾಡಿ ಕರ್ಣನನ್ನು ತಡೆದರು. ಪಾಂಚಾಲ್ಯ ಜನಮೇಜಯನು ಕರ್ಣನನ್ನು ಸಾಯಕ, ವರಾಹಕರ್ಣ, ನಾರಾಚ, ನಾಲೀಕ, ವತ್ಸದಂತ, ವಿಪಾಠ, ಕ್ಷುರಪ್ರ, ಮತ್ತು ಚಟಕಾಮುಖಗಳೇ ಮೊದಲಾದ ನಿಶಿತ ಶರಗಳಿಂದ ಪ್ರಹರಿಸಿದನು. ಕರ್ಣನನ್ನು ಸಂಹರಿಸಲು ಬಯಸಿ ನಾನಾ ಉಗ್ರ ಪ್ರಹರಣಗಳಿಂದ, ರಥ-ಆನೆ-ಕುದುರೆ-ಪದಾತಿಗಣಗಳೊಂದಿಗೆ ಅವರು ಕರ್ಣನನ್ನು ಎಲ್ಲಕಡೆಗಳಿಂದ ಸುತ್ತುವರೆದು ಆಕ್ರಮಣಿಸಿದರು. ಪಾಂಡವ ಪ್ರವರರಿಂದ ಸುತ್ತಲೂ ಮುತ್ತಲ್ಪಟ್ಟ ಕರ್ಣನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಾ ಸರ್ವದಿಕ್ಕುಗಳನ್ನೂ ಶರಗಳಿಂದ ಮುಚ್ಚಿಬಿಟ್ಟನು.

ಆಗ ಶರಗಳೆಂಬ ಮಹಾಜ್ವಾಲೆಗಳಿಂದಲೂ, ವೀರ್ಯವೆಂಬ ತಾಪದಿಂದಲೂ ಕರ್ಣನೆಂಬ ಪಾವಕನು ಪಾಂಡವವೆಂಬ ವನವನ್ನು ದಹಿಸುತ್ತಾ ರಣದಲ್ಲಿ ಸಂಚರಿಸುತ್ತಿದ್ದನು. ಕರ್ಣನು ಜೋರಾಗಿ ನಕ್ಕು ಮಹಾಸ್ತ್ರಗಳನ್ನು ಸಂಧಾನಮಾಡಿ ಶರಗಳಿಂದ ಯುಧಿಷ್ಠಿರನ

ಕಾರ್ಮುಕವನ್ನು ಕತ್ತರಿಸಿದನು. ನಂತರ ಕರ್ಣನು ರಣದಲ್ಲಿ ನಿಮಿಷಮಾತ್ರದಲ್ಲಿ ಹೊಸ ಸನ್ನತಪರ್ವ ಶರಗಳನ್ನು ಹೂಡಿ ಆ ನಿಶಿತ ಶರಗಳಿಂದ ರಾಜನ ಕವಚವನ್ನೂ ಕತ್ತರಿಸಿದನು. ಹೇಮವಿಕೃತ ಆ ಕವಚವು ಬೀಳುವಾವ ಸೂರ್ಯನೊಡನಿದ್ದ ಮೋಡವು ಭಿರುಗಾಳಿಗೆ ಸಿಲುಕಿ ಮಿಂಚಿನೊಂದಿಗೆ ಕೆಳಗೆ ಬೀಳುತ್ತಿರುವಂತೆ ರಾರಾಜಿಸಿತು. ಪುರುಷೇಂದ್ರನ ದೇಹದಿಂದ ಕಳಚಿ ಬಿದ್ದ ರತ್ನಗಳಿಂದ ಅಲಂಕೃತವಾಗಿದ್ದ ಆ ಕವಚವು ನಕ್ಷತ್ರಮಂಡಲಿಂದ ಶೋಭಾಯಮಾನವಾದ ರಾತ್ರಿಯ ಆಕಾಶದಂತೆ ತೋರುತ್ತಿತ್ತು. ಕವಚನ್ನು ಕಳೆದುಕೊಂಡ ಆ ಪಾರ್ಥನು ಶರಪ್ರಹಾರಗಳಿಂದ ರಕ್ತವನ್ನು ಸೋರಿಸುತ್ತಾ ಕ್ರುದ್ಧನಾಗಿ ಸರ್ವವೂ ಲೋಹಮಯವಾಗಿದ್ದ ಶಕ್ತಿಯನ್ನು ಆಧಿರಥಿಯ ಮೇಲೆ ಪ್ರಯೋಗಿಸಿದನು. ಆಕಾಶದಲ್ಲಿ ಪ್ರಜ್ವಲಿಸುತ್ತಿರುವ ಆ ಶಕ್ತಿಯನ್ನು ಮಹೇಷ್ವಾಸನು ಏಳು ಸಾಯಕ ಶರಗಳಿಂದ ಕತ್ತರಿಸಿ ಭೂಮಿಯ ಮೇಲೆ ಕೆಡವಿದನು. ಆಗ ಯುಧಿಷ್ಠಿರನು ಕರ್ಣನ ಬಾಹುಗಳು, ಹಣೆ ಮತ್ತು ಎದೆಗಳನ್ನು ನಾಲ್ಕು ತೋಮರಗಳಿಂದ ಹೊಡೆದು ಜೋರಾಗಿ ಗರ್ಜಿಸಿದನು. ಉಕ್ಕಿಬರುತ್ತಿರುವ ರಕ್ತಪ್ರವಾಹದಿಂದ ಕ್ರುದ್ಧನಾದ ಕರ್ಣನು ಸರ್ಪದಂತೆ ಭುಸುಗುಟ್ಟುತ್ತಾ ಭಲ್ಲದಿಂದ ಅವನ ಧ್ವಜವನ್ನು ತುಂಡರಿಸಿದನು ಮತ್ತು ಮೂರರಿಂದ ಯುಧಷ್ಠಿರನನ್ನು ಹೊಡೆದನು. ಬಾಣಗಳಿಂದ ಅವನ ರಥವನ್ನು ಕೂಡ

ಎಳ್ಳಿನ ಕಾಳುಗಳಷ್ಟು ಸಣ್ಣ ಸಣ್ಣ ಚೂರುಗಳನ್ನಾಗಿಸಿ ತುಂಡರಿಸಿದನು. ತನ್ನ ಪಾರ್ಷ್ಣಿಸಾರಥಿಗಳನ್ನೂ ಕಳೆದುಕೊಂಡಿದ್ದ ಪಾರ್ಥನು ಕರ್ಣನನ್ನು ಎದುರಿಸಲಾಗದೇ ದುರ್ಮನಸ್ಕನಾಗಿ ಪಲಾಯನಗೈದನು.

ಯುಧಿಷ್ಠಿರನನ್ನು ಹಿಂಬಾಲಿಸಿ ಹೋಗಿ ರಾಧೇಯನು ಕೈಯಿಂದ ಅವನ ಭುಜವನ್ನು ಮುಟ್ಟಿ ಪಾಂಡವನನ್ನು ಹೀಯಾಳಿಸುವಂತೆ ನಗುತ್ತಾ ಹೇಳಿದನು:

> “ಶ್ರೇಷ್ಠ ಕುಲದಲ್ಲಿ ಹುಟ್ಟಿ ಕ್ಷತ್ರಧರ್ಮದಲ್ಲಿ ವ್ಯವಸ್ಥಿತನಾಗಿದ್ದುಕೊಂಡು ಈ ಮಹಾಸಮರದಲ್ಲಿ ಪ್ರಾಣಗಳನ್ನು ರಕ್ಷಿಸಿಕೊಳ್ಳಲೋಸುಗ ಏಕೆ ಪಲಾಯನಮಾಡುತ್ತಿರುವೆ? ನೀನು ಕ್ಷತ್ರಧರ್ಮದಲ್ಲಿ ಕುಶಲನಲ್ಲವೆಂದು ನನಗನ್ನಿಸುತ್ತಿದೆ. ನೀನು ಸ್ವಾಧ್ಯಾಯ ಮತ್ತು ಯಜ್ಞಕರ್ಮಯುಕ್ತವಾದ ಬ್ರಹ್ಮಬಲದಿಂದ ಕೂಡಿರುವೆ. ಆದುದರಿಂದ ಕೌಂತೇಯ! ಯುದ್ಧಮಾಡಬೇಡ! ವೀರರೊಂದಿಗೆ ಸೆಣೆಸಬೇಡ! ವೀರರೊಂದಿಗೆ ಅಪ್ರಿಯ ಮಾತುಗಳನ್ನಾಡಬೇಡ. ಯುದ್ಧಭೂಮಿಗೆ ಇನ್ನೊಮ್ಮೆ ಕಾಲನ್ನೇ ಇಡಬೇಡ!”

ಹೀಗೆ ಹೇಳಿ ಪಾರ್ಥನನ್ನು ಅಲ್ಲಿಯೇ ಬಿಟ್ಟು ವಜ್ರಪಾಣಿ ಇಂದ್ರನು

ಅಸುರೀ ಸೇನೆಯನ್ನು ಹೇಗೋ ಹಾಗೆ ಪಾಂಡವೀ ಸೇನೆಯನ್ನು ಸಂಹರಿಸಿದನು. ಯುಧಿಷ್ಠಿರನು ನಾಚಿಕೊಂಡವನಂತೆ ಶೀಘ್ರವಾಗಿ ರಣದಿಂದ ಹೊರಟುಹೋದನು. ಆಗ ಹಿಂದಿರುಗುತ್ತಿದ್ದ ಆ ಯುಧಿಷ್ಠಿರನನ್ನು ಅನುಸರಿಸಿ ಚೇದಿ-ಪಾಂಡವ-ಪಾಂಚಾಲರೂ, ಮಹಾರಥ ಸಾತ್ಯಕಿಯೂ, ಶೂರ ದ್ರೌಪದೇಯರೂ, ಪಾಂಡವ ಮಾದ್ರೀಪುತ್ರರಿಬ್ಬರೂ ಹೊರಟುಹೋದರು. ಯುಧಿಷ್ಠಿರನ ಸೇನೆಯು ಪರಾಙ್ಮುಖವಾದುದನ್ನು ನೋಡಿ ಕರ್ಣನು ಕುರುವೀರರನ್ನೊಡಗೂಡಿ ಅವನ ಸೇನೆಯನ್ನು ಹಿಂಬಾಲಿಸಿ ಹೋದನು. ಆಗ ಧಾರ್ತರಾಷ್ಟ್ರರ ಕಡೆಯಲ್ಲಿ ಶಂಖ-ಭೇರಿ ನಿನಾದಗಳೂ, ಬಿಲ್ಲುಗಳ ಟೇಂಕಾರ ಶಬ್ಧವೂ, ಮತ್ತು ಜೋರಾದ ಸಿಂಹಗರ್ಜನೆಗಳೂ ಕೇಳಿಬಂದವು. ಯುಧಿಷ್ಠಿರನಾದರೋ ಬಹುಬೇಗ ಶ್ರುತಕೀರ್ತಿಯ ರಥವನ್ನೇರಿ ಕರ್ಣನ ವಿಕ್ರಮವನ್ನು ನೋಡುತ್ತಿದ್ದನು. ತನ್ನ ಸೇನೆಯು ಕದಡಿಹೋಗುತ್ತಿರುವುದನ್ನು ನೋಡಿ ಯುಧಿಷ್ಠಿರನು ಕ್ರುದ್ಧನಾಗಿ ತನ್ನ ಯೋಧರಿಗೆ “ಸಹಸ್ರಾರು ಸಂಖ್ಯೆಗಳಲ್ಲಿ ಅವರನ್ನು ಕೊಲ್ಲಿರಿ!” ಎಂದು ಹೇಳಿದನು.

ರಾಜನಿಂದ ಆಜ್ಞಾಪಿತರಾದ ಪಾಂಡವ ಮಹಾರಥರೆಲ್ಲರೂ ಭೀಮಸೇನನನ್ನು ಮುಂದಾಗಿಸಿಕೊಂಡು ಕೌರವ ಪುತ್ರರನ್ನು ಎದುರಿಸಿ

ಆಕ್ರಮಣಿಸಿದರು. ಆಗ ಅಲ್ಲಲ್ಲಿ ಆನೆ-ಕುದುರೆ-ರಥ-ಪದಾತಿಗಳ ಮತ್ತು ಯೋಧರ ಶಸ್ತ್ರಗಳ ತುಮುಲ ಶಬ್ಧವು ಕೇಳಿ ಬಂದಿತು. “ಮೇಲೇಳಿರಿ! ಪ್ರಹರಿಸಿರಿ! ಮುಂದೆ ಹೋಗಿರಿ! ಶತ್ರುವಿನ ಮೇಲೆ ಬೀಳಿರಿ!” ಹೀಗೆ ಹೇಳುತ್ತಾ ಯೋಧರು ರಣರಂಗದಲ್ಲಿ ಅನ್ಯೋನ್ಯರನ್ನು ಸಂಹರಿಸಿದರು. ಇತರೇತರರರನ್ನು ಸಂಹರಿಸುತ್ತಿದ್ದ ನರವರರು ಪ್ರಯೋಗಿಸುತ್ತಿದ್ದ ಶರವೃಷ್ಟಿಗಳು ಆಕಾಶವನ್ನು ತುಂಬಿ ಮೋಡಗಳ ನೆರಳಿನಂತೆಯೇ ತೋರುತ್ತಿದ್ದವು. ರಣದಲ್ಲಿ ಹತರಾದ ಭೂಪಾಲಕರು ಪತಾಕೆ-ಧ್ವಜ-ಚತ್ರ-ಅಶ್ವ-ಸೂತ-ಆಯುಧಗಳನ್ನು ಕಳೆದುಕೊಂಡು ಅಂಗ-ಅವಯವಗಳಿಂದ ವಿಹೀನರಾಗಿ ಭೂಮಿಯ ಮೇಲೆ ಬೀಳುತ್ತಿದ್ದರು. ವಜ್ರದಿಂದ ಒಡೆದು ಹೋದ ಗಿರಿಗಳಂತೆ ಶೈಲಶಿಖರಗಳಂತಿದ್ದ ಉತ್ತಮ ಆನೆಗಳು ಸವಾರರೊಂದಿಗೆ ಹತರಾಗಿ ಕೆಳಗುರುಳುತ್ತಿದ್ದವು. ಛಿನ್ನ-ಭಿನ್ನವಾದ ಮತ್ತು ಅಸ್ತವ್ಯಸ್ಥವಾದ ಅಲಂಕಾರ ಶರೀರಗಳಿಂದ ಕೂಡಿದ ಸಹಸ್ರಾರು ಕುದುರೆಗಳು ವೀರ ಆರೋಹಿಗಳೊಂದಿಗೆ ಹತಗೊಂಡು ಬೀಳುತ್ತಿದ್ದವು. ಆನೆ-ಕುದುರೆ-ರಥಗಳಿಂದ ಹತರಾಗಿ, ಎದುರಿದ್ದ ವೀರರಿಂದ ಸದೆಬಡೆಯಲ್ಪಟ್ಟು ಗಾಯಗೊಂಡ ಮತ್ತು ಕಳೆದುಕೊಂಡ ಅಂಗಾಂಗಗಳಿಂದ ಯುಕ್ತವಾಗಿದ್ದ ಸಹಸ್ರಾರು ಪದಾತಿಸಂಘಗಳು ಬೀಳುತ್ತಿದ್ದವು. ವಿಶಾಲವೂ, ಅಗಲವೂ, ಕೆಂಪಾಗಿಯೂ ಇದ್ದ ಕಣ್ಣುಗಳಿಂದ ಮತ್ತು ಪದ್ಮ-ಚಂದ್ರರಂತಿದ್ದ

ಮುಖಗಳಿಂದಲೂ ಕೂಡಿದ್ದ ಯುದ್ಧಶೌಂಡರ ಶಿರಗಳಿಂದ ಭೂಮಿಯು ಎಲ್ಲೆಲ್ಲಿಯೂ ತುಂಬಿಹೋಗಿತ್ತು.

ಭೂಮಿಯಲ್ಲಿ ಹೇಗೋ ಹಾಗೆ ಆಕಾಶದಲ್ಲಿಯೂ ವಿಮಾನಗಳಲ್ಲಿದ್ದ ಅಪ್ಸರ ಸಂಘಗಳು ಗೀತ-ವಾದ್ಯಗಳ ಧ್ವನಿಯನ್ನು ಜನರು ಆಕಾಶದಲ್ಲಿಯೂ ಕೇಳುತ್ತಿದ್ದರು. ಯುದ್ಧಾಭಿಮುಖರಾಗಿ ವೀರರಿಂದ ಹತರಾದ ಸಹಸ್ರಾರು ವೀರಾರನ್ನು ಅಪ್ಸರಗಣಗಳು ವಿಮಾನಗಳಲ್ಲಿ ಏರಿಸಿಕೊಂಡು ಹೋಗುತ್ತಿದ್ದವು. ಪ್ರತ್ಯಕ್ಷವಾಗಿ ಆ ಮಹದಾಶ್ಚರ್ಯವನ್ನು ನೋಡಿ ಸ್ವರ್ಗವನ್ನು ಬಯಸಿ ಪ್ರಹೃಷ್ಟಮನಸ್ಕರಾಗಿ ಶೂರರು ಬೇಗಬೇಗನೆ ಪರಸ್ಪರರನ್ನು ಕೊಲ್ಲುತ್ತಿದ್ದರು. ಯುದ್ಧದಲ್ಲಿ ರಥಿಗಳು ರಥಿಗಳೊಂದಿಗೆ, ಪದಾತಿಗಳು ಪದಾತಿಗಳೊಂದಿಗೆ, ಆನೆಗಳು ಆನೆಗಳೊಂದಿಗೆ ಮತ್ತು ಕುದುರೆಗಳು ಕುದುರೆಗಳೊಂದಿಗೆ ವಿಚಿತ್ರವಾಗಿ ಹೋರಾಡಿದರು. ಈ ರೀತಿ ಸಂಗ್ರಾಮದಲ್ಲಿ ಆನೆ-ಕುದುರೆ-ಜನರ ಕ್ಷಯವಾಗುತ್ತಿರಲು ಸೇನೆಯು ಧೂಳಿನಿಂದ ಆವೃತವಾಗಿ ದಿಕ್ಕುಕಾಣದೇ ಕೌರವರು ಕೌರವರನ್ನೇ ಮತ್ತು ಶತ್ರುಗಳು ಶತ್ರುಗಳನ್ನೇ ಕೊಲ್ಲತೊಡಗಿದರು. ದೇಹ-ಪಾಪಗಳನ್ನು ವಿನಾಶಿಸುವ ಆ ಯುದ್ಧದಲ್ಲಿ ಪರಸ್ಪರರ ಕೂದಲನ್ನು ಜಗ್ಗಾಡುತ್ತಿದ್ದರು. ಹಲ್ಲುಗಳಿಂದ ಕಚ್ಚುತ್ತಿದ್ದರು. ಉಗುರುಗಳಿಂದ ಪರೆದಾಡುತ್ತಿದ್ದರು.

ಮುಷ್ಟಿಯುದ್ಧ ಮಾಡುತ್ತಿದ್ದರು.

ಆ ರೀತಿ ಆನೆ-ಕುದುರೆ-ಜನ ಕ್ಷಯವು ನಡೆಯುತ್ತಿರಲು ನರರು, ಆನೆಗಳು ಮತ್ತು ಕುದುರೆಗಳ ದೇಹದಿಂದ ಸುರಿಯುತ್ತಿದ್ದ ರಕ್ತವು ಪ್ರವಾಹವಾಗಿ ಹರಿದು ಕೆಳಗೆ ಬಿದ್ದಿದ್ದ ಅನೇಕ ನರರ, ಆನೆಗಳ ಮತ್ತು ಕುದುರೆಗಳ ದೇಹಗಳನ್ನೇ ಕೊಚ್ಚಿಕೊಂಡು ಹೋಗುತ್ತಿತ್ತು. ನರಾಶ್ವಗಜ ಸಂಪನ್ನವಾಗಿದ್ದ ಆ ಮಹಾಘೋರ ನದಿಯಲ್ಲಿ ನರಾಶ್ವಗಜಸವಾರರ ರಕ್ತವೇ ನೀರಾಗಿದ್ದಿತು, ಮಾಂಸವೇ ಕೆಸರಾಗಿದ್ದಿತು. ನರಾಶ್ವಗಜದೇಹಗಳು ತೇಲುತ್ತಿದ್ದ ಆ ರಕ್ತದ ನದಿಯು ಹೇಡಿಗಳಿಗೆ ಭಯವನ್ನುಂಟುಮಾಡುತ್ತಿತ್ತು. ವಿಜಯೈಷಿಣಿಗಳು ಆಳವಿಲ್ಲದ ಸ್ಥಳದಲ್ಲಿ ದಾಟಿಕೊಂಡು ಹೋಗುತ್ತಿದ್ದರು. ಆಳವಿದ್ದಲ್ಲಿ ಹಾರಿಕೊಂಡು ಹೋಗುತ್ತಿದ್ದರು ಮತ್ತು ಇನ್ನು ಕೆಲವರು ಆ ರಕ್ತಕೋಡಿಯಲ್ಲಿ ಮುಳುಗಿಹೋಗುತ್ತಿದ್ದರು. ರಕ್ತದಿಂದ ತೋಯ್ದು ಹೋಗಿದ್ದ ಅವರ ದೇಹಗಳು, ಕವಚಗಳು ಮತ್ತು ವಸ್ತ್ರಗಳು ರಕ್ತದಂತೆ ಕೆಂಪಾಗಿಕಾಣುತ್ತಿದ್ದವು. ಆ ರಕ್ತನದಿಯಲ್ಲಿ ಕೆಲವರು ಗುಟುಕುಹಾಕುತ್ತಿದ್ದರು, ಸ್ನಾನಮಾಡುತ್ತಿದ್ದರು ಮತ್ತು ಮೂರ್ಛೆಹೋಗುತ್ತಿದ್ದರು. ರಥ-ಕುದುರೆ-ಆನೆಗಳು, ಆಯುಧ-ಆಭರಣಗಳು, ವಸ್ತ್ರ-ಕವಚಗಳು, ಕೊಲ್ಲಲ್ಪಡುತ್ತಿದ್ದವರು ಮತ್ತು

ಸತ್ತುಹೋದವರು, ಭೂಮಿ, ಆಕಾಶ, ಸ್ವರ್ಗ, ದಿಕ್ಕುಗಳು ಪ್ರಯಶಃ ಇವೆಲ್ಲವೂ ಕೆಂಪಾಗಿಯೇ ತೋರುತ್ತಿದ್ದವು. ಆ ಕೆಂಪುನದಿಯ ವಾಸನೆ, ಸ್ಪರ್ಷ, ರುಚಿ, ರೂಪ, ಜೋರಾಗಿ ಹರಿದುಹೋಗುತ್ತಿದ್ದುದರ ಶಬ್ಧ, ಇವುಗಳಿಂದ ಪ್ರಾಯಶಃ ಸೇನೆಗಳು ಮಹಾ ವಿಷಾದಕ್ಕೊಳಗಾಗಿದ್ದರು.

ನಾಶವಾಗಿಹೋಗಿದ್ದ ಕೌರವ ಸೇನೆಯನ್ನು ಭೀಮಸೇನನ ನಾಯಕತ್ವದಲ್ಲಿ ಸಾತ್ಯಕಿ ಪ್ರಮುಖ ಮಹಾರಥರು ಪುನಃ ಆಕ್ರಮಣಿಸಿದರು. ವೇಗವಾಗಿ ಆಕ್ರಮಣಿಸುತ್ತಿದ್ದ ಆ ಮಹಾತ್ಮರನ್ನು ಸಹಿಸಿಕೊಳ್ಳಲಾಗದೇ ಕೌರವ ಮಹಾಸೇನೆಯು ಪರಾಙ್ಮುಖವಾಯಿತು. ರಥಾಶ್ವಗಜಪದಾತಿಗಣಗಳು ಚೆಲ್ಲಾಪಿಲ್ಲಿಯಾಗಿ ಹೋದವು. ಯೋಧರ ಕವಚ-ಆಭರಣಗಳು ವಿಧ್ವಸ್ತವಾದವು. ಆಯುಧ-ಧನುಸ್ಸುಗಳು ತುಂಡಾಗಿ ಭೂಮಿಯ ಮೇಲೆ ಬಿದ್ದವು. ಮಹಾರಣ್ಯದಲ್ಲಿ ಸಿಂಹದಿಂದ ಆಕ್ರಮಣಿಸಲ್ಪಟ್ಟ ಗಜಸಂಕುಲವು ಹೇಗೋ ಹಾಗೆ ವಧಿಸಲ್ಪಡುತ್ತಿರುವ ಕೌರವ ಸೇನೆಯು ಎಲ್ಲ ಕಡೆಗಳಿಗೆ ಪಲಾಯನಗೈದಿತು.

## ಕರ್ಣ-ಭೀಮಸೇನರ ಯುದ್ಧ

ದುರ್ಯೋಧನನು ಎಷ್ಟೇ ಕೂಗಿಕೊಂಡರೂ ನಿನ್ನವರು ಹಿಂದಿರುಗಲಿಲ್ಲ. ಆಗ ಪಕ್ಷ-ಪ್ರಪಕ್ಷಗಳಲ್ಲಿದ್ದ ಕುರುಗಳು ಸಶಸ್ತ್ರರಾಗಿ ರಣದಲ್ಲಿ ಭೀಮನನ್ನು ಆಕ್ರಮಣಿಸಿದರು. ಧಾರ್ತರಾಷ್ಟ್ರರು ಪರಾಙ್ಮುಖರಾಗಿ

ಓಡುತ್ತಿರುವುದನ್ನು ನೋಡಿ ಕರ್ಣನೂ ಕೂಡ ಹಸವರ್ಣದ ಕುದುರೆಗಳನ್ನು ವೃಕೋದರನಿದ್ದಲ್ಲಿಗೆ ಹೋಗುವಂತೆ ಹೇಳಿದನು. ಆಹವಶೋಭೀ ಶಲ್ಯನಿಂದ ಪ್ರಚೋದಿತಗೊಂಡ ಆ ಕುದುರೆಗಳು ಭೀಮಸೇನನ ರಥವನ್ನು ತಲುಪಿ ಅವನ ಕುದುರೆಗಳೊಂದಿಗೆ ಮಿಳಿತವಾದವು. ತನ್ನ ಬಳಿ ಬರುತ್ತಿದ್ದ ಕರ್ಣನನ್ನು ನೋಡಿ ಕ್ರೋಧಸಮನ್ವಿತ ಭೀಮನು ಕರ್ಣನ ವಿನಾಶಗೊಳಿಸಬೇಕೆಂದೇ ನಿರ್ಧರಿಸಿದನು. ಅವನು ವೀರ ಸಾತ್ಯಕಿಗೂ ಪಾರ್ಷತ ಧೃಷ್ಟದ್ಯುಮ್ನನಿಗೂ ಹೇಳಿದನು:

> “ನನ್ನ ಕಣ್ಣೆದುರಿಗೇ ಮಹಾಸಂಕಟದಂತೆ ಮುಕ್ತನಾದಂತೆ ತೋರುತ್ತಿರುವ ಯುಧಿಷ್ಠಿರನನ್ನು ರಕ್ಷಿಸಿ. ನನ್ನ ಎದುರಿಗೇ ದುರಾತ್ಮ ಕರ್ಣನು ದುರ್ಯೋಧನನ ಪ್ರೀತ್ಯರ್ಥವಾಗಿ ಯುಧಿಷ್ಠಿರನನ್ನು ಸಕಲವಿಧಧ ಯುದ್ಧ ಸಾಮಗ್ರಿಗಳಿಂದ ವಿಹೀನನನ್ನಾಗಿ ಮಾಡಿದ್ದಾನೆ! ಇಂದು ಯುಧಿಷ್ಠಿರನ ದುಃಖವನ್ನು ಅಂತ್ಯಗೊಳಿಸುತ್ತೇನೆ. ಘೋರ ರಣದಲ್ಲಿ ಕರ್ಣನನ್ನು ನಾನು ಕೊಲ್ಲುತ್ತೇನೆ ಅಥವಾ ಅವನು ನನ್ನನ್ನು ಸಂಹರಿಸುತ್ತಾನೆ. ಸತ್ಯವನ್ನೇ ನಾನು ಹೇಳುತ್ತಿದ್ದೇನೆ! ಇಂದು ರಾಜನನ್ನು ನಿಮ್ಮಲ್ಲಿ ನ್ಯಾಸಭೂತವಾಗಿ ಇಡುತ್ತಿದ್ದೇನೆ. ನೀವು

> ವಿಗತಜ್ವರರಾಗಿ ಇವನ ಸಂರಕ್ಷಣೆಗೆ ಸರ್ವ ಪ್ರಯತ್ನವನ್ನೂ ಮಾಡಿರಿ!”

ಹೀಗೆ ಹೇಳಿ ಆ ಮಹಾಬಾಹುವು ಮಹಾ ಸಿಂಹನಾದದಿಂದ ದಿಕ್ಕುಗಳೆಲ್ಲವನ್ನೂ ಮೊಳಗಿಸಿ ಆಧಿರಥಿ ಕರ್ಣನ ಬಳಿಸಾರಿದನು. ಭೀಮನು ತ್ವರೆಮಾಡಿ ಬರುತ್ತಿರುವುದನ್ನು ನೋಡಿ ಮದ್ರರಾಜನು ಸೂತಪುತ್ರನಿಗೆ ಹೀಗೆಂದನು:

> “ಕರ್ಣ! ದೀರ್ಘಕಾಲದಿಂದಲೂ ಕೂಡಿಟ್ಟುಕೊಂಡಿರುವ ಕ್ರೋಧವನ್ನು ನಿನ್ನ ಮೇಲೆ ಸುರಿಸಲು ನಿಶ್ಚಯಿಸಿರುವ ಕ್ರುದ್ಧ ಮಹಾಬಾಹು ಪಾಂಡವನಂದನನ್ನು ನೋಡು! ಹಿಂದೆಂದೂ - ಅಭಿಮನ್ಯು ಅಥವಾ ರಾಕ್ಷಸ ಘಟೋತ್ಕಚರು ಹತರಾದಾಗಲೂ - ಇವನ ಇಂತಹ ರೂಪವನ್ನು ನಾನು ಕಂಡಿರಲಿಲ್ಲ! ಕ್ರುದ್ಧನಾಗಿ ಕಾಲಾಗ್ನಿ ಸದೃಶ ಶುಭ ರೂಪವನ್ನು ತಾಳಿರುವ ಇವನು ತ್ರೈಲೋಕ್ಯದ ಸರ್ವವನ್ನೂ ನಿವಾರಿಸಲು ಶಕ್ತನಾಗಿದ್ದಾನೆ.”

ಮದ್ರರಾಜನು ರಾಧೇಯನಿಗೆ ಹೀಗೆ ಹೇಳುತ್ತಿರಲು ಕ್ರೋಧದೀಪ್ತ ಕರ್ಣನು ವೃಕೋದರನನ್ನು ಎದುರಿಸಿದನು. ಅಲ್ಲಿದ್ದ ಭೀಮನನ್ನು ನೋಡಿ ರಾಧೇಯನು ನಗುತ್ತಿರುವನೋ ಎನ್ನುವಂತೆ ಶಲ್ಯನಿಗೆ

ಇಂತೆಂದನು:

“ಮದ್ರಜನೇಶ್ವರ! ಇಂದು ಭೀಮಸೇನನ ಕುರಿತು ನೀನು ನನಗೆ ಹೇಳುತ್ತಿರುವುದು ಸತ್ಯವೇ ಎನ್ನುವುದರಲ್ಲಿ ಸಂಶಯವಿಲ್ಲ. ವೃಕೋದರನು ಶೂರ, ವೀರ, ಕೋಪಿಷ್ಟ, ಶರೀರ ಮತ್ತು ಪ್ರಾಣಗಳ ಭಯವನ್ನು ತೊರೆದವನು ಮತ್ತು ಬಲದಲ್ಲಿ ಅತ್ಯಧಿಕನು. ಅಂದು ವಿರಾಟನಗರದಲ್ಲಿ ಅಜ್ಞಾತವಾಸದಲ್ಲಿರುವಾಗ ದ್ರೌಪದಿಯ ಹಿತವನ್ನು ಬಯಸಿ ಇವನು ಕೇವಲ ಬಾಹುಗಳನ್ನು ಬಳಸಿ ಗೂಢಭಾವವನ್ನು ಬಳಸಿ ಗಣಗಳೊಂದಿಗೆ ಕೀಚಕನನ್ನು ಸಂಹರಿಸಿದ್ದನು. ಅವನು ಇಂದು ಕ್ರೋಧಮೂರ್ಛಿತನಾಗಿ ಸನ್ನದ್ಧನಾಗಿ ಸಂಗ್ರಾಮದ ಶಿರೋಭಾಗದಲ್ಲಿ ಬಂದಿದ್ದಾನೆ. ಆದರೆ ರಣದಲ್ಲಿ ದಂಡವನ್ನು ಎತ್ತಿಹಿಡಿದಿರುವ ಮೃತ್ಯುವಿನೊಂದಿಗೆ ಇವನು ಹೋರಾಡಬಲ್ಲನೇ? ಸಮರದಲ್ಲಿ ಅರ್ಜುನನನ್ನು ನಾನು ಅಥವಾ ಧನಂಜಯನು ನನ್ನನ್ನು ಸಂಹರಿಸಬೇಕೆಂದು ಬಹುಕಾಲದಿಂದ ನನ್ನ ಅಭಿಲಷೆಯೂ ಮನೋರಥವೂ ಆಗಿತ್ತು. ಬಹುಷಃ ಅದಕ್ಕಾಗಿಯೇ ಭೀಮನೊಡನೆ ನನ್ನ ಸಮಾಗಮವಾಗುತ್ತಿದೆ. ಭೀಮಸೇನನನ್ನು ಸಂಹರಿಸಿದರೆ

ಅಥವಾ ವಿರಥನನ್ನಾಗಿ ಮಾಡಿದರೆ ಪಾರ್ಥನು ನನ್ನೊಡನೆ ಯುದ್ಧಮಾಡಲು ಬಂದೇಬರುತ್ತಾನೆ. ಆಗ ಒಳ್ಳೆಯದೇ ಆಗುತ್ತದೆ. ಇದರ ಕುರಿತು ನಿನ್ನ ಅಭಿಪ್ರಾಯವೇನೆಂದು ಬೇಗನೇ ನನಗೆ ಹೇಳು!"

ರಾಧೇಯನ ಆ ಮಾತನ್ನು ಕೇಳಿ ಶಲ್ಯನು ಕಾಲೋಚಿತವಾಗಿ ಸೂತಪುತ್ರನಿಗೆ ಹೀಗೆಂದನು:

"ಮಾಹಾಬಾಹೋ! ಮೊದಲು ಮಹಾಬಲ ಭೀಮಸೇನನನ್ನು ಎದುರಿಸು. ಭೀಮಸೇನನನ್ನು ಸೋಲಿಸಿದರೆ ಅರ್ಜುನನು ನಿನಗೆ ದೊರೆಯುತ್ತಾನೆ. ಬಹಳಕಾಲದಿಂದ ಹೃದ್ಗತವಾಗಿದ್ದ ನಿನ್ನ ಅಭೀಷ್ಟವು ಪೂರೈಸುತ್ತದೆ. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ!"

ಇದನ್ನು ಕೇಳಿ ಕರ್ಣನು ಪುನಃ ಶಲ್ಯನಿಗೆ ಹೇಳಿದನು:

"ಯುದ್ಧದಲ್ಲಿ ನಾನು ಅರ್ಜುನನನ್ನು ಸಂಹರಿಸುತ್ತೇನೆ ಅಥವಾ ಧನಂಜಯನು ನನ್ನನ್ನು ಸಂಹರಿಸುತ್ತಾನೆ. ಯುದ್ಧದಲ್ಲಿ ಮನಸ್ಸನ್ನಿಟ್ಟು ರಥವನ್ನು ಮುಂದೊಯ್ಯಿ!"

ಆಗ ಶಲ್ಯನು ಭೀಮನು ಎಲ್ಲಿ ಸೇನೆಗಳನ್ನು ಓಡಿಸುತ್ತಿದ್ದನೋ ಅಲ್ಲಿಗೆ

ರಥವನ್ನು ಕೊಂಡೊಯ್ದನು. ಆಗ ಕರ್ಣ-ಭೀಮರ ಸಮಾಗಮ ಸಮಯದಲ್ಲಿ ತೂರ್ಯ-ಭೇರಿಗಳ ಮಹಾನಿನಾದವುಂಟಾಯಿತು. ಬಲಶಾಲೀ ಭೀಮಸೇನನು ಸಂಕ್ರುದ್ಧನಾಗಿ ಕೌರವ ಸೇನೆಯನ್ನು ವಿಮಲ ತೀಕ್ಷ್ಣ ನಾರಾಚಗಳಿಂದ ಪಲಾಯನಗೊಳಿಸಿದನು. ಕರ್ಣ-ಪಾಂಡವರ ನಡುವೆ ರೌದ್ರ ಭೀಮರೂಪ ತುಮುಲ ಯುದ್ಧವು ನಡೆಯಿತು. ಆಗ ಸ್ವಲ್ಪಹೊತ್ತಿನಲ್ಲಿಯೇ ಪಾಂಡವನು ಕರ್ಣನ ಮೇಲೆ ಎರಗಿದನು. ತನ್ನ ಮೇಲೆ ಆಕ್ರಮಣಿಸುತ್ತಿದ್ದ ಅವನನ್ನು ನೋಡಿ ವೈಕರ್ತನನು ಕ್ರುದ್ಧನಾಗಿ ಅವನ ಸ್ತನಾಂತರದಲ್ಲಿ ಪ್ರಹರಿಸಿದನು. ಪುನಃ ಆ ಅಮೇಯಾತ್ಮನು ಶರವರ್ಷಗಳಿಂದ ಭೀಮಸೇನನನ್ನು ಮುಚ್ಚಿಬಿಟ್ಟನು. ಹೀಗೆ ಪ್ರಹರಿಸಿದ ಸೂತಪುತ್ರನನ್ನು ಭೀಮನು ಪತ್ರಿಗಳಿಂದ ಮುಸುಕಿದನು. ಪುನಃ ಕರ್ಣನನ್ನು ಎಂಭತ್ತು ನಿಶಿತ ನತಪರ್ವಬಾಣಗಳಿಂದ ಹೊಡೆದನು. ಕರ್ಣನು ಪತ್ರಿಯಿಂದ ಅವನ ಧನುಸ್ಸನ್ನು ನಡುವಿನಲ್ಲಿಯೇ ತುಂಡರಿಸಿದನು. ಕೂಡಲೇ ಸರ್ವಾವರಣಭೇದೀ ತೀಕ್ಷ್ಣ ನಾರಾಚದಿಂದ ಧನುಸ್ಸು ತುಂಡಾಗಿದ್ದ ಭೀಮನ ವಕ್ಷಸ್ಥಳಕ್ಕೆ ಹೊಡೆದನು. ಅನಂತರ ವೃಕೋದರನು ಅನ್ಯ ಧನುಸ್ಸನ್ನು ಎತ್ತಿಕೊಂಡು ನಿಶಿತ ಶರಗಳಿಂದ ಸೂತಪುತ್ರನ ಮರ್ಮಗಳನ್ನು ಪ್ರಹರಿಸಿ ಭೂಮ್ಯಾಕಾಶಗಳನ್ನು ನಡುಗಿಸುವಂತೆ ಬಲವತ್ತಾಗಿ ಗರ್ಜಿಸಿದನು. ವನದಲ್ಲಿ ಮದೋತ್ಕಟ ಆನೆಯನ್ನು ಪಂಜುಗಳಿಂದ ಆಕ್ರಮಣಿಸುವಂತೆ ಕರ್ಣನು

ಭೀಮಸೇನನನ್ನು ಇಪ್ಪತ್ತೈದು ನಾರಾಚಗಳಿಂದ ಪ್ರಹರಿಸಿದನು. ಸಾಯಕಗಳಿಂದ ಗಾಯಗೊಂಡ ಪಾಂಡವನು ಕ್ರೋಧಮೂರ್ಛಿತನಾಗಿ, ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು, ಸೂತಪುತ್ರನನ್ನು ವಧಿಸಲು ಬಯಸಿ. ಆ ಉತ್ತಮ ಧನುಸ್ಸಿಗೆ ಗಿರಿಗಳನ್ನು ಕೂಡ ಭೇದಿಸಬಲ್ಲ ಸಾಯಕವನ್ನು ಹೂಡಿದನು. ಬಲವನ್ನುಪಯೋಗಿಸಿ ಧನುಸ್ಸನ್ನು ಆಕರ್ಣಾಂತವಾಗಿ ಎಳೆದು ಮಾರುತಿಯು ಕರ್ಣನನ್ನು ವಧಿಸಲು ಬಯಸಿ ಆ ಬಾಣವನ್ನು ಪ್ರಯೋಗಿಸಿದನು.

ಆ ಬಾಣವು ಸಿಡಿಲಿನಂತೆ ಶಬ್ಧಮಾಡುತ್ತಾ ವಜ್ರವು ವೇಗವಾಗಿ ಪರ್ವತವನ್ನು ಹೇಗೋ ಹಾಗೆ ರಣದಲ್ಲಿ ಕರ್ಣನನ್ನು ಸೀಳಿತು. ಭೀಮಸೇನನಿಂದ ಪ್ರಹೃತನಾದ ಸೂತಪುತ್ರನು ಮೂರ್ಛೆಹೋಗಿ ರಥದಲ್ಲಿಯೇ ಒರಗಿದನು. ಆಗ ಮದ್ರಾಧಿಪನು ವಿಸಂಜ್ಞ ಸೂತನಂದನನನ್ನು ನೋಡಿ ಕರ್ಣನ ರಥವನ್ನು ಅಲ್ಲಿಂದ ದೂರ ಕೊಂಡೊಯ್ದನು.  ಕರ್ಣನು ಪರಾಜಿತನಾಗಲು ಭೀಮಸೇನನು ಇಂದ್ರನು ದಾನವೀ ಸೇನೆಯನ್ನು ಹೇಗೋ ಹಾಗೆ ಧಾರ್ತರಾಷ್ಟ್ರರ ಮಹಾಸೇನೆಯನ್ನು ಪಲಾಯನಗೊಳಿಸಿದನು.

ಸೂತಪುತ್ರ ರಾಧೇಯನು ವಿಭ್ರಾಂತನಾದುದನ್ನು ನೋಡಿ ದುರ್ಯೋಧನನು ಮಹಾಸೇನೆಗಳೊಂದಿಗಿದ್ದ ಸಹೋದರರಿಗೆ

ಹೇಳಿದನು:

> “ನಿಮಗೆ ಮಂಗಳವಾಗಲಿ! ಭೀಮಸೇನನ ಭಯವೆಂಬ ಅಗಾಧವಾದ ವ್ಯಸನ ಸಾಗರದಲ್ಲಿ ಮುಳುಗುತ್ತಿರುವ ರಾಧೇಯನನ್ನು ರಕ್ಷಿಸಲು ಶೀಘ್ರವಾಗಿ ಹೋಗಿ!”

ರಾಜನಿಂದ ಹಾಗೆ ಆಜ್ಞಾಪಿಸಲ್ಪಟ್ಟ ಅವರು ಸಂಕ್ರುದ್ಧರಾಗಿ ಭೀಮಸೇನನನ್ನು ಸಂಹರಿಸಲು ಪತಂಗಗಳು ಬೆಂಕಿಯನ್ನು ಹೇಗೋ ಹಾಗೆ ಅವನನ್ನು ಆಕ್ರಮಣಿಸಿದರು. ಶ್ರುತಾಯು, ದುರ್ಧರ, ಕ್ರಾಥ, ವಿವಿತ್ಸು, ವಿಕಟ, ಸಮ, ನಿಷಂಗೀ, ಕವಚೀ, ಪಾಶೀ, ನಂದ, ಉಪನಂದ, ದುಷ್ಪ್ರಧರ್ಷ, ಸುಬಾಹು, ವಾತವೇಗ, ಸುವರ್ಚಸ, ಧನುರ್ಗ್ರಾಹ, ಸುಬಾಹು, ವಾತವೇಗ, ಸುವರ್ಚಸ – ಈ ವೀರ್ಯವಂತ ಮಹಾಬಲರು ರಥಗಳಿಂದ ಪರಿವೃತರಾಗಿ ಭೀಮಸೇನನನ್ನು ಸಂಧಿಸಿ ಅವನನ್ನು ಎಲ್ಲಕಡೆಗಳಿಂದ ಮುತ್ತಿದರು. ಅವರು ನಾನಾ ವಿಧದ ಶರವ್ರಾತಗಳನ್ನು ಎಲ್ಲಕಡೆಗಳಿಂದಲೂ ಪ್ರಯೋಗಿಸಿದರು. ಅವರಿಂದ ಪೀಡಿಸಲ್ಪಟ್ಟ ಭೀಮಸೇನನು ತನ್ನ ಮೇಲೆ ಎರಗುತ್ತಿದ್ದ ಧೃತರಾಷ್ಟ್ರ ಪುತ್ರರ ಬೆಂಬಲಿಗರಾಗಿದ್ದ ಐವತ್ತು ರಥಿಗಳನ್ನು ಕ್ಷಣಮಾತ್ರದಲ್ಲಿ ಧ್ವಂಸಗೊಳಿಸಿದನು. ಅನಂತರ ಭೀಮನು ಕ್ರುದ್ಧನಾಗಿ ಭಲ್ಲದಿಂದ ಕುಂಡಲ ಕಿರೀಟಗಳೊಂದಿಗೆ ವಿವಿತ್ಸುವಿನ ಚಂದ್ರೋಪಮ ಶಿರವನ್ನು

ಅಪಹರಿಸಿದನು. ಭೀಮನಿಂದ ಹತನಾಗಿ ಅವನು ಭೂಮಿಯ ಮೇಲೆ ಬಿದ್ದನು. ಸಮರದಲ್ಲಿ ಶೂರ ಭ್ರಾತರನು ಹತನಾದುದನ್ನು ನೋಡಿ ಅವರು ಭೀಮನನ್ನು ಎಲ್ಲ ಕಡೆಗಳಿಂದ ಆಕ್ರಮಣಿಸಿದರು. ಆಗ ಸಮರದಲ್ಲಿ ಭೀಮನು ಇನ್ನೆರಡು ಭಲ್ಲಗಳಿಂದ ಧೃತರಾಷ್ಟ್ರನ ಇನ್ನಿಬ್ಬರು ಪುತ್ರರ ಪ್ರಾಣಗಳನ್ನು ಅಪಹರಿಸಿದನು. ಆಗ ಭಿರುಗಾಳಿಯಿಂದ ಹೊಡೆಯಲ್ಪಟ್ಟ ಮರಗಳಂತೆ ದೇವಗರ್ಭಸಮಾನ ವಿಕಟ ಮತ್ತು ಸಮರಿಬ್ಬರೂ ಧರೆಯ ಮೇಲೆ ಬಿದ್ದರು. ಅನಂತರ ತ್ವರೆಮಾಡಿ ಭೀಮನು ತೀಕ್ಷ್ಣ ನಾರಾಚದಿಂದ ಕ್ರಾಥನನ್ನು ಸಂಹರಿಸಿ ಭೂಮಿಯ ಮೇಲೆ ಕೆಡವಿ ಯಮಕ್ಷಯಕ್ಕೆ ಕಳುಹಿಸಿದನು. ಧೃತರಾಷ್ಟ್ರನ ಪುತ್ರರು ಹತರಾಗಲು ಅಲ್ಲಿ ತೀವ್ರ ಹಾಹಾಕಾರವುಂಟಾಯಿತು. ಹೀಗೆ ಆ ಸೈನ್ಯವು ಕ್ಷೋಭೆಗೊಳ್ಳಲು ಭೀಮಸೇನನು ನಂದ-ಉಪನಂದರನ್ನು ಯಮಸಾದನಕ್ಕೆ ಕಳುಹಿಸಿದನು. ಕಾಲಾಂತಕ ಯಮನಂತಿರುವ ಭೀಮಸೇನನನ್ನು ರಣದಲ್ಲಿ ನೋಡಿ ಭೀತರೂ ವಿಹ್ವಲರೂ ಆಗಿದ್ದ ಧೃತರಾಷ್ಟ್ರ ಪುತ್ರರು ಪಲಾಯನಗೈದರು. ಅವರು ಹತರಾದುದನ್ನು ನೋಡಿ ಸೂತಪುತ್ರನು ತನ್ನ ಹಂಸವರ್ಣದ ಕುದುರೆಗಳನ್ನು ಪುನಃ ಪಾಂಡವನಿದ್ದಲ್ಲಿಗೆ ಓಡಿಸಿದನು. ಮದ್ರರಾಜನಿಂದ ಪ್ರೇರಿತ ಆ ಕುದುರೆಗಳು ವೇಗವಾಗಿ ಭೀಮಸೇನನ ರಥದ ಬಳಿಸಾರಿ ಸಜ್ಜಾಗಿ ನಿಂತವು.

ಆಗ ಕರ್ಣ-ಪಾಂಡವರ ನಡುವೆ ಘೋರರೂಪವಾದ ರೌದ್ರ ತುಮುಲ ಯುದ್ಧವು ನಡೆಯಿತು. ಆಗ ಮುಹೂರ್ತಮಾತ್ರದಲ್ಲಿ ಕರ್ಣನು ಅತಿಕಷ್ಟಪಡದೇ ನಗುತ್ತಿರುವನೋ ಎನ್ನುವಂತೆ ಭೀಮನನ್ನು ವಿರಥನನ್ನಾಗಿಸಿದನು. ಅನಿಲೋಪಮ ಮಹಾಬಾಹು ಭರತಶ್ರೇಷ್ಠನು ನಗುತ್ತಿರುವನೋ ಎನ್ನುವಂತೆ ಗದೆಯನ್ನು ಹಿಡಿದು ತನ್ನ ಉತ್ತಮ ರಥದಿಂದ ಧುಮುಕಿದನು. ಕೂಡಲೇ ಕ್ರುದ್ಧರೂಪ ಪರಂತಪ ಭೀಮನು ಈಷಾದಂಡ ಸಮಾನ ದಂತಗಳಿಂದ ಪ್ರಹರಿಸುತ್ತಿದ್ದ ಏಳುನೂರು ಆನೆಗಳನ್ನು ವಧಿಸಿದನು. ಆನೆಗಳ ಮರ್ಮಸ್ಥಾನಗಳನ್ನು ತಿಳಿದಿದ್ದ ಭೀಮಸೇನನು ಜೋರಾಗಿ ಗರ್ಜಿಸುತ್ತಾ ಆನೆಗಳ ಮರ್ಮಸ್ಥಳಗಳನ್ನೂ, ತುಟಿಗಳನ್ನೂ, ಕಣ್ಣುಗಳನ್ನೂ, ಕುಂಭಸ್ಥಳಗಳನ್ನೂ, ಕಪೋಲಗಳನ್ನೂ ಪ್ರಹರಿಸಿ ವಧಿಸುತ್ತಿದ್ದನು. ಭಯಗೊಂಡ ಆ ಆನೆಗಳು ಓಡಿಹೋಗಲು ಮಾವುತರು ಅವುಗಳನ್ನು ಪುನಃ ಯುದ್ಧಕ್ಕೆ ಎಳೆತಂದರು. ಆ ಮಹಾಕಾಯದ ಆನೆಗಳು ಮೇಘಗಳು ದಿವಾಕರನನ್ನು ಹೇಗೋ ಹಾಗೆ ಭೀಮಸೇನನನ್ನು ಸುತ್ತುವರೆದವು. ಮಾವುತ-ಆಯುಧ-ಕೇತುಗಳಿಂದ ಯುಕ್ತವಾಗಿದ್ದ ಆ ಏಳುನೂರು ಆನೆಗಳನ್ನು ಭೀಮಸೇನನು ಭೂಮಿಯ ಮೇಲೆ ನಿಂತುಕೊಂಡೇ ಗದೆಯಿಂದ – ಭಿರುಗಾಳಿಯು ಶರತ್ಕಾಲದ ಮೋಡಗಳನ್ನು ಹೇಗೋ ಹಾಗೆ – ನಾಶಗೊಳಿಸಿದನು. ಅನಂತರ ಕೌಂತೇಯನು ಯುದ್ಧದಲ್ಲಿ ಪುನಃ ಶಕುನಿಯ ಐವತ್ತೆರಡು

ಅತಿಬಲಶಾಲೀ ಆನೆಗಳನ್ನು ಸದೆಬಡಿದನು. ಹಾಗೆಯೇ ಪಾಂಡವ ಭೀಮಸೇನನು ನೂರಕ್ಕೂ ಹೆಚ್ಚು ರಥಗಳನ್ನೂ ಪದಾತಿಗಳನ್ನೂ ಸಂಹರಿಸಿ ಯುದ್ಧದಲ್ಲಿ ಕೌರವ ಸೇನೆಯನ್ನು ಸಂತಾಪಗೊಳಿಸಿದನು. ಪ್ರಜ್ವಲಿಸುತ್ತಿದ್ದ ಸೂರ್ಯನಿಂದ ಮತ್ತು ಭೀಮನಿಂದ ದಹಿಸಲ್ಪಡುತ್ತಿದ್ದ ಕೌರವ ಸೇನೆಯು ಬೆಂಕಿಯಲ್ಲಿ ಹಾಕಿದ ಚರ್ಮದಂತೆ ಕುಗ್ಗಿಹೋಯಿತು. ಭೀಮನ ಭಯದಿಂದ ನಡುಗುತ್ತಿದ್ದ ಕೌರವರು ಭೀಮನೊಡನೆ ಯುದ್ಧಮಾಡುವುದನ್ನು ಬಿಟ್ಟು ಹತ್ತು ದಿಕ್ಕುಗಳಲ್ಲಿಯೂ ಪಲಾಯನಮಾಡತೊಡಗಿದರು. ಒಡನೆಯೇ ಚರ್ಮದ ಕವಚಗಳನ್ನು ಧರಿಸಿದ್ದ ಐದು ನೂರು ಅನ್ಯರು ಗಂಭೀರವಾಗಿ ಶಬ್ಧಮಾಡುತ್ತಿದ್ದ ರಥಗಳಲ್ಲಿ ಕುಳಿತು ಎಲ್ಲಕಡೆಗಳಿಂದ ಶರವೃಷ್ಟಿಗಳನ್ನು ಸುರಿಸುತ್ತಾ ಭೀಮನನ್ನು ಆಕ್ರಮಣಿಸಿದರು. ವಿಷ್ಣುವು ಅಸುರರನ್ನು ಹೇಗೋ ಹಾಗೆ ಭೀಮನು ಗದೆಯಿಂದ ಅವರೆಲ್ಲರನ್ನು ಸಾರಥಿ, ರಥ, ಪತಾಕೆ, ಧ್ವಜ ಮಾತು ಆಯುಧಗಳ ಸಹಿತ ಪುಡಿಪುಡಿಮಾಡಿದನು.

ಅನಂತರ ಶಕುನಿಯಿಂದ ನಿರ್ದೇಶಿಸಲ್ಪಟ್ಟ ಮೂರುಸಾವಿರ ಶೂರಸಮ್ಮತ ಕುದುರೆಸವಾರರು ಶಕ್ತಿ-ಋಷ್ಟಿ-ಪ್ರಾಸಗಳನ್ನು ಹಿಡಿದು ಭೀಮನ ಮೇಲೆ ಎರಗಿದರು. ಆ ಅಶ್ವಾರೋಹೀ ಯವನರನ್ನು ಭೀಮನು ಹಾರುತ್ತಾ ವಿವಿಧ ಮಾರ್ಗಗಳಲ್ಲಿ ಸಂಚರಿಸುತ್ತಾ ಹೊಡೆದು

ಸಂಹರಿಸಿದನು. ಖಡ್ಗದಿಂದ ವೃಕ್ಷಗಳನ್ನು ತುಂಡರಿಸುವಾಗ ಹೇಗೆ ಟಪಾ ಟಪಾ ಶಬ್ಧವುಂಟಾಗುವುದೋ ಹಾಗೆ ಗದೆಯ ಪ್ರಹಾರದಿಂದ ಎಲ್ಲಕಡೆ ಜೋರಾಗಿ ಶಬ್ಧವು ಕೇಳತೊಡಗಿತು. ಹೀಗೆ ಸುಬಲಪುತ್ರನ ಮೂರುಸಾವಿರ ಉತ್ತಮ ಕುದುರೆಗಳನ್ನು ಸಂಹರಿಸಿ ಭೀಮಸೇನನು ಕ್ರುದ್ಧನಾಗಿ ಇನ್ನೊಂದು ರಥವನ್ನೇರಿ ರಾಧೇಯನನ್ನು ಆಕ್ರಮಣಿಸಿದನು.

ಕರ್ಣನಾದರೋ ಸಮರದಲ್ಲಿ ಧರ್ಮಪುತ್ರನನ್ನು ಶರಗಳಿಂದ ಮುಸುಕಿ, ಸಾರಥಿಯನ್ನು ಕೆಳಗುರುಳಿಸಿದನು. ಯುದ್ಧದಲ್ಲಿ ಆ ರಥವು ಪಲಾಯನಮಾಡುತ್ತಿರುವುದನ್ನು ನೋಡಿ ಮಹಾರಥ ಕರ್ಣನು ಕಂಕಪತ್ರಿ ಜಿಹ್ಮಗ ಬಾಣಗಳನ್ನು ಸುರಿಸುತ್ತಾ ಅನುಸರಿಸಿ ಹೋದನು. ರಾಜನನ್ನು ಶರಗಳಿಂದ ಮುಚ್ಚಿ ಬೆನ್ನಟ್ಟಿ ಹೋಗುತ್ತಿದ್ದ ಕರ್ಣನನ್ನು ನೋಡಿ ಮಾರುತಿ ಭೀಮನು ಕ್ರುದ್ಧನಾಗಿ ಕರ್ಣನನ್ನು ಶರಜಾಲಗಳಿಂದ ಮುಚ್ಚಿಬಿಟ್ಟನು. ಕೂಡಲೆ ಶತ್ರುಕರ್ಶನ ರಾಧೇಯನು ಹಿಂದಿರುಗಿ ನಿಶಿತ ಶರಗಳಿಂದ ಭೀಮನನ್ನು ಎಲ್ಲಕಡೆಗಳಿಂದ ಮುಚ್ಚಿಬಿಟ್ಟನು.

## ಕರ್ಣ-ಸಾತ್ಯಕಿಯರ ಯುದ್ಧ

ಭೀಮಸೇನನ ರಥದ ಕಡೆ ತಿರುಗಿದ ಕರ್ಣನನ್ನು ಸಾತ್ಯಕಿಯು ಭೀಮಸೇನನ ಪಾರ್ಷ್ಣಿಗ್ರಹಣ ಕಾರ್ಯವನ್ನು ಮಾಡುತ್ತಿದ್ದುದರಿಂದ ಆಕ್ರಮಣಿಸಿದನು. ಅವನ ಶರಗಳಿಂದ ಚೆನ್ನಾಗಿ ಪ್ರಹರಿಸಲ್ಪಟ್ಟ ಕರ್ಣನು

ಸಾತ್ಯಕಿಯನ್ನೇ ಆಕ್ರಮಣಿಸಿದನು. ಸರ್ವಧನ್ವಿಗಳಲ್ಲಿ ಶ್ರೇಷ್ಠರಾಗಿದ್ದ ಅವರಿಬ್ಬರು ಮನಸ್ವಿಗಳೂ ಅನ್ಯೋನ್ಯರನ್ನು ಎದುರಿಸಿ ವಿಚಿತ್ರ ಶರಗಳನ್ನು ಪ್ರಯೋಗಿಸುತ್ತಾ ಪ್ರಕಾಶಿಸುತ್ತಿದ್ದರು.

ಇಬ್ಬರೂ ಬಿಡುತ್ತಿದ್ದ ಬಾಣಜಾಲಗಳು ಕ್ರೌಂಚಪಕ್ಷಿಯ ಪುಚ್ಛದಂತೆ ಎಣ್ಣೆಗೆಂಪಾಗಿಯೂ, ರೌದ್ರವಾಗಿಯೂ, ಭಯಂಕರವಾಗಿಯೂ ಕಾಣುತ್ತಿದ್ದವು. ಅವರಿಬ್ಬರು ಪ್ರಯೋಗಿಸುತ್ತಿದ್ದ ಸಹಸ್ರಾರು ಶರಗಳಿಂದಾಗಿ ಅಲ್ಲಿದ್ದವರಿಗೆ ಸೂರ್ಯನ ಪ್ರಭೆಯಾಗಲೀ, ಆಕಾಶವಾಗಲೀ, ದಿಕ್ಕು-ಉಪದಿಕ್ಕುಗಳಾಗಲೀ ತಿಳಿಯುತ್ತಿರಲಿಲ್ಲ. ಮಧ್ಯಾಹ್ನದಲ್ಲಿ ಉರಿಯುತ್ತಿದ್ದ ಭಾಸ್ಕರನ ಮಹಾಪ್ರಭೆಯೆಲ್ಲವೂ ಕರ್ಣ-ಮಾಧವರ ಶರೌಘಗಳಿಂದ ಕುಂದಿಹೋಗಿತ್ತು. ಶಕುನಿ, ಕೃತವರ್ಮ, ದ್ರೌಣಿ, ಕರ್ಣ ಮತ್ತು ಕೃಪರು ಪಾಂಡವರೊಂದಿಗೆ ಯುದ್ಧಮಾಡುತ್ತಿರುವುದನ್ನು ನೋಡಿ ಕುರುಸೈನಿಕರು ಪುನಃ ಹಿಂದಿರುಗಿದರು. ಆಕ್ರಮಣ ಮಾಡುತ್ತಿದ್ದ ಅವರ ಶಬ್ಧವು – ಮಳೆಯಿಂದ ಉಕ್ಕಿಬರುತ್ತಿರುವ ಸಾಗರದಂತೆ - ತೀವ್ರವಾಗಿ ಭಯವನ್ನುಂಟುಮಾಡುತ್ತಿತ್ತು. ಮಹಾರಣದಲ್ಲಿ ಅನ್ಯೋನ್ಯರನ್ನು ನೋಡಿ ಹರ್ಷ-ಉತ್ಸಾಹಗಳಿಂದ ಪರಸ್ಪರರನ್ನು ಹಿಡಿದು ಆ ಸೇನೆಗಳು ಯುದ್ಧಮಾಡತೊಡಗಿದವು. ದಿವಾಕರನು ಆಕಾಶಮಧ್ಯದಲ್ಲಿ ಬರಲು

ಹಿಂದೆಂದೂ ನೋಡಿರದ ಮತ್ತು ಕೇಳಿರದ ರೀತಿಯ ಯುದ್ಧವು ಪ್ರಾರಂಭವಾಯಿತು.

ಜಲಪ್ರವಾಹವು ವೇಗವಾಗಿ ಹರಿದು ಸಾಗರವನ್ನು ಸೇರುವಂತೆ ರಣದಲ್ಲಿ ಒಂದು ಸೇನಾಸಾಗರವು ಇನ್ನೊಂದು ಸೇನಾಸಾಗರವನ್ನು ಸೇರಿ ಯುದ್ಧದಲ್ಲಿ ತೊಡಗಿತು. ಭೋರ್ಗರೆಯುವ ಮಹಾಸಾಗರಗಳಂತೆ ಪರಸ್ಪರರ ಮೇಲೆ ಪ್ರಯೋಗಿಸುತ್ತಿದ್ದ ಬಲಪ್ರಹಾರಗಳ ಶಬ್ಧವು ಘೋರವಾಗಿ ಕೇಳಿಸುತ್ತಿತ್ತು. ನದಿಗಳ ಸಂಗಮದಲ್ಲಿ ಹೇಗೋ ಹಾಗೆ ವೇಗವತ್ತಾಗಿ ಪರಸ್ಪರರನ್ನು ಸೇರಿದ ಆ ಸೇನೆಗಳು ಒಂದೇ ಸೇನಾಸಮೂಹವೋ ಎನ್ನುವಂತೆ ತೋರುತ್ತಿದ್ದವು. ಮಹಾಯಶಸ್ಸನ್ನು ಬಯಸುತ್ತಿದ್ದ ಆ ಕುರು-ಪಾಂಡವರ ನಡುವೆ ಘೋರರೂಪದ ಯುದ್ಧವು ನಡೆಯಿತು. ಹೆಸರುಗಳನ್ನು ಹೇಳಿಕೊಂಡು ಗರ್ಜಿಸುತ್ತಿದ್ದ ಕುರುಗಳ ವಿವಿಧ ಸ್ವರಗಳು ಅವಿಚ್ಛಿನ್ನವಾಗಿ ಕೇಳಿಬರುತ್ತಿದ್ದವು. ರಣದಲ್ಲಿ ಯಾರ ತಂದೆ ಅಥವಾ ತಾಯಿಯಲ್ಲಿ ಯಾವುದಾದರೂ ದೋಷವಿದ್ದಿದ್ದರೆ ಅಥವಾ ಕರ್ಮ-ಶೀಲಗಳಲ್ಲಿ ದೋಷವಿದ್ದಿದ್ದರೆ ಯುದ್ಧದಲ್ಲಿ ಅವುಗಳೇ ಕೇಳಿಬರುತ್ತಿದ್ದವು. ಆಗ ಮಹಾರಥ ಪಾಂಡವರು ಮತ್ತು ಕೌರವರು ತೀಕ್ಷ್ಣ ಸಾಯಕಗಳಿಂದ ಪರಸ್ಪರರನ್ನು ಪ್ರಹರಿಸುತ್ತಾ ಕ್ಷತ-ವಿಕ್ಷತಗೊಳಿಸಿದರು.

ಪರಸ್ಪರರನ್ನು ವಧಿಸಲು ಬಯಸಿದ ಆ ಕ್ಷತ್ರಿಯರು ಸಮರದಲ್ಲಿ ಪರಸ್ಪರರನ್ನು ದ್ವೇಷಿಸುತ್ತಾ ಅನ್ಯೋನ್ಯರನ್ನು ಸಂಹರಿಸತೊಡಗಿದರು. ಎಲ್ಲೆಡೆಯಲ್ಲಿಯೂ ರಥಸಮೂಹಗಳು, ಅಶ್ವಸಮೂಹಗಳು, ಪದಾತಿಸಮೂಹಗಳು ಮತ್ತು ಗಜಸಮೂಹಗಳು ಪರಸ್ಪರರೊಂದಿಗೆ ಕಾದಾಡುತ್ತಿದ್ದವು. ಅತ್ಯಂತ ದಾರುಣವಾಗಿದ್ದ ಆ ಸಂಗ್ರಾಮದಲ್ಲಿ ಗದೆಗಳು, ಪರಿಘಗಳು, ಕಣಪಗಳು, ಪ್ರಾಸ, ಭಿಂಡಿಪಾಲ, ಭುಶುಂಡಿಗಳು ಎಲ್ಲಕಡೆ ಬೀಳುತ್ತಿರುವುದು ಕಾಣುತ್ತಿತ್ತು. ಮಿಡತೆಗಳೋಪಾದಿಯಲ್ಲಿ ಎಲ್ಲಕಡೆ ಶರವೃಷ್ಟಿಗಳಾಗುತ್ತಿದ್ದವು. ಸಮರದಲ್ಲಿ ಆನೆಗಳು ಆನೆಗಳನ್ನು, ಕುದುರೆಗಳು ಕುದುರೆಗಳನ್ನು, ರಥಿಗಳು ರಥಿಗಳನ್ನು, ಪದಾತಿಗಳು ಪದಾತಿಸಂಘಗಳನ್ನು, ಕುದುರೆಗಳು ಕುದುರೆಸಂಘಗಳನ್ನು ಎದುರಿಸಿ ಪರಸ್ಪರರನ್ನು ವಧಿಸುತ್ತಿದ್ದವು. ಪದಾತಿಗಳು ಆನೆ-ರಥಗಳನ್ನೂ, ಶೀಘ್ರವಾಗಿ ಚಲಿಸುತ್ತಿದ್ದ ಆನೆಗಳು ಆನೆ-ರಥ-ಕುದುರೆಗಳನ್ನೂ ಮರ್ದನಮಾಡುತ್ತಿದ್ದವು. ಶೂರರು ಬೀಳುತ್ತಿರುವುದರಿಂದ ಮತ್ತು ಪರಸ್ಪರರನ್ನು ಕೂಗಿ ಕರೆಯುವುದರಿಂದ ಆ ರಣಾಂಗಣವು ಪಶುಗಳ ವಧ್ಯಸ್ಥಾನದಂತೆ ಬಹುಘೋರವಾಗಿ ಕಾಣುತ್ತಿತ್ತು. ರಕ್ತದಿಂದ ವ್ಯಾಪ್ತವಾಗಿದ್ದ ಆ ರಣಭೂಮಿಯು ವರ್ಷಾಕಾಲದ ಕೆಂಪುಬಣ್ಣದ ಶಕ್ರಗೋಪಗಣಗಳಿಂದ ವ್ಯಾಪ್ತವಾದ ಭೂಮಿಯಂತೆ ಹೊಳೆಯುತ್ತಿತ್ತು. ಶ್ಯಾಮಲವರ್ಣದ ಯುವತಿಯೊಬ್ಬಳು ಕುಂಕುಮದ ಹೂವಿನ

ಬಣ್ಣದಿಂದ ರಂಜಿತವಾದ ಬಿಳಿಯ ವಸ್ತ್ರವನ್ನುಟ್ಟಿರುವಂತೆ ರಣರಂಗವು ಪ್ರಕಾಶಿಸುತ್ತಿತ್ತು. ಮಾಂಸ-ರಕ್ತಗಳಿಂದ ಚಿತ್ರಿತವಾದ ಸುವರ್ಣಕುಂಬದಂತೆ ತೋರುತ್ತಿತ್ತು. ಆ ರಣಭೂಮಿಯಲ್ಲಿ ಒಡೆದುಹೋಗಿದ್ದ ಶಿರಸ್ಸುಗಳೂ, ತೊಡೆಗಳೂ, ಬಾಹುಗಳೂ, ಕುಂಡಲಗಳೂ, ಅಂಗದ-ಕೇಯೂರಗಳು, ಒಡವೆ-ವಸ್ತ್ರಗಳೂ, ಹಾರಗಳೂ, ಧನ್ವಿಗಳ ಶರೀರಗಳೂ, ಕವಚಗಳೂ, ಪತಾಕೆಗಳೂ ರಾಶಿ ರಾಶಿಯಾಗಿ ಬಿದ್ದಿದ್ದವು. ಆನೆಗಳು ಆನೆಗಳನ್ನು ಆಕ್ರಮಣಿಸಿ ದಂತದ ತುದಿಗಳಿಂದ ಇರಿಯುತ್ತಿದ್ದವು. ದಂತಗಳ ಆಘಾತಕ್ಕೊಳಗಾಗಿ ಆನೆಗಳ ಅಂಗಾಂಗಗಳಿಂದ ರಕ್ತವು ಸೋರಿ ತೋಯಿಸುತ್ತಿರಲು ಅವುಗಳು ಗೈರಿಕಾದ ಧಾತುಗಳಿಂದ ಕೂಡಿದ ಚಿಲುಮೆಗಳನ್ನುಳ್ಳ ಪರ್ವತಗಳಂತೆ ತೋರುತ್ತಿದ್ದವು. ಮಾವುಟಗರಿಂದ ಪ್ರಹರಿಸಲ್ಪಟ್ಟ ತೋಮರಗಳನ್ನು ಅನೇಕ ಆನೆಗಳು ಸೊಂಡಿಲುಗಳಲ್ಲಿ ಹಿಡಿದು ಅತ್ತಿತ್ತ ಸಂಚರಿಸುತ್ತಿದ್ದವು. ಇನ್ನು ಇತರ ಆನೆಗಳು ಅವುಗಳನ್ನು ಮುರಿದುಹಾಕುತ್ತಿದ್ದವು. ನಾರಾಚಗಳಿಂದ ಕವಚಗಳನ್ನು ಕಳೆದುಕೊಂಡಿದ್ದ ಉತ್ತಮ ಆನೆಗಳು ಹೇಮಂತಋತುವಿನಲ್ಲಿ ಮೋಡಗಳಿಲ್ಲದ ಪರ್ವತಗಳಂತೆ ಪ್ರಕಾಶಿಸುತ್ತಿದ್ದವು. ಕನಕಪುಂಖಗಳುಳ್ಳ ಶರಗಳಿಂದ ಚುಚ್ಚಲ್ಪಟ್ಟ ಉತ್ತಮ ಆನೆಗಳು ಕೊಳ್ಳಿಗಳ ಬೆಂಕಿಯಿಂದ ಪ್ರದೀಪ್ತವಾದ ಪರ್ವತಗಳಂತೆ ತೋರುತ್ತಿದ್ದವು. ಇನ್ನು ಕೆಲವು ಆನೆಗಳು ಶತ್ರುಪಕ್ಷದ

ಆನೆಗಳಿಂದ ಗಾಯಗೊಂಡು ರೆಕ್ಕೆಗಳುಳ್ಳ ಪರ್ವತಗಳಂತೆ ರಣರಂಗದಲ್ಲಿ ಬಿದ್ದಿದ್ದವು. ಇತರ ಆನೆಗಳು ಶರಪ್ರಹಾರಗಳಿಂದ ಆರ್ತರಾಗಿ, ಗಾಯಗಳಿಂದ ಪೀಡಿತರಾಗಿ ಓಡಿಹೋಗಿ ದಂತಮಧ್ಯವನ್ನೂ ಕುಂಬಸ್ಥಳಗಳನ್ನೂ ಒರೆಗೊಟ್ಟು ಭೂಮಿಯ ಮೇಲೆ ಬೀಳುತ್ತಿದ್ದವು. ಇನ್ನೂ ಇತರ ಆನೆಗಳು ಸಿಂಹಗಳಂತೆ ಗರ್ಜಿಸುತ್ತಾ ಭೈರವವಾಗಿ ಕೂಗನ್ನಿಡುತ್ತಿದ್ದವು. ಅನೇಕ ಆನೆಗಳು ಅಲ್ಲಲ್ಲಿ ಓಡಿ ಸುತ್ತುವರೆಯುತ್ತಿದ್ದರು. ಇತರ ಆನೆಗಳು ನರಳುತ್ತಿದ್ದವು.

ಸ್ವರ್ಣಾಭರಣಗಳಿಂದ ವಿಭೂಷಿತವಾಗಿದ್ದ ಕುದುರೆಗಳು ಬಾಣಗಳಿಂದ ವಧಿಸಲ್ಪಟ್ಟು ಬೀಳುತ್ತಿದ್ದವು. ಕೆಲವು ಹತ್ತು ದಿಕ್ಕುಗಳಲ್ಲಿಯೂ ಮಂಕಾಗಿ ತಿರುಗುತ್ತಿದ್ದವು. ಇತರ ಕುದುರೆಗಳು ನೆಲದಮೇಲೆ ಹೊರಳಾಡುತ್ತಾ ಕುಂದಿಹೋಗುತ್ತಿದ್ದವು. ಕೆಲವು ಶರ-ತೋಮರಗಳಿಂದ ಹೊಡೆಯಲ್ಪಟ್ಟು ಬಹುವಿಧದ ಭಾವಗಳೊಂದಿಗೆ ಸುತ್ತಾಡುತ್ತಿದ್ದವು. ಹತರಾಗಿ ನೆಲದ ಮೇಲೆ ಬಿದ್ದಿದ್ದ ಮನುಷ್ಯರು ಅನ್ಯ ಬಾಂಧವರನ್ನೋ ತಂದೆಯನ್ನೋ ಅಜ್ಜನನ್ನೋ ನೋಡಿ ಕೂಗಿ ಕರೆಯುತ್ತಿದ್ದರು. ಓಡಿಹೋಗುತ್ತಿರುವ ಶತ್ರುಗಳನ್ನೂ ಇತರರನ್ನೂ ನೋಡಿದವರು ಪರಸ್ಪರರ ಗೋತ್ರ-ನಾಮಧೇಯಗಳನ್ನು ಹೇಳಿಕೊಳ್ಳುತ್ತಿದ್ದರು. ಕತ್ತರಿಸಲ್ಪಟ್ಟ ಕನಕಭೂಷಣ ಭುಜಗಳು ಅಲ್ಲಲ್ಲಿಯೇ

ಸುತ್ತಿಕೊಳ್ಳುತ್ತಿದ್ದವು, ಕುಣಿಯುತ್ತಿದ್ದವು, ಹಾರುತ್ತಿದ್ದವು ಮತ್ತು ಪುನಃ ಕೆಳಕ್ಕೆ ಬೀಳುತ್ತಿದ್ದವು. ನಡುಗುತ್ತಿದ್ದ ಸಹಸ್ರಾರು ತೋಳುಗಳು ಆ ರಣಾಂಗಣದಲ್ಲಿ ತುಂಬಿಹೋಗಿದ್ದವು. ಕೆಲವು ಭುಜಗಳು ಐದು ಹೆಡೆಗಳ ಸರ್ಪಗಳಂತೆ ಮಹಾವೇಗದಿಂದ ಮುಂದೆ ಹೋಗುತ್ತಿದ್ದವು. ಸರ್ಪ ಶರೀರಗಳಂತಿದ್ದ ಚಂದನ ಚರ್ಚಿತ ರಕ್ತದಿಂದ ನೆನೆದುಹೋಗಿದ್ದ ತೋಳುಗಳು ಸುವರ್ಣಮಯ ಧ್ವಜಗಳಂತೆ ಕಾಣುತ್ತಿದ್ದವು. ಎಲ್ಲ ದಿಕ್ಕುಗಳಲ್ಲಿ ಈ ರೀತಿ ಘೋರ ಸಂಕುಲ ಯುದ್ಧವು ನಡೆಯುತ್ತಿರಲು ಯಾರು ಯಾರೆಂದು ತಿಳಿಯಲಾರದೇ ಕೌರವರು ಪರಸ್ಪರರನ್ನೇ ಕೊಲ್ಲುತ್ತಿದ್ದರು. ಶಸ್ತ್ರಗಳು ಬೀಳುತ್ತಿದ್ದ ಆ ಸಂಕುಲಯುದ್ಧದಿಂದ ರಣಭೂಮಿಯ ಮೇಲೆದ್ದ ಧೂಳಿನಿಂದಾಗಿ ಕತ್ತಲೆಯು ಆವರಿಸಲು ಕೌರವರ್ಯಾರು ಶತ್ರುಗಳ್ಯಾರು ಎನ್ನುವುದು ತಿಳಿಯುತ್ತಲೇ ಇರಲಿಲ್ಲ.

ಘೋರರೂಪೀ ಭಯಾನಕ ಆ ಯುದ್ಧವು ಹಾಗೆ ನಡೆಯುತ್ತಿರಲು ರಕ್ತವೇ ನೀರಾಗಿ ಹರಿಯುತ್ತಿದ್ದ ಮಹಾನದಿಗಳು ಹುಟ್ಟಿ ಹರಿಯತೊಡಗಿದವು. ತಲೆಗಳೇ ಕಲ್ಲುಬಂಡೆಗಳಾಗಿದ್ದವು, ತಲೆಗೂದಲುಗಳೇ ಪಾಚೀ ಹುಲ್ಲುಗಳಾಗಿದ್ದವು, ಎಲುಬುಗಳೇ ಮೀನಿನಂತಿದ್ದವು, ಮತ್ತು ಧನುಸ್ಸು-ಬಾಣಗಳೇ ಅದರ ಉತ್ತಮ ದೋಣಿಗಳಂತಿದ್ದವು. ಯಮರಾಷ್ಟ್ರವನ್ನು ವರ್ಧಿಸುವ ಆ ನದಿಗಳು ಸುದಾರುಣವಾದ ರಕ್ತವೇ ನೀರಾಗಿ ಮಾಂಸ-

ಮಜ್ಜೆಗಳೇ ಕೆಸರಾಗಿ ಹರಿಯುತ್ತಿದ್ದವು. ಯಮಸಾದನಕ್ಕೆ ಕೊಂಡೊಯ್ಯುತ್ತಿದ್ದ ಆ ಘೋರರೂಪೀ ನದಿಗಳು ಅದರಲ್ಲಿ ಬಿದ್ದವರನ್ನು ಮುಳುಗಿಸಿಬಿಡುತ್ತಿದ್ದವು ಮತ್ತು ಕ್ಷತ್ರಿಯರಲ್ಲಿ ಭಯವನ್ನುಂಟುಮಾಡುತ್ತಿದ್ದವು. ಅಲ್ಲಲ್ಲಿ ಮಾಂಸಾಶೀ ಪ್ರಾಣಿಗಳ ಕೂಗುವಿಕೆಯಿಂದ ಪ್ರೇತರಾಜನ ಪಟ್ಟಣಕ್ಕೆ ಸಮಾನವಾಗಿದ್ದು ಘೋರವಾಗಿ ಕಾಣುತ್ತಿತ್ತು.

ಸುತ್ತಲೂ ಅಗಣಿತ ಮುಂಡಗಳು ಮೇಲೆದ್ದು ಕುಣಿಯುತ್ತಿದ್ದವು. ಅವುಗಳೊಂದಿಗೆ ಮಾಂಸ-ರಕ್ತಗಳಿಂದ ಸಂತೃಪ್ತರಾದ ಭೂತಗಣಗಳೂ ಕುಣಿಯುತ್ತಿದ್ದವು. ರಕ್ತವನ್ನು ಕುಡಿದು ವಸೆಯನ್ನು ತಿಂದು, ಮೇದ-ಮಜ್ಜೆ-ವಸೆ-ಮಾಂಸಗಳಿಂದ ತೃಪ್ತರಾಗಿದ್ದ ಮದಿಸಿದ ಕಾಗೆ ಹದ್ದುಗಳೂ ಸುತ್ತಲೂ ಹಾರಾಡುತ್ತಿರುವುದು ಕಾಣುತ್ತಿತ್ತು. ಸಮರದಲ್ಲಿ ಶೂರರು ತೊರೆಯಲು ಅಸಾಧ್ಯವನ್ನು ಭಯವನ್ನು ಬಿಟ್ಟು ಯೋಧವ್ರತನಿರತರಾಗಿ ಯುದ್ಧಕರ್ಮವನ್ನು ಭಯವಿಲ್ಲದೇ ನಿರ್ವಹಿಸುತ್ತಿದ್ದರು. ಶರ-ಶಕ್ತಿಗಳ ಸಮಾಕೀರ್ಣವಾಗಿದ್ದ, ಮಾಂಸಾಶಿ ಪ್ರಾಣಿಗಳಿಂದ ತುಂಬಿಹೋಗಿದ್ದ ಆ ರಣಭೂಮಿಯಲ್ಲಿ ಶೂರರು ತಮ್ಮ ಪೌರುಷಗಳನ್ನು ವಿಖ್ಯಾತಗೊಳಿಸುತ್ತಾ ಸಂಚರಿಸುತ್ತಿದ್ದರು. ಅನ್ಯೋನ್ಯರ ನಾಮಗೋತ್ರಗಳನ್ನು ಹೇಳುತ್ತಾ ರಣದಲ್ಲಿ ಪಿತೃಗಳ ಹೆಸರನ್ನೂ

ಗೋತ್ರಗಳನ್ನೂ ಹೇಳಿಕೊಳ್ಳುತ್ತಿದ್ದರು. ಹೀಗೆ ಹೇಳಿಕೊಳ್ಳುತ್ತಾ ಅಲ್ಲಿ ಅನೇಕ ಯೋಧರು ಶಕ್ತಿ-ತೋಮರ-ಪಟ್ಟಿಶಗಳಿಂದ ಪರಸ್ಪರರನ್ನು ಸಂಹರಿಸುತ್ತಿದ್ದರು. ಹಾಗೆ ಸುದಾರುಣವಾದ ಘೋರರೂಪೀ ಯುದ್ಧವು ನಡೆಯುತ್ತಿರಲು ಕೌರವೀ ಸೇನೆಯು ಸಾಗರದಲ್ಲಿ ಒಡೆದು ಹೋದ ನೌಕೆಯಂತೆ ವ್ಯಾಕುಲಗೊಂಡಿತು.

## ಅರ್ಜುನ-ಸಂಶಪ್ತಕರ ಯುದ್ಧ

ಕ್ಷತ್ರಿಯರು ಮುಳುಗಿಹೋಗಿದ್ದ ಆ ಯುದ್ಧವು ನಡೆಯುತ್ತಿರಲು ಯುದ್ಧದಲ್ಲಿ ಗಾಂಡೀವದ ಮಹಾಘೋಷವು ಕೇಳಿಬಂದಿತು. ಪಾಂಡವ ಅರ್ಜುನನು ಸಂಶಪ್ತಕರು, ಕೋಸಲರು ಮತ್ತು ನಾರಾಯಣ ಸೇನೆಗಳೊಂದಿಗೆ ಕದನವಾಡುತ್ತಿದ್ದನು. ಜಯವನ್ನು ಬಯಸುತ್ತಿದ್ದ ಸಂಶಪ್ತಕರಾದರೋ ಕ್ರುದ್ಧರಾಗಿ ಪಾರ್ಥನ ಮೇಲೆ ಎಲ್ಲಕಡೆಗಳಿಂದ ಶರವೃಷ್ಟಿಯನ್ನು ಸುರಿಸುತ್ತಿದ್ದರು. ಆ ಶರವೃಷ್ಟಿಯನ್ನು ಸಹಿಸಿಕೊಂಡು ಪಾರ್ಥನು ಸಂಹರಿಸುತ್ತಾ ಸೇನೆಗಳ ಒಳಹೊಕ್ಕನು. ಶಿಲಾಶಿತ ಕಂಕಪತ್ರಗಳಿಂದ ರಥಸೇನೆಯನ್ನು ನಿಗ್ರಹಿಸಿ ಪಾರ್ಥನು ರಣದಲ್ಲಿ ಸುಶರ್ಮನ ಬಳಿಸಾರಿದನು. ಸುಶರ್ಮನು ಅರ್ಜುನನ ಮೇಲೆ ಶರವರ್ಷಗಳನ್ನು ಸುರಿಸಿದನು. ಹಾಗೆಯೇ ಸಂಶಪ್ತಕರೂ ಕೂಡ ಪಾರ್ಥನನ್ನು ಸಮರದಲ್ಲಿ ಎದುರಿಸಿದರು. ಸುಶರ್ಮನಾದರೋ ಆಗ

ಪಾರ್ಥನನ್ನು ಒಂಭತ್ತು ಆಶುಗಗಳಿಂದ ಹೊಡೆದು ಮುರು ಬಾಣಗಳಿಂದ ಜನಾರ್ದನನ ಬಲಭುಜವನ್ನು ಪ್ರಹರಿಸಿದನು. ಅನಂತರ ಇನ್ನೊಂದು ಭಲ್ಲದಿಂದ ಪಾರ್ಥನ ಧ್ವಜಕ್ಕೆ ಹೊಡೆದನು. ವಿಶ್ವಕರ್ಮನಿಂದಲೇ ಧ್ವಜದಲ್ಲಿ ನಿರ್ಮಿತನಾಗಿದ್ದ ವಾನರವರ ಹನುಮಂತನು ಎಲ್ಲರನ್ನೂ ಭಯಗೊಳಿಸುತ್ತಾ ಜೋರಾಗಿ ಗರ್ಜಿಸಿದನು. ಕಪಿಯ ಆ ಗರ್ಜನೆಯನ್ನು ಕೇಳಿ ಕೌರವ ಸೇನೆಯು ತುಂಬಾ ಭಯಗೊಂಡು ತತ್ತರಿಸಿ ಮೂರ್ಛೆಗೊಂದಿತು. ನಿಶ್ಚೇಷ್ಟವಾಗಿ ನಿಂತಿದ್ದ ಕೌರವ ಸೇನೆಯು ನಾನಾಪುಷ್ಪಗಳಿಂದ ಸಮೃದ್ಧವಾಗಿದ್ದ ಚೈತ್ರರಥ ವನದಂತೆಯೇ ಶೋಭಿಸಿತು. ಪುನಃ ಎಚ್ಚೆತ್ತ ಕೌರವ ಯೋಧರು ಮೋಡಗಳು ಪರ್ವತವನ್ನು ಹೇಗೋ ಹಾಗೆ ಅರ್ಜುನನನ್ನು ಬಾಣಗಳಿಂದ ಅಭಿಷೇಚಿಸಿದರು. ಎಲ್ಲರೂ ಪಾಂಡವನನ್ನು ಸುತ್ತುವರೆದರು. ಅವರು ಅರ್ಜುನನ ಕುದುರೆಗಳನ್ನೂ, ರಥಚಕ್ರಗಳನ್ನೂ, ರಥದ ಈಷಾದಂಡವನ್ನೂ ಹಿಡಿದು ಬಲವನ್ನುಪಯೋಗಿಸಿ ತಡೆದರು ಮತ್ತು ಸಿಂಹನಾದಗೈದರು.

ಕೆಲವರು ಕೇಶವನ ಮಹಾಭುಜಗಳೆರದನ್ನೂ ಹಿಡಿದು ಎಳೆದಾಡುತ್ತಿದ್ದರು. ಅನ್ಯರು ರಥದಲ್ಲಿದ್ದ ಪಾರ್ಥನನ್ನು ಸಂತೋಷದಿಂದ ಹಿಡಿದುಕೊಂಡರು. ಆಗ ಕೇಶವನಾದರೋ ದುಷ್ಟ

ಆನೆಯು ಮಾವಟಿಗನನ್ನು ಕೆಳಕ್ಕೆ ಹಾಕಿಬಿಡುವಂತೆ ತನ್ನೆರಡು ತೋಳುಗಳನ್ನೂ ಬಲವಾಗಿ ಒದರುತ್ತಾ ಅವರೆಲ್ಲರನ್ನೂ ಕೆಳಕ್ಕೆ ಬೀಳಿಸಿದನು. ಆಗ ರಣದಲ್ಲಿ ಆ ಮಹಾರಥರು ಸುತ್ತುವರೆದು ರಥವನ್ನು ಹಿಡಿದುಕೊಂಡಿರುದನ್ನೂ ಕೇಶವನನ್ನು ಆಕ್ರಮಣಿಸಿದುದನ್ನೂ ನೋಡಿ ಕ್ರುದ್ಧನಾದ ಪಾರ್ಥನು ಅನೇಕ ರಥಾರೂಢರನ್ನೂ ಪದಾತಿಗಳನ್ನೂ ಸಂಹರಿಸಿ ಕೆಳಗುರುಳಿಸಿದನು. ಅನತಿದೂರದಲ್ಲಿಯೇ ಇದ್ದ ಯೋಧರನ್ನು ಹತ್ತಿರದಿಂದಲೇ ಪ್ರಹರಿಸಬಹುದಾದ ಬಾಣಗಳಿಂದ ಅಚ್ಛಾದಿಸುತ್ತಾ ಸಮರದಲ್ಲಿ ಅರ್ಜುನನು ಕೇಶವನಿಗೆ ಇಂತೆಂದನು:

> “ಕೃಷ್ಣ! ಈ ಸಂಶಪ್ತಕಗಣಗಳನ್ನು ನೋಡು! ನನ್ನಿಂದ ಸಹಸ್ರಾರು ಸಂಖ್ಯೆಗಳಲ್ಲಿ ವಧಿಸಲ್ಪಡುತ್ತಿದ್ದರೂ ಇಂತಹ ದಾರುಣ ಕರ್ಮವನ್ನೆಸಗುತ್ತಿದ್ದಾರೆ! ಈ ಘೋರ ರಥಬಂಧವನ್ನು ನಾನಲ್ಲದೇ ಪೃಥ್ವಿಯ ಬೇರಾವ ಪುರುಷನಿಗೂ ಸಹಿಸಿಕೊಳ್ಳಲಾಗುತ್ತಿರಲಿಲ್ಲ.”

ಹೀಗೆ ಹೇಳಿ ಬೀಭತ್ಸುವು ದೇವದತ್ತಶಂಖವನ್ನೂದಿದನು. ಅದಕ್ಕೆ ಪೂರಕವಾಗಿ ಕೃಷ್ಣನೂ ಕೂಡ ಪಾಂಚಜನ್ಯವನ್ನು ಮೊಳಗಿಸಿದನು. ಆ ಶಂಖಸ್ವನವನ್ನು ಕೇಳಿ ಸಂಶಪ್ತಕ ವರೂಥಿನಿಯು ಅತ್ಯಂತ ಭಯಗೊಂಡು ಓಡತೊಡಗಿತು. ಆಗ ಪರವೀರಹ ಪಾಂಡವನು ಪುನಃ

ನಾಗಾಸ್ತ್ರವನ್ನು ಪ್ರಯೋಗಿಸುತ್ತಾ ಅವರ ಪಾದಗಳನ್ನು ಬಂಧಿಸಿಬಿಟ್ಟನು. ರಣದಲ್ಲಿ ಪಾರ್ಥನು ಶತ್ರುಗಳ ಪದಬಂಧಗೈದನು. ಪಾಂಡವನ ಪದಬಂಧದಿಂದ ಕಟ್ಟಲ್ಪಟ್ಟ ಅವರು ಲೋಹದ ಮೂರ್ತಿಗಳೋಪಾದಿಯಲ್ಲಿ ನಿಶ್ಚೇಷ್ಟರಾಗಿ ನಿಂತುಬಿಟ್ಟರು. ನಿಶ್ಚೇಷ್ಟರಾಗಿರುವ ಯೋಧರನ್ನು ಪಾಂಡುನಂದನನು ಹಿಂದೆ ಇಂದ್ರನು ದೈತ್ಯ ತಾರಕನ ವಧೆಯ ಸಮರದಲ್ಲಿ ಹೇಗೋ ಹಾಗೆ ವಧಿಸಿದನು. ಸಮರದಲ್ಲಿ ವಧಿಸಲ್ಪಡುತ್ತಿರುವ ಅವರು ಆ ಉತ್ತಮ ರಥವನ್ನು ಬಿಟ್ಟು ತಮ್ಮಲ್ಲಿದ್ದ ಸರ್ವ ಆಯುಧಗಳನ್ನು ಅರ್ಜುನನ ಮೇಲೆ ಪ್ರಯೋಗಿಸ ತೊಡಗಿದರು. ಸೇನೆಯು ಬಂಧಿಸಲ್ಪಟ್ಟಿರುವುದನ್ನು ನೋಡಿದ ಸುಶರ್ಮನು ತ್ವರೆಮಾಡಿ ಸೌಪರ್ಣಾಸ್ತ್ರವನ್ನು ಪ್ರಯೋಗಿಸಿದನು. ಆಗ ಗರುಡಗಳು ಮೇಲೆರಗಿ ಭುಜಂಗಗಳನ್ನು ಭಕ್ಷಿಸತೊಡಗಿದವು. ಆ ಗರುಡರನ್ನು ಕಂಡ ನಾಗಗಳು ಪಲಾಯನಗೈದವು. ಮೋಡಗಳಿಂದ ವಿಮುಕ್ತನಾಗಿ ಭಾಸ್ಕರನು ಪ್ರಜೆಗಳನ್ನು ತಾಪಗೊಳಿಸುವಂತೆ ಅವನ ಸೇನೆಯು ಪದಬಂಧದಿಂದ ವಿಮುಕ್ತವಾಯಿತು. ವಿಮುಕ್ತರಾದ ಆ ಯೋಧರು ಫಲ್ಗುನನ ರಥದ ಮೇಲೆ ಬಾಣಸಂಘಗಳನ್ನೂ ಶಸ್ತ್ರಸಂಘಗಳನ್ನೂ ಪ್ರಯೋಗಿಸಿದರು. ಆ ಮಹಾಸ್ತ್ರಮಯೀ ವೃಷ್ಟಿಯನ್ನು ಶರವೃಷ್ಟಿಗಳಿಂದ ನಿರಸನಗೊಳಿಸಿ ಅರ್ಜುನನು ಯೋಧರನ್ನು ಸಂಹರಿಸತೊಡಗಿದನು. ಆಗ ಸುಶರ್ಮನು ಆನತಪರ್ವ

ಬಾಣದಿಂದ ಅರ್ಜುನನ ಹೃದಯವನ್ನು ಪ್ರಹರಿಸಿ ಅನ್ಯ ಮೂರು ಶರಗಳಿಂದ ಅವನನ್ನು ಹೊಡೆದನು. ಗಾಢವಾಗಿ ಪಹರಿಸಲ್ಪಟ್ಟ ಅರ್ಜುನನು ವ್ಯಥಿತನಾಗಿ ರಥದಲ್ಲಿಯೇ ಕುಸಿದು ಕುಳಿತುಕೊಂಡನು.

ಅನಂತರ ಪುನಃ ಎಚ್ಚೆತ್ತ ಕೃಷ್ಣಸಾರಥಿ ಶ್ವೇತಾಶ್ವನು ತ್ವರೆಮಾಡಿ ಐಂದ್ರಾಸ್ತ್ರವನ್ನು ಪ್ರಕಟಿಸಿದನು. ಆಗ ಸಹಸ್ರಾರು ಬಾಣಗಳು ಪ್ರಾದುರ್ಭವಿಸಿದವು. ಸರ್ವದಿಕ್ಕುಗಳಲ್ಲಿಯೂ ಪ್ರಕಟವಾದ ಶಸ್ತ್ರಗಳು ನೂರಾರು ಸಹಸ್ರಾರು ಆನೆಗಳನ್ನೂ, ಕುದುರೆಗಳನ್ನೂ ರಥಗಳನ್ನೂ ನಾಶಗೊಳಿಸಿದವು. ಸೈನ್ಯದಲ್ಲಿ ವಿಪುಲ ವಧೆಯು ನಡೆಯುತ್ತಿರಲು ಸಂಶಪ್ತಕಗಣ ಮತ್ತು ಗೋಪಾಲರನ್ನು ಅತ್ಯಂತ ಭಯವು ಸಮಾವೇಶಗೊಂಡಿತು. ಅಲ್ಲಿ ಅರ್ಜುನನೊಡನೆ ಪ್ರತಿಯಾಗಿ ಯುದ್ಧಮಾಡುವ ಯಾವ ಪುರುಷನೂ ಇರಲಿಲ್ಲ. ಅಲ್ಲಿ ವೀರರು ನೋಡುತ್ತಿದ್ದಂತೆಯೇ ಅವನು ಮಹಾಸೇನೆಯನ್ನು ಸಂಹರಿಸಿದನು. ರಣದಲ್ಲಿ ಹತ್ತುಸಾವಿರ ಯೋಧರನ್ನು ಸಂಹರಿಸಿ ಪಾಂಡುಸುತನು ಧೂಮವಿಲ್ಲದ ಅಗ್ನಿಯಂತೆ ಪ್ರಜ್ವಲಿಸುತ್ತ ಪ್ರಕಾಶಿಸಿದನು. ಆಗ ಅಲ್ಲಿ ಹದಿನಾಲ್ಕು ಸಾವಿರ ಪದಾತಿಗಳು, ಹತ್ತುಸಾವಿರ ರಥಿಗಳು ಮತ್ತು ಮೂರುಸಾವಿರ ಆನೆಗಳು ಮಾತ್ರ ಅಳಿದುಳಿದಿದ್ದವು. ಅನಂತರ ಸಾಯಬೇಕು ಅಥವ ಜಯಗಳಿಸಿ ಹಿಂದಿರುಗಬೇಕೆಂದು ನಿಶ್ಚಯಿಸಿ

ಸಂಶಪ್ತಕರು ಪುನಃ ಧನಂಜಯನ್ನು ಸುತ್ತುವರೆದರು. ಅಲ್ಲಿ ಕೌರವರ ಮತ್ತು ಕಿರೀಟಿಯ ನಡುವೆ ಮಹಾ ಯುದ್ಧವು ನಡೆಯಿತು.

## ಕೃಪ-ಶಿಖಂಡಿಯರ ಯುದ್ಧ

ಸಮುದ್ರದಲ್ಲಿ ಒಡೆದುಹೋದ ನೌಕೆಯಂತೆ ಕೌರವ ಸೈನ್ಯವು ಪಾಂಡುಪುತ್ರರ ಭದದಿಂದ ಪೀಡಿತರಾಗಿ ನಾಶಗೊಳ್ಳುತ್ತಿರುವುದನ್ನು ನೋಡಿ ಕೃತವರ್ಮ, ಕೃಪ, ದ್ರೌಣಿ, ಸೂತಪುತ್ರ, ಉಲೂಕ, ಸೌಬಲ, ಸಹೋದರರೊಡನೆ ರಾಜಾ ದುರ್ಯೋಧನ ಇವರು ಶೀಘ್ರವಾಗಿ ಮುಂದೆ ಹೋಗಿ ತಮ್ಮ ಸೈನ್ಯವನ್ನು ಉದ್ಧರಿಸಲು ಪ್ರಯತ್ನಿಸುತ್ತಿದ್ದರು. ಆಗ ಮುಹೂರ್ತಕಾಲ ಹೇಡಿಗಳಿಗೆ ಭಯವನ್ನುಂಟುಮಾಡುವ ಮತ್ತು ಶೂರರ ಹರ್ಷವನ್ನು ಹೆಚ್ಚಿಸುವ ಅತೀವ ಯುದ್ಧವು ನಡೆಯಿತು. ಕೃಪನು ಪ್ರಯೋಗಿಸಿದ ಶರವರ್ಷಗಳು ಮಿಡತೆಗಳ ಗುಂಪುಗಳೋಪಾದಿಯಲ್ಲಿ ಸೃಂಜಯರನ್ನು ಸಂಪೂರ್ಣವಾಗಿ ಮುಚ್ಚಿಬಿಟ್ಟಿತು. ಆಗ ಕ್ರುದ್ಧನಾದ ಶಿಖಂಡಿಯು ತ್ವರೆಮಾಡಿ ಬಂದು ಕೃಪನ ಸುತ್ತಲೂ ಶರವರ್ಷಗಳನ್ನು ಸುರಿಸಿದನು. ಕೃಪನು ಆ ಶರವರ್ಷವನ್ನು ನಿರಸನಗೊಳಿಸಿ ಕ್ರುದ್ಧನಾಗಿ ಹತ್ತು ಶರಗಳಿಂದ ಶಿಖಂಡಿಯನ್ನು ಪ್ರಹರಿಸಿದನು. ಆಗ ಕುಪಿತನಾದ ಶಿಖಂಡಿಯು ಯುದ್ಧದಲ್ಲಿ ಕಂಕಪತ್ರಗಳಿದ್ದ ಏಳು ಜಿಹ್ಮಗ ಶರಗಳಿಂದ ಕೃಪನನ್ನು

ಹೊಡೆದನು. ತೀಕ್ಷ್ಣ ಶರಗಳಿಂದ ಅತಿಯಾಗಿ ಗಾಯಗೊಂಡ ಕೃಪನು ಶಿಖಂಡಿಯನ್ನು ಅಶ್ವ-ಸೂತ-ರಥಗಳಿಂದ ವಿಹೀನನನ್ನಾಗಿ ಮಾಡಿದನು. ಕುದುರೆಗಳು ವಧಿಸಲ್ಪಡಲು ಶಿಖಂಡಿಯು ರಥದಿಂದ ಕೆಳಕ್ಕೆ ಧುಮುಕಿ ಬಲವತ್ತಾದ ಖಡ್ಗ ಗುರಾಣಿಗಳನ್ನು ಹಿಡಿದು ಕೃಪನ ಬಳಿ ನುಗ್ಗಿದನು. ಸಮರದಲ್ಲಿ ಹಾಗೆ ನುಗ್ಗಿಬರುತ್ತಿದ್ದ ಶಿಖಂಡಿಯನ್ನು ಕೂಡಲೇ ಕೃಪನು ಸನ್ನತಪರ್ವ ಶರಗಳಿಂದ ಮುಚ್ಚಿಬಿಟ್ಟನು. ಅದೊಂದು ಅದ್ಭುತವಾಗಿತ್ತು. ಆಗ ರಣದಲ್ಲಿ ಶಿಖಂಡಿಯು ನಿಶ್ಚೇಷ್ಟನಾಗಿ ನಿಂತುಬಿಟ್ಟನು.

ಕೃಪನಿಂದ ಶಿಖಂಡಿಯು ಮುಚ್ಚಿಹೋದುದನ್ನು ನೋಡಿ ಧೃಷ್ಟದ್ಯುಮ್ನನು ಬೇಗನೇ ಕೃಪನಲ್ಲಿಗೆ ಆಗಮಿಸಿದನು. ಶಾರದ್ವತನ ರಥದ ಬಳಿಬರುತ್ತಿದ್ದ ಧೃಷ್ಟದ್ಯುಮ್ನನನ್ನು ಕೃತವರ್ಮನು ವೇಗದಿಂದ ಮುಂದೆಬಂದು ಅವನನ್ನು ತಡೆದನು. ಆಗ ಶಾರದ್ವತನ ರಥದ ಬಳಿಬರುತ್ತಿದ್ದ ಯುಧಿಷ್ಠಿರನನ್ನು ಅವನ ಮಗ ಮತ್ತು ಸೇನೆಗಳೊಂದಿಗೆ ದ್ರೋಣಪುತ್ರನು ತಡೆದನು. ತ್ವರೆಮಾಡಿ ಬರುತ್ತಿದ್ದ ಮಹಾರಥ ನಕುಲ-ಸಹದೇವರನ್ನು ದುರ್ಯೋಧನನು ಶರವರ್ಷಗಳಿಂದ ತಡೆದು ನಿಲ್ಲಿಸಿದನು. ವೈಕರ್ತನ ಕರ್ಣನು ಬೀಮಸೇನನನ್ನು ಕರುಷ-ಕೇಕಯ-ಸೃಂಜಯರೊಂದಿಗೆ ತಡೆದನು.

ಆಗ ಯುದ್ಧದಲ್ಲಿ ಕೃಪನು ಶಿಖಂಡಿಯನ್ನು ದಹಿಸಿಬಿಡುವನೋ ಎನ್ನುವಂತೆ ತ್ವರೆಮಾಡಿ ಬಾಣಗಳನ್ನು ಪ್ರಯೋಗಿಸುತ್ತಿದ್ದನು. ಎಲ್ಲಕಡೆಗಳಿಂದ ಕೃಪನು ಪ್ರಯೋಗಿಸುತ್ತಿದ್ದ ಹೇಮಭೂಷಿತ ಬಾಣಗಳನ್ನು ಶಿಖಂಡಿಯು ಕತ್ತಿಯನ್ನು ಪುನಃ ಪುನಃ ತಿರುಗಿಸುತ್ತಾ ಕತ್ತರಿಸಿ ಹಾಗುತ್ತಿದ್ದನು. ಆಗ ಗೌತಮನು ಪಾರ್ಷತನ ಶತಚಂದ್ರ ಗುರಾಣಿಯನ್ನು ಬೇಗನೇ ಸಾಯಕಗಳಿಂದ ಧ್ವಂಸಗೊಳಿಸಿದನು. ಆಗ ಅಲ್ಲಿದ್ದ ಜನರು ಗಟ್ಟಿಯಾಗಿ ಕೂಗಿಕೊಂಡರು. ರೋಗಿಯು ಮೃತ್ಯುಮುಖನಾಗುವಂತೆ ಕೃಪನ ವಶನಾಗಿದ್ದ ಶಿಖಂಡಿಯು ಖಡ್ಗಹಸ್ತನಾಗಿಯೇ ಅವನ ಕಡೆ ನುಗ್ಗಿ ಹೋದನು.

ಶಾರದ್ವತ ಶರಗಳಿಗೆ ಸಿಲುಕಿ ಸಂಕಟಪಡುತ್ತಿದ್ದ ಶಿಖಂಡಿಯನ್ನು ನೋಡಿ ಚಿತ್ರಕೇತುವಿನ ಮಗ ಸುಕೇತುವು ತ್ವರೆಮಾಡಿ ಅಲ್ಲಿಗೆ ಬಂದನು. ಸುಕೇತುವು ಗೌತಮನ ರಥದ ಬಳಿ ಬಂದು ಅನೇಕ ನಿಶಿತ ಶರಗಳಿಂದ ಬ್ರಾಹ್ಮಣನ ಮೇಲೆ ಎರಗಿದನು. ಕೃಪನು ಸುಕೇತುವಿನೊಡನೆ ಯುದ್ಧದಲ್ಲಿ ನಿರತನಾಗಿರುವುದನ್ನು ನೋಡಿ ಶಿಖಂಡಿಯು ಬೇಗನೇ ಅಲ್ಲಿಂದ ಹೊರಟುಹೋದನು.

ಸುಕೇತುವಾದರೋ ಗೌತಮನನ್ನು ಒಂಭತ್ತು ಶರಗಳಿಂದ ಹೊಡೆದು ಎಪ್ಪತ್ಮೂರು ಬಾಣಗಳಿಂದ ಪುನಃ ಪ್ರಹರಿಸಿದನು ಪುನಃ ಅವನು

ಬಾಣಗಳಿಂದ ಯುಕ್ತವಾಗಿದ್ದ ಕೃಪನ ಧನುಸ್ಸನ್ನು ಕತ್ತರಿಸಿ, ಶರದಿಂದ ಸಾರಥಿಯ ಮರ್ಮಸ್ಥಳಗಳನ್ನು ಗಾಢವಾಗಿ ಪ್ರಹರಿಸಿದನು. ಆಗ ಕ್ರುದ್ಧನಾದ ಗೌತಮನಾದರೋ ದೃಢವಾದ ಹೊಸ ಧನುಸ್ಸನ್ನು ಹಿಡಿದು ಮೂವತ್ತು ಬಾಣಗಳಿಂದ ಸುಕೇತುವಿನ ಮರ್ಮಸ್ಥಾನಗಳಲ್ಲಿ ಪ್ರಹರಿಸಿದನು. ಸುಕೇತುವು ಸರ್ವಾಂಗಗಳಲ್ಲಿ ವಿಹ್ವಲಿತನಾಗಿ ಭೂಕಂಪದ ಸಮಯದಲ್ಲಿ ವೃಕ್ಷಗಳು ಅಳ್ಳಾಡುವಂತೆ ತನ್ನ ಉತ್ತಮ ರಥದಲ್ಲಿ ತರತರನೆ ನಡುಗಿದನು. ಹೀಗೆ ನಡುಗುತ್ತಿದ್ದ ಅವನ ಕಾಯದಿಂದ ಪ್ರಜ್ವಲಿತ ಕುಂಡಲಗಳನ್ನುಳ್ಳ ಮತ್ತು ಕಿರೀಟದಿಂದ ಶೋಭಿಸುತ್ತಿದ್ದ ಶಿರವನ್ನು ಕೃಪನು ಕ್ಷುರಪ್ರದಿಂದ ಕೆಡವಿದನು. ಗಿಡುಗವು ಕೊಂಡೊಯ್ಯುತ್ತಿದ್ದ ಮಾಂಸದತುಂಡು ಕೆಳಕ್ಕೆ ಬೀಳುವಂತೆ ಶೀಘ್ರವಾಗಿ ಸುಕೇತುವಿನ ಶಿರವು ಭೂಮಿಯ ಮೇಲೆ ಬೀಳಲು, ಅವನ ಕಾಯವು ಕೆಳಗೆ ಬಿದ್ದಿತು. ಸುಕೇತುವು ಹತನಾಗಲು ಅವನ ಪದಾನುಗರು ಭಯಗೊಂಡು ಗೌತಮನನ್ನು ಸಮರದಲ್ಲಿ ಬಿಟ್ಟು ಹತ್ತು ದಿಕ್ಕುಗಳಲ್ಲಿಯೂ ಓಡಿ ಹೋದರು.

## ಕೃತವರ್ಮ-ಧೃಷ್ಟದ್ಯುಮ್ನರ ಯುದ್ಧ

ಮಹಾಬಲ ಕೃತವರ್ಮನಾದರೋ ಸಮರದಲ್ಲಿ ಪಾರ್ಷತ ಧೃಷ್ಟದ್ಯುಮ್ನನನ್ನು ತಡೆದು "ನಿಲ್ಲು! ನಿಲ್ಲು!" ಎಂದು ಹೇಳಿದನು. ಆಗ

ಮಾಂಸದತುಂಡಿಗೆ ಎರಡು ಗಿಡುಗಗಳು ಕಾಳಗವಾಡುವಂತೆ ವೃಷ್ಣಿ-ಪಾರ್ಷತರ ನಡುವೆ ರಣದಲ್ಲಿ ತುಮುಲ ಯುದ್ಧವು ನಡೆಯಿತು. ಧೃಷ್ಟದ್ಯುಮ್ನನಾದರೋ ಹಾರ್ದಿಕ್ಯನನ್ನು ಒಂಭತ್ತು ಶರಗಳಿಂದ ವಕ್ಷಃಸ್ಥಳದಲ್ಲಿ ಪ್ರಹರಿಸಿ ಕ್ರುದ್ಧನಾಗಿ ಹೃದಿಕಾತ್ಮಜನನ್ನು ಪೀಡಿಸಿದನು. ಕೃತವರ್ಮನಾದರೋ ಪಾರ್ಷತನಿಂದ ದೃಢವಾಗಿ ಪ್ರಹರಿಸಲ್ಪಟ್ಟು ಸಾಯಕಗಳಿಂದ ಪಾರ್ಷತನನ್ನು – ಅವನ ರಥ, ಕುದುರೆಗಳೊಂದಿಗೆ – ಮುಚ್ಚಿಬಿಟ್ಟನು. ರಥದೊಡನೆ ಮುಚ್ಚಿಹೋಗಿದ್ದ ಧೃಷ್ಟದ್ಯುಮ್ನನು ಮಳೆಗಾಲದ ಪ್ರಾರಂಭದಲ್ಲಿ ಮೇಘಗಳಿಂದ ಪರಿಚ್ಛನ್ನ ಭಾಸ್ಕರನಂತೆ ಕಾಣದಂತಾದನು. ಗಾಯಗೊಂಡಿದ್ದ ಧೃಷ್ಟದ್ಯುಮ್ನನು ಕನಕಭೂಷಣ ಶರಗಳಿಂದ ಕೃತವರ್ಮನ ಬಾಣಗಣಗಳನ್ನು ನಿರಸನಗೊಳಿಸಿ ಪುನಃ ಕಾಣಿಸಿಕೊಂಡನು. ಆಗ ಸೇನಾನಾಯಕ ಧೃಷ್ಟದ್ಯುಮ್ನನು ಕ್ರುದ್ಧನಾಗಿ ಕೃತವರ್ಮನ ಬಳಿಸಾರಿ ಅವನ ಮೇಲೆ ದಾರುಣ ಶಸ್ತ್ರವೃಷ್ಟಿಯನ್ನು ಸುರಿಸಿದನು. ಯುದ್ಧದಲ್ಲಿ ತನ್ನ ಮೇಲೆ ನಿರಂತರವಾಗಿ ಬೀಳುತ್ತಿದ್ದ ಆ ಶಸ್ತ್ರವೃಷ್ಟಿಯನ್ನು ಹಾರ್ದಿಕ್ಯನು ಅನೇಕ ಸಹಸ್ರ ಶರಗಳಿಂದ ಕೂಡಲೇ ನಾಶಗೊಳಿಸಿದನು. ಯುದ್ಧದಲ್ಲಿ ಎದುರಿಸಲಸಾಧ್ಯ ಶಸ್ತ್ರವೃಷ್ಟಿಯನ್ನು ನಾಶಗೊಳಿಸಿದುದನ್ನು ಕಂಡು ಪಾರ್ಷತನು ಕೃತವರ್ಮನನ್ನು ಪ್ರಹರಿಸಿ ನಿಲ್ಲಿಸಿದನು. ಮತ್ತು ಕೂಡಲೇ ಅವನ ಸಾರಥಿಯನ್ನು ಯಮಸಾದನಕ್ಕೆ ಕಳುಹಿಸಿದನು. ತೀಕ್ಷ್ಣ ಭಲ್ಲದಿಂದ ಅವನು ಹತನಾಗಿ ರಥದಿಂದ ಕೆಳಕ್ಕೆ

ಬಿದ್ದನು. ಧೃಷ್ಟದ್ಯುಮ್ನನಾದರೋ ಮಹಾರಥ ಶತ್ರುವನ್ನು ಸಮರದಲ್ಲಿ ಗೆದ್ದು ಕೂಡಲೇ ಸಾಯಕಗಳಿಂದ ಕೌರವರನ್ನು ತಡೆದನು. ಆಗ ಕೌರವ ಕಡೆಯ ಯೋಧರು ಸಿಂಹನಾದಗೈಯುತ್ತಾ ಧೃಷ್ಟದ್ಯುಮ್ನನನ್ನು ಆಕ್ರಮಿಸಿದರು. ಆಗ ಯುದ್ಧವು ಮುಂದುವರೆಯಿತು.

## ಯುಧಿಷ್ಠಿರ-ಅಶ್ವತ್ಥಾಮರ ಯುದ್ಧ

ಶೈನೇಯ ಮತ್ತು ಶೂರ ದ್ರೌಪದೇಯರಿಂದ ಅಭಿರಕ್ಷಿತ ಯುಧಿಷ್ಠಿರನನ್ನು ನೋಡಿ ದ್ರೌಣಿಯು ಪ್ರಹೃಷ್ಟನಾದನು. ಸ್ವರ್ಣಪುಂಖ ಶಿಲಾಶಿತ ಘೋರ ಶರಗಳನ್ನು ಎರಚುತ್ತಾ ಅಸ್ತ್ರಶಿಕ್ಷಣವನ್ನೂ ಹಸ್ತಾಲಾಘವವನ್ನೂ ವಿವಿಧ ಮಾರ್ಗಗಳನ್ನೂ ಪ್ರದರ್ಶಿಸುತ್ತಾ ದ್ರೌಣಿಯು ದಿವ್ಯಾಸ್ತ್ರಮಂತ್ರಿತ ಶರಗಳಿಂದ ಆಕಾಶವನ್ನೇ ತುಂಬಿಸಿದನು ಮತ್ತು ಆ ಅಸ್ತ್ರವಿದುವು ಯುಧಿಷ್ಠಿರನನ್ನು ಸುತ್ತುವರೆದನು. ದ್ರೌಣಿಯ ಶರಗಳಿಂದ ತುಂಬಿ ಯಾವುದೂ ತಿಳಿಯದಾಯಿತು. ಆ ಯುದ್ಧಭೂಮಿಯು ಎಲ್ಲಕಡೆ ಬಾಣಮಯವಾಯಿತು. ಆ ಬಾಣಜಾಲವು ಆಕಾಶದಲ್ಲಿ ನಿರ್ಮಿಸಿದ ಸ್ವರ್ಣಜಾಲವಿಭೂಷಿತ ಚಪ್ಪರದಂತೆ ಶೋಭಿಸಿತು. ರಣದಲ್ಲಿ ಹೊಳೆಯುತ್ತಿರುವ ಬಾಣಜಾಲಗಳಿಂದ ನೇಯಲ್ಪಟ್ಟ ಅದು ನಭಸ್ತಲದಲ್ಲಿ ಮೇಘಗಳ ಛಾಯೆಯೋ ಎನ್ನುವಂತೆ ಕಾಣುತ್ತಿತ್ತು. ಆರೀತಿ ಬಾಣಗಳು ತುಂಬಿರಲು ಆಕಾಶದಿಂದ ಭೂಮಿಯ ಮೇಲೆ ಏನೂ

ಬೀಳುತ್ತಿರಲಿಲ್ಲ. ದ್ರೋಣಪುತ್ರನ ಹಸ್ತಲಾಘವವನ್ನು ನೋಡಿ ಅಲ್ಲಿದ್ದ ಮಹಾರಥರು ವಿಸ್ಮಿತರಾದರು. ಉರಿಯುತ್ತಿರುವ ಭಾಸ್ಕರನಂತಿದ್ದ ಅವನನ್ನು ನೋಡಲು ಎಲ್ಲ ರಾಜರಿಗೂ ಸಾಧ್ಯವಾಗುತ್ತಿರಲಿಲ್ಲ. ಆಗ ಸಾತ್ಯಕಿಯಾಗಲೀ ಧರ್ಮರಾಜನಾಗಲೀ ಇನ್ನೂ ಇತರ ಸೇನೆಗಳಾಗಲೀ ತಮ್ಮ ಪರಾಕ್ರಮವನ್ನು ಅವನ ಮುಂದೆ ತೋರಿಸಲು ಸಾಧ್ಯವಾಗಲಿಲ್ಲ. ಸೇನೆಗಳು ಹಾಗೆ ವಧಿಸಲ್ಪಡುತ್ತಿರುವಾಗ ದ್ರೌಪದೇಯರು, ಸಾತ್ಯಕಿ, ಧರ್ಮರಾಜ ಮತ್ತು ಪಾಂಚಾಲರು ಒಟ್ಟಾಗಿ ಮೃತ್ಯುಭಯವನ್ನು ತೊರೆದು ಘೋರ ದ್ರೌಣಿಯನ್ನು ಆಕ್ರಮಣಿಸಿದರು.

ಸಾತ್ಯಕಿಯು ದ್ರೌಣಿಯನ್ನು ಇಪ್ಪತ್ತೈದು ಶಿಲಾಮುಖಿಗಳಿಂದ ಹೊಡೆದು ಪುನಃ ಏಳು ಸ್ವರ್ಣಭೂಷಿತ ನಾರಾಚಗಳಿಂದ ಹೊಡೆದನು. ಯುಧಿಷ್ಠಿರನು ಎಪ್ಪತ್ಮೂರು ಬಾಣಗಳಿಂದ, ಪ್ರತಿವಿಂದ್ಯನು ಏಳು, ಶ್ರುತಕರ್ಮನು ಮೂರು, ಶ್ರುತಕೀರ್ತಿಯು ಏಳು, ಸುತಸೋಮನು ಒಂಭತ್ತು ಮತ್ತು ಶತಾನೀಕನು ಏಳು ಬಾಣಗಳಿಂದ ಹಾಗೂ ಅನ್ಯ ಅನೇಕ ಶೂರರು ಎಲ್ಲಕಡೆಗಳಿಂದ ಅವನನ್ನು ಹೊಡೆದರು.

ಆಗ ಅತಿಕ್ರುದ್ಧ ಅಶ್ವತ್ಥಾಮನು ವಿಷಭರಿತ ಸರ್ಪದಂತೆ ನಿಟ್ಟುಸಿರು ಬಿಡುತ್ತಾ ಸಾತ್ಯಕಿಯನ್ನು ಇಪ್ಪತ್ತೈದು ಶಿಲಾಶಿತಗಳಿಂದ, ಶ್ರುತಕೀರ್ತಿಯನ್ನು ಒಂಭತ್ತು, ಸುತಸೋಮನನ್ನು ಐದು,

ಶ್ರುತಕರ್ಮನನ್ನು ಎಂಟು, ಪ್ರತಿವಿಂದ್ಯನನ್ನು ಮೂರು, ಶತಾನೀಕನನ್ನು ಒಂಭತ್ತು ಮತ್ತು ಧರ್ಮಪುತ್ರನನ್ನು ಏಳು ಶರಗಳಿಂದ ಹೊಡೆದನು. ಅನಂತರ ಇತರ ಶೂರರನ್ನು ಎರಡೆರಡು ಬಾಣಗಳಿಂದ ಹೊಡೆದು ನಿಶಿತ ಶರಗಳಿಂದ ಶ್ರುತಕೀರ್ತಿಯ ಧನುಸ್ಸನ್ನು ತುಂಡರಿಸಿದನು. ಕೂಡಲೇ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಶ್ರುತಕೀರ್ತಿಯು ದ್ರೌಣಾಯನಿಯನ್ನು ಮೂರರಿಂದ ಮತ್ತು ಅನ್ಯ ನಿಶಿತ ಶರಗಳಿಂದ ಗಾಯಗೊಳಿಸಿದನು. ಆಗ ದ್ರೌಣಿಯು ಶರವರ್ಷದಿಂದ ಆ ಸೇನೆಯನ್ನು ಮತ್ತು ಶರಗಳಿಂದ ನೃಪರನ್ನು ಎಲ್ಲಕಡೆಗಳಲ್ಲಿ ಮುಚ್ಚಿಬಿಟ್ಟನು. ಅನಂತರ ದ್ರೌಣಿಯು ಪುನಃ ಧರ್ಮರಾಜನ ಧನುಸ್ಸನ್ನು ಕತ್ತರಿಸಿ ನಗುತ್ತಾ ಅವನನ್ನು ಮೂರು ಶರಗಳಿಂದ ಹೊಡೆದನು. ಆಗ ಧರ್ಮಸುತನು ಇನ್ನೊಂದು ಮಹಾಧನುಸ್ಸನ್ನು ಹಿಡಿದು ಏಳು ಬಾಣಗಳಿಂದ ದ್ರೌಣಿಯ ಬಾಹುಗಳು ಮತ್ತು ಎದೆಗೆ ಹೊಡೆದನು. ಆಗ ದ್ರೌಣಿಯ ಪ್ರಹರಗಳಿಂದ ಕ್ರುದ್ಧನಾದ ಸಾತ್ಯಕಿಯು ತೀಕ್ಷ್ಣ ಅರ್ಧಚಂದ್ರದಿಂದ ಅವನ ಧನುಸ್ಸನ್ನು ಕತ್ತರಿಸಿ ತುಂಬಾ ಗಾಯಗೊಳಿಸಿದನು. ಧನುಸ್ಸು ತುಂಡಾದ ದ್ರೌಣಿಯು ಕೂಡಲೇ ಶಕ್ತ್ಯಾಯುಧವನ್ನುಪಯೋಗಿಸಿ ಶೈನೇಯನ ಸಾರಥಿಯನ್ನು ಕೆಳಗುರುಳಿಸಿದನು. ಕೂಡಲೇ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ದ್ರೋಣಪುತ್ರನು ಶರವರ್ಷದಿಂದ ಶೈನೇಯನನ್ನು ಮುಚ್ಚಿಬಿಟ್ಟನು.

ರಥಸಾರಥಿಯು ಬೀಳಲು ರಣದಲ್ಲಿ ಸಾತ್ಯಕಿಯ ಕುದುರೆಗಳು ದಿಕ್ಕಾಪಾಲಾಗಿ ಓಡಿ ಹೋದವು.

ಆಗ ಯುಧಿಷ್ಠಿರನ ನಾಯಕತ್ವದಲ್ಲಿದ್ದ ಪಾಂಡವ ಸೇನೆಯು ವೇಗವಾಗಿ ನಿಶಿತ ಬಾಣಗಳನ್ನು ದ್ರೌಣಿಯ ಮೇಲೆ ಸುರಿಸಿತು. ಮಹಾರಣದಲ್ಲಿ ರೌದ್ರರೂಪದ ಅವರು ಆಕ್ರಮಣಿಸುತ್ತಿರುವುದನ್ನು ನೋಡಿ ದ್ರೋಣಪುತ್ರನು ನಗುತ್ತಲೇ ಅವರನ್ನು ಎದುರಿಸಿದನು. ದ್ರೌಣಿಯು ಜ್ವಾಲಾರೂಪದ ನೂರಾರು ಬಾಣಗಳಿಂದ ವನದಲ್ಲಿ ಪೊದೆಯನ್ನು ಅಗ್ನಿಯು ಹೇಗೋ ಹಾಗೆ ಯುಧಿಷ್ಠಿರನ ಸೇನೆಯನ್ನು ಸುಟ್ಟುಹಾಕಿದನು. ದ್ರೋಣಪುತ್ರನಿಂದ ಸಂತಾಪಗೊಳಿಸಲ್ಪಡುತ್ತಿದ್ದ ಪಾಂಡುಪುತ್ರನ ಆ ಸೈನ್ಯವು ಸಾಗರವನ್ನು ಸೇರುವಾಗ ನದಿಯು ತಿಮಿಂಗಿಲದಿಂದ ಹೇಗೋ ಹಾಗೆ ಕ್ಷೋಭೆಗೊಂಡಿತು. ದ್ರೋಣಪುತ್ರನ ಪರಾಕ್ರಮವನ್ನು ನೋಡಿ ದ್ರೋಣಸುತನಿಂದ ಪಾಂಡವರೆಲ್ಲರೂ ಹತರಾದರೆಂದೇ ಭಾವಿಸಿದರು. ರೋಷ-ಕೋಪಸಮನ್ವಿತ ದ್ರೌಣಶಿಷ್ಯ ಯುಧಿಷ್ಠಿರನಾದರೋ ತ್ವರೆಮಾಡಿ ದ್ರೋಣಪುತ್ರನಿಗೆ ಹೇಳಿದನು:

> “ಪುರುಷವ್ಯಾಘ್ರ! ಇಂದು ನೀನು ನನ್ನನ್ನು ಸಂಹರಿಸಲು ಇಚ್ಛೈಸಿರುವುದು ನಿನಗೆ ನಮ್ಮ ಮೇಲಿರುವ ಪ್ರೀತಿಯ ದ್ಯೋತಕವೂ ಅಲ್ಲ! ಕೃತಜ್ಞತೆಯ ದ್ಯೋತಕವೂ ಅಲ್ಲ!

ತಪಸ್ಸು, ದಾನ, ಮತ್ತು ಅಧ್ಯಯನಗಳು ಬ್ರಾಹ್ಮಣನು ಮಾಡುವ ಕಾರ್ಯಗಳು. ಧನುಸ್ಸನ್ನು ಬಗ್ಗಿಸುವುದು ಕ್ಷತ್ರಿಯನ ಕಾರ್ಯ. ಆದರೆ ನೀನು ಮಾತ್ರ ಕರೆಯಿಸಿಕೊಳ್ಳುವುದಕ್ಕೆ ಬ್ರಾಹ್ಮಣನಾಗಿರುವೆ! ನೀನು ನಿಶ್ಚಯವಾಗಿಯೂ ಧರ್ಮಭ್ರಷ್ಟ ಬ್ರಾಹ್ಮಣನಾಗಿರುವೆ! ಸಮರದಲ್ಲಿ ನಿನ್ನ ಕರ್ಮವನ್ನು ಮಾಡು! ನೀನು ನೋಡುತ್ತಿರುವಂತೆಯೇ ಯುದ್ಧದಲ್ಲಿ ನಾನು ಕೌರವರನ್ನು ಜಯಿಸುತ್ತೇನೆ!”

ಇದನ್ನು ಕೇಳಿ ದ್ರೋಣಪುತ್ರನು ನಸುನಕ್ಕನು. ಹೇಳಿದುದು ತತ್ವಯುಕ್ತವಾಗಿಯೇ ಇದೆ ಎಂದು ಯೋಚಿಸಿ ಅದಕ್ಕೆ ಯಾವ ಉತ್ತರವನ್ನೂ ಕೊಡಲಿಲ್ಲ. ಏನನ್ನೂ ಹೇಳದೇ ಅವನು ಕ್ರುದ್ಧ ಅಂತಕನು ಪ್ರಜೆಗಳನ್ನು ಹೇಗೋ ಹಾಗೆ ಶರವರ್ಷದಿಂದ ಯುಧಿಷ್ಠಿರನನ್ನು ಮುಚ್ಚಿಬಿಟ್ಟನು. ದ್ರೋಣಪುತ್ರನಿಂದ ಮುಚ್ಚಲ್ಪಟ್ಟ ಯುಧಿಷ್ಠಿರನು ಮಹಾ ಸೇನೆಯನ್ನು ಬಿಟ್ಟು ಶೀಘ್ರವಾಗಿ ಹೊರಟುಹೋದನು. ಯುಧಿಷ್ಠಿರನು ಅಲ್ಲಿಂದ ಪಲಾಯನ ಮಾಡಲು ಮಹಾತ್ಮ ದ್ರೋಣಪುತ್ರನು ಇನ್ನೊಂದು ಮಾರ್ಗವನ್ನು ಹಿಡಿದು ಹೊರಟುಹೋದನು. ದ್ರೌಣಿಯನ್ನು ತೊರೆದು ರಾಜಾ ಯುಧಿಷ್ಠಿರನು ಕ್ರೂರಕರ್ಮದಲ್ಲಿಯೇ ನಿರತನಾಗಿ ಕೌರವ ಸೇನೆಯ ಕಡೆ ಧಾವಿಸಿದನು.

ಪಾಂಚಾಲ್ಯ, ಚೇದಿ-ಕೇಕಯರೊಂದಿಗೆ ಸಂವೃತನಾದ ಭೀಮಸೇನನನ್ನು ಸ್ವಯಂ ವೈಕರ್ತನನು ಸಾಯಕಗಳಿಂದ ಹೊಡೆದು ತಡೆದನು. ಭೀಮಸೇನನು ನೋಡುತ್ತಿದ್ದಂತೆಯೇ ಕರ್ಣನು ಸಂಕ್ರುದ್ಧನಾಗಿ ಚೇದಿ-ಕರೂಷರನ್ನೂ ಮಹಾರಥ ಸೃಂಜಯರನ್ನೂ ಸಂಹರಿಸಿದನು. ಆಗ ಭೀಮಸೇನನು ರಥಸತ್ತಮ ಕರ್ಣನನ್ನು ಬಿಟ್ಟು ಪ್ರಜ್ವಲಿಸುತ್ತಿರುವ ಅಗ್ನಿಯು ಹುಲ್ಲುಮೆದೆಯನ್ನು ಹೊಗುವಂತೆ ಕೌರವ ಸೇನೆಯನ್ನು ಹೊಕ್ಕನು. ಸೂತಪುತ್ರನಾದರೋ ಸಮರದಲ್ಲಿ ಸಹಸ್ರಾರು ಸಂಖ್ಯೆಗಳಲ್ಲಿ ಮಹೇಷ್ವಾಸ ಪಾಂಚಾಲರನ್ನೂ, ಕೇಕಯರನ್ನೂ, ಸೃಂಜಯರನ್ನೂ ಸಂಹರಿಸಿದನು. ಮಹಾರಥ ಪಾರ್ಥನು ಸಂಶಪ್ತಕರಲ್ಲಿಯೂ, ವೃಕೋದರನು ಕೌರವರಲ್ಲಿಯೂ ಮತ್ತು ಹಾಗೆಯೇ ಮಹಾರಥ ಕರ್ಣನು ಪಾಂಚಾಲರಲ್ಲಿಯೂ ಅತ್ಯಧಿಕ ಕ್ಷಯವನ್ನುಂಟುಮಾಡಿದರು. ಪಾವಕನಂತೆ ಸುಡುತ್ತಿದ್ದ ಆ ಮೂವರಿಂದ ಕ್ಷತ್ರಿಯರು ವಿನಾಶಹೊಂದಿದರು.

## ದುರ್ಯೋಧನನೊಂದಿಗೆ ನಕುಲ-ಸಹದೇವರ ಯುದ್ಧ

ಆಗ ಕ್ರುದ್ಧನಾದ ದುರ್ಯೋಧನನು ನಕುಲನನ್ನು ಮತ್ತು ಅವನ ನಾಲ್ಕು ಕುದುರೆಗಳನ್ನು ಒಂಭತ್ತು ಶರಗಳಿಂದ ಹೊಡೆದನು. ಪುನಃ ಅವನು ಕ್ಷುರದಿಂದ ಸಹದೇವನ ಕಾಂಚನ ಧ್ವಜವನ್ನು ಕತ್ತರಿಸಿದನು. ಆಗ

ಕ್ರುದ್ಧನಾಗಿ ನಕುಲನು ಮೂರು ಬಾಣಗಳಿಂದ ಮತ್ತು ಸಹದೇವನು ಐದರಿಂದ ದುರ್ಯೋಧನನನ್ನು ಹೊಡೆದರು. ದುರ್ಯೋಧನನು ಸಂಕ್ರುದ್ಧನಾಗಿ ಐದೈದು ಶರಗಳಿಂದ ಆ ಇಬ್ಬರು ಭರತಶ್ರೇಷ್ಠರ ವಕ್ಷಸ್ಥಳಗಳನ್ನು ಪ್ರಹರಿಸಿದನು. ಬೇರೆ ಭಲ್ಲಗಳೆರಡರಿಂದ ಆ ಯಮಳರ ಧನುಸ್ಸುಗಳನ್ನು ಕತ್ತರಿಸಿ ನಕ್ಕು ಏಳು ಬಾಣಗಳಿಂದ ಅವರನ್ನು ಹೊಡೆದನು. ಆಗ ಅವರಿಬ್ಬರು ಶೂರರೂ ಶಕ್ರಚಾಪಗಳಂತೆ ಶೋಭಿಸುತ್ತಿದ್ದ ಬೇರೆ ಶ್ರೇಷ್ಠ ಧನುಸ್ಸುಗಳನ್ನು ತೆಗೆದುಕೊಂಡು ಯುದ್ಧದಲ್ಲಿ ದೇವಪುತ್ರರಂತೆ ಶೋಭಿಸಿದರು.

ಆಗ ಅವರಿಬ್ಬರು ಸಹೋದರರೂ ಘೋರಮಹಾಮೇಘಗಳು ಪರ್ವತವನ್ನು ಹೇಗೋ ಹಾಗೆ ಯುದ್ಧದಲ್ಲಿ ಅಣ್ಣನನ್ನು ಶರವರ್ಷಗಳಿಂದ ಅಭಿಷೇಚಿಸಿದರು. ಆಗ ದುರ್ಯೋಧನನು ಕ್ರುದ್ಧನಾಗಿ ಪತ್ರಿಗಳಿಂದ ಪಾಂಡುಪುತ್ರರನ್ನು ತಡೆದನು. ಆಗ ಯುದ್ಧದಲ್ಲಿ ಅವನ ಧನುಸ್ಸು ಮಂಡಲಾಕಾರವಾಗಿ ಕಾಣುತ್ತಿತ್ತು. ಅದರಿಂದ ಒಂದೇಸಮನೆ ಹೊರಬರುತ್ತಿದ್ದ ಸಾಯಕಗಳು ಮಾತ್ರ ಕಾಣುತ್ತಿದ್ದವು. ಅವನ ಸಾಯಕಗಳ ಗುಂಪುಗಳು ಮೇಘಗಳು ಆಕಾಶವನ್ನು ತುಂಬಿ ಚಂದ್ರ-ಸೂರ್ಯರ ಪ್ರಭೆಗಳನ್ನು ಕುಂದಿಸುವಂತೆ ಆ ಪಾಂಡವರನ್ನು ಕುಂದಿಸಿದವು. ಆ ಹೇಮಪುಂಖ ಶಿಲಾಶಿತ ಬಾಣಗಳು ಸೂರ್ಯನ ಕಿರಣಗಳಂತೆ ಸರ್ವ ದಿಕ್ಕುಗಳನ್ನೂ

ಆಚ್ಛಾದಿಸಿದವು. ನಭಸ್ತಲವೂ ಬಾಣಮಯವಾಗಿ ಮುಚ್ಚಿಹೋಗಲು ಯಮಳರಿಗೆ ದುರ್ಯೋಧನನ ರೂಪವು ಕಾಲಾಂತಕ ಯಮನಂತೆಯೇ ತೋರಿತು. ಅವನ ಆ ಪರಾಕ್ರಮವನ್ನು ನೋಡಿ ಮಾದ್ರಿಪುತ್ರರಿಗೆ ಮೃತ್ಯುವು ಸಮೀಪವಾಯಿತೆಂದೇ ಮಹಾರಥರು ಭಾವಿಸಿದರು.

## ದುರ್ಯೋಧನ-ಧೃಷ್ಟದ್ಯುಮ್ನರ ಯುದ್ಧ

ಆಗ ಪಾಂಡವರ ಸೇನಾಪತಿ ಧೃಷ್ಟದ್ಯುಮ್ನನು ಸುಯೋಧನನಿದ್ದಲ್ಲಿಗೆ ಆಗಮಿಸಿದನು. ಮಾದ್ರೀಪುತ್ರರೀರ್ವರನ್ನೂ ದಾಟಿ ಮುಂದೆ ಹೋಗಿ ಧೃಷ್ಟದ್ಯುಮ್ನನು ಸಾಯಕಗಳಿಂದ ದುರ್ಯೋಧನನನ್ನು ಪ್ರಹರಿಸಿದನು. ದುರ್ಯೋಧನನು ನಗುತ್ತಲೇ ಪಾಂಚಾಲ್ಯನನ್ನು ಇಪ್ಪತ್ತೈದು ಬಾಣಗಳಿಂದ ಪ್ರಹರಿಸಿದನು. ಪುನಃ ಅವನು ಪಾಂಚಾಲ್ಯನನ್ನು ಅರವತ್ತೈದು ಬಾಣಗಳಿಂದ ಹೊಡೆದು ಗರ್ಜಿಸಿದನು. ದುರ್ಯೋಧನನು ಸುತೀಕ್ಷ್ಣ ಕ್ಷುರಪ್ರದಿಂದ ಶರಯುಕ್ತವಾದ ಅವನ ಧನುಸ್ಸನ್ನೂ ಕೈಚೀಲವನ್ನೂ ಕತ್ತರಿಸಿದನು.

ತುಂಡಾದ ಧನುಸ್ಸನ್ನು ಬಿಸುಟು ಪಾಂಚಾಲ್ಯನು ವೇಗದಿಂದ ಇನ್ನೊಂದು ಧನುಸ್ಸನ್ನು ಕೈಗೆತ್ತಿಕೊಂಡನು. ತುಂಬಾಗಾಯಗೊಂಡಿದ್ದ, ಕೋಪದಿಂದ ಕಣ್ಣುಗಳು ಕೆಂಪಾಗಿದ್ದ ಧೃಷ್ಟದ್ಯುಮ್ನನು ವೇಗದಿಂದ ಪ್ರಜ್ವಲಿಸುತ್ತಿರುವ ಅಗ್ನಿಯಂತೆಯೇ ಶೋಭಿಸಿದನು.

ದುರ್ಯೋಧನನನ್ನು ಸಂಹರಿಸಲೋಸುಗ ಧೃಷ್ಟದ್ಯುಮ್ನನು ಪನ್ನಗಗಳಂತೆ ಭುಸುಗುಡುತ್ತಿರುವ ಹದಿನೈದು ನಾರಾಚಗಳನ್ನು ಪ್ರಯೋಗಿಸಿದನು. ರಣಹದ್ದಿನ ರೆಕ್ಕೆಗಳೇ ವಸ್ತ್ರಗಳಾಗಿದ್ದ ಆ ಶಿಲಾಶಿತ ಬಾಣಗಳು ರಾಜನ ಸುವರ್ಣಮಯ ಕವಚವನ್ನು ಭೇದಿಸಿ ವೇಗವಾಗಿ ನೆಲವನ್ನು ಹೊಕ್ಕವು. ಅತಿಯಾಗಿ ಗಾಯಗೊಂಡ ದುರ್ಯೋಧನನು ವಸಂತದಲ್ಲಿ ಹೂಬಿಟ್ಟ ಮುತ್ತುಗದ ಮರದಂತೆಯೇ ತೋರಿದನು. ನಾರಾಚಗಳ ಪ್ರಹಾರದಿಂದ ಕವಚವು ಛಿದ್ರವಾಗಲು ದುರ್ಯೋಧನನ ಶರೀರವು ಜರ್ಜರಿತವಾಯಿತು. ಆಗ ಅವನು ಕ್ರುದ್ಧನಾಗಿ ಭಲ್ಲದಿಂದ ಧೃಷ್ಟದ್ಯುಮ್ನನ ಕಾರ್ಮುಕವನ್ನು ತುಂಡರಿಸಿದನು. ಕೂಡಲೇ ಆ ಮಹೀಪತಿಯು ತ್ವರೆಮಾಡಿ ಧನುಸ್ಸು ತುಂಡಾಗಿದ್ದ ಧೃಷ್ಟದ್ಯುಮ್ನನ ಹುಬ್ಬುಗಳ ಮಧ್ಯೆ ಹತ್ತು ಸಾಯಕಗಳನ್ನು ಪ್ರಹರಿಸಿದನು. ಮಧುವನ್ನಪೇಕ್ಷಿಸುವ ದುಂಬಿಗಳು ಅರಳಿದ ತಾವರೆಯನ್ನು ಹೇಗೋ ಹಾಗೆ ಕಮ್ಮಾರನಿಂದ ಹದಗೊಳಿಸಿದ್ದ ಆ ಬಾಣಗಳು ಧೃಷ್ಟದ್ಯುಮ್ನನ ಮುಖವನ್ನು ಶೋಭಗೊಳಿಸಿದವು. ಆಗ ಧೃಷ್ಟದ್ಯುಮ್ನನು ತುಂಡಾದ ಧನುಸ್ಸನ್ನು ಬಿಸುಟು ವೇಗದಿಂದ ಇನ್ನೊಂದು ಧನುಸ್ಸನ್ನೂ ಹದಿನಾರು ಬಲ್ಲಗಳನ್ನೂ ಎತ್ತಿಕೊಂಡನು. ಆಗ ಅವನು ಐದು ಭಲ್ಲಗಳಿಂದ ದುರ್ಯೋಧನನ ಕುದುರೆಗಳನ್ನೂ ಸಾರಥಿಯನ್ನು ಸಂಹರಿಸಿ ಆರನೆಯದರಿಂದ ಅವನ ಸುವರ್ಣಪರಿಷ್ಕೃತ ಧನುಸ್ಸನ್ನು

ತುಂಡರಿಸಿದನು. ಪಾರ್ಷತನು ಉಳಿದ ಒಂಬತ್ತು ಭಲ್ಲಗಳಿಂದ ಯುದ್ಧಸಾಮಗ್ರಿಗಳಿಂದ ಯುಕ್ತವಾಗಿದ್ದ ದುರ್ಯೋಧನನ ರಥ, ಚತ್ರ, ಶಕ್ತಿ, ಖಡ್ಗ, ಗದೆ ಮತ್ತು ಧ್ವಜಗಳನ್ನು ತುಂಡರಿಸಿದನು. ಚಿನ್ನದ ಅಂಗದಗಳಿಂದ ಶೋಭಿಸುತ್ತಿದ್ದ ಆ ಮಣಿಮಯ, ನಾಗದ ಚಿಹ್ನೆಯುಳ್ಳ ಕುರುಪತಿಯ ಧ್ವಜವು ತುಂಡಾಗಿದ್ದುದನ್ನು ಸರ್ವ ಪಾರ್ಥಿವರೂ ನೋಡಿದರು. ರಣದಲ್ಲಿ ವಿರಥನಾಗಿದ್ದ, ಸರ್ವಾಯುಧಗಳನ್ನೂ ಕಳೆದುಕೊಂಡಿದ್ದ ದುರ್ಯೋಧನನನ್ನು ಸಹೋದರರು ಪರಿರಕ್ಷಿಸುತ್ತಿದ್ದರು. ಧೃಷ್ಟದ್ಯುಮ್ನನು ನೋಡುತ್ತಿದ್ದಂತೆಯೇ ಸಂಭ್ರಾಂತನಾಗಿದ್ದ ಜನಾಧಿಪ ದುರ್ಯೋಧನನನ್ನು ದಂಡಧಾರನು ತನ್ನ ರಥದಲ್ಲಿ ಏರಿಸಿಕೊಂಡನು.

## ಕರ್ಣ-ಧೃಷ್ಟದ್ಯುಮ್ನರ ಯುದ್ಧ

ರಾಜನ ಹಿತಾಕಾಂಕ್ಷೀ ಮಹಾಬಲ ಕರ್ಣನಾದರೋ ಸಾತ್ಯಕಿಯನ್ನು ಗೆದ್ದು ರಣದಲ್ಲಿ ಉಗ್ರ ದ್ರೋಣಹಂತಾರ ಧೃಷ್ಟದ್ಯುಮ್ನನನ್ನು ಎದುರಿಸಿ ಹೋದನು. ಒಂದು ಆನೆಯು ಇನ್ನೊಂದು ಆನೆಯ ಹಿಂಭಾಗವನ್ನು ದಂತಗಳಿಂದ ತಿವಿಯುವಂತೆ ಶೈನೇಯನು ವೇಗವಾಗಿ ಶರಗಳಿಂದ ಕರ್ಣನನ್ನು ಪೀಡಿಸುತ್ತಾ ಅವನ ಹಿಂದೆಯೇ ಹೋದನು. ಆಗ ಮಹಾರಣದಲ್ಲಿ ಕರ್ಣ-ಪಾರ್ಷತರ ಮಧ್ಯೆ ಮತ್ತು ಕೌರವ ಯೋಧರ

ಮಹಾಯುದ್ಧವು ನಡೆಯಿತು. ಆಗ ಕರ್ಣನು ತ್ವರೆಮಾಡಿ ಪಾಂಚಾಲರನ್ನು ಆಕ್ರಮಣಿಸಿದನು. ಮಧ್ಯಾಹ್ನದ ಆ ಸಮಯದಲ್ಲಿ ಎರಡೂ ಪಕ್ಷಗಳಲ್ಲಿ ಆನೆ-ಕುದುರೆ-ಮನುಷ್ಯರ ವಿನಾಶವು ನಡೆಯಿತು. ಜಯವನ್ನು ಬಯಸಿದ ಪಾಂಚಾಲರಾದರೋ ತ್ವರೆಮಾಡಿ ಪಕ್ಷಿಗಳು ವೃಕ್ಷವನ್ನು ಹೇಗೋ ಹಾಗೆ ಕರ್ಣನನ್ನು ಎಲ್ಲಕಡೆಗಳಿಂದ ಆಕ್ರಮಣಿಸಿದರು. ಕ್ರುದ್ಧನಾದ ಆಧಿರಥಿಯು ಆ ಮನಸ್ವಿಗಳನ್ನು ಅಯ್ದಾಯ್ದುಕೊಂಡು ಬಾಣಾಗ್ರಗಳಿಂದ ಸಂಹರಿಸಲು ಉಪಕ್ರಮಿಸಿದನು. ವ್ಯಾಘ್ರಕೇತು, ಸುಶರ್ಮ, ಶಂಕ, ಉಗ್ರ, ಧನಂಜಯ, ಶುಕ್ಲ, ರೋಚಮಾನ, ಸಿಂಹಸೇನ ಮತ್ತು ದುರ್ಜಯ – ಈ ವೀರರು ರಥವೇಗದಿಂದ ಕ್ರುದ್ಧನಾಗಿ ಸಾಯಕಗಳನ್ನು ಪ್ರಯೋಗಿಸುತ್ತಿದ್ದ ಕರ್ಣನನ್ನು ಸುತ್ತುವರೆದರು. ಯುದ್ಧಮಾಡುತ್ತಿದ್ದ ಆ ಎಂಟು ಶೂರರನ್ನು ರಾಧೇಯನು ಎಂಟು ನಿಶಿತ ಶರಗಳಿಂದ ಸಂಹರಿಸಿದನು. ಪ್ರತಾಪವಾನ್ ಸೂತಪುತ್ರನು ಇನ್ನೂ ಅನೇಕ ಸಹಸ್ರಾರು ಯೋಧರನ್ನು ಸಂಹರಿಸಿದನು. ಸಂಕ್ರುದ್ಧನಾಗಿದ್ದ ಅವನು ಸಮರದಲ್ಲಿ ಚೇದಿದೇಶದ ವಿಷ್ಣು, ವಿಷ್ಣುಕರ್ಮ, ದೇವಾಪಿ, ಭದ್ರ, ದಂಡ, ಚಿತ್ರ, ಚಿತ್ರಾಯುಧ, ಹರಿ, ಸಿಂಹಕೇತು, ರೋಚಮಾನ, ಮತ್ತು ಮಹಾರಥ ಶಲಭರನ್ನೂ ಸಂಹರಿಸಿದನು. ಅವರ ಪ್ರಾಣಗಳನ್ನು ಹೀರಿಕೊಳ್ಳುತ್ತಿದ್ದ ಮತ್ತು ಅಂಗಾಂಗಗಳು ರಕ್ತಸಿಕ್ತವಾಗಿದ್ದ ಆ ರಾಧೇಯನ ಶರೀರವು ರುದ್ರನ

ವಿಶಾಲ ಶರೀರದಂತೆ ಕಾಣುತ್ತಿತ್ತು. ಅಲ್ಲಿ ಕರ್ಣನ ಶರಗಳಿಂದ ಪ್ರಹರಿಸಲ್ಪಟ್ಟ ಆನೆಗಳು ಭೀತರಾಗಿ ಎಲ್ಲಕಡೆ ಓಡಿಹೋಗುತ್ತಾ ಮಹಾ ವ್ಯಾಕುಲವನ್ನುಂಟುಮಾಡುತ್ತಿದ್ದವು. ಕರ್ಣನ ಸಾಯಕಗಳಿಂದ ಪೀಡಿತ ಆನೆಗಳು ವಿವಿಧ ಕೂಗುಗಳನ್ನು ಕೂಗುತ್ತಾ ವಜ್ರಾಹತ ಪರ್ವತಗಳಂತೆ ಭೂಮಿಯ ಮೇಲೆ ಬೀಳುತ್ತಿದ್ದವು. ಕರ್ಣನು ಹೋಗುತ್ತಿದ್ದ ಮಾರ್ಗಗಳಲ್ಲಿ ಎಲ್ಲಕಡೆಗಳಲ್ಲಿ ಆನೆ-ಕುದುರೆ-ಮನುಷ್ಯರು ಮತ್ತು ರಥಗಳು ರಣಭೂಮಿಯನ್ನು ತುಂಬಿ ಬೀಳುತ್ತಿದ್ದವು.

ಕರ್ಣನು ರಣದಲ್ಲಿ ಮಾಡಿದಂತ ಸಾಹಸಕರ್ಮವನ್ನು ಕೌರವರ ಕಡೆಯ ಯಾರೂ – ಭೀಷ್ಮನಾಗಲೀ, ದ್ರೋಣನಾಗಲೀ ಅಥವಾ ಇನ್ಯಾರೇ ಆಗಲೀ – ಯುದ್ಧದಲ್ಲಿ ಮಾಡಿದುದನ್ನು ನೋಡಿರಲಿಲ್ಲ. ಸೂತಪುತ್ರನು ಆನೆಗಳು, ರಥಗಳು, ಕುದುರೆಗಳು ಮತ್ತು ಮನುಷ್ಯರೊಂದಿಗೆ ಮಹಾಕದನವಾಡಿದನು. ಮೃಗಗಳ ಮಧ್ಯದಲ್ಲಿ ಸಿಂಹವು ನಿರ್ಭಯವಾಗಿ ಸಂಚರಿಸುತ್ತಿರುವುದು ಕಾಣುವಂತೆ ಪಾಂಚಾಲರ ಮಧ್ಯದಲ್ಲಿ ಕರ್ಣನು ಭೀತಿಯಿಲ್ಲದೇ ಸಂಚರಿಸುತ್ತಿದ್ದನು. ಭಯಗೊಂಡ ಮೃಗಗಣಗಳನ್ನು ಸಿಂಹವು ಹೇಗೆ ದಿಕ್ಕಾಪಾಲಾಗಿ ಓಡಿಸುವುದೋ ಹಾಗೆ ಕರ್ಣನು ಪಾಂಚಾಲರ ರಥಸಮೂಹಗಳನ್ನು ಓಡಿಸುತ್ತಿದ್ದನು. ಸಿಂಹನಿಗೆ ಸಿಲುಕಿದ ಮೃಗಗಳು ಹೇಗೆ ಜೀವಂತವಾಗಿರುವುದಿಲ್ಲವೋ ಹಾಗೆ ಕರ್ಣನಿಗೆ ಸಿಲುಕಿದ ಮಹಾರಥರು ಜೀವದಿಂದಿರುತ್ತಿರಲಿಲ್ಲ.

ಪ್ರಜ್ವಲಿಸುತ್ತಿರುವ ವೈಶ್ವಾನರನಿಗೆ ಸಿಲುಕಿದ ಜನರು ಹೇಗೆ ಸುಟ್ಟುಹೋಗುವರೋ ಹಾಗೆ ರಣದಲ್ಲಿ ಕರ್ಣಾಗ್ನಿಯಿಂದ ಸೃಂಜಯರು ದಹಿಸಿಹೋಗುತ್ತಿದ್ದರು. ಕರ್ಣನು ತನ್ನ ಹೆಸರನ್ನು ಹೇಳಿಕೊಂಡು ಅನೇಕ ಶೂರಸಮ್ಮತ ಚೇದಿ-ಕೇಕಯ-ಪಾಂಚಾಲರನ್ನು ಸಂಹರಿಸಿದನು. ಕರ್ಣನ ವಿಕ್ರಮವನ್ನು ನೋಡಿ ಒಬ್ಬ ಪಾಂಚಲ್ಯನೂ ಯುದ್ಧದಲ್ಲಿ ಆಧಿರಥಿಯಿಂದ ಜೀವಸಹಿತ ಉಳಿಯಲಾರನು ಎಂದು ತೋರಿತು.

ಯುದ್ಧದಲ್ಲಿ ಪಾಂಚಾಲರನ್ನು ಸದೆಬಡಿದು ಸೂತಪುತ್ರನು ಸಂಕ್ರುದ್ಧನಾಗಿ ಯುಧಿಷ್ಠಿರನನ್ನು ಆಕ್ರಮಣಿಸಿದನು. ಆಗ ಧೃಷ್ಟದ್ಯುಮ್ನ, ದ್ರೌಪದೇಯರು ಮತ್ತು ನೂರಾರು ಇತರರು ಯುಧಿಷ್ಠಿರನನ್ನು ಸುತ್ತುವರೆದರು. ಶಿಖಂಡೀ, ಸಹದೇವ, ನಕುಲ, ಶತಾನೀಕ, ಜನಮೇಜಯ, ಸಾತ್ಯಕಿ ಮತ್ತು ಅನೇಕ ಪ್ರಭದ್ರಕರು ಧೃಷ್ಟದ್ಯುಮ್ನನನ್ನು ಮುಂದಿರಿಸಿಕೊಂಡು ಯುದ್ಧದಲ್ಲಿ ಕರ್ಣನನ್ನು ಅಸ್ತ್ರ-ಶಸ್ತ್ರಗಳಿಂದ ಪ್ರಹರಿಸುತ್ತಾ ಸಂಚರಿಸುತ್ತಿದ್ದರು. ಗರುಡನು ಸರ್ಪಗಳ ಮೇಲೆ ಬೀಳುವಂತೆ ಯುದ್ಧದಲ್ಲಿ ಕರ್ಣನು ಒಬ್ಬನೇ ಅನೇಕ ಚೇದಿ-ಪಾಂಚಾಲ-ಪಾಂಡವರ ಮೇಲೆ ಎರಗಿದನು. ಸಂಕ್ರುದ್ಧನಾಗಿದ್ದ ಭೀಮಸೇನನಾದರೋ ಒಂಟಿಯಾಗಿ ಕೇಕಯರೊಂದಿಗೆ ಕುರು-ಮದ್ರರನ್ನು ಯುದ್ಧದಲ್ಲಿ ಎದುರಿಸುತ್ತಾ ಬಹಳವಾಗಿ ಶೋಭಿಸಿದನು.

ಭೀಮನ ನಾರಾಚಗಳಿಂದ ಮರ್ಮಗಳು ಭೇದಿಸಲ್ಪಟ್ಟ ಆನೆಗಳು

ಹತರಾದ ಗಜಾರೋಹಿಗಳೊಡನೆ ಮೇದಿನಿಯನ್ನೇ ನಡುಗಿಸುತ್ತಾ ಕೆಳಗೆ ಬೀಳುತ್ತಿದ್ದವು. ಹತಗೊಂಡ ಕುದುರೆಗಳೂ, ಕುದುರೆ ಸವಾರರೂ, ಜೀವತೊರೆದ ಪದಾತಿಗಳು ಯುದ್ಧದಲ್ಲಿ ನಿರ್ಭಿನ್ನರಾಗಿ ಬಹಳ ರಕ್ತವನ್ನು ಕಾರುತ್ತಾ ಮಲಗಿದ್ದರು. ಸಹಸ್ರಾರು ರಥಿಗಳು ಬಿದ್ದಿದ್ದರು. ಅವರ ಆಯುಧಗಳೂ ಬಿದ್ದಿದ್ದವು. ಕ್ಷತ-ವಿಕ್ಷತರಾದ ಅವರು ಭೀಮನ ಭಯದಿಂದಲೇ ಪ್ರಾಣಗಳನ್ನು ತೊರೆದಂತೆ ತೋರುತ್ತಿದ್ದರು. ಭೀಮಸೇನನ ಶರಗಳಿಂದ ನಾಶಗೊಂದ ರಥಿಗಳು, ಕುದುರೆಗಳು, ಸಾರಥಿಗಳು, ಪದಾತಿಗಳು ಮತ್ತು ಆನೆಗಳಿಮ್ದ ಯುದ್ಧಭೂಮಿಯು ತುಂಬಿಹೋಗಿತ್ತು. ಭೀಮಸೇನನ ಬಲದಿಂದ ಪೀಡಿತಗೊಂಡು ಗಾಯಗೊಂಡಿದ್ದ ದುರ್ಯೋಧನನ ಸೇನೆಯು ನಿರುತ್ಸಾಹಗೊಂಡು ಸ್ತಬ್ಧವಾಗಿ ನಿಂತುಬಿಟ್ಟಿತ್ತು. ಭರತವಿಲ್ಲದ ಸಮಯದಲ್ಲಿ ಸಮುದ್ರವು ಪ್ರಶಾಂತವಾಗಿರುವಂತೆ ಆ ತುಮುಲ ಮಹಾರಣವು ದೀನವೂ ನಿಶ್ಚೇಷ್ಟವೂ ಆಗಿದ್ದಿತು.

ಆ ಸಮಯದಲ್ಲಿ ಕೂಡ ದುರ್ಯೋಧನನ ಸೇನೆಯು ಕೋಪ, ವೀರ್ಯ, ಬಲಗಳಿಂದ ಕೂಡಿತ್ತು. ಆದರೆ ಅದರ ದರ್ಪವು ಉಡುಗಿಹೋಗಿತ್ತು. ರಕ್ತವು ಸೋರಿ ಅದೇ ರಕ್ತದಿಂದಲೇ ಸೇನೆಯು ತೋಯ್ದುಹೋಯಿತು. ಕ್ರುದ್ಧ ಸೂತಪುತ್ರನು ಪಾಂಡವ ಸೇನೆಯನ್ನು ಮತ್ತು ಭೀಮಸೇನನು

ಕುರುಸೇನೆಯನ್ನು ಪಲಾಯನಗೊಳಿಸುತ್ತಾ ಬಹಳವಾಗಿ ಶೋಭಿಸಿದರು.

## ಅರ್ಜುನನ ಯುದ್ಧ

ಹಾಗೆ ನೋಡಲು ಅದ್ಭುತವಾಗಿದ್ದ ಆ ರೌದ್ರ ಸಂಗ್ರಾಮವು ನಡೆಯುತ್ತಿರಲು ಸೇನಾಮಧ್ಯದಲ್ಲಿ ಅನೇಕ ಸಂಶಪ್ತಕಗಣಗಳನ್ನು ಸಂಹರಿಸಿ ಜಯಿಗಳಲ್ಲಿ ಶ್ರೇಷ್ಠ ಅರ್ಜುನನು ವಾಸುದೇವನಿಗೆ ಹೇಳಿದನು:

> “ಜನಾರ್ದನ! ಯುದ್ಧಮಾಡುತ್ತಿರುವವರ ಸೇನೆಯು ಭಗ್ನವಾಯಿತೆಂದೇ ತಿಳಿ! ಇಗೋ! ಸಿಂಹಗರ್ಜನೆಯನ್ನು ಜಿಂಕೆಗಳು ಹೇಗೋ ಹಾಗೆ ನನ್ನ ಬಾಣಗಳನ್ನು ಸಹಿಸಲಾರದೇ ಸಂಶಪ್ತಕ ಮಹಾರಥರು ಸೇನೆಗಳೊಡನೆ ಓಡಿ ಹೋಗುತ್ತಿದ್ದಾರೆ! ಕೃಷ್ಣ! ಆನೆಯನ್ನು ಕಟ್ಟುವ ಹಗ್ಗದ ಚಿಹ್ನೆಯುಳ್ಳ ಧೀಮತ ಕರ್ಣನು ಮಹಾರಣದಲ್ಲಿ ಸೃಂಜಯರ ಮಹಾಸೇನೆಯನ್ನು ಸೀಳುತ್ತಾ ರಾಜಸೈನ್ಯದ ಮಧ್ಯೆ ಅತ್ತಿತ್ತ ಸಂಚರಿಸುತ್ತಿರುವುದು ಕಾಣುತ್ತಿದೆ. ರಣದಲ್ಲಿ ಕರ್ಣನನ್ನು ಗೆಲ್ಲಲು ಅನ್ಯ ಮಹಾರಥರು ಶಕ್ತರಿಲ್ಲ. ವೀರ್ಯವಂತ ಕರ್ಣನ ಪರಾಕ್ರಮವನ್ನು ನೀನು ತಿಳಿದುಕೊಂಡಿರುವೆ! ನಮ್ಮ

> ಸೇನೆಗಳನ್ನು ಎಲ್ಲಿ ಕರ್ಣನು ಓಡಿಸುತ್ತಿರುವನೋ ಅಲ್ಲಿಗೆ ಕೊಂಡೊಯ್ಯಿ! ನಿನಗೆ ಶ್ರಮವಾಗದಿದ್ದರೆ ಅಥವಾ ನಿನಗೆ ಇಷ್ಟವಾದರೆ ಈ ರಣರಂಗವನ್ನು ಬಿಟ್ಟು ಮಹಾರಥ ಸೂತಪುತ್ರನಿರುವಲ್ಲಿಗೆ ಕರೆದೊಯ್ಯಿ!”

ಇದನ್ನು ಕೇಳಿ ಗೋವಿಂದನು ನಸುನಗುತ್ತಾ “ಪಾಂಡವ! ಬೇಗನೇ ಕೌರವರನ್ನು ಸಂಹರಿಸು!” ಎಂದು ಅರ್ಜುನನಿಗೆ ಹೇಳಿದನು. ಅನಂತರ ಗೋವಿಂದಪ್ರೇರಿತ ಹಂಸವರ್ಣದ ಕುದುರೆಗಳು ಕೃಷ್ಣ-ಪಾಂಡವರನ್ನು ಹೊತ್ತು ಕೌರವ ಮಹಾ ಸೇನೆಯನ್ನು ಪ್ರವೇಶಿಸಿದವು. ಕೇಶವನಿಂದ ನಡೆಸಲ್ಪಟ್ಟ ಕಾಂಚನಭೂಷಿತ ಶ್ವೇತಹಯಗಳು ಪ್ರವೇಶಿಸುತ್ತಿದ್ದಂತೆಯೇ ಕೌರವ ಸೇನೆಯು ನಾಲ್ಕು ದಿಕ್ಕುಗಳಿಗೂ ಚದುರಿತು. ಕ್ರುದ್ಧರಾಗಿದ್ದ, ಕೋಪದಿಂದ ಕಣ್ಣುಗಳು ಕೆಂಪಾಗಿದ್ದ ಮಹಾದ್ಯುತೀ ಕೇಶವಾರ್ಜುನರು ಆ ಮಹಾಸೇನೆಯನ್ನು ಸೀಳಿ ಪ್ರವೇಶಿಸಿ ಬಹಳವಾಗಿ ರಾರಾಜಿಸಿದರು. ಋತ್ವಿಜರಿಂದ ವಿಧಿವತ್ತಾಗಿ ಅಹ್ವಾನಿಸಲ್ಪಟ್ಟ ಅಶ್ವಿನೀ ದೇವತೆಗಳಂತೆ ಯುದ್ಧಕ್ಕೆ ಆಹ್ವಾನಿಸಲ್ಪಟ್ಟ ಆ ಇಬ್ಬರು ಯುದ್ಧಶೌಂಡರೂ ರಣಾಧ್ವರವನ್ನು ಪ್ರವೇಶಿಸಿದರು. ಮಹಾಹವದಲ್ಲಿ ಚಪ್ಪಾಳೆ ಶಬ್ಧಗಳನ್ನು ಕೇಳಿ ರೋಷಗೊಂಡ ಮದ್ದಾನೆಗಳಂತೆ ಆ ಇಬ್ಬರು ನರವ್ಯಾಘ್ರರೂ ಕ್ರುದ್ಧರಾಗಿ ವೇಗವಾಗಿ ಕುರುಸೇನೆಯನ್ನು ಪ್ರವೇಶಿಸಿದರು. ಫಲ್ಗುನನು ಆ

ರಥಸೇನೆಯನ್ನೂ ಅಶ್ವಸೇನೆಗಳನ್ನು ಭೇದಿಸಿ ಒಳನುಗ್ಗಿ ಪಾಶಹಸ್ತ ಅಂತಕನಂತೆ ಸೇನಾಮಧ್ಯದಲ್ಲಿ ಸಂಚರಿಸುತ್ತಿದ್ದನು. ಕೌರವ ಸೇನೆಗಳ ಮಧ್ಯದಲ್ಲಿ ಅವನ ಯುದ್ಧವಿಕ್ರಮವನ್ನು ಕಂಡು ದುರ್ಯೋಧನನು ಸಂಶಪ್ತಕಗಣಗಳನ್ನು ಪುನಃ ಪ್ರಚೋದಿಸಿದನು.

ಆಗ ಮಹಾಹವದಲ್ಲಿ ಆ ಮಹಾರಥ ಸಂಶಪ್ತಕರು ಸಾವಿರ ರಥಗಳು, ಮೂರು ನೂರು ಆನೆಗಳು, ಹದಿನಾಲ್ಕು ಸಾವಿರ ಕುದುರೆಗಳು ಮತ್ತು ಎರಡು ಲಕ್ಷ ಶೂರ ಧನ್ವಿ ಯುದ್ಧನಿಪುಣ ಪದಾತಿಗಳೊಂದಿಗೆ ಗರ್ಜಿಸುತ್ತಾ ಆ ಇಬ್ಬರು ವೀರರನ್ನು ಮುತ್ತಿಗೆ ಹಾಕಿ ಆಕ್ರಮಣಿಸಿದರು. ಹಾಗೆ ಸಮರದಲ್ಲಿ ಶರಗಳಿಂದ ಆಚ್ಛಾದಿತನಾದ ಪಾರ್ಥನು ಪಾಶಹಸ್ತ ಅಂತಕನಂತೆ ರೌದ್ರರೂಪವನ್ನು ತಾಳಿ ಸಂಶಪ್ತಕರನ್ನು ಸಂಹರಿಸುತ್ತಾ ಪ್ರೇಕ್ಷಣೀಯನಾದನು. ಆಗ ಕಿರೀಟಿಯಿಂದ ನಿರಂತರವಾಗಿ ಪ್ರಯೋಗಿಸಲ್ಪಟ್ಟ ಸುವರ್ಣವಿಭೂಷಿತ ವಿದ್ಯುತ್ ಪ್ರಭೆಯ ಬಾಣಗಳಿಂದ ಸ್ವಲ್ಪವೂ ಸ್ಥಳವಿಲ್ಲದಂತೆ ಆಕಾಶವು ತುಂಬಿಹೋಯಿತು. ಕಿರೀಟಿಯ ಭುಜಗಳಿಂದ ಹೊರಟ ಆ ಮಹಾಶರಗಳಿಂದ ತುಂಬಿಹೋಗಿದ್ದ ಆ ಪ್ರದೇಶವು ಸರ್ಪಗಳಿಂದ ತುಂಬಿರುವೋ ಎನ್ನುವಂತೆ ಕಾಣುತ್ತಿತ್ತು. ಅಮೇಯಾತ್ಮ ಪಾಂಡವನು ರುಕ್ಮಪುಂಖಗಳ ಸನ್ನತಪರ್ವ ಶರಗಳನ್ನು ಎಲ್ಲದಿಕ್ಕುಗಳಲ್ಲಿಯೂ ಸುರಿಸಿದನು. ಹತ್ತು

ಸಾವಿರ ಸಂಶಪ್ತಕ ಪಾರ್ಥಿವರನ್ನು ಸಂಹರಿಸಿ ಮಹಾರಥ ಕೌಂತೇಯನು ತ್ವರೆಮಾಡಿ ಶತ್ರುಸೇನೆಯ ಕಡೆ ಧಾವಿಸಿದನು.

ಶತ್ರುಪಕ್ಷವನ್ನು ಹೊಕ್ಕು ಪಾರ್ಥನು ವಾಸವನು ದಾನವ ಸೇನೆಯನ್ನು ಹೇಗೋ ಹಾಗೆ ಬಾಣಗಳಿಂದ ಕಾಂಬೋಜರಕ್ಷಿತ ಸೇನೆಯನ್ನು ಮಥಿಸಿದನು. ಆ ದ್ವೇಷೀ ಆತತಾಯಿನರ ಶಸ್ತ್ರಗಳನ್ನೂ, ಕೈಗಳನ್ನೂ, ಬಾಹುಗಳನ್ನೂ ಮತ್ತು ಶಿರಗಳನ್ನೂ ಅರ್ಜುನನು ಭಲ್ಲಗಳಿಂದ ತುಂಡರಿಸಿದನು. ಭಿರುಗಾಳಿಗೆ ಸಿಲುಕಿ ಉರುಳಿದ ಬಹುಶಾಖೆಗಳುಳ್ಳ ವೃಕ್ಷಗಳಂತೆ ಶತ್ರು ಯೋಧರು ಅಂಗಾಗಗಳು ತುಂಡಾಗಿ ನಿರಾಯುಧರಾಗಿ ಭೂಮಿಯ ಮೇಲೆ ಬಿದ್ದರು. ಆನೆ-ಕುದುರೆ-ರಥ-ಪದಾತಿಗಳನ್ನು ಭಿರುಗಾಳಿಯಂತೆ ಸಂಹರಿಸುತ್ತಿದ್ದ ಅರ್ಜುನನನ್ನು ಕಾಂಬೋಜರಾಜ ಸುದಕ್ಷಿಣನ ತಮ್ಮನು ಶರವೃಷ್ಟಿಯಿಂದ ಅಭಿಷೇಚಿಸಿದನು. ಅರ್ಜುನನು ಅವನ ಪರಿಘೋಪಮ ಬಾಹುಗಳನ್ನು ಎರಡು ಅರ್ಧಚಂದ್ರಗಳಿಂದ ತುಂಡರಿಸಿ ಕ್ಷುರದಿಂದ ಪೂರ್ಣಚಂದ್ರನಂತಿರುವ ಮುಖವುಳ್ಳ ಅವನ ಶಿರವನ್ನು ಅಪಹರಿಸಿದನು. ಆಗ ವಜ್ರಾಯುಧಪ್ರಹಾರದಿಂದ ಒಡೆದು ಕೆಳಗೆ ಬಿದ್ದ ಗಿರಿಯ ಶಿಖರದಂತೆ ಅವನು ತನ್ನದೇ ರಕ್ತದಲ್ಲಿ ತೋಯ್ದು ರಥದಿಂದ ಕೆಳಕ್ಕೆ ಬಿದ್ದನು. ಕಮಲಪತ್ರಾಕ್ಷ ಪ್ರಿಯದರ್ಶನ ಕಾಂಚನ ಸ್ಥಂಭದಂತೆ

ಉನ್ನತನಾಗಿದ್ದ ಕಾಂಬೋಜ ಸುದಕ್ಷಿಣನ ಕಡೆಯ ತಮ್ಮನು ಹತನಾದುದನ್ನು ಎಲ್ಲರೂ ನೋಡಿದರು.

ಆಗ ಪುನಃ ನೋಡಲು ಅದ್ಭುತವಾಗಿದ್ದ ಘೋರ ಯುದ್ಧವು ಪ್ರಾರಂಭವಾಯಿತು. ಅಲ್ಲಿ ಯುದ್ಧಮಾಡುತ್ತಿದ್ದ ಯೋಧರು ನಾನಾವಸ್ಥೆಗಳಿಗೀಡಾದರು. ಒಂದೊಂದೇ ಬಾಣದಿಂದ ಹತರಾಗಿ ರಕ್ತಸಿಕ್ತ ಕಾಂಬೋಜ, ಯವನ ಮತ್ತು ಶಕರಿಂದ ಹಾಗೂ ಕುದುರೆಗಳಿಂದ ಸರ್ವವೂ ರಕ್ತಮಯವಾಯಿತು. ಕುದುರೆ-ಸಾರಥಿಗಳು ಹತರಾದ ರಥಗಳಿಂದಲೂ, ಸವಾರರು ಹತರಾದ ಕುದುರೆಗಳಿಂದಲೂ, ಮಾವುತರು ಹತರಾದ ಆನೆಗಳಿಂದಲೂ ಅನ್ಯೋನ್ಯರಿಂದ ಹತಗೊಂಡ ಮಹಾಕಾಯದ ಆನೆಗಳಿಂದಲೂ ಘೋರ ಜನಕ್ಷಯವು ನಡೆಯಿತು.

## ಅರ್ಜುನ-ಅಶ್ವತ್ಥಾಮರ ಯುದ್ಧ

ಸೇನೆಯ ಪಕ್ಷ-ಪ್ರಪಕ್ಷಗಳೆರಡನ್ನೂ ವಧಿಸುತ್ತಿದ್ದ ಅರ್ಜುನನನ್ನು ದ್ರೌಣಿಯು ತ್ವರೆಮಾಡಿ ಆಕ್ರಮಣಿಸಿದನು. ಸುವರ್ಣ ವಿಭೂಷಿತ ಮಹಾಧನುಸ್ಸನ್ನು ಟೇಂಕರಿಸುತ್ತಾ ಅವನು ಭಾಸ್ಕರನು ತನ್ನ ಕಿರಣಗಳನ್ನು ಹೇಗೋ ಹಾಗೆ ಘೋರ ಶರಗಳನ್ನು ಪುಂಖಾನುಪುಂಖವಾಗಿ ಪ್ರಯೋಗಿಸಿದನು. ದ್ರೌಣಿಯಿಂದ ಬಿಡಲ್ಪಟ್ಟ

ಆ ಶರಗಳು ರಥದಲ್ಲಿದ್ದ ಕೃಷ್ಣ-ಧನಂಜಯರಿಬ್ಬರನ್ನೂ ಎಲ್ಲಕಡೆಗಳಿಂದ ಮುಚ್ಚಿಬಿಟ್ಟವು. ಆಗ ಪ್ರತಾಪವಾನ್ ಭಾರದ್ವಾಜನು ಯುದ್ಧದಲ್ಲಿ ನೂರು ತೀಕ್ಷ್ಣ ಶರಗಳಿಂದ ಮಾಧವ-ಪಾಂಡವರಿಬ್ಬರನ್ನೂ ನಿಶ್ಚೇಷ್ಟರನ್ನಾಗಿ ಮಾಡಿದನು. ಚರಾಚರಗಳೆಲ್ಲವನ್ನೂ ರಕ್ಷಿಸುವ ಅವರಿಬ್ಬರೂ ಶರಗಳಿಂದ ಮುಚ್ಚಿಹೋದುದನ್ನು ನೋಡಿ ಸ್ಥಾವರ-ಜಂಗಮಗಳಲ್ಲಿ ಹಾಹಾಕಾರವುಂಟಾಯಿತು. "ಇಂದು ಲೋಕಗಳು ಉಳಿಯುವವೇ?" ಎಂದು ಚಿಂತಿಸುತ್ತಾ ಸಿದ್ಧ-ಚಾರಣ ಸಂಘಗಳು ಎಲ್ಲಕಡೆಗಳಿಂದ ಬಂದು ಅಲ್ಲಿ ಸೇರಿದವು. ಯುದ್ಧದಲ್ಲಿ ಕೃಷ್ಣಾರ್ಜುನರನ್ನು ಆ ರೀತಿ ಆಚ್ಛಾದಿಸಿದ ದ್ರೌಣಿಯ ಪರಾಕ್ರಮವನ್ನು ಇದರ ಹಿಂದೆ ಎಂದೂ ಯಾರೂ ನೋಡಿರಲಿಲ್ಲ. ಸಿಂಹದ ಗರ್ಜನೆಯಂತೆ ರಣದಲ್ಲಿ ಶತ್ರುಗಳನ್ನು ಭಯಗೊಳಿಸುತ್ತಿದ್ದ ದ್ರೌಣಿಯ ಧನುಸ್ಸಿನ ಟೇಂಕಾರ ಶಬ್ಧವನ್ನು ಬಹುಷಃ ಯಾರೂ ಕೇಳಿರಲಿಲ್ಲ. ಮೋಡಗಳ ಮಧ್ಯೆ ಪ್ರಕಾಶಿಸುವ ಮಿಂಚಿನಂತೆ ಯುದ್ಧದಲ್ಲಿ ಎಡ-ಬಲಗಳಲ್ಲಿ ಬಾಣಗಳನ್ನು ಹೊರಹಾಕುತ್ತಿದ್ದ ಅವನ ಶಿಂಜನಿಯು ಪ್ರಕಾಶಿಸುತ್ತಿತ್ತು.

ಅಗ ದ್ರೋಣಜನನ್ನು ನೋಡಿ ಅರ್ಜುನನೂ ಕೂಡ ಪರಮ ವಿಮೂಢನಾದನು. ಅಶ್ವತ್ಥಾಮನಿಂದ ತನ್ನ ವಿಕ್ರಮವು

ಕುಂದುಗೊಂಡಿತೆಂದೇ ಅವನು ತಿಳಿದುಕೊಂಡನು. ಆಗ ಅಶ್ವತ್ಥಾಮನ ಭಯಂಕರ ಮುಖವನ್ನು ನೋಡಲೂ ಸಾಧ್ಯವಾಗುತ್ತಿರಲಿಲ್ಲ. ಮಹಾರಣದಲ್ಲಿ ದ್ರೌಣಿ ಮತ್ತು ಪಾಂಡವ ಇಬ್ಬರೂ ಈ ರೀತಿ ವರ್ತಿಸುತ್ತಿರುವುದನ್ನು, ದ್ರೋಣಪುತ್ರನು ವರ್ಧಿಸುತ್ತಿರುವುದನ್ನೂ ಮತ್ತು ಕೌಂತೇಯನು ಕ್ಷೀಣನಾಗುತ್ತಿರುವುದನ್ನು ನೋಡಿ ಕೃಷ್ಣನಿಗೆ ಮಹಾರೋಷವುಂಟಾಯಿತು. ರೋಷದಿಂದ ಭುಸುಗುಟ್ಟುತ್ತಾ, ಕಣ್ಣಿನಿಂದಲೇ ಸುಟ್ಟುಬಿಡುವನೋ ಎನ್ನುವಂತೆ ಅವನು ಸಂಗ್ರಾಮದಲ್ಲಿ ದ್ರೌಣಿಯನ್ನು ಮತ್ತು ಫಲ್ಗುನನನ್ನು ಪದೇ ಪದೇ ನೋಡುತ್ತಿದ್ದನು. ಆಗ ಕ್ರುದ್ಧನಾಗಿದ್ದರೂ ಕೃಷ್ಣನು ಪ್ರೀತಿಯಿಂದ ಪಾರ್ಥನಿಗೆ ಹೇಳಿದನು:

> “ಪಾರ್ಥ ! ಈ ಯುದ್ಧದಲ್ಲಿ ನಿನ್ನ ಅತಿ ಅದ್ಭುತವರ್ತನೆಯನ್ನು ನೋಡುತ್ತಿದ್ದೇನೆ! ಇಂದು ದ್ರೋಣಪುತ್ರನು ನಿನ್ನನ್ನು ಮೀರಿ ಯುದ್ಧಮಾಡುತ್ತಿದ್ದಾನೆ! ಗಾಂಡೀವವನ್ನು ಕೈಯಲ್ಲಿ ಹಿಡಿದೇ ರಥದಲ್ಲಿ ನಿಂತಿರುವೆಯಲ್ಲವೇ? ನಿನ್ನ ಬಾಹುಗಳು ಕುಶಲವಾಗಿವೆ ತಾನೇ? ನಿನ್ನ ಶರೀರದಲ್ಲಿ ವೀರ್ಯವಿದೆ ತಾನೇ?”

ಕೃಷ್ಣನು ಹೀಗೆ ಹೇಳಿದೊಡನೆಯೇ ಅರ್ಜುನನು ಹದಿನಾಲ್ಕು ಭಲ್ಲಗಳನ್ನು ಕೈಗೆತ್ತಿಕೊಂಡು ತ್ವರೆಮಾಡಿ ದ್ರೌಣಿಯ ರಥ, ಧ್ವಜ, ಚತ್ರ,

ಪತಾಕ, ಶಕ್ತಿ ಮತ್ತು ಗದೆಗಳನ್ನು ಕತ್ತರಿಸಿದನು. ಅವನ ಜತ್ರುದೇಶ – ಕುತ್ತಿಗೆಯ ಎಲುಬುಪ್ರದೇಶ – ವನ್ನು ವತ್ಸದಂತಗಳಿಂದ ಜೋರಾಗಿ ಹೊಡೆಯಲು ಅಶ್ವತ್ಥಾಮನು ಪರಮ ಮೂರ್ಛಿತನಾಗಿ ಧ್ವಜಸ್ತಂಭವನ್ನು ಹಿಡಿದು ಕುಳಿತುಬಿಟ್ಟನು. ಕಿರೀಟಿಯ ಭಯದಿಂದ ಪೀಡಿತನಾಗಿ ಮೂರ್ಛಿತನಾದ ಅವನನ್ನು ರಕ್ಷಿಸಲೋಸುಗ ಅವನ ಸಾರಥಿಯು ಧನಂಜಯನಿರುವ ರಣಭೂಮಿಯಿಂದ ಕರೆದುಕೊಂಡು ಹೋದನು.

ಇದೇ ಸಮಯದಲ್ಲಿ ಅರ್ಜುನನು ದುರ್ಯೋಧನನು ನೋಡುತ್ತಿದ್ದಂತೆಯೇ ಕೌರವ ಸೇನೆಯನ್ನು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ವಧಿಸಿದನು. ಅರ್ಜುನನು ಸಂಶಪ್ತಕರನ್ನೂ, ವೃಕೋದರನು ಕುರುಗಳನ್ನೂ, ಪಾಂಚಾಲ್ಯನು ವಸುಷೇಣನನ್ನೂ ರಣದಲ್ಲಿ ಸಂಹರಿಸತೊಡಗಿದರು.

ತ್ವರೆಮಾಡಿ ಹೋಗುತ್ತಿದ್ದ ಕೃಷ್ಣನು ಪುನಃ ಅರ್ಜುನನಿಗೆ ಮೆಲ್ಲನೆ ಹೇಳಿದನು:

> “ಕೌರವ್ಯ! ಪಲಾಯನ ಮಾಡುತ್ತಿರುವ ಪಾಂಡವ ರಾಜರನ್ನು ನೋಡು!ಮಹಾರಂಗದಲ್ಲಿ ಜ್ವಲಿಸುತ್ತಿರುವ ಪಾವಕನಂತಿರುವ ಕರ್ಣನನ್ನು ನೋಡು! ಇಗೋ ಮಹೇಷ್ವಾಸ ಭೀಮನು ರಣರಂಗಕ್ಕೆ ಹಿಂದಿರುಗಿ ಬರುತ್ತಿದ್ದಾನೆ. ಅವನನ್ನೇ ಅನುಸರಿಸಿ

ಧೃಷ್ಟದ್ಯುಮ್ನಪುರೋಗಮರಾದ ಪಾಂಚಾಲರು, ಸೃಂಜಯರು ಮತ್ತು ಪಾಂಡವರು ಹಿಂದಿರುಗುತ್ತಿದ್ದಾರೆ. ಹಾಗೆ ಹಿಂದಿರುಗುವಾಗಲೇ ಪಾರ್ಥ ಬೀಮನು ಶತ್ರುಬಲವನ್ನು ಮಹಾಸಂಖ್ಯೆಗಳಲ್ಲಿ ಧ್ವಂಸಗೊಳಿಸುತ್ತಿದ್ದಾನೆ. ಓಡಿಹೋಗುತ್ತಿರುವ ಕೌರವರನ್ನು ಕರ್ಣನು ಇಲ್ಲಿ ತಡೆಯುತ್ತಿದ್ದಾನೆ! ಇಗೋ ಇಲ್ಲಿ ದ್ರೌಣಿಯು ಹೋಗುತ್ತಿದ್ದಾನೆ ಮತ್ತು ರಣದಲ್ಲಿ ಅವನನ್ನೇ ಅನುಸರಿಸಿ ಧೃಷ್ಟದ್ಯುಮ್ನನು ಹೋಗುತ್ತಿದ್ದಾನೆ!”

ಹೀಗೆ ವಾಸುದೇವನು ಕಿರೀಟಿಗೆ ಎಲ್ಲವನ್ನು ತೋರಿಸಿ ಹೇಳಿದನು. ಆಗ ಮಹಾಘೋರ ಮಹಾರಣವು ನಡೆಯಿತು.

## ಕರ್ಣ-ಧೃಷ್ಟದ್ಯುಮ್ನರ ಯುದ್ಧ

ಅನಂತರ ಪುನಃ ಕುರು-ಸೃಂಜಯರು ಯುದ್ಧದಲ್ಲಿ ತೊಡಗಿದರು. ಪಾರ್ಥರು ಯುಧಿಷ್ಠಿರನನ್ನು ಮುಂದೆಮಾಡಿಕೊಂಡು ಮತ್ತು ಕೌರವರು ಕರ್ಣನನ್ನು ಮುಂದೆಮಾಡಿಕೊಂಡು ಯುದ್ಧಮಾಡುತ್ತಿದ್ದರು. ಆಗ ಕರ್ಣ ಮತ್ತು ಪಾಂಡವರ ನಡುವೆ ಯಮರಾಷ್ಟ್ರವನ್ನು ವಿವರ್ಧಿಸುವಂತಹ ಭಯಂಕರ ಲೋಮಹರ್ಷಣ ಸಂಗ್ರಾಮವು ಪ್ರಾರಂಭವಾಯಿತು. ಆ

ತುಮುಲ ಸಂಗ್ರಾಮದಲ್ಲಿ ರಕ್ತವು ನೀರಿನಂತೆ ಹರಿಯುತ್ತಿತ್ತು. ಶೂರ ಸಂಶಪ್ತಕರು ಸ್ವಲ್ಪಮಾತ್ರವೇ ಉಳಿದುಕೊಂಡಿದ್ದರು. ಆಗ ಪಾಂಡವರು ಮತ್ತು ಧೃಷ್ಟದ್ಯುಮ್ನನು ಸರ್ವರಾಜರೊಂದಿಗೆ ಕರ್ಣನನ್ನೇ ಆಕ್ರಮಣಿಸಿದರು. ಯುದ್ಧದಲ್ಲಿ ಪ್ರಹೃಷ್ಟರಾಗಿ ಬರುತ್ತಿರುವ ಆ ವಿಜಯಾಕಾಂಕ್ಷಿಗಳನ್ನು ರಣದಲ್ಲಿ ಕರ್ಣನೊಬ್ಬನೇ ಮೋಡಗಳನ್ನು ಪರ್ವತವು ಹೇಗೋ ಹಾಗೆ ಸಹಿಸಿಕೊಂಡನು. ಕರ್ಣನನ್ನು ಎದುರಿಸಿ ಆ ಮಹಾರಥರು ಮೋಡಗಳು ಪರ್ವತವನ್ನು ಸಮೀಪಿಸಿ ಮಳೆಸುರಿಸುವಂತೆ ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು. ಆವರ ಮಧ್ಯೆ ಅಲ್ಲಿ ಲೋಮಹರ್ಷಣ ಸಂಗ್ರಾಮವು ನಡೆಯಿತು. ಧೃಷ್ಟದ್ಯುಮ್ನನಾದರೋ ರಾಧೇಯನನ್ನು ನತಪರ್ವಣ ಶರಗಳಿಂದ ಹೊಡೆಯುತ್ತಾ ಸಂಕ್ರುದ್ಧನಾಗಿ ನಿಲ್ಲು ನಿಲ್ಲೆಂದು ಹೇಳಿದನು. ಕರ್ಣನಾದರು ವಿಜಯ ಧನುಸ್ಸನ್ನು ಟೇಂಕರಿಸುತ್ತಾ ಪಾರ್ಷತನ ಧನುಸ್ಸನ್ನು ಸರ್ಪವಿಷಗಳಂತಿದ್ದ ಬಾಣಗಳಿಂದ ತುಂಡರಿಸಿ, ಸಂಕ್ರುದ್ಧನಾಗಿ ಪಾರ್ಷತನನ್ನು ಒಂಭತ್ತು ಶರಗಳಿಂದ ಹೊಡೆದನು. ಅವುಗಳು ಆ ಮಹಾತ್ಮನ ಹೇಮಮಯ ಕವಚವನ್ನು ಭೇದಿಸಿ ರಕ್ತದಿಂದ ತೋಯ್ದು ಇಂದ್ರಗೋಪಗಳಂತೆ ಹೊಳೆಯುತ್ತಿದ್ದವು. ತುಂಡಾದ ಧನುಸ್ಸನ್ನೆಸೆದು ಧೃಷ್ಟದ್ಯುಮ್ನನು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಸರ್ಪವಿಷದಂತಿದ್ದ ಶರಗಳಿಂದ ಮತ್ತು ಎಪ್ಪತ್ತು

ಸನ್ನತಪರ್ವ ಶರಗಳಿಂದ ಕರ್ಣನನ್ನು ಹೊಡೆದನು. ಕರ್ಣನೂ ಕೂಡ ಪಾರ್ಷತನನ್ನು ನಿಶಿತ ಶರಗಳಿಂದ ಹೊಡೆದನು. ಅವನ ಮೇಲೆ ಕರ್ಣನು ಸಂಕ್ರುದ್ಧನಾಗಿ ಮೃತ್ಯುದಂಡದಂತಿರುವ ಇನ್ನೊಂದು ಕನಕಭೂಷಣ ಶರವನ್ನು ಪ್ರಯೋಗಿಸಿದನು.

## ಕರ್ಣ-ಸಾತ್ಯಕಿಯರ ಯುದ್ಧ

ಅತಿವೇಗದಲ್ಲಿ ಅವನ ಮೇಲೆ ಬೀಳುತ್ತಿದ್ದ ಆ ಘೋರರೂಪದ ಶರವನ್ನು ಶೈನೇಯನು ಕೈಚಳಕದಿಂದ ಏಳು ಭಾಗಗಳನ್ನಾಗಿ ತುಂಡರಿಸಿದನು ತನ್ನ ಬಾಣವನ್ನು ಶರಗಳಿಂದ ನಿರಸನಗೊಳಿಸಿದುದನ್ನು ನೋಡಿ ಕರ್ಣನು ಸಾತ್ಯಕಿಯನ್ನು ಶರವರ್ಷಗಳಿಂದ ಎಲ್ಲಕಡೆಗಳಿಂದಲೂ ತಡೆದನು. ಬಳಿಕ ಸಮರದಲ್ಲಿ ಏಳು ನಾರಾಚಗಳಿಂದ ಅವನನ್ನು ಹೊಡೆಯಲು ಅದಕ್ಕೆ ಪ್ರತಿಯಾಗಿ ಶೈನೇಯನು ಹೇಮಭೂಷಿತ ಶರಗಳಿಂದ ಕರ್ಣನನ್ನು ಪ್ರಹರಿಸಿದನು. ಆಗ ಕಣ್ಣುಗಳಿಂದ ನೋಡಲೂ ಕಿವಿಗಳಿಂದ ಕೇಳಲೂ ಭಯಂಕರವಾದ ಯುದ್ಧವು ಪ್ರಾರಂಭವಾಯಿತು. ಅದು ಘೋರವೂ ವಿಚಿತ್ರವೂ ಎಲ್ಲರೀತಿಗಳಲ್ಲಿ ಪ್ರೇಕ್ಷಣೀಯವೂ ಆಗಿತ್ತು. ಸಮರದಲ್ಲಿ ಕರ್ಣ-ಶೈನೇಯರ ಆ ಕರ್ಮಗಳನ್ನು ನೋಡಿ ಅಲ್ಲಿದ್ದ ಸರ್ವ ಭೂತಗಳಲ್ಲಿಯೂ ಲೋಮಹರ್ಷವುಂಟಾಯಿತು.

## ಅಶ್ವತ್ಥಾಮ-ಧೃಷ್ಟದ್ಯುಮ್ನರ ಯುದ್ಧ

ಇದರ ಮಧ್ಯದಲ್ಲಿ ದ್ರೌಣಿಯು ಪಾರ್ಷತನನ್ನು ಆಕ್ರಮಣಿಸಿದನು. ಸಂಕ್ರುದ್ಧನಾದ ದ್ರೌಣಿಯು ಧೃಷ್ಟದ್ಯುಮ್ನನನ್ನು ದೂರದಿಂದಲೇ ಸಂಬೋಧಿಸಿ

> “ಬ್ರಹ್ಮಘ್ನ! ನಿಲ್ಲು! ನಿಲ್ಲು! ಇಂದು ನೀನು ನನ್ನಿಂದ ಜೀವಸಹಿತವಾಗಿ ಹೋಗುವುದಿಲ್ಲ!”

ಎಂದನು. ಹೀಗೆ ಹೇಳಿ ಅಶ್ವತ್ಥಾಮನು ಪಾರ್ಷತನನ್ನು ಘೋರರೂಪದ ತೇಜಸ್ಸುಳ್ಳ ನಿಶಿತ ಶರಗಳಿಂದ ಪರಮ ಶಕ್ತಿಯನ್ನುಪಯೋಗಿಸಿ ಪ್ರಯತ್ನಪಟ್ಟು ಪ್ರಹರಿಸಿದನು. ಸಮರದಲ್ಲಿ ಹೇಗೆ ದ್ರೌಣಿಯು ಪಾರ್ಷತನನ್ನು ನೋಡಿ ಅವನೇ ತನ್ನ ಮೃತ್ಯುವೆಂದು ತಿಳಿದು ಖಿನ್ನಮನಸ್ಕನಾದನೋ ಹಾಗೆ ರಣದಲ್ಲಿ ದ್ರೌಣಿಯನ್ನು ನೋಡಿದ ಪರವೀರಹ ಪಾರ್ಶತನೂ ಖಿನ್ನಮನಸ್ಕನಾದನು. ರಣದಲ್ಲಿ ನಿಂತಿದ್ದ ಧೃಷ್ಟದ್ಯುಮ್ನನನ್ನು ನೋಡಿ ವೀರ ದ್ರೌಣಿಯು ಕ್ರೋಧದಿಂದ ಭುಸುಗುಟ್ಟುತ್ತಾ ಪಾರ್ಷತನನ್ನು ಆಕ್ರಮಣಿಸಿದನು. ಅನ್ಯೋನ್ಯರನ್ನು ಕಂಡೊಡನೆಯೇ ಅವರಿಬ್ಬರೂ ಪರಮ ಕ್ರುದ್ಧರಾದರು. ಆಗ ಪ್ರತಾಪವಾನ್ ದ್ರೋಣಪುತ್ರನು ತ್ವರೆಮಾಡಿ ಸಮೀಪದಲ್ಲಿದ್ದ ಧೃಷ್ಟದ್ಯುಮ್ನನನಿಗೆ ಹೇಳಿದನು:

> “ಪಾಂಚಾಲಕುಲಕಳಂಕನೇ! ಇಂದು ನಾನು ನಿನ್ನನ್ನು

ಮೃತ್ಯುವಿಗೆ ಒಪ್ಪಿಸುತ್ತೇನೆ! ಹಿಂದೆ ನೀನು ಎಸಗಿದ ದ್ರೋಣವಧೆಯು ಪಾಪ ಕರ್ಮವಾಗಿತ್ತು. ಅದೇ ಇಂದು ನಿನ್ನನ್ನು, ಎಷ್ಟು ಪಾಪಿಷ್ಟವಾಗಿತ್ತೋ ಅಷ್ಟು ಸಂತಾಪಗೊಳಿಸುತ್ತದೆ! ಮೂಢ! ಯುದ್ಧದಲ್ಲಿ ಪಾರ್ಥನು ನಿನ್ನನ್ನು ರಕ್ಷಿಸಲು ನಿಲ್ಲದಿದ್ದರೆ ಅಥವಾ ನೀನು ಪಲಾಯನ ಮಾಡದಿದ್ದರೆ ನಿನ್ನನ್ನು ಸಂಹರಿಸುತ್ತೇನೆ. ಸತ್ಯವನ್ನೇ ಹೇಳುತ್ತಿದ್ದೇನೆ!"

ಇದನ್ನು ಕೇಳಿ ಪ್ರತಾಪವಾನ್ ಧೃಷ್ಟದ್ಯುಮ್ನನು ಉತ್ತರಿಸಿದನು:

"ನಿನಗೆ ಸರಿಯಾದ ಉತ್ತರವನ್ನು ನನ್ನ ಈ ಖಡ್ಗವೇ ಕೊಡಲಿದೆ! ಯುದ್ಧದಲ್ಲಿ ಪ್ರಯತ್ನಪಡುತ್ತಿದ್ದ ನಿನ್ನ ತಂದೆಗೂ ಇದೇ ಉತ್ತರವನ್ನು ಕೊಟ್ಟಿತ್ತು! ಕೇವಲ ಬ್ರಾಹ್ಮಣನೆಂದು ಕರೆಯಿಸಿಕೊಳ್ಳುತ್ತಿದ್ದ ನಿನ್ನ ಆ ದ್ರೋಣನನ್ನು ನಾನು ಸಂಹರಿಸಿರುವಾಗ ಈ ಯುದ್ಧದಲ್ಲಿ ನಿನ್ನನ್ನು ನಾನು ವಿಕ್ರಮದಿಂದ ಏಕೆ ಕೊಲ್ಲಬಾರದು?"

ಹೀಗೆ ಹೇಳಿ ಸೇನಾಪತಿ ಪಾರ್ಷತನು ನಿಶಿತ ಬಾಣಗಳಿಂದ ದ್ರೌಣಿಯನ್ನು ಪ್ರಹರಿಸಿದನು. ಆಗ ಸಂಕ್ರುದ್ಧನಾದ ದ್ರೌಣಿಯು ಸನ್ನತಪರ್ವ ಶರಗಳಿಂದ ರಣದಲ್ಲಿ ಎಲ್ಲಕಡೆಗಳಿಂದ

ಧೃಷ್ಟದ್ಯುಮ್ನನನ್ನು ಮುಚ್ಚಿಬಿಟ್ಟನು. ಸಹಸ್ರಾರು ಶರಗಳಿಂದ ಮುಚ್ಚಿಹೋಗಿದ್ದುದರಿಂದ ಯೋಧರಿಗೆ ಸುತ್ತಲೂ ಅಂತರಿಕ್ಷವಾಗಲೀ ದಿಕ್ಕುಗಳಾಗಲೀ ಕಾಣದಂತಾಯಿತು. ಹಾಗೆ ಪಾರ್ಷತನೂ ಕೂಡ ಸೂತಪುತ್ರನು ನೋಡುತ್ತಿದ್ದಂತೆಯೇ ಯುದ್ಧಶೋಭೀ ದ್ರೌಣಿಯನ್ನು ಶರಗಳಿಂದ ಮುಚ್ಚಿಬಿಟ್ಟನು. ಎಲ್ಲಕಡೆಗಳಿಂದಲೂ ಪ್ರೇಕ್ಷಣೀಯನಾಗಿದ್ದ ರಾಧೇಯನಾದರೋ ಒಬ್ಬನೇ ಪಾಂಡವರೊಂದಿಗೆ ಪಾಂಚಾಲರನ್ನೂ, ದ್ರೌಪದೇಯರನ್ನೂ, ಸಾತ್ಯಕಿಯನ್ನೂ ತಡೆಯುತ್ತಿದ್ದನು. ಧೃಷ್ಟದ್ಯುಮ್ನನಾದರೋ ಸಮರದಲ್ಲಿ ದ್ರೌಣಿಯ ಬಿಲ್ಲನ್ನು ತುಂಡರಿಸಿದನು. ಆಗ ಸಮರದಲ್ಲಿ ವೇಗವಂತ ಅಶ್ವತ್ಥಾಮನು ತುಂಡಾದ ಬಿಲ್ಲನ್ನು ಎಸೆದು ಇನ್ನೊಂದು ಬಿಲ್ಲನ್ನು ತೆಗೆದುಕೊಂಡು ಸರ್ಪವಿಷಗಳಂತಿದ್ದ ಘೋರ ಬಾಣಗಳನ್ನು ಹೂಡಿದನು. ಅವನು ನಿಮಿಷಮಾತ್ರದಲ್ಲಿ ಆ ಶರಗಳಿಂದ ಪಾರ್ಷತನ ಧನುಸ್ಸು-ಶಕ್ತಿ-ಗದೆ-ಧ್ವಜ-ಕುದುರೆಗಳು-ಸಾರಥಿ ಮತ್ತು ರಥವನ್ನೂ ನಾಶಗೊಳಿಸಿದನು. ಧನುಸ್ಸು ತುಂಡಾಗಿದ್ದ ವಿರಥನೂ, ಹತಾಶ್ವನೂ, ಹತಸಾರಥಿಯೂ ಆಗಿದ್ದ ಧೃಷ್ಟದ್ಯುಮ್ನನು ಶತಚಂದ್ರಗಳಂತೆ ಹೊಳೆಯುತ್ತಿದ್ದ ವಿಪುಲ ಖಡ್ಗವನ್ನು ತೆಗೆದುಕೊಂಡನು. ಅವನು ರಥದಿಂದ ಕೆಳಗಿಳಿಯುವುದರೊಳಗೇ ಮಹಾರಥ ದ್ರೌಣಿಯು ಬೇಗನೇ ಬಲ್ಲಗಳಿಂದ ಖಡ್ಗವನ್ನು ಕತ್ತರಿಸಿದನು. ಅದೊಂದು ಅದ್ಭುತವೇ

ಆಗಿತ್ತು! ವಿರಥನಾಗಿದ್ದ, ಅಶ್ವಗಳನ್ನು ಕಳೆದುಕೊಂಡಿದ್ದ, ಧನುಸ್ಸುತುಂಡಾಗಿದ್ದ ಧೃಷ್ಟದ್ಯುಮ್ನನನ್ನು ಅಶ್ವತ್ಥಾಮನು ಅನೇಕ ಶರಸಮೂಹಗಳಿಂದ ಗಾಯಗೊಳಿಸಿದನು. ಆದರೆ ಮಹಾರಥ ದ್ರೌಣಿಯು ಎಷ್ಟು ಪ್ರಯತ್ನಪಟ್ಟರೂ ಬಾಣಗಳಿಂದ ಧೃಷ್ಟದ್ಯುಮ್ನನನ್ನು ಸಂಹರಿಸಲು ಆಗಲಿಲ್ಲ. ಅವನನ್ನು ಬಾಣಗಳಿಂದ ಸಂಹರಿಸಲು ಆಗದಿರಲು ಧನುರ್ವೀರ ದ್ರೌಣಿಯು ಬಿಲ್ಲ-ಬಾಣಗಳನ್ನು ಬಿಸುಟು ತ್ವರೆಮಾಡಿ ಪಾರ್ಷತನ ಕಡೆ ನುಗ್ಗಿದನು. ಓಡಿ ಬರುತ್ತಿದ್ದ ಅವನ ವೇಗವು ಹರಿದಾಡುವ ಸರ್ಪಗಳನ್ನು ಭಕ್ಷಿಸಲು ಅಂತರಿಕ್ಷದಿಂದ ಕೆಳಕ್ಕೆ ಎರಗುವ ಗರುಡಪಕ್ಷಿಯ ವೇಗಕ್ಕೆ ಸಮನಾಗಿತ್ತು.

ಇದೇ ಸಮಯದಲ್ಲಿ ಮಾಧವನು ಅರ್ಜುನನಿಗೆ ಇಂತೆಂದನು:

> “ಪಾರ್ಥ ! ನೋಡು ! ದ್ರೌಣಿಯು ಪಾರ್ಷತನ ವಧೆಗೆ ವಿಪುಲ ಪ್ರಯತ್ನಪಡುತ್ತಿರುವುದನ್ನು ನೋಡು. ನಿಸ್ಸಂಶಯವಾಗಿಯೂ ಅವನನ್ನು ಕೊಂದೇಬಿಡುತ್ತಾನೆ! ಸಾವಿನ ದವಡೆಯಂತಿರುವ ದ್ರೌಣಿಯ ಕೈಯಲ್ಲಿ ಸಿಲುಕಿರುವ ಶತ್ರುತಾಪನ ಪಾರ್ಷತನನ್ನು ವಿಮೋಚಿಸು !”

ಹೀಗೆ ಹೇಳಿ ವಾಸುದೇವನು ದ್ರೌಣಿಯಿದ್ದಲ್ಲಿಗೆ ಕುದುರೆಗಳನ್ನು ಓಡಿಸಿದನು. ಚಂದ್ರಸಂಕಾಶ ಆ ಕುದುರೆಗಳು ಕೇಶವನಿಂದ

ಪ್ರಚೋದಿತಗೊಂಡು ಆಕಾಶವನ್ನೇ ಕುಡಿದುಬಿಡುವವೋ ಎನ್ನುವಂತೆ ವೇಗವಾಗಿ ದ್ರೌಣಿರಥದ ಬಳಿ ಬಂದವು. ಮಹಾವೀರ್ಯರಾದ ಕೃಷ್ಣ-ಧನಂಜಯರಿಬ್ಬರು ಬಂದಮೇಲೂ ದ್ರೌಣಿಯು ಧೃಷ್ಟದ್ಯುಮ್ನನ ವಧೆಯ ಪ್ರತತ್ನವನ್ನು ಮಾಡುತ್ತಲೇ ಇದ್ದನು. ಧೃಷ್ಟದ್ಯುಮ್ನನನ್ನು ಎಳೆದಾಡುತ್ತಿರುವುದನ್ನು ನೋಡಿ ಪಾರ್ಥನು ದ್ರೌಣಿಯ ಮೇಲೆ ಶರಗಳನ್ನು ಪ್ರಯೋಗಿಸಿದನು. ಗಾಂಡೀವದಿಂದ ಪ್ರಹರಿಸಲ್ಪಟ್ಟ ಆ ಹೇಮವಿಕೃತ ಶರಗಳು – ಹಾವುಗಳು ಬಿಲವನ್ನು ಹೊಗುವಂತೆ – ದ್ರೌಣಿಯ ಶರೀರವನ್ನು ಹೊಕ್ಕವು. ಆ ಘೋರ ಶರಗಳಿಂದ ಗಾಯಗೊಂಡ ದ್ರೋಣಪುತ್ರನು ತನ್ನ ರಥವನ್ನೇರಿದನು. ಧನಂಜಯನ ಶರಗಳಿಂದ ಪೀಡಿತನಾದ ಅವನು ಶ್ರೇಷ್ಠ ಧನುಸ್ಸನ್ನು ಹಿಡಿದು ಪಾರ್ಥನನ್ನು ಸಾಯಕಗಳಿಂದ ಹೊಡೆದನು. ಇದರ ಮಧ್ಯದಲ್ಲಿ ವೀರ ಸಹದೇವನು ಶತ್ರುತಾಪನ ಪಾರ್ಷತನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ದೂರಕರೆದುಕೊಂಡು ಹೋದನು.

ಅರ್ಜುನನೂ ಕೂಡ ದ್ರೌಣಿಯನ್ನು ಪತ್ರಿಗಳಿಂದ ಹೊಡೆದನು. ಅವನನ್ನು ಸಂಕ್ರುದ್ಧನಾದ ದ್ರೋಣಪುತ್ರನು ಬಾಹುಗಳು ಮತ್ತು ಎದೆಗೆ ಹೊಡೆದನು. ರಣದಲ್ಲಿ ಕ್ರೋಧಿತನಾದ ಪಾರ್ಥನು ಇನ್ನೊಂದು ಕಾಲದಂಡದಂತಿರುವ ಕಾಲಸಮ್ಮಿತ ನಾರಾಚವನ್ನು ದ್ರೋಣಪುತ್ರನ

ಮೇಲೆ ಪ್ರಯೋಗಿಸಿದನು. ಆ ಮಹಾದ್ಯುತಿ ಬಾಣವು ಬ್ರಾಹ್ಮಣನ ಹೆಗಲಿನ ಮೇಲೆ ಬಿದ್ದಿತು. ಸಂಯುಗದಲ್ಲಿ ಶರವೇಗದಿಂದ ವಿಹ್ವಲನಾದ ಅಶ್ವತ್ಥಾಮನು ಪೀಠಕ್ಕೆ ಒರಗಿ ಮೂರ್ಛಿತನಾದನು. ಆಗ ಪಾರ್ಥನೊಂದಿಗೆ ದ್ವೈರಥ ಯುದ್ಧವನ್ನು ಬಯಸುತ್ತಿದ್ದ ಕರ್ಣನು ಕ್ರುದ್ಧನಾಗಿ ಸಮರದಲ್ಲಿ ವಿಜಯ ಧನುಸ್ಸನ್ನು ಸೆಳೆಯುತ್ತಾ ಅರ್ಜುನನನ್ನು ಬಾರಿ ಬಾರಿಗೂ ನೋಡುತ್ತಿದ್ದನು. ಅಶ್ವತ್ಥಾಮನು ಮೂರ್ಛೆಹೋದುದನ್ನು ನೋಡಿದ ಸಾರಥಿಯು ತ್ವರೆಮಾಡಿ ಆ ಶತ್ರುಕರ್ಶನ ವೀರನನ್ನು ರಣರಂಗದಿಂದ ಕೊಂಡೊಯ್ದನು. ಪಾರ್ಷತನು ಬಿಡುಗಡೆ ಹೊಂದಿದುದನ್ನೂ ದ್ರೋಣಪುತ್ರನು ಪೀಡಿತನಾದುದನ್ನೂ ನೋಡಿ ವಿಜಯೋತ್ಸಾಹೀ ಪಾಂಚಾಲರು ಜೋರಾಗಿ ಗರ್ಜಿಸಿದರು. ಸಾವಿರಾರು ದಿವ್ಯ ವಾದ್ಯಗಳು ಮೊಳಗಿದವು. ಆ ಘೋರ ಮಹಾದ್ಭುತವನ್ನು ನೋಡಿ ಸಿಂಹನಾದಗಳಾದವು. ಹೀಗೆ ಮಾಡಿ ಪಾರ್ಥ ಧನಂಜಯನು ವಾಸುದೇವನಿಗೆ “ಕೃಷ್ಣ! ಸಂಶಪ್ತಕರಲ್ಲಿಗೆ ಕೊಂಡೊಯ್ಯಿ! ಅದೊಂದು ನನ್ನ ಪರಮ ಕಾರ್ಯವುಳಿದಿದೆ!” ಎಂದನು. ಪಾಂಡವನಾಡಿದ ಮಾತನ್ನು ಕೇಳಿ ದಾಶಾರ್ಹನು ಎತ್ತರ ಪತಾಕೆಯುಳ್ಳ ಮನೋವೇಗ ರಥವನ್ನು ನಡೆಸಿದನು.

## ಕೃಷ್ಣನು ಅರ್ಜುನನಿಗೆ ನಡೆಯುತ್ತಿರುವ ಯುದ್ಧವನ್ನು ತೋರಿಸಿ ವರ್ಣಿಸಿದುದು

ಈ ಮಧ್ಯದಲ್ಲಿ ಯುಧಿಷ್ಠಿರನನ್ನು ತೋರಿಸುತ್ತಿರುವನೋ ಎನ್ನುವಂತೆ ಕೃಷ್ಣನು ಪಾರ್ಥನಿಗೆ ಈ ಮಾತನ್ನಾಡಿದನು:

> “ಪಾಂಡವ! ಇಗೋ ನಿನ್ನ ಭ್ರಾತ ಪಾರ್ಥನನ್ನು ಸಂಹರಿಸಲು ಬಯಸಿ ಧಾರ್ತರಾಷ್ಟ್ರರು ವೇಗದಿಂದ ಬೆನ್ನಟ್ಟಿಕೊಂಡು ವೇಗದಿಂದ ಹೋಗುತ್ತಿದ್ದಾರೆ! ಹಾಗೆಯೇ ಯುಧಿಷ್ಠಿರನನ್ನು ರಕ್ಷಿಸುತ್ತಾ ಮಹಾವೇಗದ ಪಾಂಚಾಲರು ಅವನನ್ನು ಅನುಸರಿಸಿ ಹೋಗುತ್ತಿದ್ದಾರೆ! ಇಗೋ ದುರ್ಯೋಧನನು ಯುದ್ಧವಿಶಾರದ ಸಹೋದರರೆಲ್ಲರನ್ನೊಡಗೂಡಿ ರಥಾನೀಕದೊಂದಿಗೆ ಯುಧಿಷ್ಠಿರನನ್ನು ಸಂಹರಿಸಲು ಬಯಸಿ ಅವನನ್ನೇ ಹಿಂಬಾಲಿಸುತ್ತಿದ್ದಾನೆ! ಇಗೋ! ಯಾಚಕನು ಐಶ್ವರ್ಯವಂತನನ್ನು ಅರಸಿಕೊಂಡು ಹೋಗುವಂತೆ ಧಾರ್ತರಾಷ್ಟ್ರರು ಆನೆ-ಕುದುರೆ-ರಥ-ಪದಾತಿಗಳೊಂದಿಗೆ ಯುಧಿಷ್ಠಿರನನ್ನು ಹಿಡಿಯಲು ಹೋಗುತ್ತಿದ್ದಾರೆ! ಅಮೃತವನ್ನು ಅಪಹರಿಸಲು ಬಯಸಿದ್ದ ದೈತ್ಯರನ್ನು ಶಕ್ರ-ಅಗ್ನಿಯರು ಹೇಗೋ ಹಾಗೆ ಅವರನ್ನು ಸಾತ್ವತ-ಭೀಮ ಇಬ್ಬರೂ

ತಡೆಹಿಡಿದು ನಿಲ್ಲಿಸಿದರೂ ಅವರು ಯುಧಿಷ್ಠಿರನನ್ನು ಹಿಂಬಾಲಿಸಿ ಹೋಗುತ್ತಿದ್ದಾರೆ! ವರ್ಷಾಕಾಲದಲ್ಲಿ ತುಂಬಿಹರಿಯುವ ಪ್ರವಾಹಗಳು ತಡೆಯಲ್ಪಟ್ಟರೂ ಸಮುದ್ರವನ್ನು ಸೇರುವಂತೆ ಈ ಮಹಾರಥರು ಬಹಳವಾಗಿ ತಡೆಯಲ್ಪಟ್ಟರೂ ಪುನಃ ಪುನಃ ಪಾಂಡವನಿರುವಲ್ಲಿಗೇ ಹೋಗುತ್ತಿದ್ದಾರೆ. ಈ ಬಲವಂತ ಮಹೇಷ್ವಾಸರು ಸಿಂಹನಾದಗೈಯುತ್ತಿದ್ದಾರೆ. ಶಂಖಗಳನ್ನು ಊದುತ್ತಾ ಧನುಸ್ಸನ್ನು ಟೇಂಕರಿಸುತ್ತಾ ಹೋಗುತ್ತಿದ್ದಾರೆ! ನಿನಗೆ ಮಂಗಳವಾಗಲಿ! ಕುಂತೀಪುತ್ರ ಯುಧಿಷ್ಠಿರನು ಮೃತ್ಯುವಿನ ಬಾಜಿಗೆ ಸಿಲುಕಿದನೋ ಎಂದು ನನಗನ್ನಿಸುತ್ತಿದೆ. ಅಗ್ನಿಯಲ್ಲಿನ ಆಹುತಿಯಂತೆ ದುರ್ಯೋಧನನ ವಶವಾಗಿರಬಹುದು! ಧಾರ್ತರಾಷ್ಟ್ರನ ಸೇನೆಯು ಯಾವರೀತಿಯಲ್ಲಿದೆಯೆಂದರೆ ಬಾಣಗಳಿಗೆ ಸಿಲುಕಿದವನು ಶಕ್ರನೇ ಆದರೂ ಅವನಿಗೆ ಬಿಡುಗಡೆಯಿರಲಿಕ್ಕಿಲ್ಲ. ಶೂರ ದುರ್ಯೋಧನ, ದ್ರೌಣಿ, ಕೃಪ, ಮತ್ತು ಕರ್ಣರ ಬಾಣವೇಗಗಳು ಪರ್ವತಗಳನ್ನೂ ಸೀಳಬಲ್ಲವು! ದುರ್ಯೋಧನನು ಶೀಘ್ರಾತಿಶೀಘ್ರವಾಗಿ ಬಿಡುವ ಶರಸಮೂಹಗಳ ವೇಗವನ್ನು ರಣದಲ್ಲಿ ಯಾರು ತಾನೇ ಸಹಿಸಿಕೊಂಡಾರು? ಯುಧಿಷ್ಠಿರನು ಕರ್ಣನಿಂದ

ವಿಮುಖನಾಗಿದ್ದಾನೆ. ಧೃತರಾಷ್ಟ್ರ ಪುತ್ರರೊಂದಿಗೆ ರಾಧೇಯನು ರಣದಲ್ಲಿ ಪಾಂಡವಶ್ರೇಷ್ಠನನ್ನು ಪೀಡಿಸಲು ಸಮರ್ಥನಿದ್ದಾನೆ. ಅವರೊಂದಿಗೆ ಮತ್ತು ಇತರರೊಂದಿಗೆ ಸಂಗ್ರಾಮದಲ್ಲಿ ಆ ಸಂಯತಾತ್ಮ ಪಾರ್ಥನು ಹೋರಾಡುತ್ತಿರಲು ಇಗೋ ಅವನ ಕವಚವನ್ನು ಆ ಮಹಾರಥರು ಕತ್ತರಿಸಿದರು! ಉಪವಾಸಗಳಿಂದ ಕೃಶನಾಗಿರುವ ಯುಧಿಷ್ಠಿರನಲ್ಲಿ ಕೇವಲ ಬ್ರಹ್ಮಬಲವಿದೆಯೇ ಹೊರತು ಕ್ಷತ್ರಿಯನ ಅತಿಬಲವು ಇಲ್ಲವಾಗಿದೆ. ಕೌರವರ ಸಿಂಹನಾದವನ್ನು ಅಮರ್ಷಣ ಭೀಮಸೇನನು ಸಹಿಸಿಕೊಂಡಿದ್ದಾನಾದರೆ ಯುಧಿಷ್ಠಿರನು ಇನ್ನು ಜೀವಿಸಿಲ್ಲ ಎಂದೇ ನನಗನ್ನಿಸುತ್ತದೆ. ಧಾರ್ತರಾಷ್ಟ್ರರು ಪುನಃ ಪುನಃ ಗರ್ಜಿಸುತ್ತಿದ್ದಾರೆ. ಸಂಗ್ರಾಮದಲ್ಲಿ ಜಯವನ್ನು ಬಯಸಿದ ಅವರು ಮಹಾಶಂಖಗಳನ್ನು ಮೊಳಗಿಸುತ್ತಿದ್ದಾರೆ. ಯುಧಿಷ್ಠಿರನನ್ನು ಸಂಹರಿಸಿ ಎಂದು ಕರ್ಣನು ಧಾರ್ತರಾಷ್ಟ್ರ ಮಹಾಬಲರನ್ನು ಪ್ರಚೋದಿಸುತ್ತಲೇ ಇದ್ದಾನೆ! ಸ್ಥೂಣಕರ್ಣ, ಇಂದ್ರಜಾಲ, ಮತ್ತು ಪಾಶುಪತಾಸ್ತ್ರಗಳಿಂದ ರಾಜನನ್ನು ಮುಸುಕುಹಾಕುತ್ತಾ ಮಹಾರಥರು ಹಿಂಬಾಲಿಸುತ್ತಿದ್ದಾರೆ. ಈ ಸಮಯದಲ್ಲಿ ನಾವು ಅವನನ್ನು ರಕ್ಷಿಸಬೇಕು ಎಂದು

ನನಗನ್ನಿಸುತ್ತದೆ. ಪಾತಾಲದಲ್ಲಿ ಮುಳುಗುತ್ತಿರುವವನನ್ನು ಮೇಲಕ್ಕೆ ತರುವಂತೆ ತ್ವರೆಮಾಡಬೇಕಾದ ಕಾಲದಲ್ಲಿ ತ್ವರೆಮಾಡುತ್ತಿರುವ ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠ ಪಾಂಚಾಲರು ಪಾಂಡವರೊಂದಿಗೆ ಅವನನ್ನು ಅನುಸರಿಸಿ ಹೋಗುತ್ತಿದ್ದಾರೆ. ರಾಜನ ಧ್ವಜವು ಕಾಣುತ್ತಿಲ್ಲ! ನಕುಲ-ಸಹದೇವರು, ಸಾತ್ಯಕಿ, ಶಿಖಂಡಿ, ಧೃಷ್ಟದ್ಯುಮ್ನ, ಭೀಮ, ಶತಾನೀಕ, ಸರ್ವ ಪಾಂಚಾಲರು ಮತ್ತು ಚೇದಿಗಳು ನೋಡುತ್ತಿದ್ದಂತೆಯೇ ಕರ್ಣನು ಶರಗಳಿಂದ ಯುಧಿಷ್ಠಿರನ ಧ್ವಜವನ್ನು ಕತ್ತರಿಸಿದ್ದಾನೆ! ಕಮಲಗಳಿರುವ ಸರೋವರವನ್ನು ಆನೆಯು ಹೇಗೋ ಹಾಗೆ ರಣದಲ್ಲಿ ಕರ್ಣನು ಇಗೋ ಶರಗಳಿಂದ ಪಾಂಡವರ ಸೇನೆಯನ್ನು ಧ್ವಂಸಗೊಳಿಸುತ್ತಿದ್ದಾನೆ! ಇಗೋ ನಿನ್ನಕಡೆಯ ರಥಿಗಳು ಓಡಿಹೋಗುತ್ತಿದ್ದಾರೆ! ಈ ಮಹಾರಥರು ಹೇಗೆ ಓಡಿಹೋಗುತ್ತಿದ್ದಾರೆನ್ನುವುದನ್ನು ನೋಡು! ಕರ್ಣನಿಂದ ಗಾಯಗೊಳಿಸಲ್ಪಟ್ಟ ಈ ಆನೆಗಳು ರಣದಲ್ಲಿ ಆರ್ತನಾದಗೈಯುತ್ತಾ ಹತ್ತೂ ದಿಕ್ಕುಗಳಲ್ಲಿ ಓಡಿ ಹೋಗುತ್ತಿವೆ! ಎಲ್ಲಕಡೆಗಳಲ್ಲಿ ಓಡಿ ಹೋಗುತ್ತಿರುವ ರಥಗಳ ಗುಂಪುಗಳನ್ನು ನೋಡು. ರಣದಲ್ಲಿ ಅಮಿತ್ರಕರ್ಶನ ಕರ್ಣನಿಂದ ಅವು ಪಲಾಯನಗೊಳ್ಳುತ್ತಿವೆ! ರಥಸ್ಥನಾಗಿರುವ

ಸೂತಪುತ್ರನ ಆನೆಯ ಹಗ್ಗವನ್ನು ಚಿಹ್ನೆಯಾಗುಳ್ಳ ಧ್ವಜವು ರಣದಲ್ಲಿ ಅಲ್ಲಿಂದಿಲ್ಲಿಗೆ ಸಂಚರಿಸುತ್ತಿರುವುದನ್ನು ನೋಡು! ಈಗ ನಿನ್ನ ಸೇನೆಯನ್ನು ಅಸ್ತವ್ಯಸ್ತಗೊಳಿಸುತ್ತಾ ನೂರಾರು ಶರಗಳನ್ನು ಎರಚುತ್ತಾ ಇಗೋ ರಾಧೇಯನು ಭೀಮಸೇನನ ರಥದ ಬಳಿ ವೇಗದಿಂದ ಹೋಗುತ್ತಿದ್ದಾನೆ! ಶಕ್ರನಿಂದ ವಧಿಸಲ್ಪಡುವ ದೈತ್ಯರಂತೆ ಪಾಂಚಾಲರು ಓಡಿಹೋಗುತ್ತಿರುವುದನ್ನು ನೋಡು! ರಣದಲ್ಲಿ ಕರ್ಣನು ಪಾಂಚಾಲ-ಪಾಂಡು-ಸೃಂಜಯರನ್ನು ಗೆದ್ದು ಎಲ್ಲ ದಿಕ್ಕುಗಳಲ್ಲಿ ನಿನನ್ನಾಗಿಯೇ ನೋಡುತ್ತಿದ್ದಾನೆಂದು ನನಗನ್ನಿಸುತ್ತಿದೆ. ಪಾರ್ಥ! ಶತ್ರುಗಳನ್ನು ಗೆದ್ದು ದೇವಸಂಘಗಳಿಂದ ಸುತ್ತುವರೆಯಲ್ಪಟ್ಟ ಶಕ್ರನಂತೆ ಶ್ರೇಷ್ಠ ಧನುಸ್ಸನ್ನು ಸೆಳೆದು ಚೆನ್ನಾಗಿ ಶೋಭಿಸುತ್ತಿರುವ ಕರ್ಣನನ್ನು ನೋಡು! ರಣದಲ್ಲಿ ಸಹಸ್ರಾರು ಪಾರ್ಥರನ್ನೂ ಸೃಂಜಯರನ್ನೂ ಪೀಡಿಸುತ್ತಿರುವ ಕರ್ಣನ ವಿಕ್ರಮವನ್ನು ನೋಡಿ ಇಗೋ ಕೌರವರು ವಿನೋದಿಸುತ್ತಿದ್ದಾರೆ! ಇಗೋ ಮಹಾರಣದಲ್ಲಿ ಪಾಂಡವರನ್ನು ಸರ್ವಾತ್ಮನಾಗಿ ಭಯಗೊಳಿಸಿ ರಾಧೇಯನು ಸರ್ವಸೇನೆಗಳಿಗೆ ಹೇಳುತ್ತಿದ್ದಾನೆ! “ಕೌರವರೇ! ಹೋಗಿ! ಓಡಿ ಹೋಗುತ್ತಿರುವವರ ಬೆನ್ನಟ್ಟಿ ಹೋಗಿ! ಯುದ್ಧದಿಂದ ಇಂದು ಒಬ್ಬನೇ ಒಬ್ಬ ಸೃಂಜಯನೂ

ಪ್ರಾಣಸಹಿತ ನಮ್ಮಿಂದ ತಪ್ಪಿಸಿಕೊಂಡು ಹೋಗಬಾರದು! ಹಾಗೆಯೇ ಮಾಡಲು ಪ್ರಯತ್ನಪಡಿ! ನಾವು ನಿಮ್ಮ ಹಿಂದೆಯೇ ಬರುತ್ತೇವೆ!" ಹೀಗೆ ಹೇಳುತ್ತಾ ಶರಗಳನ್ನು ಎರಚುತ್ತಾ ಅವರನ್ನು ಹಿಂಬಾಲಿಸಿ ಹೋಗುತ್ತಿದ್ದಾನೆ! ದಿವಾಕರನಿಂದ ಶೋಭಾಯಮಾನಗೊಂಡಿರುವ ಉದಯಪರ್ವತದಂತೆ ರಣದಲ್ಲಿ ಶ್ವೇತಚ್ಛತ್ರದಿಂದ ವಿರಾಜಿತನಾಗಿರುವ ಕರ್ಣನನ್ನು ನೋಡು! ನೆತ್ತಿಯ ಮೇಲೆ ನೂರು ಶಲಾಕೆಗಳುಳ್ಳ ಪೂರ್ಣಚಂದ್ರನ ಕಾಂತಿಯ ಛತ್ರಿಯು ಹೊಳೆಯುತ್ತಿರುವ ಅವನು ಸಮರದಲ್ಲಿ ಬೆಳಗುತ್ತಿದ್ದಾನೆ. ಇಗೋ ಕರ್ಣನು ನಿನ್ನನ್ನು ಓರೆಗಣ್ಣಿನಿಂದ ನೋಡುತ್ತಿದ್ದಾನೆ! ಉತ್ತಮ ಪ್ರಯತ್ನವನ್ನು ಮಾಡಿ ಅವನು ಯುದ್ಧದಲ್ಲಿ ಇಲ್ಲಿಗೇ ನಿಶ್ಚಯವಾಗಿಯೂ ಬರುತ್ತಿದ್ದಾನೆ! ಮಹಾಧನುಸ್ಸನ್ನು ಟೇಂಕರಿಸುತ್ತಾ ಸರ್ಪವಿಷವನ್ನು ಕಾರುವ ಶರಗಳನ್ನು ಪ್ರಯೋಗಿಸುತ್ತಿರುವ ಈ ಮಹಾಬಲನನ್ನು ನೋಡು! ಪತಂಗವು ಆತ್ಮನಾಶಕ್ಕಾಗಿಯೇ ದೀಪದ ಬಳಿ ಹೋಗುವಂತೆ ಇಗೋ ರಾಧೇಯನು ಇಲ್ಲಿಗೇ ಬರುತ್ತಿರುವಂತೆ ಕಾಣುತ್ತಿದೆ! ಕರ್ಣನು ಒಬ್ಬನೇ ಇರುವುದನ್ನು ನೋಡಿ ಅವನನ್ನು ರಕ್ಷಿಸಲು ಪ್ರಯತ್ನಪಡುತ್ತಿರುವ ಧಾರ್ತರಾಷ್ಟ್ರನೂ ಅವನನ್ನು

ಹಿಂಬಾಲಿಸಿ ಬರುತ್ತಿದ್ದಾನೆ! ಯಶಸ್ಸು, ರಾಜ್ಯ, ಮತ್ತು ಉತ್ತಮ ಸುಖವನ್ನು ಇಚ್ಛಿಸುವ ನೀನು ಪ್ರಯತ್ನಪಟ್ಟು ಇವರೆಲ್ಲರೊಡನೆ ಆ ದುಷ್ಟಾತ್ಮ ಕರ್ಣನನ್ನು ವಧಿಸು! ನಿನ್ನನ್ನು ನೀನು ಕೃತಾತ್ಮನೆಂದೂ, ರಾಧೇಯನು ಧರ್ಮಾತ್ಮ ಯುಧಿಷ್ಠಿರನಿಗೆ ಅಪರಾಧವೆಸಗಿರುವವನೆಂದೂ ತಿಳಿದುಕೊಳ್ಳಬೇಕು. ಅನಂತರ ಸರಿಯಾದ ಕಾಲಬಂದಾಗ ರಾಧೇಯನನ್ನು ಎದುರಿಸಿ ಯುದ್ಧಮಾಡು! ಯುದ್ಧದಲ್ಲಿ ಆರ್ಯಬುದ್ಧಿಯನ್ನಿಟ್ಟುಕೊಂಡು ಆ ರಥಯೂಥಪನನ್ನು ಸಂಹರಿಸು!

ಇಗೋ ಭೀಮತೇಜಸ್ಸಿನ ಬಲಶಾಲೀ ಐದುನೂರು ರಥಮುಖ್ಯರು ವೇಗದಿಂದ ಇಲ್ಲಿಗೆ ಬರುತ್ತಿದ್ದಾರೆ! ಐದುಸಾವಿರ ಆನೆಗಳೂ, ಅದರ ಎರಡುಪಟ್ಟು ಕುದುರೆಗಳೂ, ಹತ್ತು ಲಕ್ಷ ಪದಾತಿಗಳನ್ನೂ ಸಂಘಟಿತಗೊಂಡಿರುವ ಸೇನೆಯು ಅನ್ಯೋನ್ಯರನ್ನು ರಕ್ಷಿಸಿಕೊಳ್ಳುತ್ತಾ ನಿನ್ನ ಕಡೆಯೇ ಬರುತ್ತಿದೆ. ಮಹೇಷ್ವಾಸ ಸೂತಪುತ್ರನು ತನ್ನನ್ನು ತಾನು ಕಾಣಿಸಿಕೊಂಡಾಗ ಉತ್ತಮ ಪ್ರಯತ್ನವನ್ನು ಮಾಡಿ ಅವನೊಡನೆ ಹೋರಾಡು! ಇಗೋ! ಕರ್ಣನು ಸಂರಬ್ಧನಾಗಿ ಪಾಂಚಾಲರನ್ನು ಆಕ್ರಮಣಿಸುತ್ತಿದ್ದಾನೆ. ಅವನ ಧ್ವಜವು

ಧೃಷ್ಟದ್ಯುಮ್ನನ ರಥದ ಬಳಿ ನಾನು ಕಾಣುತ್ತಿದ್ದೇನೆ! ಅವನು ಪಾಂಚಾಲರೊಡನೆ ಯುದ್ಧಮಾಡುತ್ತಿದ್ದಾನೆಂದು ನನಗನ್ನಿಸುತ್ತಿದೆ! ನಿನಗೆ ಪ್ರಿಯವಾದುದನ್ನು ಹೇಳುತ್ತಿದ್ದೇನೆ. ರಾಜಾ ಕೌರವ್ಯ ಧರ್ಮಪುತ್ರ ಯುಧಿಷ್ಠಿರನು ಜೀವಿಸಿದ್ದಾನೆ! ಮಹಾಬಾಹು ಬೀಮಸೇನನು ಸೃಂಜಯರು ಮತ್ತು ಸಾತ್ಯಕಿಯರಿಂದ ಪರಿವೃತನಾಗಿ ಸೇನಾಮುಖದಲ್ಲಿ ಹಿಂದಿರುಗಿದ್ದಾನೆ! ಭೀಮಸೇನ ಮತ್ತು ಪಾಂಚಾಲರ ನಿಶಿತ ಶರಗಳಿಂದ ಸಮರದಲ್ಲಿ ಕೌರವರು ವಧಿಸಲ್ಪಡುತ್ತಿದ್ದಾರೆ! ಭೀಮನ ಶರಗಳಿಂದ ಹತರಾದ ಧಾರ್ತರಾಷ್ಟ್ರನ ಸೇನೆಯು ಗಾಯಗೊಂಡು ವೇಗವಾಗಿ ರಣದಿಂದ ಓಡಿ ವಿಮುಖವಾಗುತ್ತಿದೆ! ರಕ್ತದಿಂದ ತೋಯ್ದುಹೋಗಿರುವ ಭಾರತೀ ಸೇನೆಯು ಪೈರುಗಳಿಲ್ಲದ ಗದ್ದೆಯಂತೆ ನಿಸ್ತೇಜವಾಗಿ ಕಾಣುತ್ತಿದೆ. ಸರ್ಪವಿಷದಂತೆ ಕ್ರುದ್ಧನಾಗಿರುವ ಭೀಮಸೇನನು ಯುದ್ಧಕ್ಕೆ ಹಿಂದಿರುಗಿ ಕೌರವ ಸೇನೆಯನ್ನು ಓಡಿಸುತ್ತಿರುವುದನ್ನು ನೋಡು! ಹಳದಿ-ಕೆಂಪು-ಕಪ್ಪು ಮತ್ತು ಬಿಳಿಯಬಣ್ಣದ ನಕ್ಷತ್ರ-ಚಂದ್ರ-ಸೂರ್ಯರ ಚಿತ್ರಗಳುಳ್ಳ ಪತಾಕೆಗಳು ಮತ್ತು ಚತ್ರಗಳು ಬೀಳುತ್ತಿರುವುದನ್ನು ನೋಡು! ಸುವರ್ಣ-ರಜತ-ಲೋಹಮಯವಾದ ನಾನಾವಿಧದ

ಧ್ವಜಗಳು ಬೀಳುತ್ತಿವೆ. ಆನೆ-ಕುದುರೆಗಳೂ ದಿಕ್ಕಾಪಾಲಾಗಿ ಓಡಿಹೋಗುತ್ತಿವೆ! ಯುದ್ಧದಿಂದ ಪಲಾಯನ ಮಾಡದಿರುವ ಪಾಂಚಾಲರ ನಾನಾ ವರ್ಣದ ಬಾಣಗಳಿಂದ ಹತರಾಗಿ ರಥಿಗಳು ಅಸುನೀಗಿ ರಥಗಳಿಂದ ಬೀಳುತ್ತಿದ್ದಾರೆ! ತರಸ್ವಿ ಪಾಂಚಾಲರು ಆನೆ-ಕುದುರೆ-ರಥಗಳನ್ನು ನಿರ್ಮನುಷ್ಯರನ್ನಾಗಿ ಮಾಡಿ ಧಾರ್ತರಾಷ್ಟ್ರರನ್ನು ಓಡಿಸುತ್ತಿದ್ದಾರೆ! ಪ್ರಾಣಗಳನ್ನೇ ತೊರೆದು ನರವ್ಯಾಘ್ರ ಪಾಂಚಾಲರು ಭೀಮಸೇನನನ್ನು ಆಶ್ರಯಿಸಿ ದುರ್ಧರ್ಷ ಶತ್ರುಬಲವನ್ನು ಮರ್ದಿಸುತ್ತಿದ್ದಾರೆ! ಇಗೋ! ಪಾಂಚಾಲರು ಶಂಖಗಳನ್ನು ಊದುತ್ತಿದ್ದಾರೆ! ಸಿಂಹನಾದಗೈಯುತ್ತಿದ್ದಾರೆ! ಮತ್ತು ರಣದಲ್ಲಿ ಸಾಯಕಗಳಿಂದ ಶತ್ರುಗಳನ್ನು ಸಂಹರಿಸುತ್ತಾ ಅವರನ್ನು ಓಡಿಸುತ್ತಿದ್ದಾರೆ! ಸ್ವರ್ಗದ ಮಹಾತ್ಮೆಯನ್ನಾದರೂ ನೋಡು! ಪಾಂಚಾಲರೇ ಧಾರ್ತರಾಷ್ಟ್ರರನ್ನು ಕ್ರುದ್ಧ ಸಿಂಹಗಳು ಆನೆಗಳನ್ನು ಹೇಗೋ ಹಾಗೆ ಸಂಹರಿಸುತ್ತಿದ್ದಾರೆ! ಮಾನಸಸರೋವರದಿಂದ ಹೊರಟ ಹಂಸಗಳು ವೇಗವಾಗಿ ಗಂಗೆಯನ್ನು ಸೇರುವಂತೆ ಪಾಂಚಾಲರು ಎಲ್ಲ ಕಡೆಗಳಿಂದಲೂ ಧಾರ್ತರಾಷ್ಟ್ರರ ಮಹಾಸೇನೆಯನ್ನು ಆಕ್ರಮಣಿಸುತ್ತಿದ್ದಾರೆ! ಗೂಳಿಗಳನ್ನು ಗೂಳಿಗಳು ಹೇಗೋ ಹಾಗೆ ಕೃಪ-ಕರ್ಣ ಮೊದಲಾದ ವೀರರು

ಪಾಂಚಾಲರನ್ನು ತಡೆಯುವಲ್ಲಿ ತಮ್ಮ ಪರಮ ವಿಕ್ರಮವನ್ನು ತೋರಿಸುತ್ತಿದ್ದಾರೆ! ಭೀಮನ ಅಸ್ತ್ರಗಳಿಂದ ಉತ್ಸಾಹವನ್ನು ಕಳೆದುಕೊಂಡ ಮಹಾರಥ ಧಾರ್ತರಾಷ್ಟ್ರ ಶತ್ರುಗಳನ್ನು ಧೃಷ್ಟದ್ಯುಮ್ನನೇ ಮೊದಲಾದ ವೀರರು ಸಹಸ್ರಾರು ಸಂಖ್ಯೆಗಳಲ್ಲಿ ಸಂಹರಿಸುತ್ತಿದ್ದಾರೆ! ಈಗ ಧಾರ್ತರಾಷ್ಟ್ರರ ಮಹಾ ಸೇನೆಯು ವಿಷಣ್ಣವಾಗಿ ಹೋಗಿದೆ! ನೋಡು! ಭೀಮನ ನಾರಾಚಗಳಿಂದ ಕಡಿಯಲ್ಪಟ್ಟ ಆನೆಗಳು ವಜ್ರಿಯ ವಜ್ರದಿಂದ ಹತವಾಗಿ ಭೂಮಿಯ ಮೇಲೆ ಬೀಳುವ ಶಿಖರಗಳಂತೆ ಬೀಳುತ್ತಿವೆ! ಭೀಮಸೇನನ ಸನ್ನತಪರ್ವ ಬಾಣಗಳಿಂದ ಗಾಯಗೊಂಡ ಮಹಾ ಆನೆಗಳು ನಮ್ಮ ಸೈನಿಕರನ್ನೇ ತುಳಿಯುತ್ತಾ ಓಡಿಹೋಗುತ್ತಿವೆ! ಸಂಗ್ರಾಮದಲ್ಲಿ ವಿಜಯೋತ್ಸಾಹದಿಂದ ಕೇಳಿಬರುತ್ತಿರುವ ಸಹಿಸಲಸಾಧ್ಯವಾದ ಈ ಸಿಂಹನಾದವು ಭೀಮನದ್ದು ಎಂದು ತಿಳಿ! ಇಗೋ ಅಲ್ಲಿ ಪಾಂಡವ ಭೀಮನನ್ನು ಸಂಹರಿಸಲೋಸುಗ ಕ್ರುದ್ಧನಾದ ನೈಷಾದನು ಆನೆಯಮೇಲೆ ಕುಳಿತು ದಂಡಪಾಣಿ ಅಂತಕನಂತೆ ತೋಮರವನ್ನು ಹಿಡಿದು ಬರುತ್ತಿದ್ದಾನೆ! ಗರ್ಜಿಸುತ್ತಿರುವ ಭೀಮನು ಅಗ್ನಿಶಿಖೆಗಳಂತಿರುವ ತೀಕ್ಷ್ಣ ನಾರಾಚಗಳಿಂದ ತೋಮರವನ್ನು ಹಿಡಿದಿರುವ ಅವನ ಎರಡೂ ಭುಜಗಳನ್ನು

ತುಂಡರಿಸಿ ಹತ್ತರಿಂದ ಅವನನ್ನೂ ಸಂಹರಿಸಿಬಿಟ್ಟನು! ಇವನನ್ನು ಸಂಹರಿಸಿ ಪುನಃ ಬರುತ್ತಿರುವ ನೀಲಮೋಡಗಳಂತೆ ಹೊಳೆಯುತ್ತಿರುವ ಮಹಾಗಾತ್ರದ ಅನ್ಯ ಆನೆಗಳನ್ನು ಶಕ್ತಿತೋಮರ ಸಮೂಹಗಳಿಂದ ಸಂಹರಿಸುತ್ತಿರುವ ಪ್ರಹಾರಿ ವೃಕೋದರನನ್ನು ನೋಡು! ವೈಜಯಂತೀ ಮತ್ತು ಧ್ವಜಗಳೊಡನೆ ನಲವತ್ತೊಂಭತ್ತು ಆನೆಗಳನ್ನು ನಿಶಿತ ಬಾಣಗಳಿಂದ ಭೇದಿಸಿ ಸಂಹರಿಸಿ ನಿನ್ನ ಅಣ್ಣ ಪಾರ್ಥನು ಹತ್ತು ಹತ್ತು ನಾರಾಚಗಳಿಂದ ಒಂದೊಂದು ಆನೆಯನ್ನೂ ಸಂಹರಿಸುತ್ತಿದ್ದಾನೆ! ಭೀಮನು ಯುದ್ಧಕ್ಕೆ ಹಿಂದಿರುಗಿದ ನಂತರ ಧಾರ್ತರಾಷ್ಟ್ರರ ಸಿಂಹನಾದಗಳು ಈಗ ಕೇಳಿಬರುತ್ತಿಲ್ಲ! ಕ್ರುದ್ಧ ನರಸಿಂಹ ಭೀಮಸೇನನು ಧಾರ್ತರಾಷ್ಟ್ರನು ಸಂಗ್ರಹಿಸಿದ್ದ ಮೂರು ಅಕ್ಷೌಹಿಣೀ ಸೇನೆಯನ್ನು ತಡೆದು ಸಂಹರಿಸಿದ್ದಾನೆ!”

ಭೀಮಸೇನನು ಸುದುಷ್ಕರವಾದ ಆ ಕರ್ಮವನ್ನೆಸಗಿದುದನ್ನು ಕಂಡು ಅರ್ಜುನನು ಅಳಿದುಳಿದವರನ್ನು ನಿಶಿತ ಶರಗಳಿಂದ ಸಂಹರಿಸಿದನು. ಸಮರದಲ್ಲಿ ವಧಿಸಲ್ಪಡುತ್ತಿರುವ ಸಂಶಪ್ತಕ ಗಣಗಳು ಶಕ್ರನ ಅತಿಥಿಗಳಾಗಿ ಹೋಗಿ ವಿಶೋಕರಾಗಿ ಮುದಿಸಿದರು. ಪುರುಷವ್ಯಾಘ್ರ

ಪಾರ್ಥನಾದರೋ ಸನ್ನತಪರ್ವ ಶರಗಳಿಂದ ಧಾರ್ತರಾಷ್ಟ್ರನ ಚತುರ್ವಿಧ ಸೇನೆಯನ್ನು ಸಂಹರಿಸಿದನು.

ಮಹಾಬಾಹು ಭೀಮಸೇನನನ್ನು ನೋಡಿ ಪ್ರತಾಪವಾನ್ ಸೂತಪುತ್ರನು ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ಭೀಮಸೇನನನ್ನು ಆಕ್ರಮಣಿಸಿದನು. ಕೌರವ ಸೇನೆಯು ಭೀಮಸೇನನಿಂದ ಪರಾಙ್ಮುಖವಾಗುತ್ತಿದ್ದುದನ್ನು ನೋಡಿ ಬಲಶಾಲೀ ಕರ್ಣನು ಮಹಾಪ್ರಯತ್ನದಿಂದ ಅವರನ್ನು ಪುನಃ ಯುದ್ಧಕ್ಕೆ ನಿಲ್ಲಿಸಿದನು. ದುರ್ಯೋಧನನ ಸೇನೆಯನ್ನು ವ್ಯವಸ್ಥೆಗೊಳಿಸಿ ಕರ್ಣನು ಪಾಂಡವರೊಡನೆ ಯುದ್ಧಮಾಡಿದನು. ಪಾಂಡವರ ಮಹಾರಥರು ಕಾರ್ಮುಕಗಳನ್ನು ಸೆಳೆಯುತ್ತಾ ಸಾಯಕಗಳನ್ನು ಎರಚುತ್ತಾ ರಾಧೇಯನನ್ನು ಎದುರಿಸಿ ಯುದ್ಧಮಾಡಿದರು. ಸಮರದಲ್ಲಿ ವಿಜಯೇಚ್ಛುಗಳಾದ ಭೀಮಸೇನ, ಸಾತ್ಯಕಿ, ಶಿಖಂಡೀ, ಜನಮೇಜಯ, ಧೃಷ್ಟದ್ಯುಮ್ನ, ಎಲ್ಲ ಪ್ರಭದ್ರಕರೂ, ಪಾಂಚಾಲ ನರವ್ಯಾಘ್ರರೂ ಕ್ರುದ್ಧರಾಗಿ ಎಲ್ಲಕಡೆಗಳಿಂದ ಕೌರವ ವಾಹಿನಿಯನ್ನು ಆಕ್ರಮಣಿಸಿದರು. ಹಾಗೆಯೇ ಕೌರವ ಮಹಾರಥರೂ ತ್ವರೆಮಾಡಿ ಪಾಂಡವರ ಸೇನೆಗಳನ್ನು ವಧಿಸಲು ಬಯಸಿ ಅವರನ್ನು ಆಕ್ರಮಣಿಸಿದರು. ರಥ-ಆನೆ-ಕುದುರೆಗಳಿಂದ ಮಿಶ್ರಿತವಾಗಿ ಪದಾತಿ-ಧ್ವಜ ಸಮಾಕುಲಗಳ ಸೇನೆಗಳು

ಅದ್ಭುತವಾಗಿ ಕಾಣುತ್ತಿದ್ದವು. ಶಿಖಂಡಿಯು ಕರ್ಣನನ್ನೂ, ಧೃಷ್ಟದ್ಯುಮ್ನನು ದುಃಶಾಸನನನ್ನೂ ಮಹಾ ಸೇನೆಯಿಂದ ಸುತ್ತುವರೆದು ಯುದ್ಧಮಾಡಿದರು. ನಕುಲನು ವೃಷಸೇನನನ್ನೂ, ಯುಧಿಷ್ಠಿರನು ಚಿತ್ರಸೇನನನ್ನೂ, ಸಹದೇವನು ಉಲೂಕನನ್ನೂ ಎದುರಿಸಿ ಯುದ್ಧಮಾಡಿದರು. ಸಾತ್ಯಕಿಯು ಶಕುನಿಯನ್ನೂ, ಭೀಮಸೇನು ಕೌರವರನ್ನೂ ಮತ್ತು ಅರ್ಜುನನು ದ್ರೋಣಪುತ್ರನನ್ನೂ ಆಕ್ರಮಣಿಸಿದರು. ಯುಧಾಮನ್ಯುವನ್ನು ಗೌತಮನೂ ಉತ್ತಮೌಜಸನನ್ನು ಬಲವಾನ್ ಕೃತವರ್ಮನೂ ಆಕ್ರಮಣಿಸಿದರು. ಭೀಮಸೇನನು ಒಬ್ಬನೇ ಕುರುಗಳನ್ನೂ, ಧೃತರಾಷ್ಟ್ರನ ಪುತ್ರರೆಲ್ಲರನ್ನೂ ಅವರ ಸೇನೆಗಳೊಂದಿಗೆ ಆಕ್ರಮಣಿಸಿ ಯುದ್ಧಮಾಡಿದನು.

## ಕರ್ಣ-ಶಿಖಂಡಿಯರ ಯುದ್ಧ

ಆಗ ಶಿಖಂಡಿಯು ನಿರ್ಭೀತನಾಗಿ ಸಂಚರಿಸುತ್ತಾ ಕರ್ಣನನ್ನು ಪತ್ರಿಗಳಿಂದ ತಡೆದನು. ಆಗ ರೋಷದಿಂದ ಕರ್ಣನು ತುಟಿಗಳನ್ನು ಅದುರಿಸುತ್ತಾ ಶಿಖಂಡಿಯನ್ನು ಮೂರು ಬಾಣಗಳಿಂದ ಅವನ ಹುಬ್ಬುಗಳ ಮಧ್ಯದಲ್ಲಿ ಪ್ರಹರಿಸಿದನು. ಆ ಬಾಣಗಳನ್ನು ಧರಿಸಿದ ಶಿಖಂಡಿಯು ಮೂರು ಶೃಂಗಗಳಿಂದ ಸಮನ್ವಿತವಾದ ರಜತ ಪರ್ವತದಂತೆಯೇ ಬಹಳವಾಗಿ ಶೋಭಿಸಿದನು. ಸೂತಪುತ್ರನಿಂದ

ಅತಿಯಾಗಿ ಗಾಯಗೊಂಡ ಶಿಖಂಡಿಯು ಕರ್ಣನನ್ನು ತೊಂಭತ್ತು ನಿಶಿತ ಬಾಣಗಳಿಂದ ಪ್ರಹರಿಸಿದನು. ಕರ್ಣನು ಮೂರು ಶರಗಳಿಂದ ಅವನ ಸಾರಥಿಯನ್ನು ಸಂಹರಿಸಿ ಕ್ಷುರಪ್ರದಿಂದ ಅವನ ಧ್ವಜವನ್ನೂ ಕಿತ್ತು ಹಾಕಿದನು.

ಕುದುರೆಗಳು ಹತಗೊಳ್ಳಲು ಶತ್ರುತಾಪನ ಮಹಾರಥ ಶಿಖಂಡಿಯು ರಥದಿಂದ ಕೆಳಕ್ಕೆ ಹಾರಿ ಸಂಕ್ರುದ್ಧನಾಗಿ ಕರ್ಣನ ಮೇಲೆ ಶಕ್ತಿಯನ್ನು ಎಸೆದನು. ಕರ್ಣನು ಸಾಯಕಗಳಿಂದ ಆ ಶಕ್ತಿಯನ್ನು ಮೂರು ಭಾಗಗಳನ್ನಾಗಿಸಿ ಒಂಭತ್ತು ನಿಶಿತ ಶರಗಳಿಂದ ಶಿಖಂಡಿಯನ್ನು ಹೊಡೆದನು. ಶಿಖಂಡಿಯು ಕರ್ಣನ ಬಾಣಗಳಿಂದ ತಪ್ಪಿಸಿಕೊಳ್ಳಲು ಕೂಡಲೇ ಯುದ್ಧವನ್ನು ಬಿಟ್ಟು ಹೊರಟುಹೋದನು. ಆಗ ಕರ್ಣನು ಮಹಾವೇಗದ ಭಿರುಗಾಳಿಯು ಹತ್ತಿಯ ರಾಶಿಯನ್ನು ಹೇಗೋ ಹಾಗೆ ಪಾಂಡುಸೇನೆಯನ್ನು ನಾಶಗೊಳಿಸತೊಡಗಿದನು.

## ಧೃಷ್ಟದ್ಯುಮ್ನ-ದುಃಶಾಸನರ ಯುದ್ಧ

ದುಃಶಾಸನನಿಂದ ಪೀಡಿತನಾದ ಧೃಷ್ಟದ್ಯುಮ್ನನು ಅವನನ್ನು ಮೂರು ಬಾಣಗಳಿಂದ ವಕ್ಷಸ್ಥಳಕ್ಕೆ ಹೊಡೆದನು. ಆಗ ದುಃಶಾಸನನು ರುಕ್ಮಪುಂಖಗಳುಳ್ಳ ನಿಶಿತ ನತಪರ್ವಣ ಭಲ್ಲದಿಂದ ಧೃಷ್ಟದ್ಯುಮ್ನನ ಎಡತೋಲನ್ನು ಪ್ರಹರಿಸಿದನು. ಶರದಿಂದ ಗಾಯಗೊಂಡ

ಧೃಷ್ಟದ್ಯುಮ್ನನಾದರೋ ಕ್ರುದ್ಧನಾಗಿ ದುಃಶಾಸನನ ಮೇಲೆ ಘೋರ ಶರವನ್ನು ಪ್ರಯೋಗಿಸಿದನು. ಮಹಾವೇಗದಲ್ಲಿ ಬಂದು ಬೀಳುತ್ತಿದ್ದ ಆ ಶರವನ್ನು ದುಃಶಾಸನನು ಮೂರು ಭಾಗಗಳನ್ನಾಗಿ ತುಂಡರಿಸಿದನು. ಆಗ ಅನ್ಯ ಕನಕಭೂಷಣ ಹದಿನೇಳು ಭಲ್ಲಗಳಿಂದ ದುಃಶಾಸನನು ಧೃಷ್ಟದ್ಯುಮ್ನನನ್ನು ಸಮೀಪಿಸಿ ಅವನ ಬಾಹುಗಳು ಮತ್ತು ಎದೆಗೆ ಗುರಿಯಿಟ್ಟು ಹೊಡೆದನು. ಆಗ ಕ್ರುದ್ಧನಾದ ಪಾರ್ಷತನು ತೀಕ್ಷ್ಣ ಕ್ಷುರಪ್ರದಿಂದ ಅವನ ಧನುಸ್ಸನ್ನು ತುಂಡರಿಸಿದನು. ಆಗ ಜನರು ಜೋರಾಗಿ ಕೂಗಿಕೊಂಡರು. ಆಗ ದುಃಶಾಸನನು ಅನ್ಯ ಧನುಸ್ಸನ್ನು ಎತ್ತಿಕೊಂಡು ಶರವ್ರಾತಗಳಿಂದ ಧೃಷ್ಟದ್ಯುಮ್ನನನ್ನು ಎಲ್ಲಕಡೆಗಳಿಂದ ಸುತ್ತುವರೆದನು. ಅವನ ಆ ವಿಕ್ರಮವನ್ನು ನೋಡಿ ರಣದಲ್ಲಿದ್ದ ಯೋಧರೂ, ಸಿದ್ಧ-ಅಪ್ಸರ ಗಣಗಳೂ ವಿಸ್ಮಿತರಾದರು. ಆಗ ಕೌರವರ ಮತ್ತು ಶತ್ರುಗಳ ನಡುವೆ ಘೋರವಾದ, ಸಮಸ್ತಪ್ರಾಣಿಗಳಿಗೂ ಘೋರರೂಪೀ ಯುದ್ಧವು ನಡೆಯಿತು.

ವೃಷಸೇನನಾದರೋ ತಂದೆಯ ಸಮೀಪದಲ್ಲಿ ನಿಂತಿದ್ದ ನಕುಲನನ್ನು ಐದು ಆಯಸಗಳಿಂದ ಹೊಡೆದು ಅನ್ಯ ಮೂರು ಶರಗಳಿಂದ ಹೊಡೆದನು. ಆಗ ನಕುಲನಾದರೋ ಕ್ರುದ್ಧನಾಗಿ ನಗುತ್ತಿರುವನೋ ಎನ್ನುವಂತೆ ತೀಕ್ಷ್ಣ ನಾರಾಚದಿಂದ ವೃಷಸೇನನ ಹೃದಯಕ್ಕೆ ದೃಢವಾಗಿ

ಹೊಡೆದನು. ಶತ್ರುವಿನಿಂದ ಅತಿ ಬಲವತ್ತಾಗಿ ಪ್ರಹರಿಸಲ್ಪಟ್ಟ ವೃಷಸೇನನು ನಕುಲನನ್ನು ಇಪ್ಪತ್ತು ಬಾಣಗಳಿಂದ ಪ್ರಹರಿಸಲು ನಕುಲನೂ ಅವನನ್ನು ಐದು ಶರಗಳಿಂದ ಪ್ರಹರಿಸಿದನು. ಆಗ ಆ ಇಬ್ಬರು ಪುರುಷರ್ಷಭರೂ ಅನ್ಯೋನ್ಯರನ್ನು ಸಹಸ್ರ ಶರಗಳಿಂದ ಮುಚ್ಚಿಬಿಟ್ಟರು. ಆಗ ಕುರುಸೇನೆಯು ಭಗ್ನವಾಗಿ ಹೋಯಿತು.

ಧಾರ್ತರಾಷ್ಟ್ರರ ಸೇನೆಯು ಓಡಿಹೋಗುತ್ತಿರುವುದನ್ನು ನೋಡಿ ಸೂತಜನು ಬಲವನ್ನುಪಯೋಗಿಸಿ ತಡೆದನು. ಕರ್ಣನು ಹೊರಟುಹೋಗಲು ನಕುಲನು ಕೌರವಸೇನೆಯೆಡೆಗೆ ನುಗ್ಗಿದನು. ಕರ್ಣಪುತ್ರನಾದರೋ ನಕುಲನನ್ನು ಸಮರದಲ್ಲಿ ಬಿಟ್ಟುಬಿಟ್ಟು ತ್ವರೆಮಾಡಿ ರಾಧೇಯನನ್ನು ಹಿಂಬಾಲಿಸಿ ಹೋಗಿ ಅವನ ಚಕ್ರರಕ್ಷಣೆಯಲ್ಲಿ ತೊಡಗಿದನು. ಉಲೂಕನಾದರೋ ರಣದಲ್ಲಿ ಸಹದೇವನಿಂದ ತಡೆಯಲ್ಪಟ್ಟು ಕ್ರುದ್ಧನಾದನು. ಸಹದೇವನು ಅವನ ನಾಲ್ಕು ಕುದುರೆಗಳನ್ನು ಸಂಹರಿಸಿ ಸಾರಥಿಯನ್ನು ಯಮನ ಸದನದ ಕಡೆ ಕಳುಹಿಸಿದನು. ಆಗ ಉಲೂಕನಾದರೋ ರಥದಿಂದ ಕೆಳಕ್ಕೆ ಹಾರಿ ತ್ರಿಗರ್ತರ ಮಹಾಸೇನೆಯೊಳಗೆ ನುಸುಳಿಕೊಂಡನು. ಸಾತ್ಯಕಿಯು ಶಕುನಿಯನ್ನು ಇಪ್ಪತ್ತು ನಿಶಿತ ಶರಗಳಿಂದ ಹೊಡೆದು ನಗುತ್ತಿರುವನ್ನೋ ಎನ್ನುವಂತೆ ಭಲ್ಲದಿಂದ ಸೌಬಲನ ಧ್ವಜವನ್ನು ತುಂಡರಿಸಿದನು.

ಸಮರದಲ್ಲಿ ಕ್ರುದ್ಧನಾದ ಸೌಬಲನು ಅವನ ಕವಚವನ್ನು ಸೀಳಿ ಪುನಃ ಅವನ ಕಾಂಚನ ಧ್ವಜವನ್ನು ತುಂಡರಿಸಿದನು.

ಕೂಡಲೇ ಸಾತ್ಯಕಿಯು ನಿಶಿತ ಬಾಣಗಳಿಂದ ಅವನನ್ನು ಹೊಡೆದು ಮೂರು ಬಾಣಗಳಿಂದ ಅವನ ಸಾರಥಿಯನ್ನು ಹೊಡೆದನು. ಕೂಡಲೇ ತ್ವರೆಮಾಡಿ ಶರಗಳಿಂದ ಅವನ ಕುದುರೆಗಳನ್ನು ಸಂಹರಿಸಿದನು. ಅನಂತರ ಬೇಗನೇ ಕೆಳಕ್ಕೆ ಹಾರಿ ಶಕುನಿಯು ಉಲೂಕನ ರಥವನ್ನೇರಿ ಶೈನೇಯನಿಂದ ಬಹುದೂರ ಹೊರಟುಹೋದನು.

ಸಾತ್ಯಕಿಯಾದರೋ ರಣದಲ್ಲಿ ಕೌರವ ಸೇನೆಯನ್ನು ವೇಗದಿಂದ ಆಕ್ರಮಣಿಸಿದನು. ಆಗ ಆ ಸೇನೆಯು ಭಗ್ನವಾಯಿತು. ಶೈನೇಯನ ಶರದಿಂದ ಗಾಯಗೊಂಡ ಸೈನ್ಯವು ಬೇಗನೇ ಹತ್ತುದಿಕ್ಕುಗಳಲ್ಲಿಯೂ ಓಡಿಹೋಯಿತು ಮತ್ತು ಪ್ರಾಣಗಳನ್ನು ಕಳೆದುಕೊಂಡವರಂತೆ ಮುಗ್ಗರಿಸಿ ಬೀಳುತ್ತಿತ್ತು. ದುರ್ಯೋಧನನು ಭೀಮಸೇನನನ್ನು ತಡೆಯುತ್ತಿದ್ದನು. ಮುಹೂರ್ತಮಾತ್ರದಲ್ಲಿ ಭೀಮನು ದುರ್ಯೋಧನನನ್ನು ಅಶ್ವ-ಸೂತ-ರಥಗಳಿಂದ ವಿಹೀನನನ್ನಾಗಿ ಮಾಡಿದನು. ಅದರಿಂದ ಚಾರಣರು ಸಂತುಷ್ಟರಾದರು. ಆಗ ನೃಪನು ಭೀಮಸೇನನ ದೃಷ್ಟಿಯಿಂದ ಪಲಾಯನಗೈದನು. ಭೀಮಸೇನನು ಕುರುಸೈನ್ಯ ಸರ್ವವನ್ನೂ ಆಕ್ರಮಣಿಸಿದನು. ಭೀಮನೊಬ್ಬನಿಂದಲೇ

ವಧಿಸಲ್ಪಡುತ್ತಿದ್ದ ಅಲ್ಲಿ ಮಹಾ ಕೂಗು ಕೇಳಿಬಂದಿತು. ಯುಧಾಮನ್ಯುವು ಕೃಪನನ್ನು ಪ್ರಹರಿಸಿ ಅವನ ಧನುಸ್ಸನ್ನೂ ಕತ್ತರಿಸಿದನು. ಕೂಡಲೇ ಕೃಪನು ಅನ್ಯ ಧನುಸ್ಸನ್ನು ಎತ್ತಿಕೊಂಡನು. ಕೃಪನು ಯುಧಾಮನ್ಯುವಿನ ಧ್ವಜವನ್ನೂ ಸೂತನನ್ನೂ ಚತ್ರವನ್ನೂ ಭೂಮಿಯ ಮೇಲೆ ಉರುಳಿಸಿದನು. ಆಗ ಯುಧಾಮನ್ಯುವು ಅದೇ ರಥದಲ್ಲಿಯೇ ಪಲಾಯನಗೈದನು. ಉತ್ತಮೌಜಸನಾದರೋ ಕೂಡಲೇ ಹಾರ್ದಿಕ್ಯನನ್ನು ಶರಗಳಿಂದ ಮೇಘಗಳು ಪರ್ವತವನ್ನು ಮಳೆಯಿಂದ ಮುಚ್ಚುವಂತೆ ಮುಚ್ಚಿಬಿಟ್ಟನು. ಆಗ ಕೃತವರ್ಮನು ಉತ್ತಮೌಜಸನ ಹೃದಯಕ್ಕೆ ಹೊಡೆಯಲು ಅವನು ರಥದಲ್ಲಿಯೇ ಕುಳಿತುಕೊಂಡನು. ಅವನ ಸಾರಥಿಯು ಆ ರಥಿಗಳಲ್ಲಿ ಶ್ರೇಷ್ಠನನ್ನು ಅಲ್ಲಿಂದ ಒಯ್ದುಬಿಟ್ಟನು. ಆಗ ಕೃತವರ್ಮನು ಪಾಂಡುಸೇನೆಯನ್ನು ಆಕ್ರಮಣಿಸಿದನು.

## ಅರ್ಜುನ-ಅಶ್ವತ್ಥಾಮರ ಯುದ್ಧ

ದ್ರೌಣಿಯಾದರೋ ಮಹಾ ರಥಸಂಘಗಳಿಂದ ಪರಿವೃತನಾಗಿ ಯುಧಿಷ್ಠಿರನಿದ್ದಲಿಗೆ ಕೂಡಲೇ ಬಂದೆರಗಿದನು. ಒಮ್ಮೆಲೇ ಬಂದು ಎರಗಿದ ಅವನನ್ನು ಶೂರ ಪಾರ್ಥನು ತೀರವು ಸಮುದ್ರವನ್ನು ತಡೆಯುವಂತೆ ತಡೆದು ನಿಲ್ಲಿಸಿದನು. ಆಗ ಕ್ರುದ್ಧನಾದ ದ್ರೋಣಪುತ್ರನು ಅರ್ಜುನ-ವಾಸುದೇವರನ್ನು ಪತ್ರಿಗಳಿಂದ ಮುಚ್ಚಿಬಿಟ್ಟನು. ಮಹಾರಥ

ಕೃಷ್ಣರಿಬ್ಬರೂ ಆ ರೀತಿ ಮುಚ್ಚಿಹೋಗಿದುದನ್ನು ನೋಡಿ ಅಲ್ಲಿದ್ದು ನೋಡುತ್ತಿದ್ದ ಕುರುಗಳು ಪರಮ ವಿಸ್ಮಿತರಾದರು. ಅರ್ಜುನನಾದರೋ ನಗುತ್ತಿರುವನೋ ಎನ್ನುವಂತೆ ದಿವ್ಯಾಸ್ತ್ರವನ್ನು ಪ್ರಕಟಿಸಿದನು. ಬ್ರಾಹ್ಮಣ ಅಶ್ವತ್ಥಾಮನು ಆ ಅಸ್ತ್ರವನ್ನು ತಡೆದುಬಿಟ್ಟನು. ಯುದ್ಧದಲ್ಲಿ ಅಶ್ವತ್ಥಾಮನನ್ನು ಸಂಹರಿಸಲು ಅರ್ಜುನನು ಯಾವ್ಯಾವ ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದನೋ ಅವೆಲ್ಲವನ್ನೂ ದ್ರೋಣಪುತ್ರನು ನಾಶಗೊಳಿಸುತ್ತಿದ್ದನು. ನಡೆಯುತ್ತಿದ್ದ ಆ ಅಸ್ತ್ರಯುದ್ಧದಲ್ಲಿ ದ್ರೌಣಿಯು ಬಾಯಿಕಳೆದ ಅಂತಕನಂತೆ ತೋರುತ್ತಿದ್ದನು. ಅವನು ಜಿಹ್ಮಗಗಳಿಂದ ದಿಕ್ಕು-ಉಪದಿಕ್ಕುಗಳನ್ನು ಮುಚ್ಚಿ, ವಾಸುದೇವನ ಬಲಭುಜವನ್ನು ಮೂರು ಬಾಣಗಳಿಂದ ಪ್ರಹರಿಸಿದನು. ಆಗ ಅರ್ಜುನನು ಅಶ್ವತ್ಥಾಮನ ಎಲ್ಲ ಕುದುರೆಗಳನ್ನೂ ಸಂಹರಿಸಿ ಸಮರಭೂಮಿಯನ್ನು ರಕ್ತಪ್ರವಾಹದ ನದಿಯನ್ನಾಗಿಸಿದನು. ಆಗ ಪಾರ್ಥನ ಧನುಸ್ಸಿನಿಂದ ಹೊರಟ ಶರಗಳಿಂದ ರಥಿಗಳು ಹತರಾಗಿ ಉರುಳಿದರು. ಕಡಿವಾಣಗಳಿಂದ ಮುಕ್ತ ಕುದುರೆಗಳು ಅಲ್ಲಿಂದಿಲ್ಲಿಗೆ ಓಡತೊಡಗಿದವು. ಪಾರ್ಥನ ಆ ಕರ್ಮವನ್ನು ನೋಡಿ ದ್ರೌಣಿಯು ಕೃಷ್ಣನನ್ನು ನಿಶಿತ ಶರಗಳಿಂದ ಮುಚ್ಚಿಬಿಟ್ಟನು. ಅನಂತರ ದ್ರೌಣಿಯು ಪತ್ರಿಗಳನ್ನು ಹೂಡಿ ಅರ್ಜುನನ ಎದೆಗೆ ಗುರಿಯಿಟ್ಟು ಹೊಡೆಯತೊಡಗಿದನು. ಆ ದ್ರೋಣಪುತ್ರನಿಂದ ಅತಿಯಾಗಿ ಪ್ರಹರಿಸಲ್ಪಟ್ಟ ಅರ್ಜುನನು ಘೋರ ಪರಿಘವನ್ನು

ತೆಗೆದುಕೊಂಡು ಅದನ್ನು ದ್ರೌಣಿಯ ಮೇಲೆ ಎಸೆದನು. ತನ್ನ ಮೇಲೆ ಬೀಳಲು ಬರುತ್ತಿದ್ದ ಆ ಸುವರ್ಣವಿಭೂಷಿತ ಪರಿಘವನ್ನು ದ್ರೌಣಿಯು ಒಮ್ಮೆಲೇ ತುಂಡರಿಸನು. ಆಗ ಜನರು ಕೂಗಿಕೊಂಡರು. ಭಾರದ್ವಾಜನ ಸಾಯಕಗಳಿಂದ ಅನೇಕ ಚೂರುಗಳಾದ ಆ ಪರಿಘವು ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಪರ್ವತವು ತುಂಡಾಗಿ ಬೀಳುವಂತೆ ಭೂಮಿಯ ಮೇಲೆ ಬಿದ್ದಿತು.

ಆಗ ಅರ್ಜುನನು ಹತ್ತು ಶರಗಳಿಂದ ದ್ರೌಣಿಯನ್ನು ಹೊಡೆದು ಭಲ್ಲದಿಂದ ಅವನ ಸಾರಥಿಯನ್ನು ರಥನೀಡದಿಂದ ಅಪಹರಿಸಿದನು. ದ್ರೌಣಿಯಾದರೋ ಸ್ವಯಂ ತಾನೇ ಕುದುರೆಗಳನ್ನು ಹಿಡಿದು ನಡೆಸುತ್ತಾ ಕೃಷ್ಣರಿಬ್ಬರನ್ನೂ ಶರಗಳಿಂದ ಮುಚ್ಚಿದನು. ಅಲ್ಲಿ ದ್ರೌಣಿಯ ಅದ್ಭುತ ಪರಾಕ್ರಮವು ಕಂಡಿತು. ಅಶ್ವತ್ಥಾಮನು ಇತ್ತ ನಾಲ್ಕು ಕುದುರೆಗಳನ್ನೂ ನಿಯಂತ್ರಿಸುತ್ತಿದ್ದನು ಮತ್ತು ಅತ್ತ ಫಲ್ಗುನನ್ನೂ ಆಕ್ರಮಣಿಸುತ್ತಿದ್ದನು. ಅದರಿಂದಾಗಿ ಸಮರದಲ್ಲಿದ್ದ ಸರ್ವ ಯೋಧರೂ ಅವನನ್ನು ಪ್ರಶಂಸಿಸಿದರು. ರಣದಲ್ಲಿ ದ್ರೋಣಪುತ್ರನು ಫಲ್ಗುನನನ್ನು ಮೀರಿಸುವಂತಿರುವಾಗ ಅರ್ಜುನನು ಕ್ಷುರಪ್ರದಿಂದ ರಥದ ಕುದುರೆಗಳ ಕಡಿವಾಣಗಳನ್ನು ಕತ್ತರಿಸಿದನು. ಶರವೇಗದಿಂದ ಬಾಧಿತರಾದ ಆ ಕುದುರೆಗಳು ಓಡಿಹೋದವು. ಆಗ ಕೌರವ ಸೈನ್ಯದಲ್ಲಿ ಪುನಃ

ನಿನಾದಗಳಾದವು. ಪಾಂಡವರಾದರೋ ಜಯವನ್ನು ಪಡೆದು ಎಲ್ಲಕಡೆ ನಿಶಿತ ಬಾಣಗಳನ್ನು ಎರಚುತ್ತಾ ಕೌರವ ಸೇನೆಯನ್ನು ಆಕ್ರಮಣಿಸಿದರು. ಧಾರ್ತರಾಷ್ಟ್ರರ ಮಹಾಸೇನೆಯನ್ನು ವಿಜಯೋಲ್ಲಾಸೀ ಪಾಂಡವ ವೀರರು ಪುನಃ ಸದೆಬಡಿಯುತ್ತಿದ್ದರು. ಸಂಗ್ರಾಮದಲ್ಲಿ ಎಲ್ಲ ಕಡೆಗಳಿಂದ ಪ್ರಹರಿಸಲ್ಪಡುತ್ತಿದ್ದ ಮಹಾಸೇನೆಯು ತಡೆದರೂ ನಿಲ್ಲಲಿಲ್ಲ. ಯೋಧರು ಎಲ್ಲಕಡೆ ಪಲಾಯನ ಮಾಡುತ್ತಿರಲು ಕೌರವ ಮಹಾಸೇನೆಯಲ್ಲಿ ಭೀತಿ ವ್ಯಾಕುಲಗಳುಂಟಾದವು. ಮಹಾತ್ಮರಿಂದ ವಧಿಸಲ್ಪಡುತ್ತಿರುವ ಆ ಸೇನೆಯು ಸೂತಪುತ್ರನು ಸತತವೂ “ನಿಲ್ಲಿ! ನಿಲ್ಲಿ!” ಎಂದು ಕೂಗಿಕೊಳ್ಳುತ್ತಿದ್ದರೂ ನಿಲ್ಲಲಿಲ್ಲ. ಧಾರ್ತರಾಷ್ಟ್ರರ ಸೇನೆಯು ಎಲ್ಲಕಡೆ ಓಡಿಹೋಗುತ್ತಿರುವುದನ್ನು ನೋಡಿ ವಿಜಯೋತ್ಸಾಹೀ ಪಾಂಡವರು ಜೋರಾಗಿ ಸಿಂಹನಾದಗೈದರು.

ಆಗ ದುರ್ಯೋಧನನು ಕರ್ಣನಿಗೆ ಪ್ರೀತಿಪೂರ್ವಕವಾಗಿ ಇಂತೆಂದನು:

> “ಕರ್ಣ! ಪಾಂಡವರಿಂದ ತುಂಬಾ ಪೀಡೆಗೊಳಗಾದ ನಮ್ಮ ಸೇನೆಯನ್ನು ನೋಡು! ನೀನು ಯುದ್ಧದಲ್ಲಿರುವಾಗಲೇ ಅವರು ಭಯಗೊಂಡು ಎಲ್ಲಕಡೆ ಪಲಾಯನಮಾಡುತ್ತಿದ್ದಾರೆ! ಮಹಾಬಾಹೋ! ಇದನ್ನು ತಿಳಿದು ಮಾಡಬೇಕಾದುದನ್ನು ಮಾಡು! ಸಮರದಲ್ಲಿ ಪಾಂಡವರಿಂದ ಓಡಿಸಲ್ಪಡುತ್ತಿರುವ ಆ

ಸಹಸ್ರಾರು ಯೋಧರು ನಿನ್ನನ್ನೇ ಕೂಗಿ ಕರೆಯುತ್ತಿದ್ದಾರೆ!"

ದುರ್ಯೋಧನನ ಆ ಮಹಾ ಮಾತನ್ನು ಕೇಳಿದ ಸೂತನಂದನನು ಮದ್ರರಾಜನಿಗೆ ಈ ಮಾತನ್ನಾಡಿದನು:

"ಜನೇಶ್ವರ! ನನ್ನ ಈ ಭುಜಗಳ ಮತ್ತು ಅಸ್ತ್ರಗಳ ವೀರ್ಯವನ್ನು ನೋಡು! ಇಂದು ರಣದಲ್ಲಿ ಪಾಂಡವರ ಸಹಿತ ಎಲ್ಲ ಪಾಂಚಾಲರನ್ನು ಸಂಹರಿಸುತ್ತೇನೆ! ಮಂಗಳಮಯ ಮನಸ್ಸಿನಿಂದ ಕುದುರೆಗಳನ್ನು ಓಡಿಸು!"

ಕರ್ಣನ ಯುದ್ಧ

ಹೀಗೆ ಹೇಳಿ ವೀರ ಸೂತಪುತ್ರನು ಪುರಾತನ ಶ್ರೇಷ್ಠ ಧನುಸ್ಸು ವಿಜಯವನ್ನು ಹಿಡಿದುಕೊಂಡನು. ಅದನ್ನು ಹೆದೆಯೇರಿಸಿ ಬಾರಿ ಬಾರಿಗೂ ಶಿಂಜಿನಿಯನ್ನು ತೀಡುತ್ತಾ ಸತ್ಯ ಶಪಥಗಳಿಂದ ತನ್ನಕಡೆಯ ಯೋಧರನ್ನು ತಡೆದನು. ಮಹಾಬಲ ಅಮೇಯಾತ್ಮ ಕರ್ಣನು ಭಾರ್ಗವಾಸ್ತ್ರವನ್ನು ಪ್ರಕಟಿಸಿದನು. ಆಗ ಸಹಸ್ರಾರು ಲಕ್ಷೋಪಲಕ್ಷ, ಕೋಟ್ಯಾನುಕೋಟಿ ತೀಕ್ಷ್ಣ ಶರಗಳು ಹೊರಬಂದವು. ಪ್ರಜ್ವಲಿಸುತ್ತಿದ್ದ ಆ ಮಹಾಘೋರ ಕಂಕಬರ್ಹಿಣವಾಜಿಗಳು ಪಾಂಡವೀ ಸೇನೆಯನ್ನು ಮುಸುಕಿ ಏನೂ ತಿಳಿಯದಂತಾಯಿತು. ಬಲವತ್ತಾದ ಭಾರ್ಗವಾಸ್ತ್ರದಿಂದ ಪೀಡಿತ ಪಾಂಚಾಲರಲ್ಲಿ ಮಹಾ

ಹಾಹಾಕಾರವುಂಟಾಯಿತು. ಸಹಸ್ರಾರು ಸಂಖ್ಯೆಗಳಲ್ಲಿ ಆನೆಗಳೂ, ಮನುಷ್ಯರೂ, ರಥಗಳೂ, ಕುದುರೆಗಳೂ ಎಲ್ಲ ಕಡೆ ಬೀಳತೊಡಗಿದವು. ಹತರಾಗಿ ಬೀಳುತ್ತಿದ್ದವರಿಂದ ಭೂಮಿಯೇ ನಡುಗಿತು. ಪಾಂಡವರ ಮಹಾಸೇನೆಯಲ್ಲಿ ಎಲ್ಲರೂ ವ್ಯಾಕುಲಗೊಂಡರು. ಪರಂತಪ ಕರ್ಣನೊಬ್ಬನೇ ಹೊಗೆಯಿಲ್ಲದ ಪಾವಕನಂತೆ ಶತ್ರುಗಳನ್ನು ದಹಿಸುತ್ತಾ ಶೋಭಿಸಿದನು. ಕರ್ಣನಿಂದ ವಧಿಸಲ್ಪಡುತ್ತಿದ್ದ ಚೇದಿಗಳೊಡನೆ ಆ ಪಾಂಚಾಲರು ಕಾಡ್ಗಿಚ್ಚಿನಲ್ಲಿ ಆನೆಗಳು ಮುದುಡಿ ಬೀಳುವಂತೆ ಬೀಳುತ್ತಿದ್ದರು. ಆ ನರೋತ್ತಮರು ವ್ಯಾಘ್ರಗಳಂತೆ ಚೀತ್ಕರಿಸುತ್ತಿದ್ದರು. ರಣಮೂರ್ಧನಿಯಲ್ಲಿ ಭಯಗೊಂಡು ದಿಕ್ಕುದಿಕ್ಕುಗಳಲ್ಲಿ ಓಡುತ್ತಿದ್ದ ಅವರ ಭಯದ ಕೂಗುಗಳು ಪ್ರಳಯಕಾಲದಲ್ಲಿ ಪ್ರಾಣಿಗಳ ಆರ್ತನಾದದಂತೆ ಜೋರಾಗಿ ಕೇಳಿಬರುತ್ತಿತ್ತು. ಸೂತಪುತ್ರನಿಂದ ವಧಿಸಲ್ಪಡುತ್ತಿರುವ ಅವರನ್ನು ನೋಡಿ ಸಮಸ್ತ ಪ್ರಾಣಿಗಳೂ, ಪಶುಪಕ್ಷಿಗಳೂ ಭಯಗೊಂಡವು. ಸೂತಪುತ್ರನಿಂದ ವಧಿಸಲ್ಪಡುತ್ತಿರುವ ಸೃಂಜಯರು ಪ್ರೇತರಾಜನ ಪಟ್ಟಣಕ್ಕೆ ಹೋಗಿ ವಿಚೇತಸರಾಗಿ ಪ್ರೇತರಾಜನನ್ನು ಕೂಗಿಕೊಳ್ಳುವಂತೆ ಅರ್ಜುನ-ವಾಸುದೇವರನ್ನು ಪುನಃ ಪುನಃ ಕೂಗಿ ಕರೆಯುತ್ತಿದ್ದರು.

ಭಯವನ್ನುಂಟುಮಾಡಿದ ಆ ಮಹಾಘೋರ ಭಾರ್ಗವಾಸ್ತ್ರವನ್ನು

ನೋಡಿ ಕುಂತೀಪುತ್ರ ಧನಂಜಯನು ವಾಸುದೇವನಿಗೆ ಇಂತೆಂದನು:

> “ಕೃಷ್ಣ! ಭಾರ್ಗವಾಸ್ತ್ರದ ವಿಕ್ರಮವನ್ನು ನೋಡು! ಸಮರದಲ್ಲಿ ಈ ಮಹಾಸ್ತ್ರವನ್ನು ಉಪಶಮನಗೊಳಿಸಲು ಯಾರಿಗೂ ಸಾಧ್ಯವಿಲ್ಲ! ಮಹಾರಣದಲ್ಲಿ ಸಂರಬ್ಧನಾಗಿ ದಾರುಣ ಕರ್ಮವನ್ನೆಸಗುತ್ತಿರುವ ಅಂತಕಪ್ರತಿಮ ವೀರ ಸೂತಪುತ್ರನನ್ನು ನೋಡು! ಕುದುರೆಗಳನ್ನು ತೀಕ್ಷ್ಣವಾಗಿ ಪ್ರಚೋದಿಸುತ್ತಾ ಅವನು ನನ್ನನ್ನೇ ಪುನಃ ಪುನಃ ನೋಡುತ್ತಿದ್ದಾನೆ. ಸಮರದಲ್ಲಿ ಕರ್ಣನನ್ನು ಪಲಾಯನಗೊಳಿಸುವವನನ್ನು ನಾನು ಕಾಣೆ! ಪುರುಷನು ಜೀವಿಸಿದ್ದರೆ ಯುದ್ಧದಲ್ಲಿ ಜಯವನ್ನೋ ಪರಾಜಯವನ್ನೋ ಪಡೆಯುತ್ತಾನೆ. ಆದರೆ ಗೆದ್ದವನ ವಧೆಯಾದರೆ ಜಯವು ಎಲ್ಲಿಂದ?”

## ರಣರಂಗದಲ್ಲಿ ಯುಧಿಷ್ಠಿರನನ್ನು ಕಾಣದೇ ಕೃಷ್ಣಾರ್ಜುನರು ಅವನನ್ನು ಕಾಣಲು ಶಿಬಿರಕ್ಕೆ ತೆರಳಿದುದು

ಆಗ ಜನಾರ್ದನನು ಯುಧಿಷ್ಠಿರನನ್ನು ನೋಡಲು ಇಚ್ಛಿಸಿ, ಕರ್ಣನನ್ನು ಇತರರೊಂದಿಗೆ ಯುದ್ಧಮಾಡಲು ಬಿಟ್ಟು ಅಲ್ಲಿಂದ ರಥವನ್ನು ಓಡಿಸಿದನು. ಕೃಷ್ಣನು ಅರ್ಜುನನಿಗೆ ಹೇಳಿದನು:

“ರಾಜಾ ಯುಧಿಷ್ಠಿರನು ಕ್ಷತವಿಕ್ಷತನಾಗಿದ್ದಾನೆ. ಅವನನ್ನು ಸಮಾಧಾನಗೊಳಿಸಿದ ನಂತರ ನೀನು ಕರ್ಣನನ್ನು ವಧಿಸುವೆಯಂತೆ!”

ಆಗ ಕೇಶವನ ಆಜ್ಞೆಯಂತೆ ಸಂಗ್ರಾಮವನ್ನು ಬಿಟ್ಟು ಬಾಣಪೀಡಿತ ರಾಜ ಯುಧಿಷ್ಠಿರನನ್ನು ಕಾಣಲು ಬೇಗನೆ ರಥದಲ್ಲಿ ಕುಳಿತು ಹೋದನು.

ಧರ್ಮರಾಜನನ್ನು ನೋಡಲು ಹೊರಟ ಅರ್ಜುನನು ಸೈನ್ಯದಲ್ಲಿ ಹುಡುಕಲು ಅಲ್ಲಿ ತನ್ನ ಅಗ್ರಜನನ್ನು ಕಾಣಲಿಲ್ಲ. ದ್ರೌಣಿಯನ್ನು ಪರಾಜಯಗೊಳಿಸುವ ಆ ಮಹಾ ದುಷ್ಕರ ಆರ್ಯಕರ್ಮವನ್ನೆಸಗಿದ ನಂತರ ಧನಂಜಯನು ತನ್ನ ಸೇನೆಯನ್ನು ಅವಲೋಕಿಸಿದನು. ಸವ್ಯಸಾಚಿಯು ಸೇನೆಯ ಅಗ್ರಭಾಗದಲ್ಲಿ ಯುದ್ಧಮಾಡುತ್ತಿದ್ದ ಶೂರರನ್ನು ಪ್ರಶಂಸೆಮಾಡಿ ಹರ್ಷಗೊಳಿಸುತ್ತಾ ಸೇನೆಯ ಹಿಂದಿರುವವರನ್ನೂ ಪ್ರಶಂಸಿಸುತ್ತಾ ಅವರೆಲ್ಲರನ್ನೂ ರಥಾನೀಕದಲ್ಲಿ ಸ್ಥಿರರಾಗಿ ನಿಲ್ಲುವಂತೆ ಪ್ರಚೋದಿಸಿದನು. ಬೀಮನನ್ನು ನೋಡಿ ಅರ್ಜುನನು ಬೇಗನೆ ಅವನ ಬಳಿಸಾರಿ ಯುಧಿಷ್ಠಿರನ ವೃತ್ತಾಂತವನ್ನು ತಿಳಿಯಲು ರಾಜನೆಲ್ಲಿ ಎಂದು ಕೇಳಿದನು. ಆಗ ಭೀಮನು ಹೇಳಿದನು:

“ಕರ್ಣನ ಬಾಣಗಳಿಂದ ಗಾಯಗೊಂಡಿರುವ ಯುಧಿಷ್ಠಿರನು ಇಲ್ಲಿಂದ ಹೊರಟುಹೋಗಿದ್ದಾನೆ. ಹೇಗೋ ಅವನಿನ್ನೂ

ಜೀವಿಸಿರಬಹುದು!”

ಅರ್ಜುನನು ಹೇಳಿದನು:

“ಇಲ್ಲಿಂದ ನೀನು ಶೀಘ್ರವಾಗಿ ಹೋಗಿ ಕುರುಸತ್ತಮ ರಾಜನ ಸಮಾಚಾರವನ್ನು ತಿಳಿದುಕೋ! ಕರ್ಣನ ಬಾಣಗಳಿಂದ ಅತಿಯಾಗಿ ಗಾಯಗೊಂಡಿರುವ ರಾಜನು ಶಿಬಿರಕ್ಕೆ ಹೋಗಿರಬಹುದು! ರಾತ್ರಿಯುದ್ಧದಲ್ಲಿ ಕೂಡ ಆ ತರಸ್ವಿಯು ದ್ರೋಣನ ಪ್ರಹಾರಗಳಿಂದ ಅತಿಯಾಗಿ ಗಾಯಗೊಂಡಿದ್ದನು. ಆದರೆ ಜಯವನ್ನು ಪ್ರತೀಕ್ಷಿಸುತ್ತಿದ್ದ ಅವನು ದ್ರೋಣನು ಹತನಾಗುವವರೆಗೂ ರಣದಲ್ಲಿಯೇ ನಿಂತಿದ್ದನು. ಆದರೆ ಇಂದು ಕರ್ಣನಿಂದ ಪೀಡಿತನಾದ ಪಾಂಡವಾಗ್ರ್ಯನು ಶಿಬಿರಕ್ಕೆ ಹೊರಟುಹೋಗಿದ್ದಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಭೀಮ! ಇಂದು ಅವನ ಬಗ್ಗೆ ತಿಳಿಯಲು ನೀನು ಹೊರಟುಹೋಗು. ನಾನು ಶತ್ರುಗಣಗಳನ್ನು ವಿರೋಧಿಸಿ ಇಲ್ಲಿಯೇ ನಿಲ್ಲುತ್ತೇನೆ!”

ಭೀಮನು ಹೇಳಿದನು:

“ಮಹಾನುಭಾವ! ನೀನೇ ಹೋಗಿ ಭರತರ್ಷಭ ರಾಜನ ವಿಚಾರವನ್ನು ತಿಳಿದುಕೊಂಡು ಬಾ! ಅರ್ಜುನ! ಒಂದುವೇಳೆ ನಾನೇ ಅಲ್ಲಿಗೆ ಹೋದರೆ ಯುದ್ಧ ಪ್ರವೀರರು ಭಯದಿಂದ

ನಾನು ಹೊರಟುಹೋದನೆಂದು ಮಾತನಾಡಿಕೊಳ್ಳುತ್ತಾರೆ!”

ಆಗ ಅರ್ಜುನನು ಭೀಮಸೇನನಿಗೆ ಇಂತೆಂದನು:

“ಸಂಶಪ್ತಕರು ನನ್ನ ಎದುರಾಗಿ ನಿಂತಿದ್ದಾರೆ. ಇವರನ್ನು ಸಂಹರಿಸದೇ ಶತ್ರುಸೇನೆಗಳನ್ನು ಬಿಟ್ಟು ಇಲ್ಲಿಂದ ಹೋಗಲು ನನಗೆ ಶಕ್ಯವಾಗುತ್ತಿಲ್ಲ!”

ಆಗ ತನ್ನ ವೀರ್ಯವನ್ನೇ ಆಶ್ರಯಿಸಿದ್ದ ಭೀಮಸೇನನು ಅರ್ಜುನನಿಗೆ ಹೇಳಿದನು:

“ಧನಂಜಯ! ಯುದ್ಧದಲ್ಲಿ ಸಂಶಪ್ತಕರೊಡನೆ ನಾನು ಹೋರಾಡುತ್ತೇನೆ. ಸರ್ವರನ್ನೂ ನಾನು ಸಂಹರಿಸುತ್ತೇನೆ. ನೀನು ಹೋಗು!”

ಶತ್ರುಗಳ ಮಧ್ಯದಲ್ಲಿ ಅಣ್ಣ ಭೀಮಸೇನನ ಆ ಸುದುಷ್ಕರ ಮಾತನ್ನು ಆಲಿಸಿ ಅರ್ಜುನನು ಕುರುಶ್ರೇಷ್ಠ ಯುಧಿಷ್ಠಿರನನ್ನು ನೋಡಲು ಮುಂದೆ ಹೋಗುತ್ತಾ ಕೃಷ್ಣನಿಗೆ ಇಂತೆಂದನು:

“ಕೇಶವ! ಸಮುದ್ರರೂಪದ ಈ ರಣವನ್ನು ದಾಟಿ ಕುದುರೆಗಳನ್ನು ಓಡಿಸು! ಅಜಾತಶತ್ರು ರಾಜನನ್ನು ನೋಡಲು ಬಯಸುತ್ತೇನೆ!”

ಆಗ ಸರ್ವದಾಶಾರ್ಹರ ಪ್ರಮುಖ ಕೇಶವನು ಕುದುರೆಗಳನ್ನು ಓಡಿಸುತ್ತಾ ಭೀಮನಿಗೆ ಇಂತೆಂದನು:

> “ಭೀಮ! ನಿನ್ನ ಕರ್ಮದಲ್ಲಿ ಆಶ್ಚರ್ಯವೇನೂ ಇಲ್ಲ.
> ಅರಿಸಂಘಗಳನ್ನು ನೀನು ಸಂಹರಿಸಲು ಶಕ್ತನಾಗಿರುವೆ!”

ಆಗ ಗರುಡನಂತಿರುವ ಕುದುರೆಗಳ ಮೂಲಕ ಶೀಘ್ರಾತಿಶೀಘ್ರವಾಗಿ ಯುಧಿಷ್ಠಿರನಿರುವಲ್ಲಿಗೆ ಹೃಷೀಕೇಶ ಮತ್ತು ಅರ್ಜುನರು ಬಂದರು. ಅವರು ಶತ್ರುಸೇನೆಗಳನ್ನು ಎದುರಿಸಲು ಭೀಮನನ್ನಿರಿಸಿ ವೃಕೋದರನಿಗೆ ಯುದ್ಧದ ಕುರಿತಾಗಿ ಸಲಹೆಗಳನ್ನೂ ನೀಡಿದ್ದರು.

# ಕರ್ಣನ ಕುರಿತಾಗಿ ಯುಧಿಷ್ಠಿರ-ಅರ್ಜುನರಲ್ಲಿ ಮನಸ್ತಾಪ; ಕೃಷ್ಣನು ಅವರನ್ನು ಸಮಾಧಾನಪಡಿಸಿದುದು

ಆಗ ಆ ಇಬ್ಬರು ಪುರುಷಪ್ರವೀರರೂ ಹೊರಟು ಒಬ್ಬನೇ ಮಲಗಿದ್ದ ಯುಧಿಷ್ಠಿರನನ್ನು ತಲುಪಿ ರಥದಿಂದ ಕೆಳಕ್ಕಿಳಿದು ಧರ್ಮರಾಜನ ಪಾದಗಳಿಗೆ ವಂದಿಸಿದರು. ಅಶ್ವಿನೀ ದೇವತೆಗಳು ವಾಸವನನ್ನು

ಹೇಗೋ ಹಾಗೆ ಅಭಿನಂದಿಸಿದ ಆ ಇಬ್ಬರು ಪುರುಷವ್ಯಾಘ್ರ ಕುಶಲಿ ಕೃಷ್ಣಾರ್ಜುನರನ್ನು ನೋಡಿ ಯುಧಿಷ್ಠಿರನು ವಿವಸ್ವತನು ಅಶ್ವಿನೀ ದೇವತೆಗಳನ್ನು ಹೇಗೋ ಹಾಗೆ ಮತ್ತು ಮಹಾಸುರ ಜಂಭನು ಹತನಾಗಲು ಗುರು ಬೃಹಸ್ಪತಿಯು ಶಕ್ರ-ವಿಷ್ಣು ಇಬ್ಬರನ್ನೂ ಹೇಗೋ ಹಾಗೆ ಸಂತೋಷದಿಂದ ಅಭಿನಂದಿಸಿದನು. ಆ ಮಹಾಸತ್ತ್ವ ಕೇಶವ-ಅರ್ಜುನರನ್ನು ಒಟ್ಟಿಗೇ ನೋಡಿ ಯುಧಿಷ್ಠಿರನು ಗಾಂಡೀವಧನ್ವಿಯಿಂದ ಆಧಿರಥಿಯು ಯುದ್ಧದಲ್ಲಿ ಹತನಾದನೆಂದು ಭಾವಿಸಿ, ಮುಗುಳ್ನಗುತ್ತಾ ಅತ್ಯಂತ ಸಾಂತ್ವನಪೂರ್ವಕ ಮಧುರ ಮಾತುಗಳಿಂದ ಅವರಿಬ್ಬರನ್ನೂ ಅಭಿನಂದಿಸಿದನು. ಯುಧಿಷ್ಠಿರನು ಹೇಳಿದನು:

> “ಸ್ವಾಗತ ದೇವಕೀಪುತ್ರ! ಧನಂಜಯ! ನಿನಗೆ ಸ್ವಾಗತ! ಯುವಕರಾದ ಅಚ್ಯುತ-ಅರ್ಜುನರನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ಗಾಯಗಳನ್ನು ಹೊಂದದೇ ಕುಶಲವಾಗಿದ್ದುಕೊಂಡೇ ಯುದ್ಧದಲ್ಲಿ ಸರ್ವಶಸ್ತ್ರವಿಶಾರದನಾದ, ಸರ್ಪದ ವಿಷಕ್ಕೆ ಸಮಾನನಾದ ಆ ಮಹಾರಥನೊಡನೆ ಹೇಗೆ ಯುದ್ಧಮಾಡಿದಿರಿ? ಧಾರ್ತರಾಷ್ಟ್ರರ ನಾಯಕನಾಗಿದ್ದ, ಎಲ್ಲರ ಸಲಹೆಗಾರ ಮತ್ತು ರಕ್ಷಕನಾಗಿದ್ದ, ಧನ್ವಿಗಳಾದ ವೃಷಸೇನ ಮತ್ತು ಸುಷೇಣರಿಂದ ರಕ್ಷಿಸಲ್ಪಡುತ್ತಿದ್ದ, ಅನುಜ್ಞಾತ, ಮಹಾವೀರ್ಯ, ಅಸ್ತ್ರಗಳಲ್ಲಿ



ಪರಿಣಿತ, ದುರ್ಜಯ, ಧಾರ್ತರಾಷ್ಟ್ರರ ತ್ರಾತಾರ, ಅವರ ಸೇನೆಗಳನ್ನು ನಡೆಸುವ, ಅರಿಸೈನ್ಯಗಳನ್ನು ಸಂಹರಿಸುವ, ಅಮಿತ್ರರ ಗಣಗಳನ್ನು ಮರ್ದಿಸುವ, ದುರ್ಯೋಧನನ ಹಿತದಲ್ಲಿಯೇ ನಿರತನಾಗಿರುವ, ನಮ್ಮೊಡನೆ ಯುದ್ಧಮಾಡುವಂತೆ ಪ್ರಚೋದಿಸಿದ, ಮಹಾಯುದ್ಧದಲ್ಲಿ ವಾಸವನೊಡನೆ ದೇವತೆಗಳಿಗೂ ಗೆಲ್ಲಲಸಾಧ್ಯನಾದ, ತೇಜಸ್ಸು ಮತ್ತು ಬಲಗಳಲ್ಲಿ ಅಗ್ನಿ-ವಾಯುವಿನ ಸಮಾನನಾದ, ಪಾತಾಲದಂತೆ ಗಂಭೀರನಾದ, ಸುಹೃದಯರ ಆನಂದವನ್ನು ವರ್ಧಿಸುವ, ಅಮಿತ್ರರರಿಗೆ ಅಂತಕನಂತೆ ತೋರುವ ಕರ್ಣನನ್ನು ಸಂಹರಿಸಿ ನೀವು ಅದೃಷ್ಟವಶಾತ್ ಅಸುರರನ್ನು ಗೆದ್ದ ಅಮರರಂತೆ ಯೌವನವನ್ನು ಗಳಿಸಿರುವಿರಿ! ಅಚ್ಯುತಾರ್ಜುನರೇ! ಎಲ್ಲ ಪ್ರಜೆಗಳನ್ನೂ ಕೊಲ್ಲಲು ಬಯಸಿದ ಕುಪಿತ ಅಂತಕನಂತಿರುವ ಅವನೊಡನೆ ನಾನು ಇಂದು ಧೈರ್ಯಗೆಡದೇ ಯುದ್ಧಮಾಡಿದೆನು. ಯುಯುಧಾನ, ಧೃಷ್ಟದ್ಯುಮ್ನ, ಯಮಳರು, ವೀರ ಶಿಖಂಡಿ ಮತ್ತು ಐವರು ದ್ರೌಪದೇಯರು ಮತ್ತು ಪಾಂಚಾಲರು ಎಲ್ಲಕಡೆಗಳಿಂದಲೂ ನೋಡುತ್ತಿರಲು ಅವನು ನನ್ನ ಧ್ವಜವನ್ನು ಕತ್ತರಿಸಿ ಇಬ್ಬರು ಪಾರ್ಷ್ಣಿಸಾರಥಿಗಳನ್ನೂ ಸಂಹರಿಸಿದನು ಆ ಮಹಾಬಾಹುವು

ಶತ್ರುಗಣಗಳ ಅನೇಕ ಮಹಾವೀರ್ಯರನ್ನು ಗೆದ್ದು ನನ್ನನ್ನೂ ಗೆದ್ದನು. ಯುದ್ಧದಲ್ಲಿ ನನ್ನನ್ನು ಅನುಸರಿಸಿ ಬಂದು ನನಗೆ ಕಠೋರವಾದ ಅನೇಕ ಮಾತುಗಳನ್ನು ಕೂಡ ಆಡಿದನು. ಅಲ್ಲಿ ಆ ಯೋಧಶ್ರೇಷ್ಠನು ಹೇಳಿದುದನ್ನು ನಾನಿನ್ನೂ ಮರೆತಿಲ್ಲ. ಅದರಲ್ಲಿ ಸಂಶಯವೇ ಇಲ್ಲ! ಭೀಮಸೇನನ ಪ್ರಭಾವದಿಂದಾಗಿ ನಾನು ಜೀವಿಸುತ್ತಿದ್ದೇನೆ! ಇದರಲ್ಲಿ ಹೆಚ್ಚು ಹೇಳುವುದಾದರೂ ಏನಿದೆ? ನನಗೆ ಅದನ್ನು ಸಹಿಸಿಕೊಳ್ಳಲು ಖಂಡಿತವಾಗಿಯೂ ಸಾಧ್ಯವಾಗಲಿಲ್ಲ! ಅವನ ಭೀತಿಯಲ್ಲಿಯೇ ನಾನು ಹದಿಮೂರು ವರ್ಷಗಳನ್ನು ಕಳೆದಿದ್ದೇನೆ. ರಾತ್ರಿ ನನಗೆ ನಿದ್ದೆಯೂ ಬರಲಿಲ್ಲ; ಹಗಲಲ್ಲಿ ಯಾವುದೇ ರೀತಿಯ ಸುಖವೂ ದೊರೆಯಲಿಲ್ಲ! ಅವನ ದ್ವೇಷದಿಂದ ಪರಿತಪಿಸುತ್ತಿದ್ದ ನಾನು ನನ್ನ ಅವಸಾನವು ಸಮೀಪಿಸಿತೆಂದು ತಿಳಿದು ವಾದ್ರೀಣಸವೆಂಬ ಪ್ರಾಣಿಯಂತೆ ಪಲಾಯನಗೈದೆನು! ಯುದ್ಧದಲ್ಲಿ ಕರ್ಣನನ್ನು ನಾನು ಹೇಗೆ ಸಂಹರಿಸಬಲ್ಲೆ ಎಂದು ಚಿಂತಿಸುತ್ತಲೇ ಬಹಳ ಕಾಲವು ಕಳೆದುಹೋಯಿತು! ಜಾಗ್ರತನಾಗಿರುವಾಗ ಮತ್ತು ಸ್ವಪ್ನದಲ್ಲಿ ಕೂಡ ಕೇವಲ ಕರ್ಣನನ್ನೇ ನಾನು ಸದಾ ಕಾಣುತ್ತಿದ್ದೆ. ಈ ಜಗತ್ತೆಲ್ಲವೂ ಕರ್ಣಮಯವಾಗಿರುವಂತೆ ಕಾಣುತ್ತಿತ್ತು! ಕರ್ಣನ ಭಯದಿಂದ ಎಲ್ಲೆಲ್ಲಿ ಹೋಗುತ್ತಿದ್ದೆನೋ

ಆಲ್ಲಲ್ಲಿ ಕರ್ಣನೇ ಎದುರು ನಿಂತಿರುವಂತೆ ಕಾಣುತ್ತಿದ್ದೆನು. ಸಮರದಲ್ಲಿ ಪಲಾಯನಮಾಡದಿರುವ ಆ ವೀರನೇ ನನ್ನ ಕುದುರೆಗಳು ಮತ್ತು ರಥಗಳನ್ನು ಗೆದ್ದು ನನ್ನನ್ನು ಜೀವಸಹಿತನಾಗಿ ವಿಸರ್ಜಿಸಿದ್ದಾನೆ! ಕರ್ಣನಿಂದ ಹೀಗೆ ಧಿಕ್ಕರಿಸಲ್ಪಟ್ಟ ನನಗೆ ಈ ಜೀವದಿಂದ ಮತ್ತೆ ಈ ರಾಜ್ಯದಿಂದ ಅರ್ಥವಾದರೂ ಏನಿದೆ? ಈ ಹಿಂದೆ ಸಂಯುಗದಲ್ಲಿ ನಾನು ಏನನ್ನು ಭೀಷ್ಮ, ಕೃಪ ಮತ್ತು ದ್ರೋಣರಿಂದ ಪಡೆದಿರಲಿಲ್ಲವೋ ಅದನ್ನು ಇಂದು ನಾನು ಯುದ್ಧದಲ್ಲಿ ಸೂತಪುತ್ರನಿಂದ ಪಡೆದಿದ್ದೇನೆ! ಆದುದರಿಂದ ನಾನು ನಿನ್ನನ್ನು ಕೇಳುತ್ತಿದ್ದೇನೆ. ಕುಶಲನಾಗಿದ್ದುಕೊಂಡೇ ನೀನು ಹೇಗೆ ಕರ್ಣನನ್ನು ಸಂಹರಿಸಿದೆ? ಅದನ್ನು ನನಗೆ ಹೇಳು! ಯುದ್ಧದಲ್ಲಿ ಶಕ್ರನ ವೀರ್ಯನ ಸಮನಾಗಿರುವ, ಪರಾಕ್ರಮದಲ್ಲಿ ಯಮನ ಸಮಾನನಾಗಿರುವ, ಹಾಗೆಯೇ ಅಸ್ತ್ರದಲ್ಲಿ ರಾಮನಿಗೆ ಸಮನಾಗಿರುವ ಅವನನ್ನು ನೀನು ಹೇಗೆ ಸಂಹರಿಸಿದೆ? ಮಹಾರಥನೆಂದು ಸಮಾಖ್ಯಾತನಾದ, ಸರ್ವಯುದ್ಧವಿಶಾರದನಾದ, ಧನುರ್ಧಾರಿಗಳಲ್ಲಿ ಶ್ರೇಷ್ಠ, ಎಲ್ಲರ ಏಕಪುರುಷ, ಸದಾ ನಿನಗೋಸ್ಕರವಾಗಿ ಪುತ್ರರೊಡನೆ ಧೃತರಾಷ್ಟ್ರನು ಗೌರವಿಸುತ್ತಿದ್ದ ಆ ರಾಧೇಯನನ್ನು ನೀನು

ಹೇಗೆ ಸಂಹರಿಸಿದೆ? ಧೃತರಾಷ್ಟ್ರನಾದರೋ ರಣದಲ್ಲಿ ನಿನ್ನ ಮೃತ್ಯುವು ಸರ್ವ ಯೋಧರಲ್ಲಿ ಕರ್ಣನೆಂದೇ ಭಾವಿಸಿದ್ದನು. ಯುದ್ಧದಲ್ಲಿ ನೀನು ಅವನನ್ನು ಹೇಗೆ ಸಂಹರಿಸಿದೆ? ನಿನ್ನಿಂದ ಕರ್ಣನು ಹತನಾದುದನ್ನು ನನಗೆ ಹೇಳು! ರುರುವಿನ ಶಿರವನ್ನು ಶಾರ್ದೂಲವು ಅಪಹರಿಸುವಂತೆ ಎಲ್ಲರೂ ನೋಡುತ್ತಿರಲು ನೀನು ಅವನ ಶಿರವನ್ನು ಅಪಹರಿಸಿದುದರ ಕುರಿತು ಹೇಳು! ಸೂತಪುತ್ರನು ಸಮರದಲ್ಲಿ ನಿನ್ನನ್ನು ದಿಕ್ಕು ಉಪದಿಕ್ಕುಗಳಲ್ಲಿ ಹುಡುಕುತ್ತಾ ಸುತಾಡುತ್ತಿದ್ದನು. ಸಮರದಲ್ಲಿ ನಿನ್ನನ್ನು ಹುಡುಕಿಕೊಟ್ಟವನಿಗೆ ಕರ್ಣನು ಆನೆಗಳನ್ನು ಬಹುಮಾನವಾಗಿ ಕೊಡುವವನಿದ್ದನು. ಅವನು ಈಗ ಸುತೀಕ್ಷ್ಣವಾದ ಕಂಕಪತ್ರಗಳಿಂದ ಹತನಾಗಿರುವನಲ್ಲವೇ? ದುರಾತ್ಮ ಸೂತಪುತ್ರನು ರಣದಲ್ಲಿ ನಿನ್ನಿಂದ ನಿಹತನಾಗಿ ಭೂಮಿಯಮೇಲೆ ಮಲಗಿರುವನಲ್ಲವೇ? ರಣದಲ್ಲಿ ಸೂತಪುತ್ರನನ್ನು ಸಂಹರಿಸಿ ನೀನು ಇಂದು ನನಗೆ ಪರಮ ಪ್ರಿಯವಾದುದನ್ನು ಮಾಡಿರುವೆಯಲ್ಲವೇ? ನಿನಗೋಸ್ಕರವಾಗಿ ಎಲ್ಲಕಡೆಗಳಿಂದ ನಮ್ಮ ಮೇಲೆ ಆಕ್ರಮಣಮಾಡುತ್ತಿದ್ದ ಆ ಶೂರಮಾನೀ ಮದಾನ್ವಿತ ಸೂತಪುತ್ರನು ಸಮರದಲ್ಲಿ ಇಂದು ಸೇನಾಸಮೇತನಾಗಿ ನಿನ್ನಿಂದ ಹತನಾದ ತಾನೇ?

ನಿನಗೋಸ್ಕರವಾಗಿ ಅವನು ಇತರರಿಗೆ ಚಿನ್ನ, ರಥ ಮತ್ತು ಶ್ರೇಷ್ಠ ಕುದುರೆಗಳಿಂದ ಯುಕ್ತವಾದ ರಥವನ್ನು ಕೊಡುವವನಿದ್ದನು. ಆ ಪಾಪಿಯು ಸದಾ ರಣದಲ್ಲಿ ನಿನ್ನೊಡನೆ ಸ್ಪರ್ಧಿಸುತ್ತಿದ್ದನು. ಅವನು ಯುದ್ಧದಲ್ಲಿ ನಿನ್ನಿಂದ ಹತನಾದ ತಾನೇ? ನಿತ್ಯವೂ ಶೂರಮದದಿಂದ ಮತ್ತನಾಗಿ, ಸುಯೋಧನನಿಗೆ ಅತಿಪ್ರಿಯವಾದುದನ್ನು ಮಾಡಲೋಸುಗ ಕೌರವರ ಸಂಸದಿಯಲ್ಲಿ ಕೊಚ್ಚಿಕೊಳ್ಳುತ್ತಿದ್ದ ಆ ಪಾಪಿಯನ್ನು ಇಂದು ನೀನು ಸಂಹರಿಸಿದ್ದೀಯೆ ತಾನೇ? ಧನುಸ್ಸಿನಿಂದ ಹೊರಟು ನಿನ್ನಿಂದ ಕಳುಹಿಸಲ್ಪಟ್ಟ ಕೆಂಪುಬಣ್ಣದ ವಿಹಂಗಗಳಿಗೆ ಸಿಲುಕಿ ಆ ಪಾಪಿಯ ಶರೀರವು ಭಗ್ನವಾಗಿ ಮಲಗಿದ್ದಾನೆ ತಾನೇ? ಧಾರ್ತರಾಷ್ಟ್ರನ ಬಾಹುವು ತುಂಡಾಗಿದೆ ತಾನೇ? ರಾಜಮಧ್ಯದಲ್ಲಿ ಸದಾ ದರ್ಪಪೂರ್ಣನಾಗಿ "ನಾನು ಫಲ್ಗುನನನ್ನು ಕೊಲ್ಲುತ್ತೇನೆ!" ಎಂದು ಮೋಹದಿಂದ ಹೊಗಳಿಕೊಂಡು ದುರ್ಯೋಧನನನ್ನು ಹರ್ಷಗೊಳಿಸುತ್ತಿದ್ದ ಆ ಮಹಾರಥನು ಇಂದು ನಿನ್ನಿಂದ ಹತನಾಗಿದ್ದಾನಲ್ಲವೇ? "ಎಲ್ಲಿಯವರೆಗೆ ಪಾರ್ಥನಿರುವನೋ ಅಲ್ಲಿಯವರೆಗೆ ಪಾದಗಳನ್ನು ತೊಳೆಯಿಸಿಕೊಳ್ಳುವುದಿಲ್ಲ!" ಎನ್ನುವುದು ಸರ್ವದಾ ಆ ಅಲ್ಪಬುದ್ಧಿಯ ವ್ರತವಾಗಿತ್ತು. ಆ

ಕರ್ಣನು ಇಂದು ನಿನ್ನಿಂದ ಹತನಾಗಿದ್ದಾನೆ ತಾನೇ? “ಕೃಷ್ಣೇ! ಸುದುರ್ಬಲರಾಗಿರುವ, ಪತಿತರಾಗಿರುವ ಮತ್ತು ಹೀನಸತ್ತ್ವರಾಗಿರುವ ಪಾಂಡವರನ್ನು ನೀನು ಏಕೆ ಪರಿತ್ಯಜಿಸುವುದಿಲ್ಲ?” ಎಂದು ಆ ದುಷ್ಟಬುದ್ಧಿ ಕರ್ಣನು ಕುರುವೀರರ ಮಧ್ಯದಲ್ಲಿ ಸಭೆಯಲ್ಲಿ ಕೃಷ್ಣೆಯನ್ನು ಪ್ರಶ್ನಿಸಿದ್ದನು. “ಕೃಷ್ಣನೊಡನೆ ಪಾರ್ಥನನ್ನು ಸಂಹರಿಸದೇ ನಾನು ಹಿಂದಿರುಗುವುದಿಲ್ಲ!” ಎಂದು ಆ ಪಾಪಬುದ್ಧಿ ಕರ್ಣನು ನಿನಗೋಸ್ಕರವಾಗಿ ಪ್ರತಿಜ್ಞೆಮಾಡಿ ಹೊರಟಿದ್ದನು. ಅವನು ಬಾಣಗಳಿಂದ ಭಗ್ನಶರೀರವುಳ್ಳವನಾಗಿ ಮಲಗಿದ್ದಾನೆ ತಾನೇ? ಸಂಗ್ರಾಮದಲ್ಲಿ ಸೃಂಜಯ-ಕೌರವರ ಸಮಾಗಮದಲ್ಲಿ ನಡೆದುದುದು ನಿನಗೆ ತಿಳಿದಿದೆ ತಾನೇ? ನನ್ನನ್ನು ಈ ದುರವಸ್ಥೆಗೆ ಗುರಿಮಾಡಿದ ಅವನು ನಿನ್ನಿಂದ ಇಂದು ಹತನಾಗಿದ್ದಾನೆ ತಾನೇ? ನಿನ್ನ ಗಾಂಡೀವದಿಂದ ಮುಕ್ತವಾದ ಉರಿಯುತ್ತಿದ್ದ ವಿಶಿಖಗಳು ಆ ಮಂದಬುದ್ಧಿಯ ಕುಂಡಲಗಳೊಂದಿಗೆ ಹೊಳೆಯುತ್ತಿದ್ದ ಶಿರಸ್ಸನ್ನು ಅವನ ಕಾಯದಿಂದ ಕತ್ತರಿಸಿವೆ ತಾನೇ? ಅವನ ಬಾಣಗಳು ನನಗೆ ನಾಟಿದಾಗಲೆಲ್ಲ ಅವನ ವಧೆಗಾಗಿ ನಿನ್ನನ್ನೇ ನಾನು ಸ್ಮರಿಸಿಕೊಳ್ಳುತ್ತಿದ್ದೆ. ಕರ್ಣನನ್ನು ಕೆಳಗುರುಳಿಸಿ ಇಂದು ನೀನು

ನನ್ನ ಆ ಸ್ಮರಣೆಗಳನ್ನು ಸಾರ್ಥಕಮಾಡಿದ್ದೀಯೆ ತಾನೇ? ಕರ್ಣನ ಸಮಾಶ್ರಯದಿಂದಾಗಿ ಸುಯೋಧನನು ನಮ್ಮನ್ನು ದರ್ಪಪೂರ್ಣನಾಗಿ ನೋಡುತ್ತಿದ್ದನು. ಇಂದು ನಿನ್ನ ಪರಾಕ್ರಮದಿಂದ ಸುಯೋಧನನ ಆ ಸಮಾಶ್ರಯವನ್ನು ಭಗ್ನಗೊಳಿಸಿದ್ದೀಯೆ ತಾನೇ? ಹಿಂದೆ ಸಭಾಮಧ್ಯದಲ್ಲಿ ಪಾರ್ಥಿವರ ಸಮಕ್ಷಮದಲ್ಲಿ ಅವನು ನಮ್ಮನ್ನು ಎಣ್ಣೆಯನ್ನು ಕಳೆದುಕೊಂಡ ಎಳ್ಳೆಂದು ಕರೆದಿದ್ದನು. ಆ ದುರ್ಮತಿ ಸೂತಪುತ್ರನು ರಣದಲ್ಲಿ ನಿನ್ನನ್ನು ಎದುರಿಸಿ ನಿನ್ನಿಂದ ಹತನಾದ ತಾನೇ? ಹಿಂದೆ ದುರಾತ್ಮಾ ಸೂತಪುತ್ರನು "ಸೌಬಲನಿಂದ ಗೆಲ್ಲಲ್ಪಟ್ಟ ಯಾಜ್ಞಸೇನಿಯನ್ನು ಸ್ವಯಂ ನೀನೇ ಎಳೆದು ತಾ!" ಎಂದು ದುಃಶಾಸನನಿಗೆ ಹೇಳಿದ್ದನು. ಅವನು ಇಂದು ನಿನ್ನಿಂದ ಹತನಾಗಿದ್ದಾನೆ ತಾನೇ? ಪೃಥ್ವಿಯ ಶಸ್ತ್ರಭೃತರಲ್ಲಿಯೇ ಶ್ರೇಷ್ಠತಮನೆಂದು ತಿಳಿದುಕೊಂಡಿದ್ದ ಆ ಅಲ್ಪಚೇತನನನ್ನು ಪಿತಾಮಹನು ಅರ್ಧರಥನೆಂದು ಎಣಿಸಿದ್ದನು. ಆ ದುರಾತ್ಮ ಆಧಿರಥನು ಇಂದು ನಿನ್ನಿಂದ ಹತನಾಗಿದ್ದಾನೆ ತಾನೇ? ಅವನ ಅವಹೇಳನೆಯೆಂಬ ಗಾಳಿಯಿಂದ ಉರಿಯುತ್ತಿರುವ ಈ ಅಗ್ನಿಯು ಸದಾ ನನ್ನ ಹೃದಯದಲ್ಲಿದೆ. "ಇಂದು ಎದುರಿಸಿ ಆ ಪಾಪಿಯು ನನ್ನಿಂದ

ಹತನಾದನು!” ಎಂದು ಹೇಳಿ ನನ್ನ ಈ ಅಗ್ನಿಯನ್ನು ಶಾಂತಗೊಳಿಸು ಫಲ್ಗುನ!”

ಆಧಿರಥಿಯಮೇಲಿನ ಕೋಪದಿಂದ ಧರ್ಮಶೀಲನ ಆ ಮಾತನ್ನು ಕೇಳಿದ ಅನಂತವೀರ್ಯ ಜಿಷ್ಣುವು ಯುಧಿಷ್ಠಿರನಿಗೆ ಹೇಳಿದನು:

“ರಾಜನ್! ಇಂದು ನಾನು ಸಂಶಪ್ತಕರೊಂದಿಗೆ ಯುದ್ಧಮಾಡುತ್ತಿರಲು ಕುರುಸೇನೆಯ ಸೇನಾಗ್ರಯಾಯೀ ದ್ರೌಣಿಯು ಒಮ್ಮೆಲೇ ಹಾವಿನ ವಿಷಗಳಂತೆ ಹಾರಾಡುತ್ತಿದ್ದ ಬಾಣಗಳನ್ನು ಪ್ರಯೋಗಿಸುತ್ತಾ ನನ್ನ ಎದುರು ಬಂದನು. ನನ್ನ ಮೇಘಸನ್ನಿಭ ರಥವನ್ನು ನೋಡಿದ ಮರಣವನ್ನೇ ಕಾಯುತ್ತಿದ್ದ ಅಂಬಷ್ಠಸೇನೆಯು ನನ್ನನ್ನು ಆಕ್ರಮಣಿಸಲು ನಾನು ಆ ಐನೂರು ಯೋಧರನ್ನು ಸಂಹರಿಸಿ ದ್ರೌಣಿಯೊಡನೆ ಯುದ್ಧಮಾಡಲು ಹೋದೆನು. ಕಾಲಮೇಘವು ಮಳೆಸುರಿಸುವಂತೆ ಅವನು ಶಿಕ್ಷೆ-ಬಲ-ಪ್ರಯತ್ನಗಳಿಂದ ಆಕರ್ಣಪರ್ಯಂತವಾಗಿ ಧನುಸ್ಸನ್ನು ಸೆಳೆದು ಅನೇಕ ಬಾಣಸಂಘಗಳನ್ನು ಸೃಷ್ಟಿಸಿ ನನ್ನ ಮೇಲೆ ಪ್ರಯೋಗಿಸಿದನು. ಅವನು ಯಾವಾಗ ಬತ್ತಳಿಕೆಯಿಂದ ಬಾಣಗಳನ್ನು ತೆಗೆದುಕೊಳ್ಳುತ್ತಿದ್ದಾನೆ, ಯಾವಾಗ ಅವುಗಳನ್ನು ಹೂಡುತ್ತಿದ್ದಾನೆ ಎನ್ನುವುದು ನಮಗೆ ತಿಳಿಯುತ್ತಲೇ ಇರಲಿಲ್ಲ.

ಮತ್ತು ಅವನು ಎಡಗೈಯಿಂದ ಅಥವಾ ಬಲಗೈಯಿಂದ ಬಾಣಪ್ರಯೋಗ ಮಾಡುತ್ತಿದ್ದಾನೆಯೋ ಎನ್ನುವುದೂ ತಿಳಿಯದಂತೆ ಸಮರದಲ್ಲಿ ಆ ದ್ರೋಣಪುತ್ರನು ವರ್ತಿಸುತ್ತಿದ್ದನು. ಐದರಿಂದ ನನ್ನನ್ನು ಹೊಡೆದು ದ್ರೋಣಪುತ್ರನು ಐದು ನಿಶಿತ ಶರಗಳಿಂದ ವಾಸುದೇವನನ್ನೂ ಹೊಡೆದನು. ನಾನಾದರೋ ನಿಮಿಷಮಾತ್ರದಲ್ಲಿ ಅವನನ್ನು ಮೂವತ್ತು ವಜ್ರಸದೃಶ ಬಾಣಗಳಿಂದ ಮರ್ದಿಸಿದೆನು. ದೇಹದಲ್ಲೆಲ್ಲಾ ಗಾಯಗೊಂಡು ರಕ್ತವನ್ನು ಸುರಿಸುತ್ತಾ ಅವನು, ನನ್ನಿಂದ ಗಾಯಗೊಂಡು ರಕ್ತದಲ್ಲಿ ತೋಯ್ದುಹೋಗಿರುವ ಸೈನಿಕರನ್ನು ನೋಡುತ್ತಾ, ಸೂತಪುತ್ರ ಕರ್ಣನ ರಥಸೇನೆಯನ್ನು ಸೇರಿಕೊಂಡನು. ಯುದ್ಧದಲ್ಲಿ ಸೈನ್ಯವು ಭಯಗೊಂಡು ವಿಧ್ವಸ್ತವಾಗಿ ಯೋಧರು, ಆನೆ-ಕುದುರೆಗಳು ಪಲಾಯನಮಾಡುತ್ತಿರುವುದನ್ನು ನೋಡಿ ಕರ್ಣನು ತ್ವರೆಮಾಡಿ ಐದುನೂರು ರಥಪ್ರಮುಖರನ್ನೊಡಗೂಡಿಕೊಂಡು ನನ್ನನ್ನು ಆಕ್ರಮಣಿಸಿದನು. ಕರ್ಣನ ಆ ಸೇನೆಯನ್ನು ನಾಶಗೊಳಿಸಿ ನಾನು ನಿನ್ನನ್ನು ನೋಡುವ ಸಲುವಾಗಿ ಅವಸರದಿಂದ ಇಲ್ಲಿಗೆ ಬಂದೆನು. ಸಿಂಹದ ವಾಸನೆಯನ್ನು ಮೂಸಿ ಹಸುಗಳು ಭಯಪಡುವಂತೆ ಕರ್ಣನಿಂದ ಪಾಂಚಾಲರೆಲ್ಲರೂ

ಉದ್ವಿಗ್ನರಾಗಿದ್ದರು. ಮಹಾರೋಷದಿಂದ ಪ್ರಭದ್ರಕರು ಕರ್ಣನನ್ನು ಎದುರಿಸಿ ಯುದ್ಧಮಾಡುತ್ತಿದ್ದಾರೆ. ಮೃತ್ಯುವಿನ ತೆರೆದ ಬಾಯಿಯೊಳಗೆ ಪ್ರವೇಶಿಸುವಂತೆ ಪ್ರಭದ್ರಕರು ಕರ್ಣನನ್ನು ಎದುರಿಸಿ ಸಂಕಟಕ್ಕೊಳಗಾಗಿದ್ದಾರೆ. ರಣಾಂಗಣಕ್ಕೆ ಆಗಮಿಸು! ಇಂದು ನಾನು ಸೂತಪುತ್ರನೊಡನೆ ವಿಜಯಿಯಾಗುವಂತೆ ಯುದ್ಧಮಾಡುವುದನ್ನು ನೋಡು! ಆರುಸಾವಿರ ಮಹಾರಥ ರಾಜಪುತ್ರರು ಸ್ವರ್ಗಲೋಕದ ಸಲುವಾಗಿ ರಣದಲ್ಲಿ ಮುಳುಗಿದ್ದಾರೆ! ರಣದಲ್ಲಿ ಸೂತಪುತ್ರನನ್ನು, ವಜ್ರಿಯು ವೃತ್ರನನ್ನು ಹೇಗೋ ಹಾಗೆ, ನಾನು ಎದುರಿಸುತ್ತೇನೆ. ಇಂದು ನೀನು ನೋಡಿದರೆ ನಾನು ಈ ಸಂಗ್ರಾಮದಲ್ಲಿ ಸೂತಪುತ್ರನೊಡನೆ ಚೆನ್ನಾಗಿ ಹೋರಾಡುತ್ತೇನೆ. ಪ್ರತಿಜ್ಞೆಯಂತೆ ಇಂದು ನಾನು ಯುದ್ಧಮಾಡುತ್ತಿರುವ ಕರ್ಣನನ್ನು ಅವನ ಬಾಂಧವರೊಡನೆ ಸಂಹರಿಸದೇ ಇದ್ದರೆ, ಪ್ರತಿಜ್ಞೆಮಾಡಿದಂತೆ ಮಾಡದೇ ಇರುವವನಿಗೆ ದೊರೆಯುವ ಕಷ್ಟಗಳು ನನಗೆ ದೊರೆಯಲಿ! ಧಾರ್ತರಾಷ್ಟ್ರರು ಭೀಮನನ್ನು ನುಂಗಿಹಾಕುವ ಮೊದಲು ರಣದಲ್ಲಿ ನನಗೆ ಜಯವಾಗಲೆಂದು ಆಶೀರ್ವದಿಸು. ಸೌತಿಯನ್ನು ಮತ್ತು ಹಾಗೆಯೇ ಎಲ್ಲ ಶತ್ರುಗಣಗಳನ್ನೂ

ಸಂಹರಿಸುತ್ತೇನೆ!”

ಕರ್ಣನು ಕುಶಲನಾಗಿರುವನೆಂದು ಕೇಳಿ ಯುಧಿಷ್ಠಿರನು ಫಲ್ಗುನನ ಮೇಲೆ ಕ್ರುದ್ಧನಾದನು. ಕರ್ಣನ ಶರಗಳಿಂದ ಅಭಿತಪ್ತನಾಗಿದ್ದ ಯುಧಿಷ್ಠಿರನು ಧನಂಜಯನಿಗೆ ಈ ಮಾತುಗಳನ್ನಾಡಿದನು:

“ಪಾರ್ಥ! ಕರ್ಣನೊಡನೆ ಯುದ್ಧಮಾಡಲು ನಾನು ಸಮರ್ಥನಿಲ್ಲ! ಎಂದು ನೀನು ದ್ವೈತವನದಲ್ಲಿಯೇ ಹೇಳಿದ್ದಿದ್ದರೆ ಆಗ ನಾವು ಸಮಯೋಚಿತವಾದುದೇನೆಂದು ನಿಶ್ಚಯಿಸಿ ಅದರಂತೆಯೇ ನಡೆದುಕೊಳ್ಳುತ್ತಿದ್ದೆವು! ಅವನ ಬಲವನ್ನೂ ಆಪ್ತರನ್ನೂ ವಧಿಸುತ್ತೇನೆಂದು ನನಗೆ ಹೇಳಿ ಈಗ ನಮ್ಮನ್ನು ಶತ್ರುಗಳ ಮಧ್ಯದಲ್ಲಿ ತಂದು ಕಠಿಣವಾದ ರಣಾಂಗಣದಲ್ಲಿ ಉರುಳಿಸಿ ಸಮ್ಮರ್ದಿತರಾಗುವಂತೆ ಏಕೆ ಮಾಡಿದೆ? ಅರ್ಜುನ! ಕಲ್ಯಾಣಕರ ಅನೇಕ ಇಷ್ಟಗಳನ್ನು ಪೂರೈಸುವೆಯೆಂದು ನಾವು ನಿನ್ನಮೇಲೆ ಬಹಳಷ್ಟು ಆಸೆಗಳನ್ನಿಟ್ಟುಕೊಂಡು ಬಂದಿದ್ದೆವು. ಆದರೆ ಫಲಾರ್ಥಿಗಳಿಗೆ ವೃಕ್ಷವು ಕೇವಲ ಪುಷ್ಪಗಳನ್ನಿತ್ತಂತೆ ಅವೆಲ್ಲವೂ ನಿಷ್ಫಲವಾಗಿಹೋಯಿತು! ಮೀನನ್ನು ಹಿಡಿಯುವ ಗಾಳವು ಮಾಂಸದ ತುಂಡಿನಿಂದ ಆಚ್ಛಾದಿತವಾಗಿರುವಂತೆ,

ಘೋರವಿಷವು ಅನ್ನದಿಂದ ಮುಚ್ಚಲ್ಪಟ್ಟಿರುವಂತೆ, ರಾಜ್ಯಾರ್ಥಿಯಾದ ನನಗೆ ರಾಜ್ಯರೂಪದ ಅನರ್ಥಕ ವಿನಾಶವನ್ನು ನೀನು ತೋರಿಸಿಕೊಟ್ಟಿರುವೆ! ನೀನು ಹುಟ್ಟಿದ ಏಳನೆಯ ದಿನದಂದು ಅಂತರಿಕ್ಷದ ವಾಣಿಯು ಪೃಥೆಗೆ ಇದನ್ನು ಹೇಳಿತ್ತಂತೆ: "ಹುಟ್ಟಿದ ಈ ಮಗನು ವಾಸವನಂತೆ ವಿಕ್ರಮಿಯಾಗುತ್ತಾನೆ. ಎಲ್ಲ ಶೂರರನ್ನೂ ಶತ್ರುಗಳನ್ನೂ ಜಯಿಸುತ್ತಾನೆ! ಇವನು ಖಾಂಡವದಲ್ಲಿ ದೇವಸಂಘಗಳನ್ನೂ ಉತ್ತಮೌಜಸ ಎಲ್ಲ ಭೂತಗಳನ್ನೂ ಜಯಿಸುತ್ತಾನೆ! ಇವನು ರಾಜಮಧ್ಯದಲ್ಲಿ ಮದ್ರ-ಕಲಿಂಗ-ಕೇಕಯರನ್ನೂ ಕುರುಗಳನ್ನೂ ಸಂಹರಿಸುತ್ತಾನೆ! ಇವನಿಗಿಂತ ಹೆಚ್ಚಿನ ಧನುರ್ಧರನು ಯಾರೂ ಮುಂದೆ ಇರುವುದಿಲ್ಲ! ಹಿಂದೆ ಇರಲಿಲ್ಲ! ಹುಟ್ಟಿದ ಯಾರೂ ಇವನನ್ನು ಜಯಿಸಲಾರರು! ಸರ್ವವಿದ್ಯೆಗಳನ್ನೂ ಸಮಾಪ್ತಿಗೊಳಿಸಿದ ಈ ಆರ್ಯನು ಬಯಸಿದರೆ ಸರ್ವಭೂತಗಳನ್ನೂ ತನ್ನ ವಶದಲ್ಲಿರಿಸಿಕೊಳ್ಳಬಹುದು! ಇವನು ಕಾಂತಿಯಲ್ಲಿ ಶಶಾಂಕನಂತೆ, ವೇಗದಲ್ಲಿ ವಾಯುವಿನಂತೆ, ಸ್ಥೈರ್ಯದಲ್ಲಿ ಮೇರುವಿನಂತೆ, ಕ್ಷಮೆಯಲ್ಲಿ ಪೃಥ್ವಿಯಂತೆ, ಪ್ರಕಾಶದಲ್ಲಿ ಸೂರ್ಯನಂತೆ, ಸಂಪತ್ತಿನಲ್ಲಿ ಕುಬೇರನಂತೆ, ಶೌರ್ಯದಲ್ಲಿ ಶಕ್ರನಂತೆ ಮತ್ತು ಬಲದಲ್ಲಿ

ವಿಷ್ಣುವಿನಂತೆ. ಕುಂತೀ! ನಿನ್ನ ಈ ಮಹಾತ್ಮ ಮಗನು ಅದಿತಿಯಲ್ಲಿ ಹುಟ್ಟಿದ ವಿಷ್ಣುವಿನ ಸಮನಾಗಿದ್ದಾನೆ! ತನ್ನವರಿಗೆ ಜಯವನ್ನು ತರಲು ಮತ್ತು ಶತ್ರುಗಳನ್ನು ವಧಿಸಲು ಇವನು ಹುಟ್ಟಿದ್ದಾನೆ. ಅಮಿತೌಜಸನೆಂದು ವಿಖ್ಯಾತನಾಗುತ್ತಾನೆ. ಕುಲವನ್ನು ಉದ್ಧರಿಸುತ್ತಾನೆ!" ಹೀಗೆ ಶತಶೃಂಗದ ಶಿಖರದಲ್ಲಿರುವ ತಪಸ್ವಿಗಳಿಗೆ ಕೇಳುವಂತೆ ಅಂತರಿಕ್ಷದ ವಾಣಿಯು ಹೇಳಿತ್ತು. ಆದರೆ ಅದು ಹೇಳಿದಂತೆ ನೀನು ನಡೆಸಿಕೊಡಲಿಲ್ಲ! ದೇವತೆಗಳೂ ನಿಶ್ಚಿತವಾಗಿ ಸುಳ್ಳುಹೇಳಿರಬಹುದು! ಈ ಮಾತುಗಳನ್ನು ಕೇಳಿ ಇತರ ಋಷಿಸತ್ತಮರೂ ಸದೈವ ನಿನ್ನನ್ನು ಗೌರವಿಸುತ್ತಿದ್ದರು. ಆದುದರಿಂದ ನಾನು ಸುಯೋಧನನೊಡನೆ ಪ್ರೇಮದಿಂದ ಸಂಧಿಮಾಡಿಕೊಳ್ಳಲಿಲ್ಲ! ನೀನು ಆಧಿರಥನಿಗೆ ಹೆದರುತ್ತೀಯೆಂದು ನನಗೆ ತಿಳಿದಿರಲಿಲ್ಲ! ತ್ವಷ್ಟನಿಂದ ನಿನ್ನ ರಥವು ನಿರ್ಮಿಸಲ್ಪಟ್ಟಿದೆ ಮತ್ತು ಅದರ ಚಕ್ರಗಳು ಸ್ವಲ್ಪವೂ ಶಬ್ಧಮಾಡುವುದಿಲ್ಲ! ನಿನ್ನ ಧ್ವಜದಲ್ಲಿ ಶುಭ ಕಪಿಯು ನೆಲೆಸಿದ್ದಾನೆ! ಹೇಮಚಿತ್ರಗಳಿರುವ ಖಡ್ಗವನ್ನೂ ನಾಲ್ಕು ಮೊಳ ಉದ್ದದ ಗಾಂಡೀವಧನುಸ್ಸನ್ನೂ ಹಿಡಿದು ಸನ್ನದ್ಧನಾಗಿರುವೆ! ಈ ಕೇಶವನೇ ನಿನ್ನ ಸಾರಥಿಯಾಗಿರುವಾಗ

ಪಾರ್ಥ! ನೀನೇಕೆ ಕರ್ಣನಿಗೆ ಹೆದರಿ ಹೊರಟು ಬಂದೆ?
ದುರಾತ್ಮನ್! ಈ ಧನುಸ್ಸನ್ನು ಕೇಶವನಿಗೆ ಕೊಟ್ಟುಬಿಡು!
ರಣದಲ್ಲಿ ನೀನು ಅವನ ಸಾರಥಿಯಾಗು! ಆಗ ಕೇಶವನು
ಇಂದ್ರನು ವಜ್ರಾಯುಧವನ್ನು ಹಿಡಿದು ವೃತ್ರನನ್ನು
ಸಂಹರಿಸಿದಂತೆ ಉಗ್ರನಾದ ಕರ್ಣನನ್ನು ಸಂಹರಿಸುತ್ತಾನೆ!
ನೀನು ಗರ್ಭದ ಐದನೆಯ ತಿಂಗಳಿನಲ್ಲಿಯೇ ಗರ್ಭಪಾತವಾಗಿ
ಹೋಗಬೇಕಾಗಿದ್ದಿತು! ಅಥವಾ ಪೃಥೆಯ ಗರ್ಭದಲ್ಲಿಯೇ
ಇರಬಾರದಾಗಿತ್ತು! ಆಗ ನೀನು ಸಂಗ್ರಾಮದಿಂದ ಓಡಿಬರುವ
ಶ್ರಮವನ್ನು ಪಡಬೇಕಾಗುತ್ತಿರಲಿಲ್ಲ!"

ಯುಧಿಷ್ಠಿರನು ಹೀಗೆ ಹೇಳಲು ಅರ್ಜುನನು ಸಂಕ್ರುದ್ಧನಾಗಿ ಭರತರ್ಷಭನನ್ನು ಸಂಹರಿಸಲು ಖಡ್ಗವನ್ನು ಎಳೆದು ತೆಗೆದನು. ಅವನ ಕೋಪವನ್ನು ನೋಡಿ ಚಿತ್ತಜ್ಞನಾದ ಕೇಶವನು "ಪಾರ್ಥ! ಇದೇನು? ಖಡ್ಗವನ್ನು ಹಿಡಿದಿರುವೆ?" ಎಂದು ಕೇಳಿದನು.

"ಧನಂಜಯ! ಇಲ್ಲಿ ಯಾರೊಡನೆಯೂ
ಯುದ್ಧಮಾಡಬೇಕಾಗಿರುವುದು ನನಗೆ ಕಾಣುವುದಿಲ್ಲ!
ಏಕೆಂದರೆ ಧಾರ್ತರಾಷ್ಟ್ರರೆಲ್ಲರೂ ಧೀಮತ ಭೀಮನಿಂದ
ಧ್ವಂಸವಾಗುತ್ತಿದ್ದಾರೆ! ರಾಜನನ್ನು ನೋಡಬೇಕೆಂದು ನೀನು

ಇಲ್ಲಿಗೆ ಬಂದಿರುವೆ! ರಾಜನನ್ನು ನೀನು ನೋಡಿದ್ದಾಯಿತು! ಯುಧಿಷ್ಠಿರನು ಕುಶಲನಾಗಿಯೇ ಇದ್ದಾನೆ! ನೃಪಶಾರ್ದೂಲನನ್ನು ನೋಡಿ ಹರ್ಷಪಡಬೇಕಾಗಿರುವ ಸಮಯದಲ್ಲಿ ನಿನಗೇಕೆ ಕೋಪವು ಆವರಿಸಿಕೊಂಡಿದೆ? ನಿನ್ನಿಂದ ವಧಿಸಲ್ಪಡಬೇಕಾಗಿರುವ ಯಾರನ್ನೂ ಇಲ್ಲಿ ನಾನು ಕಾಣುತ್ತಿಲ್ಲ! ನೀನು ಏಕೆ ತ್ವರೆಮಾಡಿ ಮಹಾಖಡ್ಗವನ್ನು ಹಿಡಿದಿರುವೆ? ನಿನ್ನನ್ನೇ ಪ್ರಶ್ನಿಸುತ್ತಿದ್ದೇನೆ. ನೀನೇನು ಮಾಡುತ್ತಿರುವೆ? ಕ್ರುದ್ಧನಾಗಿ ಏಕೆ ಖಡ್ಗವನ್ನು ಎಳೆದಿರುವೆ? ಉತ್ತರಿಸು!”

ಕೃಷ್ಣನು ಹೀಗೆ ಹೇಳಲು ಅರ್ಜುನನು ಯುಧಿಷ್ಠಿರನನ್ನೇ ದುರುಗುಟ್ಟಿ ನೋಡುತ್ತಾ, ಕ್ರುದ್ಧಸರ್ಪದಂತೆ ಭುಸುಗುಟ್ಟುತ್ತಾ ಗೋವಿಂದನಿಗೆ ಹೇಳಿದನು:

“ಇತರನಿಗೆ ಗಾಂಡೀವವನ್ನು ಕೊಟ್ಟುಬಿಡು! ಎಂದು ಯಾರು ನನಗೆ ಹೇಳುತ್ತಾರೋ ಅವರ ಶಿರಸ್ಸನ್ನು ತುಂಡರಿಸುತ್ತೇನೆ ಎನ್ನುವುದು ನನ್ನ ಅಂತರಂಗದ ವ್ರತ! ನಿನ್ನ ಸಮಕ್ಷಮದಲ್ಲಿಯೇ ರಾಜನು ನನಗೆ ಇದನ್ನು ಹೇಳಿದನು. ಅದನ್ನು ನಾನು ಕ್ಷಮಿಸಲಾರೆನು! ಆದುದರಿಂದ ನಾನು

ಧರ್ಮಭೀರುಕನಾದ ಈ ರಾಜನನ್ನು ವಧಿಸುತ್ತೇನೆ! ಈ ನರಸತ್ತಮನನ್ನು ಸಂಹರಿಸಿ ಪ್ರತಿಜ್ಞೆಯನ್ನು ಪಾಲಿಸುತ್ತೇನೆ! ಇದಕ್ಕಾಗಿಯೇ ನಾನು ಖಡ್ಗವನ್ನು ಹಿಡಿದಿದ್ದೇನೆ! ಯುಧಿಷ್ಠಿರನನ್ನು ಸಂಹರಿಸಿ ನಾನು ಸತ್ಯಕ್ಕೆ ಅನೃಣಿಯಾಗುತ್ತೇನೆ. ಮತ್ತು ಶೋಕರಹಿತನೂ, ಚಿಂತಾರಹಿತನೂ ಆಗುತ್ತೇನೆ! ಈ ಸಮಯವು ಬಂದೊದಗಿರುವಾಗ ಬೇರೆ ಏನನ್ನಾದರೂ ಮಾಡಬೇಕೆಂದು ನಿನಗನ್ನಿಸುತ್ತದೆಯೇ? ನಿನಗೆ ಜಗತ್ತಿನಲ್ಲಿ ನಡೆದಿರುವ ಮತ್ತು ನಡೆಯಲಿರುವ ಎಲ್ಲವೂ ತಿಳಿದಿದೆ. ಆದುದರಿಂದ ನೀನು ನನಗೇನು ಹೇಳುತ್ತೀಯೋ ಅದರಂತೆಯೇ ಮಾಡುತ್ತೇನೆ!”

ಕೃಷ್ಣನು ಹೇಳಿದನು:

“ಪಾರ್ಥ! ನೀನು ವೃದ್ಧರ ಸೇವೆಯನ್ನು ಮಾಡಲಿಲ್ಲವೆಂದು ಇದರಿಂದ ನನಗೆ ತಿಳಿಯುತ್ತಿದೆ. ಕಾಲವಲ್ಲದ ಕಾಲದಲ್ಲಿ ನೀನು ದುಡುಕಿ ಇದನ್ನು ಮಾಡಲು ಹೊರಟಿರುವೆಯಲ್ಲ! ಧರ್ಮವಿಭಾಗಗಳನ್ನು ತಿಳಿದಿರುವವನು ಈ ರೀತಿ ಮಾಡುವುದಿಲ್ಲ! ಮಾಡಬಾರದುದನ್ನು ಮಾಡಬೇಕಾದುದರೊಡನೆ ಮತ್ತು ಮಾಡಬೇಕಾದುದನ್ನು

ಮಾಡದಿರುವುದರೊಡನೆ ಸೇರಿಸಿಕೊಂಡು ಗೊಂದಲಕ್ಕೀಡಾಗುವವನು ಪುರುಷಾಧಮ. ಧರ್ಮವನ್ನು ಅನುಸರಿಸುತ್ತಾ ಅದರಲ್ಲಿಯೇ ಸಮುಪಸ್ಥಿತರಾಗಿರುವ ಗುರುಗಳು ಅವುಗಳನ್ನು ಸಂಕ್ಷಿಪ್ತವಾಗಿಯೂ ವಿಸ್ತಾರವಾಗಿಯೂ ತಿಳಿಸಿದ್ದಾರೆ. ನಿಶ್ಚಯವಾಗಿಯೂ ಅದು ನಿನಗೆ ತಿಳಿದಿಲ್ಲ! ಕಾರ್ಯ-ಅಕಾರ್ಯಗಳ ಕುರಿತು ನಿರ್ಣಯಿಸುವುದರಲ್ಲಿ ನಿಶ್ಚಯಜ್ಞಾನವಿಲ್ಲದವನು ಅವಶನಾಗಿ ನಿನ್ನಂತೆ ಮೂಢನಾಗಿ ಭ್ರಾಂತನಾಗುತ್ತಾನೆ. ಕಾರ್ಯ-ಅಕಾರ್ಯಗಳ ಕುರಿತು ತಿಳಿದುಕೊಳ್ಳುವುದು ಎಂದಿಗೂ ಸುಲಭಸಾಧ್ಯವಲ್ಲ. ಇವೆಲ್ಲವುಗಳೂ ಶ್ರುತಿಗಳಿಂದ ತಿಳಿಯುತ್ತವೆ. ಆದರೆ ಇವುಗಳು ನಿನಗೆ ತಿಳಿದಿಲ್ಲ. ನೀನು ಅಜ್ಞಾನದಿಂದ ಧರ್ಮವನ್ನು ತಿಳಿದುಕೊಂಡಿರುವೆಯೆಂದೂ ಧರ್ಮವನ್ನು ರಕ್ಷಿಸುತ್ತಿರುವೆಯೆಂದೂ ಭಾವಿಸಿ ಪ್ರಾಣಿವಧೆಗೆ ತೊಡಗಿರುವೆ! ಧಾರ್ಮಿಕನಾದ ನಿನಗೆ ಇದು ತಿಳಿಯುತ್ತಿಲ್ಲ! ಪ್ರಾಣಿಗಳನ್ನು ವಧಿಸದೇ ಇರುವುದು ಎಲ್ಲಕ್ಕಿಂತ ಪರಮವಾದುದೆಂದು ನನ್ನ ಮತ. ಸುಳ್ಳನ್ನಾದರೂ ಆಡಬಹುದು. ಆದರೆ ಹಿಂಸೆಯನ್ನು ಎಂದೂ ಮಾಡಬಾರದು! ಅನ್ಯ ಸಾಮಾನ್ಯ ಪುರುಷನಂತೆ ನೀನು ಹೇಗೆ ನಿನ್ನ ಜ್ಯೇಷ್ಠ ಭ್ರಾತು ಧರ್ಮಕೋವಿದ ರಾಜನನ್ನು

ಕೊಲ್ಲುತ್ತೀಯೆ? ಯುದ್ಧಮಾಡದೇ ಇರುವವನ, ಶಸ್ತ್ರಗಳನ್ನು ಹಿಡಿಯದೇ ಇರುವವನ, ಪರಾಙ್ಮುಖನಾಗಿ ಓಡಿಹೋಗುತ್ತಿರುವವನ, ಶರಣುಬಂದಿರುವವನ, ಕೈಮುಗಿದು ಬೇಡಿಕೊಳ್ಳುತ್ತಿರುವವನ ವಧೆಯು ತಿಳಿದವರ ಗೌರವಪಾತ್ರವಲ್ಲ! ನೀನು ಹಿಂದೆ ಬಾಲಕನಾಗಿರುವಾಗಲೇ ಈ ವ್ರತವನ್ನು ಕೈಗೊಂಡಿರುವೆ. ಆದುದರಿಂದ ಮೌಢ್ಯತನದಿಂದ ಈ ಅಧರ್ಮಸಂಯುಕ್ತವಾದ ಕಾರ್ಯದಲ್ಲಿ ತೊಡಗಿರುವೆ! ತಿಳಿಯಲು ಅಸಾಧ್ಯವಾದ, ಅನುಸರಿಸಲು ಕಷ್ಟಕರವಾದ ಧರ್ಮದ ಸೂಕ್ಷ್ಮಗತಿಯನ್ನು ತಿಳಿಯದೇ ನೀನು ಗುರುವಾದ ಇವನನ್ನು ಕೊಂದು ಹೇಗೆ ಧರ್ಮವನ್ನು ಅನುಸರಿಸುತ್ತಿರುವೆಯೆಂದು ತಿಳಿದುಕೊಂಡಿದ್ದೀಯೆ? ಇಗೋ ಈ ಧರ್ಮರಹಸ್ಯವನ್ನು ಹೇಳುತ್ತೇನೆ. ಧರ್ಮಜ್ಞನಾದ ಭೀಷ್ಮ ಅಥವಾ ಯುಧಿಷ್ಠಿರ, ವಿದುರ, ಅಥವಾ ಕುಂತೀ ಇವರು ಏನನ್ನು ಹೇಳುತ್ತಾರೋ ಅದನ್ನೇ ನಾನು ನಿನಗೆ ಹೇಳುತ್ತೇನೆ. ಇದನ್ನು ಏಕಾಗ್ರತೆಯಿಂದ ಕೇಳು! ಸತ್ಯವನ್ನಾಡುವುದೇ ಒಳ್ಳೆಯದು. ಸತ್ಯಕ್ಕಿಂತಲೂ ಶ್ರೇಷ್ಠವಾದುದು ಇಲ್ಲ. ಆದರೆ ಸತ್ಯವನ್ನು ಅನುಷ್ಠಾನಮಾಡುವ ತತ್ತ್ವವನ್ನು ತಿಳಿದುಕೊಳ್ಳುವುದು ಕಷ್ಟ. ಯಾವಾಗ ಸುಳ್ಳು ಸತ್ಯದ

ಪರಿಣಾಮವನ್ನು ನೀಡುತ್ತದೆಯೋ ಆಗ ಸುಳ್ಳನ್ನು ಹೇಳಬೇಕಾಗುತ್ತದೆ. ಹಾಗೆಯೇ ಯಾವಾಗ ಸತ್ಯವು ಸುಳ್ಳಿನ ಪರಿಣಾಮವನ್ನು ನೀಡುತ್ತದೆಯೋ ಆಗ ಸತ್ಯವನ್ನು ಹೇಳಬಾರದು. ಪ್ರಾಣಹೋಗುವ ಮತ್ತು ವಿವಾಹಗಳ ಸಮಯದಲ್ಲಿ – ಯಾವಾಗ ಸುಳ್ಳು ಸತ್ಯದ ಪರಿಣಾಮವನ್ನು ಮತ್ತು ಸತ್ಯವು ಸುಳ್ಳಿನ ಪರಿಣಾಮವನ್ನು ನೀಡುತ್ತದೆಯೋ ಆಗ - ಸುಳ್ಳನ್ನು ಹೇಳಬಹುದು. ಸತ್ಯದಲ್ಲಿ ಅನುಷ್ಠಿತನಾಗಿರುವ ಬಾಲಕನು ಅದನ್ನು ಇದೇರೀತಿ ಕಾಣುತ್ತಾನೆ. ಸತ್ಯ ಮತ್ತು ಸುಳ್ಳುಗಳನ್ನು ಹಾಗೆ ನಿರ್ಧರಿಸುವವನು ಧರ್ಮವಿದುವೆನಿಸಿಕೊಳ್ಳುತ್ತಾನೆ. ಅಂಧಪ್ರಾಣಿಯನ್ನು ವಧಿಸಿದ ಬಲಾಕದಂತೆ ಸುದಾರುಣ ಪುರುಷನಾಗಿದ್ದರೂ ಕೃತಪ್ರಜ್ಞನಾಗಿದ್ದರೆ ಮಹಾಪುಣ್ಯವನ್ನು ಪಡೆಯಬಲ್ಲ ಎನ್ನುವುದರಲ್ಲಿ ಆಶ್ಚರ್ಯವಾದರೂ ಏನಿದೆ? ನದೀತೀರದ್ದಲ್ಲಿರುವ ಕೌಶಿಕನಂತೆ ಧರ್ಮವನ್ನು ಮಾಡಲು ಬಯಸುತ್ತಿದ್ದರೂ ಕೌಶಿಕನಂತೆ ಮೂಢನೂ ಅಪಂಡಿತನೂ ಆಗಿದ್ದರೆ ಮಹಾ ಪಾಪವನ್ನು ಪಡೆಯುತ್ತಾನೆ ಎನ್ನುವುದರಲ್ಲಿ ಆಶ್ಚರ್ಯವೇನಿದೆ?”

ಅರ್ಜುನನು ಹೇಳಿದನು:

"ಭಗವನ್! ನನಗೆ ತಿಳಿಯುವಂತೆ ಬಲಾಕ-ಅಂಧ ಮತ್ತು ನದೀತೀರದ ಕೌಶಿಕನಿಗೆ ಸಂಬಧಿಸಿದ ಕಥೆಯನ್ನು ಹೇಳು!"

ಕೃಷ್ಣನು ಹೇಳಿದನು:

"ಭಾರತ! ಒಂದು ಕಾಲದಲ್ಲಿ ಬಲಾಕ ಎಂಬ ಹೆಸರಿನ ಮೃಗವ್ಯಾಧನಿದ್ದನು. ಅವನು ಪತ್ನಿ-ಪುತ್ರರಿಗೋಸ್ಕರ ಮೃಗಗಳನ್ನು ಸಂಹರಿಸುತ್ತಿದ್ದನೇ ಹೊರತು ಕೊಲ್ಲಬೇಕೆಂಬ ಕಾಮನೆಯಿಂದ ಬೇಟೆಯಾಡುತ್ತಿರಲಿಲ್ಲ. ಅಂಧರಾದ ಅವನ ತಾಯಿ-ತಂದೆ ಮತ್ತು ಅನ್ಯ ಸೇವಕರು ಅವನ ಆಶ್ರಯದಲ್ಲಿದ್ದರು. ನಿತ್ಯವೂ ಸ್ವಧರ್ಮನಿರತನಾಗಿದ್ದ ಅವನು ಸತ್ಯಭಾಷಿಯೂ ಅನಸೂಯಕನೂ ಆಗಿದ್ದನು. ಒಂದು ದಿನ ಅವನು ಮೃಗಗಳಿಗಾಗಿ ಅಲೆದಾಡುತ್ತಿರುವಾಗ ಕುರುಡು ಮಾಂಸಾಹಾರೀ ಪ್ರಾಣಿಯನ್ನು ಕಂಡನು. ಹಿಂದೆಂದೂ ನೋಡಿರದ ಆ ಪ್ರಾಣಿಯನ್ನು ಅವನು ಸಂಹರಿಸಿದನು. ಕೂಡಲೇ ಆಕಾಶದಿಂದ ಪುಷ್ಪವೃಷ್ಟಿಯಾಯಿತು. ಮನೋರಮೆಯರಾದ ಅಪ್ಸರೆಯರು ಗೀತವಾದ್ಯಗಳ ನಾದದೊಂದಿಗೆ ವಿಮಾನದಿಂದ ಆಗಮಿಸಿ ಮೃಗವ್ಯಾಧನನ್ನು

ಸ್ವರ್ಗಕ್ಕೆ ಕೊಂಡೊಯ್ದರು. ಆ ಪ್ರಾಣಿಯು ಹಿಂದೆ ಸರ್ವಭೂತಗಳ ವಿನಾಶಕ್ಕಾಗಿ ತಪಸ್ಸನ್ನು ತಪಿಸಿ ವರವನ್ನು ಪಡೆದಿತ್ತು. ಆಗ ಸ್ವಯಂಭುವು ಅದನ್ನು ಅಂಧನನ್ನಾಗಿ ಮಾಡಿದ್ದನು. ಸರ್ವಭೂತಗಳ ವಿನಾಶಕಾರ್ಯವನ್ನು ನಿಶ್ಚಯಿಸಿದ್ದ ಅದನ್ನು ಸಂಹರಿಸಿ ಬಲಾಕನು ಸ್ವರ್ಗಕ್ಕೆ ಹೋದನು. ಹೀಗೆ ಧರ್ಮವನ್ನು ತಿಳಿಯುವುದು ಕಷ್ಟ!

ಬಹುಶ್ರುತನಲ್ಲದ ಕೌಶಿಕನೆಂಬ ವಿಪ್ರತಪಸ್ವಿಯು ನದಿಗಳ ಸಂಗಮಗ್ರಾಮದ ಹತ್ತಿರದಲ್ಲಿಯೇ ವಾಸಿಸುತ್ತಿದ್ದನು. ಸದಾ ನಾನು ಸತ್ಯವನ್ನೇ ಹೇಳುತ್ತೇನೆ ಎನ್ನುವುದು ಅವನ ವ್ರತವಾಗಿತ್ತು. ಅದರಿಂದ ಅವನು ಸತ್ಯವಾದಿಯೆಂದು ವಿಖ್ಯಾತನಾಗಿದ್ದನು. ಒಮ್ಮೆ ಕಳ್ಳರ ಭಯದಿಂದ ಕೆಲವರು ಆ ವನವನ್ನು ಪ್ರವೇಶಿಸಿದರು. ಕ್ರೂರ ಕಳ್ಳರೂ ಕೂಡ ಅವರನ್ನು ಹುಡುಕುತ್ತಾ ಅಲ್ಲಿಗೆ ಬಂದರು. ಕಳ್ಳರು ಸತ್ಯವಾದೀ ಕೌಶಿಕನಲ್ಲಿಗೆ ಬಂದು ಕೇಳಿದರು: "ಭಗವನ್! ಈ ಮಾರ್ಗದಲ್ಲಿ ಬಂದಿದ್ದ ಅನೇಕ ಜನರು ಯಾವ ಮಾರ್ಗದಲ್ಲಿ ಹೋದರು? ಸತ್ಯದಿಂದ ನಿನ್ನನ್ನು ಕೇಳುತ್ತಿದ್ದೇವೆ. ಒಂದುವೇಳೆ ಇದು ತಿಳಿದಿದ್ದರೆ ನಮಗೆ ಹೇಳು!" ಹಾಗೆ ಕೇಳಿದ ಅವರಿಗೆ ಕೌಶಿಕನು

ಸತ್ಯವಚನವನ್ನೇ ನುಡಿಯುತ್ತಾ "ಅನೇಕ ವೃಕ್ಷ-ಲತೆ-ಪೊದರುಗಳಿಂದ ಕೂಡಿರುವ ಇದೇ ವನದಲ್ಲಿ ಅವರು ಅಡಗಿದ್ದಾರೆ!" ಎಂದನು. ಆಗ ಆ ಕ್ರೂರರು ಅವರನ್ನು ಹುಡುಕಿ ಕೊಂದರು. ಅವನ ಆ ಅಧರ್ಮದ ಮಹಾಮಾತಿನಿಂದಾಗಿ ಸೂಕ್ಷ್ಮಧರ್ಮವನ್ನು ತಿಳಿಯದಿದ್ದ ಕೌಶಿಕನು ಸುಕಷ್ಟಕರವಾದ ನರಕಕ್ಕೆ ಹೋದನು.

ಹೆಚ್ಚು ಶಾಸ್ತ್ರಜ್ಞಾನವಿಲ್ಲದವನು ಧರ್ಮಗಳ ವಿಭಾಗಗಳನ್ನು ತಿಳಿಯದ ಮೂಢನು ವೃದ್ಧರ ಸೇವೆಮಾಡಿ ಸಂದೇಹವನ್ನು ನಿವಾರಿಸಿಕೊಳ್ಳದೇ ಇದ್ದರೆ ಮಹಾ ಕಷ್ಟಗಳಿಗೆ ಪಾತ್ರನಾಗುತ್ತಾನೆ. ಧರ್ಮದ ಲಕ್ಷಣ-ಉದ್ದೇಶಗಳು ಏನೂ ಆಗಬಹುದು. ಅದರ ಪರಮಜ್ಞಾನವು ದುಷ್ಕರವಾದುದು. ಕೆಲವರು ಇದನ್ನು ತರ್ಕದಿಂದ ಮತ್ತು ಇನ್ನು ಹಲವರು ಇದು ಶೃತಿಧರ್ಮವೆಂದು ಹೇಳುತ್ತಾರೆ. ಇರುವವುಗಳ ಏಳ್ಗೆಗಾಗಿ ಮಾಡಲ್ಪಟ್ಟ ಧರ್ಮಪ್ರವಚನವನ್ನಷ್ಟನ್ನೇ ನಿನಗೆ ಹೇಳುತ್ತೇನೆ. ಏಕೆಂದರೆ ಎಲ್ಲವನ್ನೂ ತಿಳಿಯಲು ಅಸಾಧ್ಯವು. ಧಾರಣೆಮಾಡುವುದರಿಂದ ಧರ್ಮವೆನ್ನುತ್ತಾರೆ. ಧರ್ಮವು ಪ್ರಜೆಗಳನ್ನು ಉದ್ಧರಿಸುತ್ತದೆ. ಯಾವುದು

ಧಾರಣಸಂಯುಕ್ತವಾದುದ್ದೋ ಅದೇ ಧರ್ಮವೆಂದು ನಿಶ್ಚಯಿಸಲ್ಪಡುತ್ತದೆ. ಯಾರು ಅನ್ಯಾಯದಿಂದ ಇತರರದ್ದನ್ನು ಅಪಹರಿಸಲು ಬಯಸುತ್ತಾರೋ ಅವರೊಂದಿಗೆ ಏನನ್ನೂ ಮಾತನಾಡದೇ ಬಿಡುಗಡೆಹೊಂದಬೇಕು. ಅವರೊಂದಿಗೆ ಎಂದೂ ಮಾತನಾಡಬಾರದು. ಆದರೆ ಮಾತನಾಡಲೇಬೇಕಾಗಿಬಂದರೆ ಅಥವಾ ಮಾತನಾಡದೇ ಇದ್ದರೆ ಶಂಕೆಗೊಳಗಾಗುವುದಾದರೆ ಅಲ್ಲಿ ಸುಳ್ಳನ್ನು ಹೇಳುವುದೇ ಶ್ರೇಯಸ್ಕರವಾದುದು. ಅಲ್ಲಿ ಸುಳ್ಳನ್ನೂ ಸತ್ಯವೆಂದು ವಿಚಾರಿಸಲಾಗುತ್ತದೆ. ಪ್ರಾಣಹೋಗುವ ಸಂದರ್ಭದಲ್ಲಿ ಅಥವಾ ವಿವಾಹ ಸಂದರ್ಭದಲ್ಲಿ ಅಥವಾ ಸರ್ವ ಬಾಂಧವರ ಅಥವಾ ಧನಕ್ಷಯದ ಸಮಯದಲ್ಲಿ, ಮತ್ತು ಪರಿಹಾಸ-ವಿನೋದಗಳ ಸಂದರ್ಭದಲ್ಲಿ ಹೇಳಿದ ಸುಳ್ಳು ಸುಳ್ಳಾಗಿರುವುದಿಲ್ಲ. ಧರ್ಮತತ್ತ್ವಾರ್ಥದರ್ಶಿಗಳು ಇದರಲ್ಲಿ ಅಧರ್ಮವನ್ನು ಕಾಣುವುದಿಲ್ಲ. ಇನ್ನೊಬ್ಬರ ಬಂಧನದಲ್ಲಿರುವಾಗ ನೂರು ಸುಳ್ಳನ್ನು ಹೇಳಿಯಾದರೂ ಬಿಡಿಸಿಕೊಳ್ಳಬೇಕು. ಅಲ್ಲಿ ಸುಳ್ಳನ್ನು ಹೇಳುವುದು ಶ್ರೇಯಸ್ಕರವಾಗುತ್ತದೆ. ಸತ್ಯವನ್ನು ಹೇಳುವುದು ಅವಿಚಾರಿತವೆನಿಸಿಕೊಳ್ಳುತ್ತದೆ. ಅವರಿಗೆ ಹಣವನ್ನಿತ್ತು

ಮುಕ್ತಿಹೊಂದಲು ಸಾಧ್ಯವಿದ್ದರೂ ಹಣವನ್ನು ಎಂದೂ ನೀಡಬಾರದು. ಏಕೆಂದರೆ ಪಾಪಿಗಳಿಗೆ ಧನವನ್ನಿತ್ತರೆ ಅದು ಕೊಡುವವನನ್ನೂ ಪೀಡಿಸುತ್ತದೆ. ಆದುದರಿಂದ ಧರ್ಮಕ್ಕೋಸ್ಕರವಾಗಿ ಅನೃತವನ್ನು ಹೇಳಿದರೂ ಅದು ಅನೃತವೆಂದೆನಿಸಿಕೊಳ್ಳುವುದಿಲ್ಲ. ಹೀಗೆ ಯಥಾವಿಧಿಯಾಗಿ ಧರ್ಮದ ಲಕ್ಷಣೋದ್ದೇಶಗಳನ್ನು ಸಂಕ್ಷಿಪ್ತವಾಗಿ ಹೇಳಿದ್ದೇನೆ. ಪಾರ್ಥ ! ಇದನ್ನು ಕೇಳಿ ಯುಧಿಷ್ಠಿರನು ವಧ್ಯನೇ ಎನ್ನುವುದನ್ನು ಹೇಳು !”

ಅರ್ಜುನನು ಹೇಳಿದನು:

“ನಮಗೆ ನೀನು ಹೇಳಿದ ಈ ಹಿತವಚನವು ಮಹಾಪ್ರಾಜ್ಞರು ಹೇಳುವಂತೆಯೇ ಇದೆ. ಕೃಷ್ಣ ! ನೀನು ನಮ್ಮ ತಾಯಿಯ ಸಮನಾಗಿರುವೆ. ತಂದೆಯ ಸಮನೂ ಆಗಿರುವೆ. ನಮ್ಮ ಪರಮ ಗತಿಯೂ ಆಗಿರುವೆ. ನಿನ್ನ ಈ ಮಾತು ಅದ್ಭುತವಾದುದು ! ನಿನಗೆ ತಿಳಿಯದೇ ಇರುವುದು ಈ ಮೂರು ಲೋಕಗಳಲ್ಲಿಯೂ ಯಾವುದೂ ಇಲ್ಲ. ಆದುದರಿಂದ ನಿನಗೆ ಸರ್ವ ಪರಮ ಧರ್ಮವೂ ಯಥಾತಥವಾಗಿ ತಿಳಿದಿದೆ. ಧರ್ಮರಾಜ ಯುಧಿಷ್ಠಿರನು ಅವಧ್ಯನೆಂದು ಮನ್ನಿಸುತ್ತೇನೆ. ಆದರೆ ಈಗ

ಬಂದೊದಗಿರುವ ಸಂದರ್ಭದಲ್ಲಿ ಏನನ್ನಾದರೂ ಅನುಗ್ರಹಿಸಿ ಹೇಳು. ನನ್ನ ಹೃದಯದಲ್ಲಿ ನೆಲಸಿರುವ ಈ ಸಂದೇಹವನ್ನು ಕೇಳು. ನನ್ನ ಈ ವ್ರತವು ನಿನಗೆ ತಿಳಿದೇ ಇದೆ. ಮನುಷ್ಯರಲ್ಲಿ ಯಾರಾದರೂ ನನಗೆ "ಪಾರ್ಥ ! ನಿನಗಿಂತಲೂ ಅಸ್ತ್ರವಿದ್ಯೆಯಲ್ಲಿ ಮತ್ತು ಪ್ರಯತ್ನದಲ್ಲಿ ವಿಶಿಷ್ಟನಾಗಿರುವನೋ ಅಂತಹ ಇನ್ನೊಬ್ಬನಿಗೆ ನಿನ್ನ ಗಾಂಡೀವವನ್ನು ಕೊಟ್ಟುಬಿಡು !" ಎನ್ನುವವನನ್ನು ನಾನು ಕೊಲ್ಲುತ್ತೇನೆ ಎನ್ನುವುದು ನನ್ನ ಪ್ರತಿಜ್ಞೆ. ಭೀಮನೂ ಕೂಡ ತನ್ನನ್ನು ಕೂಬರನೆಂದು ಕರೆಯುವವನನ್ನು ಕೊಲ್ಲುತ್ತೇನೆ ಎಂದು ಹೇಳಿಕೊಂಡಿದ್ದಾನೆ. ನಿನ್ನ ಸಮಕ್ಷಮದಲ್ಲಿಯೇ ರಾಜನು ನನಗೆ ನಿನಗಿಂತಲೂ ಉತ್ತಮ ಕಾರ್ಯಮಾಡುವವನಿಗೆ ಧನುಸ್ಸನ್ನು ಕೊಟ್ಟುಬಿಡು ಎಂದು ಹೇಳಿದ್ದಾನೆ. ಇವನನ್ನು ಸಂಹರಿಸಿ ನಾನು ಅಲ್ಪಕಾಲವೂ ಕೂಡ ಇರಲಾರೆನು. ಲೋಕಗಳಿಗೇ ತಿಳಿದಿರುವ ನನ್ನ ಈ ಪ್ರತಿಜ್ಞೆಯು ಸತ್ಯವಾಗುವಂತೆ ಮತ್ತು ಈ ಪಾಂಡವನನ್ನು ನಾನು ಜೀವಂತವುಳಿಸುವಂತೆ ನೀನು ನನಗೆ ಬುದ್ಧಿಯನ್ನು ನೀಡಬೇಕು !"

ವಾಸುದೇವನು ಹೇಳಿದನು:

“ರಣದಲ್ಲಿ ಕರ್ಣನ ನಿಶಿತ ಬಾಣಸಂಘಗಳಿಂದ ಗಾಯಗೊಂಡು ರಾಜನು ಬಳಲಿದ್ದಾನೆ. ಪಾರ್ಥ! ಇಂದು ರಣದಲ್ಲಿ ಕರ್ಣನು ದ್ಯೂತದ ಪಣವಾಗಿರುವುದರಿಂದ ನಿನ್ನಲ್ಲಿ ಅವನು ಕಠೋರವಾಗಿ ಮಾತನ್ನಾಡಿದ್ದಾನೆ. ಕರ್ಣನು ಹತನಾದನೆಂದರೆ ಕುರುಗಳು ಸೋತಂತೆ ಎಂದು ಪಾರ್ಥಿವ ಧರ್ಮಪುತ್ರನು ಯೋಚಿಸಿರುವನು. ಯಾರಿಗೆ ಮಹಾ ಅಪಮಾನವುಂಟಾಗುತ್ತದೆಯೋ ಅವನು ಜೀವಂತವಿದ್ದರೂ ಮೃತನಾದಂತೆ ಎಂದು ಹೇಳುತ್ತಾರೆ. ನಿನ್ನಿಂದ, ಭೀಮಸೇನನಿಂದ, ಹಾಗೆಯೇ ಯಮಳರಿಂದ, ಲೋಕದ ವೃದ್ಧರಿಂದ ಮತ್ತು ಪುರುಷಪ್ರವೀರರಿಂದ ಸದೈವ ಮಾನಿತನಾಗಿರುವ ಈ ಪಾರ್ಥಿವನನ್ನು ನೀನು ಮಾತಿನಿಂದ ಅವಹೇಳನೆ ಮಾಡು. “ಭವಂತಂ” ಎನ್ನುವುದರ ಬದಲಾಗಿ ನೀನು ಯುಧಿಷ್ಠಿರನನ್ನು “ತ್ವಂ” ಎಂದು ಸಂಬೋಧಿಸು. ಹಿರಿಯವನಿಗೆ “ತ್ವಂ” ಎಂದು ಹೇಳಿದರೂ ಅವನು ಹತನಾದಂತೆ! ಯುಧಿಷ್ಠಿರನ ಕುರಿತು ಹೀಗೆ ನಡೆದುಕೋ! ಅವನನ್ನು ಅಧರ್ಮಯುಕ್ತವಾಗಿ ಸಂಬೋಧಿಸು! ಅಥರ್ವಾಂಗೀರಸೀ ಎಂಬ ಈ ಶ್ರುತಿಯು ಶ್ರುತಿಗಳಲ್ಲಿಯೇ ಉತ್ತಮವಾದುದು. ಶ್ರೇಯಸ್ಸನ್ನು ಬಯಸುವ ನರರು ಸದಾ

ವಿಚಾರವನ್ನೇನೂ ಮಾಡದೇ ಹೀಗೆಯೇ ನಡೆದುಕೊಳ್ಳಬೇಕು. ನೀನು ಎಂಬ ಸಂಬೋಧಯುಕ್ತವಾಗಿ ಮಾತನಾಡಿ ಧರ್ಮರಾಜನನ್ನು ವಧಿಸು. ಅನಂತರ ಪಾರ್ಥನ ಪಾದಗಳಿಗೆ ನಮಸ್ಕರಿಸಿ ಕ್ಷಮೆಯನ್ನು ಕೇಳು ಮತ್ತು ಅವನೊಡನೆ ಸಾಂತ್ವಪೂರ್ವಕವಾಗಿ ಮಾತನಾಡು! ಪ್ರಾಜ್ಞನಾದ ನಿನ್ನ ಭ್ರಾತಾ ರಾಜನು ನಿನ್ನ ಮೇಲೆ ಎಂದೂ ಕುಪಿತನಾಗುವುದಿಲ್ಲ. ಹೀಗೆ ಪ್ರತಿಜ್ಞೆಯನ್ನು ಸುಳ್ಳಾಗಿಸುವ ಮತ್ತು ಅಣ್ಣನ ವಧೆಯ ಕಷ್ಟದಿಂದ ಮುಕ್ತನಾಗಿ ಹೃಷ್ಟನಾಗಿ ಸೂತಪುತ್ರ ಕರ್ಣನನ್ನು ಸಂಹರಿಸು!"

ಜನಾರ್ದನನು ಹೀಗೆ ಹೇಳಲು ಪಾರ್ಥನು ತನ್ನ ಸುಹೃದನನ್ನು ಪ್ರಶಂಸಿದನು. ಅನಂತರ ಅರ್ಜುನನು ಹಿಂದೆಂದೂ ಹೇಳದೇ ಇದ್ದ ಅತ್ಯಂತ ನಿಷ್ಠುರವಾದ ಮಾತುಗಳನ್ನು, ತನಗಿಷ್ಟವಿಲ್ಲದಿದ್ದರೂ ಬಲವಂತದಿಂದ, ಆಡಿದನು:

"ರಾಜನ್! ತುಂಬಾಮಾತನಾಡುತ್ತಿರುವೆ! ಮಾತನಾಡಬೇಡ! ರಣಭೂಮಿಯಿಂದ ಅರ್ಧಕ್ರೋಶಮಾತ್ರ ದೂರದಲ್ಲಿಯೂ ನೀನು ನಿಲ್ಲಲಾರೆ! ಸರ್ವಯೋಧಪ್ರವೀರರೊಡನೆಯೂ ಯುದ್ಧಮಾಡುತ್ತಿರುವ ಭೀಮನು ಮಾತ್ರ ನನ್ನನ್ನು ನಿಂದಿಸಲು

ಅರ್ಹನಾಗಿರುತ್ತಾನೆ! ಸಮಯಸಿಕ್ಕಾಗಲೆಲ್ಲಾ ರಣದಲ್ಲಿ ಶತ್ರುಗಳನ್ನು ಬಹಳವಾಗಿ ಪೀಡಿಸಿ, ಶೂರ ಪೃಥಿವೀಪತಿಗಳನ್ನು ಸಂಹರಿಸಿ, ಸಾವಿರಕ್ಕೂ ಅಧಿಕ ಸಂಖ್ಯೆಗಳಲ್ಲಿ ಆನೆಗಳನ್ನು ಸಂಹರಿಸಿ ತುಮುಲ ಸಿಂಹನಾದವನ್ನು ಮಾಡಿ ಆ ವೀರನು ಯಾವ ಸುದುಷ್ಕರ ಕರ್ಮಗಳನ್ನು ಮಾಡುತ್ತಾನೋ ಅಂಥಹ ಕರ್ಮಗಳನ್ನು ನೀನು ಎಂದೂ ಮಾಡಲು ಸಮರ್ಥನಿಲ್ಲ! ರಣದಲ್ಲಿ ಅವನು ರಥದಿಂದ ಹಾರಿ ತನ್ನ ಗದೆಯಿಂದ ಪರಮಹಿಂಸೆಯನ್ನಿತ್ತು ಕುದುರೆ-ಮನುಷ್ಯ-ಆನೆಗಳನ್ನು ಸಂಹರಿಸುತ್ತಿದ್ದಾನೆ! ಶ್ರೇಷ್ಠ ಖಡ್ಗದಿಂದ ರಥ-ಅಶ್ವ-ಕುಂಜರಗಳನ್ನು ಮತ್ತು ಹಾಗೆಯೇ ಧನುಸ್ಸಿನಿಂದ ರಥಾಂಗಗಳನ್ನೂ ಅರಿಗಳನ್ನೂ ಸಂಹರಿಸಿ ಆ ಶತಮನ್ಯು ಮಿಕ್ರಮನು ಪುನಃ ಎರಡೂ ಪಾದಗಳಿಂದ ತುಳಿದು ಅಹಿತರನ್ನು ಸಂಹರಿಸುತ್ತಿದ್ದಾನೆ. ಮಹಾಬಲ ವೈಶ್ರವಣ ಮತ್ತು ಅಂತಕನಂತಿರುವ ಅವನು ಪ್ರಯತ್ನಪಟ್ಟು ಯಥಾರ್ಹರಾದ ಶತ್ರುಗಳನ್ನು ಸಂಹರಿಸುತ್ತಿದ್ದಾನೆ. ಅಂತಹ ಭೀಮಸೇನನು ನನ್ನನ್ನು ನಿಂದಿಸಲು ಅರ್ಹನಾಗಿದ್ದಾನೆ. ನಿತ್ಯವೂ ಸುಹೃದಯರ ರಕ್ಷಣೆಯಲ್ಲಿರುವ ನಿನಗೆ ಆ ಅರ್ಹತೆಯಿಲ್ಲ! ಮಹಾರಥಗಳನ್ನೂ, ಶ್ರೇಷ್ಠ ಸಲಗಗಳನ್ನೂ,

ಕುದುರೆಗಳನ್ನೂ, ಮತ್ತು ಪದಾತಿಮುಖ್ಯರನ್ನೂ ತುಳಿದು ಧಾರ್ತರಾಷ್ಟ್ರರಲ್ಲಿ ಮಗ್ನನಾಗಿರುವ ಅರಿಂದಮ ಭೀಮನೊಬ್ಬನೇ ನನ್ನನ್ನು ನಿಂದಿಸಲು ಅರ್ಹನಾಗಿದ್ದಾನೆ! ಸದಾ ಮದೋನ್ಮತ್ತರಾದ ಕಪ್ಪುಮೋಡಗಳಿಂತಿರುವ ಕಲಿಂಗ-ವಂಗ-ಅಂಗ-ನಿಷಾದ-ಮಾಗಧರ ಅನೇಕ ಶತ್ರುಗಳನ್ನು ಯಾರು ಸಂಹರಿಸುತ್ತಿರುವನೋ ಆ ಭೀಮಸೇನನು ಮಾತ್ರ ನನ್ನನ್ನು ಹೀಯಾಳಿಸಲು ಸಮರ್ಥ! ಸಮಯದಲ್ಲಿ ಸುಯುಕ್ತವಾದ ರಥದಲ್ಲಿ ಕುಳಿತು ಧನುಸ್ಸನ್ನು ಎಳೆಯುತ್ತಾ, ಮುಷ್ಟಿ ತುಂಬಾ ಶರಗಳನ್ನು ಹಿಡಿದು ಆ ವೀರನು ಮಹಾಹವದಲ್ಲಿ ಮೇಘವು ಮಳೆಯನ್ನು ಸುರಿಸುವಂತೆ ಶರವರ್ಷಗಳನ್ನು ಸೃಷ್ಟಿಸುತ್ತಾನೆ! ದ್ವಿಜಸತ್ತಮರಿಗೆ ಮಾತೇ ಬಲವೆಂದೂ ಕ್ಷತ್ರಿಯರಿಗೆ ಬಾಹುವೇ ಬಲವೆಂದು ತಿಳಿದವರು ಹೇಳುತ್ತಾರೆ. ನಿಷ್ಠುರ ಮಾತುಗಳೇ ನಿನ್ನ ಬಲವಾಗಿದೆ! ನಾನು ಹೇಗಿದ್ದೇನೆಂಬುದು ನಿನಗೆ ತಿಳಿದೇ ಇದೆ! ಪತ್ನಿಯರು, ಮಕ್ಕಳು ಮತ್ತು ನನ್ನ ಜೀವಾತ್ಮಗಳಿಂದ ನಿತ್ಯವೂ ನಿನಗೆ ಇಷ್ಟವಾದುದನ್ನೇ ಮಾಡಲು ಪ್ರಯತ್ನಿಸುತ್ತಾ ಬಂದಿದ್ದೇನೆ. ಹಾಗಿದ್ದರೂ ನೀನು ನನ್ನನ್ನು ಮಾತಿನ ಬಾಣಗಳಿಂದ ಹಿಂಸಿಸುತ್ತಿರುವೆ! ನಿನ್ನಿಂದಾಗಿ ನಾವು ಸುಖವೇನೆಂಬುದನ್ನೇ

ತಿಳಿಯದವರಾಗಿದ್ದೇವೆ! ದ್ರೌಪದಿಯ ಹಾಸಿಗೆಯ ಮೇಲೆ ಸುಖವಾಗಿ ಪವಡಿಸುವ ನೀನು ನಿನಗಾಗಿ ಪ್ರತಿದಿನವೂ ಮಹಾರಥರನ್ನು ಸಂಹರಿಸುವ ನನ್ನನ್ನು ಅಪಮಾನಿಸಬೇಡ! ಅತಿಶಂಕಿಯಾದ ನೀನು ನಿಷ್ಠುರನಾಗಿರುವೆ! ನಿನ್ನಿಂದಾಗಿ ನಾನು ಸುಖವೇನೆನ್ನುವುದನ್ನು ಸ್ವಲ್ಪವೂ ತಿಳಿದಿಲ್ಲ! ನಿನಗೆ ಪ್ರಿಯವನ್ನುಂಟುಮಾಡಲೆಂದು ಯುದ್ಧದಲ್ಲಿ ಸ್ವಯಂ ಸತ್ಯಸಂಧ ಭೀಷ್ಮನು ತನ್ನ ಮೃತ್ಯುವು ಹೇಗೆ ಸಾಧ್ಯವೆನ್ನುವುದನ್ನು ಹೇಳಿದನು. ನನ್ನಿಂದ ರಕ್ಷಿಸಲ್ಪಟ್ಟ ಶಿಖಂಡೀ ದ್ರೌಪದನು ಅವನನ್ನು ಸಂಹರಿಸಿದನು. ಅಹಿತಕರವಾದ ಜೂಜಿನಲ್ಲಿ ನಿರತನಾಗಿದ್ದ ನಿನ್ನ ರಾಜ್ಯಾಧಿಕಾರವನ್ನೂ ನಾನು ಪ್ರಶಂಸಿಸುವುದಿಲ್ಲ. ಅನಾರ್ಯರು ಮಾಡುವಂಥಹ ಪಾಪವನ್ನು ಸ್ವಯಂ ಮಾಡಿ ಅರಿಗಳೊಂದಿಗಿನ ಈ ಯುದ್ಧವನ್ನು ನಮ್ಮಿಂದ ಗೆಲ್ಲಲು ಬಯಸುತ್ತಿರುವೆ! ಅಧರ್ಮವಾದ ಜೂಜಿನಲ್ಲಿ ಅನೇಕ ದೋಷಗಳಿವೆಯೆಂದು ಸಹದೇಹನು ನಿನಗೆ ತಿಳಿಸಿ ಹೇಳಿದ್ದನು. ಆದರೂ ನೀನು ಅಸಾಧುಗಳಿಗೆ ಸರಿಯಾದ ಅದರಲ್ಲಿ ತೊಡಗಿ ನಮ್ಮೆಲ್ಲರನ್ನೂ ಕಷ್ಟಗಳಲ್ಲಿ ಮುಳುಗಿಸಿದ್ದೀಯೆ! ನೀನು ಜೂಜಾಡಿದುದರಿಂದಲೇ ರಾಜ್ಯನಾಶವಾಯಿತು. ನಿನ್ನಿಂದಲೇ

> ನಮ್ಮ ಈ ವ್ಯಸನವು ಹುಟ್ಟಿಕೊಂಡಿರುವುದು. ಅಲ್ಪಭಾಗ್ಯರಾದ ನಮ್ಮನ್ನು ಪುನಃ ಕ್ರೂರಮಾತುಗಳೆಂಬ ಚಾವಟಿಯಿಂದ ಹೊಡೆದು ಕುಪಿತರನ್ನಾಗಿಸಬೇಡ!"

ಸ್ಥಿತಪ್ರಜ್ಞನಿಗೆ ಈ ರೀತಿಯ ಕಠೋರ ಮಾತುಗಳನ್ನಾಡಿ ಸುರರಾಜಪುತ್ರ ಸವ್ಯಸಾಚಿಯು ಪರಿತಪಿಸಿದನು ಮತ್ತು ನಿಟ್ಟುಸಿರು ಬಿಡುತ್ತಾ ಪುನಃ ಖಡ್ಗವನ್ನು ಒರೆಯಿಂದ ಹೊರತೆಗೆದನು.

ಅಗ ಕೃಷ್ಣನು ಹೇಳಿದನು:

> "ಇದೇನಿದು? ಪುನಃ ನೀನು ಖಡ್ಗವನ್ನು ಒರೆಯಿಂದ ಹೊರಗೆಳೆಯುತ್ತಿರುವೆ? ಸತ್ಯವೇನೆನ್ನುವುದನ್ನು ಹೇಳು. ನಂತರ ನಾನು ನಿನಗೆ ಉದ್ದೇಶಸಿದ್ಧಿಯಾಗುವಂತಹ ಉಪಾಯವನ್ನು ಹೇಳಿಕೊಡುತ್ತೇನೆ!" ಪುರುಷೋತ್ತಮನು ಹೀಗೆ ಕೇಳಲು ಸುದುಃಖಿತನಾದ ಅರ್ಜುನನು ಕೇಶವನಿಗೆ ಈ ಮಾತನ್ನಾಡಿದನು: "ಮನಸ್ಸಿನಲ್ಲಿಲ್ಲದಿದ್ದರೂ ಈ ಅಹಿತ ಮಾತುಗಳನ್ನಾಡಿದುದಕ್ಕೆ ನಾನು ನನ್ನ ಶರೀರವನ್ನೇ ಸಂಹರಿಸಿಕೊಳ್ಳುತ್ತೇನೆ!"

ಧನಂಜಯನ ಆ ಮಾತುಗಳನ್ನು ಕೇಳಿದ ಕೃಷ್ಣನು ಹೇಳಿದನು:

“ಪಾರ್ಥ! ನಿನ್ನ ಮನಃಪೂರ್ವಕವಾಗಿ ನಿನ್ನದೇ ಗುಣಗಳನ್ನು ಹೊಗಳಿಕೋ! ಇದರಿಂದಾಗಿ ನಿನ್ನನ್ನು ನೀನೇ ಕೊಂದುಕೊಂಡಂತೆ ಆಗುತ್ತದೆ!”

“ಹಾಗೆಯೇ ಆಗಲಿ ಕೃಷ್ಣ!” ಎಂದು ಹೇಳಿ ಅವನ ಮಾತನ್ನು ಅಭಿನಂದಿಸಿ ಧನಂಜಯನು ಧನುಸ್ಸನ್ನು ಬಗ್ಗಿಸುತ್ತಾ ಯುಧಿಷ್ಠಿರನಿಗೆ “ರಾಜನ್! ಕೇಳು!” ಎಂದು ಹೇಳಿದನು.

“ನರದೇವ! ದೇವ ಪಿನಾಕಿಯನ್ನು ಬಿಟ್ಟು ನನ್ನಂತಹ ಧನುರ್ಧರನು ಬೇರೆ ಯಾರೂ ಇಲ್ಲ! ಮಹಾತ್ಮನಾದ ನೀನು ಅನುಮತಿಯನ್ನಿತ್ತರೆ ನಾನು ಸಚರಾಚರ ಜಗತ್ತನೂ ಕ್ಷಣದಲ್ಲಿ ಸಂಹರಿಸಿಯೇನು! ಜಗತ್ತಿನ ದಿಕ್ಕುಗಳನ್ನು ಗೆದ್ದು ನಾನೇ ನಿನಗೆ ಸರ್ವವನ್ನೂ ನಿನ್ನ ವಶವನ್ನಾಗಿ ಮಾಡಿದೆ. ದಕ್ಷಿಣೆಗಳಿಂದ ಸಮಾಪ್ತವಾದ ರಾಜಸೂಯವೂ ಮತ್ತು ದಿವ್ಯ ಸಭಾಭವನವೂ ನನ್ನ ಓಜಸ್ಸಿನಿಂದಲೇ ಆಯಿತು! ನನ್ನ ಅಂಗೈಯಲ್ಲಿ ಪೃಷತ್ಕಗಳೂ ಬಾಣದೊಂದಿಗೆ ಧನುಸ್ಸಿನ ಚಿಹ್ನೆಗಳು ಮತ್ತು ನನ್ನ ಪಾದಗಳಲ್ಲಿ ಶರ ಮತ್ತು ಧ್ವಜಗಳ ಚಿಹ್ನೆಗಳಿವೆ. ಅಥಹ ನಾನು ಯುದ್ಧಕ್ಕೆ ಹೋದರೆ ಯಾರೂ ಅವನನ್ನು ಗೆಲ್ಲಲಾರರು! ಉತ್ತರದವರು ಹತರಾದರು.

ಪಶ್ಚಿಮದವರು ಹತರಾದರು. ಪೂರ್ವದವರು ನಿರಸ್ತರಾದರು. ದಾಕ್ಷಿಣಾತ್ಯರು ವಿಶಸ್ತರಾದರು. ಸಂಶಪ್ತಕರಲ್ಲಿ ಸ್ವಲ್ಪವೇ ಉಳಿದುಕೊಂಡಿದೆ. ಸರ್ವ ಸೇನೆಗಳ ಅರ್ಧವೇ ನನ್ನಿಂದ ನಾಶವಾಗಿದೆ! ದೇವಸೇನೆಗಳಂತೆ ಪ್ರಕಾಶಿಸುತ್ತಿದ್ದ ಭಾರತೀ ಸೇನೆಯು ನನ್ನಿಂದ ಹತವಾಗಿ ಮಲಗಿದೆ! ಅಸ್ತ್ರಜ್ಞಾನವುಳ್ಳವರನ್ನು ನಾನು ಶಸ್ತ್ರಗಳಿಂದಲೇ ಸಂಹರಿಸುತ್ತೇನೆ. ಆದುದರಿಂದ ನಾನು ಲೋಕವನ್ನೇ ಭಸ್ಮಮಾಡಿಬಿಡಲು ಬಯಸುವುದಿಲ್ಲ."

ಇದನ್ನು ಹೇಳಿ ಪಾರ್ಥನು ಯುಧಿಷ್ಠಿರನಿಗೆ ಪುನಃ ಹೇಳಿದನು:

"ರಾಜನ್! ನಿನ್ನಿಂದಾಗಿ ರಾಧೆಯು ಪುತ್ರನಿಲ್ಲದವಳಾಗುತ್ತಾಳೆ ಅಥವಾ ಕುಂತಿಯು ನಾನಿಲ್ಲದವಳಾಗುತ್ತಾಳೆಂದು ತಿಳಿದುಕೋ! ಶಾಂತನಾಗು! ನಾನು ಹೇಳಿದುದನ್ನು ಕ್ಷಮಿಸು! ಕಾಲಬಂದಾಗ ನಿನಗೆ ಎಲ್ಲವೂ ತಿಳಿಯುತ್ತದೆ! ನಿನಗೆ ನಮಸ್ಕಾರ!"

ಯುಧಿಷ್ಠಿರನನ್ನು ಪ್ರಸನ್ನಗೊಳಿಸುತ್ತಾ ನಿಂತಿದ್ದ ಅವನು ಪುನಃ ಸಮಾಧಾನಗೊಳಿಸುತ್ತಾ ಹೇಳಿದನು:

"ಸಮರದ ಇಕ್ಕಟ್ಟಿನಿಂದ ಭೀಮನನ್ನು ಬಿಡುಗಡೆಗೊಳಿಸಲು

ಮತ್ತು ಸರ್ವಪ್ರಯತ್ನದಿಂದ ಸೂತಪುತ್ರನನ್ನು ಸಂಹರಿಸಲು ಹೊರಡುತ್ತಿದ್ದೇನೆ. ನಿನಗೆ ಪ್ರಿಯವನ್ನುಂಟುಮಾಡಲೆಂದೇ ನನ್ನ ಈ ಜೀವವಿದೆ. ಸತ್ಯವನ್ನೇ ಹೇಳುತ್ತಿದ್ದೇನೆ. ಇದನ್ನು ತಿಳಿದುಕೋ! ಇನ್ನು ತಡವಾಗುವುದಿಲ್ಲ! ಬಹುಬೇಗ ಇದು ಆಗಿಹೋಗುತ್ತದೆ! ಈಗಲೇ ನಾನು ಅವನನ್ನು ಆಕ್ರಮಣಿಸುತ್ತೇನೆ!" ಎಂದು ಹೇಳಿ ದೀಪ್ತತೇಜಸ್ವಿ ಕಿರೀಟಿಯು ಅವನ ಎರಡೂ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಹೊರಟುನಿಂತನು.

ಭ್ರಾತಾ ಫಲ್ಗುನನ ಈ ಕಠೋರಮಾತುಗಳನ್ನು ಕೇಳಿದ ಧರ್ಮರಾಜನು ಹಾಸಿಗೆಯಿಂದ ಮೇಲೆದ್ದು ದುಃಖದಿಂದ ವ್ಯಾಕುಲಚಿತ್ತನಾಗಿ ಪಾರ್ಥನಿಗೆ ಹೇಳಿದನು:

"ಪಾರ್ಥ! ನಾನು ಮಾಡಿದುದು ಒಳ್ಳೆಯದಲ್ಲ! ಇದರಿಂದಾಗಿ ನಿಮಗೆ ಸುಘೋರವಾದ ವ್ಯಸನವು ಪ್ರಾಪ್ತವಾಯಿತು! ಆದುದರಿಂದ ಕುಲಾಂತಕನಾದ ಮತ್ತು ಅಧಮ ಪುರುಷನಾದ ನನ್ನ ಈ ಶಿರಸ್ಸನ್ನು ಕತ್ತರಿಸು! ಈ ಪಾಪಿಯ, ಪಾಪವ್ಯಸನದಲ್ಲಿ ಆಸಕ್ತನಾಗಿರುವ, ವಿಮೂಢಬುದ್ಧಿಯ, ಆಲಸಿಯ, ನಾಚಿಕೆಯುಳ್ಳವನ, ವೃದ್ಧರನ್ನು ಅನಾದರಣೆಮಾಡುವ,

ಕ್ರೂರಿಯ ಕಠಿಣವಾಕ್ಯಗಳನ್ನು ನೀನು ಸದಾ ಅನುಸರಣೆಯನ್ನು ಎಲ್ಲಿಯವರೆಗೆ ಮಾಡುತ್ತೀಯೆ? ಪಾಪಿಯಾದ ನಾನು ಇಂದೇ ವನಕ್ಕೆ ಹೋಗುತ್ತೇನೆ. ನಾನಿಲ್ಲದೇ ನೀವು ಸುಖದಿಂದಿರುವಿರಿ! ರಾಜನಾಗಲು ಯೋಗ್ಯ. ನಪುಂಸಕನಂತಿರುವ ನನಗೆ ರಾಜ್ಯಭಾರದ ಗೊಡವೆಯೇಕೆ? ರೋಷಾನ್ವಿತನಾದ ನಿನ್ನ ಈ ಕಠೋರಮಾತುಗಳನ್ನು ಪುನಃ ಸಹಿಸಿಕೊಳ್ಳಲು ನಾನು ಶಕ್ತನಿಲ್ಲ. ಭೀಮನು ರಾಜನಾಗಲಿ! ಇಷ್ಟೊಂದು ಅಪಮಾನಿತನಾದ ನಂತರವೂ ಜೀವಂತವಾಗಿರುವ ಅವಶ್ಯಕತೆಯು ನನಗಿಲ್ಲ!”

ಹೀಗೆ ಹೇಳಿ ತಕ್ಷಣವೇ ಹಾಸಿಗೆಯಿಂದ ಕೆಳಕ್ಕಿಳಿದು ವನಕ್ಕೆ ಹೊರಡಲು ಅನುವಾದ ರಾಜನಿಗೆ ವಾಸುದೇವನು ಪ್ರಣಯದಿಂದ ಹೇಳಿದನು:

“ರಾಜನ್! ಸತ್ಯಸಂಧ ಗಾಂಡೀವಧನ್ವಿಯು ಗಾಂಡೀವದ ಕುರಿತಾಗಿ ಮಾಡಿದ್ದ ಲೋಕದಲ್ಲಿ ವಿಶ್ರುತವಾದ ಪ್ರತಿಜ್ಞೆಯು ನಿನಗೆ ತಿಳಿದೇ ಇತ್ತು. “ಗಾಂಡೀವವನ್ನು ನಿನಗಿಂತಲೂ ಹೆಚ್ಚಿನವನಿಗೆ ಕೊಟ್ಟುಬಿಡು!” ಎಂದು ಹೇಳಿದ ಲೋಕದ ಯಾವ ಪುರುಷನೂ ಇವನಿಗೆ ವಧ್ಯನು. ಅಂತಹ ಮಾತನ್ನು ನೀನೇ ಆಡಿದೆ! ಅವನ ಪ್ರತಿಜ್ಞೆಯನ್ನು ಸತ್ಯವಾಗಿಸಲು ಮತ್ತು ನಿನ್ನನ್ನು ಪಾರ್ಥನಿಂದ ರಕ್ಷಿಸಲು ನಾನು ಹೇಳಿಕೊಟ್ಟಂತೆ

> ಅವನು ನಿನ್ನನ್ನು ಅಪಮಾನಿಸಿದ್ದಾನೆ. ಏಕೆಂದರೆ ಹಿರಿಯರ ಅಪಮಾನವೇ ಅವರ ವಧೆಯೆಂದು ಹೇಳುತ್ತಾರೆ. ಆದುದರಿಂದ ಪಾರ್ಥ ಮತ್ತು ನಾನು ಇಬ್ಬರೂ ಮಾಡಿದ ಈ ಅಪರಾಧವನ್ನು ಕ್ಷಮಿಸು! ನಾವಿಬ್ಬರೂ ನಿನಗೆ ಶರಣಾಗತರಾಗಿದ್ದೇವೆ! ಪ್ರೀತಿಯನ್ನು ಯಾಚಿಸುವ ನಮ್ಮನ್ನು ನೀನು ಕ್ಷಮಿಸಬೇಕು! ಇಂದು ಭೂಮಿಯು ಪಾಪಿ ರಾಧೇಯನ ರಕ್ತವನ್ನು ಕುಡಿಯುತ್ತದೆ! ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ಇಂದು ಸೂತಜನು ಹತನಾದನೆಂದೇ ತಿಳಿ! ಯಾರವಧೆಯನ್ನು ನೀನು ಇಚ್ಛಿಸುತ್ತಿರುವೆಯೋ ಅವನ ಜೀವವು ಇಂದು ಹೋದಂತೆಯೇ!”

ಹೀಗೆ ಹೇಳಿದ ಕೃಷ್ಣನನ್ನು ಕೇಳಿ ಧರ್ಮರಾಜ ಯುಧಿಷ್ಠಿರನು ಸಂಭ್ರಮದಿಂದ ನಮಸ್ಕರಿಸುತ್ತಿದ್ದ ಹೃಷೀಕೇಶನನ್ನು ಎಬ್ಬಿಸಿ ಅನಂತರ ಕೈಗಳನ್ನು ಮುಗಿದು ಈ ಮಾತನ್ನಾಡಿದನು:

> “ಗೋವಿಂದ! ಮಾಧವ! ನೀನು ಹೇಳಿದುದು ಸರಿ! ನಾನೇ ಎಡವಿದೆನು! ನಾನು ಸಮಾಧಾನಗೊಂಡಿದ್ದೇನೆ. ಇಂದು ನನ್ನನ್ನು ಉದ್ಧರಿಸಿದೆ! ನಮ್ಮೆಲ್ಲರನ್ನೂ ಇಂದು ನೀನು ಈ ಘೋರ ವ್ಯಸನದಿಂದ ಬಿಡುಗಡೆಮಾಡಿದೆ!

ಅಜ್ಞಾನಮೋಹಿತರಾದ ನಾವಿಬ್ಬರೂ ಇಂದು ನಿನ್ನನ್ನು ನಾಥನನ್ನಾಗಿ ಪಡೆದು ಘೋರವಾದ ವ್ಯಸನಸಾಗರದಿಂದ ಸಮುತ್ತೀರ್ಣರಾಗಿದ್ದೇವೆ! ನಿನ್ನ ಬುದ್ಧಿಯನ್ನೇ ನಾವೆಯನ್ನಾಗಿಸಿಕೊಂಡು ನಾವಿಬ್ಬರೂ ಅಮಾತ್ಯರೊಂದಿಗೆ ಸನಾಥರಾಗಿ ದುಃಖಶೋಕದ ಈ ಮಹಾಸಾಗರದಿಂದ ಮೇಲೆದ್ದಿದ್ದೇವೆ!"

ಹೀಗೆ ಕೃಷ್ಣನ ಮಾತಿನಂತೆ ಯುಧಿಷ್ಠಿರನನ್ನು ನಿಂದಿಸಿ ಮಾತನಾಡಿದ ಪಾರ್ಥನು ಏನೋ ಪಾತಕವನ್ನು ಮಾಡಿದ್ದೇನೆಂದು ವಿಮನಸ್ಕನಾದನು. ಆಗ ವಾಸುದೇವನು ನಗುತ್ತಿರುವನೋ ಎನ್ನುವಂತೆ ಪಾಂಡವನಿಗೆ ಹೇಳಿದನು:

"ಪಾರ್ಥ! ಒಂದುವೇಳೆ ನೀನು ಹರಿತವಾಗಿರುವ ಖಡ್ಗದಿಂದ ಧರ್ಮದಲ್ಲಿ ವ್ಯವಸ್ಥಿತನಾದ ಧರ್ಮಜನನ್ನು ಕೊಂದಿದ್ದರೆ ನಿನ್ನ ಸ್ಥಿತಿಯು ಏನಾಗುತ್ತಿತ್ತು? ರಾಜನನ್ನು ನೀನು ಎಂದು ಕರೆದುದರಿಂದಲೇ ಇಷ್ಟೊಂದು ದುಃಖಿತನಾಗಿರುವೆ. ಆದರೆ ನೃಪತಿಯನ್ನು ನೀನು ಸಂಹರಿಸಿದ್ದೇ ಆದರೆ ಅನಂತರ ನೀನು ಏನು ಮಾಡುತ್ತಿದ್ದೆ? ವಿಶೇಷವಾಗಿ ಮಂದಪ್ರಜ್ಞರಿಗೆ ಧರ್ಮವನ್ನು ತಿಳಿಯುವುದು ಕಷ್ಟಸಾಧ್ಯವಾದುದು.

ಧರ್ಮಭೀರುವಾಗಿರುವ ನಿನ್ನ ಜ್ಯೇಷ್ಠಭ್ರಾತನನ್ನು ವಧಿಸಿದ್ದರೆ ಖಂಡಿತವಾಗಿಯೂ ನೀನು ಘೋರರೂಪದ ಮಹಾನರಕವನ್ನು ಪಡೆಯುತ್ತಿದ್ದೆ! ನೀನು ಈಗ ಕುರುಶ್ರೇಷ್ಠ, ಧರ್ಮಸಂಹಿತ, ಧರ್ಮಭೃತರಲ್ಲಿ ಶ್ರೇಷ್ಠ ರಾಜನನ್ನು ಪ್ರಸನ್ನಗೊಳಿಸಬೇಕು ಎನ್ನುವುದು ನನ್ನ ಅಭಿಪ್ರಾಯ. ಭಕ್ತಿ-ಪ್ರೀತಿಯಿಂದ ಯುಧಿಷ್ಠಿರನನ್ನು ಪ್ರಸನ್ನಗೊಳಿಸಿ ನಾವು ತ್ವರೆಮಾಡಿ ಯುದ್ಧಮಾಡಲು ಸೂತಪುತ್ರನ ರಥದ ಕಡೆ ಹೋಗೋಣ! ಕರ್ಣನನ್ನು ಇಂದು ನಿಶಿತ ಶರಗಳಿಂದ ಸಂಹರಿಸಿ ಧರ್ಮಪುತ್ರನಿಗೆ ವಿಪುಲವಾದ ಸಂತೋಷವನ್ನು ನೀಡುವೆಯಂತೆ! ಇದಕ್ಕೆ ಕಾಲವು ಪ್ರಾಪ್ತವಾಗಿದೆ ಎಂದು ನನಗನ್ನಿಸುತ್ತಿದೆ. ಹೀಗೆ ನೀನು ಮಾಡಿದರೆ ನಿನ್ನ ಕಾರ್ಯವು ಸಿದ್ಧಿಯಾಗುತ್ತದೆ.”

ಆಗ ಅರ್ಜುನನು ಲಜ್ಜಾಸಮನ್ವಿತನಾಗಿ ಧರ್ಮರಾಜನ ಚರಣಗಳಲ್ಲಿ ಶಿರವನ್ನಿಟ್ಟು ನಮಸ್ಕರಿಸಿದನು. ಆ ಭರತಶ್ರೇಷ್ಠನು ಪುನಃ ಪುನಃ

“ರಾಜನ್! ಧರ್ಮಕಾಮದಿಂದ ಭೀರುವಾದ ನಾನು ಹೇಳಿದುದನ್ನು ಕ್ಷಮಿಸಿ ಪ್ರಸೀದನಾಗು!”

ಎಂದು ಹೇಳಿದನು. ಪಾದಗಳಮೇಲೆ ಬಿದ್ದಿದ್ದ ಅಳುತ್ತಿದ್ದ

ಧನಂಜಯನನ್ನು ನೋಡಿ ಯುಧಿಷ್ಠಿರನು ತಮ್ಮನನ್ನು ಮೇಲೆಬ್ಬಿಸಿದನು. ಧರ್ಮರಾಜನು ಅವನನ್ನು ಸ್ನೇಹಪೂರ್ವಕವಾಗಿ ಆಲಂಗಿಸಿ ಅವನೊಡನೆ ರೋದಿಸಿದನು. ಬಹಳ ಹೊತ್ತು ರೋದಿಸಿ ಆ ನರವ್ಯಾಘ್ರ ಸಹೋದರರೂ ಶುಚಿಮಾಡಿಕೊಂಡು ಹರ್ಷಿತರಾದರು. ಅನಂತರ ಪಾಂಡವನನ್ನು ಪ್ರೀತಿಯಿಂದ ಆಲಂಗಿಸಿ ನೆತ್ತಿಯನ್ನು ಆಘ್ರಾಣಿಸಿ ಪರಮ ಸಂತೋಷಯುಕ್ತನಾಗಿ ಮತ್ತು ವಿಸ್ಮಯನಾಗಿ ಜಯನಿಗೆ ಹೇಳಿದನು:

> “ಮಹಾಬಾಹೋ! ಸರ್ವಸೈನ್ಯವೂ ನೋಡುತ್ತಿದ್ದಂತೆಯೇ ರಣದಲ್ಲಿ ಪ್ರಯತ್ನಪಟ್ಟು ಯುದ್ಧಮಾಡುತ್ತಿದ್ದ ಮಹೇಷ್ವಾಸ ಕರ್ಣನು ಶರಗಳಿಂದ ನನ್ನ ಕವಚ, ಧ್ವಜ, ಧನುಸ್ಸು, ಶಕ್ತಿ ಕುದುರೆ, ಮತ್ತು ಗದೆಗಳನ್ನು ಕತ್ತರಿಸಿದನು. ಅವನನ್ನು ಮನಗಂಡು ಮತ್ತು ರಣದಲ್ಲಿ ಅವನ ಕರ್ಮವನ್ನು ನೋಡಿ ನಾನು ದುಃಖದಿಂದ ಕೃಶನಾಗುತ್ತಿದ್ದೇನೆ. ಜೀವಿತವಾಗಿರಲೂ ಇಷ್ಟವಾಗುತ್ತಿಲ್ಲ! ಒಂದು ವೇಳೆ ಇಂದು ನೀನು ಸೂತಜನನ್ನು ಸಂಹರಿಸದೇ ಇದ್ದರೆ ನಾನು ನನ್ನ ಪ್ರಾಣಗಳನ್ನೇ ಪರಿತ್ಯಜಿಸುತ್ತೇನೆ. ಮುಂದೆ ನಾನು ಜೀವಂತವಾಗಿರುವುದರ ಅರ್ಥವಾದರೂ ಏನಿದೆ?”

ಹೀಗೆ ಹೇಳಲು ವಿಜಯನು ಉತ್ತರಿಸಿದನು:

“ರಾಜನ್! ಸತ್ಯ, ನಿನ್ನ ಪ್ರಸಾದ, ಭೀಮ ಮತ್ತು ಯಮಳರ ಮೇಲೆ ಆಣೆಯಿಟ್ಟು ಶಪಥಮಾಡುತ್ತಿದ್ದೇನೆ! ಆಯುಧದ ಮೇಲೆ ಆಣೆಯಿಟ್ಟು ಹೇಳುತ್ತೇನೆ! ಇಂದು ಸಮರದಲ್ಲಿ ಕರ್ಣನನ್ನು ಕೊಲ್ಲುತ್ತೇನೆ ಅಥವಾ ಹತನಾಗಿ ಮಹೀತಲದಲ್ಲಿ ಬೀಳುತ್ತೇನೆ!”

ರಾಜನಿಗೆ ಹೀಗೆ ಹೇಳಿ ಅವನು ಮಾಧವನಿಗೆ ಈ ಮಾತನ್ನಾಡಿದನು:

“ಕೃಷ್ಣ! ಇಂದು ರಣದಲ್ಲಿ ಕರ್ಣನನ್ನು ಸಂಹರಿಸುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ಆ ದುರಾತ್ಮನ ವಧೆಯನ್ನು ನೀನು ಕೂಡ ನಿರ್ಧರಿಸಿರುವಂತಿದೆ!”

ಇದನ್ನು ಕೇಳಿದ ಕೇಶವನು ಪಾರ್ಥನಿಗೆ ಹೇಳಿದನು:

“ಭರತಶ್ರೇಷ್ಠ! ಯಥಾಬಲ ಪ್ರಯತ್ನ ಮಾಡಲು ನೀನು ಶಕ್ತನಾಗಿರುವೆ! ಇದೇ ನನ್ನ ನಿತ್ಯದ ಮನೋಕಾಮನೆಯೂ ಆಗಿದೆ. ನೀನು ರಣದಲ್ಲಿ ಹೇಗೆ ಕರ್ಣನನ್ನು ಕೊಲ್ಲುತ್ತೀಯೆ ಎನ್ನುವುದೂ ನನ್ನ ಅನುದಿನದ ಚಿಂತೆಯಾಗಿದೆ.”

ಮತಿಮಾನ್ ಮಾಧವನು ಧರ್ಮನಂದನನಿಗೆ ಪುನಃ ಇದನ್ನು ಹೇಳಿದನು:

“ಯುಧಿಷ್ಠಿರ! ಈ ಬೀಭತ್ಸುವನ್ನು ನೀನು ಸಂತವಿಸಬೇಕಾಗಿದೆ. ದುರಾತ್ಮ ಕರ್ಣನ ವಧೆಗೆ ಇಂದು ಆಜ್ಞೆಯನ್ನೂ ನೀಡಬೇಕು! ನೀನು ಕರ್ಣನ ಶರಗಳಿಂದ ಪೀಡಿತನಾದೆ ಎಂದು ಕೇಳಿದ ಇವನು ಮತ್ತು ನಾನು ನೀನು ಹೇಗಿರುವೆಯೆಂದು ತಿಳಿದುಕೊಳ್ಳಲು ಇಲ್ಲಿಗೆ ಬಂದಿದ್ದೆವು. ಅದೃಷ್ಟವಶಾತ್ ನೀನು ಅವನಿಂದ ಹತನಾಗಲಿಲ್ಲ. ಅದೃಷ್ಟವಶಾತ್ ನೀನು ಅವನ ಬಂಧಿಯಾಗಲಿಲ್ಲ. ಬೀಭತ್ಸುವನ್ನು ಸಂತವಿಸು ಮತ್ತು ಜಯದ ಆಶೀರ್ವಾದವನ್ನು ನೀಡು!”

ಯುಧಿಷ್ಠಿರನು ಹೇಳಿದನು:

“ಬಾ ಪಾರ್ಥ ಬಾ! ನನ್ನನ್ನು ತಬ್ಬಿಕೋ! ನಿಂದ್ಯವಾದರೂ ಹಿತಕರವಾದ ಮಾತನ್ನೇ ನೀನು ಆಡಿರುವೆ. ನಾನು ಅವೆಲ್ಲವನ್ನೂ ಕ್ಷಮಿಸಿದ್ದೇನೆ! ನಾನು ನಿನಗೆ ಆಜ್ಞೆಮಾಡುತ್ತಿದ್ದೇನೆ! ಧನಂಜಯ! ಕರ್ಣನನ್ನು ಸಂಹರಿಸು! ನಾನು ಹೇಳಿದ ದಾರುಣ ಮಾತುಗಳಿಂದ ಕೋಪಿಸಿಕೊಳ್ಳಬೇಡ!”

ಆಗ ಧನಂಜಯನು ಜ್ಯೇಷ್ಠ ಭ್ರಾತನ ಪಾದಗಳನ್ನು ಕೈಗಳಿಂದ ಹಿಡಿದು ಶಿರಸಾ ಸಮಸ್ಕರಿಸಿದನು. ರಾಜನು ಪೀಡಿತನಾಗಿದ್ದ ಅರ್ಜುನನನ್ನು

ಮೇಲೆತ್ತಿ ನೆತ್ತಿಯನ್ನು ಆಘ್ರಾಣಿಸಿ ಪುನಃ ಇದನ್ನು ಹೇಳಿದನು:

> “ಧನಂಜಯ! ನಿನ್ನ ದೃಢತೆಯಿಂದ ನನ್ನನ್ನು ಗೌರವಿಸಿರುವೆ! ಶಾಶ್ವತವಾದ ಮಹಾತ್ಮೆಯನ್ನೂ ವಿಜಯನ್ನೂ ಪಡೆಯುತ್ತೀಯೆ!”

ಅರ್ಜುನನು ಹೇಳಿದನು:

> “ಇಂದು ಆ ಪಾಪಕರ್ಮಿ ಬಲಗರ್ವಿತ ರಾಧೇಯನನ್ನು ರಣದಲ್ಲಿ ಎದುರಿಸಿ ಶರಗಳಿಂದ ಅವನನ್ನೂ ಅನುಯಾಯಿಗಳನ್ನೂ ಕಡೆಗಾಣಿಸುತ್ತೇನೆ! ಕಾರ್ಮುಕವನ್ನು ದೃಢವಾಗಿ ಬಗ್ಗಿಸಿ ಬಾಣಗಳಿಂದ ನಿನ್ನನ್ನು ಪೀಡಿಸಿದ ಆ ಕರ್ಣನು ತನ್ನ ಕರ್ಮಗಳ ಧಾರುಣ ಫಲವನ್ನು ಇಂದು ಪಡೆಯುತ್ತಾನೆ. ಇಂದು ನಾನು ಕರ್ಣನನ್ನು ಕೊಂದೇ ನಿನ್ನ ಬಳಿ ಬರುತ್ತೇನೆ! ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ! ಇಂದು ಕರ್ಣನನ್ನು ಸಂಹರಿಸದೇ ನಾನು ರಣರಂಗದಿಂದ ಹಿಂದಿರುಗುವುದಿಲ್ಲ. ನಿನ್ನ ಪಾದಗಳನ್ನು ಸ್ಪರ್ಶಿಸಿ ಆಣೆಯಿಟ್ಟು ಹೇಳುತ್ತೇನೆ!”

ಧರ್ಮರಾಜನನ್ನು ಹೀಗೆ ಪ್ರಸನ್ನಗೊಳಿಸಿ ಒಳಗಿಂದೊಳಗೇ

ಪ್ರಹೃಷ್ಟನಾಗಿ ಸೂತಪುತ್ರನ ವಧೆಗೆ ಸಿದ್ಧನಾದ ಪಾರ್ಥನು ಗೋವಿಂದನಿಗೆ ಹೇಳಿದನು:

> “ಪುನಃ ರಥವು ಸಿದ್ಧವಾಗಲಿ. ಉತ್ತಮ ಹಯಗಳನ್ನು ಹೂಡಲಿ. ಸರ್ವ ಆಯುಧಗಳೂ ಮಹಾರಥದಲ್ಲಿ ಸಜ್ಜಾಗಿ ಇಡಲ್ಪಡಲಿ! ಕುದುರೆಸವಾರರಿಂದ ಪಳಗಿಸಲ್ಪಟ್ಟ ಮತ್ತು ತಿರುಗಾಡಿಸಲ್ಪಟ್ಟ ಕುದುರೆಗಳು ಸರ್ವ ರಥೋಪಕರಣಗಳೊಡನೆ ಬೇಗನೇ ಸಜ್ಜಾಗಲಿ!”

ಫಲ್ಗುನನು ಹೀಗೆ ಹೇಳಲು ಕೃಷ್ಣನು ದಾರುಕನಿಗೆ

> “ಸರ್ವಧನುಷ್ಮತರಲ್ಲಿ ಶ್ರೇಷ್ಠ ಭರತಶ್ರೇಷ್ಠ ಅರ್ಜುನನು ಹೇಳಿದಂತೆ ಎಲ್ಲವನ್ನೂ ಮಾಡು!”

ಎಂದನು. ಕೃಷ್ಣನಿಂದ ಆಜ್ಞಾಪಿತನಾದ ದಾರುಕನು ವ್ಯಾಘ್ರಚರ್ಮದಿಂದ ಆಚ್ಛಾದಿತವಾದ ಶತ್ರುಗಳನ್ನು ಸುಡಬಲ್ಲ ಆ ರಥವನ್ನು ಸಜ್ಜುಗೊಳಿಸಿದನು.

## ಕರ್ಣನ ವಧೆಗಾಗಿ ಕೃಷ್ಣಾರ್ಜುನರು ರಣಭೂಮಿಗೆ ಪ್ರಸ್ಥಾನಗೊಂಡಿದುದು

ದಾರುಕನು ಸಿದ್ಧಗೊಳಿಸಿದ ರಥವನ್ನು ನೋಡಿ ಅರ್ಜುನನು

ಧರ್ಮರಾಜನ ಆಶೀರ್ವಾದ ಮತ್ತು ಬ್ರಾಹ್ಮಣರ ಸ್ವಸ್ತಿವಾಚನವನ್ನು ಕೇಳಿಸಿಕೊಂಡು ಆ ಸುಮಂಗಲಯುಕ್ತ ಉತ್ತಮ ರಥವನ್ನೇರಿದನು. ಧರ್ಮರಾಜ ಯುಧಿಷ್ಠಿರನು ಅವನಿಗೆ ಕರ್ಣವಧೆಯ ಕುರಿತು ಪರಮ ಆಶೀರ್ವಚನಗಳನ್ನಿತ್ತನು. ಆ ಮಹೇಷ್ವಾಸನು ಹೋಗುತ್ತಿರುವುದನ್ನು ನೋಡಿ ಭೂತಗಳು ಮಹಾತ್ಮ ಪಾಂಡವನಿಂದ ಕರ್ಣನು ಹತನಾದನೆಂದೇ ಭಾವಿಸಿದರು. ಎಲ್ಲ ದಿಕ್ಕುಗಳೂ ಸುತ್ತಲೂ ವಿಮಲವಾದವು. ನವಿಲುಗಳೂ, ಸಾರಸಗಳೂ ಮತ್ತು ಕ್ರೌಂಚಪಕ್ಷಿಗಳೂ ಪಾಂಡುನಂದನನ್ನು ಪ್ರದಕ್ಷಿಣೆ ಮಾಡಿ ಹಾರುತ್ತಿದ್ದವು. ಅನೇಕ ಶುಭ ಮಂಗಳಕರ ಗಂಡುಪಕ್ಷಿಗಳು ಅರ್ಜುನನನ್ನು ಯುದ್ಧಕ್ಕೆ ತ್ವರೆಮಾಡುತ್ತಿರುವವೋ ಎನ್ನುವಂತೆ ಸಂತೋಷದಿಂದ ಕೂಗುತ್ತಿದ್ದವು. ಭಯಾನಕ ಹದ್ದುಗಳೂ, ರಣಹದ್ದುಗಳೂ, ಗಿಡುಗಗಳೂ ಮತ್ತು ಕಾಗೆಗಳು ಮಾಂಸದ ಸಲುವಾಗಿ ಅವನ ಮುಂದೆ ಮುಂದೆ ಹೋಗುತ್ತಿದ್ದವು. ಧನ್ಯ ನಿಮಿತ್ತಗಳು ಪಾರ್ಥನನ್ನು ಪ್ರಶಂಶಿಸಿದವು ಮತ್ತು ಹಾಗೆಯೇ ಅರಿಸೇನೆಗಳ ವಿನಾಶವನ್ನೂ ಕರ್ಣನ ವಧೆಯನ್ನೂ ಸೂಚಿಸಿದವು. ಹಾಗೆ ಪಾರ್ಥನು ಪ್ರಯಾಣಿಸುತ್ತಿರುವಾಗ ಅವನಿಗೆ ಅತಿಯಾದ ಬೆವರುಂಟಾಯಿತು. ಇದು ಏಕೆ ಹೀಗಾಗುತ್ತಿದೆ ಎಂಬ ವಿಪುಲ ಚಿಂತೆಯೂ ಅವನಿಗುಂಟಾಯಿತು.

ಹಾಗೆ ಚಿಂತಾಪರನಾಗಿಹೋಗಿದ್ದ ಪಾರ್ಥನನ್ನು ನೋಡಿ ಮಧುಸೂದನನು ಗಾಂಡೀವಧನ್ವಿಗೆ ಹೀಗೆ ಹೇಳಿದನು:

“ಗಾಂಡೀವಧನ್ವಿಯೇ! ನಿನ್ನ ಧನುಸ್ಸಿನಿಂದ ನೀನು ಸಂಗ್ರಾಮದಲ್ಲಿ ಯಾರನ್ನು ಜಯಿಸಿದ್ದೀಯೋ ಅವರನ್ನು ಅನ್ಯ ಮಾನವರು ಜಯಿಸಲು ಸಾಧ್ಯವಾಗುತ್ತಿರಲಿಲ್ಲ. ಶಕ್ರತುಲ್ಯಪರಾಕ್ರಮವುಳ್ಳ ಅನೇಕ ಶೂರರು ಸಮರದಲ್ಲಿ ನಿನ್ನನ್ನು ಎದುರಿಸಿ ವೀರರ ಪರಮ ಗತಿಯನ್ನು ಹೊಂದಿರುವುದನ್ನು ನೋಡಿದ್ದೇವೆ! ದ್ರೋಣ, ಭೀಷ್ಮ, ಭಗದತ್ತ, ಅವಂತಿಯ ವಿಂದಾನುವಿಂದರು, ಕಾಂಬೋಜದ ಸುದಕ್ಷಿಣ, ಮಯಾವೀರ್ಯ ಶ್ರುತಾಯುಷ ಮತ್ತು ಅಚ್ಯುತಾಯುಷರನ್ನು ಎದುರಿಸಿ ನೀನಲ್ಲದೇ ಬೇರೆ ಯಾರಿಗೆ ತಾನೇ ಕ್ಷೇಮದಿಂದ ಇರಲು ಸಾಧ್ಯವಾಗುತ್ತಿತ್ತು? ನಿನ್ನಲ್ಲಿ ದಿವ್ಯಾಸ್ತ್ರಗಳು, ಲಾಘವವೂ, ಬಲವೂ ಇವೆ. ಲಕ್ಷ್ಯಭೇದನ ಪಾತನಗಳು ನಿನಗೆ ಚೆನ್ನಾಗಿ ತಿಳಿದಿವೆ. ಯುದ್ಧದಲ್ಲಿ ನೀನು ಸಮ್ಮೋಹನನಾಗುವುದಿಲ್ಲ. ಮತ್ತು ನಿನ್ನಲ್ಲಿ ವಿಶೇಷ ಜ್ಞಾನವಿದೆ. ನೀನು ದೇವಾಸುರರನ್ನೂ ಸಚರಾಚರ ಸರ್ವವನ್ನೂ ಪೃಥ್ವಿಯನ್ನೂ ನಾಶಗೊಳಿಸಬಲ್ಲೆ. ರಣದಲ್ಲಿ ನಿನ್ನ ಸಮನಾದ

ಪುರುಷ ಯೋಧನು ಇಲ್ಲ! ದೇವತೆಗಳ ಪರ್ಯಂತವಾಗಿ ಯುದ್ಧದುರ್ಮದರಾದ ಧನುಸ್ಸನ್ನು ಹಿಡಿದಿರುವ ಕ್ಷತ್ರಿಯರೇನೋ ಇದ್ದಾರೆ. ಆದರೆ ಅವರಲ್ಲಿ ನಿನ್ನ ಸಮನಾಗಿರುವವರನ್ನು ನಾನು ನೋಡಿಲ್ಲ. ಕೇಳಿಯೂ ಇಲ್ಲ. ಬ್ರಹ್ಮನಿಂದ ಪ್ರಜೆಗಳೂ ಮತ್ತು ಈ ಮಹಾದ್ಭುತವಾದ ಗಾಂಡೀವವೂ ಸೃಷ್ಟಿಸಲ್ಪಟ್ಟವು. ಅದರಿಂದ ನೀನು ಯುದ್ಧಮಾಡುತ್ತಿರುವೆ! ನಿನ್ನ ಸಮನಾಗಿರುವವರು ಯಾರೂ ಇಲ್ಲ! ಆದರೂನಿನ್ನ ಹಿತದಲ್ಲಿ ನಾನು ಈ ಮಾತನ್ನು ಹೇಳುವುದು ಅವಶ್ಯಕವಾಗಿದೆ.

ಮಹಾಬಾಹೋ! ಆಹವಶೋಭೀ ಕರ್ಣನನ್ನು ಅವಗಣಿಸಬೇಡ! ಏಕೆಂದರೆ ಕರ್ಣನು ಬಲವಾನನು. ಅಭಿಮಾನಿಯು. ಅಸ್ತ್ರವಿದನು. ಮಹಾರಥನು. ಯುದ್ಧಕುಶಲನು. ಚಿತ್ರಯೋಧಿಯು. ಮತ್ತು ದೇಶ-ಕಾಲಗಳ ಕೋವಿದನು. ತೇಜಸ್ಸಿನಲ್ಲಿ ವಹ್ನಿಸದೃಶನು. ವೇಗದಲ್ಲಿ ವಾಯುವಿನ ವೇಗಸಮನು. ಕ್ರೋಧದಲ್ಲಿ ಅಂತಕನಂತೆ ಮತ್ತು ಬಲದಲ್ಲಿ ಸಿಂಹದಂತೆ. ಎತ್ತರವಾಗಿರುವನು. ಮಾಹಾಬಾಹು. ವಿಶಾಲ ಎದೆಯುಳ್ಳವನು. ಜಯಿಸಲು ಕಷ್ಟಕರನಾದವನು.

ಅತಿಮಾನಿನಿಯು. ಶೂರ, ಪ್ರವೀರ ಮತ್ತು ನೋಡಲು ಸುಂದರನು. ಯೋಧನ ಸರ್ವ ಗುಣಗಳಿಂದಲೂ ಕೂಡಿದವನು. ಮಿತ್ರರಿಗೆ ಅಭಯವನ್ನುಂಟುಮಾಡುವವನು. ಸತತವೂ ಪಾಂಡವದ್ವೇಷಿಯಾಗಿರುವನು ಮತ್ತು ಧಾರ್ತರಾಷ್ಟ್ರರ ಹಿತದಲ್ಲಿ ನಿರತನಾಗಿರುವವನು. ರಾಧೇಯನು ನಿನ್ನನ್ನು ಮಾತ್ರ ಬಿಟ್ಟು ಎಲ್ಲರಿಂದಲೂ, ವಾಸವನೊಂದಿಗೆ ದೇವತೆಗಳಿಂದಲೂ, ಅವಧ್ಯನು ಎಂದು ನನ್ನ ಯೋಚನೆ. ಇಂದು ಸೂತಜನನ್ನು ಕೊಲ್ಲು! ಮಾಂಸಶೋಣಿತಯುಕ್ತವಾದ ಶರೀರಗಳನ್ನು ಧರಿಸಿ ದೇವತೆಗಳು ಯುದ್ಧೋತ್ಸುಕರಾಗಿ ಬಂದರೂ ಸಮರದಲ್ಲಿ ಅವರೆಲ್ಲರಿಂದ ಇವನನ್ನು ಜಯಿಸಲು ಶಕ್ಯವಾಗುವುದಿಲ್ಲ. ಇಂದು ಆ ದುರಾತ್ಮನನ್ನೂ, ಪಾಪಮತಿಯನ್ನೂ, ನೃಶಂಸನನ್ನೂ, ನಿತ್ಯವೂ ಪಾಂಡವರೊಡನೆ ದುಷ್ಟನಾಗಿ ನಡೆದುಕೊಂಡುಬಂದಿರುವ, ಹೀನಸ್ವಾರ್ಥ, ಪಾಂಡವೇಯರ ವಿರೋಧೀ ಕರ್ಣನನ್ನು ಸಂಹರಿಸಿ ನಿನ್ನ ಮನೋರಥವನ್ನು ಪೂರೈಸಿಕೋ! ಧನಂಜಯ! ಯಾರಿಂದಾಗಿ ಸುಯೋಧನನು ತನ್ನನ್ನು ವೀರನೆಂದು ತಿಳಿದುಕೊಂಡಿದ್ದಾನೋ ಅವನ ಪಾಪಗಳ ಮೂಲ ಸೌತಿಯನ್ನು ಇಂದು ಜಯಿಸು!”

ಆಗ ಎಲ್ಲರೀತಿಯಲ್ಲಿಯೂ ಕರ್ಣನ ವಧೆಯ ಸಂಕಲ್ಪವನ್ನು ಮಾಡಿದ ಕೇಶವನು ಪುನಃ ಅರ್ಜುನನಿಗೆ ಹೇಳಿದನು:

"ಭಾರತ! ಇಂದು ನರವಾರಣವಾಜಿಗಳ ಅತಿಘೋರ ವಿನಾಶದ ಹದಿನೇಳನೆಯ ದಿನವು ನಡೆಯುತ್ತಿದೆ. ಸಮರದಲ್ಲಿ ಅನ್ಯೋನ್ಯರನ್ನು ಎದುರಿಸಿ ನಿನ್ನ ಮತ್ತು ಶತ್ರುಸೇನೆಗಳಲ್ಲಿ ಒಟ್ಟಿಗೇ ವಿಪುಲ ಸೇನೆಯು ನಾಶವಾಗಿ ಸ್ವಲ್ಪ ಭಾಗ ಮಾತ್ರ ಉಳಿದುಕೊಂಡಿದೆ. ಹಿಂದೆ ಕೌರವರು ಬಹುಸಂಖ್ಯಾತ ಆನೆ-ಕುದುರೆಗಳಿಂದ ಕೂಡಿದ್ದರು. ಆದರೆ ಅವರು ಶತ್ರುವಾದ ನಿನ್ನನ್ನು ಎದುರಿಸಿ ರಣಮೂರ್ಧನಿಯಲ್ಲಿ ವಿನಷ್ಟವಾದವು. ಈ ಎಲ್ಲ ಪಾಂಚಾಲರೂ ಸೃಂಜಯರೂ ಮತ್ತು ತಮ್ಮ ಅನುಯಾಯಿಗಳೊಂದಿಗೆ ಪಾಂಡವರೂ ದುರ್ಧರ್ಷನಾದ ನಿನ್ನನ್ನು ಪಡೆದು ರಣದಲ್ಲಿ ವ್ಯವಸ್ಥಿತರಾಗಿ ನಿಂತಿದ್ದಾರೆ. ನಿನ್ನಿಂದ ರಕ್ಷಿತರಾದ ಪಾಂಚಾಲರು, ಪಾಂಡವರು, ಮತ್ಸ್ಯರು, ಕಾರೂಷರು, ಚೇದಿ-ಕೇಕಯರು ಶತ್ರುಗಣಗಳನ್ನು ನಾಶಪಡಿಸಿರುವರು. ನಿನ್ನಿಂದ ರಕ್ಷಿತರಾಗಿರುವ ಮಹಾರಥ ಪಾಂಡವರಲ್ಲದೇ ಬೇರೆ ಯಾರಿಗೆ ರಣದಲ್ಲಿ ಕೌರವರನ್ನು ಗೆಲ್ಲಲು ಶಕ್ಯವಾಗಿದ್ದಿತು? ರಣದಲ್ಲಿ

ಸುರಾಸುರಮನುಷ್ಯರೊಂದಿಗೆ ತ್ರಿಲೋಕಗಳನ್ನೂ ಗೆಲ್ಲಲು ನೀನು ಶಕ್ತನಾಗಿರುವಾಗ ಇನ್ನು ಕೌರವ ಸೇನೆಯು ಯಾವ ಲೆಕ್ಕಕ್ಕೆ? ವಾಸವನಂತಿದ್ದ ರಾಜ ಭಗದತ್ತನನ್ನು ನಿನ್ನ ಹೊರತು ಬೇರೆ ಯಾರು ಗೆಲ್ಲಲು ಶಕ್ಯರಾಗಿದ್ದರು? ನಿನ್ನಿಂದ ರಕ್ಷಿಸಲ್ಪಟ್ಟ ಈ ವಿಪುಲ ಸೇನೆಯನ್ನು ಕಣ್ಣುಗಳಿಂದ ನೇರವಾಗಿ ನೋಡಲು ಕೂಡ ಈ ಪಾರ್ಥಿವರೆಲ್ಲರಿಗೂ ಸಾಧ್ಯವಿಲ್ಲ. ಹಾಗೆಯೇ ರಣದಲ್ಲಿ ಸತತವೂ ನಿನ್ನಂದ ರಕ್ಷಿಸಲ್ಪಟ್ಟ ಧೃಷ್ಟದ್ಯುಮ್ನ-ಶಿಖಂಡಿಯರು ಭೀಷ್ಮ-ದ್ರೋಣರನ್ನು ಕೆಳಗುರುಳಿಸಿದರು. ಶಕ್ರನ ಸಮನಾದ ಪರಾಕ್ರಮವುಳ್ಳ ಭೀಷ್ಮ-ದ್ರೋಣರನ್ನು ಯುದ್ಧದಲ್ಲಿ ಜಯಿಸಲು ಮಹಾರಥರಾದ ಪಾಂಚಾಲರಿಗಾದರೋ ಹೇಗೆ ಶಕ್ಯವಾಯಿತು? ಅಕ್ಷೌಹಿಣೀಪತಿಗಳಾದ, ಉಗ್ರರಾದ, ಸಂರಬ್ಧರಾದ, ಯುದ್ಧದುರ್ಮದರಾದ, ವೀರರಾದ, ಕೃತಾಸ್ತ್ರರಾದ, ಸಮರದಿಂದ ಎಂದೂ ಪಲಾಯನಮಾಡದ ಶಾಂತನವ, ದ್ರೋಣ, ವೈಕರ್ತನ, ಕೃಪ, ದ್ರೌಣಿ, ಸೌಮದತ್ತಿ, ಕೃತವರ್ಮ, ಸೈಂದವ, ಮದ್ರರಾಜ, ಮತ್ತು ರಾಜಾ ಸುಯೋಧನರನ್ನು ನೀನಲ್ಲದೇ ಬೇರೆ ಯಾರು ರಣದಲ್ಲಿ ಎದುರಿಸಿಯಾರು? ನಾನಾಜನಪದಗಳಿಂದ ಬಂದಿರುವ ಉಗ್ರ ಕ್ಷತ್ರಿಯರ ಅಶ್ವ-

ರಥ-ಅನೆಗಳ ಶ್ರೇಣಿಗಳು ಬಹಳವಾಗಿ ಕ್ಷೀಣವಾಗಿವೆ. ಗೋವಾಸರ, ದಾಸಮೀಯರ, ವಸಾತಿಗಳ, ವ್ರಾತ್ಯರ, ವಾಟಧಾನರ, ಮಾನಿನಿ ಭೋಜರ, ಉದೀರ್ಣರ ಮತ್ತು ಬ್ರಹ್ಮಕ್ಷತ್ರರ ಮಹಾಸೇನೆಗಳು ನಿನ್ನನ್ನು ಎದುರಿಸಿ ಅಶ್ವರಥಗಜಗಳೊಂದಿಗೆ ನಿಧನವಾದವು. ಉಗ್ರರಾದ, ಕೋಪಿಷ್ಟರೂ, ಯುದ್ಧಶೌಂಡರೂ, ಬಲಶಾಲಿಗಳೂ, ದೃಢಪಾಣಿಯರೂ, ಕ್ರೂರಕರ್ಮಿಗಳೂ ಆದ ತುಖರರು, ಯವನರು, ಖಶರು, ದಾರ್ವರು, ಅಭಿಸಾರರು, ದರದರು, ಶಕರು, ರಮಠತಂಗಣರು, ಆಂಧ್ರಕರು, ಪುಲಿಂದರು, ಉಗ್ರಕರ್ಮಿಗಳಾದ ಕಿರಾತರು, ಮ್ಲೇಚ್ಛರು, ಪಾರ್ವತೀಯರು, ಮತ್ತು ಸಾಗರಾನೂಪವಾಸಿಗಳು ಸುಯೋಧನನಿಗೋಸ್ಕರವಾಗಿ ಕುರುಗಳನ್ನು ಸೇರಿ ಹೋರಾಡಿದರು. ನೀನಲ್ಲದೇ ಬೇರೆ ಯಾರೂ ಯುದ್ಧದಲ್ಲಿ ಅವರನ್ನು ಜಯಿಸಲು ಶಕ್ಯರಾಗಿರಲಿಲ್ಲ. ವ್ಯೂಹಕ್ರಮದಲ್ಲಿದ್ದ ಧಾರ್ತರಾಷ್ಟ್ರನ ಉಗ್ರವಾದ ಮಹಾಸೇನೆಯನ್ನು ನೋಡಿ ನಿನ್ನಿಂದ ರಕ್ಷಿಸಲ್ಪಡದ ಯಾವ ಮನುಷ್ಯನು ತಾನೇ ಎದುರಿಸುತ್ತಿದ್ದನು? ಧೂಳಿನಿಂದ ಆವೃತವಾಗಿ ಸಾಗರದಂತೆ ಉಕ್ಕಿ ಬರುತ್ತಿದ್ದ ಆ ಸೇನೆಯನ್ನು ನಿನ್ನಿಂದ ರಕ್ಷಿತರಾದ ಪಾಂಡವರು ನಾಶಗೊಳಿಸಿದರು.

ಇಂದಿನಿಂದ ಏಳು ದಿನಗಳ ಹಿಂದೆ ಯುದ್ಧದಲ್ಲಿ ಮಾಗಧರ ಅಧಿಪತಿ ಜಯತ್ಸೇನನು ಅಭಿಮನ್ಯುವಿನಿಂದ ಹತನಾದನು. ಅನಂತರ ಆ ರಾಜನಿಂದ ರಕ್ಷಿತಗೊಂಡಿದ್ದ ಹತ್ತು ಸಾವಿರ ಆನೆಗಳನ್ನು ಭೀಮಸೇನನು ಗದೆಯಿಂದ ಸಂಹರಿಸಿದನು. ಅವನ ಸೇನೆಯ ನೂರಾರು ಅನ್ಯ ರಥಗಳೂ ಆನೆಗಳೂ ನಾಶಗೊಂಡವು. ಹಾಗೆಯೇ ಮಹಾಭಯಂಕರ ಸಮರವು ನಡೆಯುತ್ತಿರಲು ಕೌರವರು ಭೀಮಸೇನನನ್ನು ಮತ್ತು ನಿನ್ನನ್ನು ಎದುರಿಸಿ ಕುದುರೆ, ರಥಗಳು ಮತ್ತು ಆನೆಗಳೊಂಡಿಗೆ ಮೃತ್ಯುಲೋಕಕ್ಕೆ ಹೋದರು.

ಹಾಗೆ ಪಾಂಡವರಿಂದ ಅವರು ನಾಶಗೊಳ್ಳುತ್ತಿರಲು ಭೀಷ್ಮನು ಉಗ್ರ ಶರವರ್ಷಗಳನ್ನು ಸುರಿಸಿದನು. ಮಹಾಸ್ತ್ರಗಳನ್ನು ತಿಳಿದಿದ್ದ ಅವನು ಚೇದಿ, ಕಾಶಿ, ಪಾಂಚಾಲ, ಕರೂಷ, ಮತ್ಸ್ಯ ಕೇಕಯರನ್ನು ಶರಗಳಿಂದ ಮುಚ್ಚಿ ಸಂಹರಿಸಿದನು. ಅವನ ಚಾಪದಿಂದ ಹೊರಟ ಶತ್ರುದೇಹಗಳನ್ನು ಕೊರೆಯುವಂತಹ, ರುಕ್ಮಪುಂಖಗಳ ಜಿಹ್ಮಗ ಬಾಣಗಳಿಂದ ಆಕಾಶವೇ ತುಂಬಿಹೋಗಿತ್ತು. ಅವನು ಒಂಭತ್ತು ಬಗೆಯ ದುಷ್ಟಬಾಣಪ್ರಯೋಗಗಳ ಮಾರ್ಗಗಳನ್ನು ತ್ಯಜಿಸಿ ಹತ್ತನೆಯ

ಮಾರ್ಗವನ್ನು ಬಳಸಿ ಕುದುರೆ-ಆನೆ-ರಥಗಳನ್ನು ಸಂಹರಿಸಿದನು. ಹತ್ತುದಿನಗಳ ಪರ್ಯಂತವಾಗಿ ಭೀಷ್ಮನು ನಿನ್ನ ಸೇನೆಯಲ್ಲಿ ರಥಾರೂಡರನ್ನು ಶೂನ್ಯರನ್ನಾಗಿ ಮಾಡಿದನು ಮತ್ತು ಆನೆ-ಕುದುರೆಗಳನ್ನು ಸಂಹರಿಸಿದನು. ಯುದ್ಧದಲ್ಲಿ ತನ್ನ ರುದ್ರ ಮತ್ತು ಉಪೇಂದ್ರರ ಸಮನಾದ ರೂಪವನ್ನು ತೋರಿಸುತ್ತಾ ಅವನು ಪಾಂಡವರ ಸೇನೆಯಲ್ಲಿ ಆರಿಸಿ ನಾಶಗೊಳಿಸುತ್ತಿದ್ದನು. ಚೇದಿ-ಪಾಂಚಾಲ-ಕೇಕಯ ಪೃಥ್ವೀಪಾಲರನ್ನು ಸಂಹರಿಸಿ ಪಾಂಡವೀ ಸೇನೆಯ ನರ-ಅಶ್ವ-ಗಜ ಸಂಕುಲಗಳನ್ನು ದಹಿಸಿದನು. ಸುಳಿಯಲ್ಲಿ ಮುಳುಗಿಹೋಗುವವನಂತಿದ್ದ ಮಂದ ಸುಯೋಧನನನ್ನು ಗೆಲ್ಲಿಸಲು ಬಯಸಿ ಸಮರದಲ್ಲಿ ಸುಡುತ್ತಿರುವ ಸೂರ್ಯನಂತೆ ಸಂಚರಿಸುತ್ತಿದ್ದ ಅವನನ್ನು ಸೃಂಜಯರೂ ಅನ್ಯ ಮಹೀಕ್ಷಿತರೂ ನೋಡಲೂ ಕೂಡ ಶಕ್ಯರಾಗುತ್ತಿರಲಿಲ್ಲ. ಸಂಗ್ರಾಮದಲ್ಲಿ ಜಯವನ್ನು ಬಯಸಿ ಹಾಗಿ ಸಂಚರಿಸುತ್ತಿರುವ ಅವನನ್ನು ಪಾಂಡವರು ಸರ್ವ ಪ್ರಯತ್ನದಿಂದ ಆಕ್ರಮಣಿಸಿದರು. ಆದರೆ ಭೀಷ್ಮನು ಸಮರದಲ್ಲಿ ಪಾಂಡವರನ್ನೂ ಸೃಂಜಯರನ್ನೂ ಪಲಾಯನಗೊಳಿಸಿ ಅವನೊಬ್ಬನೇ ರಣದಲ್ಲಿ ಏಕವೀರತ್ವವನ್ನು ಪಡೆದನು. ಆಗ ಆ ಪುರುಷವ್ಯಾಘ್ರನನ್ನು ನಿನ್ನಿಂದ ರಕ್ಷಿತನಾದ

ಶಿಖಂಡಿಯು ಎದುರಿಸಿ ಸನ್ನತಪರ್ವ ಶರಗಳಿಂದ ಕೆಳಗುರುಳಿಸಿದನು. ನಿನ್ನನ್ನು ಶತ್ರುವನ್ನಾಗಿ ಪಡೆದ ಪಿತಾಮಹನು ಈಗ ಶರತಲ್ಪದ ಮೇಲೆ ಮಲಗಿದ್ದಾನೆ!

ಉಗ್ರ ದ್ರೋಣನು ವ್ಯೂಹವನ್ನು ರಚಿಸಿ ಮಹಾರಥರನ್ನು ಉರುಳಿಸುತ್ತಾ ಶತ್ರುಸೇನೆಯನ್ನು ಭೇದಿಸಿ ಐದು ದಿನಗಳ ಮಹಾಯುದ್ಧವನ್ನು ನಡೆಸಿದನು. ಆ ಮಹಾರಥನು ಸಮರದಲ್ಲಿ ಜಯದ್ರಥನ ರಕ್ಷಣೆಯನ್ನು ಮಾಡಿ ಉಗ್ರ ರಾತ್ರಿಯಲ್ಲಿ ಅಂತಕನಂತೆ ಯುದ್ಧಮಾಡಿ ಸೇನೆಗಳನ್ನು ದಹಿಸಿದನು. ಇಂದಿನಿಂದ ಎರಡು ದಿನಗಳ ಹಿಂದೆ ವೀರ ಪ್ರತಾಪವಾನ್ ಭಾರದ್ವಾಜನು ಧೃಷ್ಟದ್ಯುಮ್ನನನ್ನು ಎದುರಿಸಿ ಪರಮಗತಿಯನ್ನು ಪಡೆದನು. ಆಗ ನೀನು ಯುದ್ಧದಲ್ಲಿ ಸೂತಪುತ್ರನೇ ಮೊದಲಾದ ಶತ್ರುಪಕ್ಷದ ರಥರನ್ನು ತಡೆಯದೇ ಇದ್ದಿದ್ದರೆ ಸಂಗ್ರಾಮದಲ್ಲಿ ನಾವು ದ್ರೋಣನನ್ನು ನಾಶಪಡಿಸಲು ಸಾಧ್ಯವಾಗುತ್ತಿರಲಿಲ್ಲ. ನೀನು ಧಾರ್ತರಾಷ್ಟ್ರನ ಸರ್ವ ಸೇನೆಯನ್ನು ತಡೆದುದರಿಂದಲೇ ಯುದ್ಧದಲ್ಲಿ ದ್ರೋಣನು ಪಾರ್ಷತನಿಂದ ಹತನಾದನು. ಜಯದ್ರಥನ ವಧೆಗಾಗಿ ನೀನು ರಣದಲ್ಲಿ ಮಾಡಿದಂತೆ ಯುದ್ಧದಲ್ಲಿ

ಮಾಡಬಲ್ಲ ಬೇರೆ ಯಾವ ಕ್ಷತ್ರಿಯನು ಇದ್ದಾನೆ? ಅಸ್ತ್ರಬಲತೇಜಸ್ಸಿನಿಂದ ನೀನು ಶೂರ ಪಾರ್ಥಿವವನ್ನು ಸಂಹರಿಸಿ, ಮಹಾಸೇನೆಯನ್ನು ತಡೆದು ನಿಲ್ಲಿಸಿ, ರಾಜಾ ಸೈಂಧವನನ್ನು ಸಂಹರಿಸಿದೆ. ಸಿಂಧುರಾಜನ ವಧೆಯನ್ನು ಒಂದು ಆಶ್ಚರ್ಯವೆಂದೇ ಪಾರ್ಥಿವರು ತಿಳಿದುಕೊಂಡಿದ್ದಾರೆ. ಆದರೆ ಮಹಾರಥನಾದ ನಿನಗೆ ಇದೊಂದು ಆಶ್ಚರ್ಯಕರವಾದುದೇನಲ್ಲ! ಕ್ಷತ್ರಿಯರೆಲ್ಲರೂ ಒಟ್ಟಾಗಿ ರಣದಲ್ಲಿ ನಿನ್ನನ್ನು ಎದುರಿಸಿದರೆ ಒಂದೇ ಹಗಲಿನಲ್ಲಿ ಸುಟ್ಟುಹೋಗುತ್ತಾರೆ ಎಂದು ನನ್ನ ಅಭಿಪ್ರಾಯ!

ಯುದ್ಧದಲ್ಲಿ ಭೀಷ್ಮ-ದ್ರೋಣರು ಹತರಾದಾಗಲೇ ಸರ್ವವೀರರೊಂದಿಗೆ ಧಾರ್ತರಾಷ್ಟ್ರನ ಘೋರ ಸೇನೆಯು ನಾಶವಾಗಿ ಹೋಯಿತು. ಯೋಧಪ್ರವರರಿಂದ ಕ್ಷೀಣವಾಗಿರುವ, ಕುದುರೆ-ಸೈನಿಕ-ಆನೆಗಳು ಹತವಾಗಿರುವ ಭಾರತೀ ಸೇನೆಯು ಸೂರ್ಯ-ಚಂದ್ರ-ನಕ್ಷತ್ರಗಳ ಬೆಳಕಿನಿಂದ ಹೀನವಾಗಿರುವ ಆಕಾಶದಂತೆ ತೋರುತ್ತಿದೆ. ಹಿಂದೆ ಪರಾಕ್ರಮದಿಂದ ಶಕ್ರನು ಅಸುರ ಸೇನೆಯನ್ನು ಮಾಡಿದಂತೆ ನೀನು ಕೂಡ ರಣದಲ್ಲಿ ಭೀಮವಿಕ್ರಮದಿಂದ ಈ ಸೇನೆಯನ್ನು

ಧ್ವಂಸಗೊಳಿಸು! ಅವರಲ್ಲಿ ಅಳಿದುಳಿದವರು ಐವರು ಮಹಾರಥರಿದ್ದಾರೆ: ಅಶ್ವತ್ಥಾಮ, ಕೃತವರ್ಮ, ಕರ್ಣ, ಮದ್ರಾಧಿಪ ಮತ್ತು ಕೃಪ. ಆ ಐವರು ಮಹಾರಥರನ್ನು ಇಂದು ಸಂಹರಿಸಿ ಶತ್ರುಗಳಿಲ್ಲದ ದ್ವೀಪ-ಪಟ್ಟಣಗಳಿಂದೊಡಗೂಡಿದ ಈ ಪೃಥ್ವಿಯನ್ನು ರಾಜನಿಗೊಪ್ಪಿಸು! ಆ ಅಮಿತವೀರ್ಯಪಾರ್ಥನು ಇಂದು ಆಕಾಶ-ಜಲ-ಪಾತಾಳಗಳೊಂದಿಗೆ ಮತ್ತು ಪರ್ವತ-ಮಹಾವನಗಳೊಂದಿಗೆ ಈ ವಸುಂಧರೆಯನ್ನೂ ಶ್ರೀಯನ್ನು ಪಡೆಯಲಿ! ಹಿಂದೆ ವಿಷ್ಣು ಹರಿಯು ದೈತ್ಯ-ದಾನವರನ್ನು ಸಂಹರಿಸಿ ಮೇದಿನಿಯನ್ನು ರಾಜ ಶಕ್ರನಿಗೆ ಇತ್ತಂತೆಯೇ ಆಗಲಿ. ವಿಷ್ಣುವಿನಿಂದ ದಾನವೇಯರು ಹತರಾದಾಗ ದೇವತೆಗಳು ಹೇಗೋ ಹಾಗೆ ನಿನ್ನಿಂದ ಶತ್ರುಗಳು ಹತರಾಗಲು ಇಂದು ಪಾಂಚಾಲರು ಮೋದಿಸುತ್ತಾರೆ.

ಒಂದುವೇಳೆ ನೀನು ಗುರು ದ್ರೋಣನನ್ನು ಗೌರವಿಸಿ ಅಶ್ವತ್ಥಾಮನನ್ನು ಸಂಹರಿಸದಿರಬಹುದು. ಮತ್ತು ಆಚಾರ್ಯ ಗೌರವದಿಂದ ಕೃಪನನ್ನು ಸಂಹರಿಸದಿರಬಹುದು. ಅಥವಾ ಅತ್ಯಂತ ಅನುಪಚಿತವೆಂದು ನೀನು ಭ್ರಾತೃಬಾಂಧವರನ್ನು

ಮನ್ನಿಸಿ ಕೃತವರ್ಮನನ್ನು ಯಮಕ್ಷಯಕ್ಕೆ ಕಳುಹಿಸುವುದು ಅಸಾಧ್ಯವೆಂದು ತಿಳಿದಿರಬಹುದು. ತಾಯಿಯ ಅಣ್ಣ ಶಲ್ಯನನ್ನು ಎದುರಿಸಿ ದಯೆಯಿಂದ ಕೊಲ್ಲಲು ನೀನು ಇಷ್ಟಪಡದಿರಬಹುದು. ಆದರೆ ಇಂದು ಈ ಪಾಪಮತಿ ಕರ್ಣನನ್ನು ಮಾತ್ರ ನಿಶಿತ ಶರಗಳನ್ನು ಸಂಹರಿಸಬೇಕು! ಇದೇ ನಿನ್ನ ಸುಕೃತ ಕರ್ಮ. ಅಲ್ಲಿ ಯೋಚಿಸಬೇಕಾದುದು ಏನೂ ಇಲ್ಲ. ನಾನೂ ಕೂಡ ನಿನಗೆ ಅನುಜ್ಞೆನೀಡುತ್ತಿದ್ದೇನೆ. ಅದರಲ್ಲಿ ಯಾವ ದೋಷವೂ ಇಲ್ಲ. ಪುತ್ರರೊಂದಿಗೆ ನಿನ್ನ ತಾಯಿಯನ್ನು ರಾತ್ರಿವೇಳೆಯಲ್ಲಿ ಸುಯೋಧನನು ಸುಡಲು ಪ್ರಯತ್ನಿಸಿದುದು ಮತ್ತು ನಿಮ್ಮನ್ನು ದ್ಯೂತದಲ್ಲಿ ತೊಡಗಿಸಿದುದು ಇವೆಲ್ಲದರ ಮೂಲವು ದುಷ್ಟಾತ್ಮ ಕರ್ಣನೇ ಆಗಿದ್ದಾನೆ. ಕರ್ಣನೇ ತನ್ನ ತ್ರಾಣವೆಂದು ನಿತ್ಯವೂ ಸುಯೋಧನನು ತಿಳಿದುಕೊಂಡಿದ್ದಾನೆ. ಆದುದರಿಂದಲೇ ಅವನು ಸಂರಬ್ಧನಾಗಿ ನನ್ನನ್ನು ಕೂಡ ಬಂಧಿಸಲು ಪ್ರಯತ್ನಿಸಿದನು. ಧಾರ್ತರಾಷ್ಟ್ರನ ಸ್ಥಿರ ಬುದ್ಧಿಯಾಗಿರುವ ಕರ್ಣನು ರಣದಲ್ಲಿ ಪಾರ್ಥರೆಲ್ಲರನ್ನೂ ಜಯಿಸುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಕರ್ಣನನ್ನು ಆಶ್ರಯಿಸಿ ಧಾರ್ತರಾಷ್ಟ್ರನು ನಿನ್ನ ಬಲವನ್ನು ತಿಳಿದು ಕೂಡ ನಿಮ್ಮೊಂದಿಗೆ ಯುದ್ಧಮಾಡಲು ಬಯಸಿದನು. ಏಕೆಂದರೆ

“ನಾನು ಪಾರ್ಥರನ್ನೂ ವಾಸುದೇವನನ್ನೂ ಅವರೊಡನೆ ಸೇರಿರುವ ರಾಜರೊಂದಿಗೆ ಮಹಾರಣದಲ್ಲಿ ಜಯಿಸುತ್ತೇನೆ!” ಎಂದು ಕರ್ಣನು ನಿತ್ಯವೂ ಹೇಳುತ್ತಿರುತ್ತಾನೆ. ದುರಾತ್ಮ ಧಾರ್ತರಾಷ್ಟ್ರನನ್ನು ಪ್ರೋತ್ಸಾಹಿಸುತ್ತಾ ಇಬ್ಬರೂ ಒಂದಾಗಿ ಗರ್ಜಿಸುತ್ತಿರುವ ಕರ್ಣನನ್ನು ನೀನು ಇಂದು ಸಂಹರಿಸು! ನಿಮ್ಮೊಡನೆ ಧಾರ್ತರಾಷ್ಟ್ರನು ಏನೆಲ್ಲ ಪಾಪವನ್ನೆಸಗಿದ್ದಾನೋ ಅವೆಲ್ಲದರ ಮುಖವಾಗಿ ದುಷ್ಟಾತ್ಮಾ ಪಾಪಮತಿ ಕರ್ಣನಿದ್ದನು.

ಮಹಾರಥರಾದ ವೀರ ದ್ರೋಣ, ದ್ರೌಣಿ ಮತ್ತು ಕೃಪರನ್ನು ಕಂಪಿಸುತ್ತಾ, ಮಾತಂಗಗಳನ್ನು ನಿರ್ಮನುಷ್ಯರನ್ನಾಗಿಸುತ್ತಾ, ಮಹಾರಥರನ್ನು ವಿರಥರನ್ನಾಗಿಸುತ್ತಾ, ಕುದುರೆಗಳನ್ನು ಅಶ್ವಾರೋಹಿಗಳಿಂದ ವಿಹೀನರನ್ನಾಗಿಸುತ್ತಾ, ಪದಾತಿಗಳ ಆಯುಧ ಮತ್ತು ಜೀವಗಳನ್ನು ತೆಗೆಯುತ್ತಿದ್ದ ಆ ಋಷಭಸ್ಕಂಧ, ಕುರು-ವೃಷ್ಣಿ ಯಶಸ್ಕರ ಋಷಭೇಕ್ಷಣ ವೀರ ಸೌಭದ್ರನು ಧಾರ್ತರಾಷ್ಟ್ರರ ಆ ಕ್ರೂರ ಷಡ್ಮಹಾರಥರಿಂದ ಹತನಾದುದನ್ನು ನಾವು ನೋಡಿದೆವು. ಸೇನೆಗಳನ್ನು ಧ್ವಂಸಗೊಳಿಸುತ್ತಾ, ಮಹಾರಥರನ್ನು ವ್ಯಥೆಗೊಳಿಸುತ್ತಾ,

ಮನುಷ್ಯ-ಕುದುರೆ-ಮಾತಂಗಗಳನ್ನು ಯಮಕ್ಷಯಕ್ಕೆ ಕಳುಗಿಸುತ್ತಾ ಸೌಭದ್ರನು ಶರಗಳಿಂದ ವಾಹಿನಿಗಳನ್ನು ಸುಡುತ್ತಿದ್ದನು. ಸಖಾ! ನಿನ್ನ ಮೇಲೆ ಆಣೆಯನ್ನಿಟ್ಟು ಹೇಳುತ್ತಿದ್ದೇನೆ: ಅದನ್ನು ನೆನಪಿಸಿಕೊಂಡು ನನ್ನ ದೇಹವು ಸುಡುತ್ತಿದೆ! ಅಲ್ಲಿ ಕೂಡ ದುಷ್ಟಾತ್ಮ ಕರ್ಣನ ದ್ರೋಹವಿತ್ತು. ರಣದ ಮುಂದಿದ್ದ ಅಭಿಮನ್ಯುವನ್ನು ತಡೆಯಲು ಕರ್ಣನೂ ಕೂಡ ಅಶಕ್ಯನಾಗಿದ್ದನು. ಸೌಭದ್ರನ ಶರಗಳಿಂದ ಗಾಯಗೊಂಡು ರಕ್ತಸುರಿಸುತ್ತಿದ್ದ ಅವನು ಮೂರ್ಛೆಗೊಂಡು ಸಾಯಕಗಳಿಂದ ಪೀಡಿತನಾಗಿ ಕ್ರೋಧದಿಂದ ಉರಿದೆದ್ದು ನಿಟ್ಟುಸಿರುಬಿಡುತ್ತಾ ವಿಮುಖನಾಗಿದ್ದನು. ಪ್ರಹಾರಗಳಿಂದ ಬಳಲಿ ಜೀವಿತದಲ್ಲಿ ನಿರಾಶನಾಗಿ ಪಲಾಯನಮಾಡಲು ಬಯಸಿ ಇವನು ರಣದಲ್ಲಿ ವಿಹ್ವಲನಾಗಿ ನಿಂತಿದ್ದನು. ಆಗ ದ್ರೋಣನ ಸಮಯೋಚಿತವಾದ ಸಮರದ ಕ್ರೂರ ಉಪಾಯವನ್ನು ಕೇಳಿ ಕರ್ಣನು ಅಭಿಮನ್ಯುವಿನ ಕಾರ್ಮುಕವನ್ನು ತುಂಡರಿಸಿದನು. ಆಯುಧವು ಭಗ್ನವಾಗಲು ರಣದಲ್ಲಿ ಅಭಿಮನ್ಯುವನ್ನು ಮೋಸಗಾರರಾದ ಆ ಐವರು ಮಹಾರಥರು ಶರವೃಷ್ಟಿಗಳಿಂದ ಮುಚ್ಚಿಬಿಟ್ಟರು. ಸಭೆಯಲ್ಲಿ ಕರ್ಣನು ಕೃಷ್ಣೆಗೆ ಪಾಂಡವೇಯರ ಮತ್ತು ಕುರುಗಳ

ಪ್ರಮುಖವೇ ಕರುಣೆಯಿಲ್ಲದವನಂತೆ ಈ ಕಠೋರ ಮಾತುಗಳನ್ನಾಡಿರಲಿಲ್ಲವೇ? "ಕೃಷ್ಣೇ! ಪಾಂಡವರು ವಿನಷ್ಟರಾಗಿ ಶಾಶ್ವತ ನರಕಕ್ಕೆ ಹೋಗಿಬಿಟ್ಟಿದ್ದಾರೆ! ಬೇರೆಯಾರನ್ನಾದರೂ ಪತಿಯನ್ನಾಗಿ ಆರಿಸಿಕೋ! ಧೃತರಾಷ್ಟ್ರನ ದಾಸಿಯಾಗಿ ಅವನ ಮನೆಯನ್ನು ಪ್ರವೇಶಿಸು! ನಿನ್ನ ಪತಿಗಳು ಇನ್ನು ಇಲ್ಲವಾಗಿದ್ದಾರೆ!"

ಆಗ ಆ ಪಾಪಿ ಕರ್ಣನು ನಿನಗೆ ಕೇಳುವಂತೆ ಈ ಪಾಪದ ಮಾತುಗಳನ್ನಾಡಿದ್ದನು. ಪಾಪಿಯ ಆ ಮಾತುಗಳನ್ನು ಜೀವವನ್ನು ಹಾರಿಸುವ ಸುವರ್ಣದಿಂದ ಕೊರೆಯಲ್ಪಟ್ಟ ಶಿಲಾಧೌತ ಬಾಣಗಳನ್ನು ಪ್ರಯೋಗಿಸಿ ಉಪಶಮನಗೊಳಿಸು! ಇನ್ನೂ ಏನೆಲ್ಲ ಪಾಪಗಳನ್ನು ನಿನ್ನಕುರಿತು ಈ ದುಷ್ಟಾತ್ಮನು ಮಾಡಿರುವನೋ ಅವೆಲ್ಲವನ್ನೂ ಮತ್ತು ಅವನ ಜೀವವನ್ನೂ ನಿನ್ನ ಶರಗಳು ಇಂದು ಉಪಶಮನಗೊಳಿಸಲಿ! ಗಾಂಡೀವದಿಂದ ಪ್ರಯೋಗಿಸಲ್ಪಟ್ಟ ಘೋರಶರಗಳು ಇಂದು ಅವನ ಶರೀರಗಳನ್ನು ಹೊಗಲು ದುಷ್ಟಾತ್ಮ ಕರ್ಣನು ದ್ರೋಣ-ಭೀಷ್ಮರ ಮಾತುಗಳನ್ನು ಸ್ಮರಿಸಿಕೊಳ್ಳುತ್ತಾನೆ! ನೀನು ಬಿಡುವ ಶತ್ರುಗಳನ್ನು ಸಂಹರಿಸಬಲ್ಲ ವಿದ್ಯುತ್ತಿನ ಪ್ರಭೆಯುಳ್ಳ

ಸುವರ್ಣಪುಂಖಗಳ ನಾರಾಚಗಳು ಅವನ ಕವಚವನ್ನು ಭೇದಿಸಿ ರಕ್ತವನ್ನು ಕುಡಿಯುತ್ತವೆ! ಇಂದು ನಿನ್ನ ಭುಜಗಳಿಂದ ಪ್ರಯೋಗಿಸಲ್ಪಟ್ಟ ಮಹಾವೇಗದ ಉಗ್ರ ನಿಶಿತ ಶರಗಳು ಕವಚಗಳನ್ನು ಭೇದಿಸಿ ಕರ್ಣನನ್ನು ಯಮಕ್ಷಯಕ್ಕೆ ಕಳುಹಿಸುತ್ತವೆ! ಇಂದು ನಿನ್ನ ಶರಗಳಿಂದ ಪೀಡಿತನಾಗಿ ದೀನನಾಗಿ ದುಃಖದಿಂದ ಹಾಹಾಕಾರಮಾಡುತ್ತಾ ಕರ್ಣನು ರಥದಿಂದ ಬೀಳುವುದನ್ನು ವಸುಧಾಧಿಪರು ನೋಡಲಿದ್ದಾರೆ! ಇಂದು ಆಯುಧವನ್ನು ಎಸೆದು ಭೂಮಿಯ ಮೇಲೆ ಬಿದ್ದು ತನ್ನದೇ ರಕ್ತದಲ್ಲಿ ಮುಳುಗಿ ಮಲಗಿರುವ ಕರ್ಣನನ್ನು ಅವನ ಸುಹೃದಯರು ನೋಡಲಿದ್ದಾರೆ! ಹಸ್ತಿಕಕ್ಷದ ಚಿಹ್ನೆಯುಳ್ಳ ಈ ಆಧಿರಥನ ಮಹಾ ಧ್ವಜವು ನಿನ್ನ ಭಲ್ಲಗಳಿಂದ ಮಥಿಸಲ್ಪಟ್ಟು ಅಲುಗಾಡುತ್ತಾ ಭೂಮಿಯಮೇಲೆ ಬೀಳಲಿದೆ! ಯೋಧನು ಹತನಾಗಿ, ನಿನ್ನ ನೂರಾರು ಶರಗಳಿಂದ ಛಿನ್ನವಾಗಿರುವ ಹೇಮವಿಭೂಷಿತವಾದ ರಥವನ್ನು ಬಿಟ್ಟು ಭೀತನಾಗಿ ಶಲ್ಯನು ಪಲಾಯನ ಮಾಡುವನು! ನಿನ್ನಿಂದ ಹತನಾದ ಆಧಿರಥನನ್ನು ನೋಡಿ ಸುಯೋಧನನು ಇಂದು ಜೀವಿತದಲ್ಲಿ ಮತ್ತು ರಾಜ್ಯದಲ್ಲಿ ನಿರಾಶನಾಗಲಿದ್ದಾನೆ!

ಪಾಂಡವರ ಜಯವನ್ನು ಬಯಸುವ ಪಾಂಚಾಲರು ಇಗೋ ಕರ್ಣನ ನಿಶಿತ ಶರಗಳಿಂದ ಪ್ರಹರಿಸಲ್ಪಟ್ಟು ಓಡುಹೋಗುತ್ತಿದ್ದಾರೆ! ಪಾಂಚಾಲರು, ದ್ರೌಪದೇಯರು, ಧೃಷ್ಟದ್ಯುಮ್ನ-ಶಿಖಂಡಿಯರು, ಧೃಷ್ಟದ್ಯುಮ್ನನ ಮಕ್ಕಳು, ನಾಕುಲಿ ಶತಾನೀಕ, ನಕುಲ, ಸಹದೇವ, ದುರ್ಮುಖ, ಜನಮೇಜಯ ಮತ್ತು ಸಾತ್ಯಕಿಯರು ಕರ್ಣನ ವಶದಲ್ಲಿ ಸಿಲುಕಿರುವುದನ್ನು ನೋಡು! ಮಹಾರಣದಲ್ಲಿ ಕರ್ಣನಿಂದ ಅಭ್ಯಾಹತರಾಗುತ್ತಿರುವ ನಿನ್ನ ಬಂಧು ಪಾಂಚಾಲರ ಘೋರ ನಿನಾದವು ಕೇಳಿಬರುತ್ತಿದೆ! ಈ ಪಾಂಚಾಲರು ಭೀತರಾಗುವವರಲ್ಲ. ಎಂದೂ ಇವರು ಯುದ್ಧದಿಂದ ಪರಾಙ್ಮುಖರಾಗುವವರಲ್ಲ. ಏಕೆಂದರೆ ಈ ಮಹಾರಥರು ಮೃತ್ಯುವನ್ನೇ ಎಣಿಸುತ್ತಿದ್ದಾರೆ! ಭೀಷ್ಮನೊಬ್ಬನೇ ಪಾಂಡವೀ ಸೇನೆಯನ್ನು ಶರೌಘಗಳಿಂದ ಮುಚ್ಚಿಬಿಟ್ಟಿರಲು ಪಾಂಚಾಲರು ಅವನನ್ನು ಎದುರಿಸಿದರೇ ಹೊರತು ಪರಾಙ್ಮುಖರಾಗಲಿಲ್ಲ! ಹಾಗೆಯೇ ಅವರು ತನ್ನ ಓಜಸ್ಸಿನಿಂದ ಅಸ್ತ್ರಾಗ್ನಿಯನ್ನು ಉರಿಯಿಸುತ್ತಾ ಸುಡುತ್ತಿದ್ದ ಸರ್ವಧನುಷ್ಮತರ ಗುರು ದುರ್ಧರ್ಷ ದ್ರೋಣನನ್ನು ಆಕ್ರಮಣಿಸುತ್ತಿದ್ದರು. ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲಲು ನಿತ್ಯವೂ ಸಿದ್ಧರಾಗಿರುವ ಆ ಅರಿಂದಮ

ಪಾಂಚಾಲರು ಆಧಿರಥಿಯ ಭಯದಿಂದ ಪರಾಙ್ಮುಖರಾಗುವುದಿಲ್ಲ! ತನ್ನ ಮೇಲೆ ಬೀಳುತ್ತಿರುವ ಆ ತರಸ್ವೀ ಶೂರ ಪಾಂಚಾಲರನ್ನು ಪತಂಗಗಳನ್ನು ಬೆಂಕಿಯು ಹೇಗೋ ಹಾಗೆ ಕರ್ಣನು ಶರಗಳಿಂದ ಸುಟ್ಟುಹಾಕಿಬಿಡುತ್ತಿದ್ದಾನೆ. ಮಿತ್ರನಿಗಾಗಿ ಜೀವವನ್ನೇ ತೊರೆದು ಎದುರಿಸಿರುವ ಆ ವೀರ ಪಾಂಚಾಲರನ್ನು ರಣದಲ್ಲಿ ನೂರಾರು ಸಂಖ್ಯೆಗಳಲ್ಲಿ ರಾಧೇಯನು ನಾಶಗೊಳಿಸುತ್ತಿದ್ದಾನೆ. ಹಿಂದೆ ಋಷಿಸತ್ತಮ ಭಾರ್ಗವ ರಾಮನಿಂದ ಪಡೆದ ಘೋರರೂಪೀ ಅಸ್ತ್ರವನ್ನೇ ಇಂದು ಕರ್ಣನು ಪ್ರಯೋಗಿಸಿದ್ದಾನೆ. ಸರ್ವಸೇನೆಗಳನ್ನು ಸುಡಬಲ್ಲ ಘೋರರೂಪಿಯಾದ ಸುದಾರುಣವಾದ ಆ ಅಸ್ತ್ರವು ತನ್ನ ತೇಜಸ್ಸಿನಿಂದ ಉರಿಯುತ್ತಾ ಮಹಾಸೇನೆಯನ್ನು ಆವರಿಸಿದೆ! ಇಗೋ ಸಂಗ್ರಾಮದಲ್ಲಿ ಕರ್ಣನ ಚಾಪದಿಂದ ಹೊರಟ ಶರಗಳು ಭ್ರಮರಗಳಂತೆ ಹಾರಿಬಂದು ನಿನ್ನವರನ್ನು ಸುಡುತ್ತಿವೆ! ಇಗೋ ಪಾಂಚಾಲರು, ಸಮರದಲ್ಲಿ ಕರ್ಣನ ಅಸ್ತ್ರಕ್ಕೆ ಸಿಲುಕಿ ತಮ್ಮನ್ನು ತಾವು ತಡೆಯಲಾರದೇ ಸರ್ವ ದಿಕ್ಕುಗಳಲ್ಲಿಯೂ ಚದುರಿ ಹೋಗುತ್ತಿದ್ದಾರೆ! ಇಗೋ ದೃಢಕ್ರೋಧನಾದ ಭೀಮನು ಎಲ್ಲಕಡೆಗಳಿಂದ ಸೃಂಜಯರಿಂದ ಸುತ್ತುವರೆಯಲ್ಪಟ್ಟು

ಕರ್ಣನನ್ನು ನಿಶಿತ ಶರಗಳಿಂದ ಪೀಡಿಸಿ ಹೋರಾಡುತ್ತಿದ್ದಾನೆ! ರೋಗವು ದೇಹವನ್ನು ಹೇಗೋ ಹಾಗೆ ಕರ್ಣನು ಪಾಂಡವರನ್ನೂ, ಸೃಂಜಯರನ್ನೂ, ಪಾಂಚಾಲರನ್ನೂ ಸಂಹರಿಸಲು ನೋಡುತ್ತಿದ್ದಾನೆ. ನೀನಲ್ಲದೇ - ರಾಧೇಯನನ್ನು ಎದುರಿಸಿ ಕುಶಲನಾಗಿ ಮನೆಗೆ ತೆರಳುವ - ಬೇರೆ ಯಾವ ಯೋಧನನ್ನೂ ನಾನು ಯುಧಿಷ್ಠಿರನ ಸೇನೆಯಲ್ಲಿ ಕಾಣೆ! ಪ್ರತಿಜ್ಞೆಮಾಡಿದಂತೆ ಮಾಡಿ ಇಂದು ನೀನು ನಿಶಿತಬಾಣಗಳಿಂದ ಅವನನ್ನು ಸಂಹರಿಸಿ ಕೀರ್ತಿಯನ್ನು ಹೊಂದುವೆ! ನೀನು ಮಾತ್ರ ಕರ್ಣನಿರುವ ಕೌರವರನ್ನು ರಣದಲ್ಲಿ ಗೆಲ್ಲಲು ಶಕ್ತ. ಯೋಧರಲ್ಲಿ ಶ್ರೇಷ್ಠ! ಬೇರೆ ಯಾವ ಯೋಧನಿಗೂ ಇದು ಶಕ್ಯವಿಲ್ಲ. ನಾನು ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ಮಹಾರಥ ಕರ್ಣನನ್ನು ಕೊಲ್ಲುವ ಈ ಮಹಾಕಾರ್ಯವನ್ನು ಮಾಡಿ ಪಾರ್ಥ! ನರೋತ್ತಮ! ಕೃತಾರ್ಥನೂ, ಸಫಲನೂ ಮತ್ತು ಸುಖಿಯೂ ಆಗು!”

ಕೇಶವನಾಡಿದ ಆ ಮಾತನ್ನು ಕೇಳಿ ಕ್ಷಣದಲ್ಲಿಯೇ ಬೀಭತ್ಸುವು ಶೋಕರಹಿತನೂ, ಸಂಪ್ರಹೃಷ್ಟನೂ, ಉತ್ಸಾಹಿತನೂ ಆದನು. ಆಗ ಅವನು ಗಾಂಡೀವ ಧನುಸ್ಸನ್ನು ಸೆಳೆದು, ಮೌರ್ವಿಯನ್ನು ತೀಡಿ

ಠೇಂಕರಿಸಿ ಕರ್ಣನ ವಿನಾಶಕ್ಕಾಗಿ ನಿಶ್ಚಯಿಸಿ ಕೇಶವನಿಗೆ ಹೇಳಿದನು:

"ಗೋವಿಂದ! ನೀನು ನಾಥನಾಗಿರುವಾಗ ನನ್ನ ಜಯವು ನಿಶ್ಚಯಿಸಿದ್ದೇ ಆಗಿದೆ. ನನ್ನ ಮೇಲೆ ಇಂದು ಪ್ರಸನ್ನನಾಗಿರುವ ನೀನು ಭೂತ-ಭವ್ಯ-ಭವತ್ತುಗಳ ಪ್ರಭುವು! ಕೃಷ್ಣ! ನಿನ್ನ ಸಹಾಯದಿಂದ ನಾನು ಮೂರು ಲೋಕಗಳನ್ನೂ ಎದುರಿಸಬಲ್ಲೆ. ಪರಮ ಲೋಕವನ್ನೂ ಸೇರಬಲ್ಲೆ. ಇನ್ನು ಮಹಾರಣದಲ್ಲಿ ಕರ್ಣನು ಯಾವ ಲೆಖ್ಖಕ್ಕೆ? ಜನಾರ್ದನ! ಓಡಿಹೋಗುತ್ತಿರುವ ಪಾಂಚಾಲರ ಸೇನೆಯನ್ನು ನೋಡುತ್ತಿದ್ದೇನೆ. ಸಮರದಲ್ಲಿ ನಿರ್ಭೀತನಾಗಿ ಸಂಚರಿಸುತ್ತಿರುವ ಕರ್ಣನನ್ನೂ ನೋಡುತ್ತಿದ್ದೇನೆ. ಕರ್ಣನಿಂದ ಸೃಷ್ಟಿಸಲ್ಪಟ್ಟ, ಸುತ್ತಲೂ ಹರಡುತ್ತಿರುವ, ಶಕ್ರನ ಮಹಾವಜ್ರದಂತಿರುವ ಭಾರ್ಗವಾಸ್ತ್ರವನ್ನೂ ನಾನು ನೋಡುತ್ತಿದ್ದೇನೆ. ನಾನು ಇಲ್ಲಿ ಏನು ಸಂಗ್ರಾಮವನ್ನು ನಡೆಸುತ್ತೇನೋ ಅದರ ಕುರಿತು ಭೂತಗಳು ಭೂಮಿಯು ಧರಿಸಿರುವವರೆಗೆ ಮಾತನಾಡಿಕೊಳ್ಳುತ್ತಿರುತ್ತವೆ. ಇಂದು ನನ್ನ ಕೈಯಿಂದ ಪ್ರಚೋದಿತಗೊಂಡು ಗಾಂಡೀವದಿಂದ ಹೊರಡುವ ವಿಕರ್ಣ ಬಾಣಗಳು ಕರ್ಣನನ್ನು ಗಾಯಗೊಳಿಸಿ

ಮೃತ್ಯುವಿಗೆ ಒಯ್ಯುವವು! ಇಂದು ರಾಜಾ ಧೃತರಾಷ್ಟ್ರನು ರಾಜ್ಯಕ್ಕೆ ಅರ್ಹನಾಗಿರದ ದುರ್ಯೋಧನನನ್ನು ರಾಜ್ಯಾಭೀಷೇಕಮಾಡಿದುದಕ್ಕೆ ತನ್ನದೇ ಬುದ್ಧಿಯನ್ನು ಹಳಿದುಕೊಳ್ಳುತ್ತಾನೆ! ಇಂದು ಧೃತರಾಷ್ಟ್ರನು ರಾಜ್ಯ, ಸುಖ, ಸಂಪತ್ತು, ರಾಷ್ಟ್ರ, ಮತ್ತು ನಂತರ ಪುತ್ರರಿಂದಲೂ ವಿಯೋಗಹೊಂದುತ್ತಾನೆ! ಕರ್ಣನು ಹತನಾಗಲು ಇಂದು ರಾಜಾ ದುರ್ಯೋಧನನು ಜೀವದಲ್ಲಿಯೇ ನಿರಾಶನಾಗುತ್ತಾನೆ. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ! ಇಂದು ನನ್ನ ಶರಗಳಿಂದ ಚೂರು ಚೂರುಗಳಾಗಿ ತುಂಡಾದನಂತರ ಜನೇಶ್ವರನು ಸಂಧಿಯಕುರಿತು ನೀನು ಹೇಳಿದ ಮಾತುಗಳನ್ನು ಸ್ಮರಿಸಿಕೊಳ್ಳುತ್ತಾನೆ! ಇಂದು ಸೌಬಲನು ನನ್ನ ಶರಗಳನ್ನೇ ದಾಳಗಳೆಂದೂ, ಗಾಂಡೀವವೇ ಜೂಜುಗಾರ ಮತ್ತು ರಥವೇ ಜೂಜಾಡುವ ಕಟ್ಟೆ ಎಂದು ತಿಳಿದುಕೊಳ್ಳುತ್ತಾನೆ! ರಣದಲ್ಲಿ ಪೃಥ್ವಿಯ ಬೇರೆ ಯಾವ ನರನನ್ನೂ ಮನ್ನಿಸದಿದ್ದ ಸೂತಪುತ್ರನ ರಕ್ತವನ್ನು ಭೂಮಿಯು ಕುಡಿಯಲಿದೆ! ಗಾಂಡೀವದಿಂದ ಸೃಷ್ಟಿಸಲ್ಪಟ್ಟ ಶರಗಳು ಕರ್ಣನಿಗೆ ಪರಮಗತಿಯನ್ನು ನೀಡುತ್ತವೆ! ಅಂದು ಸಭಾಮಧ್ಯದಲ್ಲಿ ಪಾಂಡವರ ಕುರಿತು ತಿರಸ್ಕಾರಪೂರ್ವಕವಾಗಿ ಮಾತನಾಡುತ್ತ ಪಾಂಚಾಲಿಗೆ

ಯಾವ ಕ್ರೂರ ಮಾತುಗಳನ್ನಾಡಿದನ್ನು ಅದಕ್ಕೆ ಇಂದು ರಾಧೇಯನು ಪಶ್ಚಾತ್ತಾಪಪಡುತ್ತಾನೆ. ಅಂದು ಎಣ್ಣೆಯನ್ನು ತೆಗೆದ ಪೊಳ್ಳು ಎಳ್ಳಿನಂತಿರುವವರೆಂದು ಕರೆಯಲ್ಪಟ್ಟವರು ಇಂದು ದುರಾತ್ಮ ಸೂತಪುತ್ರ ವೈಕರ್ತನ ಕರ್ಣನು ಹತನಾದನಂತರ ಎಣ್ಣೆಯಿಂದ ಕೂಡಿದ ಎಳ್ಳಿನಂತೆಯೇ ಆಗುತ್ತಾರೆ! ನಾನು ನಿಮ್ಮನ್ನು ಪಾಂಡುಪುತ್ರರಿಂದ ಸಂರಕ್ಷಿಸುತ್ತೇನೆ ಎಂದು ಹೇಳಿದ ಅವನ ಮಾತುಗಳನ್ನು ನನ್ನ ನಿಶಿತ ಶರಗಳು ಸುಳ್ಳಾಗಿಸುತ್ತವೆ! ಪುತ್ರರೊಂದಿಗೆ ಸರ್ವ ಪಾಂಡವರನ್ನೂ ನಾನು ಸಂಹರಿಸುತ್ತೇನೆ ಎಂದು ಯಾರು ಹೇಳಿದ್ದನೋ ಆ ಕರ್ಣನನ್ನು ನಾನು ಇಂದು ಸರ್ವಧನ್ವಿಗಳೂ ನೋಡುತ್ತಿದ್ದಂತೆ ಸಂಹರಿಸುತ್ತೇನೆ! ಯಾರ ವೀರ್ಯದಮೇಲೆ ವಿಶ್ವಾಸವನ್ನಿಟ್ಟು ದುರ್ಬುದ್ಧಿ ಧಾರ್ತರಾಷ್ಟ್ರನು ನಿತ್ಯವೂ ನಮ್ಮನ್ನು ಅಪಮಾನಿಸುತ್ತಾ ಬಂದನೋ ಆ ರಾಧೇಯ ಕರ್ಣನನ್ನು ನಾನು ಇಂದು ಸಂಹರಿಸುತ್ತೇನೆ. ಇಂದು ಕರ್ಣನು ಹತರಾಗಲು ರಾಜರೊಂದಿಗೆ ಧಾರ್ತರಾಷ್ಟ್ರರು ಸಿಂಹಕ್ಕೆ ಹೆದರಿದ ಮೃಗಗಳಂತೆ ದಿಕ್ಕಾಪಾಲಾಗಿ ಓಡಿ ಹೋಗುವರು! ಮಕ್ಕಳು ಮತ್ತು ಸುಹೃಜ್ಜನರೊಂದಿಗೆ ಕರ್ಣನು ರಣದಲ್ಲಿ ಇಂದು ನನ್ನಿಂದ ಹತನಾದಾಗ ರಾಜಾ ದುರ್ಯೋಧನನು

ಭೂಮಿಯಲ್ಲಿಯೇ ನಿರಾಶೆಹೊಂದುತ್ತಾನೆ! ಇಂದು ಕರ್ಣನು ಹತನಾದುದನ್ನು ನೋಡಿ ಅಮರ್ಷಣ ಧಾರ್ತರಾಷ್ಟ್ರನು ರಣದಲ್ಲಿ ನಾನೇ ಸರ್ವಧನ್ವಿಗಳಲ್ಲಿ ಶ್ರೇಷ್ಠ ಎನ್ನುವುದನ್ನು ತಿಳಿದುಕೊಳ್ಳುತ್ತಾನೆ! ಇಂದು ನಾನು ಧನುರ್ಧಾರಿಗಳ, ಕುರುಗಳ ಕ್ರೋಧದ ಮತ್ತು ಗಾಂಡಿವದ ಶರಗಳ ಅನೃಣನಾಗುತ್ತೇನೆ! ಮಘವಾನನು ಶಂಬರನನ್ನು ಹೇಗೋ ಹಾಗೆ ಇಂದು ರಣದಲ್ಲಿ ಕರ್ಣನನ್ನು ಸಂಹರಿಸಿ ನಾನು ಹದಿಮೂರುವರ್ಷಗಳಿಂದ ಬೆಳೆಯುತ್ತಿರುವ ಈ ದುಃಖದಿಂದ ಮುಕ್ತಿಹೊಂದುತ್ತೇನೆ! ಇಂದು ಯುದ್ಧದಲ್ಲಿ ಕರ್ಣನು ಹತನಾಗಲು ಯುದ್ಧದಲ್ಲಿ ಮಿತ್ರಕಾರ್ಯವನ್ನೇ ಬಯಸಿ ಮಾಡುತ್ತಿದ್ದ ಸೋಮಕ ಮಹಾರಥರು ಕಾರ್ಯವು ಮುಗಿಯಿತೆಂದು ಅಭಿಪ್ರಾಯಪಡುತ್ತಾರೆ. ಇಂದು ನನ್ನಿಂದ ಕರ್ಣನು ಹತನಾಗಿ ಜಯವು ಅಧಿಕವಾಗಲು ಶೈನೇಯನು ಎಷ್ಟು ಸಂತೋಷಪಡುತ್ತಾನೋ ಅದನ್ನು ತಿಳಿಯಲು ಅಸಾಧ್ಯ! ಇಂದು ನಾನು ರಣದಲ್ಲಿ ಮಹಾರಥ ಕರ್ಣ ಮತ್ತು ಅವನ ಮಗನನ್ನು ಕೊಂದು ಭೀಮ, ಯಮಳರು ಮತ್ತು ಸಾತ್ಯಕಿಯರ ಪ್ರೀತಿಪಾತ್ರನಾಗುತ್ತೇನೆ. ಇಂದು ಮಹಾರಣದಲ್ಲಿ ಕರ್ಣನನ್ನು ಕೊಂದು ನಾನು ಧೃಷ್ಟದ್ಯುಮ್ನ ಮತ್ತು ಶಿಖಂಡಿ

ಈ ಇಬ್ಬರೂ ಪಾಂಚಾಲರ ಋಣಮುಕ್ತನಾಗುತ್ತೇನೆ! ಇಂದಿನ ಸಂಗ್ರಾಮದಲ್ಲಿ ಕುಪಿತನಾದ ಧನಂಜಯನು ಕೌರವರೊಡನೆ ಯುದ್ಧಮಾಡಿ ಸೂತಜನನ್ನು ರಣದಲ್ಲಿ ಬೀಳಿಸುವುದನ್ನು ನೋಡಲಿದ್ದಾರೆ!

ನಿನ್ನ ಸಮ್ಮುಖದಲ್ಲಿ ಮಾತ್ರ ನಾನು ಈ ಆತ್ಮಸಂಸ್ತುತಿಯನ್ನು ಮಾಡಿಕೊಳ್ಳುತ್ತಿದ್ದೇನೆ! ಧನುರ್ವೇದದಲ್ಲಿ ನನ್ನ ಸಮನಾದವನು ಲೋಕದಲ್ಲಿ ಇಲ್ಲ. ಪರಾಕ್ರಮದಲ್ಲಿ ನನ್ನ ತುಲ್ಯನಾದವನು ಯಾರೂ ಇಲ್ಲ. ಕ್ಷಮೆಯಲ್ಲಿಯೂ ನನ್ನಂತಹ ಬೇರೊಬ್ಬನು ಇಲ್ಲ. ಹಾಗೆಯೇ ಕ್ರೋಧದಲ್ಲಿಯೂ ನನ್ನ ಸದೃಶನಾದ ಇನ್ನೊಬ್ಬನಿಲ್ಲ! ಧನುಷ್ಮಂತನಾದ ನಾನು ಒಟ್ಟಾಗಿ ಬಂದ ಅಸುರರನ್ನೂ, ಸುರರನ್ನೂ ಮತ್ತು ಸರ್ವ ಭೂತಗಳನ್ನೂ ಸ್ವಬಾಹುವೀರ್ಯದಿಂದ ಪರಾಭವಗೊಳಿಸಬಲ್ಲೆನು. ಎಲ್ಲರ ಪೌರುಷಕ್ಕಿಂತ ನನ್ನ ಪೌರುಷವು ಹೆಚ್ಚಿನದೆಂದು ತಿಳಿ. ಬಾಣಗಳೇ ಜ್ವಾಲೆಗಳಾಗಿರುವ ಈ ಗಾಂಡೀವದಿಂದ ನಾನೊಬ್ಬನೇ ಸರ್ವ ಕುರುಗಳನ್ನೂ, ಬಾಹ್ಲೀಕರನ್ನೂ ಸಂಹರಿಸಿ ಗ್ರೀಷ್ಮಋತುವಿನಲ್ಲಿ ಒಣಪೊದೆಗಳನ್ನು ಅಗ್ನಿಯು ದಹಿಸಿಬಿಡುವಂತೆ

ಬಲಪೂರ್ವಕವಾಗಿ ದಹಿಸಿಬಿಡುತ್ತೇನೆ! ನನ್ನ ಒಂದು ಕೈಯಲ್ಲಿ ಬಾಣಗಳ ಚಿಹ್ನೆಗಳಿವೆ. ಮತ್ತೊಂದರಲ್ಲಿ ಬಾಣವನ್ನು ಹೂಡಿರುವ ಧನುಸ್ಸಿನ ಚಿಹ್ನೆಯಿದೆ. ನನ್ನ ಎರಡೂ ಪಾದಗಳಲ್ಲಿ ರಥ-ಧ್ವಜಗಳ ಚಿಹ್ನೆಗಳಿವೆ. ಯುದ್ಧಗತನಾಗಿರುವ ನನ್ನಂತಹವನನ್ನು ಯಾರೂ ಜಯಿಸಲಾರರು!"

ಬೇಸಗೆಯ ಕೊನೆಯಲ್ಲಿ ಮೇಘಗಣಗಳು ಹೇಗೆ ಸೇರಿಕೊಳ್ಳುವವೋ ಹಾಗೆ ದೊಡ್ಡ ದೊಡ್ಡ ಧ್ವಜಗಳನ್ನುಳ್ಳ ಕೌರವ-ಪಾಂಡವರ ಸಮೃದ್ಧ ಸೇನೆಗಳು ಭೇರೀನಿನಾದಗಳನ್ನು ಮಾಡಿ ಗರ್ಜಿಸುತ್ತಾ ರಣದಲ್ಲಿ ಬಂದು ಸೇರಿದವು. ಮಹಾಗಜಗಳ ಸಮೂಹಗಳು ಮೇಘಗಳಂತಿದ್ದವು. ರಣವಾದ್ಯಗಳ ಮತ್ತು ರಥಚಕ್ರಗಳ ಶಬ್ಧವು ಗುಡುಗಿನ ಶಬ್ಧಗಳಂತಿದ್ದವು. ಮಹಾರಥರಿಂದ ಪ್ರಯೋಗಿಸಲ್ಪಟ್ಟ ಬಂಗಾರದ ಬಣ್ಣಗಳ ಆಯುಧಗಳು ಶಬ್ಧಮಾಡಿ ಮಿಂಚಿನಂತೆ ಹೊಳೆಯುತ್ತಿದ್ದವು. ಆ ಭೀಮವೇಗದಿಂದ ಬೀಳುತ್ತಿದ್ದ, ರಕ್ತದ ಪ್ರವಾಹವನ್ನೇ ಹರಿಸುತ್ತಿದ್ದ, ಕ್ಷತ್ರಿಯರ ಜೀವವನ್ನು ಹರಿಸುತ್ತಿದ್ದ ಆ ಖಡ್ಗಗಳ ಕ್ರೂರವಾದ ಅನಿಷ್ಟ ವೃಷ್ಟಿಯು ಆರ್ತರಾದ ಪ್ರಜೆಗಳ ಸಂಹಾರಕವಾಗಿತ್ತು. ಅಲ್ಲಿ ಪಾರ್ಥನು ಶರೌಘಗಳಿಂದ ಸಾರಥಿಗಳೊಂದಿಗೆ ರಥಗಳನ್ನೂ, ಸವಾರಿಗಳೊಂದಿಗೆ ಆನೆಗಳನ್ನೂ, ಸವಾರರೊಂದಿಗೆ ಕುದುರೆಗಳನ್ನೂ ಮತ್ತು ಪದಾತಿ

ಸಂಘಗಳನ್ನೂ ಮೃತ್ಯುವಶರನ್ನಾಗಿ ಮಾಡಿದನು. ರಣದಲ್ಲಿ ಕೃಪನು ಶಿಖಂಡಿಯೊಡನೆಯೂ, ದುರ್ಯೋಧನನು ಸಾತ್ಯಕಿಯೊಡನೆಯೂ, ಶ್ರುತಶ್ರವನು ದ್ರೋಣಸುತನೊಡನೆಯೂ ಮತ್ತು ಯುಧಾಮನ್ಯುವು ಚಿತ್ರಸೇನನೊಡನೆಯೂ ಯುದ್ಧಮಾಡುತ್ತಿದ್ದರು. ಕರ್ಣನ ಪುತ್ರ ಸುಷೇಣನನ್ನು ಉತ್ತಮೌಜಸನು ಎದುರಿಸಿದನು. ಹಸಿದ ಸಿಂಹವು ಮಹಾ ಹೋರಿಯನ್ನು ಹೇಗೋ ಹಾಗೆ ಸಹದೇವನು ಗಾಂಧಾರರಾಜನನ್ನು ಆಕ್ರಮಣಿಸಿದನು. ನಾಕುಲಿ ಶತಾನೀಕನು ಕರ್ಣಪುತ್ರ ವೃಷಸೇನನನ್ನು ಶರೌಘಗಳಿಂದ ಪ್ರಹರಿಸಿದನು. ವೀರ ಕರ್ಣಸುತನೂ ಕೂಡ ಪಾಂಚಾಲಿಯ ಆ ಮಗನನ್ನು ಅನೇಕ ಶರವರ್ಷಗಳಿಂದ ಪ್ರಹರಿಸಿದನು. ನಕುಲನು ಕೃತವರ್ಮನನ್ನು ಆಕ್ರಮಣಿಸಿದನು. ಧೃಷ್ಟದ್ಯುಮ್ನನು ಕರ್ಣನನ್ನು ಆಕ್ರಮಣಿಸಿದನು. ದುಃಶಾಸನನು ಸಂಶಪ್ತಕರ ಸಮೃದ್ಧ ಸೇನೆಗಳೊಂದಿಗೆ ಭೀಮನನ್ನು ಆಕ್ರಮಣಿಸಿದನು.

ಆಗ ಉತ್ತಮೌಜಸನು ಬಲವನ್ನುಪಯೋಗಿಸಿ ಕರ್ಣಾತ್ಮಜನ ಶಿರವನ್ನು ಭೂಮಿಗೆ ಕೆಡವಿ ಜೋರಾಗಿ ಗರ್ಜಿಸಿ ಭೂಮ್ಯಾಕಾಶಗಳನ್ನು ಮೊಳಗಿಸಿದನು. ಸುಷೇಣನ ಶಿರವು ಭೂಮಿಯ ಮೇಲೆ ಬಿದ್ದುದನ್ನು ನೋಡಿ ಆರ್ತರೂಪನಾದ ಕರ್ಣನು ಕ್ರೋಧದಿಂದ ಉತ್ತಮೌಜಸನ ಕುದುರೆಗಳನ್ನೂ, ರಥವನ್ನೂ, ಧ್ವಜವನ್ನೂ ನಿಶಿತವಾದ ಹರಿತ

ಮೊಲಗುಗಳುಳ್ಳ ಬಾಣಗಳಿಂದ ಕತ್ತರಿಸಿದನು. ಉತ್ತಮೌಜಸನಾದರೋ ನಿಶಿತ ಪೃಷತ್ಕಗಳಿಂದ ಮತ್ತು ಹೊಳೆಯುತ್ತಿರುವ ಖಡ್ಗದಿಂದ ಕೃಪನ ಪಾರ್ಷ್ಣಿಯನ್ನೂ ಕುದುರೆಗಳನ್ನೂ ಸಂಹರಿಸಿ ಶಿಖಂಡಿಯ ರಥವನ್ನೇರಿದನು. ಕೃಪನು ವಿರಥನಾಗಿರುವುದನ್ನು ನೋಡಿ ರಥಸ್ಥನಾಗಿದ್ದ ಶಿಖಂಡಿಯು ಶರಗಳಿಂದ ಅವನನ್ನು ಪ್ರಹರಿಸಲು ಇಚ್ಛಿಸಲಿಲ್ಲ. ಆಗ ದ್ರೌಣಿಯು ಕೆಸರಿನಲ್ಲಿ ಸಿಲುಕಿಕೊಂಡಿರುವ ಹಸುವನ್ನು ಹೇಗೋ ಹಾಗೆ ಕೃಪನ ರಥವನ್ನು ಎತ್ತಿ ಉದ್ಧರಿಸಿದನು. ಆಗ ಬಂಗಾರದ ಕವಚವನ್ನು ಧರಿಸಿದ್ದ ಅನಿಲಾತ್ಮಜ ಭೀಮನು ಮಧ್ಯಾಹ್ನದಲ್ಲಿ ಶುಚಿಯಾದ ಆಗಸದಲ್ಲಿರುವ ಸೂರ್ಯನಂತೆ ನಿಶಿತ ಬಾಣಗಳಿಂದ ಧೃತರಾಷ್ಟ್ರನ ಮಕ್ಕಳನ್ನು ಸಂಕಟಕ್ಕೀಡುಮಾಡಿದನು.

## ಅರ್ಜುನನು ರಣಕ್ಕೆ ಇನ್ನೂ ಹಿಂದಿರುಗಲಿಲ್ಲವೆಂದು ಚಿಂತಿಸುತ್ತಿದ್ದ ಭೀಮಸೇನ-ವಿಶೋಕರ ಸಂವಾದ; ಭೀಮಸೇನನು ಅರ್ಜುನನು ಹಿಂದಿರುಗಿದುದನ್ನು ನೋಡಿದುದು

ಅನೇಕ ವೈರಿಗಳಿಂದ ಸಮಾವೃತನಾಗಿ ಏಕಾಂಗಿಯಾಗಿ ಮರ್ದಿಸಲ್ಪಡುತ್ತಿದ್ದ ಭೀಮನು ಧಾರ್ತರಾಷ್ಟ್ರರ ಸೇನೆಯನ್ನು ತಡೆಯುತ್ತಾ ಮಹಾಭಯದಿಂದ ಸಾರಥಿಗೆ

“ಸಾರಥೇ! ನೀನು ವೇಗದಿಂದ ರಥವನ್ನು ಕೊಂಡೊಯ್ಯಿ! ಈ ಧಾರ್ತರಾಷ್ಟ್ರರನ್ನು ಯಮಲೋಕಕ್ಕೆ ಕಳುಹಿಸೋಣ!” ಎಂದು ಹೇಳಿದನು. ಭೀಮಸೇನನಿಂದ ಪ್ರಚೋದಿತನಾದ ಸಾರಥಿಯು ಭೀಮನು ಯಾವ ಸೇನೆಯ ಕಡೆ ಹೋಗಲು ಬಯಸಿದ್ದನೋ ಆ ಸೇನೆಯ ಬಳಿ ರಥವನ್ನು ಕೊಂಡೊಯ್ದನು. ಅನಂತರ ಕುರುಗಳು ಆನೆ-ರಥ-ಕುದುರೆ-ಪದಾತಿಗಳೊಂದಿಗೆ ಉದಾರವೇಗದಲ್ಲಿದ್ದ ಭೀಮನ ರಥವನ್ನು ಎಲ್ಲಕಡೆಗಳಿಂದ ಆಕ್ರಮಣಿಸಿ ಬಾಣಗಣಗಳಿಂದ ಸುತ್ತಲೂ ಹೊಡೆದರು. ಅವನು ಮೇಲೆ ಬೀಳುತ್ತಿದ್ದ ಬಾಣಗಳನ್ನು ಸುವರ್ಣಮಯಪುಂಖಗಳಿಂದ ಕೂಡಿದ್ದ ಬಾಣಗಳಿಂದ ಕತ್ತರಿಸಿದನು. ಅವರ ಬಾಣಗಳು ಭೀಮನ ಬಾಣಗಳಿಂದ ಕತ್ತರಿಸಲ್ಪಟ್ಟು ಎರಡು ಅಥವಾ ಮೂರು ಭಾಗಗಳಾಗಿ ಬೀಳುತ್ತಿದ್ದವು. ಆಗ ವಜ್ರಗಳಿಂದ ಹತಗೊಂಡ ಪರ್ವತಗಳಂತೆ ಭೀಮನಿಂದ ಹತರಾದ ಗಜಾಶ್ವರಥಪದಾತಿ ಸೇನೆಗಳ ಘೋರ ನಿನಾದವುಂಟಾಯಿತು. ಭೀಮಸೇನನ ಶ್ರೇಷ್ಠ ಬಾಣಗಳಿಂದ ವಧಿಸಲ್ಪಟ್ಟು ಗಾಯಗೊಂಡಿರುವ ಆ ನರೇಂದ್ರಮುಖ್ಯರು ಸಮರದಲ್ಲಿ ಪಕ್ಷಿಗಳು ಪುಷ್ಪಕ್ಕಾಗಿ ವೃಕ್ಷವನ್ನು ಮುತ್ತಿಗೆ ಹಾಕುವಂತೆ ಎಲ್ಲಕಡೆಗಳಿಂದ ಭೀಮನನ್ನು

ಮುತ್ತಿಗೆ ಹಾಕಿದರು. ಹಾಗೆ ಸೈನ್ಯಮಧ್ಯದಲ್ಲಿ ಆಕ್ರಮಣಕ್ಕೊಳಗಾದ ಅತಿವೇಗಶಾಲೀ ಭೀಮನು ಪ್ರಳಯಕಾಲದಲ್ಲಿ ದಂಡಧರ ಕಾಲನು ಪ್ರಪಂಚವನ್ನೇ ದಹಿಸುವ ಇಚ್ಛೆಯಿಂದ ವೇಗವಾಗಿ ಕಾರ್ಯಪ್ರವೃತ್ತನಾಗುವಂತೆ ಆಕ್ರಮಣಿಸಿದನು. ಪ್ರಳಯಕಾಲದಲ್ಲಿ ಪ್ರಜೆಗಳ ಪ್ರಾಣಗಳನ್ನು ಅಪಹರಿಸುವ ಬಾಯಿಕಳೆದ ಕಾಲನಿಂದ ಹೇಗೋ ಹಾಗೆ, ರಣದಲ್ಲಿ ಅತಿವೇಗಿಯಾಗಿದ್ದ ಅವನ ಆ ಅತಿವೇಗವನ್ನು ಸಹಿಸಿಕೊಳ್ಳಲು ಕೌರವರಿಗೆ ಸಾಧ್ಯವಾಗಲಿಲ್ಲ. ಸಮರದಲ್ಲಿ ಭೀಮನಿಂದ ಹಾಗೆ ಸುಡಲ್ಪಡುತ್ತಿದ್ದ ಭಾರತರ ಸೇನೆಯು ಭೀತಿಗೊಂಡು ಚಂಡಮಾರುತದಿಂದ ಚದುರಿಹೋಗುವ ಮೋಡಗಳ ಗುಂಪುಗಳಂತೆ ದಿಕ್ಕಾಪಾಲಾಗಿ ಓಡಿ ಹೋಯಿತು. ಆಗ ಭೀಮಸೇನನು ಹೃಷ್ಟನಾಗಿ ಪುನಃ ಸಾರಥಿಗೆ ಹೇಳಿದನು: “ಸೂತ! ಒಟ್ಟಾಗಿ ಮೇಲೆ ಬೀಳುತ್ತಿರುವ ಈ ರಥಧ್ವಜಗಳು ಶತ್ರುಗಳದ್ದೋ ಅಥವಾ ನಮ್ಮವರದ್ದೋ ಎನ್ನುವುದು ತಿಳಿಯದಂತಾಗಿದೆ! ಏಕೆಂದರೆ ಯುದ್ಧದಲ್ಲಿ ತೊಡಗಿರುವಾಗ ನನಗೆ ಏನೊಂದೂ ತಿಳಿಯುತ್ತಿಲ್ಲ! ನಾನು ನನ್ನದೇ ಸೇನೆಯನ್ನು ಬಾಣಗಳಿಂದ ಹೊಡೆಯಬಾರದಲ್ಲ! ಸುತ್ತಲೂ ನೋಡಿದರೆ

ಚಿಂತೆಯು ನನ್ನ ಮನಸ್ಸನ್ನು ತುಂಬಾ ಕಾಡುತ್ತಿದೆ. ಯುಧಿಷ್ಠಿರನನ್ನು ನೋಡಲು ಹೋಗಿದ್ದ ಕಿರೀಟಿಯು ಇನ್ನೂ ಬರಲಿಲ್ಲವೆಂದು ಬಹಳ ದುಃಖಿತನಾಗಿದ್ದೇನೆ! ಧರ್ಮರಾಜನು ನನ್ನನ್ನು ಬಿಟ್ಟು ಶತ್ರುಗಳ ಮಧ್ಯದಲ್ಲಿ ಹೋದಾಗಲೇ ನನಗೆ ದುಃಖವಾಗಿತ್ತು. ಈಗ ಅವನು ಅಥವಾ ಬೀಭತ್ಸುವು ಬದುಕಿರುವನೋ ಇಲ್ಲವೋ ಎನ್ನುವುದನ್ನೂ ನಾನು ತಿಳಿಯದಂತಾಗಿದ್ದೇನೆ. ಏನೇ ಆದರೂ ನಾನು ಶತ್ರುಗಳ ಈ ಉಗ್ರಕಲ್ಪ ಸೇನೆಯನ್ನು ವಿನಾಶಗೊಳಿಸುತ್ತೇನೆ. ರಣಮಧ್ಯದಲ್ಲಿ ಸೇರಿರುವ ಇವರನ್ನು ಇಂದು ನಿನ್ನ ಸಹಾಯದಿಂದ ಸಂಹರಿಸಿ ಪ್ರೀತನಾಗುತ್ತೇನೆ. ನನ್ನ ರಥದಲ್ಲಿರುವ ತೂಣೀರಗಳನ್ನೂ ಮಾರ್ಗಣಗಳನ್ನೂ ಸಾಯಕಗಳನ್ನೂ ನೋಡಿ ಯಾವ ಯಾವ ಜಾತಿಯ ಬಾಣಗಳು ಎಷ್ಟು ಪ್ರಮಾಣಗಳಲ್ಲಿವೆಯೆನ್ನುವುದನ್ನು ತಿಳಿದುಕೊಂಡು ನನಗೆ ಹೇಳು!”

ವಿಶೋಕನು ಹೇಳಿದನು:

“ವೀರ! ನಿನ್ನಲ್ಲಿ ಅರುವತ್ತು ಸಾವಿರ ಮಾರ್ಗಣಗಳೂ, ಹತ್ತು ಸಾವಿರ ಕ್ಷುರಗಳೂ, ಹತ್ತುಸಾವಿರ ಭಲ್ಲಗಳೂ, ಎರಡು ಸಾವಿರ ನಾರಾಚಗಳೂ ಮತ್ತು ಮೂರು ಸಾವಿರ ಪ್ರದರಣಗಳೂ ಇವೆ.

ನಿನ್ನಲ್ಲಿ ಎಷ್ಟು ಆಯುಧಗಳು ಉಳಿದಿವೆಯೆಂದರೆ ಅವುಗಳನ್ನು ಒಂದು ಗಾಡಿಯಲ್ಲಿ ತುಂಬಿಸಿದರೆ ಆರು ಎತ್ತುಗಳಿಗೂ ಆ ಗಾಡಿಯನ್ನು ಎಳೆದುಕೊಂಡು ಹೋಗುವುದಿಕ್ಕಾಗುವುದಿಲ್ಲ! ಇದಕ್ಕೆ ಹೊರತಾಗಿ ನಿನ್ನಲ್ಲಿ ಗದೆ, ಖಡ್ಗ ಮತ್ತು ಬಾಹುಬಲವೂ ಇದೆಯೆಂದು ತಿಳಿದು ಸಹಸ್ರಸಂಖ್ಯೆಗಳಲ್ಲಿ ಬಾಣಗಳನ್ನು ಪ್ರಯೋಗಿಸು!”

ಭೀಮನು ಹೇಳಿದನು:

“ಸೂತ! ನೀನು ಇಂದು ಭೀಮಪ್ರಮುಕ್ತ ವೇಗಯುಕ್ತ ಆಶುಗಗಳಿಂದ ಚಿಂದಿಚಿಂದಿಗೊಳ್ಳುವ ಪಾರ್ಥಿವರನ್ನೂ, ಉಗ್ರ ಬಾಣಗಳಿಂದ ಸೂರ್ಯನನ್ನೂ ಮುಚ್ಚಿ ಆಕಾಶವನ್ನು ಘೋರರೂಪದ ಮೃತ್ಯುಲೋಕಕ್ಕೆ ಸಮನಾಗಿ ಮಾಡುವುದನ್ನು ನೋಡು! ಇಂದು ಭೀಮಸೇನನು ಸಮರದಲ್ಲಿ ಮುಳುಗಿಹೋದನು ಅಥವಾ ಸಮರದಲ್ಲಿ ಒಬ್ಬನೇ ಕುರುಗಳನ್ನು ಜಯಿಸಿದನು ಎನ್ನುವ ಈ ವಾರ್ತೆಯು ಬಾಲಕರಿಂದ ಹಿಡಿದು ವೃದ್ಧರವರೆಗಿನ ಎಲ್ಲ ರಾಜರಿಗೂ ತಿಳಿಯುತ್ತದೆ! ಸರ್ವಕುರುಗಳೂ ಯುದ್ಧದಲ್ಲಿ ಬಿದ್ದರು ಅಥವಾ ಎಲ್ಲರೂ ಒಂದಾಗಿ ನನ್ನನ್ನು ಕೆಳಗೆ ಬೀಳಿಸಿದರು ಅಥವಾ

ಎಲ್ಲರೂ ಭೀಮಸೇನನನ್ನು ಪೀಡಿಸಿದರು ಎಂದು ಬಾಲಕರಿಂದ ಹಿಡಿದು ವೃದ್ಧರವರೆಗಿನ ಜನರು ಮಾತನಾಡಿಕೊಳ್ಳಲಿ! ಉತ್ತಮ ಕರ್ಮಗಳನ್ನು ಆಶಿಸುವ ದೇವತೆಗಳು ನನ್ನ ಕೇವಲ ಈ ಇಚ್ಛೆಯನ್ನು ಸಾಧಿಸಿಕೊಡಲಿ! ಯಜ್ಞದಲ್ಲಿ ಆಹ್ವಾನಿಸಲ್ಪಟ್ಟೊಡನೆಯೇ ಇಂದ್ರನು ಬಹಳ ಬೇಗ ಬರುವಂತೆ ಶತ್ರುಘಾತೀ ಅರ್ಜುನನು ಇಲ್ಲಿಗೆ ಕೂಡಲೇ ಬರಲಿ! ಅಲ್ಲಿ ನೋಡು! ಭಾರತೀ ಸೇನೆಯು ಒಡೆದು ಹೀಗೆ ಏಕೆ ನರೇಂದ್ರರು ಪಲಾಯನಮಾಡುತ್ತಿದ್ದಾರೆ? ನರಾಗ್ರ್ಯ ಸವ್ಯಸಾಚಿಯು ಇವರ ಸೈನ್ಯವನ್ನು ಆಶುಗ ಬಾಣಗಳಿಂದ ಮುಸುಕಿದ್ದಾನೆಂದು ವ್ಯಕ್ತವಾಗುತ್ತಿದೆ! ರಣದಲ್ಲಿ ಓಡಿಹೋಗುತ್ತಿರುವ ಧ್ವಜಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ, ಪದಾತಿಸಂಘಗಳನ್ನೂ ನೋಡು! ಶರ-ಶಕ್ತಿಗಳಿಂದ ಪೀಡಿತವಾಗಿ ಒಡೆದು ಹೋದ ರಥಗಳನ್ನೂ ರಥಿಗಳನ್ನೂ ನೋಡು! ಈ ಕೌರವೀ ಸೇನೆಯು ಮಿಂಚಿನವೇಗವುಳ್ಳ ಧನಂಜಯನ ಸುವರ್ಣಮಯ ನವಿಲಿನ ರೆಕ್ಕೆಗಳನ್ನುಳ್ಳ ಶರಗಳಪ್ರಹಾರದಿಂದ ಬಹಳವಾಗಿ ಗಾಯಗೊಂಡಿದೆ. ರಥ-ಕುದುರೆ-ಆನೆಗಳು ಮತ್ತು ಪದಾತಿಸಂಘಗಳು ಮರ್ದಿಸಲ್ಪಟ್ಟು ಓಡಿ ಹೋಗುತ್ತಿವೆ. ಸರ್ವ

ಕೌರವರೂ ಬುದ್ಧಿಗೆಟ್ಟವರಂತಾಗಿದ್ದಾರೆ. ಆನೆಗಳು ರಣದಲ್ಲಿ ಭಯಭೀತರಾಗಿ ಹಾಹಾಕಾರಗೈಯುತ್ತಾ ಓಡಿಹೋಗುತ್ತಿವೆ. ಗಜೇಂದ್ರಗಳು ಜೋರಾಗಿ ಘೀಳಿಡುತ್ತಿವೆ!”

ವಿಶೋಕನು ಹೇಳಿದನು:

“ಪಾಂಡವ! ನಿನ್ನ ಸರ್ವಕಾಮಗಳನ್ನೂ ಪೂರೈಸಲು ಹಸ್ತಿಸೇನೆಯಲ್ಲಿ ಕಪಿಧ್ವಜನು ಕಾಣಿಸಿಕೊಂಡಿದ್ದಾನೆ. ಮೇಘದಂತಿರುವ ಧನುಸ್ಸಿನಲ್ಲಿ ಮಿಂಚಿನಂತಿರುವ ಅವನ ಮೌರ್ವಿಯನ್ನು ನೋಡು. ಧನುಸ್ಸಿನ ಠೇಂಕಾರವನ್ನು ಕೇಳು! ಧನಂಜಯನ ಧ್ವಜವನ್ನೇರಿದ ಕಪಿಯು ಸುತ್ತಲೂ ನೋಡುತ್ತಿದ್ದಾನೆ. ಅರ್ಜುನನ ಕಿರೀಟದ ಮೇಲಿರುವ ದಿವ್ಯ ಮಣಿಯು ದಿವಾಕರನ ಪ್ರಕಾಶದಿಂದ ಹೊಳೆಯುತ್ತಿದೆ! ಅವನ ಪಕ್ಕದಲ್ಲಿ ಬಿಳಿಯ ಮೋಡದ ಪ್ರಕಾಶವುಳ್ಳ ಸುಘೋಷ ದೇವದತ್ತವನ್ನು ನೋಡುತ್ತಿದ್ದೇವೆ. ಜನಾರ್ದನನ ಕೈಯಲ್ಲಿ ಶತ್ರುಗಳ ಸೇನೆಯನ್ನು ನುಗ್ಗಿಹೋಗುವ ಕುದುರೆಗಳ ಲಗಾಮಿರುವುದನ್ನು ನೋಡು! ಜನಾರ್ದನನ ಪಕ್ಕದಲ್ಲಿ ನಿಂತಿರುವ, ಯದುಗಳು ಸದಾ ಅರ್ಚಿಸುವ, ಕೇಶವನ ಯಶಸ್ಸನ್ನು ವರ್ಧಿಸುವ, ರವಿಪ್ರಭೆಯುಳ್ಳ, ವಜ್ರನಾಭೀ,

ಕ್ಷುರಾಂತ ಚಕ್ರವನ್ನು ನೋಡು!"

ಭೀಮನು ಹೇಳಿದನು:

"ಸಾರಥೇ! ಪ್ರಿಯವಾರ್ತೆಯನ್ನು ಹೇಳಿದುದಕ್ಕೆ ಸುಪ್ರಸನ್ನನಾಗಿ ನಿನಗೆ ಹದಿನಾಲ್ಕು ಶ್ರೇಷ್ಠ ಗ್ರಾಮಗಳನ್ನು ನೀಡುತ್ತೇನೆ! ಅರ್ಜುನನು ಬಂದಿರುವುದನ್ನು ತಿಳಿಸಿದುದಕ್ಕೆ ನಿನಗೆ ನೂರು ದಾಸಿಯರನ್ನೂ ಇಪ್ಪತ್ತು ರಥಗಳನ್ನೂ ಕೊಡುತ್ತೇನೆ!"

ರಣರಂಗದಲ್ಲಿ ರಥನಿರ್ಘೋಷವನ್ನೂ ಸಿಂಹನಾದವನ್ನು ಕೇಳಿದ ಅರ್ಜುನನು ಕುದುರೆಗಳನ್ನು ಶೀಘ್ರವಾಗಿ ಓಡಿಸುವಂತೆ ಗೋವಿಂದನಿಗೆ ಹೇಳಿದನು. ಅರ್ಜುನನ ಮಾತನ್ನು ಕೇಳಿ ಗೋವಿಂದನು

"ಇಗೋ ಭೀಮನೆಲ್ಲಿರುವನೋ ಅಲ್ಲಿಗೆ ಕ್ಷಿಪ್ರವಾಗಿ ಹೋಗುತ್ತೇನೆ!"

ಎಂದು ಅರ್ಜುನನಿಗೆ ಹೇಳಿದನು. ಹಿಮಶಂಖವರ್ಣದ ಕುದುರೆಗಳನ್ನು ಕಟ್ಟಿದ್ದ, ಸುವರ್ಣ ಮುಕ್ತಾಮಣಿಗಳ ಜಾಲಗಳಿಂದ ಅಲಂಕೃತವಾಗಿದ್ದ ರಥದಲ್ಲಿ ಜಂಭಾಸುರನನ್ನು ಸಂಹರಿಸಲು ವಜ್ರವನ್ನು ಹಿಡಿದು ಬರುತ್ತಿರುವ ದೇವೇಂದ್ರನಂತೆ ಜಯಕ್ಕಾಗಿ ಉಗ್ರಕೋಪದಿಂದ ಬರುತ್ತಿರುವ ಜಯನನ್ನು ಕ್ರುದ್ಧ ನರಸಿಂಹರು ರಥ-ಕುದುರೆ-ಮಾತಂಗ-

ಪದಾತಿಸಂಘಗಳಿಂದ ಮತ್ತು ಬಾಣಗಳ ಶಬ್ಧ, ರಥಚಕ್ರಗಳ ಶಬ್ಧಗಳೊಂದಿಗೆ ಭೂಮಿ-ದಿಕ್ಕುಗಳನ್ನು ಮೊಳಗಿಸುತ್ತಾ ಆಕ್ರಮಣಿಸಿದರು. ತ್ರೈಲೋಕ್ಯಕ್ಕಾಗಿ ಅಸುರರಿಗೂ ಮತ್ತು ವಿಜಯಿಗಳಲ್ಲಿ ಶ್ರೇಷ್ಠ ದೇವ ವಿಷ್ಣುವಿಗೂ ಹೇಗೆ ಯುದ್ಧವು ನಡೆಯಿತೋ ಹಾಗೆ ಕೌರವರ ಮತ್ತು ಪಾರ್ಥರ ನಡುವೆ ದೇಹ-ಪ್ರಾಣ-ಪಾಪಗಳ ವಿನಾಶಕಾರೀ ಮಹಾ ಯುದ್ಧವು ನಡೆಯಿತು. ಅವರು ಬಿಡುತ್ತಿದ್ದ ವಿವಿಧಬಗೆಯ ಆಯುಧಸಂಘಗಳನ್ನು ಕಿರೀಟಮಾಲಿಯೊಬ್ಬನೇ ತುಂಡರಿಸಿದನು. ಅರ್ಧಚಂದ್ರದ ಕ್ಷುರಗಳು ಮತ್ತು ನಿಶಿತ ಬಾಣಗಳಿಂದ ಅವರ ಅನೇಕ ಶಿರಗಳನ್ನೂ ಬಾಹುಗಳನ್ನೂ, ಚತ್ರಗಳನ್ನೂ, ವಾಲವ್ಯಜನಗಳನ್ನೂ, ಧ್ವಜಗಳನ್ನೂ, ಅಶ್ವಗಳನ್ನೂ, ರಥಗಳನ್ನೂ, ಪದಾತಿಗಣಗಳನ್ನೂ, ಆನೆಗಳನ್ನೂ ತುಂಡರಿಸಿದನು. ವನದಲ್ಲಿ ಚಂಡಮಾರುತಕ್ಕೆ ಸಿಲುಕಿದ ಮರಗಳಂತೆ ಅವುಗಳು ಅನೇಕ ಸಂಖ್ಯೆಗಳಲ್ಲಿ ವಿರೂಪಗೊಂಡು ನೆಲದ ಮೇಲೆ ಬಿದ್ದವು. ಸುವರ್ಣಜಾಲಗಳಿಂದ ಮತ್ತು ವೈಜಯಂತೀ ಧ್ವಜಗಳಿಂದ ಅಲಂಕೃತಗೊಂಡು ಯೋಧರಿಂದ ಸಜ್ಜುಗೊಳಿಸಿದ್ದ ಮಹಾ ಗಜಗಳು ಅರ್ಜುನನ ಸುವರ್ಣಪುಂಖಗಳ ಬಾಣಗಳಿಂದ ಚುಚ್ಚಲ್ಪಟ್ಟು ಪ್ರಜ್ವಲಿಸುವ ಪರ್ವತಗಳಂತೆ ಕಾಣುತ್ತಿದ್ದವು. ಹಿಂದೆ ಬಲಭೇದನೆಗೆ ಮರುತ್ವಾನನು ಬರುವಂತೆ ವಾಸವನ ವಜ್ರಸನ್ನಿಭ ಉತ್ತಮ

ಶರಗಳಿಂದ ಆನೆ-ರಥ-ಕುದುರೆಗಳನ್ನು ಸೀಳುತ್ತಾ ಅರ್ಜುನನು ಕರ್ಣನನ್ನು ಸಂಹರಿಸಲು ಉತ್ಸುಕನಾಗಿ ಬಹುಬೇಗ ಬಂದನು. ಆಗ ಆ ಮಹಾಬಾಹುವು ಮೊಸಳೆಯು ಸಾಗರವನ್ನು ಹೇಗೋ ಹಾಗೆ ಸೂತ ಕರ್ಣನ ಸೈನ್ಯವನ್ನು ಪ್ರವೇಶಿಸಿದನು. ಅವನನ್ನು ನೋಡಿ ಕೌರವರು ಅನೇಕ ರಥ-ಪದಾತಿ-ಆನೆ-ಕುದುರೆಗಳ ಸವಾರರೊಂದಿಗೆ ಪಾಂಡವನನ್ನು ಆಕ್ರಮಣಿಸಿದರು. ಉಕ್ಕಿ ಬರುತ್ತಿರುವ ಸಾಗರದ ಅಲೆಗಳ ಭೋರ್ಗರೆತದಂತೆ ಪಾರ್ಥನ ಮೇಲೆ ಬೀಳುತ್ತಿದ್ದ ಆ ಸೇನೆಗಳ ಕೋಲಾಹಲ ಶಬ್ಧವು ಸರ್ವತ್ರ ವ್ಯಾಪ್ತವಾಯಿತು. ಸಂಗ್ರಾಮದಲ್ಲಿ ಪ್ರಾಣಭಯವನ್ನೂ ತೊರೆದು ಆ ಮಹಾರಥರು ಹುಲಿಗಳಂತೆ ಪುರುಷವ್ಯಾಘ್ರ ಅರ್ಜುನನನ್ನು ಆಕ್ರಮಣಿಸಿದರು. ಮೇಲೆ ಬೀಳುತ್ತಿರುವ ಆ ಸೇನೆಯನ್ನು ಅರ್ಜುನನು ಶರವರ್ಷಗಳಿಂದ ಮುಚ್ಚಿ ಚಂಡಮಾರುತವು ಮೋಡಗಳನ್ನು ಹೇಗೋ ಹಾಗೆ ವಧಿಸಿದನು.

ಆ ಪ್ರಹಾರಿಗಳು ರಥಸಮೂಹಗಳೊಡನೆ ಸಂಘಟಿತರಾಗಿ ನಿಶಿತ ಶರಗಳಿಂದ ಅರ್ಜುನನನ್ನು ಪ್ರಹರಿಸಿದರು. ಆಗ ವಿಶಿಖಗಳಿಂದ ಅರ್ಜುನನು ಸಹಸ್ರಾರು ರಥ-ಆನೆ-ಕುದುರೆಗಳನ್ನು ಯಮಸದನಕ್ಕೆ ಕಳುಹಿಸಿದನು. ಪಾರ್ಥನ ಚಾಪದಿಂದ ಬಿಡಲ್ಪಟ್ಟ ಬಾಣಗಳಿಂದ ವಧಿಸಲ್ಪಡುತ್ತಿದ್ದ ಆ ಮಹಾರಥರು ಸಮರದಲ್ಲಿ ಭಯಗೊಂಡು

ಅಲ್ಲಲ್ಲಿಯೇ ಅಡಗಿಕೊಳ್ಳುತ್ತಿದ್ದರು. ಪ್ರಯತ್ನಪಡುತ್ತಿದ್ದ ಆ ನಾಲ್ಕು ನೂರು ವೀರ ಮಹಾರಥರನ್ನು ಅರ್ಜುನನು ನಿಶಿತ ಬಾಣಗಳಿಂದ ಯಮಸದನಕ್ಕೆ ಕಳುಹಿಸಿದನು. ಸಮರದಲ್ಲಿ ನಾನಾ ರೀತಿಯ ನಿಶಿತ ಶರಗಳಿಂದ ವಧಿಸಲ್ಪಡುತ್ತಿದ್ದ ಅವರು ಭಯದಿಂದ ಅರ್ಜುನನನ್ನು ಬಿಟ್ಟು ದಿಕ್ಕಾಪಾಲಾಗಿ ಓಡಿ ಹೋದರು. ವಾಹಿನೀಮುಖದಲ್ಲಿ ಓಡಿ ಹೋಗುತ್ತಿದ್ದ ಅವರ ಶಬ್ಧವು ಮಹಾಪ್ರವಾಹದೊಂದಿಗೆ ಗಿರಿಯನ್ನು ಅಪ್ಪಳಿಸಿ ಮುಂದೆ ಹೋಗಲಾರದೇ ಭಾಗಗಳಾಗಿ ಹರಿದುಹೋಗುವ ನದಿಯಂತೆ ಮಹತ್ತರವಾಗಿತ್ತು. ಆ ಸೇನೆಯನ್ನು ಶರಗಳಿಂದ ಚೆನ್ನಾಗಿ ಹೊಡೆದು ಓಡಿಸಿ ಪಾರ್ಥ ಅರ್ಜುನನು ಸೂತ ಕರ್ಣನ ಸೇನೆಗೆ ಅಭಿಮುಖವಾಗಿ ಮುಂದುವರೆದನು. ಶತ್ರುಗಳನ್ನು ಎದುರಿಸಿ ಹೋಗುತ್ತಿದ್ದ ಅವನ ಶಬ್ಧವು ಹಿಂದೆ ಪನ್ನಗಗಳಿಗಾಗಿ ಗರುಡನು ಎರಗಿ ಬಿದ್ದಂತೆ ಅತಿ ಭಯಂಕರವಾಗಿತ್ತು. ಆ ಶಬ್ಧವನ್ನು ಕೇಳಿದ ಭೀಮಸೇನನು ಅತ್ಯಂತ ಹರ್ಷಗೊಂಡನು. ಪಾರ್ಥನು ಬರುತ್ತಿರುವುದನ್ನು ಕೇಳಿಯೇ ಪ್ರತಾಪವಾನ್ ಭೀಮಸೇನನು ಪ್ರಾಣಗಳನ್ನೂ ತ್ಯಜಿಸಿ ಕೌರವ ಸೇನೆಯನ್ನು ಮರ್ದಿಸಿದನು. ವಾಯುವೇಗಸಮನಾದ ಆ ವಾಯುವೇಗಪ್ರತಿಮ ವಾಯುಪುತ್ರ ಭೀಮನು ವಾಯುವಿನಂತೆಯೇ ಸಂಚರಿಸುತ್ತಿದ್ದನು. ಅವನಿಂದ ಮರ್ದಿಸಲ್ಪಡುತ್ತಿದ್ದ ಕೌರವ ಸೈನ್ಯವು ಸಾಗರಮಧ್ಯದಲ್ಲಿ ಒಡೆದು

ಹೋಗುವ ನೌಕೆಯಂತೆ ಒಡೆದುಹೋಯಿತು.

## ಭೀಮಸೇನನಿಂದ ಶಕುನಿಯ ಪರಾಜಯ

ಆಗ ಭೀಮನು ತನ್ನ ಹಸ್ತಲಾಘವವನ್ನು ತೋರಿಸುತ್ತಾ ಉಗ್ರಶರಗಳಿಂದ ಆ ಸೇನೆಯನ್ನು ತುಂಡರಿಸಿ ಯಮಕ್ಷಯಕ್ಕೆ ಕಳುಹಿಸಿದನು. ಅಲ್ಲಿ ಭೀಮನ ಅತಿಮಾನುಷ ಬಲವನ್ನು ಕಂಡು ಯೋಧರು ಯುಗಕ್ಷಯದಲ್ಲಿ ಕಾಲನಿಂದ ಓಡಿಹೋಗುವಂತೆ ರಣದಲ್ಲಿ ಓಡತೊಡಗಿದರು. ಭೀಮಬಲ ಭೀಮಸೇನನಿಂದ ಹಾಗೆ ಆರ್ದಿತರಾದವರನ್ನು ನೋಡಿ ರಾಜಾ ದುರ್ಯೋಧನನು ಸೈನಿಕ ಯೋಧರನ್ನು ಆಹ್ವಾನಿಸುತ್ತಾ ಈ ಮಾತನ್ನಾಡಿದನು: "ನೀವೆಲ್ಲರೂ ಸಂಘಟಿತರಾಗಿ ಭೀಮನನ್ನು ಸಂಹರಿಸಿರಿ! ಅವನೊಬ್ಬನು ಹತನಾದರೆ ಪಾಂಡವರ ಸರ್ವಸೇನ್ಯವೂ ಹತವಾದಂತೆ ಎಂದು ತಿಳಿಯಿರಿ!" ಅವನ ಆಜ್ಞೆಯನ್ನು ಸ್ವೀಕರಿಸಿ ಪಾರ್ಥಿವರು ಭೀಮನನ್ನು ಶರವರ್ಷಗಳಿಂದ ಸುತ್ತಲೂ ಮುತ್ತಿಗೆ ಹಾಕಿದರು. ಜಯವನ್ನು ಬಯಸಿದ್ದ ಅನೇಕ ನರರು, ರಥರು ಮತ್ತು ಕುದುರೆಗಳು ವೃಕೋದರನನ್ನು ಸುತ್ತುವರೆದರು. ಶೂರರಿಂದ ಪರಿವೃತನಾಗಿದ್ದ ಆ ಶೂರ ಭೀಮಸೇನನು ನಕ್ಷತ್ರಗಳಿಂದ ಸುತ್ತುವರೆಯಲ್ಪಟ್ಟಿದ್ದ ಚಂದ್ರಮನಂತೆ ಶೋಭಿಸಿದನು. ಹಾಗೆ ರಣದಲ್ಲಿ ಆ ನರೋತ್ತಮನು, ವಿಜಯ ಅರ್ಜುನನಂತೆಯೇ, ನೋಡಲು

ಸುಂದರನಾಗಿ ಕಾಣುತ್ತಿದ್ದನು. ಅವರಿಬ್ಬರಲ್ಲಿ ವ್ಯತ್ಯಾಸವೇ ಕಾಣುತ್ತಿರಲಿಲ್ಲ. ಅಲ್ಲಿ ಕ್ರೋಧದಿಂದ ರಕ್ತೇಕ್ಷಣರಾಗಿದ್ದ ಕ್ರೂರ ಪಾರ್ಥಿವರೆಲ್ಲರೂ ವೃಕೋದರನನ್ನು ಕೊಲ್ಲಲು ಬಯಸಿ ಶರವೃಷ್ಟಿಗಳನ್ನು ಸೃಷ್ಟಿಸಿದರು. ಆದರೆ ನೀರಿನಲ್ಲಿ ಮೀನು ಬಲೆಯಿಂದ ಹೊರಬರುವಂತೆ ಭೀಮನು ಸನ್ನತಪರ್ವ ಶರಗಳಿಂದ ಮಹಾಸೇನೆಯನ್ನು ಸೀಳಿ ರಣದಿಂದ ಹೊರಬಂದನು.

ಹತ್ತು ಸಾವಿರ ಆನೆಗಳನ್ನೂ, ಎರಡು ಲಕ್ಷದ ಎರಡು ನೂರು ಪದಾತಿಗಳನ್ನೂ, ಐದುಸಾವಿರ ಕುದುರೆಗಳನ್ನೂ ಮತ್ತು ಒಂದು ನೂರು ರಥಿಗಳನ್ನೂ ಸಂಹರಿಸಿ ರಕ್ತ ಮಾಂಸಗಳ ನದಿಯನ್ನೇ ಭೀಮನು ಹರಿಸಿದನು. ಯುದ್ಧದಲ್ಲಿ ಯೋಧರನ್ನು ಯಮಸಾದನದ ಕಡೆ ಕೊಂಡೊಯ್ದು ಹರಿಯುತ್ತಿದ್ದ ಆ ನದಿಯಲ್ಲಿ ರಕ್ತವೇ ನೀರಾಗಿತ್ತು. ರಥಗಳು ಸುಳಿಗಳಾಗಿದ್ದವು. ಆನೆಗಳು ದೊಡ್ಡ ಮೊಸಳೆಗಳಂತಿದ್ದವು. ಪದಾತಿಗಳು ಮೀನುಗಳಂತಿದ್ದರು. ಕುದುರೆಗಳು ನಕ್ರಗಳಂತಿದ್ದವು. ಕೂದಲುಗಳು ಪಾಚಿಯಂತಿದ್ದವು. ತುಂಡಾದ ಭುಜಗಳು ಸರ್ಪಗಳಂತಿದ್ದವು. ಅನೇಕ ರತ್ನಗಳನ್ನು ನದಿಯು ಕೊಚ್ಚಿಕೊಂಡು ಹೋಗುತ್ತಿತ್ತು. ತೊಡೆಗಳು ಮೊಸಳೆಗಳಂತಿದ್ದವು. ಮಾಂಸವೇ ಕೆಸರಾಗಿತ್ತು. ಶಿರಗಳು ಕಲ್ಲುಬಂಡೆಗಳಂತಿದ್ದವು. ಧನುಸ್ಸುಗಳು

ಜೊಂಡುಹುಲ್ಲುಗಳಂತಿದ್ದವು. ಬಾಣಗಳು ಜೊಂಡುಹುಲ್ಲಿನ ಚಿಗುರುಗಳಂತಿದ್ದವು. ಹದೆಗಳು ಪರಿಘಗಳು ನಾಗರಹಾವುಗಳಂತಿದ್ದವು. ಆ ಪುರುಷವ್ಯಾಘ್ರನು ಕ್ಷಣದಲ್ಲಿಯೇ ಉಗ್ರವಾದ, ಅಕೃತಾತ್ಮರಿಗೆ ದುಸ್ತರವಾದ ವೈತರಣಿಯಂತಿದ್ದ ನದಿಯನ್ನು ಸೃಷ್ಟಿಸಿದನು. ರಥಸತ್ತಮ ಪಾಂಡವೇಯನು ಎಲ್ಲೆಲ್ಲಿ ಹೋಗುತ್ತಿದ್ದನೋ ಅಲ್ಲಲ್ಲಿ ನೂರಾರು ಸಹಸ್ರಾರು ಯೋಧರನ್ನು ಕೆಳಗುರುಳಿಸುತ್ತಿದ್ದನು. ಭೀಮಸೇನನು ಯುದ್ಧದಲ್ಲಿ ಮಾಡುತ್ತಿದ್ದ ಈ ಕರ್ಮಗಳನ್ನು ನೋಡಿ ದುರ್ಯೋಧನನು ಶಕುನಿಗೆ ಹೇಳಿದನು:

> "ಮಾವ! ಸಂಗ್ರಾಮದಲ್ಲಿ ಮಹಾಬಲ ಭೀಮಸೇನನನ್ನು ಜಯಿಸು. ಈ ಪಾಂಡವೇಯನನ್ನು ಗೆದ್ದರೆ ನಾವು ಗೆದ್ದಂತೆಯೇ!"

ಆಗ ಪ್ರತಾಪವಾನ್ ಸೌಬಲೇಯನು ಸಹೋದರರಿಂದ ಪರಿವಾರಿತನಾಗಿ ಮಹಾ ಸೇನೆಯೊಂದಿಗೆ ಯುದ್ಧಕ್ಕೆ ಹೊರಟನು. ಸಂಗ್ರಾಮದಲ್ಲಿ ಅವನು ಭೀಮಪರಾಕ್ರಮಿ ಭೀಮನನ್ನು ಎದುರಿಸಿ ಆ ವೀರನನ್ನು ದಡವು ಸಮುದ್ರವನ್ನು ತಡೆಯುವಂತೆ ತಡೆದು ನಿಲ್ಲಿಸಿದನು. ನಿಶಿತ ಶರಗಳಿಂದ ತಡೆಯಲ್ಪಟ್ಟ ಭೀಮನು ಅವನನ್ನು ಎದುರಿಸಿದನು. ಶಕುನಿಯು ರುಕ್ಮಪುಂಖಗಳುಳ್ಳ ಶಿಲಾಶಿತ ನಾರಾಚಗಳನ್ನು ಅವನ

ವಕ್ಷಃಸ್ಥಳದ ಎಡಭಾಗಕ್ಕೆ ಪ್ರಯೋಗಿಸಿದನು. ಆ ಬಾಣಗಳು ಮಹಾತ್ಮನ ಸುವರ್ಣ ಕವಚವನ್ನು ಭೇದಿಸಿ ಶರೀರದೊಳಗೆ ನಾಟಿಕೊಂಡವು. ಹಾಗೆ ಅತಿಯಾಗಿ ಗಾಯಗೊಂಡ ಭೀಮನು ತಕ್ಷಣವೇ ಹೇಮವಿಭೂಷಿತ ಶರವನ್ನು ಸೌಬಲನ ಮೇಲೆ ಪ್ರಯೋಗಿಸಿದನು. ತನ್ನ ಮೇಲೆ ಬೀಳುತ್ತಿದ್ದ ಆ ಘೋರ ಶರವನ್ನು ಶಕುನಿಯು ನೂರುಭಾಗಗಳಾಗಿ ತುಂಡರಿಸಿದನು. ಅದು ಭೂಮಿಯ ಮೇಲೆ ಬೀಳಲು ಕ್ರುದ್ಧನಾದ ಭೀಮನು ನಗುತ್ತಾ ಭಲ್ಲದಿಂದ ಸೌಬಲನ ಧನುಸ್ಸನ್ನು ತುಂಡರಿಸಿದನು. ತುಂಡಾದ ಧನುಸ್ಸನ್ನು ಎಸೆದು ಸೌಬಲೇಯನು ವೇಗದಿಂದ ಇನ್ನೊಂದು ಧನುಸ್ಸನ್ನೂ ಹದಿನಾರು ಭಲ್ಲಗಳನ್ನೂ ಕೈಗೆತ್ತಿಕೊಂಡನು. ಆ ಸನ್ನತಪರ್ವಗಳಲ್ಲಿ ನಾಲ್ಕರಿಂದ ಭೀಮನ ಸಾರಥಿಯನ್ನೂ, ಐದರಿಂದ ಭೀಮನನ್ನೂ ಹೊಡೆದನು. ಸುಬಲಾತ್ಮಜನು ಒಂದರಿಂದ ಧ್ವಜವನ್ನೂ, ಎರಡರಿಂದ ಚತ್ರವನ್ನೂ, ನಾಲ್ಕರಿಂದ ನಾಲ್ಕು ಕುದುರೆಗಳನ್ನೂ ಹೊಡೆದನು.

ಆಗ ಕ್ರುದ್ಧನಾದ ಭೀಮಸೇನನು ಬಂಗಾರದ ದಂಡವನ್ನು ಹೊಂದಿದ್ದ ಲೋಹಮಯ ಶಕ್ತಿಯನ್ನು ಶಕುನಿಯಮೇಲೆ ಎಸೆದನು. ಭೀಮನ ಭುಜದಿಂದ ಹೊರಟ ಹಾವಿನ ನಾಲಿಗೆಯಂತೆ ಚಂಚಲವಾಗಿದ್ದ ಆ ಶಕ್ತಿಯು ತಕ್ಷಣವೇ ಸೌಬಲನ ರಥದ ಮೇಲೆ ಬಿದ್ದಿತು. ಕ್ರುದ್ಧರೂಪ

ಶಕುನಿಯು ಕನಕಭೂಷಣವಾಗಿದ್ದ ಅದೇ ಶಕ್ತಿಯನ್ನು ಹಿಡಿದು ಭೀಮಸೇನನ ಮೇಲೆ ಎಸೆದನು. ಅದು ಪಾಂಡವನ ಎಡಭುಜವನ್ನು ಭೇದಿಸಿ ಆಕಾಶದಿಂದ ಬಿದ್ದ ಸಿಡಿಲಿನಂತೆ ನೆಲದಮೇಲೆ ಬಿದ್ದಿತು. ಆಗ ಸುತ್ತುವರೆದಿದ್ದ ಧಾರ್ತರಾಷ್ಟ್ರರ ಉತ್ಕೃಷ್ಟ ಸಿಂಹನಾದವನ್ನು ಭೀಮನು ಸಹಿಸಿಕೊಳ್ಳಲಿಲ್ಲ. ಆಗ ಆ ಮಹಾಬಲನು ತ್ವರೆಮಾಡಿ ಪ್ರಾಣದ ಹಂಗನ್ನೇ ತೊರೆದು ಸಜ್ಜಾಗಿದ್ದ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಮುಹೂರ್ತಮಾತ್ರದಲ್ಲಿ ಸೌಬಲನ ಸೇನೆಗಳನ್ನು ಸಾಯಕಗಳಿಂದ ಮುಚ್ಚಿಬಿಟ್ಟನು. ತ್ವರೆಮಾಡಿ ಆ ಪರಾಕ್ರಮಿಯು ಶಕುನಿಯ ನಾಲ್ಕೂ ಕುದುರೆಗಳನ್ನು ಮತ್ತು ಸೂತನನ್ನು ಸಂಹರಿಸಿ ಭಲ್ಲದಿಂದ ಅವನ ಧ್ವಜವನ್ನೂ ತುಂಡರಿಸಿದನು. ಕ್ರೋಧದಿಂದ ರಕ್ತಾಕ್ಷನಾಗಿದ್ದ ಶಕುನಿಯು ಕುದುರೆಗಳನ್ನು ಕಳೆದುಕೊಂಡ ರಥವನ್ನು ಬಿಟ್ಟು ಅವಸರದಿಂದ ಕೆಳಗಿಳಿದು ನಿಟ್ಟುಸಿರುಬಿಡುತ್ತಾ ಧನುಸ್ಸನ್ನು ಟೇಂಕರಿಸಿ ನಿಂತುಕೊಂಡೇ ಅನೇಕ ಶರಗಳಿಂದ ಭೀಮನನ್ನು ಎಲ್ಲಕಡೆ ಮುಚ್ಚಿದನು. ಭೀಮಸೇನನು ವೇಗದಿಂದ ಅವುಗಳನ್ನು ನಾಶಗೊಳಿಸಿ ಸಂಕ್ರುದ್ಧನಾಗಿ ಅವನ ಧನುಸ್ಸನ್ನು ತುಂಡರಿಸಿದನು ಮತ್ತು ನಿಶಿತ ಶರಗಳಿಂದ ಪ್ರಹರಿಸಿದನು. ಶಕುನಿಯು ಶತ್ರುವಿನಿಂದ ಹಾಗಿ ಬಲವಾಗಿ ಗಾಯಗೊಂಡು ಅಲ್ಪಪ್ರಾಣನಾಗಿ ಭೂಮಿಯ ಮೇಲೆ ಬಿದ್ದನು. ಶಕುನಿಯು ವಿಹ್ವಲನಾಗಿರುವುದನ್ನು ತಿಳಿದು ದುರ್ಯೋಧನನು ಭೀಮಸೇನನು

ನೋಡುತ್ತಿರುವಂತೆಯೇ ಅವನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟುಹೋದನು.

ಭೀಮಸೇನನು ರಥದಲ್ಲಿಯೇ ಕುಳಿತಿರಲು ಭೀಮನಿಂದ ಉಂಟಾದ ಮಹಾಭಯದಿಂದಾಗಿ ಧಾರ್ತರಾಷ್ಟ್ರರು ಪರಾಙ್ಮುಖರಾಗಿ ದಿಕ್ಕಾಪಾಲಾಗಿ ಓಡಿ ಹೋದರು. ಭೀಮಸೇನನಿಂದ ಸೌಬಲನು ಸೋತುಹೋಗಲು ಮಹಾಭಯದಿಂದ ದುರ್ಯೋಧನನು ಭಗ್ನನಾಗಿಹೋದನು. ವೇಗದ ಕುದುರೆಗಳೊಂದಿಗೆ ಅವನು ಸೋದರಮಾವನನ್ನು ಉಳಿಸಿಕೊಳ್ಳುವ ಸಲುವಾಗಿ ಅಲ್ಲಿಂದ ಹೊರಟುಹೋದನು. ರಾಜನು ಪರಾಙ್ಮುಖನಾಗಿರುವುದನ್ನು ಕಂಡು ಎಲ್ಲ ಸೈನಿಕರೂ ದ್ವೈರಥಯುದ್ಧವನ್ನು ಬಿಟ್ಟು ಎಲ್ಲ ಕಡೆ ಓಡಿಹೋದರು. ಆ ಎಲ್ಲ ಧಾರ್ತರಾಷ್ಟ್ರ ಅತಿರಥರೂ ಪರಾಙ್ಮುಖರಾದುದನ್ನು ನೋಡಿ ಭೀಮನು ಅನೇಕ ನೂರು ಬಾಣಗಳನ್ನು ಎರಚುತ್ತಾ ವೇಗದಿಂದ ಅವರನ್ನು ಹಿಂಬಾಲಿಸಿ ಹೋದನು. ಭೀಮನಿಂದ ವಧಿಸಲ್ಪಡುತ್ತಿದ್ದ ಆ ಧಾರ್ತರಾಷ್ಟ್ರರು ಪರಾಙ್ಮುಖರಾಗಿ ಕರ್ಣನನ್ನು ಸೇರಿ ರಣದಲ್ಲಿ ಅವನನ್ನು ಸುತ್ತುವರೆದು ನಿಂತರು. ಆ ಮಹಾವೀರ್ಯ ಮಹಾಬಲನೇ ಅವರ ದ್ವೀಪದಂತಿದ್ದನು. ನೌಕೆಯು ಒಡೆದುಹೋಗಲು ನಾವಿಕರು ದ್ವೀಪವನ್ನು ಸೇರಿ

ಸಂತುಷ್ಟರಾಗುವಂತೆ ಕೌರವರು ಕರ್ಣನನ್ನು ಸೇರಿ ಪರಸ್ಪರರಿಗೆ ಆಶ್ವಾಸನೆಗಳನ್ನು ನೀಡುತ್ತಾ ಸಂಪ್ರಹೃಷ್ಟರಾದರು. ಮೃತ್ಯುವನ್ನೇ ಹಿಂದಿರುಗುವ ಗುರಿಯನ್ನಾಗಿರಿಸಿಕೊಂಡ ಅವರು ಯುದ್ಧಕ್ಕೆ ಪುನಃ ಮುಂದಾದರು.

## ಕರ್ಣನ ಯುದ್ಧ

ಭೀಮಸೇನನಿಂದ ಬಲವು ಪಲಾಯನಗೊಳ್ಳುತ್ತಿರುವುದನ್ನು ನೋಡಿ ಕರ್ಣನು ಸಾರಥಿಗೆ "ಪಾಂಚಾಲರಿರುವಲ್ಲಿಗೆ ನನ್ನನ್ನು ಕೊಂಡೊಯ್ಯಿ!" ಎಂದನು. ಆಗ ಮದ್ರರಾಜ ಶಲ್ಯನು ಮಹಾವೇಗವುಳ್ಳ ಶ್ವೇತಾಶ್ವಗಳನ್ನು ಚೇದಿ-ಪಾಂಚಾಲ-ಕರೂಷರಿದ್ದಲ್ಲಿಗೆ ಓಡಿಸಿದನು. ಅವರ ಸೇನೆಗಳನ್ನು ಪ್ರವೇಶಿಸಿ ಶಲ್ಯನು ಹೃಷ್ಟನಾಗಿ ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಕುದುರೆಗಳನ್ನು ಕೊಂಡೊಯ್ದು ನಿಲ್ಲಿಸುತ್ತಿದ್ದನು. ವ್ಯಾಘ್ರಚರ್ಮದಿಂದ ಆಚ್ಛಾದಿತವಾಗಿದ್ದ ಮೇಘಸದೃಶ ಆ ರಥವನ್ನು ನೋಡಿ ಪಾಂಡು-ಪಾಂಚಾಲರಲ್ಲಿ ಭಯವುಂಟಾಯಿತು. ಕರ್ಣನ ರಥದ ನಿರ್ಘೋಷವು ಗುಡುಗಿನ ಸಮನಾಗಿತ್ತು ಮತ್ತು ಪರ್ವತವೇ ಸೀಳಿಹೋಗುತ್ತಿವೆಯೋ ಎಂಬಂತ್ತಿತ್ತು. ಕರ್ಣನು ಕಿವಿಯವರೆಗೂ ಸೆಳೆದು ಬಿಡುತ್ತಿದ್ದ ನೂರಾರು ತೀಕ್ಷ್ಣ ಶರಗಳಿಂದ ಪಾಂಡವ ಸೇನೆಯನ್ನು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ಸಂಹರಿಸಿದನು. ಹಾಗೆ ಸಮರದಲ್ಲಿ

ಅತಿ ಅಮಾನುಷ ಕರ್ಮಗಳನ್ನೆಸಗುತ್ತಿರುವ ಕರ್ಣನನ್ನು ಪಾಂಡವರು ಸುತ್ತುವರೆದರು. ಶಿಖಂಡೀ, ಭೀಮ, ಧೃಷ್ಟದ್ಯುಮ್ನ, ನಕುಲ, ಸಹದೇವ, ಮತ್ತು ಸಾತ್ಯಕಿಯೊಡನೆ ದ್ರೌಪದೇಯರು ರಾಧೇಯನನ್ನು ಕೊಲ್ಲಲು ಬಯಸಿ ಅವನನ್ನು ಶರವೃಷ್ಟಿಗಳೊಂದಿಗೆ ಸುತ್ತುವರೆದು ಆಕ್ರಮಣಿಸಿದರು. ಸಾತ್ಯಕಿಯಾದರೋ ರಣದಲ್ಲಿ ಕರ್ಣನನ್ನು ಜತ್ರುದೇಶಕ್ಕೆ ಗುರಿಯಿಟ್ಟು ಇಪ್ಪತ್ತು ನಿಶಿತ ಶರಗಳಿಂದ ಪ್ರಹರಿಸಿದನು. ಶಿಖಂಡಿಯು ಇಪ್ಪತ್ತೈದು, ಧೃಷ್ಟದ್ಯುಮ್ನನು ಐದು, ದ್ರೌಪದೇಯರು ಅರವತ್ನಾಲ್ಕು, ಸಹದೇವನು ಏಳು ಮತ್ತು ನಕುಲನು ನೂರು ಸಾಯಕಗಳಿಂದ ಕರ್ಣನನ್ನು ಹೊಡೆದರು. ಭೀಮಸೇನನಾದರೋ ಕ್ರುದ್ಧನಾಗಿ ರಾಧೇಯನ ಜತ್ರುಪ್ರದೇಶಕ್ಕೆ ಗುರಿಯಿಟ್ಟು ತೊಂಭತ್ತು ನತಪರ್ವಣಗಳನ್ನು ಪ್ರಯೋಗಿಸಿದನು.

ಆಗ ಆಧಿರಥಿಯು ಜೋರಾಗಿ ನಕ್ಕು ಉತ್ತಮ ಧನುಸ್ಸನ್ನು ಟೇಂಕರಿಸಿ ಅವರನ್ನು ಪೀಡಿಸುತ್ತಾ ನಿಶಿತ ಬಾಣಗಳನ್ನು ಪ್ರಯೋಗಿಸಿದನು. ರಾಧೇಯನು ಪ್ರತಿಯೊಬ್ಬರನ್ನೂ ಐದೈದು ಬಾಣಗಳಿಂದ ತಿರುಗಿ ಹೊಡೆದನು. ಆ ಪುರುಷರ್ಷಭನು ಸಾತ್ಯಕಿಯ ಧನುಸ್ಸು-ಧ್ವಜಗಳನ್ನು ತುಂಡರಿಸಿ ಒಂಭತ್ತು ಬಾಣಗಳಿಂದ ಅವನ ವಕ್ಷಸ್ಥಳಕ್ಕೆ ಹೊಡೆದನು. ಅನಂತರ ಪರಂತಪನು ಕ್ರುದ್ಧನಾಗಿ ಭೀಮಸೇನನನ್ನು ಮೂವತ್ತು

ಶರಗಳಿಂದ ಹೊಡೆದು ಮೂರು ಬಾಣಗಳಿಂದ ಅವನ ಸಾರಥಿಯನ್ನು ಸಂಹರಿಸಿದನು. ಆ ಪುರುಷರ್ಷಭನು ದ್ರೌಪದೇಯರನ್ನೂ ವಿರಥರನ್ನಾಗಿ ಮಾಡಿದನು. ಇವೆಲ್ಲವನ್ನೂ ಅವನು ನಿಮಿಷಮಾತ್ರದಲ್ಲಿ ಮಾಡಲು ಅದೊಂದು ಅದ್ಭುತವಾಗಿತ್ತು! ಅವರೆಲ್ಲರನ್ನೂ ಸನ್ನತಪರ್ವ ಶರಗಳಿಂದ ವಿಮುಖರನ್ನಾಗಿ ಮಾಡಿ ಶೂರ ಕರ್ಣನು ಪಾಂಚಾಲ-ಚೇದಿಗಳ ಮಹಾರಥರನ್ನು ಸಂಹರಿಸಿದನು. ಸಮರದಲ್ಲಿ ಅವನಿಂದ ವಧಿಸಲ್ಪಡುತ್ತಿರುವ ಚೇದಿ-ಮತ್ಸ್ಯರು ಕರ್ಣನೊಬ್ಬನನ್ನೇ ಶರಸಂಘಗಳಿಂದ ಮರ್ದಿಸುತ್ತಾ ಮುತ್ತಿಗೆ ಹಾಕಿದರು. ಸೂತಪುತ್ರನು ಅವರನ್ನು ನಿಶಿತ ಬಾಣಗಳಿಂದ ಸಂಹರಿಸಿದನು. ಸಮರದಲ್ಲಿ ತುಂಬಾ ಪ್ರಯತ್ನಪಡುತ್ತಾ ಶಕ್ತಿಯುತವಾಗಿ ಹೋರಾಡುತ್ತಿದ್ದ ಶೂರ ಪಾಂಡವರನ್ನು ರಣದಲ್ಲಿ ಏಕಾಂಗಿಯಾಗಿ ತಡೆಹಿಡಿದ ಆ ಪ್ರತಾಪವಾನ್ ಧನ್ವಿ ಸೂತಪುತ್ರ ಕರ್ಣನ ಆ ಕರ್ಮವು ಅದ್ಭುತವಾಗಿತ್ತು! ಅಲ್ಲಿ ಮಹಾತ್ಮ ಕರ್ಣನ ಹಸ್ತಲಾಘವದಿಂದ ದೇವತೆಗಳೆಲ್ಲರೂ, ಸಿದ್ಧ-ಪರಮ ಋಷಿಗಳೂ ಸಂತುಷ್ಟರಾದರು. ಧಾರ್ತರಾಷ್ಟ್ರರೂ ಆ ಕರ್ಣನನ್ನು ಗೌರವಿಸಿದರು.

ಆಗ ಬೇಸಿಗೆಯ ಕಾಲದಲ್ಲಿ ಹುಲ್ಲುಮೆದೆಗೆ ಹೊತ್ತಿಕೊಂಡ ಬೆಂಕಿಯು ಕ್ಷಣಮಾತ್ರದಲ್ಲಿ ಪ್ರಜ್ಜ್ವಲಿಸಿ ಎಲ್ಲವನ್ನೂ ಭಸ್ಮಮಾಡುವಂತೆ ಕರ್ಣನು

ರಿಪುವಾಹಿನಿಯನ್ನು ಸುಟ್ಟುಹಾಕಿದನು. ಕರ್ಣನಿಂದ ವಧಿಸಲ್ಪಡುತ್ತಿದ್ದ ಪಾಂಡವೇಯರು ರಣದಲ್ಲಿ ಮಹಾಬಲ ಕರ್ಣನನ್ನು ನೋಡಿ ಭೀತರಾಗಿ ಎಲ್ಲೆಲ್ಲೋ ಓಡ ತೊಡಗಿದರು. ಕರ್ಣನ ಶ್ರೇಷ್ಠಧನುಸ್ಸಿನಿಂದ ಹೊರಟ ತೀಕ್ಷ್ಣ ಸಾಯಕಗಳಿಂದ ವಧಿಸಲ್ಪಡುತ್ತಿದ್ದ ಪಾಂಚಾಲರ ಆಕ್ರಂದವು ಜೋರಾಗಿತ್ತು. ಆ ಶಬ್ಧದಿಂದ ಪಾಂಡವರ ಮಹಾಸೇನೆಯು ಭಯದಿಂದ ನಡುಗಿತು. ಆ ರಣದಲ್ಲಿ ಕರ್ಣನೊಬ್ಬನೇ ಯೋಧನೆಂದು ಶತ್ರುಗಳು ಭಾವಿಸಿದರು. ಪಾಂಡವರೆಲ್ಲರಲ್ಲಿ ಒಬ್ಬನೂ ಕರ್ಣನನ್ನು ತಲೆಯೆತ್ತಿ ನೋಡಲು ಸಮರ್ಥನಾಗಿರಲಿಲ್ಲ. ಅಂಥಹ ಪರಮ ಅದ್ಭುತವನ್ನು ಶತ್ರುಕರ್ತನ ರಾಧೇಯನು ತೋರಿಸಿದನು. ಪ್ರವಾಹವು ಶ್ರೇಷ್ಠ ಪರ್ವತದ ಬಳಿಬಂದು ಅದರಿಂದ ತಡೆಯಲ್ಪಟ್ಟು ಅನೇಕ ಕವಲುಗಳಾಗಿ ಹೇಗಿ ಒಡೆದುಹೋಗುತ್ತದೆಯೋ ಹಾಗೆ ಪಾಂಡವರ ಸೇನೆಯು ಕರ್ಣನನ್ನು ಸಂಧಿಸಿ ಕವಲುಗಳಾಗಿ ಒಡೆದು ಹೋಯಿತು. ಮಹಾಬಾಹು ಕರ್ಣನೂ ಕೂಡ ಹೊಗೆಯಿಲ್ಲದ ಅಗ್ನಿಯಂತೆ ಪ್ರಜ್ವಲಿಸುತ್ತಾ ಪಾಂಡವರ ಮಹಾಸೇನೆಯನ್ನು ಸುಡುತ್ತಿದ್ದನು. ವೀರ ಕರ್ಣನು ವೀರರ ಶಿರಗಳನ್ನೂ, ಚಂಚಲ ಕುಂಡಲಗಳನ್ನೂ, ಮತ್ತು ಬಾಹುಗಳನ್ನೂ ಬಾಣಗಳಿಂದ ಬೇಗ ತುಂಡರಿಸುತ್ತಿದ್ದನು. ಯೋಧವ್ರತ ನಿರತನಾಗಿದ್ದ ಕರ್ಣನು ಆನೆಯದಂತಗಳ ಹಿಡಿಯಿದ್ದ ಖಡ್ಗಗಳನ್ನೂ, ಧ್ವಜಗಳನ್ನೂ, ಶಕ್ತಿಗಳನ್ನು, ಕುದುರೆ-ಆನೆಗಳನ್ನು, ವಿವಿಧ ರಥಗಳನ್ನು,

ಪತಾಕೆ-ವ್ಯಜನಗಳನ್ನು, ಅಚ್ಚುಮರಗಳನ್ನೂ, ರಥಮೂಕಿಗಳನ್ನೂ, ವಿವಿಧ ಚಕ್ರಗಳನ್ನೂ ನೂರಾರು ತುಂಡುಗಳನ್ನಾಗಿ ಕತ್ತರಿಸಿದನು. ಕರ್ಣನಿಂದ ಆನೆ-ಕುದುರೆಗಳು ಹತಗೊಳ್ಳುತ್ತಿರಲು ಮಾಂಸ-ರಕ್ತಗಳಿಂದ ಕೆಸರಾಗಿದ್ದ ರಣಭೂಮಿಯು ಅಗಮ್ಯವಾಗಿ ತೋರುತ್ತಿತ್ತು. ಹತರಾದ ಆನೆ-ರಥ-ಕುದುರೆ-ಪದಾತಿಗಳಿಂದ ತುಂಬಿದ ರಣಭೂಮಿಯಲ್ಲಿ ಹಳ್ಳ-ತಿಟ್ಟುಗಳೊಂದೂ ಕಾಣುತ್ತಲೇ ಇರಲಿಲ್ಲ. ಕರ್ಣಾಸ್ತ್ರವು ವಿಜೃಂಭಿಸುತ್ತಿರಲು ಬಾಣಗಳಿಂದ ಘೋರ ಅಂಧಕಾರವು ಮುಸುಕಿ ಕೌರವರು ಮತ್ತು ಶತ್ರುಗಳು ಪರಸ್ಪರರನ್ನು ಗುರಿತಿಸಲೂ ಸಾಧ್ಯವಾಗುತ್ತಿರಲಿಲ್ಲ. ರಾಧೇಯನ ಧನುಸ್ಸಿನಿಂತ ಹೊರಟ ಕಾಂಚನ ಭೂಷಿತ ಶರಗಳಿಂದ ಮಹಾರಥರು ಮುಚ್ಚಿಹೋಗಿದ್ದರು. ಮಹಾರಥ ಪಾಂಡವೇಯರನ್ನು ಕರ್ಣನು ಪುನಃ ಪುನಃ ಭಗ್ನಗೊಳಿಸುತ್ತಿದ್ದನು. ವನದಲ್ಲಿ ಕ್ರುದ್ಧಸಿಂಹವು ಮೃಗಗುಂಪುಗಳನ್ನು ಓಡಿಸುವಂತೆ ಮಹಾಯಶಸ್ವಿ ಕರ್ಣನು ಯೋಧರನ್ನು ಎಲ್ಲಕಡೆ ಓಡಿಸುತ್ತಿದ್ದನು. ತೋಳವು ಪಶುಸಮೂಹವನ್ನು ಹೇಗೋ ಹಾಗೆ ಪಾಂಡವ ಸೇನೆಯನ್ನು ಕದಡಿಬಿಟ್ಟನು.

ಪಾಂಡವೀ ಸೇನೆಯು ಪರಾಙ್ಮುಖವಾಗುತ್ತಿದ್ದುದನ್ನು ನೋಡಿ ಮಹೇಷ್ವಾಸ ಧಾರ್ತರಾಷ್ಟ್ರರು ಭೈರವ ಕೂಗುಗಳನ್ನು ಕೂಗುತ್ತಾ

ಕರ್ಣನಿದ್ದಲ್ಲಿಗೆ ಬಂದರು. ದುರ್ಯೋಧನನು ಪರಮ ಹರ್ಷದಿಂದ ಸಂಹೃಷ್ಟನಾಗಿ ನಾನಾ ವಾದ್ಯಗಳನ್ನು ಎಲ್ಲಕಡೆ ಮೊಳಗಿಸಿದನು. ಪುನಃ ಪುನಃ ಭಗ್ನರಾದ ಶೂರ ಪಾಂಚಾಲರೂ ಕೂಡ ಮೃತ್ಯುವನ್ನೇ ಹಿಂದಿರುಗುವ ತಾಣವನ್ನಾಗಿರಿಕೊಂಡು ಯುದ್ಧಕ್ಕೆ ಹಿಂದಿರುಗಿದರು. ಹಾಗೆ ರಣಕ್ಕೆ ಹಿಂದಿರುಗಿ ಬಂದ ಶೂರರನ್ನು ರಾಧೇಯನು ಹಲವು ಬಾರಿ ಭೇದಿಸಿದನು. ಅಲ್ಲಿ ಕರ್ಣನು ಕ್ರೋಧಗೊಂಡು ಇಪ್ಪತ್ತು ಪಾಂಚಾಲ ರಥರನ್ನೂ, ನೂರಕ್ಕೂ ಹೆಚ್ಚು ಚೇದಿಯೋಧರನ್ನೂ ಮತ್ತು ಕುದುರೆ ಸವಾರರನ್ನೂ ಸಂಹರಿಸಿದನು. ರಥ ಮತ್ತು ಕುದುರೆಯ ಬೆನ್ನುಗಳನ್ನು ಕುಳಿತುಕೊಳ್ಳುವವರು ಇಲ್ಲದಂತೆ ಶೂನ್ಯಮಾಡಿದನು. ಆನೆಯ ಬೆನ್ನುಗಳ ಮೇಲೆ ಮನುಷ್ಯರಿಲ್ಲದಿರುವಂತೆ ಮಾಡಿದನು ಮತ್ತು ಓಡಿಹೋಗುತ್ತಿರುವ ಪದಾತಿಗಳನ್ನು ಸಂಹರಿಸಿದನು. ಮಧ್ಯಾಹ್ನದ ಸೂರ್ಯನಂತಿದ್ದ ಆ ಪರಂತಪನನ್ನು ನೋಡಲೂ ಆಗುತ್ತಿರಲಿಲ್ಲ. ಕಾಲಾಂತಕನ ರೂಪವನ್ನು ಧರಿಸಿ ಕ್ರೂರ ಸೂತಪುತ್ರನು ಸಂಚರಿಸುತ್ತಿದ್ದನು. ಹೀಗೆ ಆನೆ-ರಥ-ಕುದುರೆ-ಪದಾತಿಗಳನ್ನು ಸಂಹರಿಸುತ್ತಾ ಮಹೇಷ್ವಾಸ ಕರ್ಣನು ರಣದಲ್ಲಿ ನಿಂತಿದ್ದನು. ಮಹಾಬಲ ಕಾಲನು ಹೇಗೆ ಭೂತಗಣಗಳನ್ನು ಸಂಹರಿಸಿ ನಿಲ್ಲುತ್ತಾನೋ ಹಾಗೆ ಮಹಾರಥ ಕರ್ಣನು ಒಬ್ಬನೇ ಸೋಮಕರನ್ನು ಸಂಹರಿಸಿ ನಿಂತಿದ್ದನು.

ಅಲ್ಲಿ ಪಾಂಚಾಲರ ಅದ್ಭುತ ಪರಾಕ್ರವು ಕಂಡುಬಂದಿತು. ಕರ್ಣನಿಂದ ವಧಿಸಲ್ಪಡುತ್ತಿದ್ದರು ಅವರು ರಣರಂಗವನ್ನು ಮಾತ್ರ ಬಿಟ್ಟು ಹೋಗಲಿಲ್ಲ. ದುರ್ಯೋಧನ, ದುಃಶಾಸನ, ಕೃಪ, ಅಶ್ವತ್ಥಾಮ, ಕೃತವರ್ಮ, ಮತ್ತು ಶಕುನಿ ಇವರು ಪಾಂಡವೀ ಸೇನೆಯನ್ನು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ವಧಿಸಿದರು. ಕರ್ಣಪುತ್ರ ಸಹೋದರರಿಬ್ಬರೂ ಅಲ್ಲಲ್ಲಿ ಪಾಂಚಾಲರನ್ನು ಸಂಹರಿಸುತ್ತಿದ್ದರು. ಆಗ ಅಲ್ಲಿ ಮಹಾ ವಿನಾಶಕಾರೀ ಯುದ್ಧವು ನಡೆಯಿತು. ಹಾಗೆಯೇ ಪಾಂಡವ ಶೂರರೂ, ಧೃಷ್ಟದ್ಯುಮ್ನ-ಶಿಖಂಡಿಯರೂ, ದ್ರೌಪದೇಯರೂ ಸಂಕ್ರುದ್ಧರಾಗಿ ಕೌರವ ಸೇನೆಯನ್ನು ಆಕ್ರಮಣಿಸುತ್ತಿದ್ದರು. ಹೀಗೆ ಪಾಂಡವರ ವಿನಾಶವು ನಡೆಯುತ್ತಿರಲು ಆ ರಣಕ್ಕೆ ಮಹಾಬಲ ಭೀಮನು ಬಂದು ಕೌರವರನ್ನು ನಾಶಗೊಳಿಸಿದನು.

ಪುರುಷರ್ಷಭ ಅರ್ಜುನನಾದರೋ ಸೇನೆಯನ್ನು ಚದುರಿಸಿ, ಮಹಾರಣದಲ್ಲಿ ಅತಿಕ್ರುದ್ಧ ಸೂತಪುತ್ರನನ್ನು ನೋಡಿ, ರಣಭೂಮಿಯಲ್ಲಿ ರಕ್ತವೇ ನೀರಾದ ಮಾಂಸಮಜ್ಜಗಳನ್ನೇ ತೇಲಿಸಿಕೊಂಡು ಹೋಗುತ್ತಿರುವ ನದಿಯನ್ನು ಸೃಷ್ಟಿಸಿ ವಾಸುದೇವನಿಗೆ ಈ ಮಾತನ್ನಾಡಿದನು:

“ಕೃಷ್ಣ! ಅಗೋ ರಣದಲ್ಲಿ ಸೂತಪುತ್ರನ ಧ್ವಜವು ಕಾಣುತ್ತಿದೆ!

ಭೀಮಸೇನನೇ ಮೊದಲಾದ ಮಹಾರಥರು ಯುದ್ಧಮಾಡುತ್ತಿದ್ದಾರೆ. ಅಗೋ ಕರ್ಣನಿಗೆ ಹೆದರಿ ಪಾಂಚಾಲರು ಓಡಿಹೋಗುತ್ತಿದ್ದಾರೆ! ಕರ್ಣನಿಂದ ಭಗ್ನರಾದ ಪಾಂಚಾಲರನ್ನು ಓಡಿಸುತ್ತಿರುವ ರಾಜಾ ದುರ್ಯೋಧನನು ತನ್ನ ಬೆಳಗುತ್ತಿರುವ ಶ್ವೇತಛತ್ರದಡಿಯಲ್ಲಿ ಬಹಳವಾಗಿ ಶೋಭಿಸುತ್ತಿದ್ದಾನೆ! ಕೃಪ, ಕೃತವರ್ಮ ಮತ್ತು ದ್ರೌಣಿಯರು ಸೂತಪುತ್ರನ ರಕ್ಷಣೆಯಡಿಯಲ್ಲಿ ರಾಜನನ್ನು ರಕ್ಷಿಸುತ್ತಿದ್ದಾರೆ. ನಮ್ಮಿಂದ ಅವಧ್ಯರಾದ ಅವರು ಸೋಮಕರನ್ನು ಘಾತಿಗೊಳಿಸುತ್ತಿದ್ದಾರೆ. ಇಗೋ ರಥದಲ್ಲಿ ಕುಳಿತಿರುವ ಶಲ್ಯನು ಸೂತಪುತ್ರನ ರಥವನ್ನು ನಡೆಸುತ್ತಾ ಬಹಳವಾಗಿ ಶೋಭಿಸುತ್ತಿದ್ದಾನೆ! ಅಲ್ಲಿಗೆ ಹೋಗಲು ನಿಶ್ಚಯಿಸಿದ್ದೇನೆ. ಅಲ್ಲಿಗೆ ಮಹಾರಥವನ್ನು ನಡೆಸು! ಸಮರದಲ್ಲಿ ಕರ್ಣನನ್ನು ಸಂಹರಿಸದೇ ಯಾವುದೇ ಕಾರಣದಿಂದಲೂ ನಾನು ಹಿಂದಿರುಗುವುದಿಲ್ಲ! ಅನ್ಯಥಾ ರಾಧೇಯನು ಪಾರ್ಥ-ಸೃಂಜಯರನ್ನು ಸಮರದಲ್ಲಿ, ನಾವಿಬ್ಬರೂ ನೋಡುತ್ತಿದ್ದಂತೆಯೇ, ನಿಃಶೇಷರನ್ನಾಗಿ ಮಾಡಿಬಿಡುತ್ತಾನೆ.”

ಆಗ ಕೇಶವನು ಕರ್ಣನೊಡನೆ ದ್ವೈರಥಕ್ಕೆಂದು ಸವ್ಯಸಾಚಿಯನ್ನು

ಕೌರವ ಕಡೆ ಕರೆದುಕೊಂಡುಹೋದನು. ಪಾಂಡವನ ಅನುಜ್ಞೆಯಂತೆ ಹೋಗುತ್ತಿದ್ದ ಹರಿಯು ರಥದಿಂದಲೇ ಎಲ್ಲಕಡೆ ಪಾಂಡುಸೇನೆಗಳಿಗೆ ಆಶ್ವಾಸನೆಯನ್ನು ನೀಡುತ್ತಿದ್ದನು. ಸಂಗ್ರಾಮದಲ್ಲಿ ಪಾಂಡವೇಯನ ರಥಘೋಷವು ವಾಸವನ ವಜ್ರಾಯುಧದ ಧ್ವನಿಗೆ ಸಮನಾಗಿತ್ತು ಮತ್ತು ಮಹಾಮೇಘದ ಗರ್ಜನೆಯನ್ನು ಅನುಕರಿಸುತ್ತಿತ್ತು. ಮಹಾ ರಥಘೋಷದೊಂದಿಗೆ ಸತ್ಯವಿಕ್ರಮ ಅಪ್ರಮೇಯಾತ್ಮ ಪಾಂಡವನು ನಿನ್ನ ಸೇನೆಯನ್ನು ಗೆಲ್ಲಲು ಆಗಮಿಸಿದನು.

ಶ್ವೇತಾಶ್ವ ಕೃಷ್ಣಸಾರಥಿಯು ಬರುತ್ತಿರುವುದನ್ನು ಮತ್ತು ಅವನ ಧ್ವಜವನ್ನು ನೋಡಿದೊಡನೆಯೇ ಮದ್ರರಾಜನು ಕರ್ಣನಿಗೆ ಹೇಳಿದನು:

> “ಕರ್ಣ! ಸಮರದಲ್ಲಿ ಯಾರ ಕುರಿತು ಕೇಳುತ್ತಿದ್ದೆಯೋ ಆ ಶ್ವೇತಾಶ್ವ ಕೃಷ್ಣಸಾರಥಿಯ ರಥವು, ಶತ್ರುಗಳನ್ನು ಸಂಹರಿಸುತ್ತಾ, ಇಗೋ ಬರುತ್ತಿದೆ! ಕೌಂತೇಯನು ಗಾಂಡೀವ ಧನುಸ್ಸನ್ನು ಹಿಡಿದು ನಿಂತಿದ್ದಾನೆ! ಇಂದು ನೀನು ಅವನನ್ನು ಸಂಹರಿಸಿದ್ದೇ ಆದರೆ ನಿನಗೆ ಶ್ರೇಯಸ್ಸುಂಟಾಗುತ್ತದೆ! ಅನೇಕ ಶತ್ರುಗಳನ್ನು ಸಂಹರಿಸುತ್ತಿರುವ ಅರ್ಜುನನ ಭಯದಿಂದ ಧಾರ್ತರಾಷ್ಟ್ರೀ ಸೇನೆಯು ಬೇಗನೆ ಚದುರಿ ಎಲ್ಲ ಕಡೆ ಓಡಿಹೋಗುತ್ತಿದೆ! ಅವನ ಶರೀರವು ಉಬ್ಬಿರುವುದನ್ನು

ನೋಡಿದರೆ ಧನಂಜಯನು ಎಲ್ಲ ಸೇನೆಗಳನ್ನೂ ಬಿಟ್ಟು ನಿನಗೋಸ್ಕರವಾಗಿ ಇಲ್ಲಿಗೆ ತ್ವರೆಮಾಡಿ ಬರುತ್ತಿದ್ದಾನೆ ಎಂದು ನನಗನ್ನಿಸುತ್ತಿದೆ. ವೃಕೋದರನು ನಿನ್ನಿಂದ ಪೀಡೆಗೊಳಗಾಗಿರಲು ಕ್ರೋಧದಿಂದ ಉರಿಯುತ್ತಿರುವ ಪಾರ್ಥನು ನಿನ್ನನ್ನಲ್ಲದೇ ಬೇರೆ ಯಾರೊಡನೆಯೋ ಯುದ್ಧಕ್ಕೆ ನಿಲ್ಲುವವನಲ್ಲ. ನಿನ್ನಿಂದ ಧರ್ಮರಾಜ, ಶಿಖಂಡಿ, ಸಾತ್ಯಕಿ, ಧೃಷ್ಟದ್ಯುಮ್ನ, ದ್ರೌಪದೇಯರು, ಯುಧಾಮನ್ಯು, ಉತ್ತಮೌಜಸ, ಸಹೋದರರಾದ ನಕುಲ ಸಹದೇವರಿಬ್ಬರೂ ವಿರಥರಾಗಿದ್ದುದನ್ನು ಮತ್ತು ಅತಿಯಾಗಿ ಗಾಯಗೊಂಡಿರುವುದನ್ನು ನೋಡಿ ಕ್ರುದ್ಧನಾಗಿ ಕ್ರೋಧದಿಂದ ರಕ್ತಗಳನ್ನು ಕೆಂಪುಮಾಡಿಕೊಂಡು ಪಾರ್ಥನು ಒಂದೇರಥದ ಸಹಾಯದಿಂದ ಸರ್ವಧನ್ವಿಗಳನ್ನು ಸಂಹರಿಸಲು ಇಚ್ಛಿಸಿ ನಿನ್ನಕಡೆಯೇ ಬರುತ್ತಿದ್ದಾನೆ! ಕರ್ಣ! ನಿಸ್ಸಂಶಯವಾಗಿಯೂ ಆ ಧನುರ್ಧರನು ಅನ್ಯ ಸೇನೆಗಳನ್ನು ಬಿಟ್ಟು ಅತ್ಯಂತ ವೇಗವಾಗಿ ಬಂದು ನಿನ್ನಮೇಲೆಯೇ ಎರಗುತ್ತಿದ್ದಾನೆ. ಈ ಲೋಕದಲ್ಲಿ ನಿನ್ನ ಹೊರತಾಗಿ ಉಕ್ಕಿಬರುತ್ತಿರುವ ಸಮುದ್ರವನ್ನು ತಡೆದು ನಿಲ್ಲಿಸುವ ತೀರಪ್ರದೇಶದಂತೆ ಸಮರದಲ್ಲಿ ಕ್ರುದ್ಧನಾಗಿರುವ ಅರ್ಜುನನನ್ನು ಎದುರಿಸುವ ಬೇರೆ ಯಾವ ಧನುರ್ಧರನನ್ನೂ

ನಾನು ಕಾಣೆ! ಅವನ ಪಾರ್ಶ್ವಗಳಲ್ಲಿಯೂ ಹಿಂದೆಯೂ ರಕ್ಷಕರನ್ನು ನಾನು ಕಾಣುತ್ತಿಲ್ಲ. ಅವನೊಬ್ಬನೇ ಬರುತ್ತಿದ್ದಾನೆ. ನೋಡು! ನಿನ್ನ ಆತ್ಮಸಾಫಲ್ಯವಾಗಲಿಕ್ಕಿದೆ! ರಣದಲ್ಲಿ ಆ ಕೃಷ್ಣರಿಬ್ಬರನ್ನೂ ಎದುರಿಸಲು ನೀನೊಬ್ಬನೇ ಶಕ್ಯನಾಗಿರುವೆ. ನಿನ್ನ ಮೇಲೆಯೇ ಇದರ ಭಾರವಿದೆ! ಧನಂಜಯನನ್ನು ಎದುರಿಸಿ ಯುದ್ಧಮಾಡು! ಭೀಷ್ಮ, ದ್ರೋಣ, ದ್ರೌಣಿ, ಕೃಪರಿಗಿಂತ ನೀನು ಸಮರ್ಥನಾಗಿರುವೆ! ಆದುದರಿಂದ ಪಾಂಡವ ಸವ್ಯಸಾಚಿಯ ರಥದ ಕಡೆ ಹೊರಡು! ಸರ್ಪದಂತೆ ಕಟವಾಯಿಯನ್ನು ನೆಕ್ಕಿಕೊಳ್ಳುತ್ತಿರುವ, ಗೂಳಿಯಂತೆ ಗರ್ಜಿಸುತ್ತಿರುವ, ಅರಣ್ಯದಲ್ಲಿರುವ ವ್ಯಾಘ್ರದಂತಿರುವ ಧನಂಜಯನನ್ನು ಸಂಹರಿಸು! ಇಗೋ ಸಮರದಲ್ಲಿ ಅರ್ಜುನನ ಭಯದಿಂದ ಧಾರ್ತರಾಷ್ಟ್ರರ ಮಹಾರಥ ಜನಾಧಿಪರು ನಿರಪೇಕ್ಷರಾಗಿ ಬೇಗನೇ ಓಡಿಹೋಗುತ್ತಿದ್ದಾರೆ. ನಿನ್ನನ್ನು ಬಿಟ್ಟರೆ ಬೇರೆ ಯಾವ ಮಾನವನೂ ಹೀಗೆ ಓಡಿಹೋಗುತ್ತಿರುವ ಅವರ ಭಯವನ್ನು ಹೋಗಲಾಡಿಸಬಲ್ಲನು! ಈ ಎಲ್ಲ ಕುರುಗಳೂ ಯುದ್ಧದಲ್ಲಿ ದ್ವೀಪದಂತಿರುವ ನಿನ್ನ ಆಶ್ರಯವನ್ನು ಪಡೆಯಲು ಬಯಸಿ ನಿಂತಿದ್ದಾರೆ! ಯುದ್ಧದಲ್ಲಿ ಹಿಂದೆ ನೀನು ಯಾವ

ಧೈರ್ಯದಿಂದ ದುರ್ಜಯರಾದ ವೈದೇಹ-ಅಂಬಷ್ಟ-ಕಾಂಬೋಜ-ನಗ್ನಜಿತ-ಗಾಂಧಾರರನ್ನು ಗೆದ್ದಿದ್ದೆಯೋ ಅದೇ ಧೃತಿಯಿಂದ ಪಾಂಡವನನ್ನು ಮತ್ತು ಕಿರೀಟಿಗೆ ಪ್ರಿಯಕರನಾದ ವಾರ್ಷ್ಣೇಯ ವಾಸುದೇವನನ್ನು ಸಂಹರಿಸು!"

ಕರ್ಣನು ಹೇಳಿದನು:

"ಶಲ್ಯ! ಈಗ ನೀನು ನಿನ್ನ ಸ್ವಭಾವಕ್ಕೆ ಸಮ್ಮತನಾಗಿದ್ದು ಪ್ರಕಾಶಿಸುತ್ತಿರುವೆ! ಧನಂಜಯನಿಗೆ ಭಯಪಡುವ ಕಾರಣವಿಲ್ಲ! ನನ್ನ ಈ ಬಾಹುಗಳ ಬಲವನ್ನು ನೋಡು! ಇಂದು ನನ್ನ ಶಿಕ್ಷಣದ ಶಕ್ತಿಯನ್ನು ನೋಡು! ನಾನೊಬ್ಬನೇ ಪಾಂಡವರ ಮಹಾಸೇನೆಯನ್ನು ವಿನಾಶಗೊಳಿಸುತ್ತೇನೆ! ಆ ಇಬ್ಬರು ಕೃಷ್ಣರೂ ಪುರುಷವ್ಯಾಘ್ರರು. ಯುದ್ಧದಲ್ಲಿ ಆ ಇಬ್ಬರು ವೀರರನ್ನೂ ಸಂಹರಿಸದೇ ನಾನು ಯುದ್ಧದಿಂದ ಹಿಂದಿರುಗುವುದಿಲ್ಲ! ಅಥವಾ ಅವರಿಬ್ಬರಿಂದ ಹತನಾಗಿ ರಣದಲ್ಲಿ ಮಲಗುತ್ತೇನೆ! ರಣದಲ್ಲಿ ಜಯವು ಅಸತ್ಯವಾದುದು. ಅವರನ್ನು ಸಂಹರಿಸಿಯಾದರೂ ಅಥವಾ ಅವರಿಂದ ಹತನಾಗಿಯಾದರೂ ನಾನು ಕೃತಾರ್ಥನಾಗುತ್ತೇನೆ! ಇವನಂತಹ ರಥೋತ್ತಮನು ಲೋಕದಲ್ಲಿ ಹುಟ್ಟಿರಲಿಲ್ಲ ಮತ್ತು

ಇಂಥವನಿದ್ದನೆಂದು ನಾನು ಕೇಳಿಯೂ ಇಲ್ಲ. ಅಂತಹ ಪಾರ್ಥನನ್ನು ಎದುರಿಸಿ ಯುದ್ಧಮಾಡುತ್ತೇನೆ! ಮಹಾರಣದಲ್ಲಿ ನನ್ನ ಪೌರುಷವನ್ನು ನೋಡು! ಈ ರಥಪ್ರವೀರ ಕೌರವರಾಜಪುತ್ರನು ಶೀಘ್ರ ಹಯಗಳಿಂದ ಯುಕ್ತನಾಗಿ ರಥದಲ್ಲಿ ಸಂಚರಿಸುತ್ತಾನೆ. ಇಂದು ಅವನು ಅಥವಾ ನಾನು ಅವನನ್ನು ಸಂಕಟಕ್ಕೀಡುಮಾಡುವವರಿದ್ದೇವೆ. ಕರ್ಣನ ಅಂತ್ಯವಾಯಿತೆಂದರೆ ಎಲ್ಲರ ಅಂತ್ಯವಾದಂತೆಯೇ! ಆ ರಾಜಪುತ್ರನ ಕೈಗಳು ಬೆವರುವುದಿಲ್ಲ ಮತ್ತು ನಡುಗುವುದಿಲ್ಲ. ಅವನ ತೋಳುಗಳು ದೀರ್ಘವಾಗಿಯೂ ದಷ್ಟಪುಷ್ಟವಾಗಿಯೂ ಇವೆ. ದೃಢಾಯುಧ, ಅಸ್ತ್ರಶಾಸ್ತ್ರನಿಪುಣ ಮತ್ತು ಕ್ಷಿಪ್ರಹಸ್ತನಾದ ಪಾಂಡವೇಯನಿಗೆ ಸಮನಾದ ಯೋಧನಿಲ್ಲ! ಅವನು ಅನೇಕ ಕಂಕಪತ್ರ ಶರಗಳನ್ನು ಹಿಡಿದು ಅವು ಒಂದೇ ಬಾಣವೋ ಎಂಬಂತೆ ಧನುಸ್ಸಿಗೆ ಜೋಡಿಸಿ, ಸೆಳೆದು ಬಿಟ್ಟ ಬಾಣಗಳು ಒಂದು ಕ್ರೋಶದವರೆಗೂ ಹೋಗಿ ವಿಫಲವಾಗದೇ ಗುರಿಗಳ ಮೇಲೆ ಬೀಳುತ್ತವೆ. ಅಂಥಹ ಅವನಿಗೆ ಸಮನಾದ ಯೋಧನು ಭೂಮಿಯಲ್ಲಿಯೇ ಯಾರಿದ್ದಾನೆ? ಆ ಅತಿರಥ ತರಸ್ವೀ ಪಾಂಡವೇಯನು ಎರಡನೆ ಕೃಷ್ಣನನ್ನೊಡಗೂಡಿ ಹುತಾಶನನನ್ನು ತೃಪ್ತಿಪಡೆಸಿದನು. ಅಲ್ಲಿ

ಮಹಾತ್ಮ ಕೃಷ್ಣನು ಚಕ್ರವನ್ನೂ ಪಾಂಡವ ಸವ್ಯಸಾಚಿಯು ಗಾಂಡಿವ ಧನುಸ್ಸನ್ನೂ ಪಡೆದರು. ಆ ಮಹಾಬಾಹು ಅದೀನಸತ್ತ್ವನು ಶ್ವೇತಾಶ್ವಗಳಿಂದ ಯುಕ್ತವಾದ, ಉತ್ತಮ ಧ್ವನಿಯನ್ನುಂಟುಮಾಡುವ, ಅಗ್ರಣೀಯ ರಥವನ್ನೂ, ದಿವ್ಯರೂಪದ ಎರಡು ಅಕ್ಷಯ ಬತ್ತಳಿಕೆಗಳನ್ನೂ, ದಿವ್ಯ ಶಸ್ತ್ರಗಳನ್ನೂ ಹವ್ಯವಾಹನನಿಂದ ಪಡೆದನು. ಹಾಗೆಯೇ ಅವನು ಇಂದ್ರಲೋಕದಲ್ಲಿ ಅಸಂಖ್ಯ ಕಾಲಕೇಯ ದೈತ್ಯರೆಲ್ಲರನ್ನೂ ಸಂಹರಿಸಿದನು. ಅಲ್ಲಿ ಅವನು ದೇವದತ್ತ ಶಂಖವನ್ನು ಪಡೆದನು. ಅವನಿಗಿಂಥ ಅಧಿಕನಾಗಿರುವವನು ಈ ಭೂಮಿಯಲ್ಲಿ ಯಾರಿದ್ದಾರೆ? ಆ ಮಹಾನುಭಾವನು ಉತ್ತಮ ಯುದ್ಧದಿಂದ ಸಾಕ್ಷಾತ್ ಮಹಾದೇವನನ್ನು ತೃಪ್ತಿಗೊಳಿಸಿದನು. ಅನಂತರ ಸುಘೋರವೂ ತ್ರೈಲೋಕ್ಯ ಸಂಹಾರಕವೂ ಆದ ಮಹಾ ಪಾಶುಪತಾಸ್ತ್ರವನ್ನು ಪಡೆದುಕೊಂಡನು. ಜೊತೆಗೆ ಲೋಕಪಾಲಕರು ಪ್ರತ್ಯೇಕ ಪ್ರತ್ಯೇಕವಾಗಿ ಅಪ್ರಮೇಯ ಅಸ್ತ್ರಗಳನ್ನು ದಯಪಾಲಿಸಿದರು. ಅವುಗಳಿಂದಲೇ ಅರ್ಜುನನು ರಣದಲ್ಲಿ ಕಾಲಖಂಜ ಅಸುರ ನರಸಿಂಹರನ್ನು ಒಟ್ಟಿಗೇ ಸಂಹರಿಸಿದನು. ಹಾಗೆಯೇ ವಿರಾಟ ಪುರದಲ್ಲಿ ಒಟ್ಟಾಗಿದ್ದ ನಮ್ಮೆಲ್ಲರನ್ನೂ ಒಂದೇ ರಥದಿಂದ

ಗೆದ್ದು ಅವನು ರಣಮಧ್ಯದಲ್ಲಿ ಆ ಗೋಧನವನ್ನು ಬಿಡಿಸಿಕೊಂಡು ಹೋದನು ಮತ್ತು ಮಹಾರಥರ ವಸ್ತ್ರಗಳನ್ನೂ ಕೊಂಡೊಯ್ದನು. ಇಂತಹ ವೀರ್ಯಗುಣಸಂಪನ್ನನಾದ ಈ ಎರಡನೆಯ ಕೃಷ್ಣ ರಣದಲ್ಲಿ ಯುದ್ಧಕ್ಕೆ ಆರಿಸಿಕೋ! ಹತ್ತು ಸಾವಿರ ವರ್ಷಗಳ ಪರ್ಯಂತವಾಗಿ ಎಲ್ಲ ಲೋಕಗಳ ಎಲ್ಲ ಜನರೂ ಒಟ್ಟಾಗಿ ಸೇರಿಕೊಂಡು ಹೇಳಿದರೂ ಯಾವನ ಅನಂತ ವೀರ್ಯಗಳನ್ನು ಪೂರ್ಣವಾಗಿ ಹೇಳಿ ಮುಗಿಸಲು ಸಾಧ್ಯವಾಗುವುದಿಲ್ಲವೋ ಅಂತಹ ಮಹಾತ್ಮ, ಶಂಖ-ಚಕ್ರ-ಖಡ್ಗಗಳನ್ನು ಹಿಡಿದಿರವ ವಿಷ್ಣು ಜಿಷ್ಣು ವಸುದೇವಾತ್ಮಜ ನಾರಾಯಣನಿಂದ ಅವನು ರಕ್ಷಿತನಾಗಿದ್ದಾನೆ! ಶಲ್ಯ! ಕೃಷ್ಣರಿಬ್ಬರೂ ಒಂದೇ ರಥದಲ್ಲಿ ಒಟ್ಟಾಗಿರುವುದನ್ನು ನೋಡಿದೊಡನೆಯೇ ನನಗೆ ಭಯವುಂಟಾಗುತ್ತದೆ! ಇಬ್ಬರೂ ಶೂರರೂ, ಬಲಿಷ್ಟರೂ, ದೃಢಾಯುಧರೂ, ಮಹಾರಥರೂ, ಒಳ್ಳೆಯ ಮೈಕಟ್ಟುಳ್ಳವರೂ ಆಗಿದ್ದಾರೆ. ಇಂಥಹ ಫಲ್ಗುನ-ವಾಸುದೇವರನ್ನು ನನ್ನನ್ನು ಬಿಟ್ಟು ಬೇರೆ ಯಾರು ತಾನೇ ಎದುರಿಸಬಲ್ಲರು? ಇಂದಿನ ಯುದ್ಧದಲ್ಲಿ ನಾನು ಆ ಕೃಷ್ಣರಿಬ್ಬರನ್ನು ಕೆಡವುತ್ತೇನೆ ಅಥವಾ ಅವರು ನನ್ನನ್ನು ಸಂಹರಿಸುತ್ತಾರೆ!”

ಶಲ್ಯನಿಗೆ ಹೀಗೆ ಹೇಳಿ ಅಮಿತ್ರಹಂತ ಕರ್ಣನು ರಣದಲ್ಲಿ ಮೇಘದಂತೆ ಗರ್ಜಿಸಿದನು.

ಆಗ ದುರ್ಯೋಧನನು ಅವನ ಬಳಿ ಬಂದು ಅಭಿನಂದಿಸಿದನು. ಅನಂತರ ಅವನು ಕೃಪ-ಭೋಜರನ್ನೂ, ಹಾಗೆಯೇ ಅನುಜರೊಂದಿಗೆ ಗಾಂಧಾರನೃಪನನ್ನೂ, ಗುರುಸುತ ಅಶ್ವತ್ಥಾಮನನ್ನೂ, ತನ್ನ ತಮ್ಮ ದುಃಶಾಸನನ್ನೂ, ಇತರ ಪದಾತಿ-ಗಜಸೇನೆ-ಅಶ್ವಸೇನೆಗಳನ್ನು ಒಟ್ಟಾಗಿ ಸೇರಿಸಿ ಹೇಳಿದನು:

> "ಭೂಮಿಪರೇ! ಅಚ್ಯುತ-ಅರ್ಜುನರನ್ನು ತಡೆಯಿರಿ. ಎಲ್ಲಕಡೆಗಳಿಂದ ಬಾಣಗಳ ಮಳೆಗರೆಯುತ್ತಾ ಅವರ ಮೇಲೆ ಆಕ್ರಮಣಮಾಡಿರಿ! ನಿಮ್ಮಿಂದ ಕ್ಷತವಿಕ್ಷತರಾದ ಅವರಿಬ್ಬರನ್ನೂ ಸುಲಭವಾಗಿ ಇಂದು ಸಂಹರಿಸಬಹುದು!"

## ಅರ್ಜುನನ ಯುದ್ಧ

ಹಾಗೆಯೇ ಆಗಲೆಂದು ಹೇಳಿ ತ್ವರೆಮಾಡಿ ಅರ್ಜುನನನ್ನು ಸಂಹರಿಸಲಿಚ್ಛಿಸಿ ಆ ಮಹಾವೀರರು ಹೊರಟರು. ಆದರೆ ಅಪಾರ ಜಲರಾಶಿಯುಳ್ಳ ಸಮುದ್ರವು ನದೀನದಗಳನ್ನು ನುಂಗಿಹಾಕುವಂತೆ ಸಮರದಲ್ಲಿ ಅರ್ಜುನನು ಅವರೆಲ್ಲರನ್ನೂ ನುಂಗಿಬಿಟ್ಟನು. ಅವನು

ಶರಗಳನ್ನು ಸಂಧಾನಮಾಡುತ್ತಿರುವುದಾಗಲೀ ಬಿಡುತ್ತಿರುವುದಾಗಲೀ ಶತ್ರುಗಳಿಗೆ ಕಾಣಿಸುತ್ತಿರಲಿಲ್ಲ. ಆದರೆ ಧನಂಜಯನ ಶರಗಳಿಂದ ಸೀಳಲ್ಪಟ್ಟು ಹತರಾದ ಮನುಷ್ಯ-ಕುದುರೆ-ಆನೆಗಳು ಮಾತ್ರ ಕೆಳಕ್ಕೆ ಬೀಳುತ್ತಿದ್ದವು. ಗಾಂಡೀವವನ್ನು ಮಂಡಲಾಕಾರದಲ್ಲಿ ಸೆಳೆದು ಬಾಣಗಳನ್ನು ಬಿಡುತ್ತಿದ್ದ ಅರ್ಜುನನು ಯುಗಾಂತದ ಸೂರ್ಯನಂತೆ ಅಪ್ರತಿಮ ತೇಜಸ್ವಿಯಾಗಿದ್ದನು. ಕಣ್ಣುಬೇನೆಯಿರುವ ಜನರು ರವಿಯನ್ನು ನೋಡಲು ಶಕ್ಯರಾಗದಂತೆ ಅರ್ಜುನನನ್ನು ನೋಡಲು ಕೌರವರಿಗೆ ಸಾಧ್ಯವಾಗುತ್ತಿರಲಿಲ್ಲ. ಆಗ ಕೃಪ, ಭೋಜ, ಮತ್ತು ಸ್ವಯಂ ದುರ್ಯೋಧನ ಇವರು ಬಾಣಗಳನ್ನು ಪ್ರಯೋಗಿಸುತ್ತಾ ಅವನನ್ನು ಆಕ್ರಮಣಿಸಿದರು. ಸಂಹರಿಸಲು ಬಯಸಿ ಪ್ರಯತ್ನಪಟ್ಟು ಕುಶಲವಾಗಿ ಬಿಡುತ್ತಿದ್ದ ಅವರ ಉತ್ತಮ ಶರಗಳನ್ನು ಪಾಂಡವನು ತ್ವರೆಮಾಡಿ ಶರಗಳಿಂದಲೇ ತುಂಡರಿಸಿ ತನ್ನ ಶತ್ರುಗಳನ್ನು ಮೂರು ಮೂರು ಬಾಣಗಳಿಂದ ಗಾಯಗೊಳಿಸಿದನು. ಗಾಂಡೀವವನ್ನು ಪೂರ್ಣಮಂಡಲಾಕಾರದಲ್ಲಿ ಸೆಳೆದು ಶತ್ರುಗಳನ್ನು ಸುಡುತ್ತಿದ್ದ ಅರ್ಜುನನು ಜ್ಯೇಷ್ಠ-ಆಷಾಢ ಮಾಸಗಳ ಮಧ್ಯೆ ವರ್ತುಲಾಕರದ ಪ್ರಭೆಯಿಂದ ಕೂಡಿದ ಭಾಸ್ಕರ ಸೂರ್ಯನಂತೆಯೇ ಕಾಣುತ್ತಿದ್ದನು.

ಆಗ ದ್ರೋಣಸುತನು ಧನಂಜಯನನ್ನು ಹತ್ತು ಬಾಣಗಳಿಂದ ಹೊಡೆದು

ಅಚ್ಯುತನನ್ನು ಮೂರುಗಳಿಂದಲೂ, ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನೂ ಪ್ರಹರಿಸಿ ನಾರಾಚ ಶರಗಳಿಂದ ಕಪಿಯನ್ನು ಮುಸುಕಿದನು. ಅದಕ್ಕೆ ಪ್ರತಿಯಾಗಿ ಧನಂಜಯನು ಮೂರು ಶರಗಳಿಂದ ದ್ರೌಣಿಯ ಧನುಸ್ಸನ್ನು ತುಂಡರಿಸಿ, ಕ್ಷುರದಿಂದ ಅವನ ಸಾರಥಿಯ ಶಿರವನ್ನು ತುಂಡರಿಸಿ, ನಾಲ್ಕು ಬಾಣಗಳಿಂದ ಅವನ ನಾಲ್ಕು ಕುದುರೆಗಳನ್ನು ಸಂಹರಿಸಿ ಮೂರರಿಂದ ಅವನ ಧ್ವಜವನ್ನು ರಥದಿಂದ ಕೆಳಕ್ಕೆ ಬೀಳಿಸಿದನು. ಅದರಿಂದ ರೋಷಪೂರ್ಣನಾದ ಅಶ್ವತ್ಥಾಮನು ಮಣಿ-ವಜ್ರ-ಸುವರ್ಣಗಳಿಂದ ಅಲಂಕೃತವಾದ ತಕ್ಷಕನ ಹೆಡೆಯಂತೆ ಪ್ರಕಾಶಿಸುತ್ತಿದ್ದ, ಬಹುಮೂಲ್ಯವಾದ ಮತ್ತೊಂದು ಧನುಸ್ಸನು ಪರ್ವತದ ತಪ್ಪಲಿನಲ್ಲಿದ್ದ ಮಹಾಸರ್ಪವನ್ನು ಕೈಗೆತ್ತಿಕೊಳ್ಳುವಂತೆ ಕೈಗೆತ್ತಿಕೊಂಡನು. ತನ್ನ ಆಯುಧವನ್ನು ಭೂಮಿಯ ಮೇಲೆ ಬಿಸುಟು ಹೊಸಧನುಸ್ಸನ್ನು ಸಿದ್ಧಗೊಳಿಸಿ ಅಧಿಕ ಗುಣವುಳ್ಳ ದ್ರೌಣಿಯು ಉತ್ತಮ ಶರಗಳಿಂದ ಹತ್ತಿರದಿಂದಲೇ ಒಂದೇ ರಥದಲ್ಲಿ ಕುಳಿತಿದ್ದ ನರೋತ್ತಮರಿರ್ವರನ್ನೂ ಪ್ರಹರಿಸಿದನು.

ಕೃಪ, ಭೋಜ ಮತ್ತು ದುರ್ಯೋಧನರು ಮೋಡಗಳು ಮಳೆಸುರಿಸುವಂತೆ ಅರ್ಜುನನ ಮೇಲೆ ಎರಗಿದರು. ಪಾರ್ಥನು ಪರ್ತಿಗಳಿಂದ ಕೃಪನ ಧನುಸ್ಸನ್ನೂ, ಕುದುರೆಗಳನ್ನೂ, ಧ್ವಜವನ್ನೂ,

ಸಾರಥಿಯನ್ನೂ ನಾಶಗೊಳಿಸಿದನು. ಅರ್ಜುನನು ದುರ್ಯೋಧನನ ಧ್ವಜ-ಧನುಸ್ಸುಗಳನ್ನು ಕತ್ತರಿಸಿ ಗರ್ಜಿಸಿದನು. ಕೃತವರ್ಮನ ಕುದುರೆಗಳನ್ನು ಸಂಹರಿಸಿ ಅವನ ಧ್ವಜವನ್ನೂ ತುಂಡರಿಸಿದನು. ಅನಂತರ ಅವನು ಸಾರಥಿ-ಅಶ್ವ-ಧನುಸ್ಸು-ಧ್ವಜಗಳಿಂದ ಕೂಡಿದ ರಥಗಳನ್ನೂ, ಗಜಾಶ್ವರಥಗಳನ್ನೂ ಸಂಹರಿಸಿದನು. ಅಣೆಕಟ್ಟು ಒಡೆದುಹೋಗಲು ನೀರಿನ ಪ್ರವಾಹವು ಹರಿಯುವಂತೆ ಕೌರವ ಸೇನೆಯು ಚೆಲ್ಲಾಪಿಲ್ಲಿಯಾಯಿತು. ಆಗ ಕೇಶವನು ಅರ್ಜುನನ ರಥವನ್ನು ಆತುರರಾಗಿದ್ದ ಶತ್ರುಗಳನ್ನು ಬಲಭಾಗಕ್ಕೆ ಇಟ್ಟುಕೊಂಡು ಕೊಂಡೊಯ್ದನು. ಹಾಗೆ ತ್ವರೆಮಾಡಿ ಹೋಗುತ್ತಿರುವ ಧನಂಜಯನನ್ನು ವೃತ್ರನನ್ನು ಸಂಹರಿಸಲು ಹೊರಟಿರುವ ಶತಕ್ರತುವನ್ನು ಹೇಗೋ ಹಾಗೆ ಇತರ ಯುದ್ಧಾಕಾಂಕ್ಷೀ ಯೋಧರು ಸುಸಜ್ಜಿತ ರಥಗಳಲ್ಲಿ ಕುಳಿತು ಪುನಃ ಆಕ್ರಮಣಿಸಿದರು. ಧನಂಜಯನ ರಥದ ಮೇಲೆ ಪುನಃ ಧಾಳಿಯಿಡುತ್ತಿದ್ದ ಆ ಶತ್ರುಗಳನ್ನು ಶಿಖಂಡಿ-ಶೈನೇಯ-ನಕುಲ-ಸಹದೇವರು ನಿಶಿತ ಶರಗಳಿಂದ ಹೊಡೆದು ತಡೆದು ಭೈರವವಾಗಿ ಗರ್ಜಿಸಿದರು. ಆಗ ಕುಪಿತ ಕುರುಪ್ರವೀರರು ಸೃಂಜಯರನ್ನು ವೇಗಯುಕ್ತ ನಿಶಿತ ಬಾಣಗಳಿಂದ ಹಿಂದೆ ಅಸುರರು ದೇವತೆಗಳೊಂದಿಗೆ ಹೇಗೋ ಹಾಗೆ ಪರಸ್ಪರರನ್ನು ಪ್ರಹರಿಸುತ್ತಾ ಯುದ್ಧಮಾಡಿದರು. ವಿಜಯವನ್ನು ಬಯಸಿದ್ದ, ಸ್ವರ್ಗಗಮನಕ್ಕೆ ಉತ್ಸುಕರಾಗಿದ್ದ ಆನೆ-ಅಶ್ವ-

ರಥಗಳು ಉಚ್ಚಬಲಗಳಿಂದ ಪರಸ್ಪರರನ್ನು ಪ್ರತ್ಯೇಕವಾದ ಶರಗಳಿಂದ ಹೊಡೆದು ಆಕ್ರಮಣಿಸುತ್ತಿದ್ದರು. ಮಹಾಯುದ್ಧದಲ್ಲಿ ಪರಸ್ಪರ ಹೋರಾಡುತ್ತಿರುವ ಮಹಾತ್ಮ ಯೋಧಶ್ರೇಷ್ಠರ ಶರಗಳಿಂದ ಅಂಧಕಾರವೇ ಕವಿಯಿತು. ದಿಕ್ಕು-ಉಪದಿಕ್ಕುಗಳೂ, ಸೂರ್ಯನ ಪ್ರಭೆಯೂ ಶರಾಂಧಕಾರದಿಂದ ಮುಚ್ಚಿಹೋದವು.

ಕುರುಗಳ ಬಲಿಷ್ಠ ಸೇನೆಯ ಆಕ್ರಮಣಕ್ಕೊಳಗಾಗಿ ಮುಳುಗಿಹೋಗುತ್ತಿರುವಂತಿದ್ದ ಭೀಮ ಕೌಂತೇಯನನ್ನು ಮೇಲೆತ್ತಲು ಬಯಸಿದ ಧನಂಜಯನು ಸೂತಪುತ್ರನ ಸೇನೆಯನ್ನು ಸಾಯಕಗಳಿಂದ ಸದೆಬಡಿದು ಪರವೀರರರನ್ನು ಮೃತ್ಯುಲೋಕಗಳಿಗೆ ಕಳುಹಿಸಿದನು. ಆ ಶರಜಾಲಗಳು ಭಾಗಶಃ ಆಕಾಶವನ್ನು ಮುಸುಕಿ ಅದೃಶ್ಯವಾಗಿ ಅನ್ಯ ಭಾಗವು ಕೌರವ ಸೇನೆಯನ್ನು ಸಂಹರಿಸುತ್ತಿದ್ದವು. ಸಾಲುಸಾಲಾಗಿ ಹೋಗುತ್ತಿರುವ ಪಕ್ಷಿಸಮೂಹಗಳಂತಿದ್ದ ಶರಗಳಿಂದ ಆಕಾಶವನ್ನು ಮುಚ್ಚಿ ಧನಂಜಯನು ಕುರುಗಳಿಗೆ ಯಮಪ್ರಾಯನಾದನು. ಪಾರ್ಥನು ಆಗ ಭಲ್ಲ-ಕ್ಷುರಪ್ರ-ವಿಮನ ನಾರಾಚಗಳಿಂದ ಅವರ ಶರೀರಗಳನ್ನು ಗಾಯಗೊಳಿಸಿ ಶಿರಗಳನ್ನು ಕತ್ತರಿಸುತ್ತಿದ್ದನು. ತುಂಡಾದ ಕವಚ-ಶಿರಗಳಿಲ್ಲದ ಶರೀರಗಳಿಂದ, ಬೀಳುತ್ತಿರುವ ಮತ್ತು ಬಿದ್ದಿರುವ ಯೋಧರಿಂದ ರಣಭೂಮಿಯು ತುಂಬಿಹೋಯಿತು. ಧನಂಜಯನ

ಶರಗಳಿಂದ ಬಿದ್ದ ರಥ-ಅಶ್ವ-ಪದಾತಿ-ಆನೆಗಳಿಂದ ರಣಭೂಮಿಯು ಮಹಾ ವೈತರಣೀ ನದಿಯಂತೆ ದಾಟಲಸಾಧ್ಯವಾಗಿತ್ತು. ಈಷಾದಂಡ-ಚಕ್ರ-ಅಚ್ಚುಮರಗಳು ಮುರಿದುಹೋಗಿದ್ದ, ಕುದುರೆಗಳಿದ್ದ, ಕುದುರೆಗಳಿಲ್ಲದ, ಸೂತರಿದ್ದ, ಸೂತರಿಲ್ಲದ, ರಥಗಳಿಂದ ರಣಭೂಮಿಯು ತುಂಬಿಹೋಯಿತು. ಕ್ರುದ್ಧರಾಗಿದ್ದ ಮಹಾಗಾತ್ರದ ನಿತ್ಯವೂ ಮದಿಸಿದ್ದ ಆನೆಗಳು ಸುವರ್ಣಮಯ ಕವಚಗಳನ್ನು ಧರಿಸಿ ಕನಕಭೂಷಣಗಳಿಂದ ಅಲಂಕೃತ ಮಾವಟಿಗ ಯೋಧರ ರಕ್ಷಣೆಗೊಳಗಾಗಿ ಕ್ರೋಧದಿಂದ ಅರ್ಜುನನ ಮೇಲೆ ಬೀಳುತ್ತಿದ್ದವು. ಅಂತಹ ನಾಲ್ಕು ನೂರು ಆನೆಗಳನ್ನು ಕಿರೀಟಿಯು ಶರವರ್ಷಗಳಿಂದ ಕೆಳಗುರುಳಿಸಿದನು. ಅವುಗಳು ಜೀವಜಂತುಗಳೊಡನೆ ಕೆಳಗುರುಳಿದ ಮಹಾಗಿರಿ ಶೃಂಗಗಳಂತೆ ತೋರುತ್ತಿದ್ದವು. ಕವಿದ ಮೋಡಗಳನ್ನು ಸೀಳಿ ಹೊರಬರುವ ಅಂಶುಮಾನ್ ಸೂರ್ಯನಂತೆ ಧನಂಜಯನು ಶರಗಳಿಂದ ಶ್ರೇಷ್ಠ ಆನೆಗಳ ಆ ಸೇನೆಯನ್ನು ಭೇದಿಸಿ ರಥದಲ್ಲಿ ಮುಂದುವರೆದನು.

ಹತರಾದ ಅನೇಕ ಆನೆ-ಮನುಷ್ಯ-ಅಶ್ವಗಳಿಂದ ಮತ್ತು ಭಗ್ನವಾದ ರಥಗಳಿಂದ, ಶಸ್ತ್ರ-ಕವಚ-ಯಂತ್ರಗಳಿಂದ ವಿಹೀನರಾಗಿ ಅಸುನೀಗಿದ್ದ ಯುದ್ಧಶೌಂಡರಿಂದಲೂ, ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ

ಆಯುಧಗಳಿಂದಲೂ ಫಲ್ಗುನನ ಆ ಮಾರ್ಗವು ಮುಚ್ಚಿಹೋಗಿತ್ತು. ಮೋಡಗಳು ಆಕಾಶದಲ್ಲಿ ಸಿಡಿಲಿನ ಶಬ್ಧವುಂಟುಮಾಡುವಂತೆ ಅರ್ಜುನನು ತನ್ನ ಗಾಂಡೀವವನ್ನು ಟೇಂಕರಿಸಿ ಮಹಾ ಭೈರವ ಘೋರ ನಿನಾದವನ್ನುಂಟುಮಾಡಿದನು. ಆಗ ಧನಂಜಯನ ಶರಗಳಿಂದ ಹತಗೊಂಡ ಸೇನೆಯು ಮಹಾ ಚಂಡಮಾರುತಕ್ಕೆ ಸಿಲುಕಿದ ಸಾಗರದಲ್ಲಿದ್ದ ಮಹಾನೌಕೆಯಂತೆ ಒಡೆದು ಹೋಯಿತು. ಗಾಂಡೀವದಿಂದ ಹೊರಟ ಕೊಳ್ಳಿ, ಧೂಮಕೇತು ಮತ್ತು ಮಿಂಚುಗಳಿಗೆ ಸಮಾನವಾದ ಶರಗಳ ಪ್ರಹಾರಗಳಿಂದ ಕೌರವ ಸೇನೆಯು ಸುಟ್ಟುಹೋಯಿತು. ರಾತ್ರಿಯ ಹೊತ್ತಿನಲ್ಲಿ ಮಹಾಗಿರಿಯಲ್ಲಿರುವ ಬಿದಿರಿನ ವನವು ಹತ್ತಿಕೊಂಡು ಉರಿಯುವಂತೆ ಕೌರವ ಮಹಾಸೇನೆಯು ಅರ್ಜುನನ ಶರಗಳಿಂದ ಪೀಡಿತಗೊಂಡು ಉರಿದುಹೋಗುತ್ತಿತ್ತು. ಕಿರೀಟಿಯಿಂದ ಕೌರವ ಸೇನೆಯು ಮುದ್ದೆಮುದ್ದೆಯಾಯಿತು, ಸುಟ್ಟುಹೋಯಿತು ಮತ್ತು ಧ್ವಂಸಗೊಂಡಿತು. ಬಾಣಗಳ ಪ್ರಹಾರದಿಂದ ಅಳಿದುಳಿದ ಕೌರವ ಸೇನೆಯು ದಿಕ್ಕಾಪಾಲಾಗಿ ಓಡತೊಡಗಿತು. ಮಹಾವನದಲ್ಲಿ ಕಾಡ್ಗಿಚ್ಚಿಗೆ ಸಿಲುಕಿದ ಮೃಗಗಣಗಳಂತೆ ಸವ್ಯಸಾಚಿಯಿಂದ ಸುಡದೇ ಇದ್ದ ಕುರುಗಳು ದಿಕ್ಕುಕಾಣದೇ ಓಡುತ್ತಿದ್ದರು. ಭೀಮಸೇನನನ್ನು ರಣದಲ್ಲಿಯೇ ಬಿಟ್ಟು ಕುರುಗಳ ಸೇನೆಯೆಲ್ಲವೂ ಉದ್ವಿಗ್ನಗೊಂಡು ಪರಾಙ್ಮುಖವಾಯಿತು.

ಕುರುಗಳು ಭಗ್ನರಾಗಿಹೋಗಲು ಬೀಭತ್ಸುವು ಭೀಮಸೇನನ ಬಳಿಸಾರಿ ಸ್ವಲ್ಪಹೊತ್ತು ಅಲ್ಲಿಯೇ ಇದ್ದನು. ಫಲ್ಗುನನು ಭೀಮನನ್ನು ಸಂಧಿಸಿ ಸಮಾಲೋಚನೆಗೈದು ಯುಧಿಷ್ಠಿರನ ಶರೀರದಿಂದ ಬಾಣಗಳನ್ನು ತೆಗೆದುದರ ಮತ್ತು ಅವನು ಕುಶಲನಾಗಿರುವುದರ ಕುರಿತು ಹೇಳಿದನು. ಅನಂತರ ಭೀಮಸೇನನ ಅನುಜ್ಞೆಯನ್ನು ಪಡೆದು ಧನಂಜಯನು ರಥಘೋಷದಿಂದ ಪೃಥ್ವಿ-ಆಕಾಶಗಳನ್ನು ಮೊಳಗಿಸುತ್ತಾ ಮುಂದೆ ನಡೆದನು. ಆಗ ಧನಂಜಯನು ಧೃತರಾಷ್ಟ್ರನ ಹತ್ತು ಮಕ್ಕಳಿಂದ ಸುತ್ತುವರೆಯಲ್ಪಟ್ಟನು. ಅವರು ಕ್ರೂರವಾಗಿ ನರ್ತಿಸುತ್ತಾ ಪಂಜುಗಳಿಂದ ಆನೆಯನ್ನು ಪೀಡಿಸುವಂತೆ ಅವರು ಸೆಳೆದ ಧನುಸ್ಸುಗಳಿಂದ ಹೊರಟ ಶರಗಳಿಂದ ಅವನನ್ನು ಪೀಡಿಸಿದರು. ಮಧುಸೂದದನು ರಥವನ್ನು ಅವರ ಎಡಭಾಗದಿಂದ ಮುಂದೆ ಕೊಂಡೊಯ್ಯಲು ಆ ಶೂರರು ಪರಾಙ್ಮುಖನಾಗುತ್ತಿದ್ದ ಅರ್ಜುನನನ್ನು ಆಕ್ರಮಣಿಸಿದರು. ಮೇಲೆ ಬೀಳುತ್ತಿದ್ದ ಅವರ ಧ್ವಜಗಳನ್ನೂ, ರಥಗಳನ್ನೂ, ಧನುಸ್ಸು-ಸಾಯಕಗಳನ್ನೂ ಪಾರ್ಥನು ಕ್ಷಿಪ್ರವಾಗಿ ಅರ್ಧಚಂದ್ರ ನಾರಾಚಗಳಿಂದ ಕೆಳಗುರುಳಿಸಿದನು. ಹೀಗೆ ಶತ್ರುಹಂತಕ ಅರ್ಜುನನು ಸುವರ್ಣಮಯ ಸುವರ್ಣಪುಂಖಗಳಿದ್ದ ಮಹಾವೇಗದ ಹತ್ತು ಭಲ್ಲಗಳಿಂದ ಆ ಕೌರವರನ್ನು ಗಾಯಗೊಳಿಸಿ ಮುನ್ನಡೆದನು.

ಮಹಾವೇಗದ ಅಶ್ವಗಳೊಡನೆ ಬರುತ್ತಿದ್ದ ಆ ಕಪಿವರಧ್ವಜನನ್ನು ತೊಂಭತ್ತು ವೀರ ಕುರುಗಳು ಯುದ್ಧಮಾಡುತ್ತಾ ಅಕ್ರಮಣಿಸಿದರು. ರಣದಲ್ಲಿ ಆ ನರವ್ಯಾಘ್ರರು ಅರ್ಜುನನನ್ನು ಸುತ್ತುವರೆದರು. ಕೃಷ್ಣನು ಮಹಾವೇಗಯುಕ್ತವಾದ ಕನಕಭೂಷಣಗಳಿಂದ ಅಲಂಕೃತವಾದ, ಮುತ್ತಿನ ಬಲೆಗಳಿಂದ ಆಚ್ಛಾದಿತಗೊಂಡಿದ್ದ ಶ್ವೇತ ಕುದುರೆಗಳನ್ನು ಕರ್ಣನ ರಥದ ಕಡೆ ಕೊಂಡೊಯ್ದನು. ಆಗ ಶತ್ರುಗಳನ್ನು ಸಂಹರಿಸುತ್ತಾ ಕರ್ಣನ ರಥದ ಕಡೆ ಹೋಗುತ್ತಿದ್ದ ಧನಂಜಯನನ್ನು ಸಂಶಪ್ತಕ ರಥಯೋಧರು ಬಾಣವೃಷ್ಟಿಗಳನ್ನು ಸುರಿಸುತ್ತಾ ಆಕ್ರಮಣಿಸಿದರು. ಅರ್ಜುನನಾದರೋ ನಿಶಿತ ಶರಗಳಿಂದ ಆ ತೊಂಭತ್ತು ಮಂದಿ ವೀರರೆಲ್ಲರನ್ನೂ ಸಾರಥಿ-ಧನುಸ್ಸು-ಧ್ವಜಗಳೊಂದಿಗೆ ಸಂಹರಿಸಿದನು. ಕಿರೀಟಿಯ ನಾನಾರೂಪಗಳ ಬಾಣಗಳಿಂದ ಹತರಾದ ಅವರು ಪುಣ್ಯವು ಕ್ಷಯವಾಗಿ ಸಿದ್ಧರು ವಿಮಾನಗಳೊಂದಿಗೆ ಸ್ವರ್ಗದಿಂದ ಹೇಗೋ ಹಾಗೆ ಕೆಳಗುರುಳಿದರು. ಕುರುಗಳು ರಥ-ಆನೆ-ಅಶ್ವಗಳೊಡನೆ ನಿರ್ಭಯರಾಗಿ ಭರತಶ್ರೇಷ್ಠ ಫಲ್ಗುನನನ್ನು ಆಕ್ರಮಣಿಸಿದರು. ಆಗ ಧನಂಜಯನು ಅಸ್ತ್ರವನ್ನು ಪ್ರಯೋಗಿಸಿ ಆ ಶ್ರೇಷ್ಠ ಆನೆಗಳಿಂದ ಕೂಡಿದ್ದ ಕೌರವ ಮಹಾಸೇನೆಯನ್ನು ಸಂಹರಿಸಿದನು. ಕುರುಗಳು ಕುರುನಂದನನನ್ನು ಶಕ್ತಿ-ಋಷ್ಟಿ-ತೋಮರ-ಪ್ರಾಸ-ಗದೆ-ಖಡ್ಗ-ಸಾಯಕಗಳಿಂದ ಮುಚ್ಚಿಬಿಟ್ಟರು. ಸೂರ್ಯನು ಕಿರಣಗಳಿಂದ

ಕತ್ತಲೆಯನ್ನು ಹೇಗೋ ಹಾಗೆ ಪಾಂಡವನು ಎಲ್ಲಕಡೆಗಳಿಂದ ಬೀಳುತ್ತಿದ್ದ ಕುರುಗಳ ಆ ಶರವೃಷ್ಟಿಯನ್ನು ಬಾಣಗಳಿಂದ ನಾಶಗೊಳಿಸಿದನು. ಆಗ ದುರ್ಯೋಧನನ ಶಾಸನದಂತೆ ಮ್ಲೇಚ್ಛರು ಹದಿನೂರು ನೂರು ಆನೆಗಳೊಡನೆ ಪಾರ್ಥನನ್ನು ಎರಡೂ ಕಡೆಗಳಿಂದ ಆಕ್ರಮಣಿಸತೊಡಗಿದರು. ಅವರು ಕರ್ಣಿ-ನಾಲೀಕ-ನಾರಾಚ-ತೋಮರ-ಪ್ರಾಸ-ಶಕ್ತಿ-ಕಂಪನ-ಭಿಂಡಿಪಾಲಗಳಿಂದ ರಥಸ್ಥನಾಗಿದ್ದ ಪಾರ್ಥನನ್ನು ಪ್ರಹರಿಸಿದರು. ಆನೆಗಳ ಸವಾರಿಮಾಡಿದ್ದ ಯವನರಿಂದ ಪ್ರಯೋಗಿಸಲ್ಪಟ್ಟ ಆ ಅಸ್ತ್ರವೃಷ್ಟಿಯನ್ನು ಫಲ್ಗುನನು ನಗುತ್ತಾ ನಿಶಿತ ಅರ್ಧಚಂದ್ರ ಭಲ್ಲಗಳಿಂದ ಕತ್ತರಿಸಿದನು. ಅರ್ಜುನನು ಆ ಆನೆಗಳೆಲ್ಲವನ್ನೂ ಪತಾಕೆ-ಆರೋಹಿಗಳೊಂದಿಗೆ ವಜ್ರದಿಂದ ಗಿರಿಗಳನ್ನು ಹೇಗೋ ಹಾಗೆ ನಾನಾ ಚಿಹ್ನೆಯ ಮಹಾಶರಗಳಿಂದ ಹೊಡೆದು ಕೆಳಗುರುಳಿಸಿದನು.

ಹೇಮಮಾಲೆಗಳನ್ನು ಧರಿಸಿದ್ದ ಆ ಮಹಾ ಆನೆಗಳು ಹೇಮಪುಂಖಗಳಿದ್ದ ಬಾಣಗಳಿಂದ ಹೊಡೆಯಲ್ಪಟ್ಟು ಹತರಾಗಿ ಅಗ್ನಿಜ್ವಾಲೆಯಿಂದ ಕೂಡಿದ ಪರ್ವತಗಳಂತೆ ಕೆಳಕ್ಕೆ ಬಿದ್ದವು. ಆಗ ಗಾಂಡೀವ ನಿರ್ಘೋಷವೂ, ಮನುಷ್ಯ-ಆನೆ-ಕುದುರೆಗಳ ಆರ್ತನಾದಗಳೂ, ಚೀತ್ಕಾರಗಳೂ ಜೋರಾಗಿ ಕೇಳಿಬಂದವು.

ಹತಗೊಂಡ ಆನೆಗಳು ಮತ್ತು ಆರೋಹಿಗಳು ಹತರಾದ ಕುದುರೆಗಳು ಹತ್ತೂ ದಿಕ್ಕುಗಳಲ್ಲಿ ಓಡತೊಡಗಿದವು. ರಥಿಗಳಿಂದಲೂ ಕುದುರೆಗಳಿಂದಲೂ ವಿಹೀನವಾಗಿದ್ದ ಗಂಧರ್ವನಗರಾಕಾರದ ಸಹಸ್ರಾರು ರಥಗಳು ಅಲ್ಲಿ ಕಾಣುತ್ತಿದ್ದವು. ಅಶ್ವಾರೋಹಿಗಳು ಅಲ್ಲಿಂದಲ್ಲಿಗೆ ಓಡುತ್ತಿರುವಾಗ ಪಾರ್ಥನ ಸಾಯಕಗಳಿಂದ ಹೊಡೆಯಲ್ಪಟ್ಟು ಅಲ್ಲಲ್ಲಿಯೇ ಬೀಳುತ್ತಿರುವುದು ಕಂಡಿತು. ಆ ಕ್ಷಣದಲ್ಲಿ – ಅಶ್ವಾರೋಹಿಗಳನ್ನೂ, ಆನೆಗಳನ್ನೂ, ರಥಗಳನ್ನೂ ಯುದ್ಧದಲ್ಲಿ ಏಕಾಕಿಯಾಗಿ ಸೋಲಿಸಿದ - ಪಾಂಡವನ ಬಾಹುಗಳ ಬಲವು ಕಂಡುಬಂದಿತು. ಗಜಾಶ್ವಸೈನಿಕರ ಮಹಾ ಸೇನೆಯಿಂದ ಪರಿವೃತನಾದ ಕಿರೀಟಿಯನ್ನು ನೋಡಿ ಭೀಮಸೇನನು ಅಳಿದುಳಿದಿದ್ದ ಕೌರವ ರಥಗಳನ್ನು ಬಿಟ್ಟು ವೇಗದಿಂದ ಧನಂಜಯನ ರಥದ ಕಡೆ ಧಾವಿಸಿದನು. ಅರ್ಜುನನನ್ನು ಆಕ್ರಮಣಿಸಿದ್ದ ಸೇನೆಯಲ್ಲಿ ಅಳಿದುಳಿದವರು ಆತುರಗೊಂಡು ಓಡಿ ಹೋದುದನ್ನು ನೋಡಿ ಭೀಮನು ತಮ್ಮನ ಬಳಿ ಧಾವಿಸಿದನು. ಅರ್ಜುನನಿಂದ ಅಳಿದುಳಿದ ಕುದುರೆಗಳನ್ನು ಗದಾಪಾಣಿ ಭೀಮನು ಭ್ರಾಂತಿಗೊಳ್ಳದೇ ಸಂಹರಿಸಿದನು. ಕಾಲರಾತ್ರಿಯಂತೆ ಉಗ್ರವಾಗಿದ್ದ, ಮನುಷ್ಯ-ಆನೆ-ಕುದುರೆಗಳೇ ಭೋಜನವಾಗಿದ್ದ, ಪ್ರಾಕಾರಗಳನ್ನೂ, ಉಪ್ಪರಿಗೆ ಮನೆಗಳನ್ನೂ, ಪುರದ್ವಾರಗಳನ್ನೂ ಭೇದಿಸಲು ಸಮರ್ಥವಾದ

ದಾರುಣ ಗದೆಯನ್ನು ಭೀಮನು ಮನುಷ್ಯ-ಆನೆ-ಕುದುರೆಗಳ ಮೇಲೆ ಪ್ರಯೋಗಿಸಲು ಅದು ಅನೇಕ ಕುದುರೆಗಳನ್ನೂ ಅಶ್ವಾರೋಹಿಗಳನ್ನೂ ಸಂಹರಿಸಿತು. ಭೀಮಸೇನನು ಕಬ್ಬಿಣದಿಂದ ಮಾಡಲ್ಪಟ್ಟ ಕವಚಗಳಿದ್ದ ಪದಾತಿಗಳನ್ನೂ ಮತ್ತು ಕುದುರೆಗಳನ್ನೂ ಗದೆಯಿಂದ ಸದೆಬಡಿಯಲು ಅವುಗಳು ಆರ್ತನಾದಗೈಯುತ್ತಾ ಹತಗೊಂಡು ಕೆಳಕ್ಕುರುಳಿದವು.

ಆ ಗಜಸೇನೆಯನ್ನು ಸಂಹರಿಸಿ ಮಹಾಬಲ ಭೀಮಸೇನನು ಪುನಃ ತನ್ನ ರಥದಲ್ಲಿ ಕುಳಿತು ಅರ್ಜುನನ ಹಿಂದೆ ಹೋದನು. ಶಸ್ತ್ರಗಳಿಂದ ಪ್ರಹರಿಸಲ್ಪಟ್ಟ ಕೌರವ ಸೇನೆಯು ಪ್ರಾಯಶಃ ನಿರುತ್ಸಾಹಗೊಂಡು ಜಡವಾಗಿ ಪರಾಙ್ಮುಖವಾಗುತ್ತಿತ್ತು. ಜಡವಾಗಿ ಉದ್ಯೋಗಶೂನ್ಯವಾಗಿದ್ದ ಆ ಸೇನೆಯನ್ನು ನೋಡಿ ಅರ್ಜುನನು ಪ್ರಾಣಗಳನ್ನು ಸುಡುವ ಬಾಣಗಳಿಂದ ಮುಚ್ಚಿಬಿಟ್ಟನು. ಆಗ ಅರ್ಜುನನ ಬಾಣಗಳಿಂದ ವಧಿಸಲ್ಪಡುತ್ತಿದ್ದ ಕುರುಗಳ ರಥ-ಕುದುರೆ-ಆನೆಗಳಲ್ಲಿ ಆರ್ತನಾದವುಂಟಾಯಿತು. ತುಂಬಾ ಹಾಹಾಕಾರ ಮಾಡುತ್ತಾ ಪರಸ್ಪರರನ್ನು ಆಲಂಗಿಸಿಕೊಂಡು ಆ ಸೇನೆಯು ನಿಂತಿತ್ತು ಮತ್ತು ಚಕ್ರದಂತೆ ಸುತ್ತಲೂ ತಿರುಗುತ್ತಿತ್ತು. ಬಾಣಗಳಿಂದ ಛಿನ್ನವಾದ ಕವಚಗಳಿಂದ ಆ ಸೇನೆಯು ಹತ್ತಿಕೊಂಡು ಉರಿಯುತ್ತಿರುವಂತೆ ಮತ್ತು ತಮ್ಮದೇ ರಕ್ತದಿಂದ ತೋಯ್ದು ಹೋಗಿ ಹೂಬಿಟ್ಟ ಅಶೋಕ ವನದಂತೆ

ಕಾಣುತ್ತಿತ್ತು. ಅಲ್ಲಿ ಸವ್ಯಸಾಚಿಯ ಆ ವಿಕ್ರಮವನ್ನು ನೋಡಿ ಕುರುಗಳು ಎಲ್ಲರೂ ಕರ್ಣನು ಜೀವಿಸಿರುವ ವಿಷಯದಲ್ಲಿ ನಿರಾಶೆಗೊಂಡರು. ಪಾರ್ಥನ ಶರಸಂಘಾತವನ್ನು ಸಹಿಸಲಸಾಧ್ಯವೆಂದು ತಿಳಿದು ಗಾಂಡೀವಧನ್ವಿಯಿಂದ ಪರಾಜಿತರಾದ ಕುರುಗಳು ಹಿಮ್ಮೆಟ್ಟಿದರು.

ಅವರು ಸಾಯಕಗಳಿಂದ ವಧಿಸುತ್ತಿದ್ದ ಪಾರ್ಥನನ್ನು ಸಮರದಲ್ಲಿ ಬಿಟ್ಟು ಭೀತರಾಗಿ ಸೂತಜನನ್ನು ಕೂಗಿ ಕರೆಯುತ್ತಾ ದಿಕ್ಕಾಪಾಲಾಗಿ ಓಡಿ ಹೋದರು. ಪಾರ್ಥನು ಅನೇಕ ನೂರು ಬಾಣಗಳನ್ನು ಎರಚುತ್ತಾ ಅವರನ್ನು ಆಕ್ರಮಣಿಸಿ ಭೀಮಸೇನನೇ ಮೊದಲಾದ ಪಾಂಡವ ಯೋಧರನ್ನು ಹರ್ಷಗೊಳಿಸಿದನು. ಧೃತರಾಷ್ಟ್ರ ಪುತ್ರರಾದರೋ ಕರ್ಣನ ರಥದ ಕಡೆ ಹೋದರು. ಅಗಾಧ ಸಾಗರದಲ್ಲಿ ಮುಳುಗುತ್ತಿದ್ದ ಅವರಿಗೆ ಕರ್ಣನು ದ್ವೀಪಪ್ರಾಯನಾಗಿದ್ದನು. ಗಾಂಡಿವಧನ್ವಿಯ ಭಯದಿಂದ ವಿಷರಹಿತ ಸರ್ಪಗಳಂತೆ ಕುರುಗಳು ಕರ್ಣನನ್ನೇ ಆಶ್ರಯಿಸಿ ನಿಂತಿದ್ದರು. ಸರ್ವಭೂತಗಳೂ ಮೃತ್ಯುವಿನ ಭಯದಿಂದ ಧರ್ಮವನ್ನೇ ಅವಲಂಬಿಸಿ ಕರ್ಮಗಳನ್ನು ಮಾಡುವಂತೆ ಕೌರವ ಪುತ್ರರು ಪಾಂಡವನಿಗೆ ಹೆದರಿ ಕರ್ಣನನ್ನೇ ಅವಲಂಬಿಸಿದ್ದರು. ರಕ್ತದಿಂದ ತೋಯ್ದುಹೋಗಿದ್ದ ಶರಗಳ ಭಯದಿಂದ ನಡುಗುತ್ತಿದ್ದ ಅವರನ್ನು ಕರ್ಣನು "ಹೆದರಬೇಡಿರಿ! ನನ್ನ ಬಳಿ ಬನ್ನಿ!" ಎಂದು ಕೂಗಿ

ಕರೆಯುತ್ತಿದ್ದನು.

ಪಾರ್ಥನಿಂದ ಕೌರವ ಸೇನೆಯು ಭಗ್ನವಾದುದನ್ನು ನೋಡಿ ಕರ್ಣನು ಶತ್ರುಗಳನ್ನು ಸಂಹರಿಸಲು ಬಯಸಿ ಧನುಸ್ಸನ್ನು ಟೇಂಕರಿಸಿ ಸವ್ಯಸಾಚಿಯು ನೋಡುತ್ತಿದ್ದಂತೆಯೇ ಪುನಃ ಪಾಂಚಾಲರನ್ನು ಆಕ್ರಮಣಿಸಿದನು. ಆಗ ಕ್ಷಣದಲ್ಲಿಯೇ ಗಾಯಗೊಂಡ ಪಾಂಚಾಲ ರಾಜರು ಮೇಘಗಳು ಪರ್ವತದ ಮೇಲೆ ಹೇಗೋ ಹಾಗೆ ಕರ್ಣನ ಮೇಲೆ ಬಾಣಗಳನ್ನು ಸುರಿಸಿದರು. ಆಗ ಕರ್ಣನಿಂದ ಹೊರಟ ಸಹಸ್ರಾರು ಬಾಣಗಳು ಪಾಂಚಾಲರಿಂದ ಪ್ರಾಣಗಳನ್ನು ಪ್ರತ್ಯೇಕಿಸಿದವು. ಮಿತ್ರನಿಗಾಗಿ ಶತ್ರುಘಾತಿ ಪಾಂಚಾಲರನ್ನು ವಧಿಸುತ್ತಿದ್ದ ಸೂತಪುತ್ರನಿಗಾಗಿ ರಣದಲ್ಲಿ ಮಹಾ ಹಾಹಾಕಾರವುಂಟಾಯಿತು.

ಕುರುಗಳು ಪಲಾಯನಮಾಡುತ್ತಿರಲು ಸೂತಪುತ್ರ ಕರ್ಣನು ಶ್ವೇತಹಯಯುಕ್ತವಾದ ರಥದಲ್ಲಿ ಕುಳಿತು ದೊಡ್ಡ ಬಾಣಗಳಿಂದ ಚಂಡಮಾರುತವು ಮೋಡಗಳ ಸಮೂಹವನ್ನು ಚೆಲ್ಲಪಿಲ್ಲಿಯಾಗಿ ಮಾಡುವಂತೆ ಪಾಂಚಾಲಪುತ್ರರನ್ನು ವಧಿಸಿದನು. ಅಂಜಲಿಕದಿಂದ ಜನಮೇಜಯನ ಕುದುರೆಗಳನ್ನು ಕೊಂದು ಸಾರಥಿಯನ್ನು ಕೆಳಗುರುಳಿಸಿದನು. ಭಲ್ಲಗಳಿಂದ ಶತಾನೀಕ ಮತ್ತು ಸುತಸೋಮರನ್ನು ಮುಚ್ಚಿ, ಅವರ ಧನುಸ್ಸುಗಳನ್ನು ಕತ್ತರಿಸಿದನು. ಬಳಿಕ ಸೂತಪುತ್ರನು

ಆರು ಬಾಣಗಳಿಂದ ಧೃಷ್ಟದ್ಯುಮ್ನನನ್ನು ಪ್ರಹರಿಸಿ, ರಣದಲ್ಲಿ ಅವನ ಬಲಗಡೆಯಿದ್ದ ಸಾತ್ಯಕಿಯ ಕುದುರೆಗಳನ್ನೂ ಸಂಹರಿಸಿ, ಕೈಕೇಯಪುತ್ರ ವಿಶೋಕನನ್ನು ಸಂಹರಿಸಿದನು. ಕುಮಾರನು ಹತನಾಗಲು ಕೈಕೇಯಸೇನಾಪತಿ ಉಗ್ರಧನ್ವನು ಮುನ್ನುಗ್ಗಿ ಅತ್ಯಂತ ವೇಗಯುಕ್ತವಾದ ಶರಗಳಿಂದ ಕರ್ಣನ ಮಗ ಸುಷೇಣನನ್ನು ಬಹಳವಾಗಿ ಪೀಡಿಸಿದನು. ಕರ್ಣನು ಜೋರಾಗಿ ನಗುತ್ತಾ ಮೂರು ಅರ್ಧಚಂದ್ರಬಾಣಗಳಿಂದ ಅವನ ಬಾಹುಗಳನ್ನೂ ಶಿರವನ್ನೂ ಕತ್ತರಿಸಿದನು. ಕೊಡಲಿಯಿಂದ ಕತ್ತರಿಸಲ್ಪಟ್ಟ ಶಾಲವೃಕ್ಷದಂತೆ ಪ್ರಾಣಗಳನ್ನು ತೊರೆದು ಅವನು ರಥದಿಂದ ಕೆಳಕ್ಕೆ ಬಿದ್ದನು. ರಣದಲ್ಲಿ ನರ್ತಿಸುತ್ತಿರುವನೋ ಎನ್ನುವಂತೆ ಸೌತಿಪುತ್ರ ಸುಷೇಣನು ಅಶ್ವಗಳನ್ನು ಕಳೆದುಕೊಂಡಿದ್ದ ಸಾತ್ಯಕಿಯನ್ನು ಶೀಘ್ರವಾಗಿ ಹೋಗುವ ನಿಶಿತ ಪೃಷತ್ಕಗಳಿಂದ ಮುಚ್ಚಿದನು. ಆದರೆ ಶೈನೇಯನ ಬಾಣಗಳಿಂದ ಹೊಡೆಯಲ್ಪಟ್ಟು ಕೆಳಗುರುಳಿದನು. ಪುತ್ರನು ಹತನಾಗಲು ವಿಪರೀತವಾಗಿ ಕೋಪಗೊಂಡ ಕರ್ಣನು ಶಿನಿಗಳ ವೃಷಭ ಸಾತ್ಯಕಿಯನ್ನು ಕೊಲ್ಲಲು ಬಯಸಿ “ಶೈನೇಯ! ನೀನು ಸತ್ತೆ!” ಎಂದು ಹೇಳುತ್ತ ಬಾಣವನ್ನು ಪ್ರಯೋಗಿಸಿದನು. ಅವನ ಆ ಶರವನ್ನು ಶಿಖಂಡಿಯು ಕತ್ತರಿಸಿ ಮೂವತ್ಮೂರು ಬಾಣಗಳಿಂದ ಕರ್ಣನನ್ನು ಪ್ರತಿಯಾಗಿ ಹೊಡೆದನು. ಅದಕ್ಕೆ ಪ್ರತಿಯಾಗಿ ಕರ್ಣನು ಚೆನ್ನಾಗಿ ಪ್ರಯೋಗಿಸಿದ ಎರಡು ಬಾಣಗಳಿಂದ ಶಿಖಂಡಿಯ ಧನುಸ್ಸನ್ನೂ

ಧ್ವಜವನ್ನೂ ಕತ್ತರಿಸಿ ಕೆಳಕ್ಕೆ ಬೀಳಿಸಿದನು. ಆ ಉಗ್ರ ಕರ್ಣನು ಶಿಖಂಡಿಯನ್ನು ಆರು ಬಾಣಗಳಿಂದ ಹೊಡೆದು ಧೃಷ್ಟದ್ಯುಮ್ನನ ಮಗನ ಶಿರವನ್ನು ಕತ್ತರಿಸಿದನು. ಅನಂತರ ಆಧಿರಥಿಯು ಶರಗಳಿಂದ ಸುತಸೋಮನನ್ನು ಆಕ್ರಮಣಿಸಿದನು. ಧೃಷ್ಟದ್ಯುಮ್ನನ ಮಗನು ಹತನಾಗಿ ತುಮುಲ ಆಕ್ರಂದವು ನಡೆಯುತ್ತಿರಲು ಕೃಷ್ಣನು "ಪಾರ್ಥ! ಕರ್ಣನು ರಣಭೂಮಿಯನ್ನು ಪಾಂಚಾಲ್ಯರಿಲ್ಲದಿರುವಂತೆ ಮಾಡುತ್ತಿದ್ದಾನೆ. ಹೋಗಿ ಕರ್ಣನನ್ನು ಸಂಹರಿಸು!" ಎಂದು ಹೇಳಿದನು.

ಆಗ ರಥಯೂಥಪ ಕರ್ಣನಿಂದ ಪ್ರಹರಿಸಲ್ಪಟ್ಟು ಭಯಗೊಂಡಿರುವ ಅವರನ್ನು ರಕ್ಷಿಸಲು ಬಯಸಿ ಸುಬಾಹು ನರಪ್ರವೀರ ಅರ್ಜುನನು ನಗುತ್ತಾ ತನ್ನ ರಥದಲ್ಲಿ ಕುಳಿತು ಆಧಿರಥನ ರಥದ ಬಳಿ ಬಂದನು. ಉಗ್ರಘೋಷವುಳ್ಳ ಗಾಂಡೀವವನ್ನು ಹಿಡಿದು ಮೌರ್ವಿಯಿಂದ ಎಳೆದು ಟೇಂಕರಿಸಿ, ಅರ್ಜುನನು ಕೂಡಲೇ ಬಾಣಾಂಧಕರವನ್ನು ಸೃಷ್ಟಿಸಿ, ಆನೆ-ಕುದುರೆ-ರಥ-ಪದಾತಿಗಳನ್ನು ಸಂಹರಿಸಿದನು. ಆ ಪಾಂಡವ ಏಕವೀರನನ್ನು ಹಿಂಬಾಗದಿಂದ ರಕ್ಷಿಸುತ್ತಾ ಭೀಮಸೇನನು ರಥದಿಂದ ಹಿಂಬಾಲಿಸಿ ಬಂದನು. ಆ ಇಬ್ಬರು ರಾಜಪುತ್ರರೂ ತ್ವರೆಮಾಡಿ ರಥಗಳಿಂದ ಕರ್ಣನ ರಥದ ಕಡೆ ಧಾವಿಸಿ ಆಕ್ರಮಣಿಸಿದರು.

ಅದರ ಮಧ್ಯದಲ್ಲಿ ಸೂತಪುತ್ರನು ಸೋಮಕರನ್ನು ಮರ್ದಿಸುತ್ತಾ

ಜೋರಾಗಿ ಯುದ್ಧಮಾಡುತ್ತಿದ್ದನು. ಅವನು ರಥ-ಅಶ್ವ-ಮಾತಂಗ ಗಣಗಳನ್ನು ಸಂಹರಿಸಿ, ಶರಗಳಿಂದ ದಿಕ್ಕುಗಳನ್ನು ಆಚ್ಛಾದಿಸಿದನು. ಅದಕ್ಕೆ ಪ್ರತಿಯಾಗಿ ಉತ್ತಮೌಜಸ, ಜನಮೇಜಯ, ಕ್ರುದ್ಧರಾದ ಯುಧಾಮನ್ಯು-ಶಿಖಂಡಿಯರು ಧೃಷ್ಟದ್ಯುಮ್ನನನ್ನೊಡಗೂಡಿ ಪೃಷತ್ಕಗಳಿಂದ ಕರ್ಣನನ್ನು ಮರ್ದಿಸುತ್ತಾ ಸಿಂಹನಾದಗೈದರು. ಕರ್ಣನನ್ನು ಆಕ್ರಮಣಿಸುತ್ತಿದ್ದ ಆ ಐವರು ಪಾಂಚಾಲಮಹಾರಥರು ಜಿತೇಂದ್ರಿಯನನ್ನು ಸ್ಥೈರ್ಯದಿಂದ ಕದಲಿಸಲು ಶಕ್ಯವಲ್ಲದ ಪಂಚೇಂದ್ರಿಯಗಳಂತೆ ಕರ್ಣನನ್ನು ರಥದಿಂದ ಕದಲಿಸಲು ಶಕ್ಯರಾಗಲಿಲ್ಲ. ಅವರ ಧನುಸ್ಸು, ಧ್ವಜ, ಕುದುರೆಗಳು, ಸಾರಥಿಗಳು, ಪತಾಕೆಗಳನ್ನು ಬಾಣಗಳಿಂದ ಕತ್ತರಿಸಿ ಕರ್ಣನು ಆ ಐವರನ್ನೂ ಪೃಷತ್ಕಗಳಿಂದ ಪ್ರಹರಿಸಿ ಸಿಂಹನಂತೆ ಗರ್ಜಿಸಿದನು. ಮೌರ್ವಿ-ಬಾಣಗಳನ್ನು ಹಿಡಿದು ನಿರಂತರವಾಗಿ ಬಾಣಗಳನ್ನು ಪ್ರಯೋಗಿಸಿ ಶತ್ರುಗಳನ್ನು ಸಂಹರಿಸುತ್ತಿದ್ದ ಅವನ ಧನುಸ್ಸಿನ ಟೇಂಕಾರ ಶಬ್ಧದಿಂದ ಗಿರಿವೃಕ್ಷಗಳೊಂದಿಗೆ ಭೂಮಿಯು ಸೀಳಿಹೋಗುತ್ತಿದೆಯೋ ಎಂದು ತಿಳಿದು ಜನರು ಖಿನ್ನರಾದರು. ಆಧಿರಥಿಯು ಶಕ್ರಚಾಪದಂತಿರುವ ಧನುಸ್ಸಿನಿಂದ ಅನವರತವಾಗಿ ಅನೇಕ ಶರಗಳನ್ನು ಸೃಷ್ಟಿಸುತ್ತಾ ಮರೀಚಿಮಂಡಲದಲ್ಲಿ ಉರಿಯುತ್ತಿರುವ ಅಂಶುಮಾಲೀ ಸೂರ್ಯನಂತೆಯೇ ರಣದಲ್ಲಿ ಪ್ರಕಾಶಿಸುತ್ತಿದ್ದನು. ಅವನು

ಶಿಖಂಡಿಯನ್ನು ಹನ್ನೆರಡು ಶರಗಳಿಂದ, ಉತ್ತಮೌಜಸನನ್ನು ಆರು ನಿಶಿತ ಬಾಣಗಳಿಂದಲೂ, ಯುಧಾಮನ್ಯುವನ್ನು ಮೂರು ಬಾಣಗಳಿಂದ ಹೊಡೆದು ಮೂರು ಮೂರರಿಂದ ಜನಮೇಜಯ-ಧೃಷ್ಟದ್ಯುಮ್ನರನ್ನು ಪ್ರಹರಿಸಿದನು. ಜಿತೇಂದ್ರಿಯ ಆತ್ಮವತನಿಂದ ಇಂದ್ರಿಯಗಳು ಹೇಗೋ ಹಾಗೆ ಮಹಾಹವದಲ್ಲಿ ಸೂತಸುತನಿಂದ ಪರಾಜಿತರಾದ ಆ ಐವರು ಮಹಾರಥರು ನಿಶ್ಚೇಷ್ಟರಾಗಿ ನಿಂತಿದ್ದರು. ಸಮುದ್ರದಲ್ಲಿ ಒಡೆದುಹೋದ ನಾವೆಯಲ್ಲಿರುವ ವಣಿಜರಂತೆ ಕರ್ಣಸಾಗರದಲ್ಲಿ ಮುಳುಗಿಹೋಗುತ್ತಿರುವ ತಮ್ಮ ಸೋದರ ಮಾವಂದಿರನ್ನು ದ್ರೌಪದಿಯ ಐವರು ಮಕ್ಕಳು ಸಾಗರದಲ್ಲಿ ಹೊಸ ನಾವೆಗಳಂತಿರುವ ಸುಸಜ್ಜಿತ ರಥಗಳಿಂದ ಉದ್ಧರಿಸಿದರು.

ಆಗ ಸಾತ್ಯಕಿಯು ಕರ್ಣನು ಪ್ರಯೋಗಿಸಿದ ಅನೇಕ ಬಾಣಗಳನ್ನು ಕತ್ತರಿಸಿ, ಕರ್ಣನನ್ನು ನಿಶಿತ ಆಯಸಗಳಿಂದ ಗಾಯಗೊಳಿಸಿ, ದುರ್ಯೋಧನನನ್ನು ಎಂಟು ಬಾಣಗಳಿಂದ ಹೊಡೆದನು. ಕೂಡಲೇ ಕೃಪ, ಭೋಜ, ದುರ್ಯೋಧನ ಮತ್ತು ಸ್ವಯಂ ಕರ್ಣರು ಅವನನ್ನು ನಿಶಿತ ಬಾಣಗಳಿಂದ ಹೊಡೆದರು. ಆ ಯದೂತ್ತಮನಾದರೋ ಹಿಂದೆ ದೈತ್ಯಪತಿಯು ದಿಕ್ಪಾಲಕರನ್ನು ಎದುರಿಸಿದಂತೆ ಆ ನಾಲ್ವರನ್ನು ಎದುರಿಸಿ ಯುದ್ಧಮಾಡಿದನು. ಸಮಾನ ನಿಸ್ವನದಿಂದ ಟೇಂಕರಿಸುತ್ತಿರುವ ಅಮಿತ ಬಾಣಗಳ ಮಳೆಗರೆಯುತ್ತಿರುವ ಆ

ಧನುಸ್ಸನ್ನು ಹಿಡಿದ ಸಾತ್ಯಕಿಯು ಶರತ್ಕಾಲದಲ್ಲಿ ಆಕಾಶದ ಮಧ್ಯಗತನಾಗಿದ್ದ ರವಿಯಂತೆ ದುರ್ಧರ್ಷನಾದನು. ಅರಿನಿಗ್ರಹದಲ್ಲಿ ಶಕ್ರನನ್ನು ಮರುದ್ಗಣಗಳು ಹೇಗೋ ಹಾಗೆ ಪುನಃ ಉತ್ತಮ ರಕ್ಷಣೆಯುಳ್ಳ ರಥಗಳನ್ನು ಪಡೆದು ಪರಂತಪ ಪಾಂಚಾಲರಥರು ಒಂದಾಗಿ ಮಹಾರಣದಲ್ಲಿ ಶಿನಿಪ್ರವೀರನನ್ನು ರಕ್ಷಿಸಲು ಬಂದರು. ಆಗ ಪಾಂಡವರು ಮತ್ತು ಕೌರವರ ಸೈನಿಕರ ನಡುವೆ ಹಿಂದೆ ಸುರಾಸುರರ ನಡುವೆ ನಡೆದಂತೆ ರಥ-ಅಶ್ವ-ಮಾತಂಗ ವಿನಾಶಕಾರಕ ಅತೀವ ದಾರುಣ ಯುದ್ಧವು ನಡೆಯಿತು. ರಥಗಳು, ಆನೆಗಳು, ಕುದುರೆಗಳು, ಮತ್ತು ಪದಾತಿಗಳು ನಾನಾವಿಧದ ಶಸ್ತ್ರಗಳಿಂದ ಪ್ರಹರಿಸಲ್ಪಟ್ಟು ತಿರುಗುತ್ತಿದ್ದು, ಪರಸ್ಪರರಿಂದ ಅಭಿಹತರಾಗಿ ಭಯಪಟ್ಟು, ಆರ್ತರಾಗಿ ಕೂಗುತ್ತಾ ದುಃಖಿತರಾಗಿ ಕೆಳಗೆ ಬೀಳುತ್ತಿದ್ದವು.

## ದುಃಶಾಸನ ವಧೆ

ಹೀಗೆ ಯುದ್ಧವು ನಡೆಯುತ್ತಿರಲು ದುಃಶಾಸನನು ಭಯರಹಿತನಾಗಿ ಬಾಣಗಳನ್ನು ಎರಚುತ್ತಾ ಭೀಮಸೇನನನ್ನು ಸಮೀಪಿಸಿದನು. ಮಹಾರುರುವಿನ ಮೇಲೆ ಸಿಂಹವು ಹೇಗೋ ಹಾಗೆ ತ್ವರೆಮಾಡಿ ಬರುತ್ತಿದ್ದ ಅವನ ಮೇಲೆ ವೃಕೋದರನು ಎರಗಿದನು. ಆಗ ಪ್ರಾಣಗಳನ್ನೇ ಪಣವನ್ನಾಗಿಟ್ಟ ಪರಸ್ಪರರ ಮೇಲೆದ್ದ ರೋಷದಿಂದ

ತುಂಬಿಹೋಗಿದ್ದ ಅವರಿಬ್ಬರ ನಡುವೆ ಹಿಂದೆ ಶಂಬರ-ಶಕ್ರರ ನಡುವೆ ನಡೆದ ಮಹಾಸಂಗ್ರಾಮದಂತೆ ಅತೀವ ಅಮಾನುಷವಾದ ಯುದ್ಧವು ನಡೆಯಿತು. ಮದೋದಕಗಳನ್ನು ಸುರಿಸುತ್ತಿರುವ ಮನ್ಮಥಸಕ್ತಚೇತಸ ಮಹಾಗಜಗಳೆರಡು ರತಿಸುಖವನ್ನಪೇಕ್ಷಿಸಿ ನಿಂತಿರುವ ಹೆಣ್ಣಾನೆಯ ಸಮೀಪದಲ್ಲಿ ಹೋರಾಡುವಂತೆ ಅವರಿಬ್ಬರೂ ಹರಿತವಾಗಿದ್ದ ಶರೀರಗಳಿಗೆ ನೋವನ್ನುಂಟು ಮಾಡುವ ಶರಗಳನ್ನು ಅನ್ಯೋನ್ಯರನ್ನು ಬಹಳವಾಗಿ ಗಾಯಗೊಳಿಸುತ್ತಿದ್ದರು. ಆಗ ವೃಕೋದರನು ತ್ವರೆಮಾಡಿ ಕ್ಷುರಗಳೆರಡರಿಂದ ದುಃಶಾಸನನ ಧನುಸ್ಸನ್ನೂ ಧ್ವಜವನ್ನೂ ಕತ್ತರಿಸಿದನು. ಪತ್ರಿಯಿಂದ ಅವನ ಹಣೆಗೂ ಹೊಡೆದು ಅವನ ಸಾರಥಿಯ ಶಿರವನ್ನು ಶರೀರದಿಂದ ಬೇರ್ಪಡಿಸಿದನು. ಆ ರಾಜಪುತ್ರನು ಅನ್ಯ ಧನುಸ್ಸನ್ನು ತೆಗೆದುಕೊಂಡು ವೃಕೋದರನನ್ನು ಹನ್ನೆರಡು ಬಾಣಗಳಿಂದ ಪ್ರಹರಿಸಿದನು. ತಾನೇ ಸ್ವತಃ ಕುದುರೆಗಳನ್ನು ನಿಯಂತ್ರಿಸುತ್ತಾ ಜಿಹ್ಮಗ ಶರಗಳನ್ನು ಭೀಮನ ಮೇಲೆ ಪುನಃ ಸುರಿಸಿದನು.

ತುಮುಲದಲ್ಲಿ ಯುದ್ಧಮಾಡುತ್ತಿದ್ದ ರಾಜಪುತ್ರ ದುಃಶಾಸನನು ದುಷ್ಕರವಾದುದನ್ನು ಮಾಡಿದನು. ಅವನು ಕ್ಷುರದಿಂದ ಭೀಮನ ಧನುಸ್ಸನ್ನು ತುಂಡರಿಸಿದನು ಮತ್ತು ಆರು ಶರಗಳಿಂದ ಸಾರಥಿಯನ್ನು ಕೆಳಗುರುಳಿಸಿದನು. ಆಗ ಆ ಮಹಾತ್ಮನು ಕ್ಷಿಪ್ರವಾಗಿ ಅನೇಕ ಶ್ರೇಷ್ಠ

ಬಾಣಗಳಿಂದ ಭೀಮಸೇನನನ್ನು ಹೊಡೆದನು. ಭೀಮನು ಗಾಯಗೊಂಡ ಮದಿಸಿದ ಆನೆಯಂತೆ ತುಮುಲದಲ್ಲಿ ಉಕ್ಕಿನ ಗದೆಯನ್ನು ಎಸೆದನು. ಅದರಿಂದ ದುಃಶಾಸನನನ್ನು ಹತ್ತು ಧನುಸ್ಸುಗಳಷ್ಟು ಹಿಂದೆ ತಳ್ಳಿ ಭೀಮಸೇನನು ಜೋರಾಗಿ ನಕ್ಕನು. ವೇಗವುಳ್ಳ ಆ ಗದೆಯಿಂದ ಪ್ರಹೃತನಾದ ದುಃಶಾಸನನು ನಡುಗುತ್ತಾ ಕೆಳಗೆ ಬಿದ್ದನು. ಮೇಲೆಬಿದ್ದ ಗದೆಯು ಅವನ ಕುದುರೆಗಳನ್ನೂ, ಸಾರಥಿಯನ್ನೂ, ರಥವನ್ನೂ ನುಚ್ಚುನೂರಾಗಿಸಿತು. ಕವಚ ವಸ್ತ್ರಾಭರಣಗಳು ಚದುರಿಹೋಗಿದ್ದ ದುಃಶಾಸನನು ಅತ್ಯಂತ ವೇದನೆಯಿಂದ ಆರ್ತನಾಗಿ ಉರುಳತೊಡಗಿದನು. ಆಗ ತರಸ್ವೀ ಭೀಮಸೇನನು ತನ್ನ ಪತ್ನಿಯ ಕುರಿತು ದುಃಶಾಸನನು ಮಾಡಿದುದನ್ನು ಸ್ಮರಿಸಿಕೊಂಡು ರಥದಿಂದ ನೆಲಕ್ಕೆ ಹಾರಿ ಪ್ರಯತ್ನಪಟ್ಟು ಅವನ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದನು. ಹರಿತ ಶುದ್ಧ ಖಡ್ಗವನ್ನು ಮೇಲಿತ್ತಿ ಉರುಳಾಡುತ್ತಿದ್ದ ಅವನ ಕುತ್ತಿಗೆಯನ್ನು ಮೆಟ್ಟಿ ಕತ್ತರಿಸಿ ಭೂಮಿಯಮೇಲೆ ಬಿದ್ದವನ ಎದೆಯನ್ನು ಮೇಲೆತ್ತಿ ಸುರಿಯುತ್ತಿದ್ದ ಅವನ ರಕ್ತವನ್ನು ಕುಡಿದನು.

ರಕ್ತದ ರುಚಿಯನ್ನು ಪುನಃ ಪುನಃ ಆಸ್ವಾದಿಸುತ್ತಾ ದುಃಶಾಸನನನ್ನೇ ನೋಡುತ್ತಾ ಪರಮ ಕ್ರುದ್ಧನಾಗಿ ಹೇಳಿದನು: “ತಾಯಿಯ ಮೊಲೆಹಾಲಿಗಿಂತಲೂ, ತುಪ್ಪ-ಜೇನುತುಪ್ಪಗಳ ಮಿಶ್ರಣಕ್ಕಿಂತಲೂ, ಚೆನ್ನಾಗಿ ಮಾಡಲ್ಪಟ್ಟ ದ್ರಾಕ್ಷಾರಸದ ಪಾನೀಯಕ್ಕಿಂತಲೂ, ದಿವ್ಯವಾದ



ತೋಯರಸದ ಪಾನೀಯಕ್ಕಿಂತಲೂ, ಹಾಲು-ಮೊಸರನ್ನು ಕಡೆದು ಮಾಡಿದ ಮಜ್ಜಿಗೆಗಿಂತಲೂ ಮತ್ತು ಎಲ್ಲ ಪಾನೀಯಗಳಿಗಿಂತಲೂ ನನ್ನ ಶತ್ರುವಿನ ರಕ್ತವು ಅಧಿಕ ರುಚಿಯನ್ನು ಹೊಂದಿದೆಯೆಂದು ನನಗನ್ನಿಸುತ್ತಿದೆ!" ಹೀಗೆ ಹೇಳುತ್ತಾ ರಕ್ತವನ್ನು ಕುಡಿತು ಅತಿಪ್ರಹೃಷ್ಟನಾಗಿ ಪುನಃ ಪುನಃ ಕೂಗಿ ಕುಣಿದು ಕುಪ್ಪಳಿಸುತ್ತಿದ್ದ ಆ ಭೀಮಸೇನನನ್ನು ನೋಡಿದವರೆಲ್ಲರೂ ವ್ಯಥಿತರಾಗಿ ಕುಸಿದುಬಿದ್ದರು. ಅಲ್ಲಿ ಭಯದಿಂದ ನಡುಗುತ್ತಿದ್ದ ಮನುಷ್ಯರ ಕೈಗಳಿಂದ ಶಸ್ತ್ರಗಳು ಕೆಳಗೆ ಬಿದ್ದವು. ಭಯದಿಂದ ವಿಕಾರಸ್ವರದಲ್ಲಿ ಸಹಾಯಕ್ಕೆಂದು ಕೂಗಿಕೊಳ್ಳುತ್ತಿದ್ದರು. ಕೆಲವರು ಅವನನ್ನು ನೋಡಲಿಕ್ಕಾಗದೇ ಕಣ್ಣುಗಳನ್ನೇ ಮುಚ್ಚಿಕೊಂಡರು. ದುಃಶಾಸನನ ರಕ್ತವನ್ನು ಕುಡಿಯುತ್ತಿದ್ದ ಭೀಮಸೇನನನ್ನು ಎಲ್ಲಕಡೆಗಳಿಂದ ನೋಡುತ್ತಿದ್ದವರು ಎಲ್ಲರೂ "ಇವನು ಮನುಷ್ಯನಲ್ಲ!" ಎಂದು ಮಾತನಾಡಿಕೊಳ್ಳುತ್ತಾ ಭಯಾರ್ದಿತರಾಗಿ ಪಲಾಯನಗೈದರು. ಲೋಕವೀರರಿಗೆ ಕೇಳುವಂತೆ ಭೀಮಸೇನನು ಈ ಮಾತನ್ನಾಡಿದನು:

> "ಪುರುಷಾಧಮ! ನಿನ್ನ ಈ ರಕ್ತವನ್ನು ಕಂಠದಿಂದ ಕುಡಿಯುತ್ತಿದ್ದೇನೆ. ಈಗ ಸಂರಬ್ಧನಾಗಿ "ಗೌಃ ಗೌಃ" ಎಂದು ಪುನಃ ಹೇಳು ನೋಡೋಣ! ತನ್ನ ಮಕ್ಕಳೊಸೇರಿ ಧೃತರಾಷ್ಟ್ರನು ನಮ್ಮ ಮೇಲೆ ಸದಾ ಇಟ್ಟಿರುವ

> ದುರಾತ್ಮತೆಯಿಂದ ಪ್ರಮಾಣಕೋಟಿಯಲ್ಲಿ ಕಾಲಕೂಟವನ್ನು ಉಣಿಸಿ ಮಲಗಿಸಿ ಸರ್ಪಗಳಿಂದ ಕಚ್ಚಿಸಿ ಕಷ್ಟವನ್ನಿತ್ತುದುದು, ಜತುಗೃಹದಲ್ಲಿ ಸುಟ್ಟಿದ್ದುದು, ದ್ಯೂತದಲ್ಲಿ ರಾಜ್ಯವನ್ನು ಅಪಹರಿಸಿದುದು, ಅರಣ್ಯದಲ್ಲಿ ವಸತಿಮಾಡಿಸಿದುದು, ಸಂಗ್ರಾಮದಲ್ಲಿ ಬಾಣ-ಅಸ್ತ್ರಗಳನ್ನು ಪ್ರಯೋಗಿಸಿದುದು, ಅರಮನೆಯಲ್ಲಿ ಸುಖವಾಗಿರಲು ಅವಕಾಶಕೊಡದೇ ಇದ್ದುದು, ಈ ಇಲ್ಲ ದುಃಖವನ್ನೇ ತಿಳಿದಿದ್ದೇವೆಯೇ ಹೊರತು ಎಂದು ಸುಖವೇನೆಂಬುದನ್ನು ತಿಳಿಯಲಿಲ್ಲ !”

ಹೀಗೆ ಹೇಳಿ ವೃಕೋದರನು ಜಯವನ್ನು ಹೊಂದಿದನು. ಪುನಃ ನಗುತ್ತಾ ಕೇಶವಾರ್ಜುನರಿಗೆ ಹೇಳಿದನು:

> “ವೀರರೇ ! ದುಃಶಾಸನನ ಕುರಿತು ನಾನು ಏನೆಲ್ಲ ಪ್ರತಿಜ್ಞೆ ಮಾಡಿದ್ದೆನೋ ಅವೆಲ್ಲವನ್ನೂ ಇಂದು ರಣದಲ್ಲಿ ಮಾಡಿ ತೋರಿಸಿದ್ದೇನೆ ! ಎರಡನೆಯ ಯಜ್ಞಪಶುವಾದ ದುರ್ಯೋಧನನನ್ನು ಕೂಡ ಇಲ್ಲಿಯೇ ಹಿಸುಕಿ ಬಲಿಕೊಡುತ್ತೇನೆ ! ಕೌರವರ ಸಮಕ್ಷಮದಲ್ಲಿ ಆ ದುರಾತ್ಮನ ಶಿರವನ್ನು ತುಳಿದೇ ಶಾಂತಿಯನ್ನು ಪಡೆಯುತ್ತೇನೆ !”

ಪ್ರಹೃಷ್ಟನಾಗಿ ಹೀಗೆ ಹೇಳಿ ರಕ್ತದಿಂದ ತೋಯ್ದುಹೋಗಿದ್ದ ಮಹಾತ್ಮ

ಅತಿಬಲ ಭೀಮಸೇನನು ವೃತ್ರನನ್ನು ಸಂಹರಿಸಿದ ಸಹಸ್ರನೇತ್ರನಂತೆ ಜೋರಾಗಿ ಕೂಗಿ ನರ್ತಿಸಿದನು.

ದುಃಶಾಸನನು ಹತನಾಗಲು ಸಮರದಲ್ಲಿ ಪಲಾಯನಗೈಯದ ಮಹಾಕ್ರೋಧವಿಷರಾದ ಧೃತರಾಷ್ಟ್ರನ ಹತ್ತು ಮಕ್ಕಳು ಮಹಾವೀರ್ಯದಿಂದ ಭೀಮಸೇನನನ್ನು ಶರಗಳಿಂದ ಮುಚ್ಚಿದರು. ಭ್ರಾತೃವ್ಯಸದಿಂದ ಪೀಡಿತರಾಗಿದ್ದ ಕವಚಿ, ನಿಷಂಗಿ, ಪಾಶೀ, ದಂಡಧಾರ, ಧನುರ್ಧರ, ಅಲೋಲುಪ, ಶಲ, ಸಂಧ, ವಾತವೇಗ ಮತ್ತು ಸುವರ್ಚಸ ಇವರು ಒಟ್ಟಾಗಿ ಭೀಮಸೇನನನ್ನು ಮಾರ್ಗಣಗಳಿಂದ ಮುತ್ತಿಗೆ ಹಾಕಿದರು. ಮಹಾರಥರ ವಿಶಿಖಗಳಿಂದ ಹೀಗೆ ಎಲ್ಲ ಕಡೆಗಳಿಂದ ತಡೆಯಲ್ಪಟ್ಟ ಭೀಮನು ಕ್ರೋಧದಿಂದ ರಕ್ತಾಕ್ಷನಾಗಿ ಕ್ರುದ್ಧನಾದ ಕಾಲನಂತೆಯೇ ಆದನು. ರುಕ್ಮಾಂಗದ ರುಕ್ಮಪುಂಖಗಳುಳ್ಳ ಹತ್ತು ಹತ್ತು ನಿಶಿತವಾದ ಮತ್ತು ಮಹಾವೇಗಗಳುಳ್ಳ ಭಲ್ಲಗಳಿಂದ ಅವರನ್ನು ಪಾರ್ಥನು ಯಮಕ್ಷಯಕ್ಕೆ ಕಳುಹಿಸಿದನು. ಆ ವೀರರು ಹತರಾಗಲು ಸೂತಪುತ್ರ ಮತ್ತು ಪಾಂಡವರು ನೋಡುತ್ತಿದ್ದಂತೆಯೇ ಭಯಾರ್ದಿತವಾದ ಕೌರವ ಸೇನೆಯು ಪಲಾಯನಗೈಯಿತು.

ಪ್ರಜೆಗಳ ಅಂತಕನಿಗಿರುವಂಥಹ ಭೀಮನ ವಿಕ್ರಾಂತವನ್ನು ನೋಡಿ

ಕರ್ಣನು ಮಹಾರಣವನ್ನು ಪ್ರವೇಶಿಸಿದನು. ಅವನ ಆಕಾರಭಾವವನ್ನು ತಿಳಿದ ಶಲ್ಯನು ಇದು ಸರಿಯಾದ ಕಾಲವೆಂದು ತಿಳಿದು ಕರ್ಣನಿಗೆ ಹೇಳಿದನು:

> “ರಾಧೇಯ! ವ್ಯಥೆಪಡಬೇಡ! ಇದು ನಿನಗೆ ಸರಿಗಾಣುವುದಿಲ್ಲ! ಭೀಮಸೇನನಿಂದ ಭಯಾರ್ದಿತರಾದ ರಾಜರು ಇಗೋ ಓಡಿಹೋಗುತ್ತಿದ್ದಾರೆ! ಭ್ರಾತೃವ್ಯಸನದಿಂದ ದುಃಖಿತನಾಗಿ ದುರ್ಯೋಧನನಾದರೋ ಸಮ್ಮೂಢನಾಗಿದ್ದಾನೆ! ಆ ಮಹಾತ್ಮನು ದುಃಶಾಸನನ ರಕ್ತವನ್ನು ಕುಡಿಯಲು ಶೋಕ-ಕೋಪಗಳಿಂದ ಪೀಡಿತನಾಗಿ, ಚೇತನವನ್ನು ಕಳೆದುಕೊಂಡು ನಡುಗುತ್ತಿರುವ ದುರ್ಯೋಧನನನ್ನು ಕೃಪನೇ ಮೊದಲಾದವರು ಮತ್ತು ಅಳಿದುಳಿದ ಸಹೋದರರರು ಎಲ್ಲಕಡೆಗಳಿಂದ ಸುತ್ತುವರೆದು ಉಪಚರಿಸುತ್ತಿದ್ದಾರೆ! ಧನಂಜಯನೇ ಮೊದಲಾದ ಲಬ್ಧಲಕ್ಷ್ಯ ಶೂರ ಪಾಂಡವರು ನಿನ್ನನ್ನೇ ಎದುರಿಸಿ ಯುದ್ಧಮಾಡಲು ಸಿದ್ಧರಾಗಿದ್ದಾರೆ! ಕ್ಷತ್ರಧರ್ಮವನ್ನು ಪಾಲಿಸಿ ಮಹಾಪೌರುಷವಿರುವ ನೀನು ಧನಂಜಯನನ್ನು ಎದುರಿಸು! ಧಾರ್ತರಾಷ್ಟ್ರರ ಸರ್ವ ಭಾರವೂ ನಿನ್ನ ಮೇಲೆ

ಸಮರ್ಪಿತಗೊಂಡಿದೆ! ನೀನು ಯಥಾಶಕ್ತಿಯಾಗಿ ಯಥಾಬಲವನ್ನುಪಯೋಗಿಸಿ ಯುದ್ಧಮಾಡು! ಜಯವಾದರೆ ವಿಪುಲ ಕೀರ್ತಿಯು ಮತ್ತು ಪರಾಜಿತನಾದರೆ ಸ್ವರ್ಗವು ನಿಶ್ಚಯವಾಗಿದೆ! ಸಂಕ್ರುದ್ಧನಾದ ನಿನ್ನ ಮಗ ವೃಷಸೇನನಾದರೋ ನೀನು ಮೋಹಸಂಪನ್ನನಾಗಿರುವುದನ್ನು ನೋಡಿ ಪಾಂಡವರನ್ನು ಎದುರಿಸಿ ಯುದ್ಧಮಾಡುತ್ತಿದ್ದಾನೆ!”

ಶಲ್ಯನ ಈ ಮಾತನ್ನು ಕೇಳಿ ಕರ್ಣನ ಹೃದಯದಲ್ಲಿ ಯುದ್ಧದಲ್ಲಿ ಸುಸ್ಥಿರವಾದ ಮಾನುಷ್ಯಕ ಭಾವವುಂಟಾಯಿತು.

## ವೃಷಸೇನವಧೆ

ಅಗ ಕ್ರುದ್ಧನಾದ ವೃಷಸೇನನು ಸ್ವರಥದಲ್ಲಿ ಕುಳಿತು ಶತ್ರುಗಳನ್ನು ಕೊಲ್ಲುತ್ತಿದ್ದ, ದಂಡವನ್ನು ಹಿಡಿದ ಕಾಲನಂತೆ ಕೈಯಲ್ಲಿ ಗದೆಯನ್ನು ಹಿಡಿದು ಕೌರವರನ್ನು ಸದೆಬಡಿಯುತ್ತಿರುವ ವೃಕೋದರನನ್ನು ಆಕ್ರಮಣಿಸಿದನು. ಸಮರದಲ್ಲಿ ಪ್ರಹೃಷ್ಟನಾಗಿ ಮುನ್ನುಗ್ಗಿ ಬರುತ್ತಿರುವ ಆ ಕರ್ಣ-ಪುತ್ರನನ್ನು ನಕುಲನು ರೋಷದಿಂದ ಕೊಂದು ಗೆಲ್ಲಲು ಮಘವತನು ಜಂಭನನ್ನು ಹೇಗೋ ಹಾಗೆ ಹರಿತ ಬಾಣಗಳಿಂದ ತಡೆದನು. ನಕುಲನು ಕ್ಷುರಗಳಿಂದ ಅವನ ಸ್ಫಟಿಕದ ಧ್ವಜಕಂಬವನ್ನು ತುಂಡರಿಸಿದನು. ಹಾಗೇಯೇ ಕರ್ಣಾತ್ಮಜನ ಬಂಗಾರದ ಪಟ್ಟಿಯಿಂದ

ಅಲಂಕೃತವಾಗಿದ್ದ ಧನುಸ್ಸನ್ನೂ ತುಂಡರಿಸಿದನು. ಕೂಡಲೇ ಕರ್ಣಾತ್ಮಜನು ಸುಶೀಘ್ರವಾಗಿ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಪಾಂಡವನನ್ನು ಆಕ್ರಮಣಿಸಿದನು. ದುಃಶಾಸನನ ಸೇಡನ್ನು ತೀರಿಸಿಕೊಳ್ಳಲು ಮಹಾಸ್ತ್ರಗಳನ್ನು ತಿಳಿದಿದ್ದ ಅವನು ನಕುಲನನ್ನು ದಿವ್ಯವಾದ ಮಹಾಸ್ತ್ರಗಳಿಂದ ಪ್ರಹರಿಸಿದನು. ಆಗ ಕ್ರುದ್ಧನಾದ ನಕುಲನು ಮಹಾ ಉಲ್ಕೆಗಳಸಮಾನವಾಗಿದ್ದ ಶರಗಳಿಂದ ಅವನನ್ನು ಪ್ರತಿಯಾಗಿ ಹೊಡೆದನು. ಕರ್ಣನ ಮಗನೂ ಕೂಡ ಅವನನ್ನು ದಿವಾಸ್ತ್ರಗಳಿಂದ ಪ್ರತಿಯಾಗಿ ಪ್ರಹರಿಸಿದನು. ಕರ್ಣನ ಪುತ್ರನು ಶೀಘ್ರವಾಗಿ ಉತ್ತಮ ಅಸ್ತ್ರಗಳಿಂದ ನಕುಲನ ಕುದುರೆಗಳೆಲ್ಲವನ್ನೂ ಸಂಹರಿಸಿದನು.

ಆಗ ನಕುಲನು ಅಶ್ವಗಳು ಹತಗೊಂಡ ರಥದಿಂದ ಇಳಿದು ಸುಂದರವಾದ ಎಂಟು ಚಂದ್ರಗಳುಳ್ಳ ಗುರಾಣಿಯನ್ನೂ ಆಕಾಶಸಂಕಾಶದ ಖಡ್ಗವನ್ನೂ ಹಿಡಿದು ಪಕ್ಷಿಯಂತೆ ರಣರಂಗದಲ್ಲಿ ಹಾರಾಡತೊಡಗಿದನು. ಅಂತರಿಕ್ಷದ ವಿಚಿತ್ರ ಮಾರ್ಗಗಳಲ್ಲಿ ಸಂಚರಿಸುತ್ತಾ ಅವನು ಅನೇಕ ಕುದುರೆ ಆನೆಗಳನ್ನು ತುಂಡರಿಸಿದನು. ಅಶ್ವಮೇಧದಲ್ಲಿ ಶಮಿತ್ರನ ಪ್ರಹಾರದಿಂದ ಪಶುಗಳು ಹೇಗೋ ಹಾಗೆ ಅವನ ಖಡ್ಗಕ್ಕೆ ಸಿಲುಕಿದ ಪ್ರಾಣಿಗಳು ತೊಪತೊಪನೆ ಕೆಳಗೆ ಬಿದ್ದವು.

ನಕುಲನೊಬ್ಬನಿಂದಲೇ ಆಗ ಶೀಘ್ರವಾಗಿ ನಾನಾದೇಶದ ದಷ್ಟಪುಷ್ಟಾದ ಸತ್ಯಸಂಧರಾದ ಉತ್ತಮ ಚಂದನಗಳನ್ನು ಲೇಪಿಸಿಕೊಂಡಿದ್ದ ವಿಜಯೇಚ್ಛುಗಳಾದ ಎರಡುಸಾವಿರ ಯುದ್ಧಶೌಂಡರು ಕತ್ತರಿಸಲ್ಪಟ್ಟು ಕೆಳಗುರುಳಿದರು. ಹಾಗೆ ಸೇನೆಯನ್ನು ಕೆಳಗುರುಳುಸಿತ್ತಿದ್ದ ನಕುಲನನ್ನು ವೃಷಸೇನನು ಎಲ್ಲಕಡೆಗಳಿಂದಲೂ ಸಾಯಕಗಳಿಂದ ಹೊಡೆದು ಆಕ್ರಮಣಿಸಿದನು. ಹಾಗೆ ಗಾಯಗೊಂಡ ನಕುಲನು ಕೋಪದಿಂದ ಆ ವೀರನನ್ನು ಪೃಷತ್ಕಗಳಿಂದ ಹೊಡೆದು ಗಾಯಗೊಳಿಸಿದನು. ಒಬ್ಬನೇ ಅನೇಕ ಪದಾತಿ, ಕುದುರೆ, ಆನೆ ಮತ್ತು ರಥಗಳನ್ನು ಆಟವಾದುವವನಂತೆ ಧ್ವಂಸಮಾಡುತ್ತಿರುವುದನ್ನು ನೋಡಿ ಕರ್ಣಪುತ್ರನು ಕೋಪಗೊಂಡು ವೀರ ನಕುಲನನ್ನು ಹದಿನೆಂಟು ಪೃಷತ್ಕಗಳಿಂದ ಪ್ರಹರಿಸಿದನು. ಕರ್ಣಾತ್ಮಜನನ್ನು ಸಂಹರಿಸಲು ನರವೀರ ಪಾಂಡುಸುತನು ಆಕ್ರಮಣಿಸಲು ಕರ್ಣಪುತ್ರನು ಮಹಾರಣದಲ್ಲಿ ನಕುಲ ಸಹಸ್ರತಾರೆಗಳುಳ್ಳ ಗುರಾಣಿಯನ್ನು ಬಾಣಗಳಿಂದ ಹೊಡೆದನು. ಆಗ ವೃಷಸೇನನು ನಿಶಿತವಾದ ಕ್ಷಿಪ್ರವಾಗಿ ಒಂದೇ ಧಾರೆಯಂತೆ ಹೋಗುತ್ತಿದ್ದ ಆರು ಕ್ಷಿಪ್ರ ಶರಗಳಿಂದ ನಕುಲನ ನಿಶಿತವಾದ, ತೀಕ್ಷ್ಣ ಅಲಗುಳ್ಳ, ಉತ್ತಮ ಕೋಶದೊಳಗಿದ್ದ, ಅತಿಯಾದ ಭಾರವನ್ನೂ ಹೊರಬಲ್ಲ, ಶತ್ರುಗಳ ಶರೀರವನ್ನು ಅಪಹರಿಸಬಲ್ಲ, ಘೋರವಾದ, ಸರ್ಪದಂತೆ ಉಗ್ರರೂಪದ ಖಡ್ಗವನ್ನು ತುಂಡರಿಸಿದನು.

ಪುನಃ ಹಿತ್ತಾಳೆಯ ನಿಶಿತ ಪೃಷತ್ಕಗಳಿಂದ ಅವನ ಎದೆಗೆ ಗಾಢವಾಗಿ ಪ್ರಹರಿಸಿದನು. ಕರ್ಣಸುತನಿಂದ ಪೀಡಿತನಾದ, ಅಶ್ವಗಳನ್ನು ಕಳೆದುಕೊಂಡಿದ್ದ ನಕುಲನು, ಧನಂಜಯನು ನೋಡುತ್ತಿದ್ದಂತೆಯೇ, ಭೀಮಸೇನನ ರಥಕ್ಕೆ ಸಿಂಹವು ಗಿರಿಶಿಖರವನ್ನು ಏರುವಂತೆ ಹಾರಿ ಏರಿದನು.

ಕರ್ಣಪುತ್ರನಿಂದ ಬಾಣ-ಖಡ್ಗಗಳನ್ನು ಕತ್ತರಿಸಿಕೊಂಡು ವಿರಥನನಾಗಿ ಅಸ್ತ್ರಭಗ್ನನಾಗಿ ನಕುಲನು ಅರಿಶರಗಳಿಂದ ಆರ್ತನಾಗಿರುವುದನ್ನು ತಿಳಿದು ಅರ್ಜುನನು ಪವನಧುತಪತಾಕೆಯುಳ್ಳ ಮತ್ತು ವರಪುರುಷನು ನಡೆಸುತ್ತಿದ್ದ ರಥದಲ್ಲಿ ಶೀಘ್ರವಾಗಿ ವೃಷಸೇನನಿದ್ದಲ್ಲಿಗೆ ನಡೆದನು. ಐವರು ದ್ರುಪದಸುತರು, ಆರನೆಯವನು ಸಾತ್ಯಕಿ, ಐವರು ದ್ರುಪದನ ಪುತ್ರಿಯ ಪುತ್ರರು ಈ ಹನ್ನೊಂದು ಮಂದಿ ಪದಾತಿ-ರಥ-ಗಜ-ಅಶ್ವ ಸೇನೆಗಳಿಂದ ಭುಜಗಪತಿಸಮಾನ ಮಾರ್ಗಣಗಳಿಂದ ಮತ್ತು ಅಸ್ತ್ರಗಳಿಂದ ಕೌರವರನ್ನು ಸದೆಬಡಿಯುತ್ತಾ ಆಕ್ರಮಣಿಸಿದರು. ಕೂಡಲೇ ತ್ವರೆಮಾಡಿ ಕೌರವ ರಥಮುಖ್ಯರಾದ ಕೃತವರ್ಮ, ಕೃಪ, ದ್ರೌಣಿ, ದುರ್ಯೋಧನ, ಉಲೂಕ, ವೃಕ, ಕ್ರಾಥ, ಮತ್ತು ದೇವಾವೃಧರು ಮೋಡಗಳಂತೆ ಗುಡುಗುವ ರಥಗಳಲ್ಲಿ ಕುಳಿತು ಕಾರ್ಮುಕಗಳನ್ನು ಹಿಡಿದು ಎದುರಾಗಿ ಬಂದರು. ಆ ನರವರರು ಅವರ ಕಡೆಯ ಆ ಹನ್ನೊಂದು ವೀರರನ್ನು ಶ್ರೇಷ್ಠ ಶರವರಾಗ್ರಗಳಿಂದ ಹೊಡೆಯುತ್ತಾ

ಅವರ ಗಮನವನ್ನು ಪ್ರತಿರೋಧಿಸಲು ಹೊಸಮೋಡದ ಸಮಾನ ಬಣ್ಣಗಳ ಪರ್ವತಶಿಖಸದೃಶವಾದ ಭಯಂಕರ ವೇಗವುಳ್ಳ ಆನೆಗಳಮೇಲೆ ಕುಳಿತ ಕುಳಿಂದರು ಅವರನ್ನು ಆಕ್ರಮಣಿಸಿದರು. ಹಿಮವತ್ಪರ್ವತ ಪ್ರದೇಶದವುಗಳಾಗಿದ್ದ ಆ ಆನೆಗಳು ಸುಂದರವಾಗಿ ಸಜ್ಜಾಗಿದ್ದವು, ಮದೋದಕವನ್ನು ಸುರಿಸುತ್ತಿದ್ದವು, ರಣದಲ್ಲಿ ಹೋರಾಡಲು ಬಯಸುತ್ತಿದ್ದವು ಮತ್ತು ರಣಕುಶಲಯೋಧರು ಅವುಗಳ ಮೇಲೆ ಕುಳಿತಿದ್ದರು. ಸುವರ್ಣಜಾಲಗಳಿಂದ ಅಲಂಕೃತಗೊಂಡಿದ್ದ ಆ ಆನೆಗಳು ಮಿಂಚಿನಿಂದ ಕೂಡಿದ ಮೇಘಗಳಂತೆ ಕಾಣುತ್ತಿದ್ದವು. ಕುಣಿಂದಪುತ್ರನು ಹತ್ತು ಮಹಾಯಸಗಳಿಂದ ಕೃಪನನ್ನು ಅವನ ಸಾರಥಿ-ಕುದುರೆಗಳೊಂದಿಗೆ ಬಹಳವಾಗಿ ಪೀಡಿಸಿದನು. ಆಗ ಶರದ್ವತಸುತನು ಸಾಯಕಗಳಿಂದ ಒಮ್ಮೆಲೇ ಅವನನ್ನು ಆನೆಯೊಂದಿಗೆ ಭೂತಲಕ್ಕೆ ಕೆಡವಿದನು. ಕುಣಿಂದಪುತ್ರಾವರಜನಾದರೋ ತೋಮರಗಳಿಂದ ಮತ್ತು ದಿವಾಕರನ ಕಿರಣಗಳಂತಿದ್ದ ಅಯಸ್ಮಗಳಿಂದ ಗಾಂಧಾರಪತಿಯ ರಥವನ್ನು ವಿಕ್ಷೋಭಗೊಳಿಸಿ ಗರ್ಜಿಸಲು ಗಾಂಧಾರಪತಿಯು ಅವನ ಶಿರವನ್ನು ಕತ್ತರಿಸಿದನು.

ಕುಣಿಂದರು ಹಾಗೆ ಹತರಾಗಲು ಪ್ರಹೃಷ್ಟರೂಪರಾದ ಕೌರವ ಮಹಾರಥರು ಶಂಖಗಳನ್ನು ಜೋರಾಗಿ ಊದಿದರು ಮತ್ತು ಅನೇಕ ಬಾಣಗಳಿಂದ ಶತ್ರುಗಳನ್ನು ಪುನಃ ಆಕ್ರಮಣಿಸಿದರು. ಆಗ ಪಾಂಡು-

ಸೃಂಜಯರೊಡನೆ ಕುರುಗಳ, ಬಾಣ-ಖಡ್ಗ-ಶಕ್ತಿ-ಋಷ್ಟಿ-ಗದೆ-ಪರಶುಗಳಿಂದ ಪದಾತಿ-ಕುದುರೆ-ಆನೆಗಳ ಅನೇಕ ಗುಂಪುಗಳ ಸಂಹಾರಕ್ರಿಯೆಯ ಅತೀವ ದಾರುಣ ಯುದ್ಧವು ಪುನಃ ಪ್ರಾರಂಭವಾಯಿತು. ಉಗ್ರ ಚಂಡಮಾರುತಕ್ಕೆ ಸಿಲುಕಿದ ಮೋಡಗಳು ದಿಕ್ಕುದಿಕ್ಕುಗಳಿಗೆ ಚದುರಿ ಹೋಗುವಂತೆ ಪರಸ್ಪರರನ್ನು ಪ್ರಹರಿಸುತ್ತಿದ್ದ ಪದಾತಿ-ಆನೆ-ಕುದುರೆ-ರಥಗಳು ಅಸುಗಳನ್ನು ತೊರೆದು ತಂಡ ತಂಡವಾಗಿ ರಣದಲ್ಲಿ ಬೀಳುತ್ತಿದ್ದವು. ಆಗ ಶತಾನೀಕನು ಕೌರವರ ಕಡೆಯ ಮಹಾಗಜಗಳನ್ನೂ, ಹಾಗೆಯೇ ರಥಗಳನ್ನೂ ಪದಾತಿಗಣಗಳನ್ನೂ ನಾಶಗೊಳಿಸಲು ಕೃತವರ್ಮನು ಆನೆ ಕುದುರೆಗಳನ್ನು ಶಸ್ತ್ರದಿಂದ ಕತ್ತರಿಸಿ ಕೆಳಗುರುಳಿಸಿದನು. ಇನ್ನೊಂದು ಕಡೆ ದ್ರೌಣಿಯು ಆಯುಧ, ಯೋಧ ಮತ್ತು ಧ್ವಜ ಈ ಎಲ್ಲವನ್ನೂ ಸೇರಿಸಿ ಮೂರು ಆನೆಗಳನ್ನು ಶರಗಳಿಂದ ಸಂಹರಿಸಿ ವಜ್ರದಿಂದ ಹತವಾದ ಮಹಾಗಿರಿಗಳಂತೆ ಭೂಮಿಯಮೇಲೆ ಅಲ್ಲಲ್ಲಿ ಬೀಳಿಸಿ ಹರಡಿದನು. ಅನಂತರ ಕುಣಿಂದರಾಜನ ತಮ್ಮನು ದುರ್ಯೋಧನನ ವಕ್ಷಃಸ್ಥಳಕ್ಕೆ ಗುರಿಯಿಟ್ಟು ಶ್ರೇಷ್ಠ ಪತ್ರಿಗಳಿಂದ ಹೊಡೆದನು. ಅದಕ್ಕೆ ಪ್ರತಿಯಾಗಿ ದುರ್ಯೋಧನನು ನಿಶಿತ ಶರಗಳಿಂದ ಅವನ ಶರೀರವನ್ನು ಮತ್ತು ಅವನ ಆನೆಯನ್ನು ಭೇದಿಸಿದನು. ವರ್ಷಾಕಾಲದಲ್ಲಿ ಇಂದ್ರನ ವಜ್ರಾಯುಧದಿಂದ ಪ್ರಹೃತವಾದ ಗೈರಿಕಪರ್ವತವು ಕೆಂಪುಬಣ್ಣದ

ನೀರನ್ನು ಸುರಿಸುವಂತೆ ಆ ಮಹಾಗಜವು ರಾಜಪುತ್ರನೊಂದಿಗೆ ಎಲ್ಲ ಕಡೆ ಗಾಯಗೊಂಡು ರಕ್ತವನ್ನು ಸುರಿಸುತ್ತಾ ಕೆಳಗೆ ಬಿದ್ದಿತು.

ಕುಣಿಂದಪುತ್ರನಿಂದ ಕಳುಹಿಸಲ್ಪಟ್ಟ ಇನ್ನೊಂದು ಆನೆಯು ಸಾರಥಿ-ಕುದ್ರೆಗಳೊಂದಿಗೆ ಶುಕನ ರಥವನ್ನು ನಾಶಪಡಿಸಿತು. ಆಗ ಕ್ರಾಥನ ಶರಗಳಿಂದ ಪ್ರಹರಿಸಲ್ಪಟ್ಟ ಆ ಆನೆಯು ಒಡೆಯನೊಂದಿಗೆ ವರ್ಜದಿಂದ ಹತವಾದ ಗಿರಿಯಂತೆ ಕೆಳಗೆ ಉರುಳಿ ಬಿದ್ದಿತು. ಆದರೆ ಆನೆಯ ಮೇಲೆ ಕುಳಿತಿದ್ದ ಪರ್ವತಪ್ರದೇಶದ ರಥಿಯ ಶರಗಳಿಂದ ಪ್ರಹೃತನಾಗಿ ದುರ್ಜಯ ಕ್ರಾಥಾಧಿಪನು ಕುದುರೆ-ಸಾರಥಿ-ಧನುಸ್ಸು-ಧ್ವಜಗಳೊಡನೆ ಚಂಡಮಾರುತಕ್ಕೆ ಸಿಲುಕಿದ ಮಹಾವೃಕ್ಷದಂತೆ ಕೆಳಗುರುಳಿ ಬಿದ್ದನು.

ಆಗ ವೃಕನು ಆ ಆನೆಯ ಮೇಲೆ ಕುಳಿತಿದ್ದ ಗಿರಿರಾಜವಾಸಿಯನ್ನು ಹನ್ನೆರಡು ಬಾಣಗಳಿಂದ ಜೋರಾಗಿ ಪ್ರಹರಿಸಿದನು. ಆದರೆ ಆ ಅನೆಯು ತನ್ನ ನಾಲ್ಕೂ ಕಾಲುಗಳಿಂದ ಮಹಾವೇಗವುಳ್ಳ ಕುದುರೆ-ರಥಗಳೊಡನೆ ವೃಕನನ್ನು ತುಳಿದು ಧ್ವಂಸಮಾಡಿತು. ಆ ಮಹಾಗಜವು ತನ್ನ ನಿಯಂತ್ರಕನೊಡನೆ ಬಭ್ರುಸುತನ ಬಾಣಗಳಿಂದ ಜೋರಾಗಿ ಹೊಡೆಯಲ್ಪಟ್ಟು ಕೆಳಗುರುಳಿತು. ಮತ್ತು ದೇವಾವೃಧನ ಮಗನು ಸಹದೇವನ ಮಗನಿಂದ ಪ್ರಹರಿಸಲ್ಪಟ್ಟು ಕೆಳಗುರುಳಿದನು. ತನ್ನ

ದಂತಗಳಿಂದಲೇ ಶತ್ರುಗಳ ಶರೀರಗಳನ್ನು ಸಂಹರಿಸಬಲ್ಲ ಆನೆಯೊಂದಿಗೆ ಕುಣಿಂದನ ಮಗನು ಶಕುನಿಯನ್ನು ಸಂಹರಿಸಲು ವೇಗದಿಂದ ಮುಂದಾಗಿ ಅವನನ್ನು ಬಹಳವಾಗಿ ಪೀಡಿಸಿದನು. ಆಗ ಗಾಂಧಾರಪತಿಯು ಅವನ ಶಿರವನ್ನೇ ಅಪಹರಿಸಿದನು. ಆಗ ಶತಾನೀಕನಿಂದ ಹತಗೊಂಡ ಕೌರವರ ಕಡೆಯ ಮಹಾಗಜಗಳು, ಕುದುರೆ-ರಥ-ಪದಾತಿಗಣಗಳು ಗರುಡನ ರೆಕ್ಕೆಗಳ ರಭಸದಿಂದುಂಟಾದ ಚಂಡಮಾರುತಕ್ಕೆ ಸಿಲುಕಿದ ನಾಗಗಳಂತೆ ಪ್ರಾಣಗಳನ್ನು ತೊರೆದು ತುಂಡು-ತುಂಡುಗಳಾಗಿ ನೆಲದಮೇಲೆ ಬೀಳುತ್ತಿದ್ದವು. ಆಗ ಕುಣಿಂದಪುತ್ರನು ನಸುನಗುತ್ತಾ ನಕುಲಾತ್ಮಜನನ್ನು ಅನೇಕ ನಿಶಿತ ಶರಗಳಿಂದ ಬಹಳವಾಗಿ ಗಾಯಗೊಳಿಸಿದನು. ಆಗ ನಾಕುಲಿಯು ಕ್ಷುರದಿಂದ ಕಮಲದಂತಿದ್ದ ಅವನ ಮುಖವನ್ನು ಶರೀರದಿಂದ ಬೇರ್ಪಡಿಸಿದನು. ಕರ್ಣಸುತನು ಶತಾನೀಕನನ್ನು ಮೂರು ಆಶುಗಗಳಿಂದ, ಅರ್ಜುನನನ್ನು ಮೂರರಿಂದ, ಭೀಮನನ್ನು ಮೂರರಿಂದ, ನಕುಲನನ್ನು ಏಳರಿಂದ ಮತ್ತು ಜನಾರ್ದನನನ್ನು ಹನ್ನೆರಡು ಸಾಯಕಗಳಿಂದ ಹೊಡೆದನು. ಅವನ ಆ ಅತಿಮನುಷ್ಯಕರ್ಮವನ್ನು ನೋಡಿ ಹೃಷ್ಟರಾದ ಕುರುಗಳು ಅವನನ್ನು ಗೌರವಿಸಿದರು. ಆದರೆ ಧನಂಜಯನ ಪರಾಕ್ರಮವನ್ನು ತಿಳಿದಿದ್ದವರು ಇವನು ಈಗ ಅಗ್ನಿಯಲ್ಲಿ ಹುತನಾಗಿಹೋದನೆಂದೇ ಭಾವಿಸಿದರು.

ಆಗ ಪರವೀರಘಾತೀ ಕಿರೀಟಿಯು ಕುದುರೆಗಳನ್ನು ಸಂಹರಿಸಿದ್ದ ಆ ನರಪ್ರವೀರನನ್ನು ನೋಡಿ ವೃಷಸೇನನನ್ನು ಆಕ್ರಮಣಿಸಿದನು. ಆಗ ಅವನು ಸೂತಜ ಕರ್ಣನ ಮುಂದಿದ್ದನು. ಮಹಾಹವದಲ್ಲಿ ಆಕ್ರಮಣಿಸುತ್ತಿದ್ದ ಆ ಉಗ್ರನರವೀರ, ಸಹಸ್ರಬಾಣಧಾರಿ ಅರ್ಜುನನನ್ನು ಮಹಾರಥ ಕರ್ಣಸುತನು ಹಿಂದೆ ಇಂದ್ರನು ನಮುಚಿಯನ್ನು ಹೇಗೋ ಹಾಗೆ ಎದುರಿಸಿದನು. ಆಗ ಸೂತಪುತ್ರನ ಆ ಮಹಾನುಭಾವ ಪುತ್ರನು ಅದ್ಭುತವಾಗಿ ಪಾರ್ಥನನ್ನು ಒಂದು ನೂರು ಬಾಣಗಳಿಂದ ಹೊಡೆದು ಹಿಂದೆ ಶಕ್ರನನ್ನು ಹೊಡೆದ ನಮುಚಿಯಂತೆ ಸಿಂಹನಾದಗೈದನು. ವೃಷಸೇನನು ಪುನಃ ಉಗ್ರ ಬಾಣಗಳಿಂದ ಪಾರ್ಥನ ಭುಜಮೂಲದ ಮಧ್ಯಕ್ಕೆ ಹೊಡೆದು ಹಾಗೆಯೇ ಒಂಭತ್ತು ಶಿತಾಗ್ರ ಬಾಣಗಳಿಂದ ಕೃಷ್ಣನನ್ನೂ ಪುನಃ ಹತ್ತರಿಂದ ಪಾರ್ಥನನ್ನೂ ಹೊಡೆದನು. ಆಗ ರಣಮೂರ್ಧನಿಯಲ್ಲಿ ಕಿರೀಟಿಯು ಕೋಪದಿಂದ ಹಣೆಯಲ್ಲಿ ಮೂರು ಗೆರೆಗಳುಂಟಾಗುವಂತೆ ಹುಬ್ಬನ್ನು ಗಂಟಿಕ್ಕಿ ಸೂತಪುತ್ರನನ್ನು ವಧಿಸಲು ವಿಶಿಖ ಬಾಣಗಳನ್ನು ಪ್ರಯೋಗಿಸಿದನು. ಕಿರೀಟಿಯು ಹತ್ತು ಪೃಷತ್ಕಗಳಿಂದ ವೃಷಸೇನನ ಮರ್ಮಸ್ಥಳಕ್ಕೆ ಜೋರಾಗಿ ಹೊಡೆದು, ಉಗ್ರವಾದ ನಾಲ್ಕು ಕ್ಷುರಗಳಿಂದ ಅವನ ಧನುಸ್ಸನ್ನೂ, ಎರಡು ಭುಜಗಳನ್ನೂ ಮತ್ತು ಶಿರಸ್ಸನ್ನೂ ಕತ್ತರಿಸಿದನು. ಪಾರ್ಥನ ಬಾಣಗಳಿಂದ ಹೊಡೆಯಲ್ಪಟ್ಟ ವೃಷಸೇನನು ಹೂಬಿಟ್ಟ

ಎಲೆಗಳಿಂದ ತುಂಬಿದ್ದ ವಿಶಾಲವಾದ ಶಾಲವೃಕ್ಷವು ಭಿರುಗಾಳಿಗೆ ಸಿಲುಕಿ ಪರ್ವತಶಿಖರದ ಮೇಲಿಂದ ಬೀಳುವಂತೆ ರಥದಿಂದ ಬಾಹು-ಶಿರಗಳನ್ನು ಕಳೆದುಕೊಂಡು ಭೂಮಿಯಮೇಲೆ ಬಿದ್ದನು.

ಬಾಣದಿಂದ ಹತನಾಗಿ ರಥದಿಂದ ಕೆಳಕ್ಕೆ ಬಿದ್ದ ಮಗನನ್ನು ನೋಡಿ ಕ್ಷಿಪ್ರಕಾರೀ ಸೂತಜ ಕರ್ಣನು ಪುತ್ರವಧೆಯಿಂದ ಪರಿತಪಿಸುತ್ತಾ ವೇಗದಿಂದ ತನ್ನ ರಥದಲ್ಲಿ ಕಿರೀಟಿಯ ರಥದ ಬಳಿ ಧಾವಿಸಿದನು.

# ಹದಿನೇಳನೇ ದಿನದ ಯುದ್ಧ: ಕರ್ಣವಧೆ

ವೃಷಸೇನನು ಹತನಾದುದನ್ನು ಕಂಡು ಕೂಡಲೇ ಶೋಕ-ಕೋಪ ಸಮನ್ವಿತನಾದ ಕರ್ಣನು ಎರಡೂ ಕಣ್ಣುಗಳಿಂದ ಶೋಕೋದ್ಭವ ಕಣ್ಣೀರನ್ನು ಸುರಿಸಿದನು. ಕೋಪದಿಂದ ರಕ್ತಾಕ್ಷನಾಗಿದ್ದ ತೇಜಸ್ವಿ ಕರ್ಣನು ರಥದಲ್ಲಿ ಕುಳಿತು ಶತ್ರುಗಳ ಅಭಿಮುಖವಾಗಿ ತೆರಳಿ ಧನಂಜಯನನ್ನು ಯುದ್ಧಕ್ಕೆ ಆಹ್ವಾನಿಸಿದನು. ವ್ಯಾಘ್ರಚರ್ಮ ಆಚ್ಛಾದಿತ ಸೂರ್ಯಸಂಕಾಶ ರಥಗಳಲ್ಲಿ ಕುಳಿತಿದ್ದ ಅವರಿಬ್ಬರೂ ಎದುರುಬದಿರಾಗಿರುವ ಎರಡು ಸೂರ್ಯರಂತೆ ಕಂಡರು. ಶ್ವೇತಾಶ್ವರಾಗಿದ್ದ ಅವರಿಬ್ಬರು ಪುರುಷಾದಿತ್ಯ ಅರಿಮರ್ದನ ಮಹಾತ್ಮರು ದಿವಿಯಲ್ಲಿ ಚಂದ್ರ-ಆದಿತ್ಯರಂತೆ ಶೋಭಿಸಿದರು.

ಅವರಿಬ್ಬರನ್ನು ನೋಡಿ ಸರ್ವಭೂತಗಳೂ ಇಂದ್ರ ವೈರೋಚರು ತ್ರೈಲೋಕ್ಯವಿಜಯಕ್ಕೆ ನಿಂತಿದ್ದಾಗ ಹೇಗೋ ಹಾಗೆ ವಿಸ್ಮಿತರಾದರು. ರಥಘೋಷಗಳಿಂದಲೂ, ಮೌರ್ವಿಗಳ ಟೇಂಕಾರಗಳಿಂದಲೂ, ಚಪ್ಪಳೆಯ ಶಬ್ಧಗಳಿಂದಲೂ, ಬಾಣಗಳ ಸೀತ್ಕಾರಗಳಿಂದಲೂ, ಶಂಖಗಳ ಶಬ್ಧಗಳಿಂದಲೂ ಕಿರೀಟಿಯ ವಾನರಧ್ವಜ ಮತ್ತು ಕರ್ಣನ ಆನೆಯ ಹಗ್ಗದ ಚಿಹ್ನೆಯ ಧ್ವಜಗಳ ಎರಡು ರಥಗಳೂ ಯುದ್ಧದಲ್ಲಿ ಸಂಸಕ್ತವಾದುದನ್ನು ನೋಡಿ ಮಹೀಕ್ಷಿತರು ವಿಸ್ಮಿತನಾದರು. ಆ ಎರಡು ಮಹಾರಥರೂ ಒಂದೆಡೆಯಲ್ಲಿ ಯುದ್ಧಮಾಡಲು ತೊಡಗಿದುದನ್ನು ನೋಡಿ ಪಾರ್ಥಿವರು ಸಿಂಹನಾದಗೈದರು ಮತ್ತು ಪುಷ್ಕಲವಾಗಿ "ಸಾಧು ! ಸಾಧು !" ಎಂದು ಘೋಷಿಸಿದರು. ಅವರಿಬ್ಬರು ದ್ವೈರಥಯುದ್ಧದಲ್ಲಿ ತೊಡಗಿದ್ದಾರೆಂದು ಕೇಳಿದ ಯೋಧರು ಎಲ್ಲಕಡೆಗಳಿಂದ ಬಂದು ಭುಜಗಳನ್ನು ತಟ್ಟಿಕೊಳ್ಳುತ್ತಾ ಅಂಗವಸ್ತ್ರಗಳನ್ನು ಹಾರಿಸಿ ಮಹಾ ತುಮುಲಶಬ್ಧವನ್ನುಂಟುಮಾಡಿದರು. ಕರ್ಣನಿಗೆ ಹರ್ಷವನ್ನುಂಟುಮಾಡಲು ಅಲ್ಲಿಗೆ ಕುರುಗಳು ವಾದ್ಯಗಳಿಂದ ಕೂಡಿಕೊಂಡು ಬಂದು ಪುಷ್ಕಲವಾಗಿ ಶಂಖಗಳನ್ನೂದಿದರು. ಹಾಗೆಯೇ ಪಾಂಡವರೆಲ್ಲರೂ ಧನಂಜಯನನ್ನು ಹರ್ಷಗೊಳಿಸಲು ತೂರ್ಯ ಶಂಖನಿನಾದಗಳಿಂದ ಎಲ್ಲ ದಿಕ್ಕುಗಳನ್ನೂ ಮೊಳಗಿಸಿದರು. ಕರ್ಣಾರ್ಜುನರ ಆ ಸಮಾಗಮದಲ್ಲಿ ವೀರರ ಸಿಂಹನಾದ, ಚಪಾಳೆ

ಮತ್ತು ಕೂಗಾಟಗಳಿಂದ ಸರ್ವತ್ರ ಕೋಲಾಹಲವುಂಟಾಯಿತು.

ರಥಸ್ಥರಾಗಿದ್ದ ಮಹಾಚಾಪ-ಶರ-ಶಕ್ತಿ-ಗದಾಯುಧಗಳನ್ನು ಹಿಡಿದ ಆ ರಥಿಗಳಲ್ಲಿ ಶ್ರೇಷ್ಠ ಪುರುಷವ್ಯಾಘ್ರರಿಬ್ಬರನ್ನು, ಕವಚಗಳನ್ನು ಧರಿಸಿದ್ದ, ಖಡ್ಗಗಳನ್ನು ಕಟ್ಟಿಕೊಂಡಿದ್ದ, ಶ್ವೇತಾಶ್ವರಾದ, ಶಂಖಗಳಿಂದ ಸುಶೋಭಿತರಾಗಿದ್ದ, ಶ್ರೇಷ್ಠ ಬತ್ತಳಿಕೆಗಳಿಂದ ಸಂಪನ್ನರಾಗಿದ್ದ, ಸುಂದರರಾಗಿ ಕಾಣುತ್ತಿದ್ದ ಅವರಿಬ್ಬರನ್ನೂ, ಕೆಂಪಾದ ರಕ್ತದಿಂದ ಲೇಪಿತರಾಗಿದ್ದ, ಮದಿಸಿದ ಹೋರಿಗಳಂತಿದ್ದ, ಸರ್ಪದ ವಿಷದಂತೆ ಪ್ರಖರರಾಗಿದ್ದ, ಕಾಲಾಂತಕ ಯಮರಂತಿದ್ದ, ಇಂದ್ರ-ವೃತ್ರರಂತೆ ಕ್ರುದ್ಧರಾಗಿದ್ದ, ಸೂರ್ಯಚಂದ್ರರ ಸಮಪ್ರಭೆಯುಳ್ಳ, ಯುಗಾಂತದಲ್ಲಿ ಕೂಡಿಕೊಳ್ಳುವ ಕ್ರೂರ ಮಹಾಗ್ರಹಗಳಂತಿದ್ದ, ದೇವಗರ್ಭರಾದ, ದೇವಸಮರಾದ, ರೂಪದಲ್ಲಿ ದೇವತುಲ್ಯರಾದ, ಸಮೇತರಾಗಿದ್ದ ಪುರುಷವ್ಯಾಘ್ರರಾದ ಕರ್ಣ-ಧನಂಜಯರನ್ನು ನೋಡಿ ವಿಸ್ಮಿತರಾದರು. ಇಬ್ಬರೂ ಶ್ರೇಷ್ಠ ಅಯುಧಗಳನ್ನು ಧರಿಸಿದ್ದರು. ಇಬ್ಬರೂ ಯುದ್ಧಮಾಡಿ ಬಳಲಿದ್ದರು, ಇಬ್ಬರೂ ಬಾಹುಶಬ್ಧಗಳಿಂದ ನಭಸ್ತಲವನ್ನು ಮೊಳಗಿಸುತ್ತಿದ್ದರು. ಇಬ್ಬರೂ ಬಲ ಮತ್ತು ಪೌರುಷ ಕರ್ಮಗಳಲ್ಲಿ ವಿಶ್ರುತರಾಗಿದ್ದರು. ಇಬ್ಬರೂ ಯುದ್ಧದಲ್ಲಿ ಶಂಬರ ಮತ್ತು ಅಮರರಾಜರಂತೆ ಕಾಣುತ್ತಿದ್ದರು. ಇಬ್ಬರೂ ಯುದ್ಧದಲ್ಲಿ

ಕಾರ್ತವೀರ್ಯನ ಮತ್ತು ದಾಶರಥಿಯ ಸಮನಾಗಿದ್ದರು. ಇಬ್ಬರೂ ವೀರ್ಯದಲ್ಲಿ ವಿಷ್ಣುವಿನ ಸಮನಾಗಿದ್ದರು ಮತ್ತು ಯುದ್ಧದಲ್ಲಿ ಭವನ ಸಮನಾಗಿದ್ದರು. ಇಬ್ಬರ ಕುದುರೆಗಳೂ ಶ್ವೇತವರ್ಣದ್ದಾಗಿದ್ದವು. ರಥಗಳು ಶ್ರೇಷ್ಠವಾಗಿದ್ದವು. ಅವರಿಬ್ಬರ ಸಾರಥಿಗಳೂ ಮಹಾಬಲಶಾಲಿಗಳು ಮತ್ತು ಪ್ರಮುಖರಾಗಿದ್ದರು. ವಿರಾಜಿಸುತ್ತಿರುವ ಆ ಮಹಾರಥರನ್ನು ಕಂಡು ಸಿದ್ಧಚಾರಣಸಂಘಗಳಿಗೆ ವಿಸ್ಮಯವುಂಟಾಯಿತು.

ಆಗ ಬೇಗನೇ ಸೇನೆಗಳೊಂದಿಗೆ ಧಾರ್ತರಾಷ್ಟ್ರರು ಕರ್ಣನನ್ನು ಸುತ್ತುವರೆದರು. ಹಾಗೆಯೇ ಧೃಷ್ಟದ್ಯುಮ್ನಪುರೋಗಮ ಪಾಂಡವರು ಹೃಷ್ಟರಾಗಿ ಪಾರ್ಥನನ್ನು ಸುತ್ತುವರೆದರು. ರಣವೆಂಬ ಜೂಜಿನಲ್ಲಿ ಕೌರವರಿಗೆ ಕರ್ಣನು ಪಣವಾದನು. ಹಾಗೆಯೇ ಯುದ್ಧದಲ್ಲಿ ಪಾಂಡವೇಯರಿಗೆ ಪಾರ್ಥನು ಪಣವಾದನು. ಅಂದು ಸಭಾಸದರಾಗಿ ಯಾರಿದ್ದರೋ ಅವರೇ ಇಂದು ಪ್ರೇಕ್ಷಕರಾಗಿದ್ದರು. ಪಣವನ್ನಿಟ್ಟಿದ್ದ ಅವರಲ್ಲಿ ಒಬ್ಬರಿಗೆ ಜಯ ಮತ್ತು ಇನ್ನೊಬ್ಬರಿಗೆ ಪರಾಜಯವು ನಿಶ್ಚಯವಾಗಿತ್ತು. ರಣಮೂರ್ಧನಿಯಲ್ಲಿ ನಿಂತಿರುವ ಕೌರವರು ಮತ್ತು ಪಾಂಡವರ ನಡುವೆ ಅವರಿಬ್ಬರ ವಿಜಯ ಅಥವಾ ಪರಾಜಯದ ಕುರಿತಾದ ದ್ಯೂತವು ಪ್ರಾರಂಭವಾಯಿತು. ಆ ಇಬ್ಬರು

ಯುದ್ಧಶಾಲಿಗಳೂ ಅನ್ಯೋನ್ಯರೊಡನೆ ಕುಪಿತರಾಗಿ ಅನ್ಯೋನ್ಯರನ್ನು ಜಯಿಸಲು ಬಯಸಿ ಎದುರಾಳಿಗಳಾಗಿ ನಿಂತಿದ್ದರು. ಇಂದ್ರ-ವೃತ್ರರಂತೆ ಅವರಿಬ್ಬರೂ ಅನ್ಯೋನ್ಯರನ್ನು ಪ್ರಹರಿಸಲು ಉತ್ಸುಕರಾಗಿದ್ದರು. ಮಹಾಧೂಮಗ್ರಹಗಳಾದ ರಾಹು-ಕೇತುಗಳಂತೆ ಭಯಂಕರ ರೂಪಗಳನ್ನು ತಳೆದಿದ್ದರು.

ಆಗ ಅಂತರಿಕ್ಷದಲ್ಲಿದ್ದವರಲ್ಲಿ ಕರ್ಣಾರ್ಜುನರಲ್ಲಿ ಯಾರು ವಿಜಯಿಗಳಾಗುವರೆನ್ನುವ ವಿಷಯದಲ್ಲಿ ವಿವಾದಗಳೂ ಭಿನ್ನಾಭಿಪ್ರಾಯಗಳೂ ಉಂಟಾಗಲು ಅವರ ಭಿನ್ನ ಅಭಿಪ್ರಾಯದ ಮಾತುಗಳೂ ಸರ್ವಲೋಕಗಳಿಗೂ ಸರ್ವ ದಿಕ್ಕುಗಳಲ್ಲಿಯೂ ಕೇಳಿಬರುತ್ತಿತ್ತು. ಕರ್ಣಾರ್ಜುನರ ಆ ಸಮಾಗಮದಲ್ಲಿ ದೇವ-ದಾನವ-ಗಂಧರ್ವರೂ ಪಿಶಾಚ-ಉರಗ-ರಾಕ್ಷಸರೂ ಒಂದೊಂದು ಪಕ್ಷವನ್ನು ಹಿಡಿದರು. ನಕ್ಷತ್ರಗಳೊಂದಿಗೆ ನಭವು ವ್ಯಗ್ರಳಾಗಿ ಕರ್ಣನ ಪಕ್ಷವನ್ನು ವಹಿಸಿದಳು. ಮಾತೆಯಂತಿದ್ದ ವಿಶಾಲ ಭೂಮಿಯು ಮಗ ಪಾರ್ಥನ ಪಕ್ಷವನ್ನು ವಹಿಸಿದಳು. ಸಾಗರ-ಸರಿತ್ತುಗಳೂ, ಗಿರಿಗಳೂ, ವೃಕ್ಷ-ಔಷಧಗಳೂ ಕಿರೀಟಿಯನ್ನು ಆಶ್ರಯಿಸಿದವು. ಅಸುರರೂ, ಯಾತುಧಾನರೂ, ಗುಹ್ಯಕರೂ, ಖೇಚರರೂ, ಪಕ್ಷಿಗಳೂ ಕರ್ಣನ ಪಕ್ಷವನ್ನು ಸೇರಿದರು. ರತ್ನಗಣಿಗಳು, ಸರ್ವ ವೇದ-ಆಖ್ಯಾನ-

ಪಂಚಮಗಳೂ, ರಹಸ್ಯಗಳು ಮತ್ತು ಸಂಗ್ರಹಗಳೊಂದಿಗೆ ಸಮಸ್ತ ವೇದ-ಉಪನಿಷತ್ತುಗಳೂ, ವಾಸುಕಿ, ಚಿತ್ರಸೇನ, ತಕ್ಷಕ, ಉಪತಕ್ಷಕ, ಪರ್ವತಗಳು, ಕದ್ರುವಿನ ಸರ್ಪ ಪೀಳಿಗೆಗಳು, ಮಹಾರೋಷವುಳ್ಳ ವಿಷಯುಕ್ತ ನಾಗಗಳು ಅರ್ಜುನನ ಪಕ್ಷವನ್ನು ಸೇರಿದವು. ಐರಾವತರು, ಸೌರಭೇಯರು, ಹೆಡೆಗಳುಳ್ಳ ವೈಶಾಲೇಯರು ಅರ್ಜುನನ ಪಕ್ಷದವರಾದರು. ಕ್ಷುದ್ರ ಸರ್ಪಗಳು ಕರ್ಣನ ಪಕ್ಷಕ್ಕೆ ಸೇರಿದವು. ಮಹಾಮೃಗಗಳು, ವ್ಯಾಲಮೃಗಗಳು, ಮಂಗಳಸೂಚಕ ಮೃಗಳು, ಪಕ್ಷಿಗಳು ಎಲ್ಲವೂ ಪಾರ್ಥನ ವಿಜಯವನ್ನು ಬಯಸಿ ಅವನ ಪಕ್ಷವನ್ನೇ ಸೇರಿದವು. ವಸುಗಳು, ಮರುತರು, ಸಾಧ್ಯರು, ರುದ್ರರು, ವಿಶ್ವೇದೇವರು, ಅಶ್ವಿನಿಗಳು, ಅಗ್ನಿ-ಇಂದ್ರರು, ಸೋಮ, ಪವನ ಮತ್ತು ಹತ್ತು ದಿಕ್ಕುಗಳು ಧನಂಜಯನ ಪಕ್ಷವನ್ನು ಸೇರಿದರು. ಆದರೆ ಆದಿತ್ಯರು ಕರ್ಣನ ಪಕ್ಷದವರಾದರು. ಪಿತೃಗಳೊಂದಿಗೆ ದೇವತೆಗಳು ಗಣಗಳೊಂದಿಗೆ ಅರ್ಜುನನ ಕಡೆಯವರಾದರು. ಯಮ, ವೈಶ್ರವಣ, ವರುಣರೂ ಅರ್ಜುನನ ಕಡೆಯವರಾದರು. ದೇವ-ಬ್ರಹ್ಮರ್ಷಿ-ನೃಪರ್ಷಿಗಣಗಳು ಪಾಂಡವನ ಕಡೆಯಾಯಿತು. ಹಾಗೆಯೇ ತುಂಬುರು ಪ್ರಮುಖ ಗಂಧರ್ವರೂ, ಮೌನೇಯರೊಂದಿಗೆ ಪ್ರಾವೇಯರೂ, ಗಂಧರ್ವಾಪ್ಸರ ಗಣಗಳೂ ಅರ್ಜುನನ ಕಡೆಯವರಾದರು.

ತೋಳಗಳೊಂದಿಗೆ ಹುಲಿಯೇ ಮೊದಲಾದ ದುಷ್ಟಪ್ರಾಣಿಗಳೂ, ರಥ-ಪದಾತಿಗಳೂ, ಮೇಘ-ವಾಯುಗಳನ್ನು ವಾಹನವನ್ನಾಗಿಸಿಕೊಂಡ ಮನೀಷಿಗಳೂ ಕರ್ಣಾರ್ಜುನರ ಆ ಸಮಾಗಮವನ್ನು ನೋಡಲು ಸೇರಿದರು. ದೇವ-ದಾನವ-ಗಂಧರ್ವರೂ, ನಾಗ-ಯಕ್ಷ-ಪಕ್ಷಿಗಳೂ, ವೇದವಿದ ಮಹರ್ಷಿಗಳೂ, ಸ್ವಧಾಭುಜ ಪಿತೃಗಳು, ನಾನಾರೂಪಗಳಲ್ಲಿದ್ದ ತಪಸ್ಸು, ವಿದ್ಯೆ, ಔಷಧಿಗಳೂ ಅಂತರಿಕ್ಷದಲ್ಲಿ ನೆರೆದು ಆನಂದಿಸುತ್ತಿದ್ದರು. ಬ್ರಹ್ಮರ್ಷಿಗಳೊಡನೆ ಪ್ರಜಾಪತಿ ಬ್ರಹ್ಮನು ಭವನೊಂದಿಗೆ ದಿವ್ಯ ಯಾನದಲ್ಲಿ ಆ ಪ್ರದೇಶಕ್ಕೆ ಆಗಮಿಸಿದನು. ಸ್ವಯಂಭು ಪ್ರಜಾಪತಿಯು ಬಂದುದನ್ನು ನೋಡಿ ದೇವತೆಗಳು

> “ದೇವ! ನಿನಗೆ ನಮಸ್ಕಾರ! ಈ ಎಬ್ಬರು ನರಸಿಂಹರಲ್ಲಿ
> ವಿಜಯವು ಸಮನಾಗಿರಲಿ!’

ಎನ್ನಲು ಅದನ್ನು ಕೇಳಿದ ಮಘವನು ಪಿತಾಮಹನಿಗೆ ನಮಸ್ಕರಿಸಿ

> “ಕರ್ಣಾರ್ಜುನರ ವಿನಾಶದಿಂದ ಅಖಿಲ ಜಗತ್ತನ್ನೂ
> ನಾಶಪಡಿಸದಿರು! ಸ್ವಯಂಭೋ! ನಿನಗೆ ನಮಸ್ಕಾರ!
> ಇವರಿಬ್ಬರ ವಿಜಯವೂ ಸಮವಾಗಿರಲಿ ಎಂದು ಹೇಳು!
> ನೀನು ಹೇಳಿದಂತೆಯೇ ಆಗಲಿ. ನಿನಗೆ ನಮಸ್ಕಾರ! ಭಗವನ್!
> ನನ್ನ ಮೇಲೆ ಪ್ರಸೀದನಾಗು!”

ಆಗ ಬ್ರಹ್ಮೇಶನು ತ್ರಿದಶೇಶ್ವರನಿಗೆ ಈ ಮಾತನ್ನಾಡಿದನು:

“ಮಹಾತ್ಮ ವಿಜಯನಿಗೇ ವಿಜಯವೆನ್ನುವುದು ನಿಶ್ಚಿತವಾದುದು. ಅವನು ಮನಸ್ವಿ. ಬಲಶಾಲಿ. ಶೂರ. ಅಸ್ತ್ರಗಳನ್ನು ಕಲಿತಿದ್ದಾನೆ ಮತ್ತು ತಪೋಧನನು. ಆ ಮಹಾತೇಜಸ್ವಿಯು ಧನುರ್ವೇದವನ್ನು ಸಂಪೂರ್ಣವಾಗಿ ಧರಿಸಿದ್ದಾನೆ. ಈ ಮಹಾತ್ಮನು ದೈವವನ್ನೂ ಅತಿಕ್ರಮಿಸಬಲ್ಲನು. ಇವನೇನಾದರೂ ದೈವವನ್ನು ಅತಿಕ್ರಮಿಸಿದರೆ ಲೋಕಗಳ ನಾಶವು ನಿಶ್ಚಿತವಾಗುತ್ತದೆ. ಈ ಕೃಷ್ಣರಿಬ್ಬರು ಕ್ರುದ್ಧರಾದರೆ ಲೋಕದಲ್ಲಿ ಯಾವ ವ್ಯವಸ್ಥೆಯೂ ಉಳಿಯುವುದಿಲ್ಲ. ಶೋಭಿಸುತ್ತಿರುವ ಇವರಿಬ್ಬರು ಪುರುಷರ್ಷಭರೂ ಸತತವಾಗಿ ಸೃಷ್ಟಿಸುತ್ತಿರುತ್ತಾರೆ. ಇವರು ಪುರಾಣರಾದ ನರನಾರಾಯಣ ಋಷಿಸತ್ತಮರು. ಇವರು ಯಾರ ನಿಯಂತ್ರಣಕ್ಕೂ ಒಳಪಡದವರು. ನಿರ್ಭೀತರಾದ ಈ ಪರಂತಪರು ಎಲ್ಲವನ್ನೂ ನಿಯಂತ್ರಿಸುವವರು. ವೀರ ಕರ್ಣನು ಮುಖ್ಯ ಲೋಕಗಳಿಗೆ ಹೋಗಲಿ. ಅವನು ಭೀಷ್ಮನೊಂದಿಗೆ ವಸುಗಳ ಲೋಕಕ್ಕಾಗಲೀ ಅಥವಾ ದ್ರೋಣನೊಂದಿಗೆ ಮರುತರ ಲೋಕಕ್ಕಾಗಲೀ ಹೋಗಲಿ ಅಥವಾ

ನಾಕಲೋಕಾಗಲೀ ಹೋಗಲಿ! ಆದರೆ ವಿಜಯವು ಕೃಷ್ಣರಿಬ್ಬರದಾಗುತ್ತದೆ.”

ದೇವದೇವರಿಬ್ಬರೂ ಇದನ್ನು ಹೇಳಲು ಸಹಸ್ರಾಕ್ಷನು ಸರ್ವಭೂತಗಳನ್ನೂ ಆಮಂತ್ರಿಸಿ ಹೇಳಿದನು:

“ಬ್ರಹ್ಮ-ಈಶಾನರ ಶಾಸನಗಳನ್ನು ನೀವು ಕೇಳಿದಿರಿ. ಜಗತ್ತಿನ ಹಿತಕ್ಕಾಗಿ ಈ ಭಗವಂತರಿಬ್ಬರೂ ಹೇಳಿದಂತೆಯೇ ಆಗುತ್ತದೆ. ಅದಲ್ಲದೇ ಬೇರೆ ಆಗುವುದೇ ಇಲ್ಲ. ಆದುದರಿಂದ ನೀವು ನಿಶ್ಚಿಂತರಾಗಿರಿ!”

ಇಂದ್ರನ ಈ ಮಾತನ್ನು ಕೇಳಿ ಸರ್ವಭೂತಗಳೂ ವಿಸ್ಮಿತರಾಗಿ ಕೃಷ್ಣಾರ್ಜುನರನ್ನು ಪೂಜಿಸತೊಡಗಿದವು. ದೇವತೆಗಳು ಅವರ ಮೇಲೆ ಸುಗಂಧದ್ರವ್ಯಗಳನ್ನೆರಚಿದರು. ನಾನಾರೂಪದ ಪುಷ್ಪವೃಷ್ಟಿಯನ್ನು ಸುರಿಸಿದರು. ದೇವತೂರ್ಯಗಳನ್ನು ಬಾರಿಸಿದರು. ಮಹಾರಥಿಗಳಾದ, ಶ್ವೇತಹಯರಾದ, ಯುಕ್ತಕೇತುಗಳಾಗಿದ್ದ, ಮಹಾಸ್ವನರಾಗಿದ್ದ ಆ ಇಬ್ಬರು ನರಸಿಂಹರ ದ್ವೈರಥಯುದ್ಧವನ್ನು ನೋಡಲು ದೇವ-ದಾನವ-ಗಂಧರ್ವರೆಲ್ಲರೂ ನೆರೆದರು. ಅಲ್ಲಿ ಸೇರಿದ್ದ ಲೋಕವೀರರು ಪ್ರತ್ಯೇಕ ಪ್ರತ್ಯೇಕವಾಗಿ ಶಂಖಗಳನ್ನೂದಿದರು. ವೀರರಾದ ವಾಸುದೇವ-ಅರ್ಜುನರೂ, ಕರ್ಣ-ಶಲ್ಯರೂ ಶಂಖಗಳನ್ನೂದಿದರು. ಆಗ ಶಕ್ರ-

ಶಂಬರರಂತೆ ಅನ್ಯೋನ್ಯರೊಡನೆ ಸ್ಪರ್ಧಿಸುತ್ತಿದ್ದ ಆ ವೀರರ ನಡುವೆ ಹೇಡಿಗಳನ್ನು ನಡುಗಿಸಬಲ್ಲ ಯುದ್ಧವು ಪ್ರಾರಂಭವಾಯಿತು.

ಪರಸ್ಪರರರರನ್ನು ಕ್ರೋಧದಿಂದ ನೋಡುತ್ತಿರುವ ಮಹಾಗ್ರಹಗಳಂತೆ ಮಾಲೆಗಳುಳ್ಳ ಅವರ ರಥಗಳ ಮೇಲಿದ್ದ ಎರಡು ಧ್ವಜಗಳು ಶೋಭಿಸಿದವು. ಸರ್ಪದಂತಿದ್ದ ಆನೆಯ ಹಗ್ಗದ ಚಿಹ್ನೆಯುಳ್ಳ, ರತ್ನಸಾರಮಯವಾಗಿದ್ದ, ದೃಢವಾಗಿದ್ದ, ಪುರಂಧರನ ಧನುಸ್ಸಿನಂತಿದ್ದ ಕರ್ಣನ ಧ್ವಜವು ವಿರಾಜಿಸುತ್ತಿತ್ತು. ಪಾರ್ಥನ ಕಪಿಶ್ರೇಷ್ಠನಾದರೋ ಬಾಯಿಕಳೆದು ಕೋರೆದಾಡೆಗಳಿಂದ ಭಯಂಕರನಾಗಿ, ಸೂರ್ಯನು ಹೇಗೋ ಹಾಗೆ ನೋಡಲೂ ಅಸಾಧ್ಯನಾಗಿದ್ದನು. ಗಾಂಡಿವಧನ್ವಿಯ ಧ್ವಜದಲ್ಲಿದ್ದ ಹನುಮಂತನು ಯುದ್ಧಾಭಿಲಾಷಿಯಾಗಿ ಕರ್ಣಧ್ವಜವನ್ನೇರಿ ಜೋರಾಗಿ ಗರ್ಜಿಸಿದನು. ಮಹಾವೇಗದಿಂದ ಹಾರಿ ಆ ಕಪಿಯು ಆನೆಯಕಕ್ಷದ ಧ್ವಜವನ್ನು ಗರುಡನು ಸರ್ಪವನ್ನು ಹೇಗೋ ಹಾಗೆ ಉಗುರುಗಳಿಂದ ಪರಚಿ ಹಲ್ಲುಗಳಿಂದ ಕಚ್ಚಿಹಾಕಲು ಪ್ರಾರಂಭಿಸಿದನು. ಕಿಂಕಿಣಿಗಳನ್ನೇ ಆಭರಣಗಳನ್ನಾಗುಳ್ಳ ಕಾಲಪಾಶದಂತಿದ್ದ ಉಕ್ಕಿನ ಆನೆಯ ಕಕ್ಷವು ಸಂಕ್ರುದ್ಧವಾಗಿ ಮಹಾಕಪಿಯನ್ನು ಆಕ್ರಮಣಿಸಿತು. ಅವರಿಬ್ಬರ ನಡುವೆ ದ್ವೈರಥಯುದ್ಧದ ದ್ಯೂತವು ನಡೆಯುತ್ತಿರಲು ಧ್ವಜಗಳೆರಡು ಮತ್ತು

ಅವರ ಕುದುರೆಗಳು ಕುದುರೆಗಳೊಡನೆ ಹೇಷಾರವ ಮಾಡಿ ಯುದ್ಧಮಾಡುತ್ತಿದ್ದವು. ಪುಂಡರೀಕಾಕ್ಷನು ಶಲ್ಯನನ್ನು ತನ್ನ ಸಾಯಕದಂತಹ ದೃಷ್ಟಿಯಿಂದ ಹೊಡೆಯುತ್ತಿದನು. ಅವನೂ ಕೂಡ ಪುಂಡರೀಕಾಕ್ಷನನ್ನು ಹಾಗೆಯೇ ನೋಡುತ್ತಿದ್ದನು. ಅಲ್ಲಿ ವಾಸುದೇವನೇ ನಯನಸಾಯಕಗಳಿಂದ ಶಲ್ಯನನ್ನು ಗೆದ್ದನು. ಕುಂತೀಪುತ್ರ ಧನಂಜಯನೂ ಕೂಡ ಕರ್ಣನನ್ನು ದೃಷ್ಟಿಯುದ್ಧದಲ್ಲಿ ಗೆದ್ದನು.

ಆಗ ಸೂತಪುತ್ರನು ಮಂದಹಾಸಪೂರ್ವಕವಾಗಿ ಮಾತನಾಡುತ್ತಾ ಹೇಳಿದನು:

> "ಸಖಾ! ರಣದಲ್ಲಿ ಪಾರ್ಥನೇನಾದರೂ ನನ್ನನ್ನು ಸಂಹರಿಸಿದರೆ ಅದರ ನಂತರ ನೀನು ಏನು ಮಾಡುತ್ತೀಯೆ? ಸತ್ಯವನ್ನೇ ನನಗೆ ಹೇಳು!"

ಶಲ್ಯನು ಹೇಳಿದನು:

> "ಕರ್ಣ! ರಣದಲ್ಲಿ ಇಂದು ಶ್ವೇತವಾಹನನು ನಿನ್ನನ್ನು ಸಂಹರಿಸಿದ್ದೇ ಆದರೆ ನಾನು ಏಕರಥನಾಗಿ ಮಾಧವ-ಪಾಂಡವರಿಬ್ಬರನ್ನೂ ಸಂಹರಿಸುತ್ತೇನೆ!"

ಅದೇರೀತಿ ಅರ್ಜುನನೂ ಕೂಡ ಗೋವಿಂದನನ್ನು ಕೇಳಿದನು. ಆಗ

ಜೋರಾಗಿ ನಕ್ಕು ಕೃಷ್ಣನಿಗೆ ಈ ಪರಮವಚನವನ್ನಿತ್ತನು:

> “ದಿವಾಕರನು ತಾನಿರುವ ಸ್ಥಳದಿಂದ ಚ್ಯುತನಾಗಿ ಬೀಳಬಹುದು. ಮಹಾಸಾಗರವು ಬತ್ತಿಹೋಗಬಹುದು. ಅಗ್ನಿಯು ಶೀತಲನಾಗಬಹುದು. ಆದರೆ ಕರ್ಣನು ಧನಂಜಯನನ್ನು ಸಂಹರಿಸಲಾರನು! ಆದರೆ ಲೋಕಸ್ಥಿತಿಯೇ ವ್ಯತ್ಯಾಸಹೊಂದಿ ಹಾಗೇನಾದರೂ ಆಗಿ ಹೋದರೆ ನನ್ನ ಈ ತೋಳುಗಳಿಂದಲೇ ಯುದ್ಧದಲ್ಲಿ ನಾನು ಕರ್ಣನನ್ನೂ ಶಲ್ಯನನ್ನೂ ಸಂಹರಿಸುತ್ತೇನೆ!”

ಕೃಷ್ಣನ ಈ ಮಾತನ್ನು ಕೇಳಿ ನಗುತ್ತಾ ಕಪಿಕೇತನ ಅರ್ಜುನನು ಕೃಷ್ಣನಿಗೆ ಉತ್ತರಿಸಿದನು:

> “ಜನಾರ್ದನ! ಈ ಕರ್ಣ-ಶಲ್ಯರು ನನಗೆ ಕೂಡ ಪರ್ಯಾಪ್ತರಲ್ಲ! ನನ್ನ ಶರಗಳಿಂದ ಇಂದು ಕರ್ಣನು ಶಲ್ಯ, ರಥ, ಕುದುರೆಗಳು, ಪತಾಕೆ, ಧ್ವಜ, ಛತ್ರ, ಕವಚ, ಶಕ್ತಿ-ಶರ-ಕಾರ್ಮುಕಗಳೊಡನೆ ಅನೇಕ ಭಾಗಗಳಾಗಿ ಕತ್ತರಿಸಲ್ಪಡುವುದನ್ನು ನೀನು ನೋಡುವೆಯಂತೆ! ಇಂದು ಇವನನ್ನು ರಥ-ಕುದುರೆ-ಶಕ್ತಿ-ಕವಚ-ಆಯುಧಗಳೊಂದಿಗೆ ನಾಶಪಡಿಸದೇ ಹಿಂದೆ ಇವನು ವೈರದಿಂದ ಕೃಷ್ಣೆಯನ್ನು

> ನೋಡಿ ಹೇಗೆ ನಕ್ಕನೋ ಅದರ ಕೋಪವು ಶಾಂತವಾಗುವುದಿಲ್ಲ! ಗೋವಿಂದ! ಅರಣ್ಯದಲ್ಲಿ ಮದಿಸಿದ ಆನೆಯು ಪುಷ್ಪಿತವಾದ ದೊಡ್ಡ ವೃಕ್ಷವನ್ನು ಮಥಿಸಿಬಿಡುವಂತೆ ಕರ್ಣನನ್ನು ಪುಡಿಪುಡಿ ಮಾಡುವುದನ್ನು ನೀನು ಇಂದು ನೋಡುವಿಯಂತೆ! ಇಂದು ನೀನು ಆ ಮಧುರ ಮಾತುಗಳನ್ನು ಕೇಳುವೆ. ಇಂದು ನೀನು ಅಭಿಮನ್ಯುವಿನ ತಾಯಿಯನ್ನೂ ನಿನ್ನ ತಂದೆಯ ತಂಗಿ ಕುಂತಿಯನ್ನೂ ಪ್ರಹೃಷ್ಟನಾಗಿ ಸಂತವಿಸುತ್ತೀಯೆ! ಇಂದು ನೀನು ಅಮೃತಕಲ್ಪವಾದ ಮಾತುಗಳಿಂದ ಕಣ್ಣೀರುತುಂಬಿದ ಕೃಷ್ಣೆಯನ್ನೂ, ಧರ್ಮರಾಜ ಯುಧಿಷ್ಠಿರನನ್ನೂ ಸಂತವಿಸುತ್ತೀಯೆ!”

ಆಗ ಆಕಾಶದಲ್ಲಿ ದೇವ, ನಾಗ, ಅಸುರ, ಸಿದ್ಧಸಂಘಗಳೂ, ಗಂಧರ್ವ-ಯಕ್ಷ-ಅಪ್ಸರೆಯರ ಸಂಘಗಳೂ, ಬ್ರಹ್ಮರ್ಷಿ-ರಾಜರ್ಷಿ-ಗರುಡರು ಸೇರಿ ವಿಸ್ಮಯರೂಪವನ್ನು ತಾಳಿದ್ದಿತು. ಕಿವಿಗಿಂಪಾಗುವ ನಾನಾವಿಧದ ನಾದಗಳಿಂದಲೂ, ವಾದ್ಯ-ಗೀತ-ಸ್ತ್ರೋತ್ರ-ನೃತ್ಯಗಳಿಂದಲೂ ಅಂತರಿಕ್ಷವೆಲ್ಲವೂ ತುಂಬಿರಲು ಮನುಷ್ಯರೂ ಆಕಾಶದಲ್ಲಿ ನಿಂತಿದ್ದವರೂ ವಿಸ್ಮಯರಾಗಿ ನೋಡುತ್ತಿದ್ದರು. ಆಗ ಪ್ರಹೃಷ್ಟರಾದ

ಕುರು-ಪಾಂಡವ ಯೋಧರು ವಾದ್ಯ, ಶಂಖ ಮತ್ತು ಸಿಂಹನಾದ ಶಬ್ಧಗಳಿಂದ ವಸುಧೆಯನ್ನೂ ದಿಶಗಳನ್ನೂ ಮೊಳಗಿಸಿ, ಶತ್ರುಗಳನ್ನು ಸಂಹರಿಸತೊಡಗಿದರು. ಅನೇಕ ಅಶ್ವ-ಗಜ-ರಥ-ಪದಾತಿ ಸಂಕುಲಗಳಿಂದ ಕೂಡಿದ್ದ, ಖಡ್ಗ-ಶಕ್ತಿ-ಋಷ್ಟಿ-ಬಾಣ ಈ ಆಯುಧಗಳ ಪತನದಿಂದ ದುಃಸ್ಸಹವಾಗಿದ್ದ, ವೀರರಿಂದ ಮತ್ತು ಮೃತದೇಹಗಳಿಂದ ಕೂಡಿದ್ದ ಆ ರಣಾಂಗಣವು ರಕ್ತದಿಂದಾಗಿ ಕೆಂಪಾಗಿ ತೋರುತ್ತಿತ್ತು. ಹಾಗೆ ಶಸ್ತ್ರಭೃತರ ಪರಾಭವವು ಪ್ರಾರಂಭವಾಯಿತು. ಕವಚಧಾರಿಗಳಾಗಿದ್ದ ಧನಂಜಯ-ಆಧಿರಥರು ಸಾಯಕಗಳಿಂದ ದಿಕ್ಕುಗಳನ್ನೂ ಸೈನ್ಯವನ್ನೂ ಮುಸುಕಿ, ನಿಶಿತ ಜಿಹ್ಮಗಗಳಿಂದ ಪರಸ್ಪರರನ್ನು ಮುಚ್ಚಿಬಿಟ್ಟರು. ಆ ಸಾಯಕಗಳಿಂದ ನಿರ್ಮಿತವಾದ ಅಂಧಕಾರದಲ್ಲಿ ನಿನ್ನವರು ಮತ್ತು ಅವರಿಗೆ ಏನೂ ತಿಳಿಯದಂತಾಯಿತು. ಭಯದಲ್ಲಿ ಅವರು ಆ ಇಬ್ಬರು ಮಹಾರಥರ ಆಶ್ರಯವನ್ನೇ ಪಡೆದರು. ಆಕಾಶದಲ್ಲಿ ಅವರಿಬ್ಬರನ್ನೂ ಅನುಮೋದಿಸುತ್ತಿದ್ದರು. ಪೂರ್ವ-ಪಶ್ಚಿಮದ ಗಾಳಿಗಳು ಎದುರಾಗಿ ಪರಸ್ಪರರ ವೇಗವನ್ನು ಕುಂಠಿತಗೊಳಿಸುವಂತೆ ಅವರಿಬ್ಬರು ಪರಸ್ಪರರ ಅಸ್ತ್ರಗಳನ್ನು ಅಸ್ತ್ರಗಳಿಂದ ನಿರಸನಗೊಳಿಸುತ್ತಿದ್ದರು. ಘನಾಂಧಕಾರವನ್ನು ಹೋಗಲಾಡಿಸಲು ಉದಯಿಸುವ ಎರಡು ಸೂರ್ಯರಂತೆ ಅವರು ಅತೀವ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದರು. ಮುನ್ನುಗ್ಗಿ ಹೋಗಬಾರದೆಂದು ಪ್ರೇರಿತರಾದ ನಿನ್ನವರು ಮತ್ತು ಶತ್ರುಗಳ

ಕಡೆಯವರು ಹಿಂದೆ ವಾಸವ-ಶಂಬರರನ್ನು ಸುತ್ತುವರೆದ ಸುರಾಸುರರಂತೆ ಆ ಮಹಾರಥರನ್ನು ಸುತ್ತುವರೆದು ನಿಂತಿದ್ದರು. ಮೃದಂಗ-ಭೇರೀ-ಪಣವಾನಕ ಧ್ವನಿಗಳಿಂದಲೂ, ಶಂಖಗಳ ಧ್ವನಿಗಳಿಂದಲೂ, ಸಿಂಹನಾದಗಳಿಂದಲೂ ಪರಿವೃತರಾಗಿದ್ದ ಆ ಇಬ್ಬರು ನರೋತ್ತಮರು ಗುಡುಗುತ್ತಿರುವ ಮೋಡಗಳ ಮಧ್ಯದಲ್ಲಿರುವ ಶಶಾಂಕ-ಸೂರ್ಯರಿಂದ ಕಾಣುತ್ತಿದ್ದರು. ರಣದಲ್ಲಿ ಮಹಾಧನುರ್ಮಂಡಲಗಳ ಮಧ್ಯದಲ್ಲಿದ್ದ ಸಹಸ್ರಬಾಣಗಳ ಕಿರಣಗಳಿಂದ ಸುವರ್ಚಸರಾಗಿದ್ದ ಆ ಇಬ್ಬರೂ ಸಚರಾಚರ ಜಗದ ಯುಗಾಸ್ತದ ಕಾಲದಲ್ಲಿ ದುಃಸ್ಸಹರಾಗಿರುವ ಎರಡು ಸೂರ್ಯರಂತೆ ಪ್ರಖರರಾಗಿ ಕಾಣುತ್ತಿದ್ದರು. ಅಜೇಯರಾದ, ಅಹಿತರ ಅಂತಕರಾದ, ಪರಸ್ಪರರನ್ನು ಸಂಹರಿಸಲು ಪ್ರಯತ್ನಿಸುತ್ತಿರುವ ಆ ವೀರವರರಾದ ಕರ್ಣಪಾಂಡವರು ಮಹಾಹವದಲ್ಲಿ ಇಂದ್ರ ಮತ್ತು ಜಂಭಾಸುರರಂತೆ ಕಾಣುತ್ತಿದ್ದರು. ಆಗ ಮಹಾಸ್ತ್ರಗಳನ್ನು ಮತ್ತು ಭಯಾನಕ ಬಾಣಗಳನ್ನು ಬಿಡುತ್ತಿದ್ದ ಆ ಮಹಾಧನುರ್ಧರರಿಬ್ಬರೂ ಅಮಿತವಾದ ನರ-ಅಶ್ವ-ಗಜಗಳನ್ನು ಸಂಹರಿಸಿ ಉತ್ತಮ ಬಾಣಗಳಿಂದ ಪರಸ್ಪರರನ್ನು ಆಕ್ರಮಣಿಸಿದರು. ಆ ನರೋತ್ತಮರಿಬ್ಬರ ಶರಗಳಿಂದ ಭಯಪಟ್ಟ ಕುರುಪಾಂಡವ ಸೇನೆಗಳು ಆನೆ-ಪದಾತಿ-ಕುದುರೆ-ರಥಗಳೊಂದಿಗೆ ದಿಕ್ಕಾಪಾಲಾಗಿ ಸಿಂಹದ ಭಯದಿಂದ ವನ್ಯಮೃಗಗಳು ಹೇಗೋ ಹಾಗೆ

ಪಲಾಯನಮಾಡಿದವು.

## ಅಶ್ವತ್ಥಾಮನ ಮಾತು

ಆಗ ದುರ್ಯೋಧನ, ಕೃತವರ್ಮ, ಸೌಬಲ ಶಕುನಿ, ಕೃಪ, ಅಶ್ವತ್ಥಾಮ ಈ ಐವರು ಮಹಾರಥರು ಧನಂಜಯ-ಅಚ್ಯುತರನ್ನು ಶರೀರಾಂತಕ ಶರಗಳಿಂದ ಹೊಡೆದರು. ಅದಕ್ಕೆ ಪ್ರತಿಯಾಗಿ ಧನಂಜಯನು ಶರಗಳಿಂದ ಅವರ ಧನುಸ್ಸುಗಳನ್ನೂ, ಬತ್ತಳಿಕೆಗಳನ್ನೂ, ಕುದುರೆಗಳನ್ನೂ, ಧ್ವಜಗಳನ್ನೂ, ರಥಗಳನ್ನೂ, ಸಾರಥಿಗಳನ್ನೂ ಒಂದೇ ಬಾರಿಗೆ ತುಂಡರಿಸಿ ಕರ್ಣನನ್ನು ಹನ್ನೆರಡು ಉತ್ತಮ ಬಾಣಗಳಿಂದ ಹೊಡೆದನು. ಆಗ ಅರ್ಜುನನನ್ನು ಸಂಹರಿಸಲು ಇಚ್ಛಿಸಿದ ನೂರು ರಥಿಕರೂ, ನೂರು ಗಜಸೈನಿಕರೂ, ಶಕ-ತುಖಾರ-ಯವನ ಮತ್ತು ಕಾಂಬೋಜರ ಶ್ರೇಷ್ಠ ಕುದುರೆಸವಾರರೂ ತ್ವರೆಮಾಡಿ ಅವನನ್ನು ಆಕ್ರಮಣಿಸಿದರು. ಧನಂಜಯನು ತ್ವರೆಮಾಡಿ ಕ್ಷುರಗಳಿಂದ ಅವರ ಶ್ರೇಷ್ಠ ಆಯುಧಗಳನ್ನು ಹಿಡಿದಿದ್ದ ಕೈಗಳೊಂದಿಗೆ ಶಿರಗಳನ್ನು ತುಂಡರಿಸಿದನು. ಕುದುರೆ-ಆನೆ-ರಥಗಳನ್ನೂ, ಯುದ್ಧಮಾಡುತ್ತಿದ್ದ ಶತ್ರುಗಣಗಳನ್ನೂ ಸಂಹರಿಸಿ ನೆಲದಮೇಲೆ ಕೆಡವಿದನು. ಆಗ ಅಂತರಿಕ್ಷದಲ್ಲಿ ಸುರರು ಹರ್ಷಿತರಾಗಿ ಸಾಧು ಸಾಧು ಎಂದು ಉದ್ಗರಿಸಿದರು, ತೂರ್ಯಗಳನ್ನು ಮೊಳಗಿಸಿದರು ಮತ್ತು ಉತ್ತಮ

ಪುಷ್ಪಗಳ ಮಳೆಯನ್ನು ಸುರಿಸಿದರು. ಮಂಗಳವಾದ ಸುಗಂಧಿತ ಗಾಳಿಯು ಬೀಸತೊಡಗಿತು.

ದೇವಮನುಷ್ಯ ಸಾಕ್ಷಿಕವಾದ ಆ ಅದ್ಭುತವನ್ನು ನೋಡಿ ಭೂತಗಳು ವಿಸ್ಮಿತಗೊಂಡವು. ಆದರೆ ಒಂದೇ ಮನಸ್ಸಿನವರಾದ ದುರ್ಯೋಧನ ಮತ್ತು ಸೂತಸುತರು ವ್ಯಥಿತರಾಗಲೂ ಇಲ್ಲ; ಅಚ್ಚರಿಯನ್ನೂ ತೋರ್ಪಡಿಸಲಿಲ್ಲ. ಆಗ ದ್ರೋಣಸುತನು ದುರ್ಯೋಧನನ ಕೈಯನ್ನು ಕೈಯಿಂದ ಒತ್ತಿ ಹಿಡಿತು ಸಾಂತ್ವನಗೊಳಿಸುತ್ತಾ ಇದನ್ನು ಹೇಳಿದನು:

> "ದುರ್ಯೋಧನ! ಪ್ರಸನ್ನನಾಗು! ಪಾಂಡವರೊಡನೆ ಸಂಧಾನಮಾಡಿಕೋ! ವಿರೋಧದಿಂದ ಯಾವ ಪ್ರಯೋಜನವೂ ಇಲ್ಲ. ಈ ಯುದ್ಧಕ್ಕೆ ಧಿಕ್ಕಾರ! ಬ್ರಹ್ಮಸಮ ಮಹಾಸ್ತ್ರವಿದು ಗುರುವು ಹತನಾದನು ಮತ್ತು ಹಾಗೆಯೇ ಭೀಷ್ಮಪ್ರಮುಖರಾದ ನರರ್ಷಭರು ಹತರಾದರು. ನಾನು ಮತ್ತು ನನ್ನ ಸೋದರಮಾವರು ಅವಧ್ಯರು. ಪಾಂಡವರೊಡನೆ ಸೇರಿ, ಚಿರಕಾಲ ರಾಜ್ಯಭಾರಮಾಡು! ನಾನು ಬೇಡವೆಂದರೆ ಧನಂಜಯನು ಯುದ್ಧವನ್ನು ನಿಲ್ಲಿಸುತ್ತಾನೆ. ಜನಾರ್ದನನೂ ಇದಕ್ಕೆ ವಿರೋಧಿಸಲು ಬಯಸುವುದಿಲ್ಲ. ಯುಧಿಷ್ಠಿರನು ಸದಾ ಭೂತಹಿತರತನಾಗಿರುವನು. ವೃಕೋದರ ಮತ್ತು ಯಮಳರು

ಅವನ ಅಧೀನದಲ್ಲಿದ್ದಾರೆ. ನೀನು ಮತ್ತು ಪಾರ್ಥರು ಪರಸ್ಪರರಲ್ಲಿ ಸಂಧಿಮಾಡಿಕೊಂಡರೆ ನಿನ್ನ ಇಚ್ಛೆಯಂತೆ ಪ್ರಜೆಗಳು ಸೌಖ್ಯವನ್ನು ಹೊಂದುತ್ತಾರೆ. ಉಳಿದ ಪಾರ್ಥಿವರು ತಮ್ಮ ತಮ್ಮ ಪುರಗಳಿಗೆ ತೆರಳುತ್ತಾರೆ. ಸೈನಿಕರು ವೈರವನ್ನು ಕಳೆದುಕೊಂಡವರಾಗುತ್ತಾರೆ. ಒಂದು ವೇಳೆ ನೀನು ನನ್ನ ಈ ಮಾತನ್ನು ಕೇಳದೇ ಇದ್ದರೆ ಶತ್ರುಗಳಿಂದ ಯುದ್ಧದಲ್ಲಿ ಹತನಾಗಿ ಪಶ್ಚಾತ್ತಾಪಪಡುವೆ ಎನ್ನುವುದು ನಿಶ್ಚಯ! ಕಿರೀಟಮಾಲಿನಿಯು ಏಕಾಕಿಯಾಗಿ ಏನೆಲ್ಲ ಮಾಡಿದನೋ ಅದನ್ನು ನಿನ್ನೊಂದಿಗೆ ಜಗತ್ತೂ ಕೂಡ ನೋಡಿದೆ! ಇಂಥಹುದನ್ನು ಇಂದ್ರನೂ, ಅಂತಕ ಯಮನೂ, ಪ್ರಚೇತಸ ಬ್ರಹ್ಮನೂ, ಭಗವಾನ್ ಯಕ್ಷರಾಜನೂ ಮಾಡಲಾರರು! ಇದಕ್ಕಿಂತಲೂ ಹೆಚ್ಚಿನ ಗುಣವಂತನಾಗಿದ್ದರೂ ಧನಂಜಯನು ನನ್ನ ಎಲ್ಲ ಮಾತುಗಳನ್ನೂ ಕೇಳುತ್ತಾನೆ. ಅನಂತರ ನಿನ್ನ ಅಭಿಪ್ರಾಯದಂತೆ ಕೂಡ ಮಾಡುತ್ತಾನೆ. ಆದುದರಿಂದ ಜಗತ್ತಿನ ಶಾಂತಿಗಾಗಿ ಪ್ರಸೀದನಾಗು! ನನಗೆ ನಿನ್ನೊಡನೆ ಸದಾ ವಿಶೇಷ ಗೌರವವಿರುವುದರಿಂದ ಮತ್ತು ಪರಮ ಸೌಹಾರ್ದತೆಯಿರುವುದರಿಂದ ನಾನು ನಿನಗೆ ಇದನ್ನು ಹೇಳುತ್ತಿದ್ದೇನೆ. ಒಂದು ವೇಳೆ ನೀನು ಪಾಂಡವರ ವಿಷಯದಲ್ಲಿ

ಪ್ರೀತನಾದರೆ ನಾನು ಕರ್ಣನನ್ನು ಕೂಡ ಯುದ್ಧದಿಂದ ಹಿಂದಿರುಗುವಂತೆ ಮಾಡುತ್ತೇನೆ! ನಾಲ್ಕು ವಿಧದ ಮಿತ್ರತ್ವದ ಕುರಿತು ತಿಳಿದವರು ಹೇಳುತ್ತಾರೆ: ಸಹಜಮಿತ್ರ, ಸಂಧಿಮಾಡಿಕೊಂಡು ಆದ ಮಿತ್ರ, ಧನದಿಂದ ಗಳಿಸಿಕೊಂಡ ಮಿತ್ರ, ಮತ್ತು ಪ್ರತಾಪದಿಂದ ಶರಣಾಗತನನ್ನಾಗಿಸಿಕೊಂಡ ಮಿತ್ರ. ಇವೆಲ್ಲ ಪ್ರಕಾರಗಳಲ್ಲಿ ನೀನು ಪಾಂಡವರ ಮಿತ್ರನಾಗಬಲ್ಲೆ! ನಿಸರ್ಗದತ್ತವಾಗಿ ಅವರು ನಿನ್ನ ಬಾಂಧವರು. ಮತ್ತೆ ಸಂಧಿ ಮಾಡಿಕೊಂಡು ಪುನಃ ನೀನು ಅವರನ್ನು ಸ್ಥಿರರಾದ ಮಿತ್ರರನ್ನಾಗಿ ಪಡೆದುಕೋ! ನೀನು ಪ್ರಸನ್ನನಾಗಿ ಅವರೊಡನೆ ಮಿತ್ರನಾದರೆ ನಿಶ್ಚಯವಾಗಿಯೂ ನೀನು ಜಗತ್ತಿಗೇ ಅನುಪಮ ಹಿತವನ್ನುಂಟುಮಾಡಿದಂತಾಗುತ್ತದೆ!”

ಸುಹೃದನ ಈ ಹಿತ ಮಾತುಗಳನ್ನು ಕೇಳಿ ದುರ್ಯೋಧನನು ಯೋಚನೆಗೊಳಗಾಗಿ, ನಿಟ್ಟುಸಿರು ಬಿಡುತ್ತಾ, ವ್ಯಾಕುಲಗೊಂಡು ಹೇಳಿದನು:

“ಸಖಾ! ನೀನು ಹೇಳಿದುದು ವಾಸ್ತವವೇ ಸರಿ! ಆದರೆ ಇದರಲ್ಲಿ ನನ್ನ ಅಭಿಪ್ರಾಯವೇನೆಂದು ಹೇಳುತ್ತೇನೆ. ಕೇಳು! ಆ

ದುರ್ಮತಿ ವೃಕೋದರನು ದುಃಶಾಸನನನ್ನು ಹುಲಿಯಂತೆ ಎಳೆದುತಂದು ಸಂಹರಿಸಿ ಜೋರಾಗಿ ನಗುತ್ತಾ ಹೇಳಿದುದು ನನ್ನ ಹೃದಯದಲ್ಲಿ ನೆಲೆಸಿಬಿಟ್ಟಿದೆ! ನಿನ್ನ ಪರೋಕ್ಷದಲ್ಲಿ ಅದನ್ನೇನೂ ಹೇಳಲಿಲ್ಲವಲ್ಲ! ಅದನ್ನು ಹೇಗೆ ನಾನು ಶಾಂತಗೊಳಿಸಬಲ್ಲೆ? ಗುರುಪುತ್ರ! ಈ ಸಮಯದಲ್ಲಿ ಕರ್ಣನನ್ನು ಯುದ್ಧದಿಂದ ವಿರಮಿಸುವಂತೆ ಹೇಳುವುದೂ ಉಚಿತವಲ್ಲ. ಇಂದು ಫಲ್ಗುನನು ಶ್ರಮದಿಂದ ಬಹಳವಾಗಿ ಬಳಲಿದ್ದಾನೆ. ಕರ್ಣನು ಬಲಪೂರ್ವಕವಾಗಿ ಅವನನ್ನು ಕೊಲ್ಲುತ್ತಾನೆ!”

ದುರ್ಯೋಧನನು ಅವನಿಗೆ ಹೀಗೆ ಹೇಳಿ ಸಮಾಧಾನಗೊಳಿಸಿ ತನ್ನ ಸೈನಿಕರಿಗೆ ಆಜ್ಞಾಪಿಸಿ ಹೇಳಿದನು:

“ಬಾಣಗಳನ್ನು ಹಿಡಿದು ಸುಮ್ಮನೇಕೆ ನಿಂತಿದ್ದೀರಿ? ಶತ್ರುಗಳನ್ನು ಆಕ್ರಮಣಿಸಿ ಸಂಹರಿಸಿರಿ!”

## ಕರ್ಣಾರ್ಜುನರ ದ್ವೈರಥಯುದ್ಧ

ದುರ್ಯೋಧನನ ದುರ್ಮಂತ್ರದಿಂದಾಗಿ ಸಮೃದ್ಧವಾದ ಶಂಖಭೇರಿ ನಿನಾದದ ಮಧ್ಯೆ ನರಾಗ್ರರಾದ ಶ್ವೇತಹಯರಾದ ವೈಕರ್ತನ ಕರ್ಣ ಮತ್ತು ಅರ್ಜುನರು ಎದುರಾಗಿ ಯುದ್ಧಮಾಡತೊಡಗಿದರು.



ಮದೋದಕವನ್ನು ಸುರಿಸುತ್ತಿರುವ ದೀರ್ಘ ದಂತಗಳನ್ನು ಹೊಂದಿದ್ದ ಹಿಮಾಲಯದ ಎರಡು ಆನೆಗಳು ಹೆಣ್ಣಾನೆಗೋಸ್ಕರವಾಗಿ ಸೆಣಸಾಡಲು ಮುನ್ನುಗ್ಗಿಹೋಗುವಂತೆ ವೀರರಾದ ಧನಂಜಯ ಮತ್ತು ಆಧಿರಥರು ಉಗ್ರವೇಗದಿಂದ ಅನ್ಯೋನ್ಯರ ಮೇಲೆ ಎರಗಿದರು.

ಮಹಾಮೇಘದೊಡನೆ ಮಹಾಮೇಘವು ಠಕ್ಕರಿಸುವಂತೆ, ಪರ್ವತವು ಪರ್ವತಕ್ಕೆ ಠಕ್ಕರಿಸುವಂತೆ ಬಾಣಗಳ ಮಳೆಯನ್ನೇ ಸುರಿಸುತ್ತಿದ್ದ ಕರ್ಣಾರ್ಜುನರು ಧನುಸ್ಸಿನ ಟೇಂಕಾರ ಶಬ್ಧಗಳಿಂದಲೂ, ಚಪ್ಪಳೆಯ

ಶಬ್ಧಗಳಿಂದಲೂ, ರಥಚಕ್ರದ ಶಬ್ಧಗಳಿಂದಲೂ ಪರಸ್ಪರರನ್ನು ಎದುರಿಸಿದರು. ಬೆಳೆದಿರುವ ಶಿಖರಗಳಿಂದಲೂ, ವೃಕ್ಷಗಳಿಂದಲೂ, ಲತಾ-ಗುಲ್ಮಗಳಿಂದಲೂ, ಔಷಧಿಮೂಲಿಕೆಗಳಿಂದಲೂ ಕೂಡಿರುವ, ತುಂಬಿಹರಿಯುತ್ತಿರುವ ನಾನಾ ಝರಿಗಳಿಂದ ಕೂಡಿದ ಎರಡು ಪರ್ವತಗಳಂತೆ ಆ ಮಹಾಬಲಶಾಲಿಗಳಿಬ್ಬರು ಕಂಡರು. ಅವರಿಬ್ಬರ ಆಕ್ರಮಣವು ಹಿಂದೆ ಸುರೇಶ-ವೈರೋಚನರ ನಡುವೆ ನಡೆದಂತೆ ಘೋರವಾಗಿದ್ದಿತು. ಬೇರೆಯವರಿಗೆ ದುಃಸ್ಸಹವಾದ ಆ ಯುದ್ಧದಲ್ಲಿ ಶರಗಳಿಂದ ಗಾಯಗೊಂಡ ಅವರ ದೇಹಗಳಿಂದ, ಸಾರಥಿಗಳಿಂದ ಮತ್ತು ಕುದುರೆಗಳಿಂದ ರಕ್ತವೇ ನೀರಾದ ಕೋಡಿಯು ಹರಿಯತೊಡಗಿತು. ಬೆಳಿದಿದ್ದ ಪದ್ಮಗಳಿಂದಲೂ, ಮೀನು ಆಮೆಗಳಿಂದಲೂ ಕೂಡಿದ್ದ, ಪಕ್ಷಿಗಣಗಳ ಇಂಚರಗಳಿಂದಲೂ ಕೂಡಿದ್ದ ಮಹಾ ಸರೋವರಗಳೆರಡು ಭಿರುಗಾಳಿಯಿಂದ ಮೇಲೆದ್ದ ಅಲೆಗಳ ಮೂಲಕವಾಗಿ ಪರಸ್ಪರ ಸಮ್ಮಿಲಿತವಾಗುವಂತೆ ಧ್ವಜವುಳ್ಳ ಅವರಿಬ್ಬರ ರಥಗಳು ಪರಸ್ಪರರೊಡನೆ ಸಂಘರ್ಷಿಸಿದವು. ಇಬ್ಬರೂ ಮಹೇಂದ್ರಸಮಾನ ವಿಕ್ರಮಿಗಳಾಗಿದ್ದರು. ಇಬ್ಬರೂ ಮಹೇಂದ್ರನಂತೆ ಮಹಾರಥರಾಗಿದ್ದರು. ಇಬ್ಬರ ಸಾಯಕಗಳೂ ಮಹೇಂದ್ರನ ವಜ್ರಗಳಿಂತಿದ್ದವು. ಇಬ್ಬರೂ ಮಹೇಂದ್ರ-ವೃತ್ರರಂತೆ ಸೆಣಸಾಡುತ್ತಿದ್ದರು. ಕರ್ಣಾರ್ಜುನರ ಆ ದ್ವಂದ್ವಯುದ್ಧದಲ್ಲಿ ವಿಚಿತ್ರ

ಕವಚ-ಆಭರಣ-ವಸ್ತ್ರಗಳನ್ನು ಧರಿಸಿದ್ದ ಎರಡೂ ಸೇನೆಗಳೂ, ಗಜ-ಪದಾತಿ-ಅಶ್ವ-ರಥಗಳೊಡನೆ ವಿಸ್ಮಯ-ಭಯಗಳಿಂದ ನಡುಗಿದವು. ಮದಿಸಿದ ಆನೆಯು ಇನ್ನೊಂದು ಮದಿಸಿದ ಆನೆಯನ್ನು ಆಕ್ರಮಣಿಸುವಂತೆ ಅರ್ಜುನನು ಆಧಿರಥಿಯನ್ನು ಸಂಹರಿಸಲು ಮುನ್ನುಗ್ಗಲು ಹೃಷ್ಟರಾದ ಪ್ರೇಕ್ಷಕರು ಬೆರಳುಗಳಲ್ಲಿ ಅಂಗವಸ್ತ್ರಗಳನ್ನು ಹಿಡಿದು ಭುಜಗಳನ್ನೆತ್ತಿ ಸಿಂಹನಾದಗಳೊಂದಿಗೆ ಹಾರಾಡಿಸತೊಡಗಿದರು. ಆಗ ಸೋಮಕರು ಪಾರ್ಥನಿಗೆ ಕೂಗಿ ಹೇಳಿದರು:

> "ಅರ್ಜುನ! ತ್ವರೆಮಾಡಿ ಕರ್ಣನನ್ನು ಸಂಹರಿಸು. ಕೂಡಲೇ ಅವನ ತಲೆಯನ್ನು ಶಿರಸ್ಸಿನಿಂದ ತುಂಡರಿಸು! ರಾಜ್ಯದ ಮೇಲೆ ಧೃತರಾಷ್ಟ್ರನ ಮಗನಿಗಿದ್ದ ಶ್ರದ್ಧೆಯನ್ನೂ ನಾಶಪಡಿಸು!"

ಹಾಗೆಯೇ ಕೌರವ ಕಡೆಯ ಅನೇಕ ಯೋಧರೂ ಕೂಡ

> "ಮುಂದುವರೆ! ಮುಂದುವರೆ!" ಎಂದು ಹೇಳುತ್ತಾ "ಕರ್ಣ! ತಕ್ಷಣವೇ ಅರ್ಜುನನನ್ನು ಸಂಹರಿಸು! ದೀರ್ಘಕಾಲದವರೆಗೆ ಪಾರ್ಥರು ವನಕ್ಕೆ ತೆರಳಲಿ!"

ಎಂದು ಕೂಗುತ್ತಿದ್ದರು.

ಆಗ ಕರ್ಣನು ಮೊದಲು ಪಾರ್ಥನನ್ನು ಹತ್ತು ಮಹಾಶರಗಳಿಂದ ಹೊಡೆದನು. ಅದಕ್ಕೆ ಪ್ರತಿಯಾಗಿ ಅರ್ಜುನನು ಅತೀವ ಕ್ರುದ್ಧನಾಗಿ ಹತ್ತು ನಿಶಿತ ಬಾಣಗಳಿಂದ ಅವನ ಭುಜಗಳಿಗೆ ಹೊಡೆದನು. ಸೂತಪುತ್ರ-ಅರ್ಜುನರು ಪರಸ್ಪರರನ್ನು ಸುತೀಕ್ಷ್ಣ ವಿಶಿಖಗಳಿಂದ ಗಾಯಗೊಳಿಸಿದರು. ಪ್ರಹೃಷ್ಟರಾಗಿದ್ದ ಅವರಿಬ್ಬರೂ ಪರಸ್ಪರರನ್ನು ಮೀರಿಸಲು ಪ್ರಯತ್ನಿಸಿ ಭಯಂಕರವಾಗಿ ಯುದ್ಧಮಾಡುತ್ತಿದ್ದರು. ಆ ಮಹಾಯುದ್ಧದಲ್ಲಿ ಸಹನೆಯನ್ನು ಕಳೆದುಕೊಂಡ ಭೀಮಸೇನನು ಕ್ರುದ್ಧನಾಗಿ, ಕೈಯಲ್ಲಿ ಕೈಯನ್ನು ಮಸೆಯುತ್ತಾ, ತುಟಿಗಳು ನೃತ್ಯವಾಡುತ್ತಿವೆಯೋ ಎಂಬಂತೆ ಅಲುಗಾಡುತ್ತಿರಲು ಕೂಗಿ ಹೇಳಿದನು:

> “ಕಿರೀಟಿ! ಸೂತಪುತ್ರನು ಹೇಗೆ ಮೊದಲು ನಿನ್ನನ್ನು ಹತ್ತು ಮಹಾ ಬಾಣಗಳಿಂದ ಪ್ರಹರಿಸಿದನು? ಯಾವ ಧೈರ್ಯದಿಂದ ನೀನು ಸರ್ವಭೂತಗಳನ್ನೂ ಜಯಿಸಿ ಖಾಂಡವವನ್ನು ಅಗ್ನಿಗೆ ಆಹಾರವನ್ನಾಗಿತ್ತೆಯೋ ಅದೇ ಧೈರ್ಯದಿಂದ ನೀನು ಸೂತಪುತ್ರನನ್ನು ಸಂಹರಿಸು! ಇಲ್ಲದಿದ್ದರೆ ನಾನು ಇವನನ್ನು ಗದೆಯಿಂದ ಪ್ರಹರಿಸುತ್ತೇನೆ!”

ರಥದಿಂದ ಹೊರಟ ಬಾಣಗಳು ಪ್ರತಿಯಾಗಿ ನಾಶಗೊಳ್ಳುತ್ತಿರುವುದನ್ನು

ನೋಡಿ ವಾಸುದೇವನೂ ಕೂಡ ಪಾರ್ಥನಿಗೆ ಹೇಳಿದನು:

“ಕಿರೀಟೀ! ಇದೇನಿದು? ಇಂದು ನೀನು ಬಿಟ್ಟ ಅಸ್ತ್ರಗಳೆಲ್ಲವನ್ನೂ ಕರ್ಣನು ನಾಶಪಡಿಸುತ್ತಿದ್ದಾನೆ! ಮೋಹಗೊಂಡಿರುವೆಯಾ? ಧೈರ್ಯವನ್ನು ಕಳೆದುಕೊಂಡಿರುವೆಯಾ? ನಿನ್ನ ಅಸ್ತ್ರಗಳನ್ನು ಅವನು ಅಸ್ತ್ರಗಳನ್ನು ವಿನಾಶಗೊಳಿಸುತ್ತಿರುವುದರಿಂದ ಕರ್ಣನನ್ನು ಗೌರವಿಸಿ ಕುರುಗಳೆಲ್ಲರೂ ಸಂತೋಷದಿಂದ ಸಿಂಹನಾದಗೈಯುತ್ತಿದ್ದಾರೆ! ಯುಗಯುಗಗಳಲ್ಲಿ ಯಾವ ಧೈರ್ಯದಿಂದ ನೀನು ಘೋರ ರಾಕ್ಷಸರ ತಾಮಸಾಸ್ತ್ರಗಳನ್ನು ನಾಶಗೊಳಿಸಿರುವೆಯೋ ಮತ್ತು ಯುದ್ಧಗಳಲ್ಲಿ ದಂಭೋದ್ಭವ ಮತ್ತು ಅಸುರರರನ್ನು ಸಂಹರಿಸಿರುವೆಯೋ ಅದೇ ಧೈರ್ಯದಿಂದ ನೀನು ಸೂತಪುತ್ರನನ್ನು ಸಂಹರಿಸು! ಶಕ್ರನು ಅರಿ ನಮೂಚಿಯನ್ನು ವಜ್ರದಿಂದ ಹೇಗೋ ಹಾಗೆ ಇಗೋ ನನ್ನಿಂದ ಸೃಷ್ಟಿಸಲ್ಪಟ್ಟ, ಹರಿತ ಅಲಗುಗಳುಳ್ಳ ಈ ಸುದರ್ಶನದಿಂದ ಶತ್ರುವಿನ ಶಿರವನ್ನು ಇಂದು ಕತ್ತರಿಸಿ ನಗು! ಕಿರಾತರೂಪೀ ಭಗವಾನನನ್ನು ಹೇಗೆ ನೀನು ಬಹಳವಾಗಿ ತೃಪ್ತಿಪಡಿಸಿದ್ದೆಯೋ ಅದೇ ಧೃತಿಯನ್ನು ಪುನಃ ಪಡೆದು ಪರಿವಾರಸಹಿತನಾದ ಸೂತಪುತ್ರನನ್ನು ಸಂಹರಿಸು!

ಶತ್ರುಸಮೂಹಗಳನ್ನು ಸಂಹರಿಸಿದ ಅನಂತರ ನೀನು ಸಮುದ್ರಗಳೇ ಒಡ್ಯಾಣವಾಗಿರುವ, ಪಟ್ಟನ-ಗ್ರಾಮಗಳಿಂದ ಕೂಡಿದ ಸಮೃದ್ಧವಾಗಿರುವ ಈ ಮಹಿಯನ್ನು ರಾಜನಿಗೆ ಒಪ್ಪಿಸು! ಇದರಿಂದ ನೀನು ವಿಪುಲ ಯಶಸ್ಸನ್ನು ಪಡೆಯುತ್ತೀಯೆ!”

ಹೀಗೆ ಭೀಮ-ಜನಾರ್ದನರಿಂದ ಪ್ರೇರಿತನಾದ ಅರ್ಜುನನು ತನ್ನ ಸತ್ತ್ವವನ್ನು ನೆನಪಿಸಿಕೊಂಡು, ತನ್ನ ಆಗಮನದ ಮಹಾತ್ಮೆಯನ್ನು ಪ್ರಯೋಜನಗಳನ್ನು ತಿಳಿದು ಕೇಶವನಿಗೆ ಇದನ್ನು ಹೇಳಿದನು:

“ಲೋಕಮಂಗಳಕ್ಕಾಗಿ ಮತ್ತು ಸೌತಿಯವಧೆಗಾಗಿ ಉಗ್ರವಾದ ಈ ಮಹಾಸ್ತ್ರವನ್ನು ಪ್ರಕಟಿಸುತ್ತೇನೆ. ನೀನು, ಸುರರು, ಬ್ರಹ್ಮ, ಭವ, ಮತ್ತು ಬ್ರಹ್ಮವಿದರೆಲ್ಲರೂ ನನಗೆ ಅನುಮತಿಯನ್ನು ನೀಡಬೇಕು!”

ಹೀಗೆ ಹೇಳಿ ಅವನು ಸಹಿಸಲಸಾಧ್ಯವಾದ ಮನಸ್ಸಿನಲ್ಲಿಯೇ ನೆಲೆಗೊಂಡಿದ್ದ ಬ್ರಹ್ಮಾಸ್ತ್ರವನ್ನು ಪ್ರಕಟಿಸಿದನು. ಆಗ ದಿಕ್ಕು-ಉಪದಿಕ್ಕುಗಳಲೆಲ್ಲಾ ಭೂರಿತೇಜಸ್ಸುಳ್ಳ ಸಾಯಕಗಳು ತುಂಬಿಕೊಂಡವು. ಭರತರ್ಷಭನಾದರೋ ಮಿಂಚಿನವೇಗಗಳ ನೂರಾರು ಬಾಣಗಳನ್ನು ಒಂದೇ ಬಾಣವೋ ಎನ್ನುವಂತೆ ಸೃಷ್ಟಿಸಿದನು. ಆ ರಣಮಧ್ಯದಲ್ಲಿ

ವೈಕರ್ತನನನೂ ಕೂಡ ಸಹಸ್ರಾರು ಬಾಣಗಳನ್ನು ಸೃಷ್ಟಿಸಿದನು. ಗುಡುಗುತ್ತಿದ್ದ ಅವು ಮೇಘವು ಮಳೆಯ ಧಾರೆಗಳನ್ನು ಸುರಿಸುವಂತೆ ಪಾಂಡವನ ಮೇಲೆ ಸುರಿದವು. ಆ ಭೀಮಬಲ ಅಮಾನುಷಕರ್ಮಿ ಕರ್ಣನು ಭೀಮಸೇನನನ್ನು, ಜನಾರ್ದನನನ್ನು ಮತ್ತು ಕಿರೀಟಿಯನ್ನು ಮೂರು ಮೂರು ಬಾಣಗಳಿಂದ ಹೊಡೆದು ಘೋರ ಮಹಾಸ್ವರದಿಂದ ನಿನಾದಿಸಿದನು. ಕರ್ಣನ ಬಾಣಗಳಿಂದ ಹಾಗೆ ಭೀಮ ಮತ್ತು ಜನಾರ್ದನರು ಹೊಡೆಯಲ್ಪಟ್ಟುದುದನ್ನು ನೋಡಿ ಪಾರ್ಥ ಕಿರೀಟಿಯು ಸಹಿಸಿಕೊಳ್ಳಲಾಗದೇ ಪುನಃ ಹದಿನೆಂಟು ಬಾಣಗಳನ್ನು ಭತ್ತಳಿಕೆಯಿಂದ ತೆಗೆದು ಪ್ರಯೋಗಿಸಿದನು. ಒಂದು ಶರದಿಂದ ಸುಷೇಣನನ್ನು ಹೊಡೆದು, ನಾಲ್ಕರಿಂದ ಶಲ್ಯನನ್ನೂ, ಮೂರರಿಂದ ಕರ್ಣನನ್ನೂ, ಮತ್ತು ಹತ್ತು ಬಾಣಗಳಿಂದ ಕಾಂಚನಕವಚವನ್ನು ಧರಿಸಿದ್ದ ಸಭಾಪತಿಯನ್ನು ಹೊಡೆದನು. ಆ ರಾಜಪುತ್ರನು ಶಿರಸ್ಸು, ಬಾಹುಗಳು, ಕುದುರೆ, ಸಾರಥಿ, ಧನುಸ್ಸು ಮತ್ತು ಧ್ವಜಗಳನ್ನು ಕಳೆದುಕೊಂಡು ಕೊಡಲಿಯಿಂದ ಕಡಿಯಲ್ಪಟ್ಟ ಶಾಲವೃಕ್ಷದಂತೆ ಭಗ್ನನಾಗಿ ರಥದಿಂದ ಕೆಳಕ್ಕೆ ಬಿದ್ದನು. ಪುನಃ ಕರ್ಣನನ್ನು ಮೂರು, ಎಂಟು, ಎರಡು, ನಾಲ್ಕು ಮತ್ತು ಹತ್ತು ಬಾಣಗಳಿಂದ ಹೊಡೆದು, ಆಯುಧಪಾಣಿಗಳಾದ ಸವಾರರನ್ನುಳ್ಳ ನಾಲ್ಕುನೂರು ಆನೆಗಳನ್ನೂ, ಎಂಟುನೂರು ರಥಗಳನ್ನೂ, ಇನ್ನೊಂದು ಸಾವಿರ ಸವಾರರೊಡನಿದ್ದ ಕುದುರೆಗಳನ್ನೂ ಮತ್ತು ಎಂಟು ಸಾವಿರ

ಪದಾತಿ ವೀರರನ್ನು ಹೊಡೆದು ನಾಶಪಡಿಸಿದನು.

ಪರಸ್ಪರರೊಡನೆ ಯುದ್ಧದಲ್ಲಿ ತೊಡಗಿದ್ದ ಶತ್ರುಹಂತಕರಾದ ಯೋಧಮುಖ್ಯರಾದ ಆ ಇಬ್ಬರು ಶೂರಶ್ರೇಷ್ಠರಾದ ಕರ್ಣ ಮತ್ತು ಪಾರ್ಥರನ್ನು ನೋಡಲು ವಾಹನಗಳನ್ನು ನಿಯಂತ್ರಿಸಿಕೊಂಡು ಆಕಾಶದಲ್ಲಿ ಮತ್ತು ಭೂಮಿಯಮೇಲೆ ಜನರು ನಿಂತಿದ್ದರು. ಆಗ ಸುದೀರ್ಘವಾಗಿ ಸೆಳೆದುದಕ್ಕಾಗಿ ಜೋರಾದ ಶಬ್ಧದೊಂದಿಗೆ ಪಾಂಡವನ ಧನುಸ್ಸಿನ ಮೌರ್ವಿಯು ತುಂಡಾಗಲೂ, ಅದೇ ಕ್ಷಣದಲ್ಲಿ ಸೂತಪುತ್ರನು ನೂರಾರು ಕ್ಷುದ್ರಕಗಳಿಂದ ಪಾರ್ಥನನ್ನು ಮುಚ್ಚಿಬಿಟ್ಟನು. ಪೊರೆಬಿಟ್ಟ ಸರ್ಪಗಳಂತಿದ್ದ ಎಣ್ಣೆಯಿಂದ ಹದಮಾಡಲ್ಪಟ್ಟಿದ್ದ ಪಕ್ಷಿಗಳ ರೆಕ್ಕೆಗಳನ್ನು ಹೊಂದಿದ್ದ ಅರವತ್ತು ನಾರಾಚಗಳಿಂದ ವಾಸುದೇವನನ್ನು ಹೊಡೆದನು. ಅಷ್ಟರಲ್ಲಿ ಸೋಮಕರು ಪಲಾಯನಮಾಡುತ್ತಿದ್ದರು. ಆಗ ಧನಂಜಯನು ಧನುಸ್ಸಿನ ಮೌರ್ವಿಯನ್ನು ಶೀಘ್ರವಾಗಿ ಕಟ್ಟಿ ಅದರಿಂದ ಬಾಣಗಳನ್ನು ಆಧಿರಥಿಯ ಮೇಲೆ ಪ್ರಯೋಗಿಸಿದನು. ಕರ್ಣನನ್ನು ಶರಗಳಿಂದ ಗಾಯಗೊಳಿಸಿ ರಣದಲ್ಲಿ ಸಂರಬ್ಧನಾಗಿ ಪಾರ್ಥನು ಸೋಮಕರನ್ನು ಪುನಃ ಹಿಂದಿರುಗುವಂತೆ ಮಾಡಿದನು. ಅಸ್ತ್ರಗಳಿಂದ ಅಂಧಕಾರವುಂಟಾಗಿರಲು ಅಂತರಿಕ್ಷದಲ್ಲಿ ಪಕ್ಷಿಗಳು ಹಾರಾಡುತ್ತಿರಲಿಲ್ಲ.

ಪಾರ್ಥನು ನಗುನಗುತ್ತಲೇ ಶಲ್ಯನನ್ನು ಹತ್ತು ಬಾಣಗಳಿಂದ ಗಾಢವಾಗಿ

ಪ್ರಹರಿಸಿ ಅವನ ಕವಚವನ್ನು ಒಡೆದನು. ಅನಂತರ ಉತ್ತಮವಾಗಿ ಪ್ರಯೋಗಿಸಿದ ಹನ್ನೆರಡು ಬಾಣಗಳಿಂದ ಕರ್ಣನನ್ನು ಹೊಡೆದು ಪುನಃ ಏಳರಿಂದ ಹೊಡೆದನು. ಪಾರ್ಥನ ಬತ್ತಳಿಕೆಯಿಂದ ವೇಗವಾಗಿ ಹೊರಟು ಉಗ್ರವೇಗದಿಂದ ಬರುತ್ತಿದ್ದ ಪತ್ರಿಗಳಿಂದ ಗಾಢವಾಗಿ ಹೊಡೆಯಲ್ಪಟ್ಟ ಕರ್ಣನು ಶರೀರವು ಭಗ್ನವಾಗಿ ಅಂಗಾಂಗಗಳು ಗಾಯಗೊಂಡಿರಲು ಶ್ಮಶಾನದ ಮಧ್ಯದಲ್ಲಿರುವ ರುದ್ರನಂತೆ ಕಂಡನು. ಆಗ ಆಧಿರಥನು ಧನಂಜಯನನ್ನು ಮೂರು ಶರಗಳಿಂದ ಹೊಡೆದನು. ಮತ್ತು ಅಚ್ಯುತನನ್ನು ಸಂಹರಿಸಲು ಬಯಸಿ ಉರಗಗಳಂತೆ ಪ್ರಜ್ವಲಿಸುತ್ತಿದ್ದ ಐದು ಬಾಣಗಳನ್ನು ಅವನ ಶರೀರದಲ್ಲಿ ನೆಟ್ಟನು. ಉತ್ತಮವಾಗಿ ಪ್ರಯೋಗಿಸಲ್ಪಟ್ಟ ಆ ಬಾಣಗಳು ಪುರುಷೋತ್ತಮನ ಸುವರ್ಣಚಿತ್ರಿತವಾದ ಕವಚವನ್ನು ಸೀಳಿ ಭೂಮಿಯ ಮೇಲೆ ಬಿದ್ದವು. ವೇಗಯುಕ್ತವಾಗಿದ್ದ ಆ ಬಾಣಗಳು ಭೂಮಿಯನ್ನು ಬಹಳ ಆಳದವರೆಗೂ ಕೊರೆದು ಪಾತಾಳಗಂಗೆಯಲ್ಲಿ ಸ್ನಾನಮಾಡಿ ಪುನಃ ಕರ್ಣನ ಅಭಿಮುಖವಾಗಿ ತೆರಳಿದವು. ಧನಂಜಯನು ತ್ವರೆಮಾಡಿ ಐದು ಸುಮುಕ್ತ ಭಲ್ಲಗಳಿಂದ ಆ ಐದು ಬಾಣಗಳಲ್ಲಿ ಒಂದೊಂದನ್ನೂ ಮೂರು ಮೂರು ಭಾಗಗಳನ್ನಾಗಿ ಕತ್ತರಿಸಿ, ಭೂಮಿಯಮೇಲೆ ಬೀಳಿಸಿದನು. ಅವುಗಳು ತಕ್ಷಕಪುತ್ರನ ಪಕ್ಷದಲ್ಲಿಯ ಮಹಾಸರ್ಪಗಳಾಗಿದ್ದವು. ಆಗ ಕಿರೀಟಮಾಲಿಯು ಕ್ರೋಧದಿಂದ

ಹುಲ್ಲುಮೆದೆಯನ್ನು ಸುಡುವ ಅಗ್ನಿಯಂತೆ ಉರಿಯುತ್ತಾ ಆಕರ್ಣಾಂತವಾಗಿ ಸೆಳೆದುಬಿಟ್ಟ ಶರೀರಾಂತಕವಾದ ಪ್ರಜ್ವಲಿಸುತ್ತಿರುವ ಬಾಣಗಳಿಂದ ಕರ್ಣನ ಮರ್ಮಸ್ಥಾನಗಳನ್ನು ಹೊಡೆದನು. ಆಗ ಕರ್ಣನು ವೇದನೆಯಿಂದ ತತ್ತರಿಸಿದನು. ಆದರೆ ಅತಿಧೈರ್ಯವುಳ್ಳ ಅವನು ರಥದಲ್ಲಿಯೇ ಕುಳಿತುಕೊಂಡನು. ಧನಂಜಯನು ಕುಪಿತನಾಗಲು ಹಿಮಕಣಗಳಿಂದಲೂ ಮಂಜಿನಿಂದಲೂ ಆಚ್ಛಾದಿತವಾದ ಆಕಾಶದಂತೆ ಅರ್ಜುನನು ಬಿಟ್ಟ ಬಾಣಗಳ ಸಮೂಹದಿಂದ ದಿಕ್ಕುಗಳೂ, ಉಪದಿಕ್ಕುಗಳೂ, ಸೂರ್ಯನ ಪ್ರಭೆಯೂ, ಕರ್ಣನ ರಥವೂ ಅದೃಶ್ಯವಾದವು. ಅವನು ಆಗ ಚಕ್ರರಕ್ಷಕರನ್ನೂ, ಪಾದರಕ್ಷಕರನ್ನೂ, ಮುಂದಿದ್ದ ಮತ್ತು ಹಿಂದಿದ್ದ ರಕ್ಷಕರೆಲ್ಲರನ್ನೂ, ದುರ್ಯೋಧನನ ಅನುಯಾಯಿಗಳನ್ನೂ ಸಂಹರಿಸಿದನು. ವೀರ ಸವ್ಯಸಾಚಿಯೊಬ್ಬನೇ ಕ್ಷಣದಲ್ಲಿ ರಥ-ಅಶ್ವ-ಸಾರಥಿಗಳೊಂದಿಗೆ ಎರಡು ಸಾವಿರ ಕುರುಪ್ರವೀರ ಕುರುಗಳ ಋಷಭರೆಲ್ಲರನ್ನೂ ಕ್ಷಯಗೊಳಿಸಿದನು. ಅಳಿದುಳಿದ ಕುರುಗಳು ಹತರಾದವರನ್ನೂ, ಬಾಣಗಳಿಂದ ಗಾಯಗೊಂಡವರನ್ನೂ, ಕೂಗಿಕೊಳ್ಳುತ್ತಿದ್ದವರನ್ನೂ, ಪಿತೃಗಳನ್ನೂ ಕರ್ಣನನ್ನೂ ಉಪೇಕ್ಷಿಸಿ ಪಲಾಯನಮಾಡಿದರು. ಭಯದಿಂದ ಭಗ್ನರಾದ ಕುರುಸೇನೆಯಿಂದ ವಿಹೀನವಾಗಿದ್ದ ರಣಭೂಮಿಯನ್ನು ಮತ್ತು ಶೂನ್ಯವಾಗಿದ್ದ ದಿಕ್ಕುಗಳನ್ನು ನೋಡಿಯೂ ಕರ್ಣನು ಅಲ್ಲಿ

ವ್ಯಥಿತನಾಗಲಿಲ್ಲ. ಸಂತುಷ್ಟನಾಗಿಯೇ ಅರ್ಜುನನನ್ನು ಪುನಃ ಆಕ್ರಮಿಸಿದನು.

## ಕರ್ಣನು ಅರ್ಜುನನ ಮೇಲೆ ಸರ್ಪಾಸ್ತ್ರವನ್ನು ಪ್ರಯೋಗಿಸಿದುದು

ಚದುರಿಹೋಗಿ ಪಲಾಯನಮಾಡುತ್ತಿದ್ದ ಕುರುಸೇನೆಗಳು ಧನಂಜಯನ ಬಾಣಗಳು ಬೀಳುವ ಸ್ಥಳವನ್ನು ಬಿಟ್ಟು ಬೇರೆಕಡೆ ಹೋಗಿ ನಿಂತುಕೊಂಡವು. ಎಲ್ಲಕಡೆಗಳಿಂದ ಅವರು ವಿದ್ಯುತ್ತಿನಂತೆ ಪ್ರಕಾಶಮಾನವಾಗಿ ವರ್ಧಿಸುತ್ತಿರುವ ಧನಂಜಯನ ಅಸ್ತ್ರವನ್ನು ನೋಡಿದರು. ಆ ಮಹಾಯುದ್ಧದಲ್ಲಿ ಕರ್ಣನ ವಧೆಗೋಸ್ಕರವಾಗಿ ಕ್ರುದ್ಧನಾದ ಪಾರ್ಥನು ಬಿಡುತ್ತಿದ್ದ ಅಸ್ತ್ರಗಳನ್ನು ಆಕಾಶದಲ್ಲಿಯೇ ಅನಂತಘೋಷದೊಂದಿಗೆ ಕರ್ಣನು ನುಂಗಿಬಿಡುತ್ತಿದ್ದನು. ಕರ್ಣನು ಪರಶುರಾಮನಿಂದ ಪಡೆದುಕೊಂಡ ಮಹಾಮಹಿಮೆಯುಳ್ಳ ಶತ್ರುನಾಶಕವಾದ ಅಥರ್ವಣಾಸ್ತ್ರವನ್ನು ಪ್ರಕಟಿಸಿ ಸೇನೆಗಳನ್ನು ಮರ್ದಿಸುತ್ತಿರುವ ಅರ್ಜುನನ ಅಸ್ತ್ರವನ್ನು ಧ್ವಂಸಗೊಳಿಸಿ, ನಿಶಿತ ಬಾಣಗಳಿಂದ ಅರ್ಜುನನನ್ನು ಹೊಡೆದನು. ಅನಂತರ ಉಗ್ರ ದಂತಗಳಿಂದ ಅನ್ಯೋನ್ಯರನ್ನು ತಿವಿಯುತ್ತಿದ್ದ ಆನೆಗಳಂತೆ ಪರಸ್ಪರರನ್ನು ಬಾಣಗಳಿಂದ ಆಕ್ರಮಿಸುತ್ತಿದ್ದ ಕರ್ಣಾರ್ಜುನರ ನಡುವೆ ಪುನಃ

ಭಯಂಕರ ಯುದ್ಧವು ಪ್ರಾರಂಭಿಸಿತು. ಆಗ ರಿಪುವನ್ನು ಸಂಹರಿಸುವ, ಬಹಳ ಹಿಂದೆಯೇ ಸಂಚಯಿಸಿ ಇಟ್ಟುಕೊಂಡಿದ್ದ, ಪಾರ್ಥನ ಸಲುವಾಗಿಯೇ ಬಹಳಕಾಲದಿಂದ ಸಂರಕ್ಷಿಸಿ ಇಟ್ಟುಕೊಂಡಿದ್ದ, ಪ್ರಜ್ವಲಿಸುತ್ತಿರುವ ಸರ್ಪದ ಮುಖವುಳ್ಳ, ಎಣ್ಣೆಯಿಂದ ಹದಮಾಡಲ್ಪಟ್ಟಿದ್ದ ರೌದ್ರವಾದ, ಸದಾ ಪೂಜಿಸಲ್ಪಡುತ್ತಿದ್ದ, ಸುವರ್ಣಮಯವಾದ ಕೊಳವೆಯಲ್ಲಿ ಚಂದನಚೂರ್ಣದಲ್ಲಿ ಇರಿಸಿದ್ದ, ಮಹಾಜ್ವಾಲೆಯುಳ್ಳ, ಐರಾವತವಂಶಸಂಭವ ಮಹಾವಿಷಭರಿತವಾದ ಅಶ್ವಸೇನನ ಶರವನ್ನು ಯುದ್ಧದಲ್ಲಿ ಫಲ್ಗುನನ ಶಿರವನ್ನು ಕತ್ತರಿಸಲು ಎತ್ತಿಕೊಂಡನು. ವೈಕರ್ತನನು ಧನುಸ್ಸಿಗೆ ಆ ಬಾಣವನ್ನು ಹೂಡಿದುದನ್ನು ನೋಡಿ ಮಹಾತ್ಮ ಮದ್ರರಾಜನು

> “ಕರ್ಣ ! ಈ ಬಾಣವು ಅವನ ಕುತ್ತಿಗೆಗೆ ತಾಗುವುದಿಲ್ಲ. ಆದುದರಿಂದ ಗುರಿಯಿಟ್ಟು ಶಿರವು ಕತ್ತರಿಸುವಂತೆ ಪುನಃ ಅನುಸಂಧಾನಮಾಡು !”

ಕೂಡಲೇ ಕ್ರೋಧದಿಂದ ಕಣ್ಣುಗಳು ಕೆಂಪಾದ ಕರ್ಣನು ಜೋರಾಗಿ ನಕ್ಕು ಬಾಣವನ್ನು ಹೂಡಿಕೊಂಡೇ ಶಲ್ಯನಿಗೆ ಹೇಳಿದನು:

> “ಶಲ್ಯ ! ಕರ್ಣನು ಎಂದೂ ಶರವನ್ನು ಎರಡನೆಯ ಬಾರಿ ಹೂಡುವುದಿಲ್ಲ ! ನನ್ನಂಥವನು ಮೋಸಗಾರನಾಗುವುದಿಲ್ಲ !”

ಹೀಗೆ ಹೇಳಿ ಹಲವು ವರ್ಷಗಳಿಂದ ಪೂಜಿಸಿಕೊಂಡು ಬಂದಿದ್ದ ಬಲಶಾಲಿಯಾಗಿದ್ದ ಆ ಶರವನ್ನು "ಫಲ್ಗುನ! ನೀನು ಹತನಾದೆ!" ಎಂದು ಜೋರಾಗಿ ಕೂಗಿ ತ್ವರೆಮಾಡಿ ವಿಸರ್ಜಿಸಿದನು. ಕರ್ಣನು ಸಂಧಾನಮಾಡಿದ ಆ ಸರ್ಪಾಸ್ತ್ರವನ್ನು ನೋಡಿ ಮಾಧವನು ತನ್ನ ಪಾದಗಳಿಂದ ರಥವನ್ನು ಒತ್ತಿದನು. ರಥವು ಭೂಮಿಯಲ್ಲಿ ಹುಗಿದುಹೋಗಲು ಕುದುರೆಗಳು ತಮ್ಮ ಮೊಣಕಾಲುಗಳನ್ನು ಬಗ್ಗಿಸಿದವು. ಆಗ ಶರವು ಧೀಮತ ಅರ್ಜುನನ ಕಿರೀಟವನ್ನು ಹಾರಿಸಿತು.

ಭೂಮಿ-ಅಂತರಿಕ್ಷ-ಸ್ವರ್ಗ-ಪಾತಾಳಗಳಲ್ಲಿಯೂ ವಿಶ್ರುತವಾಗಿದ್ದ ಮತ್ತು ಅರ್ಜುನನ ಶಿರಸ್ಸಿಗೆ ಭೂಷಣವಾಗಿದ್ದ, ಕಿರೀಟವನ್ನು ಅಸ್ತ್ರಬಲ, ಸಂಧಾನ, ಪ್ರಯತ್ನ, ಮತ್ತು ಕೋಪಗಳಿಂದ ಕೂಡಿದ ಆ ಶರದಿಂದ ಸೂತಜನು ಹಾರಿಸಿದನು. ಸೂರ್ಯ-ಚಂದ್ರ-ಅಗ್ನಿಗಳ ಕಾಂತಿಗೆ ಸಮಾನಕಾಂತಿಯುಳ್ಳ, ಸುವರ್ಣ-ಮುತ್ತು-ಮಣಿಗಳ ಜಾಲದಿಂದ ವಿಭೂಷಿತವಾಗಿದ್ದ, ಪುರಂಧರನಿಗಾಗಿ ಭುವನನ ಮಗನಿಂದ ತಪಸ್ಸುಮಾಡಿ ಪ್ರಯತ್ನತಃ ಸ್ವಯಂ ಮಾಡಲ್ಪಟ್ಟಿದ್ದ, ಬಹು ಅಮೂಲ್ಯವಾಗಿದ್ದ, ದ್ವೇಷಿಗಳಿಗೆ ಭಯಂಕರವಾಗಿ ಕಾಣುತ್ತಿದ್ದ, ಸುಗಂಧಿತವಾಗಿದ್ದ, ಧರಿಸಿದವನಿಗೆ ಅತ್ಯಂತ ಸುಖವನ್ನು ನೀಡುತ್ತಿದ್ದ, ದೇವರಿಪುಗಳನ್ನು ಸಂಹರಿಸಲು ಹೊರಟಾಗ ಸ್ವಯಂ ಸುರೇಶ್ವರನು

ಸಂತೋಷದಿಂದ ಕಿರೀಟಿಗೆ ತೊಡಿಸಿದ್ದ, ಹರ-ವರುಣ-ಯಮ-ಕುಬೇರರಿಗೂ, ಪಿನಾಕ-ಪಾಶ-ವಜ್ರಾಯುಧ-ಉತ್ತಮ ಸಾಯಕಗಳಿಗೂ, ಸುರೋತ್ತಮರಿಗೂ ನಾಶಗೊಳಿಸಲು ಅಸಾಧ್ಯವಾಗಿದ್ದ ಕಿರೀಟವನ್ನು ವೃಷಸೇನನನು ನಾಗಾಸ್ತ್ರದಿಂದ ಹಾರಿಸಿ ಜೋರಾಗಿ ನಕ್ಕನು. ಆ ಉತ್ತಮ ಬಾಣದ ವಿಷಾಗ್ನಿಯಿಂದ ಮಥಿಸಲ್ಪಟ್ಟ ಸೂರ್ಯನ ಪ್ರಕಾಶದಂತೆ ಉರಿಯುತ್ತಿದ್ದ ಪ್ರಿಯವಾದ ಪಾರ್ಥನ ಉತ್ತಮ ಕಿರೀಟವು ಪರ್ವತವನ್ನು ಬೆಳಗುಸುತ್ತಾ ಅಸ್ತನಾಗುವ ದಿವಾಕರನಂತೆ ಕೆಳಗೆ ಬಿದ್ದಿತು. ಅರ್ಜುನನ ನೆತ್ತಿಯ ಮೇಲಿದ್ದ ಅನೇಕ ರತ್ನಗಳಿಂದ ಸಮಲಂಕೃತವಾಗಿದ್ದ ಕಿರೀಟವನ್ನು ಆ ನಾಗವು ಅಂಕುರಗಳಿಂದಲೂ ಹೂಬಿಟ್ಟ ವೃಕ್ಷಗಳಿಂಡಲೂ ಕೂಡಿದ್ದ ಉತ್ತಮ ಶಿಖರವನ್ನು ಮಹೇಂದ್ರನ ವಜ್ರವು ಹೇಗೋ ಹಾಗೆ ಕೆಳಗುರುಳಿಸಿತು. ವಾಯುವಿನಿಂದ ಭೂಮಿ, ಆಕಾಶ ಮತ್ತು ಸಮುದ್ರಗಳು ಒಡೆದಾಗ ಎಷ್ಟು ಜೋರಾಗಿ ಶಬ್ಧವುಂಟಾಗುವುದೋ ಹಾಗೆ ಶಬ್ಧವುಂಟಾಗಲು ಭುವನಗಳ ಜನರೆಲ್ಲರೂ ವ್ಯಥಿತರಾಗಿ ನಡುಗಿದರು.

ಆಗ ಬಿಳಿಯವಸ್ತ್ರವನ್ನು ತಲೆಗೆ ಬಿಗಿದಿದ್ದ ಅರ್ಜುನನು ವ್ಯಥಿತನಾಗದೇ ಸಂಪೂರ್ಣನಾದ ಸೂರ್ಯನಂತೆ ಮತ್ತು ಶಿಖರವಿಲ್ಲದ ಪರ್ವತದಂತೆ ಮಿಂಚಿದನು. ಕರ್ಣನ ಭುಜಗಳಿಂದ ಪ್ರಯೋಗಿಸಲ್ಪಟ್ಟ ಸೂರ್ಯ-ಅಗ್ನಿಗಳ ಸಮನಾದ ಬೆಳಕಿದ್ದ ಆ ಬಲಶಾಲೀ ಮಹೋರಗವು

ಅರ್ಜುನನ ಮೇಲಿನ ಸೇಡನ್ನು ತೀರಿಸಿಕೊಳ್ಳಲೋಸುಗ ಕಿರೀಟವನ್ನು ಕೆಡವಿ ಪುನಃ ಮೇಲೆದ್ದಿತು. ಅವನು ಕರ್ಣನಿಗೆ

> "ನನ್ನ ತಾಯಿಯ ವಧೆಯ ವೈರವನ್ನು ಇಂದು ತೀರಿಸಿಕೊಳ್ಳುತ್ತೇನೆ"

ಎಂದು ಹೇಳಲು ಕೃಷ್ಣನು ಪಾರ್ಥನಿಗೆ

> "ಯುದ್ಧದಲ್ಲಿ ಬದ್ಧವೈರಿಯಾಗಿರುವ ಈ ಮಹೋರಗವನ್ನು ನೀನು ಕೊಲ್ಲು!"

ಎಂದು ಹೇಳಿದನು. ಮಧುಸೂದನನು ಹೀಗೆ ಹೇಳಲು ಗಾಂಡೀವಧನ್ವಿಯು

> "ಇಂದು ಗರುಡನ ಬಾಯಿಗೆ ತಾನಾಗಿಯೇ ಬಂದು ಬೀಳುತ್ತಿರುವ ಈ ನಾಗವು ಯಾರು?"

ಎಂದು ಕೇಳಿದನು. ಕೃಷ್ಣನು ಹೇಳಿದನುಃ

> "ಖಾಂಡವದಲ್ಲಿ ಅಗ್ನಿಯನ್ನು ತೃಪ್ತಿಪಡಿಸಲು ಧನುರ್ಧರನಾದ ನೀನು ಇವನ ತಾಯಿಯನ್ನು ಬಾಣದಿಂದ ಕತ್ತರಿಸಿ ಕೊಂದೆ. ಆದರೆ ಇವನು ಅವಳ ದೇಹದಲ್ಲಿ ಅಡಗಿದ್ದನು."

ಆಗ ಜಿಷ್ಣುವಾದರೋ ಆಕಾಶದಲ್ಲಿ ವಕ್ರಗತಿಯಲ್ಲಿ ಹಾರಿಕೊಂಡು ಬರುತ್ತಿದ್ದ ಆ ನಾಗವನ್ನು ತಿರುಗಿ ನೋಡಿ ಅದನ್ನು ನಿಶಿತ ಅಲಗುಗಳುಳ್ಳ ಆರು ಬಾಣಗಳಿಂದ ತುಂಡು ತುಂಡು ಮಾಡಿದನು. ಕತ್ತರಿಸಲ್ಪಟ್ಟ ಆ ಸರ್ಪವು ನೆಲದ ಮೇಲೆ ಬಿದ್ದಿತು.

## ಕರ್ಣನ ರಥಚಕ್ರವು ಹುಗಿದುಹೋದುದು

ಅದೇ ಕ್ಷಣದಲ್ಲಿ ಕರ್ಣನು ಕಡೆಗಣ್ಣಿನಿಂದ ನೋಡುತ್ತಾ ಪುರುಷಪ್ರವೀರ ಧನಂಜಯನನ್ನು ಮಸೆಗಲ್ಲಿನಿಂದ ಮಸೆಯಲ್ಪಟ್ಟಿದ್ದ, ನವಿಲುಗರಿಗಳಿಂದ ಕೂಡಿದ್ದ ಹತ್ತು ಬಾಣಗಳಿಂದ ಪ್ರಹರಿಸಿದನು. ಆಗ ಅರ್ಜುನನು ಹನ್ನೆರಡು ವಿಮುಕ್ತವಾದ ಸರ್ಪದ ವಿಷಕ್ಕೆ ಸಮನಾದ ವೇಗವುಳ್ಳ ನಿಶಿತ ನಾರಾಚಗಳನ್ನು ಕಿವಿಯವರೆಗೂ ಎಳೆದು ಪ್ರಯೋಗಿಸಿ ಹೊಡೆದನು. ಚೆನ್ನಾಗಿ ಪ್ರಯೋಗಿಸಲ್ಪಟ್ಟ ಆ ಶ್ರೇಷ್ಠ ಬಾಣವು ಕರ್ಣನ ಚಿತ್ರಿತ ಕವಚವನ್ನು ಸೀಳಿ ರಕ್ತವನ್ನು ಕುಡಿದು ರೆಕ್ಕೆಗಳು ರಕ್ತದಲ್ಲಿ ಅದ್ದಲ್ಪಟ್ಟವುಗಳಾಗಿ ನೆಲದ ಮೇಲೆ ಬಿದ್ದವು. ಆಗ ಮಹಾಸರ್ಪವು ದಂಡಪ್ರಹಾರದಿಂದ ಕುಪಿತಗೊಳ್ಳುವಂತೆ ವೃಷಸೇನನು ಕುಪಿತನಾಗಿ ಉತ್ತಮ ವಿಷವನ್ನುಳ್ಳ ಮಹಾವಿಷದ ಸರ್ಪಗಳಂತಿರುವ ಉತ್ತಮ ಬಾಣಗಳನ್ನು ಪ್ರಯೋಗಿಸಿದನು. ಜನಾರ್ದನನನ್ನು ಹನ್ನೆರಡು ಬಾಣಗಳಿಂದ ಮತ್ತು ಅರ್ಜುನನನ್ನು ತೊಂಬತ್ತು ಬಾಣಗಳಿಂದ

ಪ್ರಹರಿಸಿ ಪುನಃ ಪಾಂಡವನನ್ನು ಘೋರ ಶರದಿಂದ ಗಾಯಗೊಳಿಸಿ ಕರ್ಣನು ಅಟ್ಟಹಾಸಗೈದನು. ಅವನ ಆ ಹರ್ಷವನ್ನು ಸಹಿಸಿಕೊಳ್ಳಲಾಗದೇ ಮರ್ಮಗಳನ್ನು ತಿಳಿದಿದ್ದ ಪಾಂಡವನು ಹೇಗೆ ಇಂದ್ರನು ಬಲನನ್ನು ವಜ್ರದಿಂದ ಹೊಡೆಯುವಂತೆ ವಿಕ್ರಮದಿಂದ ಪರಮ ಬಾಣಗಳಿಂದ ಹೊಡೆದನು.

ಆಗ ಅರ್ಜುನನು ಯಮದಂಡಸದೃಶವಾದ ತೊಂಬತ್ತು ಬಾಣಗಳನ್ನು ಕರ್ಣನ ಮೇಲೆ ಪ್ರಯೋಗಿಸಿದನು. ವಜ್ರಾಯುಧದಿಂದ ಸೀಳಲ್ಪಟ್ಟ ಪರ್ವತದಂತೆ ಶರಗಳಿಂತ ತುಂಬಾ ಗಾಯಗೊಂಡ ಕರ್ಣನು ನೋವಿನಿಂದ ವ್ಯಥಿತನಾದನು. ಧನಂಜಯನ ಧನುಸ್ಸಿನಿಂದ ಹೊರಟ ಪತ್ರಿಗಳು ಕರ್ಣನ ಮಣಿ-ವಜ್ರ-ಸುವರ್ಣಗಳಿಂದ ಅಲಂಕೃತವಾದ ಶಿರೋಭೂಷಣ ಕಿರೀಟವನ್ನೂ ಉತ್ತಮ ಕುಂಡಲಗಳನ್ನೂ ಕೆಳಗೆ ಬೀಳಿಸಿದವು. ಶ್ರೇಷ್ಠ ಶಿಲ್ಪಿಗಳು ಪ್ರಯತ್ನಪಟ್ಟು ತುಂಬಾ ಸಮಯವನ್ನು ತೆಗೆದುಕೊಂಡು ನಿರ್ಮಿಸಿದ್ದ ಮಹಾಬೆಲೆಬಾಳುವ ಹೊಳೆಯುತ್ತಿದ್ದ ಕರ್ಣನ ಉತ್ತಮ ಕವಚವನ್ನೂ ಕೂಡ ಪಾಂಡವನು ಒಂದೇ ಕ್ಷಣದಲ್ಲಿ ಬಾಣಗಳಿಂದ ತುಂಡು ತುಂಡು ಮಾಡಿದನು. ಕವಚರಹಿತನಾಗಿದ್ದ ಅವನನ್ನು ಅರ್ಜುನನು ಕುಪಿತನಾಗಿ ನಾಲ್ಕು ಉತ್ತಮ ಶರಗಳಿಂದ ಜೋರಾಗಿ ಹೊಡೆದನು. ಶತ್ರುವಿನಿಂದ ಗಾಢವಾಗಿ ಪ್ರಹೃತನಾದ ಕರ್ಣನು ರೋಗಿಯು ವಾತ-ಪಿತ್ತ-ಕಫಗಳಿಂದ ಮತ್ತು ಜ್ವರಗಳಿಂದ

ನರಳುವಂತೆ ಬಹಳವಾಗಿ ಸಂಕಟಪಟ್ಟನು. ಕ್ರಿಯೆ-ಪ್ರಯತ್ನ-ಬಲಗಳನ್ನು ಸೇರಿಸಿ ಮಹಾಧನುಸ್ಸಿನ ಮಂಡಲದಿಂದ ಸತತವಾಗಿ ಹೊರಬರುತ್ತಿದ್ದ ನಿಶಿತ ಶರಗಳಿಂದ ಅರ್ಜುನನು ಕರ್ಣನನ್ನು ಗಾಯಗೊಳಿಸಿದನು. ಉತ್ತಮ ಶರಗಳಿಂದ ಅರ್ಜುನನು ತ್ವರೆಮಾಡಿ ಅವನ ಮರ್ಮಸ್ಥಾನಗಳಿಗೂ ಹೊಡೆದನು. ಪಾರ್ಥನ ಉಗ್ರವೇಗಗಳುಳ್ಳ ಪತ್ರಿಗಳಿಂದ ಮತ್ತು ವಿವಿಧ ಶಿತಾಗ್ರಗಳಿಂದ ದೃಢವಾಗಿ ಹೊಡೆಯಲ್ಪಟ್ಟ ಕರ್ಣನು ರಕ್ತವನ್ನು ಸುರಿಸುತ್ತಾ ಗೈರಿಕಾದಿ ಧಾತುಗಳಿಂದ ಕೂಡಿದ ಕೆಂಪು ನೀರಿನ ಜಲಪಾತವನ್ನು ಸುರಿಸುವ ಪರ್ವತದಂತೆ ಕಂಡನು. ಆಗ ಕಿರೀಟಿಯು ಕುದುರೆ ರಥಗಳೊಂದಿಗೆ ಕರ್ಣನನ್ನು ವತ್ಸದಂತ ಶರಗಳಿಂದ ಮುಚ್ಚಿಬಿಟ್ಟನು ಮತ್ತು ಸರ್ವ ಪ್ರಯತ್ನಪಟ್ಟು ಪುಂಖಗಳು ಉರಿಯುತ್ತಿರುವ ಬಾಣಗಳಿಂದ ದಿಕ್ಕುಗಳನ್ನೂ ಮುಚ್ಚಿಬಿಟ್ಟನು. ಆ ವತ್ಸದಂತಗಳಿಂದ ಚುಚ್ಚಲ್ಪಟ್ಟ ವಿಶಾಲ ಪೀನವಕ್ಷಸ್ಥನಾದ ಆಧಿರಥಿ ಕರ್ಣನು ಹೂಬಿಟ್ಟ ಅಶೋಕ, ಮುತ್ತುಗ, ಬೂರುಗ ಮರಗಳಿಂದ ಕೂಡಿದ ಎತ್ತರ ಪರ್ವತದಂತೆಯೇ ತೋರಿದನು.

ಅನೇಕ ಶರಗಳಿಂದ ಶರೀರಾದ್ಯಂತ ಚುಚ್ಚಲ್ಪಟ್ಟ ಕರ್ಣನು ವೃಕ್ಷಗಳಿಂದ ವ್ಯಾಪ್ತವಾದ ಶಿಖರದಂತೆ ಮತ್ತು ಸುಪುಷ್ಪಿತವಾದ ಕೆಂಪು ಕಣಗಿಲೆ ಮರಗಳುಳ್ಳ ಪರ್ವತದಂತೆ ಕಂಡನು. ಆಗ ಧನುಸ್ಸಿನಿಂದ

ಬಾಣಸಂಘಗಳನ್ನು ಸೃಷ್ಟಿಸುತ್ತಿದ್ದ ಕರ್ಣನು ಶರಜಾಲಗಳ ಕಾಂತಿಯನ್ನು ಸೂಸುತ್ತಿರುವಂತೆ ತೋರುತ್ತಿದ್ದನು. ರಕ್ತದಿಂದ ತೋಯ್ದು ಲೋಹಿತ ವರ್ಣನಾಗಿದ್ದ ಅವನು ಕೆಂಪಾದ ಸೂರ್ಯಮಂಡಲದಲ್ಲಿ ದಿವಾಕರನು ಅಸ್ತನಾಗುತ್ತಿರುವಂತೆ ತೋರುತ್ತಿದ್ದನು. ಆಧಿರಥಿಯ ಎರಡು ತೋಳುಗಳ ಮಧ್ಯದಿಂದ ಹೊರಬರುತ್ತಿದ್ದ ಉರಿಯುವ ಸರ್ಪಗಳಂತಹ ನಿಶಿತ ಬಾಣಗಳು ದಿಕ್ಕುಗಳನ್ನು ಸೇರಿ ಅರ್ಜುನನ ಬಾಹುಗಳಿಂದ ಬಿಡಲ್ಪಟ್ಟ ಬಾಣಗಳನ್ನು ಧ್ವಂಸಮಾಡಿದವು.

ಆಗ ಸಮರದಲ್ಲಿ ಅವನ ಚಕ್ರಗಳು ಭೂಮಿಯಲ್ಲಿ ಹುಗಿದುಹೋಗಲು ಸೂತಪುತ್ರನು ವಿಹ್ವಲನಾದನು. ಬ್ರಾಹ್ಮಣನ ಶಾಪದಿಂದಾಗಿ ರಥವು ಕುಸಿಯಲು ಪರಶುರಾಮನ ಶಾಪದಂತೆ ಅವನಿಗೆ ಅಸ್ತ್ರಗಳೂ ಹೊಳೆಯದಾದವು. ಆ ವ್ಯಸನಗಳನ್ನು ಸಹಿಸಿಕೊಳ್ಳಲಾಗದೇ ಕೈಗಳನ್ನು ಕೊಡವುತ್ತಾ ಅವನು ಧರ್ಮವನ್ನು ನಿಂದಿಸಿದನು:

> "ಧರ್ಮವೇ ಪ್ರಧಾನವಾಗಿರುವವನನ್ನು ಧರ್ಮವು ರಕ್ಷಿಸುತ್ತದೆ ಎಂದು ಸದೈವ ಧರ್ಮವಿದರು ಹೇಳುತ್ತಾರೆ. ಇಂದು ನನಗನ್ನಿಸುತ್ತಿದೆ – ಧರ್ಮವು ಭಕ್ತರನ್ನು ಪಾಲಿಸುವುದಿಲ್ಲ. ಧರ್ಮವು ನಿತ್ಯವೂ ಪರಿಪಾಲಿಸುವುದಿಲ್ಲ."

ಹೀಗೆ ಹೇಳುತ್ತಿರಲು ಕುದುರೆಗಳೂ ಸೂತನೂ ತತ್ತರಿಸಿದವು.




ಮರ್ಮಸ್ಥಾನಗಳಲ್ಲಿ ಚುಚ್ಚಲ್ಪಟ್ಟಿದ್ದ ಅವನು ಏನನ್ನು ಮಾಡಲೂ ವಿಚಲಿತನಾಗಿದ್ದನು. ತನಗಾದ ಅವಸ್ಥೆಗೆ ಧರ್ಮವನ್ನೇ ಪುನಃ ಪುನಃ ನಿಂದಿಸುತ್ತಿದ್ದನು. ಆಗ ಕರ್ಣನು ಆಹವದಲ್ಲಿ ಮೂರು ಭಯಂಕರ ಶರಗಳಿಂದ ಕೃಷ್ಣನ ಕೈಗೆ ಹೊಡೆದು, ಏಳರಿಂದ ಪಾರ್ಥನನ್ನು ಮುಸುಕಿದನು. ಆಗ ಅರ್ಜುನನು ಹದಿನೇಳು ಉಗ್ರತೇಜಸ್ಸುಳ್ಳ, ಇಂದ್ರನ ವಜ್ರಕ್ಕೆ ಸಮಾನವಾದ, ಅಗ್ನಿಯಂತಿದ್ದ ಘೋರ

ಜಿಹ್ಮಗಗಳನ್ನು ಪ್ರಯೋಗಿಸಿದನು. ಭೀಮವೇಗದ ಅವು ಅವನನ್ನು ಭೇದಿಸಿ ನೆಲದಮೇಲೆ ಬಿದ್ದವು. ಆಗ ನಡುಗಿದ ಕರ್ಣನು ತನ್ನ ಶಕ್ತಿಯೊಡನೆ ಒಟ್ಟುಗೂಡಿಸಿ ಪ್ರಯತ್ನಿಸಿರುವಂತೆ ಕಂಡುಬಂದನು. ಕೂಡಲೇ ಅವನು ಧೈರ್ಯವನ್ನು ತಾಳಿ ಬಲವನ್ನುಪಯೋಗಿಸಿ ಬ್ರಹ್ಮಾಸ್ತ್ರವನ್ನು ಬಳಸಿದನು. ಅದನ್ನು ನೋಡಿ ಅರ್ಜುನನು ಐಂದ್ರಾಸ್ತ್ರವನ್ನು ಅಭಿಮಂತ್ರಿಸಿದನು. ಗಾಂಡೀವ, ಮೌರ್ವಿ ಮತ್ತು ಬಾಣಗಳನ್ನು ಅನುಮಂತ್ರಿಸಿ ಧನಂಜಯನು ಪುರಂದರನು ಮಳೆಸುರಿಸುವಂತೆ ಶರವರ್ಷಗಳನ್ನು ಸೃಷ್ಟಿಸಿದನು. ಪಾರ್ಥನ ರಥದಿಂದ ಹೊರಟ ಆ ತೇಜೋಮಯ ಮಹಾವೀರ್ಯ ಬಾಣಗಳು ಕರ್ಣನ ರಥದ ಬಳಿ ಪ್ರಕಟವಾದವು. ಮಹಾರಥ ಕರ್ಣನು ವೇಗದಿಂದ ಬರುತ್ತಿದ್ದ ಆ ಅಸ್ತ್ರಗಳನ್ನು ವ್ಯರ್ಥಗೊಳಿಸಿದನು. ಆ ಅಸ್ತ್ರವೂ ನಾಶವಾಗಲು ವೃಷ್ಣಿವೀರನು ಹೇಳಿದನು:

> “ಪಾರ್ಥ! ಪರಮ ಅಸ್ತ್ರವನ್ನು ಪ್ರಯೋಗಿಸು! ರಾಧೇಯನು ಶರಗಳನ್ನು ನುಂಗಿಬಿಡುತ್ತಿದ್ದಾನೆ!”

ಆ ಸಲಹೆಯಂತೆ ಅರ್ಜುನನು ಆಗ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಆಗ ಬಾಣಗಳಿಂದ ಅರ್ಜುನನು ಕರ್ಣನನ್ನು ಭ್ರಾಂತಗೊಳಿಸಿದನು. ಆದರೆ ಅವುಗಳನ್ನು ಕ್ರುದ್ಧನಾದ ಕರ್ಣನು ತೇಜಸ್ಸುಳ್ಳ ಮೌರ್ವಿಯಿಂದ

ಹೊರಟ ಶರಗಳಿಂದ ಕತ್ತರಿಸಿದನು. ಆಗ ಮೌರ್ವಿಯನ್ನು ಕತ್ತರಿಸಲು ಪಾಂಡವನು ಪುನಃ ಮೌರ್ವಿಯನ್ನು ಕಟ್ಟಿ ಸಹಸ್ರಾರು ಉರಿಯುತ್ತಿರುವ ಶರಗಳಿಂದ ಕರ್ಣನನ್ನು ಮುಚ್ಚಿಬಿಟ್ಟನು. ಸಂಯುಗದಲ್ಲಿ ಅವನ ಮೌರ್ವಿಯನ್ನು ಕತ್ತರಿಸುತ್ತಿದ್ದಂತೆಲ್ಲ ಅರ್ಜುನನು ಬಾಣಗಳನ್ನು ಹೂಡುತ್ತಿದ್ದನು. ಅವನ ಶೀಘ್ರತ್ವವು ತಿಳಿಯುತ್ತಲೇ ಇರಲಿಲ್ಲ. ಅದೊಂದು ಅದ್ಭುತವಾಗಿತ್ತು. ಸವ್ಯಸಾಚಿಯ ಅಸ್ತ್ರಗಳನ್ನು ಅಸ್ತ್ರಗಳಿಂದ ರಾಧೇಯನು ನಾಶಗೊಳಿಸಿ, ಪಾರ್ಥನಿಗಿಂತಲೂ ಅಧಿಕವಾದ ವೀರ್ಯವನ್ನು ಪ್ರದರ್ಶಿಸಿದನು. ಆಗ ಕೃಷ್ಣನು ಕರ್ಣನ ಅಸ್ತ್ರಗಳಿಂದ ಪೀಡಿತನಾದ ಅರ್ಜುನನನ್ನು ನೋಡಿ

“ಪಾರ್ಥ ! ಅನುತ್ತಮವಾದ ಅಸ್ತ್ರವನ್ನು ಬಳಸು !”

ಎಂದು ಹೇಳಿದನು. ಆಗ ಧನಂಜಯನು ಅಗ್ನಿಸದೃಶ ಸರ್ಪವಿಷಸಮ ಉಕ್ಕಿನ ಸಾರಮಯ ದಿವ್ಯ ಶರವನ್ನು ಅನುಮಂತ್ರಿಸಿದನು. ಕಿರೀಟವಾನನು ಆ ರೌದ್ರ ಅಸ್ತ್ರವನ್ನು ಹೂಡಿ ಪ್ರಯೋಗಿಸಲು ಬಯಸಲು ಭೂಮಿಯು ಮಹಾರಣದಲ್ಲಿ ರಾಧೇಯನ ಚಕ್ರವನ್ನು ನುಂಗಿತು.

ಚಕ್ರವು ಹುಗಿದುಕೊಳ್ಳಲು ರಾಧೇಯನು ಕೋಪದಿಂದ ಕಣ್ಣೀರನ್ನು ಸುರಿಸುತ್ತಾ ಅರ್ಜುನನಿಗೆ ಹೇಳಿದನು:


कर्णवध

“ಪಾಂಡವ! ಒಂದು ಕ್ಷಣಕಾಲ ಕ್ಷಮಿಸು! ಚಕ್ರವು ಭೂಮಿಯಲ್ಲಿ ಹುಗಿದುಕೊಂಡಿದುದನ್ನು ನೋಡಿ ಇದೇ ದೈವವಿತ್ತ ಸರಿಯಾದ ಸಮಯವೆಂದು ತಿಳಿಯಬೇಡ! ಕಾಪುರುಷರು ಅನುಸರಿಸುವ ಈ ಮಾರ್ಗವನ್ನು ಬಿಟ್ಟುಬಿಡು! ಮುಡಿಯು ಬಿಚ್ಚಿಹೋಗಿರುವವರನ್ನೂ, ಯುದ್ಧದಿಂದ ವಿಮುಖರಾಗಿರುವವರನ್ನೂ, ಬ್ರಾಹ್ಮಣರನ್ನೂ, ಕೈಮುದು ಶರಣಾಗತನಾದವರನ್ನೂ, ಶಸ್ತ್ರನ್ಯಾಸಮಾಡಿದವರನ್ನೂ, ಜೀವಯಾಚಕರನ್ನೂ, ಬಾಣಗಳಿಲ್ಲದವರನ್ನೂ, ಕವಚದಿಂದ ವಿಹೀನರಾದವರನ್ನೂ, ಆಯುಧಗಳನ್ನು ಕಳೆದುಕೊಂಡವರನ್ನು ಅಥವಾ ಆಯುಧಗಳು ಭಗ್ನರಾದವರನ್ನು ಶೂರರಾದ ರಾಜರು ಪಾರ್ಥಿವರು ಪ್ರಹರಿಸುವುದಿಲ್ಲ. ನೀನಾದರೋ ಶೂರನಾಗಿದ್ದೀಯೆ. ಆದುದರಿಂದ ಮುಹೂರ್ತಕಾಲ ತಡೆ! ಈ ಚಕ್ರವನ್ನು ಭೂಮಿಯಿಂದ ಮೇಲೆತ್ತುತ್ತೇನೆ. ರಥಸ್ಥನಾಗಿರದ, ನೆಲದಮೇಲಿರುವ ಮತ್ತು ಯುದ್ಧಕ್ಕೆ ಸಜ್ಜಾಗಿರದ ನನ್ನನ್ನು ಹೊಡೆಯಕೂಡದು! ನಾನು ಇದನ್ನು ಭಯದಿಂದ ಹೇಳುತ್ತಿದ್ದೇನೆಂದು ವಾಸುದೇವ ಅಥವಾ ಪಾಂಡವೇಯ ನೀನು ತಿಳಿಯಬಾರದು! ನೀನಾದರೋ ಕ್ಷತ್ರಿಯರ ದಾಯಾದನಾಗಿರುವೆ! ಮಹಾಕುಲದ ವಿವರ್ಧಕನಾಗಿರುವೆ!



ಧರ್ಮೋಪದೇಶವನ್ನು ಸ್ಮರಿಸಿಕೊಂಡು ನೀನು
ಮುಹೂರ್ತಕಾಲ ಸ್ಥೈರಿಸಿಕೋ!”

## ಕರ್ಣವಧೆ

ಆಗ ರಥಸ್ಥನಾದ ವಾಸುದೇವನು ಹೇಳಿದನು:

“ರಾಧೇಯ! ಅದೃಷ್ಟವಶಾತ್ ಈಗ ನೀನು ಧರ್ಮವನ್ನು ನೆನಪಿಸಿಕೊಳ್ಳುತ್ತಿರುವೆ. ಕಷ್ಟದಲ್ಲಿ ಮುಳುಗಿದ ನೀಚರು ಸಾಮಾನ್ಯವಾಗಿ ತಾವು ಮಾಡಿದ ಕೆಟ್ಟ ಕೆಲಸಗಳನ್ನಲ್ಲದೇ ಕೇವಲ ದೈವವನ್ನೇ ನಿಂದಿಸುತ್ತಾರೆ. ಯಾವಾಗ ನೀನು, ಸುಯೋಧನ, ದುಃಶಾಸನ ಮತ್ತು ಸೌಬಲ ಶಕುನಿಯರು ಏಕವಸ್ತ್ರಳಾಗಿದ್ದ ದ್ರೌಪದಿಯನ್ನು ಸಭೆಗೆ ಎಳೆದು ತರಿಸಿದಾಗ ನಿನಗೆ ಅಲ್ಲಿ ಧರ್ಮದ ವಿಚಾರವೇ ಹೊಳೆದಿರಲಿಲ್ಲ! ಅಕ್ಷವಿದ್ಯೆಯನ್ನು ತಿಳಿದಿರದ ಕೌಂತೇಯ ಯುಧಿಷ್ಠಿರನನ್ನು ಸಭೆಯಲ್ಲಿ ಅಕ್ಷಜ್ಞನಾದ ಶಕುನಿಯು ಗೆದ್ದಾಗ ನಿನ್ನ ಧರ್ಮವು ಎಲ್ಲಿ ಹೋಗಿತ್ತು? ದುಃಶಾಸನ ವಶದಲ್ಲಿದ್ದ ರಜಸ್ವಲೆ ಕೃಷ್ಣೆಯನ್ನು ಸಭೆಯಲ್ಲಿ ಅಪಹಾಸ್ಯಮಾಡುವಾಗ ನಿನ್ನ ಧರ್ಮವು ಎಲ್ಲಿ ಹೋಗಿತ್ತು? ಪುನಃ ಪಾಂಡವನನ್ನು ಕರೆಯಿಸಿ ಗಾಂಧಾರರಾಜನನ್ನು ಅವಲಂಬಿಸಿ ರಾಜ್ಯವನ್ನು

ಕಸಿದುಕೊಳ್ಳುವಾಗ ನಿನ್ನ ಧರ್ಮವು ಎಲ್ಲಿ ಹೋಗಿತ್ತು?”

ಕರ್ಣನಿಗೆ ವಾಸುದೇವನು ಹೀಗೆ ಹೇಳುತ್ತಿರಲು ಅವುಗಳನ್ನು ಸ್ಮರಿಸಿಕೊಂಡ ಪಾಂಡವ ಧನಂಜಯನನ್ನು ತೀವ್ರವಾದ ಕೋಪವು ಆವರಿಸಿತು. ಕ್ರೋಧದಿಂದ ಅವನ ರಂಧ್ರ ರಂಧ್ರಗಳಲ್ಲಿ ಅಗ್ನಿಯ ಜ್ವಾಲೆಗಳು ಹೊರಹೊಮ್ಮಿ ಅದೊಂದು ಅದ್ಭುತವೆನಿಸಿತು. ಅದನ್ನು ನೋಡಿ ಕರ್ಣನು ಬ್ರಹ್ಮಾಸ್ತ್ರದಿಂದ ಧನಂಜಯನ ಮೇಲೆ ಬಾಣಗಳ ಮಳೆಯನ್ನು ಸುರಿಸಿ ಪುನಃ ರಥವನ್ನು ಮೇಲೆತ್ತುವ ಪ್ರಯತ್ನವನ್ನು ಮಾಡಿದನು. ಅ ಅಸ್ತ್ರವನ್ನು ಕೌಂತೇಯನು ಅಸ್ತ್ರದಿಂದಲೇ ನಿರಸನಗೊಳಿಸಿನು. ಅನಂತರ ಪಾರ್ಥನು ಜಾತವೇದಸನಿಗೆ ಪ್ರಿಯವಾದ ಇನ್ನೊಂದು ಅಸ್ತ್ರವನ್ನು ಕರ್ಣನ ಮೇಲೆ ಗುರಿಯಿಟ್ಟು ಪ್ರಯೋಗಿಸಿದನು. ಅದು ಬಹಳವಾಗಿ ಪ್ರಜ್ವಲಿಸುತ್ತಿತ್ತು. ಆಗ ಕರ್ಣನು ಆ ಅಗ್ನಿಯನ್ನು ವಾರುಣಾಸ್ತ್ರದಿಂದ ಶಮನಗೊಳಿಸಿದನು. ಮತ್ತು ಮೋಡಗಳಿಂದ ಎಲ್ಲ ದಿಕ್ಕುಗಳನ್ನೂ ತುಂಬಿಸಿ ಹಗಲನ್ನೇ ಕತ್ತಲೆಯನ್ನಾಗಿಸಿದನು. ಪಾಂಡವೇಯನು ಸ್ವಲ್ಪವೂ ಗಾಬರಿಗೊಳ್ಳದೇ ವಾಯವ್ಯಾಸ್ತ್ರದಿಂದ ರಾಧೇಯನು ನೋಡುತ್ತಿದ್ದಂತೆಯೇ ಆ ಮೋಡಗಳನ್ನು ನಿರಸನಗೊಳಿಸಿದನು. ಅನಂತರ ಕಿರೀಟಿಯು ಸುವರ್ಣಪುಂಖಗಳುಳ್ಳ ನಿಶಿತ ಕ್ಷುರದಿಂದ ಪ್ರಯತ್ನಮಾಡಿ ಆಧಿರಥಿಯ ಮಹಾರಥದ ಮೇಲೆ ಹಾರಾಡುತ್ತಿದ್ದ ಆನೆಯ ಹಗ್ಗದ ಚಿಹ್ನೆಯನ್ನು



Killing of Karna by Arjuna

ಹೊಂದಿದ್ದ, ಸುವರ್ಣ-ಮುತ್ತು ಮತ್ತು ವಜ್ರಗಳಿಂದ ಸಮಲಂಕೃತವಾಗಿದ್ದ, ಉತ್ತಮ ಶಿಲ್ಪಿಗಳಿಂದ ನಿರ್ಮಿಸಲ್ಪಟ್ಟಿದ್ದ, ಸೂರ್ಯನಂತೆ ವಿಶ್ವವಿಖ್ಯಾತವಾಗಿದ್ದ, ಕೌರವ ಸೈನ್ಯದ ವಿಜಯಕ್ಕೆ ಆಧಾರಸ್ತಂಭವೆಂತಿದ್ದ, ಶತ್ರುಗಳಿಗೆ ಭಯವನ್ನುಂಟುಮಾಡುತ್ತಿದ್ದ, ಸರ್ವರ ಸ್ತುತಿಗೂ ಪಾತ್ರವಾಗಿದ್ದ, ಕಾಂತಿಯಲ್ಲಿ ಸೂರ್ಯಾಗ್ನಿಗಳಿಗೆ ಸಮಾನವಾಗಿದ್ದ ಧ್ವಜವನ್ನು ಪ್ರಹರಿಸಿ ಕೆಡವಿದನು. ಆ ಧ್ವಜದ ಜೊತೆಯಲ್ಲಿಯೇ ಕೌರವರ ಯಶಸ್ಸು, ಧರ್ಮ, ಜಯ, ಮತ್ತು ಸರ್ವರ ಸಂತೋಷವೂ, ಹಾಗೆಯೇ ಕುರುಗಳ ಹೃದಯವೂ ಕೆಳಗೆ ಬಿದ್ದಿತು! ನಿಟ್ಟುಸಿರಿನ ಮಹಾ ಹಾಹಾಕಾರವುಂಟಾಯಿತು.

ಕರ್ಣನ ವಧೆಯನ್ನು ತ್ವರೆಗೊಳಿಸಲು ಕೂಡಲೇ ಪಾಂಡವ ಪಾರ್ಥನು ಮಹೇಂದ್ರನ ವಜ್ರ, ಅಗ್ನಿದಂಡ ಮತ್ತು ಸೂರ್ಯನ ಶ್ರೇಷ್ಠ ಕಿರಣಗಳಿಗೆ ಸಮನಾದ ಅಂಜಲಿಕವನ್ನು ಕೈಗೆತ್ತಿಕೊಂಡನು. ಮರ್ಮಗಳನ್ನು ಕತ್ತರಿಸುವ, ರಕ್ತಮಾಂಸಗಳಿಂದ ಲೇಪಿತವಾಗಿದ್ದ, ಸೂರ್ಯಾಗ್ನಿಸದೃಶವಾಗಿದ್ದ, ಬಹುಮೂಲ್ಯವಾಗಿದ್ದ, ನರ-ಅಶ್ವ-ಗಜಗಳನ್ನು ಸಂಹರಿಸಬಲ್ಲ, ಮೂರುಮೊಳ ಉದ್ದದ, ಆರು ರೆಕ್ಕೆಗಳುಳ್ಳ, ಉಗ್ರವೇಗದ, ಸಹಸ್ರನೇತ್ರನ ವಜ್ರಾಯುಧದ ಸಮಾನ ತೇಜಸ್ಸುಳ್ಳ, ಬಾಯಿತೆರೆದ ಅಂತಕನಂತೆ ಸಹಿಸಲಸಾಧ್ಯವಾದ, ಶಿವನ ಪಿನಾಕಕ್ಕೂ, ನಾರಾಯಣನ ಚಕ್ರಕ್ಕೂ ಸಮನಾಗಿದ್ದ, ಭಯಂಕರವಾಗಿದ್ದ, ಪ್ರಾಣಭೃತರ ವಿನಾಶಕಾರಿಯಾಗಿದ್ದ, ಆ ಬಾಣವನ್ನು ಮಹಾಸ್ತ್ರದಿಂದ ಅಭಿಮಂತ್ರಿಸಿ ಗಾಂಡೀವಕ್ಕೆ ಹೂಡಿ ಟೇಂಕಾರದೊಂದಿಗೆ ಕೂಗಿ ಹೇಳಿದನು:

> “ನಾನು ತಪಸ್ಸನ್ನು ತಪಿಸಿದ್ದರೆ, ಗುರುಗಳನ್ನು ತೃಪ್ತಿಗೊಳಿಸಿದ್ದರೆ, ಯಜ್ಞಯಾಗಾದಿಗಳನ್ನು ಮಾಡಿದ್ದರೆ, ಸುಹೃದಯರನ್ನು ಕೇಳಿದ್ದಿದ್ದರೆ, ಈ ಸತ್ಯಗಳಿಂದ ಸುವಿಹಿತವಾಗಿ ಸಂಧಾನಗೊಂಡಿರುವ, ಶತ್ರುಗಳ ಶರೀರವನ್ನೂ ಪ್ರಾಣವನ್ನೂ ಹರಣಮಾಡಬಲ್ಲ ಈ ಅಪ್ರತಿಮ, ಧೃತ, ಮಹಾಸ್ತ್ರದಿಂದ ಅಭಿಮಂತ್ರಿತ ಈ ಶರವು ನನ್ನ

ಪ್ರಬಲಶತ್ರುವಾದ ಕರ್ಣನನ್ನು ಸಂಹರಿಸಲಿ!”

ಹೀಗೆ ಹೇಳಿ ಧನಂಜಯನು ಕರ್ಣನ ವಧೆಗೆಂದು ಅಥರ್ವಾಂಗೀರಸ ಮಂತ್ರದಿಂದ ಮಾಡಿದ ಕೃತ್ಯವು ಹೇಗೆ ಉಗ್ರವೂ, ಪ್ರದೀಪ್ತವೂ, ಮೃತ್ಯುವಿಗೂ ಯುದ್ಧದ್ದಲ್ಲಿ ಎದುರಿಸಲಸಾಧ್ಯವಾಗಿರುತ್ತದೆಯೋ ಹಾಗಿದ್ದ ಆ ಘೋರವಾದ ಬಾಣವನ್ನು ಪ್ರಯೋಗಿಸಿದನು.

ಅದರಿಂದ ಪರಮ ಹೃಷ್ಟನಾದ ಕಿರೀಟಿಯು ಪುನಃ ಹೇಳಿದನು:

“ಈ ಶರವು ನನಗೆ ವಿಜಯದಾಯಕವಾಗಲಿ! ಚಂದ್ರಾದಿತ್ಯರ ಪ್ರಭೆಗೆ ಸಮಾನವಾಗಿರುವ ಇದು ಕರ್ಣನನ್ನು ಸಂಹರಿಸಿ, ಸಮಾಪ್ತಿಗೊಳಿಸಿ, ಯಮನಲ್ಲಿಗೆ ಕಳುಹಿಸಲಿ!”

ಯುದ್ಧದಲ್ಲಿ ವಿಜಯವನ್ನು ತರಬಲ್ಲ ಆ ಶ್ರೇಷ್ಠಬಾಣದಿಂದ ಪ್ರಹೃಷ್ಟನಾಗಿ ಕಾಣುತ್ತಿದ್ದ ಕಿರೀಟಮಾಲಿಯು ತನ್ನ ರಿಪು ಆತಯಾಯಿಯನ್ನು ಸಂಹರಿಸಲು ಚಂದ್ರಾದಿತ್ಯಸಮ ಪ್ರಭೆಯುಳ್ಳ ಆ ಶರವನ್ನು ಪ್ರಯೋಗಿಸಿದನು. ಉದಯಿಸುವ ಸೂರ್ಯನ ಸಮಾನ ವರ್ಚಸ್ಸುಳ್ಳ ಮತ್ತು ನಭೋಮಧ್ಯದಲ್ಲಿದ್ದ ಭಾಸ್ಕರನಂತಿರುವ ಆ ಬಾಣವು ಕೆಂಪಾದ ಅಸ್ತಾಚಲದಿಂದ ದಿವಾಕರನು ಕೆಳಗೆ ಬೀಳುತ್ತಿರುವನೋ ಎಂಬಂತೆ ಕರ್ಣನ ಶಿರಸ್ಸನ್ನು ಸೇನೆಯ ಅಗ್ರಭಾಗದಲ್ಲಿ ಕೆಡವಿತು. ಸತತವೂ ಸುಖವನ್ನೇ ಅನುಭವಿಸಿದ್ದ ಆ



ಅತ್ಯಂತ ಸುಂದರ ದೇಹವನ್ನು ಉದಾರಕರ್ಮಿಯಾದ ಕರ್ಣನ ಶಿರಸ್ಸು ಐಶ್ವರ್ಯವಂತನು ಸಂಪತ್ತಿನಿಂದ ಮತ್ತು ಪ್ರಿಯಜನರಿಂದ ತುಂಬಿರುವ ಮನೆಯನ್ನು ಬಹಳ ಕಷ್ಟದಿಂದ ಬಿಟ್ಟುಹೋಗುವಂತೆ ಬಹಳ ಕಷ್ಟದಿಂದ ಆ ಈಶ್ವರನ ಸಂಗವನ್ನು ತೊರೆದು ಹೋಯಿತು. ವಜ್ರದಿಂದ ಹತವಾದ ಗಿರಿಯಂತೆ ಶರದಿಂದ ಶಿರವು ಕತ್ತರಿಸಲ್ಪಡಲು ಪ್ರಾಣವನ್ನು ತೊರೆದ ಕರ್ಣನ ಎತ್ತರ ಶರೀರವು ಗೈರಿಕಾದಿ ಧಾತುಗಳಿಂದ ಕೂಡಿದ ಕೆಂಪುನೀರನ್ನು ಸುರಿಸುವ ಪರ್ವತದಂತೆ ರಕ್ತವನ್ನು ಸುರಿಸುತ್ತಾ ಭೂಮಿಯ ಮೇಲೆ ಬಿದ್ದಿತು.

ಕರ್ಣನ ದೇಹವು ಕೆಳಗೆ ಬೀಳುತ್ತಲೇ ಅವನ ದೇಹದಿಂದ ಬೆಳಗುತ್ತಿರುವ ತೇಜಸ್ಸೊಂದು ಹೊರಹೊರಟು ಆಕಾಶದಲ್ಲಿ ಸೂರ್ಯಮಂಡಲದಲ್ಲಿ ಲೀನವಾಯಿತು. ಕರ್ಣನು ಹತನಾದಾಗ ನಡೆದ ಆ ಅದ್ಭುತವನ್ನು ಸರ್ವ ಮನುಷ್ಯಯೋಧರೂ ನೋಡಿದರು. ಹತನಾಗಿ ಮಲಗಿರುವ ಅವನನ್ನು ನೋಡಿ ಪ್ರೀತರಾದ ಸೋಮಕರು ಸೇನೆಗಳೊಂದಿಗೆ ನಿನಾದಿಸಿದರು. ಅತೀವ ಹೃಷ್ಟರಾಗಿ ತೂರ್ಯಗಳನ್ನು ಮೊಳಗಿಸಿದರು ಮತ್ತು ಭುಜಗಳನ್ನು ಮೇಲೆತ್ತಿ ಉತ್ತರೀಯಗಳನ್ನು ಹಾರಿಸಿದರು. ಇತರ ಬಲಾನ್ವಿತರು ಅನ್ಯೋನ್ಯರನ್ನು ಆಲಂಗಿಸಿ, ಕುಣಿದಾಡಿ, ಗರ್ಜಿಸುತ್ತಾ ಒಬ್ಬರಿಗೊಬ್ಬರು ಹೀಗೆ ಮಾತನಾಡಿಕೊಂಡರು:

“ಸಾಯಕದಿಂದ ಕತ್ತರಿಸಲ್ಪಟ್ಟು ರಥದಿಂದ ಕೆಳಕ್ಕೆ ಬಿದ್ದಿರುವ ಅವನು ಚಂಡಮಾರುತದಿಂದ ಭಗ್ನವಾಗಿ ಕೆಳಗೆ ಬಿದ್ದ ಪರ್ವತ ಶಿಖರದಂತೆಯೂ, ಯಜ್ಞಾವಸಾನದ ಅಗ್ನಿಯಂತೆಯೂ, ಮುಳುಗಿರುವ ಸೂರ್ಯನಂತೆಯೂ ಕಾಣುತ್ತಿದ್ದಾನೆ! ಸರ್ವಾಂಗಗಳಲ್ಲಿಯೂ ಶರಗಳಿಂದ ಚುಚ್ಚಲ್ಪಟ್ಟು ಸುರಿಯುತ್ತಿರುವ ರಕ್ತದಿಂದ ಲೇಪಿತನಾಗಿರುವ ಕರ್ಣನ ದೇಹವು ತನ್ನದೇ ರಶ್ಮಿಗಳಿಂದ ಬೆಳಗುವ ಸೂರ್ಯನಂತೆ ಬೆಳಗುತ್ತಿದೆ! ಉರಿಯುತ್ತಿರುವ ಶರಗಳೆಂಬ ಕಿರಣಗಳಿಂದ ಸೇನೆಗಳನ್ನು ತೀವ್ರವಾಗಿ ಉರಿಸಿ ಬಲಶಾಲಿ ಅರ್ಜುನನೆಂಬ ಸಮಯದಿಂದ ಕರ್ಣನೆಂಬ ಭಾಸ್ಕರನು ಅಸ್ತಗೊಂಡಿದ್ದಾನೆ! ಅಸ್ತನಾಗುತ್ತಿರುವ ಸೂರ್ಯನು ಹೇಗೆ ತನ್ನ ಪ್ರಭೆಗಳನ್ನೂ ತೆಗೆದುಕೊಂಡು ಹೋಗುತ್ತಾನೋ ಹಾಗೆ ಈ ಶರವು ಕರ್ಣನ ಜೀವವನ್ನೂ ತೆಗೆದುಕೊಂಡು ಹೋಯಿತು! ಸೂತಪುತ್ರನ ಮರಣವು ದಿವಸದ ಕಡೆಯ ಭಾಗದಲ್ಲಾಯಿತು. ಅಂಜಲಿಕ ಬಾಣದಿಂದ ಕತ್ತರಿಸಲ್ಪಟ್ಟು ಶಿರಸ್ಸು ದೇಹದಿಂದ ಕೆಳಗೆ ಬಿದ್ದಿತು. ಅದು ಸೇನೆಯ ಮೇಲ್ಭಾಗದಲ್ಲಿಯೇ ಹೋಗುತ್ತಾ ಎತ್ತರವಾದ ಶಿರಸ್ಸನ್ನು ಬಹಳ ಬೇಗ ಅಪಹರಿಸಿಬಿಟ್ಟಿತು!”

ಬಾಣಗಳಿಂದ ಚುಚ್ಚಲ್ಪಟ್ಟು ರಕ್ತದಿಂದ ತೋಯ್ದುಹೋಗಿ ಭೂಮಿಯ ಮೇಲೆ ಬಿದ್ದಿದ್ದ ಶೂರನಾದ ಕರ್ಣನನ್ನು ನೋಡಿ ಮದ್ರರಾಜನು ಧ್ವಜದಿಂದ ವಿಹೀನವಾಗಿದ್ದ ರಥದಿಂದ ಹೊರಬಂದು ಹೊರಟು ಹೋದನು. ಕರ್ಣನು ಹತನಾಗಲು ಬಾಣಗಳಿಂದ ಗಾಢವಾಗಿ ಗಾಯಗೊಂಡಿದ್ದ ಕೌರವ ಸೇನೆಯು ರಣದಲ್ಲಿ ತೇಜಸ್ಸಿನಿಂದ ಬೆಳಗುತ್ತಿದ್ದ ಅರ್ಜುನನ ಮಹಾಧ್ವಜವನ್ನು ತಿರುಗಿ ತಿರುಗಿ ನೋಡುತ್ತಾ ಪಲಾಯನಮಾಡಿತು. ಸಹಸ್ರನೇತ್ರನ ಕರ್ಮಗಳಿಗೆ ಸಮಾನ ಕರ್ಮಗಳನ್ನು ಮಾಡಿದ್ದ ಕರ್ಣನ ಸಹಸ್ರದಳ ಕಮಲಕ್ಕೆ ಸಮಾನ ಶುಭ ಮುಖವು ದಿನವು ಕಳೆದಾಗ ಮುಳುಗುವ ಸಹಸ್ರರಶ್ಮಿ ಸೂರ್ಯನು ಪಶ್ಚಿಮ ಪರ್ವತದಲ್ಲಿ ಬೀಳುವಂತೆ ಭೂಮಿಯ ಮೇಲೆ ಬಿದ್ದಿತು.

## ಯುಧಿಷ್ಠಿರನು ರಣಭೂಮಿಗೆ ಬಂದು ಮೃತನಾದ ಕರ್ಣನನ್ನು ವೀಕ್ಷಿಸಿದುದು

ಕರ್ಣಾರ್ಜುನರ ಯುದ್ಧದಲ್ಲಿ ಬಾಣಗಳಿಂದ ನಾಶಗೊಂಡ ಸೇನೆಗಳನ್ನು ನೋಡಿ ಶಲ್ಯನು ವೀಕ್ಷಿಸಲು ಬರುತ್ತಿದ್ದ ದುರ್ಯೋಧನನಿಗೆ ಯುದ್ಧಭೂಮಿಯನ್ನು ತೋರಿಸಿದನು. ನಾಶವಾಗಿ ಕೆಳಗುರುಳಿದ್ದ ರಥ-ಕುದುರೆ-ಆನೆಗಳ ಸೇನೆಯನ್ನು ಮತ್ತು ಸೂತಪುತ್ರನು ಹತನಾದುದನ್ನು ನೋಡಿ ದುರ್ಯೋಧನನು ಕಂಬನಿದುಂಬಿದ ಕಣ್ಣುಗಳುಳ್ಳವನಾಗಿ

ಆರ್ತರೂಪವನ್ನು ತಾಳಿ ಬಾರಿಬಾರಿಗೂ ನಿಟ್ಟುಸಿರುಬಿಡುತ್ತಿದ್ದನು. ಸ್ವೇಚ್ಛೆಯಿಂದ ಭೂಮಿಗೆ ಬಂದಿಳಿದಿರುವ ಸೂರ್ಯನಂತೆ ಕಾಣುತ್ತಿದ್ದ ಬಾಣಗಳಿಂದ ಚುಚ್ಚಲ್ಪಟ್ಟು ರಕ್ತದಿಂದ ತೋಯ್ದುಹೋಗಿ ರಣಭೂಮಿಯಲ್ಲಿ ಬಿದ್ದಿದ್ದ ಶೂರ ಕರ್ಣನನ್ನು ನೋಡಲು ಎಲ್ಲ ಯೋಧರೂ ಅವನನ್ನು ಸುತ್ತುವರೆದು ನಿಂತರು. ಕೆಲವರು ಪ್ರಹೃಷ್ಟರಾಗಿದ್ದರು, ಕೆಲವರು ಭಯಕ್ರಸ್ಥರಾಗಿದ್ದರು, ಕೆಲವರು ವಿಷಣ್ಣರಾಗಿದ್ದರು, ಕೆಲವರು ವಿಸ್ಮಿತರಾಗಿದ್ದರು ಮತ್ತು ಇತರರು ಶೋಕಗತರಾಗಿದ್ದರು. ಹೀಗೆ ಕೌರವರು ಮತ್ತು ಪಾಂಡವರು ತಮ್ಮ ತಮ್ಮ ಸ್ವಭಾವಗಳಿಗನುಗುಣವಾಗಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುತ್ತಿದ್ದರು. ಚದುರಿಹೋಗಿದ್ದ ಕವಚ-ವಸ್ತ್ರ-ಆಭರಣ-ಆಯುಧಗಳಿಂದ ಯುಕ್ತನಾಗಿದ್ದ ಧನಂಜಯನಿಂದ ಹತನಾಗಿ ವೀರ್ಯವನ್ನು ಕಳೆದುಕೊಂಡಿದ್ದ ಕರ್ಣನನ್ನು ನೋಡಿ ವಿಜನ ಅರಣ್ಯದಲ್ಲಿ ಗೂಳಿಯು ಸತ್ತುಹೋದನಂತರ ಹಸುಗಳು ಹೇಗೋ ಹಾಗೆ ದಿಕ್ಕಾಪಾಲಾಗಿ ಓಡಿ ಹೋದರು. ಸಿಂಹದಿಂದ ಆನೆಯು ಹತಗೊಂಡಂತೆ ಅರ್ಜುನನೊಡನೆ ಭೀಕರ ಯುದ್ಧವನ್ನು ಮಾಡಿ ರಣಭೂಮಿಯಲ್ಲಿ ಮಲಗಿದ್ದ ಕರ್ಣನನ್ನು ನೋಡಿ ಭೀತನಾದ ಮದ್ರರಾಜನು ಶೀಘ್ರವಾಗಿ ತನ್ನ ರಥವನ್ನು ಓಡಿಸಿದನು. ವಿಮೂಢಚೇತನನಾಗಿದ್ದ ಮದ್ರಾಧಿಪತಿಯು ಬೇಗನೆ ಧ್ವಜವಿಲ್ಲದ ತನ್ನ

ರಥದಲ್ಲಿ ಕುಳಿತು ಶೀಘ್ರವಾಗಿ ದುರ್ಯೋಧನನ ಬಳಿ ಹೋಗಿ ದುಃಖಾರ್ತನಾಗಿ ಈ ಮಾತುಗಳನ್ನಾಡಿದನು:

“ಆನೆ-ಕುದುರೆ-ರಥಪ್ರವೀರರು ನಾಶವಾಗಿರುವ ನಿನ್ನ ಸೇನೆಯು ಯಮರಾಷ್ಟ್ರದಂತಾಗಿ ಹೋಗಿದೆ! ಪರ್ವತ ಶಿಖರಗಳಂತಿದ್ದ ಮನುಷ್ಯ-ಆನೆ-ಕುದುರೆ-ರಥಗಳಿಂದ ಕೂಡಿದ್ದ ನಿನ್ನ ಮಹಾಸೇನೆಯು ಅನ್ಯೋನ್ಯರೊಡನೆ ಕಾದಾಡಿ ಅವಸಾನಹೊಂದಿದೆ! ಇಂದು ಕರ್ಣಾರ್ಜುನರ ನಡುವೆ ನಡೆದ ಯುದ್ಧವು ಹಿಂದೆಂದೂ ನಡೆದಿರಲಿಲ್ಲ. ಕೃಷ್ಣಾರ್ಜುನರಿಬ್ಬರೂ, ನಿನ್ನ ಅನ್ಯ ಶತ್ರುಗಳೆಲ್ಲರೂ ಕರ್ಣನ ಹಿಡಿತಕ್ಕೆ ಬಂದಿದ್ದರು! ತನ್ನದೇ ವಶದಲ್ಲಿದ್ದುಕೊಂಡು ನಡೆದುಕೊಳ್ಳುವ ದೈವವು ಪಾಂಡವರನ್ನು ರಕ್ಷಿಸುತ್ತಿದೆ ಮತ್ತು ನಮ್ಮನ್ನು ವಿನಾಶಗೊಳಿಸುತ್ತಿದೆ! ಇದರಿಂದಲೇ ಬಹುಷಃ ನಿನ್ನ ಸಿದ್ಧಿ-ಅರ್ಥ-ಹಿತಗಳಿಗೆ ನಡೆದುಕೊಳ್ಳುತ್ತಿರುವ ಎಲ್ಲ ವೀರರೂ ಶತ್ರುಗಳಿಂದ ಹತರಾಗುತ್ತಿದ್ದಾರೆ! ನಿನ್ನೊಡನಿದ್ದ ವೀರರು ವೀರ್ಯ-ಶೌರ್ಯಗಳಲ್ಲಿ ಕುಬೇರ-ವೈವಸ್ವತ-ವಾಸವ-ವರುಣರ ಸಮಾನರಾಗಿದ್ದು ವಿಪುಲ ಗುಣಸಮೇತರಾಗಿದ್ದರು. ನಿನ್ನ ಅರ್ಥಕಾಮಗಳಿಗಾಗಿ ಪಾಂಡವೇಯರೊಂದಿಗೆ ಹೋರಾಡಿ ನಿಧನರಾದ ನರೇಂದ್ರರು ಅವಧ್ಯರೇ ಆಗಿದ್ದರು.

ಈ ಪರ್ಯಾಯ ಸಿದ್ಧಿಯು ದೈವದ ಇಚ್ಛೆ. ಆದುದರಿಂದ ಶೋಕಿಸಬೇಡ! ಎಲ್ಲರಿಗೂ ಎಲ್ಲ ಸಮಯಗಳಲ್ಲಿಯೂ ಕಾರ್ಯಸಿದ್ಧಿಯಾಗುವುದಿಲ್ಲ!”

ಮದ್ರಪತಿಯ ಈ ಮಾತುಗಳನ್ನು ಕೇಳಿ ತನ್ನದೇ ಅನೀತಿಗಳನ್ನು ಮನಸಾ ನಿರೀಕ್ಷಿಸಿ ದುರ್ಯೋಧನನು ದೀನಮನಸ್ಕನಾಗಿ ಮೂರ್ಛಿತನಾದನು. ಆರ್ತರೂಪನಾದ ಅವನು ಪುನಃ ಪುನಃ ನಿಟ್ಟುಸಿರುಬಿಡುತ್ತಿದ್ದನು. ಧ್ಯಾನಮೂಕನೂ ಕೃಪಣನೂ ತುಂಬಾ ಆರ್ತನೂ ಆಗಿದ್ದ ದುರ್ಯೋಧನನಿಗೆ ಶಲ್ಯನು ಈ ಮಾತನ್ನಾಡಿದನು:

“ಸತ್ತುಹೋಗಿರುವ ಯುದ್ಧಮಾಡುತ್ತ ಹತರಾದ ವೀರ ನರಾಶ್ವಗಜಗಳಿಂದ ತುಂಬಿಹೋಗಿರುವ ಈ ಉಗ್ರ ಭೂಮಿಯನ್ನು ನೋಡು! ಮದೋದಕವನ್ನು ಸುರಿಸುತ್ತಿದ್ದ ಪರ್ವತೋಪಮ ಆನೆಗಳು ಬಾಣಗಳಿಂದ ಶರೀರಗಳನ್ನು ಕತ್ತರಿಸಿಕೊಂಡು, ವಿಹ್ವಲಿಸುತ್ತಾ ಅಥವಾ ಅಸುನೀಗಿ, ಸುತ್ತಲೂ ಹರಡಿಹೋಗಿರುವ ಯೋಧರು, ಕವಚ-ಆಯುಧ-ಯಂತ್ರಗಳೊಂದಿಗೆ ಈ ರಣರಂಗದ ಸುತ್ತಲೂ ಬಿದ್ದಿವೆ! ಈ ಆನೆಗಳು ವಜ್ರಾಯುಧದಿಂದ ಒಡೆದು ಬಿದ್ದಿರುವ ವಿಭಿನ್ನ ಕಲ್ಲುಬಂಡೆಗಳು, ಮೃಗಗಳು, ಔಷಧ-ವೃಕ್ಷಗಳನ್ನೊಡಗೂಡಿದ

ಪರ್ವತಗಳಂತೆ ತೋರುತ್ತಿವೆ! ಆ ಆನೆಗಳ ಮೇಲಿದ್ದ ಚಿಕ್ಕ ಚಿಕ್ಕ ಗಂಟೆಗಳೂ, ಅಂಕುಶಗಳೂ, ತೋಮರಗಳೂ, ಧ್ವಜಗಳೂ ಛಿದ್ರ ಛಿದ್ರವಾಗಿ ಹೋಗಿವೆ! ಮೇಲೆ ಹೊದಿಸಿದ್ದ ಸುವರ್ಣಮಯ ಜಾಲಗಳ ಸಹಿತವಾಗಿ ರಕ್ತದಿಂದ ತೋಯ್ದು ಹೋಗಿವೆ! ಶರಗಳಿಂದ ಗಾಯಗೊಂಡು ಬಿದ್ದಿರುವ ಕುದುರೆಗಳು ವಿಲಿವಿಲಿಗುಟ್ಟುತ್ತಿವೆ. ಅನ್ಯ ಕುದುರೆಗಳು ರಕ್ತವನ್ನೇ ಕಾರುತ್ತಿವೆ. ಎಲ್ಲವೂ ದೀನವಾಗಿ ಧ್ವನಿಮಾಡುತ್ತಾ ಕಣ್ಣುಗಳನ್ನು ತಿರುಗಿಸುತ್ತಾ ನೆಲವನ್ನು ಕಚ್ಚಿ ಆರ್ತನಾದ ಮಾಡುತ್ತಿವೆ! ಬಾಣಗಳ ಆಘಾತಕ್ಕೆ ಸಿಕ್ಕಿ ಪ್ರಾಣಗಳನ್ನು ಬಿಟ್ಟಿರುವ ಮತ್ತು ಬಿಡುತ್ತಿರುವ ಗಜಾಶ್ವ-ಪದಾತಿ ಯೋಧರಿಂದ ನಿಬಿಡವಾಗಿರುವ, ನಾಶಗೊಂಡಿರುವ ನರಾಶ್ವ-ಆನೆ-ರಥಗಳಿಂದ ಈ ರಣಭೂಮಿಯು ಮಹಾ ವೈತರಣಿ ನದಿಯಂತೆಯೇ ತೋರುತ್ತಿದೆ. ತುಂಡಾಗಿರುವ ಸೊಂಡಿಲು ಶರೀರಗಳಿರುವ ಆನೆಗಳಿಂದಲೂ, ಚಡಪಡಿಸುತ್ತ ಬಿದ್ದಿರುವ ಯಶಸ್ವಿ ಆನೆ-ರಥ-ಅಶ್ವ-ಯೋಧರಿಂದ, ಯುದ್ಧಾಭಿಮುಖ ಶತ್ರುಗಳಿಂದ ಹತರಾದ ಪದಾತಿಗಳಿಂದ, ಚೂರು ಚೂರಾಗಿ ಬಿದ್ದಿರುವ ಕವಚ-ಆಭರಣ-ವಸ್ತ್ರ-ಆಯುಧಗಳಿಂದ ತುಂಬಿರುವ ಈ ರಣಭೂಮಿಯು ಆರಿಹೋದ

ಯಜ್ಞಾಗ್ನಿಗಳಿಂದ ತುಂಬಿದ ಯಜ್ಞಭೂಮಿಯಂತೆಯೇ ತೋರುತ್ತಿದೆ! ಆಕಾಶದಿಂದ ಚ್ಯುತವಾದ ಗ್ರಹಗಳಂತಿರುವ - ಶರಪ್ರಹಾರಗಳಿಂದ ಕಣ್ಣುತೆರೆದು ಸಂಜ್ಞೆಗಳನ್ನು ಕಳೆದುಕೊಂಡು, ಹತರಾಗಿ ಬಿದ್ದಿರುವ ಸಹಸ್ರಾರು ಮಹಾಬಲರಿಂದ ತುಂಬಿರುವ ರಣಭೂಮಿಯು ನಿರ್ಮಲ ಆಕಾಶವು ರಾತ್ರಿವೇಳೆ ಗ್ರಹಗಳಿಂದ ತುಂಬಿ ಶೋಭಾಯಮಾನವಾಗಿ ಕಾಣುವಂತೆ ಕಾಣುತ್ತಿದೆ. ಕರ್ಣಾರ್ಜುನರ ಬಾಹುಗಳಿಂದ ಬಿಡಲ್ಪಟ್ಟ ಶರಗಳು ಆನೆ-ಕುದುರೆ-ಮನುಷ್ಯರ ದೇಹಗಳನ್ನು ಸೀಳಿಕೊಂಡು ಪ್ರಾಣಗಳನ್ನು ಹೀರಿಕೊಂಡು ಮಹಾಸರ್ಪಗಳು ಬಿಲವನ್ನು ಹೊಗುವಂತೆ ಭೂಮಿಯಲ್ಲಿ ನಾಟಿಕೊಂಡಿವೆ! ಧನಂಜಯ-ಆಧಿರಥಿಯರ ರಥಮಾರ್ಗಗಳಲ್ಲಿ ಶರಗಳಿಂದ ಕತ್ತರಿಸಲ್ಪಟ್ಟು ಹತರಾಗಿ ಬಿದ್ದಿರುವ ಮನುಷ್ಯ-ಕುದುರೆ-ಆನೆಗಳು ಮತ್ತು ರಥಗಳಿಂದ ರಣಭೂಮಿಯು ಸಂಚಾರಕ್ಕೆ ಅಸಾಧ್ಯವಾಗಿ ತೋರುತ್ತಿದೆ. ಸಾರಥಿಗಳು, ಕುದುರೆಗಳು, ಶ್ರೇಷ್ಠ ಆಯುಧಗಳು ಮತ್ತು ಧ್ವಜಗಳಿಂದ ಸುಸಜ್ಜಿತವಾಗಿದ್ದ ಶ್ರೇಷ್ಠ ರಥಗಳು ಯೋಧರೊಂದಿಗೆ ಮಥಿಸಲ್ಪಟ್ಟು, ಶಸ್ತ್ರಗಳಿಂದ ಚೂರು ಚೂರಾಗಿ ಶಸ್ತ್ರಾಯುಧ-ಧ್ವಜಗಳು, ಚಕ್ರಗಳು, ನೊಗಗಳು,

ಹಗ್ಗಗಳು, ಮರ, ತ್ರಿವೇಣು, ಮಣಿ-ಚಿನ್ನಗಳಿಂದ ಮಾಡಿದ ಆಸನಗಳು ಒಡೆದು ಚೆಲ್ಲಿ ರಣಭೂಮಿಯು ಶರತ್ಕಾಲದ ಮೇಘಗಳಿಂದ ಆಚ್ಛಾದಿತ ಆಕಾಶದಂತೆಯೇ ಕಾಣುತ್ತಿದೆ! ಒಡೆಯರನ್ನು ಕಳೆದುಕೊಂಡ ಕುದುರೆಗಳಿಂದ ವೇಗವಾಗಿ ಎಳೆದುಕೊಂಡು ಹೋಗಲ್ಪಡುತ್ತಿರುವ ಅಲಂಕೃತ ಸುಸಜ್ಜಿತ ರಥಗಳಿಂದಲೂ ಓಡಿಹೋಗುತ್ತಿರುವ ಮನುಷ್ಯ-ಮಾತಂಗ-ರಥ-ಅಶ್ವಗಳಿಂದಲೂ ತುಳಿಯಲ್ಪಟ್ಟು ಅನೇಕ ಚೂರುಚೂರುಗಳಾಗಿ ಬಿದ್ದಿವೆ. ಸುವರ್ಣ ಪಟ್ಟಿಗಳನ್ನು ಹೊಂದಿದ್ದ ಪರಿಘಗಳು, ಪರಶುಗಳು, ಗಂಡುಗೊಡಲಿಗಳು, ನಿಶಿತ ಶೂಲಗಳು, ಮುಸಲಗಳು, ಪಟ್ಟಿಶಗಳು, ಒರೆಯಿಂದ ಹೊರತೆಗೆದ ಶುಭ್ರ ಖಡ್ಗಗಳೂ, ಬಂಗಾರದ ಪಟ್ಟಿಗಳಿಂದ ಕಟ್ಟಲ್ಪಟ್ಟ ಗದೆಗಳೂ, ಧನುಸ್ಸುಗಳೂ, ಬೆಳ್ಳಿಯ ಅಂಗದ ಭೂಷಣಗಳೂ, ಬಂಗಾರದ ಬಣ್ಣದ ಪುಂಖಗಳುಳ್ಳ ಶರಗಳು, ಒರೆಯಿಂದ ತೆಗೆದಿದ್ದ ವಿಮಲ ಹಳದೀ ಬಣ್ಣದ ಋಷ್ಟಿಗಳು, ಪ್ರಾಸಗಳು, ಬಂಗಾರದಂತೆ ಹೊಳೆಯುವ ಖಡ್ಗಗಳು, ಚತ್ರಗಳು, ವಾಲ-ವ್ಯಜನಗಳು, ಶಂಖಗಳು, ಹೇಮಚಿತ್ರಗಳುಳ್ಳ ತುಂಡಾದ ಹಾರಗಳು, ರತ್ನಗಂಬಳಿಗಳೂ, ಪತಾಕ-ವಸ್ತ್ರಾಭರಣಗಳು, ಕಿರೀಟಮಾಲೆಗಳು, ಶುಭ್ರ ಮುಕುಟಗಳು,

ಶ್ವೇತಚಾಮರಗಳು, ಹವಳ ಮತ್ತು ಮುತ್ತಿನ ಹಾರಗಳು,
ಶಿರಸ್ತ್ರಾಣ, ಕೇಯೂರ, ಸುಂದರ ಅಂಗದಗಳು, ಕಂಠಹಾರ,
ಪದಕ, ಚಿನ್ನದ ಸರಪಣಿ, ಶ್ರೇಷ್ಠ ಮಣಿ-ವಜ್ರ-ಸುವರ್ಣ-
ಮುತ್ತು-ರತ್ನಗಳು, ಬಗೆಬಗೆಯ ಮಂಗಲಕಾರಕ ರತ್ನಗಳು,
ಅತ್ಯಂತ ಸುಖಬೋಗಗಳಿಗೆ ಯೋಗ್ಯ ಶರೀರಗಳು,
ಚಂದ್ರಸದೃಶ ಮುಖವುಳ್ಳ ಶಿರಗಳು – ಇವೆಲ್ಲವೂ
ರಣರಂಗದಲ್ಲಿ ಹರಡಿಹೋಗಿವೆ! ದೇಹ-ಭೋಗ-ವಸ್ತ್ರಗಳು
ಮತ್ತು ಮನಸ್ಸಿಗೆ ಬೇಕಾದ ಸುಖಗಳನ್ನು ತೊರೆದು
ಸ್ವಧರ್ಮನಿಷ್ಠರಾಗಿದ್ದುಕೊಂಡು ಮಹಾ ಲೋಕಗಳನ್ನು
ಪಡೆದು ಯಶಸ್ಸನ್ನು ಪ್ರಸರಿಸಿ ಅವರು
ಹೊರಟುಹೋಗಿದ್ದಾರೆ.”

ಶೋಕದಿಂದ ಸಂಕಟಪಡುತ್ತಾ “ಹಾ ಕರ್ಣ! ಹಾ ಕರ್ಣ!” ಎಂದು ಹೇಳುತ್ತಾ ಕಂಬನಿದುಂಬಿದ ಕಣ್ಣುಗಳಿಂದ ಆರ್ತನಾಗಿ ಮೂರ್ಛೆಹೋಗುತ್ತಿದ್ದ ದುರ್ಯೋಧನನಿಗೆ ಹೀಗೆ ಹೇಳಿ ಶಲ್ಯನು ಸುಮ್ಮನಾದನು. ದ್ರೋಣಪುತ್ರನೇ ಮೊದಲಾದ ನರೇಂದ್ರರು ಎಲ್ಲರೂ ದುರ್ಯೋಧನನ್ನು ಸಮಾಧಾನಗೊಳಿಸುತ್ತಾ ಅವನೊಡನೆಯೇ ಪುನಃ ಪುನಃ ಅರ್ಜುನನ ಅತಿದೊಡ್ಡದಾದ ಯಶಸ್ಸಿನಿಂದ ಪ್ರಜ್ವಲಿಸುತ್ತಿದ್ದ ಧ್ವಜವನ್ನೇ ನೋಡುತ್ತಾ ಹೋಗುತ್ತಿದ್ದರು. ನರ-ಅಶ್ವ-ಮಾತಂಗಗಳ

ಶರೀರಗಳಿಂದ ಸುರಿದ ರಕ್ತದಿಂದ ತೋಯ್ದುಹೋಗಿ ಕೆಂಪಾಗಿದ್ದ ರಣಭೂಮಿಯು ರಕ್ತಮಾಲೆ, ರಕ್ತಾಂಬರ ಮತ್ತು ಸುವರ್ಣ ಆಭರಣಗಳನ್ನು ತೊಟ್ಟಿದ್ದ ವೈಶ್ಯೆಯಂತೆ ಪ್ರಕಾಶಿಸುತ್ತಿದ್ದಳು. ಅತ್ಯಂತ ವಿರಾಜಮಾನವಾಗಿದ್ದ ಆ ರೌದ್ರ ಮುಹೂರ್ತದಲ್ಲಿ ರಕ್ತದಿಂದಲೇ ತನ್ನ ನಿಜಸ್ವರೂಪವನ್ನು ಮರೆಮಾಡಿಕೊಂಡಿದ್ದ ರಣ ಭೂಮಿಯನ್ನು ನೋಡಿ ಕುರುಗಳೆಲ್ಲರೂ ಅಲ್ಲಿ ನಿಲ್ಲಲಾರದೇ ದೇವಲೋಕದ ದೀಕ್ಷೆಯನ್ನು ಸ್ವೀಕರಿಸಿದರು. ಕರ್ಣನ ವಧೆಯಿಂದ ದುಃಖಿತರಾಗಿದ್ದ ಅವರು "ಹಾ ಕರ್ಣ ! ಹಾ ಕರ್ಣ !" ಎಂದು ಹೇಳಿಕೊಳ್ಳುತ್ತಾ ಕೆಂಪುಬಣ್ಣಕ್ಕೆ ತಿರುಗಿದ ದಿವಾಕರನನ್ನು ನೋಡುತ್ತಾ ತಮ್ಮ ತಮ್ಮ ಶಿಬಿರಗಳಿಗೆ ತೆರಳಿದರು.

> "ಗಾಂಡೀವದಿಂದ ಪ್ರಮುಕ್ತವಾದ ಸುವರ್ಣಪುಂಖಗಳ ನಿಶಿತ ಶರಗಳಿಂದ ಮತ್ತು ರಕ್ತದಿಂದ ತೋಯ್ದುಹೋಗಿದ್ದ ರೆಕ್ಕೆಗಳುಳ್ಳ ಶರಗಳಿಂದ ಚುಚ್ಚಲ್ಪಟ್ಟ ಕರ್ಣನು ಹತನಾಗಿದ್ದರೂ ಅಂಶುಮಾಲೀ ಸೂರ್ಯನಂತೆ ಪ್ರಕಾಶಿಸುತ್ತಿದ್ದಾನೆ! ರಕ್ತದಿಂದ ತೋಯ್ದುಹೋಗಿದ್ದ ಕರ್ಣನ ದೇಹವನ್ನು ತನ್ನ ಕಿರಣಗಳಿಂದ ಸ್ಪರ್ಶಿಸಿ ಭಕ್ತಾನುಕಂಪೀ ಭಗವಾನ್ ವಿವಸ್ವತನು ತಾನೂ ರಕ್ತದಂತೆ ಕೆಂಪಾದ ದೇಹವನ್ನು ಧರಿಸಿ ಆ ಕೆಂಪನ್ನು ತೊಳೆದುಕೊಳ್ಳುವ ಇಚ್ಛೆಯಿಂದ ಪಶ್ಚಿಮ ಸಮುದ್ರದ ಕಡೆ ಹೊರಟುಹೋಗುತ್ತಿದ್ದಾನೆ!"

ಹೀಗೆ ಯೋಚಿಸುತ್ತಿದ್ದ ಸುರರ್ಷಿಸಂಘಗಳು ತಮ್ಮ ತಮ್ಮ ನಿವಾಸಗಳಿಗೆ ತೆರಳಿದಂತೆ ಇತರ ಜನರೂ ಅದೇ ರೀತಿಯಲ್ಲಿ ತಮ್ಮ ತಮ್ಮ ಸ್ವಭಾವಗಳಿಗನುಗುಣವಾಗಿ ಯೋಚಿಸುತ್ತಾ ಭೂಮ್ಯಾಂತರಿಕ್ಷಗಳಲ್ಲಿದ್ದ ತಮ್ಮ ತಮ್ಮ ನಿವಾಸಗಳಿಗೆ ಸುಖವಾಗಿ ಪ್ರಯಾಣಿಸಿದರು. ಪ್ರಾಣಭೃತರಿಗೆ ಭಯಂಕರವಾಗಿದ್ದ ಕುರುವೀರ ಮುಖ್ಯರಾದ ಧನಂಜಯ-ಆಧಿರಥರ ಯುದ್ಧವನ್ನು ನೋಡಿ ವಿಸ್ಮಿತರಾಗಿ ಇಬ್ಬರನ್ನೂ ಪ್ರಶಂಸಿಸುತ್ತಾ ಜನರು ತೆರಳಿದರು.

ಶರಗಳಿಂದ ಕವಚವು ಕತ್ತರಿಸಲ್ಪಟ್ಟು ಹತನಾಗಿ ಅಸುನೀಗಿ ಮಲಗಿದ್ದ ಆ ವೀರ ರಾಧೇಯನನ್ನು ಲಕ್ಷ್ಮಿಯು ಮಾತ್ರ ಬಿಟ್ಟು ಹೋಗಿರಲಿಲ್ಲ. ನಾನಾ ಆಭರಣಗಳನ್ನು ಮತ್ತು ಚಿನ್ನದ ಅಂಗದಗಳನ್ನು ತೊಟ್ಟು ಹತನಾಗಿ ಮಲಗಿದ್ದ ವೈಕರ್ತನ ಕರ್ಣನು ಅಂಕುರಗಳಿದ್ದ ವೃಕ್ಷದಂತೆ ಕಾಣುತ್ತಿದ್ದನು. ಉತ್ತಮ ಕನಕದ ಕಾಂತಿಯಿದ್ದ, ಪಾವಕನಂತೆ ಉರಿಯುತ್ತಿದ್ದ, ಆ ಪುತ್ರವಾನ್ ಪುರುಷವ್ಯಾಘ್ರನು ಅಸ್ತ್ರತೇಜಸ್ಸಿನಿಂದ ಪಾಂಚಾಲರನ್ನು ಮತ್ತು ಪಾಂಡವರನ್ನು ಸುಟ್ಟು ಪಾರ್ಥನ ತೇಜಸ್ಸಿನಿಂದ ಶಾಂತನಾದನು. ಸತ್ಪುರುಷ ಯಾಚಕರು ಕೇಳಿಕೊಂಡಾಗ ಯಾರು ಕೊಡುತ್ತೇನೆಂದು ಹೇಳುತ್ತಿದ್ದನೇ ಹೊರತು ಇಲ್ಲವೆಂದು ಹೇಳುತ್ತಿರಲಿಲ್ಲವೋ ಆ ಸತ್ಪುರುಷ ವೃಷ ಕರ್ಣನು ದ್ವೈರಥದಲ್ಲಿ ಹತನಾದನು. ಆ ಮಹಾತ್ಮನ ಸರ್ವೈಶ್ವರ್ಯವೂ ಬ್ರಾಹ್ಮಣರಿಗೆ

ಮೀಸಲಾಗಿದ್ದಿತು. ತನ್ನ ಜೀವವೂ ಸೇರಿ ಬ್ರಾಹ್ಮಣರಿಗೆ ಕೊಡಬಾರದೆಂಬಾ ಯಾವ ವಸ್ತುವೂ ಅವನಲ್ಲಿರಲಿಲ್ಲ. ನರರಿಗೆ ಸದಾ ಪ್ರಿಯನಾಗಿದ್ದ, ದಾನಿ, ಪ್ರಿಯವಾದುದನ್ನು ನೀಡುವ ಕರ್ಣನು ನಿನ್ನ ಪುತ್ರರ ಜಯ, ಆಶೆ, ರಕ್ಷಣೆ ಮತ್ತು ನೆರಳನ್ನೂ ಜೊತೆಯಲ್ಲಿಯೇ ತೆಗೆದುಕೊಂಡು ದಿವಂಗತನಾದನು.

ಕರ್ಣನು ಹತನಾಗಲು ನದಿಗಳು ಹರಿಯುವುದನ್ನು ನಿಲ್ಲಿಸಿಬಿಟ್ಟವು, ಸೂರ್ಯನು ಕುಂದಿ ಅಸ್ತನಾದನು. ಸೂರ್ಯವರ್ಣದ ಯಮನ ಪುತ್ರ ಗ್ರಹವು ಅಡ್ಡವಾಗಿ ಉದಯಿಸಿತು. ಆಕಾಶವು ಸೀಳಿದಂತಾಯಿತು. ಭೂಮಿಯು ಚೀತ್ಕಾರಮಾಡಿತು. ಕ್ರೂರವಾದ ಭಿರುಗಾಳಿಯು ಬೀಸತೊಡಗಿತು. ದಿಕ್ಕುಗಳು ತುಂಬಾಹೊಗೆಯೊಂದಿಗೆ ಪ್ರಜ್ವಲಿಸತೊಡಗಿತು. ಸಮುದ್ರಗಳು ಗರ್ಜಿಸುತ್ತಾ ಅಲ್ಲೋಲಕಲ್ಲೋಲವಾದವು. ಕಾನನ ಶಿಖರಗಳೊಂದಿಗೆ ಪರ್ವತಗಳು ನಡುಗಿದವು. ಭೂತಗಣಗಳು ಅತ್ಯಂತ ವ್ಯಥೆಗೊಂಡವು. ಬೃಹಸ್ಪತಿಯು ರೋಹಿಣಿಯನ್ನು ಆವರಿಸಿ ಚಂದ್ರ-ಸೂರ್ಯರಿಗೆ ಸಮಾನನಾಗಿ ಪ್ರಕಾಶಿಸಿದನು. ಕರ್ಣನು ಹತನಾಗಲು ದಿಕ್ಕುಗಳು ಬೆಳಗಿದವು. ಆಕಾಶವು ಕತ್ತಲೆಯಿಂದ ಆವೃತವಾಯಿತು. ಭೂಮಿಯು ಕಂಪಿಸಿತು. ಜ್ವಲನದಿಂದ ಪ್ರಕಾಶಿಸುತ್ತಾ ಉಲ್ಕೆಗಳು ಬಿದ್ದವು. ನಿಶಾಚರರೂ ಅತ್ಯಂತ ಹರ್ಷಿತರಾದರು. ಚಂದ್ರನಂತೆ ಪ್ರಕಾಶಿಸುವ ಮುಖವುಳ್ಳ

ಅರ್ಜುನನು ಕ್ಷುರದಿಂದ ಕರ್ಣನ ಶಿರವನ್ನು ಉರುಳಿಸಿದಾಗ ಅಂತರಿಕ್ಷ ಮತ್ತು ಸ್ವರ್ಗಗಳಲ್ಲಿ ಜನರ ಹಾಹಾಕಾರವುಂಟಾಯಿತು.

ಶತ್ರು ಕರ್ಣನನ್ನು ಯುದ್ಧದಲ್ಲಿ ಸಂಹರಿಸಿದ ಪಾರ್ಥ ಅರ್ಜುನನು ದೇವಗಂಧರ್ವಮನುಷ್ಯರಿಂದ ಪೂಜಿಸಲ್ಪಟ್ಟು ವೃತ್ರನನ್ನು ಸಂಹರಿಸಿದ ಸಹಸ್ರಲೋಚನನಂತೆ ಪರಮ ತೇಜಸ್ಸಿನಿಂದ ರಾರಾಜಿಸಿದನು. ಆಗ ಮೋಡಗಳ ವೃಂದಗಳಂತೆ ಶಬ್ಧಮಾಡುತ್ತಿದ್ದ, ಶರತ್ಕಾಲದ ಮಧ್ಯಾಹ್ನದ ಸೂರ್ಯನಂತೆ ಬೆಳಗುತ್ತಿದ್ದ, ಭಯಂಕರವಾಗಿ ಶಬ್ಧಮಾಡುತ್ತಿದ್ದ ಪತಾಕೆ-ಧ್ವಜವುಳ್ಳ, ಹಿಮ-ಚಂದ್ರ-ಶಂಖ ಮತ್ತು ಸ್ಫಟಿಕಶಿಲೆಗಳಂತೆ ಕಾಂತಿಯುಕ್ತವಾಗಿದ್ದ, ಸುವರ್ಣ-ಮುಕ್ತ-ಮಣಿ-ವಜ್ರ-ವಿದ್ರುಮಗಳಿಂದ ಅಲಂಕೃತವಾಗಿದ್ದ, ಹಂಸಗಳ ವೇಗವುಳ್ಳ ರಥದಲ್ಲಿ ಕುಳಿತು ಅಗ್ನಿ-ದಿವಾಕರರಂತೆ ಬೆಳಗುತ್ತಿದ್ದ ನರೋತ್ತಮರಾದ ಪಾಂಡವ-ಕೇಶಿಮರ್ದನರು ರಣರಂಗದಲ್ಲಿ ಭಯವಿಲ್ಲದೇ ಒಂದೇ ರಥದಲ್ಲಿ ಕುಳಿತಿರುವ ವಿಷ್ಣು-ವಾಸವರಂತೆ ವಿರಾಜಿಸುತ್ತಿದ್ದರು. ಆಗ ಧನುಸ್ಸು-ಶಿಂಜನಿ ಮತ್ತು ಚಪ್ಪಾಳೆಯ ಶಬ್ಧಗಳೊಂದಿಗೆ ಶತ್ರುಗಳನ್ನು ಹತಪ್ರಭರನ್ನಾಗಿಸಿ ಶರೌಘಗಳಿಂದ ಕುರುಗಳನ್ನು ಆಚ್ಛಾದಿಸಿ ಕಪಿಧ್ವಜ ಮತ್ತು ಗರುಡಧ್ವಜರಿಬ್ಬರೂ ಶತ್ರುಗಳ ಮನಸ್ಸುಗಳನ್ನು ಭೇದಿಸುವ ಸುಘೋಷವುಳ್ಳ ಶಂಖಗಳನ್ನು ಜೋರಾಗಿ ಊದಿದರು.

ಸುವರ್ಣಬಲೆಗಳಿಂದ ಅಚ್ಛಾದಿತವಾಗಿದ್ದ,

ಮಹಾಧ್ವನಿಯನ್ನುಂಟುಮಾಡುವ, ಹಿಮದಂತೆ ಬಿಳುಪಾಗಿದ್ದ ತಮ್ಮ ಶ್ರೇಷ್ಠ ಶಂಖಗಳನ್ನು ಕೈಗೆತ್ತಿಕೊಂಡು ಆ ಇಬ್ಬರು ನರಶ್ರೇಷ್ಠರೂ ಶ್ರೇಷ್ಠ ಮುಖಗಳಿಂದ ಚುಂಬಿಸಿ ಏಕಕಾಲದಲ್ಲಿ ಊದಿದರು. ಪಾಂಚಜನ್ಯ ಮತ್ತು ದೇವದತ್ತಗಳ ನಿರ್ಘೋಷವು ಪೃಥ್ವಿ, ಅಂತರಿಕ್ಷ ಮತ್ತು ಎಲ್ಲ ದಿಕ್ಕುಗಳಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡಿತು. ಆ ಎರಡು ಶಂಖಗಳ ಶಬ್ಧದಿಂದ ವನ, ಶೈಲ, ನದಿ, ದಿಕ್ಕುಗಳು ನಿನಾದಿಸಿದವು. ನಿನ್ನ ಪುತ್ರನ ಸೇನೆಯು ಭಯಗೊಂಡಿತು ಮತ್ತು ಆ ವೀರರಿಬ್ಬರೂ ಯುಧಿಷ್ಠಿರನಿಗೆ ಆನಂದವನ್ನಿತ್ತರು.

ಶಂಖಧ್ವನಿಗಳನ್ನು ಕೇಳುತ್ತಲೇ ಕುರುಸೈನಿಕರು ವೇಗದಿಂದ ಮದ್ರಾಧಿಪತಿಯನ್ನೂ ಭಾರತರ ಒಡೆಯ ದುರ್ಯೋಧನನನ್ನೂ ಅಲ್ಲಿಯೇ ಬಿಟ್ಟು ಪಲಾಯನಗೈದರು. ಆಗ ಭೂತಗಣಗಳು ಒಟ್ಟಾಗಿ ಇಬ್ಬರು ಸೂರ್ಯರಂತೆ ರಣರಂಗವನ್ನು ಶೋಭಿಸುತ್ತಿದ್ದ ಧನಂಜಯ ಮತ್ತು ಜನಾರ್ದನರನ್ನು ಅನುಮೋದಿಸಿದರು. ಸಮರದಲ್ಲಿ ಕರ್ಣನ ಶರಗಳಿಂದ ವ್ಯಾಪ್ತರಾಗಿದ್ದ ಅಚ್ಯುತ-ಅರ್ಜುನರು ಕತ್ತಲೆಯನ್ನು ಕೊಂದು ಉದಿಸಿದ ಅಮಲ ಕಿರಣಗಳನ್ನೇ ಮಾಲೆಗಳನ್ನಾಗಿಸಿಕೊಂಡ ಸೂರ್ಯ-ಚಂದ್ರರಂತೆ ಪ್ರಕಾಶಿಸುತ್ತಿದ್ದರು. ಅಪ್ರತಿಮ ವಿಕ್ರಮಿಗಳಾದ ವಾಸವ-ಅಚ್ಯುತರಿಬ್ಬರೂ ಆ ಬಾಣಗಣಗಳನ್ನು ಹೊರತೆಗೆದು, ಸುಹೃದಯರಿಂದ ಪರಿವೃತರಾಗಿ, ಯಜ್ಞಕ್ಕೆ ಆಹ್ವಾನಿತರಾದ ವಿಷ್ಣು-

ವಾಸವರಂತೆ ಸುಖವಾಗಿ ತಮ್ಮ ಶಿಬಿರವನ್ನು ಪ್ರವೇಶಿಸಿದರು. ಆ ಮಹಾರಣದಲ್ಲಿ ಕರ್ಣನನ್ನು ಸಂಹರಿಸಿದ ಅವರಿಬ್ಬರನ್ನೂ ದೇವ-ಗಂಧರ್ವ-ಮನುಷ್ಯ-ಚಾರಣ-ಮಹರ್ಷಿ-ಯಕ್ಷ-ಮಹೋರಗರೆಲ್ಲರೂ ಜಯಕಾರಗಳಿಂದ ಸಂಪೂಜಿಸಿದರು.

ಹಾಗೆ ಕರ್ಣನ ಪತನವಾಗಿ ಕೌರವ ಸೇನೆಯು ಪಲಾಯನಮಾಡಲು ದಾಶಾರ್ಹನು ಪಾರ್ಥನನ್ನು ಬಿಗಿದಪ್ಪಿ ಹರ್ಷದಿಂದ ಈ ಮಾತನ್ನಾಡಿದನು:

> “ಧನಂಜಯ! ವೃತ್ರನು ಬಲಭಿದ ಇಂದ್ರನಿಂದ ಮತ್ತು ಕರ್ಣನು ನಿನ್ನಿಂದ ಹತರಾದರು. ಕರ್ಣ ಮತ್ತು ವೃತ್ರರ ವಧೆಯನ್ನು ಮಾನವರು ಹೇಳುತ್ತಿರುತ್ತಾರೆ. ಭೂರಿತೇಜಸ ಇಂದ್ರನು ವೃತ್ರನನ್ನು ವಜ್ರದಿಂದ ಯುದ್ಧದಲ್ಲಿ ಸಂಹರಿಸಿದನು. ನೀನಾದರೋ ಕರ್ಣನನ್ನು ಧನುಸ್ಸು ಮತ್ತು ನಿಶಿತ ಶರಗಳಿಂದ ಸಂಹರಿಸಿದೆ. ನಿನ್ನ ಈ ಯಶೋಕಾರಿ ವಿಕ್ರಮವು ಲೋಕದಲ್ಲಿ ಪ್ರಥಿತವಾಗುತ್ತದೆ. ಇದರ ಕುರಿತು ಧರ್ಮರಾಜನಿಗೆ ಹೇಳೋಣ! ದೀರ್ಘಕಾಲದಿಂದ ಕರ್ಣನ ವಧೆಯಾಗಬೇಕೆಂದು ಅವನು ಬಯಸಿದ್ದನು. ಅದು ಆಯಿತೆಂದು ಧರ್ಮರಾಜನಿಗೆ ಹೇಳು. ಅವನ ಋಣದಿಂದ

ನೀನು ಮುಕ್ತನಾಗುವೆ.”

ಹಾಗೆಯೇ ಆಗಲೆಂದು ಪಾರ್ಥನು ಹೇಳಲು ಕೇಶವನು ಅವ್ಯಗ್ರನಾಗಿ ರಥಶ್ರೇಷ್ಠನ ರಥವನ್ನು ಹಿಂದಿರುಗಿಸಿದನು. ಗೋವಿಂದನು ಧೃಷ್ಟದ್ಯುಮ್ನ, ಯುಧಾಮನ್ಯು, ಮಾದ್ರೀಪುತ್ರರು, ವೃಕೋದರ ಮತ್ತು ಯುಯುಧಾನರಿಗೆ ಇದನ್ನು ಹೇಳಿದನು:

“ಕರ್ಣನು ಅರ್ಜುನನಿಂದ ಹತನಾದುದನ್ನು ರಾಜನಿಗೆ ತಿಳಿಸಿ ಬರುವವರೆಗೆ ನೀವು ಶತ್ರುಗಳಿಗೆ ಅಭಿಮುಖರಾಗಿ ನಿಂತು ಅವರನ್ನು ತಡೆಯಿರಿ. ನಿಮಗೆ ಮಂಗಳವಾಗಲಿ! “

ಹಾಗೆ ಆ ಶೂರರಿಂದ ಬೀಳ್ಕೊಂಡು ಅವರಿಬ್ಬರೂ ರಾಜನಿವೇಶನಕ್ಕೆ ಹೋದರು. ಪಾರ್ಥನನ್ನು ಕರೆದುಕೊಂಡು ಗೋವಿಂದನು ಯುಧಿಷ್ಠಿರನನ್ನು ಸಂದರ್ಶಿಸಿದನು. ಕಾಂಚನದ ಉತ್ತಮ ಶಯನದಲ್ಲಿ ಮಲಗಿದ್ದ ಆ ರಾಜಶಾರ್ದೂಲನ ಚರಣಗಳನ್ನು ಸಂತೋಷದಿಂದಿದ್ದ ಅವರಿಬ್ಬರೂ ಹಿಡಿದುಕೊಂಡರು. ಅವರ ಹರ್ಷವನ್ನೂ ಸೈನಿಕರು ಎದೆಯನ್ನು ಹೊಡೆದುಕೊಳ್ಳುತ್ತಿರುವುದನ್ನೂ ಕಂಡ ಯುಧಿಷ್ಠಿರನು ರಾಧೇಯನು ಹತನಾದನೆಂದು ತಿಳಿದು ಮೇಲೆದ್ದು ನಿಂತನು. ಆಗ ಯದುನಂದನನು ಅವನಿಗೆ ಕರ್ಣನ ನಿಧನದ ಕುರಿತು, ಅಲ್ಲಿ ಹೇಗೆ ನಡೆಯಿತೋ ಹಾಗೆ, ಹೇಳಿದನು. ಅಚ್ಯುತ ಕೃಷ್ಣನು ನಸುನಗುತ್ತ

ಶತ್ರುವನ್ನು ಕಳೆದುಕೊಂಡ ಯುಧಿಷ್ಠಿರನಿಗೆ ಬದ್ಧಾಂಜಲಿಯಾಗಿ ಹೇಳಿದನು:

> “ರಾಜನ್! ಒಳ್ಳೆಯದಾಯಿತು ಗಾಂಡೀವಧನ್ವಿ ಪಾಂಡವ, ವೃಕೋದರ, ಮಾದ್ರೀಪುತ್ರ ಪಾಂಡವರೀರ್ವರೂ ಮತ್ತು ನೀನೂ ಕೂಡ ಕುಶಲರಾಗಿರುವಿರಿ! ಈ ಲೋಮಹರ್ಷಣ ವೀರಕ್ಷಯಕಾರಕ ಸಂಗ್ರಾಮದಿಂದ ನೀವು ಪಾರಾಗಿದ್ದೀರಿ. ಆದುದರಿಂದ ಮುಂದೆ ಮಾಡಬೇಕಾದ ಕಾರ್ಯಗಳನ್ನು ಮಾಡಲು ಬೇಗನೇ ಉಪಕ್ರಮಿಸು. ಕ್ರೂರ ಮಹಾಬಲ ಸೂತಪುತ್ರನು ಹತನಾಗಿದ್ದಾನೆ. ಅದೃಷ್ಟವಷಾತ್ ನಿನಗೆ ಜಯವಾಗಿದೆ. ಅದೃಷ್ಟವಷಾತ್ ನಿನ್ನ ಏಳ್ಗೆಯಾಗುತ್ತಿದೆ. ದ್ಯೂತದಲ್ಲಿ ಗೆದ್ದಿದ್ದ ಕೃಷ್ಣೆಯನ್ನು ನೋಡಿ ಯಾವ ಪುರುಷಾಧಮನು ನಕ್ಕಿದ್ದನೋ ಆ ಸೂತಪುತ್ರನ ರಕ್ತವನ್ನು ಇಂದು ಭೂಮಿಯು ಕುಡಿಯುತ್ತಿದೆ. ಬಾಣಗಳಿಂದ ಸೀಳಲ್ಪಟ್ಟು ಅನೇಕ ಶರಗಳಿಂದ ಕತ್ತರಿಸಲ್ಪಟ್ಟಿರುವ ನಿನ್ನ ಶತ್ರುವನ್ನು ನೋಡು!”

ಯುಧಿಷ್ಠಿರನಾದರೋ ಪ್ರಹೃಷ್ಟನಾಗಿ ದಾಶಾರ್ಹನನ್ನು ಪ್ರತಿಪೂಜಿಸಿದನು. ಸಂತೋಷದಿಂದ

“ಒಳ್ಳೆಯದಾಯಿತು ! ಒಳ್ಳೆಯದಾಯಿತು !” ಎಂದು ಹೇಳುತ್ತಾ ಇದನ್ನೂ ಹೇಳಿದನು: “ದೇವಕೀನಂದನ ! ನೀನಿರುವಾಗ ಮತ್ತು ನೀನು ಸಾರಥಿಯಾಗಿರುವಾಗ ಇಂದು ಪಾರ್ಥನು ತೋರಿಸಿದ ಪೌರುಷವು ನನಗೆ ಆಶ್ಚರ್ಯವೆನಿಸುವುದಿಲ್ಲ.”

ಅನಂತರ ಆ ಕುರುಶ್ರೇಷ್ಠ ಪಾರ್ಥನು ತೋಳ್ಬಂದಿಯಿಂದ ಕೂಡಿದ ಬಲಭುಜವನ್ನು ಮೇಲೆತ್ತಿ ಕೇಶವಾರ್ಜುನರಿಬ್ಬರಿಗೂ ಹೇಳಿದನು:

“ನಾರದನು ಹೇಳಿದಂತೆ ನೀವಿಬ್ಬರೂ ನರ-ನಾರಾಯಣ ದೇವರುಗಳು. ಧರ್ಮಸಂಸ್ಥಾಪನೆಯಲ್ಲಿ ನಿರತರಾಗಿರುವ ಪುರಾಣ ಪುರುಷೋತ್ತಮರು. ಹಾಗೆಯೇ ತತ್ತ್ವವಿದ ಮೇಧಾವೀ ಪ್ರಭು ಕೃಷ್ಣದ್ವೈಪಾಯನನೂ ಕೂಡ ಈ ವಿಷಯವನ್ನು ಹಲವು ಬಾರಿ ನನಗೆ ಹೇಳಿದ್ದನು. ಕೃಷ್ಣ ! ನಿನ್ನ ಪ್ರಭಾವದಿಂದಾಗಿ ಧನಂಜಯನು ಗಾಂಡೀವದಿಂದ ಶತ್ರುಗಳನ್ನು ಎದುರಿಸಿ ಜಯವನ್ನೇ ಪಡೆದಿದ್ದಾನೆ. ಎಂದೂ ವಿಮುಖನಾಗಲಿಲ್ಲ. ಯುದ್ಧದಲ್ಲಿ ನೀನು ಪಾರ್ಥನ ಸಾರಥ್ಯವನ್ನು ವಹಿಸುತ್ತಿರುವಾಗ ನಮಗೆ ಜಯವೇ ನಿಶ್ಚಯವಾದುದು. ನಮಗೆ ಪರಾಜಯವೆನ್ನುವುದೇ ಇರುವುದಿಲ್ಲ.”

ಹೀಗೆ ಹೇಳಿ ಆ ಮಹಾರಥನು ಶರೀರದಲ್ಲಿ ಬಿಳುಪಾಗಿಯೂ ಬಾಲದಲ್ಲಿ ಕಪ್ಪಾಗಿಯೂ ಇದ್ದ ಕುದುರೆಗಳನ್ನು ಕಟ್ಟಿದ್ದ ಪ್ರಿಯ ಹೇಮಭೂಷಿತ ರಥವನ್ನೇರಿ ಸ್ವಸೇನೆಯಿಂದ ಪರಿವೃತವಾಗಿ, ಕೃಷ್ಣಾರ್ಜುನರನ್ನೊಡಗೂಡಿ ಹೊರಟನು. ದಾರಿಯಲ್ಲಿ ವೀರರಾದ ಮಾಧವ-ಫಲ್ಗುನರೊಂದಿಗೆ ಯುದ್ಧದ ವಿಷವಾಗಿ ಬಹಳವಾಗಿ ಮಾತನಾಡಿಕೊಳ್ಳುತ್ತಾ ರಣಭೂಮಿಯನ್ನು ನೋಡಲು ಹೊರಟ ಅವನು ರಣದಲ್ಲಿ ಗಾಂಡೀವದಿಂದ ಹೊರಟ ವಿಶಿಖಗಳಿಂದ ದೇಹದಲ್ಲೆಲ್ಲಾ ಗಾಯಗೊಂಡು ಮಲಗಿದ್ದ ಕರ್ಣನನ್ನು ನೋಡಿದನು. ಪುತ್ರನೊಂದಿಗೆ ಹತನಾಗಿದ್ದ ಕರ್ಣನನ್ನು ನೋಡಿ ಯುಧಿಷ್ಠಿರನು ಮಾಧವ-ಪಾಂಡವರಿಬ್ಬರನ್ನೂ ಪ್ರಶಂಸಿಸಿದನು.

> “ಗೋವಿಂದ! ನಿನ್ನ ರಕ್ಷಣೆಯಿಂದ, ವೀರ್ಯದಿಂದ, ಮತ್ತು ಬುದ್ಧಿವಂತಿಕೆಯಿಂದ ಪರಿಪಾಲಿತನಾದ ನಾನು ಇಂದು ಸಹೋದರರೊಂದಿಗೆ ಪೃಥ್ವಿಯ ರಾಜನಾಗಿದ್ದೇನೆ. ನರವ್ಯಾಘ್ರ ಅಭಿಮಾನಿ ರಾಧೇಯನು ಹತನಾದುದನ್ನು ನೋಡಿ ಇಂದು ದುರಾತ್ಮ ಧಾರ್ತರಾಷ್ಟ್ರನು ಮಹಾರಥ ಕರ್ಣನು ಹತನಾದನೆಂದು ಜೀವಿತದಲ್ಲಿಯೂ ರಾಜ್ಯದ ವಿಷಯದಲ್ಲಿಯೂ ಅತ್ಯಂತ ನಿರಾಶನಾಗುತ್ತಾನೆ. ನಿನ್ನ

ಅನುಗ್ರಹದಿಂದ ನಾವು ಕೃತಾರ್ಥರಾಗಿದ್ದೇವೆ. ನೀನು ಮತ್ತು
ಗಾಂಡೀವಧನ್ವಿಯು ವಿಜಯಿಯಾಗಿರುವಿರಿ.
ಸೌಭಾಗ್ಯದಿಂದಲೇ ನೀವು ಜಯಿಸಿರುವಿರಿ!
ಸೌಭಾಗ್ಯದಿಂದಲೇ ಕರ್ಣನು ಪತನಹೊಂದಿದನು!"

ಹೀಗೆ ಧರ್ಮರಾಜ ಯುಧಿಷ್ಠಿರನು ಅತ್ಯಂತ ಹರ್ಷಿತನಾಗಿ ಜನಾರ್ದನನನ್ನೂ ಅರ್ಜುನನನ್ನೂ ಬಹಳವಾಗಿ ಪ್ರಶಂಸಿಸಿದನು. ಆಗ ಭೀಮಸೇನನೇ ಮೊದಲಾದ ಸರ್ವ ಭ್ರಾತೃಗಳೂ ಹರ್ಷಯುಕ್ತರಾದ ಮಹಾರಥರೂ ರಾಜನನ್ನು ಅಭಿನಂದಿಸಿದರು. ಸೂತನಂದನನು ಹತನಾಗಲು ನಕುಲ, ಸಹದೇವರು, ವೃಕೋದರ, ಸಾತ್ಯಕಿ, ಧೃಷ್ಟದ್ಯುಮ್ನ, ಶಿಖಂಡಿ ಮತ್ತು ಇತರ ಪಾಂಡು-ಪಾಂಚಾಲ-ಸೃಂಜಯರು ಕೌಂತೇಯನನ್ನು ಗೌರವಿಸಿದರು. ವಿಜಯೋಲ್ಲಾಸಿತರಾದ, ಗುರಿಯನ್ನು ತಲುಪಿದ್ದ, ಯುದ್ಧಕುಶಲರಾದ, ಪ್ರಹಾರಿಗಳಾದ ಮಹಾರಥರು ಮುದಿತರಾಗಿ ನೃಪತಿ ಯುಧಿಷ್ಠಿರನನ್ನು ಅಭಿನಂದಿಸಿ, ಪರಂತಪರಾದ ಕೃಷ್ಣರಿಬ್ಬರನ್ನೂ ಪ್ರಶಂಸಯುಕ್ತವಾದ ಮಾತುಗಳಿಂದ ಸ್ತುತಿಸುತ್ತಾ ತಮ್ಮ ತಮ್ಮ ಶಿಬಿರಗಳಿಗೆ ತೆರಳಿದರು.

# ಶಲ್ಯ ಪರ್ವ




## ದುರ್ಯೋಧನನು ಹತನಾದುದನ್ನು ಕೇಳಿ ಧೃತರಾಷ್ಟ್ರನ ಶೋಕ

ಕರ್ಣನು ಹತನಾಗಲು ಧಾರ್ತರಾಷ್ಟ್ರ ಸುಯೋಧನನು ಅತ್ಯಂತ ಶೋಕಸಾಗರದಲ್ಲಿ ಮುಳುಗಿಹೋದನು. ಎಲ್ಲೆಡೆಯೂ ನಿರಾಶೆಯೇ ಕಂಡುಬಂದಿತು. “ಹಾ ಕರ್ಣ ! ಹಾ ಕರ್ಣ !” ಎಂದು ಪುನಃ ಪುನಃ ಶೋಕಿಸುತ್ತಾ ಬಹಳ ಕಷ್ಟದಿಂದ ಅವನು ಅಳಿದುಳಿದ ನೃಪರೊಂದಿಗೆ

ಸ್ವಶಿಬಿರಕ್ಕೆ ತೆರಳಿದನು. ಶಾಸ್ತ್ರನಿಶ್ಚಿತ ಕಾರಣಗಳಿಂದ ರಾಜರು ಸಮಾಧಾನಗೊಳಿಸಲು ಪ್ರಯತ್ನಿಸಿದರೂ ಸೂತಪುತ್ರನ ವಧೆಯನ್ನು ಸ್ಮರಿಸಿಕೊಳ್ಳುತ್ತಾ ರಾಜನಿಗೆ ಶಾಂತಿಯೆನ್ನುವುದೇ ಇಲ್ಲವಾಯಿತು. ಆಗಬೇಕಾದುದನ್ನು ಆಗಿಸಿಕೊಳ್ಳುವುದರಲ್ಲಿ ದೈವವೇ ಬಲಶಾಲಿಯಾದುದೆಂದು ಮನ್ನಿಸಿ ರಾಜನು ಸಂಗ್ರಾಮವನ್ನು ನಿಶ್ಚಯಿಸಿ ಪುನಃ ಯುದ್ಧಕ್ಕೆ ಹೊರಟನು. ವಿಧಿವತ್ತಾಗಿ ಶಲ್ಯನನ್ನು ಸೇನಾಪತಿಯನ್ನಾಗಿ ಮಾಡಿ ರಾಜಪುಂಗವನು ಅಳಿದುಳಿದ ನೃಪರೊಂದಿಗೆ ರಣಕ್ಕೆ ತೆರಳಿದನು. ಆಗ ಕುರು-ಪಾಂಡವ ಸೇನೆಗಳ ನಡುವೆ ದೇವಾಸುರರ ರಣದಂತೆ ಅತ್ಯಂತ ತುಮುಲ ಯುದ್ಧವು ನಡೆಯಿತು. ಆ ದಿನ ಶಲ್ಯನು ಪಾಂಡುಸೇನೆಯೊಂದಿಗೆ ಕದನವಾಡಿ ಮಧ್ಯಾಹ್ನದಲ್ಲಿ ಧರ್ಮರಾಜನಿಂದ ಹತನಾದನು.

ಆಗ ಬಂಧುಗಳನ್ನು ಕಳೆದುಕೊಂಡ ರಾಜಾ ದುರ್ಯೋಧನನು ರಿಪುಗಳ ಭಯದಿಂದ ರಣದಿಂದ ತಪ್ಪಿಸಿಕೊಂಡು ಘೋರ ಸರೋವರವನ್ನು ಪ್ರವೇಶಿಸಿದನು. ಆ ದಿನದ ಅಪರಾಹ್ಣದಲ್ಲಿ ಮಹಾರಥರಿಂದ ಸುತ್ತುವರೆಯಲ್ಪಟ್ಟು ಭೀಮಸೇನನು ಸರೋವರದಿಂದ ದುರ್ಯೋಧನನ್ನು ಕರೆದು ಯೋಗವಶಾತ್ ಕೆಳಗುರುಳಿಸಿದನು.

ಆ ಮಹೇಷ್ವಾಸನು ಹತನಾಗಲು ಅಳಿದುಳಿದ ಮೂರು ಮಹಾರಥರು

ಕೋಪದಿಂದ ರಾತ್ರಿಯಲ್ಲಿ ಪಾಂಚಾಲಸೈನಿಕರನ್ನು ಸಂಹರಿಸಿದರು.

ಮರುದಿನ ಪೂರ್ವಾಹ್ಣದ ಸಮಯದಲ್ಲಿ ದುಃಖಶೋಕಸಮನ್ವಿತ ದೀನ ಸಂಜಯನು ಶಿಬಿರದಿಂದ ಹೊರಟು ಹಸ್ತಿನಾಪುರಿಯನ್ನು ಪ್ರವೇಶಿಸಿದನು. ಪುರವನ್ನು ಪ್ರವೇಶಿಸಿ ಭುಜಗಳನ್ನು ಮೇಲೆತ್ತಿ ದುಃಖಿತನಾಗಿ ನಡುಗುತ್ತಾ ಅವನು ಬೇಗನೇ ರಾಜನಿವೇಶನವನ್ನು ಪ್ರವೇಶಿಸಿದನು. "ಹಾ ರಾಜ! ಮಹಾತ್ಮ ದುರ್ಯೋಧನನ ನಿಧನದಿಂದ ನಾವೆಲ್ಲರೂ ನಾಶಗೊಂಡೆವು!" ಎಂದು ದುಃಖಿತನಾಗಿ ರೋದಿಸಿದನು. "ಅಯ್ಯೋ! ಕಾಲವೇ ಅತ್ಯಂತ ಬಲಶಾಲಿ! ಬಲದಲ್ಲಿ ಶಕ್ರನಿಗೆ ಸಮರಾಗಿದ್ದ ಪಾರ್ಥಿವರೆಲ್ಲರೂ ವಧಿಸಲ್ಪಟ್ಟು ಪರಮ ಗತಿಯನ್ನು ಹೊಂದಿದರು" ಎಂದನು.

ಸಂಜಯನನ್ನು ನೋಡಿದ ಪುರಜನರೆಲ್ಲರೂ ಅತ್ಯಂತ ಉದ್ವಿಗ್ನರಾಗಿ ಒಟ್ಟು ಸ್ವರದಲ್ಲಿ "ಹಾ ರಾಜಾ!" ಎಂದು ಗೋಳಿಟ್ಟರು. ನೃಪನು ಹತನಾದುದನ್ನು ಕೇಳಿ ಕುಮಾರಾದ್ಯಂತರಾಗಿ ಸುತ್ತಲಿದ್ದ ಎಲ್ಲರೂ ಆರ್ತನಾದಗೈದರು. ವಿಹ್ವಲ ಸೂತನು ನೃಪತಿಕಕ್ಷವನ್ನು ಪ್ರವೇಶಿಸಿ ತನ್ನ ಒಡೆಯ ಧೃತರಾಷ್ಟ್ರನನ್ನು ಕಂಡನು. ಅಲ್ಲಿ ಕರ್ಣನ ನಿಧನದ ಕುರಿತೇ ಯೋಚಿಸುತ್ತಿದ್ದ, ಸೊಸೆಯಂದಿರು, ಗಾಂಧಾರಿ-ವಿದುರರು, ಅನ್ಯ ಸುಹೃದಯರು, ಕುಟುಂಬದವರು, ಮತ್ತು ಹಿತೈಷಿಗಳಿಂದ

ಸುತ್ತುವರೆಯಲ್ಪಟ್ಟು ಕುಳಿತಿದ್ದ ಧೃತರಾಷ್ಟ್ರನನ್ನು ನೋಡಿ ದುಃಖಮನಸ್ಕನಾಗಿ ಅಳುತ್ತಾ ಕಣ್ಣೀರಿನಿಂದ ತಡೆಯಲ್ಪಟ್ಟ ಧ್ವನಿಯಿಂದ ಸೂತನು ರಾಜನಿಗೆ ಈ ಮಾತನ್ನಾಡಿದನು:

"ಭರತರ್ಷಭ! ನಾನು ಸಂಜಯ! ಮದ್ರಾಧಿಪ ಶಲ್ಯ ಸೌಬಲ ಶಕುನಿ, ಮತ್ತು ದೃಢವಿಕ್ರಮಿ ಉಲೂಕರು ಹತರಾದರು! ಕಾಂಬೋಜರು, ಶಕರು ಮತ್ತು ಸಂಶಪ್ತಕರು ಎಲ್ಲರೂ ಹತರಾದರು! ಮ್ಲೇಚ್ಛರು, ಪರ್ವತೇಯರು, ಮತ್ತು ಯವನರು ಕೂಡ ಕೆಳಗುರುಳಿದರು! ಪೂರ್ವದೇಶದವರೂ ದಕ್ಷಿಣದವರೂ ಎಲ್ಲರೂ ಹತರಾದರು! ಉತ್ತರದವರು ಮತ್ತು ಪಶ್ಚಿಮದವರು ಎಲ್ಲರೂ ಹತರಾದರು! ರಾಜರು ಮತ್ತು ರಾಜಪುತ್ರರೆಲ್ಲರೂ ಹತರಾದರು! ದುರ್ಯೋಧನನೂ ಹತನಾದನು! ಅವನು ತೊಡೆಯೊಡೆದು ಗಾಯಗೊಂಡು ಕೆಸರಿನಲ್ಲಿ ಮಲಗಿದ್ದಾನೆ! ಧೃಷ್ಟದ್ಯುಮ್ನ, ಶಿಖಂಡೀ, ಉತ್ತಮೌಜ, ಯುಧಾಮನ್ಯು ಮತ್ತು ಇತರ ಪ್ರಭದ್ರಕರೂ ಹತರಾದರು! ಪಾಂಚಾಲರೂ, ಚೇದಿದೇಶದವರೂ ಸಂಹರಿಸಲ್ಪಟ್ಟಿದ್ದಾರೆ! ನಿನ್ನ ಮತ್ತು ದ್ರೌಪದಿಯ ಪುತ್ರರೆಲ್ಲರೂ ಹತರಾಗಿದ್ದಾರೆ! ಕರ್ಣಪುತ್ರ ವೃಷಸೇನನೂ ಹತನಾಗಿದ್ದಾನೆ!

ನರರು ಹತರಾದರು! ಆನೆಗಳು ಕೆಳಗುರುಳಿದವು! ಯುದ್ಧದಲ್ಲಿ ರಥಿಗಳು ಮತ್ತು ಕುದುರೆಗಳೂ ಹತಗೊಂಡವು! ಪಾಂಡವರ ಮತ್ತು ನಿನ್ನ ಶಿಬಿರಗಳಲ್ಲಿ ಕೆಲವರು ಮಾತ್ರ ಉಳಿದುಕೊಂಡಿದ್ದಾರೆ. ಕಾಲ-ಮೋಹಿತವಾದ ಈ ಜಗತ್ತಿನಲ್ಲಿ ಪ್ರಾಯಶಃ ಕೇವಲ ಸ್ತ್ರೀಯರು ಮಾತ್ರ ಉಳಿದುಕೊಂಡಿದ್ದಾರೆಃ ಪಾಂಡವರು ಏಳು ಮಂದಿ ಮತ್ತು ಧಾರ್ತರಾಷ್ಟ್ರರು ಮೂರು ಮಂದಿ. ಅವರು ಐವರು ಸಹೋದರರು, ವಾಸುದೇವ ಮತ್ತು ಸಾತ್ಯಕಿ. ಕೃಪ, ಕೃತವರ್ಮ ಹಾಗೂ ದ್ರೌಣಿ. ಮಹಾರಾಜ! ಒಂದುಗೂಡಿದ್ದ ಎಲ್ಲ ಅಕ್ಷೌಹಿಣೀ ಸೇನೆಗಳಲ್ಲಿ ಈ ರಥಿಗಳು ಮಾತ್ರ ಉಳಿದುಕೊಂಡಿದ್ದಾರೆ. ಅನ್ಯ ಎಲ್ಲರೂ ನಿಧನಹೊಂದಿದರು. ದುರ್ಯೋಧನ ಮತ್ತು ಅವನ ವೈರವನ್ನು ಮುಂದಿಟ್ಟುಕೊಂಡು ಕಾಲನೇ ಈ ಜಗತ್ತೆಲ್ಲವನ್ನೂ ವಿನಾಶಗೊಳಿಸಿದನು!”

ಈ ಕ್ರೂರ ಮಾತನ್ನು ಕೇಳಿ ಜನೇಶ್ವರ ಧೃತರಾಷ್ಟ್ರನು ಪ್ರಾಣಹೋದಂತಾಗಿ ನೆಲದಮೇಲೆ ಬಿದ್ದನು. ಅವನು ಕೆಳಗೆ ಬೀಳಲು ರಾಜವ್ಯಸನದಿಂದ ದುಃಖಿತನಾಗಿದ್ದ ವಿದುರನು ಕೂಡ ಭೂಮಿಯಮೇಲೆ ಬಿದ್ದನು. ಆ ಕ್ರೂರ ಮಾತನ್ನು ಕೇಳಿ ಕೂಡಲೇ

ಗಾಂಧಾರಿ ಮತ್ತು ಕುರುಸ್ತ್ರೀಯರೆಲ್ಲರೂ ಭೂಮಿಯಮೇಲೆ ಬಿದ್ದರು. ವಿಶಾಲ ಚಿತ್ರಪಟದಲ್ಲಿ ಅಂಕಿತ ಚಿತ್ರಗಳಂತೆ ಪ್ರಲಪಿಸುತ್ತಿದ್ದ ಆ ರಾಜಮಂಡಲವು ಸಂಜ್ಞೆಗಳನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದಿತು. ಆಗ ಪುತ್ರವ್ಯಸನದಿಂದ ದುಃಖಿತ ರಾಜಾ ಧೃತರಾಷ್ಟ್ರನು ಕಷ್ಟದಿಂದ ಮೆಲ್ಲನೆ ಚೇತರಿಸಿಕೊಂಡನು. ಸಂಜ್ಞೆಗಳನ್ನು ಪಡೆದು ಆ ನೃಪನು ಅತಿ ದುಃಖದಿಂದ ಕಂಪಿಸುತ್ತಾ ಎಲ್ಲ ದಿಕ್ಕುಗಳಲ್ಲಿಯೂ ನೋಡುತ್ತಾ ಕ್ಷತ್ತನಿಗೆ ಈ ಮಾತನ್ನಾಡಿದನು:

> “ಕ್ಷತ್ತ! ಮಹಾಪ್ರಾಜ್ಞ! ಎಲ್ಲ ಪುತ್ರರನ್ನೂ ಕಳೆದುಕೊಂಡು
> ಅತೀವ ಅನಾಥನಾಗಿರುವ ನನಗೆ ನೀನೇ ಗತಿ!”

ಎಂದು ಹೇಳಿ ಪುನಃ ಮೂರ್ಛಿತನಾಗಿ ಕೆಳಗೆ ಬಿದ್ದನು.

ಹಾಗೆ ಅವನು ಬಿದ್ದುದನ್ನು ನೋಡಿ ಬಾಂಧವರಲ್ಲಿ ಕೆಲವರು ತಣ್ಣೀರನ್ನು ಚುಮಿಕಿಸಿದರು ಮತ್ತು ಬೀಸಣಿಗೆಯನ್ನು ಬೀಸಿದರು. ದೀರ್ಘಕಾಲದ ನಂತರ ಪುನಃ ಎಚ್ಚರಗೊಂಡ ಆ ಮಹೀಪಾಲನು ಪುತ್ರವ್ಯಸನದಿಂದ ಪೀಡಿತನಾಗಿ ಗಡಿಗೆಯಲ್ಲಿಟ್ಟ ಹಾವಿನಂತೆ ನಿಟ್ಟುಸಿರುಬಿಡುತ್ತಾ ಮೌನಿಯಾಗಿ ಕುಳಿತಿದ್ದನು. ಆತುರನಾಗಿದ್ದ ರಾಜನನ್ನು ನೋಡಿ ಸಂಜಯನೂ, ಯಶಸ್ವಿನೀ ಗಾಂಧಾರೀ ಮತ್ತು ಎಲ್ಲ ಸ್ತ್ರೀಯರೂ ರೋದಿಸತೊಡಗಿದರು. ದೀರ್ಘ ಕಾಲದ ನಂತರ ಕ್ಷಣ-

ಕ್ಷಣಕ್ಕೂ ಮೂರ್ಛಿತನಾಗುತ್ತಿದ್ದ ಧೃತರಾಷ್ಟ್ರನು ವಿದುರನಲ್ಲಿ ಈ ಮಾತನ್ನಾಡಿದನು:

> "ಯಶಸ್ವಿನೀ ಗಾಂಧಾರಿ, ಸ್ತ್ರೀಯರು ಮತ್ತು ಸುಹೃದರು ಎಲ್ಲರೂ ಹೊರಟುಹೋಗಲಿ! ನನ್ನ ಮನಸ್ಸು ತುಂಬಾ ಭ್ರಮೆಗೊಂಡಿದೆ!"

ಹೀಗೆ ಹೇಳಲು ಪುನಃ ಪುನಃ ಕಂಪಿಸುತ್ತಿದ್ದ ಕ್ಷತ್ತನು ಮೆಲ್ಲನೆ ಸ್ತ್ರೀಯರನ್ನು ಕಳುಹಿಸಿಕೊಟ್ಟನು. ಆತುರ ರಾಜನನ್ನು ನೋಡಿ ಆ ಎಲ್ಲ ಸ್ತ್ರೀಯರೂ-ಸುಹೃದಯರೂ ಅಲ್ಲಿಂದ ಹೊರಟುಹೋದರು. ಆಗ ಅಲ್ಲಿ ಸಂಜ್ಞೆಗಳನ್ನು ಪಡೆದು ತುಂಬಾ ಆತುರನಾಗಿ ರೋದಿಸುತ್ತಿದ್ದ ನರಪತಿಯನ್ನು ಸಂಜಯನು ನೋಡಿದನು. ಬಾರಿ ಬಾರಿ ನಿಟ್ಟುಸಿರುಬಿಡುತ್ತಿದ್ದ ಆ ನರೇಂದ್ರನನ್ನು ಅಂಜಲೀಬದ್ಧನಾದ ಕ್ಷತ್ತನು ಮಧುರ ಮಾತುಗಳಿಂದ ಸಂತಯಿಸಿದನು. ಸ್ತ್ರೀಯರು ಹೊರಟುಹೋದನಂತರ ಒಂದು ದುಃಖದಿಂದ ಇನ್ನೊಂದು ದುಃಖವನ್ನು ಪಡೆದ ಧೃತರಾಷ್ಟ್ರನು ವಿಲಪಿಸಿದನು. ಹೊಗೆಯನ್ನು ಹೊರಬಿಡುವಂತೆ ನಿಟ್ಟುಸಿರು ಬಿಡುತ್ತಾ, ಪುನಃ ಪುನಃ ಕೈಗಳನ್ನು ಕೊಡವುತ್ತಾ, ಯೋಚಿಸಿ ಅವನು ಈ ಮಾತನ್ನಾಡಿದನು:

> "ಅಯ್ಯೋ ಸೂತ! ರಣದಲ್ಲಿ ಪಾಂಡವರು ಅವ್ಯಯರೂ

ಕ್ಷೇಮಿಗಳೂ ಆಗಿದ್ದಾರೆಂದು ನಿನ್ನಿಂದ ಕೇಳಿದೆನಲ್ಲಾ ಅದೇ ಮಹಾ ದುಃಖಕರವಾದುದು! ಪುತ್ರರು ಹತರಾದರೆಂದು ಕೇಳಿಯೂ ಸಹಸ್ರಚೂರುಗಳಾಗಿ ಸೀಳಿಹೋಗದಿರುವ ಈ ಹೃದಯವು ಸುದೃಢ ವಜ್ರದಿಂದ ಮಾಡಲ್ಪಟ್ಟಿಲ್ಲ ತಾನೇ? ಅವರ ಬಾಲಕ್ರೀಡೆಗಳನ್ನೂ ಮಾತುಗಳನ್ನೂ ನೆನಪಿಸಿಕೊಂಡು ನನ್ನ ಮನಸ್ಸು ಅತ್ಯಂತವಾಗಿ ಗೋಳಿಡುತ್ತಿದೆ. ಅಂಧತ್ವದಿಂದಾಗಿ ಅವರ ರೂಪಗಳನ್ನು ಕಾಣದಿದ್ದರೂ ಪುತ್ರಸ್ನೇಹದಿಂದುಂಟಾದ ಪ್ರೀತಿಯು ಸದಾ ಅವರಮೇಲಿದ್ದಿತ್ತು. ಅವರು ಬಾಲಭಾವವನ್ನು ದಾಟಿ ಯೌವನಸ್ಥರಾದರೆಂದೂ ನಂತರ ಮಧ್ಯವಯಸ್ಕರಾದರೆಂದೂ ಕೇಳಿದಾಗ ನಾನು ಅತ್ಯಂತ ಹರ್ಷಿತನಾಗಿದ್ದೆನು. ಇಂದು ಅವರು ಐಶ್ವರ್ಯಗಳನ್ನೂ ತೇಜಸ್ಸನ್ನೂ ಕಳೆದುಕೊಂಡು ಹತರಾದರೆಂದು ಕೇಳಿ ಮನಸ್ಸಿಗೆ ಸ್ವಲ್ಪವೂ ಶಾಂತಿ ದೊರೆಯುತ್ತಿಲ್ಲ. ಮಗನೇ! ಇಲ್ಲಿ ಬಾ! ಅನಾಥನಾಗಿರುವ ನನ್ನ ಬಳಿ ಬಾ! ನಿನ್ನನ್ನು ಕಳೆದುಕೊಂಡ ನನ್ನ ಗತಿಯೇನಾಗಬಹುದು? ಕುಲದವರ ಮತ್ತು ಸುಹೃದಯರ ಹಾಗೂ ಈ ಅಂಧ ವೃದ್ಧನ ಗತಿಯಾಗಿದ್ದ ನೀನು ನನ್ನನ್ನು ಬಿಟ್ಟು ಎಲ್ಲಿ ಹೋಗಿರುವೆ? ನಿನ್ನಲ್ಲಿದ್ದ ಕೃಪೆ-ಪ್ರೀತಿ-

ಅಭಿಮಾನಗಳು ಎಲ್ಲಿ ಹೋದವು? ಯುದ್ಧದಲ್ಲಿ ಅಪರಾಜಿತನಾದ ನೀನು ಪಾರ್ಥನಿಂದ ಹೇಗೆ ಸಂಹರಿಸಲ್ಪಟ್ಟೆ? ಮಗನೇ! ನಿನ್ನಲ್ಲಿಗೆ ಬಂದಿದ್ದ ಪೃಥಿವೀಪಾಲರನ್ನು ಬಿಟ್ಟು ಪ್ರಾಕೃತ ಹೀನ ರಾಜನಂತೆ ಏಕೆ ನೆಲದಮೇಲೆ ಮಲಗಿರುವೆ? ಪ್ರಾತಃ ಕಾಲ ಏಳುವಾಗ ಸತತವೂ "ಅಪ್ಪಾ! ಮಹಾರಾಜ!" ಎಂದು ನನ್ನನ್ನು ಇನ್ನು ಯಾರು ಕರೆಯುತ್ತಾರೆ? ಸ್ನೇಹದಿಂದ ಕಣ್ಣುಗಳು ತುಂಬಿ ನನ್ನ ಕತ್ತನ್ನು ಆಲಂಗಿಸಿ "ಕೌರವ್ಯ! ಏನು ಮಾಡಬೇಕೆಂದು ಹೇಳು!" ಎಂಬ ಆ ಸುಮಧುರ ಮಾತನ್ನು ಇನ್ನೊಮ್ಮೆ ಹೇಳು. ಅಂದು ನಮ್ಮ ಭೂಮಿಯ ಇಷ್ಟೊಂದು ಭಾಗವು ಪಾರ್ಥನದಾಗಿದೆ ಎಂದು ನನ್ನ ಮಗನ ವಚನವನ್ನು ಯಾವಾಗಲೂ ಕೇಳುತ್ತಿದ್ದೆ. "ರಾಜಸತ್ತಮ! ಭಗದತ್ತ, ಕೃಪ, ಶಲ್ಯ, ಅವಂತಿಯವರು, ಜಯದ್ರಥ, ಭೂರಿಶ್ರವ, ಸೋಮದತ್ತ, ಬಾಹ್ಲಿಕ, ಅಶ್ವತ್ಥಾಮ, ಭೋಜ, ಮಾಗಧ, ಕಾಶೀಶ ಬೃಹದ್ಬಲ, ಸೌಬಲ ಶಕುನಿ, ಶಕರು ಮತ್ತು ಯವನರೊಂದಿಗೆ ಅನೇಕ ಸಹಸ್ರ ಮ್ಲೇಚ್ಛರು, ಕಾಂಬೋಜ ತ್ರಿಗರ್ತಾಧಿಪತಿ ಸುದಕ್ಷಿಣ, ಪಿತಾಮಹ ಭೀಷ್ಮ, ಭಾರದ್ವಾಜ, ಗೌತಮ, ಶ್ರುತಾಯು, ಅಚ್ಯುತಾಯು, ವೀರ್ಯವಾನ್ ಶತಾಯು, ಜಲಸಂಧ, ಆರ್ಶ್ಯಶೃಂಗಿ, ರಾಕ್ಷಸ

ಅಲಾಯುಧ, ಮಹಾಬಾಹು ಅಲಂಬುಸ, ಮಹಾರಥ ಸುಬಾಹು, ಇವರು ಮತ್ತು ಅನ್ಯ ಅನೇಕ ರಾಜರು ಎಲ್ಲರೂ ನನಗಾಗಿ ಪ್ರಾಣಗಳನ್ನೇ ತೊರೆದು ರಣದಲ್ಲಿ ಸಿದ್ಧರಾಗಿದ್ದಾರೆ! ಇವರ ಮಧ್ಯದಲ್ಲಿ ನಿಂತು, ಸಹೋದರರಿಂದ ಪರಿವಾರಿತನಾಗಿ ನಾನು ಪಾರ್ಥ-ಪಾಂಚಾಲರೆಲ್ಲರೊಡನೆ ಯುದ್ಧಮಾಡುತ್ತೇನೆ. ನಾನೊಬ್ಬನೇ ಚೇದಿರಾಜ, ದ್ರೌಪದೇಯರು, ಸಾತ್ಯಕಿ, ಕುಂತಿಭೋಜ, ಘಟೋತ್ಕಚ ಇವರನ್ನು ಮತ್ತು ಸಂಗ್ರಾಮದಲ್ಲಿ ಆಕ್ರಮಣಿಸುವ ಪಾಂಡವರನ್ನು ನಿವಾರಿಸಲು ಸಮರ್ಥನಾಗಿದ್ದೇನೆ. ಪಾಂಡವರೊಂದಿಗೆ ವೈರವನ್ನು ಸಾಧಿಸಿಕೊಂಡು ಬಂದಿರುವ ಈ ವೀರರೂ ನನ್ನೊಡನೆ ಸೇರಿದರೆಂದರೆ ಪಾಂಡವರು ಇನ್ನು ಯಾವ ಲೆಖ್ಕಕ್ಕೆ? ನನ್ನೊಡನೆ ಕರ್ಣನೊಬ್ಬನೇ ಪಾಂಡವರನ್ನು ಸಂಹರಿಸುತ್ತಾನೆ. ಆಗ ವೀರ ನೃಪತಿಗಳು ನನ್ನ ಶಾಸನದಡಿಯಲ್ಲಾಗುತ್ತಾರೆ. ಅವರ ಪ್ರಣೇತ ವಾಸುದೇವನು ಹೇಗೂ ಯುದ್ಧಮಾಡುವುದಿಲ್ಲ!” ಎಂದು ನನಗೆ ಹೇಳಿದ್ದೆ.

ಸೂತ! ನನ್ನ ಸನ್ನಿಧಿಯಲ್ಲಿ ಹೀಗೆ ಅವನು ಅನೇಕಬಾರಿ ಹೇಳುತ್ತಿದ್ದನು. ರಣದಲ್ಲಿ ಪಾಂಡವರು ಹತರಾದರೆಂದೇ

ತಿಳಿದಿದ್ದೆ. ಆದರೆ ನನ್ನ ಪುತ್ರರು ಹತರಾದರೆಂದರೆ ಸಮರದಲ್ಲಿ ಪಾಂಡವರೇ ಭಾಗ್ಯವಂತರೆಂದಾಯಿತಲ್ಲವೇ? ಪ್ರತಾಪವಾನ್ ಭೀಷ್ಮನೂ ಕೂಡ ಮೃಗೇಂದ್ರ ಸಿಂಹವು ನರಿಯನ್ನು ಎದುರಿಸಿದಂತೆ ಶಿಖಂಡಿಯನ್ನು ಎದುರಿಸಿ ಹತನಾದನೆಂದರೆ, ಸರ್ವಶಸ್ತ್ರಪಾರಗ ಬ್ರಾಹ್ಮಣ ದ್ರೋಣನು ಯುದ್ಧದಲ್ಲಿ ಪಾಂಡವರಿಂದ ಹತನಾದನೆಂದರೆ ಅದೃಷ್ಟವಲ್ಲದೇ ಇನ್ನೇನು? ಯುದ್ಧದಲ್ಲಿ ಸೋಮದತ್ತ-ಭೂರಿಶ್ರವ-ಬಾಹ್ಲೀಕರು ಹತರಾದರೆಂದರೆ ಅದೃಷ್ಟವಲ್ಲದೇ ಇನ್ನೇನು? ಸುದಕ್ಷಿಣ, ಜಲಸಂಧ, ಶ್ರುತಾಯು, ಅಚ್ಯುತಾಯು ಇವರು ಹತರಾದರೆಂದರೆ ಅದೃಷ್ಟವಲ್ಲದೇ ಇನ್ನೇನು? ಬೃಹದ್ಬಲ, ಮಾಗಧ, ಅವಂತಿಯವರು, ತ್ರಿಗರ್ತ, ಮತ್ತು ಅನೇಕ ಸಂಶಪ್ತಕರು ಹತರಾದರೆಂದರೆ ಅದೃಷ್ಟವಲ್ಲದೇ ಇನ್ನೇನು? ಅಲಂಬುಸ, ಅಲಾಯುಧ, ಆರ್ಶ್ಯಶೃಂಗರು ಹತರಾದರೆಂದರೆ ಅದೃಷ್ಟವಲ್ಲದೇ ಇನ್ನೇನು? ಯುದ್ಧದುರ್ಮದ ನಾರಾಯಣ ಗೋಪಾಲರು ಮತ್ತು ಅನೇಕ ಸಹಸ್ರ ಮ್ಲೇಚ್ಛರು ಹತರಾದರೆಂದರೆ ಅದೃಷ್ಟವಲ್ಲದೇ ಇನ್ನೇನು? ವೀರ ಶಕುನಿ ಮತ್ತು ಕೈತವರು ಸೇನೆಗಳೊಂದಿಗೆ ಹತರಾದರೆಂದರೆ ಅದೃಷ್ಟವಲ್ಲದೇ ಇನ್ನೇನು? ಪರಿಘಗಳಂತಹ

ಬಾಹುಗಳನ್ನುಳ್ಳ ಅನೇಕ ಶೂರ ರಾಜರು-ರಾಜಪುತ್ರರು ಹತರಾದರೆಂದರೆ ಅದೃಷ್ಟವಲ್ಲದೇ ಇನ್ನೇನು? ನಾನಾದೇಶಗಳಿಂದ ಬಂದು ಸೇರಿದ್ದ ಕ್ಷತ್ರಿಯರು ಎಲ್ಲರೂ ಹತರಾದರೆಂದರೆ ಅದೃಷ್ಟವಲ್ಲದೇ ಇನ್ನೇನು? ನನ್ನ ಪುತ್ರರೂ, ಪೌತ್ರರೂ, ವಯಸ್ಕರೂ, ಭ್ರಾತೃಗಳೂ ಹತರಾದರೆಂದರೆ ಅದೃಷ್ಟವಲ್ಲದೇ ಇನ್ನೇನು?

ಮನುಷ್ಯನು ತನ್ನ ಭಾಗ್ಯವನ್ನು ಹೊತ್ತುಕೊಂಡೇ ಹುಟ್ಟುತ್ತಾನೆ ಎನ್ನುವುದು ಸತ್ಯ. ಯಾವ ಭಾಗ್ಯದಿಂದ ಮನುಷ್ಯನು ಹುಟ್ಟಿರುತ್ತಾನೋ ಅದೇ ಶುಭಗಳನ್ನು ಅವನು ಪಡೆಯುತ್ತಾನೆ. ನನ್ನ ಮಕ್ಕಳು-ಭಾಗ್ಯಗಳಿಂದ ನಾನು ವಿಹೀನನಾಗಿದ್ದೇನೆ. ವೃದ್ಧನಾದ ನಾನು ಶತ್ರುಗಳ ವಶನಾಗಿ ಹೇಗಿರಲಿ? ವನವಾಸದ ಹೊರತಾದ ಬೇರೆ ಯಾವ ದಾರಿಯೂ ನನಗೆ ತೋರುತ್ತಿಲ್ಲ! ಬಂಧು-ಕುಲದವರ ನಾಶವಾಗಿರುವ ನಾನು ವನಕ್ಕೇ ಹೋಗುತ್ತೇನೆ! ರೆಕ್ಕೆಗಳನ್ನು ಕತ್ತರಿಸಿದ ಪಕ್ಷಿಗಾದಂತ ಈ ಅವಸ್ಥೆಯನ್ನು ಹೊಂದಿರುವ ನನಗೆ ವನಕ್ಕೆ ಸೇರುವುದರ ಹೊರತಾಗಿ ಬೇರೆ ಯಾವ ಶ್ರೇಯಸ್ಸೂ ಇಲ್ಲ! ಯುದ್ಧದಲ್ಲಿ ದುರ್ಯೋಧನನು ಹತನಾದನು. ಶಲ್ಯ, ದುಃಶಾಸನ,

ವಿಕರ್ಣರೂ ಹತರಾದರು. ಸಮರದಲ್ಲಿ ಒರ್ವನೇ ನನ್ನ ನೂರು ಮಕ್ಕಳನ್ನೂ ಸಂಹರಿಸಿದ ಭೀಮಸೇನನ ಗರ್ಜನೆಯನ್ನು ನಾನು ಹೇಗೆ ತಾನೇ ಕೇಳಬಲ್ಲೆ? ಹೇಳಿದಂತೆ ದುರ್ಯೋಧನನ ವಧೆಗೈದ ಭೀಮನ ಕಠೋರ ಮಾತುಗಳನ್ನು ದುಃಖಶೋಕ ಸಂತಪ್ತನಾಗಿರುವ ನಾನು ಹೇಗೆ ತಾನೇ ಕೇಳಿಕೊಂಡಿರಲಿ?"

ಬಾಂಧವರನ್ನು ಕಳೆದುಕೊಂಡ ಪಾರ್ಥಿವನು ಹೀಗೆ ಶೋಕಸಂತಪ್ತನಾಗಿರಲು ಅವನು ಪುನಃ ಪುನಃ ಮೂರ್ಛೆಹೋಗುತ್ತಿದ್ದನು ಮತ್ತು ಪುತ್ರಶೋಕದಲ್ಲಿ ಮುಳುಗಿಹೋಗಿದ್ದನು. ಬಹಳ ಹೊತ್ತು ವಿಲಪಿಸಿ ರಾಜಾ ಅಂಬಿಕಾಸುತ ಧೃತರಾಷ್ಟ್ರನು ಪರಾಭವದ ಕುರಿತು ಚಿಂತಿಸುತ್ತಾ ದೀರ್ಘ ಬಿಸಿ ನಿಟ್ಟುಸಿರು ಬಿಡುತ್ತಾ, ಮಹಾ ದುಃಖದಿಂದ ಸಂತಪ್ತನಾಗಿ ನಡೆದುಹೋದುದರ ಕುರಿತು ಪುನಃ ಸೂತ ಗಾವಲ್ಗಣಿಯನ್ನು ಪ್ರಶ್ನಿಸಿದನು:

"ಭೀಷ್ಮ-ದ್ರೋಣ ಮತ್ತು ಸೂತಪುತ್ರನೂ ಕೆಳಗುರುಳಿದುದನ್ನು ಕೇಳಿ ನಮ್ಮವರು ಏನು ಮಾಡಿದರು? ನಮ್ಮವರು ಯಾರ್ಯಾರನ್ನು ಯುದ್ಧದಲ್ಲಿ ಸೇನಾಪತಿಗಳನ್ನಾಗಿ ಮಾಡಿದರೋ ಅವರೆಲ್ಲರನ್ನೂ ಸ್ವಲ್ಪ ಕಾಲದಲ್ಲಿಯೇ

ಪಾಂಡವರು ಸಂಹರಿಸಿದರು. ನಾವು ನೋಡುತ್ತಿದ್ದಂತೆಯೇ ರಣಮೂರ್ಧನಿಯಲ್ಲಿ ಭೀಷ್ಮನು ಕಿರೀಟಿಯಿಂದ ಹತನಾದನು. ಹಾಗೆಯೇ ಎಲ್ಲರೂ ನೋಡುತ್ತಿರುವಾಗಲೇ ದ್ರೋಣನು ಹತನಾದನು. ಹಾಗೆಯೇ ನಮ್ಮ ಎಲ್ಲ ರಾಜರು ನೋಡುತ್ತಿರುವಾಗಲೇ ಪ್ರತಾಪವಾನ್ ಸೂತಪುತ್ರ ಕರ್ಣನು ಕಿರೀಟಿಯಿಂದ ಹತನಾದನು. "ದುರ್ಯೋಧನನ ಅಪರಾಧದಿಂದ ಪ್ರಜೆಗಳು ನಾಶವಾಗುತ್ತಾರೆ!" ಎಂದು ಹಿಂದೆಯೇ ಮಹಾತ್ಮ ವಿದುರನು ನನಗೆ ಹೇಳಿದ್ದನು. ಕೆಲವು ಮೂಢರು ವಿಷಯಗಳನ್ನು ಚೆನ್ನಾಗಿ ಪರಿಶೀಲಿಸಿದ್ದರೂ ಅದರ ಕಡೆ ಗಮನಕೊಡದೇ ಬೇರೆ ಕಡೆಯೇ ನೋಡುತ್ತಿರುತ್ತಾರೆ. ಮೂಢನಾದ ನನ್ನಲ್ಲಿಯೂ ವಿದುರನ ಮಾತಿನ ವಿಷಯದಲ್ಲಿ ಇದೇ ರೀತಿ ನಡೆದುಹೋಯಿತು. ದೀರ್ಘದರ್ಶಿ ಧರ್ಮಾತ್ಮ ವಿದುರನು ಏನು ಹೇಳಿದ್ದನೋ ಅದು ಹಾಗೆಯೇ ಆಗಿ ಆ ಸತ್ಯವಾದಿನಿಯ ವಚನವು ನಿಜವಾಗಿ ಹೋಯಿತು! ಹಿಂದೆ ದೈವದಿಂದ ನನ್ನ ಚಿತ್ತವು ಅಪಹರಿಸಲ್ಪಟ್ಟು ನಾನು ಅಪಕೃತವನ್ನು ಮಾಡಿದುದರ ಫಲವಿದು. ಅದರ ಕುರಿತು ಪುನಃ ಹೇಳು.

“ಕರ್ಣನು ಬಿದ್ದ ನಂತರ ನಮ್ಮ ಸೇನೆಗಳ ಮುಖ್ಯರಾಗಿ ಯಾರಿದ್ದರು? ಯಾವ ರಥಿಯು ಅರ್ಜುನ-ವಾಸುದೇವರ ವಿರುದ್ಧ ಯುದ್ಧಮಾಡಿದನು? ಯುದ್ಧದಲ್ಲಿ ಮದ್ರರಾಜನ ಬಲಚಕ್ರವನ್ನು ಯಾರು ರಕ್ಷಿಸುತ್ತಿದ್ದರು? ಯುದ್ಧಮಾಡಲು ಬಯಸಿದ್ದ ಆ ವೀರನ ಎಡಭಾಗದಲ್ಲಿ ಮತ್ತು ಹಿಂದೆ ಯಾರಿದ್ದರು? ನಾವೆಲ್ಲರೂ ಹೀಗೆ ಒಟ್ಟಾಗಿರುವಾಗ ಮದ್ರರಾಜ ಅಥವಾ ನನ್ನ ಪುತ್ರರು ಹೇಗೆ ಯುದ್ಧದಲ್ಲಿ ಪಾಂಡವರಿಂದ ಹತರಾದರು? ಭಾರತರ ಮಹಾಕ್ಷಯದ ಕುರಿತು ಸರ್ವವನ್ನು - ಯುದ್ಧದಲ್ಲಿ ನನ್ನ ಮಗ ದುರ್ಯೋಧನನು ಹೇಗೆ ಹತನಾದನು ಎನ್ನುವುದನ್ನೂ - ಯಥಾವತ್ತಾಗಿ ಹೇಳು. ಧೃಷ್ಟದ್ಯುಮ್ನ, ಶಿಖಂಡೀ, ದ್ರೌಪದಿಯ ಐವರು ಮಕ್ಕಳು ಮತ್ತು ಅನುಯಾಯಿಗಳೊಂದಿಗೆ ಪಾಂಚಾಲರೆಲ್ಲರೂ ಹೇಗೆ ಹತರಾದರು? ಯುದ್ಧದಿಂದ ಹೇಗೆ ಪಾಂಡವರು, ಇಬ್ಬರು ಸಾತ್ವತರು, ಕೃಪ, ಕೃತವರ್ಮ ಮತ್ತು ಅಶ್ವತ್ಥಾಮ ಇವರುಗಳು ಮುಕ್ತರಾದರು? ಯಾವುದು ಹೇಗೆ ನಡೆಯಿತು? ಯುದ್ಧವು ಹೇಗೆ ನಡೆಯಿತು? ಈ ಎಲ್ಲ ವಿಷಯಗಳನ್ನೂ ಸಂಪೂರ್ಣವಾಗಿ ಕೇಳಲು ಬಯಸುತ್ತೇನೆ. ನೀನು ವರದಿಮಾಡುವುದರಲ್ಲಿ ಕುಶಲನಾಗಿರುವೆ!”

ಆಗ ಸಂಜಯನು ಧೃತರಾಷ್ಟ್ರನಿಗೆ ಹದಿನೆಂಟನೇ ದಿನ-ರಾತ್ರಿಯ

ಯುದ್ಧವನ್ನು ವರ್ಣಿಸಿದನು.

# ಹದಿನೆಂಟನೇ ದಿನದ ಯುದ್ಧ: ಶಲ್ಯ ಸೇನಾಪತ್ಯ

## ಕರ್ಣನು ಹತನಾದ ನಂತರ ಕೃಪನು ದುರ್ಯೋಧನನಿಗೆ ಯುದ್ಧವನ್ನು ನಿಲ್ಲಿಸುವ ಸಲಹೆಯನ್ನಿತ್ತಿದುದು

ಅರ್ಜುನನಿಂದ ಸೂತಪುತ್ರ ಕರ್ಣನು ಹತನಾಗಲು, ಒಂದುಗೂಡಿಸಲು ಪ್ರಯತ್ನಿಸಿದರೂ, ಸೇನೆಗಳು ಓಡಿಹೋದವು. ಶೋಕದಿಂದ ಚೇತನವನ್ನೇ ಕಳೆದುಕೊಂಡ ದುರ್ಯೋಧನನು ವಿಮುಖನಾಗಿದ್ದನು ಮತ್ತು ಪಾರ್ಥನ ವಿಕ್ರಮವನ್ನು ನೋಡಿ ಸೇನೆಗಳಲ್ಲಿ ತುಂಬಾ ಭಯ-ಉದ್ವೇಗಗಳುಂಟಾಗಿದ್ದವು. ದುಃಖವನ್ನು ಪಡೆದು ಚಿಂತಿಸುತ್ತಿರುವ ಸೇನೆಯನ್ನು ನೋಡಿ, ಸೇನೆಯನ್ನು ಸದೆಬಡಿಯುತ್ತಿರುವವರ ಸಿಂಹನಾದಗಳನ್ನು ಕೇಳಿ, ಯುದ್ಧಭೂಮಿಯಲ್ಲಿ ನರೇಂದ್ರರ ಧ್ವಜಗಳು ಛಿನ್ನವಿಚ್ಛಿನ್ನವಾದುದನ್ನು ನೋಡಿ, ಮಹಾತ್ಮರ ರಥನೀಡಗಳೂ ರಥಗಳೂ ಬಿದ್ದಿರುವುದನ್ನು ನೋಡಿ, ರಣದಲ್ಲಿ ಹತರಾಗಿ ಬಿದ್ದಿದ್ದ ಆನೆಗಳನ್ನೂ ಪದಾತಿಗಳನ್ನೂ ನೋಡಿ, ರುದ್ರನ ಆಟದ ಮೈದಾನವಾದ

ಸ್ಮಶಾನದಂತೆ ಕಾಣುತ್ತಿದ್ದ ಆ ರಣಭೂಮಿಯನ್ನು ನೋಡಿ, ಲಕ್ಷಗಟ್ಟಲೆ ರಾಜರುಗಳು ನಿರ್ನಾಮವಾದುದನ್ನು ನೋಡಿ, ಕೃಪಾವಿಷ್ಟನಾದ, ವಯಸ್ಸಿಗೆ ತಕ್ಕಂತಹ ನಡತೆಗಳನ್ನುಳ್ಳ, ಮಾತನಾಡುವುದರಲ್ಲಿ ಚತುರನಾಗಿದ್ದ ತೇಜಸ್ವಿ ಕೃಪನು ಜನಾಧಿಪ ದುರ್ಯೋಧನನ ಬಳಿಸಾರಿ ದೈನ್ಯದಿಂದ ಈ ಮಾತುಗಳನ್ನಾಡಿದನು:

> “ದುರ್ಯೋಧನ! ನಾನು ಹೇಳುವುದನ್ನು ಕೇಳು! ಅದನ್ನು ಕೇಳಿ ನಿನಗೆ ಯಾವುದು ಸೂಕ್ತವೆಂದು ತೋರುವುದೋ ಅದರಂತೆಯೇ ಮಾಡು! ಯುದ್ಧಧರ್ಮವನ್ನಾಶ್ರಯಿಸಿ ಯುದ್ಧಮಾಡುವುದಕ್ಕಿಂತ ಶ್ರೇಯಸ್ಕರವಾದ ಇನ್ನೊಂದು ಮಾರ್ಗವು ಕ್ಷತ್ರಿಯರಿಗಿಲ್ಲ! ಕ್ಷತ್ರಿಯನಾಗಿ ಜೀವಿಸುವವನಿಗೆ ಪುತ್ರ, ಭ್ರಾತಾ, ಪಿತ, ಸೋದರಳಿಯ, ಸೋದರ ಮಾವ, ಮತ್ತು ಇತರ ಬಂಧು-ಬಾಂಧವರೊಡನೆ ಯುದ್ಧಮಾಡುವುದು ಅನಿವಾರ್ಯವಾಗುತ್ತದೆ. ಯುದ್ಧದಲ್ಲಿ ಶತ್ರುಗಳನ್ನು ವಧಿಸುವುದು ಅಥವಾ ಅವರಿಂದ ವಧಿಸಲ್ಪಡುವುದು ಪರಮ ಧರ್ಮವೆನಿಸಿಕೊಳ್ಳುತ್ತದೆ. ಪಲಾಯನಮಾಡುವುದು ಅಧರ್ಮ. ಕ್ಷತ್ರಿಯನಾಗಿ ಜೀವಿಸುವವನು ಈ ರೀತಿಯ ಘೋರ ಜೀವನಶೈಲಿಯನ್ನು ಪಾಲಿಸುತ್ತಾನೆ. ಅದಕ್ಕೆ ಸಂಬಂಧಿಸಿದಂತೆ

ನಿನಗೆ ಒಂದಿಷ್ಟು ಹಿತವಚನವನ್ನು ಹೇಳುತ್ತೇನೆ.

ಮಹಾರಥರಾದ ಭೀಷ್ಮ, ದ್ರೋಣ, ಕರ್ಣ, ಜಯದ್ರಥ, ನಿನ್ನ ಸಹೋದರರು ಮತ್ತು ನಿನ್ನ ಮಗ ಲಕ್ಷ್ಮಣರು ಹತರಾಗಿರಲು ನಾವು ಬೇರೆ ಯಾರನ್ನು ಆಶ್ರಯಿಸೋಣ? ನಾವು ಯಾರ ಮೇಲೆ ಭಾರವನ್ನು ಹೊರಿಸಿ ಈ ರಾಜ್ಯದ ಆಸೆಯನ್ನಿಟ್ಟುಕೊಂಡಿದ್ದೆವೋ ಆ ಶೂರರೆಲ್ಲರೂ ತಮ್ಮ ದೇಹಗಳನ್ನು ತ್ಯಾಗಮಾಡಿ ಬ್ರಹ್ಮವಿದರ ಗತಿಯನ್ನು ಹೊಂದಿದರು. ಗುಣವತ್ತ ಮಹಾರಥರಿಂದ ಈಗ ನಾವು ವಿಹೀನರಾಗಿದ್ದೇವೆ. ಅನೇಕ ನೃಪರನ್ನು ಬಲಿಗೊಟ್ಟು ನಾವೀಗ ಶೋಕಸ್ಥಿತಿಯಲ್ಲಿದ್ದೇವೆ. ಅವರೆಲ್ಲರೂ ಜೀವಿತರಾಗಿದ್ದು ಒಟ್ಟಾಗಿ ಸೆಣೆಸಿದ್ದರೂ ಬೀಭತ್ಸು ಅರ್ಜುನನನ್ನು ಸೋಲಿಸಲಾಗುತ್ತಿರಲಿಲ್ಲ. ಕೃಷ್ಣನನ್ನೇ ಕಣ್ಣಾಗುಳ್ಳ ಆ ಮಹಾಬಾಹುವು ದೇವತೆಗಳಿಗೂ ಕಷ್ಟಸಾಧ್ಯನು. ಇಂದ್ರಧನುಸ್ಸಿನಂತೆ ಎತ್ತರವಾಗಿ ಹೊಳೆಯುತ್ತಿರುವ ವಾನರಧ್ವಜವನ್ನು ಎದುರಿಸಿ ಮಹಾಸೇನೆಯು ನಡುಗಿದೆ. ಭೀಮನ ಸಿಂಹನಾದ, ಪಾಂಚಜನ್ಯದ ಧ್ವನಿ ಮತ್ತು ಗಾಂಡೀವದ ನಿರ್ಘೋಷದಿಂದ ನಮ್ಮವರ ಮನಸ್ಸುಗಳು

ಮೋಹಗೊಳ್ಳುತ್ತಿವೆ. ಕಣ್ಣಿನ ಪ್ರಭೆಯನ್ನು ಅಪಹರಿಸಿ ತಿರುಗುತ್ತಿರುವ ಮಹಾ ಮಿಂಚಿನಂತೆ ಅರ್ಜುನನ ಗಾಂಡೀವವು ಕಾಣುತ್ತಿದೆ. ಸೆಳೆಯಲ್ಪಡುತ್ತಿರುವ ಆ ಚಿನ್ನ-ಚಿತ್ರಿತ ಮಹಾ ಧನುಸ್ಸು ಮೋಡಗಳ ಮಧ್ಯದಲ್ಲಿ ಕಾಣಿಸಿಕೊಳ್ಳುವ ಮಿಂಚಿನಂತೆ ಸರ್ವ ದಿಕ್ಕುಗಳಲ್ಲಿ ಕಾಣಿಸುತ್ತಿದೆ. ಕೃಷ್ಣನು ನಡೆಸುತ್ತಿರುವ ವಾಯುವಿನಂತೆ ಅತಿವೇಗದ ರಥದಲ್ಲಿ ಕುಳಿತು ಅಸ್ತ್ರವಿದ ಶ್ರೇಷ್ಠ ಅರ್ಜುನನು ಶಿಶಿರ ಋತುವಿನಲ್ಲಿ ಗಹನ ಹುಲ್ಲು ಮೆದೆಗಳನ್ನು ಅಗ್ನಿಯು ಹೇಗೋ ಹಾಗೆ ನಿನ್ನ ಸೇನೆಯನ್ನು ದಹಿಸಿಬಿಟ್ಟಿದ್ದಾನೆ. ಮಹೇಂದ್ರನ ಪ್ರಭೆಯುಳ್ಳ ಧನಂಜಯನು ನಾಲ್ಕು ದಂತಗಳಿರುವ ಸಲಗದಂತೆ ಸೇನೆಗಳಲ್ಲಿ ನುಗ್ಗಿ ಹೋಗುತ್ತಿರುವುದನ್ನು ನಾವು ನೋಡಿದೆವು. ಕಮಲಗಳ ಸರೋವರಕ್ಕೆ ಆನೆಯು ಹೇಗೋ ಹಾಗೆ ಧನಂಜಯನು ನಿನ್ನ ಸೇನೆಗಳನ್ನು ನುಗ್ಗಿ ಅಲ್ಲೋಲಕಲ್ಲೋಲಗೊಳಿಸಿ ಪಾರ್ಥಿವರನ್ನು ನಡುಗಿಸಿದುದನ್ನು ನಾವು ನೋಡಿದೆವು. ಸಿಂಹವು ಮೃಗಗಣಗಳನ್ನು ಹೇಗೋ ಹಾಗೆ ಪಾಂಡವನು ತನ್ನ ಧನುರ್ಘೋಷದಿಂದ ಯೋಧರನ್ನು ಪುನಃ ಪುನಃ ಭಯಗೊಳಿಸುತ್ತಿರುವುದನ್ನು ನಾವು ನೋಡಿದೆವು.

ಸರ್ವಲೋಕ ಮಹೇಷ್ವಾಸರೂ, ಸರ್ವಧನ್ವಿಗಳ ವೃಷಭರೂ ಆದ ಕವಚಧಾರೀ ಕೃಷ್ಣರಿಬ್ಬರೂ ಲೋಕಮಧ್ಯದಲ್ಲಿ ವಿರಾಜಿಸುತ್ತಿದ್ದಾರೆ. ಯುದ್ಧದಲ್ಲಿ ವಧೆಯಾಗುತ್ತಿರುವ ಈ ಅತಿ ಘೋರ ಸಂಗ್ರಾಮದ ಹದಿನೇಳನೇ ದಿನವು ಇಂದು ನಡೆಯುತ್ತಿದೆ.

ಶರತ್ಕಾಲದ ಮೋಡ ಸಮೂಹಗಳು ಗಾಳಿಯಿಂದ ಚದುರಿಹೋಗುವಂತೆ ನಿನ್ನ ಸೇನೆಗಳೆಲ್ಲವೂ ಎಲ್ಲ ಕಡೆ ಚದುರಿಹೋಗಿವೆ. ಮಹಾಸಮುದ್ರದಲ್ಲಿ ಭಿರುಗಾಳಿಗೆ ಸಿಲುಕಿ ನಡುಗುತ್ತಿರುವ ಹಡಗಿನಂತೆ ಸವ್ಯಸಾಚಿಯು ನಿನ್ನ ಸೇನೆಯನ್ನು ನಡುಗಿಸುತ್ತಿದ್ದಾನೆ! ಜಯದ್ರಥನು ಅವನ ಬಾಣದ ಲಕ್ಷ್ಯವಾಗಿದ್ದಾಗ ಸೂತಪುತ್ರನು ಎಲ್ಲಿದ್ದನು? ದ್ರೋಣನು ಎಲ್ಲಿದ್ದನು? ನಾನು ಅಥವಾ ನೀನು ಎಲ್ಲಿದ್ದೆವು? ಹಾಗೆಯೇ ಹಾರ್ದಿಕ್ಯನು ಎಲ್ಲಿದ್ದನು? ಸಹೋದರರೊಂದಿಗೆ ನಿನ್ನ ಭ್ರಾತಾ ದುಃಶಾಸನನು ಎಲ್ಲಿದ್ದನು? ನಿನ್ನ ಸಹಾಯಕ ಸಂಬಂಧಿಗಳು, ಸಹೋದರರು, ಸೋದರ ಮಾವಂದಿರು ಮತ್ತು ಎಲ್ಲರ ನೆತ್ತಿಯ ಮೇಲೆ ಕಾಲಿಟ್ಟು ಅರ್ಜುನನು ಒಂದೇ ಕ್ಷಣದಲ್ಲಿ ಜಯದ್ರಥನನು ಸಂಹರಿಸಿದನು. ಇನ್ನೇನು ನಾವು

ಮಾಡಬಹುದಾಕಿತ್ತು? ಪಾಂಡವನನ್ನು ಜಯಿಸಬಲ್ಲ ಪುರುಷನು ನಮ್ಮವರಲ್ಲಿ ಯಾರಿದ್ದಾರೆ? ಆ ಮಹಾತ್ಮನ ವಿವಿಧ ದಿವ್ಯಾಸ್ತ್ರಗಳು ಮತ್ತು ಗಾಂಡೀವ ನಿರ್ಘೋಷವು ನಮ್ಮ ವೀರ್ಯಗಳನ್ನು ಅಪಹರಿಸಿಬಿಟ್ಟಿವೆ! ನಾಯಕನನ್ನು ಕಳೆದುಕೊಂಡ ನಮ್ಮ ಈ ಸೇನೆಯು ಚಂದ್ರನಿಲ್ಲದ ರಾತ್ರಿಯಂತೆ, ಆನೆಗಳಿಂದ ವೃಕ್ಷಗಳು ನಾಶವಾದ ವನದಂತೆ ಮತ್ತು ಬತ್ತಿಹೋದ ನದಿಯಂತೆ ವ್ಯಾಕುಲಗೊಂಡಿದೆ. ನೇತಾರನನ್ನು ಕಳೆದುಕೊಂಡ ನಮ್ಮ ಸೇನೆಯೊಳಗೆ ನುಗ್ಗಿ ಮಹಾಬಾಹು ಶ್ವೇತವಾಹನನು ಅಗ್ನಿಯು ಹುಲ್ಲುಮೆದೆಗಳನ್ನು ಹೇಗೋ ಹಾಗೆ ಸುಡುತ್ತಾ ಸಂಚರಿಸುತ್ತಿದ್ದಾನೆ. ವೇಗಶಾಲೀ ಸಾತ್ಯಕಿ-ಭೀಮಸೇನರಿಬ್ಬರೂ ಗಿರಿಗಳೆಲ್ಲವನ್ನೂ ಸೀಳಬಲ್ಲರು ಮತ್ತು ಸಾಗರಗಳನ್ನು ಬತ್ತಿಸಬಲ್ಲರು. ಸಭಾಮಧ್ಯದಲ್ಲಿ ಭೀಮನು ಏನೆಲ್ಲ ಮಾತುಗಳನ್ನು ಆಡಿದ್ದನೋ ಅವೆಲ್ಲವನ್ನೂ ಮಾಡಿದ್ದಾನೆ ಮತ್ತು ಮುಂದೆ ಮಾಡುತ್ತಾನೆ ಕೂಡ! ಗಾಂಡೀವ ಧನ್ವಿಯು ವ್ಯೂಹ ರಚಿಸಿ ರಕ್ಷಿಸುತ್ತಿರುವ ಆ ಪಾಂಡವ ಸೇನೆಯು ಕರ್ಣನ ನಾಯಕತ್ವದಲ್ಲಿಯೂ ದುರಾಸದವಾಗಿತ್ತು. ಅಕಾರಣವಾಗಿ ಸಾಧುಗಳೊಂದಿಗೆ ಅಸಾಧುಗಳಂತೆ ವರ್ತಿಸಿದುದಕ್ಕಾಗಿ ಅದರ ಫಲವು ನಮಗೆ ದೊರೆಯುತ್ತಿದೆ.

ನಿನಗೋಸ್ಕರವಾಗಿ ನೀನು ಕರೆದಿರುವ ಎಲ್ಲರೂ ಪ್ರಯತ್ನಪಟ್ಟರೂ ಅವರಾಗಲೀ ಅಥವಾ ನೀನಾಗಲೀ ಉಳಿಯುವುದು ಸಂಶಯವೇ ಆಗಿದೆ.

ಮಗೂ! ದುರ್ಯೋಧನ! ನಿನ್ನನ್ನು ನೀನು ರಕ್ಷಿಸಿಕೋ! ಈ ಶರೀರವೇ ಸರ್ವ ಸುಖಗಳ ಅನುಭವಸ್ಥಾನವಾಗಿದೆ. ಪಾತ್ರೆಯು ಒಡೆದಾಗ ಅದರಲ್ಲಿರುವ ನೀರು ಎಲ್ಲ ಕಡೆ ಹರಿದುಹೋಗುವಂತೆ ಶರೀರವು ನಾಶವಾಗಲು ಸರ್ವ ಸುಖಗಳೂ ಅಂತ್ಯಗೊಳ್ಳುತ್ತವೆ. ತನ್ನ ಬಲವು ಶತ್ರುಬಲಕ್ಕಿಂತ ಕಡಿಮೆಯಾಗಿರುವಾಗ ಅಥವಾ ಸಮನಾಗಿರುವಾಗ ಶತ್ರುಗಳೊಡನೆ ಸಂಧಿಯ ಮಾರ್ಗವನ್ನು ಹುಡುಕಬೇಕು. ಅಧಿಕವಾಗಿರುವಾಗ ಯುದ್ಧಮಾಡಬೇಕು. ಇದೇ ಬೃಹಸ್ಪತಿಯ ನೀತಿ. ಈಗ ನಾವು ನಮ್ಮ ಶಕ್ತಿಯಲ್ಲಿ ಪಾಂಡುಪುತ್ರರಿಗಿಂತಲೂ ಹೀನರಾಗಿದ್ದೇವೆ. ಆದುದರಿಂದ ಪಾಂಡವರೊಂದಿಗೆ ಸಂಧಿಯೇ ಸರಿಯಾದುದೆಂದು ಅನ್ನಿಸುತ್ತಿದೆ. ಯಾವ ರೀತಿಯಲ್ಲಿ ನಡೆದರೆ ಶ್ರೇಯಸ್ಸುಂಟಾಗುತ್ತದೆ ಎನ್ನುವುದನ್ನು ಅರಿಯದವನು ಶ್ರೇಯಸ್ಸನ್ನು ಅಪಮಾನಿಸಿದಂತೆ. ಅವನು ಕ್ಷಿಪ್ರವಾಗಿ ರಾಜ್ಯ-ಶ್ರೇಯಸ್ಸುಗಳನ್ನು ಕಳೆದುಕೊಳ್ಳುತ್ತಾನೆ. ರಾಜ

ಯುಧಿಷ್ಠಿರನಿಗೆ ತಲೆಬಾಗಿ ನಮ್ಮ ರಾಜ್ಯವನ್ನು ಪಡೆದುಕೊಂಡೆವೆಂದರೆ ಅದರಿಂದ ನಮಗೆ ಶ್ರೇಯಸ್ಸೇ ಉಂಟಾಗುತ್ತದೆ. ಮೌಢ್ಯತನದಿಂದ ಹೀಗೆಯೇ ಮುಂದುವರೆದರೆ ಪರಾಭವವನ್ನು ಹೊಂದುತ್ತೇವೆಯೇ ವಿನಃ ಶ್ರೇಯಸ್ಸು ದೊರಕುವುದಿಲ್ಲ. ಕೃಪಾಶೀಲ ಯುಧಿಷ್ಠಿರನು ವೈಚಿತ್ರವೀರ್ಯನ ಅಥವಾ ಗೋವಿಂದನ ಹೇಳಿಕೆಯಂತೆ ನಿನಗೇ ರಾಜ್ಯವೆಲ್ಲವನ್ನು ನೀಡಿಯಾನು! ಹೃಷೀಕೇಶನು ಯುಧಿಷ್ಠಿರನಿಗೆ ಏನನ್ನು ಹೇಳುವನೋ ಅದರಂತೆಯೇ ಭೀಮಾರ್ಜುನರೆಲ್ಲರೂ ಮಾಡುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಧೃತರಾಷ್ಟ್ರನ ಮಾತನ್ನು ಕೃಷ್ಣನು ಉಲ್ಲಂಘಿಸುವುದಿಲ್ಲ, ಮತ್ತು ಅಂತೆಯೇ ಕೃಷ್ಣನ ಮಾತನ್ನು ಪಾಂಡವರು ಉಲ್ಲಂಘಿಸುವುದಿಲ್ಲ. ನೀನು ಪಾರ್ಥರೊಂದಿಗೆ ಯುದ್ಧವನ್ನು ನಿಲ್ಲಿಸುವುದೇ ಉತ್ತಮವೆಂದು ನನಗನ್ನಿಸುತ್ತಿದೆ. ಇದನ್ನು ನಾನು ಯುದ್ಧಮಾಡುವುದು ಕಷ್ಟವೆಂಬ ಕಾರಣದಿಂದಾಗಲೀ ಪ್ರಾಣರಕ್ಷಣೆಯ ಸಲುವಾಗಲೀ ಹೇಳುತ್ತಿಲ್ಲ. ನಿನಗೆ ಪಥ್ಯ-ಹಿತವಾಗುವ ಮಾತನ್ನು ಹೇಳುತ್ತಿದ್ದೇನೆ.”

ಹೀಗೆ ಹೇಳಿ ವೃದ್ಧ ಶಾರದ್ವತ ಕೃಪನು ಬಿಸಿಬಿಸಿ ನಿಟ್ಟುಸಿರು ಬಿಡುತ್ತಾ, ಬಹಳವಾಗಿ ಶೋಕಿಸುತ್ತಾ, ದುಃಖಾತಿರೇಕದಿಂದ ಮೂರ್ಛಿತನಾದನು.

ಗೌತಮನು ಹೀಗೆ ಹೇಳಲು ರಾಜ ದುರ್ಯೋಧನನು ದೀರ್ಘವಾಗಿ ಬಿಸಿಬಿಸಿ ನಿಟ್ಟುಸಿರು ಬಿಟ್ಟು ಸುಮ್ಮನಿದ್ದನು. ಸ್ವಲ್ಪಕಾಲ ಯೋಚಿಸಿ ಧಾರ್ತರಾಷ್ಟ್ರನು ಶಾರದ್ವತ ಕೃಪನಿಗೆ ಇಂತೆಂದನು:

> “ಸುಹೃದಯರು ಏನೆಲ್ಲ ಹೇಳಬೇಕೋ ಅವೆಲ್ಲವನ್ನೂ ನೀವು ನನಗೆ ಹೇಳಿದ್ದೀರಿ. ನಿಮ್ಮ ಪ್ರಾಣ ಸರ್ವಸ್ವವನ್ನೂ ತ್ಯಜಿಸಿ ಯುದ್ಧಮಾಡುತ್ತಿರುವಿರಿ! ಅತಿತೇಜಸ್ವಿ ಮಹಾರಥ ಪಾಂಡವರ ಸೇನೆಗಳಲ್ಲಿ ನುಗ್ಗಿ ಯುದ್ಧಮಾಡುತ್ತಿರುವ ನಿಮ್ಮನ್ನು ಲೋಕವೇ ಅವಲೋಕಿಸಿದೆ. ಆದರೆ ಸುಹೃದತೆಯಿಂದ ನೀವು ನನಗೆ ಹೇಳಿದ ಮಾತುಗಳು ಸಾಯುವವನಿಗೆ ಔಷಧಿಯು ಹೇಗೋ ಹಾಗೆ ಪ್ರಿಯವೆನಿಸುತ್ತಿಲ್ಲ. ವಿಪ್ರಾಗ್ರ್ಯ! ನೀವು ಯುಕ್ತಿ ಮತ್ತು ಕಾರಣಗಳಿಂದ ಸುಸಂಗತ- ಹಿತಕರ-ಉತ್ತಮ ಮಾತುಗಳನ್ನೇ ಆಡಿರುವಿರಿ. ಆದರೆ ಅವು ನನಗೆ ರುಚಿಸುತ್ತಿಲ್ಲ. ನಮ್ಮಿಂದಲೇ ರಾಜ್ಯವಂಚಿತನಾದ ಅವನು ನಮ್ಮೊಡನೆ ಹೇಗೆ ವಿಶ್ವಾಸವಿಡುತ್ತಾನೆ? ಅಕ್ಷದ್ಯೂತದಲ್ಲಿ ಮಹಾಧವನ್ನು ಗೆದ್ದ ನಮ್ಮ ಮಾತುಗಳಲ್ಲಿ ಪುನಃ ಆ ನೃಪತಿಯು ಹೇಗೆ

ಶ್ರದ್ಧೆಯಿಡುತ್ತಾನೆ? ಹಾಗೆಯೇ ದ್ಯೂತದ ಪರಿಣಾಮವಾಗಿ ಪಾರ್ಥಹಿತರತನಾಗಿರುವ ಹೃಷೀಕೇಶನು ಸಂಧಿಗಾಗಿ ಬಂದಾಗ ಅವನನ್ನು ನಾವು ವಿರೋಧಿಸಿದೆವು. ಈಗ ಅವನು ನಮ್ಮ ಮಾತನ್ನು ಹೇಗೆ ಮನ್ನಿಸುತ್ತಾನೆ? ಸಭಾಮಧ್ಯದಲ್ಲಿ ಕೃಷ್ಣೆಯನ್ನು ಎಳೆತಂದಾಗ ಅವಳು ವಿಲಪಿಸಿದುದನ್ನು ಮತ್ತು ರಾಜ್ಯಹರಣವನ್ನು ಕೃಷ್ಣನು ಎಂದಿಗೂ ಸಹಿಸುವವನಲ್ಲ. ಕೃಷ್ಣರಿಬ್ಬರ ಪ್ರಾಣವೂ ಒಂದೇ. ಅವರು ಅನ್ಯೋನ್ಯರನ್ನು ಆಶ್ರಯಿಸಿರುವವರು ಎಂದು ಹೇಳಿದುದನ್ನು ನಾನು ಹಿಂದೆ ಕೇಳಿದ್ದೆ. ಆದರೆ ಅದನ್ನು ಇಂದು ಪ್ರತ್ಯಕ್ಷವಾಗಿ ಕಾಣುತ್ತಿದ್ದೇನೆ. ಸೋದರಳಿಯನು ಹತನಾದುದನ್ನು ಕೇಳಿ ಕೇಶವನು ದುಃಖದಿಂದ ನಿದ್ದೆಮಾಡುತ್ತಿಲ್ಲ. ಅವನ ಮೇಲೆ ಈ ಅಪರಾಧವೆಸಗಿದ ನಮ್ಮನ್ನು ಅವನು ಹೇಗೆ ತಾನೇ ಕ್ಷಮಿಸಿಯಾನು? ಅಭಿಮನ್ಯುವಿನ ವಿನಾಶದಿಂದ ಅರ್ಜುನನಿಗೆ ಸುಖವೆಂಬುದೇ ಇಲ್ಲವಾಗಿದೆ. ಪ್ರಾರ್ಥಿಸಿದರೂ ಅವನು ನನ್ನ ಹಿತವನ್ನು ಏಕೆ ಪ್ರಯತ್ನಿಸುತ್ತಾನೆ? ಮಧ್ಯಮ ಪಾಂಡವ ತೀಕ್ಷ್ಣ ಮಹಾಬಲ ಭೀಮಸೇನನು ಉಗ್ರ ಪ್ರತಿಜ್ಞೆಯನ್ನು ಮಾಡಿರುವನು. ಅವನು ಭಗ್ನನಾಗಬಲ್ಲನೇ ಹೊರತು ಬಾಗುವವನಲ್ಲ! ಕವಚಗಳನ್ನು ತೊಟ್ಟು ಖಡ್ಗಗಳನ್ನು

ಸೊಂಟಗಳಿಗೆ ಕಟ್ಟಿಕೊಂಡಿರುವ ಯಮರೂಪದ ವೀರ ಯಮಳರು ಕೂಡ ನಮಗೆ ಬದ್ಧವೈರಿಗಳು. ಧೃಷ್ಟದ್ಯುಮ್ನ-ಶಿಖಂಡಿಯರು ಸಹ ನನ್ನೊಡನೆ ವೈರವನ್ನು ಕಟ್ಟಿಕೊಂಡಿರುವರು. ಅವರಿಬ್ಬರೂ ನನ್ನ ಹಿತಕ್ಕಾಗಿ ಏಕೆ ಪ್ರಯತ್ನಿಸುವರು? ಏಕವಸ್ತ್ರಳೂ ರಜಸ್ವಲೆಯೂ ಆಗಿದ್ದ ಕೃಷ್ಣೆಯನ್ನು ದುಃಶಾಸನನು ಸಭಾಮಧ್ಯದಲ್ಲಿ ಸರ್ವರೂ ನೋಡುತ್ತಿರುವಂತೆಯೇ ಕಾಡಿಸಿದ್ದು, ಹಾಗೆಯೇ ಆ ದೀನಳಾದವಳನ್ನು ವಸ್ತ್ರಹೀನಳನ್ನಾಗಿ ಮಾಡಿದುದು ಇವುಗಳನ್ನು ಸ್ಮರಿಸಿಕೊಂಡಿರುವ ಪರಂತಪ ಪಾಂಡವರು ಈಗ ಸಂಗ್ರಾಮವನ್ನು ನಿಲ್ಲಿಸಲು ಸಾಧ್ಯವಿಲ್ಲ. ದುಃಖಿತಳಾದ ದ್ರೌಪದೀ ಕೃಷ್ಣೆಯು ತನ್ನ ಪತಿಯಂದಿರ ಅರ್ಥಸಿದ್ಧಿಗಾಗಿ ಉಗ್ರತಪಸ್ಸನ್ನು ತಪಿಸುತ್ತಿದ್ದಾಳೆ. ವೈರದ ಯಾತನೆಯಿರುವವರೆಗೆ ಅವಳು ನಿತ್ಯವೂ ನೆಲದ ಮೇಲೆಯೇ ಮಲಗುತ್ತಿದ್ದಾಳೆ. ಮಾನ-ದರ್ಪಗಳನ್ನು ಬದಿಗೊತ್ತಿ ವಾಸುದೇವನ ಸಹೋದರಿ ಸುಭದ್ರೆಯು ಕೃಷ್ಣೆಯ ದಾಸಿಯಾಗಿ ಸದಾ ಅವಳ ಶುಶ್ರೂಷೆಯನ್ನು ಮಾಡುತ್ತಿದ್ದಾಳೆ. ಹೀಗೆ ಎಲ್ಲ ಪ್ರಕಾರಗಳಿಂದಲೂ ವೃದ್ಧಿಯಾಗುತ್ತಿರುವ ವೈರವನ್ನು ನಿವಾರಿಸಲು ಎಂದೂ ಸಾಧ್ಯವಿಲ್ಲ. ಅಭಿಮನ್ಯುವಿನ ವಿನಾಶ

ಕಾರಣನಾದ ನನ್ನೊಂದಿಗೆ ಅವರು ಹೇಗೆ ತಾನೇ ಸಂಧಿಮಾಡಿಕೊಂಡಾರು?

ಪಾಂಡವರ ಪ್ರಸಾದವಾದ ಭೂಮಿಯನ್ನು ಅಲ್ಪಕ ರಾಜನಂತೆ ನಾನು ಹೇಗೆ ತಾನೇ ಭೋಗಿಸಲಿ? ರಾಜರನ್ನು ಮೆಟ್ಟಿ ಭಾಸ್ಕರನಂತೆ ಪ್ರಜ್ವಲಿಸುತ್ತಿರುವ ನಾನು ಹೇಗೆ ತಾನೇ ಯುಧಿಷ್ಠಿರನ ಹಿಂದೆ ಓರ್ವ ದಾಸನಂತೆ ಹೋಗಬಲ್ಲೆ? ಸ್ವಯಂ ನಾನು ಭೋಗಗಳನ್ನು ಭೋಗಿಸಿ ಪುಷ್ಕಲ ದಾನಗಳನ್ನು ನೀಡಿ ದೈನ್ಯನಾಗಿ ದೀನತೆಯಿಂದ ಹೇಗೆ ಜೀವಿಸಬಲ್ಲೆ? ನಿನ್ನ ಸ್ನೇಹಪೂರಕ-ಹಿತಕರ ಮಾತುಗಳನ್ನು ನಾನು ಅಲ್ಲಗಳೆಯುತ್ತಿಲ್ಲ. ಆದರೆ ಸಂಧಿಮಾಡಿಕೊಳ್ಳುವ ಕಾಲವೊದಗಿದೆ ಎನ್ನುವುದನ್ನು ಮಾತ್ರ ಸರ್ವಥಾ ಒಪ್ಪಿಕೊಳ್ಳುವುದಿಲ್ಲ. ಉತ್ತಮ ನೀತಿಯನ್ನನುಸರಿಸಿ ಉತ್ತಮವಾಗಿ ಯುದ್ಧಮಾಡಬೇಕೆಂದು ನನಗೆ ತೋರುತ್ತದೆ. ದುರ್ಬಲರಾಗಿರುವ ಕಾಲವಿದಲ್ಲ. ನಾವು ಇನ್ನೂ ಸರಿಯಾಗಿ ಯುದ್ಧಮಾಡುವ ಕಾಲವಿದು.

ನಾನು ವಿಪ್ರರಿಗೆ ದಕ್ಷಿಣೆಗಳನ್ನಿತ್ತು ಅನೇಕ ಇಷ್ಟಿ-ಯಜ್ಞಗಳನ್ನು ಮಾಡಿದ್ದೇನೆ. ವೇದ-ಶ್ರುತಿಗಳನ್ನು ಕಲಿತುಕೊಂಡಿರುವೆನು.

ಶತ್ರುಗಳ ತಲೆಮೆಟ್ಟಿ ನಿಂತಿದ್ದೇನೆ. ಭೃತ್ಯರ ಪಾಲನೆ-ಪೋಷಣೆಗಳನ್ನು ಮಾಡುತ್ತಿದ್ದೇನೆ. ದೀನ ದಲಿತರನ್ನು ಉದ್ಧರಿಸಿದ್ದೇನೆ. ಪರರಾಷ್ಟ್ರಗಳನ್ನೂ ನನ್ನ ರಾಷ್ಟ್ರಗಳಲ್ಲಿ ಸೇರಿಸಿಕೊಂಡು ಪರಿಪಾಲಿಸುತ್ತಿದ್ದೇನೆ. ವಿವಿಧ ಭೋಗಗಳನ್ನು ಅನುಭವಿಸಿದ್ದೇನೆ. ಧರ್ಮ-ಅರ್ಥ-ಕಾಮಗಳೆಂಬ ತ್ರಿವರ್ಗಗಳನ್ನೂ ಸೇವಿಸಿದ್ದೇನೆ. ಕ್ಷತ್ರಿಯ ಧರ್ಮ ಮತ್ತು ಪಿತೃಗಳ ಋಣಗಳೆರಡನ್ನೂ ತೀರಿಸಿದ್ದೇನೆ. ಸುಖವೇ ಶಾಶ್ವತವಿಲ್ಲದಿರುವಾಗ ರಾಜ್ಯವಾಗಲೀ ಯಶಸ್ಸಾಗಲೀ ಹೇಗೆ ತಾನೇ ಶಾಶ್ವತವಾಗಿರುವವು? ಇಲ್ಲಿ ಕೀರ್ತಿಯನ್ನು ಯುದ್ಧದಿಂದ ಮಾತ್ರ ಪಡೆಯಬಹುದೇ ವಿನಃ ಅನ್ಯ ಕಾರ್ಯಗಳಿಂದಲ್ಲ! ಮನೆಯಲ್ಲಿ ನಿಧನಹೊಂದಿದ ಕ್ಷತ್ರಿಯನು ಅತಿನಿಂದನೀಯನು. ಅದರಲ್ಲೂ ಮನೆಯಲ್ಲಿ ಹಾಸಿಗೆಯ ಮೇಲೆ ಮರಣಹೊಂದಿದರೆ ಮಹಾ ಅಧರ್ಮವೆನಿಸಿಕೊಳ್ಳುತ್ತದೆ. ಮಹಾ ಕ್ರತುಗಳನ್ನು ಮಾಡಿ ಅರಣ್ಯದಲ್ಲಿ ಅಥವಾ ಸಂಗ್ರಾಮದಲ್ಲಿ ಶರೀರತ್ಯಾಗ ಮಾಡುವ ಕ್ಷತ್ರಿಯನು ಮಹಾ ಮಹಿಮೆಯನ್ನು ಪಡೆಯುತ್ತಾನೆ. ಮುಪ್ಪಿನಿಂದ ಶಿಥಿಲವಾದ ಶರೀರವುಳ್ಳವನಾಗಿ ರೋಗಪೀಡಿತನಾಗಿ ಆರ್ತನಾಗಿ ವಿಲಪಿಸುತ್ತಾ

ಗೋಳಾಡುತ್ತಿರುವ ಜ್ಞಾತಿಗಳ ಮಧ್ಯದಲ್ಲಿ ಮರಣಹೊಂದುವವನು ಖಂಡಿತವಾಗಿಯೂ ಪುರುಷನೇ ಅಲ್ಲ! ವಿವಿಧ ಭೋಗಗಳನ್ನು ಪರಿತ್ಯಜಿಸಿದವರಿಗೆ ಯಾವ ಪರಮ ಗತಿಯು ದೊರಕುವುದೋ ಆ ಉತ್ತಮ ಲೋಕಗಳಿಗೆ ನಾನು ಈ ಉತ್ತಮ ಯುದ್ಧದಿಂದ ಹೋಗುತ್ತೇನೆ! ಶೂರರಿಗೆ, ಉತ್ತಮ ನಡತೆಯುಳ್ಳವರಿಗೆ, ಸಂಗ್ರಾಮದಿಂದ ಹಿಂದಿರುಗದವರಿಗೆ, ಧೀಮತ ಸತ್ಯಸಂಧರಿಗೆ, ಕ್ರತು-ಯಜ್ಞಗಳನ್ನು ನಡೆಸಿದವರಿಗೆ, ಶಸ್ತ್ರಗಳಿಂದ ಅವಭೃತಸ್ನಾನ ಮಾಡಿ ಪೂತರಾದವರಿಗೆ – ಇವರೆಲ್ಲರಿಗೂ ಸ್ವರ್ಗವಾಸವು ನಿಶ್ಚಿತವಾಗಿದೆ. ಯುದ್ಧದಲ್ಲಿ ಪ್ರಾಣಾರ್ಪಣೆ ಮಾಡಿದವರನ್ನು ಅಪ್ಸರೆಯರು ಪರಮ ಸಂತೋಷದಿಂದ ಸ್ವಾಗತಿಸುತ್ತಾರೆ. ಶಕ್ರಸಭೆಯಲ್ಲಿ ಅಪ್ಸರೆಯರಿಂದ ಪರಿವೃತರಾಗಿ ಸ್ವರ್ಗದಲ್ಲಿ ಗೌರವಿಸಲ್ಪಡುವವರನ್ನು ಪಿತೃಗಳು ಕೂಡ ನೋಡಿ ಸಂತೋಷಪಡುತ್ತಾರೆ. ಯುದ್ಧದಿಂದ ಹಿಂದಿರುಗದಿರುವ ಶೂರರು ಹೋಗುವ ದಾರಿಯಲ್ಲಿಯೇ ಹೋದರೆ ನಾವೂ ಕೂಡ ಪಿತಾಮಹ ಭೀಷ್ಮ, ಧೀಮಂತ ಆಚಾರ್ಯ, ಜಯದ್ರಥ, ಕರ್ಣ ಮತ್ತು ದುಃಶಾಸನರು ಹೋಗಿರುವ ಪುಣ್ಯ ಲೋಕಗಳಿಗೆ ಹೋಗುತ್ತೇವೆ. ನನಗಾಗಿ ಸಂಘಟಿತರಾಗಿ ಬಂದಿರುವ ಶೂರ

ಜನಾಧಿಪರು ಬಾಣಗಳಿಂದ ಗಾಯಗೊಂಡು ಅಂಗಗಳು ರಕ್ತದಿಂದ ತೋಯ್ದುಹೋಗಿ ರಣಭೂಮಿಯ ಮೇಲೆ ಮಲಗಿದ್ದಾರೆ. ಉತ್ತಮಾಸ್ತ್ರಗಳನ್ನು ತಿಳಿದಿದ್ದ ಶೂರರು ಯಥೋಕ್ತವಾಗಿ ಕ್ರತುಗಳನ್ನು ಯಾಜಿಸಿ ಯಥಾನ್ಯಾಯವಾಗಿ ಪ್ರಾಣಗಳನ್ನು ತೊರೆದು ಇಂದ್ರಲೋಕದಲ್ಲಿ ಆಶ್ರಯಪಡೆದಿದ್ದಾರೆ. ಮಹಾರಭಸದಿಂದ ನಡೆಯುತ್ತಿರುವ ಈ ಯುದ್ಧದಲ್ಲಿ ಮಡಿದು ಸದ್ಗತಿಯನ್ನು ಪಡೆದವರು ನಿರ್ಮಿಸಿದ ಈ ಮಾರ್ಗವು ಸುಗಮವಾಗಿದೆ. ಇಂತಹ ಮಾರ್ಗವು ಪುನಃ ದೊರೆಯದೇ ಇರಬಹುದು. ನನಗೋಸ್ಕರವಾಗಿ ಹತರಾಗಿರುವವರ ಕರ್ಮಗಳನ್ನು ಸ್ಮರಿಸುತ್ತಾ ಅವರ ಋಣದಿಂದ ಮುಕ್ತನಾಗಲು ಪ್ರಯತ್ನಿಸುತ್ತಿರುವ ನನಗೆ ರಾಜ್ಯದಲ್ಲಿ ಮನಸ್ಸಿಲ್ಲ. ಸ್ನೇಹಿತರು-ಸಹೋದರರು-ಪಿತಾಮಹರು ಎಲ್ಲರನ್ನೂ ಸಾಯಗೊಟ್ಟು ಈ ಜೀವವನ್ನು ರಕ್ಷಿಸಿಕೊಂಡರೆ ಲೋಕವು ನನ್ನನ್ನು ನಿಶ್ಚಯವಾಗಿಯೂ ನಿಂದಿಸುತ್ತದೆ. ಬಂಧು-ಸ್ನೇಹಿತ-ಸುಹೃದಯರಿಂದ ವಿಹೀನನಾಗಿ ಪಾಂಡವನಿಗೆ ಶರಣಾಗತನಾಗಿ ಪಡೆಯುವ ರಾಜ್ಯದ ರಾಜ್ಯಭಾರವಾದರೂ ಹೇಗಿರಬಹುದು? ಜಗತ್ತನ್ನೇ ಪರಾಭವಗೊಳಿಸಿದಂತಹ ಕಾರ್ಯಗಳನ್ನು ಮಾಡಿ ಈಗ

ಉತ್ತಮ ಯುದ್ಧದಿಂದ ಸ್ವರ್ಗವನ್ನು ಪಡೆಯುತ್ತೇನೆ. ಅನ್ಯಥಾ ಇಲ್ಲ!"

ದುರ್ಯೋಧನನಾಡಿದ ಆ ಮಾತನ್ನು ಸರ್ವ ಕ್ಷತ್ರಿಯ ರಾಜರೂ ಗೌರವಿಸಿ "ಸಾಧು! ಸಾಧು!" ಎಂದು ಮಾತನಾಡಿಕೊಂಡರು. ತಮ್ಮ ಪರಾಜಯದ ಕುರಿತು ಶೋಕಿಸುವುದನ್ನು ನಿಲ್ಲಿಸಿ ಪರಾಕ್ರಮವನ್ನು ತೋರಿಸುವುದರಲ್ಲಿಯೇ ದೃಢಚಿತ್ತರಾಗಿ ಯುದ್ಧಮಾಡಲು ನಿಶ್ಚಯಿಸಿ ಮುದಿತ ಮನಸ್ಕರಾದರು. ಅನಂತರ ವಾಹನಗಳನ್ನು ಸಂತಯಿಸಿ, ಯುದ್ಧಾಭಿನಂದಿನ ಕೌರವರೆಲ್ಲರೂ ಅಲ್ಲಿಂದ ಎರಡು ಯೋಜನ ದೂರಕ್ಕೆ ಹೋಗಿ ನಿಂತುಕೊಂಡರು. ಆಕಾಶದಲ್ಲಿರುವಂತೆ ತೋರುತ್ತಿದ್ದ, ವೃಕ್ಷಭರಿತ ಪುಣ್ಯ ಹಿಮವತ್ಪರ್ವತ ತಪ್ಪಲಿನಲ್ಲಿ ಹರಿಯುತ್ತಿದ್ದ ಎಣೆಗೆಂಪಿನ ಸರಸ್ವತೀ ನದಿಗೆ ಹೋಗಿ ಆ ನೀರನ್ನು ಕುಡಿದು ಸ್ನಾನಮಾಡಿದರು. ಕಾಲಚೋದಿತ ಸರ್ವ ಕ್ಷತ್ರಿಯರೂ ದುರ್ಯೋಧನನಿಂದ ಪ್ರೋತ್ಸಾಹಿತರಾಗಿ ಅನ್ಯೋನ್ಯರೊಂದಿಗೆ ಸಂಭಾಷಣೆಗೈಯುತ್ತಾ ತಮ್ಮ ಮನಸ್ಸನ್ನು ಯುದ್ಧದಲ್ಲಿಯೇ ಸ್ಥಿರಗೊಳಿಸಿ ಪುನಃ ಯುದ್ಧಭೂಮಿಗೆ ಹಿಂದಿರುಗಿದರು.

## ಶಲ್ಯಸೇನಾಪತ್ಯಾಭಿಷೇಕ

ಹಿಮಾಲಯದ ತಪ್ಪಲಿನಲ್ಲಿ ತಂಗಿ ಯುದ್ಧಾಭಿನಂದಿ ಯೋಧರೆಲ್ಲರೂ

ಅಲ್ಲಿ ಸೇರಿದರು. ಶಲ್ಯ, ಚಿತ್ರಸೇನ, ಶಕುನಿ, ಅಶ್ವತ್ಥಾಮ, ಕೃಪ, ಕೃತವರ್ಮ, ಸುಷೇಣ, ಅರಿಷ್ಟಸೇನ, ಧೃತಸೇನ, ಮತ್ತು ಜಯತ್ಸೇನ ಇವರುಗಳು ರಾತ್ರಿಯನ್ನು ಕಳೆದರು. ರಣದಲ್ಲಿ ವೀರ ಕರ್ಣನು ಹತನಾಗಲು ಜಯದಿಂದ ಉಬ್ಬಿದ್ದ ಪಾಂಡವರ ಭಯದಿಂದ ತತ್ತರಿಸಿದ ಕೌರವರಿಗೆ ಆ ಹಿಮಾಲಯದ ತಪ್ಪಲಿನಲ್ಲಿಯೂ ಸಮಾಧಾನವು ದೊರಕಲಿಲ್ಲ. ರಣದಲ್ಲಿ ಪ್ರಯತ್ನಮಾಡಿ ಅಲ್ಲಿ ನೆರೆದಿದ್ದ ಅವರು ಸೈನ್ಯ ಸನ್ನಿಧಿಯಲ್ಲಿ ರಾಜನನ್ನು ವಿಧಿವತ್ತಾಗಿ ಗೌರವಿಸಿ ಅವನಿಗೆ ಹೇಳಿದರು:

> "ಸೇನಾನಾಯಕನನ್ನು ಮಾಡಿಕೊಂಡು ಶತ್ರುಗಳೊಂದಿಗೆ ನೀನು ಯುದ್ಧಮಾಡಬೇಕು. ಸೇನಾಪತಿಯ ರಕ್ಷಣೆಯಡಿಯಲ್ಲಿ ನಾವು ಸಂಗ್ರಾಮದಲ್ಲಿ ಜಯವನ್ನು ಗಳಿಸಬಲ್ಲೆವು!"

ಆಗ ದುರ್ಯೋಧನನು ಶ್ರೇಷ್ಠ ಉತ್ತಮ ರಥದಲ್ಲಿ ನಿಂತು ಸರ್ವಯುದ್ಧವಿಭಾವಜ್ಞನೂ, ಯುದ್ಧದಲ್ಲಿ ಅಂತಕನಂತಿರುವವನೂ ಆದ ಅಶ್ವತ್ಥಾಮನನ್ನು ನೋಡಿದನು. ಅಶ್ವತ್ಥಾಮನು ಸುಂದರಾಂಗನಾಗಿದ್ದನು. ಶಿರದಲ್ಲಿ ಕೇಶರಾಶಿಯುಳ್ಳವನಾಗಿದ್ದನು. ಕಂಬುಗ್ರೀವನೂ, ಪ್ರಿಯವದನೂ, ಅರಳಿದ ಕಮಲದಳಗಳಂತಿರುವ ಕಣ್ಣುಳ್ಳವನೂ, ವ್ಯಾಘ್ರದಂತೆ ವಿಶಾಲ ಮುಖವುಳ್ಳವನೂ,

ಮೇರುಪರ್ವದಂತೆ ಗಂಭೀರನೂ, ಸ್ಥಾಣುವಿನ ನಂದಿಯಂತಹ ಹೆಗಲು-ಕಣ್ಣುಗಳು-ನಡಿಗೆ ಮತ್ತು ಗರ್ಜನೆಯುಳ್ಳವನೂ, ಪುಷ್ಟ-ಸುಸಂಘಟಿತ-ನೀಳ ತೋಳುಗಳುಳ್ಳವನೂ, ವಿಶಾಲ-ಶ್ರೇಷ್ಠ ವಕ್ಷಸ್ಥಳವುಳ್ಳವನೂ, ಅರುಣಾನುಜ ಗರುಡ ಮತ್ತು ವಾಯುವಿನ ಬಲ-ವೇಗವುಳ್ಳವನೂ, ಸೂರ್ಯನ ತೇಜಸ್ಸು ಮತ್ತು ಶುಕ್ರಾಚಾರ್ಯನ ಬುದ್ಧಿಯುಳ್ಳವನೂ, ಚಂದ್ರನ ಮುಖಕಾಂತಿ-ರೂಪೈಶ್ವರ್ಯಯುಕ್ತನೂ, ಸುವರ್ಣಶಿಲೆಯ ಕಾಂತಿಯ ಶರೀರವುಳ್ಳವನೂ, ಸುಘಟಿತ ಸಂಧಿಗಳಿಂದ ಕೂಡಿದವನೂ, ವೃತ್ತಾಕಾರದ ತೊಡೆ-ಕಟಿ-ಮೊಣಕಾಲಿನವನೂ, ಸುಂದರ ಪಾದ-ಬೆರಳು-ಉಗುರುಗಳಿದ್ದವನೂ, ಬ್ರಹ್ಮನು ಒಳ್ಳೊಳ್ಳೆಯ ಗುಣಗಳನ್ನು ಸ್ಮರಣೆಗೆ ತಂದುಕೊಂಡು ಪ್ರಯತ್ನಪೂರ್ವಕವಾಗಿ ನಿರ್ಮಿಸಿದಂತಿದ್ದ ಸುಂದರ ಅವಯವಗಳುಳ್ಳವನೂ, ಸರ್ವಲಕ್ಷಣ ಸಂಪನ್ನನೂ ಆಗಿದ್ದನು. ಅಶ್ವತ್ಥಾಮನು ನಿಪುಣನೂ, ಶ್ರುತಿಸಾಗರನೂ, ಶತ್ರುಗಳನ್ನು ಬಹುಬೇಗ ಜಯಿಸಬಲ್ಲವನೂ, ಶತ್ರುಗಳಿಗೆ ದುರ್ಲಭನೂ ಆಗಿದ್ದನು. ಅವನು ಧನುರ್ವೇದದ ಹತ್ತು ಅಂಗಗಳನ್ನು ಮತ್ತು ನಾಲ್ಕು ಪಾದಗಳನ್ನೂ ತಿಳಿದಿದ್ದನು. ಇಷ್ವಸ್ತ್ರಗಳ ತತ್ವಗಳನ್ನು ತಿಳಿದಿದ್ದಮು. ನಾಲ್ಕು ವೇದಗಳನ್ನು ಸಾಂಗವಾಗಿ ತಿಳಿದಿದ್ದನು. ಐದನೆಯ ವೇದವನ್ನು ತಿಳಿದಿದ್ದ ಅವನು ಉಗ್ರ ವ್ರತಾನುಷ್ಠಾನಗಳಿಂದ ಪ್ರಯತ್ನಪಟ್ಟು ತ್ರ್ಯಂಬಕನನ್ನು ಆರಾಧಿಸಿ ಅನುಗ್ರಹ ಪಡೆದುಕೊಂಡಿದ್ದನು. ಅಯೋನಿಜೆ

ಕೃಪೆ ಮತ್ತು ಅಯೋನಿಜ ದ್ರೋಣರಿಂದ ಉತ್ಪನ್ನನಾಗಿದ್ದ ಅವನು ಅಪ್ರತಿಮ ಕರ್ಮಗಳನ್ನೆಸಗಿದ್ದನು. ರೂಪದಲ್ಲಿ ಭುವಿಯಲ್ಲಿಯೇ ಅಸದೃಶನಾಗಿದ್ದನು. ಸರ್ವವಿದ್ಯಾ ಪಾರಂಗತನೂ ಗುಣಗಳ ಸಾಗರನೂ ಆಗಿದ್ದನು.

ಆ ಅನಿಂದಿತ ಅಶ್ವತ್ಥಾಮನಿಗೆ ದುರ್ಯೋಧನನು ಹೇಳಿದನು:

> "ಗುರುಪುತ್ರ! ಯಾರನ್ನು ಮುಂದಿಟ್ಟುಕೊಂಡು ಒಟ್ಟಾಗಿ ನಾವು ಯುದ್ಧದಲ್ಲಿ ಪಾಂಡವರನ್ನು ಜಯಿಸಬಲ್ಲೆವೋ ಅಂತಹ ನೀನೇ ನಮ್ಮೆಲ್ಲರ ಪರಮ ಗತಿಯು. ಆದುದರಿಂದ ನಿನ್ನ ನಿರ್ದೇಶನದಂತೆಯೇ ನಾವು ನಡೆದುಕೊಳ್ಳುತ್ತೇವೆ. ಯಾರು ನನ್ನ ಸೇನಾಪತಿಯಾಗಬಹುದು?"

ದ್ರೌಣಿಯು ಹೇಳಿದನು:

> "ಈ ಶಲ್ಯನು ಕುಲ, ವೀರ್ಯ, ತೇಜಸ್ಸು, ಯಶಸ್ಸು ಮತ್ತು ಶ್ರೀ ಈ ಸರ್ವಗುಣಗಳಿಂದ ಸಮುದಿತನಾಗಿರುವನು. ಅವನೇ ನಮ್ಮ ಸೇನಾಪತಿಯಾಗಲಿ! ಕೃತಜ್ಞನಾದ ಇವನು ತಂಗಿಯ ಮಕ್ಕಳನ್ನೂ ಪರಿತ್ಯಜಿಸಿ ನಮ್ಮನ್ನು ಅನುಸರಿಸಿ ಬಂದಿದ್ದಾನೆ. ಈ ಮಹಾಬಾಹುವು ಮತ್ತೊಬ್ಬ ಕಾರ್ತಿಕೇಯನಂತೆ

ಮಹಾಸೇನಾನಿಯಾಗಿದ್ದಾನೆ. ಅಪರಾಜಿತ ದೇವತೆಗಳು ಸ್ಕಂದನನ್ನು ಪಡೆದು ಜಯವನ್ನು ಗಳಿಸಿದಂತೆ ನಾವೂ ಕೂಡ ಈ ನೃಪತಿಯನ್ನು ಸೇನಾಪತಿಯನ್ನಾಗಿ ಮಾಡಿಕೊಂಡು ಜಯಗಳಿಸುತ್ತೇವೆ.”

ದ್ರೋಣಪುತ್ರನು ಹೀಗೆ ಹೇಳಲು ಸರ್ವ ನರಾಧಿಪರೂ ಶಲ್ಯನನ್ನು ಸುತ್ತುವರೆದು ನಿಂತು ಜಯಕಾರ ಮಾಡಿದರು. ಯುದ್ಧಮಾಡಬೇಕೆಂದು ನಿರ್ಧರಿಸಿ ಪರಮ ಆವೇಶಪೂರ್ಣರಾದರು. ಅನಂತರ ದುರ್ಯೋಧನನು ನೆಲದ ಮೇಲೆಯೇ ನಿಂತು ರಥದಲ್ಲಿ ಕುಳಿತಿದ್ದ, ರಣದಲ್ಲಿ ಪರಶುರಾಮ-ಭೀಷ್ಮರ ಸಮನಾಗಿದ್ದ ಶಲ್ಯನಿಗೆ ಕೈಮುಗಿದು ಹೇಳಿದನು:

“ಮಿತ್ರವತ್ಸಲ! ವಿಧ್ವಾಂಸರು ಮಿತ್ರರು ಯಾರು ಮತ್ತು ಅಮಿತ್ರರು ಯಾರು ಎಂದು ಪರೀಕ್ಷಿಸುವಂತಹ, ಮಿತ್ರರಿಗೆ ಸರಿಯಾದ, ಕಾಲವು ಬಂದೊದಗಿದೆ. ಶೂರನಾದ ನೀನು ಸೇನಾಮುಖದಲ್ಲಿ ನಮ್ಮ ಪ್ರಣೇತನಾಗು. ನೀನು ಯುದ್ಧಕ್ಕೆ ಹೋದೆಯಾದರೆ ಮಂದಬುದ್ಧಿಯ ಪಾಂಡವರೂ, ಅಮಾತ್ಯರೊಂದಿಗೆ ಪಾಂಚಾಲರೂ ಉದ್ಯೋಗಶೂನ್ಯರಾಗುತ್ತಾರೆ!”

ಶಲ್ಯನು ಹೇಳಿದನು:

“ರಾಜನ್! ನೀನು ನನಗೆ ಹೊರಿಸುವ ಕಾರ್ಯವನ್ನು ಮಾಡುತ್ತೇನೆ. ನನ್ನ ಪ್ರಾಣ, ರಾಜ್ಯ, ಧನ ಸರ್ವವೂ ನಿನ್ನ ಪ್ರೀತ್ಯರ್ಥವಾಗಿಯೇ ಇವೆ!”

ದುರ್ಯೋಧನನು ಹೇಳಿದನು:

“ಮಾತುಲ! ಅತುಲ ಪರಾಕ್ರಮಿಯಾಗಿರುವ ನಿನ್ನನ್ನು ನಾನು ಸೇನಾಪತಿಯನ್ನಾಗಿ ಆರಿಸುತ್ತೇನೆ. ಯೋಧರಲ್ಲಿ ಶ್ರೇಷ್ಠ ಸ್ಕಂದನು ದೇವತೆಗಳನ್ನು ಹೇಗೋ ಹಾಗೆ ನೀನು ನಮ್ಮನ್ನು ಯುದ್ಧದಲ್ಲಿ ರಕ್ಷಿಸುವವನಾಗು! ಪಾವಕಿಯನ್ನು ದೇವತೆಗಳು ಹೇಗೋ ಹಾಗೆ ನಾನು ನಿನ್ನನ್ನು ಸೇನಾಪತಿಯಾಗಿ ಅಭಿಷೇಕಿಸುತ್ತೇನೆ. ಮಹೇಂದ್ರನು ದಾನವರನ್ನು ಹೇಗೋ ಹಾಗೆ ರಣದಲ್ಲಿ ಶತ್ರುಗಳನ್ನು ಸಂಹರಿಸು!”

ರಾಜನ ಈ ಮಾತನ್ನು ಕೇಳಿದ ಪ್ರತಾಪವಾನ್ ಮದ್ರರಾಜನು ದುರ್ಯೋಧನನಿಗೆ ಈ ಮಾತುಗಳನ್ನಾಡಿದನು:

“ದುರ್ಯೋಧನ! ನನ್ನ ಮಾತನ್ನು ಕೇಳು! ಯಾರನ್ನು ನೀನು ರಥಿಗಳಲ್ಲಿ ಶ್ರೇಷ್ಠರೆಂದು ತಿಳಿದುಕೊಂಡಿರುವೆಯೋ ಆ ರಥಸ್ಥ

ಕೃಷ್ಣರಿಬ್ಬರೂ ಬಾಹುವೀರ್ಯದಲ್ಲಿ ಎಂದೂ ನನಗೆ ಸರಿಸಾಟಿಯಾಗುವವರಲ್ಲ! ಸುರಾಸುರಮಾನವ ಸರ್ವರೊಂದಿಗೆ ಈ ಪೃಥ್ವಿಯೇ ಯುದ್ಧಕ್ಕೆ ನಿಂತರೂ ರಣಮುಖದಲ್ಲಿ ಸಂಕ್ರುದ್ಧನಾದ ನಾನು ಎದುರಿಸಿ ಯುದ್ಧಮಾಡಬಲ್ಲೆ! ಇನ್ನು ಪಾಂಡವರು ಯಾವ ಲೆಖ್ಕಕ್ಕೆ? ರಣದಲ್ಲಿ ಸೇರಿರುವ ಪಾರ್ಥರನ್ನೂ ಸೋಮಕರನ್ನೂ ನಾನು ಗೆಲ್ಲುತ್ತೇನೆ! ನಾನು ನಿನ್ನ ಸೇನಾಪತಿಯಾಗುತ್ತೇನೆ. ಅದರಲ್ಲಿ ಸಂಶಯವಿಲ್ಲ. ಶತ್ರುಗಳಿಗೆ ಭೇದಿಸಲಸಾಧ್ಯವಾದ ವ್ಯೂಹವನ್ನೂ ರಚಿಸುತ್ತೇನೆ. ದುರ್ಯೋಧನ! ನಾನುಹೇಳುತ್ತಿರುವ ಇದು ಸತ್ಯವಾದುದು. ಅದರಲ್ಲಿ ಸಂಶಯವಿಲ್ಲ!”

ಮದ್ರಾಧಿಪತಿಯು ಹೀಗೆ ಹೇಳಲು ರಾಜನು ಸೇನೆಗಳ ಮಧ್ಯದಲ್ಲಿ ಹೃಷ್ಟರೂಪನಾಗಿ ಶಾಸ್ತ್ರಗಳಲ್ಲಿ ತೋರಿಸಿಕೊಟ್ಟ ವಿಧಿಗಳಿಂದ ಅವನನ್ನು ಅಭಿಷೇಕಿಸಿದನು. ಅವನು ಅಭಿಷಿಕ್ತನಾಗಲು ಅಲ್ಲಿ ಮಹಾ ಸಿಂಹನಾದವು ಕೇಳಿಬಂದಿತು. ಕೌರವ ಸೇನೆಗಳಲ್ಲಿ ವಾದ್ಯಗಳು ಮೊಳಗಿದವು. ಆಗ ಮದ್ರಕ ಮಹಾರಥ ಯೋಧರು ಹರ್ಷಿತರಾಗಿ ಆಹವಶೋಭೀ ರಾಜಾ ಶಲ್ಯನನ್ನು ಸ್ತುತಿಸಿದರು:



“ರಾಜನ್! ನಿನಗೆ ಜಯವಾಗಲಿ! ಚಿರಂಜೀವಿಯಾಗು! ಸಮಾಗತರಾಗಿರುವ ಶತ್ರುಗಳನ್ನು ಸಂಹರಿಸು! ನಿನ್ನ ಬಾಹುಬಲವನ್ನು ಪಡೆದಿರುವ ಮಹಾಬಲ ಧಾರ್ತರಾಷ್ಟ್ರರು ಶತ್ರುಗಳು ಹತರಾಗಿ ಅಖಿಲ ಪೃಥ್ವಿಯಲ್ಲವನ್ನೂ ಆಳುತ್ತಾರೆ! ರಣದಲ್ಲಿ ಸುರಾಸುರಮಾನವರನ್ನು ನೀನು ಗೆಲ್ಲಲು ಶಕ್ತನಾಗಿರುವಾಗ ಮರ್ತ್ಯಧರ್ಮವನ್ನನುಸರಿಸುವ ಸೋಮಕ-ಸೃಂಜಯರು ಯಾವ ಲೆಖ್ಕಕ್ಕೆ?”

ಹೀಗೆ ಸಂಸ್ತುತಿಸಲ್ಪಡಲು ಬಲಶಾಲೀ ವೀರ ಮದ್ರಾಧಿಪತಿಯು ಅಕೃತಾತ್ಮರಿಗೆ ದುರ್ಲಭ ಹರ್ಷವನ್ನು ಹೊಂದಿ ಹೇಳಿದನು:

“ರಾಜೇಂದ್ರ! ಇಂದು ನಾನು ರಣದಲ್ಲಿ ಪಾಂಚಾಲರೊಂದಿಗೆ ಸರ್ವ ಪಾಂಡವರನ್ನೂ ಸಂಹರಿಸುತ್ತೇನೆ. ಅಥವಾ ಹತನಾಗಿ ಸ್ವರ್ಗಕ್ಕೆ ಹೋಗುತ್ತೇನೆ! ಇಂದು ನಿರ್ಭೀತನಾಗಿ ಸಂಚರಿಸುವ ನನ್ನನ್ನು ಲೋಕಗಳೆಲ್ಲವೂ, ಪಾಂಡುಸುತರೆಲ್ಲರೂ, ಸಾತ್ಯಕಿಯೊಂದಿಗೆ ವಾಸುದೇವ, ಪಾಂಚಾಲರು ಮತ್ತು ದ್ರೌಪದೇಯರೆಲ್ಲರೂ, ಧೃಷ್ಟದ್ಯುಮ್ನ, ಶಿಖಂಡಿ ಮತ್ತು ಸರ್ವ ಪ್ರಭದ್ರಕರೂ ನೋಡಲಿ! ಯುದ್ಧದಲ್ಲಿ ನನ್ನ ವಿಕ್ರಮ, ಧನುಸ್ಸಿನ ಮಹಾ ಬಲ, ಹಸ್ತಲಾಘವ, ಅಸ್ತ್ರವೀರ್ಯ ಮತ್ತು ಭುಜಗಳ

ಬಲವನ್ನು ನೋಡಲಿದ್ದಾರೆ! ನನ್ನಲ್ಲಿರುವ ಬಾಹು ಬಲವನ್ನೂ, ಅಸ್ತ್ರಗಳ ಸಂಪತ್ತನ್ನೂ ಇಂದು ಪಾರ್ಥರು, ಚಾರಣ-ಸಿದ್ಧರೊಂದಿಗೆ ನೋಡಲಿ. ಇಂದು ನನ್ನ ವಿಕ್ರಮವನ್ನು ನೋಡಿ ಮಹಾರಥ ಪಾಂಡವರು ಪ್ರತೀಕಾರಪರರಾಗಿ ಯುದ್ಧ ಮಾಡುವಂತಾಗಲಿ! ಇಂದು ನಾನು ಪಾಂಡವರ ಸೇನೆಗಳನ್ನು ಎಲ್ಲಕಡೆ ಓಡಿಸುತ್ತೇನೆ! ನಿನ್ನ ಪ್ರಿಯಾರ್ಥವಾಗಿ ಯುದ್ಧದಲ್ಲಿ ದ್ರೋಣ-ಭೀಷ್ಮರನ್ನೂ, ಸೂತಪುತ್ರನನ್ನೂ ಮೀರಿಸಿ ನಾನು ಯುದ್ಧಮಾಡುತ್ತಾ ರಣದಲ್ಲಿ ಚರಿಸುತ್ತೇನೆ!"

ಶಲ್ಯನು ಅಭಿಷಿಕ್ತನಾಗಲು ಕೌರವ ಸೇನೆಗಳು ಕರ್ಣನ ಕುರಿತಾದ ವ್ಯಸನವನ್ನು ಸ್ವಲ್ಪವೂ ಮನಸ್ಸಿಗೆ ತೆಗೆದುಕೊಳ್ಳಲಿಲ್ಲ! ಮದ್ರರಾಜನ ಶರಣಕ್ಕೆ ಬಂದ ಸೈನಿಕರು ಹೃಷ್ಟರಾಗಿ ಸುಮನಸ್ಕರಾದರಲ್ಲದೇ ಪಾರ್ಥರು ಹತರಾದರೆಂದೇ ಭಾವಿಸಿದರು. ಹರ್ಷವನ್ನು ಪಡೆದ ಆ ಸೇನೆಯು ರಾತ್ರಿಯನ್ನು ಅಲ್ಲಿಯೇ ಸ್ವಸ್ಥಚಿತ್ತದಿಂದ ಸುಖವಾಗಿ ಮಲಗಿ ಕಳೆಯಿತು.

ಕೌರವ ಸೇನೆಯ ಆ ಶಬ್ಧವನ್ನು ಕೇಳಿದ ರಾಜಾ ಯುಧಿಷ್ಠಿರನು ಸರ್ವ ಕ್ಷತ್ರಿಯರೂ ಕೇಳುವಂತೆ ವಾರ್ಷ್ಣೇಯನಿಗೆ ಈ ಮಾತನ್ನಾಡಿದನು:

"ಮಾಧವ! ಧಾರ್ತರಾಷ್ಟ್ರರು ಸರ್ವಸೇನೆಗಳಿಂದ

ಪೂಜಿತನಾಗಿರುವ ಮಹೇಷ್ವಾಸ ಮದ್ರರಾಜ ಶಲ್ಯನನ್ನು ಸೇನಾಪತಿಯನ್ನಾಗಿ ಮಾಡಿಕೊಂಡಿದ್ದಾರೆ. ಇದನ್ನು ಕೇಳಿ ಏನು ಉಚಿತವೋ ಅದನ್ನು ಮಾಡು. ನೀನು ನಮ್ಮ ನೇತಾರನೂ, ರಕ್ಷಕನೂ ಆಗಿರುವೆ. ಆದುದರಿಂದ ನಂತರ ಏನು ಮಾಡಬೇಕೆನ್ನುವುದನ್ನು ನಿಶ್ಚಯಿಸು!”

ವಾಸುದೇವನು ಜನಾಧಿಪನಿಗೆ ಹೇಳಿದನು:

“ಭಾರತ! ಋತಾಯನನ ಮಗ ಶಲ್ಯನನ್ನು ಯಥಾತತ್ತ್ವವಾಗಿ ತಿಳಿದುಕೊಂಡಿದ್ದೇನೆ. ಅವನು ವೀರ್ಯವಾನನೂ, ಮಹಾತೇಜಸ್ವಿಯೂ, ಮಹಾತ್ಮನೂ, ವಿಶೇಷತಃ ಯುದ್ಧವಿಶಾರದನೂ, ಚಿತ್ರಯೋಧಿಯೂ, ಲಾಘವ ಸಂಯುಕ್ತನೂ ಆಗಿದ್ದಾನೆ. ಮದ್ರರಾಜನು ರಣದಲ್ಲಿ ಭೀಷ್ಮ, ದ್ರೋಣ ಮತ್ತು ಕರ್ಣರು ಹೇಗಿದ್ದರೋ ಹಾಗೆ ಅಥವಾ ಅವರಿಗಿಂತಲೂ ವಿಶಿಷ್ಟನಾಗಿದ್ದಾನೆ ಎಂದು ನನಗನ್ನಿಸುತ್ತದೆ. ಎಷ್ಟು ಯೋಚಿಸಿದರೂ ಯುದ್ಧಮಾಡುತ್ತಿರುವ ಅವನ ಸಮಾನರೂಪನಾಗಿರುವ ಯೋಧನನ್ನು ನಾನು ಕಾಣುತ್ತಿಲ್ಲ. ರಣದಲ್ಲಿ ಅವನು ಶಿಖಂಡಿ, ಅರ್ಜುನ, ಭೀಮಸೇನ, ಸಾತ್ವತ ಮತ್ತು ಧೃಷ್ಟದ್ಯುಮ್ನರಿಗಿಂತ ಅಧಿಕ ಬಲಶಾಲಿಯು.

ಮದ್ರರಾಜನು ಸಿಂಹ-ಆನೆಗಳ ವಿಕ್ರಮವುಳ್ಳವನು. ಪ್ರಳಯಕಾಲದಲ್ಲಿ ಪ್ರಜೆಗಳ ಮೇಲೆ ಕ್ರುದ್ಧನಾಗಿರುವ ಕಾಲನಂತೆ ಅವನು ರಣದಲ್ಲಿ ಸಂಚರಿಸುತ್ತಾನೆ. ಶಾರ್ದೂಲಸಮವಿಕ್ರಮಿಯಾದ ನಿನ್ನನ್ನು ಬಿಟ್ಟರೆ ಅವನನ್ನು ಇಂದು ರಣದಲ್ಲಿ ಎದುರಿಸುವ ಬೇರೆ ಯಾವ ಯೋಧನನ್ನೂ ನಾನು ಕಾಣಲಾರೆ! ರಣದಲ್ಲಿ ಕ್ರುದ್ಧನಾಗಿ ಪ್ರತಿದಿನವೂ ಯುದ್ಧಮಾಡುತ್ತಾ ನಿನ್ನ ಸೇನೆಯನ್ನು ಕ್ಷೋಭೆಗೊಳಿಸುತ್ತಿರುವ ಮದ್ರರಾಜನನ್ನು ಸಂಹರಿಸಬಲ್ಲ ನಿನ್ನಂತಹ ಪುರುಷನು ದೇವಲೋಕವೂ ಸೇರಿ ಇಡೀ ಜಗತ್ತಿನಲ್ಲಿಯೇ ಇಲ್ಲ. ಆದುದರಿಂದ ಮಘವಾನನು ಶಂಬರನನ್ನು ಹೇಗೋ ಹಾಗೆ ರಣದಲ್ಲಿ ಶಲ್ಯನನ್ನು ಸಂಹರಿಸು. ಅವನು ಅತಿ ವೀರನೂ ಧಾರ್ತರಾಷ್ಟ್ರರಿಂದ ಸತ್ಕೃತನೂ ಆಗಿದ್ದೇನೆ. ಯುದ್ಧದಲ್ಲಿ ಮದ್ರೇಶ್ವರನು ಹತನಾದನೆಂದರೆ ನಿನಗೇ ಜಯವೊದಗುತ್ತದೆ. ಅವನು ಹತನಾದರೆ ಧಾರ್ತರಾಷ್ಟ್ರರ ಮಹಾ ಸೇನೆಯಲ್ಲವೂ ಹತಗೊಂಡಂತೆ. ನನ್ನ ಈ ಮಾತನ್ನು ಕೇಳಿ ನನ್ನ ಸಲಹೆಯಂತೆ ರಣದಲ್ಲಿ ಮಹಾಬಲ ಮದ್ರರಾಜನನ್ನು ಎದುರಿಸಿ ಯುದ್ಧಮಾಡಿ ವಾಸವನು ನಮುಚಿಯನ್ನು ಹೇಗೋ ಹಾಗೆ ಅವನನ್ನು ಸಂಹರಿಸು! ನನ್ನ ಮಾತುಲನಿವನು ಎಂದು ಅವನ

ಮೇಲೆ ದಯವನ್ನು ತೋರಿಸದೆಯೇ ಕ್ಷತ್ರಧರ್ಮವನ್ನು ಪುರಸ್ಕರಿಸಿ ಮದ್ರಜನೇಶ್ವರನನ್ನು ಸಂಹರಿಸು. ಭೀಷ್ಮ-ದ್ರೋಣರೆಂಬ ಮಹಾ ಸಾಗರವನ್ನೂ, ಕರ್ಣನೆಂಬ ಪಾತಾಳದಂತಹ ಅಗಾಧ ಮಡುವನ್ನೂ ದಾಟಿದ ನೀನು ಶಲ್ಯನೆಂಬ ಗೋವಿನ ಪಾದದಷ್ಟಿರುವ ಗುಂಡಿಯಲ್ಲಿ ಗಣಸಮೇತನಾಗಿ ಮುಳುಗಿಹೋಗಬೇಡ! ನಿನ್ನಲ್ಲಿರುವ ತಪಸ್ಸು, ವೀರ್ಯ, ಮತ್ತು ಕ್ಷಾತ್ರಬಲಗಳೆಲ್ಲವನ್ನೂ ರಣದಲ್ಲಿ ತೋರಿಸಿ ಆ ಮಹಾರಥನನ್ನು ಸಂಹರಿಸು!”

ಈ ಮಾತುಗಳನ್ನು ಹೇಳಿ ಪರವೀರಹ ಕೇಶವನು ಪಾಂಡವರಿಂದ ಗೌರವಿಸಲ್ಪಟ್ಟು ಸಾಯಂಕಾಲದ ಹೊತ್ತಿಗೆ ತನ್ನ ಶಿಬಿರಕ್ಕೆ ಹೋದನು. ಕೇಶವನು ಹೊರಟು ಹೋಗಲು ಧರ್ಮರಾಜ ಯುಧಿಷ್ಠಿರನು ತನ್ನ ಭ್ರಾತೃಗಳನ್ನೂ, ಪಾಂಚಾಲ-ಸೋಮಕರೆಲ್ಲರನ್ನೂ ಕಳುಹಿಸಿ ಅಂಕುಶವಿಲ್ಲದ ಸಲಗದಂತೆ ಸುಖವಾಗಿ ಆ ರಾತ್ರಿ ನಿದ್ರಿಸಿದನು. ಕರ್ಣನ ನಿಧನದಿಂದ ಹೃಷ್ಟರಾಗಿದ್ದ ಮಹೇಷ್ವಾಸ ಪಾಂಚಾಲ-ಪಾಂಡವರೆಲ್ಲರೂ ಆ ರಾತ್ರಿ ಸುಖವಾಗಿ ನಿದ್ರಿಸಿದರು. ಸೂತಪುತ್ರನ ನಿಧನದಿಂದಾಗಿ ಜಯವನ್ನು ಪಡೆದ ಪಾಂಡವ ಸೇನೆಯು, ಕರ್ಣನಂತಹ ಮಹಾರಥ ಮಹೇಷ್ವಾಸನನ್ನು ದಾಟಿ ಚಿಂತೆಗಳನ್ನು

ಕಳೆದುಕೊಂಡು ಆ ರಾತ್ರಿ ಅತ್ಯಂತ ಮುದಿತವಾಗಿತ್ತು.

# ಹದಿನೆಂಟನೇ ದಿನದ ಯುದ್ಧ: ಶಲ್ಯ ವಧೆ

## ಯುದ್ಧಾರಂಭ

ರಾತ್ರಿಯು ಕಳೆಯಲು ರಾಜಾ ದುರ್ಯೋಧನನು ಮಹಾರಥರೆಲ್ಲರೂ ಕವಚಗಳನ್ನು ಧರಿಸಿ ಯುದ್ಧಸನ್ನದ್ಧರಾಗುವಂತೆ ನಿನ್ನ ಕಡೆಯವರೆಲ್ಲರಿಗೆ ಹೇಳಿದನು. ರಾಜನ ಅಭಿಪ್ರಾಯವನ್ನು ತಿಳಿದ ಆ ಸೇನೆಯು ಸನ್ನದ್ಧವಾಗತೊಡಗಿತು. ಬೇಗನೆ ರಥವನ್ನು ಸಜ್ಜುಗೊಳಿಸಲು ಸೈನಿಕರು ಅತ್ತಿತ್ತ ಓಡಾಡುತ್ತಿದ್ದರು. ಆನೆಗಳನ್ನು ಸಜ್ಜುಗೊಳಿಸಿದರು. ಪದಾತಿಗಳು ಕವಚಗಳನ್ನು ತೊಟ್ಟುಕೊಂಡರು. ಇನ್ನು ಕೆಲವರು ಸಹಸ್ರಾರು ಕುದುರೆಗಳನ್ನು ಸಜ್ಜುಗೊಳಿಸಿದರು. ವಾದ್ಯಗಳು ಮೊಳಗಿದವು. ಗರ್ಜಿಸುತ್ತಿದ್ದ ಯೋಧ-ಸೇನೆಗಳ ಶಬ್ಧಗಳೂ ಕೇಳಿಬಂದಿತು. ಮೃತ್ಯುವನ್ನೇ ಹಿಂದಿರುಗುವ ಸ್ಥಾನವನ್ನಾಗಿ ಕಲ್ಪಿಸಿಕೊಂಡಿದ್ದ ಅಳಿದುಳಿದಿದ್ದ ಸರ್ವ ಸೇನೆಗಳೂ ಯುದ್ಧಸನ್ನದ್ಧರಾಗಿ ಮುಂದುವರೆದವು. ಮಹಾರಥರು ಮದ್ರರಾಜ ಶಲ್ಯನನ್ನು ಸೇನಾಪತಿಯನ್ನಾಗಿ ಮಾಡಿಕೊಂಡು ಸೇನೆಗಳೆಲ್ಲವನ್ನೂ ವಿಭಜಿಸಿ ತಮ್ಮ ತಮ್ಮ ದಳಗಳಲ್ಲಿ ಸನ್ನದ್ಧರಾಗಿದ್ದರು. ಅನಂತರ ಸರ್ವ ಸೈನಿಕರೂ,

ಕೃಪ, ಕೃತವರ್ಮ, ದ್ರೌಣಿ, ಶಲ್ಯ, ಸೌಬಲ ಮತ್ತು ಅಳಿದುಳಿದ ಅನ್ಯ ಪಾರ್ಥಿವರು ದುರ್ಯೋಧನನೊಡನೆ ಸೇರಿ ಈ ನಿಯಮಗಳನ್ನು ಮಾಡಿಕೊಂಡರು:

> "ಪಾಂಡವರೊಂದಿಗೆ ನಮ್ಮವರಲ್ಲಿ ಯಾರೂ ಒಬ್ಬನೇ ಯುದ್ಧಮಾಡಬಾರದು. ಪಾಂಡವರೊಂದಿಗೆ ಒಬ್ಬನೇ ಯುದ್ಧಮಾಡುತ್ತಿರುವವನನ್ನು ಬಿಟ್ಟುಬಂದರೆ ಅಂತವನು ಪಂಚಮಹಾಪಾತಕ ಮತ್ತು ಉಪಪಾತಕಗಳಿಂದ ಯುಕ್ತನಾಗುತ್ತಾನೆ. ನಾವೆಲ್ಲರೂ ಒಟ್ಟಾಗಿ ಅನ್ಯೋನ್ಯರನ್ನು ರಕ್ಷಿಸುತ್ತಾ ಶತ್ರುಗಳೊಂದಿಗೆ ಯುದ್ಧಮಾಡಬೇಕು!"

ಹೀಗೆ ಒಪ್ಪಂದವನ್ನು ಮಾಡಿಕೊಂಡು ಆ ಮಹಾರಥರೆಲ್ಲರೂ ಮದ್ರರಾಜನನ್ನು ಮುಂದೆ ಬಿಟ್ಟುಕೊಂಡು ಬೇಗನೆ ಶತ್ರುಗಳ ಮೇಲೆ ಆಕ್ರಮಣ ನಡೆಸಿದರು. ಭೀಷ್ಮ, ದ್ರೋಣ ಮತ್ತು ಸೂತಪುತ್ರರು ಹತರಾಗಿರಲು ರಣದಲ್ಲಿ ಶಲ್ಯನು ಪಾರ್ಥರೆಲ್ಲರನ್ನೂ ಸಂಹರಿಸುತ್ತಾನೆ ಎಂಬ ಬಲವತ್ತಾದ ಆಶೆಯು ಧೃತರಾಷ್ಟ್ರನ ಪುತ್ರರಲ್ಲುಂಟಾಗಿತ್ತು. ಅದೇ ಆಶೆಯನ್ನು ಹೃದಯಲ್ಲಿಟ್ಟುಕೊಂಡು ಆಶ್ವಾಸನೆಗಳಿಂದ ಸಮರದಲ್ಲಿ ಮಹಾರಥ ಮದ್ರರಾಜನನ್ನು ಆಶ್ರಯಿಸಿ ಅವನ ಮಕ್ಕಳು ತಮ್ಮನ್ನು ತಾವೇ ನಾಥವಂತರೆಂದು ತಿಳಿದುಕೊಂಡಿದ್ದರು. ಕರ್ಣನು

ಹತನಾದಾಗ ಪಾರ್ಥರು ಮಾಡಿದ ಸಿಂಹನಾದದಿಂದ ಧಾರ್ತರಾಷ್ಟ್ರರಲ್ಲಿ ಮಹಾ ಭಯವು ಆವೇಶಗೊಂಡಿತ್ತು. ಅವರನ್ನು ಸಮಾಧಾನಗೊಳಿಸಿ ಪ್ರತಾಪವಾನ್ ಮದ್ರರಾಜನು ಸೇನೆಯನ್ನು ಸರ್ವತೋಭದ್ರ ವ್ಯೂಹದಲ್ಲಿ ರಚಿಸಿದನು. ಮದ್ರರಾಜನು ರಣದಲ್ಲಿ ಚಿತ್ರಿತ-ಶತ್ರುಭಾರನಾಶಕ-ವೇಗವತ್ತರ ಧನುಸ್ಸನ್ನು ಸೇಲೆಯುತ್ತಾ ಸಿಂಧುದೇಶದ ಕುದುರೆಗಳನ್ನು ಕಟ್ಟಿದ್ದ ಶ್ರೇಷ್ಠ ರಥವನ್ನು ಏರಿ ಪಾರ್ಥರನ್ನು ಆಕ್ರಮಣಿಸಿದನು. ರಥದಲ್ಲಿದ್ದ ಅವನ ಸಾರಥಿಯೂ ರಥವನ್ನು ಶೋಭಾಯಮಾನಗೊಳಿಸಿದನು. ಆ ಶೂರನು ಧೃತರಾಷ್ಟ್ರ-ಪುತ್ರರ ಭಯವನ್ನು ಹೋಗಲಾಡಿಸುತ್ತಾ ಆ ರಥದಲ್ಲಿ ಸಿದ್ಧನಾಗಿ ನಿಂತಿದ್ದನು. ಪ್ರಯಾಣದ ಸಮಯದಲ್ಲಿ ಮದ್ರರಾಜನು ಕವಚವನ್ನು ಧರಿಸಿ ವೀರ ಮದ್ರಕರು ಮತ್ತು ದುರ್ಜಯ ಕರ್ಣಪುತ್ರರೊಂದಿಗೆ ವ್ಯೂಹದ ಮುಖಭಾಗದಲ್ಲಿದ್ದನು. ಎಡಭಾಗದಲ್ಲಿ ತ್ರಿಗರ್ತರಿಂದ ಪರಿವಾರಿತನಾದ ಕೃತವರ್ಮನೂ, ಬಲಭಾಗದಲ್ಲಿ ಶಕ-ಯವನರೊಂದಿಗೆ ಕೃಪನೂ ಇದ್ದರು. ಕಾಂಬೋಜರಿಂದ ಪರಿವಾರಿತನಾಗಿ ಅಶ್ವತ್ಥಾಮನು ಪೃಷ್ಠ ಭಾಗದಲ್ಲಿದ್ದನು ಮತ್ತು ಕುರುಪುಂಗವರಿಂದ ರಕ್ಷಿತನಾಗಿ ದುರ್ಯೋಧನನು ಮಧ್ಯದಲ್ಲಿದ್ದನು. ಮಹಾ ಸೇನೆಯಿಂದ ಪರಿವೃತನಾಗಿ ಶಕುನಿ-ಉಲೂಕರು ವ್ಯೂಹದ ಪೃಷ್ಟಭಾಗದಲ್ಲಿ ಇದ್ದರು.

ಹಾಗೆಯೇ ಪಾಂಡವರು ಕೂಡ ಮಹಾರಣದಲ್ಲಿ ಸೈನ್ಯವನ್ನು ವ್ಯೂಹದಲ್ಲಿ ರಚಿಸಿ ಉತ್ಸಾಹದಿಂದ ಎಲ್ಲಕಡೆಗಳಿಂದ ಕೌರವರೆಲ್ಲರನ್ನೂ ಆಕ್ರಮಣಿಸಿದರು. ಆ ಸೇನೆಯು ಕ್ಷೋಭೆಗೊಂಡ ಮಹಾ ಸಮುದ್ರದಂತೆ ಭೋರ್ಗರೆಯುತ್ತಿತ್ತು. ಉಕ್ಕಿಮರುವ ಮಹಾಸಮುದ್ರದಂತೆ ರಥ-ಆನೆಗಳು ಮುನ್ನುಗ್ಗಿ ಹೋಗುತ್ತಿದ್ದವು. ಪಾಂಡವರ ವ್ಯೂಹವು ಮೂರು ಮೂರು ಭಾಗಗಳಲ್ಲಿ ಕೌರವ ಸೇನೆಯನ್ನು ಆಕ್ರಮಣಿಸಿತು. ಧೃಷ್ಟದ್ಯುಮ್ನ-ಶಿಖಂಡಿ-ಸಾತ್ಯಕಿಯರು ಶಲ್ಯನ ಸೇನೆಯನ್ನು ಆಕ್ರಮಣಿಸಿದರು. ಯುಧಿಷ್ಠಿರನು ಶಲ್ಯನನ್ನೇ ಕೊಲ್ಲಲು ಬಯಸಿ ಅವನನ್ನು ಆಕ್ರಮಣಿಸಿದನು. ಅರ್ಜುನನು ಹಾರ್ದಿಕ್ಯನನ್ನೂ, ಸಂಶಪ್ತಕಗಣಗಳನ್ನೂ ಆಕ್ರಮಣಿಸಿದನು. ಭೀಮಸೇನ ಮತ್ತು ಸೋಮಕರು ಗೌತಮ ಕೃಪನನ್ನು ಆಕ್ರಮಣಿಸಿದರು. ಮಾದ್ರೀಪುತ್ರರಿಬ್ಬರೂ ಶಕುನಿ-ಉಲೂಕರನ್ನು ಆಕ್ರಮಣಿಸಿದರು.

ಆ ದಿನ ಕೌರವನ ಪಕ್ಷದಲ್ಲಿ ಹನ್ನೊಂದು ಸಾವಿರ ರಥಗಳೂ, ಹತ್ತು ಸಾವಿರದ ಏಳು ನೂರು ಆನೆಗಳೂ, ಎರಡು ಲಕ್ಷ ಕುದುರೆಗಳೂ ಮತ್ತು ಮೂರು ಕೋಟಿ ಪದಾತಿಸೈನಿಕರೂ ಉಳಿದಿದ್ದರು. ಪಾಂಡವರ ಪಕ್ಷದಲ್ಲಿ ಆರು ಸಾವಿರ ರಥಗಳೂ, ಆರು ಸಾವಿರ ಆನೆಗಳೂ, ಹತ್ತು ಸಾವಿರ ಕುದುರೆಗಳೂ ಮತ್ತು ಎರಡು ಕೋಟಿ ಪದಾತಿಸೈನಿಕರೂ

ಉಳಿದಿದ್ದರು.

ಈ ರೀತಿ ಸೇನೆಗಳೊಂದಿಗೆ ಪರಸ್ಪರರನ್ನು ವಧಿಸಲು ಇಚ್ಛಿಸಿ ನರವ್ಯಾಘ್ರರು ಆ ದಿನದ ಪ್ರಾತಃಸಂಧ್ಯಾಸಮಯದಲ್ಲಿ ಹೊರಟರು. ಆಗ ಕೌರವರ ಮತ್ತು ಶತ್ರುಗಳ ನಡುವೆ ಪರಸ್ಪರರನ್ನು ಸಂಹರಿಸುವ ಭಯಾನಕ ಘೋರರೂಪೀ ಯುದ್ಧವು ಪ್ರಾರಂಭವಾಯಿತು.

ಪದಾತಿ-ರಥ-ಆನೆಗಳ ಗುಂಪುಗಳೂ, ಸಾವಿರಾರು ಕುದುರೆಸವಾರರೂ ತಮ್ಮ ಪರಾಕ್ರಮಗಳನ್ನು ಪ್ರದರ್ಶಿಸುತ್ತಾ ಪರಸ್ಪರೊಡನೆ ಕಾದಾಡಿದರು. ನಭಸ್ತಲದಲ್ಲಿ ಮೇಘಗಳ ನಿನಾದದಂತೆ ಘೋರರೂಪೀ ಆನೆಗಳು ಓಡುತ್ತಿರುವ ಮಹಾ ನಿನಾದವು ಕೇಳಿಬಂದಿತು. ಕೆಲವು ರಥಿಗಳು ಆನೆಗಳ ಆಘಾತದಿಂದ ರಥಗಳೊಂದಿಗೆ ಕೆಳಕ್ಕುರುಳಿದರು. ಮದೋತ್ಕಟ ಆನೆಗಳಿಂದ ದೂಡಲ್ಪಟ್ಟ ಅನೇಕ ವೀರರು ರಣದಿಂದ ಓಡಿಹೋಗುತ್ತಿದ್ದರು. ರಥಿಗಳು ಶರಗಳಿಂದ ಕುದುರೆಗಳ ಗುಂಪುಗಳನ್ನೂ ಪಾದರಕ್ಷಕರನ್ನೂ ಪರಲೋಕಕ್ಕೆ ಕಳುಹಿಸುತ್ತಿದ್ದರು. ಅಶ್ವಾರೋಹಿಗಳು ಮಹಾರಥರನ್ನು ಸುತ್ತುವರೆದು ಪ್ರಾಶ-ಶಕ್ತಿ-ಋಷ್ಟಿಗಳಿಂದ ಅವರನ್ನು ಸಂಹರಿಸುತ್ತಾ ಸಂಚರಿಸುತ್ತಿದ್ದರು. ಧನುರ್ಧಾರೀ ಪುರುಷರು ಮಹಾರಥರನ್ನು ತಡೆದು -ಒಬ್ಬರೇ ಅನೇಕರನ್ನು ಎದುರಿಸಿ, ಯಮಕ್ಷಯಕ್ಕೆ ಕಳುಹಿಸುತ್ತಿದ್ದರು. ಅನ್ಯ

ರಥಶ್ರೇಷ್ಠರು ಮಹಾರಥರನ್ನು ಸುತ್ತುವರೆದು ಮಹಾರವದೊಂದಿಗೆ ಆಯುಧಗಳನ್ನು ಬಿಟ್ಟು ಓಡಿಹೋಗುತ್ತಿದ್ದವರನ್ನು ಸಂಹರಿಸುತ್ತಿದ್ದರು. ಹಾಗೆಯೇ ಕ್ರುದ್ಧ ಆನೆಗಳು ಅನೇಕ ಶರಗಳನ್ನು ಚೆಲ್ಲುತ್ತಿದ್ದ ರಥಿಗಳನ್ನು ಎಲ್ಲ ಕಡೆಗಳಿಂದ ಸುತ್ತುವರೆದು ಕೊಲ್ಲುತ್ತಿದ್ದವು. ಆನೆಗಳು ಆನೆಗಳನ್ನೂ, ರಥಿಗಳು ರಥಿಗಳನ್ನೂ, ಶಕ್ತಿ-ತೋಮರ-ನಾರಚಗಳಿಂದ ಸಂಹರಿಸುತ್ತಿದ್ದರು. ರಥ-ಆನೆ-ಕುದುರೆಗಳು ರಣಮಧ್ಯದಲ್ಲಿ ಪಾದಾತಿಗಳನ್ನು ತುಳಿದು ಮಹಾ ವ್ಯಾಕುಲವನ್ನುಂಟುಮಾಡುತ್ತಿದ್ದವು. ಹಿಮವತ್ಪರ್ವತ ಪ್ರಸ್ಥದಲ್ಲಿರುವ ಹಂಸಗಳು ನೀರು ಕುಡಿಯಲು ಭೂಮಿಯ ಕಡೆ ವೇಗದಿಂದ ಹಾರಿಬರುವಂತೆ ಚಾಮರ-ಸುಶೋಭಿತ ಕುದುರೆಗಳು ಓಡುತ್ತಿದ್ದವು. ಆ ಕುದುರೆಗಳ ಖುರಗಳಿಂದ ಚಿತ್ರಿತವಾದ ರಣಭೂಮಿಯು ಪ್ರಿಯತಮನ ಉಗುರುಗಳಿಂದ ಗಾಯಗೊಂಡ ನಾರಿಯಂತೆ ಶೋಭಿಸುತ್ತಿತ್ತು. ಕುದುರೆಗಳ ಖುರಶಬ್ಧಗಳು, ರಥಚಕ್ರಗಳ ನಿಸ್ವನಗಳು, ಪದಾತಿಗಳ ಕೂಗುಗಳು, ಆನೆಗಳ ಘೀಂಕಾರ, ವಾದ್ಯಗಳ ಘೋಷಗಳು ಮತ್ತು ಶಂಖಗಳ ನಿನಾದಗಳಿಂದ ಸಿಡಿಲುಗಳು ಭೂಮಿಯನ್ನು ಬಡಿಯುತ್ತಿವೆಯೋ ಎಂಬಂತೆ ತೋರುತ್ತಿತ್ತು. ಧನುಸ್ಸುಗಳ ಠೇಂಕಾರ, ಅಸ್ತ್ರಗಳ ಉರಿ ಮತ್ತು ಕವಚಗಳ ಪ್ರಭೆಗಳಿಂದ ಯಾವುದೊಂದೂ ತಿಳಿಯುತ್ತಲಿರಲಿಲ್ಲ. ಆನೆಗಳ ಸೊಂಡಿಲುಗಳಂತಿದ್ದ ಅನೇಕ ಬಾಹುಗಳು ತುಂಡಾಗಿ ವೇಗವಾಗಿ ಕುಪ್ಪಳಿಸಿ ದಾರುಣವಾಗಿ

ಸುತ್ತುತ್ತಿದ್ದವು. ವಸುಧಾತಲದಲ್ಲಿ ಬೀಳುತ್ತಿದ್ದ ಶಿರಗಳು ತಾಳೆಯ ಮರದಿಂದ ಕೆಳಕ್ಕೆ ಬೀಳುತ್ತಿದ್ದ ತಾಲಫಲಗಳಂತೆ ಶಬ್ಧಮಾಡುತ್ತಿದ್ದವು. ಕೆಳಕ್ಕೆ ಬೀಳುತ್ತಿದ್ದ ರಕ್ತ-ಸಿಕ್ತ ಶಿರಗಳು ಸುವರ್ಣಮಯ ಕಮಲಪುಷ್ಪಗಳಂತೆ ತೋರುತ್ತಿದ್ದವು.

ಕಣ್ಣುಗಳು ಹೊರಬಂದಿದ್ದ ಮತ್ತು ಗಾಯಗೊಂಡು ಪ್ರಾಣಹೋದ ಶಿರಸ್ಸುಗಳಿಂದ ಆವೃತವಾಗಿದ್ದ ರಣರಂಗವು ಕಮಲಪುಷ್ಪಗಳಿಂದ ಅಚ್ಛಾದಿತವಾಗಿದೆಯೋ ಎನ್ನುವಂತೆ ಕಾಣುತ್ತಿತ್ತು. ಚಂದನ-ಲೇಪಿತ ಮಹಾಧನ-ಅಂಗದ ಕೇಯೂರಗಳಿಂದ ಅಲಂಕೃತ ತೋಳುಗಳು ಸುತ್ತಲೂ ಬಿದ್ದಿರಲು ರಣರಂಗವು ದೊಡ್ಡ ದೊಡ್ಡ ಇಂದ್ರಧ್ವಜಗಳಿಂದ ಆವೃತವಾಗಿರುವಂತೆ ತೋರುತ್ತಿತ್ತು. ಆ ಮಹಾಹವದಲ್ಲಿ ಆನೆಗಳ ಸೊಂಡಿಲುಗಳಂತಿದ್ದ ನರೇಂದ್ರರ ತೊಡೆಗಳು ಕತ್ತರಿಸಿ ಬಿದ್ದು ರಣಾಂಗಣವನ್ನು ತುಂಬಿಬಿಟ್ಟಿದ್ದವು. ನೂರಾರು ಮುಂಡ-ಸಮಾಕುಲಗಳಿಂದ ಮತ್ತು ಚತ್ರ-ಚಾಮರಗಳಿಂದ ಶೋಭಿತವಾದ ಆ ಸೇನಾವನವು ಪುಷ್ಪಭರಿತ ಶುಭ ವನದಂತೆ ತೋರುತ್ತಿತ್ತು. ಅಂಗಗಳು ರಕ್ತಲೇಪಿತಗೊಂಡು ಅಭೀತರಾಗಿ ಸಂಚರಿಸುತ್ತಿದ್ದ ಯೋಧರು ಪುಷ್ಪಿತ ಕಿಂಶುಕ ವೃಕ್ಷಗಳಂತೆ ಕಾಣುತ್ತಿದ್ದರು. ಶರ-ತೋಮರಗಳಿಂದ ಪೀಡಿತ ಆನೆಗಳು ಅಲ್ಲಲ್ಲಿಯೇ ಬಿದ್ದು ಮೋಡಗಳು ತುಂಡಾಗಿ ಬೀಳುತ್ತಿವೆಯೋ

ಎನ್ನುವಂತೆ ತೋರುತ್ತಿದ್ದವು. ಮಹಾತ್ಮರು ವಧಿಸುತ್ತಿದ್ದ ಗಜಸೇನೆಯು ಬಿರುಗಾಳಿಗೆ ಸಿಲುಕಿದ ಮೋಡಗಳಂತೆ ಎಲ್ಲ ದಿಕ್ಕುಗಳಲ್ಲಿಯೂ ಚದುರಿಹೋಯಿತು. ಮೋಡಗಳಂತಿದ್ದ ಆ ಆನೆಗಳು ಯುಗಸಂಕ್ಷಯದಲ್ಲಿ ವಜ್ರಗಳಿಂದ ಪ್ರಹರಿಸಲ್ಪಟ್ಟ ಪರ್ವತಗಳಂತೆ ಭೂಮಿಯ ಮೇಲೆ ಎಲ್ಲಕಡೆ ಬಿದ್ದವು. ಆರೋಹಿಗಳೊಂದಿಗೆ ರಣದಲ್ಲಿ ಅಲ್ಲಲ್ಲಿ ಬೀಳುತ್ತಿದ್ದ ಕುದುರೆಗಳ ರಾಶಿಗಳು ಪರ್ವತಗಳಂತೆಯೇ ಕಾಣುತ್ತಿದ್ದವು. ರಣಭೂಮಿಯಲ್ಲಿ ರಕ್ತವೇ ನೀರಾಗಿದ್ದ, ರಥಗಳೇ ಸುಳಿಗಳಾಗಿದ್ದ, ಧ್ವಜಗಳೇ ವೃಕ್ಷಗಳಾಗಿದ್ದ ಮತ್ತು ಮೂಳೆಗಳೇ ಕಲ್ಲಾಗಿದ್ದ ಪರಲೋಕಕ್ಕೆ ಕೊಂಡೊಯ್ಯುವ ನದಿಯೇ ಹರಿಯತೊಡಗಿತು. ಆ ನದಿಯಲ್ಲಿ ಭುಜಗಳು ಮೊಸಳೆಗಳಂತಿದ್ದವು. ಧನುಸ್ಸುಗಳು ಪ್ರಹಾವರೂಪದಲ್ಲಿದ್ದವು. ಆನೆಗಳು ಪರ್ವತಗಳಂತೆಯೂ, ಕುದುರೆಗಳು ಪರ್ವತದ ಕ್ಕಲ್ಲುಬಂಡೆಗಳಂತೆಯೂ, ಮೇದ-ಮಜ್ಜೆಗಳೇ ಕೆಸರಾಗಿಯೂ, ಶ್ವೇತಛತ್ರಗಳು ಹಂಸಗಳಂತೆಯೂ, ಗದೆಗಳು ನೌಕೆಗಳಂತೆಯೂ ತೋರುತ್ತಿದ್ದವು. ಕವಚ-ಕಿರೀಟಗಳಿಂದ ತುಂಬಿದ್ದ ಆ ನದಿಯಲ್ಲಿ ಪತಾಕೆಗಳು ಸುಂದರ ವೃಕ್ಷಗಳಂತೆಯೂ,  ಚಕ್ರಗಳಿಂದ ಸಮೃದ್ಧ ಆ ನದಿಯು ಚಕ್ರವಾಕ ಪಕ್ಷಿಗಳಿಂದ ತುಂಬಿದಂತೆಯೂ, ರಥಗಳ ತ್ರಿವೇಣಿಗಳೆಂಬ ಸರ್ಪಗಳಿಂದ ತುಂಬಿದಂತೆಯೂ ತೋರುತ್ತಿತ್ತು. ಕುರು-ಸೃಂಜಯರಿಂದ ಹುಟ್ಟಿದ್ದ, ಶೂರರಿಗೆ

ಹರ್ಷವನ್ನುಂಟುಮಾಡುವ ಮತ್ತು ಹೇಡಿಗಳ ಭಯವನ್ನು ಹೆಚ್ಚಿಸುವ ಆ ನದಿಯು ರೌದ್ರವಾಗಿ ಹರಿಯುತ್ತಿತ್ತು. ಪಿತೃಲೋಕಗಳಿಗೊಯ್ಯುತ್ತಿದ್ದ ಆ ಭೈರವನದಿಯನ್ನು ಪರಿಘದಂತಹ ಬಾಹುಗಳುಳ್ಳ ಶೂರರು ವಾಹನಗಳ ಮೇಲೆ ದಾಟುತ್ತಿದ್ದರು. ಹಿಂದೆ ನಡೆದ ದೇವಾಸುರ ಯುದ್ಧದಂತಿದ್ದ, ಮರ್ಯಾದೆ ಮೀರಿದ, ಚತುರಂಗ ಬಲಗಳನ್ನೂ ನಾಶಗೊಳಿಸುವ ಆ ಘೋರ ಯುದ್ಧವು ನಡೆಯುತ್ತಿರಲು ಭಯಾರ್ತ ಯೋಧರು ಬಾಂಧವರನ್ನು ಕೂಗಿ ಕರೆಯುತ್ತಿದ್ದರು. ಬಾಂಧವರು ಕರೆಯುತ್ತಿದ್ದರೂ ಕೆಲವರು ಯುದ್ಧದಿಂದ ಹಿಮ್ಮೆಟ್ಟುತ್ತಿರಲಿಲ್ಲ. ಆ ರೀತಿ ನಿರ್ಮರ್ಯಾದಾಯುಕ್ತ ಭಯಾನಕ ಯುದ್ಧವು ನಡೆಯುತ್ತಿರಲು ಅರ್ಜುನ-ಭೀಮಸೇನರು ಶತ್ರುಗಳನ್ನು ವಿಮೋಹಗೊಳಿಸಿದರು. ಅವರು ವಧಿಸುತ್ತಿದ್ದ ಕೌರವ ಮಹಾ ಸೇನೆಯು ಮದಮತ್ತ ಯುವತಿಯಂತೆ ಅಲ್ಲಲ್ಲಿಯೇ ಮೂರ್ಛೆಹೋಗುತ್ತಿತ್ತು.

ಭೀಮಸೇನ-ಧನಂಜಯರಿಬ್ಬರೂ ಆ ಸೇನೆಯನ್ನು ಮೋಹಗೊಳಿಸಿ ಶಂಖಗಳನ್ನು ಊದಿ ಸಿಂಹನಾದಗೈದರು. ಆ ಮಹಾಶಬ್ಧವನ್ನು ಕೇಳಿ ಧೃಷ್ಟದ್ಯುಮ್ನ-ಶಿಖಂಡಿಯರು ಧರ್ಮರಾಜನನ್ನು ಮುಂದಿಟ್ಟುಕೊಂಡು ಮದ್ರರಾಜನನ್ನು ಆಕ್ರಮಣಿಸಿದರು. ಯುದ್ಧದುರ್ಮದ ಮಾದ್ರೀಪುತ್ರರಿಬ್ಬರೂ ರಭಸದಿಂದ ತ್ವರೆಮಾಡಿ ಕೌರವ ಸೇನೆಯನ್ನು

ಗೆಲ್ಲಲು ಆಕ್ರಮಣಿಸಿದರು. ವಿಜಯೋತ್ಸಾಹಿತ ಪಾಂಡವರು ಶರಗಳಿಂದ ಬಹಳವಾಗಿ ಪ್ರಹರಿಸುತ್ತಿದ್ದ ಕೌರವ ಸೇನೆಯು ಹಿಂದೆಸರಿಯಿತು. ಧೃತರಾಷ್ಟ್ರನ ಮಕ್ಕಳು ನೋಡುತ್ತಿದ್ದಂತೆಯೇ ದೃಢಧನ್ವಿಗಳು ಚುಚ್ಚಿ ವಧಿಸುತ್ತಿದ್ದ ಆ ಸೇನೆಯು ದಿಕ್ಕಾಪಾಲಾಗಿ ಹೋಯಿತು. ಕೌರವ ಯೋಧರಲ್ಲಿ ಮಹಾ ಹಾಹಾಕಾರವುಂಟಾಯಿತು. ಯುದ್ಧದಲ್ಲಿ ಅನ್ಯೋನ್ಯರ ಸಹಾಯದಿಂದ ಜಯವನ್ನು ಬಯಸಿದ್ದ ಕ್ಷತ್ರಿಯರು ಓಡಿಹೋಗುತ್ತಿದ್ದ ಮಹಾತ್ಮರಿಗೆ "ನಿಲ್ಲಿ! ನಿಲ್ಲಿ!" ಎಂದು ಕೂಗಿ ಕರೆಯುವುದೂ ಕೇಳಿಬರುತ್ತಿತ್ತು. ಪಾಂಡವರಿಂದ ಭಗ್ನರಾದ ಕೌರವ ಸೈನಿಕರು ಯುದ್ಧದಲ್ಲಿ ಪ್ರಿಯ ಪುತ್ರ-ಸಹೋದರ-ಪಿತಾಮಹ-ಸೋದರಮಾವಂದಿರನ್ನೂ, ತಂಗಿಯ ಮಕ್ಕಳನ್ನೂ, ಸಂಬಂಧಿ-ಬಾಂಧವರನ್ನೂ ಬಿಟ್ಟು ಓಡುತ್ತಿದ್ದರು. ಕುದುರೆ-ಆನೆಗಳನ್ನು ತ್ವರೆಗೊಳಿಸುತ್ತಾ ಆತ್ಮರಕ್ಷಣೆಯಲ್ಲಿ ಉತ್ಸಾಹವಿದ್ದ ಕೌರವ ಯೋಧರು ಎಲ್ಲ ದಿಕ್ಕುಗಳಲ್ಲಿ ಓಡಿ ಹೋದರು.

ಆ ಸೇನೆಯು ಭಗ್ನವಾಗುತ್ತಿರುವುದನ್ನು ಕಂಡ ಪ್ರತಾಪವಾನ್ ಮದ್ರರಾಜನು ಮಹಾವೇಗವುಳ್ಳ ಕುದುರೆಗಳನ್ನು ಶೀಘ್ರವಾಗಿ ನಡೆಸುವಂತೆ ಸಾರಥಿಗೆ ಹೇಳಿದನು:

"ಇಗೋ ರಾಜಾ ಪಾಂಡುಪುತ್ರ ಯುಧಿಷ್ಠಿರನು

ಹೊಳೆಯುತ್ತಿರುವ ಬಿಳಿಯ ಚತ್ರದಡಿಯಲ್ಲಿ ವಿರಾಜಿಸುತ್ತಿದ್ದಾನೆ! ಸಾರಥೇ! ಅಲ್ಲಿಗೆ ನನ್ನನ್ನು ಬೇಗನೆ ತಲುಪಿಸಿ ನನ್ನ ಬಲವನ್ನು ನೋಡು. ಇಂದಿನ ಯುದ್ಧದಲ್ಲಿ ನನ್ನನ್ನು ಎದುರಿಸಿಸಲು ಪಾರ್ಥರು ಸಮರ್ಥರಿಲ್ಲ!”

ಹೀಗೆ ಹೇಳಲು ಮದ್ರರಾಜನ ಸಾರಥಿಯು ಧರ್ಮರಾಜಾ ಯುಧಿಷ್ಠಿರನಿರುವಲ್ಲಿಗೆ ಅವನನ್ನು ಕೊಂಡೊಯ್ದನು. ಆಕ್ರಮಣಿಸುತ್ತಿದ್ದ ಪಾಂಡವರ ಮಹಾ ಬಲವನ್ನು ರಣದಲ್ಲಿ ಶಲ್ಯನು ಓರ್ವನೇ ಮೇಲುಕ್ಕಿ ಬರುತ್ತಿರುವ ಸಾಗರವನ್ನು ದಡವು ಹೇಗೋ ಹಾಗೆ ತಡೆದನು. ಪಾಂಡವರ ಸೇನೆಯಾದರೋ ಶಲ್ಯನನ್ನು ಸಮೀಪಿಸಿ ಪರ್ವತವನ್ನು ಸಮೀಪಿಸಿದ ನದಿಯಂತೆ ಯುದ್ಧದಲ್ಲಿ ನಿಂತುಬಿಟ್ಟಿತು. ಸಮರದಲ್ಲಿ ಯುದ್ಧಕ್ಕೆಂದು ನಿಂತಿದ್ದ ಮದ್ರರಾಜನನ್ನು ಕುರುಗಳು ಸುತ್ತುವರೆದರು. ಆ ವ್ಯೂಹದ ಭಾಗವಾಗಿದ್ದ ಸೇನೆಗಳ ನಡುವೆ ರಕ್ತವೇ ನೀರಾಗಿ ಚೆಲ್ಲಿದ ಮಹಾರೌದ್ರ ಸಂಗ್ರಾಮವು ನಡೆಯಿತು.

## ನಕುಲನು ಕರ್ಣನ ಮಕ್ಕಳಾದ ಚಿತ್ರಸೇನ, ಸುಷೇಣ ಮತ್ತು ಸತ್ಯಸೇನರನ್ನು ವಧಿಸಿದುದು

ಆಗ ಕರ್ಣನ ಮಗ ಚಿತ್ರಸೇನನು ಯುದ್ಧದುರ್ಮದ ನಕುಲನನ್ನು ಪ್ರಹರಿಸಿದನು. ದಕ್ಷಿಣೋತ್ತರ ದಿಕ್ಕುಗಳಿಂದ ಮೇಲ್ಮುಖವಾಗಿ ಬಂದು

ಆಕಾಶ ಮಧ್ಯದಲ್ಲಿ ಸಂಘರ್ಷಿಸಿ ಮಳೆಗರೆಯುವ ಎರಡು ಮೋಡಗಳಂತೆ ಚಿತ್ರಿತ ಧನುಸ್ಸುಗಳನ್ನು ಧರಿಸಿದ್ದ ಅವರಿಬ್ಬರೂ ಪರಸ್ಪರರನ್ನು ಎದುರಿಸಿದರು. ಯುದ್ಧದಲ್ಲಿ ಪರಸ್ಪರರ ಮೇಲೆ ಶರಗಳ ಮಳೆಗರೆಯುತ್ತಿದ್ದ ಪಾಂಡವ ಅಥವಾ ಚಿತ್ರಸೇನನ ನಡುವೆ ಅಂತರವೇ ಕಾಣಲಿಲ್ಲ. ಆ ಇಬ್ಬರು ಕೃತಾಸ್ತ್ರ-ಬಲಶಾಲಿಗಳೂ, ರಥವನ್ನು ನಡೆಸುವುದರಲ್ಲಿ ವಿಶಾರದರೂ, ಪರಸ್ಪರರ ವಧೆಯ ಪ್ರಯತ್ನಶೀಲರೂ ಯುದ್ಧದಲ್ಲಿ ಪರಸ್ಪರರಲ್ಲಿ ನ್ಯೂನತೆಗಳನ್ನು ಹುಡುಕುವವರೂ ಆಗಿದ್ದರು. ಚಿತ್ರಸೇನನಾದರೋ ಹಳದೀ ಬಣ್ಣದ ನಿಶಿತ ಭಲ್ಲದಿಂದ ನಕುಲನ ಧನುಸ್ಸನ್ನು ಮುಷ್ಟಿದೇಶದಲ್ಲಿ ತುಂಡರಿಸಿದನು. ಕೂಡಲೇ ಅಸಂಭ್ರಾಂತನಾಗಿ ಧನುಸ್ಸುತುಂಡಾಗಿದ್ದ ನಕುಲನ ಹಣೆಗೆ ಮೂರು ರುಕ್ಮಪುಂಖಗಳ ಶಿಲಾಶಿತ ಬಾಣಗಳಿಂದ ಹೊಡೆದನು. ತೀಕ್ಷ್ಣ ಶರಗಳಿಂದ ಅವನ ಕುದುರೆಗಳನ್ನು ಮೃತ್ಯುಲೋಕಕ್ಕೆ ಕಳುಹಿಸಿದನು. ಹಾಗೆಯೇ ಧ್ವಜ ಮತ್ತು ಸಾರಥಿಗಳನ್ನು ಮೂರು ಮೂರು ಬಾಣಗಳಿಂದ ಹೊಡೆದು ಕೆಳಗುರುಳಿಸಿದನು. ಶತ್ರುಭುಜದಿಂದ ಪ್ರಯೋಗಿಸಲ್ಪಟ್ಟ ಆ ಮೂರು ಶರಗಳು ಹಣೆಗೆ ತಾಗಲು ನಕುಲನು ಮೂರು ಶೃಂಗಗಳುಳ್ಳ ಪರ್ವತದಂತೆ ಸುಶೋಭಿಸಿದನು. ಧನುಸ್ಸು ತುಂಡಾಗಿ ವಿರಥನಾಗಿದ್ದ ಆ ವೀರನು ಖಡ್ಗ-ಗುರಾಣಿಗಳನ್ನು ಹಿಡಿದು ಬೆಟ್ಟದಿಂದ ಧುಮುಕುವ ಕೇಸರಿಯಂತೆ ರಥದ ಮೇಲಿಂದ ಕೆಳಕ್ಕೆ ಹಾರಿದನು.

ಪದಾತಿಯಾಗಿಯೇ ತನ್ನನ್ನು ಆಕ್ರಮಣಿಸಲು ಬರುತ್ತಿದ್ದ ನಕುಲನ ಮೇಲೆ ಚಿತ್ರಸೇನನು ಶರಗಳ ಮಳೆಯನ್ನು ಸುರಿಸಿದನು. ಆದರೆ ಲಘುವಿಕ್ರಮಿ ನಕುಲನು ಅವುಗಳನ್ನು ತನ್ನ ಗುರಾಣಿಯಿಂದಲೇ ತಡೆದನು. ಆಗ ಚಿತ್ರಯೋಧೀ ಜಿತಶ್ರಮಿ ಮಹಾಬಾಹು ನಕುಲನು ಸರ್ವ ಸೇನೆಗಳು ನೋಡುತ್ತಿದ್ದಂತೆಯೇ ಚಿತ್ರಸೇನನ ರಥದ ಬಳಿಸಾರಿ ಅದನ್ನು ಏರಿ, ಕುಂಡಲ-ಮುಕುಟ-ಸುಂದರ ಮೂಗು ಮತ್ತು ಆಯತ ಕಣ್ಣುಗಳಿದ್ದ ಚಿತ್ರಸೇನನ ಶಿರವನ್ನು ಕಾಯದಿಂದ ಅಪಹರಿಸಿದನು. ದಿವಾಕರಪ್ರಭೆಯ ಚಿತ್ರಸೇನನು ರಥಾಸನದ ಕೆಳಕ್ಕೆ ಬಿದ್ದನು.

ಚಿತ್ರಸೇನನು ಹತನಾದುದನ್ನು ನೋಡಿ ಮಹಾರಥ ಪಾಂಡವರು "ಸಾಧು! ಸಾಧು!" ಎಂದು ಕೂಗಿ ಪುಷ್ಕಲ ಸಿಂಹನಾದಗೈದರು. ಸಹೋದರನು ಹತನಾದುದನ್ನು ನೋಡಿ ಕರ್ಣನ ಇನ್ನಿಬ್ಬರು ಮಹಾರಥ ಪುತ್ರರು – ಸುಷೇಣ ಮತ್ತು ಸತ್ಯಸೇನ - ನಿಶಿತ ಶರಗಳನ್ನು ಎರಚುತ್ತಾ ಮಹಾವನದಲ್ಲಿ ಆನೆಯನ್ನು ಕೊಲ್ಲಲು ಬರುವ ವ್ಯಾಘ್ರಗಳಂತೆ ನಕುಲನನ್ನು ಆಕ್ರಮಣಿಸಿದರು. ಆ ಇಬ್ಬರು ತೀಕ್ಷ್ಣರೂ ಮಹಾರಥ ನಕುಲನನ್ನು ಮೇಘಗಳು ಮಳೆಗರೆಯುವಂತೆ ಬಾಣಗಳನ್ನು ಸುರಿಸುತ್ತಾ ಆಕ್ರಮಿಸಿದರು. ಶರಗಳಿಂದ ಎಲ್ಲಕಡೆ ಪ್ರಹರಿಸಲ್ಪಟ್ಟರೂ ಕೂಡ ನಕುಲನು ಪ್ರಹೃಷ್ಟನಾಗಿಯೇ ಇದ್ದು, ಇನ್ನೊಂದು ಧನುಸ್ಸನ್ನು

ಹಿಡಿದು ರಥವನ್ನೇರಿ ರಣದಲ್ಲಿ ಕ್ರುದ್ಧರೂಪೀ ಅಂತಕನಂತೆ ನಿಂತನು. ಆ ಇಬ್ಬರು ಸಹೋದರರು ಸನ್ನತಪರ್ವ ಶರಗಳಿಂದ ಅವನ ರಥವನ್ನೇ ಚೂರು ಚೂರು ಮಾಡಲು ಪ್ರಾರಂಭಿಸಿದರು. ಆಗ ನಕುಲನು ರಣದಲ್ಲಿ ನಗುತ್ತಾ ನಿಶಿತ ತೀಕ್ಷ್ಣ ನಾಲ್ಕು ಶರಗಳಿಂದ ಸತ್ಯಸೇನನ ನಾಲ್ಕೂ ಕುದುರೆಗಳನ್ನು ಸಂಹರಿಸಿದನು. ಅನಂತರ ಪಾಂಡವನು ರುಕ್ಮಪುಂಖ ಶಿಲಾಶಿತ ನಾರಚವನ್ನು ಸಂಧಾನಮಾಡಿ ಸತ್ಯಸೇನನ ಧನುಸ್ಸನ್ನು ತುಂಡರಿಸಿದನು. ಕೂಡಲೇ ಅನ್ಯ ರಥವನ್ನೇರಿ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಸತ್ಯಸೇನ-ಸುಷೇಣರು ಪಾಂಡವನನ್ನು ಪುನಃ ಆಕ್ರಮಣಿಸಿದರು. ಅದರಿಂದ ಸ್ವಲ್ಪವೂ ಗಾಬರಿಗೊಳ್ಳದೇ ಪ್ರತಾಪವಾನ್ ಮಾದ್ರೀಪುತ್ರನು ಅವರಿಬ್ಬರನ್ನು ರಣಮೂರ್ಧನಿಯಲ್ಲಿ ಎರಡೆರಡು ಬಾಣಗಳಿಂದ ಹೊಡೆದನು. ಆಗ ಮಹಾರಥ ಸುಷೇಣನಾದರೋ ಕ್ರುದ್ಧನಾಗಿ ಕ್ಷುರಪ್ರದಿಂದ ಪಾಂಡವನ ಮಹಾ ಧನುಸ್ಸನ್ನು ತುಂಡರಿಸಿ ನಕ್ಕನು. ಕೂಡಲೇ ಕ್ರೋಧಮೂರ್ಛಿತ ನಕುಲನು ಇನ್ನೊಂದು ಧನುಸ್ಸನ್ನು ಹಿಡಿದು ಸುಷೇಣನನ್ನು ಐದು ಬಾಣಗಳಿಂದ ಹೊಡೆದು ಒಂದರಿಂದ ಧ್ವಜವನ್ನು ಕತ್ತರಿಸಿದನು. ಕೂಡಲೇ ಅವನು ಸತ್ಯಸೇನನ ಧನುಸ್ಸನ್ನೂ ಕೈಚೀಲವನ್ನೂ ಕತ್ತರಿಸಿದನು. ಆಗ ಜನರು ಗಟ್ಟಿಯಾಗಿ ಕೂಗಿಕೊಂಡರು. ಸತ್ಯಸೇನನು ಇನ್ನೊಂದು ವೇಗವಾದ ಮತ್ತು ಭಾರವನ್ನು ಹೊರಬಲ್ಲ ಧನುಸ್ಸನ್ನು ಎತ್ತಿಕೊಂಡು ಶರಗಳಿಂದ

ಪಾಂಡುನಂದನನನ್ನು ಎಲ್ಲ ಕಡೆಗಳಿಂದ ಮುಚ್ಚಿಬಿಟ್ಟನು. ನಕುಲನು ಆ ಬಾಣಗಳನ್ನು ತಡೆದು ನಿಲ್ಲಿಸಿ, ಸತ್ಯಸೇನ ಮತ್ತು ಸುಷೇಣರನ್ನು ಎರಡೆರಡು ಬಾಣಗಳಿಂದ ಹೊಡೆದನು. ಅವರಿಬ್ಬರೂ ಪ್ರತ್ಯೇಕ ಪ್ರತ್ಯೇಕವಾಗಿ ಪ್ರತಿಯಾಗಿ ಹೊಡೆಯುತ್ತಾ ನಿಶಿತ ಶರಗಳಿಂದ ನಕುಲನ ಸಾರಥಿಯನ್ನು ಪ್ರಹರಿಸಿದರು. ಸತ್ಯಸೇನನು ಪ್ರತ್ಯೇಕ ಎರಡು ಬಾಣಗಳಿಂದ ನಕುಲನ ರಥದ ಈಷಾದಂಡವನ್ನೂ ಧನುಸ್ಸನ್ನೂ ತುಂಡರಿಸಿದನು. ಅದರಿಂದ ಕುಪಿತನಾದ ನಕುಲನು ರಥದಲ್ಲಿಯೇ ನಿಂತು ಸ್ವರ್ಣದಂಡದ, ನೇರ ಅಗ್ರಭಾಗವಿದ್ದ, ಎಣ್ಣೆಯಿಂದ ಹದಮಾಡಲ್ಪಟ್ಟಿದ್ದ, ನಿರ್ಮಲ, ಕಟವಾಯಿಯನ್ನು ನೆಕ್ಕುತ್ತಿರುವ ಮಹಾ ವಿಷಯುಕ್ತ ಸರ್ಪಿಣಿಯಂತಿರುವ ರಥಶಕ್ತಿಯನ್ನು ಮೇಲಕ್ಕೆತ್ತಿ ಸತ್ಯಸೇನನ ಮೇಲೆ ಎಸೆದನು. ಅದು ಅವನ ಹೃದಯವನ್ನು ನೂರು ಚೂರುಗಳಾಗಿ ಒಡೆಯಲು ಅವನು ಪ್ರಾಣಗಳನ್ನು ತೊರೆದು ಒಡನೆಯೇ ರಥದಿಂದ ಭೂಮಿಯ ಮೇಲೆ ಬಿದ್ದನು.

ಸಹೋದರನು ಹತನಾದುದನ್ನು ನೋಡಿ ಕ್ರೋಧಮೂರ್ಛಿತ ಸುಷೇಣನು ಕೂಡಲೇ ಪದಾತಿ ಪಾಂಡುನಂದನನನ್ನು ಶರಗಳಿಂದ ಮುಚ್ಚಿಬಿಟ್ಟನು. ನಕುಲನು ವಿರಥನಾದುದನ್ನು ನೋಡಿ ಮಹಾಬಲ ದ್ರೌಪದೇಯ ಸುತಸೋಮನು ರಣದಲ್ಲಿ ತಂದೆಯನ್ನು ರಕ್ಷಿಸುತ್ತಾ ಅಲ್ಲಿಗೆ

ಧಾವಿಸಿಬಂದನು. ಅನಂತರ ಭರತಶ್ರೇಷ್ಠ ನಕುಲನು ಸುತಸೋಮನ ಆ ರಥವನ್ನೇರಿ ಗಿರಿಯನ್ನೇರಿದ ಕೇಸರಿಯಂತೆ ಸುಶೋಭಿಸಿದನು. ಅವನು ಇನ್ನೊಂದು ಧನುಸ್ಸನ್ನೆತ್ತಿಕೊಂಡು ಸುಷೇಣನೊಡನೆ ಯುದ್ಧಮಾಡಿದನು. ಅವರಿಬ್ಬರು ಮಹಾರಥರೂ ಶರವರ್ಷಗಳಿಂದ ಪರಸ್ಪರರನ್ನು ಎದುರಿಸುತ್ತಾ ಪರಸ್ಪರರ ವಧೆಯನ್ನು ಪ್ರಯತ್ನಿಸುತ್ತಿದ್ದರು. ಅನಂತರ ಸುಶೇಣನಾದರೋ ಕ್ರುದ್ಧನಾಗಿ ಪಾಂಡವನನ್ನು ಮೂರು ವಿಶಿಖಗಳಿಂದ ಮತ್ತು ಇಪ್ಪತ್ತು ಬಾಣಗಳಿಂದ ಸುತಸೋಮನ ಬಾಹು-ಎದೆಗಳಿಗೆ ಹೊಡೆದನು. ಆಗ ಪರವೀರಹ ವೀರ್ಯವಾನ್ ನಕುಲನು ಕ್ರುದ್ಧನಾಗಿ ಅವನನ್ನು ಎಲ್ಲ ಕಡೆಗಳನ್ನೂ ಶರಗಳಿಂದ ಮುಚ್ಚಿಬಿಟ್ಟನು. ಅನಂತರ ನಕುಲನು ತೀಕ್ಷ್ಣಅಗ್ರದ ಸುತೇಜನ ಅರ್ಧಚಂದ್ರವನ್ನು ಹಿಡಿದು ಅದನ್ನು ವೇಗಯುಕ್ತವಾಗಿ ಕರ್ಣಪುತ್ರನ ಮೇಲೆ ಎಸೆದನು. ಅದು ಅವನ ಶಿರವನ್ನು ದೇಹದಿಂದ ಬೇರ್ಪಡಿಸಿತು. ಅದನ್ನು ಸರ್ವಸೇನೆಗಳೂ ನೋಡಿದವು. ಅದೊಂದು ಅದ್ಭುತವಾಗಿತ್ತು. ಮಹಾತ್ಮ ನಕುಲನಿಂದ ಹತನಾದ ಅವನು ನದಿಯ ವೇಗಕ್ಕೆ ಸಿಲುಕಿದ ದಡದಲ್ಲಿದ್ದ ಮಹಾ ವೃಕ್ಷದಂತೆ ಕೆಳಕ್ಕುರುಳಿದನು. ಕರ್ಣಪುತ್ರನ ವಧೆಯನ್ನು ಮತ್ತು ನಕುಲನ ವಿಕ್ರಮವನ್ನು ನೋಡಿ ಕೌರವ ಸೇನೆಯು ಭಯದಿಂದ ಓಡಿ ಹೋಯಿತು.

ಆಗ ಶೂರ ಸೇನಾಪತಿ ಮದ್ರರಾಜನು ರಣದಲ್ಲಿ ಆ ಸೇನೆಯನ್ನು ಪಾಲಿಸಿದನು. ಭೀತರಾಗಿದ್ದ ಸೇನೆಯನ್ನು ಪುನಃ ವ್ಯವಸ್ಥೆಗೊಳಿಸಿ ಅವನು ಜೋರಾಗಿ ಸಿಂಹನಾದ ಗೈದು ಧನುಸ್ಸನ್ನು ದಾರುಣವಾಗಿ ಟೇಂಕರಿಸಿದನು. ದೃಢಧನ್ವಿಯಿಂದ ರಕ್ಷಿತರಾದ ಕೌರವರು ಸಮರದಲ್ಲಿ ವ್ಯಥೆಯನ್ನು ಕಳೆದುಕೊಂಡು ಒಟ್ಟಾಗಿ ಎದುರಿಸಿ ಯುದ್ಧಮಾಡತೊಡಗಿದರು. ಯುದ್ಧಮಾಡಲು ಬಯಸಿದ ಮಹಾಸೇನೆಯು ಮಹೇಷ್ವಾಸ ಮದ್ರರಾಜನನ್ನು ಸುತ್ತಲಿನಿಂದಲೂ ಆವರಿಸಿ ನಿಂತುಕೊಂಡಿತು. ಸಾತ್ಯಕಿ, ಭೀಮಸೇನ, ಮಾದ್ರೀಪುತ್ರ ಪಾಂಡವರೀರ್ವರು ಯುಧಿಷ್ಠಿರನನ್ನು ಮುಂದಿಟ್ಟುಕೊಂಡು ಶಲ್ಯನನ್ನು ಎದುರಿಸಿದರು. ರಣದಲ್ಲಿ ವೀರರು ತುಂಬಿ ಸಿಂಹನಾದಗೈದರು. ಉಗ್ರ ಬಾಣಗಳ ಶಬ್ಧಗಳೂ, ವಿಧ-ವಿಧದ ಜಯಘೋಷಗಳೂ ಕೇಳಿಬಂದವು. ಹಾಗೆಯೇ ಕೌರವರೆಲ್ಲರೂ ಮದ್ರಾಧಿಪತಿಯನ್ನು ಸುತ್ತುವರೆದು ನಿಂತು ಪುನಃ ಯುದ್ಧಮಾಡಲು ಆಸಕ್ತಿತೋರಿಸುತ್ತಿದ್ದರು. ಆಗ ಮೃತ್ಯುವನ್ನೇ ಹಿಂದಿರುಗುವ ಸ್ಥಾನವನ್ನಾಗಿಸಿಕೊಂಡಿದ್ದ ಕೌರವರ ಮತ್ತು ಶತ್ರುಗಳ ನಡುವೆ ಹೇಡಿಗಳ ಭಯವನ್ನು ಹೆಚ್ಚಿಸುವ ಯುದ್ಧವು ಪ್ರಾರಂಭವಾಯಿತು. ಹಿಂದೆ ದೇವಾಸುರರ ನಡುವೆ ನಡೆದ ಯುದ್ಧದಂತೆ ಯಮರಾಷ್ಟ್ರವನ್ನು ವಿವರ್ಧಿಸುವ ಅಭೀತರ ಯುದ್ಧವು ನಡೆಯಿತು.

ಪರಸ್ಪರರನ್ನು ವಧಿಸುತ್ತಾ ಹೋರಾಡುತ್ತಿದ್ದ ಸೇನೆಗಳಲ್ಲಿ ಯೋಧರು ಓಡಿ ಹೋಗುತ್ತಿದ್ದರು ಮತ್ತು ಆನೆಗಳು ಚೀತ್ಕರಿಸುತ್ತಿದ್ದವು. ಆ ಮಹಾಹವದಲ್ಲಿ ಪದಾತಿಗಳು ಜೋರಾಗಿ ಕೂಗಿಕೊಳ್ಳುತ್ತಿದ್ದರು. ಅನೇಕ ಕುದುರೆಗಳು ಓಡಿಹೋಗುತ್ತಿದ್ದವು. ಸರ್ವದೇಹಿಗಳ ಸಂಹಾರಕ ದಾರುಣ ಕ್ಷಯಕಾರವು ನಡೆಯುತ್ತಿರಲು ನಾನಾ ಶಸ್ತ್ರಗಳ ಪ್ರಹಾರವು ನಡೆಯುತ್ತಿತ್ತು ಮತ್ತು ರಥ-ಆನೆಗಳು ಸಂಘರ್ಷಿಸುತ್ತಿದ್ದವು. ಯುದ್ಧಶೌಂಡರಿಗೆ ಹರ್ಷವನ್ನುಂಟುಮಾಡುವ, ಹೇಡಿಗಳ ಭಯವನ್ನು ಹೆಚ್ಚಿಸುವ ಆ ಯುದ್ಧದಲ್ಲಿ ಯೋಧರು ಪರಸ್ಪರರನ್ನು ವಧಿಸಲು ಬಯಸಿ ನುಗ್ಗಿ ಹೋಗುತ್ತಿದ್ದರು. ಯಮರಾಷ್ಟ್ರವನ್ನು ವರ್ಧಿಸುವ ಆ ಘೋರರೂಪೀ ಸಂಗ್ರಾಮದಲ್ಲಿ ಪ್ರಾಣಗಳನ್ನು ಪಣವಾಗಿಟ್ಟ ಮಹಾ ಜೂಜಾಟವು ನಡೆಯುತ್ತಿತ್ತು. ಪಾಂಡವರು ಕೌರವ ಸೈನ್ಯವನ್ನು ನಿಶಿತ ಶರಗಳಿಂದ ವಧಿಸುತ್ತಿದ್ದರು. ಕೌರವರ ಕಡೆಯ ಯೋಧರೂ ಕೂಡ ಪಾಂಡವ ಸೈನಿಕರನ್ನು ಸಂಹರಿಸುತ್ತಿದ್ದರು. ಹೇಡಿಗಳಿಗೆ ಭಯವನ್ನು ನೀಡುವ ಆ ಯುದ್ಧವು ಹಾಗೆ ನಡೆಯುತ್ತಿರಲು, ಸೂರ್ಯನು ಉದಯಿಸಿ ಪೂರ್ವಾಹ್ಣವು ಪ್ರಾಪ್ತವಾಯಿತು.

ಮಹಾತ್ಮ ಅರ್ಜುನನಿಂದ ರಕ್ಷಿತವಾಗಿದ್ದ, ಮೃತ್ಯುವನ್ನೇ ಹಿಂದಿರುಗುವ ಸ್ಥಾನವನ್ನಾಗಿ ಮಾಡಿಕೊಂಡು ಗುರಿಯನ್ನಿಟ್ಟುಕೊಂಡಿದ್ದ ಶತ್ರುಸೇನೆಯು

ಕೌರವ ಸೇನೆಯೊಂದಿಗೆ ಹೋರಾಡುತ್ತಿತ್ತು. ಪ್ರಹಾರ ಕುಶಲ ಲಬ್ಧಲಕ್ಷ್ಯ ದೃಪ್ತ ಬಲಿಷ್ಠ ಪಾಂಡವ ಯೋಧರಿಂದ ಪ್ರಹರಿಸಲ್ಪಟ್ಟ ಕೌರವ ಸೇನೆಯು ದಾವಾಗ್ನಿಯಿಂದ ಸುತ್ತುವರೆಯಲ್ಪಟ್ಟ ಹರಿಣಿಯಂತೆ ವ್ಯಾಕುಲಗೊಂಡಿತ್ತು. ಕೆಸರಿನಲ್ಲಿ ಸಿಕ್ಕಿಬಿದ್ದ ದುರ್ಬಲ ಹಸುವಿನಂತೆ ಕೌರವ ಸೇನೆಯು ಕುಸಿಯುತ್ತಿರುವುದನ್ನು ನೋಡಿ ಶಲ್ಯನು ಅದನ್ನು ಮೇಲೆತ್ತಲು ಬಯಸಿ ಪಾಂಡವ ಸೇನೆಯ ಕಡೆ ಹೋದನು. ಮದ್ರರಾಜನಾದರೋ ಸಂಕ್ರುದ್ಧನಾಗಿ ಉತ್ತಮ ಧನುಸ್ಸನ್ನು ಹಿಡಿದು ಸಂಗ್ರಾಮದಲ್ಲಿ ಪಾಂಡವರನ್ನು ಆಕ್ರಮಣಿಸಿದನು. ವಿಜಯೋತ್ಸಾಹಿಗಳಾಗಿದ್ದ ಪಾಂಡವರು ಕೂಡ ಸಮರದಲ್ಲಿ ಮದ್ರರಾಜನನ್ನು ಎದುರಿಸಿ ನಿಶಿತ ಶರಗಳಿಂದ ಹೊಡೆದರು. ಆಗ ಧರ್ಮರಾಜನು ನೋಡುತ್ತಿದ್ದಂತೆಯೇ ಮಹಾಬಲ ಮದ್ರರಾಜನು ನೂರಾರು ತೀಕ್ಷ್ಣ ಶರಗಳಿಂದ ಅವನ ಸೇನೆಯನ್ನು ಮರ್ದಿಸತೊಡಗಿದನು.

ಆಗ ನಾನಾ ರೂಪದ ಅನೇಕ ನಿಮಿತ್ತಗಳು ಕಾಣಿಸಿಕೊಂಡವು. ಪರ್ವತಗಳೊಂದಿಗೆ ಶಬ್ಧಮಾಡುತ್ತಾ ಭೂಮಿಯು ನಡುಗಿತು. ಆಕಾಶದಿಂದ ಅನೇಕ ಉಲ್ಕೆಗಳು ಮತ್ತು ದಂಡಗಳೊಡನೆ ದೀಪ್ತಾಗ್ರ ಶೂಲಗಳೂ ಸೂರ್ಯಮಂಡಲವನ್ನು ಅಪ್ಪಳಿಸಿ ಎಲ್ಲ ಕಡೆಗಳನ್ನೂ

ಸೀಳುವಂತೆ ಭೂಮಿಯ ಮೇಲೆ ಬಿದ್ದವು. ಮೃಗಗಳು, ಎಮ್ಮೆಗಳು ಮತ್ತು ಪಕ್ಷಿಗಳು ಅನೇಕ ಸಂಖ್ಯೆಗಳಲ್ಲಿ ನಿನ್ನ ಸೇನೆಯನ್ನು ಬಲಬದಿಯಿಂದ ಸುತ್ತುತ್ತಿದ್ದವು. ಆಗ ಸಂಘಟಿತರಾಗಿದ್ದವರ ನಡುವೆ ಅತ್ಯುಗ್ರ ಯುದ್ಧವು ನಡೆಯಿತು. ಕೌರವರು ಸರ್ವ ಸೇನೆಗಳನ್ನೂ ಒಟ್ಟುಮಾಡಿಕೊಂಡು ಪಾಂಡವಸೇನೆಯನ್ನು ಆಕ್ರಮಣಿಸಿದರು. ಶಲ್ಯನಾದರೋ ವರ್ಷಾಕಾಲದಲ್ಲಿ ಸಹಸ್ರಾಕ್ಷನು ಮಳೆಸುರಿಸುವಂತೆ ಶರವರ್ಷಗಳನ್ನು ಯುಧಿಷ್ಠಿರನ ಮೇಲೆ ಸುರಿಸಿದನು. ಆ ಮಹಾಬಲನು ರಕ್ಮಪುಂಖ ಶಿಲಾಶಿತ ಶರಗಳಿಂದ ಭೀಮಸೇನನನ್ನೂ, ದ್ರೌಪದೇಯರೆಲ್ಲರನ್ನೂ, ಮಾದ್ರೀಪುತ್ರ ಪಾಂಡವರಿಬ್ಬರನ್ನೂ, ಧೃಷ್ಟದ್ಯುಮ್ನ, ಶೈನೇಯ, ಶಿಖಂಡಿಯರನ್ನು ಕೂಡ ಒಬ್ಬೊಬ್ಬರನ್ನೂ ಹತ್ತತ್ತು ಬಾಣಗಳಿಂದ ಹೊಡೆದನು. ಅನಂತರ ಬೇಸಗೆಯ ಕೊನೆಯಲ್ಲಿ ಇಂದ್ರನು ಸುರಿಸುವಂತೆ ಬಾಣವರ್ಷಗಳನ್ನು ಸೃಷ್ಟಿಸಿದನು. ಆಗ ಸಹಸ್ರಾರು ಪ್ರಭದ್ರಕ-ಸೋಮಕರು ಶಲ್ಯಸಾಯಕಗಳಿಂದ ಉರುಳಿಸಲ್ಪಟ್ಟು ಕೆಳಗೆ ಬೀಳುತ್ತಿರುವುದು ಕಂಡುಬಂದಿತು. ಶಲ್ಯನ ಶರಗಳು ದುಂಬಿಗಳ ಸಮೂಹಗಳಂತೆ, ಮಿಡತೆಹುಳುಗಳ ಗುಂಪುಗಳಂತೆ, ಮೇಘಗಳ ಗುಂಪುಗಳಂತೆ ಸೇನೆಗಳ ಮೇಲೆ ಬೀಳುತ್ತಿದ್ದವು. ಶಲ್ಯನ ಬಾಣಗಳಿಂದ ಆರ್ತರಾಗಿ ಆನೆಗಳೂ, ಕುದುರೆಗಳೂ, ಪದಾತಿಗಳೂ, ರಥಿಗಳೂ ಕೆಳಗುರುಳುತ್ತಿದ್ದವು.

ದಿಕ್ಕುಕಾಣದೇ ತಿರುಗುತ್ತಿದ್ದವು. ಕಾಲಸೃಷ್ಟ ಅಂತಕನಂತೆ ಕೋಪ-ಪೌರುಷಗಳಿಂದ ಆವಿಷ್ಟನಾಗಿದ್ದ ಮದ್ರೇಶನು ಯುದ್ಧದಲ್ಲಿ ಶತ್ರುಗಳನ್ನು ಬಾಣಗಳಿಂದ ಮುಚ್ಚಿಬಿಟ್ಟನು. ಮಹಾಬಲ ಮದ್ರೇಶನು ಮೇಘಗರ್ಜನೆಯಂತೆ ಗರ್ಜಿಸುತ್ತಿದ್ದನು. ಶಲ್ಯನಿಂದ ಹಾಗೆ ವಧಿಸಲ್ಪಡುತ್ತಿದ್ದ ಪಾಂಡವ ಸೇನೆಯು ಯುಧಿಷ್ಠಿರನ ಬಳಿ ಸಾರಿತು. ಲಘುಹಸ್ತ ಶಲ್ಯನು ನಿಶಿತ ಶರಗಳಿಂದ ಆ ಸೇನೆಯನ್ನು ಮರ್ದಿಸಿ ಮಹಾ ಶರವರ್ಷದಿಂದ ಯುಧಿಷ್ಠಿರನನ್ನು ಪೀಡಿಸಿದನು. ಪದಾತಿ-ಅಶ್ವಗಳೊಂದಿಗೆ ತನ್ನ ಮೇಲೆ ಎರಗುತ್ತಿದ್ದ ಶಲ್ಯನನ್ನು ಕ್ರುದ್ಧ ಯುಧಿಷ್ಠಿರನು ತೀಕ್ಷ್ಣ ಶರಗಳಿಂದ ಮುಸುಕಿ ಮದಿಸಿದ ಆನೆಯನ್ನು ಅಂಕುಶಗಳಿಂದ ಹೇಗೋ ಹಾಗೆ ನಿಯಂತ್ರಿಸಿದನು. ಅವನ ಮೇಲೆ ಶಲ್ಯನು ಘೋರ ಸರ್ಪವಿಷದಂತಿರುವ ಶರವನ್ನು ಪ್ರಯೋಗಿಸಿದನು. ಅದು ಮಹಾತ್ಮ ಯುಧಿಷ್ಠಿರನನ್ನು ಭೇಧಿಸಿ ವೇಗದಿಂದ ಭೂಮಿಯನ್ನು ಹೊಕ್ಕಿತು.

ಆಗ ಕ್ರುದ್ಧ ವೃಕೋದರನು ಶಲ್ಯನನ್ನು ಏಳು ಬಾಣಗಳಿಂದ, ಸಹದೇವನು ಐದರಿಂದ ಮತ್ತು ನಕುಲನು ಹತ್ತು ಶರಗಳಿಂದ ಹೊಡೆದರು. ದ್ರೌಪದೇಯರು ಕೂಡ ಮೇಘಗಳು ಭೂಮಿಯ ಮೇಲೆ ಹೇಗೋ ಹಾಗೆ ಶತ್ರುಘ್ನ-ಶೂರ-ಆರ್ತಾಯನಿ-ಮಹಾಭಾಗ ಶಲ್ಯನ

ಮೇಲೆ ಶರಗಳನ್ನು ಸುರಿಸಿದರು.

ಎಲ್ಲಕಡೆಗಳಲ್ಲಿ ಪಾರ್ಥರಿಂದ ಆಕ್ರಮಣಿಸಲ್ಪಟ್ಟ ಶಲ್ಯನನ್ನು ನೋಡಿ ಸಂಕ್ರುದ್ಧ ಕೃತವರ್ಮ-ಕೃಪರು ಅಲ್ಲಿಗೆ ಧಾವಿಸಿದರು. ಪತತ್ರೀ, ಉಲೂಕ, ಸೌಬಲ ಶಕುನಿ, ಅಶ್ವತ್ಥಾಮ, ಧೃತರಾಷ್ಟ್ರ ಪುತ್ರರು ಎಲ್ಲರೂ ಯುದ್ಧದಲ್ಲಿ ಶಲ್ಯನ ಸಹಾಯಕ್ಕಾಗಿ ಹೋದರು. ಕೃತವರ್ಮನು ಮೂರು ಶಿಲೀಮುಖಗಳಿಂದ ಭೀಮಸೇನನನ್ನು ಹೊಡೆದು ಮಹಾ ಬಾಣವರ್ಷದಿಂದ ಆ ಕ್ರುದ್ಧರೂಪನನ್ನು ತಡೆದನು. ಕೃಪನು ಧೃಷ್ಟದ್ಯುಮ್ನನನ್ನು ಬಾಣವರ್ಷಗಳಿಂದ ಪೀಡಿಸಿದನು. ದ್ರೌಪದೇಯರನ್ನು ಶಕುನಿಯೂ, ದ್ರೌಣಿಯು ಯಮಳರನ್ನೂ ಆಕ್ರಮಣಿಸಿದರು. ದುರ್ಯೋಧನನು ಕೇಶವಾರ್ಜುನರನ್ನು ಎದುರಿಸಿ ಬಾಣಗಳಿಂದ ಅವರನ್ನು ಪ್ರಹರಿಸಿದನು. ಹೀಗೆ ಕೌರವ ಮತ್ತು ಶತ್ರುಗಳ ನಡುವೆ ನೂರಾರು ಘೋರರೂಪೀ-ವಿಚಿತ್ರ ದ್ವಂದ್ವಯುದ್ಧಗಳು ಅಲ್ಲಲ್ಲಿ ನಡೆಯುತ್ತಿದ್ದವು. ಭೋಜ ಕೃತವರ್ಮನು ಭೀಮನ ಕರಡಿಬಣ್ಣದ ಕುದುರೆಗಳನ್ನು ಸಂಹರಿಸಿದನು. ಹತಾಶ್ವ ಪಾಂಡುನಂದನನು ರಥದಿಂದ ಕೆಳಗಿಳಿದು ಕಾಲದಂಡದಂತಿರುವ ಗದೆಯನ್ನು ಎತ್ತಿಹಿಡಿದು ಯುದ್ಧಮಾಡಿದನು. ಎದುರಾಳಿಯಾಗಿದ್ದ ಸಹದೇವನ ಕುದುರೆಗಳನ್ನು ಮದ್ರರಾಜನು ಸಂಹರಿಸಿದನು. ಆಗ ಸಹದೇವನು ಖಡ್ಗದಿಂದ ಶಲ್ಯನ

ಮಗನನ್ನು ವಧಿಸಿದನು. ಆಚಾರ್ಯ ಗೌತಮನು ಅಸಂಭ್ರಾಂತನಾಗಿ, ಪ್ರಯತ್ನಪಟ್ಟು ಧೃಷ್ಟದ್ಯುಮ್ನನೊಡನೆ ಹೋರಾಡಿದನು. ಆಚಾರ್ಯಸುತ ಅಶ್ವತ್ಥಾಮನು ನಗುತ್ತಿರುವನೋ ಎನ್ನುವಂತೆ ಹತ್ತತ್ತು ಶರಗಳಿಂದ ಒಬ್ಬೊಬ್ಬ ದ್ರೌಪದೇಯ ವೀರನನ್ನೂ ಪ್ರಹರಿಸಿದನು. ಶಲ್ಯನೂ ಕೂಡ ಸಂಕ್ರುದ್ಧನಾಗಿ ಸೋಮಕ-ಪಾಂಡವರನ್ನು ವಧಿಸುತ್ತ ಪುನಃ ನಿಶಿತ ಬಾಣಗಳಿಂದ ಯುಧಿಷ್ಠಿರನನ್ನು ಪೀಡಿಸಿದನು.

## ಶಲ್ಯ-ಭೀಮಸೇನರ ಗದಾಯುದ್ಧ

ಭೀಮನು ಕ್ರುದ್ಧನಾಗಿ ತುಟಿಯನ್ನು ಕಚ್ಚುತ್ತಾ ಶಲ್ಯನನ್ನು ವಿನಾಶಗೊಳಿಸಲು ಯಮದಂಡ ಸದೃಶ, ಮೇಲೆದ್ದುಬಂದ ಕಾಳರಾತ್ರಿಯಂತೆ ಕಾಣುತ್ತಿದ್ದ ಆನೆ-ಕುದುರೆ-ಪದಾತಿ ಶರೀರಗಳನ್ನು ವಿನಾಶಗೊಳಿಸಬಹುದಾದ ಮಹಾ ಗದೆಯನ್ನು ಎತ್ತಿ ಹಿಡಿದನು. ಸುವರ್ಣಪಟ್ಟಿಯನ್ನು ಸುತ್ತಿದ್ದ, ಉಲ್ಕೆಯಂತೆ ಪ್ರಜ್ವಲಿಸುತ್ತಿದ್ದ, ವಜ್ರದಂತಹ ಕಠಿನ ಲೋಹಮಯವಾಗಿದ್ದ, ಉಯ್ಯಾಲೆಯ ಮೇಲಿರುವ ಭಯಂಕರ ವಿಷಸರ್ಪಿಣಿಯಂತಿದ್ದ, ಚಂದನ-ಅಗರುಗಳಿಂದ ಲೇಪಿತಗೊಂಡು ಅಭೀಷ್ಟಳಾದ ಪ್ರಿಯತಮೆಯಂತಿದ್ದ ಆ ಗದೆಯು ಪ್ರಾಣಿಗಳ ವಸೆ-ಮೇಧಸ್ಸುಗಳಿಂದ ಲೇಪಿಸಲ್ಪಟ್ಟು ಯಮರಾಜನ ನಾಲಿಗೆಯಂತೆ ಭಯಂಕರವಾಗಿತ್ತು. ಆ ಗದೆಯಲ್ಲಿದ್ದ ನೂರಾರು

ಕಿರುಗಂಟೆಗಳು ಯಾವಾಗಲೂ ಧ್ವನಿಗೈಯುತ್ತಿದ್ದವು. ವಾಸವನ ವಜ್ರದಂತಿದ್ದ ಆ ಗದೆಯು ಪೊರೆಕಳಚಿದ ವಿಷಸರ್ಪದಂತಿತ್ತು ಮತ್ತು ಆನೆಗಳ ಮದೋದಕಗಳಿಂದ ತೋಯ್ದುಹೋಗಿತ್ತು. ಶತ್ರುಸೇನೆಗಳಿಗೆ ಭಯದಾಯಕವೂ ಸ್ವಸೈನ್ಯಗಳಿಗೆ ಹರ್ಷದಾಯಕವೂ ಆಗಿದ್ದ ಅದು ಮನುಷ್ಯಲೋಕದಲ್ಲಿ ಗಿರಿಶೃಂಗಗಳನ್ನೂ ಸೀಳಬಲ್ಲದು ಎಂದು ವಿಖ್ಯಾತವಾಗಿತ್ತು. ಆ ಗದೆಯ ಆಶ್ರಯದಿಂದಲೇ ಕೌಂತೇಯನು ಕೈಲಾಸಭವನದಲ್ಲಿ ಮಹೇಶ್ವರಸಖ-ಬಲಶಾಲಿ-ಅಲಕಾಧಿಪ ಕುಬೇರನನ್ನು ಯುದ್ಧಕ್ಕೆ ಆಹ್ವಾನಿಸಿದ್ದನು. ದ್ರೌಪದಿಗೆ ಪ್ರಿಯವನ್ನುಂಟುಮಾಡಲು ಮಂದರ ಪುಷ್ಪಕ್ಕಾಗಿ ಮಹಾಬಲ ಕ್ರುದ್ಧ ಭೀಮನು ಅನೇಕರು ತಡೆದಿದ್ದರೂ ಗಣನೆಗೆ ತೆಗೆದುಕೊಳ್ಳದೇ ಆ ಗದೆಯನ್ನೇ ಅವಲಂಬಿಸಿ ಕುಬೇರನ ಪಟ್ಟಣದಲ್ಲಿ ಮಾಯಾವೀ ದೃಪ್ತ ಗುಹ್ಯಕರನ್ನು ಸಂಹರಿಸಿದ್ದನು. ಮಹಾಬಾಹು ಭೀಮನು ವಜ್ರ-ಮಣಿ-ರತ್ನಚಿತ್ರಿತ, ವಜ್ರದಂತೆ ಭಾರವಾಗಿದ್ದ ಆ ಗದೆಯನ್ನೆತ್ತಿಕೊಂಡು ರಣದಲ್ಲಿ ಶಲ್ಯನನ್ನು ಆಕ್ರಮಣಿಸಿದನು. ದಾರುಣ ಶಬ್ಧಮಾಡುತ್ತಿದ್ದ ಆ ಗದೆಯಿಂದ ಯುದ್ಧಕುಶಲ ಭೀಮಸೇನನು ಶಲ್ಯನ ನಾಲ್ಕೂ ಮಹಾವೇಗಯುಕ್ತ ಕುದುರೆಗಳನ್ನು ಅಪ್ಪಳಿಸಿ ಧ್ವಂಸಮಾಡಿದನು.

ಆಗ ಕ್ರುದ್ಧನಾದ ವೀರ ಶಲ್ಯನು ಗರ್ಜಿಸುತ್ತಾ ಭೀಮಸೇನನ ವಿಶಾಲ

ವಕ್ಷಃಸ್ಥಳಕ್ಕೆ ತೋಮರವನ್ನು ಎಸೆಯಲು ಅದು ಅವನ ಕವಚವನ್ನು ಭೇದಿಸಿ ಅಲ್ಲಿ ನೆಟ್ಟಿಕೊಂಡಿತು. ಅಸಂಭ್ರಾಂತನಾದ ವೃಕೋದರನು ಆ ತೋಮರವನ್ನು ಕಿತ್ತೆತ್ತಿ ಅದರಿಂದಲೇ ಮದ್ರರಾಜನ ಸಾರಥಿಯ ಹೃದಯವನ್ನು ಭೇದಿಸಿದನು. ಭಿನ್ನ ಕವಚನಾದ ಅವನು ರಕ್ತವನ್ನು ಕಾರುತ್ತಾ ಭಯಗೊಂಡ ಮನಸ್ಸಿನಿಂದ ದೀನನಾಗಿ ಶಲ್ಯನಿಗೆ ಅಭಿಮುಖನಾಗಿ ಬಳಿಯಲ್ಲಿಯೇ ಬಿದ್ದನು. ಪ್ರತೀಕಾರಮಾಡಿದುದನ್ನು ನೋಡಿ ವಿಸ್ಮಿತಮಾನಸನಾದ ಶಲ್ಯನು ಗದೆಯನ್ನು ಹಿಡಿದು ಶತ್ರುವನ್ನು ದುರುಗುಟ್ಟಿ ನೋಡಿದನು. ಸಂಗ್ರಾಮದಲ್ಲಿ ಅನಾಯಾಸವಾಗಿ ಘೋರಕರ್ಮಗಳನ್ನೆಸಗುವ ಭೀಮಸೇನನ ಆ ಕೃತ್ಯವನ್ನು ನೋಡಿ ಸುಮನಸ್ಕ ಪಾರ್ಥರು ಭೀಮಸೇನನನ್ನು ಗೌರವಿಸಿದರು.

ಸಾರಥಿಯು ಬಿದ್ದುದನ್ನು ಕಂಡು ಶಲ್ಯನು ಬೇಗನೇ ಲೋಹಮಯ ಗದೆಯನ್ನು ಹಿಡಿದು ಅಚಲ ಪರ್ವತದಂತೆ ನಿಂತನು. ಭೀಮಸೇನನು ಮಹಾ ಗದೆಯನ್ನು ಹಿಡಿದು ಕಾಲಾಗ್ನಿಯಂತೆ ಉರಿಯುತ್ತಿದ್ದ, ಪಾಶಹಸ್ತ ಅಂತಕ-ಶೃಂಗವಿರುವ ಕೈಲಾಸ-ವಜ್ರವನ್ನು ಹಿಡಿದಿರುವ ವಾಸವ-ಶೂಲವನ್ನು ಹಿಡಿದಿದ್ದ ಹರ್ಯಕ್ಷ ರುದ್ರನಂತಿದ್ದ ಶಲ್ಯನನ್ನು ವೇಗದಿಂದ ಆಕ್ರಮಣಿಸಿದನು. ಆಗ ಸಹಸ್ರಾರು ಶಂಖ-ಪ್ರಣಾದ-ತೂರ್ಯಗಳು ಮೊಳಗಿದವು ಮತ್ತು ಶೂರರ ಹರ್ಷವನ್ನು ಹೆಚ್ಚಿಸುವ

ಸಿಂಹನಾದಗಳುಂಟಾದವು. ಕಾಳಗವಾಡುತ್ತಿರುವ ಎರಡು ಮಹಾಗಜಗಳಂತಿದ್ದ ಅವರಿಬ್ಬರನ್ನೂ ಅಲ್ಲಿದ್ದ ಪ್ರೇಕ್ಷಕ ಯೋಧರೆಲ್ಲರೂ – ಕೌರವರು ಮತ್ತು ಪಾಂಡವರ ಕಡೆಯವರು – ಸಾಧು ಸಾಧು ಎಂದು ಹೇಳುತ್ತಿದ್ದರು. ಮದ್ರಾಧಿಪ ಅಥವಾ ಬಲರಾಮನನ್ನು ಬಿಟ್ಟರೆ ಬೇರೆ ಯಾರೂ ಯುದ್ಧದಲ್ಲಿ ಭೀಮಸೇನನ ವೇಗವನ್ನು ಸಹಿಸಿಕೊಳ್ಳಲು ಉತ್ಸಾಹಿತರಾಗಿರಲಿಲ್ಲ. ಅದೇರೀತಿ ಮದ್ರಾಧಿಪನ ಗದಾವೇಗವನ್ನು ಕೂಡ ಯುದ್ಧದಲ್ಲಿ ವೃಕೋದರನಲ್ಲದೇ ಅನ್ಯ ಯಾವ ಯೋಧನೂ ಸಹಿಸಿಕೊಳ್ಳಲು ಉತ್ಸಾಹಿತನಾಗಿರಲಿಲ್ಲ. ಮದ್ರರಾಜ-ವೃಕೋದರರಿಬ್ಬರೂ ಗೂಳಿಗಳಂತೆ ಗರ್ಜಿಸುತ್ತಾ ಗದೆಗಳನ್ನು ಹಿಡಿದು ತಿರುಗಿಸುತ್ತಾ ಮಂಡಲಾಕಾರಗಳಲ್ಲಿ ತಿರುಗುತ್ತಿದ್ದರು. ಮಂಡಲಾಕಾರದಲ್ಲಿ ತಿರುಗುವುದರಲ್ಲಾಗಲೀ, ಗದೆಗಳನ್ನು ತಿರುಗಿಸುವುದರಲ್ಲಾಗಲೀ ಆ ಇಬ್ಬರು ಪುರುಷಸಿಂಹಗಳ ನಡುವಿನ ಯುದ್ಧದಲ್ಲಿ ವ್ಯತ್ಯಾಸಗಳೇ ಇರಲಿಲ್ಲ. ಅಪ್ಪಟ ಚಿನ್ನದ ಪಟ್ಟಿಯ ಶಲ್ಯನ ಆ ಗದೆಯು ಅಗ್ನಿಜ್ವಾಲೆಯಂತೆ ಹೊಳೆಯುತ್ತಿದ್ದು ಶುಭ್ರವೂ ಭಯವರ್ಧನಿಯೂ ಆಗಿತ್ತು. ಹಾಗೆಯೇ ಮಂಡಲಮಾರ್ಗಗಳಲ್ಲಿ ಸುತ್ತುತ್ತಿದ್ದ ಮಹಾತ್ಮ ಭೀಮನ ಗದೆಯೂ ಮಿಂಚಿನ ಪ್ರಕಾಶದಂತೆ ಹೊಳೆದು ಶೋಭಿಸುತ್ತಿತ್ತು. ಮದ್ರರಾಜನು ಗದೆಯಿಂದ ಭೀಮನ ಗದೆಯನ್ನು ಹೊಡೆಯಲು ಅದರಿಂದ ಉರಿಯುವ ಅಗ್ನಿಜ್ವಾಲೆಗಳು

ಹೊರಸೂಸುತ್ತಿದ್ದವು. ಹಾಗೆಯೇ ಭೀಮನು ತನ್ನ ಗದೆಯಿಂದ ಶಲ್ಯನ ಗದೆಯನ್ನು ಹೊಡೆಯಲು ಅದರಿಂದಲೂ ಕಿಡಿಗಳ ಮಳೆಯೇ ಸುರಿಯಿತು. ಅದೊಂದು ಅದ್ಭುತವಾಗಿತ್ತು. ಮಹಾಗಜಗಳು ದಂತಗಳಿಂದಲೂ ಮಹಾಗೂಳಿಗಳು ಕೋಡುಗಳಿಂದಲೂ ತಿವಿದಾಡುವಂತೆ ಅವರಿಬ್ಬರೂ ಅನ್ಯೋನ್ಯರನ್ನು ಗದೆಯ ಅಗ್ರಬಾಗದಿಂದ ಪ್ರಹರಿಸುತ್ತಿದ್ದರು. ಗದೆಗಳಿಂದ ಪ್ರಹರಿಸಲ್ಪಟ್ಟ ಅವರಿಬ್ಬರ ಶರೀರಗಳಲ್ಲಿ ಕ್ಷಣದಲ್ಲಿಯೇ ಗಾಯಗಳುಂಟಾಗಿ ರಕ್ತವು ಸೋರುತ್ತಿರಲು ಅವರಿಬ್ಬರೂ ಹೂಬಿಟ್ಟ ಕಿಂಶುಕ ವೃಕ್ಷಗಳಂತೆ ಪ್ರೇಕ್ಷಣೀಯರಾಗಿದ್ದರು. ಮದ್ರರಾಜನು ಗದೆಯಿಂದ ಭೀಮಸೇನನ ಎಡ ಮತ್ತು ಬಲ ಪಾರ್ಶ್ವಗಳಲ್ಲಿ ಹೊಡೆಯಲು ಆ ಮಹಾಬಾಹುವು ಪರ್ವತದಂತೆ ಅಲುಗಾಡಲೇ ಇಲ್ಲ. ಅದೇ ರೀತಿಯಲ್ಲಿ ಭೀಮನ ಗದೆಯಿಂದ ವೇಗವಾಗಿ ಪುನಃ ಪುನಃ ಪ್ರಹರಿಸಲ್ಪಡುತ್ತಿದ್ದರೂ ಶಲ್ಯನು ಆನೆಯಿಂದ ಪ್ರಹರಿಸಲ್ಪಟ್ಟ ಗಿರಿಯಂತೆ ಸ್ವಲ್ಪವೂ ವ್ಯಥೆಗೊಳ್ಳಲಿಲ್ಲ. ಆ ಇಬ್ಬರು ಪುರುಷಸಿಂಹರ ಗದಾಪ್ರಹಾರಗಳ ಧ್ವನಿಯು ಮಿಂಚಿನ ಧ್ವನಿಯಂತೆ ಎಲ್ಲ ದಿಕ್ಕುಗಳಲ್ಲಿಯೂ ಮೊಳಗಿತು.

ಆ ಮಹಾವೀರ್ಯರಿಬ್ಬರೂ ಗದೆಯನ್ನೆತ್ತಿ ಮುಂದೆಸಾಗುತ್ತಿದ್ದರು, ಹಿಂದೆ ಸರಿಯುತ್ತಿದ್ದರು ಮತ್ತು ಪುನಃ ಮಂಡಲ ಮಾರ್ಗಗಳಲ್ಲಿ

ಸಂಚರಿಸುತ್ತಿದ್ದರು. ಹೀಗೆ ಅವರು ಎಂಟು ಹೆಜ್ಜೆಗಳನ್ನಿಟ್ಟ ಮೇಲೆ ಆ ಅತಿಮಾನುಷಕರ್ಮಿಗಳು ಲೋಹದಂಡಗಳನ್ನು ಮೇಲೆತ್ತಿ ಒಬ್ಬರನ್ನೊಬ್ಬರು ಹೊಡೆಯತೊಡಗಿದರು. ಮಂಡಲಗಳಲ್ಲಿ ಸಂಚರಿಸುತ್ತಾ ಅನ್ಯೋನ್ಯರನ್ನು ಹೊಡೆಯಲು ಪ್ರಯತ್ನಿಸುತ್ತಾ ತಮ್ಮ ಕ್ರಿಯಾವಿಶೇಷತೆಗಳನ್ನು ಪ್ರದರ್ಶಿಸುತ್ತಿದ್ದರು. ಶೃಂಗಸಹಿತ ಪರ್ವತಗಳಂತಿದ್ದ ಅವರಿಬ್ಬರೂ ಘೋರ ಗದೆಗಳನ್ನು ಮೇಲೆತ್ತಿ ಅನ್ಯೋನ್ಯರನ್ನು ಪ್ರಹರಿಸಿದರು. ಆದರೂ ಅವರು ರಣಭೂಮಿಯಲ್ಲಿ ಅಚಲರಾಗಿಯೇ ಇದ್ದರು. ಪರಸ್ಪರರ ಗದಾವೇಗದಿಂದ ತುಂಬಾ ಗಾಯಗೊಂಡ ಆ ವೀರರಿಬ್ಬರೂ ಎರಡು ಇಂದ್ರಧ್ವಜಗಳೋಪಾದಿಯಲ್ಲಿ ಒಟ್ಟಿಗೇ ಕೆಳಕ್ಕೆ ಬಿದ್ದರು. ಆಗ ಎರಡೂ ಸೇನೆಗಳ ವೀರರಲ್ಲಿ ಹಾಹಾಕಾರವುಂಟಾಯಿತು. ಮರ್ಮಸ್ಥಾನಗಳಲ್ಲಿ ತುಂಬಾ ಗಾಯಗೊಂಡಿದ್ದ ಅವರಿಬ್ಬರೂ ಅತ್ಯಂತ ವಿಹ್ವಲರಾಗಿದ್ದರು. ಆಗ ಕೃಪನು ಶಲ್ಯನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಬೇಗನೇ ಅಲ್ಲಿಂದ ಕರೆದುಕೊಂಡು ಹೋದನು.

## ದುರ್ಯೋಧನನಿಂದ ಚೇಕಿತಾನನ ವಧೆ

ವಿಹ್ವಲತೆಯಿಂದ ಕ್ಷೀಣನಾದವನಂತೆಯೇ ಇದ್ದ ಭೀಮಸೇನನು ನಿಮಿಷಮಾತ್ರದಲ್ಲಿ ಪುನಃ ಮೇಲೆದ್ದು ಗದಾಪಾಣಿಯಾಗಿ ಮದ್ರಪನನ್ನು

ಯುದ್ಧಕ್ಕೆ ಆಹ್ವಾನಿಸಿದನು. ಆಗ ಕೌರವ ಶೂರರು ನಾನಾಶಸ್ತ್ರಗಳನ್ನು ಹಿಡಿದು ನಾನಾ ವಾದಿತ್ರಶಬ್ಧಗಳೊಂದಿಗೆ ಪಾಂಡುಸೇನೆಯೊಡನೆ ಹೋರಾಡಿದರು. ದುರ್ಯೋಧನನೇ ಮೊದಲಾದವರು ಭುಜ-ಶಸ್ತ್ರಗಳನ್ನು ಮೇಲೆತ್ತಿ ಮಹಾ ಗರ್ಜನೆಗಳೊಂದಿಗೆ ಶತ್ರುಸೇನೆಯನ್ನು ಆಕ್ರಮಣಿಸಿದರು. ಆ ಸೇನೆಯನ್ನು ನೋಡಿ ಪಾಂಡುನಂದನರು ದುರ್ಯೋಧನನ್ನು ವಧಿಸಲು ಬಯಸಿ ಸಿಂಹನಾದದೊಂದಿಗೆ ಆಕ್ರಮಣಿಸಿದರು. ರಭಸದಿಂದ ಅವರು ಮೇಲೆ ಬೀಳುತ್ತಿರಲು ದುರ್ಯೋಧನನು ಪ್ರಾಸದಿಂದ ಚೇಕಿತಾನನ ಹೃದಯಕ್ಕೆ ಜೋರಾಗಿ ಪ್ರಹರಿಸಿದನು. ಅವನಿಂದ ಹೊಡೆಯಲ್ಪಟ್ಟ ಚೇಕಿತಾನನು ಅಸುನೀಗಿ ಕುಳಿತಿದ್ದ ರಥದಿಂದ ಬಿದ್ದನು. ರಕ್ತದಿಂದ ಅವನು ತೋಯ್ದುಹೋಗಿದ್ದನು.

ಚೇಕಿತಾನನು ಹತನಾದುದನ್ನು ನೋಡಿ ಮಹಾರಥ ಪಾಂಡವರು ಪ್ರತ್ಯೇಕ ಪ್ರತ್ಯೇಕವಾಗಿ ಶರವರ್ಷಗಳನ್ನು ಸುರಿಸಲು ಉಪಕ್ರಮಿಸಿದರು. ವಿಜಯೋತ್ಸಾಹೀ ಪಾಂಡವರು ಕುರುಸೇನೆಗಳಲ್ಲಿ ನುಗ್ಗಿ ಸಂಚರಿಸುತ್ತಿರುವಾಗ ಎಲ್ಲಕಡೆಗಳಿಂದ ಪ್ರೇಕ್ಷಣೀಯರಾಗಿದ್ದರು. ಮದ್ರರಾಜನನ್ನು ಮುಂದಿಟ್ಟುಕೊಂಡು ಕೃಪ, ಕೃತವರ್ಮ, ಮತ್ತು ಸೌಬಲರು ಧರ್ಮರಾಜನನ್ನು ಆಕ್ರಮಣಿಸಿದರು. ದುರ್ಯೋಧನನು

ಧೃಷ್ಟದ್ಯುಮ್ನನೊಡನೆ ಯುದ್ಧಮಾಡಿದನು. ದುರ್ಯೋಧನನಿಂದ ಪ್ರಚೋದಿತರಾದ ಮೂರು ಸಾವಿರ ರಥಗಳು ದ್ರೋಣಪುತ್ರನನ್ನು ಮುಂದೆಮಾಡಿಕೊಂಡು ಅರ್ಜುನನೊಡನೆ ಯುದ್ಧಮಾಡಿದರು. ಹಂಸಗಳು ಮಹಾಸರೋವರವನ್ನು ಹೇಗೋ ಹಾಗೆ ವಿಜಯವನ್ನೇ ಧೃಢಸಂಕಲ್ಪವಾಗಿಟ್ಟುಕೊಂಡು ಜೀವನವನ್ನೇ ತೊರೆದು ಕೌರವರು ಶತ್ರುಸೇನೆಗಳನ್ನು ಪ್ರವೇಶಿಸಿದರು. ಆಗ ಪರಸ್ಪರರನ್ನು ವಧಿಸಲು ಇಚ್ಛಿಸಿದವರ ಮಧ್ಯೆ ಅನ್ಯೋನ್ಯರನ್ನು ವಧಿಸುವ ಮತ್ತು ಅನ್ಯೋನ್ಯರಿಗೆ ಸಂತೋಷವನ್ನುಂಟುಮಾಡುವ ಆ ಘೋರ ಯುದ್ಧವು ನಡೆಯಿತು.

ವೀರಶ್ರೇಷ್ಠರ ಕ್ಷಯವಾಗುತ್ತಿರುವ ಆ ಸಂಗ್ರಾಮವು ನಡೆಯಲು ಭಿರುಗಾಳಿಯಿಂದ ಎಬ್ಬಿಸಲ್ಪಟ್ಟ ಭಯಂಕರ ಧೂಳು ಭೂಮಿಯ ಮೇಲೆದ್ದಿತು. ಪಾಂಡವರು ತಮ್ಮ ನಾಮಧೇಯಗಳನ್ನು ಹೇಳಿಕೊಂಡಿದ್ದುದನ್ನು ಕೇಳಿದ ನಂತರವೇ ಕೌರವರು ಅವರ ಎದಿರು ನಿಂತು ಯುದ್ಧಮಾಡುವವರು ಯಾರೆಂದು ತಿಳಿದುಕೊಳ್ಳುತ್ತಿದ್ದರು. ರಕ್ತದಿಂದ ಆ ಧೂಳು ಅಡಗಿತು. ಧೂಳು ನಾಶವಾಗಲು ದಿಕ್ಕುಗಳು ಸ್ವಚ್ಛವಾದವು. ಆ ಘೋರರೂಪೀ ಭಯಾನಕ ಸಂಗ್ರಾಮವು ನಡೆಯುತ್ತಿರಲು ಕೌರವರಲ್ಲಾಗಲೀ ಪಾಂಡವರಲ್ಲಾಗಲೀ ಯಾರೂ ಪರಾಙ್ಮುಖರಾಗಲಿಲ್ಲ. ಬ್ರಹ್ಮಲೋಕವನ್ನೇ ಗುರಿಯನ್ನಾಗಿಟ್ಟುಕೊಂಡು

ಯುದ್ಧದಲ್ಲಿ ಜಯವನ್ನು ಪ್ರಾರ್ಥಿಸುತ್ತಿದ್ದರು. ಧರ್ಮಯುದ್ಧದಲ್ಲಿ ತಮ್ಮ ಪರಾಕ್ರಮವನ್ನು ತೋರಿಸಿ ನರರು ಸ್ವರ್ಗವನ್ನೇ ಬಯಸುತ್ತಿದ್ದರು. ಒಡೆಯನ ಅನ್ನದ ಋಣವನ್ನು ತೀರಿಸಲು, ಒಡೆಯನ ಕಾರ್ಯವನ್ನು ಮಾಡುವ ನಿಷ್ಠೆಯುಳ್ಳವರಾಗಿ ಯೋಧರು ಸ್ವರ್ಗಪ್ರಾಪ್ತಿಯಲ್ಲಿಯೇ ಮನಸ್ಸನ್ನು ಇಟ್ಟುಕೊಂಡು ಯುದ್ಧಮಾಡುತ್ತಿದ್ದರು. ಮಹಾರಥರು ನಾನಾರೂಪದ ಶಸ್ತ್ರಗಳನ್ನು ಪ್ರಯೋಗಿಸುತ್ತಿದ್ದರು. ಅನ್ಯೋನ್ಯರ ಮೇಲೆ ಗರ್ಜಿಸುತ್ತಾ ಪರಸ್ಪರ ಪ್ರಹರಿಸುತ್ತಿದ್ದರು. “ಕೊಲ್ಲಿರಿ! ಪ್ರಹರಿಸಿರಿ! ಬಂಧಿಸಿರಿ! ಹೊಡೆಯಿರಿ! ಕತ್ತರಿಸಿರಿ!” ಇವೇ ಮೊದಲಾದ ಕೂಗುಗಳು ಕೌರವ ಮತ್ತು ಶತ್ರು ಸೈನ್ಯಗಳಲ್ಲಿ ಕೇಳಿಬರುತ್ತಿತ್ತು.

## ಶಲ್ಯ-ಯುಧಿಷ್ಠಿರರ ಯುದ್ಧ

ಆಗ ಶಲ್ಯನು ಧರ್ಮರಾಜ ಮಹಾರಥ ಯುಧಿಷ್ಠಿರನನ್ನು ಕೊಲ್ಲಲು ಬಯಸಿ ಅವನನ್ನು ನಿಶಿತ ಬಾಣಗಳಿಂದ ಹೊಡೆದನು. ಅದಕ್ಕೆ ಪ್ರತಿಯಾಗಿ ಮರ್ಮಜ್ಞ ಪಾರ್ಥನು ನಗು ನಗುತ್ತಲೇ ಹದಿನಾಲ್ಕು ನಾರಾಚಗಳನ್ನು ಶಲ್ಯನ ಮರ್ಮಸ್ಥಾನಗಳಲ್ಲಿ ನಾಟಿಸಿದನು. ಪಾಂಡವನನ್ನು ಕೊಲ್ಲಲು ಬಯಸಿದ್ದ ಶಲ್ಯನು ಕ್ರುದ್ಧನಾಗಿ ಬಾಣಗಳಿಂದ ಅವನನ್ನು ತಡೆದು ಸಮರದಲ್ಲಿ ಅನೇಕ ಕಂಕಪತ್ರಿ ಬಾಣಗಳಿಂದ ಅವನನ್ನು ಹೊಡೆದನು. ಪುನಃ ಸರ್ವ ಸೇನೆಗಳೂ

ನೋಡುತ್ತಿರುವಂತೆಯೇ, ಅವನು ನತಪರ್ವ ಶರಗಳಿಂದ ಯುಧಿಷ್ಠಿರನನ್ನು ಪ್ರಹರಿಸಿದನು. ಮಹಾಯಶಸ್ವಿ ಧರ್ಮರಾಜನೂ ಕೂಡ ಕುಪಿತನಾಗಿ ನವಿಲು ಮತ್ತು ರಣಹದ್ದುಗಳ ರೆಕ್ಕೆಗಳುಳ್ಳ ನಿಶಿತ ಬಾಣಗಳಿಂದ ಮದ್ರರಾಜನನ್ನು ಹೊಡೆದನು. ಮಹಾರಥ ಯುಧಿಷ್ಠಿರನು ಚಂದ್ರಸೇನನನ್ನು ಎಪ್ಪತ್ತು, ಸಾರಥಿಯನ್ನು ಒಂಭತ್ತು, ಮತ್ತು ದ್ರುಮಸೇನನನ್ನು ಅರವತ್ನಾಲ್ಕು ಬಾಣಗಳಿಂದ ಹೊಡೆದು ಸಂಹರಿಸಿದನು. ಪಾಂಡವನಿಂದ ತನ್ನ ಚಕ್ರರಕ್ಷಕರು ಹತರಾಗಲು ಶಲ್ಯನು ಇಪ್ಪತ್ತೈದು ಚೇದಿಯೋಧರನ್ನು ಸಂಹರಿಸಿದನು. ಸಾತ್ಯಕಿಯನ್ನು ಇಪ್ಪತ್ತೈದು, ಭೀಮಸೇನನನ್ನು ಐದು, ಮತ್ತು ಮಾದ್ರೀಪುತ್ರರನ್ನು ನೂರು ನಿಶಿತ ಶರಗಳಿಂದ ಪ್ರಹರಿಸಿದನು. ಸಂಗ್ರಾಮದಲ್ಲಿ ಹೀಗೆ ಸಂಚರಿಸುತ್ತಿದ್ದ ಶಲ್ಯನ ಮೇಲೆ ಪಾರ್ಥನು ಅನೇಕ ಸರ್ಪವಿಷಸಮಾನ ಬಾಣಗಳನ್ನು ಪ್ರಯೋಗಿಸಿದನು. ಯುಧಿಷ್ಠಿರನು ಸಮರದಲ್ಲಿ ಶಲ್ಯನ ಧ್ವಜದ ಅಗ್ರಭಾಗವನ್ನು ಭಲ್ಲದಿಂದ ಕತ್ತರಿಸಿ ರಥದಿಂದ ಕೆಳಕ್ಕೆ ಬೀಳಿಸಿದನು. ಪಾಂಡುಪುತ್ರನಿಂದ ತುಂಡರಿಸಲ್ಪಟ್ಟ ಆ ಕೇತುವು ಪ್ರಹಾರದಿಂದ ಕತ್ತರಿಸಲ್ಪಟ್ಟು ಪರ್ವತ ಶಿಖರದಂತೆ ಬಿದ್ದಿತು. ಧ್ವಜವು ಕೆಳಗೆ ಬಿದ್ದುದನ್ನೂ, ವ್ಯವಸ್ಥಿತನಾಗಿ ನಿಂತಿದ್ದ ಪಾಂಡವನನ್ನೂ ನೋಡಿ ಸಂಕ್ರುದ್ಧನಾದ ಮದ್ರರಾಜನು ಶರವರ್ಷಗಳನ್ನು ಪ್ರಯೋಗಿಸಿದನು. ಮಳೆಸುರಿಸುತ್ತಿರುವ ಮೋಡದಂತೆ ಶಲ್ಯನು ಸಾಯಕಗಳ ಮಳೆಯನ್ನು

ಯುಧಿಷ್ಠಿರನ ಮೇಲೆ ಸುರಿಸಿದನು. ಸಾತ್ಯಕಿ, ಭೀಮಸೇನ, ಮಾದ್ರೀಪುತ್ರ ಪಾಂಡವರಿಬ್ಬರಲ್ಲಿ ಒಬ್ಬೊಬ್ಬರನ್ನೂ ಐದೈದು ಬಾಣಗಳಿಂದ ಹೊಡೆದು ಯುಧಿಷ್ಠಿರನನ್ನು ಪೀಡಿಸಿದನು. ಆಗ ಮೇಘಗಳ ಜಾಲವು ಮೇಲೆದ್ದು ಬರುವಂತೆ ಬಾಣಮಯ ಜಾಲವು ಪಾಂಡವನ ಎದೆಯಮೇಲೆ ಬಂದಿತು. ಅವನ ಮೇಲೆ ಕ್ರುದ್ಧ ಶಲ್ಯನು ಸನ್ನತಪರ್ವ ಬಾಣಗಳಿಂದ ದಿಕ್ಕು ಉಪದಿಕ್ಕುಗಳನ್ನು ಮುಚ್ಚಿಬಿಟ್ಟನು. ಆಗ ಯುಧಿಷ್ಠಿರನು ಬಾಣಜಾಲಗಳಿಂದ ಪೀಡಿತನಾಗಿ ಇಂದ್ರನಿಂದ ಜಂಭಾಸುರನು ಹೇಗೋ ಹಾಗೆ ಹತವಿಕ್ರಾಂತನಾದನು.

ಧರ್ಮರಾಜನು ಹಾಗೆ ಮದ್ರರಾಜನಿಂದ ಪೀಡಿತನಾಗಿರಲು ಸಾತ್ಯಕಿ, ಭೀಮಸೇನ ಮತ್ತು ಮಾದ್ರೀಪುತ್ರ ಪಾಂಡವರೀರ್ವರು ರಥಗಳಿಂದ ಶಲ್ಯನನ್ನು ಸುತ್ತುವರೆದು ಯುದ್ಧದಲ್ಲಿ ಅವನನ್ನು ಪೀಡಿಸತೊಡಗಿದರು. ಅವನೊಬ್ಬನನ್ನು ಅನೇಕ ಮಹಾರಥರು ಪೀಡಿಸುತ್ತಿರುವುದನ್ನು ಕಂಡು ಸಾಧು ಸಾಧುವೆನ್ನುವ ಜೋರಾದ ಮಾತುಗಳು ಕೇಳಿಬಂದವು. ಸಿದ್ಧರು ಪ್ರಹರ್ಷಿತರಾದರು. ಸೇರಿದ ಮುನಿಗಳೂ ಕೂಡ ಆಶ್ಚರ್ಯದಿಂದ ಮಾತನಾಡಿಕೊಳ್ಳುತ್ತಿದ್ದರು. ರಣದಲ್ಲಿ ಭೀಮಸೇನನು ತನ್ನ ಪರಾಕ್ರಮಕ್ಕೆ ಕಂಟಕಪ್ರಾಯನಾಗಿದ್ದ ಶಲ್ಯನನ್ನು ಒಂದೇ ಬಾಣದಿಂದ ಹೊಡೆದು ಪುನಃ ಏಳರಿಂದ ಹೊಡೆದನು. ಸಾತ್ಯಕಿಯೂ ಕೂಡ ಧರ್ಮಪುತ್ರನನ್ನು

ರಕ್ಷಿಸಲೋಸುಗ ಮದ್ರೇಶ್ವರನನ್ನು ನೂರು ಬಾಣಗಳಿಂದ ಮುಚ್ಚಿ ಸಿಂಹನಾದಗೈದನು. ನಕುಲನು ಐದು ಮತ್ತು ಸಹದೇವನು ಏಳು ಬಾಣಗಳಿಂದ ಅವನನ್ನು ಹೊಡೆದು ನಂತರ ತಕ್ಷಣವೇ ಪುನಃ ಏಳರಿಂದ ಹೊಡೆದನು. ರಣದಲ್ಲಿ ಮಹಾರಥರಿಂದ ಪೀಡಿತನಾದ ಶಲ್ಯನು ಭಾರಸಾಧನ-ವೇಗವಾಗಿ ಕೊಲ್ಲುವ ಘೋರ ಕಾರ್ಮುಕವನ್ನು ಸೆಳೆದು ಸಾತ್ಯಕಿಯನ್ನು ಇಪ್ಪತ್ತೈದು ಬಾಣಗಳಿಂದ, ಭೀಮನನ್ನು ಎಪ್ಪತ್ತು ಬಾಣಗಳಿಂದ ಮತ್ತು ನಕುಲನನ್ನು ಏಳರಿಂದ ಹೊಡೆದನು. ಆಗ ಶಲ್ಯನು ಸಮರದಲ್ಲಿ ವಿಶಿಖದೊಂದಿಗೆ ಸಹದೇವನ ಧನುಸ್ಸನ್ನು ಭಲ್ಲದಿಂದ ತುಂಡರಿಸಿ ಅವನನ್ನು ಎಪ್ಪತ್ಮೂರು ಬಾಣಗಳಿಂದ ಹೊಡೆದನು. ಸಹದೇವನಾದರೋ ಸಮರದಲ್ಲಿ ಇನ್ನೊಂದು ಧನುಸ್ಸನ್ನು ಸಜ್ಜುಗೊಳಿಸಿ ಪ್ರಜ್ವಲಿಸುವ ಅಗ್ನಿಗೆ ಸಮಾನ ಸರ್ಪವಿಷದಾಕಾರದ ಐದು ಶರಗಳಿಂದ ತನ್ನ ಸೋದರಮಾವನನ್ನು ಹೊಡೆದನು. ಸಮರದಲ್ಲಿ ಅವನು ನತಪರ್ವ ಶರದಿಂದ ಅವನ ಸಾರಥಿಯನ್ನು ಹೊಡೆದು ಪುನಃ ಕ್ರುದ್ಧನಾಗಿ ಮೂರು ಬಾಣಗಳಿಂದ ಶಲ್ಯನನ್ನು ಹೊಡೆದನು. ಭೀಮಸೇನನು ಎಪ್ಪತ್ಮೂರು ಶರಗಳಿಂದಲೂ, ಸಾತ್ಯಕಿಯು ಒಂಭತ್ತರಿಂದಲೂ, ಹಾಗೆಯೇ ಧರ್ಮರಾಜನು ಅರವತ್ತು ಶರಗಳಿಂದಲೂ ಶಲ್ಯನ ದೇಹವನ್ನು ಚುಚ್ಚಿದರು. ಆ ಮಹಾರಥರಿಂದ ಚೆನ್ನಾಗಿ ಪ್ರಹರಿಸಲ್ಪಟ್ಟ ಶಲ್ಯನ ದೇಹದಿಂದ ಗೈರಕಾದಿ ಧಾತುಗಳುಳ್ಳ

ಕೆಂಪು ನೀರು ಪರ್ವತದಿಂದ ಸುರಿಯುವಂತೆ ರಕ್ತವು ಸುರಿಯಿತು. ಕೂಡಲೇ ಅವನು ಆ ಎಲ್ಲ ಮಹಾರಥರನ್ನೂ ಐದೈದು ಶರಗಳಿಂದ ಹೊಡೆದನು. ಅದೊಂದು ಅದ್ಭುತವಾಗಿತ್ತು. ಅನಂತರ ಇನ್ನೊಂದು ಭಲ್ಲದಿಂದ ಆ ಸುಮಹಾರಥನು ಧರ್ಮಪುತ್ರನ ಧನುಸ್ಸನ್ನು ತುಂಡರಿಸಿದನು. ಆಗ ಮಹಾರಥ ಧರ್ಮಪುತ್ರನು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಶರಗಳಿಂದ ಕುದುರೆಗಳು, ಸಾರಥಿ, ಧ್ವಜ ಮತ್ತು ರಥಗಳ ಸಹಿತ ಶಲ್ಯನನ್ನು ಮುಚ್ಚಿಬಿಟ್ಟನು. ಸಮರದಲ್ಲಿ ಧರ್ಮಪುತ್ರನ ಸಾಯಕಗಳಿಂದ ಮುಚ್ಚಿಹೋದ ಶಲ್ಯನು ಕೂಡಲೇ ಯುಧಿಷ್ಠಿರನನ್ನು ಹತ್ತು ನಿಶಿತ ಶರಗಳಿಂದ ಪ್ರಹರಿಸಿದನು. ಧರ್ಮಪುತ್ರನನ್ನು ಶರಗಳಿಂದ ಪೀಡಿಸಲು, ಕ್ರುದ್ಧನಾದ ಸಾತ್ಯಕಿಯು ಶೂರ ಮದ್ರಾಧಿಪನನ್ನು ಶರಸಮೂಹಗಳಿಂದ ತುಂಬಿಬಿಟ್ಟನು. ಶಲ್ಯನು ಕ್ಷುರಪ್ರದಿಂದ ಸಾತ್ಯಕಿಯ ಮಹಾ ಧನುಸ್ಸನ್ನು ಕತ್ತರಿಸಿದನು ಮತ್ತು ಭೀಮಸೇನನೇ ಮೊದಲಾದವರನ್ನು ಮೂರು ಮೂರು ಬಾಣಗಳಿಂದ ಹೊಡೆದನು.

ಆಗ ಕ್ರುದ್ಧ ಸತ್ಯವಿಕ್ರಮಿ ಸಾತ್ಯಕಿಯು ಸ್ವರ್ಣದಂಡದ ತೋಮರವನ್ನು ಶಲ್ಯನ ಮೇಲೆ ಪ್ರಯೋಗಿಸಿದನು. ಯುದ್ಧದಲ್ಲಿ ಶಲ್ಯನನ್ನು ಸಂಹರಿಸಲೋಸುಗ ಭೀಮಸೇನನು ಸರ್ಪದಂತೆ ಪ್ರಜ್ವಲಿಸುತ್ತಿದ್ದ

ನಾರಾಚವನ್ನೂ, ನಕುಲನು ಶಕ್ತಿಯನ್ನೂ, ಸಹದೇವನು ಗದೆಯನ್ನೂ ಮತ್ತು ಧರ್ಮರಾಜನು ಶತಘ್ನಿಯನ್ನೂ ಪ್ರಯೋಗಿಸಿದರು. ಈ ಐವರ ಭುಜಗಳಿಂದ ಹೊರಟ ಅಸ್ತ್ರಗಳು ತನ್ನ ಮೇಲೆ ಬೀಳುವುದರೊಳಗೇ ಶಲ್ಯನು ಅವುಗಳನ್ನು ನಿವಾರಿಸಿದನು. ಸಾತ್ಯಕಿಯು ಕಳುಹಿಸಿದ ತೋಮರವನ್ನು ಭಲ್ಲಗಳಿಂದ ತುಂಡರಿಸಿದನು. ಭೀಮನು ಪ್ರಯೋಗಿಸಿದ ಕನಕಭೂಷಣ ಶರವನ್ನು ಎರಡಾಗಿ ತುಂಡರಿಸಿದನು. ಶರೌಘಗಳಿಂದ ನಕುಲನು ಪ್ರಯೋಗಿಸಿದ ಭಯವನ್ನುಂಟುಮಾಡುವ ಹೇಮದಂಡಯುಕ್ತ ಶಕ್ತಿಯನ್ನು ಮತ್ತು ಸಹದೇವನ ಗದೆಯನ್ನು ನಿವಾರಿಸಿದನು. ಧರ್ಮರಾಜನ ಶರಗಳನ್ನೂ ಶತಘ್ನಿಯನ್ನೂ ತುಂಡರಿಸಿ, ಪಾಂಡುಪುತ್ರರು ನೋಡುತ್ತಿದ್ದಂತೆಯೇ ಸಿಂಹನಾದಗೈದನು. ಯುದ್ಧದಲ್ಲಿ ಶತ್ರುವಿನ ಆ ವಿಜಯವನ್ನು ಶೈನೇಯನಿಗೆ ಸಹಿಸಿಕೊಳ್ಳಲಾಗಲಿಲ್ಲ. ಆಗ ಕ್ರೋಧಮೂರ್ಛಿತ ಸಾತ್ಯಕಿಯು ಇನ್ನೊಂದು ಧನುಸ್ಸನ್ನೆತ್ತಿಕೊಂಡು ಎರಡು ಬಾಣಗಳಿಂದ ಮದ್ರೇಶ್ವರನನ್ನೂ ಮೂರರಿಂದ ಅವನ ಸಾರಥಿಯನ್ನೂ ಹೊಡೆದನು. ಆಗ ಕ್ರುದ್ಧ ಶಲ್ಯನು ಅವರೆಲ್ಲರನ್ನು – ಮಹಾಗಜಗಳನ್ನು ಅಂಕುಶಗಳಿಂದ ಹೇಗೋ ಹಾಗೆ – ಹತ್ತು ಬಾಣಗಳಿಂದ ಪ್ರಹರಿಸಿದನು. ಸಮರದಲ್ಲಿ ಮದ್ರರಾಜನಿಂದ ತಡೆಯಲ್ಪಡುತ್ತಿದ್ದ ಆ ಶತ್ರುನಿಷೂದನ ಮಹಾರಥರು ಅವನ ಎದುರು ನಿಲ್ಲಲು ಶಕ್ಯರಾಗಿರಲಿಲ್ಲ.

ಆಗ ಶಲ್ಯನ ವಿಕ್ರಮವನ್ನು ನೋಡಿ ರಾಜಾ ದುರ್ಯೋಧನನು ಪಾಂಡವ-ಪಾಂಚಾಲ-ಸೃಂಜಯರು ಹತರಾದರೆಂದೇ ಭಾವಿಸಿದನು. ಆಗ ಭೀಮಸೇನನು ಮನಸಾ ಪ್ರಾಣಗಳನ್ನೇ ಪರಿತ್ಯಜಿಸಿ ಮದ್ರಾಧಿಪನೊಡನೆ ಯುದ್ಧಮಾಡಿದನು. ನಕುಲ, ಸಹದೇವ ಮತ್ತು ಸಾತ್ಯಕಿಯರು ಎಲ್ಲಕಡೆಗಳಲ್ಲಿ ಶರಗಳನ್ನು ಎರಚುತ್ತಾ ಶಲ್ಯನನ್ನು ತಡೆದರು. ಮದ್ರರಾಜನು ಆ ನಾಲ್ಕು ಪಾಂಡವ ಮಹಾರಥರಿಂದ ಸುತ್ತುವರೆಯಲ್ಪಟ್ಟು ಯುದ್ಧಮಾಡಿದನು. ಮಹಾಯುದ್ಧದಲ್ಲಿ ಧರ್ಮಸುತನು ಮದ್ರರಾಜನ ಚಕ್ರರಕ್ಷಕನನ್ನು ಕ್ಷುರಪ್ರದಿಂದ ಸಂಹರಿಸಿದನು. ಚಕ್ರರಕ್ಷಕನು ಹತನಾಗಲು ಶೂರ ಮಹಾರಥಿ ಬಲವಾನ್ ಮದ್ರರಾಜನು ಶರಗಳಿಂದ ಸೈನಿಕರನ್ನು ಮುಚ್ಚಿಬಿಟ್ಟನು. ಸೈನಿಕರು ಶಲ್ಯನ ಬಾಣಗಳಿಂದ ಮುಚ್ಚಿಹೋಗಿರುವುದನ್ನು ವೀಕ್ಷಿಸಿದ ಯುಧಿಷ್ಠಿರನು ಚಿಂತಿಸತೊಡಗಿದನು: "ಮಾಧವನ ಮಹಾ ವಚನವು ಹೇಗೆ ತಾನೇ ಸತ್ಯವಾಗಬಲ್ಲದು? ರಣದಲ್ಲಿ ಕ್ರುದ್ಧನಾದ ಈ ರಾಜನು ನನ್ನ ಸೇನೆಯನ್ನು ಸಂಪೂರ್ಣವಾಗಿ ನಾಶಮಾಡದೇ ಇರುವನೇ?"

ಅನಂತರ ರಥ-ಗಜ-ಅಶ್ವ ಸೇನಾ ಸಮೇತರಾದ ಪಾಂಡವರು ಮದ್ರೇಶ್ವರನನ್ನು ಎಲ್ಲ ಕಡೆಗಳಿಂದ ಪೀಡಿಸುತ್ತಾ ಅವನ ಮೇಲೆ ಧಾಳಿನಡೆಸಿದರು. ಮೇಲೆದ್ದ ದೊಡ್ಡ ದೊಡ್ಡ ಮೇಘಗಳನ್ನು

ಭಿರುಗಾಳಿಯು ಹೇಗೋ ಹಾಗೆ ಅವನು ಸಮರದಲ್ಲಿ ನಾನಾ ಶಸ್ತ್ರಗಳಿಂದ ಕೂಡಿದ್ದ ಆ ಅನೇಕ ಶರವೃಷ್ಟಿಯನ್ನು ನಾಶಗೊಳಿಸಿದನು. ಮಿಡತೆಗಳ ಹಿಂಡುಗಳಂತೆ ಶಲ್ಯನಿಂದ ಪ್ರಯೋಗಿಸಲ್ಪಟ್ಟು ಆಕಾಶವನ್ನೇ ತುಂಬಿದ್ದ, ಬಾಣಗಳ ವೃಷ್ಟಿಯು ಸುರಿಯಿತು. ಮದ್ರರಾಜನಿಂದ ಪ್ರಯೋಗಿಸಲ್ಪಟ್ಟ ಆ ಬಾಣಗಳು ಮಿಡತೆಗಳ ಗುಂಪುಗಳಂತೆ ರಣಮೂರ್ಧನಿಯಲ್ಲಿ ಬೀಳುತ್ತಿದ್ದವು. ಮದ್ರರಾಜನ ಧನುಸ್ಸಿನಿಂದ ಹೊರಟ ಆ ಕನಕಭೂಷಣ ಶರಗಳಿಂದ ತುಂಬಿಹೋದ ಆಕಾಶದಲ್ಲಿ ಸ್ವಲ್ಪವೂ ಸ್ಥಳಾವಕಾಶವಿಲ್ಲದಂತಾಯಿತು. ಅವನು ಸೃಷ್ಟಿಸಿದ ಮಹಾ ಬಾಣಾಂಧಕಾರದಿಂದ ಕೌರವರಿಗಾಗಲೀ ಪಾಂಡವರಿಗಾಗಲೀ ಏನೂ ಕಾಣುತ್ತಿರಲಿಲ್ಲ. ಅಲ್ಲಿ ಮಹಾಭಯವೇ ಉತ್ಪನ್ನವಾಯಿತು. ಮದ್ರರಾಜನ ಹಸ್ತಲಾಘವದಿಂದ ಸೃಷ್ಟಿಸಲ್ಪಟ್ಟ ಆ ಶರವೃಷ್ಟಿಯಿಂದ ಪಾಂಡವರ ಸೇನಾಸಾಗರವು ಅಲ್ಲೋಲಕಲ್ಲೋಲವಾಗುತ್ತಿರುವುದನ್ನು ನೋಡಿ ದೇವ-ಗಂಧರ್ವ-ದಾನವರಲ್ಲಿಯೂ ಪರಮ ವಿಸ್ಮಯವುಂಟಾಯಿತು. ಶಲ್ಯನು ಆ ಪ್ರಯತ್ನಶೀಲರೆಲ್ಲರನ್ನೂ ಶರಗಳಿಂದ ಪೀಡಿಸಿ, ಧರ್ಮರಾಜನನ್ನೂ ಶರಗಳಿಂದ ಮುಚ್ಚಿ, ಪುನಃ ಪುನಃ ಸಿಂಹನಾದಗೈದನು. ಸಮರದಲ್ಲಿ ಅವನಿಂದ ಮುಸುಕಲ್ಪಟ್ಟ ಪಾಂಡವ ಮಹಾರಥರು ಆಗ ಯುದ್ಧದಲ್ಲಿ ಆ ಮಹಾರಥ ಶಲ್ಯನನ್ನು ಎದುರಿಸಿ ಯುದ್ಧಮಾಡಲು ಶಕ್ಯರಾಗಿರಲಿಲ್ಲ.

ಆದರೂ ಧರ್ಮರಾಜನ ನಾಯಕತ್ವದಲ್ಲಿದ್ದ ಭೀಮಸೇನನೇ ಮೊದಲಾದ ಮಹಾರಥರು ಸಮರದಲ್ಲಿ ಆಹವಶೋಭೀ ಶೂರ ಶಲ್ಯನನ್ನು ಬಿಟ್ಟು ಹಿಂದೆ ಸರಿಯಲಿಲ್ಲ.

## ಅರ್ಜುನ-ಅಶ್ವತ್ಥಾಮರ ಯುದ್ಧ; ಅಶ್ವತ್ಥಾಮನಿಂದ ಪಾಂಚಾಲ ಸುರಥನ ವಧೆ

ದ್ರೌಣಿ ಮತ್ತು ಅವನನ್ನು ಅನುಸರಿಸಿ ಹೋಗುತ್ತಿದ್ದ ತ್ರಿಗರ್ತರ ಮಹಾರಥ ಶೂರರು ಅರ್ಜುನನನ್ನು ಅನೇಕ ಲೋಹಮಯ ಬಾಣಗಳಿಂದ ಗಾಯಗೊಳಿಸಿದರು. ಆಗ ಅರ್ಜುನನು ದ್ರೌಣಿಯನ್ನು ಮೂರು ಶಿಲೀಮುಖಿಗಳಿಂದ ಹೊಡೆದನು. ಇತರ ಮಹೇಷ್ವಾಸರನ್ನೂ ಎರಡೆರಡು ಬಾಣಗಳಿಂದ ಹೊಡೆದು ಪುನಃ ಅವರನ್ನು ಶರವರ್ಷಗಳಿಂದ ಮುಚ್ಚಿಬಿಟ್ಟನು. ಮುಳ್ಳುಗಳಂತಿದ್ದ ಬಾಣಗಳು ನಾಟಿಕೊಂಡಿದ್ದರೂ ಪಾರ್ಥನ ನಿಶಿತ ಶರಗಳಿಂದ ಪ್ರಹರಿಸಲ್ಪಡುತ್ತಿದ್ದ ಕೌರವರು ಸಮರದಲ್ಲಿ ಪಾರ್ಥನನ್ನು ಬಿಟ್ಟು ಕದಲಲಿಲ್ಲ. ದ್ರೋಣಪುತ್ರನ ನಾಯಕತ್ವದಲ್ಲಿ ಆ ಮಹಾರಥರು ರಥಸಮೂಹಗಳಿಂದ ಅರ್ಜುನನನ್ನು ಸುತ್ತುವರೆದು ಯುದ್ಧಮಾಡುತ್ತಿದ್ದರು. ಅವರು ಪ್ರಯೋಗಿಸುತ್ತಿದ್ದ ಸುವರ್ಣ ವಿಭೂಷಿತ ಶರಗಳು ಬೇಗನೇ ಅರ್ಜುನನ ರಥಪೀಠವನ್ನು

ತುಂಬಿಬಿಟ್ಟವು. ಆಗ ಸರ್ವಧನ್ವಿಗಳಲ್ಲಿ ವೃಷಭರಂತಿದ್ದ ಯುದ್ಧದುರ್ಮದ ಮಹೇಷ್ವಾಸ ಕೃಷ್ಣರಿಬ್ಬರ ಅಂಗಗಳೂ ತಮ್ಮ ಶರಗಳಿಂದ ಕ್ಷತವಿಕ್ಷತವಾಗಿರುವುದನ್ನು ನೋಡಿ ಅವರು ಪ್ರಹೃಷ್ಟರಾದರು. ಅರ್ಜುನನ ರಥದ ಮೂಕಿ, ಚಕ್ರಗಳು, ಹಗ್ಗಗಳು, ನೊಗ, ತೋಳುಮರ – ಎಲ್ಲವೂ ಬಾಣಮಯವಾಗಿದ್ದವು. ಅದೊಂದು ಅಭೂತಪೂರ್ವವಾಗಿದ್ದಿತು. ಅಲ್ಲಿ ಕೌರವರು ಪಾರ್ಥನಿಗೆ ಕೊಟ್ಟ ಉಪಟಳವನ್ನು ಇದಕ್ಕೂ ಮೊದಲು ಯಾರೂ ಕಂಡಿರಲಿಲ್ಲ ಮತ್ತು ಕೇಳಿರಲಿಲ್ಲ. ವಿಚಿತ್ರ ಪುಂಖಗಳ ನಿಶಿತ ಶರಗಳಿಂದ ಎಲ್ಲಕಡೆ ತುಂಬಿಹೋಗಿದ್ದ ಅವನ ರಥವು ರಣಭೂಮಿಯಲ್ಲಿ ಉರಿಯುತ್ತಿರುವ ನೂರಾರು ಉಲ್ಕೆಗಳಿರುವ ವಿಮಾನದಂತೆಯೇ ಕಾಣುತ್ತಿತ್ತು. ಆಗ ಅರ್ಜುನನು ಸನ್ನತಪರ್ವ ಶರಗಳಿಂದ ಮೇಘವು ಪರ್ವತವನ್ನು ಮಳೆಯಿಂದ ಹೇಗೋ ಹಾಗೆ ಸೇನಾಸಮೂಹಗಳನ್ನು ಮುಚ್ಚಿಬಿಟ್ಟನು. ಸಮರದಲ್ಲಿ ಪಾರ್ಥನಾಮಾಂಕಿತ ಶರಗಳಿಂದ ವಧಿಸಲ್ಪಡುತ್ತಿರುವ ಅವರು ಪಾರ್ಥನನ್ನು ಬಾಣರೂಪದಲ್ಲಿಯೇ ಕಾಣುತ್ತಾ ಸರ್ವವೂ ಪಾರ್ಥಮಯವಾಗಿಬಿಟ್ಟಿರುವುದೆಂದೇ ಭಾವಿಸಿದರು. ಆಗ ಅದ್ಭುತ ಶರಜ್ವಾಲೆ ಮತ್ತು ಧನುಸ್ಸಿನ ಟೇಂಕಾರ ಶಬ್ಧದ ಮಹಾ ಭಿರುಗಾಳಿಯಿಂದ ಪಾರ್ಥನೆಂಬ ಪಾವಕನು ನಿನ್ನ ಸೇನೆಯನ್ನು ಇಂಧನದಂತೆ ಸುಟ್ಟುಬಿಟ್ಟನು.

ರಣಭೂಮಿಯಲ್ಲಿ ಪಾರ್ಥನ ರಥಮಾರ್ಗದಲ್ಲಿ ರಥಗಳೊಂದಿಗೆ ಚಕ್ರಗಳು-ನೊಗಗಳು-ತೂಣೀರಗಳು-ಪತಾಕೆಗಳು- ಧ್ವಜಗಳು-ಈಷಾದಂಡಗಳು-ಹಗ್ಗಗಳು-ತ್ರಿವೇಣುಗಳು-ಅಚ್ಚುಮರಗಳು-ಲಗಾಮುಗಳು-ಚಾವಟಿಗಳು-ಕುಂಡಲ-ಶಿರಸ್ತ್ರಾಣಗಳನ್ನು ಧರಿಸಿದ್ದ ಶಿರಸ್ಸುಗಳು-ಭುಜಗಳು-ಹೆಗಲುಗಳು-ಛತ್ರ-ವ್ಯಜನಗಳು-ಕಿರೀಟಗಳು ರಾಶಿ ರಾಶಿಯಾಗಿ ಬಿದ್ದಿರುವುದು ಕಂಡುಬಂದಿತು. ಮಾಂಸ-ರಕ್ತಗಳ ಕೆಸರಿನಿಂದ ರಣಭೂಮಿಯು ತಿರುಗಾಡಲು ದುರ್ಗಮವಾಗಿ, ಅದು ಹೇಡಿಗಳಿಗೆ ಭಯವನ್ನುಂಟುಮಾಡುವ ಮತ್ತು ಶೂರರ ಹರ್ಷವನ್ನು ಹೆಚ್ಚಿಸುವ, ರುದ್ರದೇವನ ಆಟದ ಮೈದಾನದಂತಾಯಿತು. ಸಮರದಲ್ಲಿ ಪರಂತಪ ಪಾರ್ಥನು ಎರಡು ಸಾವಿರ ರಥಗಳನ್ನು ಧ್ವಂಸಮಾಡಿ ಧೂಮರಹಿತ ಅಗ್ನಿಜ್ವಾಲೆಯಂತೆ ಪ್ರಕಾಶಿಸಿದನು. ಚರಾಚರಗಳೊಂದಿಗೆ ಜಗತ್ತನ್ನೇ ಸುಟ್ಟ ಭಗವಾನ್ ಅಗ್ನಿಯು ಧೂಮರಹಿತನಾಗಿ ಕಾಣುವಂತೆ ಮಹಾರಥ ಪಾರ್ಥನು ತೋರಿದನು. ಪಾಂಡವನ ಪರಾಕ್ರಮವನ್ನು ನೋಡಿ ದ್ರೌಣಿಯಾದರೋ ಉನ್ನತ ಧ್ವಜವುಳ್ಳ ರಥದಿಂದ ಪಾಂಡವನನ್ನು ತಡೆದನು. ಆ ಇಬ್ಬರು ಪುರುಷವ್ಯಾಘ್ರ-ಶ್ವೇತಾಶ್ವ ಧನ್ವಿಶ್ರೇಷ್ಠರು ಪರಸ್ಪರರನ್ನು ವಧಿಸಲು ಬಯಸಿ ಸಂಘರ್ಷಿಸಿದರು. ಆಗ ಮಳೆಗಾಲದಲ್ಲಿ ಮೇಘಗಳು ಮಳೆಸುರಿಸುವಂತೆ ಅವರ ಸುದಾರುಣ ಬಾಣವರ್ಷವು ಸುರಿಯಿತು. ಅನ್ಯೋನ್ಯರೊಂದಿಗೆ ಸ್ಪರ್ಧಿಸುತ್ತಿರುವ

ಅವರಿಬ್ಬರೂ ಎರಡು ಗೂಳಿಗಳು ತಮ್ಮ ಕೋಡುಗಳಿಂದ ಹೇಗೋ ಹಾಗೆ ಸನ್ನತಪರ್ವ ಶರಗಳಿಂದ ಅನ್ಯೋನ್ಯರನ್ನು ಗಾಯಗೊಳಿಸಿದರು. ಬಹಳ ಸಮಯದವರೆಗೆ ಅವರಿಬ್ಬರ ಯುದ್ಧವು ಸಮಸಮವಾಗಿಯೇ ನಡೆಯಿತು. ಅಲ್ಲಿ ಘೋರ ಅಸ್ತ್ರಗಳ ಮಹಾ ಸಂಗಮವು ನಡೆಯಿತು.

ಆಗ ದ್ರೌಣಿಯು ಅರ್ಜುನನನ್ನು ಹನ್ನೆರಡು ರುಕ್ಮಪುಂಖ ತೇಜಯುಕ್ತ ಬಾಣಗಳಿಂದ ಮತ್ತು ವಾಸುದೇವನನ್ನು ಹತ್ತು ಬಾಣಗಳಿಂದ ಹೊಡೆದನು. ಆ ಮಹಾಯುದ್ಧದಲ್ಲಿ ಮುಹೂರ್ತಕಾಲ ಗುರುಪುತ್ರನನ್ನು ಗೌರವಿಸಿ, ಜೋರಾಗಿ ನಗುತ್ತಾ ಬೀಭತ್ಸುವು ಗಾಂಡೀವ ಧನುಸ್ಸನ್ನು ದೀರ್ಘವಾಗಿ ಸೆಳೆದನು. ಸವ್ಯಸಾಚಿಯು ಅವನನ್ನು ಅಶ್ವ-ಸೂತ-ರಥಗಳಿಂದ ವಿಹೀನನನ್ನಾಗಿ ಮಾಡಿ ಮೂರು ಸಾಯಕಗಳಿಂದ ಮೃದುಪೂರ್ವಕವಾಗಿಯೇ ಹೊಡೆದನು. ಕುದುರೆಗಳು ಹತಗೊಳ್ಳಲು ದ್ರೋಣಪುತ್ರನು ರಥದ ಮೇಲೆಯೇ ನಿಂತು ಲೋಹಮಯ ಪರಿಘದಂತಿದ್ದ ಮುಸಲವನ್ನು ಪಾಂಡುಪುತ್ರನ ಮೇಲೆ ಎಸೆದನು. ಮೇಲೆ ಬೀಳುತ್ತಿದ್ದ ಆ ಹೇಮಪಟ್ಟವಿಭೂಷಿತ ಮುಸಲವನ್ನು ತಕ್ಷಣವೇ ಪಾರ್ಥನು ಏಳು ತುಂಡುಗಳನ್ನಾಗಿ ಕತ್ತರಿಸಿದನು. ಆ ಮುಸಲವು ತುಂಡಾಗಿದ್ದುದನ್ನು ಕಂಡ ದ್ರೌಣಿಯು ಪರ್ವತಶಿಖರದಂತಿದ್ದ ಘೋರ ಪರಿಘವನ್ನು ತೆಗೆದುಕೊಂಡು ಅದನ್ನು ಪಾರ್ಥನ ಮೇಲೆ ಎಸೆದನು.

ಕ್ರುದ್ಧ ಅಂತಕನಂತಿರುವ ಆ ಪರಿಘವನ್ನು ನೋಡಿದ ಅರ್ಜುನನು ತ್ವರೆಮಾಡಿ ಐದು ಉತ್ತಮ ಸಾಯಕಗಳಿಂದ ಅದನ್ನು ನಾಶಗೊಳಿಸಿದನು. ಪಾರ್ಥನ ಬಾಣಗಳಿಂದ ಕತ್ತರಿಸಲ್ಪಟ್ಟ ಆ ಪರಿಘವು ರಾಜರ ಮನಸ್ಸನ್ನು ಸೀಳುವಂತೆ ಶಬ್ಧಮಾಡುತ್ತಾ ಭೂಮಿಯ ಮೇಲೆ ಬಿದ್ದಿತು. ಅನಂತರ ಪಾಂಡವನು ದ್ರೌಣಿಯನ್ನು ಬೇರೆ ಮೂರು ಬಾಣಗಳಿಂದ ಹೊಡೆದನು. ಪಾರ್ಥನಿಂದ ಬಲವಾಗಿ ಪ್ರಹರಿಸಲ್ಪಟ್ಟರೂ ಆ ಸುಮಹಾಬಲ ದ್ರೌಣಿಯು ಪೌರುಷದಿಂದ ಸ್ವಲ್ಪವೂ ವಿಚಲಿತನಾಗಲಿಲ್ಲ.

ಆಗ ಪಾಂಚಾಲರ ಮಹಾರಥ ಸುರಥನು ದ್ರೌಣಿಯನ್ನು ಆಕ್ರಮಣಿಸಿದನು. ದೃಢ ಶ್ರೇಷ್ಠ ಧನುಸ್ಸನ್ನು ಸೆಳೆದು ಸರ್ಪಾಗ್ನಿಸದೃಶ ಬಾಣಗಳಿಂದ ಅಶ್ವತ್ಥಾಮನನ್ನು ಮುಚ್ಚಿದನು. ಸಮರದಲ್ಲಿ ಕ್ರುದ್ಧನಾಗಿ ತನ್ನ ಮೇಲೆ ಎರಗುತ್ತಿದ್ದ ಸುರಥನನ್ನು ನೋಡಿ ದ್ರೌಣಿಯು ದಂಡದಿಂದ ಪೆಟ್ಟುತಿಂದ ಸರ್ಪದಂತೆ ಅತಿ ಕುಪಿತನಾದನು. ಹುಬ್ಬನ್ನು ಗಂಟಿಕ್ಕಿ ಕಟವಾಯಿಯನ್ನು ನೆಕ್ಕುತ್ತಾ ಸುರಥನನ್ನು ಕೋಪದಿಂದ ದಿಟ್ಟಿಸಿ ನೋಡುತ್ತಾ ಧನುಸ್ಸಿನ ಶಿಂಜನಿಯನ್ನು ತೀಡಿ ಯಮದಂಡದಂತೆ ಬೆಳಗುತ್ತಿದ್ದ ತೀಕ್ಷ್ಣ ನಾರಾಚವನ್ನು ಅವನ ಮೇಲೆ ಪ್ರಯೋಗಿಸಿದನು. ಶಕ್ರನಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧವು ಭೂಮಿಯನ್ನು ಭೇದಿಸಿ

ಹೋಗುವಂತೆ ಅದು ಅತಿವೇಗದಿಂದ ಸುರಥನ ಹೃದಯವನ್ನು ಭೇದಿಸಿ ಭೂಮಿಯನ್ನು ಹೊಕ್ಕಿತು. ವಜ್ರಾಯುಧ ಪ್ರಹಾರದಿಂದ ಭಿನ್ನ ಪರ್ವತ ಶಿಖರವು ಕೆಳಕ್ಕೆ ಬೀಳುವಂತೆ ಆ ನಾರಾಚದಿಂದ ಪ್ರಹೃತನಾದ ಸುರಥನು ಭಗ್ನನಾಗಿ ಭೂಮಿಯ ಮೇಲೆ ಬಿದ್ದನು.

ಅನಂತರ ದ್ರೌಣಿಯು ಸಂಶಪ್ತಕರಿಂದ ಸುತ್ತುವರೆಯಲ್ಪಟ್ಟು ಅರ್ಜುನನೊಡನೆ ಯುದ್ಧದಲ್ಲಿ ತೊಡಗಿದನು. ಸೂರ್ಯನು ನಡುನೆತ್ತಿಗೆ ಬರಲು ಶತ್ರುಗಳೊಂದಿಗೆ ಅರ್ಜುನನ ಯಮರಾಷ್ಟ್ರವನ್ನು ವರ್ಧಿಸುವ ಮಹಾ ಯುದ್ಧವು ನಡೆಯಿತು. ಒಬ್ಬನೇ ಅನೇಕ ವೀರ ಯೋಧರೊಡನೆ ಯುದ್ಧಮಾಡುತ್ತಿರುವ ಅರ್ಜುನನ ಪರಾಕ್ರಮವು ಒಂದು ಆಶ್ಚರ್ಯವಾಗಿತ್ತು. ದೈತ್ಯರ ಮಹಾಸೇನೆಯೊಡನೆ ಹಿಂದೆ ಶತಕ್ರತುವಿನ ಯುದ್ಧವು ಹೇಗಿತ್ತೋ ಹಾಗೆ ಶತ್ರುಗಳೊಂದಿಗೆ ಅರ್ಜುನನ ಯುದ್ಧವು ಮಹಾ ವಿಮರ್ದನಕಾರಿಯಾಗಿತ್ತು.

## ಸಂಕುಲ ಯುದ್ಧ

ದುರ್ಯೋಧನ ಮತ್ತು ಧೃಷ್ಟದ್ಯುಮ್ನರು ಬಾಣ-ಶಕ್ತ್ಯಾಯುಧಗಳಿಂದ ಕೂಡಿದ್ದ ಮಹಾ ಯುದ್ಧದಲ್ಲಿ ತೊಡಗಿದರು. ವರ್ಷಾಕಾಲದಲ್ಲಿ ಮೋಡಗಳು ಜಲಧಾರೆಗಳನ್ನು ಸುರಿಸುವಂತೆ ಅಲ್ಲಿ ಸಹಸ್ರಾರು ಬಾಣಗಳ ಮಳೆಯೇ ಸುರಿಯಿತು. ದುರ್ಯೋಧನನು ಪಾರ್ಷತನನ್ನು

ಐದು ಉಕ್ಕಿನ ಶರಗಳಿಂದ ಹೊಡೆದು ಆ ದ್ರೋಣಹಂತಾರನನ್ನು ಪುನಃ ಏಳು ಉಗ್ರಬಾಣಗಳಿಂದ ಪ್ರಹರಿಸಿದನು. ಧೃಷ್ಟದ್ಯುಮ್ನನಾದರೋ ಸಮರದಲ್ಲಿ ದುರ್ಯೋಧನನನ್ನು ಎಪ್ಪತ್ತು ವಿಶಿಖಗಳಿಂದ ಪೀಡಿಸಿದನು. ರಾಜನು ಪೀಡಿತನಾಗುತ್ತಿರುವುದನ್ನು ನೋಡಿ ಅವನ ಸಹೋದರರು ಮಹಾ ಸೇನೆಯೊಂದಿಗೆ ಪಾರ್ಷತನನ್ನು ಸುತ್ತುವರೆದು ಆಕ್ರಮಣಿಸಿದರು. ಎಲ್ಲಕಡೆಗಳಿಂದಲೂ ಆ ಶೂರ ಅತಿರಥರಿಂದ ಸುತ್ತುವರೆಯಲ್ಪಟ್ಟ ಧೃಷ್ಟದ್ಯುಮ್ನನು ಸಮರದಲ್ಲಿ ತನ್ನ ಹಸ್ತಲಾಘವವನ್ನು ಚೆನ್ನಾಗಿ ಪ್ರದರ್ಶಿಸಿದನು.

ಶಿಖಂಡಿಯು ಪ್ರಭದ್ರಕರಿಂದ ಕೂಡಿ ಮಹಾರಥ ಗೌತಮ - ಕೃತವರ್ಮರೊಡನೆ ಯುದ್ಧಮಾಡಿದನು. ಅಲ್ಲಿ ಕೂಡ ಪ್ರಾಣಗಳನ್ನೇ ತೊರೆದು ಯುದ್ಧವೆಂಬ ದ್ಯೂತದಲ್ಲಿ ಪ್ರಾಣಗಳನ್ನೇ ಪಣವನ್ನಾಗಿಟ್ಟು ಘೋರರೂಪದ ಯುದ್ಧವು ನಡೆಯಿತು.

ಶಲ್ಯನಾದರೋ ಸರ್ವ ದಿಕ್ಕುಗಳಲ್ಲಿ ಶರವರ್ಷಗಳನ್ನು ಸುರಿಸುತ್ತಾ ಸಾತ್ಯಕಿ-ವೃಕೋದರರೊಡನಿದ್ದ ಪಾಂಡವರನ್ನು ಪೀಡಿಸತೊಡಗಿದನು. ಹಾಗೆಯೇ ಅವನು ಯುದ್ಧ ಪರಾಕ್ರಮದಲ್ಲಿ ಯಮನ ಸಮನಾಗಿದ್ದ ಯಮಳರೊಂದಿಗೆ ವೀರ್ಯ-ಬಲಗಳೊಂದಿಗೆ ಹೋರಾಡಿದನು. ಶಲ್ಯನ ಸಾಯಕಗಳಿಂದ ಪೀಡಿತರಾದ ಪಾಂಡವ ಮಹಾರಥರು ಆ

ಮಹಾಯುದ್ಧದಲ್ಲಿ ಯಾವ ತ್ರಾತಾರನನ್ನೂ ಕಾಣದೇ ಹೋದರು.

ಧರ್ಮರಾಜನೂ ಪೀಡಿತನಾಗಿರಲು ಶೂರ ಮಾದ್ರಿನಂದನ ನಕುಲನು ವೇಗದಿಂದ ತನ್ನ ಸೋದರ ಮಾವ ಶಲ್ಯನನ್ನು ಆಕ್ರಮಣಿಸಿದನು. ನಕುಲನು ಶಲ್ಯನನ್ನು ಬಾಣಗಳಿಂದ ಮುಚ್ಚಿಬಿಟ್ಟು, ನಸುನಗುತ್ತಾ ಅವನ ಎದೆಗೆ ಹತ್ತು ಬಾಣಗಳಿಂದ ಹೊಡೆದನು. ಸೋದರಳಿಯನ ಸ್ವರ್ಣಪುಂಖಗಳ ಲೋಹಮಯ ಬಾಣಗಳಿಂದ ಪೀಡಿತನಾದ ಶಲ್ಯನು ನತಪರ್ವ-ಪತ್ರಿಗಳಿಂದ ನಕುಲನನ್ನು ಪೀಡಿಸತೊಡಗಿದನು.

ಆಗ ಯುಧಿಷ್ಠಿರ, ಭೀಮಸೇನ, ಸಾತ್ಯಕಿ ಮತ್ತು ಸಹದೇವರು ಮದ್ರರಾಜನನ್ನು ಮುತ್ತಿದರು. ರಥಘೋಷಗಳಿಂದ ದಿಕ್ಕು-ಉಪದಿಕ್ಕುಗಳನ್ನು ಮೊಳಗಿಸುತ್ತಾ, ಭೂಮಿಯನ್ನೇ ನಡುಗಿಸುತ್ತಾ ತನ್ನ ಮೇಲೆ ಬೀಳುತ್ತಿದ್ದ ಅವರನ್ನು ಸಮರದಲ್ಲಿ ಸೇನಾಪತಿ- ಶಲ್ಯನು ತಡೆದನು. ಅವನು ಯುಧಿಷ್ಠಿರನನ್ನು ಮೂರು ಬಾಣಗಳಿಂದಲೂ, ಭೀಮಸೇನನನ್ನು ಏಳರಿಂದಲೂ, ಸಾತ್ಯಕಿಯನ್ನು ನೂರರಿಂದಲೂ ಮತ್ತು ಸಹದೇವನನ್ನು ಮೂರು ಶರಗಳಿಂದಲೂ ಹೊಡೆದನು.

ಅನಂತರ ಮದ್ರರಾಜನು ನಕುಲನ ಬಾಣಸಹಿತ ಧನುಸ್ಸನ್ನು ಕ್ಷುರಪ್ರದಿಂದ ಕತ್ತರಿಸಿದನು. ಶಲ್ಯನ ಸಾಯಕಗಳಿಂದ ಸೀಳಲ್ಪಟ್ಟ ಆ ಧನುಸ್ಸು ಚೂರುಚೂರಾಯಿತು. ಕೂಡಲೇ ಮಹಾರಥ ಮಾದ್ರೀಪುತ್ರನು

ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಪತ್ರಿಗಳಿಂದ ಮದ್ರರಾಜನ ರಥವನ್ನು ತುಂಬಿಸಿಬಿಟ್ಟನು. ಯುಧಿಷ್ಠಿರ ಮತ್ತು ಸಹದೇವರಾದರೋ ಮದ್ರೇಶನ ಎದೆಗೆ ಹತ್ತು-ಹತ್ತು ಬಾಣಗಳಿಂದ ಹೊಡೆದರು. ಅನಂತರ ಭೀಮಸೇನನು ಅರವತ್ತು ಬಾಣಗಳಿಂದಲೂ ಸಾತ್ಯಕಿಯು ಒಂಭತ್ತು ಕಂಕಪತ್ರಿ ಶರಗಳಿಂದಲೂ ಮದ್ರರಾಜನನ್ನು ವೇಗದಿಂದ ಹೊಡೆದರು.

ಆಗ ಕ್ರುದ್ಧ ಮದ್ರರಾಜನು ಸಾತ್ಯಕಿಯನ್ನು ಒಂಭತ್ತು ಶರಗಳಿಂದ ಹೊಡೆದು ಪುನಃ ಅವನನ್ನು ಏಳು ನತಪರ್ವ ಶರಗಳಿಂದ ಹೊಡೆದನು. ಕೂಡಲೇ ಅವನು ಸಾತ್ಯಕಿಯ ಧನುಸ್ಸನ್ನು ಬಾಣದೊಂದಿಗೆ ಅದರ ಮುಷ್ಟಿಪ್ರದೇಶದಲ್ಲಿ ತುಂಡರಿಸಿ, ಯುದ್ಧದಲ್ಲಿ ಅವನ ನಾಲ್ಕು ಕುದುರೆಗಳನ್ನೂ ಮೃತ್ಯುಲೋಕಕ್ಕೆ ಕಳುಹಿಸಿದನು. ಸಾತ್ಯಕಿಯನ್ನು ವಿರಥನನ್ನಾಗಿಸಿ ಮಹಾಬಲ ಮದ್ರರಾಜನು ನೂರು ವಿಶಿಖಗಳಿಂದ ಅವನನ್ನು ಎಲ್ಲಕಡೆ ಗಾಯಗೊಳಿಸಿದನು.

ಶಲ್ಯನು ಕ್ರುದ್ಧ ಮಾದ್ರೀಪುತ್ರರಿಬ್ಬರನ್ನೂ, ಪಾಂಡವ ಭೀಮಸೇನನನ್ನೂ, ಯುಧಿಷ್ಠಿರನನ್ನೂ ಹತ್ತು ಶರಗಳಿಂದ ಪ್ರಹರಿಸಿದನು. ಅಲ್ಲಿ ಮದ್ರರಾಜನ ಪೌರುಷವು ಅದ್ಭುತವಾಗಿತ್ತು. ಪಾರ್ಥರು ಒಂದಾಗಿ ಹೋರಾಡುತ್ತಿದ್ದರೂ ಅವನನ್ನು ಯುದ್ಧದಿಂದ ಹಿಮ್ಮೆಟ್ಟಿಸಲಾಗಲಿಲ್ಲ. ಆಗ ಸಾತ್ಯಕಿಯು ಇನ್ನೊಂದು ರಥವನ್ನೇರಿ ಮದ್ರರಾಜನ ವಶರಾಗಿ

ಪೀಡೆಗೊಳಗಾಗುತ್ತಿದ್ದ ಪಾಂಡವರನ್ನು ನೋಡಿ ವೇಗದಿಂದ ಮದ್ರರಾಜನನ್ನು ಆಕ್ರಮಣಿಸಿದನು. ಮೇಲೆ ಎರಗುತ್ತಿದ್ದ ಅವನ ರಥವನ್ನು ಶಲ್ಯನು ಮದಿಸಿದ ಆನೆಯು ಇನ್ನೊಂದು ಮದಿಸಿದ ಆನೆಯನ್ನು ಹೇಗೋ ಹಾಗೆ ರಥದಿಂದಲೇ ಆಕ್ರಮಣಿಸಿ ಯುದ್ಧಮಾಡಿದನು. ಸಾತ್ಯಕಿ ಮತ್ತು ಮದ್ರರಾಜರ ನಡುವೆ ನಡೆದ ಆ ತುಮುಲ ಯುದ್ಧವು ಹಿಂದೆ ಶಂಬರ-ಅಮರರಾಜರ ನಡುವೆ ನಡೆದ ಯುದ್ಧದಂತೆ ನೋಡಲು ಅಧ್ಭುತವಾಗಿತ್ತು. ಸಮರದಲ್ಲಿ ವ್ಯವಸ್ಥಿತನಾಗಿದ್ದ ಮದ್ರರಾಜನನ್ನು ನೋಡಿ ಸಾತ್ಯಕಿಯು ಅವನನ್ನು ಹತ್ತು ಬಾಣಗಳಿಂದ ಪ್ರಹರಿಸಿ ನಿಲ್ಲು ನಿಲ್ಲೆಂದು ಹೇಳಿದನು. ಆ ಮಹಾತ್ಮನಿಂದ ಬಹಳವಾಗಿ ಗಾಯಗೊಂಡ ಮದ್ರರಾಜನು ವಿಚಿತ್ರ ಪುಂಖಗಳ ನಿಶಿತ ಶರಗಳಿಂದ ಸಾತ್ಯಕಿಯನ್ನು ತಿರುಗಿ ಪ್ರಹರಿಸಿದನು. ಆಗ ಪಾರ್ಥರು ಸಾತ್ವತನೊಡನೆ ಯುದ್ಧದಲ್ಲಿ ತೊಡಗಿದ್ದ ಸೋದರಮಾವ ನೃಪನನ್ನು ವಧಿಸಲು ಬಯಸಿ ಕೂಡಲೇ ರಥಗಳೊಂದಿಗೆ ಅವನನ್ನು ಆಕ್ರಮಣಿಸಿದರು. ಆಗ ಅಲ್ಲಿ ಸಿಂಹಗಳಂತೆ ಗರ್ಜಿಸುತ್ತಿದ್ದ ಪರಸ್ಪರರನ್ನು ಗಾಯಗೊಳಿಸಿ ರಕ್ತದ ನೀರನ್ನೇ ಸುರಿಸುತ್ತಿದ್ದ ಶೂರರ ತುಮುಲಯುದ್ಧವು ನಡೆಯಿತು. ಒಂದೇ ಮಾಂಸದ ತುಂಡಿಗಾಗಿ ಗರ್ಜಿಸಿ ಹೊಡೆದಾಡುತ್ತಿರುವ ಸಿಂಹಗಳಂತೆ ಪರಸ್ಪರರನ್ನು ಗಾಯಗೊಳಿಸುವ ಮಹಾಯುದ್ಧವು ಅವರ ನಡುವೆ

ನಡೆಯಿತು.

ಅವರ ಸಹಸ್ರಾರು ಬಾಣಗಳಿಂದ ಭೂಮಿಯು ತುಂಬಿಹೋಯಿತು. ಕೂಡಲೇ ಅಂತರಿಕ್ಷವೂ ಕೂಡ ಬಾಣಮಯವಾಯಿತು. ಆ ಮಹಾತ್ಮರು ಪ್ರಯೋಗಿಸಿದ ಶರಗಳಿಂದ ಅಲ್ಲಿ ಎಲ್ಲ ಕಡೆ ಅತ್ಯಂತ ಶರಾಂಧಕಾರವುಂಟಾಗಿ, ಮೋಡಗಳಿಂದ ಉಂಟಾದ ನೆರಳಿನಂತೆಯೇ ಕಾಣುತ್ತಿತ್ತು. ಅಲ್ಲಿ ಪ್ರಯೋಗಿಸಲ್ಪಟ್ಟ ಪೊರೆಬಿಟ್ಟ ಸರ್ಪಗಳಂತೆ ಹೊಳೆಯುತ್ತಿದ್ದ ಸ್ವರ್ಣಪುಂಖ ಶರಗಳಿಂದ ದಿಕ್ಕುಗಳು ಬೆಳಗಿದವು. ಸಮರದಲ್ಲಿ ಶತ್ರುನಾಶಕ ಶೂರ ಶಲ್ಯನು ಒಬ್ಬನೇ ಅನೇಕರೊಡನೆ ಯುದ್ಧಮಾಡುತ್ತಿದ್ದ ಅದು ಒಂದು ಪರಮ ಅದ್ಭುತವಾಗಿತ್ತು. ಮದ್ರರಾಜನ ಭುಜಗಳಿಂದ ಪ್ರಮುಕ್ತವಾಗಿ ಕೆಳಗೆ ಬೀಳುತ್ತಿದ್ದ ರಣಹದ್ದು-ನವಿಲ ಗರಿಗಳ ಘೋರಶರಗಳಿಂದ ರಣಭೂಮಿಯು ತುಂಬಿಹೋಯಿತು. ಹಿಂದೆ ಅಸುರವಿನಾಶನಸಮಯದಲ್ಲಿ ಶಕ್ರನ ರಥವು ಹೇಗಿತ್ತೋ ಹಾಗೆ ಆ ಮಹಾಯುದ್ಧದಲ್ಲಿ ಶಲ್ಯನ ರಥವು ಸಂಚರಿಸುತ್ತಿತ್ತು.

ಮದ್ರರಾಜನ ನಾಯಕತ್ವದಲ್ಲಿದ್ದ ಕೌರವ ಸೇನೆಯು ಆ ಮಹಾರಣದಲ್ಲಿ ಪುನಃ ವೇಗದಿಂದ ಪಾರ್ಥರನ್ನು ಆಕ್ರಮಣಿಸಿತು. ಪೀಡೆಗೊಳಗಾಗಿದ್ದರೂ ರಣೋತ್ಕಟರಾದ ಕೌರವರೆಲ್ಲರೂ ಸಂಖ್ಯೆಯಲ್ಲಿ

ಅಧಿಕರಾಗಿದ್ದುದರಿಂದ ಕ್ಷಣದಲ್ಲಿಯೇ ಮುನ್ನುಗ್ಗಿ ಪಾರ್ಥರನ್ನು ಮರ್ದಿಸತೊಡಗಿದರು. ಅವರಿಂದ ವಧಿಸಲ್ಪಡುತ್ತಿದ್ದ ಪಾಂಡವರು, ಭೀಮನಿಂದ ತಡೆಯಲ್ಪಟ್ಟರೂ, ಕೃಷ್ಣ-ಪಾರ್ಥರು ನೋಡುತ್ತಿದ್ದಂತೆಯೇ ಅಲ್ಲಿ ನಿಲ್ಲದೇ ಪಲಾಯನಮಾಡತೊಡಗಿದರು. ಆಗ ಧನಂಜಯನು ಕ್ರುದ್ಧನಾಗಿ ಅನುಯಾಯಿಗಳಿಂದ ಕೂಡಿದ್ದ ಕೃಪ-ಕೃತವರ್ಮರನ್ನು ಬಾಣಗಳ ಸಮೂಹಗಳಿಂದ ಮುಚ್ಚಿಬಿಟ್ಟನು.

ಸಹದೇವನು ಸೇನಾಸಮೇತನಾಗಿ ಶಕುನಿಯನ್ನು ತಡೆದನು. ನಕುಲನು ಪಕ್ಕದಲ್ಲಿಯೇ ನಿಂತು ಮದ್ರರಾಜನನ್ನು ನೋಡುತ್ತಿದ್ದನು. ದ್ರೌಪದೇಯರು ಮುನ್ನುಗ್ಗಿ ಅನೇಕ ಕುರು ನರೇಂದ್ರರರನ್ನು ತಡೆದರು. ಶಿಖಂಡಿಯು ದ್ರೋಣಪುತ್ರನನ್ನು ಎದುರಿಸಿದನು. ಭೀಮಸೇನನಾದರೋ ರಾಜರನ್ನು ಗದಾಪಾಣಿಯಾಗಿ ತಡೆದನು. ಯುಧಿಷ್ಠಿರನು ಸೇನೆಗಳೊಡಗೂಡಿ ಶಲ್ಯನನ್ನು ತಡೆದನು. ಆಗ ಕೌರವರು ಮತ್ತು ಶತ್ರುಗಳು ಅಲ್ಲಲ್ಲಿಯೇ ಯುದ್ಧದಲ್ಲಿ ತೊಡಗಿದರು. ಆ ಮಹಾರಣದಲ್ಲಿ ಪಾಂಡವರ ಸರ್ವಸೇನೆಗಳೊಡನೆ ಓರ್ವ ಶಲ್ಯನು ಹೋರಾಡಿದ ಅತಿದೊಡ್ಡ ಸಾಹಸವು ತೋರುತ್ತಿತ್ತು.

## ಯುಧಿಷ್ಠಿರನು ಶಲ್ಯನನ್ನು ವಧಿಸಿದುದು

ಆಗ ಚಂದ್ರಗ್ರಹದ ಸಮೀಪದಲ್ಲಿ ಶನೈಶ್ಚರಗ್ರಹವು ಕಾಣಿಸಿಕೊಳ್ಳುವಂತೆ

ಯುಧಿಷ್ಠಿರನ ಬಳಿ ಶಲ್ಯನು ಕಾಣಿಸಿಕೊಂಡನು. ಸರ್ಪವಿಷಗಳಿಂತಿದ್ದ ಬಾಣಗಳಿಂದ ರಾಜ ಯುಧಿಷ್ಠಿರನನ್ನು ಪೀಡಿಸಿ, ಪುನಃ ಭೀಮನ ಬಳಿ ಹೋಗಿ ಅವನನ್ನು ಶರವರ್ಷಗಳಿಂದ ಮುಚ್ಚಿದನು. ಅವನ ಆ ಹಸ್ತಲಾಘವ ಮತ್ತು ಅಸ್ತ್ರ-ಪಾಂಡಿತ್ಯಗಳನ್ನು ನೋಡಿ ಕೌರವ ಮತ್ತು ಶತ್ರುಸೇನೆಗಳು ಅವನನ್ನು ಶ್ಲಾಘಿಸಿದರು. ಶಲ್ಯನಿಂದ ಪೀಡಿಸಲ್ಪಟ್ಟು ತುಂಬಾ ಗಾಯಗೊಂಡಿದ್ದ ಪಾಂಡವ ಸೈನಿಕರು ಯುಧಿಷ್ಠಿರನು ಕೂಗಿ ಕರೆಯುತ್ತಿದ್ದರೂ ರಣವನ್ನು ಬಿಟ್ಟು ಓಡಿಹೋಗುತ್ತಿದ್ದರು. ಮದ್ರರಾಜನು ತನ್ನ ಸೇನೆಗಳನ್ನು ವಧಿಸುತ್ತಿರುವುದನ್ನು ನೋಡಿ ಕುಪಿತನಾದ ಯುಧಿಷ್ಠಿರನು ಪೌರುಷವನ್ನು ತಾಳಿ ಮದ್ರರಾಜನನ್ನು ಪೀಡಿಸಿದನು. ಜಯವಾಗಲಿ ಅಥವಾ ವಧೆಯಾಗಲಿ ಎಂದು ನಿಶ್ಚಯಿಸಿ ಯುಧಿಷ್ಠಿರನು ತನ್ನ ಸಹೋದರರರನ್ನೂ ಮಾಧವ ಕೃಷ್ಣನನ್ನೂ ಕರೆಯಿಸಿ ಹೇಳಿದನು:

> “ಭೀಷ್ಮ, ದ್ರೋಣ, ಕರ್ಣ ಮತ್ತು ಪರಾಕ್ರಾಂತ ಅನ್ಯ ಪೃಥಿವೀಪತಿಗಳು ಕೌರವನಿಗಾಗಿ ಯುದ್ಧಮಾಡಿ ನಿಧನಹೊಂದಿದ್ದಾರೆ. ನೀವು ಕೂಡ ನಿಮ-ನಿಮಗೆ ಹಂಚಿಕೊಟ್ಟ ಯುದ್ಧಭಾಗಳೊಡನೆ ಉತ್ಸಾಹಪೂರ್ಣರಾಗಿ ಪೌರುಷವನ್ನು ಪ್ರದರ್ಶಿಸುತ್ತಾ ಹೋರಾಡಿದ್ದೀರಿ. ನನ್ನ ಭಾಗವಾದ ಮಹಾರಥ ಶಲ್ಯನೋರ್ವನೇ

ಉಳಿದುಕೊಂಡಿದ್ದಾನೆ. ಇಂದು ಯುದ್ಧದಲ್ಲಿ ನಾನು ಮದ್ರಕೇಶ್ವರನನ್ನು ಜಯಿಸಲು ಬಯಸುತ್ತೇನೆ. ಈ ವಿಷಯದಲ್ಲಿ ನನ್ನ ಮನಸ್ಸಿನಲ್ಲಿರುವುದನ್ನು ಹೇಳಿಬಿಡುತ್ತೇನೆ. ಎಲ್ಲರೂ ಕೇಳಿರಿ. ಸಮರದಲ್ಲಿ ವಾಸವನಿಂದಲೂ ಅಜೇಯರಾಗಿರುವ ವೀರಸಮ್ಮತ ಶೂರ ಮಾದ್ರವತೀ ಸುತರಿಬ್ಬರೂ ನನ್ನ ಚಕ್ರರಕ್ಷಕರಾಗಲಿ. ಯುದ್ಧದಲ್ಲಿ ಕ್ಷತ್ರಧರ್ಮವನ್ನು ಮುಂದಿಟ್ಟುಕೊಂಡು ಈ ಇಬ್ಬರು ಸಾಧ್ವಿಗಳೂ, ಮಾನಾರ್ಹರೂ ಸತ್ಯಸಂಗರರೂ ನನಗಾಗಿ ತಮ್ಮ ಸೋದರಮಾವನೊಂದಿಗೆ ಯುದ್ಧಮಾಡುತ್ತಾರೆ. ರಣದಲ್ಲಿ ನಾನಾಗಲೀ ಶಲ್ಯನಾಗಲೀ ಹತರಾಗುತ್ತೇವೆ. ನಿಮಗೆ ಮಂಗಳವಾಗಲಿ! ನನ್ನ ಈ ಸತ್ಯವಚನವನ್ನು ನೀವೆಲ್ಲರೂ ಕೇಳಿಕೊಳ್ಳಿರಿ! ಕ್ಷತ್ರಧರ್ಮವನ್ನು ಅನುಸರಿಸಿ ನಾನಿಂದು ನನ್ನ ಭಾಗದ ಪ್ರತಿಜ್ಞೆಯನ್ನು ಪೂರೈಸಲು ವಿಜಯವಾಗಲೀ ಇನ್ನೊಂದಾಗಲೀ ಸೋದರಮಾವನೊಂದಿಗೆ ಯುದ್ಧಮಾಡುತ್ತೇನೆ. ರಥಯೋಜಕರು ನನ್ನ ರಥವನ್ನು ಅಧಿಕ ಶಸ್ತ್ರಗಳಿಂದ ಮತ್ತು ಸರ್ವೋಪಕರಣಗಳಿಂದ ಶಾಸ್ತ್ರವತ್ತಾಗಿ ಸಿದ್ಧಗೊಳಿಸಲಿ. ಸಾತ್ಯಕಿಯು ಬಲಚಕ್ರವನ್ನೂ ಧೃಷ್ಟದ್ಯುಮ್ನನು ಎಡಚಕ್ರವನ್ನೂ ಮತ್ತು ನನ್ನ ರಥದ ಹಿಂಭಾಗವನ್ನು

ಧನಂಜಯನು ರಕ್ಷಿಸಲಿ. ಭೀಮನು ನನ್ನ ಮುಂದಿರಲಿ. ಹೀಗೆ ನಾನು ಮಹಾರಣದಲ್ಲಿ ಶಲ್ಯನಿಗಿಂತ ಅಧಿಕನಾಗುತ್ತೇನೆ!”

ಅವನು ಹೀಗೆ ಹೇಳಲು ರಾಜ-ಹಿತೈಷಿಗಳೆಲ್ಲರೂ ಹಾಗೆಯೇ ಮಾಡಿದರು. ಸೇನೆಗಳು ಪುನಃ ಹರ್ಷಿತರಾದವು. ಸಂಗ್ರಾಮದಲ್ಲಿ ಧರ್ಮರಾಜನು ಪ್ರತಿಜ್ಞೆಯನ್ನು ಪೂರೈಸುವನೆಂದು ಪಾಂಚಾಲ-ಸೋಮಕ-ಮತ್ಸ್ಯರು ವಿಶೇಷವಾಗಿ ಉತ್ಸಾಹಿತರಾದರು. ಪಾಂಚಾಲರು ನೂರಾರು ಶಂಖ-ಭೇರಿ-ಪುಷ್ಕರಗಳನ್ನು ಮೊಳಗಿಸಿ ಸಿಂಹನಾದಗೈದರು. ಕುಪಿತರಾಗಿ, ಭೂಮಿಯನ್ನೇ ಮೊಳಗಿಸುವ ಹರ್ಷನಾದ, ಆನೆಗಳ ಗಂಟೆಗಳ ಶಬ್ಧ, ಶಂಖ ನಿನಾದ ಮತ್ತು ತೂರ್ಯಶಬ್ಧಗಳೊಂದಿಗೆ ಅವರು ವೇಗಶಾಲೀ ಮದ್ರರಾಜನನ್ನು ಆಕ್ರಮಣಿಸಿದರು. ಉದಯಾಚಲ ಮತ್ತು ಅಸ್ತಾಚಲ ಪರ್ವತಗಳು ಅನೇಕ ಮಹಾಮೇಘಗಳನ್ನು ತಡೆದು ನಿಲ್ಲಿಸುವಂತೆ ದುರ್ಯೋಧನ ಮತ್ತು ಮದ್ರರಾಜರು ಪಾಂಡವ ಸೇನೆಯನ್ನು ತಡೆದು ನಿಲ್ಲಿಸಿದರು.

ಶಲ್ಯನಾದರೋ ಧರ್ಮರಾಜನ ಮೇಲೆ ಇಂದ್ರನು ಮಳೆಸುರಿಸುವಂತೆ ಶರಗಳ ಮಳೆಗರೆದನು. ಹಾಗೆಯೇ ಯುಧಿಷ್ಠಿರನೂ ಕೂಡ ಸುಂದರ ಧನುಸ್ಸನ್ನು ಹಿಡಿದು ದ್ರೋಣನು ಉಪದೇಶಿಸಿದ್ದ ವಿವಿಧ ಅಸ್ತ್ರಗಳನ್ನು ಪ್ರದರ್ಶಿಸುತ್ತಾ ಶೀಘ್ರವಾಗಿ ವಿಚಿತ್ರ-ದಟ್ಟ ಶರವರ್ಷಗಳನ್ನು

ಸುರಿಸಿದನು. ರಣದಲ್ಲಿ ಅವನು ಚರಿಸುತ್ತಿದ್ದ ರೀತಿಯಲ್ಲಿ ಯಾವುದೇ ದೋಷವು ಕಾಣುತ್ತಿರಲಿಲ್ಲ. ಮಾಂಸದ ಲೋಭಕ್ಕಾಗಿ ಹೊಡೆದಾಡುತ್ತಿರುವ ಎರಡು ಶಾರ್ದೂಲಗಳಂತೆ ಅವರಿಬ್ಬರು ಪರಾಕ್ರಾಂತರೂ ಯುದ್ಧದಲ್ಲಿ ಪರಸ್ಪರರನ್ನು ವಿವಿಧ ಬಾಣಗಳಿಂದ ಗಾಯಗೊಳಿಸಿದರು.

ಭೀಮನು ದುರ್ಯೋಧನನೊಡನೆ ಯುದ್ಧದಲ್ಲಿ ತೊಡಗಿದನು. ಧೃಷ್ಟದ್ಯುಮ್ನ, ಸಾತ್ಯಕಿ, ಮತ್ತು ಮಾದ್ರೀಪುತ್ರರಿಬ್ಬರೂ ಶಕುನಿಪ್ರಮುಖ ವೀರರನ್ನು ಎದುರಿಸಿ ಯುದ್ಧಮಾಡುತ್ತಿದ್ದರು. ದುರ್ಯೋಧನನು ನತಪರ್ವ ಶರದಿಂದ ಭೀಮನ ಹೇಮವಿಭೂಷಿತ ಧ್ವಜವನ್ನು ಕತ್ತರಿಸಿದನು. ಸಣ್ಣ-ಸಣ್ಣ ಗಂಟೆಗಳ ಸಮೂಹಗಳಿಂದ ನೋಡಲು ಸುಂದರವಾಗಿದ್ದ ಭೀಮಸೇನನ ಆ ಧ್ವಜವು ಕೆಳಗೆ ಬೀಳಲು ಭೀಮಸೇನನು ಸಿಂಹದಂತೆ ಗರ್ಜಿಸಿದನು. ದುರ್ಯೋಧನನು ಪುನಃ ಆನೆಯ ಸೊಂಡಿಲಿನಂತಿದ್ದ ಭೀಮನ ಚಿತ್ರಿತ ಧನುಸ್ಸನ್ನು ನಿಶಿತ ಅಲುಗಿನ ಕ್ಷುರದಿಂದ ಕತ್ತರಿಸಿದನು. ಧನುಸ್ಸು ತುಂಡಾದ ಭೀಮಸೇನನು ವಿಕ್ರಮದಿಂದ ಶಕ್ತಿಯನ್ನು ದುರ್ಯೋಧನನ ಎದೆಗೆ ಎಸೆಯಲು ಅದರಿಂದ ಪೀಡಿತ ದುರ್ಯೋಧನನು ರಥದಲ್ಲಿ ಕುಸಿದು ಬಿದ್ದನು. ಅವನು ಮೂರ್ಛಿತನಾಗಲು ವೃಕೋದರನು ಪುನಃ ಕ್ಷುರಪ್ರದಿಂದ

ದುರ್ಯೋಧನನ ಸಾರಥಿಯ ಶಿರವನ್ನು ಶರೀರದಿಂದ ಪ್ರತ್ಯೇಕಿಸಿದನು. ಸಾರಥಿಯನ್ನು ಕಳೆದುಕೊಂಡ ಆ ಕುದುರೆಗಳು ರಥವನ್ನೆಳೆದುಕೊಂಡು ದಿಕ್ಕಾಪಾಲಾಗಿ ಓಡಿಹೋದವು. ಆಗ ಹಾಹಾಕಾರವುಂಟಾಯಿತು.

ದುರ್ಯೋಧನನನ್ನು ರಕ್ಷಿಸಲು ಅಲ್ಲಿಗೆ ದ್ರೋಣಪುತ್ರ, ಕೃಪ ಮತ್ತು ಕೃತವರ್ಮರು ಧಾವಿಸಿ ಬಂದರು. ದುರ್ಯೋಧನನ ಸೇನೆಯು ಅಸ್ತವ್ಯಸ್ತಗೊಳ್ಳಲು ಅವನ ಅನುಚರರು ಭಯಗ್ರಸ್ತರಾದರು. ಆಗ ಗಾಂಡೀವಧನ್ವಿಯು ಧನುಸ್ಸನ್ನು ಟೇಂಕರಿಸುತ್ತಾ ಅವರನ್ನು ಶರಗಳಿಂದ ಸಂಹರಿಸಿದನು.

ಯುಧಿಷ್ಠಿರನು ದಂತದ ಬಣ್ಣದ ಮನೋವೇಗದ ಕುದುರೆಗಳನ್ನು ತಾನೇ ಓಡಿಸುತ್ತಾ ಮದ್ರೇಶನನ್ನು ಆಕ್ರಮಣಿಸಿದನು. ಆಗ ಯುಧಿಷ್ಠಿರನಲ್ಲಿ ಒಂದು ಅದ್ಭುತವು ಕಂಡಿತು. ಹಿಂದೆ ಮೃದುಸ್ವಭಾವದವನೂ ಜಿತೇಂದ್ರಿಯನೂ ಆಗಿದ್ದ ಅವನು ಆಗ ಕಠೋರಸ್ವಭಾವದವನಾಗಿದ್ದನು. ಕೌಂತೇಯನು ಕೋಪದಿಂದ ಕಣ್ಣುಗಳನ್ನರಳಿಸಿಕೊಂಡು ಕಂಪಿಸುತ್ತಾ ನಿಶಿತ ಶರಗಳಿಂದ ನೂರಾರು ಸಹಸ್ರಾರು ಯೋಧರನ್ನು ಸಂಹರಿಸಿದನು. ಯಾವ ಯಾವ ಸೇನೆಗಳು ಎದುರಿಸಿ ಯುದ್ಧ ಮಾಡುತ್ತಿದ್ದವೋ ಆ ಆ ಸೇನೆಗಳನ್ನು ಜ್ಯೇಷ್ಠ ಪಾಂಡವನು, ಇಂದ್ರನು ಉತ್ತಮ ವಜ್ರಪ್ರಹಾರಗಳಿಂದ ಪರ್ವತಗಳನ್ನು

ಕೆಳಗುರುಳಿಸಿದಂತೆ, ಬಾಣಗಳಿಂದ ಧ್ವಂಸಮಾಡುತ್ತಿದ್ದನು. ಭಿರುಗಾಳಿಯು ಮೇಘಗಳನ್ನು ಛಿನ್ನ-ಭಿನ್ನಗೊಳಿಸುವಂತೆ ಅವನು ಒಬ್ಬನೇ ಅಶ್ವ-ಸಾರಥಿ-ಧ್ವಜ-ರಥಗಳೊಂದಿಗೆ ರಥಿಗಳನ್ನು ಅನೇಕ ಸಂಖ್ಯೆಗಳಲ್ಲಿ ಕೆಡವುತ್ತಾ ರಣರಂಗದಲ್ಲಿ ಆಟವಾಡುತ್ತಿದ್ದನು.

ಅಶ್ವಾರೋಹಿಗಳೊಂದಿಗೆ ಕುದುರೆಗಳೂ ಪದಾತಿಗಳೂ ಸಹಸ್ರಾರು ಸಂಖ್ಯೆಗಳಲ್ಲಿ ಕ್ರುದ್ಧ ರುದ್ರನಿಂದ ಪಶುಗಳು ಹೇಗೋ ಹಾಗೆ ಸಂಗ್ರಾಮದಲ್ಲಿ ಬೀಳುತ್ತಿದ್ದವು. ಶರವರ್ಷಗಳಿಂದ ಸುತ್ತಲೂ ರಣರಂಗವನ್ನು ಶೂನ್ಯವನ್ನಾಗಿ ಮಾಡಿ "ಶಲ್ಯ ! ನಿಲ್ಲು !" ಎಂದು ಕೂಗುತ್ತಾ ಮದ್ರೇಶನನ್ನು ಆಕ್ರಮಣಿಸಿದನು. ಸಂಗ್ರಾಮದಲ್ಲಿ ಅವನ ಭಯಂಕರ ಕೃತ್ಯವನ್ನು ನೋಡಿ ಕೌರವರೆಲ್ಲರೂ ಭಯದಿಂದ ನಡುಗಿದರು. ಆದರೆ ಶಲ್ಯನೊಬ್ಬನೇ ನಿರ್ಭಯನಾಗಿ ಅವನನ್ನು ಎದುರಿಸಿದನು. ಕುಪಿತರಾಗಿದ್ದ ಶಲ್ಯ-ಧರ್ಮಜರಿಬ್ಬರೂ ಶಂಖಗಳನ್ನೂದಿ ಅನ್ಯೋನ್ಯರನ್ನು ಯುದ್ಧಕ್ಕೆ ಆಹ್ವಾನಿಸುತ್ತಾ, ಗರ್ಜನೆಗಳಿಂದ ಅನ್ಯೋನ್ಯರನ್ನು ಭಯಪಡಿಸುತ್ತಾ ಭೀಕರ ಯುದ್ಧದಲ್ಲಿ ತೊಡಗಿದರು.

ಶಲ್ಯನಾದರೋ ಶರವರ್ಷದಿಂದ ಯುಧಿಷ್ಠಿರನನ್ನು ಮುಚ್ಚಿಬಿಟ್ಟನು. ಕೌಂತೇಯನೂ ಕೂಡ ಮದ್ರರಾಜನನ್ನು ಶರವರ್ಷದಿಂದ ಮುಚ್ಚಿದನು.

ಆಗ ಯುದ್ಧದಲ್ಲಿ ಕಂಕಪತ್ರಿ ಬಾಣಗಳಿಂದ ಗಾಯಗೊಂಡ ಮದ್ರರಾಜ-ಯುಧಿಷ್ಠಿರರಿಬ್ಬರ ಶರೀರಗಳಿಂದ ರಕ್ತವು ಹರಿಯುತ್ತಿತ್ತು. ಪ್ರಾಣಗಳನ್ನೇ ಪಣವಾಗಿಟ್ಟ ಆ ಯುದ್ಧದುರ್ಮದರಿಬ್ಬರೂ ವಸಂತಕಾಲದಲ್ಲಿ ವನದಲ್ಲಿ ಹೂಬಿಟ್ಟ ಮುತ್ತುಗದ ಮರಗಳಂತೆ ಪ್ರಕಾಶಿಸುತ್ತಿದ್ದರು. ಯುದ್ಧವನ್ನು ನೋಡುತ್ತಿದ್ದ ಸರ್ವ ಸೇನೆಗಳೂ ಅವರಿಬ್ಬರಲ್ಲಿ ಯಾರಿಗೆ ಜಯವಾಗುತ್ತದೆಯೆಂದು ನಿರ್ಧರಿಸಲು ಅಶಕ್ಯರಾಗಿದ್ದರು.

> “ಯುಧಿಷ್ಠಿರನು ಮದ್ರಾಧಿಪತಿಯನ್ನು ಸಂಹರಿಸಿ ವಸುಂಧರೆಯನ್ನು ಭೋಗಿಸುತ್ತಾನೋ ಅಥವಾ ಪಾಂಡವನನ್ನು ಸಂಹರಿಸಿ ಶಲ್ಯನು ಈ ಭೂಮಂಡಲವನ್ನು ದುರ್ಯೋಧನನಿಗೆ ನೀಡುತ್ತಾನೋ!”

ಎಂದು ಯೋಧರು ಯಾವ ನಿಶ್ಚಯಕ್ಕೂ ಬರಲಿಲ್ಲ. ಆದರೆ ಯುದ್ಧದಲ್ಲಿ ಎಲ್ಲವೂ ಧರ್ಮರಾಜನಿಗೆ ಅನುಕೂಲವಾಗಿಯೇ ನಡೆಯುತ್ತಿತ್ತು.

ಅನಂತರ ಶಲ್ಯನು ಯುಧಿಷ್ಠಿರನ ಮೇಲೆ ನೂರು ಬಾಣಗಳನ್ನು ಪ್ರಯೋಗಿಸಿದನು ಮತ್ತು ನಿಶಿತ ಮೊನೆಯಿರುವ ಬಾಣದಿಂದ ಅವನ ಧನುಸ್ಸನ್ನೂ ಕತ್ತರಿಸಿದನು. ಕೂಡಲೇ ಯುಧಿಷ್ಠಿರನು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಶಲ್ಯನನ್ನು ಮುನ್ನೂರು ಬಾಣಗಳಿಂದ ಪ್ರಹರಿಸಿ, ಅವನ ಧನುಸ್ಸನ್ನೂ ಕ್ಷುರದಿಂದ ಕತ್ತರಿಸಿದನು. ಅನಂತರ

ನತಪರ್ವ ಬಾಣಗಳಿಂದ ಶಲ್ಯನ ನಾಲ್ಕುಕುದುರೆಗಳನ್ನೂ ಸಂಹರಿಸಿದನು. ಶಿತಾಗ್ರ ಬಾಣಗಳೆರಡರಿಂದ ಅವನ ಇಬ್ಬರು ಪಾರ್ಶ್ವಸಾರಥಿಗಳನ್ನೂ ಸಂಹರಿಸಿದನು. ಉರಿಯುತ್ತಿದ್ದ ನಿಶಿತ ಹೊಂಬಣ್ಣದ ಭಲ್ಲದಿಂದ ಶಲ್ಯನ ಧ್ವಜವನ್ನೂ ಕತ್ತರಿಸಿದನು.

ಆಗ ದುರ್ಯೋಧನನ ಸೈನ್ಯವು ಭಗ್ನವಾಗಿ ಹೋಯಿತು. ದ್ರೌಣಿಯು ಧಾವಿಸಿಬಂದು ತ್ವರೆಮಾಡಿ ಮದ್ರಾಧಿಪನನ್ನು ತನ್ನ ರಥದಲ್ಲೇರಿಸಿಕೊಂಡು ಹೊರಟುಹೋದನು. ಯುಧಿಷ್ಠಿರನು ಸ್ವಲ್ಪಹೊತ್ತು ಅವನನ್ನು ಹಿಂಬಾಲಿಸಿ ಹೋಗಿ ಗರ್ಜಿಸಿದನು. ಅನಂತರ ಮದ್ರಪತಿಯು ವಿಧಿವತ್ತಾಗಿ ಸಜ್ಜಾಗಿಸಿದ, ಯಂತ್ರೋಪಕರಣಗಳಿಂದ ಸುಸಜ್ಜಿತವಾದ, ಶುಭ್ರ, ಮಹಾಮೇಘದ ಗುಡುಗಿನಂತೆ ಶಬ್ಧಮಾಡುತ್ತಿದ್ದ, ಶತ್ರುಗಳಿಗೆ ರೋಮಾಂಚನವನ್ನುಂಟುಮಾಡುವ ಇನ್ನೊಂದು ರಥವನ್ನೇರಿ ನಿಂತನು. ಇನ್ನೊಂದು ಬಲವತ್ತರ-ವೇಗವತ್ತರ ಧನುಸ್ಸನ್ನು ಎತ್ತಿ ಮದ್ರಪತಿಯು ಯುಧಿಷ್ಠಿರನನ್ನು ಗಾಯಗೊಳಿಸಿ ಸಿಂಹದಂತೆ ಗರ್ಜಿಸಿದನು. ಆಗ ಮಳೆಸುರಿಸುವ ಪರ್ಜನ್ಯನಂತೆ ಶಲ್ಯನು ಪಾಂಡವ ಕ್ಷತ್ರಿಯರ ಮೇಲೆ ಶರವರ್ಷಗಳನ್ನು ಸುರಿಸಿದನು. ಸಾತ್ಯಕಿಯನ್ನು ಹತ್ತುಬಾಣಗಳಿಂದ, ಭೀಮಸೇನನನ್ನು ಮೂರರಿಂದ ಮತ್ತು ಸಹದೇವನನ್ನು ಮೂರರಿಂದ ಹೊಡೆದು ಯುಧಿಷ್ಠಿರನನ್ನು

ಪೀಡಿಸಿದನು. ಆ ರಥಿಶ್ರೇಷ್ಠನು ರಥ-ಕುಂಜರಗಳೊಂದಿಗೆ ಅನ್ಯ ಮಹೇಷ್ವಾಸರನ್ನೂ, ಆನೆಸವಾರರೊಂದಿಗೆ ಆನೆಗಳನ್ನು, ಸವಾರರೊಂದಿಗೆ ಕುದುರೆಗಳನ್ನು, ಮತ್ತು ರಥಗಳನ್ನು ರಥಿಗಳೊಂದಿಗೆ ಸಂಹರಿಸಿದನು. ಬಾಹುಗಳನ್ನು ಕತ್ತರಿಸಿದನು ಮತ್ತು ಹಾಗೆಯೇ ಆಯುಧ-ಧ್ವಜಗಳನ್ನು ತುಂಡರಿಸಿ, ದರ್ಬೆಗಳನ್ನು ಹಾಸಿದ ಯಜ್ಞವೇದಿಕೆಯಂತೆ, ರಣಭೂಮಿಯನ್ನು ಯೋಧರ ಮೃತಶರೀರಗಳಿಂದ ತುಂಬಿದನು. ಹಾಗೆ ಅಂತಕ ಮೃತ್ಯುವಿನಂತೆ ಶತ್ರುಸೇನೆಗಳನ್ನು ನಾಶಪಡಿಸುತ್ತಿದ್ದ ಅವನನ್ನು ಅತೀವ ಕ್ರುದ್ಧರಾದ ಪಾಂಡವ-ಪಾಂಚಾಲ-ಸೋಮಕರು ಸುತ್ತುವರೆದರು. ಭೀಮಸೇನ, ಸಾತ್ಯಕಿ, ಮಾದ್ರೀಪುತ್ರರು, ಭೀಮಬಲದಿಂದೊಡಗೂಡಿ ಯುಧಿಷ್ಠಿರನೊಡನೆ ಯುದ್ಧಮಾಡುತ್ತಿದ್ದ ಶಲ್ಯನನ್ನು ಪ್ರತ್ಯೇಕ ಪ್ರತ್ಯೇಕವಾಗಿ ಆಹ್ವಾನಿಸುತ್ತಿದ್ದರು. ಆಗ ಸಮರದಲ್ಲಿ ಆ ಶೂರ ನರವೀರರು ಮದ್ರೇಶ್ವರನ ಸಮೀಪಕ್ಕೆ ಹೋಗಿ ಉಗ್ರವೇಗದ ಪತ್ರಿ ಶರಗಳಿಂದ ಗಾಯಗೊಳಿಸಿದರು. ಭೀಮಸೇನ, ಮಾದ್ರೀಸುತರು ಮತ್ತು ಸಾತ್ಯಕಿಯಿಂದ ಸಂರಕ್ಷಿತನಾಗಿದ್ದ ರಾಜಾ ಧರ್ಮಸುತನು ಉಗ್ರವೇಗದ ಪತ್ರಿಗಳಿಂದ ಮದ್ರಾಧಿಪನ ವಕ್ಷಸ್ಥಳಕ್ಕೆ ಪ್ರಹರಿಸಿದನು. ಮದ್ರಾಧಿಪತಿಯು ಶರಗಳಿಂದ ಪೀಡಿತನಾಗಿದ್ದುದನ್ನು ಕಂಡು ಕೌರವರ ಪ್ರಮುಖ ರಥಗುಂಪುಗಳು ಎಲ್ಲವೂ ದುರ್ಯೋಧನನ

ಅನುಮತಿಯಂತೆ ಶಲ್ಯನನ್ನು ಸುತ್ತುವರೆದು ಬಂದವು.

ಆಗ ರಣದಲ್ಲಿ ಮದ್ರಾಧಿಪನು ಬೇಗನೇ ಏಳು ಬಾಣಗಳಿಂದ ಯುಧಿಷ್ಠಿರನನ್ನು ಹೊಡೆದನು. ಆ ತುಮುಲ ಯುದ್ಧದಲ್ಲಿ ಪಾರ್ಥನೂ ಕೂಡ ಅವನನ್ನು ಒಂಭತ್ತು ಪೃಷತಗಳಿಂದ ಹೊಡೆದನು. ಮದ್ರಾಧಿಪ-ಯುಧಿಷ್ಠಿರರಿಬ್ಬರೂ ಎಣ್ಣೆಯಿಂದ ಹದಮಾಡಲ್ಪಟ್ಟ ಬಾಣಗಳನ್ನು ಕಿವಿಯ ತುದಿಯವರೆಗೂ ಸೆಳೆದು ಬಿಟ್ಟು ಅನ್ಯೋನ್ಯರನ್ನು ಮುಚ್ಚಿಬಿಟ್ಟರು. ಆಗ ಸಮರದಲ್ಲಿ ಪರಸ್ಪರರ ದುರ್ಬಲತೆಯನ್ನು ಹುಡುಕುತ್ತಿದ್ದ, ಶತ್ರುಗಳಿಂದ ಎದುರಿಸಲು ಅಸಾಧ್ಯರಾಗಿದ್ದ, ನೃಪೋತ್ತಮರಿಬ್ಬರೂ ಬೇಗ ಬೇಗನೇ ಶರಗಳಿಂದ ಪರಸ್ಪರರನ್ನು ಹೊಡೆಯುತ್ತಿದ್ದರು. ಪರಸ್ಪರರ ಮೇಲೆ ಬಾಣಗಣಗಳನ್ನು ಸುರಿಸುತ್ತಿದ್ದ ಆ ಪಾಂಡವ-ಮದ್ರ ವೀರರ ಧನುಸ್ಸಿನ ಶಿಂಜನಿಯ ಟೇಂಕಾರ ಶಬ್ಧವು ಮಹೇಂದ್ರನ ವಜ್ರಾಯುಧದ ಗರ್ಜನೆಗೆ ಸಮನಾಗಿದ್ದಿತು. ಮಹಾವನದಲ್ಲಿ ಮಾಂಸದ ತುಂಡಿಗಾಗಿ ಪರಚಾಡುವ ಹುಲಿಯ ಮರಿಗಳಂತಿದ್ದ ಮತ್ತು ದಂತಗಳುಳ್ಳ ಸಲಗಶ್ರೇಷ್ಠರಂತೆ ದರ್ಪಿತರಾಗಿದ್ದ ಅವರಿಬ್ಬರೂ ಪರಸ್ಪರರನ್ನು ಗಾಯಗೊಳಿಸಿದರು. ಆಗ ಮದ್ರಾಧಿಪತಿಯು ಸೂರ್ಯಾಗ್ನಿತೇಜಸ್ಸಿಗೆ ಸಮಾನ ತೇಜಸ್ಸುಳ್ಳ ಅತಿವೇಗದ ಭಯಂಕರ ಶರವನ್ನು, ಬಲವನ್ನುಪಯೋಗಿಸಿ, ಯುಧಿಷ್ಠಿರನ

ಎದೆಗೆ ಪ್ರಹರಿಸಿದನು. ಅತಿಯಾಗಿ ಗಾಯಗೊಂಡ ಯುಧಿಷ್ಠಿರನಾದರೋ ಚೆನ್ನಾಗಿ ಹೂಡಿದ ಬಾಣದಿಂದ ಮದ್ರಾಧಿಪತಿಯನ್ನು ಹೊಡೆದು, ಅವನು ಮೂರ್ಛಿತನಾದುದನ್ನು ಕಂಡು ಆನಂದಿಸಿದನು.

ಸಹಸ್ರನೇತ್ರನಂತೆ ಅಪ್ರತಿಮ ಪ್ರಭಾವವುಳ್ಳ ಪಾರ್ಥಿವೇಂದ್ರ ಶಲ್ಯನು ಮುಹೂರ್ತಕಾಲದಲ್ಲಿಯೇ ಸಂಜ್ಞೆಯನ್ನು ಪಡೆದು ಕ್ರೋಧದಿಂದ ಕೆಂಗಣ್ಣನಾಗಿ ತ್ವರೆಮಾಡಿ ನೂರು ಬಾಣಗಳಿಂದ ಯುಧಿಷ್ಠಿರನನ್ನು ಪ್ರಹರಿಸಿದನು. ಆಗ ಕ್ರುದ್ಧ ಧರ್ಮಸುತನು ತ್ವರೆಮಾಡಿ ಒಂಭತ್ತು ಬಾಣಗಳಿಂದ ಶಲ್ಯನ ಸುವರ್ಣಮಯ ಕವಚವನ್ನು ಭೇದಿಸಿ ಪುನಃ ಆರು ಪೃಷತಗಳಿಂದ ಅವನ ವಕ್ಷಸ್ಥಳಕ್ಕೆ ಹೊಡೆದನು. ಆಗ ಪ್ರಹೃಷ್ಟ ಮದ್ರಾಧಿಪತಿಯು ಧನುಸ್ಸನ್ನು ಸೆಳೆದು ಪೃಷತಗಳನ್ನೂ ಎರಡು ಕ್ಷುರಗಳನ್ನು ಪ್ರಯೋಗಿಸಿ ರಾಜನನ್ನು ಹೊಡೆದು ಕುರುಪುಂಗವನ ಧನುಸ್ಸನ್ನು ತುಂಡರಿಸಿದನು. ಆಗ ರಾಜನು ಘೋರತರ ಅನ್ಯ ಧನುಸ್ಸನ್ನು ತೆಗೆದುಕೊಂಡು ನಿಶಿತ ಶರಗಳಿಂದ ಮಹೇಂದ್ರನು ಶಿತಾಗ್ರಗಳಿಂದ ನಮುಚಿಯನ್ನು ಹೇಗೋ ಹಾಗೆ ಎಲ್ಲ ಕಡೆಗಳಲ್ಲಿ ಪ್ರಹರಿಸಿದನು. ಶಲ್ಯನು ಒಂಭತ್ತು ಪೃಷತಗಳಿಂದ ಭೀಮಸೇನ ಮತ್ತು ಯುಧಿಷ್ಠಿರರ ಸುವರ್ಣಮಯ ಸುದೃಢ ಕವಚಗಳನ್ನು ಕತ್ತರಿಸಿ ಅವರಿಬ್ಬರ ಭುಜಗಳನ್ನು ಸೀಳಿದನು. ಅನಂತರ ಇನ್ನೊಂದು ಅಗ್ನಿ-ಸೂರ್ಯರ ತೇಜಸ್ಸಿನಿಂದ ಬೆಳಗುತ್ತಿದ್ದ ಕ್ಷುರದಿಂದ ಯುಧಿಷ್ಠಿರನ

ಧನುಸ್ಸನ್ನು ಧ್ವಂಸಗೊಳಿಸಿದನು. ಎದುರಿಗಿದ್ದ ಕೃಪನೂ ಕೂಡ ಆರು ಶರಗಳಿಂದ ಯುಧಿಷ್ಠಿರನ ಸಾರಥಿಯನ್ನು ಕೆಳಗುರುಳಿಸಿದನು. ಮದ್ರಾಧಿಪತಿಯೂ ಕೂಡ ಶರಗಳಿಂದ ಯುಧಿಷ್ಠಿರನ ನಾಲ್ಕು ಕುದುರೆಗಳನ್ನು ಸಂಹರಿಸಿದನು. ಕುದುರೆಗಳನ್ನು ಸಂಹರಿಸಿ ಅವನು ಧರ್ಮಸುತನ ಯೋಧರನ್ನು ನಾಶಗೊಳಿಸಿದನು.

ಮದ್ರಾಧಿಪನು ರಾಜನನ್ನು ಈ ಅವಸ್ಥೆಗೊಳಪಡಿಸಿದುದನ್ನು ನೋಡಿದ ಭೀಮಸೇನನು ವೇಗವತ ಶರದಿಂದ ಅವನ ಧನುಸ್ಸನ್ನು ತುಂಡರಿಸಿ, ಇನ್ನೆರಡು ಶರಗಳಿಂದ ಬಹಳವಾಗಿ ಗಾಯಗೊಳಿಸಿದನು. ತುಂಬಾ ಕುಪಿತನಾಗಿದ್ದ ಭೀಮಸೇನನು ಹಾಗೆಯೇ ಶೀಘ್ರವಾಗಿ ಇನ್ನೊಂದು ಶರದಿಂದ ಸಾರಥಿಯ ಶಿರವನ್ನು ಶರೀರದಿಂದ ಬೇರ್ಪಡಿಸಿ, ಅವನ ನಾಲ್ಕು ಕುದುರೆಗಳನ್ನೂ ಸಂಹರಿಸಿದನು. ಸಮರದಲ್ಲಿ ಅತಿವೇಗದಿಂದ ಸಂಚರಿಸುತ್ತಿದ್ದ ಆ ಶಲ್ಯನ ಮೇಲೆ ಭೀಮ ಮತ್ತು ಸಹದೇವರು ನೂರು ಬಾಣಗಳನ್ನು ಎರಚಿದರು. ಆ ಸಾಯಕಗಳಿಂದ ಶಲ್ಯನು ಮೂರ್ಛಿತನಾದುದನ್ನು ಕಂಡು ಭೀಮನು ಶರಗಳಿಂದ ಅವನ ಕವಚವನ್ನು ತುಂಡರಿಸಿದನು. ಭೀಮಸೇನನು ಕವಚಗಳನ್ನು ಕತ್ತರಿಸಲು ಮದ್ರಾಧಿಪನು ಸಹಸ್ರತಾರೆಗಳ ಚಿತ್ರವುಳ್ಳ ಗುರಾಣಿ-ಖಡ್ಗಗಳನ್ನು ಹಿಡಿದು ರಥದಿಂದ ಧುಮಿಕಿ ಕುಂತೀಸುತನೆಡೆಗೆ ಧಾವಿಸಿದನು. ನಕುಲನ ರಥದ ಈಷಾದಂಡವನ್ನು ತುಂಡರಿಸಿ ಆ ಭೀಮಬಲನು

ಯುಧಿಷ್ಠಿರನನನ್ನು ಆಕ್ರಮಣಿಸಿದನು. ಹಾಗೆ ಕ್ರುದ್ಧ ಅಂತಕನಂತೆ ಮೇಲೆ ಬೀಳುತ್ತಿದ್ದ ರಾಜನನ್ನು ಧೃಷ್ಟದ್ಯುಮ್ನ, ದ್ರೌಪದೇಯರು, ಶಿಖಂಡೀ, ಮತ್ತು ಶೈನೇಯರು ಕೂಡಲೇ ಸುತ್ತುವರೆದರು. ಭೀಮನು ಹತ್ತು ಪೃಷತಗಳಿಂದ ಅವನ ಅಪ್ರತಿಮ ಗುರಾಣಿಯನ್ನು ಪುಡಿಮಾಡಿ, ಭಲ್ಲದಿಂದ ಮುಷ್ಟಿಪ್ರದೇಶದಲ್ಲಿ ಅವನ ಖಡ್ಗವನ್ನೂ ಕತ್ತರಿಸಿ ನಿನ್ನ ಸೇನಾಮಧ್ಯದಲ್ಲಿ ಪ್ರಹೃಷ್ಟನಾಗಿ ಗರ್ಜಿಸಿದನು.

ಭೀಮನ ಆ ಕರ್ಮವನ್ನು ನೋಡಿ ಪಾಂಡವರ ಕಡೆಯ ಪ್ರಮುಖ ರಥಸೇನೆಗಳು ಉತ್ಸಾಹದಿಂದ ಜೋರಾಗಿ ಸಿಂಹನಾದಗೈದವು ಮತ್ತು ಚಂದ್ರಪ್ರಭೆಯ ಶಂಖಗಳನ್ನು ಊದಿದರು. ರಕ್ತದಿಂದ ತೋಯ್ದುಹೋಗಿದ್ದ ಕೌರವ ಸೇನೆಯು ಆ ವಿಭೀಷಣ ಶಬ್ಧದಿಂದ ತಪಿಸಿ ದುಃಖಗೊಂಡು ವಿಷಣ್ಣರಾಗಿ ದಿಕ್ಕುಗಾಣದೇ ಸ್ತಬ್ಧವಾಗಿ ನಿಂತುಬಿಟ್ಟಿತು. ಭೀಮಸೇನನೇ ಮೊದಲಾದವರ ಶರಗಳಿಂದ ಪೀಡಿತ ಮದ್ರರಾಜನು ಜಿಂಕೆಯ ಸಲುವಾಗಿ ಸಿಂಹವು ಹೇಗೋ ಹಾಗೆ ವೇಗದಿಂದ ಯುಧಿಷ್ಠಿರನ ಬಳಿಗೆ ಓಡಿದನು. ಕುದುರೆ-ಸಾರಥಿಯರನ್ನು ಕಳೆದುಕೊಂಡು ಕ್ರೋಧದಿಂದ ಪ್ರಜ್ವಲಿಸುತ್ತಿರುವ ಅಗ್ನಿಯಂತೆ ಪ್ರಕಾಶಿಸುತ್ತಿದ್ದ ಧರ್ಮರಾಜನು ಮದ್ರಾಧಿಪತಿಯನ್ನು ನೋಡಿ ಬೇಗನೆ ಬಲವನ್ನುಪಯೋಗಿಸಿ ಶತ್ರುವನ್ನು ಆಕ್ರಮಣಿಸಿದನು. ಕೂಡಲೇ ಗೋವಿಂದನ ಮಾತನ್ನು ನೆನಪಿಸಿಕೊಂಡ ಅವನು ಶಲ್ಯನ ವಿನಾಶಕ್ಕೆ

ಮನಸ್ಸುಮಾಡಿದನು. ಕುದುರೆ-ಸಾರಥಿಗಳನ್ನು ಕಳೆದುಕೊಂಡಿದ್ದ ಆ ಧರ್ಮರಾಜನು ರಥದಲ್ಲಿ ನಿಂತು ಶಕ್ತಿಯನ್ನೇ ಬಯಸಿದನು. ಶಲ್ಯನ ಕರ್ಮಗಳನ್ನು ವೀಕ್ಷಿಸಿ, ತನ್ನ ಭಾಗವೊಂದು ಉಳಿದುಕೊಂಡಿದೆಯೆಂದು ನೆನಪಿಸಿಕೊಂಡು, ಶಲ್ಯವಧೆಗೆ ಪ್ರಯತ್ನಿಸಿ, ಇಂದ್ರಾವರಜ ಕೃಷ್ಣನು ಹೇಳಿದಂತೆಯೇ ಮಾಡಿದನು.

ಧರ್ಮರಾಜನು ಮಣಿಹೇಮದಂಡವುಳ್ಳ ಕನಕಪ್ರಕಾಶಿತ ಶಕ್ತಿಯನ್ನು ಹಿಡಿದು, ಉರಿಯುತ್ತಿದ್ದ ಕಣ್ಣುಗಳನ್ನು ಅರಳಿಸಿಕೊಂಡು, ಕ್ರುದ್ಧಮನಸ್ಕನಾಗಿ ಮದ್ರಾಧಿಪನನ್ನು ದಿಟ್ಟಿಸಿ ನೋಡಿದನು. ಪೂತಾತ್ಮ ಕಲ್ಮಷಗಳೇ ಇಲ್ಲದ ಆ ಪರಿಶುದ್ಧ ರಾಜನು ದುರುಗುಟ್ಟಿ ನೋಡಿದರೂ ಮದ್ರರಾಜನು ಭಸ್ಮೀಭೂತನಾಗಲಿಲ್ಲ! ಅದೊಂದು ಅದ್ಭುತವಾಗಿಯೇ ತೋರಿತು. ಆಗ ಯುಧಿಷ್ಠಿರನು ಆ ಸುಂದರ, ಉಗ್ರದಂಡವುಳ್ಳ, ಮಣಿರತ್ನಗಳಿಂದ ಪ್ರಜ್ವಲಿಸುತ್ತಿದ್ದ ಶಕ್ತ್ಯಾಯುಧವನ್ನು ಅತಿವೇಗದಿಂದ ಮದ್ರಾಧಿಪನ ಮೇಲೆ ಪ್ರಹರಿಸಿದನು. ಮಹಾಬಲದಿಂದ ಪ್ರಯೋಗಿಸಲ್ಪಟ್ಟು ವೇಗವಾಗಿ ಬೀಳುತ್ತಿದ್ದ, ಕಿಡಿಗಳನ್ನು ಕಾರುತ್ತಾ ಉರಿಯುತ್ತಿದ್ದ, ಯುಗಾಂತದಲ್ಲಿ ಕಾಣಿಸಿಕೊಳ್ಳುವ ಮಹಾ ಉಲ್ಕೆಯಂತೆ ತೋರುತ್ತಿದ್ದ ಆ ಶಕ್ತಿಯನ್ನು ಸರ್ವಕುರುಗಳೂ ನೋಡಿದರು. ಕಾಲರಾತ್ರಿಯಂತಿದ್ದ, ಯಮನ ಕೈಯಲ್ಲಿರುವ ಪಾಶದಂತಿದ್ದ, ಧಾತ್ರಿಯಂತೆ ಉಗ್ರರೂಪದಿಂದಿದ್ದ, ಬ್ರಹ್ಮದಂಡದಂತೆ ಅಪ್ರತಿಮ

ಅಮೋಘವಾಗಿದ್ದ ಆ ಶಕ್ತಿಯನ್ನು ಯುದ್ಧದಲ್ಲಿ ಧರ್ಮರಾಜನು ಪ್ರಯತ್ನಿಸಿ ಪ್ರಯೋಗಿಸಿದನು. ಪಾಂಡುಸುತನಿಂದ ಗಂಧ-ಮಾಲೆ-ಅಗ್ರಾಸನ-ಪಾನ-ಭೋಜನಗಳಿಂದ ಪ್ರಯತ್ನಪೂರ್ವಕವಾಗಿ ಪೂಜಿಸಲ್ಪಡುತ್ತಿದ್ದ, ಪ್ರಳಯಕಾಲದ ಅಗ್ನಿಗೆ ಸಮನಾಗಿ ಪ್ರಜ್ವಲಿಸುತ್ತಿದ್ದ, ಅಥರ್ವಾಂಗಿರಸ ಮಂತ್ರಗಳಿಂದ ಅಭಿಮಂತ್ರಿತ, ಕೃತ್ಯೆಯಂತೆ ಉಗ್ರವಾಗಿದ್ದ, ಈಶಾನನ ಸಲುವಾಗಿ ಶತ್ರುಗಳ ಪ್ರಾಣ-ದೇಹಗಳನ್ನು ಭಕ್ಷಿಸಲು ತ್ವಷ್ಟನಿಂದ ನಿರ್ಮಿಸಲ್ಪಟ್ಟಿದ್ದ, ಭೂಮಿ-ಅಂತರಿಕ್ಷ-ಜಲಾಶಯಾದಿಗಳಲ್ಲಿದ್ದರೂ ಪ್ರಾಣಿಗಳನ್ನು ಸೆಳೆದು ಕೊಲ್ಲಬಹುದಾಗಿದ್ದ, ಘಂಟೆ-ಪತಾಕೆ-ಮಣಿ-ವಜ್ರಗಳಿಂದ ಬೆಳಗುತ್ತಿದ್ದ, ವೈಡೂರ್ಯ ಚಿತ್ರಿತ ಹೇಮದದಂಡವುಳ್ಳ, ತ್ವಷ್ಟನು ಪ್ರಯತ್ನಪೂರ್ವಕವಾಗಿ ಮತ್ತು ನಿಯಮಬದ್ಧನಾಗಿ ರಚಿಸಿದ್ದ, ಬ್ರಹ್ಮದ್ವೇಷಿಗಳನ್ನು ವಿನಾಶಗೊಳಿಸುವ, ಆ ಅಮೋಘ ಶಕ್ತಿಯನ್ನು ಯುಧಿಷ್ಠಿರನು ಬಲ-ಪ್ರಯತ್ನ ಮತ್ತು ಘೋರ ಮಂತ್ರಗಳಿಂದ ಅಭಿಮಂತ್ರಿಸಿ ಶತ್ರು ಮದ್ರಾಧಿಪತಿಯ ವಧೆಗಾಗಿ ಮಾರ್ಗದಲ್ಲಿ ಅತಿವೇಗವಾಗಿ ಹೋಗುವಂತೆ ಪ್ರಯೋಗಿಸಿದನು. ರುದ್ರನು ಅಂತಕನನ್ನು ಸಂಹರಿಸಲು ಹೇಗೆ ಬಾಣಪ್ರಯೋಗ ಮಾಡಿದ್ದನೋ ಹಾಗೆ ಕ್ರೋಧದಿಂದ ನರ್ತಿಸುತ್ತಿರುವನೋ ಎಂಬಂತೆ ಧರ್ಮರಾಜನು ತನ್ನ ಸುಂದರ ಸುದೃಢ ಕೈ-ಬಾಹುಗಳನ್ನು ಚಾಚಿ “ಇವನನ್ನು ಕೊಲ್ಲು!” ಎಂದು ಗರ್ಜಿಸುತ್ತಾ ಆ ಶಕ್ತಿಯನ್ನು



ಪ್ರಯೋಗಿಸಿದನು.

ವೀರ ಯುಧಿಷ್ಠಿರನು ಸರ್ವಶಕ್ತಿಯನ್ನುಪಯೋಗಿಸಿ ಪ್ರಯೋಗಿಸಿದ, ತಡೆಯಲಸಾಧ್ಯ ಆ ಶಕ್ತಿಯನ್ನು ಶಲ್ಯನು ಆಜ್ಯಧಾರೆಯನ್ನು ಸ್ವೀಕರಿಸುವಾಗ ಅಗ್ನಿಯು ಚಟಪಟ ಶಬ್ಧಮಾಡುವಂತೆ ಗರ್ಜಿಸಿ ಸ್ವೀಕರಿಸಿದನು. ಆ ಶಕ್ತಿಯು ಶಲ್ಯನ ಮರ್ಮಸ್ಥಳಗಳನ್ನು ಸೀಳಿ, ಶುಭ್ರ-ವಿಶಾಲ ಕವಚ-ವಕ್ಷಸ್ಥಲಗಳನ್ನು ಭೇದಿಸಿ, ಸರ್ವತ್ರ ವ್ಯಾಪಿ ನೃಪತಿಯ ಕೀರ್ತಿಯನ್ನು ದಹಿಸುತ್ತಾ, ತಡೆಯಿಲ್ಲದೇ ನೀರನ್ನು ಪ್ರವೇಶಿಸುವಂತೆ

ಭೂಮಿಯನ್ನು ಹೊಕ್ಕಿತು. ಮೂಗು-ಕಣ್ಣು-ಕಿವಿ-ಮುಖಗಳಿಂದ ಮತ್ತು ಗಾಯಗಳಿಂದ ಪಸರಿಸುವ ರಕ್ತದಿಂದ ತೋಯ್ದುಹೋಗಿದ್ದ ಶಲ್ಯನ ಶರೀರವು ಸ್ಕಂದನಿಂದ ಪ್ರಹರಿಸಲ್ಪಟ್ಟ ಮಹಾದ್ರಿ ಕ್ರೌಂಚದಂತೆ ತೋರಿತು. ಯುಧಿಷ್ಠಿರನಿಂದ ಕವಚ ಒಡೆದಿದ್ದ ತುಂಡರಿಸಿದ್ದ ಶಲ್ಯನು ಮಹೇಂದ್ರನು ಪ್ರಯೋಗಿಸಿದ ಅಪ್ರತಿಮ ವಜ್ರದಿಂದ ಹತಗೊಂಡ ಪರ್ವತ ಶಿಖರದಂತೆ ಬಾಹುಗಳನ್ನು ಚಾಚಿ ರಥದಿಂದ ಭೂಮಿಯ ಮೇಲೆ ಬಿದ್ದನು. ಮದ್ರರಾಜನು ಬಾಹುಗಳನ್ನು ಚಾಚಿ ಎತ್ತರ ಇಂದ್ರಧ್ವಜವು ಬೀಳುವಂತೆ ಧರ್ಮರಾಜನ ಅಭಿಮುಖನಾಗಿಯೇ ಭೂಮಿಯ ಮೇಲೆ ಬಿದ್ದನು. ಸರ್ವಾಂಗಗಳಲ್ಲಿ ಗಾಯಗೊಂಡು ರಕ್ತದಿಂದ ತೋಯ್ದುಹೋಗಿದ್ದ ಆ ನರಪುಂಗವನು ಬೀಳಲು ಭೂಮಿಯು ಪ್ರೇಮದಿಂದ ಪ್ರಿಯ ಕಾಂತನು ಎದೆಯ ಮೇಲೆ ಬೀಳುವಾಗ ತಬ್ಬಿಕೊಳ್ಳುವಂತೆ ಅವನನ್ನು ಸ್ವೀಕರಿಸಿದಳು. ಪ್ರಿಯಕಾಂತೆಯಂತಿದ್ದ ವಸುಮತಿಯನ್ನು ಬಹುಕಾಲ ಭೋಗಿಸಿ ಅವಳನ್ನು ಸರ್ವಾಂಗಗಳಿಂದ ಆಲಿಂಗನಮಾಡಿಕೊಂಡು ಮಲಗಿರುವನೋ ಎನ್ನುವಂತೆ ಶಲ್ಯನು ತೋರುತ್ತಿದ್ದನು. ಧರ್ಮಯುದ್ಧದಲ್ಲಿ ಧರ್ಮಾತ್ಮಾ ಧರ್ಮಸೂನುವಿನಿಂದ ಹತನಾದ ಶಲ್ಯನು ಯಜ್ಞದಲ್ಲಿ ವಿಧಿಪೂರ್ವಕ ಆಜ್ಯಾಹುತಿಯನ್ನು ಪಡೆದು ಪೂಜಾದಿಗಳಿಂದ ಆರಾಧಿಸಲ್ಪಟ್ಟು ಪ್ರಶಾಂತನಾಗುವ ಅಗ್ನಿಯಂತೆ

ಶಾಂತನಾದನು. ಶಕ್ತಿಯಿಂದ ಹೃದಯವು ಒಡೆದುಹೋಗಿದ್ದ, ಆಯುಧ-ಧ್ವಜಗಳು ವಿನಾಶಗೊಂಡು ಸುಶಾಂತನಾಗಿದ್ದ ಮದ್ರೇಶನನ್ನು ಲಕ್ಷ್ಮಿಯು ಬಿಟ್ಟು ಹೋಗಿರಲಿಲ್ಲ.

ಸಂಗ್ರಾಮದಲ್ಲಿ ಕುರುಪುಂಗವನಿಂದ ಮಹೇಷ್ವಾಸರಲ್ಲಿ ಶ್ರೇಷ್ಠ ಶಲ್ಯನು ಹತನಾದುದನ್ನು ಕಂಡು ಪರಮಹೃಷ್ಟರಾದ ಪಾರ್ಥರು ಒಟ್ಟಿಗೇ ಶಂಖಗಳನ್ನೂದಿದರು. ಹಿಂದೆ ವೃತ್ರವಧೆಯಾದಾಗ ಸುರರು ಇಂದ್ರನನ್ನು ಹೇಗೋ ಹಾಗೆ ಯುಧಿಷ್ಠಿರನನ್ನು ಪ್ರಶಂಸಿಸಿದರು. ನಾನಾವಿಧದ ವಾದ್ಯಶಬ್ಧಗಳಿಂದ ವಸುಧೆಯ ಎಲ್ಲ ದಿಕ್ಕುಗಳನ್ನು ಮೊಳಗಿಸಿದರು.

# ಹದಿನೆಂಟನೇ ದಿನದ ಯುದ್ಧ: ದುರ್ಯೋಧನನ ಪಲಾಯನ

## ಮದ್ರಸೇನೆಯ ಸಂಹಾರ; ಕೌರವ ಸೇನೆಯ ಪಲಾಯನ

ಶಲ್ಯವಧೆಯ ನಂತರ ಯುಧಿಷ್ಠಿರನು ಪ್ರಭೆಯುಳ್ಳ ಧನುಸ್ಸನ್ನೆತ್ತಿಕೊಂಡು ಪಕ್ಷಿರಾಜ ಗರುಡನು ಸರ್ಪಗಳನ್ನು ಹೇಗೋ ಹಾಗೆ ಯುದ್ಧದಲ್ಲಿ ಶತ್ರುಗಳನ್ನು ನಾಶಪಡಿಸಿದನು. ನಿಶಿತ ಭಲ್ಲಗಳಿಂದ ಶತ್ರುಗಳ

ಶರೀರಗಳನ್ನು ಕ್ಷಣದಲ್ಲಿ ನಾಶಗೊಳಿಸಿದನು. ಪಾರ್ಥನ ಬಾಣಸಮೂಹಗಳಿಂದ ಆಚ್ಛಾದಿತ ಕೌರವ ಸೈನಿಕರು ಕಣ್ಣುಗಳನ್ನು ಮುಚ್ಚಿಕೊಂಡರು. ಪರಸ್ಪರರ ಸಂಘರ್ಷದಿಂದ ಬಹಳವಾಗಿ ಗಾಯಗೊಂಡರು. ಕವಚಗಳು ಕಳಚಿಕೊಂಡಂತೆ ಶರೀರ-ಆಯುಧ-ಜೀವಗಳನ್ನು ತೊರೆದರು. ಶಲ್ಯನು ಬೀಳಲು ಎಲ್ಲಗುಣಗಳಲ್ಲಿಯೂ ಅಣ್ಣನ ಸಮನಾಗಿದ್ದ ಮದ್ರರಾಜನ ಯುವ ಸಹೋದರ ರಥಿಯು ಪಾಂಡವನನ್ನು ಆಕ್ರಮಣಿಸಿದನು. ಆ ಯುದ್ಧದುರ್ಮದನು ಅನೇಕ ನಾರಾಚಗಳಿಂದ ಯುಧಿಷ್ಠಿರನನ್ನು ಗಾಯಗೊಳಿಸಿದನು. ಧರ್ಮರಾಜನು ತ್ವರೆಮಾಡಿ ಅವನನ್ನು ಆರು ಆಶುಗಗಳಿಂದ ಹೊಡೆದನು ಮತ್ತು ಎರಡು ಕ್ಷುರಗಳಿಂದ ಅವನ ಧನುಸ್ಸು-ಧ್ವಜಗಳನ್ನು ತುಂಡರಿಸಿದನು. ಅನಂತರ ಬೆಳಗುತ್ತಿದ್ದ ಸುದೃಢ ನಿಶಿತ ಭಲ್ಲದಿಂದ ಪ್ರಮುಖದಲ್ಲಿದ್ದ ಶಲ್ಯಾನುಜನ ಶಿರವನ್ನು ಅಪಹರಿಸಿದನು. ಕುಂಡಲ ಸಹಿತ ರಥದಿಂದ ಕೆಳಗೆ ಬೀಳುತ್ತಿದ್ದ ಆ ಶಿರವು ಪುಣ್ಯಕಳೆದು ಕೆಳಕ್ಕೆ ಬೀಳುವ ಸ್ವರ್ಗವಾಸಿಯಂತೆ ತೋರುತ್ತಿತ್ತು. ಶಿರಸ್ಸಿನಿಂದ ಬೇರ್ಪಟ್ಟಿದ್ದ ಅವನ ಶರೀರವೂ ಕೂಡ ರಥದಿಂದ ಕೆಳಗೆ ಬಿದ್ದಿತು. ರಕ್ತದಿಂದ ತೋಯ್ದುಹೋಗಿದ್ದ ಅವನ ಶರೀರವನ್ನು ನೋಡಿ ಸೈನ್ಯವು ಭಗ್ನವಾಗಿ ಹೋಯಿತು.

ವಿಚಿತ್ರಕವಚಿ ಆ ಮದ್ರನೃಪನ ಅನುಜನು ಹತನಾಗಲು ಸೇನೆಯು ಹಾಹಾಕಾರಮಾಡುತ್ತಾ ಪಲಾಯನಮಾಡಿತು. ಶಲ್ಯಾನುಜನು ಹತನಾದುದನ್ನು ಕಂಡು ಜೀವವನ್ನೇ ಮುಡುಪಾಗಿಟ್ಟಿದ್ದ ಕೌರವರು ಪಾಂಡವರ ಭಯದಿಂದ ಗಾಬರಿಗೊಂಡರು. ಭಯಗೊಂಡಿದ್ದ ಕೌರವರ ಮೇಲೆ ಸಾತ್ಯಕಿಯು ಬಾಣಗಳನ್ನು ಎರಚುತ್ತಾ ಹಿಂಬಾಲಿಸಿದನು. ಹಾಗೆ ಹಿಂಬಾಲಿಸಿ ಬರುತ್ತಿದ್ದ ಆ ಸಾತ್ಯಕಿಯನ್ನು ಕೃತವರ್ಮನು ತ್ವರೆಮಾಡಿ ಸ್ವಲ್ಪವೂ ಭಯವಿಲ್ಲದವನಂತೆ ಎದುರಿಸಿದನು. ಆ ಇಬ್ಬರು ಮಹಾತ್ಮ-ಅಪರಾಜಿತ-ವಾರ್ಷ್ಣೇಯ ಹಾರ್ದಿಕ್ಯ-ಸಾತ್ಯಕಿಯರು ಮದೋತ್ಕಟ ಸಿಂಹಗಳಂತೆ ಸಂಘರ್ಷಿಸಿದರು. ದಿವಾಕರನ ಸಮಪ್ರಭೆಯುಳ್ಳ ಅವರಿಬ್ಬರೂ ಸೂರ್ಯಕಿರಣಗಳಂತೆ ವಿಮಲವಾಗಿ ಹೊಳೆಯುತ್ತಿರುವ ಬಾಣಗಳಿಂದ ಪರಸ್ಪರರರನ್ನು ಮುಸುಕಿದರು. ವೃಷ್ಣಿಸಿಂಹರ ಚಾಪಮಾರ್ಗದಿಂದ ಬಲವಾಗಿ ಹೊರಟ ಮಾರ್ಗಣಗಳು ಆಕಾಶದಲ್ಲಿ ಪತಂಗಗಳಂತೆ ಶೀಘ್ರವಾಗಿ ಹೋಗುತ್ತಿದ್ದವು. ಹಾರ್ದಿಕ್ಯನು ಹತ್ತು ಬಾಣಗಳಿಂದ ಸಾತ್ಯಕಿಯನ್ನು ಮತ್ತು ಮೂರು ಶರಗಳಿಂದ ಅವನ ಕುದುರೆಗಳ ಪ್ರಹರಿಸಿ ಒಂದು ನತಪರ್ವಶರದಿಂದ ಅವನ ಧನುಸ್ಸನ್ನು ತುಂಡರಿಸಿದನು. ತುಂಡಾದ ಆ ಶ್ರೇಷ್ಠ ಧನುಸ್ಸನ್ನು ಎಸೆದು ಶಿನಿಪುಂಗವನು ವೇಗದಿಂದ ವೇಗವತ್ತರವಾದ ಇನ್ನೊಂದು ಆಯುಧವನ್ನು ಎತ್ತಿಕೊಂಡನು. ಸರ್ವಧನ್ವಿಗಳಲ್ಲಿ ವರಿಷ್ಠ ಸಾತ್ಯಕಿಯು

ಆ ಶ್ರೇಷ್ಠ ಧನುಸ್ಸನ್ನೆತ್ತಿಕೊಂಡು ಹತ್ತು ಬಾಣಗಳಿಂದ ಹಾರ್ದಿಕ್ಯನ ಎದೆಗೆ ಹೊಡೆದನು. ಅನಂತರ ಚೆನ್ನಾಗಿ ಹೂಡಿ ಪ್ರಹರಿಸಿದ ಭಲ್ಲಗಳಿಂದ ಅವನ ರಥದ ನೊಗಗಳನ್ನು ತುಂಡರಿಸಿ, ಅವನ ಕುದುರೆಗಳನ್ನೂ ಇಬ್ಬರು ಪಾರ್ಶ್ವಸಾರಥಿಗಳನ್ನೂ ಬೇಗನೇ ಸಂಹರಿಸಿದನು.

ಮದ್ರರಾಜನು ಹತನಾಗಲು ಮತ್ತು ಕೃತವರ್ಮನು ವಿರಥನಾಗಲು ದುರ್ಯೋಧನನ ಸೇನೆಗಳೆಲ್ಲವೂ ಪುನಃ ಪರಾಙ್ಮುಖವಾಯಿತು. ಆದರೆ ಆ ಸಮಯದಲ್ಲಿ ರಣರಂಗವು ಧೂಳಿನಿಂದ ತುಂಬಿಹೋಗಿದ್ದುದರಿಂದ ಅಳಿದುಳಿದ ಸೇನೆಯು ಪರಾಙ್ಮುಖವಾದುದು ಇತರರಿಗೆ ತಿಳಿಯಲಿಲ್ಲ. ಮುಹೂರ್ತದಲ್ಲಿಯೇ ವಿವಿಧ ರಕ್ತಸ್ರಾವಗಳಿಂದ ಭೂಮಿಯ ಮೇಲೆದ್ದಿದ್ದ ಧೂಳು ಪ್ರಶಾಂತವಾಯಿತು. ತನ್ನ ಸೇನೆಯು ಭಗ್ನವಾಗುತ್ತಿರುವುದನ್ನು ಹತ್ತಿರದಿಂದಲೇ ನೋಡಿದ ದುರ್ಯೋಧನನು ವೇಗದಿಂದ ಮೇಲೆ ಬೀಳುತ್ತಿದ್ದ ಅನೇಕ ಪಾರ್ಥರೆಲ್ಲರನ್ನೂ ತಡೆದನು. ರಥವೇರಿದ್ದ ಪಾಂಡವರನ್ನೂ, ಧೃಷ್ಟದ್ಯುಮ್ನ-ಸಾತ್ಯಕಿಯರನ್ನು ನೋಡಿ ನಿಶಿತ ಬಾಣಗಳಿಂದ ಅವರನ್ನು ಮುಸುಕಿದನು. ಬಂದಿರುವ ಮೃತ್ಯುವನ್ನು ತಡೆಯಲಾರದ ಮರ್ತ್ಯರಂತೆ ಪಾಂಡವರು ದುರ್ಯೋಧನನನ್ನು ಅತಿಕ್ರಮಿಸಿ ಹೋಗಲಾಗಲಿಲ್ಲ.

ಆಗ ಹಾರ್ದಿಕ್ಯನೂ ಇನ್ನೊಂದು ರಥವನ್ನೇರಿ ಹಿಂದಿರುಗಿದನು. ಯುಧಿಷ್ಠಿರನು ತ್ವರೆಮಾಡಿ ನಾಲ್ಕು ಪತ್ರಿಗಳಿಂದ ಕೃತವರ್ಮನ ಕುದುರೆಗಳನ್ನು ಸಂಹರಿಸಿದನು. ತೇಜಸ್ಸಿನಿಂದ ಉರಿಯುತ್ತಿರುವ ಆರು ಭಲ್ಲಗಳಿಂದ ಗೌತಮ ಕೃಪನನ್ನು ಪ್ರಹರಿಸಿದನು. ರಾಜನಿಂದ ಹತಾಶ್ವನೂ ವಿರಥನೂ ಆಗಿದ್ದ ಹಾರ್ದಿಕ್ಯನನ್ನು ಅಶ್ವತ್ಥಾಮನು ತನ್ನ ರಥದ ಮೇಲೇರಿಸಿಕೊಂಡು ಯುಧಿಷ್ಠಿರನಿಂದ ದೂರಕ್ಕೆ ಕೊಂಡೊಯ್ದನು. ಶಾರದ್ವತ ಕೃಪನು ಯುಧಿಷ್ಠಿರನನ್ನು ಎಂಟು ಬಾಣಗಳಿಂದ ಪ್ರಹರಿಸಿ, ಎಂಟು ನಿಶಿತ ಶಿಲೀಮುಖಗಳಿಂದ ಅವನ ಕುದುರೆಗಳನ್ನೂ ಗಾಯಗೊಳಿಸಿದನು.

ಶಲ್ಯನು ಹತನಾಗಲು ಮದ್ರರಾಜ ಪದಾನುಗ ಏಳುನೂರು ವೀರ ರಥರು ಮಹಾ ಸೇನೆಯೊಂದಿಗೆ ಯುದ್ಧಕ್ಕೆ ಮರಳಿದರು. ದುರ್ಯೋಧನನಾದರೋ ಪರ್ವತದಂತಿದ್ದ ಆನೆಯನ್ನೇರಿ, ಶ್ವೇತಛತ್ರದಡಿಯಲ್ಲಿ, ಚಾಮರಗಳು ಬೀಸುತ್ತಿರಲು, “ಹೋಗಬೇಡಿ! ಹೋಗಬೇಡಿ!” ಎಂದು ಮದ್ರರನ್ನು ತಡೆದನು. ದುರ್ಯೋಧನನಿಂದ ಪುನಃ ಪುನಃ ತಡೆಯಲ್ಪಟ್ಟರೂ ಆ ವೀರರು ಯುಧಿಷ್ಠಿರನ ಪಾಂಡವ ಸೇನೆಯನ್ನು ಪ್ರವೇಶಿಸಿದರು. ಆ ಶೂರರಾದರೋ ಯುದ್ಧದ ದೃಢನಿಶ್ಚಯವನ್ನು ಮಾಡಿ ಜೋರಾಗಿ ಧನುಸ್ಸುಗಳನ್ನು ಟೇಂಕರಿಸುತ್ತಾ

ಪಾಂಡವರೊಂದಿಗೆ ಯುದ್ಧದಲ್ಲಿ ತೊಡಗಿದರು. ಶಲ್ಯನನ್ನು ಸಂಹರಿಸಿದ ಧರ್ಮಪುತ್ರನನ್ನು ಮದ್ರರಾಜನ ಪ್ರಿಯರು ಮದ್ರಕರ ಮಹಾರಥರಿಂದೊಡಗೂಡಿ ಪೀಡಿಸುತ್ತಿದ್ದಾರೆ ಎಂದು ಕೇಳಿದ ಮಹಾರಥ ಪಾರ್ಥನು ಗಾಂಡೀವ ಧನುಸ್ಸನ್ನು ಟೇಂಕರಿಸುತ್ತಾ ರಥಘೋಷದಿಂದ ಎಲ್ಲ ದಿಕ್ಕುಗಳನ್ನೂ ಮೊಳಗಿಸುತ್ತಾ ಅಲ್ಲಿಗೆ ಆಗಮಿಸಿದನು. ಆಗ ಅರ್ಜುನ, ಭೀಮ, ಮಾದ್ರೀಪುತ್ರ ಪಾಂಡವರಿಬ್ಬರು, ನರವ್ಯಾಘ್ರ ಸಾತ್ಯಕಿ, ಎಲ್ಲ ದ್ರೌಪದೇಯರು, ಸೋಮಕರೊಂದಿಗೆ ಪಾಂಚಾಲ ಧೃಷ್ಟದ್ಯುಮ್ನ ಮತ್ತು ಶಿಖಂಡಿಯರು ಯುಧಿಷ್ಠಿರನನ್ನು ರಕ್ಷಿಸಲು ಎಲ್ಲಕಡೆಗಳಿಂದ ಅವನನ್ನು ಸುತ್ತುವರೆದರು. ಎಲ್ಲಕಡೆಗಳಿಂದ ಸುತ್ತುವರೆದ ಆ ಪಾಂಡವ ಪುರುಷರ್ಷಭರು ಮದ್ರಸೇನೆಯನ್ನು ಮೊಸಳೆಗಳು ಸಮುದ್ರವನ್ನು ಹೇಗೋ ಹಾಗೆ ಕ್ಷೋಭೆಗೊಳಿಸಿದರು. ಪೂರ್ವದಿಕ್ಕಿನ ಗಾಳಿಯಿಂದ ಮಹಾನದೀ ಗಂಗೆಯು ಅಲ್ಲೋಲ-ಕಲ್ಲೋಲಗೊಳ್ಳುವಂತೆ ಮದ್ರಸೇನೆಯು ಪಾಂಡವ ಸೇನೆಯಿಂದ ಕ್ಷೋಭೆಗೊಂಡಿತು. ತಮ್ಮನ್ನು ತಾವೇ ಮುಡುಪಾಗಿಟ್ಟಿದ್ದ ಕೌರವನ ಕಡೆಯ ಮಹಾರಥರು ಆ ಮಹಾ ಸೇನೆಗೆ ಸಿಲುಕಿ ಭಿರುಗಾಳಿಗೆ ಸಿಲುಕಿದ ವೃಕ್ಷಗಳಂತೆ ತತ್ತರಿಸುತ್ತಿದ್ದರು. ಅಲ್ಲಿ ಅನೇಕರು

“ರಾಜಾ ಯುಧಿಷ್ಠಿರನೆಲ್ಲಿ? ಅವನ ಶೂರ ಸಹೋದರರೆಲ್ಲಿ?

> ಯಾರೂ ಇಲ್ಲಿ ಕಾಣುತ್ತಿಲ್ಲವಲ್ಲ! ಪಾಂಚಾಲರ ಮಹಾವೀರ ಮಹಾರಥ ಶಿಖಂಡೀ ಮತ್ತು ಧೃಷ್ಟದ್ಯುಮ್ನರೆಲ್ಲಿ? ಶೈನೇಯ ಮತ್ತು ಎಲ್ಲ ದ್ರೌಪದೇಯರು ಎಲ್ಲಿ?"

ಎಂಬ ಕೂಗುಗಳು ಎಲ್ಲ ಕಡೆಗಳಿಂದ ಕೇಳಿಬರುತ್ತಿದ್ದವು.

ಹೀಗೆ ಕೂಗಿಕೊಳ್ಳುತ್ತಿದ್ದ ಮದ್ರರಾಜನ ಅನುಯಾಯಿ ಆ ಶೂರರನ್ನು ಮಹಾರಥ ದ್ರೌಪದೇಯರು ಮತ್ತು ಯುಯುಧಾನರು ಸಂಹರಿಸಿದರು. ಕೆಲವರ ರಥಚಕ್ರಗಳು ತುಂಡಾದವು. ಇನ್ನು ಕೆಲವರ ಮಹಾಧ್ವಜಗಳು ಮುರಿದು ಬಿದ್ದವು. ಸುತ್ತುವರೆದ ಪಾಂಡವ ಯೋಧರು ಯುದ್ಧಮಾಡುತ್ತಿರುವುದನ್ನು ನೋಡಿ ದುರ್ಯೋಧನನು ಮದ್ರಸೇನೆಯನ್ನು ಮುನ್ನುಗ್ಗದಂತೆ ತಡೆಯಲು ವೇಗದಿಂದ ಬಂದನು. ದುರ್ಯೋಧನನಾದರೋ ಆ ವೀರರನ್ನು ಸಂತವಿಸಿ ತಡೆಯುತ್ತಿದ್ದನು. ಆದರೂ ಅವನ ಆಜ್ಞೆಯಂತೆ ಅಲ್ಲಿ ಯಾರೂ ಮಾಡುತ್ತಿರಲಿಲ್ಲ. ಆಗ ಮಾತಿನ ಮಲ್ಲ ಗಾಂಧಾರರಾಜನ ಮಗ ಶಕುನಿಯು ದುರ್ಯೋಧನನಿಗೆ ಹೇಳಿದನು:

> "ಭಾರತ! ಮದ್ರಸೇನೆಯು ಹತವಾಗುತ್ತಿರುವುದನ್ನು ನಾವು ಸುಮ್ಮನೇ ಏಕೆ ನೋಡುತ್ತಿದ್ದೇವೆ? ನೀನು ಇಲ್ಲಿ ನಿಂತಿರುವಾಗ ಸಮರದಲ್ಲಿ ಹೀಗಾಗುತ್ತಿರುವುದು ಸರಿಯಲ್ಲ. ನಾವೆಲ್ಲರೂ

ಒಟ್ಟಿಗೇ ಯುದ್ಧ ಮಾಡುತ್ತೇವೆಂದು ಒಪ್ಪಂದ ಮಾಡಿಕೊಂಡಿರಲಿಲ್ಲವೇ? ಆದರೂ ಶತ್ರುಗಳು ವಧಿಸುತ್ತಿರುವಾಗ ಹೇಗೆ ತಾನೇ ನೀನು ಸಹಿಸಿಕೊಂಡಿದ್ದೀಯೆ?"

ದುರ್ಯೋಧನನು ಹೇಳಿದನು:

"ಈ ಹಿಂದೆಯೇ ನಾನು ಅವರನ್ನು ತಡೆದರೂ ಅವರು ನನ್ನ ಮಾತಿನಂತೆ ನಡೆದುಕೊಳ್ಳಲಿಲ್ಲ. ಪಾಂಡುಸೇನೆಯೊಳಗೆ ಹೊಕ್ಕಿರುವ ಅವರೆಲ್ಲರೂ ಹತರಾಗಿರಬಹುದು."

ಶಕುನಿಯು ಹೇಳಿದನು:

"ಕ್ರೋಧಾಭಿಭೂತರಾಗಿ ಯುದ್ಧಮಾಡುತ್ತಿರುವ ವೀರರು ಒಡೆಯನ ಆಜ್ಞೆಯನ್ನು ಪಾಲಿಸುವುದಿಲ್ಲ. ಆದುದರಿಂದ ಅವರ ಮೇಲೆ ಕುಪಿತರಾಗುವ ಕಾಲವಿದಲ್ಲ! ಆದುದರಿಂದ ನಾವೆಲ್ಲರೂ ಮದ್ರರಾಜನ ಅನುಯಾಯೀ ಮಹೇಷ್ವಾಸರನ್ನು ರಕ್ಷಿಸಲು ಅಶ್ವ-ರಥ-ಗಜಸೇನೆಗಳೊಂದಿಗೆ ಅಲ್ಲಿಗೆ ಹೋಗೋಣ. ಮಹಾ ಪ್ರಯತ್ನದಿಂದ ಅನ್ಯೋನ್ಯರನ್ನೂ ರಕ್ಷಿಸಿಕೊಳ್ಳೋಣ. ಇವೆಲ್ಲವನ್ನೂ ಆಲೋಚಿಸಿ

ಸೈನಿಕರಿರುವಲ್ಲಿಗೆ ನಾವೆಲ್ಲರೂ ಹೋಗೋಣ!”

ಹೀಗೆ ಹೇಳಿ ರಾಜನು ಮಹಾಸೇನೆಯಿಂದ ಆವೃತನಾಗಿ ಸಿಂಹನಾದದಿಂದ ವಸುಂಧರೆಯನ್ನು ಕಂಪಿಸುತ್ತಾ ಹೊರಟನು. ಕೌರವ ಸೇನೆಯಲ್ಲಿ “ಕೊಲ್ಲಿರಿ! ಗಾಯಗೊಳಿಸಿರಿ! ಬಂಧಿಸಿರಿ! ಪ್ರಹರಿಸಿರಿ! ಕತ್ತರಿಸಿರಿ!” ಎಂಬ ತುಮುಲ ಶಬ್ಧಗಳು ಕೇಳಿಬಂದವು. ರಣದಲ್ಲಿ ಮದ್ರರಾಜನ ಅನುಯಾಯಿಗಳನ್ನು ನೋಡಿ ಪಾಂಡವರು ಮಧ್ಯಮ ಗುಲ್ಮದ ಆಶ್ರಯವನ್ನು ಪಡೆದು ಒಟ್ಟಾಗಿ ಎದುರಿಸಿದರು. ಕೈ-ಕೈತಾಗಿ ನಡೆದ ಆ ಯುದ್ಧದಲ್ಲಿ ಮುಹೂರ್ತಕಾಲದಲ್ಲಿಯೇ ಮದ್ರರಾಜನ ಅನುಯಾಯಿಗಳು ಹತರಾದರು. ಕೌರವರ ಕಡೆಯವರು ಅಲ್ಲಿಗೆ ಹೋಗುವುದರೊಳಗೇ ಪಾಂಡವರು ಅವರನ್ನು ಸಂಹರಿಸಿಬಿಟ್ಟಿದ್ದರು. ಶತ್ರುಗಳು ಒಂದಾಗಿ ಹೃಷ್ಟರಾಗಿ ಕಿಲ-ಕಿಲಾ ಶಬ್ಧವನ್ನು ಮಾಡುತ್ತಿದ್ದರು.

ಎಲ್ಲಕಡೆ ರುಂಡಗಳು ಎದ್ದು ಕುಳಿಯುತ್ತಿದ್ದವು. ಆದಿತ್ಯಮಂಡಲದ ಮಧ್ಯದಿಂದ ಮಹಾಉಲ್ಕೆಯೊಂದು ಬಿದ್ದಿತು. ಮುರಿದುಹೋದ ರಥ-ನೊಗಗಳಿಂದಲೂ, ಹತರಾದ ಮಹಾರಥರಿಂದಲೂ, ಕೆಳಗುರುಳಿದ ಕುದುರೆಗಳಿಂದಲೂ ವಸುಂಧರೆಯು ತುಂಬಿಹೋಗಿತ್ತು. ಆ ರಣಾಂಗಣದಲ್ಲಿ ರಥದ ನೊಗಕ್ಕೆ ಸಿಕ್ಕಿಕೊಂಡಿದ್ದ ಯೋಧರನ್ನು ಗಾಳಿಯ ವೇಗದಲ್ಲಿ ಹೋಗುತ್ತಿದ್ದ ಕುದುರೆಗಳು ಎಳೆದುಕೊಂಡು ಹೋಗುತ್ತಿದ್ದವು.

ಕೆಲವು ಕುದುರೆಗಳು ಮುರಿದುಹೋಗಿದ್ದ ರಥ ಚಕ್ರಗಳನ್ನು, ಇನ್ನು ಕೆಲವು ಅರ್ಧರಥವನ್ನೇ ಎಳೆದುಕೊಂಡು ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದವು. ನೊಗಪಟ್ಟಿಗಳಿಗೆ ಸಿಲುಕಿಕೊಂಡ ಕುದುರೆಗಳು ಅಲ್ಲಲ್ಲಿ ಕಾಣುತ್ತಿದ್ದವು. ಪುಣ್ಯಗಳು ಮುಗಿದುಹೋಗಲು ಗಗನದಿಂದ ಚ್ಯುತರಾಗಿ ಬೀಳುತ್ತಿರುವ ಸಿದ್ಧರಂತೆ ರಥಿಗಳು ಬೀಳುತ್ತಿದ್ದರು. ಶೂರ ಮದ್ರರಾಜನ ಅನುಯಾಯಿಗಳು ಹತರಾಗಲು, ಬರುತ್ತಿರುವ ಕೌರವರನ್ನು ನೋಡಿದ ವಿಜಯೇಚ್ಛು ಮಹಾರಥ ಪಾರ್ಥರು ವೇಗದಿಂದ ಬಾಣಶಬ್ಧರವದೊಂದಿಗೆ ಶಂಖನಾದಗಳನ್ನು ಸೇರಿಸುತ್ತಾ ಪ್ರಹರಿಸಿ ಆಕ್ರಮಣಿಸಿದರು. ಅವರ ಬಳಿಬಂದು ಗುರಿಸಾಧಿಸಿದ ಆ ಪ್ರಹಾರಿಗಳು ಪುನಃ ಧನುಸ್ಸುಗಳನ್ನು ಟೇಂಕರಿಸುತ್ತಾ ಸಿಂಹನಾದಗೈದರು. ಸಮರದಲ್ಲಿ ಶೂರ ಮದ್ರರಾಜನು ಕೆಳಗುರುಳಿದುದನ್ನೂ, ಮದ್ರರಾಜನ ಮಹಾ ಸೇನೆಯೂ ಹತವಾದುದನ್ನು ನೋಡಿದ ದುರ್ಯೋಧನ ಸೇನೆಯೆಲ್ಲವೂ ಪುನಃ ಪರಾಙ್ಮುಖವಾಯಿತು. ವಿಜಯೋಲ್ಲಾಸಿತ ದೃಢಧನ್ವಿ ಪಾಂಡವರಿಂದ ವಧಿಸಲ್ಪಟ್ಟು ಸಂಭ್ರಾಂತಗೊಂಡಿದ್ದ ಕೌರವ ಸೇನೆಯು ಗಾಬರಿಗೊಂಡು ದಿಕ್ಕಾಪಾಲಾಗಿ ಪಲಾಯನಮಾಡಿತು.

ಯುದ್ಧದಲ್ಲಿ ಮದ್ರರಾಜನು ಕೆಳಗುರುಳಲು ಕೌರವ ಸೇನೆಯ

ಹೆಚ್ಚುಭಾಗವು ವಿಮುಖವಾಯಿತು. ಅಗಾಧ ಮಹಾಸಾಗರದ ಸುಳಿಗೆ ಸಿಲುಕಿ ಒಡೆದುಹೋದ ನೌಕೆಯ ಆಶ್ರಯದಲ್ಲಿ ಅಪಾರ ಸಾಗರವನ್ನು ದಾಟಲು ಬಯಸುವ ವರ್ತಕರಂತೆ ಶರಗಳಿಂದ ಗಾಯಗೊಂಡು ಕುರುಸೇನೆಯು ಸಿಂಹಾರ್ದಿತ ಮೃಗದಂತೆ, ನಾಥನನ್ನು ಬಯಸುವ ಅನಾಥರಂತೆ ಭಯವಿಹ್ವಲಗೊಂಡಿತು. ಕೋಡುಮುರಿದು ಹೋದ ಹೋರಿಯಂತೆ ಮತ್ತು ದಂತಗಳನ್ನು ಕಳೆದುಕೊಂಡ ಆನೆಯಂತೆ ಕೌರವ ಸೇನೆಯು ಯುಧಿಷ್ಠಿರನಿಂದ ಪರಾಜಿತಗೊಂಡು ಮಧ್ಯಾಹ್ನದ ಹೊತ್ತಿಗೆ ಯುದ್ಧದಿಂದ ಹಿಂದೆಸರಿಯಿತು. ಶಲ್ಯನು ಹತನಾಗಲು ಕೌರವ ಯೋಧನಲ್ಲಿ ಯಾರಿಗೂ ಸೇನೆಗಳನ್ನು ಸಂಘಟಿಸುವ ಪರಾಕ್ರಮವಾಗಲೀ ಬುದ್ಧಿಯಾಗಲೀ ಇರಲಿಲ್ಲ. ಭೀಷ್ಮ, ದ್ರೋಣ ಮತ್ತು ಸೂತಪುತ್ರರು ಹತರಾದಾಗ ಕೌರವ ಯೋಧರಲ್ಲಿ ಯಾವ ದುಃಖವುಂಟಾಗಿತ್ತೋ ಅದೇ ಭಯ-ಶೋಕಗಳು ಪುನಃ ಅವರಲ್ಲಿ ಉಂಟಾದವು. ಪ್ರಮುಖ ಯೋಧರನ್ನು ಕಳೆದುಕೊಂಡಿದ್ದ ಕೌರವ ಸೇನೆಯು ನಿಶಿತ ಶರಗಳಿಂದ ಗಾಯಗೊಂಡು ವಿಧ್ವಸ್ತಗೊಂಡು ಜಯದಲ್ಲಿ ನಿರಾಶೆಯನ್ನು ತಾಳಿತು. ಮಹಾರಥರಲ್ಲಿ ಕೆಲವರು ಕುದುರೆಗಳನ್ನು, ಕೆಲವರು ಆನೆಗಳನ್ನು, ಕೆಲವರು ರಥಗಳನ್ನು ಏರಿ ಮತ್ತು ವೇಗವಾಗಿ ಓಡಬಲ್ಲವರು ಪದಾತಿಗಳಾಗಿಯೇ ಭಯದಿಂದ ಓಡಿಹೋದರು. ಶಲ್ಯನು ಹತನಾಗಲು ಪ್ರಹರಿಸುವ ಗಿರಿಗಳಂತಿದ್ದ ಎರಡು ಸಾವಿರ ಆನೆಗಳು ಅಂಕುಶ-

ಅಂಗುಷ್ಠಗಳಿಂದ ಪ್ರಚೋದಿಸಲ್ಪಟ್ಟು ಓಡಿ ಹೋದವು. ಪರಾಜಿತಗೊಂಡು ನಿರುತ್ಸಾಹದಿಂದ ಓಡಿ ಹೋಗುತ್ತಿದ್ದ ಅವರನ್ನು ಪಾಂಚಾಲ-ಪಾಂಡವರು ಬೆನ್ನಟ್ಟಿ ಹೋದರು. ಬಾಣಗಳ ಶಬ್ಧ, ಪುಷ್ಕಲ ಸಿಂಹನಾದಗಳು, ಮತ್ತು ಶೂರರ ದಾರುಣ ಶಂಖಶಬ್ಧಗಳು ಕೇಳಿಬಂದವು. ಭಯದಿಂದ ನಡುಗಿ ಓಡಿಹೋಗುತ್ತಿರುವ ಕೌರವ ಸೈನ್ಯವನ್ನು ನೋಡಿ ಪಾಂಚಾಲ-ಪಾಂಡವರು ಒಟ್ಟಿಗೇ ಅನ್ಯೋನ್ಯರಲ್ಲಿ ಮಾತನಾಡಿಕೊಂಡರು:

> "ಇಂದು ಸತ್ಯಧೃತಿ ರಾಜಾ ಯುಧಿಷ್ಠಿರನು ಗೆದ್ದಿದ್ದಾನೆ. ಇಂದು ದುರ್ಯೋಧನನು ಪ್ರದೀಪ್ತ ರಾಜಶ್ರೀಯನ್ನು ಕಳೆದುಕೊಂಡಿದ್ದಾನೆ. ಇಂದು ಜನೇಶ್ವರ ಧೃತರಾಷ್ಟ್ರನು ಮಗನು ಹತನಾದನೆಂದು ಕೇಳಿ ಮೂರ್ಛಿತನಾಗಿ ಭೂಮಿಯ ಮೇಲೆ ಬಿದ್ದು ಚೆನ್ನಾಗಿ ರೋದಿಸುವಂತಾಗಲಿ! ಸರ್ವಧನ್ವಿಗಳಲ್ಲಿ ಕೌಂತೇಯನು ಸಮರ್ಥನು ಎಂದು ಇಂದು ತಿಳಿದುಕೊಳ್ಳಲಿ! ಕೆಟ್ಟಬುದ್ಧಿ ಪಾಪಕರ್ಮಿಯು ಇಂದು ತನ್ನನ್ನು ತಾನೇ ನಿಂದಿಸಿಕೊಳ್ಳುವಂತಾಗಲಿ! ಕ್ಷತ್ತ ವಿದುರನ ಸತ್ಯ ಹಿತೋಕ್ತಿಗಳನ್ನು ಇಂದು ನೆನಪಿಸಿಕೊಳ್ಳಲಿ! ಇಂದಿನಿಂದ ಪಾರ್ಥರ ಸೇವಕನಾಗಿದ್ದುಕೊಂಡು ನೃಪನು

ಪಾಂಡುನಂದನರು ಅನುಭವಿಸಿದ ದುಃಖಗಳನ್ನು ಅರಿತುಕೊಳ್ಳಲಿ! ಇಂದು ಆ ಮಹೀಪತಿಯು ಕೃಷ್ಣನ ಮಹಾತ್ಮೆಯನ್ನು ತಿಳಿದುಕೊಳ್ಳಲಿ! ಯುದ್ಧದಲ್ಲಿ ಅರ್ಜುನನ ಧನುರ್ಘೋಷವು ಘೋರವಾದುದು ಎನ್ನುವುದನ್ನು ಇಂದು ಅವನು ಅರಿತುಕೊಳ್ಳಲಿ! ಅಸ್ತ್ರಗಳ ಬಲವನ್ನೂ, ಯುದ್ಧದಲ್ಲಿ ಬಾಹುಗಳ ಬಲವನ್ನೂ, ಭೀಮನ ಘೋರ ಸರ್ವಬಲವನ್ನು ಇಂದು ಆ ಮಹಾತ್ಮನು ತಿಳಿದುಕೊಳ್ಳಲಿ! ಯುದ್ಧದಲ್ಲಿ ಶಕ್ರನಿಂದ ಮಯಾಸುರನು ಹತನಾದಂತೆ ದುರ್ಯೋಧನನು ಹತನಾಗಲು, ಭೀಮಸೇನನು ಮಾಡಿದ ದುಃಶಾಸನವಧೆಯಂತಹ ಕೃತ್ಯವನ್ನು ಮಹಾಬಲ ಭೀಮನಲ್ಲದೇ ಲೋಕದಲ್ಲಿ ಬೇರೆ ಯಾರು ಮಾಡಬಲ್ಲರು! ದೇವತೆಗಳಿಗೂ ದುಸ್ಸಹನಾಗಿದ್ದ ಮದ್ರರಾಜನು ಹತನಾದುದನ್ನು ಕೇಳಿ ಇಂದು ಅವನು ಜ್ಯೇಷ್ಠ ಪಾಂಡವನ ಪರಾಕ್ರಮವೇನೆಂದು ತಿಳಿದುಕೊಳ್ಳಲಿ! ಇಂದಿನ ಸಂಗ್ರಾಮದಲ್ಲಿ ಶೂರ ಗಾಂಧಾರ ಸೌಬಲ ಮತ್ತು ಎಲ್ಲರೂ ಹತರಾಗಲು ಮಾದ್ರೀಪುತ್ರರ ಮಹಾಬಲವನ್ನು ಅವನು ತಿಳಿದುಕೊಳ್ಳಲಿ! ಯಾರ ಯೋದ್ಧರು ಧನಂಜಯ, ಸಾತ್ಯಕಿ, ಭೀಮಸೇನ, ಧೃಷ್ಟದ್ಯುಮ್ನ, ದ್ರೌಪದಿಯರ ಐವರು ಮಕ್ಕಳು,

ಮಾದ್ರೀಪುತ್ರರು, ಶಿಖಂಡೀ ಮತ್ತು ರಾಜಾ ಯುಧಷ್ಠಿರರೋ ಅವರಿಗೆ ಹೇಗೆ ತಾನೆ ಜಯವು ಲಭಿಸುವುದಿಲ್ಲ? ಜಗತ್ತಿಗೇ ನಾಥನಾಗಿರುವ ಜನಾರ್ದನ ಕೃಷ್ಣನು ಯಾರ ನಾಥನೋ, ಯಾರು ಧರ್ಮವನ್ನೇ ಆಶ್ರಯಿಸಿರುವರೋ ಅವರಿಗೆ ಜಯವು ಹೇಗೆ ಸಾಧ್ಯವಾಗುವುದಿಲ್ಲ? ಸದಾ ಧರ್ಮಯಶೋನಿಧಿಯಾಗಿರುವ ಹೃಷೀಕೇಶನು ಯಾರ ನಾಥನೋ ಅಂತಹ ಯುಧಿಷ್ಠಿರನ ಹೊರತಾಗಿ ಬೇರೆ ಯಾರು ತಾನೇ ರಣದಲ್ಲಿ ಭೀಷ್ಮ, ದ್ರೋಣ, ಕರ್ಣ, ಮದ್ರರಾಜ, ಮತ್ತು ಅನ್ಯ ನೂರಾರು ಸಹಸ್ರಾರು ನೃಪತಿವೀರರನ್ನು ರಣದಲ್ಲಿ ಗೆಲ್ಲಲು ಶಕ್ಯರು?”

ಹೀಗೆ ಮಾತನಾಡಿಕೊಳ್ಳುತ್ತಾ, ಮಹಾ ಹರ್ಷದಿಂದ ಸೃಂಜಯರು ಓಡಿಹೋಗುತ್ತಿರುವ ಕೌರವರನ್ನು ಬೆನ್ನಟ್ಟಿ ಹೋದರು.

ಧನಂಜಯ, ಮಾದ್ರೀಪುತ್ರರು ಮತ್ತು ಸಾತ್ಯಕಿಯು ಶಕುನಿಯ ರಥಸೇನೆಯನ್ನು ಆಕ್ರಮಣಿಸಿದರು. ಭೀಮಸೇನನ ಭಯದಿಂದ ಪೀಡಿತರಾಗಿ ಓಡಿ ಹೋಗುತ್ತಿದ್ದ ಅವರೆಲ್ಲರನ್ನೂ ನೋಡಿ ದುರ್ಯೋಧನನು ಸೂತನಿಗೆ ಹೇಳಿದನು:

“ಧನುಷ್ಪಾಣಿಯಾಗಿ ನಿಂತಿರುವ ನನ್ನನ್ನು ಪಾರ್ಥನು

ಅತಿಕ್ರಮಿಸಲಾರದಂತೆ ನನ್ನ ಕುದುರೆಗಳನ್ನು ಸರ್ವಸೇನೆಗಳ ಹಿಂಭಾಗಕ್ಕೆ ನಡೆಸಿಕೊಂಡು ಹೋಗು! ಹಿಂದಿನಿಂದ ಯುದ್ಧಮಾಡುತ್ತಿರುವ ನನ್ನನ್ನು ಧನಂಜಯನು ಮೀರಿಹೋಗಲು ಉತ್ಸಾಹಿಸುವುದಿಲ್ಲ. ಸೂತ! ಪಾಂಡವರ ಆಕ್ರಮಣಕ್ಕೆ ಒಳಗಾಗಿರುವ ಮಹಾ ಸೇನೆಯನ್ನು ನೋಡು! ಸೈನ್ಯಗಳಿಂದ ಮೇಲೆದ್ದ ಧೂಳು ಸರ್ವತ್ರ ವ್ಯಾಪಿಸಿರುವುದನ್ನು ನೋಡು! ಘೋರ-ಭಯಂಕರ ಸಿಂಹನಾದಗಳನೇಕವು ಕೇಳಿಬರುತ್ತಿವೆ. ಆದುದರಿಂದ ಸೂತ! ನಿಧಾನವಾಗಿ ಸೇನೆಯ ಹಿಂಭಾಗಕ್ಕೆ ನಡೆಸಿಕೊಂಡು ಹೋಗು. ನಾನು ಸಮರಸನ್ನದ್ಧನಾಗಿ ಪಾಂಡವರನ್ನು ವಿರೋಧಿಸಿ ಯುದ್ಧಮಾಡಲು ನನ್ನ ಸೇನೆಯು ತೇಜಸ್ಸಿನಿಂದ ಪುನಃ ಬೇಗನೇ ಹಿಂದಿರುಗಿ ಬರುತ್ತದೆ.”

ಶೂರಾಗ್ರನಿಗೆ ತಕ್ಕುದಾದ ದುರ್ಯೋಧನನ ಆ ಮಾತನ್ನು ಕೇಳಿದ ಸಾರಥಿಯು ಸುವರ್ಣಭೂಷಿತ ಕುದುರೆಗಳನ್ನು ಮೆಲ್ಲನೆ ಪ್ರಚೋದಿಸಿದನು.

## ಭೀಮಸೇನನಿಂದ ಇಪ್ಪತ್ತೊಂದು ಸಾವಿರ ಪದಾತಿಗಳ ಸಂಹಾರ

ಆನೆ-ಕುದುರೆ-ರಥಗಳಿಂದ ವಿಹೀನರಾಗಿದ್ದ, ತಮ್ಮ ಜೀವಿತವನ್ನೇ ತೊರೆದಿದ್ದ, ಇಪ್ಪತ್ತೊಂದು ಸಾವಿರ ಪದಾತಿಗಳು ಅಲ್ಲಿ ಯುದ್ಧಮಾಡಲು ನಿಂತಿದ್ದರು. ನಾನಾದೇಶಗಳಲ್ಲಿ ಹುಟ್ಟಿದ್ದ, ನಾನಾ ನಗರಗಳಲ್ಲಿ ವಾಸಮಾಡುತ್ತಿದ್ದ ಯೋಧರು ಮಹಾಯಶಸ್ಸನ್ನು ಬಯಸಿ ಅಲ್ಲಿ ಯುದ್ಧಕ್ಕೆ ಸಿದ್ಧರಾಗಿದ್ದರು. ಪ್ರಹೃಷ್ಟರಾಗಿ ಪರಸ್ಪರರ ಮೇಲೆ ಬಿದ್ದು ಮರ್ದಿಸುತ್ತಿದ್ದ ಅವರ ನಡುವೆ ಘೋರರೂಪದ ಭಯಾನಕ ಯುದ್ಧವು ಪ್ರಾರಂಭವಾಯಿತು. ಆಗ ಭೀಮಸೇನ-ಧೃಷ್ಟದ್ಯುಮ್ನರು ತಮ್ಮ ಚತುರಂಗ ಬಲದಿಂದ ಆ ನಾನಾದೇಶದ ಪದಾತಿಗಳನ್ನು ತಡೆದರು. ವೀರಲೋಕಗಳಿಗೆ ಹೋಗಲು ಬಯಸಿ ಸಂಹೃಷ್ಟರಾದ ಕೆಲವು ಪದಾತಿಗಳು ಭುಜಗಳನ್ನು ತಟ್ಟಿಕೊಳ್ಳುತ್ತಾ ಸಿಂಹನಾದಗೈಯುತ್ತಾ ರಣದಲ್ಲಿ ಭೀಮಸೇನನನ್ನೇ ಆಕ್ರಮಣಿಸುತ್ತಿದ್ದರು. ರೋಷಗೊಂಡಿದ್ದ ಆ ಧಾರ್ತರಾಷ್ಟ್ರ ಯುದ್ಧದುರ್ಮದರು ಭೀಮಸೇನನ ಬಳಿಹೋಗಿ ಸಿಂಹನಾದಗೈಯುತ್ತಿದ್ದರು. ರಣದಲ್ಲಿ ಭೀಮಸೇನನನ್ನು ಸುತ್ತುವರೆದು ಎಲ್ಲಕಡೆಗಳಿಂದ ಪ್ರಹರಿಸುತ್ತಿದ್ದರು. ಸಮರದಲ್ಲಿ ಪದಾತಿಗಣಗಳಿಂದ ಸುತ್ತುವರೆಯಲ್ಪಟ್ಟು ಪ್ರಹಾರಕ್ಕೊಳಪಟ್ಟಿದ್ದ ಭೀಮನು ಅಲುಗಾಡದೇ ಮೈನಾಕ ಪರ್ವತದಂತೆ ರಥದಲ್ಲಿಯೇ ಕುಳಿತಿದ್ದನು.

ಮಹಾರಥ ಭೀಮಸೇನನನ್ನು ಸೆರೆಹಿಡಿಯಲು ಪ್ರಯತ್ನಿಸುತ್ತಿದ್ದ

ಯೋಧರು ಅನ್ಯರು ಯಾರೂ ಅಲ್ಲಿಗೆ ಬಾರದಂತೆ ತಡೆದರು. ಅವರಿಂದ ಹಾಗೆ ಮುತ್ತಲ್ಪಟ್ಟ ಭೀಮಸೇನನು ಅತ್ಯಂತ ಕ್ರೋಧಿತನಾದನು. ಬೇಗನೇ ಅವನು ರಥದಿಂದ ಕೆಳಕ್ಕಿಳಿದು ತಾನೂ ಪದಾತಿಯಾದನು. ಸುವರ್ಣಪಟ್ಟಿಯನ್ನು ಸುತ್ತಿದ್ದ ಮಹಾಗದೆಯನ್ನು ಕೈಗೆತ್ತಿಕೊಂಡು ದಂಡಪಾಣಿ ಯಮನಂತೆ ಕೌರವ ಪದಾತಿಸೈನಿಕರನ್ನು ಸಂಹರಿಸತೊಡಗಿದನು. ರಥ-ಕುದುರೆ-ಆನೆಗಳಿಂದ ವಿಹೀನವಾಗಿದ್ದ ಆ ಇಪ್ಪತ್ತೊಂದು ಸಾವಿರ ಪದಾತಿಗಳನ್ನು ಬಲಶಾಲೀ ಭೀಮನು ಗದೆಯಿಂದ ಸಂಹರಿಸಿ ಕೆಳಕ್ಕುರುಳಿಸಿದನು. ಆ ಪುರುಷಸೇನೆಯನ್ನು ಸಂಹರಿಸಿ ಸತ್ಯಪರಾಕ್ರಮಿ ಭೀಮನು ಸ್ವಲ್ಪವೇ ಸಮಯದಲ್ಲಿ ಧೃಷ್ಟದ್ಯುಮ್ನನ ಎದುರಿಗೆ ಕಾಣಿಸಿಕೊಂಡನು.

ಭಿರುಗಾಳಿಯಿಂದ ಧ್ವಂಸಗೊಂಡ ಹೂಬಿಟ್ಟ ಕರ್ಣಿಕಾರ ವೃಕ್ಷಗಳಂತೆ ರಕ್ತದಿಂದ ತೋಯ್ದುಹೋಗಿದ್ದ ಪದಾತಿಗಳು ಹತರಾಗಿ ಭೂಮಿಯ ಮೇಲೆ ಮಲಗಿದರು. ನಾನಾ ಪುಷ್ಪಗಳ ಮಾಲೆಗಳನ್ನು ಧರಿಸಿದ್ದ, ನಾನಾ ಕುಂಡಲಗಳನ್ನು ಧರಿಸಿದ್ದ, ನಾನಾ ಜಾತಿಯ ನಾನಾ ದೇಶಗಳಿಂದ ಬಂದುಸೇರಿದ್ದ ಪದಾತಿಗಳು ಅಲ್ಲಿ ಹತರಾದರು. ಪತಾಕೆ-ಧ್ವಜಗಳಿಂದ ಆಚ್ಛಾದಿತವಾಗಿದ್ದ ಪದಾತಿಗಳ ಆ ಮಹಾ ಸೇನೆಯು ಕತ್ತರಿಸಲ್ಪಟ್ಟು ಭಯಾನಕ ಘೋರರೂಪವನ್ನು ತಾಳಿತು.

## ಶಕುನಿ ಸೇನೆಯೊಡನೆ ಪಾಂಡವರ ಯುದ್ಧ; ಶಾಲ್ವ ವಧೆ

ಯುಧಿಷ್ಠಿರನ ನಾಯಕತ್ವದಲ್ಲಿ ಸರ್ವಸೇನೆಗಳೊಡನೆ ಮಹಾರಥರು ದುರ್ಯೋಧನನನ್ನು ಆಕ್ರಮಣಿಸಿದರು. ಆಕ್ರಮಣಿಸಿದ ಅವರನ್ನು ದುರ್ಯೋಧನನು ಸಾಗರವನ್ನು ತಡೆಯುವ ತೀರದಂತೆ ತಡೆದನು. ಒಬ್ಬನೇ ಇದ್ದರೂ ಒಟ್ಟಾಗಿದ್ದ ಪಾರ್ಥರು ಅವನನ್ನು ದಾಟಿಹೋಗಲು ಶಕ್ಯರಾಗಲಿಲ್ಲ! ಅನತಿದೂರದಲ್ಲಿಯೇ ಪಲಾಯನದ ಮನಸ್ಸುಮಾಡಿ ಓಡಿಹೋಗುತ್ತಿದ್ದ ಬಹಳವಾಗಿ ಗಾಯಗೊಂಡಿದ್ದ ತನ್ನ ಸೈನ್ಯವನ್ನು ಉದ್ದೇಶಿಸಿ ದುರ್ಯೋಧನನು ಇಂತೆಂದನು:

> “ಯೋಧರೇ! ನೀವು ಪೃಥ್ವಿ-ಪರ್ವತ ಎಲ್ಲಿ ಹೋದರೂ ಪಾಂಡವರು ನಿಮ್ಮನ್ನು ಸಂಹರಿಸಲಾಗದ ಸ್ಥಳವನ್ನು ನಾನು ಕಾಣೆ! ಹೀಗಿರುವಾಗ ಓಡಿಹೋಗುವುದೇಕೆ? ಕೃಷ್ಣಾರ್ಜುನರಿಬ್ಬರೂ ಬಹಳವಾಗಿ ಗಾಯಗೊಂಡಿದ್ದಾರೆ. ಅವರ ಸೇನೆಯೂ ಸ್ವಲ್ಪವೇ ಉಳಿದಿದೆ. ಒಂದುವೇಳೆ ನಾವೆಲ್ಲರೂ ಒಟ್ಟಾಗಿ ನಿಂತರೆ ನಿಶ್ಚಯವಾಗಿಯೂ ನಮಗೆ ವಿಜಯವಾಗುವುದು. ನಾವು ಬೇರೆ ಬೇರೆಯಾಗಿ ಓಡಿಹೋದರೆ ತಮಗೆ ಅಪ್ರಿಯವೆಸಗಿದ ನಮ್ಮನ್ನು ಪಾಂಡವರು ಬೆನ್ನಟ್ಟಿ ಬಂದು ಸಂಹರಿಸುತ್ತಾರೆ. ಸಮರದಲ್ಲಿ

ನಿಲ್ಲುವುದೇ ನಮಗೆ ಶ್ರೇಯಸ್ಕರವಾದುದು. ಇಲ್ಲಿಗೆ ಬಂದು ಸೇರಿರುವ ಕ್ಷತ್ರಿಯರೆಲ್ಲರೂ ಇದನ್ನು ಕೇಳಿ! ಅಂತಕನು ಸದಾ ಶೂರ ಮತ್ತು ಹೇಡಿಗಳೆಂಬ ತಾರತಮ್ಯವಿಲ್ಲದೇ ಕೊಲ್ಲುತ್ತಾನೆ. ಹೀಗಿರುವಾಗ ಕ್ಷತ್ರಿಯನೆನಿಸಿಕೊಳ್ಳುವ ಯಾವ ಮೂಢ ಪುರುಷನು ತಾನೇ ಯುದ್ಧಮಾಡುವುದಿಲ್ಲ? ಕ್ರುದ್ಧ ಭೀಮಸೇನನ ಎದಿರು ನಿಲ್ಲುವುದೇ ನಮಗೆ ಶ್ರೇಯಸ್ಕರವಾದುದು. ಕ್ಷತ್ರಧರ್ಮದಿಂದ ಯುದ್ಧಮಾಡುವಾಗ ದೊರಕುವ ಮೃತ್ಯುವು ಸುಖಕರವಾದುದು. ಗೆದ್ದರೆ ಸುಖವನ್ನು ಪಡೆಯುತ್ತಾನೆ. ಹತನಾದರೆ ನಂತರದ ಮಹಾಫಲವನ್ನು ಪಡೆಯುತ್ತಾನೆ. ಕೌರವರೇ! ಸ್ವರ್ಗದ ಮಾರ್ಗಕ್ಕೆ ಯುದ್ಧಧರ್ಮಕ್ಕಿಂತಲೂ ಶ್ರೇಯಸ್ಕರವಾದುದಿಲ್ಲ. ಯುದ್ಧದಲ್ಲಿ ಹತನಾದವನು ಅಲ್ಪಕಾಲದಲ್ಲಿಯೇ ಉತ್ತಮ ಲೋಕಗಳನ್ನು ಗೆಲ್ಲುತ್ತಾನೆ.”

ಅವನ ಆ ಮಾತನ್ನು ಕೇಳಿ ಗೌರವಿಸಿ ಪಾರ್ಥಿವರು ಪುನಃ ಪಾಂಡವರನ್ನು ಎದುರಿಸಲು ಹಿಂದಿರುಗಿದರು. ಮೇಲೇರಿ ಬರುತ್ತಿದ್ದ ಅವರನ್ನು ವಿಜಯೇಚ್ಛು-ಪ್ರಹಾರಿ ಪಾರ್ಥರು ಸೇನೆಗಳನ್ನು ವ್ಯೂಹದಲ್ಲಿ ರಚಿಸಿ ಪ್ರತಿಯಾಗಿ ಆಕ್ರಮಣಿಸಿದರು. ಮೂರು ಲೋಕಗಳಲ್ಲಿಯೂ

ವಿಶ್ರುತ ಗಾಂಡೀವ ಧನುಸ್ಸನ್ನು ಟೇಂಕರಿಸುತ್ತಾ ವೀರ್ಯವಾನ್ ಧನಂಜಯನು ರಥದಲ್ಲಿ ಅಲ್ಲಿಗೆ ಆಗಮಿಸಿದನು. ಮಹಾಬಲ ಸಾತ್ಯಕಿ ಮತ್ತು ಮಾದ್ರೀಪುತ್ರರಿಬ್ಬರೂ ಹೃಷ್ಟರಾಗಿ ಪ್ರಯತ್ನಪಟ್ಟು ವೇಗದಿಂದ ಶಕುನಿಯ ಸೇನೆಯನ್ನು ಆಕ್ರಮಣಿಸಿದರು.

ಸೇನೆಗಳು ಹಿಂದಿರುಗಲು ಮ್ಲೇಚ್ಛಗಣಾಧಿಪ ಶಾಲ್ವನು ಸಂಕ್ರುದ್ಧನಾಗಿ ಮದೋದಕವನ್ನು ಸುರಿಸುತ್ತಿದ್ದ ಪರ್ವತೋಪಮ ಐರಾವತ ಸಮಾನ ಅಮಿತ್ರಗಣಗಳನ್ನು ಮರ್ದಿಸುವ ಅತಿದೊಡ್ಡ ಆನೆಯನ್ನೇರಿ ಪಾಂಡವರ ಮಹಾಬಲವನ್ನು ಆಕ್ರಮಣಿಸಿದನು. ಮಹಾಭದ್ರಕುಲದಲ್ಲಿ ಹುಟ್ಟಿದ್ದ ಆ ಆನೆಯನ್ನು ಧಾರ್ತರಾಷ್ಟ್ರರು ನಿತ್ಯವೂ ಪೂಜಿಸುತ್ತಿದ್ದರು. ಶಾಸ್ತ್ರವಿನಿಶ್ಚಯಗಳನ್ನು ತಿಳಿದು ಚೆನ್ನಾಗಿ ಸಿದ್ಧಪಡಿಸಿದ್ದ ಆ ಆನೆಯನ್ನು ಏರಿ ಶಾಲ್ವನು ಸಮರಕ್ಕೆ ಬಂದಿದ್ದನು. ಅದರ ಮೇಲೇರಿ ಕುಳಿತಿದ್ದ ರಾಜವರನು ರಾತ್ರಿಯು ಕಳೆದ ಉದಯಕಾಲದ ರವಿಯಂತೆ ಪ್ರಕಾಶಿಸುತ್ತಿದ್ದನು. ಆ ಗಜಪ್ರವರದ ಮೇಲೇರಿ ಅವನು ಒಟ್ಟಾಗಿದ್ದ ಪಾಂಡುಸುತರನ್ನು ಆಕ್ರಮಣಿಸಿದನು. ಮಹೇಂದ್ರನ ವಜ್ರಸಮ ಘೋರ ನಿಶಿತ ಪೃಷತ್ಕಗಳಿಂದ ಅವನು ಪಾಂಡವ ಸೇನೆಯನ್ನು ಸೀಳತೊಡಗಿದನು. ಮಹಾರಣದಲ್ಲಿ ಶರಗಳನ್ನು ಪ್ರಯೋಗಿಸಿ ಹಿಂದೆ ವಜ್ರಧರನು ದೈತ್ಯರನ್ನು ಹೇಗೋ ಹಾಗೆ ಪಾಂಡವ ಯೋಧರನ್ನು

ಯಮನಲ್ಲಿಗೆ ಕಳುಹಿಸುತ್ತಿರುವಾಗ ಕೌರವ-ಪಾಂಡವರಲ್ಲಿ ವ್ಯತ್ಯಾಸವೇ ಕಾಣಲಿಲ್ಲ. ಸಮೀಪದಲ್ಲಿ ಮಹೇಂದ್ರನ ಆನೆಯಿದೆಯೋ ಎನ್ನುವಂತೆ ಪಾಂಡವ-ಸೋಮಕ-ಸೃಂಜಯರಿಗೆ ಆ ಆನೆಯು ಒಂದೇ ಆಗಿದ್ದರೂ ಸುತ್ತಲೂ ಸಹಸ್ರಾರು ಆನೆಗಳು ಸಂಚರಿಸುತ್ತಿರುವಂತೆ ತೋರುತ್ತಿತ್ತು. ಓಡಿಹೋಗುತ್ತಿದ್ದ ಶತ್ರು ಸೇನೆಯನ್ನು ಅದು ಎಲ್ಲಕಡೆಗಳಿಂದಲೂ ಬೆನ್ನಟ್ಟಿಹೋಗುತ್ತಿರುವಂತೆ ತೋರುತ್ತಿತ್ತು. ಅತ್ಯಂತ ಭಯದಿಂದಾಗಿ ಸಮರದಲ್ಲಿ ನಿಲ್ಲಲಾರದೇ ಓಡಿಹೋಗುತ್ತಿದ್ದ ಅವರು ಪರಸ್ಪರರನ್ನೇ ತುಳಿದು ಗಾಯಗೊಳಿಸುತ್ತಿದ್ದರು. ಆ ನರಾಧಿಪನಿಂದ ಪಾಂಡವರ ಮಹಾಸೇನೆಯು ಒಮ್ಮೆಲೇ ಭಗ್ನಗೊಂಡಿತು. ಆನೆಯ ವೇಗವನ್ನು ತಡೆದುಕೊಳ್ಳಲಾಗದೇ ಅವರ ಸೇನೆಯು ನಾಲ್ಕು ದಿಕ್ಕುಗಳಿಗೂ ಪಲಾಯನಗೈದಿತು.

ಪಾಂಡವ ಸೇನೆಯು ಭಗ್ನವಾಗಿದುದನ್ನು ನೋಡಿ ಯುದ್ಧದಲ್ಲಿ ಕೌರವ ಯೋಧಮುಖ್ಯರೆಲ್ಲರೂ ಶಾಲ್ವನನ್ನು ಗೌರವಿಸಿ, ಚಂದ್ರಸಮಾನ ಶಂಖಗಳನ್ನು ಊದಿದರು. ಶಂಖಶಬ್ಧಗಳೊಂದಿಗೆ ಹರ್ಷದಿಂದ ಹೊರಟ ಕೌರವರ ಆ ನಿನಾದವನ್ನು ಪಾಂಡವ-ಸೃಂಜಯರ ಸೇನಾಪತಿ ಪಾಂಚಾಲಪುತ್ರನು ರೋಷದಿಂದ ಸಹಿಸಿಕೊಳ್ಳಲಿಲ್ಲ. ಇಂದ್ರನೊಡನೆ ಯುದ್ಧಮಾಡುವಾಗ ಇಂದ್ರನ ವಾಹನ ಗಜೇಂದ್ರ ಐರಾವತನನ್ನು

ಜಂಭಾಸುರನು ಎದುರಿಸಿದಂತೆ ಧೃಷ್ಟದ್ಯುಮ್ನನು ಆ ಆನೆಯನ್ನು ಎದುರಿಸಿ ಯುದ್ಧಮಾಡಿದನು. ಯುದ್ಧದಲ್ಲಿ ಒಮ್ಮೆಲೇ ತನ್ನ ಮೇಲೆ ಬೀಳುತ್ತಿದ್ದ ಪಾಂಚಾಲರಾಜನನ್ನು ನೋಡಿ ರಾಜಸಿಂಹ ಶಾಲ್ವನು ದ್ರುಪದಾತ್ಮಜನ ವಧೆಗಾಗಿ ಬೇಗನೇ ತನ್ನ ಆನೆಯನ್ನು ನುಗ್ಗಿಸಿದನು. ವೇಗದಿಂದ ಬೀಳುತ್ತಿದ್ದ ಆ ಆನೆಯನ್ನು ಧೃಷ್ಟದ್ಯುಮ್ನನು ಸೂರ್ಯನ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಕಮ್ಮಾರನಿಂದ ಹದಮಾಡಿಸಲ್ಪಟ್ಟ ನಿಶಿತ ಉಗ್ರವೇಗದ ಮೂರು ನಾರಾಚಮುಖ್ಯ ಪೃಷತ್ಕಗಳಿಂದ ಗಾಯಗೊಳಿಸಿದನು. ಆ ಮಹಾತ್ಮನು ಪುನಃ ಐದು ನಿಶಿತ ನಾರಾಚಮುಖ್ಯಗಳನ್ನು ಅವನ ಕುಂಭಸ್ಥಳಕ್ಕೆ ಹೊಡೆಯಲು ಅತಿಯಾಗಿ ಗಾಯಗೊಂಡ ಆ ಶ್ರೇಷ್ಠಗಜವು ಯುದ್ಧದಿಂದ ಹಿಮ್ಮೆಟ್ಟಿ ಓಡಿಹೋಯಿತು. ಒಮ್ಮೆಲೇ ಗಾಯಗೊಂಡು ಓಡುಹೋಗುತ್ತಿದ್ದ ಆ ಗಜರಾಜನನ್ನು ನೋಡಿ ಶಾಲ್ವನು ಚಾವಟಿ-ಅಂಕುಶಗಳಿಂದ ಬೇಗನೇ ಅದನ್ನು ತಿರುಗಿಸಿ ಪಾಂಚಾಲರಾಜನ ರಥದ ಕಡೆ ನುಗ್ಗಿಸಿದನು. ವೇಗದಿಂದ ಮೇಲೆರಗಿ ಬರುತ್ತಿರುವ ಆ ಆನೆಯನ್ನು ಕಂಡು ಭಯದಿಂದ ಅಂಗಾಂಗಗಳು ನಡುಗುತ್ತಿರಲು ವೀರ ಧೃಷ್ಟದ್ಯುಮ್ನನು ಶೀಘ್ರದಲ್ಲಿಯೇ ಗದೆಯನ್ನೆತ್ತಿಕೊಂಡು ತನ್ನ ರಥದಿಂದ ವೇಗವಾಗಿ ಧುಮುಕಿ ಭೂಮಿಯ ಆಶ್ರಯವನ್ನು ಪಡೆದನು. ಮಹಾ ಆನೆಯು ಕೂಡಲೇ ಆ ಹೇಮವಿಭೂಷಿತ ರಥವನ್ನು ಸಾರಥಿ-ಕುದುರೆಗಳೊಂದಿಗೆ

ಸೊಂಡಿಲಿನಿಂದ ಮೇಲೆತ್ತಿ ಗರ್ಜಿಸಿ ಭೂಮಿಯ ಮೇಲೆ ಅಪ್ಪಳಿಸಿತು. ಪಾಂಚಾಲರಾಜನ ಮಗನು ಹಾಗೆ ಆ ಶ್ರೇಷ್ಠ ಆನೆಯಿಂದ ಪೀಡಿತನಾದುದನ್ನು ಕಂಡು ಕೂಡಲೇ ಅಲ್ಲಿಗೆ ವೇಗದಿಂದ ಭೀಮ-ಶಿಖಂಡಿ-ಸಾತ್ಯಕಿಯರು ಆಗಮಿಸಿದರು. ಎಲ್ಲ ಕಡೆಗಳಿಂದಲೂ ಆಕ್ರಮಣಿಸುತ್ತಿದ್ದ ಅದನ್ನು ಶರವೇಗಗಳಿಂದ ಅವರು ನಿಯಂತ್ರಿಸಿದರು. ರಥಿಗಳಿಂದ ಹಾಗೆ ಸುತ್ತುವರೆಯಲ್ಪಟ್ಟ ಆನೆಯು ರಣದಲ್ಲಿ ಮುಂದೇನುಮಾಡಬೇಕೆಂದು ತಿಳಿಯದೇ ನಡುಗತೊಡಗಿತು. ಆಗ ರಾಜಾ ಶಾಲ್ವನು ಸೂರ್ಯನು ಎಲ್ಲಕಡೆಗಳನ್ನೂ ರಶ್ಮಿಜಾಲಗಳನ್ನು ಪ್ರಸರಿಸುವಂತೆ ಎಲ್ಲಕಡೆ ಪೃಷತ್ಕಗಳನ್ನು ಸುರಿಸಿದನು. ಆ ಆಶುಗಗಳಿಂದ ವಧಿಸಲ್ಪಡುತ್ತಿದ್ದ ಪಾಂಡವರ ರಥಗುಂಪುಗಳು ಎಲ್ಲವೂ ಅಲ್ಲಲ್ಲಿ ಓಡ ತೊಡಗಿದವು. ಶಾಲ್ವನ ಆ ಕೃತ್ಯವನ್ನು ನೋಡಿ ಪಾಂಚಾಲ-ಮತ್ಸ್ಯ-ಸೃಂಜಯರು ಹಾಹಾಕಾರ ಮಾಡಿದರು. ಅವರು ಧನುಸ್ಸಿನ ತುದಿಗಳಿಂದ ಆನೆಯನ್ನು ಎಲ್ಲಕಡೆಗಳಿಂದ ತಿವಿದು ಯುದ್ಧಮಾಡತೊಡಗಿದರು. ಆಗ ವೀರ ಪಾಂಚಾಲರಾಜನು ತ್ವರೆಮಾಡಿ ಗಿರಿಶೃಂಗದಂತಿದ್ದ ಗದೆಯನ್ನು ಹಿಡಿದು ಸ್ವಲ್ಪವೂ ಗಾಬರಿಗೊಳ್ಳದೇ ವೇಗದಿಂದ ಆ ಆನೆಯನ್ನು ಅನುಸರಿಸಿದನು. ತರಸ್ವೀ ಪಾಂಚಾಲರಾಜಕುಮಾರನು ಕೂಡಲೇ ಗದೆಯನ್ನೆತ್ತಿ ಭೂಮಿಯನ್ನು ಹೊತ್ತ ದಿಗ್ಗಜದಂತಿದ್ದ, ಮೋಡದಂತೆ ಹೊಳೆಯುತ್ತಿದ್ದ,

ಮದೋದಕವನ್ನು ಸುರಿಸುತ್ತಿದ್ದ ಆ ಆನೆಯನ್ನು ಜೋರಾಗಿ ಹೊಡೆದನು. ಪರ್ವತೋಪಮ ಆ ಆನೆಯು ಕೂಡಲೇ ಕುಂಭವು ಒಡೆದು ಮುಖದಿಂದ ಹೇರಳ ರಕ್ತವನ್ನು ಕಕ್ಕುತ್ತಾ ಗಟ್ಟಿಯಾಗಿ ಚೀತ್ಕಾರ ಮಾಡಿ, ಭೂಕಂಪದಿಂದ ಕೆಳಗುರುಳಿಸಲ್ಪಟ್ಟ ಗಿರಿಯಂತೆ ಭೂಮಿಯ ಮೇಲೆ ಬಿದ್ದಿತು.

ಗಜೇಂದ್ರವು ಹಾಗೆ ಕೆಳಗುರುಳಲು ನಿನ್ನ ಮಗನ ಸೇನೆಯು ಹಾಹಾಕಾರಮಾಡುತ್ತಿರುವಾಗ ಶಿನಿಪ್ರವೀರ ಸಾತ್ಯಕಿಯು ನಿಶಿತ ಭಲ್ಲದಿಂದ ಶಾಲ್ವರಾಜನ ಶಿರಸ್ಸನ್ನು ತುಂಡರಿಸಿದನು. ದೇವಾಧಿಪನು ಪ್ರಚೋದಿಸಿದ ವಜ್ರದಿಂದ ಮಹಾ ಗಿರಿಶೃಂಗವು ಚೂರಾದಂತೆ ಯುದ್ಧದಲ್ಲಿ ಸಾತ್ವತನು ಶಿರವನ್ನು ಕತ್ತರಿಸಲು ಶಾಲ್ವನು ಗಜರಾಜನ ಸಹಿತ ಭೂಮಿಯ ಮೇಲೆ ಬಿದ್ದನು.

## ಕ್ಷೇಮಧೂರ್ತಿ ವಧೆ, ಕೃತವರ್ಮನ ಸೋಲು ಮತ್ತು ಕೌರವ ಸೇನಾ ಪಲಾಯನ

ಶೂರ ಶಾಲ್ವನು ಹತನಾಗಲು ಭಿರುಗಾಳಿಯಿಂದ ಮಹಾವೃಕ್ಷವು ಮುರಿದುಬೀಳುವಂತೆ ಕೌರವ ಸೇನೆಯು ಬೇಗನೆ ಭಗ್ನವಾಯಿತು. ಆ ಸೇನೆಯು ಭಗ್ನವಾದುದನ್ನು ಕಂಡು ಕೃತವರ್ಮನು ಸಮರಕ್ಕೆ ನಿಂತನು.

ಯುದ್ಧದಲ್ಲಿ ಶರಗಳನ್ನು ಎರಚುತ್ತಾ ಪರ್ವತದಂತೆ ನಿಂತಿದ್ದ ಶೂರ ಸಾತ್ವತನನ್ನು ನೋಡಿ ಕೌರವ ಸೇನೆಯು ಹಿಂದಿರುಗಿತು. ದುರಾಸದ ಪಾಂಡುಸೇನೆಯನ್ನು ಒಬ್ಬನೇ ತಡೆಯುತ್ತಿದ್ದ ಕೃತವರ್ಮ ಮತ್ತು ಪಾಂಡವರ ನಡುವೆ ಆಶ್ಚರ್ಯಕರ ಯುದ್ಧವು ನಡೆಯಿತು. ಕೃತವರ್ಮನ ಆ ದುಷ್ಕರ ಕರ್ಮಗಳನ್ನು ನೋಡಿ ಪ್ರಹೃಷ್ಟ ಅನ್ಯೋನ್ಯ ಸುಹೃದಯರು ಮಾಡಿದ ಸಿಂಹನಾದವು ಆಕಾಶವನ್ನೂ ಮುಟ್ಟುವಷ್ಟು ಜೋರಾಗಿತ್ತು. ಆ ಶಬ್ಧದಿಂದ ಪಾಂಚಾಲರು ನಡುಗಿದರು. ಆಗ ಸಾತ್ಯಕಿಯು ಶತ್ರುಗಳನ್ನು ಆಕ್ರಮಣಿಸಿದನು. ಅವನು ಮಹಾಬಲ ರಾಜಾ ಕ್ಷೇಮಧೂರ್ತಿಯನ್ನು ಎದುರಿಸಿ ಏಳು ನಿಶಿತ ಬಾಣಗಳಿಂದ ಅವನನ್ನು ಯಮಸಾದನಕ್ಕೆ ಕಳುಹಿಸಿದನು. ನಿಶಿತ ಶರಗಳನ್ನು ಪ್ರಯೋಗಿಸುತ್ತಾ ತನ್ನ ಕಡೆ ಬರುತ್ತಿದ್ದ ಶಿನಿಪುಂಗವನನ್ನು ಧೀಮಾನ್ ಹಾರ್ದಿಕ್ಯನು ವೇಗದಿಂದ ತಡೆದನು. ಸಿಂಹಗಳಂತೆ ಗರ್ಜಿಸುತ್ತಿದ್ದ ಆ ಇಬ್ಬರು ಧನ್ವಿ-ರಥಶ್ರೇಷ್ಠ-ಶಸ್ತ್ರಧಾರಿಶ್ರೇಷ್ಠರಿಬ್ಬರೂ ಅನ್ಯೋನ್ಯರನ್ನು ಆಕ್ರಮಣಿಸಿದರು. ಪಾಂಡವರೊಂದಿಗೆ ಪಾಂಚಾಲರೂ ಮತ್ತು ಅನ್ಯ ಯೋಧ-ನೃಪೋತ್ತಮರೂ ಆ ಇಬ್ಬರು ಪುರುಷಸಿಂಹರ ಯುದ್ಧದ ಪ್ರೇಕ್ಷಕರಾದರು. ಪ್ರಹೃಷ್ಟ ಆನೆಗಳಂತೆ ಆ ವೃಷ್ಣಿ-ಅಂಧಕ ಮಹಾರಥರು ನಾರಾಚ-ವತ್ಸದಂತಗಳಿಂದ ಅನ್ಯೋನ್ಯರನ್ನು ಗಾಯಗೊಳಿಸಿದರು.

ವಿವಿಧ ಮಾರ್ಗಗಳಲ್ಲಿ ಸಂಚರಿಸುತ್ತಾ ಹಾರ್ದಿಕ್ಯ-ಶಿನಿಪುಂಗವರು ಬಾಣಗಳ ಮಳೆಸುರಿಸಿ ಮುಹೂರ್ತಕಾಲ ಪರಸ್ಪರರನ್ನು ಅಂತರ್ಧಾನಗೊಳಿಸಿದರು. ಆ ವೃಷ್ಣಿಸಿಂಹರ ಧನುಸ್ಸುಗಳಿಂದ ವೇಗವಾಗಿ ಬರುತ್ತಿದ್ದ ಮಾರ್ಗಣಗಳು ಆಕಾಶದಲ್ಲಿ ಪತಂಗಗಳಂತೆ ಶೀಘ್ರವಾಗಿ ಹೋಗುತ್ತಿದ್ದವು. ಹೃದಿಕಾತ್ಮಜನು ಸತ್ಯಕರ್ಮ ಸಾತ್ಯಕಿಯನ್ನೊಬ್ಬನನ್ನೇ ಎದುರಿಸಿ ನಿಶಿತ ಬಾಣಗಳಿಂದ ಅವನ ನಾಲ್ಕು ಕುದುರೆಗಳನ್ನು ಪ್ರಹರಿಸಿದನು. ಅಂಕುಶದಿಂದ ತಿವಿಯಲ್ಪಟ್ಟ ಆನೆಯಂತೆ ಸಂಕ್ರುದ್ಧನಾದ ಆ ದೀರ್ಘಬಾಹು ಸಾತ್ಯಕಿಯು ಎಂಟು ಪರಮ ಬಾಣಗಳಿಂದ ಕೃತವರ್ಮನನ್ನು ಪ್ರಹರಿಸಿದನು. ಆಗ ಕೃತವರ್ಮನು ಧನುಸ್ಸನ್ನು ಸಂಪೂರ್ಣವಾಗಿ ಸೆಳೆದು ಬಿಟ್ಟ ಮೂರು ಶಿಲಾಶಿತಗಳಿಂದ ಸಾತ್ಯಕಿಯನ್ನು ಹೊಡೆದು ಒಂದರಿಂದ ಅವನ ಧನುಸ್ಸನ್ನು ತುಂಡರಿಸಿದನು. ತುಂಡಾದ ಆ ಶ್ರೇಷ್ಠ ಧನುಸ್ಸನ್ನು ಎಸೆದು ಶಿನಿಪುಂಗವ ಶೈನೇಯನು ವೇಗದಿಂದ ಶರದೊಂದಿಗೆ ಇನ್ನೊಂದು ಧನುಸ್ಸನ್ನು ಎತ್ತಿಕೊಂಡನು. ಕೃತವರ್ಮನು ತನ್ನ ಧನುಸ್ಸನ್ನು ಕತ್ತರಿಸಿದುದನ್ನು ಸಹಿಸಿಕೊಳ್ಳಲಾರದೇ ಕುಪಿತನಾದ ಸಾತ್ಯಕಿಯು ಆ ಶ್ರೇಷ್ಠ ಧನುಸ್ಸನ್ನು ತೆಗೆದುಕೊಂಡು ಸಿದ್ಧಗೊಳಿಸಿ ಶೀಘ್ರದಲ್ಲಿಯೇ ಕೃತವರ್ಮನನ್ನು ಆಕ್ರಮಣಿಸಿದನು. ಅನಂತರ ಶಿನಿಪುಂಗವನು ಹತ್ತು ನಿಶಿತ ಬಾಣಗಳಿಂದ ಕೃತವರ್ಮನ ಸೂತ-ಕುದುರೆ-ಧ್ವಜಗಳನ್ನು

ನಾಶಗೊಳಿಸಿದನು.

ತನ್ನ ಹೇಮಪರಿಷ್ಕೃತ ರಥ, ಕುದುರೆ ಮತ್ತು ಸಾರಥಿಗಳು ಹತಗೊಂಡಿದುದನ್ನು ನೋಡಿ ಮಹಾ ರೋಷದಿಂದ ಆವಿಷ್ಟನಾದ ಕೃತವರ್ಮನು ಶೂಲವನ್ನೆತ್ತಿ ಭುಜವೇಗದಿಂದ ಶಿನಿಪುಂಗವನನ್ನು ಕೊಲ್ಲಲು ಎಸೆದನು. ಸಾತ್ವತನು ಆ ಶೂಲವನ್ನು ನಿಶಿತ ಶರಗಳಿಂದ ಭೇದಿಸಿ ಚೂರುಚೂರುಮಾಡಿ ಮಾಧವನನ್ನು ಮೋಹಗೊಳಿಸುವಂತೆ ಕೆಳಗುರುಳಿಸಿದನು. ಅನಂತರ ಇನ್ನೊಂದು ಭಲ್ಲದಿಂದ ಅವನ ಎದೆಗೆ ಹೊಡೆದನು. ಕೃತಾಸ್ತ್ರ ಯುಯುಧಾನನಿಂದ ಹತಾಶ್ವನೂ ಹತಸಾರಥಿಯೂ ಆದ ಕೃತವರ್ಮನು ಭೂಮಿಯ ಮೇಲೆ ಹಾರಿ ನಿಂತುಕೊಂಡನು. ಕೃತವರ್ಮನು ಹತಾಶ್ವನೂ ಹತಸೂತನೂ ಆದುದನ್ನು ನೋಡಿದ ಕೃಪನು ಶಿನಿಪುಂಗವನನ್ನು ಸಂಹರಿಸಲು ವೇಗವಾಗಿ ಬಂದನು. ಸರ್ವಧನ್ವಿಗಳೂ ನೋಡುತ್ತಿದ್ದಂತೆಯೇ ಆ ಮಹಾಬಾಹುವು ಬೇಗನೇ ಕೃತವರ್ಮನನ್ನು ತನ್ನ ರಥದಲ್ಲಿ ಏರಿಸಿಕೊಂಡು ರಣದಿಂದ ದೂರ ಹೊರಟುಹೋದನು.

## ದುರ್ಯೋಧನ ಪರಾಕ್ರಮ

ದ್ವೈರಥ ಯುದ್ಧದಲ್ಲಿ ಹಾಗೆ ಸಾತ್ಯಕಿಯಿಂದ ಕೃತವರ್ಮನು ವಿರಥನಾಗಲು ಸರ್ವ ಸೇನೆಗಳಲ್ಲಿ ಮಹಾ ಭಯವುಂಟಾಯಿತು.

ಕೃತವರ್ಮನು ಹತಸಾರಥಿಯೂ ಹತಾಶ್ವನೂ ವಿರಥನೂ ಆಗಿದುದನ್ನು ನೋಡಿ ದುರ್ಯೋಧನನಿಗೂ ವಿಷಾದವುಂಟಾಯಿತು. ಶೈನೇಯನು ಯುದ್ಧಕ್ಕೆ ನಿಂತಿರಲು ಮತ್ತು ಕೃತವರ್ಮನು ವಿರಥನಾಗಲು ದುರ್ಯೋಧನನ ಸೇನೆಯು ಪುನಃ ಪರಾಙ್ಮುಖವಾಯಿತು. ಧೂಳುತುಂಬಿಕೊಂಡಿದ್ದುದರಿಂದ ಸೇನೆಗಳು ಓಡಿಹೋಗುತ್ತಿರುವುದು ಕಾಣುತ್ತಿರಲಿಲ್ಲ. ನೃಪ ದುರ್ಯೋಧನನನ್ನು ಬಿಟ್ಟು ಕೌರವರಿತರರು ಎಲ್ಲರೂ ಓಡಿಹೋದರು. ತನ್ನ ಸೇನೆಯು ಭಗ್ನವಾಗುತ್ತಿರುವುದನ್ನು ಹತ್ತಿರದಿಂದಲೇ ನೋಡಿದ ದುರ್ಯೋಧನನಾದರೋ ಬೇಗನೇ ವೇಗದಿಂದ ಒಬ್ಬನೇ ಎಲ್ಲರನ್ನೂ ತಡೆದನು.

ದುರಾಧರ್ಷ ದುರ್ಯೋಧನನು ಸಂಕ್ರುದ್ಧನಾಗಿ ಸ್ವಲ್ಪವೂ ಗಾಬರಿಗೊಳ್ಳದಿದ್ದ ಪಾಂಡವರೆಲ್ಲರನ್ನೂ, ಪಾರ್ಷತ ಧೃಷ್ಟದ್ಯುಮ್ನ, ಶಿಖಂಡಿ, ದ್ರೌಪದೇಯರು, ಪಾಂಚಾಲಗಣಗಳು, ಕೇಕಯ-ಸೋಮಕ-ಪಾಂಚಾಲರನ್ನೂ ನಿಶಿತ ಅಸ್ತ್ರಗಳಿಂದ ಮುಸುಕಿದನು. ಮಂತ್ರಗಳಿಂದ ಪೂತನಾದ ಮಹಾ ಅಗ್ನಿಯು ಯಜ್ಞದಲ್ಲಿ ಹೇಗೋ ಹಾಗೆ ರಣದಲ್ಲಿ ದುರ್ಯೋಧನನು ಪ್ರಕಾಶಿಸುತ್ತಾ ನಿಂತಿದ್ದನು. ಮರ್ತ್ಯರು ಮೃತ್ಯುವನ್ನು ಹೇಗೋ ಹಾಗೆ ಶತ್ರುಗಳು ರಣದಲ್ಲಿ ಅವನನ್ನು ಮೀರಿ ಹೋಗಲಿಕ್ಕಾಗಲಿಲ್ಲ. ಆಗ ಕೃತವರ್ಮನು ಇನ್ನೊಂದು ರಥವನ್ನೇರಿ

ಅಲ್ಲಿ ಸೇರಿಕೊಂಡನು.

ದುರ್ಯೋಧನನು ರಥಿಗಳಲ್ಲಿ ಶ್ರೇಷ್ಠ ಪ್ರತಾಪವಾನ್ ರುದ್ರನಂತೆ ರಥದಲ್ಲಿ ಕುಳಿತು ಶತ್ರುಗಳಿಗೆ ದುಃಸ್ಸಹನಾಗಿದ್ದನು. ಬಾಣಧಾರೆಗಳಿಂದ ಪರ್ವತವನ್ನು ತೋಯಿಸುವಂತೆ ಅವನು ಶತ್ರುಸೇನೆಗಳನ್ನು ತೋಯಿಸಲು, ಅವನ ಸಹಸ್ರಾರು ಬಾಣಗಳಿಂದ ರಣಭೂಮಿಯು ಮುಚ್ಚಿಹೋಯಿತು. ಆ ಮಹಾರಣದಲ್ಲಿ ಅವನ ಬಾಣದಿಂದ ಗಾಯಗೊಳ್ಳದ ಪಾಂಡವರ ಕಡೆಯ ಯಾರೊಬ್ಬ ಪುರುಷನಾಗಲೀ, ಆನೆಯಾಗಲೀ, ಕುದುರೆಯಾಗಲೀ, ರಥವಾಗಲೀ ಇರಲಿಲ್ಲ. ಸಮರದಲ್ಲಿ ಯಾವ ಯಾವ ಯೋಧರಿದ್ದರೋ ಅವರೆಲ್ಲರೂ ದುರ್ಯೋಧನನ ಬಾಣಗಳಿಂದ ಗಾಯಗೊಂಡಿದ್ದರು. ಓಡಾಡುತ್ತಿರುವ ಸೈನ್ಯದಿಂದ ಮೇಲೆದ್ದ ಧೂಳಿನಂತೆ ಆ ಮಹಾತ್ಮನ ಬಾಣಗಳಿಂದ ಮುಚ್ಚಿಹೋದ ಸೇನೆಯು ಕಾಣುತ್ತಲೇ ಇರಲಿಲ್ಲ. ಧನ್ವಿ ದುರ್ಯೋಧನನ ಕ್ಷಿಪ್ರಹಸ್ತದಿಂದ ಪ್ರಯೋಗಿಸಲ್ಪಟ್ಟ ಬಾಣಗಳಿಂದ ಸಮರಭೂಮಿಯೇ ಬಾಣಮಯವಾಯಿತು. ಪಾರ್ಥರೆಲ್ಲರೂ ಒಟ್ಟಾಗಿದ್ದರೂ ವಿಕ್ರಮಿ ದುರ್ಯೋಧನನೊಬ್ಬನನ್ನೇ ಎದುರಿಸಲಾರದೇ ಹೋದರು! ಅವನು ಯುಧಿಷ್ಠಿರನನ್ನು ನೂರು ಬಾಣಗಳಿಂದ ಹೊಡೆದನು. ಭೀಮಸೇನನನ್ನು ಎಪ್ಪತ್ತು ಬಾಣಗಳಿಂದಲೂ, ಸಹದೇವನನ್ನು ಏಳರಿಂದಲೂ,

ನಕುಲನನ್ನು ಅರವತ್ನಾಲ್ಕರಿಂದಲೂ, ಧೃಷ್ಟದ್ಯುಮ್ನನನ್ನು ಐದರಿಂದಲೂ, ದ್ರೌಪದೇಯರನ್ನು ಏಳರಿಂದಲೂ, ಮೂರರಿಂದ ಸಾತ್ಯಕಿಯನ್ನೂ ಹೊಡೆದು, ಭಲ್ಲದಿಂದ ಸಹದೇವನ ಧನುಸ್ಸನ್ನು ತುಂಡರಿಸಿದನು. ಪ್ರತಾಪವಾನ್ ಮಾದ್ರೀಪುತ್ರನು ತುಂಡಾದ ಧನುಸ್ಸನ್ನು ಬಿಸುಟು ಇನ್ನೊಂದು ಮಹಾಧನುಸ್ಸನ್ನು ಹಿಡಿದು ರಾಜನನ್ನು ಆಕ್ರಮಣಿಸಿದನು. ಆಗ ದುರ್ಯೋಧನನು ಅವನನ್ನು ಹತ್ತು ಶರಗಳಿಂದ ಪ್ರಹರಿಸಿದನು. ವೀರ ನಕುಲನಾದರೋ ರಾಜನನ್ನು ಒಂಭತ್ತು ಘೋರರೂಪೀ ಶರಗಳಿಂದ ಹೊಡೆದು ಗರ್ಜಿಸಿದನು.

ರಾಜನನ್ನು ಸಾತ್ಯಕಿಯು ನತಪರ್ವ ಶರದಿಂದ, ದ್ರೌಪದೇಯರು ಎಪ್ಪತ್ಮೂರು, ಧರ್ಮರಾಜನು ಏಳು, ಮತ್ತು ಭೀಮಸೇನನು ಎಂಭತ್ತು ಬಾಣಗಳಿಂದಲೂ ಹೊಡೆದರು. ಎಲ್ಲಕಡೆಗಳಿಂದಲೂ ಆ ಮಹಾತ್ಮರು ಬಾಣಸಂಘಗಳನ್ನು ಎರಚಿದರೂ, ಎಲ್ಲ ಸೇನೆಗಳೂ ನೋಡುತ್ತಿದ್ದಂತೆಯೇ, ಅವನು ವಿಚಲಿತನಾಗಲಿಲ್ಲ. ಸರ್ವಭೂತಗಳನ್ನೂ ಮೀರಿಸಿದ ಆ ಮಹಾತ್ಮನ ಸೊಗಸಾದ ಹಸ್ತಲಾಘವ ಮತ್ತು ವೀರ್ಯವನ್ನು ಸರ್ವಮಾನವರೂ ನೋಡಿದರು. ಸ್ವಲ್ಪದೂರವೇ ಓಡಿಹೋಗಿದ್ದ ಧಾರ್ತರಾಷ್ಟ್ರರು ರಾಜನನ್ನು ನೋಡಿ ಕವಚಧಾರಿಗಳಾಗಿ ಹಿಂದಿರುಗಿದರು. ವರ್ಷಾಕಾಲದ ರಾತ್ರಿಯಲ್ಲಿ

ಕ್ಷೋಭೆಗೊಂಡ ಸಮುದ್ರದ ಭೋರ್ಗರೆತದಂತೆ ಹಿಂದಿರುಗಿ ಆಕ್ರಮಣಿಸುತ್ತಿದ್ದ ಸೇನೆಯಿಂದಾಗಿ ಘೋರ ತುಮುಲ ಶಬ್ಧವುಂಟಾಯಿತು. ರಣದಲ್ಲಿ ಆ ಅಪರಾಜಿತ ರಾಜನನ್ನು ಸೇರಿ ಮಹೇಷ್ವಾಸರು ಪಾಂಡವರೊಡನೆ ಪುನಃ ಯುದ್ಧಮಾಡಿದರು.

## ಸಂಕುಲ ಯುದ್ಧ

ರಣದಲ್ಲಿ ಕ್ರುದ್ಧ ಭೀಮಸೇನನನ್ನು ದ್ರೋಣಪುತ್ರನು ತಡೆದನು. ಎಲ್ಲಕಡೆಗಳಿಂದ ಪ್ರಯೋಗಿಸಲ್ಪಟ್ಟ ಬಾಣಗಳಿಂದ ದಿಕ್ಕು-ಉಪದಿಕ್ಕುಗಳೆಲ್ಲ ಮುಚ್ಚಿಹೋಗಿ ರಣದಲ್ಲಿ ವೀರಯೋಧರು ಕಾಣುತ್ತಿರಲಿಲ್ಲ. ಆ ಇಬ್ಬರು ಕ್ರೂರಕರ್ಮಿ-ದುಃಸ್ಸಹರು ಪೆಟ್ಟಿಗೆ ಪೆಟ್ಟುಕೊಡಲು ಬಯಸುತ್ತಾ ಘೋರರೂಪದ ಯುದ್ಧದಲ್ಲಿ ತೊಡಗಿದರು, ಅವರು ಶಿಂಜನಿಯನ್ನು ತೀಡಿ ಟೇಂಕಾರಮಾಡುತ್ತಿರಲು ಸರ್ವ ಜಗತ್ತೂ ಭಯಗೊಂಡಿತು.

ವೀರ ಶಕುನಿಯಾದರೋ ರಣದಲ್ಲಿ ಯುಧಿಷ್ಠಿರನನ್ನು ಪೀಡಿಸಿದನು. ಅವನ ನಾಲ್ಕು ಕುದುರೆಗಳನ್ನು ಸಂಹರಿಸಿ ಶಕುನಿಯು ಸರ್ವಸೈನ್ಯಗಳನ್ನೂ ನಡುಗಿಸುವಂಥಹ ಸಿಂಹನಾದಗೈದನು. ಅಷ್ಟರಲ್ಲಿಯೇ ಪ್ರತಾಪವಾನ್ ಸಹದೇವನು ಅಪರಾಜಿತ ವೀರ ರಾಜ ಯುಧಿಷ್ಠಿರನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟುಹೋದನು.

ಧರ್ಮರಾಜ ಯುಧಿಷ್ಠಿರನು ಕೂಡಲೇ ಇನ್ನೊಂದು ರಥವನ್ನೇರಿ ಶಕುನಿಯನ್ನು ಒಂಭತ್ತು ಶರಗಳಿಂದ ಹೊಡೆದು ಪುನಃ ಐದರಿಂದ ಪ್ರಹರಿಸಿದನು. ಆ ಸರ್ವಧನ್ವಿಶ್ರೇಷ್ಠನು ಜೋರಾಗಿ ಸಿಂಹನಾದವನ್ನೂ ಮಾಡಿದನು. ಆ ಯುದ್ಧವು ವಿಚಿತ್ರವೂ, ಘೋರರೂಪವೂ, ಪ್ರೇಕ್ಷಕರಿಗೆ ಆನಂದದಾಯಕವೂ, ಸಿದ್ಧ-ಚಾರಣರ ಪ್ರಶಂಸೆಗೆ ಪಾತ್ರವೂ ಆಗಿತ್ತು.

ಉಲೂಕನಾದರೋ ನಕುಲನನ್ನು ಶರವರ್ಷಗಳನ್ನು ಸುರಿಸಿ ಎಲ್ಲಕಡೆಗಳಿಂದಲೂ ಆಕ್ರಮಣಿಸಿದನು. ಹಾಗೆಯೇ ನಕುಲನೂ ಕೂಡ ರಣದಲ್ಲಿ ಸೌಬಲನ ಮಗನನ್ನು ಮಹಾ ಶರವರ್ಷದಿಂದ ಎಲ್ಲಕಡೆಗಳಿಂದ ಮುಚ್ಚಿಬಿಟ್ಟನು. ಪರಸ್ಪರರನ್ನು ನಿರಸನಗೊಳಿಸಲು ತೊಡಗಿದ್ದ ಆ ವೀರ ಮಹಾರಥರಿಬ್ಬರೂ ಸಮರದಲ್ಲಿ ಯುದ್ಧಮಾಡುತ್ತಿದ್ದರು.

ಹಾಗೆಯೇ ಕೃತವರ್ಮನು ಯುದ್ಧದಲ್ಲಿ ಶತ್ರುತಾಪನ ಶೈನೇಯನೊಡನೆ ಯುದ್ಧಮಾಡುತ್ತಿರಲು ಬಲನೊಂದಿಗೆ ಯುದ್ಧಮಾಡುತ್ತಿದ್ದ ಶಕ್ರನಂತೆ ರಣದಲ್ಲಿ ಶೋಭಿಸಿದನು.

ದುರ್ಯೋಧನನು ಧೃಷ್ಟದ್ಯುಮ್ನನ ಧನುಸ್ಸನ್ನು ತುಂಡರಿಸಿ, ಧನುಸ್ಸು ತುಂಡಾದ ಅವನನ್ನು ನಿಶಿತ ಶರಗಳಿಂದ ಪ್ರಹರಿಸಿದನು. ಧೃಷ್ಟದ್ಯುಮ್ನನಾದರೋ ಸಮರದಲ್ಲಿ ಪರಮಾಯುಧವನ್ನು ಹಿಡಿದು

ಸರ್ವಧನ್ವಿಗಳೂ ನೋಡುತ್ತಿರಲು ದುರ್ಯೋಧನನನೊಡನೆ ಯುದ್ಧಮಾಡತೊಡಗಿದನು. ಸಂಗ್ರಾಮದಲ್ಲಿ ಅವರಿಬ್ಬರ ಯುದ್ಧವು ಕುಂಭಸ್ಥಳವೊಡೆದು ಮದಿಸಿದ ಆನೆಗಳು ಸೆಣಸಾಡುವಂತೆ ಜೋರಾಗಿತ್ತು.

ಕ್ರುದ್ಧನಾದ ಗೌತಮನಾದರೋ ದ್ರೌಪದೇಯರನ್ನು ಅನೇಕ ಸನ್ನತಪರ್ವ ಶರಗಳಿಂದ ಪ್ರಹರಿಸಿದನು. ದೇಹಧಾರಿ ಜೀವ ಮತ್ತು ಪಂಚೇಂದ್ರಿಯಗಳ ನಡುವೆ ನಡೆಯುವ ಸಂಘರ್ಷದಂತೆ ಅವರ ಯುದ್ಧವು ಘೋರರೂಪವೂ, ಅನಿವಾರ್ಯವೂ, ಯುದ್ಧಮರ್ಯಾದೆಯನ್ನು ಮೀರಿದ ಸಂಘರ್ಷವಾಗಿತ್ತು. ಇಂದ್ರಿಯಗಳು ಬಾಲಿಶ ಮನುಷ್ಯನನ್ನು ಪೀಡಿಸುವಂತೆ ದ್ರೌಪದೇಯರು ಕೃಪರನ್ನು ಬಹಳವಾಗಿ ಪೀಡಿಸಲು, ಅವನು ಪರಮಕ್ರುದ್ಧನಾಗಿ ಪ್ರತಿಪ್ರಹಾರಗಳೊಂದಿಗೆ ಯುದ್ಧಮಾಡಿದನು. ಬಾರಿಬಾರಿಗೂ ಉಲ್ಬಣಗೊಳ್ಳುವ ಇಂದ್ರಿಯಗಳಿಗೂ ಜೀವಾತ್ಮನಿಗೂ ಸಂಘರ್ಷಣೆಯಾಗುವಂತೆ ದ್ರೌಪದೇಯರೊಡನೆ ಕೃಪನ ಯುದ್ಧವು ವಿಚಿತ್ರವಾಗಿತ್ತು.

ಪದಾತಿಗಳು ಪದಾತಿಗಳೊಡನೆ, ಆನೆಗಳು ಆನೆಗಳೊಡನೆ, ಕುದುರೆಗಳು ಕುದುರೆಗಳೊಡನೆ ಮತ್ತು ರಥಿಗಳು ರಥಿಗಳೊಡನೆ ಘೋರರೂಪದ

ಸಂಕುಲ ಯುದ್ಧವು ಪುನಃ ನಡೆಯಿತು. ಇಂತಹ ಅನೇಕ ವಿಚಿತ್ರ, ಘೋರ, ರೌದ್ರ ಯುದ್ಧಗಳು ಅಲ್ಲಿ ನಡೆದವು. ಸಮರದಲ್ಲಿ ಪರಸ್ಪರರನ್ನು ಎದುರಿಸಿ ಆ ಅರಿಂದಮರು ಮಹಾರಣದಲ್ಲಿ ಸಿಂಹನಾದಗೈಯುತ್ತಿದ್ದರು ಮತ್ತು ಸಂಹರಿಸುತ್ತಿದ್ದರು. ಶಸ್ತ್ರಗಳಿಂದುಂಟಾದ, ಓಡುತ್ತಿದ್ದ ಕುದುರೆ-ಪದಾತಿಗಳಿಂದುಂಟಾದ ಧೂಳು ಗಾಳಿಯಿಂದ ತೀವ್ರವಾಗಿ ಮೇಲೆದ್ದು ಪಸರಿಸಿತು. ರಥಚಕ್ರಗಳಿಂದ ಮತ್ತು ಆನೆಗಳ ನಿಃಶ್ವಾಸಗಳಿಂದ ಮೇಲೆದ್ದ ಧೂಳು ಸಂಧ್ಯಾಕಾಲದ ಮೋಡದಂತೆ ಸೂರ್ಯನ ಪಥದಲ್ಲಿ ಹೋಗುತ್ತಿತ್ತು. ಆ ಧೂಳಿನಿಂದಾಗಿ ಬಾಸ್ಕರನು ಕಾಂತಿಹೀನನಾದನು. ರಣದಲ್ಲಿ ಮಹಾರಥ ಶೂರರು ಧೂಳಿನಲ್ಲಿ ಮುಚ್ಚಿಹೋದರು. ಧೂಳು ಸ್ವಲ್ಪಕಾಲ ಮಾತ್ರವೇ ಇತ್ತು, ಭೂಮಿಯು ವೀರಯೋಧರ ರಕ್ತದಿಂದ ತೋಯ್ದುಹೋಗಿ ಘೋರವಾಗಿ ಕಾಣುತ್ತಿದ್ದ ಆ ತೀವ್ರ ಧೂಳು ಉಪಶಮನಹೊಂದಿತು. ಮಧ್ಯಾಹ್ನದ ಆ ಸಮಯದಲ್ಲಿ ಬಲ-ಶ್ರೇಷ್ಠತೆಗಳಿಗನುಗುಣವಾಗಿ ದ್ವಂಧ್ವಯುದ್ಧಗಳು ನಡೆದವು. ಯೋಧರ ಕವಚಗಳ ಉಜ್ವಲ ಪ್ರಭೆಯು ಎಲ್ಲೆಡೆ ತೋರಿಬರುತ್ತಿತ್ತು. ಬಿದುರಿನ ಮಹಾವನವು ಸುಡುವಾಗ ಉಂಟಾಗುವ ಶಬ್ಧದಂತೆ ಆ ತುಮುಲ ಯುದ್ಧದಲ್ಲಿ ಶರಗಳು ಬೀಳುವ ಶಬ್ಧವು ಎಲ್ಲಕಡೆಗಳಲ್ಲಿ ಕೇಳಿ ಬರುತ್ತಿತ್ತು.

ಘೋರರೂಪದ ಆ ಭಯಾನಕ ಯುದ್ಧವು ನಡೆಯುತ್ತಿರಲು ಪಾಂಡವರು ಕೌರವ ಸೇನೆಯನ್ನು ಭಗ್ನಗೊಳಿಸಿದರು. ಓಡಿಹೋಗುತ್ತಿದ್ದ ಮಹಾರಥರನ್ನು ಮಹಾಯತ್ನದಿಂದ ತಡೆಯುತ್ತಾ ದುರ್ಯೋಧನನು ಪಾಂಡವ ಸೇನೆಗಳೊಡನೆ ಯುದ್ಧಮಾಡುತ್ತಿದ್ದನು. ದುರ್ಯೋಧನನಿಗೆ ಪ್ರಿಯವಾದುದನ್ನೇ ಬಯಸಿದ ಯೋಧರು ಕೂಡಲೇ ಹಿಂದಿರುಗಿದರು. ಅವರು ಹಿಂದಿರುಗಲು, ಅಲ್ಲಿ ಸುದಾರುಣ ಯುದ್ಧವು ನಡೆಯಿತು. ದೇವಾಸುರರ ಯುದ್ಧದಂತಿದ್ದ ಕೌರವ-ಪಾಂಡವರ ಆ ಯುದ್ಧದಲ್ಲಿ ಯಾರೂ ಪಾರಙ್ಮುಖರಾಗಲಿಲ್ಲ. ಅನುಮಾನ-ಸಂಜ್ಞೆಗಳಿಂದ ಪರಸ್ಪರರನ್ನು ಗುರುತಿಸಿ ಯುದ್ಧಮಾಡುತ್ತಿದ್ದರು. ಅನ್ಯೋನ್ಯರೊಂದಿಗೆ ಯುದ್ಧಮಾಡುತ್ತಿದ್ದ ಅವರಲ್ಲಿ ಮಹಾ ನಾಶವುಂಟಾಯಿತು.

ಆಗ ಯುಧಿಷ್ಠಿರನು ಮಹಾ ಕ್ರೋಧಯುಕ್ತನಾಗಿ ಮೂರು ರುಕ್ಮಪುಂಖ ಶಿಲಾಶಿತಗಳಿಂದ ಶಾರದ್ವತನನ್ನು ಹೊಡೆದು ನಾಲ್ಕು ಶರಗಳಿಂದ ಕೃತವರ್ಮನ ನಾಲ್ಕು ಕುದುರೆಗಳನ್ನು ಸಂಹರಿಸಿದನು. ಅಶ್ವತ್ಥಾಮನು ಹಾರ್ದಿಕ್ಯನನ್ನು ಕರೆದುಕೊಂಡು ಹೋದನು. ಶಾರದ್ವತನು ಎಂಟು ಬಾಣಗಳಿಂದ ಯುಧಿಷ್ಠಿರನನ್ನು ಪ್ರತಿಯಾಗಿ ಹೊಡೆದನು. ಆಗ ದುರ್ಯೋಧನನು ರಣದಲ್ಲಿ ಏಳುನೂರು ರಥಗಳನ್ನು ಯುಧಿಷ್ಠಿರನಿರುವಲ್ಲಿಗೆ ಕಳುಹಿಸಿದನು. ರಥಿಗಳಿಂದ ಕೂಡಿದ ಆ

ರಥಗಳು ಮನಸ್ಸು-ಮಾರುತಗಳ ವೇಗದಿಂದ ಕೌಂತೇಯನ ರಥದ ಬಳಿ ಬಂದು ಅವನನ್ನು ಆಕ್ರಮಣಿಸಿದವು. ಅವರು ಯುಧಿಷ್ಠಿರನನ್ನು ಎಲ್ಲಕಡೆಗಳಿಂದ ಸುತ್ತುವರೆದು ಮೇಘಗಳು ದಿವಾಕರನನ್ನು ಹೇಗೋ ಹಾಗೆ ಸಾಯಕಗಳಿಂದ ಅವನನ್ನು ಅದೃಶ್ಯಗೊಳಿಸಿದರು. ಕುಪಿತರಾದ ಶಿಖಂಡಿ ಮೊದಲಾದ ರಥರು ಅದನ್ನು ಸಹಿಸಿಕೊಳ್ಳಲಾರದೇ ವೇಗಯುಕ್ತ ರಥಗಳ ಮೇಲೆ ಕುಳಿತು ಯುಧಿಷ್ಠಿರನನ್ನು ರಕ್ಷಿಸಲು ಅಲ್ಲಿಗೆ ಧಾವಿಸಿದರು. ಆಗ ಪಾಂಡವ-ಕೌರವರ ನಡುವೆ ಯಮರಾಷ್ಟ್ರವನ್ನು ವರ್ಧಿಸುವ ರಕ್ತವೇ ನೀರಾಗಿ ಹರಿಯುತ್ತಿದ್ದ ರೌದ್ರ ಸಂಗ್ರಾಮವು ನಡೆಯಿತು.

ಪಾಂಚಾಲರೊಂದಿಗೆ ಪಾಂಡವರು ಕುರುಗಳ ಆ ಏಳುನೂರು ರಥಗಳನ್ನು ಧ್ವಂಸಗೊಳಿಸಿ ಪುನಃ ಅವರನ್ನು ತಡೆದರು. ಆಗ ಪಾಂಡವರೊಂದಿಗೆ ದುರ್ಯೋಧನನ ಮಹಾಯುದ್ಧವು ನಡೆಯಿತು. ಅಂತಹ ಯುದ್ಧವನ್ನು ಈ ಹಿಂದೆ ಯಾರೂ ನೋಡಿರಲಿಲ್ಲ, ಕೇಳಿಯೂ ಇರಲಿಲ್ಲ. ಎಲ್ಲಕಡೆ ಕೌರವ ಮತ್ತು ಪಾಂಡವ ಯೋಧರ ವಧೆಯಾಗುತ್ತಿದ್ದ ಆ ನಿರ್ಮರ್ಯಾದಾಯುಕ್ತ ಯುದ್ಧವು ನಡೆಯುತ್ತಿರುವಾಗ ಯೋಧರು ಗರ್ಜಿಸುತ್ತಿದ್ದರು. ಶಂಖಗಳನ್ನು ಜೋರಾಗಿ ಊದುತ್ತಿದ್ದರು. ಉಚ್ಛಧ್ವನಿಯಲ್ಲಿ

ಸಿಂಹನಾದಗೈಯುತ್ತಿದ್ದರು. ಅತಿ ಜೋರಾಗಿದ್ದ ಆ ಯುದ್ಧದಲ್ಲಿ ಜಯೇಚ್ಛು ಯೋಧರು ಮರ್ಮಸ್ಥಾನಗಳಲ್ಲಿ ಗಾಯಗೊಂಡು ಓಡಿ ಹೋಗುತ್ತಿದ್ದರು. ರಣಭೂಮಿಯ ಎಲ್ಲಕಡೆ ಸಂಹಾರವು ನಡೆಯುತ್ತಿರಲು ಬಹುಸಂಖ್ಯಾತ ಉತ್ತಮ ಸ್ತ್ರೀಯರ ಸೀಮಂತವು ರಣದಲ್ಲಿ ಹರಣವಾಯಿತು.

ಮರ್ಯಾದೆಗಳನ್ನು ಮೀರಿದ ಆ ಸುದಾರುಣ ಯುದ್ಧವು ನಡೆಯುತ್ತಿರಲು ವಿನಾಶವನ್ನು ಸೂಚಿಸುವ ಸುದಾರುಣ ಉತ್ಪಾತಗಳು ಕಾಣಿಸಿಕೊಂಡವು. ಪರ್ವತ-ವನಗಳೊಂದಿಗೆ ಭೂಮಿಯು ನಡುಗಿ ಶಬ್ಧಮಾಡಿತು. ದಂಡ-ಕೊಳ್ಳಿಗಳುಳ್ಳ ಉಲ್ಕೆಗಳು ರವಿಮಂಡಲವನ್ನು ಅಪ್ಪಳಿಸಿ ಚೂರಾಗಿ ಭೂಮಿಯ ಮೇಲೆ ಎಲ್ಲಕಡೆ ಬಿದ್ದವು. ಕೆಳಗೆ ಭೂಮಿಯ ಮೇಲೆ ಮರಳುಕಲ್ಲುಗಳನ್ನು ಸುರಿಸುವ ಗಾಳಿಯು ಬೀಸಿತು. ಆನೆಗಳು ಕಣ್ಣೀರಿಡುತ್ತಾ ಥರ ಥರನೆ ನಡುಗುತ್ತಿದ್ದವು. ಈ ಸುದಾರುಣ ಘೋರ ಶಕುನಗಳನ್ನು ಅನಾದರಿಸಿ ರಮಣೀಯ ಕುರುಕ್ಷೇತ್ರದಲ್ಲಿ ಪುಣ್ಯ ಸ್ವರ್ಗವನ್ನೇ ಬಯಸಿದ್ದ ವ್ಯಥೆಯಿಲ್ಲದ ಕ್ಷತ್ರಿಯರು ಪುನಃ ಯುದ್ಧಕ್ಕಾಗಿ ವಿಚಾರಮಾಡಿ ಸಿದ್ಧರಾದರು

ಆಗ ಶಕುನಿಯು

“ನೀವು ಮುಂದಿನಿಂದ ಪಾಂಡವರೊಡನೆ ಯುದ್ಧಮಾಡಿ.

ನಾನು ಹಿಂದಿನಿಂದ ಅವರನ್ನು ಸಂಹರಿಸುತ್ತೇನೆ!"

ಎಂದು ಹೇಳಿದನು. ಆಗ ಕೌರವರು ಮುಂದಿನಿಂದ ಯುದ್ಧಮಾಡಲು ಹೋದರು. ಮದ್ರಯೋಧರು ಹೃಷ್ಟರಾಗಿ ಕಿಲಕಿಲಾ ಶಬ್ಧಮಾಡುತ್ತಿದ್ದರು. ಪಾಂಡವರು ಪುನಃ ಕೌರವರ ಬಳಿಬಂದು ಧನುಸ್ಸನ್ನು ಟೇಂಕರಿಸುತ್ತಾ ಶರವರ್ಷಗಳಿಂದ ಅವರನ್ನು ಮುಸುಕಿದರು. ಶತ್ರುಗಳಿಂದ ಮದ್ರರಾಜನ ಬಲವು ನಾಶವಾದುದನ್ನು ನೋಡಿ ದುರ್ಯೋಧನನ ಸೇನೆಯು ಪುನಃ ಪರಾಙ್ಮುಖವಾಯಿತು. ಆಗ ಬಲಶಾಲೀ ಗಾಂಧಾರರಾಜನು

"ಧರ್ಮವನ್ನು ತಿಳಿಯದವರೇ! ಹಿಂದಿರುಗಿರಿ! ಕೆಚ್ಚಿನಿಂದ ಯುದ್ಧಮಾಡಿ! ಪಲಾಯನ ಮಾಡುವುದರಿಂದ ಏನು ಪ್ರಯೋಜನ?"

ಎಂದು ಕೂಗಿ ಕರೆದನು.

ಹೊಳೆಯುವ ಪ್ರಾಸಗಳೊಂದಿಗೆ ಯುದ್ಧಮಾಡಬಲ್ಲ ಹತ್ತು ಸಾವಿರ ಅಶ್ವಗಳ ಸೇನೆಯು ಗಾಂಧಾರರಾಜನಲ್ಲಿತ್ತು. ಹಾಗೆ ಜನಕ್ಷಯವು ನಡೆಯುತ್ತಿರಲಾಗಿ ಆ ವಿಕ್ರಮಿಯು ತನ್ನ ಸೇನೆಯನ್ನೊಡಗೂಡಿ ಪಾಂಡವರ ಸೇನೆಯನ್ನು ಹಿಂದಿನಿಂದ ನಿಶಿತ ಶರಗಳನ್ನು ಪ್ರಯೋಗಿಸಿ

ಸಂಹರಿಸತೊಡಗಿದನು. ಭಿರುಗಾಳಿಯಿಂದ ಮೋಡಗಳು ಹೇಗೋ ಹಾಗೆ ಪಾಂಡವರ ಮಹಾ ಬಲವು ಆಗ ಭಗ್ನವಾಗಿ ಹೋಯಿತು. ತನ್ನ ಸೇನೆಯು ಭಗ್ನವಾಗುತ್ತಿದ್ದುದನ್ನು ಹತ್ತಿರದಿಂದಲೇ ನೋಡಿದ ಯುಧಿಷ್ಠಿರನು ಸಹದೇವನನ್ನು ಪ್ರಚೋದಿಸಿದನು:

> "ಪಾಂಡವ! ಕವಚಧಾರಿಯಾಗಿ ನಮ್ಮ ಸೇನೆಯನ್ನು ಹಿಂಬಾಗದಿಂದ ಪೀಡಿಸಿ ಸಂಹರಿಸುತ್ತಿರುವ ಆ ದುರ್ಮತಿಯನ್ನು ನೋಡು! ನೀನು ದ್ರೌಪದೇಯರೊಂದಿಗೆ ಹೋಗು! ಸೌಬಲ ಶಕುನಿಯನ್ನು ಸಂಹರಿಸು! ಪಾಂಚಾಲಸಹಿತನಾಗಿ ನಾನು ಈ ರಥಸೇನೆಯನ್ನು ರಕ್ಷಿಸುತ್ತೇನೆ! ನಿನ್ನೊಂದಿಗೆ ಆನೆ-ಕುದುರೆಗಳೆಲ್ಲವೂ ಮತ್ತು ಮೂರು ಸಾವಿರ ಪದಾತಿಗಳೂ ಹೋಗಲಿ! ಸೌಬಲ ಶಕುನಿಯನ್ನು ಸಂಹರಿಸು!"

ಆಗ ಧನುಷ್ಪಾಣಿಗಳೊಂದಿಗೆ ಏಳು ನೂರು ಆನೆಗಳು, ಐದು ಸಾವಿರ ಕುದುರೆಗಳು, ಮೂರು ಸಾವಿರ ಪದಾತಿಗಳೂ ಮತ್ತು ದ್ರೌಪದೇಯರೂ ಸೇರಿ ವೀರ್ಯವಾನ್ ಸಹದೇವನು ಶಕುನಿಯನ್ನು ಎಲ್ಲ ಕಡೆಗಳಿಂದ ಮುತ್ತಿದನು. ಸೌಬಲನು ಪಾಂಡವರನ್ನು ಅತಿಕ್ರಮಿಸಿ ಸೇನೆಯನ್ನು ಹಿಂದಿನಿಂದ ಸಂಹರಿಸುತ್ತಿದ್ದನು. ಪಾಂಡವ ಅಶ್ವಾರೋಹಿಗಳು

ಸುಬಲನ ರಥಸೇನೆಯನ್ನು ಆಕ್ರಮಣಿಸಿ ಪವೇಶಿಸಿದರು. ಶೂರ ಅಶ್ವಸೈನಿಕರು ಸೌಬಲನ ಮಹಾಸೇನೆಯ ಮಧ್ಯೆ ನಿಂತು ಶರವರ್ಷಗಳಿಂದ ಅದನ್ನು ಮುಸುಕಿದರು. ಆಗ ಶತ್ರುಸೇನೆಗಳನ್ನು ಸಂಹರಿಸಲು ಗದ-ಪ್ರಾಸಗಳನ್ನು ಎತ್ತಿಹಿಡಿದಿದ್ದ ಪುರುಷರ ನಡುವೆ ಮಹಾ ಯುದ್ಧವು ನಡೆಯಿತು. ಧನುಸ್ಸಿನ ಶಿಂಜನಿಯ ಶಬ್ಧಗಳು ತಣ್ಣಗಾಗಿ ರಥಿಗಳು ಪ್ರೇಕ್ಷಕರಾದರು. ಅಲ್ಲಿ ಕೌರವ ಮತ್ತು ಶತ್ರುಗಳ ನಡುವೆ ಯಾವ ವ್ಯತ್ಯಾಸವೂ ಕಾಣಲಿಲ್ಲ. ಶೂರಬಾಹುಗಳು ಪ್ರಯೋಗಿಸಿದ ಶಕ್ತಿಗಳು ನಕ್ಷತ್ರಗಳಂತೆ ಬೀಳುವುದನ್ನು ಕುರುಪಾಂಡವರು ನೋಡಿದರು.

ಅಲ್ಲಲ್ಲಿ ಬೀಳುತ್ತಿದ್ದ ವಿಮಲ ಋಷ್ಟಿಗಳು ಆಕಾಶದಲ್ಲಿ ತುಂಬಿ ಬಹಳವಾಗಿ ಶೋಭಿಸಿದವು. ಆಗ ಸುತ್ತಲೂ ಬೀಳುತ್ತಿದ್ದ ಪ್ರಾಸಗಳು ಆಕಾಶದಲ್ಲಿ ಹಾರಾಡುವ ಮಿಡಿತೆಗಳಂತೆ ತೋರಿದವು. ಗಾಯಗೊಂಡು ಸರ್ವಾಂಗಗಳೂ ರಕ್ತದಿಂದ ತೋಯ್ದ ಸವಾರರೊಂದಿಗೆ ನೂರಾರು ಸಹಸ್ರಾರು ಕುದುರೆಗಳು ಕೆಳಗುರುಳುತ್ತಿದ್ದವು. ಪರಸ್ಪರರೊಡನೆ ಸಂಘರ್ಷಿಸಿ ಅನ್ಯೋನ್ಯರನ್ನು ಪಿಂಡಿಗಳನ್ನಾಗಿ ಹಿಂಡಿ, ಗಾಯಗೊಳಿಸಿ, ಬಾಯಿಯಿಂದ ರಕ್ತವನ್ನು ಕಾರುತ್ತಿರುವುದು ಕಂಡುಬಂಡಿತು. ಆಗ ಸೇನೆಯು ಧೂಳಿನಿಂದ ತುಂಬಿ ಘೋರ ಕತ್ತಲೆಯು ಆವರಿಸಿತು.

ಧೂಳಿನಿಂದ ತುಂಬಿಹೋಗಿದ್ದ ಆ ಪ್ರದೇಶದಿಂದ ಅನೇಕ ಅರಿಂದಮರು – ಕುದುರೆ-ಮನುಷ್ಯರು - ಓಡಿಹೋಗುತ್ತಿದ್ದರು. ಅನ್ಯರು ಬಹಳವಾಗಿ ರಕ್ತವನ್ನು ಕಾರುತ್ತಾ ಭೂಮಿಯ ಮೇಲೆ ಬೀಳುತ್ತಿದ್ದರು. ತಮ್ಮ ಜುಟ್ಟನ್ನು ಹಿಡಿದಿದ್ದುದರಿಂದ ಕೆಲವರಿಗೆ ಚಲಿಸಲೂ ಸಾಧ್ಯವಾಗುತ್ತಿರಲಿಲ್ಲ. ಕುದುರೆಗಳ ಮೇಲೆ ಕುಳಿತಿದ್ದ ಮಹಾಬಲರು ಅನ್ಯೋನ್ಯರನ್ನು ಎಳೆಯುತ್ತಿದ್ದರು. ಕೆಲವರು ಮಲ್ಲರಂತೆ ಇತರೇತರರನ್ನು ಹೊಡೆದು ಸಂಹರಿಸುತ್ತಿದ್ದರು. ಸತ್ತುಹೋಗಿದ್ದ ಅನೇಕರನ್ನು ಕುದುರೆಗಳು ಅಲ್ಲಿಂದಿಲ್ಲಿಗೆ ಎಳೆದುಕೊಂಡು ಹೋಗುತ್ತಿದ್ದವು. ರಣಭೂಮಿಯಲ್ಲಿ ಅಲ್ಲಲ್ಲಿ ತಾವೇ ಶೂರರೆಂದು ತಿಳಿದುಕೊಂಡಿದ್ದ ಅನ್ಯ ಅನೇಕ ಪುರುಷರು ಬೀಳುತ್ತಿದ್ದರು. ರಕ್ತದಿಂದ ತೋಯ್ದುಹೋಗಿದ್ದ, ಭುಜಗಳು ತುಂಡಾಗಿದ್ದ, ಕೆದರಿದ ಕೇಶರಾಶಿಗಳಿಂದ ಕೂಡಿದ್ದ ನೂರಾರು ಸಹಸ್ರಾರು ಶರೀರಗಳು ರಣಭೂಮಿಯಲ್ಲಿ ಚೆಲ್ಲಿಹೋಗಿರುವುದು ಕಾಣುತ್ತಿತ್ತು. ಹತರಾದ ಅಶ್ವಾರೋಹಿಗಳು ಮತ್ತು ಕುದುರೆಗಳಿಂದ ತುಂಬಿದ್ದ ರಣಭೂಮಿಯಲ್ಲಿ ಯಾರಿಗೂ ದೂರ ಸಾಗಲು ಸಾಧ್ಯವಾಗುತ್ತಿರಲಿಲ್ಲ. ಶಸ್ತ್ರಗಳನ್ನು ಮೇಲೆತ್ತಿ, ಆಯುಧಗಳನ್ನು ಹಿಡಿದು ನಾನಾ ಘೋರ ಪ್ರಹರಗಳಿಂದ ಪರಸ್ಪರರನ್ನು ವಧಿಸಲು ಬಯಸಿ ಹತ್ತಿರ-ಹತ್ತಿರದಲ್ಲಿಯೇ ಇನ್ನೂ ಯುದ್ಧಮಾಡುತ್ತಿದ್ದ ಮತ್ತು ಆಗಲೇ ಸತ್ತುಹೋಗಿದ್ದ ಸೈನಿಕರಿಂದ ರಣಭೂಮಿಯು ತುಂಬಿಹೋಯಿತು.

ಸ್ವಲ್ಪವೇ ಹೊತ್ತು ಯುದ್ಧಮಾಡಿದ ಸೌಬಲನು ಅಳಿದುಳಿದ ಅವನ ಆರುಸಾವಿರ ಅಶ್ವಸೈನಿಕರೊಂದಿಗೆ ಪಲಾಯನಗೈದನು. ಹಾಗೆಯೇ ರಕ್ತದಿಂದ ತೋಯ್ದುಹೋಗಿದ್ದ ಮತ್ತು ಬಳಲಿದ್ದ ಅಳಿದುಳಿದ ಆರುಸಾವಿರ ಅಶ್ವಸೈನಿಕರೊಂದಿಗೆ ಪಾಂಡವ ಸೇನೆಯೂ ಯುದ್ಧದಿಂದ ಹಿಮ್ಮೆಟ್ಟಿತು. ರಕ್ತದಿಂದ ತೋಯ್ದುಹೋಗಿದ್ದ, ಸಂಗ್ರಾಮದಲ್ಲಿ ಜೀವವನ್ನೇ ತೊರೆದು ನಿಕಟದಿಂದ ಯುದ್ಧಮಾಡುತ್ತಿದ್ದ ಪಾಂಡವರ ಅಶ್ವಾರೋಹಿಗಳು ಹೇಳಿದರು:

> "ನಾವು ರಥಗಳೊಂದಿಗೆ ಯುದ್ಧಮಾಡಲು ಶಕ್ಯರಿಲ್ಲ. ಇನ್ನು ಮಹಾಗಜಗಳೊಂದಿಗೆ ಹೇಗೆ ಯುದ್ಧಮಾಡಬಲ್ಲೆವು? ರಥಗಳೇ ರಥಗಳನ್ನು ಎದುರಿಸಲಿ ಮತ್ತು ಆನೆಗಳೇ ಆನೆಗಳನ್ನು ಎದುರಿಸಲಿ! ಪಲಾಯನಮಾಡಿದ ಶಕುನಿಯು ತನ್ನ ಸೇನೆಯೊಳಗೆ ಸೇರಿಕೊಂಡುಬಿಟ್ಟಿದ್ದಾನೆ. ರಾಜಾ ಸೌಬಲನು ಪುನಃ ಯುದ್ಧಕ್ಕೆ ಬರುವುದಿಲ್ಲ!"

ಆಗ ದ್ರೌಪದೇಯರು ಮತ್ತು ಮದಿಸಿದ ಮಹಾ ಆನೆಗಳು ಮಹಾರಥ ಪಾಂಚಾಲ್ಯ ಧೃಷ್ಟದ್ಯುಮ್ನನಿದ್ದೆಡೆಗೆ ಹೋದವು. ಧೂಳಿನ ಮೋಡಗಳು ಮೇಲೇಳಲು ಸಹದೇವನೂ ಕೂಡ ಏಕಾಂಗಿಯಾಗಿ ರಾಜಾ ಯುಧಿಷ್ಠಿರನಿದ್ದಲ್ಲಿಗೆ ಹೊರಟುಹೋದನು. ಅವರು ಹಾಗೆ

ಹೊರಟುಹೋಗಲು ಕ್ರುದ್ಧ ಸೌಬಲ ಶಕುನಿಯು ಪುನಃ ಹಿಂದಿನಿಂದ ಧೃಷ್ಟದ್ಯುಮ್ನನ ಸೇನೆಯನ್ನು ಆಕ್ರಮಣಿಸಿದನು. ಆಗ ಅಲ್ಲಿ ಪುನಃ ಪ್ರಾಣಗಳನ್ನು ತೊರೆದು ಪರಸ್ಪರರನ್ನು ವಧಿಸಲು ಬಯಸಿದ್ದ ಕೌರವ-ಪಾಂಡವರ ನಡುವೆ ತುಮುಲ ಯುದ್ಧವು ಪ್ರಾರಂಭವಾಯಿತು. ಅವರು ಅನ್ಯೋನ್ಯರನ್ನು ಸಂಹರಿಸುವುದಕ್ಕೇ ಕಾಯುತ್ತಿದ್ದರು. ಆ ವೀರಸಮಾಗಮದಲ್ಲಿ ನೂರಾರು ಸಹಸ್ರಾರು ಯೋಧರು ಕೆಳಗುರುಳಿದರು. ಲೋಕಕ್ಷಯಕಾರಕ ಆ ಮಹಾಯುದ್ಧದಲ್ಲಿ ಖಡ್ಗಗಳಿಂದ ಕತ್ತರಿಸಲ್ಪಟ್ಟ ಶಿರಗಳು ತಾಳೆಯ ಹಣ್ಣುಗಳು ಬೀಳುವಂತೆ ಜೋರಾಗಿ ಶಬ್ಧಮಾಡುತ್ತಾ ಬೀಳುತ್ತಿದ್ದವು. ತುಂಡಾಗಿ ಪ್ರಾಣತೊರೆದು ರಣಭೂಮಿಯ ಮೇಲೆ ಬೀಳುತ್ತಿದ್ದ ಶರೀರಗಳ, ಆಯುಧಗಳೊಂದಿಗೆ ಬಾಹುಗಳ ಮತ್ತು ತೊಡೆಗಳ ಕಟ-ಕಟಾ ಶಬ್ಧವು ಮಹಾ ರೋಮಾಂಚನವಾಗಿದ್ದಿತು. ಮಾಂಸದ ತುಂಡಿಗಾಗಿ ಪರದಾಡುವ ಪಕ್ಷಿಗಳಂತೆ ನಿಶಿತ ಶಸ್ತ್ರಗಳಿಂದ ಸಹೋದರ-ಪುತ್ರ-ಸಖರನ್ನು ಕೂಡ ಸಂಹರಿಸಿ ಯೋಧರು ಕೆಳಗುರುಳುತ್ತಿದ್ದರು. ಕೋಪದಿಂದ ಪರಸ್ಪರರೊಡನೆ ಸಂಘರ್ಷಿಸುತ್ತಾ "ನಾನು ಮೊದಲು! ನಾನು ಮೊದಲು!" ಎನ್ನುತ್ತಾ ಸಾವಿರಾರು ಸಂಖ್ಯೆಗಳಲ್ಲಿ ಅನ್ಯೋನ್ಯರನ್ನು ಸಂಹರಿಸಿದರು. ಘಾತಿಗೊಂಡು ಆಸನಭ್ರಷ್ಟರಾಗಿ ಪ್ರಾಣತೊರೆದು ಅಶ್ವಾರೋಹಿಗಳು ಮತ್ತು ಕುದುರೆಗಳು ನೂರಾರು ಸಹಸ್ರಾರು

ಸಂಖ್ಯೆಗಳಲ್ಲಿ ಕೆಳಗುರುಳುತ್ತಿದ್ದರು. ಜಜ್ಜಿಹೋಗಿ ನಡುಗುತ್ತಿದ್ದ ಶೀಘ್ರಸಾರಿಣಿ ಕುದುರೆಗಳ ದಾರುಣಧ್ವನಿಯೂ ಮನುಷ್ಯರು ಪ್ರಯೋಗಿಸುತ್ತಿದ್ದ ಶಕ್ತಿ-ಋಷ್ಟಿ-ಪ್ರಾಸಗಳು ಶತ್ರುಗಳ ಕವಚಗಳನ್ನು ಭೇದಿಸುವ ತುಮುಲ ಶಬ್ಧಗಳೂ ಕೇಳಿಬಂದವು. ಬಾಯಾರಿದ್ದ ಮತ್ತು ಬಳಲಿದ್ದ ಕುದುರೆಗಳನ್ನು ಏರಿದ್ದ ಗಾಯಗೊಂಡು ಬಳಲಿದ್ದ ಕೌರವ ಯೋಧರು ನಿಶಿತ ಶಸ್ತ್ರಗಳಿಂದ ಆಕ್ರಮಣಿಸಿದರು. ರಕ್ತದ ವಾಸನೆಯಿಂದ ಮತ್ತರಾಗಿದ್ದ ಅನೇಕರು ಅಲ್ಲಿ ಬುದ್ಧಿಕಳೆದುಕೊಂಡು ಹತ್ತಿರಬಂದ ಶತ್ರುಗಳನ್ನೂ ತನ್ನಕಡೆಯವರನ್ನೂ ಸಂಹರಿಸುತ್ತಿದ್ದರು. ಜಯವನ್ನು ಬಯಸಿ, ಪ್ರಾಣಗಳನ್ನು ಕಳೆದುಕೊಂಡಿದ್ದ ಅನೇಕ ಕ್ಷತ್ರಿಯರು ಶರವೃಷ್ಟಿಗಳಿಂದ ಆವೃತರಾಗಿ ಭೂಮಿಯ ಮೇಲೆ ಬಿದ್ದರು.

ತೋಳ-ಹದ್ದು-ನರಿಗಳಿಗೆ ಆನಂದದಾಯಕವಾಗಿದ್ದ ಆ ದಿನದ ತುಮುಲ ಯುದ್ಧದಲ್ಲಿ ದುರ್ಯೋಧನನು ನೋಡುತ್ತಿದ್ದಂತೆಯೇ ಘೋರ ಬಲಕ್ಷಯವಾಯಿತು. ಮನುಷ್ಯರು ಮತ್ತು ಕುದುರೆಗಳ ಶರೀರಗಳಿಂದ ರಣಭೂಮಿಯು ತುಂಬಿಹೋಗಿತ್ತು. ರಕ್ತವೇ ನೀರಾಗಿ ಹರಿಯುತ್ತಿದ್ದ ಅದು ಹೇಡಿಗಳಿಗೆ ಭಯವನ್ನುಂಟುಮಾಡುವಂತಿತ್ತು. ಖಡ್ಗ-ಪಟ್ಟಿಷ-ಶೂಲಗಳಿಂದ ಪುನಃ ಪುನಃ ಗಾಯಗೊಳ್ಳುತ್ತಿದ್ದರೂ ಕೌರವರ ಕಡೆಯವರಾಗಲೀ ಪಾಂಡವರ ಕಡೆಯವರಾಗಲೀ ಹಿಮ್ಮೆಟ್ಟಲಿಲ್ಲ.

ಪ್ರಾಣವಿರುವವರೆಗೆ ಯಥಾಶಕ್ತಿಯಾಗಿ ಪ್ರಹರಿಸಿ ಗಾಯಗಳಿಂದ ರಕ್ತವನ್ನು ಸುರಿಸುತ್ತಾ ಯೋಧರು ಕೆಳಗುರುಳುತ್ತಿದ್ದರು. ಕೂದಲಿನಿಂದ ರುಂಡ-ಮುಂಡಗಳನ್ನು ಹಿಡಿದು ರಕ್ತದಿಂದ ತೋಯ್ದ ನಿಶಿತ ಖಡ್ಗವನ್ನು ಮೇಲಿತ್ತಿ ಹಿಡಿದಿರುವವರು ಕಾಣುತ್ತಿದ್ದರು. ಅನೇಕ ಮುಂಡಗಳು ಮೇಲೆದ್ದು ನಿಲ್ಲುತ್ತಿದ್ದವು. ರಕ್ತದ ವಾಸನೆಯಿಂದ ಯೋಧರು ಮೂರ್ಛಿತರಾಗುತ್ತಿದ್ದರು.

ಆ ಶಬ್ಧವು ಸ್ವಲ್ಪ ಮಂದವಾಗಲು ಸೌಬಲನು ಅಳಿದುಳಿದ ಅಲ್ಪ ಅಶ್ವಸೈನಿಕರೊಂದಿಗೆ ಪಾಂಡವರ ಮಹಾಸೇನೆಯನ್ನು ಆಕ್ರಮಣಿಸಿದನು. ಜಯವನ್ನು ಬಯಸಿದ್ದ ಪಾಂಡವರು ಅಲ್ಲಿಗೆ ತ್ವರೆಮಾಡಿ ಬಂದರು. ಪದಾತಿ-ಆನೆ-ಅಶ್ವಾರೋಹಿಗಳೊಂದಿಗೆ ಆಯುಧಗಳನ್ನು ಮೇಲೆತ್ತಿ ಶಕುನಿಯನ್ನು ಎಲ್ಲಕಡೆಗಳಿಂದಲೂ ಸುತ್ತುವರೆದು ನಾನಾವಿಧದ ಶಸ್ತ್ರಗಳಿಂದ ಪ್ರಹರಿಸಿದರು. ಎಲ್ಲಕಡೆಗಳಿಂದ ಸುತ್ತುವರೆಯಲ್ಪಟ್ಟಿರುವುದನ್ನು ನೋಡಿ ಕೌರವರ ಕಡೆಯವರು ಕುದುರೆ-ಪದಾತಿ-ಆನೆ-ರಥಗಳಿಂದ ಪಾಂಡವರನ್ನು ಆಕ್ರಮಣಿಸಿದರು. ಶಸ್ತ್ರಗಳೆಲ್ಲವೂ ಮುಗಿದು ಹೋಗಲು ಕೆಲವು ಶೂರ ಪದಾತಿಗಳು ಸಮರದಲ್ಲಿ ಕಾಲು-ಮುಷ್ಟಿಗಳಿಂದ ಪರಸ್ಪರರ ಮೇಲೆ ಬಿದ್ದು ಸಂಹರಿಸುತ್ತಿದ್ದರು. ಪುಣ್ಯಕ್ಷಯವಾಗಲು ಸಿದ್ಧರು ವಿಮಾನಗಳಿಂದ

ಭ್ರಷ್ಟರಾಗಿ ಕೆಳಗೆ ಬೀಳುವಂತೆ ರಥಗಳಿಂದ ರಥಿಗಳು ಮತ್ತು ಆನೆಗಳ ಮೇಲಿಂದ ಗಜಸೈನಿಕರು ಕೆಳಗೆ ಬೀಳುತ್ತಿದ್ದರು. ಈ ರೀತಿ ಆ ಮಹಾಯುದ್ಧದಲ್ಲಿ ಯೋಧರು ಅನ್ಯೋನ್ಯರನ್ನು ಇನ್ನು ಕೆಲವರು ತಂದೆ-ಸಹೋದರ-ಸ್ನೇಹಿತ-ಮಕ್ಕಳನ್ನೂ ಕೊಲ್ಲುತ್ತಿದ್ದರು. ಪ್ರಾಸ-ಖಡ್ಗ-ಬಾಣಗಳಿಂದ ವ್ಯಾಪ್ತವಾಗಿದ್ದ ಮರ್ಯಾದೆಗಳಿಲ್ಲದ ಆ ಸುದಾರಣಯುದ್ಧವು ಹೀಗೆ ನಡೆಯಿತು.

ಸೇನೆಗಳು ಪಾಂಡವರಿಂದ ಹತಗೊಳ್ಳಲು ಯುದ್ಧದ ಕೋಲಹಲ ಶಬ್ಧವು ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ಉಳಿದಿರುವ ಏಳು ನೂರು ಕುದುರೆಗಳೊಂದಿಗೆ ಸೌಬಲನು ಯುದ್ಧದಿಂದ ಹಿಮ್ಮೆಟ್ಟಿದನು. ಕೂಡಲೇ ಆ ಅರಿಂದಮನು ಸೇನೆಯ ಬಳಿ ಹೋಗಿ ಸಂಹೃಷ್ಟರಾಗಿ ಯುದ್ಧಮಾಡಿ ಎಂದು ಪುನಃ ಪುನಃ ಹೇಳಿದನು. ಆ ಮಹಾರಥನು ಕ್ಷತ್ರಿಯರಲ್ಲಿ ದುರ್ಯೋಧನನು ಎಲ್ಲಿರುವನೆಂದು ಕೇಳಿದನು: ಶಕುನಿಯ ಆ ಮಾತನ್ನು ಕೇಳಿದ ಅವರು ಹೇಳಿದರು: “ರಣಮಧ್ಯದಲ್ಲಿ ಮಹಾರಥ ಕೌರವನು ನಿಂತಿರುವನು. ಎಲ್ಲಿ ಪೂರ್ಣಚಂದ್ರಸಮ ಪ್ರಭೆಯುಳ್ಳ ಮಹಾ ಚತ್ರವಿರುವುದೋ, ಎಲ್ಲಿ ಕವಚಧಾರೀ ಎತ್ತರ ಕಾಯದವರು ರಥಗಳಲ್ಲಿ ನಿಂತಿರುವರೋ, ಎಲ್ಲಿಂದ ಮೋಡದ ಗುಡುಗಿನಂತಿರುವ ತುಮುಲ ಶಬ್ಧವು ಕೇಳಿ ಬರುತ್ತಿದೆಯೋ ಅಲ್ಲಿಗೆ ಧಾವಿಸಿ ಹೋಗು! ಅಲ್ಲಿ ರಾಜ

ಕೌರವನನ್ನು ನೀನು ಕಾಣುವೆ!”

ಆ ಶೂರರು ಹೀಗೆ ಹೇಳಲು ಸೌಬಲ ಶಕುನಿಯು ಸಮರದಲ್ಲಿ ಹಿಂದಿರುಗದ ವೀರರಿಂದ ಸುತ್ತಲೂ ಸಂವೃತನಾಗಿದ್ದ ದುರ್ಯೋಧನನು ಎಲ್ಲಿದ್ದನೋ ಅಲ್ಲಿಗೆ ಹೋದನು. ರಥಾನೀಕದ ಮಧ್ಯದಲ್ಲಿ ವ್ಯವಸ್ಥಿತನಾಗಿದ್ದ ದುರ್ಯೋಧನನನ್ನು ಮತ್ತು ರಥಗಳೊಂದಿಗಿದ್ದ ಅವರೆಲ್ಲರನ್ನೂ ನೋಡಿ ಶಕುನಿಯು ಹರ್ಷಿತನಾದನು. ತಾನು ಕೃತಾರ್ಥನಾದನೆಂದೇ ಭಾವಿಸಿ ಹೃಷ್ಟರೂಪನಾಗಿ ದುರ್ಯೋಧನನಿಗೆ ಈ ಮಾತನ್ನಾಡಿದನು:

> “ರಾಜನ್! ರಥಸೇನೆಯನ್ನು ಸಂಹರಿಸು! ಅಶ್ವಸೇನೆಗಳೆಲ್ಲವನ್ನೂ ನಾನು ಜಯಿಸಿದ್ದೇನೆ. ಪ್ರಾಣಗಳ ಮೇಲಿನ ಹಂಗನ್ನೇ ತೊರೆದು ಯುದ್ಧಮಾಡದಿದ್ದರೆ ಯುಧಿಷ್ಠಿರನನ್ನು ಜಯಿಸಲು ಶಕ್ಯವಿಲ್ಲ. ಪಾಂಡವನಿಂದ ರಕ್ಷಿಸಲ್ಪಟ್ಟಿರುವ ಆ ರಥಸೇನೆಯನ್ನು ಸಂಹರಿಸಿದ ನಂತರ ನಾವು ಈ ಗಜಸೇನೆಯನ್ನು ಮತ್ತು ಇತರ ಪದಾತಿಗಳನ್ನು ಸಂಹರಿಸೋಣ!”

ಅವನ ಆ ಮಾತನ್ನು ಕೇಳಿ ಜಯವನ್ನು ಬಯಸಿದ್ದ ಕೌರವರು ಹೃಷ್ಟರಾಗಿ ವೇಗದಿಂದ ಪಾಂಡವರ ಸೇನೆಯನ್ನು ಆಕ್ರಮಣಿಸಿದರು.

ಎಲ್ಲರೂ ಬತ್ತಳಿಕೆಗಳನ್ನು ತೆರೆದು, ಧನುಸ್ಸುಗಳನ್ನು ಹಿಡಿದು, ಧನುಸ್ಸುಗಳನ್ನು ಟೇಂಕರಿಸುತ್ತಾ ಸಿಂಹನಾದಗೈದರು. ಪುನಃ ಅಲ್ಲಿ ಟೇಂಕಾರ ಶಬ್ಧವೂ ಬಾಣಗಳನ್ನು ಪ್ರಯೋಗಿಸುತ್ತಿದ್ದ ಸುದಾರುಣ ಶಬ್ಧವೂ ಕೇಳಿಬಂದವು. ಧನುಸ್ಸುಗಳನ್ನು ಮೇಲೆತ್ತಿ ತನ್ನ ಹತ್ತಿರವೇ ಬರುತ್ತಿದ್ದ ಅವರನ್ನು ನೋಡಿ ಕುಂತೀಪುತ್ರ ಧನಂಜಯನು ದೇವಕೀಪುತ್ರನಿಗೆ ಹೇಳಿದನು:

> "ಗಾಬರಿಗೊಳ್ಳದೇ ಅಶ್ವಗಳನ್ನು ಓಡಿಸಿ ಈ ಸೇನಾಸಾಗರವನ್ನು ಪ್ರವೇಶಿಸು. ಇಂದು ನಿಶಿತ ಶರಗಳಿಂದ ಶತ್ರುಗಳನ್ನು ಹೋಗಲಾಡಿಸಿಬಿಡುತ್ತೇನೆ! ಜನಾರ್ದನ! ಪರಸ್ಪರರನ್ನು ಎದುರಿಸಿ ನಡೆಯುತ್ತಿರುವ ಈ ಮಹಾ ಯುದ್ಧದ ಹದಿನೆಂಟನೆಯ ದಿನವಿದು. ಅನಂತವಾಗಿದೆಯೋ ಎಂಬಂತಿದ್ದ ಈ ಮಹಾತ್ಮರ ಸೇನೆಯು ಇಂದು ಬಹಳವಾಗಿ ಕ್ಷಯಗೊಂಡಿದೆ. ದೈವದ ರೀತಿಯನ್ನಾದರೂ ನೋಡು! ಸಮುದ್ರದಂತಿದ್ದ ಧಾರ್ತರಾಷ್ಟ್ರನ ಸೇನೆಯು ನಮ್ಮೊಡನೆ ಹೋರಾಡಿ ಈಗ ಗೋಪಾದದಷ್ಟಾಗಿದೆ! ಭೀಷ್ಮನು ಹತನಾದಾಗಲೇ ಸಂಧಿಯನ್ನು ಮಾಡಿಕೊಂಡಿದ್ದರೆ ಮಂಗಳವಾಗುತ್ತಿತ್ತು. ಆದರೆ ಬಾಲಬುದ್ಧಿಯ ಮೂಢ

ಧಾರ್ತರಾಷ್ಟ್ರನು ಹಾಗೆ ಮಾಡಲಿಲ್ಲ! ಬುದ್ಧಿಯನ್ನು ಕಳೆದುಕೊಂಡಿದ್ದ ಸುಯೋಧನನು ಹಿತವೂ ಪಥ್ಯವೂ ಆಗಿದ್ದ ಭೀಷ್ಮನಾಡಿದ ಮಾತನಂತೆ ಮಾಡಲಿಲ್ಲ. ರಥದಿಂದ ಚ್ಯುತನಾಗಿ ಭೂಮಿಯ ಮೇಲೆ ಭೀಷ್ಮನು ಬಿದ್ದ ನಂತರವೂ ಯುದ್ಧವು ಏಕೆ ಮುಂದುವರೆಯಿತೆನ್ನುವುದು ಅರ್ಥವಾಗುತ್ತಿಲ್ಲ. ಶಂತನುವಿನ ಮಗನು ಬಿದ್ದನಂತರವೂ ಪುನಃ ಯುದ್ಧವನ್ನು ಮುಂದುವರೆಸಿದ ಧಾರ್ತರಾಷ್ಟ್ರರು ತುಂಬಾ ಬಾಲಿಶರೇ ಸರಿ! ಬ್ರಹ್ಮವಿದರಲ್ಲಿ ಶ್ರೇಷ್ಠ ದ್ರೋಣ, ರಾಧೇಯ ಮತ್ತು ವಿಕರ್ಣರು ಹತರಾದ ನಂತರವೂ ಈ ವೈರವು ಶಾಂತವಾಗಲಿಲ್ಲ. ಪುತ್ರನೊಂದಿಗೆ ಸೂತಪುತ್ರನು ಬಿದ್ದಾಗ ಸ್ವಲ್ಪವೇ ಸೇನೆಯು ಉಳಿದುಕೊಂಡಿತ್ತು. ಆಗಲೂ ಈ ವೈರವು ಶಾಂತವಾಗಲಿಲ್ಲ. ಶೂರ ಶ್ರುತಾಯುಷಿ, ಜಲಸಂಧ, ಪೌರವ-ಶೃತಾಯುಧ ನೃಪತಿಯರು ಹತರಾದ ನಂತರವೂ ಈ ಸಂಹಾರಕಾರ್ಯವು ಉಪಶಮನಗೊಳ್ಳಲಿಲ್ಲ. ಭೂರಿಶ್ರವ, ಶಲ್ಯ, ಶಾಲ್ವ, ಮತ್ತು ಅವಂತಿಯ ವೀರರು ಹತರಾದ ನಂತರವೂ ಈ ಸಂಹಾರಕಾರ್ಯವು ನಿಲ್ಲಲಿಲ್ಲ. ಜಯದ್ರಥ, ರಾಕ್ಷಸ ಅಲಾಯುಧ, ಬಾಹ್ಲೀಕ-ಸೋಮದತ್ತರು ಹತರಾದ ನಂತರವೂ ಈ ಸಂಹಾರಕಾರ್ಯವು ಪ್ರಶಮನಗೊಳ್ಳಲಿಲ್ಲ. ಶೂರ

ಭಗದತ್ತ, ಕಾಂಬೋಜದ ಸುದಕ್ಷಿಣ, ಮತ್ತು ದುಃಶಾಸನರು ಹತರಾದ ನಂತರವೂ ಈ ವೈರವು ಪ್ರಶಮನಗೊಳ್ಳಲಿಲ್ಲ. ಬೇರೆ ಬೇರೆ ದೇಶಗಳಿಂದ ಆಗಮಿಸಿದ್ದ ಶೂರ ಬಲಶಾಲೀ ನೃಪರು ರಣದಲ್ಲಿ ಹತರಾದುದನ್ನು ನೋಡಿಯೂ ಈ ಸಂಹಾರಕಾರ್ಯವು ನಿಲ್ಲಲಿಲ್ಲ! ಭೀಮಸೇನನಿಂದ ಹತರಾಗಿ ಕೆಳಗುರುಳುತ್ತಿದ್ದ ಅಕ್ಷೌಹಿಣೀಪತಿಗಳನ್ನು ನೋಡಿಯೂ ಮೋಹದಿಂದಲೋ ಅಥವಾ ಲೋಭದಿಂದಲೋ ಈ ವೈರವು ಉಪಶಮನಗೊಳ್ಳಲಿಲ್ಲ.

ರಾಜಕುಲದಲ್ಲಿ, ಅದರಲ್ಲೂ ವಿಶೇಷವಾಗಿ ಕೌರವಕುಲದಲ್ಲಿ ಹುಟ್ಟಿದ ಸುಯೋಧನನಲ್ಲದೇ ಬೇರೆ ಯಾರುತಾನೇ ನಿರರ್ಥಕವಾದ ಈ ಮಹಾ ವೈರವನ್ನು ಕಟ್ಟಿಕೊಂಡಾನು? ಗುಣ-ಬಲ-ಶೌರ್ಯಗಳಲ್ಲಿ ಶತ್ರುಗಳು ತನಗಿಂತಲೂ ಅಧಿಕರಾಗಿರುವರೆನ್ನುವುದನ್ನು ತಿಳಿದೂ ಹಿತಾಹಿತಗಳನ್ನು ತಿಳಿದ ಮೂಢನಲ್ಲದ ಬೇರೆ ಯಾರುತಾನೇ ಯುದ್ಧಮಾಡುತ್ತಾನೆ? ನೀನೇ ಹೇಳಿದ ಹಿತವಚನಗಳನ್ನು ಮನಸ್ಸಿಗೆ ತೆಗೆದುಕೊಳ್ಳದಿದ್ದ ಅವನು ಪಾಂಡವರೊಂದಿಗೆ ಶಾಂತಿಯಿಂದಿರು ಎನ್ನುವ ಬೇರೆ ಯಾರ ಮಾತನ್ನು ಹೇಗೆ

ಕೇಳಿಯಾನು? ಶಾಂತಿಗಾಗಿ ಶಾಂತನವ ಭೀಷ್ಮ, ದ್ರೋಣ, ಮತ್ತು ವಿದುರರು ಕೇಳಿಕೊಂಡರೂ ತಿರಸ್ಕರಿಸಿದ ಅವನಿಗೆ ಇಂದು ಔಷಧಿಯೇನಿದೆ? ವೃದ್ಧ ತಂದೆಯೂ ಹೇಳಿದ ಹಾಗೆ ಹಿತೈಷಿಣೀ ತಾಯಿಯ ಹಿತವಚನವನ್ನೂ ಸತ್ಕರಿಸದೇ ಇದ್ದ ಆ ಮೂರ್ಖನಿಗೆ ಬೇರೆ ಯಾರ ಮಾತು ಹಿಡಿಸುತ್ತದೆ? ಕುಲವನ್ನು ಅಂತ್ಯಗೊಳಿಸುವುದಕ್ಕಾಗಿಯೇ ಇವನು ಹುಟ್ಟಿದನೆಂದು ವ್ಯಕ್ತವಾಗುತ್ತಿದೆ. ಅದಕ್ಕೆ ಅನುಗುಣವಾಗಿಯೇ ಅವನ ನಡತೆ-ನೀತಿಗಳು ತೋರುತ್ತಿವೆ. ಈಗಲೂ ಇವನು ನಮಗೆ ರಾಜ್ಯವನ್ನು ಕೊಡುವುದಿಲ್ಲ ಎನಿಸುತ್ತದೆ. “ಧಾರ್ತರಾಷ್ಟ್ರನು ಜೀವಂತವಿರುವಾಗ ರಾಜ್ಯದ ಭಾಗವನ್ನು ಕೊಡುವುದಿಲ್ಲ!” ಎಂದು ಮಹಾತ್ಮ ವಿದುರನು ನನಗೆ ಅನೇಕ ಬಾರಿ ಹೇಳಿದ್ದನು. “ಎಂದಿನವರೆಗೆ ಧಾರ್ತರಾಷ್ಟ್ರನ ಪ್ರಾಣವು ಸ್ಥಿರವಾಗಿರುವುದೋ ಅಲ್ಲಿಯವರೆಗೆ ನಿಷ್ಪಾಪಿಗಳಾದ ನಿಮ್ಮೊಡನೆ ಪಾತಕನಾಗಿಯೇ ವ್ಯವಹರಿಸುತ್ತಾನೆ! ಯುದ್ಧದಿಂದಲ್ಲದೇ ಅನ್ಯಥಾ ಇವನನ್ನು ಗೆಲ್ಲಲು ಸಾಧ್ಯವಿಲ್ಲ!” ಹೀಗೆ ಸದಾ ನನಗೆ ಸತ್ಯದರ್ಶನ ವಿದುರನು ಹೇಳುತ್ತಿದ್ದನು. ಮಹಾತ್ಮ ವಿದುರನಾಡಿದ ಆ ಮಾತುಗಳಿಂದಲೇ ನಾನು ದುರಾತ್ಮ ದುರ್ಯೋಧನನ ವ್ಯವಸಾಯಗಳೆಲ್ಲವನ್ನೂ

ಅರಿತುಕೊಂಡಿದ್ದೇನೆ. ಜಾಮದಗ್ನಿಯು ಇದ್ದಹಾಗೆ ಪಥ್ಯ ಮಾತುಗಳನ್ನು ಹೇಳಿದಾಗಲೂ ಅದನ್ನು ಮನ್ನಿಸದೇ ಇದ್ದ ದುರ್ಬುದ್ಧಿಯು ನಿಜವಾಗಿಯೂ ನಾಶದ ಎದುರೇ ನಿಂತಿದ್ದಾನೆ! ಸುಯೋಧನನು ಹುಟ್ಟಿದಾಗಲೇ ಅನೇಕ ಸಿದ್ಧರು ಹೇಳಿದ್ದರಂತೆ: "ಈ ದುರಾತ್ಮನನ್ನು ಪಡೆದ ಕ್ಷತ್ರಿಯರು ಕ್ಷಯರಾಗುತ್ತಾರೆ!" ಜನಾರ್ದನ! ಅವರ ಆ ಮಾತು ಸುಳ್ಳಾಗಲಿಲ್ಲ. ದುರ್ಯೋಧನನ ಕೃತ್ಯದಿಂದಲೇ ರಾಜರ ಭೀಷಣ ಕ್ಷಯವಾಗುತ್ತಿದೆ. ಇಂದು ನಾನು ರಣದಲ್ಲಿ ಸರ್ವ ಯೋಧರನ್ನೂ ಸಂಹರಿಸುತ್ತೇನೆ. ಎಲ್ಲ ಕ್ಷತ್ರಿಯರನ್ನೂ ಸಂಹರಿಸಿ ಅವನ ಶಿಬಿರವನ್ನು ಶೂನ್ಯಗೊಳಿಸುತ್ತೇನೆ. ಆಗ ಅವನು ತನ್ನ ವಧೆಗಾಗಿಯಾದರೂ ನಮ್ಮೊಡನೆ ಯುದ್ಧಮಾಡಲು ಬಯಸುತ್ತಾನೆ. ಆಗಲೇ ಈ ವೈರದ ಅಂತ್ಯವಾಗುತ್ತದೆ ಎಂದು ಊಹಿಸುತ್ತೇನೆ. ವಿದುರನ ಮಾತು, ದುರಾತ್ಮ ದುರ್ಯೋಧನನ ಚೇಷ್ಟೆಗಳು ಮತ್ತು ನನ್ನ ಸ್ವಂತ ಬುದ್ಧಿಯ ಯೋಚನೆಯಿಂದ ಇದು ಹೀಗೆಯೇ ಆಗುತ್ತದೆ ಎಂದು ನನಗೆ ತೋರುತ್ತದೆ. ಭಾರತೀ ಸೇನೆಯೊಳಗೆ ಪ್ರವೇಶಿಸು! ಅಲ್ಲಿ ನಾನು ನಿಶಿತ ಬಾಣಗಳಿಂದ ದುರ್ಯೋಧನನನ್ನೂ ಅವನ ಸೇನೆಯನ್ನೂ ಯುದ್ಧದಲ್ಲಿ ಸಂಹರಿಸುತ್ತೇನೆ. ಧಾರ್ತರಾಷ್ಟ್ರನು

> ನೋಡುತ್ತಿರುವಂತೆಯೇ ಅವನ ದುರ್ಬಲ ಸೈನ್ಯವನ್ನು
> ಸಂಹರಿಸಿ ಇಂದು ಧರ್ಮರಾಜನಿಗೆ
> ಕ್ಷೇಮವನ್ನುಂಟುಮಾಡುತ್ತೇನೆ!”

ಸವ್ಯಸಾಚಿಯು ಹೀಗೆ ಹೇಳಲು ಲಗಾಮುಗಳನ್ನು ಕೈಯಲ್ಲಿ ಹಿಡಿದು ದಾಶಾರ್ಹನು ಭೀತಿಯಿಲ್ಲದೇ ರಣದಲ್ಲಿ ಶತ್ರುಸೇನೆಗಳನ್ನು ಪ್ರವೇಶಿಸಿದನು. ಧನುಸ್ಸಿನ ಘೋರ ಟೇಂಕಾರ ಶಬ್ಧಗಳಿಂದ ಕೂಡಿದ್ದ, ಶಕ್ತಿಗಳೇ ಮುಳ್ಳಾಗಿದ್ದ, ಗದೆ-ಪರಿಘಗಳೇ ಮಾರ್ಗಗಳಂತಿದ್ದ, ರಥ-ಆನೆಗಳೇ ಮಹಾವೃಕ್ಷಗಳಂತಿದ್ದ, ಕುದುರೆ-ಪದಾತಿಗಳೇ ಲತೆಗಳಂತಿದ್ದ, ಮಹಾಯಶರಿಂದ ಗಹನವಾಗಿದ್ದ ಆ ಸೇನಾರಣ್ಯದಲ್ಲಿ ಗೋವಿಂದನು ಅತಿ ಎತ್ತರದಲ್ಲಿ ಹಾರಾಡುತ್ತಿದ್ದ ಪತಾಕೆಯುಳ್ಳ ರಥದಲ್ಲಿ ಸಂಚರಿಸುತ್ತಿದ್ದನು. ದಾಶಾರ್ಹನು ಓಡಿಸುತ್ತಿದ್ದ ಮತ್ತು ಅರ್ಜುನನನ್ನು ಯುದ್ಧಕ್ಕೆ ಕೊಂಡೊಯ್ಯುತ್ತಿದ್ದ ಆ ಬಿಳಿಯ ವರ್ಣದ ಕುದುರೆಗಳು ಎಲ್ಲ ದಿಕ್ಕುಗಳಲ್ಲಿಯೂ ಕಾಣಿಸುತ್ತಿದ್ದವು.

ಸವ್ಯಸಾಚಿಯು ಮಳೆಯನ್ನು ಸುರಿಸುವ ಮೋಡದಂತೆ ನೂರಾರು ತೀಕ್ಷ್ಣ ಬಾಣಗಳನ್ನು ಸುರಿಸುತ್ತಾ ವೇಗದಿಂದ ರಥದಲ್ಲಿ ಮುಂದುವರೆದನು. ಸಮರದಲ್ಲಿ ಸವ್ಯಸಾಚಿಯು ಪ್ರಯೋಗಿಸುತ್ತಿದ್ದ ನತಪರ್ವ ಶರಗಳ ಮಹಾ ಶಬ್ಧವು ಕೇಳಿಬರುತ್ತಿತ್ತು. ಗಾಂಡೀವವು ಪ್ರಯೋಗಿಸುತ್ತಿದ್ದ

ಇಂದ್ರನ ವಜ್ರಾಯುಧಕ್ಕೆ ಸಮಾನ ಸ್ಪರ್ಶವುಳ್ಳ ಶರಗಳು ಶರೀರಗಳನ್ನು ಹೊಕ್ಕು ಭೂಮಿಯ ಮೇಲೆ ಬೀಳುತ್ತಿದ್ದವು. ಮನುಷ್ಯ-ಆನೆ-ಕುದುರೆಗಳನ್ನು ಸಂಹರಿಸಿ ಬಾಣಗಳು ಪತಂಗಗಳಂತೆ ಶಬ್ಧಮಾಡುತ್ತಾ ರಣದಲ್ಲಿ ಬೀಳುತ್ತಿದ್ದವು. ಗಾಂಡೀವದಿಂದ ಪ್ರಯೋಗಿಸಿದ ಬಾಣಗಳಿಂದ ಎಲ್ಲವೂ ಮುಚ್ಚಿಹೋಯಿತು. ಸಮರದಲ್ಲಿ ದಿಕ್ಕುಗಳಾಗಲೀ ಉಪದಿಕ್ಕುಗಳಾಗಲೀ ತಿಳಿಯುತ್ತಿರಲಿಲ್ಲ. ಜಗತ್ತೆಲ್ಲವೂ ಪಾರ್ಥ-ನಾಮಾಂಕಿತ ರುಕ್ಮಪುಂಖ-ತೈಲಧೌತ-ಕರ್ಮಾರನಿರ್ಮಿತ ಶರಗಳಿಂದ ತುಂಬಿಹೋಯಿತು. ಕಾಡ್ಗಿಚ್ಚಿನಲ್ಲಿ ಆನೆಗಳು ಹೇಗೋ ಹಾಗೆ ಪಾರ್ಥನ ನಿಶಿತ ಶರಗಳಿಂದ ಕೌರವ್ಯರು ವಧಿಸಲ್ಪಟ್ಟರು. ಶರ-ಚಾಪಗಳನ್ನು ಹಿಡಿದು ಪ್ರಜ್ವಲಿಸುತ್ತಿದ್ದ ಪಾರ್ಥನು ಪ್ರಜ್ವಲಿತ ಅಗ್ನಿಯು ಹುಲ್ಲುಮೆದೆಗಳನ್ನು ಹೇಗೋ ಹಾಗೆ ಸಮರದಲ್ಲಿ ಯೋಧರನ್ನು ಸುಟ್ಟುಹಾಕಿದನು. ವನದಲ್ಲಿ ವನಚರರು ಹುಟ್ಟಿಸಿದ ಸಮೃದ್ಧ ಪ್ರಜ್ವಲಿತ ಪ್ರತಾಪೀ ಅಗ್ನಿಯು ಶಬ್ಧಮಾಡುತ್ತಾ ಕಪ್ಪುಹೊಗೆಯಿಂದ ಕೂಡಿ ಪೊದರು-ವೃಕ್ಷ -ಒಣ ಲತೆಗಳನ್ನು ಸುಟ್ಟುಬಿಡುವಂತೆ ಪ್ರತಾಪೀ ಕುಪಿತ ತರಸ್ವೀ ಅರ್ಜುನನು ಜೋರಾಗಿ ಶಬ್ಧಮಾಡುತ್ತಿದ್ದ ತಿಗ್ಮತೇಜಸ್ಸಿನ ನಾರಾಚಸಮೂಹಗಳಿಂದ ದುರ್ಯೋಧನನ ಸೇನೆಯೆಲ್ಲವನ್ನೂ ದಹಿಸಿಬಿಟ್ಟನು. ಉತ್ತಮವಾಗಿ ಪ್ರಹರಿಸಿದ ಆ ರುಕ್ಮಪುಂಖ ಬಾಣಗಳು ಕವಚಗಳನ್ನು ಮಾತ್ರ ಚುಚ್ಚದೇ

ಪ್ರಾಣಗಳನ್ನೂ ತೆಗೆದುಕೊಂಡು ಬೀಳುತ್ತಿದ್ದವು. ಅರ್ಜುನನು ಮನುಷ್ಯ-ಕುದುರೆ-ಮಹಾಗಜಗಳ ಮೇಲೆ ಎರಡನೆಯ ಬಾಣವನ್ನು ಪ್ರಯೋಗಿಸುತ್ತಿರಲಿಲ್ಲ. ವಜ್ರಪಾಣಿಯು ದೈತ್ಯರನ್ನು ಹೇಗೋ ಹಾಗೆ ಏಕಾಕಿಯಾಗಿ ಅರ್ಜುನನು ರಥಿಗಳ ವಿಶಾಲಸೇನೆಯನ್ನು ಪ್ರವೇಶಿಸಿ ಅನೇಕ ರೂಪ-ಆಕೃತಿಗಳ ಬಾಣಗಳಿಂದ ನಿನ್ನ ಮಗನ ಸೇನೆಯನ್ನು ಸಂಹರಿಸಿದನು.

ಯುದ್ಧದಿಂದ ಪಲಾಯನ ಮಾಡದೇ ಪ್ರಯತ್ನಪಡುತ್ತಿದ್ದ ಕೌರವ ಶೂರರ ಸಂಕಲ್ಪಗಳನ್ನು ಧನಂಜಯನು ಗಾಂಡೀವದಿಂದ ವ್ಯರ್ಥಗೊಳಿಸಿದನು. ಇಂದ್ರನ ವಜ್ರಸ್ಪರ್ಷಕ್ಕೆ ಸಮನಾದ ಸಹಿಸಲಸಾಧ್ಯ ಬಾಣಗಳನ್ನು ಪ್ರಯೋಗಿಸುತ್ತಿದ್ದ ಮಹೌಜಸ ಅರ್ಜುನನು ಮಳೆಗರೆಯುವ ಮೋಡದಂತೆ ಕಾಣುತ್ತಿದ್ದನು. ಆ ಸೇನೆಯನ್ನು ಕಿರೀಟಿಯು ವಧಿಸುತ್ತಿರಲು ದುರ್ಯೋಧನನು ನೋಡುತ್ತಿದ್ದಂತೆಯೇ ಸಂಗ್ರಾಮದಿಂದ ಅದು ಪಲಾಯನಮಾಡಿತು. ಕೆಲವರ ರಥದ ಕುದುರೆಗಳು ಹತವಾಗಿದ್ದವು. ಇತರರ ಸಾರಥಿಗಳು ಹತರಾಗಿದ್ದರು. ಇನ್ನು ಕೆಲವರ ರಥದ ನೊಗಗಳು ಮತ್ತು ಚಕ್ರಗಳು ತುಂಡಾಗಿದ್ದವು. ಅನ್ಯರಲ್ಲಿ ಸಾಯಕಗಳು ಕಡಿಮೆಯಿದ್ದವು. ಅನ್ಯರು ಶರಪೀಡಿತರಾಗಿದ್ದರು. ಕೆಲವರು ಬಾಣಗಳಿಂದ

ಗಾಯಗೊಂಡಿರದಿದ್ದರೂ ಭಯಪೀಡಿತರಾಗಿ ಓಡಿಹೋಗುತ್ತಿದ್ದರು. ವಾಹನಗಳನ್ನು ಕಳೆದುಕೊಂಡಿದ್ದ ಕೆಲವರು ಮಕ್ಕಳನ್ನು ಕರೆದುಕೊಂಡು ಪಲಾಯನಮಾಡುತ್ತಿದ್ದರೆ ಇನ್ನು ಕೆಲವರು ತಂದೆಯರನ್ನು ಪುನಃ ಪುನಃ ಕೂಗಿ ಕರೆಯುತ್ತಿದ್ದರು. ಕೆಲವರು ಬಾಂಧವರನ್ನೂ, ಸಂಬಂಧಿಗಳನ್ನೂ ಅಲ್ಲಲ್ಲಿಯೇ ಬಿಟ್ಟು ಓಡಿ ಹೋಗುತ್ತಿದ್ದರು. ಅಲ್ಲಿ ಅನೇಕ ಮಹಾರಥರು ಬಹಳ ಗಾಯಗೊಂಡು ಮೂರ್ಛಿತರಾಗಿದ್ದರು. ಪಾರ್ಥನ ಬಾಣಗಳಿಂದ ಗಾಯಗೊಂಡ ನರರು ನಿಟ್ಟುಸಿರು ಬಿಡುತ್ತಿರುವುದು ಕಂಡುಬಂದಿತು. ಅಂಥವರು ಅನ್ಯರ ರಥವನ್ನೇರಿ ಸಮಾಧಾನಗೊಂಡು ಸ್ವಲ್ಪಕಾಲ ವಿಶ್ರಾಂತಿ ಪಡೆದು ಬಾಯಾರಿಕೆಯನ್ನು ತೀರಿಸಿಕೊಂಡು ಪುನಃ ಯುದ್ಧಕ್ಕೆ ಹಿಂದಿರುಗಿದರು. ಓಡಿ ಹೋದವರಲ್ಲಿ ಕೆಲವು ಯುದ್ಧದುರ್ಮದರು ದುರ್ಯೋಧನನ ಶಾಸನದಂತೆ ಯುದ್ಧೋತ್ಸುಕರಾಗಿ ಪುನಃ ಯುದ್ಧಕ್ಕೆ ಹಿಂದಿರುಗುತ್ತಿದ್ದರು. ಕೆಲವರು ಪಾನೀಯಗಳನ್ನು ಕುಡಿದು, ವಾಹನಗಳನ್ನು ಉಪಚರಿಸಿ, ಕವಚಗಳನ್ನು ಧರಿಸಿ ಬರುತ್ತಿದ್ದರು. ಕೆಲವರು ಸಹೋದರರರರನ್ನು, ಕೆಲವರು ಮಕ್ಕಳನ್ನು, ಕೆಲವರು ತಂದೆಯರನ್ನು ಶಿಬಿರಗಳಿಗೆ ಕೊಂಡೊಯ್ದು, ಸಮಾಧಾನಪಡಿಸಿ, ಪುನಃ ಯುದ್ಧಕ್ಕೆ ಮರಳುತ್ತಿದ್ದರು. ಕೆಲವರು ರಥಗಳನ್ನು ಸಜ್ಜುಗೊಳಿಸಿ ಪಾಂಡವ ಸೇನೆಯನ್ನು ಆಕ್ರಮಣಿಸಿ ತಮ್ಮ ತಮ್ಮ ಅಂತಸ್ಥಿಗೆ ಸಮನಾಗಿ ಪುನಃ ಯುದ್ಧದಲ್ಲಿ ತೊಡಗಿದರು.

ತ್ರೈಲೋಕ್ಯವಿಜಯದಲ್ಲಿ ನಿರತರಾದ ದೈತ್ಯ-ದಾನವರಂತೆ ಆ ಶೂರರು ಕಿಂಕಿಣೀಜಾಲಗಳಿಂದ ಆಚ್ಛಾದಿತರಾಗಿ ಪ್ರಕಾಶಿಸುತ್ತಿದ್ದರು.

ಕೆಲವರು ಸುವರ್ಣವಿಭೂಷಿತ ರಥಗಳಲ್ಲಿ ಬೇಗನೇ ಬಂದು ಪಾಂಡವರ ಸೇನೆಗಳಲ್ಲಿ ಧೃಷ್ಟದ್ಯುಮ್ನನೊಡನೆ ಯುದ್ಧದಲ್ಲಿ ತೊಡಗಿದರು. ಆ ರಥಸೇನೆಯನ್ನು ಧೃಷ್ಟದ್ಯುಮ್ನ, ಶಿಖಂಡೀ, ಶತಾನೀಕರು ಎದುರಿಸಿ ಯುದ್ಧಮಾಡಿದರು. ಆಗ ಪಾಂಚಾಲ್ಯನು ಕ್ರುದ್ಧನಾಗಿ ತನ್ನ ಮಹಾಸೇನೆಯಿಂದ ಆವೃತನಾಗಿ ಕೌರವರನ್ನು ಕೂಡಲೇ ಆಕ್ರಮಣಿಸಿ ಸಂಹರಿಸಲು ತೊಡಗಿದನು.

ಆಗ ದುರ್ಯೋಧನನು ತನ್ನ ಸೇನೆಯನ್ನು ಆಕ್ರಮಣಿಸುತ್ತಿದ್ದ ಧೃಷ್ಟದ್ಯುಮ್ನನ ಮೇಲೆ ಅನೇಕ ಬಾಣಸಮೂಹಗಳನ್ನು ಪ್ರಯೋಗಿಸಿದನು. ಅವನು ಕ್ಷಿಪ್ರವಾಗಿ ಧೃಷ್ಟದ್ಯುಮ್ನನನ್ನು ಅನೇಕ ನಾರಾಚಗಳಿಂದ ಅವನ ಬಾಹು-ಎದೆಗಳಿಗೆ ಹೊಡೆದನು. ಅಂಕುಶದಿಂದ ಚುಚ್ಚಲ್ಪಟ್ಟ ಆನೆಯಂತೆ ಅತಿಯಾಗಿ ಗಾಯಗೊಂಡ ಧೃಷ್ಟದ್ಯುಮ್ನನು ಬಾಣಗಳಿಂದ ದುರ್ಯೋಧನನ ನಾಲ್ಕು ಕುದುರೆಗಳನ್ನೂ ಮೃತ್ಯುಲೋಕಗಳಿಗೆ ಕಳುಹಿಸಿದನು. ಮತ್ತು ಭಲ್ಲದಿಂದ ಸಾರಥಿಯ ಶಿರವನ್ನು ಕಾಯದಿಂದ ಅಪಹರಿಸಿದನು. ರಥವನ್ನು ಕಳೆದುಕೊಂಡ ದುರ್ಯೋಧನನು ಕುದುರೆಯನ್ನೇರಿ ರಣರಂಗದಿಂದ

ಸ್ವಲ್ಪ ದೂರ ಹೋದನು. ತನ್ನ ಸೇನೆಯ ವಿಕ್ರಮವು ಹತವಾದುದನ್ನು ನೋಡಿದ ಆ ಮಹಾಬಲನು ಸೌಬಲನಿದ್ದಲ್ಲಿಗೆ ಹೋದನು.

ರಥಸೇನೆಯು ಭಗ್ನವಾಗಲು ಮೂರುಸಾವಿರ ಮಹಾಗಜಗಳು ಐವರು ಮಹಾರಥ ಪಾಂಡವರನ್ನು ಎಲ್ಲ ಕಡೆಗಳಿಂದ ಸುತ್ತುವರೆದರು. ಸಮರದಲ್ಲಿ ಗಜಸೇನೆಯಿಂದ ಸಮಾವೃತರಾದ ಆ ಐವರು ನರವ್ಯಾಘ್ರರು ಮೋಡಗಳು ಮುಚ್ಚಿದ ಗ್ರಹಗಳಂತೆ ಶೋಭಿಸಿದರು. ಆಗ ಅರ್ಜುನನು ತನ್ನ ರಥವನ್ನು ಅಲ್ಲಿಗೇ ಕೊಂಡೊಯ್ದನು. ಪರ್ವತೋಪಮ ಆನೆಗಳಿಂದ ಪರಿವೃತನಾಗಿದ್ದ ಅವನು ವಿಮಲ ತೀಕ್ಷ್ಣ ನಾರಾಚಗಳಿಂದ ಗಜಸೇನೆಯನ್ನು ಧ್ವಂಸಗೊಳಿಸಿದನು. ಅಲ್ಲಿ ಸವ್ಯಸಾಚಿಯ ಒಂದೊಂದು ಬಾಣದಿಂದ ಹತವಾಗಿ ಕೆಳಗೆ ಬಿದ್ದಿದ್ದ, ಬೀಳುತ್ತಿದ್ದ ಮತ್ತು ಭಿನ್ನಶರೀರವುಳ್ಳ ಮಹಾಗಜಗಳು ಕಾಣುತ್ತಿದ್ದವು.

ಆ ಆನೆಗಳನ್ನು ನೋಡಿ ಮದಿಸಿದ ಆನೆಯಂತಿದ್ದ ಬಲಶಾಲಿ ಭೀಮಸೇನನು ಕೈಯಲ್ಲಿ ಅತಿದೊಡ್ಡ ಗದೆಯನ್ನು ಹಿಡಿದು ಬೇಗನೆ ರಥದಿಂದ ಧುಮುಕಿ ದಂಡಪಾಣಿ ಅಂತಕನಂತೆ ಮುನ್ನುಗ್ಗಿದನು. ಗದೆಯನ್ನು ಎತ್ತಿಹಿಡಿದ ಆ ಪಾಂಡವ ಮಹಾರಥನನ್ನು ನೋಡಿ ಕೌರವ ಸೇನೆಗಳು ನಡುಗಿದವು ಮತ್ತು ಮಲ-ಮೂತ್ರಗಳನ್ನು ವಿಸರ್ಜಿಸಿದವು. ಗದಾಧಾರಿಯಾದ ವೃಕೋದರನನ್ನು ನೋಡಿ ಎಲ್ಲ ಸೇನೆಗಳೂ

ಉದ್ವಿಗ್ನಗೊಂಡವು. ಪರ್ವತೋಪಮ ಆನೆಗಳು ಭೀಮಸೇನನ ಗದೆಯಿಂದ ಕುಂಭಗಳೊಡೆದು ಧೂಳುಮುಕ್ಕಿ ಓಡಿಹೋದವು. ಭೀಮಸೇನನ ಗದೆಯಿಂದ ಪ್ರಹರಿತಗೊಂಡ ಆ ಆನೆಗಳು ಓಡಿಹೋದವು. ರೆಕ್ಕೆಗಳು ಕತ್ತರಿಸಲ್ಪಟ್ಟ ಪರ್ವತಗಳಂತೆ ಆರ್ತಸ್ವರದಲ್ಲಿ ಚೀರಿಕೊಳ್ಳುತ್ತಾ ಕೆಲವು ಅಲ್ಲಿಯೇ ಬಿದ್ದವು. ಕುಂಭಗಳೊಡೆದು ಹಾಗೆ ಓಡಿಹೋಗುತ್ತಿದ್ದ ಮತ್ತು ಕೆಳಗೆ ಉರುಳುತ್ತಿದ್ದ ಅನೇಕ ಆನೆಗಳನ್ನು ನೋಡಿ ಸೈನಿಕರು ನಡುಗಿದರು. ಸಂಕ್ರುದ್ಧ ಯುಧಿಷ್ಠಿರನೂ, ಮಾದ್ರೀಪುತ್ರ ಪಾಂಡವರೂ ಹದ್ದಿನ ಗರಿಗಳುಳ್ಳ ನಿಶಿತ ಬಾಣಗಳಿಂದ ಗಜಯೋಧಿಗಳನ್ನು ಸಂಹರಿಸುತ್ತಿದ್ದರು. ಧೃಷ್ಟದ್ಯುಮ್ನನಾದರೋ ಸಮರದಲ್ಲಿ ನರಾಧಿಪನನ್ನು ಸೋಲಿಸಿ, ದುರ್ಯೋಧನನು ಕುದುರೆಯ ಮೇಲೆ ಹೊರಟುಹೋಗಲು, ಸುಧಾರಿಸಿಕೊಂಡು, ಪಾಂಡವರೆಲ್ಲರೂ ಆನೆಗಳಿಂದ ಸುತ್ತುವರೆಯಲ್ಪಟ್ಟಿರುವುದನ್ನು ಕಂಡನು. ಆಗ ಧೃಷ್ಟದ್ಯುಮ್ನನು ಸರ್ವ ಪ್ರಭದ್ರಕರೊಡನೆ ಆನೆಗಳನ್ನು ಸಂಹರಿಸಲು ಬಂದನು.

ರಥಸೇನೆಯಲ್ಲಿ ಅರಿಂದಮ ದುರ್ಯೋಧನನನ್ನು ಕಾಣದೇ ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರು ಅಲ್ಲಿದ್ದ ಕ್ಷತ್ರಿಯರಲ್ಲಿ ದುರ್ಯೋಧನನು ಎಲ್ಲಿ ಹೋದ ಎಂದು ಪ್ರಶ್ನಿಸಿದರು. ಜನಕ್ಷಯವು ನಡೆಯುತ್ತಿರುವಾಗ

ರಾಜನನ್ನು ಕಾಣದೇ ಆ ಮಹಾರಥರು ದುರ್ಯೋಧನನು ಅಲ್ಲಿ ಹತನಾದನೆಂದೇ ಭಾವಿಸಿ ವಿಷಣ್ಣವದನರಾಗಿ ಅವನ ಕುರಿತಾಗಿ ಪುನಃ ಪುನಃ ಕೇಳತೊಡಗಿದರು. ಸೂತನು ಹತನಾಗಲು ಅವನು ಸೌಬಲನಿದ್ದಲ್ಲಿಗೆ ಹೋದನೆಂದು ಕೆಲವರು ಹೇಳಿದರೆ ತುಂಬಾ ಗಾಯಗೊಂಡಿರುವ ಇತರ ಕ್ಷತ್ರಿಯರು ಅವರಿಗೆ ಹೀಗೆ ಹೇಳಿದರು:

> "ದುರ್ಯೋಧನನಿಂದ ಏನು ಕೆಲಸವಾಗಬೇಕಾಗಿದೆ? ಜೀವಂತವಾಗಿದ್ದರೆ ಅವನನ್ನು ನೀವು ಕಾಣುತ್ತಿದ್ದಿರಿ. ನೀವೆಲ್ಲರೂ ಒಟ್ಟಾಗಿ ಯುದ್ಧಮಾಡಿರಿ. ಇದರಲ್ಲಿ ರಾಜನೇನು ಮಾಡಬಲ್ಲನು?"

ಹೆಚ್ಚು ಭಾಗ ವಾಹನಗಳೆಲ್ಲವನ್ನೂ ಕಳೆದುಕೊಂಡಿದ್ದ ಶರೀರಗಳಲ್ಲಿ ಅತ್ಯಂತ ಗಾಯಗೊಂಡಿದ್ದ ಕ್ಷತ್ರಿಯರು ಶರಗಳಿಂದ ಪೀಡಿತರಾಗಿ ಅಸ್ಪಷ್ಟವಾಗಿ ಈ ಮಾತುಗಳನ್ನಾಡಿದರು:

> "ನಮ್ಮನ್ನು ಸುತ್ತುವರೆದಿರುವ ಈ ಸೇನೆಗಳೆಲ್ಲವನ್ನೂ ನಾವು ಸಂಹರಿಸುತ್ತೇವೆ. ಆದರೆ ಆ ಆನೆಗಳೆಲ್ಲವನ್ನೂ ಸಂಹರಿಸಿ ಪಾಂಡವರು ನಮ್ಮ ಕಡೆಗೇ ಬರುತ್ತಿದ್ದಾರೆ!"

ಅವರ ಆ ಮಾತನ್ನು ಕೇಳಿ ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರು

ಪಾಂಚಾಲರಾಜನ ಆ ದುರ್ಗಮ ರಥ ಸೇನೆಯನ್ನು ಬಿಟ್ಟು ಸೌಬಲನಿದ್ದಲ್ಲಿಗೆ ತೆರಳಿದರು. ಅವರು ಹಾಗೆ ಹೊರಟುಹೋಗಲು ಧೃಷ್ಟದ್ಯುಮ್ನನ ನಾಯಕತ್ವದಲ್ಲಿ ಪಾಂಡವರು ಕೌರವರರನ್ನು ಸಂಹರಿಸಲು ಮುಂದುವರೆದರು. ತಮ್ಮ ಮೇಲೆ ಎರಗುತ್ತಿದ್ದ ಸಂಪ್ರಹೃಷ್ಟ ಮಹಾರಥರನ್ನು ನೋಡಿ ಆ ವೀರರಲ್ಲಿ ಜೀವದ ನಿರಾಶೆಯು ಆವರಿಸಿತು. ಕೌರವ ಸೇನೆಯಲ್ಲಿ ಹೆಚ್ಚು ಜನರ ಮುಖಗಳು ವಿವರ್ಣವಾದವು. ಅವರ ಆಯುಧಗಳೆಲ್ಲವೂ ಮುಗಿದುಹೋಗಿರುವುದನ್ನು ನೋಡಿ ಅವರಿಂದ ಪರಿವಾರಿತನಾಗಿ ಸಂಜಯನು ತನ್ನ ಜೀವವನ್ನೇ ತೊರೆದು ಆ ಅಶ್ವ-ಗಜ ಸೇನೆಗಳೊಂದಿಗೆ ಎಲ್ಲಿ ಶಾರದ್ವತ ಕೃಪನು ನಿಂತು ಯುದ್ಧಮಾಡಿದ್ದನೋ ಅದೇ ಸ್ಥಳದಲ್ಲಿ ನಿಂತು ಅವನು ಮತ್ತು ಇತರ ಐವರು ಯೋಧರು ಪಾಂಚಾಲ್ಯನ ಸೇನೆಯೊಂದಿಗೆ ಯುದ್ಧಮಾಡಿದರು. ಕಿರೀಟಿಯ ಶರಗಳಿಂದ ಪೀಡಿತರಾಗಿದ್ದ ಆ ಐವರು ಧೃಷ್ಟದ್ಯುಮ್ನನ ಮಹಾಸೇನೆಯೊಂದಿಗೆ ಯುದ್ಧಮಾಡಿದರು. ಆದರೆ ಅವನಿಂದ ಸೋತ ಅವರೆಲ್ಲರೂ ಆಗ ರಣದಿಂದ ಹಿಂದೆಸರಿದರು. ಆಗ ಅಲ್ಲಿಗೆ ಬರುತ್ತಿದ್ದ ಮಹಾರಥ ಸಾತ್ಯಕಿಯನ್ನು ಅವರು ನೋಡಿದರು. ಆ ವೀರನು ನಾಲ್ಕು ನೂರು ರಥಗಳೊಡನೆ ಅವರನ್ನು ಆಕ್ರಮಣಿಸಿದನು. ಕುದುರೆಗಳು ಬಳಲಿರಲು ಧೃಷ್ಟದ್ಯುಮ್ನನಿಂದ ಹೇಗೋ ತಪ್ಪಿಸಿಕೊಂಡು ಬಂದ ಅವರು

ಪಾಪಿಯು ನರಕವನ್ನು ಹೇಗೋ ಹಾಗೆ ಮಾಧವ ಸಾತ್ಯಕಿಯ ಸೇನೆಯಡಿಯಲ್ಲಿ ಬಿದ್ದರು! ಸಾತ್ಯಕಿಯಾದರೋ ಸಂಜಯನ ಕುದುರೆ-ಸಾರಥಿಗಳನ್ನು ಸಂಹರಿಸಿ, ಮೂರ್ಛಿತನಾಗಿ ಭೂಮಿಯ ಮೇಲೆ ಬಿದ್ದ ಅವನನ್ನು ಜೀವಂತ ಸೆರೆಹಿಡಿದನು. ಆಗ ಭೀಮಸೇನನು ಗದೆಯಿಂದಲೂ ಅರ್ಜುನನು ನಾರಾಚಗಳಿಂದಲೂ ಮುಹೂರ್ತಮಾತ್ರದಲ್ಲಿ ಆ ಗಜಸೇನೆಯನ್ನು ಸಂಹರಿಸಿದರು. ಎಲ್ಲ ಕಡೆಗಳಲ್ಲಿಯೂ ಪರ್ವತೋಪಮ ಮಹಾಆನೆಗಳ ಮೃತಶರೀರಗಳು ಬಿದ್ದಿರಲು ಪಾಂಡವ ರಥಗಳಿಗೆ ಮುಂದುವರೆಯಲೇ ಸಾಧ್ಯವಾಗಲಿಲ್ಲ. ಆಗ ಮಹಾಬಲ ಭೀಮಸೇನನು ಮಹಾ ಆನೆಗಳನ್ನು ಎಳೆದು ಸರಿಸಿ ಪಾಂಡವರಿಗೆ ರಥಮಾರ್ಗವನ್ನು ಮಾಡಿಕೊಟ್ಟನು.

ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರು ರಥಸೇನೆಯಲ್ಲಿ ದುರ್ಯೋಧನನನ್ನು ಕಾಣದೇ ಅವನನ್ನು ಹುಡುಕತೊಡಗಿದರು. ಪಾಂಚಾಲರನ್ನು ಬಿಟ್ಟು, ಸೌಬಲನಿದ್ದಲ್ಲಿಗೆ ಹೋಗಿ ಜನಕ್ಷಯವು ನಡೆಯುತ್ತಿರುವ ಅಲ್ಲಿಯೂ ರಾಜನನ್ನು ಕಾಣದೇ ಅವರು ಉದ್ವಿಗ್ನರಾದರು.

## ಹನ್ನೊಂದು ಧಾರ್ತರಾಷ್ಟ್ರರ ವಧೆ

ಭೀಮಸೇನನಿಂದ ಆ ಗಜಸೇನೆಯು ಹತವಾಗಲು ಅವನು ಕ್ರುದ್ಧ

ಪ್ರಾಣಹಾರೀ ಅಂತಕನಂತೆ ದಂಡವನ್ನು ಹಿಡಿದು ಸಂಚರಿಸುತ್ತಿದ್ದನು. ದುರ್ಯೋಧನನು ಅದೃಶ್ಯನಾಗಲು ಧೃತರಾಷ್ಟ್ರನ ಅಳಿದುಳಿದ ಮಕ್ಕಳು ಒಟ್ಟಾಗಿ ಸಮರದಲ್ಲಿ ಭೀಮಸೇನನನ್ನು ಆಕ್ರಮಣಿಸಿದರು. ದುರ್ಮರ್ಷಣ, ಚೈತ್ರ, ರವಿ, ಮತ್ತು ಇತರರು ಒಟ್ಟಾಗಿ ಭೀಮಸೇನನನ್ನು ಆಕ್ರಮಣಿಸಿ ಅವನನ್ನು ಎಲ್ಲ ಕಡೆಗಳಿಂದ ತಡೆದರು. ಆಗ ಭೀಮನು ತನ್ನ ರಥವನ್ನು ಪುನಃ ಏರಿ ಅವರ ಮರ್ಮಸ್ಥಾನಗಳಿಗೆ ಗುರಿಯಿಟ್ಟು ನಿಶಿತ ಬಾಣಗಳನ್ನು ಪ್ರಯೋಗಿಸಿದನು. ಭೀಮಸೇನನಿಂದ ಪ್ರಹರಿಸಲ್ಪಟ್ಟ ಧೃತರಾಷ್ಟ್ರನ ಮಕ್ಕಳು ಇಳಿಜಾರಿನ ಪ್ರದೇಶದಿಂದ ಆನೆಯನ್ನು ಮೇಲಕ್ಕೆಳೆಯುವಂತೆ ಭೀಮಸೇನನನ್ನು ಸೆಳೆಯ ತೊಡಗಿದರು. ಆಗ ಕ್ರುದ್ಧ ಭೀಮಸೇನನು ರಣದಲ್ಲಿ ದುರ್ಮರ್ಷಣನ ಶಿರವನ್ನು ಕ್ಷುರಪ್ರದಿಂದ ಹೊಡೆಯಲು ಅವನು ಭೂತಲದ ಮೇಲೆ ಬಿದ್ದನು. ಭೀಮನು ಸರ್ವಾವರಣಗಳನ್ನೂ ಭೇದಿಸಬಲ್ಲ ಇನ್ನೊಂದು ಭಲ್ಲದಿಂದ ಧೃತರಾಷ್ಟ್ರ ಪುತ್ರ ಶ್ರುತಾಂತನನ್ನು ವಧಿಸಿದನು. ಅನಂತರ ಮುಗುಳ್ನಗೆಯೊಂದಿಗೆ ನಾರಾಚದಿಂದ ಜಯತ್ಸೇನನನ್ನು ಹೊಡೆದು ರಥಪೀಠದಿಂದ ಕೆಳಕ್ಕುರುಳಿಸಿದನು. ಕೂಡಲೇ ಅವನು ರಥದಿಂದ ಕೆಳಕ್ಕೆ ಬಿದ್ದು ಅಸುನೀಗಿದನು. ಆಗ ಶ್ರುತರ್ವನು ಕ್ರುದ್ಧನಾಗಿ ಭೀಮನನ್ನು ಹದ್ದಿನಗರಿಗಳುಳ್ಳ ನೂರು ನತಪರ್ವ ಶರಗಳಿಂದ ಹೊಡೆದನು. ಆಗ ಭೀಮನು ಚೈತ್ರ, ಭೂರಿಬಲ ಮತ್ತು ರವಿ ಈ

ಮೂವರನ್ನು ವಿಷಾಗ್ನಿ-ಸಮ ಮೂರು ಶರಗಳಿಂದ ಪ್ರಹರಿಸಿದನು. ವಸಂತಋತುವಿನಲ್ಲಿ ಕತ್ತರಿಸಿ ಕೆಳಗೆ ಬೀಳುವ ಪುಷ್ಪಭರಿತ ಮುತ್ತುಗದ ಮರಗಳಂತೆ ಆ ಮೂವರು ಮಹಾರಥರೂ ಹತರಾಗಿ ತಮ್ಮ ತಮ್ಮ ರಥಗಳಿಂದ ಭೂಮಿಯ ಮೇಲೆ ಬಿದ್ದರು. ಅನಂತರ ಭೀಮನು ಇನ್ನೊಂದು ತೀಕ್ಷ್ಣ ನಾರಾಚದಿಂದ ದುರ್ವಿಮೋಚನನನ್ನು ಹೊಡೆದು ಅವನನ್ನು ಮೃತ್ಯುಲೋಕಕ್ಕೆ ಕಳುಹಿಸಿದನು. ಪರ್ವತ ಶಿಖರದಲ್ಲಿದ್ದ ವೃಕ್ಷವು ಭಿರುಗಾಳಿಯಿಂದ ಭಗ್ನವಾಗಿ ಉರುಳಿ ಬೀಳುವಂತೆ ಆ ರಥಿ-ಶ್ರೇಷ್ಠನು ಹತನಾಗಿ ಭೂಮಿಯ ಮೇಲೆ ಬಿದ್ದನು. ಅನಂತರ ಭೀಮಸೇನನು ಧೃತರಾಷ್ಟ್ರನ ಮಕ್ಕಳಾದ ದುಷ್ಪ್ರಧರ್ಷ ಮತ್ತು ಸುಜಾತರನ್ನು ಒಬ್ಬೊಬ್ಬರನ್ನೂ ಎರಡೆರಡು ಬಾಣಗಳಿಂದ ಹೊಡೆದು ಸಂಹರಿಸಿದನು. ಶಿಲೀಮುಖಗಳಿಂದ ಗಾಯಗೊಂಡಿದ್ದ ಆ ಇಬ್ಬರು ರಥಸತ್ತಮರೂ ಕೆಳಗೆ ಬಿದ್ದರು. ಆಗ ರಣದಲ್ಲಿ ಪ್ರಯತ್ನಿಸುತ್ತಿದ್ದ ಧೃತರಾಷ್ಟ್ರನ ಇನ್ನೊಬ್ಬ ಮಗ ದುರ್ವಿಷಹನನ್ನು ನೋಡಿ ಭೀಮನು ಅವನನ್ನು ಭಲ್ಲದಿಂದ ಹೊಡೆದನು. ಅವನು ಸರ್ವಧನ್ವಿಗಳೂ ನೋಡುತ್ತಿದ್ದಂತೆ ವಾಹನದಿಂದ ಕೆಳಕ್ಕುರುಳಿ ಬಿದ್ದನು. ಒಬ್ಬನಿಂದಲೇ ತನ್ನ ಅನೇಕ ಸಹೋದರರು ಹತರಾಗಿದ್ದುದನ್ನು ಕಂಡು ಸಹಿಸಿಕೊಳ್ಳಲಾರದೇ ಶ್ರುತರ್ವನು ಸುವರ್ಣವಿಭೂಷಿತ ಮಹಾಚಾಪವನ್ನು ಸೆಳೆಯುತ್ತಾ ವಿಷಾಗ್ನಿಗೆ ಸಮಾನ ಅನೇಕ

ಸಾಯಕಗಳನ್ನು ಪ್ರಯೋಗಿಸುತ್ತಾ ಭೀಮನನ್ನು ಆಕ್ರಮಣಿಸಿದನು.

ಅವನು ಪಾಂಡವನ ಧನುಸ್ಸನ್ನು ತುಂಡರಿಸಿ, ಅವನನ್ನು ಇಪ್ಪತ್ತು ಬಾಣಗಳಿಂದ ಮುಸುಕಿದನು. ಆಗ ಭೀಮಸೇನನು ಅನ್ಯ ಧನುಸ್ಸನ್ನು ಮೇಲೆತ್ತಿಕೊಂಡು ಅವನನ್ನು ಆಕ್ರಮಣಿಸಿ ನಿಲ್ಲು ನಿಲ್ಲೆಂದು ಹೇಳಿದನು. ಹಿಂದೆ ಜಂಭವ-ವಾಸವರ ನಡುವೆ ನಡೆದ ಸಮರದಂತೆ ಅವರಿಬ್ಬರ ಮಹಾ ಯುದ್ಧವು ವಿಚಿತ್ರವೂ ಭಯಾನಕವೂ ಆಗಿತ್ತು. ಅವರಿಬ್ಬರಿಂದ ಮುಕ್ತವಾದ ಯಮದಂಡಗಳಂತೆ ನಿಶಿತ-ಶುಭ ಬಾಣಗಳು ಭೂಮಿ, ಆಕಾಶ, ದಿಕ್ಕು ಮತ್ತು ಉಪದಿಕ್ಕುಗಳನ್ನು ಮುಸುಕಿದವು. ಆಗ ರಣದಲ್ಲಿ ಸಂಕ್ರುದ್ಧನಾದ ಶ್ರುತರ್ವನು ಧನುಸ್ಸನ್ನೆತ್ತಿ ಸಾಯಕಗಳಿಂದ ಭೀಮಸೇನನ ಬಾಹು-ಎದೆಗಳಿಗೆ ಹೊಡೆದನು. ಅವನಿಂದ ಹೀಗೆ ಅತಿಯಾಗಿ ಪ್ರಹರಿಸಲ್ಪಟ್ಟ ಭೀಮನು ಪರ್ವಕಾಲದಲ್ಲಿ ಮಹಾಸಾಗರವು ಕ್ಷೋಭೆಗೊಳ್ಳುವಂತೆ ಕ್ರುದ್ಧನಾಗಿ ಭುಗಿಲೆದ್ದನು. ಆಗ ರೋಷಾವಿಷ್ಟನಾದ ಭೀಮನು ಶ್ರುತರ್ವನ ಸಾರಥಿಯನ್ನೂ, ನಾಲ್ಕು ಅಶ್ವಗಳನ್ನೂ ಬಾಣಗಳಿಂದ ಯಮಕ್ಷಯಕ್ಕೆ ಕಳುಹಿಸಿದನು. ಅವನು ವಿರಥನಾದುದನ್ನು ನೋಡಿ ಆ ಅಮೇಯಾತ್ಮ ಭೀಮನು ಕೂದಲನ್ನೂ ಸೀಳಬಲ್ಲಷ್ಟು ಹರಿತವಾದ ವಿಶಿಖಗಳಿಂದ ಅವನನ್ನು ಮುಚ್ಚಿ ತನ್ನ ಹಸ್ತಲಾಘವವನ್ನು ತೋರಿಸಿದನು. ವಿರಥನಾದ ಶ್ರುತರ್ವನು ಖಡ್ಗ-

ಗುರಾಣಿಗಳನ್ನು ಎತ್ತಿಕೊಂಡನು. ಅವನು ನೂರು ಚಂದ್ರಗಳಂತೆ ಹೊಳೆಯುತ್ತಿದ್ದ ಖಡ್ಗವನ್ನು ಎತ್ತಿಕೊಳ್ಳಲು ಪಾಂಡವ ಭೀಮನು ಕ್ಷುರಪ್ರದಿಂದ ಅವನ ಶಿರವನ್ನು ಶರೀರದಿಂದ ಬೇರ್ಪಡಿಸಿ ಬೀಳಿಸಿದನು. ಆ ಮಹಾತ್ಮನ ಕ್ಷುರಪ್ರದಿಂದ ಶಿರವು ಕತ್ತರಿಸಲ್ಪಡಲು ಅವನ ಕಾಯವು ಶಬ್ಧಮಾಡುತ್ತಾ ರಥದಿಂದ ಭೂಮಿಯ ಮೇಲೆ ಬಿದ್ದಿತು. ಆ ವೀರನು ಕೆಳಗೆ ಬೀಳಲು ಭಯಮೋಹಿತರಾದ ಕೌರವರು ಭೀಮಸೇನನೊಡನೆ ಯುದ್ಧಮಾಡುತ್ತಾ ಆಕ್ರಮಣಿಸಿದರು. ತನ್ನ ಮೇಲೆ ಎರಗಿದ ಆ ಅಳಿದುಳಿದ ಸೇನೆಯನ್ನು ಕವಚಧಾರೀ ಪ್ರತಾಪವಾನ್ ಭೀಮಸೇನನು ತಡೆದು ಎದುರಿಸಿದನು. ಅವರಿಂದ ಸುತ್ತುವರೆಯಲ್ಪಟ್ಟ ಭೀಮಸೇನನು ನಿಶಿತ ಶರಗಳಿಂದ ಅವರೆಲ್ಲರನ್ನೂ ಸಹಸ್ರಾಕ್ಷ ಇಂದ್ರನು ಅಸುರರನ್ನು ಹೇಗೋ ಹಾಗೆ ಪೀಡಿಸತೊಡಗಿದನು. ಆಗ ಅವನು ಯುದ್ಧದಲ್ಲಿ ಐದು ನೂರು ಆವರಣಗಳಿಂದ ಕೂಡಿದ್ದ ಮಹಾರಥರನ್ನು ಸಂಹರಿಸಿ ಪುನಃ ಏಳು ನೂರು ಗಜಸೇನೆಗಳನ್ನು ಸಂಹರಿಸಿದನು. ಪರಮ ಬಾಣಗಳಿಂದ ಹತ್ತುಸಾವಿರ ಪದಾತಿಗಳನ್ನು ಸಂಹರಿಸಿ ಪಾಂಡವನು ಎಂಟು ನೂರು ಕುದುರೆಗಳನ್ನು ಸಂಹರಿಸಿ ವಿರಾಜಿಸಿದನು. ಧೃತರಾಷ್ಟ್ರನ ಮಕ್ಕಳನ್ನು ಯುದ್ಧದಲ್ಲಿ ಕೊಂದು ಭೀಮಸೇನನು ತನ್ನನ್ನು ತಾನು ಕೃತಾರ್ಥನಾದನೆಂದೂ ಜನ್ಮವು ಸಫಲವಾಯಿತೆಂದೂ ತಿಳಿದುಕೊಂಡನು. ಹಾಗೆ ಯುದ್ಧಮಾಡಿ ಅವರನ್ನು ಸಂಹರಿಸುತ್ತಿದ್ದ

ಭೀಮನನ್ನು ನೋಡಲು ಕೌರವ ಸೈನ್ಯದವರು ಯಾರೂ ಉತ್ಸುಕರಾಗಿರಲಿಲ್ಲ. ಕುರುಗಳೆಲ್ಲರನ್ನೂ ಓಡಿಸಿ, ಅವರ ಅನುಯಾಯಿಗಳೆಲ್ಲರನ್ನೂ ಸಂಹರಿಸಿ, ಭೀಮಸೇನನು ತನ್ನ ಎರಡೂ ಭುಜಗಳನ್ನು ತಟ್ಟಿಕೊಳ್ಳುತ್ತಾ ಅದರ ಶಬ್ಧದಿಂದ ಮಹಾಗಜಗಳನ್ನು ಹೆದರಿಸುತ್ತಿದ್ದನು. ಕೌರವ ಸೇನೆಯಲ್ಲಿ ಬಹುಪಾಲು ಯೋಧರು ಹತರಾಗಿ ಹೋಗಿದ್ದರು. ಉಳಿದ ಸ್ವಲ್ಪ ಜನರೂ ದೀನರಾಗಿದ್ದರು.

## ತ್ರಿಗರ್ತರ ರಾಜ ಸುಶರ್ಮನ ವಧೆ

ಆಗ ಸೇನಾಮಧ್ಯದಲ್ಲಿ ಧೃತರಾಷ್ಟ್ರನ ಮಕ್ಕಳಲ್ಲಿ ದುರ್ಯೋಧನ ಮತ್ತು ಸುದರ್ಶನ ಇವರಿಬ್ಬರೇ ಹತರಾಗದೇ ಉಳಿದಿದ್ದರು. ಆಗ ಸೇನಾಮಧ್ಯದಲ್ಲಿ ವ್ಯವಸ್ಥಿತನಾಗಿದ್ದ ದುರ್ಯೋಧನನನ್ನು ನೋಡಿ ದೇವಕೀಪುತ್ರನು ಧನಂಜಯನಿಗೆ ಹೇಳಿದನು:

> “ಶತ್ರುಗಳು ಅಧಿಕಾಂಶವಾಗಿ ಹತರಾಗಿದ್ದಾರೆ. ನಮ್ಮ ಬಂಧುಜನರು ರಕ್ಷಿತರಾಗಿದ್ದಾರೆ. ಸಾತ್ಯಕಿಯು ಸಂಜಯನನ್ನು ಕೂಡ ಸೆರೆಹಿಡಿದು ಹೋಗಿದ್ದಾನೆ. ರಣದಲ್ಲಿ ಧಾರ್ತರಾಷ್ಟ್ರರ ಅನುಯಾಯಿಗಳೊಡನೆ ಯುದ್ಧಮಾಡಿ ನಕುಲ ಸಹದೇವರು ಬಳಲಿದ್ದಾರೆ. ಸುಯೋಧನನನ್ನು ಬಿಟ್ಟು ಕೃಪ, ಕೃತವರ್ಮ ಮತ್ತು ದ್ರೌಣಿ ಈ ಮೂವರೂ ಯುದ್ಧದಲ್ಲಿ ನಿಂತಿದ್ದಾರೆ.

ದುರ್ಯೋಧನನ ಸೇನೆಯನ್ನು ಸಂಹರಿಸಿ ಸರ್ವ ಪ್ರಭದ್ರಕರೊಡನೆ ಪಾಂಚಾಲ್ಯನು ಇಲ್ಲಿ ಪರಮ ಕಾಂತಿಯಿಂದ ನಿಂತಿದ್ದಾನೆ. ವಾಜಿಮಧ್ಯದಲ್ಲಿ ದುರ್ಯೋಧನನು ಶ್ವೇತಚತ್ರದಡಿಯಲ್ಲಿ ಬಾರಿ ಬಾರಿಗೂ ಇತ್ತಕಡೆ ನೋಡುತ್ತಾ ನಿಂತಿದ್ದಾನೆ. ಸರ್ವ ಸೇನೆಯನ್ನೂ ಇನ್ನೊಮ್ಮೆ ವ್ಯೂಹದಲ್ಲಿ ರಚಿಸಿ ರಣಮಧ್ಯದಲ್ಲಿ ನಿಂತಿರುವ ಅವನನ್ನು ನಿಶಿತಬಾಣಗಳಿಂದ ಸಂಹರಿಸಿದರೆ ನೀನು ಕೃತಕೃತ್ಯನಾಗುತ್ತೀಯೆ. ಗಜಸೇನೆಯು ನಾಶವಾದುದನ್ನು ನೋಡಿ ಮತ್ತು ನೀನು ಇಲ್ಲಿರುವುದನ್ನು ನೋಡಿ ಇವರು ಪಲಾಯಮಾಡುತ್ತಿರುವಾಗ ನೀನು ಸುಯೋಧನನನ್ನು ಸಂಹರಿಸು! ಯಾರಾದರೂ ಬೇಗನೆ ಹೋಗಿ ಪಾಂಚಾಲ್ಯನು ಇಲ್ಲಿಗೆ ಬರುವಂತೆ ಹೇಳಲಿ. ಸೇನೆಯು ಬಳಲಿರುವಾಗ ಈ ಪಾಪಿಯು ತಪ್ಪಿಸಿಕೊಂಡು ಹೋಗಬಾರದು! ನಿನ್ನ ಸೇನೆಗಳೆಲ್ಲವನ್ನೂ ಸಂಹರಿಸಿ ಪಾಂಡುಸುತರನ್ನು ಜಯಿಸುತ್ತೇನೆಂದು ತಿಳಿದುಕೊಂಡು ಧೃತರಾಷ್ಟ್ರಜನು ಮಹಾ ರೂಪವನ್ನು ಧರಿಸಿದ್ದಾನೆ. ತನ್ನ ಸೇನೆಯು ನಾಶವಾದುದನ್ನು ಮತ್ತು ಪಾಂಡವರಿಂದ ಪೀಡಿಸಲ್ಪಟ್ಟಿರುವುದನ್ನು ನೋಡಿಯೂ ನೃಪನು ಸಂಗ್ರಾಮದಲ್ಲಿ ತನ್ನ ವಧೆಯನ್ನು ನಿಶ್ಚಯಿಸಿಯೇ

ಬರುತ್ತಿದ್ದಾನೆ.”

ಹೀಗೆ ಹೇಳಲು ಫಲ್ಗುನನಾದರೋ ಕೃಷ್ಣನಿಗೆ ಹೇಳಿದನು:

“ಮಾನದ! ಧೃತರಾಷ್ಟ್ರನ ಮಕ್ಕಳೆಲ್ಲರೂ ಭೀಮನಿಂದಲೇ ಹತರಾದರು. ಇಂದು ಯುದ್ಧಕ್ಕೆ ನಿಂತಿರುವ ಇವರಿಬ್ಬರೂ ಉಳಿಯಲಾರರು! ಭೀಷ್ಮನು ಹತನಾದನು. ದ್ರೋಣನು ಹತನಾದನು. ವೈಕರ್ತನ ಕರ್ಣನೂ ಹತನಾದನು. ಮದ್ರರಾಜ ಶಲ್ಯನು ಹತನಾದನು. ಜಯದ್ರಥನೂ ಹತನಾದನು. ಶಕುನಿಯ ಐದುನೂರು ಕುದುರೆಗಳು ಉಳಿದುಕೊಂಡಿವೆ. ಇನ್ನೂರು ರಥಗಳು ಉಳಿದುಕೊಂಡಿವೆ. ನೂರು ಆನೆಗಳಿವೆ ಮತ್ತು ಮೂರು ಸಾವಿರ ಪದಾತಿಗಳಿದ್ದಾರೆ. ಅಶ್ವತ್ಥಾಮ, ಕೃಪ, ತ್ರಿಗರ್ತಾಧಿಪತಿ, ಉಲೂಕ, ಶಕುನಿ, ಮತ್ತು ಕೃತವರ್ಮ ಇವರಿಷ್ಟೇ ಧಾರ್ತರಾಷ್ಟ್ರನ ಸೇನೆಯಲ್ಲಿ ಉಳಿದುಕೊಂಡಿದ್ದಾರೆ. ಭುವಿಯಲ್ಲಿ ಯಾರಿಗೂ ಕಾಲದಿಂದ ಮೋಕ್ಷ ಎನ್ನುವುದಿಲ್ಲ. ಸೇನೆಗಳು ಹತವಾದರೂ ಹಾಗೆ ನಿಂತಿರುವ ದುರ್ಯೋಧನನನ್ನು ನೋಡು! ಇಂದು ರಾತ್ರಿಯಾಗುವುದರೊಳಗೆ ಮಹಾರಾಜ ಯುಧಿಷ್ಠಿರನು ಶತ್ರುರಹಿತನಾಗುತ್ತಾನೆ. ಇಂದು ಶತ್ರುಗಳ್ಯಾರೂ ನನ್ನಿಂದ

ತಪ್ಪಿಸಿಕೊಂಡು ಹೋಗಲಾರರೆಂದು ಭಾವಿಸುತ್ತೇನೆ. ಒಂದುವೇಳೆ ಈ ರಣೋತ್ಕಟರು ಸಮರದಿಂದ ಪಲಾಯನ ಮಾಡದಿದ್ದರೆ, ಅವರು ಸುರ-ಅಮಾನುಷರೇ ಆಗಿರಲಿ, ಎಲ್ಲರನ್ನೂ ನಾನು ಸಂಹರಿಸುತ್ತೇನೆ. ಇಂದು ಯುದ್ಧದಲ್ಲಿ ಕ್ರುದ್ಧನಾಗಿ ನಿಶಿತ ಶರಗಳಿಂದ ಗಾಂಧಾರನನ್ನು ಕೆಳಗುರುಳಿಸಿ ರಾಜ ಯುಧಿಷ್ಠಿರನ ದೀರ್ಘ ನಿದ್ರಾಹೀನತೆಯನ್ನು ಇಲ್ಲವಾಗಿಸುತ್ತೇನೆ. ದುರಾಚಾರಿ ಸೌಬಲನು ಸಭೆಯಲ್ಲಿ ಮೋಸದಿಂದ ದ್ಯೂತದಲ್ಲಿ ಯಾವ ರತ್ನಗಳನ್ನು ಮೋಸದಿಂದ ಅಪಹರಿಸಿದ್ದನೋ ಅವುಗಳನ್ನು ನಾನು ಯುದ್ಧದಲ್ಲಿ ಪುನಃ ಪಡೆಯುತ್ತೇನೆ. ಇಂದು ಹಸ್ತಿನಾಪುರದ ಸ್ತ್ರೀಯರೆಲ್ಲರೂ ಯುದ್ಧದಲ್ಲಿ ತಮ್ಮ ಪತಿ-ಪುತ್ರರು ಪಾಂಡವರಿಂದ ಹತರಾದರೆಂದು ಕೇಳಿ ಗೋಳಿಡಲಿದ್ದಾರೆ. ಇಂದು ನಮ್ಮ ಕರ್ಮಗಳೆಲ್ಲವೂ ಸಮಾಪ್ತಗೊಳ್ಳುತ್ತವೆ. ಇಂದು ದುರ್ಯೋಧನನು ಬೆಳಗುತ್ತಿದ್ದ ಸಂಪತ್ತಿನೊಂದಿಗೆ ಪ್ರಾಣಗಳನ್ನೂ ತ್ಯಜಿಸಲಿದ್ದಾನೆ. ಬಾಲಮತಿ ಧಾರ್ತರಾಷ್ಟ್ರನು ಒಂದು ವೇಳೆ ಭಯಪಟ್ಟು ಸಂಗ್ರಾಮದಿಂದ ಪಲಾಯನ ಮಾಡದಿದ್ದರೆ ಅವನು ನನ್ನಿಂದ ಹತನಾದನೆಂದೇ ತಿಳಿ! ಮುಂದೆ ಹೋಗು! ನನ್ನ ಧನುಸ್ಸಿನ ಟೇಂಕಾರವನ್ನೇ

ಸಹಿಸಿಕೊಳ್ಳಲು ಅಶಕ್ತವಾಗಿರುವ ಈ ಗಜಸೇನೆಯನ್ನು ನಾನು ಸಂಹರಿಸುತ್ತೇನೆ.”

ಯಶಸ್ವಿ ಪಾಂಡವನು ಹೀಗೆ ಹೇಳಲು ದಾಶಾರ್ಹನು ಕುದುರೆಗಳನ್ನು ದುರ್ಯೋಧನನ ಸೇನೆಯ ಕಡೆ ಓಡಿಸಿದನು. ಆ ಸೇನೆಯನ್ನು ನೋಡಿ ದುರ್ಯೋಧನನ್ನು ಸಂಹರಿಸುವ ಇಚ್ಛೆಯಿಂದ ಸಜ್ಜಾಗಿ ಭೀಮಸೇನ, ಅರ್ಜುನ ಮತ್ತು ಸಹದೇವ ಈ ಮೂವರು ಮಹಾರಥರು ಸಿಂಹನಾದದೊಂದಿಗೆ ಹೊರಟರು. ಧನುಸ್ಸುಗಳನ್ನು ಮೇಲೆತ್ತಿ ವೇಗದಿಂದ ಒಟ್ಟಿಗೇ ಬರುತ್ತಿದ್ದ ಆ ಪಾಂಡವರೆಲ್ಲರನ್ನೂ ನೋಡಿ ಆತತಾಯಿ ಸೌಬಲನು ಯುದ್ಧದಲ್ಲಿ ಅವರನ್ನು ಎದುರಿಸಿದನು.

ಧೃತರಾಷ್ಟ್ರನ ಮಗ ಸುದರ್ಶನನು ಭೀಮಸೇನನನ್ನು ಎದುರಿಸಿದನು. ಸುಶರ್ಮ ಶಕುನಿಯರು ಕಿರೀಟಿಯೊಂದಿಗೆ ಹೋರಾಡಿದರು. ಕುದುರೆಯ ಮೇಲೆ ಕುಳಿತಿದ್ದ ದುರ್ಯೋಧನನು ಸಹದೇವನ ಮೇಲೆ ಆಕ್ರಮಣಿಸಿ ಬೇಗನೆ ಪ್ರಾಸದಿಂದ ಸಹದೇವನ ಶಿರಸ್ಸಿಗೆ ಜೋರಾಗಿ ಹೊಡೆದನು. ಅವನಿಂದ ಪ್ರಹರಿಸಲ್ಪಟ್ಟು ಸರ್ವಾಂಗಗಳೂ ರಕ್ತದಿಂದ ತೋಯ್ದು ಸಹದೇವನು ವಿಷಸರ್ಪದಂತೆ ನಿಟ್ಟುಸಿರು ಬಿಡುತ್ತಾ ರಥಪೀಠದ ಮೇಲೆ ಕುಳಿತನು. ಆಗ ಸಂಜ್ಞೆಗಳನ್ನು ಪುನಃ ಪಡೆದುಕೊಂಡು ಸಹದೇವನು ಕ್ರುದ್ಧನಾಗಿ ದುರ್ಯೋಧನನ್ನು ತೀಕ್ಷ್ಣ ಶರಗಳಿಂದ

ಮುಚ್ಚಿದನು.

ಧನಂಜಯನು ವಿಕ್ರಮದಿಂದ ಕುದುರೆಗಳ ಮೇಲೆ ಕುಳಿತಿದ್ದ ಶೂರರ ಶಿರಗಳನ್ನು ಕತ್ತರಿಸುತ್ತಿದ್ದನು. ಅನೇಕ ಶರಗಳಿಂದ ಪಾರ್ಥನು ಆ ಸೇನೆಯನ್ನು ಸಂಹರಿಸಿದನು. ಎಲ್ಲ ಕುದುರೆಗಳನ್ನೂ ಕೆಳಗುರುಳಿಸಿ ಅವನು ತ್ರಿಗರ್ತರ ರಥಗಳ ಕಡೆ ಹೋದನು. ಆಗ ಮಹಾರಥ ತ್ರಿಗರ್ತರು ಒಟ್ಟಾಗಿ ಶರವರ್ಷಗಳಿಂದ ಅರ್ಜುನ-ವಾಸುದೇವರನ್ನು ಮುಚ್ಚಿದರು. ಆಗ ಮಹಾಯಶಸ್ವಿ ಪಾಂಡುನಂದನನು ಕ್ಷುರದಿಂದ ಸತ್ಯಕರ್ಮನನ್ನು ಪ್ರಹರಿಸಿ ನಂತರ ಅವನ ರಥದ ಈಷಾದಂಡವನ್ನು ಕತ್ತರಿಸಿದನು. ಮಹಾಯಶಸ್ವಿಯು ಶಿಲಾಶಿತ ಕ್ಷುರಗಳಿಂದ ಅವನ ಸುವರ್ಣಕುಂಡಲ ಭೂಷಿತ ಶಿರವನ್ನು ತುಂಡರಿಸಿ ನಕ್ಕನು. ವನದಲ್ಲಿ ಹಸಿದ ಸಿಂಹವು ಮೃಗವನ್ನು ಕಬಳಿಸುವಂತೆ ಯೋಧರು ನೋಡುತ್ತಿದ್ದಂತೆಯೇ ಅವನು ಸತ್ಯೇಷುವನ್ನು ಸಂಹರಿಸಿದನು.

ಅವನನ್ನು ಸಂಹರಿಸಿದ ನಂತರ ಪಾರ್ಥನು ಮೂರು ಶರಗಳಿಂದ ಸುಶರ್ಮನನ್ನು ಹೊಡೆದು ಅವನ ಸುವರ್ಣವಿಭೂಷಿತ ರಥಗಳೆಲ್ಲವನ್ನೂ ಧ್ವಂಸಗೊಳಿಸಿದನು. ಆಗ ಪಾರ್ಥನು ದೀರ್ಘಕಾಲ ಒಟ್ಟುಗೂಡಿದ್ದ ತೀಕ್ಷ್ಣ ಕ್ರೋಧವಿಷವನ್ನು ಪ್ರಸ್ಥಲಾಧಿಪತಿ ಸುಶರ್ಮನ ಮೇಲೆ ಪ್ರಯೋಗಿಸಿದನು. ಧನ್ವಿ ಅರ್ಜುನನು ನೂರು ಪೃಷತ್ಕಗಳಿಂದ

ಅವನನ್ನು ಮುಚ್ಚಿ, ಅವನ ಕುದುರೆಗಳನ್ನು ಗಾಯಗೊಳಿಸಿದನು. ಅನಂತರ ಯಮದಂಡದಂತಿರುವ ನಿಶಿತ ಶರವನ್ನೆತ್ತಿಕೊಂಡು ಸುಶರ್ಮನನ್ನೇ ಗುರಿಯನ್ನಾಗಿಸಿ ಬೇಗನೆ ಪ್ರಹರಿಸಿ ನಕ್ಕನು. ಆ ಧನ್ವಿಯಿಂದ ಪ್ರಹರಿಸಲ್ಪಟ್ಟ ಕ್ರೋಧದೀಪ್ತವಾದ ಆ ಬಾಣವು ರಣದಲ್ಲಿ ಸುಶರ್ಮನ ಬಳಿ ಹೋಗಿ ಅವನ ಹೃದಯವನ್ನು ಭೇದಿಸಿತು. ಅವನು ಪ್ರಾಣಹೋಗಿ ಸರ್ವಪಾಂಡವರನ್ನೂ ಸಂತೋಷಗೊಳಿಸುತ್ತಾ ಮತ್ತು ಕೌರವರ ಕಡೆಯವರಿಗೆ ದುಃಖವನ್ನುಂಟುಮಾಡುತ್ತಾ ಧರಣೀತಲದಲ್ಲಿ ಬಿದ್ದನು.

ರಣದಲ್ಲಿ ಸುಶರ್ಮನನ್ನು ಸಂಹರಿಸಿ ಪಾರ್ಥನು ಅವನ ನಲವತ್ತೈದು ಮಹಾರಥ ಪುತ್ರರನ್ನೂ ಸಾಯಕಗಳಿಂದ ಹೊಡೆದು ಯಮಸಾದನಕ್ಕೆ ಕಳುಹಿಸಿದನು. ಅನಂತರ ಆ ಮಹಾರಥನು ನಿಶಿತ ಬಾಣಗಳಿಂದ ಅವರ ಅನುಯಾಯಿಗಳೆಲ್ಲರನ್ನೂ ಸಂಹರಿಸಿ ಹತಶೇಷವಾಗಿದ್ದ ಭಾರತೀ ಸೇನೆಯನ್ನು ಆಕ್ರಮಣಿಸಿದನು.

ಸಮರದಲ್ಲಿ ಕ್ರುದ್ಧನಾದ ಭೀಮನಾದರೋ ನಗುನಗುತ್ತಲೇ ಬಾಣಗಳಿಂದ ಧೃತರಾಷ್ಟ್ರನ ಮಗ ಸುದರ್ಶನನ್ನು ಅದೃಶ್ಯನನ್ನಾಗಿ ಮಾಡಿದನು. ಕ್ರುದ್ಧನಾಗಿ ಜೋರಾಗಿ ನಗುತ್ತಾ ಅವನು ತೀಕ್ಷ್ಣ ಕ್ಷುರಪ್ರದಿಂದ ಅವನ ಶಿರವನ್ನು ಶರೀರದಿಂದ ಬೇರ್ಪಡಿಸಿ ಕೆಳಕ್ಕೆ

ಕೆಡವಿದನು. ಆ ವೀರನು ಹತನಾಗಲು ಅವನ ಅನುಯಾಯಿಗಳು ರಣದಲ್ಲಿ ನಿಶಿತ ವಿಶಿಖಗಳನ್ನು ತೂರುತ್ತಾ ಭೀಮನನ್ನು ಸುತ್ತುವರೆದರು. ಅನಂತರ ವೃಕೋದರನು ಇಂದ್ರನ ವಜ್ರಾಯುಧದ ಸ್ಪರ್ಶಕ್ಕೆ ಸಮನಾದ ನಿಶಿತ ಬಾಣಗಳಿಂದ ಕೌರವ ಸೇನೆಯನ್ನು ಮುಚ್ಚಿದನು. ಕ್ಷಣದಲ್ಲಿಯೇ ಭೀಮನು ಅವರನ್ನು ಸಂಹರಿಸಿದನು. ಅವರು ಹತರಾಗಲು ಮಹಾಬಲ ಸೇನಾಧ್ಯಕ್ಷರು ಭೀಮಸೇನನ ಬಳಿಸಾರಿ ಅವನೊಡನೆ ಯುದ್ಧಮಾಡತೊಡಗಿದರು. ಅವರೆಲ್ಲರನ್ನೂ ಪಾಂಡವನು ಘೋರ ಶರಗಳಿಂದ ಮುಚ್ಚಿದನು. ಹಾಗೆಯೇ ಕೌರವರ ಕಡೆಯ ಮಹಾರಥರು ಕೂಡ ಮಹಾ ಶರವರ್ಷದಿಂದ ಎಲ್ಲಕಡೆಗಳಿಂದ ಪಾಂಡವೇಯರನ್ನು ಸುತ್ತುವರೆದರು. ಆಗ ಶತ್ರುಗಳೊಡನೆ ಯುದ್ಧಮಾಡುತ್ತಿದ್ದ ಪಾಂಡವರಿಗೂ ಮತ್ತು ಸಮರದಲ್ಲಿ ಪಾಂಡವರೊಂದಿಗೆ ಯುದ್ಧಮಾಡುತ್ತಿದ್ದ ಕೌರವರಿಗೂ ಎಲ್ಲರಿಗೂ ವ್ಯಾಕುಲವುಂಟಾಯಿತು. ಬಾಂಧವರ ಕುರಿತು ಶೋಕಿಸುತ್ತಾ ಪರಸ್ಪರರನ್ನು ಹೊಡೆಯುತ್ತಾ ಎರಡೂ ಕಡೆಯ ಸೇನೆಗಳ ಯೋಧರು ಕೆಳಗುರುಳಿದರು.

## ಶಕುನಿ-ಉಲೂಕರ ವಧೆ

ನರ-ಕುದುರೆ-ಆನೆಗಳ ನಾಶಯುಕ್ತ ಆ ಸಂಗ್ರಾಮವು ನಡೆಯುತ್ತಿರಲು

ಸೌಬಲ ಶಕುನಿಯು ಸಹದೇವನನ್ನು ಎದುರಿಸಿದನು. ಕೂಡಲೇ ಸಹದೇವನು ಪತಂಗಗಳಂತೆ ಶೀಘ್ರ ಶರೌಘಗಳನ್ನು ಅವನ ಮೇಲೆ ಸುರಿಸಿದನು. ರಣದಲ್ಲಿ ಉಲೂಕನು ಹತ್ತು ಶರಗಳಿಂದ ಭೀಮನನ್ನು ಹೊಡೆದನು. ಶಕುನಿಯಾದರೋ ಮೂರು ಬಾಣಗಳಿಂದ ಭೀಮನನ್ನು ಹೊಡೆದು ತೊಂಬತ್ತು ಸಾಯಕಗಳಿಂದ ಸಹದೇವನನ್ನು ಮುಚ್ಚಿದನು. ಆ ಶೂರರು ಪರಸ್ಪರರನ್ನು ಎದುರಿಸಿ ರಣಹದ್ದುಗಳ ರೆಕ್ಕೆಗಳನ್ನು ಹೊಂದಿದ್ದ ಸುವರ್ಣಪುಂಖಗಳುಳ್ಳ ಮಸೆಗಲ್ಲಿನಿಂದ ಹರಿತಗೊಳಿಸಲ್ಪಟ್ಟ ಮತ್ತು ಕಿವಿಯ ತುದಿಯವರೆಗೂ ಎಳೆಯಲ್ಪಟ್ಟು ಬಿಟ್ಟ ನಿಶಿತ ಬಾಣಗಳಿಂದ ಪರಸ್ಪರರನ್ನು ಹೊಡೆದರು.

ಇದರ ಮಧ್ಯೆ ಶೂರ ಪ್ರತಾಪವಾನ್ ಸೌಬಲೇಯನು ಪ್ರಾಸದಿಂದ ಸಹದೇವನ ತಲೆಗೆ ಜೋರಾಗಿ ಹೊಡೆದನು. ಅವನು ವಿಹ್ವಲನಾಗಿ ರಥದಲ್ಲಿಯೇ ಕುಳಿತುಕೊಂಡನು. ಹಾಗಾದ ಸಹದೇವನನ್ನು ನೋಡಿ ಸಂಕ್ರುದ್ಧನಾದ ಪ್ರತಾಪವಾನ್ ಭೀಮಸೇನನು ಎಲ್ಲ ಸೇನೆಗಳನ್ನು ತಡೆದನು. ನೂರಾರು ಸಹಸ್ರಾರು ನಾರಾಚಗಳಿಂದ ಭೇದಿಸಿ, ನಾಶಗೊಳಿಸಿ ಆ ಅರಿಂದಮನು ಸಿಂಹನಾದಗೈದನು. ಆ ಶಬ್ಧದಿಂದ ನಡುಗಿದ ಶಕುನಿಯ ಅನುಯಾಯಿಗಳೆಲ್ಲರೂ ಭೀತರಾಗಿ ಕುದುರೆ-ಆನೆಗಳೊಡನೆ ಬೇಗನೆ ಓಡಿ ಹೋದರು. ಭಗ್ನರಾಗಿ ಓಡಿಹೋಗುತ್ತಿದ್ದ

ಅವರನ್ನು ನೋಡಿ ರಾಜಾ ದುರ್ಯೋಧನನು ಹೇಳಿದನು:

> “ಅಧರ್ಮಜ್ಞರೇ! ಹಿಂದುರಿಗಿ ಬಂದು ಯುದ್ಧಮಾಡಿರಿ! ಓಡಿ ಹೋಗುವುದರಿಂದ ಏನಾಗಲಿಕ್ಕಿದೆ? ರಣದಲ್ಲಿ ಬೆನ್ನುತೋರಿಸದೇ ಯುದ್ಧಮಾಡುತ್ತಾ ಪ್ರಾಣಬಿಡುವ ವೀರನು ಇಲ್ಲಿ ಕೀರ್ತಿಯನ್ನೂ ಮರಣದ ನಂತರ ಉತ್ತಮ ಲೋಕಗಳನ್ನೂ ಹೊಂದುತ್ತಾನೆ.”

ರಾಜನು ಹೀಗೆ ಹೇಳಲು ಸೌಬಲನ ಪದಾನುಗರು ಪಾಂಡವರ ಮೇಲೆ ಎರಗಿದರು. ಓಡಿಬಂದು ಎರಗುತ್ತಿದ್ದ ಅವರು ಅತಿ ದಾರುಣ ಶಬ್ಧಮಾಡುತ್ತಿದ್ದರು. ಅಲ್ಲೋಲಕಲ್ಲೋಲಗೊಂಡ ಸಾಗರದಂತೆ ಎಲ್ಲ ಕಡೆ ಕ್ಷೋಭೆಯುಂಟಾಗುತ್ತಿತ್ತು. ಸೌಬಲನ ಪದಾನುಗರು ಮೇಲೆ ಬೀಳುತ್ತಿರುವುದನ್ನು ನೋಡಿ ವಿಜಯದಲ್ಲಿ ನಡೆಯುತ್ತಿದ್ದ ಪಾಂಡವರು ಅವರನ್ನು ಎದುರಿಸಿ ಯುದ್ಧಮಾಡಿದರು. ಪುನಃ ಚೇತರಿಸಿಕೊಂಡ ಸಹದೇವನು ಶಕುನಿಯನ್ನು ಹತ್ತು ಮತ್ತು ಅವನ ಕುದುರೆಗಳನ್ನು ಮೂರು ಶರಗಳಿಂದ ಹೊಡೆದನು. ಹಾಗೂ ನಸುನಗುತ್ತಾ ಶರಗಳಿಂದ ಶಕುನಿಯ ಧನುಸ್ಸನ್ನು ಕತ್ತರಿಸಿದನು. ಆಗ ಶಕುನಿಯು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ನಕುಲನನ್ನು ಆರು ಮತ್ತು ಭೀಮಸೇನನನ್ನು ಏಳು ಬಾಣಗಳಿಂದ ಹೊಡೆದನು. ಉಲೂಕನು ಕೂಡ ಏಳು

ಬಾಣಗಳಿಂದ ಭೀಮನನ್ನು ಮತ್ತು ಏಳರಿಂದ ಸಹದೇವನನ್ನು ಹೊಡೆದು ರಣದಲ್ಲಿ ತನ್ನ ತಂದೆಗೆ ಸಂತಸವನ್ನಿತ್ತನು. ಭೀಮಸೇನನು ಶಕುನಿಯನ್ನು ಅರವತ್ನಾಲ್ಕು ನಿಶಿತ ಶರಗಳಿಂದ ಮತ್ತು ಅವನ ಪಾರ್ಶ್ವಸಾರಥಿಗಳನ್ನು ಮೂರು ಮೂರು ಬಾಣಗಳಿಂದ ಹೊಡೆದನು. ಎಣ್ಣೆಯಿಂದ ತೋಯಿಸಿದ ಭೀಮನ ನಾರಾಚಗಳಿಂದ ಹೊಡೆಯಲ್ಪಟ್ಟ ಅವರು ಕ್ರುದ್ಧರಾಗಿ ಮಿಂಚಿನಿಂದ ಕೂಡಿದ ಮೋಡಗಳು ಮಳೆಯಿಂದ ಪರ್ವತವನ್ನು ಹೇಗೋ ಹಾಗೆ ರಣದಲ್ಲಿ ಸಹದೇವನನ್ನು ಶರವೃಷ್ಟಿಗಳಿಂದ ಮುಚ್ಚಿಬಿಟ್ಟರು. ಆಗ ಸಹದೇವನು ತನ್ನ ಮೇಲೆ ಆಕ್ರಮಣಿಸುತ್ತಿದ್ದ ಉಲೂಕನ ಶಿರವನ್ನು ಭಲ್ಲದಿಂದ ತುಂಡರಿಸಿದನು. ಯುದ್ಧದಲ್ಲಿ ಪಾಂಡವರಿಗೆ ಸಂತಸವನ್ನು ನೀಡುತ್ತಾ ಸಹದೇವನಿಂದ ಕೆಳಗುರುಳಿಸಲ್ಪಟ್ಟ ಉಲೂಕನು ಸರ್ವಾಂಗಗಳೂ ರಕ್ತದಿಂದ ತೋಯಿಸಲ್ಪಟ್ಟು ರಥದಿಂದ ನೆಲಕ್ಕುರುಳಿ ಬಿದ್ದನು.

ಪುತ್ರನು ಹತನಾದುದನ್ನು ನೋಡಿ ಶಕುನಿಯು ಅಲ್ಲಿ ಕಣ್ಣೀರುತುಂಬಿದ ಕಂಠವುಳ್ಳವನಾಗಿ, ನಿಟ್ಟುಸಿರುಬಿಡುತ್ತಾ ಕ್ಷತ್ತ ವಿದುರನ ಮಾತನ್ನು ಸ್ಮರಿಸಿಕೊಂಡನು. ಕಣ್ಣುಗಳು ಕಣ್ಣೀರಿನಿಂದ ತುಂಬಿ, ನಿಟ್ಟುಸಿರುಬಿಡುತ್ತಾ ಅವನು ಮುಹೂರ್ತಕಾಲ ಯೋಚಿಸಿದನು. ನಂತರ ಸಹದೇವನ ಬಳಿಸಾರಿ ಅವನನ್ನು ಮೂರು ಸಾಯಕಗಳಿಂದ ಹೊಡೆದನು.

ಸಹದೇವನು ಅವನು ಪ್ರಯೋಗಿಸಿದ ಬಾಣಗಳನ್ನು ಶರಸಂಘಗಳಿಂದ ನಿರಸನಗೊಳಿಸಿ ಅವನ ಧನುಸ್ಸನ್ನು ತುಂಡರಿಸಿದನು. ಧನುಸ್ಸು ತುಂಡಾಗಲು ಸೌಬಲ ಶಕುನಿಯು ಭಾರವಾದ ಖಡ್ಗವನ್ನು ಹಿಡಿದು ಸಹದೇವನ ಮೇಲೆ ಪ್ರಯೋಗಿಸಿದನು. ರಭಸದಿಂದ ಮೇಲೆ ಬೀಳುತ್ತಿದ್ದ ಸೌಬಲನ ಘೋರರೂಪೀ ಖಡ್ಗವನ್ನು ಅವನು ನಸುನಗುತ್ತಾ ಎರಡಾಗಿ ಕತ್ತರಿಸಿದನು. ಖಡ್ಗವು ಎರಡಾಗಿ ತುಂಡಾದುದನ್ನು ನೋಡಿ ಅವನು ಭಾರ ಗದೆಯೊಂದನ್ನು ಹಿಡಿದು ಸಹದೇವನ ಮೇಲೆ ಪ್ರಯೋಗಿಸಲು ಅದು ನಿಷ್ಫಲವಾಗಿ ನೆಲದ ಮೇಲೆ ಬಿದ್ದಿತು. ಆಗ ಸಂಕ್ರುದ್ಧ ಸೌಬಲನು ಪಾಂಡವನ ಮೇಲೆ ಮೇಲೆದ್ದುಬಂದ ಕಾಲರಾತ್ರಿಯಂತೆ ಇದ್ದ ಮಹಾಘೋರ ಶಕ್ತಿಯನ್ನು ಪ್ರಯೋಗಿಸಿದನು. ರಭಸದಿಂದ ಬರುತ್ತಿದ್ದ ಅದನ್ನು ಸಮರದಲ್ಲಿ ಸಹದೇವನು ನಸುನಗುತ್ತಾ ಕಾಂಚನಭೂಷಣ ಶರಗಳಿಂದ ಮೂರಾಗಿ ಕತ್ತರಿಸಿದನು. ಉರಿಯುತ್ತಿರುವ ಮಿಂಚು ಗಗನವನ್ನು ಸೀಳಿ ಬರುವಂತೆ ಆ ಕನಕಭೂಷಣ ಶಕ್ತಿಯು ಮೂರು ಭಾಗಗಳಾಗಿ ಕೆಳಗೆ ಬಿದ್ದಿತು. ಶಕ್ತಿಯು ನಾಶವಾದುದನ್ನು ಮತ್ತು ಭಯಾರ್ದಿತ ಸೌಬಲನನ್ನು ನೋಡಿ ಕೌರವನ ಕಡೆಯವರೆಲ್ಲರೂ ಶಕುನಿಯೊಂದಿಗೆ ಭಯಹುಟ್ಟಿ ಪಲಾಯನಗೈದರು. ಆಗ ವಿಜಯೋಲ್ಲಾಸಿ ಪಾಂಡವರ ಕೂಗು ಜೋರಾಗಿದ್ದಿತು. ದುರ್ಯೋಧನನ ಕಡೆಯ ಪ್ರಾಯಶಃ ಎಲ್ಲರೂ ವಿಮುಖರಾಗಿದ್ದರು. ಸಂಯುಗದಲ್ಲಿ

ಅವರು ವಿಮನಸ್ಕರಾದುದನ್ನು ನೋಡಿ ಪ್ರತಾಪವಾನ್ ಮಾದ್ರೀಪುತ್ರನು ಅನೇಕ ಸಹಸ್ರ ಶರಗಳಿಂದ ಅವರನ್ನು ತಡೆದು ನಿಲ್ಲಿಸಿದನು. ಅನಂತರ ಗಾಂಧಾರರ ಅಶ್ವಸೇನೆಯಿಂದ ರಕ್ಷಿಸಲ್ಪಟ್ಟು ರಣದಲ್ಲಿ ಎದುರಾಗಿ ಬಂದ ಜಯದಲ್ಲಿ ದೃಢನಾಗಿದ್ದ ಸೌಬಲನನ್ನು ಸಹದೇವನು ಆಕ್ರಮಣಿಸಿದನು.

ಅಳಿದುಳಿದಿರುವ ಶಕುನಿಯು ತನ್ನ ಪಾಲಿಗೆ ಸೇರಿದವನೆಂದು ನೆನಪಿಸಿಕೊಂಡು ಸಹದೇವನು ಕಾಂಚನ ರಥದ ಮೇಲೆ ಕುಳಿತು ಧನುಸ್ಸಿಗೆ ಶಿಂಜನಿಯನ್ನು ಬಲವಾಗಿ ಬಿಗಿದು ಕಟ್ಟಿ, ಸೆಳೆದು ಟೇಂಕರಿಸಿ ಅವನನ್ನು ಆಕ್ರಮಣಿಸಿದನು. ಅವನು ಕ್ರುದ್ಧನಾಗಿ ಶಿಲಾಶಿತ ಹದ್ದಿನ ಗರಿಗಳ ಬಾಣಗಳಿಂದ ಸೌಬಲನನ್ನು ಅಂಕುಶದಿಂದ ಮಹಾಗಜವನ್ನು ತಿವಿಯುವಂತೆ ಹೊಡೆದು ನೋಯಿಸಿದನು. ಮೇಧಾವೀ ಸಹದೇವನು ಅವನಿಗೆ ಹಿಂದಿನದನ್ನು ಸ್ಮರಿಸಿಕೊಡುವಂತೆ ಹೀಗೆ ಹೇಳಿದನು:

> “ಕ್ಷತ್ರಧರ್ಮದಲ್ಲಿ ಸ್ಥಿರನಾಗಿದ್ದುಕೊಂಡು ಯುದ್ಧಮಾಡಿ ಪುರುಷನಾಗು! ದುರ್ಮತೇ! ಮೂಢ! ಸಭಾತಲದಲ್ಲಿ ದಾಳಗಳನ್ನೆಸೆದು ಹೇಗೆ ನಗುತ್ತಿದ್ದೆಯೋ ಆ ಪಾಪಕರ್ಮದ ಫಲವೇನೆನ್ನುವುದನ್ನು ಈಗ ನೋಡು! ಹಿಂದೆ ನಮ್ಮನ್ನು ನೋಡಿ ನಗುತ್ತಿದ್ದ ದುರಾತ್ಮರು ಹತರಾದರು. ಕುಲಕ್ಕೆ

ಅಗ್ನಿಪ್ರಾಯ ದುರ್ಯೋಧನ ಮತ್ತು ಅವನ ಮಾವನಾದ ನೀನು ಉಳಿದುಕೊಂಡಿರುವಿರಿ. ದೊಣ್ಣೆಯನ್ನು ಎಸೆದು ಮರದಿಂದ ಹಣ್ಣನ್ನು ಕೆಡಹುವಂತೆ ನಾನು ಇಂದು ಕ್ಷುರದಿಂದ ನಿನ್ನ ತಲೆಯನ್ನು ಕತ್ತರಿಸಿ ಕೆಡುಹಿ ಸಂಹರಿಸುತ್ತೇನೆ."

ಹೀಗೆ ಹೇಳಿ ಸಂಕ್ರುದ್ಧನಾದ ಮಹಾಬಲ ಸಹದೇವನು ವೇಗದಿಂದ ಅವನನ್ನು ಆಕ್ರಮಣಿಸಿದನು. ಸಹದೇವನು ಅವನ ಬಳಿಸಾರಿ ಕ್ರೋಧದಿಂದ ಗಹಗಹಿಸಿ ನಗುತ್ತಿರುವನಂತೆ ಬಲವತ್ತಾಗಿ ಬಿಲ್ಲನ್ನು ಸೆಳೆದನು. ಹತ್ತು ಬಾಣಗಳಿಂದ ಶಕುನಿಯನ್ನೂ, ನಾಲ್ಕರಿಂದ ಅವನ ಕುದುರೆ-ಚತ್ರ-ಧ್ವಜ-ಧನುಸ್ಸುಗಳನ್ನೂ ಕತ್ತರಿಸಿ ಸಿಂಹದಂತೆ ಗರ್ಜಿಸಿದನು. ಸಹದೇವನು ಧ್ವಜ-ಧನುಸ್ಸು-ಚತ್ರಗಳನ್ನು ತುಂಡರಿಸಲು ಸೌಬಲನು ಅನೇಕ ಸಾಯಕಗಳಿಂದ ಅವನ ಸರ್ವಮರ್ಮಗಳಿಗೆ ಹೊಡೆದನು. ಅನಂತರ ಸಹದೇವನು ಇನ್ನೊಮ್ಮೆ ದುರಾಸದ ಶರವೃಷ್ಟಿಯನ್ನು ಶಕುನಿಯ ಮೇಲೆ ಪ್ರಹರಿಸಿದನು. ಆಗ ಕ್ರುದ್ಧನಾದ ಸುಬಲನ ಪುತ್ರನು ಏಕಾಕಿಯಾಗಿ ಮಾದ್ರೀಪುತ್ರ ಸಹದೇವನನ್ನು ಸಂಹರಿಸಲು ಶೀಘ್ರವಾಗಿ ಸುವರ್ಣಭೂಷಿತ ಪ್ರಾಸದಿಂದ ಅವನ ಮೇಲೆ ಎರಗಿದನು. ಆಗ ಮಾದ್ರೀಸುತನು ಒಡನೆಯೇ ರಣಾಗ್ರದಲ್ಲಿ ಪ್ರಾಸವನ್ನು ಮೇಲೆತ್ತಿ ಹಿಡಿದಿದ್ದ ಅವನ ದುಂಡಾದ ಭುಜಗಳೆರಡನ್ನೂ

ಭಲ್ಲದಿಂದ ಒಂದೇ ಬಾರಿಗೆ ಕತ್ತರಿಸಿ ಉಚ್ಛ ಸ್ವರದಲ್ಲಿ ಗರ್ಜಿಸಿದನು. ಆಗ ಶೀಘ್ರವಾಗಿ ಕೆಲಸಮಾಡಿ ಮುಗಿಸುವ ಸಹದೇವನು ಸಮಾಹಿತನಾಗಿ ಸುವರ್ಣಪುಂಖಗಳುಳ್ಳ ಸರ್ವ ಆವರಣಗಳನ್ನೂ ಅತಿಕ್ರಮಿಸಿ ಹೋಗಬಲ್ಲ ದೃಢವಾದ ಉಕ್ಕಿನ ಭಲ್ಲದಿಂದ ಶಕುನಿಯ ಶಿರವನ್ನು ಶರೀರದಿಂದ ಕೆಳಕ್ಕೆ ಕೆಡಹಿದನು. ಚೆನ್ನಾಗಿ ಪ್ರಯೋಗಿಸಲ್ಪಟ್ಟ ಪಾಂಡವನ ಆ ಸುವರ್ಣಭೂಷಿತ ದಿವಾಕರನ ಪ್ರಭೆಯುಳ್ಳ ಶರದಿಂದ ಶಿರವನ್ನು ಕಳೆದುಕೊಂಡ ಸುಬಲನ ಪುತ್ರನು ರಣರಂಗದ ಮೇಲೆ ಬಿದ್ದನು. ಹೀಗೆ ಕುಪಿತ ಪಾಂಡುಪುತ್ರನು ಕುರುಗಳ ಅನ್ಯಾಯಕ್ಕೆ ಮೂಲನಾದ ಅವನ ಶಿರವನ್ನು ವೇಗವಾದ ಸುವರ್ಣಪುಂಖಗಳುಳ್ಳ ಶಿಲಾಶಿತ ಶರದಿಂದ ಕತ್ತರಿಸಿದನು. ಶಿರವನ್ನು ಕಳೆದುಕೊಂಡು ಅಂಗಾಂಗಗಳು ರಕ್ತದಿಂದ ತೋಯ್ದುಹೋಗಿ ನೆಲದಮೇಲೆ ಮಲಗಿದ ಶಕುನಿಯನ್ನು ನೋಡಿ ಕೌರವನ ಕಡೆಯ ಯೋಧರು ಭಯದಿಂದ ಸತ್ತ್ವವನ್ನೇ ಕಳೆದುಕೊಂಡು ಶಸ್ತ್ರಪಾಣಿಗಳಾಗಿಯೇ ದಿಕ್ಕುಪಾಲರಾದರು.

ಮುಖವೊಣಗಿ, ಸಂಜ್ಞೆಗಳನ್ನು ಕಳೆದುಕೊಂಡಿದ್ದ, ಗಾಂಡೀವಘೋಷದಿಂದ ಮೃತಪ್ರಾಯರಾದವರಂತೆ ಭಯಾರ್ದಿತರಾಗಿದ್ದ, ರಥ-ಅಶ್ವ-ಗಜಗಳನ್ನು ಕಳೆದುಕೊಂಡಿದ್ದ ಅವರು ಧಾರ್ತರಾಷ್ಟ್ರನೊಂದಿಗೆ ಪದಾತಿಗಳಾಗಿಯೇ ಓಡಿ ಹೋಗುತ್ತಿದ್ದರು.

ಹಾಗೆ ರಥದಿಂದ ಶಕುನಿಯನ್ನು ಕೆಳಗುರುಳಿಸಿ ಮುದಾನ್ವಿತ ಪಾಂಡವೇಯರು ಕೇಶವ ಮತ್ತು ಸೈನಿಕರೊಂದಿಗೆ ಪ್ರಹೃಷ್ಟರಾಗಿ ಶಂಖಗಳನ್ನೂದಿ ಹರ್ಷಿತರಾದರು. ಅವರೆಲ್ಲರೂ ಸಹದೇವನನ್ನು ಪ್ರಶಂಸಿಸುತ್ತಾ ಹೃಷ್ಟರಾಗಿ

> "ವೀರ! ಒಳ್ಳೆಯದಾಯಿತು! ನೀನು ವಂಚಕ ದುರಾತ್ಮ
> ಶಕುನಿಯನ್ನು ಅವನ ಪುತ್ರನೊಂದಿಗೆ ರಣದಲ್ಲಿ ಸಂಹರಿಸಿದೆ!"

ಎಂದರು.

ಆಗ ಸೌಬಲನ ಅನುಯಾಯಿಗಳು ಕ್ರುದ್ಧರಾಗಿ ಜೀವವನ್ನು ತೊರೆದು ಪಾಂಡವರನ್ನು ಸುತ್ತುವರೆದು ಆಕ್ರಮಣಿಸಿದರು. ಅರ್ಜುನ-ಭೀಮಸೇನರು ಅವರನ್ನು ಎದುರಿಸಿದರು. ಸಹದೇವನನ್ನು ಸಂಹರಿಸಲು ಶಕ್ತಿ-ಋಷ್ಟಿ-ಪ್ರಾಸಗಳನ್ನು ಹಿಡಿದಿದ್ದ ಸಹಸ್ರಾರು ಯೋಧರ ಸಂಕಲ್ಪಗಳನ್ನು ಧನಂಜಯನು ಗಾಂಡೀವದಿಂದ ವ್ಯರ್ಥಗೊಳಿಸಿದನು. ಧಾವಿಸಿ ಬರುತ್ತಿದ್ದ ಯೋಧರ ಆಯುಧಗಳನ್ನು ಹಿಡಿದಿದ್ದವರ ಬಾಹು-ಶಿರ-ಕುದುರೆಗಳನ್ನು ಬೀಭತ್ಸುವು ಭಲ್ಲಗಳಿಂದ ತುಂಡರಿಸಿದನು. ಲೋಕವೀರ ಸವ್ಯಸಾಚಿಯಿಂದ ಪ್ರಹರಿಸಲ್ಪಟ್ಟವರು ಅಸುನೀಗಿ ವಸುಧೆಯಮೇಲೆ ತೊಪತೊಪನೆ ಬೀಳುತ್ತಿದ್ದರು. ಆಗ ದುರ್ಯೋಧನನು ತನ್ನ ಸೇನೆಯು ಕ್ಷಯವಾಗುತ್ತಿರುವುದನ್ನು ನೋಡಿ

ಕ್ರುದ್ಧನಾಗಿ, ನಾಶಗೊಳ್ಳದೇ ಉಳಿದಿದ್ದ ನೂರಾರು ರಥ-ಆನೆ-ಕುದುರೆಗಳ ಸವಾರರನ್ನು ಮತ್ತು ಪದಾತಿಗಳನ್ನು ಒಟ್ಟಾಗಿ ಕರೆದು ಈ ಮಾತನ್ನಾಡಿದನು:

> "ಕೂಡಲೇ ರಣವನ್ನು ಸೇರಿ ತಮ್ಮ ಮತ್ತು ಪಾಂಚಾಲ್ಯ ಗಣಗಳಿಂದ ಕೂಡಿರುವ ಪಾಂಡವರೆಲ್ಲರನ್ನೂ ಸಂಹರಿಸಿ ಹಿಂದಿರುಗಿರಿ!"

ಅವನ ಆ ಮಾತನ್ನು ಶಿರಸಾವಹಿಸಿ ಅವನ ಶಾಸನದಂತೆಯೇ ಆ ಯುದ್ಧದುರ್ಮದರು ರಣದಲ್ಲಿ ಪಾರ್ಥರನ್ನು ಎದುರಿಸಿ ಯುದ್ಧಮಾಡಿದರು. ಮಹಾರಣದಲ್ಲಿ ಹತರಾಗದೇ ತಮ್ಮ ಮೇಲೆ ಬೀಳುತ್ತಿದ್ದ ಅವರನ್ನು ಪಾಂಡವರು ಶೀಘ್ರದಲ್ಲಿಯೇ ವಿಷಸರ್ಪಗಳ ಆಕಾರದ ಬಾಣಗಳಿಂದ ಮುಚ್ಚಿಬಿಟ್ಟರು. ತ್ರಾತಾರರಿಲ್ಲದೇ ರಣವನ್ನು ಸೇರಿದ ಅವರನ್ನು ಮುಹೂರ್ತಮಾತ್ರದಲ್ಲಿ ಮಹಾತ್ಮ ಪಾಂಡವರು ವಧಿಸಿಬಿಟ್ಟರು. ಕವಚಧಾರಿಗಳಾಗಿ ಯುದ್ಧದಲ್ಲಿ ನಿಂತಿದ್ದರೂ ಭಯದಿಂದ ಅವರು ಹೆಚ್ಚುಕಾಲ ನಿಲ್ಲಲಿಲ್ಲ. ಕುದುರೆಗಳನ್ನೇರಿ ಪಲಾಯನ ಮಾಡುತ್ತಿದ್ದ ಸೇನೆಗಳಿಂದ ಮೇಲೆದ್ದ ಧೂಳು ತುಂಬಿಕೊಂಡಿರಲು ರಣರಂಗದಲ್ಲಿ ದಿಕ್ಕು ಉಪದಿಕ್ಕುಗಳ್ಯಾವುವೆಂದೇ ತೋರುತ್ತಿರಲಿಲ್ಲ. ಆಗ ಪಾಂಡವರ ಸೇನೆಯಿಂದ ಹೊರಬಂದ ಅನೇಕ

ಜನರು ಓಡಿಹೋಗುತ್ತಿರುವ ಕೌರವರನ್ನು ಕ್ಷಣಮಾತ್ರದಲ್ಲಿ ಸಂಹರಿಸಿದರು. ಆಗ ಕೌರವ ಸೇನೆಯಲ್ಲಿ ಯಾರೂ ಉಳಿದುಕೊಂಡಿರದ ಹಾಗಾಯಿತು.

## ದುರ್ಯೋಧನನ ಪಲಾಯನ

ಯುದ್ಧದಲ್ಲಿ ಒಂದಾಗಿದ್ದ ದುರ್ಯೋಧನನ ಹನ್ನೊಂದು ಅಕ್ಷೌಹಿಣೀ ಸೇನೆಯು ಪಾಂಡು-ಸೃಂಜಯರಿಂದ ನಾಶಗೊಂಡಿತು. ಆ ಸಹಸ್ರಾರು ರಾಜರಲ್ಲಿ, ಅತ್ಯಂತ ಗಾಯಗೊಂಡಿರುವ ದುರ್ಯೋಧನನೊಬ್ಬನೇ ಅಲ್ಲಿ ಕಾಣುತ್ತಿದ್ದನು. ಆಗ ಸರ್ವದಿಕ್ಕುಗಳನ್ನೂ ನೋಡಿ, ಭೂಮಿಯು ಸರ್ವಯೋಧರಿಂದ ವಿಹೀನವಾಗಿ ಶೂನ್ಯವಾದುದನ್ನು ಕಂಡು, ಸರ್ವ ಉದ್ದೇಶಗಳನ್ನೂ ಪೂರೈಸಿ ಹರ್ಷಿತರಾದ ಪಾಂಡವರನ್ನು ಎಲ್ಲೆಡೆಯೂ ಕಂಡು, ಆ ಮಹಾತ್ಮರ ಬಾಣಗಳ ಶಬ್ಧ ಮತ್ತು ಕೂಗುಗಳನ್ನು ಕೇಳಿ ಸೇನೆ-ವಾಹನಗಳನ್ನು ಕಳೆದುಕೊಂಡಿದ್ದ ದುರ್ಯೋಧನನು ಶೋಕಸಂತಪ್ತನಾಗಿ ಯುದ್ಧದಿಂದ ಹಿಮ್ಮೆಟ್ಟುವ ಮನಸ್ಸುಮಾಡಿದನು.

ಪಾಂಡವರ ಮಹಾ ಸೇನೆಯಲ್ಲಿ ಎರಡು ಸಾವಿರ ರಥಗಳೂ, ಏಳು ನೂರು ಆನೆಗಳೂ, ಐದು ಸಾವಿರ ಕುದುರೆಗಳೂ, ಹತ್ತುಸಾವಿರ ಪದಾತಿಗಳೂ ಉಳಿದುಕೊಂಡಿದ್ದವು. ಆ ಸೇನೆಯೊಡನೆ ಧೃಷ್ಟದ್ಯುಮ್ನನು ಯುದ್ಧದಲ್ಲಿ ನಿಂತಿದ್ದನು. ಆಗ ಏಕಾಕಿಯಾಗಿದ್ದ

ರಥಿಗಳಲ್ಲಿ ಶ್ರೇಷ್ಠ ನೃಪ ದುರ್ಯೋಧನನು ಸಮರದಲ್ಲಿ ಸಹಾಯಕರಾಗಿರುವ ಯಾರೊಬ್ಬನನ್ನೂ ಕಾಣಲಿಲ್ಲ. ಗರ್ಜಿಸುತ್ತಿದ್ದ ಶತ್ರುಗಳನ್ನೂ, ನಾಶವಾಗಿದ್ದ ತನ್ನ ಸೇನೆಯನ್ನೂ, ಮತ್ತು ಸತ್ತುಹೋಗಿದ್ದ ತನ್ನ ಕುದುರೆಯನ್ನು ಬಿಟ್ಟು ಭಯದಿಂದ ಪೂರ್ವದಿಕ್ಕಿನಲ್ಲಿ ಓಡತೊಡಗಿದನು. ಹನ್ನೊಂದು ಅಕ್ಷೌಹಿಣೀ ಸೇನೆಗಳ ಒಡೆಯನಾಗಿದ್ದ ತೇಜಸ್ವೀ ದುರ್ಯೋಧನನು ಗದೆಯನ್ನೆತ್ತಿಕೊಂಡು ಕಾಲ್ನಡುಗೆಯಲ್ಲಿಯೇ ಸರೋವರದ ಕಡೆ ಹೊರಟನು. ಕಾಲ್ನಡುಗೆಯಲ್ಲಿಯೇ ಸ್ವಲ್ಪದೂರ ಹೋಗಿ ನರಾಧಿಪನು ಕ್ಷತ್ತ ವಿದುರನ ಮಾತನ್ನು ನೆನಪಿಸಿಕೊಂಡನು: "ಯುದ್ಧದಲ್ಲಿ ನಮ್ಮ ಕ್ಷತ್ರಿಯರ ಈ ಮಹಾ ವಿನಾಶವನ್ನು ಮಹಾಪ್ರಾಜ್ಞ ವಿದುರನು ಬಹಳ ಹಿಂದೆಯೇ ಕಂಡಿದ್ದನು!" ಹೀಗೆ ಯೋಚಿಸುತ್ತಾ ಸೇನೆಗಳ ನಾಶವನ್ನು ನೋಡಿ ದುಃಖಸಂತಪ್ತ ಹೃದಯನಾಗಿ ನೃಪನು ಸರೋವರವನ್ನು ಪ್ರವೇಶಿಸಿದನು.

ಧೃಷ್ಟದ್ಯುಮ್ನನನ್ನು ಮುಂದಿರಿಸಿಕೊಂಡು ಪಾಂಡವರು ಸಂಕ್ರುದ್ಧರಾಗಿ ಕೌರವ ಸೇನೆಯನ್ನು ಆಕ್ರಮಣಿಸಿದರು. ಆಗ ಶಕ್ತಿ-ಋಷ್ಟಿ-ಪ್ರಾಸಗಳನ್ನು ಹಿಡಿದು ಗರ್ಜಿಸುತ್ತಿರುವ ಸಹಸ್ರಾರು ಯೋಧರ ಸಂಕಲ್ಪಗಳನ್ನು ಗಾಂಡೀವದಿಂದ ಧನಂಜಯನು ವ್ಯರ್ಥಗೊಳಿಸಿದನು. ಅಮಾತ್ಯ-ಬಂಧುಗಳೊಂದಿಗೆ ಅವರನ್ನು ನಿಶಿತಬಾಣಗಳಿಂದ ಸಂಹರಿಸಿ

ಶ್ವೇತಕುದುರೆಗಳ ರಥದಲ್ಲಿ ನಿಂತಿದ್ದ ಅರ್ಜುನನು ಬಹಳವಾಗಿ ಶೋಭಿಸಿದನು. ರಥ-ಕುದುರೆ-ಆನೆಗಳೊಂದಿಗೆ ಸುಬಲನ ಮಗನು ಹತನಾಗಲು ನಿನ್ನ ಸೇನೆಯು ಮರಗಳು ಕಡಿದುಬಿದ್ದಿರುವ ಮಹಾವನದಂತೆ ತೋರುತ್ತಿತ್ತು. ದುರ್ಯೋಧನನ ಅನೇಕ ಲಕ್ಷಸಂಖ್ಯಾತ ಸೇನೆಯಲ್ಲಿ ದ್ರೋಣಪುತ್ರ, ಕೃತವರ್ಮ, ಗೌತಮ ಕೃಪ ಮತ್ತು ದುರ್ಯೋಧನನನ್ನು ಬಿಟ್ಟು ಬೇರೆ ಯಾವ ಮಹಾರಥನೂ ಜೀವಂತವಾಗಿರುವುದು ತೋರಿಬರಲಿಲ್ಲ. ಧೃಷ್ಟದ್ಯುಮ್ನನಾದರೋ ಸೆರೆಯಾಗಿದ್ದ ಸಂಜಯನನನ್ನು ನೋಡಿ ನಗುತ್ತಾ ಸಾತ್ಯಕಿಗೆ ಹೇಳಿದನು:

> “ಸೆರೆಯಲ್ಲಿರುವ ಇವನನ್ನು ಜೀವಂತವಿಡುವುದರಿಂದ ನಮಗೇನಾಗಲಿಕ್ಕಿದೆ?”

ಧೃಷ್ಟದ್ಯುಮ್ನನ ಮಾತನ್ನು ಕೇಳಿ ಮಹಾರಥ ಶಿನಿಯ ಮಗನು ಸಂಜಯನನ್ನು ಕೊಲ್ಲಲು ನಿಶಿತ ಖಡ್ಗವನ್ನು ಮೇಲೆತ್ತಿದನು. ಆಗ ಅಲ್ಲಿಗೆ ಮಹಾಪ್ರಾಜ್ಞ ಕೃಷ್ಣದ್ವೈಪಾಯನನು ಬಂದು

> “ಸಂಜಯನನ್ನು ಜೀವಸಹಿತ ಬಿಟ್ಟು ಬಿಡಿ! ಯಾವುದೇ ಕಾರಣದಿಂದ ಇವನನ್ನು ಸಂಹರಿಸಬಾರದು!”

ಎಂದು ಹೇಳಿದನು. ದ್ವೈಪಾಯನನ ಮಾತನ್ನು ಕೇಳಿ ಶೈನೇಯನು

ಕೈಮುಗಿದು ಸಂಜಯನನ್ನು ಬಂಧನದಿಂದ ಬಿಡಿಸಿ

"ಸಂಜಯ! ನಿನಗೆ ಮಂಗಳವಾಗಲಿ! ನೀನಿನ್ನು ಹೊರಡು!"

ಎಂದನು. ಹಾಗೆ ಅವನಿಂದ ಅನುಜ್ಞೆಯನ್ನು ಪಡೆದು ಕವಚವನ್ನು ಬಿಚ್ಚಿಟ್ಟು ನಿರಾಯುಧನಾಗಿ ರಕ್ತದಿಂದ ತೋಯ್ದು ಹೋಗಿದ್ದ ಸಂಜಯನು ಸಾಯಂಕಾಲದ ಹೊತ್ತಿಗೆ ನಗರದ ಕಡೆ ಹೊರಟನು.

ಕ್ರೋಶಮಾತ್ರ ದೂರಬಂದಾಗ ಅಲ್ಲಿ ಅವನು ತುಂಬಾ ಗಾಯಗೊಂಡು ಗದಾಪಾಣಿಯಾಗಿ ಏಕಾಂಗಿಯಾಗಿ ನಿಂತಿದ್ದ ದುರ್ಯೋಧನನನ್ನು ಕಂಡನು. ಕಣ್ಣೀರು ತುಂಬಿಕೊಂಡಿದ್ದುದರಿಂದ ಅವನಿಗೆ ಸಂಜಯನನ್ನು ನೋಡಲಾಗಲಿಲ್ಲ. ಸ್ವಲ್ಪಹೊತ್ತಿನ ನಂತರ ದೀನನಾಗಿ ಬಳಿಯಲ್ಲಿಯೇ ನಿಂತಿದ್ದ ಸಂಜಯನನ್ನು ಅವನು ನೋಡಿದನು. ರಣರಂಗದಲ್ಲಿ ಏಕಾಂಗಿಯಾಗಿ ಶೋಕಿಸುತ್ತಿದ್ದ ಅವನನ್ನು ನೋಡಿ ದುಃಖತುಂಬಿಬಂದಿದ್ದ ಸಂಜಯನಿಗೆ ಕೂಡ ಸ್ವಲ್ಪಹೊತ್ತು ಅವನಿಗೆ ಏನನ್ನು ಹೇಳಲೂ ಸಾಧ್ಯವಾಗಲಿಲ್ಲ. ಅನಂತರ ಸಂಜಯನು ಅವನಿಗೆ ಯುದ್ಧದಲ್ಲಿ ತಾನು ಸೆರೆಯಾದುದು ಮತ್ತು ದ್ವೈಪಾಯನನ ಪ್ರಸಾದದಿಂದ ಜೀವಂತನಾಗಿ ಬಿಡುಗಡೆಹೊಂದಿದ್ದುದು ಎಲ್ಲದರ ಕುರಿತು ಹೇಳಿದನು. ಮುಹೂರ್ತಕಾಲ ಚಿಂತಿಸುತ್ತಲೇ ಇದ್ದು, ಪುನಃ ತನ್ನ ಮನಸ್ಸನ್ನು ಹಿಡಿತಕ್ಕೆ ತಂದುಕೊಂಡು, ಸಂಜಯನಲ್ಲಿ ತನ್ನ

ಸಹೋದರರ ಮತ್ತು ಸರ್ವ ಸೇನೆಗಳ ಕುರಿತು ಪ್ರಶ್ನಿಸಿದನು. ಆಗ ಎಲ್ಲವನ್ನೂ ಪ್ರತ್ಯಕ್ಷವಾಗಿ ಕಂಡಿದ್ದ ಸಂಜಯನು ಅವನಿಗೆ ಸರ್ವ ಸಹೋದರರೂ ಸೇನೆಗಳೂ ನಿಧನಹೊಂದಿರುವುದನ್ನು ವರದಿಮಾಡಿದೆ.

> "ನರಾಧಿಪ! ನಿನ್ನ ಕಡೆಯಲ್ಲಿ ಮೂವರು ಮಹಾರಥರು ಮಾತ್ರ ಉಳಿದುಕೊಂಡಿದ್ದಾರೆಂದು ನಾನು ಯುದ್ಧಭೂಮಿಯಿಂದ ಹೊರಡುವಾಗ ಕೃಷ್ಣದ್ವೈಪಾಯನನು ಹೇಳಿದ್ದನು."

ಆಗ ದುರ್ಯೋಧನನು ದೀರ್ಘ ನಿಟ್ಟುಸಿರು ಬಿಡುತ್ತಾ ಸಂಜಯನನ್ನೇ ಪುನಃ ಪುನಃ ನೋಡುತ್ತಾ ಕೈಯಿಂದ ಮುಟ್ಟಿ ಹೇಳಿದನು:

> "ಸಂಜಯ! ಈ ಸಂಗ್ರಾಮದಲ್ಲಿ ನಮ್ಮ ಕಡೆಯವನಾಗಿ ನಿನ್ನೊಬ್ಬನನ್ನು ಬಿಟ್ಟು ಬೇರೆ ಯಾರೂ ಜೀವಿಸಿರುವುದಿಲ್ಲ. ಏಕೆಂದರೆ ನಿನ್ನನ್ನು ಬಿಟ್ಟು ಎರಡನೆಯವನನ್ನು ನಾನು ಕಾಣುತ್ತಲೇ ಇಲ್ಲ. ಆದರೆ ಪಾಂಡವರು ಸಹಾಯಕರಿಂದ ಸಂಪನ್ನರಾಗಿದ್ದಾರೆ. ಪ್ರಜ್ಞಾಚಕ್ಷು ರಾಜನಿಗೆ "ನಿನ್ನ ಮಗ ದುರ್ಯೋಧನನು ಸರೋವರವನ್ನು ಪ್ರವೇಶಿಸಿದ್ದಾನೆ" ಎಂದು ಹೇಳು. ಸುಹೃದಯರಿಂದಲೂ, ಪುತ್ರರಿಂದಲೂ, ಸಹೋದರರಿಂದಲೂ ವಿಹೀನನಾದ ನನ್ನಂಥವನು ಪಾಂಡವರು ರಾಜ್ಯವನ್ನು ಅಪಹರಿಸಿದ ನಂತರ ಹೇಗೆತಾನೇ

ಜೀವಿಸಿರುವನು? ತುಂಬಾ ಗಾಯಗೊಂಡಿರುವ ನಾನು ಮಹಾಯುದ್ಧದಿಂದ ತಪ್ಪಿಸಿಕೊಂಡು ಜೀವಂತನಾಗಿ ನೀರಿನಿಂದ ತುಂಬಿದ ಈ ಸರೋವರದಲ್ಲಿ ಬಚ್ಚಿಟ್ಟುಕೊಂಡಿದ್ದೇನೆ ಎಂದು ಎಲ್ಲವನ್ನೂ ಅವನಿಗೆ ಹೇಳು."

ಹೀಗೆ ಹೇಳಿ ನೃಪ ಮನುಜಾಧಿಪನು ಸರೋವರವನ್ನು ಪ್ರವೇಶಿಸಿದನು ಮತ್ತು ಮಾಯೆಯಿಂದ ನೀರನ್ನು ಸ್ತಂಭಿಸಿದನು. ಅವನು ಸರೋವರವನ್ನು ಪ್ರವೇಶಿಸಲು ಒಂಟಿಯಾಗಿ ನಿಂತಿದ್ದ ಸಂಜಯನು ಆ ಪ್ರದೇಶವನ್ನು ಒಟ್ಟಾಗಿ ತಲುಪಿದ ಮೂವರು ರಥರನ್ನು –ಕೃಪ ಶಾರದ್ವತ, ದ್ರೌಣಿ ಮತ್ತು ಕೃತವರ್ಮರನ್ನು ನೋಡಿದನು. ಅವರ ಕುದುರೆಗಳು ಬಳಲಿದ್ದವು ಮತ್ತು ಅವರುಗಳು ಕೂಡ ಶರಪ್ರಹಾರಗಳಿಂದ ಗಾಯಗೊಂಡಿದ್ದರು. ಅವರೆಲ್ಲರೂ ಸಂಜಯನನ್ನು ನೋಡಿ ಬೇಗನೇ ಕುದುರೆಗಳನ್ನು ಓಡಿಸಿಕೊಂಡು ಹತ್ತಿರಬಂದು

"ಸಂಜಯ! ಒಳ್ಳೆಯದಾಯಿತು! ನೀನು ಜೀವಂತವಿರುವೆ!"

ಎಂದರು. ದುರ್ಯೋಧನನ ವಿಷಯವಾಗಿ ಎಲ್ಲವನ್ನೂ ಅವರು ಪ್ರಶ್ನಿಸುತ್ತಾ

"ಸಂಜಯ! ನಮ್ಮ ರಾಜ ದುರ್ಯೋಧನನು



ಬದುಕಿರುವನೇ?”

ಎಂದು ಪ್ರಶ್ನಿಸಿದರು. ಅವರೊಡನೆ ಸಂಜಯನು ನೃಪನು ಕುಶಲನಾಗಿರುವನೆಂದು ಹೇಳಿ ದುರ್ಯೋಧನನು ಅವನಿಗೆ ಹೇಳಿದುದೆಲ್ಲವನ್ನೂ ಅವರಿಗೆ ಹೇಳಿದನು. ನರಾಧಿಪನು ಸರೋವರವನ್ನು ಪ್ರವೇಶಿಸಿದನೆನ್ನುವುದನ್ನೂ ಹೇಳಿದನು. ಅವನ ವಚನವನ್ನು ಕೇಳಿದ ಅಶ್ವತ್ಥಾಮನಾದರೋ ಆ ವಿಶಾಲ ಸರೋವರವನ್ನು ನೋಡಿ ಕರುಣೆಯಿಂದ ವಿಲಪಿಸಿದನುಃ

> “ಅಯ್ಯೋ! ನಮಗೆ ಧಿಕ್ಕಾರ! ನರಾಧಿಪನಿಗೆ ನಾವಿನ್ನೂ ಜೀವಿಸಿರುವೆವೆಂದು ತಿಳಿದಿಲ್ಲ. ಅವನೊಂದಿಗೆ ಸೇರಿ ಶತ್ರುಗಳೊಡನೆ ಯುದ್ಧಮಾಡಲು ಈಗಲೂ ನಾವು ಪರ್ಯಾಪ್ತರಾಗಿದ್ದೇವೆ!”

ಬಹಳ ಹೊತ್ತಿನವರೆಗೆ ಆ ಮಹಾರಥರು ಅಲ್ಲಿ ವಿಲಪಿಸುತ್ತಿದ್ದರು. ರಣದಲ್ಲಿ ಪಾಂಡುಸುತರನ್ನು ಕಂಡು ಆ ರಥಶ್ರೇಷ್ಠರು ಪಲಾಯನಗೈದರು. ಅಳಿದುಳಿದಿದ್ದ ಆ ಮೂವರು ಮಹಾರಥರೂ ಸಂಜಯನನ್ನು ಕೃಪನ ಸುಸಜ್ಜಿತ ರಥದಲ್ಲಿ ಕುಳ್ಳಿರಿಸಿಕೊಂಡು ಸೇನಾ ಶಿಬಿರದಕಡೆ ತೆರಳಿದರು. ಸೂರ್ಯನು ಅಸ್ತಮಿಸಲಾಗಿ ಶಿಬಿರವನ್ನು ಕಾಯುತ್ತಿದ್ದ ಸೈನಿಕರು ಬಹಳವಾಗಿ ಭಯಗೊಂಡರು ಮತ್ತು ಧೃತರಾಷ್ಟ್ರನ ಮಕ್ಕಳೆಲ್ಲರೂ ಹತರಾದುದನ್ನು ಕೇಳಿ ಎಲ್ಲರೂ ಗಟ್ಟಿಯಾಗಿ ರೋದಿಸಿದರು. ಆಗ ರಕ್ಷಣೆಯಲ್ಲಿದ್ದ ವೃದ್ಧರು ರಾಜಪತ್ನಿಯರನ್ನು ಕರೆದುಕೊಂಡು ನಗರದ ಕಡೆ ಹೊರಟರು. ಸೇನೆಗಳು ನಾಶವಾದುದನ್ನು ಕೇಳಿ ರೋದಿಸುತ್ತಿದ್ದ ಅವರ ಮಹಾಧ್ವನಿಯು ಎಲ್ಲಕಡೆಗಳಿಂದಲೂ ಕೇಳಿಬರುತ್ತಿತ್ತು. ಕಡಲ ಹದ್ದುಗಳು ಕೂಗಿಕೊಳ್ಳುವಂತೆ ಪುನಃ ಪುನಃ ರೋದಿಸುತ್ತಿದ್ದ ಅವರ ಧ್ವನಿಗಳು ಭೂತಲದಲ್ಲಿಯೇ ಪ್ರತಿಧ್ವನಿಸುತ್ತಿದ್ದವು. ಕೈಗಳಿಂದ

ಪರಚಿಕೊಳ್ಳುತ್ತಿದ್ದರು. ಕೈಗಳಿಂದ ತಲೆಗಳನ್ನು ಬಡಿದುಕೊಳ್ಳುತ್ತಿದ್ದರು. ತಲೆಗೂದಲನ್ನು ಕಿತ್ತುಕೊಳ್ಳುತ್ತಾ ಅಲ್ಲಲ್ಲಿ ವಿಲಪಿಸುತ್ತಿದ್ದರು. ಎದೆಗಳನ್ನು ಬಡಿದುಕೊಂಡು ಹಾಹಾಕಾರಮಾಡುತ್ತಿದ್ದರು. ಶೋಕತಪ್ತರಾಗಿ ಕರೆಕರೆದು ಕೂಗಿಕೊಳ್ಳುತ್ತಿದ್ದರು. ಆಗ ದುರ್ಯೋಧನನ ಅಮಾತ್ಯರು ಆ ಅಶ್ರುಕಂಠ ಅತಿ ಆತುರ ರಾಜಪತ್ನಿಯರನ್ನು ಕರೆದುಕೊಂಡು ನಗರದ ಕಡೆ ನಡೆದರು. ಹಾಗೆಯೇ ದಂಡಧಾರಿ ದ್ವಾರಪಾಲಕರೂ ರಾಜಪತ್ನಿಯರ ರಕ್ಷಕರೂ ಶುಭ್ರ ಅಮೂಲ್ಯ ಹಾಸಿಗೆಗಳನ್ನೂ ಎತ್ತಿಕೊಂಡು ಬಹುಬೇಗ ನಗರವನ್ನು ಸೇರಿದರು. ಇತರರು ಹೇಸರಗತ್ತೆಗಳಿಗೆ ಕಟ್ಟಿದ ರಥಗಳಲ್ಲಿ ತಮ್ಮ ತಮ್ಮ ಪತ್ನಿಯರನ್ನು ಕರೆದುಕೊಂಡು ನಗರದ ಕಡೆ ಹೊರಟರು. ಹಿಂದೆ ಸೂರ್ಯನ ಕಣ್ಣಿಗೂ ಬೀಳದಿದ್ದ ಅಂತಃಪುರದ ಸ್ತ್ರೀಯರು ಈಗ ಪುರದ ಕಡೆ ಹೋಗುತ್ತಿರುವಾಗ ಸಾಮಾನ್ಯ ಜನರಿಗೂ ಕಾಣುತ್ತಿದ್ದರು. ಸ್ವಜನರನ್ನೂ ಬಾಂಧವರನ್ನೂ ಕಳೆದುಕೊಂಡ ಆ ಸುಕುಮಾರ ಸ್ತ್ರೀಯರು ಬೇಗ ಬೇಗನೇ ನಗರದ ಕಡೆ ಪ್ರಯಾಣಿಸಿದರು. ಭೀಮಸೇನನ ಭಯದಿಂದ ಪೀಡಿತರಾದ ಗೊಲ್ಲ-ಕುರುಬರೂ ಕೂಡ ಸಂಭ್ರಾಂತರಾಗಿ ನಗರದ ಕಡೆ ಓಡಿಹೋಗುತ್ತಿದ್ದರು. ಪಾರ್ಥರ ತೀವ್ರ ದಾರುಣ ಭಯದಿಂದಾಗಿ ಅವರು ಅನ್ಯೋನ್ಯರನ್ನು ನೋಡುತ್ತಾ ನಗರದ ಕಡೆ ಓಡಿ ಹೋಗುತ್ತಿದ್ದರು. ಹಾಗೆ ದಾರುಣ ಪಲಾಯನವು ನಡೆಯುತ್ತಿರಲು

ಶೋಕಸಮ್ಮೂಢನಾದ ಯುಯುತ್ಸುವು ಆಗ ಮಾಡಬೇಕಾದುದರ ಕುರಿತು ಯೋಚಿಸಿದನು.

> “ಹನ್ನೊಂದು ಅಕ್ಷೌಹಿಣೀ ಸೇನೆಗಳ ಒಡೆಯ ದುರ್ಯೋಧನನು ರಣದಲ್ಲಿ ಪಾಂಡವರ ಭೀಮವಿಕ್ರಮದಿಂದ ಗೆಲ್ಲಲ್ಪಟ್ಟಿದ್ದಾನೆ. ಅವನ ಸಹೋದರರೂ ಸಂಹರಿಸಲ್ಪಟ್ಟಿದ್ದಾರೆ. ಭೀಷ್ಮ-ದ್ರೋಣರೇ ಮೊದಲಾದ ಕುರುಗಳು ಎಲ್ಲರೂ ಹತರಾಗಿದ್ದಾರೆ. ಭಾಗ್ಯ-ಯೋಗಗಳ ಇಚ್ಛೆಯಂತೆ ನಾನೊಬ್ಬನೇ ತಪ್ಪಿಸಿಕೊಂಡಿದ್ದೇನೆ. ಶಿಬಿರಗಳಲ್ಲಿದ್ದವರೆಲ್ಲರೂ ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದಾರೆ. ದುರ್ಯೋಧನನ ಅಳಿದುಳಿದ ಕೆಲವೇ ಸಚಿವರು ರಾಜಪತ್ನಿಯರನ್ನು ಕರೆದುಕೊಂಡು ನಗರದ ಕಡೆ ಓಡಿ ಹೋಗುತ್ತಿದ್ದಾರೆ. ವಿಭು ಯುಧಿಷ್ಠಿರ ಮತ್ತು ಭೀಮಸೇನರ ಅನುಮತಿಯನ್ನು ಪಡೆದು ನಾನೂ ಕೂಡ ಅವರೊಡನೆ ನಗರಪ್ರವೇಶಮಾಡುವ ಕಾಲ ಬಂದೊದಗಿದೆಯೆಂದು ನನಗನ್ನಿಸುತ್ತದೆ.”

ಹೀಗೆ ಯೋಚಿಸಿದುದನ್ನು ಆ ಮಹಾಬಾಹುವು ಅವರಿಬ್ಬರಿಗೂ ನಿವೇದಿಸಿದನು. ನಿತ್ಯವೂ ಕರುಣಾಮಯಿಯಾದ ಯುಧಿಷ್ಠಿರನು

ಪ್ರೀತನಾಗಿ ವೈಶ್ಯಾಪುತ್ರನನ್ನು ಆಲಂಗಿಸಿ ಬೀಳ್ಕೊಟ್ಟನು. ಕೂಡಲೇ ಅವನು ರಾಜಪತ್ನಿಯರನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಪುರದ ಕಡೆ ಕುದುರೆಗಳನ್ನು ಓಡಿಸಿದನು. ಸೂರ್ಯನು ಅಸ್ತಂಗತನಾಗುತ್ತಿರಲಾಗಿ ಕ್ಷಿಪ್ರವಾಗಿ ಆ ಬಾಷ್ಪಕಂಠ ಅಶ್ರುಲೋಚನನು ಅವರೊಂದಿಗೆ ಹಸ್ತಿನಾಪುರವನ್ನು ಪ್ರವೇಶಿಸಿದನು. ಅಲ್ಲಿ ಅವನು ರಾಜನ ಸಮೀಪದಲ್ಲಿ ಶೋಕದಿಂದ ಹತಚೇತನನಾಗಿ ಕಣ್ಣೀರುತುಂಬಿದ ಮಹಾಪ್ರಾಜ್ಞ ವಿದುರನನ್ನು ಕಂಡನು. ನಮಸ್ಕರಿಸಿ ಎದಿರು ನಿಂತಿದ್ದ ಅವನಿಗೆ ಸತ್ಯಧೃತಿ ವಿದುರನು ಹೇಳಿದನು:

> “ನಡೆದುಹೋದ ಈ ಕುರುಕ್ಷಯದಲ್ಲಿ ಮಗನೇ ನೀನು ಜೀವಿಸಿರುವುದು ಅದೃಷ್ಟವೇ ಸರಿ! ಆದರೆ ರಾಜಾ ಯುಧಿಷ್ಠಿರನು ರಾಜ್ಯಪ್ರವೇಶಮಾಡದೇ ನೀನೇಕೆ ಇಲ್ಲಿಗೆ ಆಗಮಿಸಿರುವೆ? ಇದರ ಕಾರಣವೆಲ್ಲವನ್ನೂ ವಿಸ್ತಾರವಾಗಿ ಹೇಳು!”

ಯುಯುತ್ಸುವು ಹೇಳಿದನು:

> “ಅಯ್ಯಾ! ಜ್ಞಾತಿ-ಸುತ-ಬಾಂಧವರೊಡನೆ ಶಕುನಿಯು ಹತನಾಗಲು ಮತ್ತು ಅಳಿದುಳಿದ ಪರಿವಾರದವರೂ ಹತರಾಗಲು ರಾಜಾ ದುರ್ಯೋಧನನು ತನ್ನ ಕುದುರೆಯನ್ನು

ತೊರೆದು ಭಯದಿಂದ ಪೂರ್ವಾಭಿಮುಖವಾಗಿ ಹೊರಟುಹೋದನು. ನೃಪತಿಯು ಪಲಾಯನಮಾಡಲಾಗಿ ಸೇನಾಶಿಬಿರದಿಂದ ಭಯವ್ಯಾಕುಲಿತರು ಎಲ್ಲರೂ ನಗರದ ಕಡೆ ಓಡಿಬಂದರು. ಆಗ ಶಿಬಿರಾಧ್ಯಕ್ಷರು ಭಯದಿಂದ ರಾಜನ ಮತ್ತು ಅವನ ಸಹೋದರರ ಪತ್ನಿಯರೆಲ್ಲರನ್ನೂ ವಾಹನಗಳಲ್ಲಿ ಏರಿಸಿಕೊಂಡು ಓಡಿದರು. ಆಗ ನಾನು ಕೇಶವನೊಡನೆ ರಾಜನ ಅನುಜ್ಞೆಯನ್ನು ಪಡೆದು ಅವರನ್ನು ರಕ್ಷಿಸುತ್ತಾ ಹಸ್ತಿನಾಪುರಕ್ಕೆ ಬಂದೆನು."

ವೈಶ್ಯಾಪುತ್ರನಾಡಿದ ಮಾತನ್ನು ಕೇಳಿ ಅಮೇಯಾತ್ಮ ಸರ್ವಧರ್ಮವಿದು ವಿದುರನು ಸಮಯಕ್ಕೆ ಸರಿಯಾದುದನ್ನೇ ಮಾಡಿರುವವನೆಂದು ತಿಳಿದು ವಾಕ್ಯಕೋವಿದ ಯುಯುತ್ಸುವನ್ನು ಪ್ರಶಂಸಿಸಿದನು.

"ಭರತರ ಈ ವಿನಾಶಸಮಯದಲ್ಲಿ ನೀನು ಸಮಯೋಚಿತ ಕಾರ್ಯವನ್ನೇ ಮಾಡಿದ್ದೀಯೆ. ಇಂದು ನೀನು ಇಲ್ಲಿಯೇ ವಿಶ್ರಾಂತಿಪಡೆ. ನಾಳೆ ಯುಧಿಷ್ಠಿರನಲ್ಲಿಗೆ ಹೋಗುವಿಯಂತೆ."

ಹೀಗೆ ಮಾತನಾಡಿ ಸರ್ವಧರ್ಮವಿದು ವಿದುರನು ಯುಯುತ್ಸುವಿಗೆ ಅಪ್ಪಣೆಯನ್ನಿತ್ತು ರಾಜಭವನವನ್ನು ಪ್ರವೇಶಿಸಿದನು.

ಯುಯುತ್ಸುವಾದರೂ ರಾತ್ರಿಯನ್ನು ತನ್ನ ಮನೆಯಲ್ಲಿಯೇ ಕಳೆದನು.

# ಹದಿನೆಂಟನೇ ದಿನದ ಯುದ್ಧ: ದುರ್ಯೋಧನ ವಧೆ

## ಪಾಂಡವರಿಗೆ ದುರ್ಯೋಧನನ ಕುರುಹು

ಮಹಾತ್ಮ ಕ್ಷತ್ರಿಯರ ಪತ್ನಿಯರು ಪಲಾಯನ ಮಾಡಿ ಶಿಬಿರವು ಶೂನ್ಯವಾಗಲು, ವಿಜಯಿ ಪಾಂಡುಪುತ್ರರ ಕೂಗನ್ನು ಕೇಳಿ, ಖಾಲಿಯಾದ ಶಿಬಿರವನ್ನು ನೋಡಿ ಆ ರಾತ್ರಿ ಅಲ್ಲಿ ಉಳಿಯಲು ಇಚ್ಛಿಸದೇ ಮಹಾರಥ ಕೃಪ-ಅಶ್ವತ್ಥಾಮ-ಕೃತವರ್ಮರು ತುಂಬಾ ಉದ್ವಿಗ್ನಗೊಂಡು ರಾಜನನ್ನು ನೋಡಬೇಕೆಂದು ಬಯಸಿ ಸರೋವರಕ್ಕೆ ಆಗಮಿಸಿದರು. ಹೃಷ್ಟನಾಗಿದ್ದ ಯುಧಿಷ್ಠಿರನಾದರೋ ದುರ್ಯೋಧನನನ್ನು ವಧಿಸಲು ಬಯಸಿ ಸಹೋದರರೊಂದಿಗೆ ಅವನನ್ನು ರಣದಲ್ಲಿ ಹುಡುಕಾಡಿದನು. ಸಂಕ್ರುದ್ಧರಾಗಿ ದುರ್ಯೋಧನನನ್ನು ಜಯಿಸಲು ಬಯಸಿದ್ದ ಅವರು ಎಷ್ಟೇ ಪ್ರಯತ್ನಪಟ್ಟು ಹುಡುಕಿದರೂ ಅವನನ್ನು ಕಾಣಲಿಲ್ಲ. ದುರ್ಯೋಧನನಾದರೋ ಗದಾಪಾಣಿಯಾಗಿ ತೀವ್ರ ವೇಗದಿಂದ ಆ ಸರೋವರಕ್ಕೆ ಹೋಗಿ ತನ್ನದೇ ಮಾಯೆಯಿಂದ ನೀರನ್ನು ಸ್ಥಂಭಿಸಿ

ಪ್ರವೇಶಿಸಿದ್ದನು. ಅವರ ವಾಹನಗಳೂ ಅತ್ಯಂತ ಬಳಲಿರಲು ಪಾಂಡವರೆಲ್ಲರೂ ಸೈನಿಕರೊಂದಿಗೆ ತಮ್ಮ ಶಿಬಿರಗಳಿಗೆ ಹಿಂದಿರುಗಿದರು.

ಪಾರ್ಥರು ವಿಶ್ರಾಂತಿಪಡೆಯುತ್ತಿರಲಾಗಿ ಕೃಪ, ದ್ರೌಣಿ ಮತ್ತು ಸಾತ್ವತ ಕೃತವರ್ಮರು ಮೆಲ್ಲನೆ ಆ ಸರೋವರದ ಬಳಿ ಬಂದರು. ಜನಾಧಿಪನು ಮಲಗಿದ್ದ ಆ ಸರೋವರವನ್ನು ತಲುಪಿ ಅವರು ನೀರಿನಲ್ಲಿ ಮಲಗಿದ್ದ ದುರ್ಧರ್ಷ ರಾಜನನ್ನು ಸಂಬೋಧಿಸಿ ಹೀಗೆಂದರು:

> “ರಾಜನ್! ಕೂಡಲೇ ಮೇಲೇಳು! ನಮ್ಮೊಂದಿಗೆ ಸೇರಿ ಯುಧಿಷ್ಠಿರನೊಡನೆ ಯುದ್ಧಮಾಡು! ಗೆದ್ದರೆ ಪೃಥ್ವಿಯನ್ನು ಭೋಗಿಸುವೆ ಅಥವಾ ಹತನಾಗಿ ಸ್ವರ್ಗವನ್ನು ಪಡೆಯುವೆ! ದುರ್ಯೋಧನ! ಅವರ ಸೇನೆಯೆಲ್ಲವನ್ನೂ ನೀನು ಸಂಹರಿಸಿರುವೆ! ಅಳಿದುಳಿದಿರುವ ಸೈನಿಕರು ಕೂಡ ಬಳಲಿ ಬೆಂಡಾಗಿದ್ದಾರೆ. ನಮ್ಮ ರಕ್ಷಣೆಯಿರುವ ನಿನ್ನ ಶಕ್ತಿಯ ವೇಗವನ್ನು ತಡೆದುಕೊಳ್ಳಲು ಅವರು ಶಕ್ಯರಿಲ್ಲ. ಆದುದರಿಂದ ಮೇಲೇಳು!”

ದುರ್ಯೋಧನನು ಹೇಳಿದನು:

> “ಒಳ್ಳೆಯದಾಯಿತು ಈ ರೀತಿಯ ಪುರುಷಕ್ಷಯಕಾರೀ

ಪಾಂಡವ-ಕೌರವರ ಮಹಾಸಂಗ್ರಾಮದಿಂದ ಜೀವನ್ಮುಕ್ತರಾಗಿರುವ ನಿಮ್ಮನ್ನು ನಾನು ನೋಡುತ್ತಿದ್ದೇನೆ. ವಿಶ್ರಾಂತಿಪಡೆದು ಬಳಲಿಕೆಯನ್ನು ಕಳೆದುಕೊಂಡ ನಂತರ ನಾವೆಲ್ಲರೂ ಅವರನ್ನು ಜಯಿಸೋಣ. ನೀವೂ ಕೂಡ ಬಳಲಿದ್ದೀರಿ. ನಾನೂ ಕೂಡ ತುಂಬಾ ಗಾಯಗೊಂಡಿದ್ದೇನೆ. ಇನ್ನೂ ಅಪಾರ ಸೇನೆಯಿರುವ ಅವರೊಂದಿಗೆ ಈಗ ಯುದ್ಧಮಾಡುವುದು ಸೂಕ್ತವೆಂದು ನನಗನ್ನಿಸುತ್ತಿಲ್ಲ. ಇದು ಮಹಾ ವೀರತನವೆಂದು ನನ್ನ ಮನಸ್ಸಿಗೆ ಅನಿಸುತ್ತಿಲ್ಲ. ನನ್ನ ಮೇಲಿನ ಅಪಾರ ಭಕ್ತಿಯ ಹೊರತಾಗಿ ಇದು ಪರಾಕ್ರಮಕ್ಕೆ ಸಮಯವೆಂದು ಕಾಣುತ್ತಿಲ್ಲ. ಇಂದು ಒಂದು ರಾತ್ರಿ ವಿಶ್ರಮಿಸಿಕೊಂಡ ನಂತರ ನಾಳೆ ನಿಮ್ಮೊಂದಿಗೆ ರಣದಲ್ಲಿ ನಾನು ಶತ್ರುಗಳನ್ನು ಎದುರಿಸಿ ಹೋರಾಡುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ!”

ಹೀಗೆ ಹೇಳಲು ದ್ರೌಣಿಯು ರಾಜನನ್ನು ಕುರಿತು ಹೇಳಿದನು:

“ರಾಜನ್! ಎದ್ದೇಳು! ನಿನಗೆ ಮಂಗಳವಾಗಲಿ! ರಣದಲ್ಲಿ ಶತ್ರುಗಳನ್ನು ಜಯಿಸೋಣ! ಪೂರೈಸಿರುವ ಇಷ್ಟಿ-ದಾನಗಳ, ಸತ್ಯ-ಜಪಗಳ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಇಂದು

> ನಾನು ಸೋಮಕರನ್ನು ನಾಶಗೊಳಿಸುತ್ತೇನೆ! ಈ ರಾತ್ರಿ ಕಳೆಯುವುದರೊಳಗೆ ಒಂದುವೇಳೆ ನಾನು ರಣದಲ್ಲಿ ಶತ್ರುಗಳನ್ನು ಸಂಹರಿಸದೇ ಇದ್ದರೆ ಯಜ್ಞಗಳನ್ನು ಮಾಡಿದ ಸಜ್ಜನರಿಗೆ ಉಚಿತವಾದ ಪ್ರಸನ್ನತೆಯನ್ನು ನಾನು ಹೊಂದದಂತಾಗಲಿ! ಸರ್ವ ಪಾಂಚಾಲರನ್ನೂ ಸಂಹರಿಸದೇ ನಾನು ಕವಚವನ್ನು ಬಿಚ್ಚುವುದಿಲ್ಲ. ನಿನಗೆ ಹೇಳುತ್ತಿರುವ ಈ ನನ್ನ ಮಾತು ಸತ್ಯ!”

ಅವರು ಹೀಗೆ ಮಾತನಾಡಿಕೊಳ್ಳುತ್ತಿರಲು ಮಾಂಸದ ಭಾರವನ್ನು ಹೊತ್ತು ಪರಿಶ್ರಾಂತರಾಗಿದ್ದ ಕೆಲವು ವ್ಯಾಧರು ನೀರನ್ನು ಕುಡಿಯಲೋಸುಗ ಆ ಪ್ರದೇಶಕ್ಕೆ ಆಗಮಿಸಿದರು. ಆಸೆಬುರುಕರಾದ ಅವರು ನಿತ್ಯವೂ ಪರಮ ಭಕ್ತಿಯಿಂದ ಭೀಮಸೇನನಿಗೆ ಮಾಂಸವನ್ನು ಹೊತ್ತುಕೊಂಡು ಹೋಗಿ ಕೊಡುತ್ತಿದ್ದರು. ಅಲ್ಲಿ ಅವರು ಒಟ್ಟಾಗಿ ಅಡಗಿನಿಂತು ರಹಸ್ಯದಲ್ಲಿ ಅವರಾಡಿದ ಎಲ್ಲ ಮಾತುಗಳನ್ನೂ, ದುರ್ಯೋಧನನ ಮಾತನ್ನೂ ಕೇಳಿಸಿಕೊಂಡರು.

ಯುದ್ಧಾಕಾಂಕ್ಷಿಗಳಾಗಿದ್ದ ಆ ಎಲ್ಲ ಮಹೇಷ್ವಾಸರೂ ಯುದ್ಧಮಾಡಲು ಬಯಸಿರದಿದ್ದ ಕೌರವನಿಗೆ ಪರಮ ನಿರ್ಬಂಧಗಳನ್ನು ಹಾಕುತ್ತಿದ್ದರು. ಆಗ ಅವರು ಕೌರವರನ್ನೂ, ಯುದ್ಧಮಾಡಲು ಮನಸ್ಸಿಲ್ಲದ ರಾಜನು ನೀರಿನಲ್ಲಿ ಕುಳಿತುಕೊಂಡಿರುವುದನ್ನೂ ನೋಡಿದರು. ಅವರ ಮತ್ತು

ನೀರಿನಲ್ಲಿದ್ದುಕೊಂಡು ಮಾತನಾಡುತ್ತಿದ್ದ ರಾಜನ ಸಂಭಾಷಣೆಯನ್ನು ಕೇಳಿ ವ್ಯಾಧರು ಸುಯೋಧನನು ನೀರಿನಲ್ಲಿ ಮುಳುಗಿಕೊಂಡಿದ್ದಾನೆಂದು ತಿಳಿದುಕೊಂಡರು.

ಇದಕ್ಕೆ ಮೊದಲು ದುರ್ಯೋಧನನನ್ನು ಹುಡುಕಿಕೊಂಡು ಬರುತ್ತಿರುವ ಪಾಂಡುಪುತ್ರರಿಗೆ ದಾರಿಯಲ್ಲಿ ಇವರು ಸಿಕ್ಕಿದ್ದರು. ಆ ಮೃಗವ್ಯಾಧರು ಪಾಂಡುಪುತ್ರನು ಆಗ ಆಡಿದ ಮಾತನ್ನು ಸ್ಮರಿಸಿಕೊಂಡು ಅನ್ಯೋನ್ಯರೊಡನೆ ಮೆಲ್ಲನೆ ಹೀಗೆ ಮಾತನಾಡಿಕೊಂಡರು:

> “ದುರ್ಯೋಧನನ ಕುರುಹನ್ನು ನೀಡೋಣ! ಪಾಂಡವನು ನಮಗೆ ಧನವನ್ನು ನೀಡುತ್ತಾನೆ. ಸರೋವರದಲ್ಲಿ ನೃಪ ದುರ್ಯೋಧನನಿರುವನೆಂದು ನಮಗೆ ಸ್ಪಷ್ಟವಾಗಿ ತಿಳಿದುಹೋಯಿತು. ಆದುದರಿಂದ ನಾವೆಲ್ಲರೂ ರಾಜಾ ಯುಧಿಷ್ಠಿರನಿರುವಲ್ಲಿಗೆ ಹೋಗಿ ನೀರಿನಲ್ಲಿ ಮಲಗಿರುವ ದುರ್ಯೋಧನನ ಕುರಿತು ಹೇಳೋಣ! ಭೀಮಸೇನನಿಗೆ ಧೃತರಾಷ್ಟ್ರನ ಮಗನು ನೀರಿನಲ್ಲಿ ಮಲಗಿರುವುದೆಲ್ಲವನ್ನೂ ಹೇಳೋಣ! ಸುಪ್ರೀತನಾಗಿ ಅವನು ನಮಗೆ ಹೇಳಿದಂತೆ ಬಹಳ ಧನವನ್ನು ನೀಡುತ್ತಾನೆ. ಕಷ್ಟದಿಂದ ನಮ್ಮನ್ನೇ ಶೋಷಿಸುವ ಈ ಶುಷ್ಕ ಮಾಂಸದಿಂದ

ನಮಗೇನಾಗಬೇಕಾಗಿದೆ?”

ಹೀಗೆ ಮಾತನಾಡಿಕೊಂಡು ಸಂತೋಷಗೊಂಡ ಆ ಧನಾರ್ಥಿ ವ್ಯಾಧರು ಮಾಂಸದ ಹೊರೆಯನ್ನು ಹೊತ್ತುಕೊಂಡು ಶಿಬಿರದ ಕಡೆ ನಡೆದರು. ಪ್ರಹಾರಿ-ಲಬ್ಧಲಕ್ಷ ಪಾಂಡವರಾದರೋ ಸಮರದಲ್ಲಿ ದುರ್ಯೋಧನನ ಕುರುಹನ್ನು ಕಾಣದೇ ಆ ಪಾಪಿಯ ಮೋಸದಿಂದ ಪಾರಾಗಬೇಕೆಂದು ಬಯಸಿ, ರಣಾಂಗಣದ ಎಲ್ಲ ಕಡೆಗಳಲ್ಲಿ ಚಾರರನ್ನು ಕಳುಹಿಸಿದ್ದರು. ಧರ್ಮರಾಜನ ಸೈನಿಕರೆಲ್ಲರೂ ಒಟ್ಟಾಗಿ ಬಂದು ದುರ್ಯೋಧನನು ಯಾರಿಗೂ ಕಾಣಲಿಲ್ಲವೆಂದು ನಿವೇದಿಸಿದರು. ಚಾರರ ಆ ಮಾತನ್ನು ಕೇಳಿ ಯುಧಿಷ್ಠಿರನು ತೀವ್ರ ಚಿಂತಾಮಗ್ನನಾಗಿ ನಿಟ್ಟುಸಿರು ಬಿಟ್ಟನು. ಹಾಗೆ ಪಾಂಡವರು ದೀನರಾಗಿ ಕುಳಿತುಕೊಂಡಿರುವ ಸ್ಥಳಕ್ಕೆ ಆ ಆಸೆಬುರುಕ ಬೇಟೆಗಾರರು ತ್ವರೆಮಾಡಿ ಆಗಮಿಸಿದರು. ನೃಪ ದುರ್ಯೋಧನನ್ನು ನೋಡಿ ಹರ್ಷಗೊಂಡಿದ್ದ ಅವರು ಶಿಬಿರಕ್ಕೆ ಬಂದು ತಡೆಯಲ್ಪಟ್ಟರೂ ಭೀಮಸೇನನನ್ನು ನೋಡಿ ಒಳನುಗ್ಗಿದರು. ಅವರು ಭೀಮಸೇನನ ಬಳಿಸಾರಿ ಅವನಿಗೆ ಅಲ್ಲಿ ನಡೆದ ಮತ್ತು ಕೇಳಿದುದೆಲ್ಲವನ್ನೂ ವರದಿಮಾಡಿದರು. ಆಗ ವೃಕೋದರನು ಅವರಿಗೆ ಬಹಳ ಧನವನ್ನಿತ್ತು ಅವೆಲ್ಲವನ್ನೂ ಧರ್ಮರಾಜನಿಗೆ ತಿಳಿಸಿದನು.

“ರಾಜನ್! ನನ್ನ ಬೇಟೆಗಾರರು ದುರ್ಯೋಧನ ಕುರುಹನ್ನು

> ತಿಳಿದಿದ್ದಾರೆ. ಯಾರಿಗಾಗಿ ಪರಿತಪಿಸುತ್ತಿರುವೆಯೋ ಅವನು ಸರೋವರವನ್ನು ಸ್ತಂಭನಗೊಳಿಸಿ ನೀರಿನಲ್ಲಿ ಮಲಗಿದ್ದಾನೆ!"

ಭೀಮಸೇನನ ಆ ಪ್ರಿಯ ಮಾತನ್ನು ಕೇಳಿದ ಯುಧಿಷ್ಠಿರನು ಸಹೋದರರೊಂದಿಗೆ ಹರ್ಷಿತನಾದನು. ಆ ಮಹೇಷ್ವಾಸನು ಸರೋವರದ ನೀರನ್ನು ಪ್ರವೇಶಿಸಿದ್ದಾನೆಂದು ಕೇಳಿ ಅವನು ಕ್ಷಿಪ್ರದಲ್ಲಿಯೇ ಜನಾರ್ದನನನ್ನು ಮುಂದಿರಿಸಿಕೊಂಡು ಅಲ್ಲಿಗೆ ಧಾವಿಸಿದನು. ಆಗ ಪ್ರಹೃಷ್ಟ ಪಾಂಡವ-ಪಾಂಚಾಲರ ಕಿಲಕಿಲಾ ಶಬ್ಧವು ಎಲ್ಲೆಡೆ ಕೇಳಿಬಂದಿತು. ಸಿಂಹನಾದ ಗೈಯುತ್ತಾ ಗರ್ಜಿಸುತ್ತಾ ತ್ವರೆಮಾಡಿ ಆ ಕ್ಷತ್ರಿಯರು ದ್ವೈಪಾಯನ ಸರೋವರಕ್ಕೆ ಹೊರಟರು.

> "ಪಾಪಿ ಧಾರ್ತರಾಷ್ಟ್ರನ ಕುರುಹು ಸಿಕ್ಕಿಬಿಟ್ಟಿತು! ಅವನನ್ನು ರಣದಲ್ಲಿ ಕಂಡುಬಿಟ್ಟೆವು!"

ಎಂದು ಹೃಷ್ಟರೂಪ ಸೋಮಕರು ಎಲ್ಲಕಡೆ ಕೂಗಿಕೊಳ್ಳುತ್ತಿದ್ದರು. ಅಲ್ಲಿ ವೇಗದಿಂದ ಹೋಗುತ್ತಿರುವ ಅವರ ರಥಗಳ ತುಮುಲ ಶಬ್ಧವು ಆಕಾಶವನ್ನೂ ತಲುಪಿತು. ದುರ್ಯೋಧನನನ್ನು ಹುಡುಕುತ್ತಾ, ವಾಹನಗಳು ಬಳಲಿದ್ದರೂ, ಅರ್ಜುನ-ಭೀಮಸೇನ-ಮಾದ್ರೀಪುತ್ರ ಪಾಂಡವರಿಬ್ಬರು- ಪಾಂಚಾಲ್ಯ ಧೃಷ್ಟದ್ಯುಮ್ನ-ಅಪರಾಜಿತ ಶಿಖಂಡೀ-ಉತ್ತಮೌಜ-ಯುಧಾಮನ್ಯು-ಅಪರಾಜಿಜ ಸಾತ್ಯಕಿ-ಉಳಿದ

ಪಾಂಚಾಲರು-ದ್ರೌಪದೇಯರು-ಎಲ್ಲ ಕುದುರೆಗಳು-ಆನೆಗಳು ಮತ್ತು ನೂರಾರು ಪದಾತಿಗಳು ತ್ವರೆಮಾಡಿ ರಾಜಾ ಯುಧಿಷ್ಠಿರನನ್ನು ಹಿಂಬಾಲಿಸಿಕೊಂಡು ಹೋದರು. ಅನಂತರ ಧರ್ಮಪುತ್ರ ಯುಧಿಷ್ಠಿರನು ಎಲ್ಲಿ ದುರ್ಯೋಧನನಿರುವನೆಂದು ಹೇಳಿದ್ದರೋ ಆ ದ್ವೈಪಾಯನ ಸರೋವರವನ್ನು ತಲುಪಿದನು.

ಶುದ್ಧ ಶೀತಲ ನೀರಿನಿಂದ ಕೂಡಿದ್ದು ಎರಡನೆಯ ಸಮುದ್ರವೋ ಎಂಬಂತೆ ತೋರುತ್ತಿದ್ದ ಆ ಸರೋವರದಲ್ಲಿ ಮಾಯೆಯಿಂದ ನೀರನ್ನು ಸ್ತಬ್ಧಗೊಳಿಸಿ ದುರ್ಯೋಧನನು ಕುಳಿತಿದ್ದನು. ಅತ್ಯದ್ಭುತ ವಿಧಿಯಲ್ಲಿ, ದೈವಯೋಗದಿಂದ ನೀರಿನಲ್ಲಿ ಅಂತರ್ಗತನಾಗಿ ಮಲಗಿದ್ದ ಆ ಗದಾಪಾಣಿಯು ಯಾವ ಮನುಷ್ಯನಿಗೂ ಕಾಣಿಸುತ್ತಿರಲಿಲ್ಲ. ನೀರಿನಲ್ಲಿ ಅಂತರ್ಗತನಾಗಿ ಮಲಗಿದ್ದ ರಾಜಾ ದುರ್ಯೋಧನನು ಮೇಘಗಳ ಗುಡುಗಿನಂತಹ ತುಮುಲ ಶಬ್ಧವನ್ನು ಕೇಳಿದನು. ಯುಧಿಷ್ಠಿರನಾದರೋ ಸೋದರರೊಂದಿಗೆ ಮಹಾ ಶಂಖನಾದಗಳು ಮತ್ತು ರಥಚಕ್ರದ ಸದ್ದಿನೊಂದಿಗೆ ಮಹಾ ಧೂಳಿನ ರಾಶಿಯನ್ನೆಬ್ಬಿಸಿ ಮೇದಿನಿಯನ್ನು ನಡುಗಿಸುತ್ತಾ ದುರ್ಯೋಧನನ ವಧೆಗಾಗಿ ಆ ಸರೋವರಕ್ಕೆ ಆಗಮಿಸಿದನು. ಯುಧಿಷ್ಠಿರನ ಸೈನ್ಯದ ಶಬ್ಧವನ್ನು ಕೇಳಿದ ಕೃತವರ್ಮ, ಕೃಪ, ದ್ರೌಣಿಯರು ದುರ್ಯೋಧನನಿಗೆ ಹೇಳಿದರು:

“ವಿಜಯೋಲ್ಲಾಸಿತ ಪಾಂಡವರು ಇಲ್ಲಿಗೇ ಬರುತ್ತಿದ್ದಾರೆ. ನಾವು ಇಲ್ಲಿಂದ ಹೊರಟುಹೋಗುತ್ತೇವೆ. ಅನುಮತಿಯನ್ನು ನೀಡು!”

ಆ ಯಶಸ್ವಿಗಳನ್ನು ಕೇಳಿದ ದುರ್ಯೋಧನನಾದರೋ ಹಾಗೆಯೇ ಆಗಲೆಂದು ಹೇಳಿ ಮಾಯೆಯಿಂದ ಪುನಃ ಸರೋವರವನ್ನು ಸ್ತಂಭಿಸಿದನು. ರಾಜನ ಅನುಜ್ಞೆಯನ್ನು ಪಡೆದು ತುಂಬಾ ಶೋಕಪರಾಯಣರಾಗಿದ್ದ ಕೃಪನೇ ಮೊದಲಾದ ಮಹಾರಥರು ದೂರ ಹೊರಟುಹೋದರು. ದೂರ ಹೋಗಿ ಆಯಾಸಗೊಂಡಿದ್ದ ಅವರು ಅಲ್ಲೊಂದು ಆಲದ ಮರವನ್ನು ನೋಡಿ ಅದರಡಿಯಲ್ಲಿ ನೃಪನ ಕುರಿತೇ ಚಿಂತಿಸುತ್ತಾ ವಿಶ್ರಾಂತಿಪಡೆದರು.

“ಮಹಾಬಲ ಧಾರ್ತರಾಷ್ಟ್ರನು ನೀರನ್ನು ಸ್ತಂಭನಗೊಳಿಸಿ ಮಲಗಿದ್ದಾನೆ. ಯುದ್ಧವನ್ನು ಬಯಸಿರುವ ಪಾಂಡವರಾದರೋ ಆ ಪ್ರದೇಶಕ್ಕೆ ಬಂದುಬಿಟ್ಟಿದ್ದಾರೆ. ಯುದ್ಧವು ಹೇಗೆ ನಡೆದೀತು? ರಾಜನು ಏನಾಗುತ್ತಾನೆ? ಪಾಂಡವ ರಾಜನು ಕೌರವನನ್ನು ಹೇಗೆ ಮೇಲೆಬ್ಬಿಸುತ್ತಾನೆ?”

ಹೀಗೆಯೇ ಚಿಂತಿಸುತ್ತಾ ಕೃಪನೇ ಮೊದಲಾದ ಆ ಮಹಾರಥರು ಕುದುರೆಗಳನ್ನು ರಥಗಳಿಂದ ಬಿಚ್ಚಿ ಅಲ್ಲಿಯೇ ಕುಳಿತು ವಿಶ್ರಾಂತಿ

ಪಡೆದರು.

## ಸುಯೋಧನ-ಯುಧಿಷ್ಠಿರ ಸಂವಾದ

ಆ ಮೂವರು ಮಹಾರಥರೂ ಹೊರಟುಹೋದನಂತರ ದುರ್ಯೋಧನನಿದ್ದ ಆ ಸರೋವರಕ್ಕೆ ಪಾಂಡವರು ತಲುಪಿದರು. ದ್ವೈಪಾಯನ ಸರೋವರವನ್ನು ತಲುಪಿ ಧಾರ್ತರಾಷ್ಟ್ರನು ಆ ಜಲಾರಾಶಿಯನ್ನು ಸ್ತಂಭನಗೊಳಿಸಿರುವುದನ್ನು ಕಂಡು ಯುಧಿಷ್ಠಿರನು ವಾಸುದೇವನಿಗೆ ಈ ಮಾತನ್ನಾಡಿದನು:

> "ಧಾರ್ತರಾಷ್ಟ್ರನು ತನ್ನ ಮಾಯೆಯನ್ನು ನೀರಿನ ಮೇಲೆ ಪ್ರಯೋಗಿಸಿದುದನ್ನು ನೋಡು! ನೀರನ್ನು ಗಟ್ಟಿಯಾಗಿಸಿ ಮನುಷ್ಯರ ಭಯವಿಲ್ಲದೇ ಇಲ್ಲಿ ಮಲಗಿದ್ದಾನೆ! ದೈವೀ ಮಾಯೆಯನ್ನುಪಯೋಗಿಸಿ ನೀರಿನೊಳಗಿದ್ದಾನೆ. ಮೋಸಗಳನ್ನು ಚೆನ್ನಾಗಿ ತಿಳಿದುಕೊಂಡಿರುವ ಇವನು ಮೋಸವನ್ನು ಬಳಸಿದರೂ ನನ್ನಿಂದ ಜೀವಂತವಾಗಿ ಉಳಿಯುವುದಿಲ್ಲ! ಮಾಧವ! ಒಂದುವೇಳೆ ಸಮರದಲ್ಲಿ ಸ್ವಯಂ ವಜ್ರಧಾರಿ ಇಂದ್ರನೇ ಇವನ ಸಹಾಯಕ್ಕೆ ಬಂದರೂ ಯುದ್ಧದಲ್ಲಿ ಇವನು ಹತನಾಗುವುದನ್ನು ಲೋಕವು ನೋಡುತ್ತದೆ!"

ಕೃಷ್ಣನು ಹೇಳಿದನು:

“ಭಾರತ! ಮಾಯಾವಿಯಾದ ಇವನ ಮಾಯೆಯನ್ನು ಮಾಯೆಯಿಂದಲೇ ನಾಶಗೊಳಿಸು. ಯುಧಿಷ್ಠಿರ! ಮಾಯಾವಿಯನ್ನು ಮಾಯೆಯಿಂದಲೇ ವಧಿಸಬೇಕು. ಇದು ಸತ್ಯ! ಉಪಾಯಗಳಿಂದ ಮತ್ತು ಕ್ರಿಯೆಗಳಿಂದ ಪಾಪಾತ್ಮ ಸುಯೋಧನನನ್ನು ಸಂಹರಿಸು! ಮಾಯೆಯನ್ನು ಪ್ರಯೋಗಿಸಿರುವ ನಿದರ್ಶನಗಳು ಅನೇಕವಿವೆ. ಉಪಾಯಯುಕ್ತ ಕ್ರಿಯೆಗಳಿಂದಲೇ ಇಂದ್ರನು ದೈತ್ಯ-ದಾನವರನ್ನು ಸಂಹರಿಸಿದನು. ಅನೇಕ ಉಪಾಯಯುಕ್ತ ಕ್ರಿಯೆಗಳಿಂದಲೇ ಮಹಾತ್ಮ ವಾಮನನು ಬಲಿಯನ್ನು ಬಂಧಿಸಿದನು. ಉಪಾಯಯುಕ್ತ ಕ್ರಿಯೆಗಳಿಂದಲೇ ಹಿಂದೆ ಮಹಾಸುರ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪುಗಳು ವಧಿಸಲ್ಪಟ್ಟರು. ಇಂತಹ ಕ್ರಿಯೆಗಳಿಂದಲೇ ವೃತ್ರನೂ ಹತನಾದನು ಎನ್ನುವುದರಲ್ಲಿ ಸಂಶಯವೇ ಇಲ್ಲ. ಪೌಲಸ್ತ್ಯ ತನಯ ರಾವಣನೆಂಬ ಹೆಸರಿನ ರಾಕ್ಷಸನೂ ಕೂಡ ಬಾಂಧವ-ಅನುಯಾಯಿಗಳೊಂದಿಗೆ ರಾಮನಿಂದ ಹತನಾದನು. ಹಾಗೆಯೇ ನೀನೂ ಕೂಡ ಯೋಗ ಮತ್ತು ಕ್ರಿಯೆಗಳನ್ನು ಉಪಯೋಗಿಸಿ ನಿನ್ನ ವಿಕ್ರಮವನ್ನು ತೋರಿಸು! ಉಪಾಯಯುಕ್ತ ಕ್ರಿಯೆಗಳಿಂದಲೇ ನಾನು ಹಿಂದೆ ಮಹಾದೈತ್ಯ

ತಾರಕನನ್ನೂ ವೀರ್ಯವಾನ್ ವಿಪ್ರಚಿತ್ತಿಯನ್ನೂ ಸಂಹರಿಸಿದ್ದೆ. ಹಾಗೆಯೇ ವಾತಾಪಿ-ಇಲ್ವಲರೂ, ತ್ರಿಶಿರನೂ ಮತ್ತು ಅಸುರ ಸುಂದೋಪಸುಂದರೂ ಕ್ರಿಯೆಯಿಂದಲೇ ವಧಿಸಲ್ಪಟ್ಟರು. ಉಪಾಯಯುಕ್ತ ಕ್ರಿಯೆಗಳಿಂದಲೇ ಇಂದ್ರನು ತ್ರಿದಿವವನ್ನು ಭೋಗಿಸುತ್ತಿದ್ದಾನೆ. ಕ್ರಿಯೆಗಿಂತಲೂ ಬಲವಾದುದು ಬೇರೆ ಯಾವುದೂ ಇಲ್ಲ. ದೈತ್ಯ-ದಾನವ-ರಾಕ್ಷಸರೂ ಮತ್ತು ಪಾರ್ಥಿವರೂ ಉಪಾಯಯುಕ್ತಕ್ರಿಯೆಗಳಿಂದಲೇ ಹತರಾದರು. ಆದುದರಿಂದ ನೀನೂ ಕೂಡ ಅಂತಹ ಕ್ರಿಯೆಗಳನ್ನು ಬಳಸು!”

ವಾಸುದೇವನು ಹೀಗೆ ಹೇಳಲು ಯುಧಿಷ್ಠಿರನು ನಗುತ್ತಾ ಜಲಸ್ಥನಾಗಿದ್ದ ಧೃತರಾಷ್ಟ್ರನ ಮಹಾಬಲ ಪುತ್ರನನ್ನು ಉದ್ದೇಶಿಸಿ ಹೇಳಿದನು:

“ಸುಯೋಧನ! ಎಲ್ಲ ಕ್ಷತ್ರಿಯರನ್ನೂ, ನಿನ್ನ ಕುಲವನ್ನೂ ನಾಶಗೊಳಿಸಿ ಈಗ ಯಾವ ಕಾರಣಕ್ಕಾಗಿ ನೀರಿನಲ್ಲಿ ಈ ಅನುಷ್ಠಾನವನ್ನು ಪ್ರಾರಂಭಿಸಿರುವೆ? ಜಲಾಶಯವನ್ನು ಪ್ರವೇಶಿಸಿ ನಿನ್ನ ಜೀವವನ್ನುಳಿಸಿಕೊಳ್ಳಲು ಇಚ್ಛಿಸಿರುವೆಯಾ? ಮೇಲೇಳು! ನಮ್ಮೊಡನೆ ಯುದ್ಧಮಾಡು! ಭೀತನಾಗಿ ಜಲವನ್ನು ಸ್ತಂಭನಗೊಳಿಸಿ ಕುಳಿತುಕೊಂಡಿರುವೆಯಲ್ಲಾ! ನಿನ್ನ ಆ ದರ್ಪ-ಅಭಿಮಾನಗಳು ಎಲ್ಲಿ ಹೋದವು? ಸಭೆಗಳಲ್ಲಿ

ಜನರೆಲ್ಲರೂ ನಿನ್ನನ್ನು ಶೂರನೆಂದು ಹೊಗಳುತ್ತಿದ್ದರು. ನೀರಿನಲ್ಲಿ ಮಲಗಿ ನಿನ್ನ ಆ ಶೌರ್ಯವು ವ್ಯರ್ಥವಾಯಿತೆಂದೇ ಭಾವಿಸುತ್ತೇನೆ. ಎದ್ದೇಳು! ಯುದ್ಧಮಾಡು! ಕ್ಷತ್ರಿಯನಾಗಿರುವೆ. ಕುಲೋದ್ಭವನಾಗಿರುವೆ! ವಿಶೇಷವಾಗಿ ಕೌರವೇಯನಾಗಿರುವೆ. ಉತ್ತಮ ಕುಲದಲ್ಲಿ ಜನಿಸಿರುವುದನ್ನು ಸ್ಮರಿಸಿಕೋ! ಕೌರವ ವಂಶದಲ್ಲಿ ಜನ್ಮತಾಳಿದುದಕ್ಕೆ ಪ್ರಶಂಸೆಮಾಡಿಸಿ ಕೊಳ್ಳುತ್ತಿದ್ದ ನೀನು ಹೇಗೆ ತಾನೇ ಈಗ ಯುದ್ಧಕ್ಕೆ ಹೆದರಿ ನೀರನ್ನು ಪ್ರವೇಶಿಸಿ ಕುಳಿತುಕೊಂಡಿರುವೆ? ಯುದ್ಧಮಾಡದಿರುವುದೂ, ಯುದ್ಧದಲ್ಲಿ ನಿಲ್ಲದೇ ಓಡಿಹೋಗುವುದೂ ಸನಾತನ ಧರ್ಮವಲ್ಲ. ರಣದಿಂದ ಪಲಾಯನಗೈಯುವ ಅನಾರ್ಯ ಕಾರ್ಯವು ಸ್ವರ್ಗವನ್ನು ನೀಡಲಾರದು! ಯುದ್ಧವು ಇನ್ನೂ ಮುಗಿಯುವುದರೊಳಗೇ ನೀನು ಹೇಗೆ ತಾನೇ ಜೀವಿಸಲು ಇಚ್ಛಿಸುವೆ? ಪುತ್ರರು-ಸಹೋದರರು-ಪಿತೃಗಳು- ಹಾಗೆಯೇ ಸಂಬಂಧಿಗಳು-ಸ್ನೇಹಿತರು-ಸೋದರ ಮಾವಂದಿರು ಮತ್ತು ಬಾಂಧವರು ಹೀಗೆ ವಧಿಸಲ್ಪಟ್ಟು ಕೆಳಗುರುಳಿರುವಾಗ ನೀನು ಹೇಗೆ ತಾನೇ ಸರೋವರದಲ್ಲಿ ಅಡಗಿಕೊಂಡಿರುವೆ? ಶೂರನೆಂದು ತಿಳಿದುಕೊಂಡಿರುವ ನೀನು ಶೂರನಲ್ಲ! ದುರ್ಬುದ್ಧೇ! ನಾನು ಶೂರನೆಂದು ಸರ್ವಲೋಕಕ್ಕೆ

ಸುಳ್ಳುಹೇಳಿಕೊಂಡು ಬಂದಿರುವೆ. ಶೂರರು ಎಂದೂ ಶತ್ರುಗಳನ್ನು ನೋಡಿ ಪಲಾಯನಮಾಡುವುದಿಲ್ಲ.

ನಿಜವಾಗಿ ಹೇಳು. ನೀನು ಏಕೆ ಯುದ್ಧವನ್ನು ತ್ಯಜಿಸಿ ಇಲ್ಲಿಗೆ ಬಂದಿರುವೆ? ನಿನ್ನಲ್ಲಿರುವ ಭಯವನ್ನು ತೊರೆದು ಎದ್ದೇಳು! ಯುದ್ಧಮಾಡು! ಸುಯೋಧನ! ಸರ್ವ ಸೈನ್ಯವನ್ನೂ, ಸೋದರರರನ್ನೂ ಸಾಯಗೊಟ್ಟು ಧರ್ಮಾಚರಣೆಯನ್ನು ಬಯಸಿ ಜೀವವನ್ನುಳಿಸಿಕೊಳ್ಳುವ ಬುದ್ಧಿ-ಕಾರ್ಯಗಳನ್ನೆಸಗುವುದು ಕ್ಷತ್ರಧರ್ಮವನ್ನುಸರಿಸಿದ ನಿನ್ನಂಥವನಿಗೆ ಸರಿಯಲ್ಲ! ಕರ್ಣ ಮತ್ತು ಶಕುನಿಯರನ್ನು ಆಶ್ರಯಿಸಿ ಮೋಹಪರವಶನಾಗಿ ನಾನೂ ಕೂಡ ಮರಣಧರ್ಮವಿರುವವನು ಎಂದು ನೀನು ತಿಳಿದುಕೊಂಡಿರಲೇ ಇಲ್ಲ. ಮಹಾಪಾಪವನ್ನು ಮಾಡಿರುವ ನೀನು ಪ್ರತಿಯಾಗಿ ಯುದ್ಧಮಾಡು! ಮೋಹದಿಂದ ಪಲಾಯನಮಾಡುವುದನ್ನು ನಿನ್ನಂಥವನು ಹೇಗೆ ತಾನೇ ಬಯಸುತ್ತಾನೆ? ನಿನ್ನ ಆ ಪೌರುಷವೆಲ್ಲಿ ಹೋಯಿತು? ಮಾನವೆಲ್ಲಿ ಹೋಯಿತು? ಆ ನಿನ್ನ ವಿಕ್ರಾಂತವೆಲ್ಲಿ ಹೋಯಿತು? ನಿನ್ನ ಆ ಮಹಾ ಗರ್ಜನೆಯು ಎಲ್ಲಿ ಅಡಗಿತು? ನಿನ್ನ ಅಸ್ತ್ರವಿದ್ಯೆಯು ಎಲ್ಲಿ ಹೋಯಿತು? ಜಲಾಶಯದಲ್ಲೇಕೆ ಮಲಗಿರುವೆ? ಮೇಲೆದ್ದು ಕ್ಷತ್ರಧರ್ಮದಂತೆ ಯುದ್ಧಮಾಡು!

ನೀನು ನಮ್ಮನ್ನು ಪರಾಜಯಗೊಳಿಸಿ ಈ ಪೃಥ್ವಿಯನ್ನು ಆಳು. ಅಥವಾ ನಮ್ಮಿಂದ ಹತನಾಗಿ ನೆಲದ ಮೇಲೆ ಮಲಗು! ಇದೇ ಮಹಾತ್ಮ ಧಾತ್ರನು ಸೃಷ್ಟಿಸಿರುವ ನಿನ್ನ ಪ್ರಥಮ ಧರ್ಮ! ಅದನ್ನು ಹಾಗೆಯೇ ಮಾಡಿ ರಾಜನಾಗು!"

ಆಗ ಸರೋವರದ ಒಳಗಿನಿಂದಲೇ ದುರ್ಯೋಧನನು ಹೇಳಿದನು:

"ಮಹಾರಾಜ! ಪ್ರಾಣಿಗಳನ್ನು ಭಯವು ಆವರಿಸುತ್ತದೆ ಎನ್ನುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ನಾನು ಮಾತ್ರ ಪ್ರಾಣಭಯದಿಂದ ಭೀತನಾಗಿ ಇಲ್ಲಿಗೆ ಬಂದಿಲ್ಲ! ರಥಹೀನನಾಗಿದ್ದೆ. ಬತ್ತಳಿಕೆಯೂ ಇರಲಿಲ್ಲ. ಪಾರ್ಷ್ಣಿಸಾರಥಿಗಳು ಹತರಾಗಿದ್ದರು. ಸೇನೆಗಳಿಲ್ಲದೇ ಏಕಾಂಗಿಯಾಗಿದ್ದೆನು. ಆಗ ಸ್ವಲ್ಪಹೊತ್ತು ವಿಶ್ರಾಂತಿ ಪಡೆಯಲು ರಣದಿಂದ ಇಲ್ಲಿಗೆ ಬಂದಿದ್ದೇನೆ. ಪ್ರಾಣಕ್ಕಾಗಿಯಾಗಲೀ, ಭಯದಿಂದಾಗಲೀ, ವಿಷಾದದಿಂದಾಗಲೀ ನಾನು ಈ ನೀರನ್ನು ಪ್ರವೇಶಿಸಿಲ್ಲ! ಆಯಾಸಪರಿಹಾರಮಾಡಿಕೊಳ್ಳಲು ಇಲ್ಲಿ ಕುಳಿತಿದ್ದೇನೆ. ನೀನು ಕೂಡ ಬಳಲಿರುವೆ ಮತ್ತು ನಿನ್ನ ಅನುಯಾಯಿಗಳೂ ಬಳಲಿದ್ದಾರೆ. ನಾಳೆ ನಾನು ಮೇಲೆ ಎದ್ದು ರಣದಲ್ಲಿ ನಿಮ್ಮೆಲ್ಲರನ್ನೂ ಎದುರಿಸಿ ಯುದ್ಧಮಾಡುತ್ತೇನೆ."

ಯುಧಿಷ್ಠಿರನು ಹೇಳಿದನು:

“ನಾವೆಲ್ಲಾ ವಿಶ್ರಮಿಸಿಕೊಂಡಿದ್ದೇವೆ. ನಿನ್ನನ್ನು ನಾವು ಬಹಳ ಸಮಯದಿಂದ ಹುಡುಕುತ್ತಿದ್ದೇವೆ. ಆದುದರಿಂದ ಸುಯೋಧನ! ಈಗಲೇ ಮೇಲೆದ್ದು ಯುದ್ಧಮಾಡು. ಸಮರದಲ್ಲಿ ಪಾರ್ಥರನ್ನು ಸಂಹರಿಸಿ ಸಮೃದ್ಧ ರಾಜ್ಯವನ್ನು ಹೊಂದು. ಅಥವಾ ರಣದಲ್ಲಿ ನಮ್ಮಿಂದ ವಧಿಸಲ್ಪಟ್ಟು ವೀರಲೋಕವನ್ನು ಪಡೆ!”

ದುರ್ಯೋಧನನು ಹೇಳಿದನು:

“ಜನೇಶ್ವರ! ಯಾರಿಗಾಗಿ ರಾಜ್ಯವನ್ನು ಇಚ್ಛಿಸಿದ್ದೆನೋ ಆ ಕುರುಭ್ರಾತರರೆಲ್ಲರೂ ಹತರಾಗಿದ್ದಾರೆ! ಸಂಪತ್ತನ್ನು ಕಳೆದುಕೊಂಡು ಮತ್ತು ಕ್ಷತ್ರಿಯ ಪುಂಗವರು ಹತರಾಗಿ ವಿಧವೆಯಂತೆ ಹೀನವಾಗಿರುವ ಈ ಪೃಥ್ವಿಯನ್ನು ಭೋಗಿಸುವಲ್ಲಿ ನನಗೆ ಉತ್ಸಾಹವಿಲ್ಲ! ಆದರೆ ಇಂದು ಕೂಡ ಪಾಂಚಾಲ-ಪಾಂಡವರ ಉತ್ಸಾಹವನ್ನು ಭಗ್ನಗೊಳಿಸಿ ನಿನ್ನನ್ನು ಜಯಿಸುವ ಆಸೆಯನ್ನಿಟ್ಟುಕೊಂಡಿದ್ದೇನೆ! ಆದರೆ ದ್ರೋಣ, ಕರ್ಣ ಮತ್ತು ಪಿತಾಮಹರು ಹತರಾಗಿ ಮಲಗಿರುವ ನಂತರ ಈ ಯುದ್ಧದಿಂದ ಏನಾದರೂ ಪ್ರಯೋಜನವಾಗುತ್ತದೆಯೆಂದು

ನನಗನ್ನಿಸುವುದಿಲ್ಲ. ಕೇವಲ ಈ ಪೃಥ್ವಿಯು ಮಾತ್ರ ನಿನ್ನದಾಗುತ್ತದೆ. ಆದರೆ ಯಾವುದೂ ಮತ್ತು ಯಾರೂ ಇಲ್ಲದ ರಾಜ್ಯವನ್ನು ಯಾವ ರಾಜನು ತಾನೇ ಆಳಲು ಬಯಸುತ್ತಾನೆ? ಅಂತಹ ಸುಹೃದರನ್ನೂ, ಪುತ್ರರನ್ನೂ, ಸಹೋದರರರನ್ನೂ, ಪಿತೃಗಳನ್ನೂ ವಧೆಗೀಡುಮಾಡಿ, ನಿನ್ನಿಂದ ರಾಜ್ಯವೂ ಅಪಹೃತವಾದನಂತರ ನನ್ನಂಥವನು ಹೇಗೆ ತಾನೇ ಜೀವಿಸಿರುವನು? ನಾನು ಮೃಗಚರ್ಮವನ್ನು ಹೊದ್ದು ವನಕ್ಕೆ ಹೊರಟುಹೋಗುತ್ತೇನೆ. ನನ್ನ ಕಡೆಯವರನ್ನು ಕಳೆದುಕೊಂಡ ನನಗೆ ರಾಜ್ಯದ ಮೇಲಿನ ಪ್ರೀತಿಯೇ ಇಲ್ಲವಾಗಿದೆ. ಅನೇಕ ರಾಜಬಾಂಧವರನ್ನು ಕಳೆದುಕೊಂಡ, ಹತಾಶ್ವ-ಹತಕುಂಜರವಾಗಿರುವ ಈ ಪೃಥ್ವಿಯನ್ನು ಆತಂಕವಿಲ್ಲದೇ ಭೋಗಿಸು! ಮೃಗಚರ್ಮವನ್ನು ಧರಿಸಿ ವನಕ್ಕೇ ಹೋಗುತ್ತೇನೆ. ಸ್ವಜನರಿಂದ ವಿಹೀನರಾಗಿರುವ ನನಗೆ ಇಂದು ಜೀವಿಸಿರುವುದರಲ್ಲಿ ಆಸಕ್ತಿಯೇ ಇಲ್ಲವಾಗಿದೆ. ಹೋಗು! ಈಶ್ವರರನ್ನು ಕಳೆದುಕೊಂಡಿರುವ, ಯೋಧರು ಹತರಾಗಿರುವ, ಸಂಪತ್ತುಗಳು ನಷ್ಟವಾಗಿರುವ, ಕ್ಷೀಣ ಕಾಂತಿಯುಳ್ಳ ಈ ಪೃಥ್ವಿಯನ್ನು ಯಥಾಸುಖವಾಗಿ ಭೋಗಿಸು!”

ಯುಧಿಷ್ಠಿರನು ಹೇಳಿದನು:

“ಅಯ್ಯಾ! ನೀರಿನಲ್ಲೇ ಕುಳಿತುಕೊಂಡು ಆರ್ತಪ್ರಲಾಪಮಾಡುತ್ತಾ ಮಾತನಾಡಬೇಡ! ಪಕ್ಷಿಯಂತೆ ಚಿಲಿಪಿಲಿಗುಡುತ್ತಿರುವ ನಿನ್ನ ಈ ಮಾತುಗಳು ನನ್ನ ಮೇಲೆ ಯಾವ ಪರಿಣಾಮವನ್ನೂ ಬೀರುತ್ತಿಲ್ಲ! ಒಂದುವೇಳೆ ನೀನು ದಾನಮಾಡಲು ಸಮರ್ಥನಾಗಿರುವೆಯಾದರೂ ನೀನು ದಾನವಾಗಿ ಕೊಡುವ ಈ ಅವನಿಯನ್ನು ಆಳಲು ನನಗೆ ಇಚ್ಛೆಯಿಲ್ಲ. ಅಧರ್ಮದಿಂದ ನೀಡುತ್ತಿರುವ ಈ ಮಹಿಯನ್ನು ನಾನು ಸ್ವೀಕರಿಸುವುದಿಲ್ಲ. ಕ್ಷತ್ರಿಯನು ದಾನವನ್ನು ಸ್ವೀಕರಿಸಬಹುದೆಂದು ಯಾವ ಸ್ಮೃತಿಯಲ್ಲಿಯೂ ಹೇಳಿಲ್ಲ. ನೀನು ದಾನವನ್ನಾಗಿ ನೀಡುವ ಈ ಅಖಿಲ ಪೃಥ್ವಿಯನ್ನೂ ನಾನು ಬಯಸುವುದಿಲ್ಲ. ಆದರೆ ಯುದ್ಧದಲ್ಲಿ ನಿನ್ನನ್ನು ಸೋಲಿಸಿ ಈ ವಸುಧೆಯನ್ನು ಭೋಗಿಸುತ್ತೇನೆ. ಈಶ್ವರನಿಲ್ಲದಿರುವ ಈ ಪೃಥ್ವಿಯನ್ನು ನೀನು ಹೇಗೆ ದಾನವಾಗಿ ಕೊಡಲಿಚ್ಛಿಸುವೆ? ನಿನ್ನದಲ್ಲದಾಗಿರುವ ಈ ಭೂಮಿಯನ್ನು ನೀನು ಹೇಗೆ ದಾನವಾಗಿ ಕೊಡಬಲ್ಲೆ? ಕುಲದಲ್ಲಿ ಶಾಂತಿಯನ್ನಿರಿಸಲೋಸುಗ ಧರ್ಮದಿಂದ ಮಹಾಬಲ ವಾರ್ಷ್ಣೇಯನು ಮೊದಲು ಬಂದು ಕೇಳಿದಾಗ ನೀನೇನು ಪ್ರತ್ಯುತ್ತರವನ್ನಿತ್ತಿದ್ದೆ? ಈಗ ನೀನು ದಾನವಾಗಿ ಕೊಡುತ್ತೇನೆ ಎಂದು ಹೇಳುತ್ತಿರುವೆಯಲ್ಲ!

ನಿನಗೇನಾದರೂ ಚಿತ್ತಭ್ರಮೆಯುಂಟಾಗಿದೆಯೇ? ಶತ್ರುಗಳ ಆಕ್ರಮಣಕ್ಕೊಳಗಾಗಿರುವ ರಾಜ್ಯವನ್ನು ಯಾವ ರಾಜನು ತಾನೇ ದಾನವಾಗಿ ಕೊಡಲು ಬಯಸುತ್ತಾನೆ? ಇಂದು ನೀನು ಭೂಮಿಯನ್ನು ದಾನವನ್ನಾಗಿಕೊಡಲು ಈಶನೂ ಆಗಿಲ್ಲ ಅಥವಾ ಬಲವಾಗಿ ಕಸಿದುಕೊಳ್ಳಲೂ ಸಮರ್ಥನಾಗಿಲ್ಲ! ಹೀಗಿರುವಾಗ ಹೇಗೆ ತಾನೇ ದಾನವನ್ನು ಕೊಡಲು ಬಯಸುತ್ತಿರುವೆ? "ನನ್ನನ್ನು ಸಂಗ್ರಾಮದಲ್ಲಿ ಸೋಲಿಸಿಯೇ ನೀನು ಈ ವಸುಂಧರೆಯನ್ನು ಪಾಲಿಸು! ಸೂಜಿಯ ಮೊನೆಯಷ್ಟು ಭೂಮಿಯನ್ನೂ ಕೊಡುವುದಿಲ್ಲ" ಎಂದು ಹೇಳಿ ನೀನು ನನಗೆ ಅಷ್ಟು ಭೂಮಿಯನ್ನೂ ಕೊಡಲು ಇಷ್ಟಪಟ್ಟಿರಲಿಲ್ಲ! ಹಾಗಿರುವಾಗ ಈಗ ಹೇಗೆ ಈ ಪೃಥ್ವಿಯನ್ನು ನನಗೆ ಕೊಡುತ್ತಿರುವೆ? ಹಿಂದೆ ಸೂಜಿಯ ಮೊನೆಯಷ್ಟು ಭೂಮಿಯನ್ನು ಬಿಟ್ಟುಕೊಟ್ಟಿರದವನು ಈಗ ಇಡೀ ಭೂಮಿಯನ್ನೇ ಹೇಗೆ ತ್ಯಜಿಸುತ್ತಿದ್ದೀಯೆ? ಈ ರೀತಿ ಐಶ್ವರ್ಯವನ್ನು ಒಟ್ಟುಗೂಡಿಸಿಕೊಂಡು ಈ ಭೂಮಿಯನ್ನಾಳಿದ ಯಾವ ಮೂಢನು ತಾನೇ ವಸುಂಧರೆಯನ್ನು ಶತ್ರುವಿಗೆ ಕೊಡಲು ಬಯಸುತ್ತಾನೆ? ನೀನಾದರೋ ಕೇವಲ ಮೂರ್ಖತನದಿಂದ

ವಿಮೂಢನಾಗಿರುವೆ! ಪೃಥ್ವಿಯನ್ನು ಕೊಡಲು ಬಯಸಿದರೂ ಇಂದು ಜೀವವನ್ನು ತೊರೆಯಬೇಕಾಗುತ್ತದೆ ಎನ್ನುವುದನ್ನು ನೀನು ಅರಿತಿಲ್ಲ! ನಮ್ಮನ್ನು ನೀನು ಪರಾಜಯಗೊಳಿಸಿ ಈ ಪೃಥ್ವಿಯನ್ನು ಆಳು. ಅಥವಾ ನಮ್ಮಿಂದ ಹತನಾಗಿ ಉತ್ತಮ ಲೋಕಗಳಿಗೆ ತೆರಳು! ನಾನು ಮತ್ತು ನೀನು ಇಬ್ಬರೂ ಜೀವಂತವಾಗಿದ್ದರೆ ನಮ್ಮಿಬ್ಬರಲ್ಲಿ ವಿಜಯಿಯಾರೆಂದು ಸರ್ವಭೂತಗಳಲ್ಲಿಯೂ ಸಂಶಯವುಂಟಾಗುತ್ತದೆ. ನಿನ್ನ ಜೀವನವು ನನ್ನ ಕೈಯಲ್ಲಿದೆ! ನಾನು ಬಯಸಿದರೆ ಮಾತ್ರ ನೀನು ಜೀವಂತನಾಗಿರಬಲ್ಲೆ! ನಿನ್ನ ಇಚ್ಛೆಯಿಂದ ಜೀವಿಸಲು ನೀನು ಶಕ್ಯನಿಲ್ಲ! ವಿಶೇಷವಾಗಿ ನೀನು ನಮ್ಮನ್ನು ಮೋಸದಿಂದ ಸುಡಲು ಪ್ರಯತ್ನಿಸಿದೆ. ಹಾವಿನ ವಿಷವನ್ನುಣ್ಣಿಸಿದೆ. ನೀರಿಗೆ ಕೂಡ ತಳ್ಳಿದೆ! ಪಾಪಿಯೇ! ಈ ಎಲ್ಲ ಕಾರಣಗಳಿಂದ ನೀನು ಜೀವದಿಂದುಳಿಯಲು ಸಾಧ್ಯವಿಲ್ಲ. ಮೇಲೇಳು! ಎದ್ದೇಳು! ಯುದ್ಧಮಾಡು! ಅದರಿಂದಲೇ ನಿನಗೆ ಶ್ರೇಯಸ್ಸುಂಟಾಗುತ್ತದೆ!”

ಜಯಯುಕ್ತ ಆ ವೀರರು ಅಲ್ಲಿ ಪುನಃ ಪುನಃ ಈ ರೀತಿಯ ಮಾತುಗಳನ್ನು ಹೇಳುತ್ತಲೇ ಇದ್ದರು.

ನೀರಿನಲ್ಲಿದ್ದ ದುರ್ಯೋಧನನನ್ನು ಯುಧಿಷ್ಠಿರನು ಬಹಳವಾಗಿ ಬೆದರಿಸಿದನು. ಕಟುಕು ಮಾತುಗಳನ್ನು ಕೇಳಿ ವಿಷಮ ಪರಿಸ್ಥಿತಿಯಲ್ಲಿ ನೀರಿನಲ್ಲಿದ್ದ ಜನಾಧಿಪನು ಪುನಃ ಪುನಃ ದೀರ್ಘ ಬಿಸಿಯುಸಿರನ್ನು ಬಿಡುತ್ತಿದ್ದನು. ನೀರಿನಲ್ಲಿ ಹುದುಗಿದ್ದ ರಾಜನು ಪುನಃ ಪುನಃ ಕೈಗಳನ್ನು ಕೊಡವುತ್ತಾ ಯುದ್ಧದ ಮನಸ್ಸು ಮಾಡಿ ರಾಜನಿಗೆ ಹೇಳಿದನು:

> “ಪಾರ್ಥರೇ! ನೀವೆಲ್ಲರೂ ಸುಹೃದಯರೊಂದಿಗಿದ್ದೀರಿ. ರಥವಾಹನಗಳೊಂದಿಗಿದ್ದೀರಿ. ನಾನಾದರೋ ಏಕಾಂಗಿಯಾಗಿದ್ದೇನೆ. ವಿರಥನಾಗಿದ್ದೇನೆ. ವಾಹನಗಳನ್ನು ಕಳೆದುಕೊಂಡಿದ್ದೇನೆ. ಪದಾತಿಯಾಗಿರುವ, ಶಸ್ತ್ರರಹಿತನಾಗಿರುವ, ಏಕಾಂಗಿಯಾಗಿರುವ ನಾನು ರಥಾರೂಢರಾಗಿರುವ, ಅನೇಕರಿಂದ ಸುತ್ತುವರೆಯಲ್ಪಟ್ಟಿರುವ ನಿಮ್ಮೊಡನೆ ಹೇಗೆ ಯುದ್ಧಮಾಡಲಿ? ಯುಧಿಷ್ಠಿರ! ನೀವು ಒಬ್ಬೊಬ್ಬರೇ ನನ್ನೊಡನೆ ಯುದ್ಧಮಾಡಿ! ಅನೇಕ ವೀರರೊಂದಿಗೆ ಒಬ್ಬನನ್ನೇ ಯುದ್ಧದಲ್ಲಿ ತೊಡಗಿಸುವುದು ನ್ಯಾಯವಲ್ಲ. ವಿಶೇಷವಾಗಿ ನಾನು ಕವಚಗಳಿಲ್ಲದವನಾಗಿದ್ದೇನೆ. ಬಹಳವಾಗಿ ಬಳಲಿದ್ದೇನೆ. ನೀರನ್ನು ಆಶ್ರಯಿಸಿ ಕುಳಿತಿದ್ದೇನೆ. ದೇಹವು ಬಹಳವಾಗಿ

ಗಾಯಗೊಂಡಿದೆ. ವಾಹನ-ಸೈನಿಕರು ಹತರಾಗಿದ್ದಾರೆ. ನನಗೆ ನಿನ್ನ ಭಯವಿಲ್ಲ. ವೃಕೋದರನ, ಫಲ್ಗುನ-ವಾಸುದೇವರ ಅಥವಾ ಧೃಷ್ಟದ್ಯುಮ್ನ-ಶಿಖಂಡಿಯರ ಭಯವೂ ನನಗಿಲ್ಲ. ನಕುಲ-ಸಹದೇವರ ಅಥವಾ ಸಾತ್ಯಕಿಯ ಅಥವಾ ನಿನ್ನ ಅನ್ಯ ಸೈನಿಕರ ಭಯವಿಲ್ಲ. ಯುದ್ಧದಲ್ಲಿ ಕ್ರುದ್ಧನಾದ ನಾನೊಬ್ಬನೇ ಅವರನ್ನು ಎದುರಿಸಬಲ್ಲೆನು. ಸತ್ಪುರುಷರ ಕೀರ್ತಿಗೆ ಧರ್ಮವೇ ಮೂಲ. ಧರ್ಮ ಮತ್ತು ಕೀರ್ತಿಯನ್ನು ಪಾಲಿಸುವಂತಹ ಈ ಮಾತುಗಳನ್ನಾಡುತ್ತಿದ್ದೇನೆ. ಸಂವತ್ಸರವು ಎಲ್ಲ ಋತುಗಳನ್ನು ಒಂದಾದ ನಂತರ ಒಂದನ್ನು ಎದುರಿಸುವಂತೆ ಮೇಲೆದ್ದು ನಾನು ಯುದ್ಧದಲ್ಲಿ ಒಬ್ಬೊಬ್ಬರಾಗಿ ನಿಮ್ಮೆಲ್ಲರನ್ನೂ ಎದುರಿಸುತ್ತೇನೆ. ಪಾಂಡವರೇ! ಸ್ಥಿರರಾಗಿರಿ! ನಿಃಶಸ್ತ್ರ ಮತ್ತು ವಿರಥನಾಗಿದ್ದರೂ ನಾನು ಇಂದು ನಿಮ್ಮೆಲ್ಲರನ್ನೂ ರಾತ್ರಿಕಳೆಯುವಾಗ ಸೂರ್ಯನು ಸರ್ವ ನಕ್ಷತ್ರಗಳನ್ನು ಹೇಗೋ ಹಾಗೆ ನನ್ನ ತೇಜಸ್ಸಿನಿಂದ ನಾಶಗೊಳಿಸುತ್ತೇನೆ. ಇಂದು ನಾನು ಯಶಸ್ವಿ ಕ್ಷತ್ರಿಯರ – ಬಾಹ್ಲೀಕ, ದ್ರೋಣ, ಭೀಷ್ಮ, ಮಹಾತ್ಮ ಕರ್ಣ, ಶೂರ ಜಯದ್ರಥ, ಭಗದತ್ತ, ಮದ್ರರಾಜ ಶಲ್ಯ, ಭೂರಿಶ್ರವ, ಸೌಬಲ ಶಕುನಿ ಮತ್ತು ಪುತ್ರರ – ಋಣಮುಕ್ತನಾಗುತ್ತೇನೆ.

ಸಹೋದರರೊಂದಿಗೆ ನಿನ್ನನ್ನು ಸಂಹರಿಸಿ ಇಂದು ನಾನು ಮಿತ್ರ-ಸುಹೃದಯ-ಬಾಂಧವರ ಋಣಮುಕ್ತನಾಗುತ್ತೇನೆ!" ಹೀಗೆ ಹೇಳಿ ದುರ್ಯೋಧನನು ಸುಮ್ಮನಾದನು.

ಆಗ ಯುಧಿಷ್ಠಿರನು ಹೇಳಿದನು:

"ಒಳ್ಳೆಯದಾಯಿತು! ಸುಯೋಧನ! ನೀನೂ ಕೂಡ ಕ್ಷತ್ರಧರ್ಮವನ್ನು ತಿಳಿದುಕೊಂಡಿರುವೆ! ಒಳ್ಳೆಯದಾಯಿತು! ನೀನು ಯುದ್ಧಕ್ಕೆ ಮನಸ್ಸು ಮಾಡಿರುವೆ! ಒಳ್ಳೆಯದಾಯಿತು! ನೀನೊಬ್ಬನೇ ನಮ್ಮೆಲ್ಲರೊಡನೆಯೂ ರಣದಲ್ಲಿ ಹೋರಾಡಲು ಬಯಸುತ್ತಿರುವೆ! ಶೂರನಾಗಿರುವೆ. ಯುದ್ಧವನ್ನು ತಿಳಿದುಕೊಂಡಿರುವೆ. ಏಕಾಂಗಿಯಾಗಿ ನಿನಗೆ ಸಮ್ಮತವಾದ ಆಯುಧವನ್ನು ತೆಗೆದುಕೊಂಡು ಒಬ್ಬನೊಂದಿಗೇ ಯುದ್ಧಮಾಡು. ನಾವು ಪ್ರೇಕ್ಷಕರಾಗಿ ನಿಂತಿರುತ್ತೇವೆ. ನಿನಗಿಷ್ಟವಾದ ಈ ಅವಕಾಶವನ್ನು ಪುನಃ ನಾನು ನೀಡುತ್ತಿದ್ದೇನೆ. ಒಬ್ಬನನ್ನು ಸಂಹರಿಸಿದರೂ ರಾಜ್ಯವು ನಿನ್ನದಾಗುವುದು. ಅಥವಾ ನೀನೇ ಹತನಾದರೆ ಸ್ವರ್ಗವನ್ನು ಹೊಂದುತ್ತೀಯೆ!"

ದುರ್ಯೋಧನನು ಹೇಳಿದನು:

“ಒಬ್ಬನೊಡನೆಯೇ ಯುದ್ಧಮಾಡಬಹುದೆಂದಾದರೆ ಆ ಒಬ್ಬನನ್ನು ಆರಿಸಿ ನನಗೆ ಕೊಡು! ನಿನ್ನ ಅನುಮತಿಯಂತೆ ಆಯುಧಗಳಲ್ಲಿ ನಾನು ಗದೆಯನ್ನು ಆರಿಸಿಕೊಂಡಿದ್ದೇನೆ. ನಿನ್ನ ಸಹೋದರರಲ್ಲಿ ನನ್ನೊಡನೆ ಹೋರಾಡಲು ಶಕ್ಯನೆಂದು ತಿಳಿದುಕೊಂಡಿರುವವನು ರಣದಲ್ಲಿ ಪದಾತಿಯಾಗಿ ಗದೆಯನ್ನು ಹಿಡಿದೇ ನನ್ನೊಡನೆ ಯುದ್ಧಮಾಡಲಿ. ವಿಚಿತ್ರ ರಥಯುದ್ಧಗಳು ಪದೇ ಪದೇ ನಡೆಯುತ್ತಲೇ ಇರುತ್ತವೆ. ಮಹತ್ತರ ಅದ್ಭುತವಾದ ಇದೊಂದು ಗದಾಯುದ್ಧವೂ ನಡೆದುಹೋಗಲಿ! ಸಾಮಾನ್ಯವಾಗಿ ಮಾನವರು ಒಂದರ ನಂತರ ಇನ್ನೊಂದು ಅಸ್ತ್ರಗಳನ್ನು ಬಳಸುತ್ತಾರೆ. ನಿನ್ನ ಅನುಮತಿಯಂತೆ ಯುದ್ಧಗಳ ಪರ್ಯಾಯವೂ ನಡೆದುಹೋಗಲಿ! ಗದೆಯಿಂದಲೇ ನಾನು ಅನುಜರೊಂದಿಗೆ ನಿನ್ನನ್ನು, ಹಾಗೆಯೇ ಪಾಂಚಾಲ-ಸೃಂಜಯರನ್ನೂ, ನಿನ್ನ ಇತರ ಸೈನಿಕರನ್ನೂ ಜಯಿಸುತ್ತೇನೆ!”

ಯುಧಿಷ್ಠಿರನು ಹೇಳಿದನು:

“ಗಾಂಧಾರೇ! ಏಳು ಎದ್ದೇಳು! ನನ್ನೊಡನೆ ಯುದ್ಧಮಾಡು. ಬಲಶಾಲಿಯಾದ ನೀನು ನಮ್ಮಲ್ಲಿನ ಒಬ್ಬ

ಯೋಧನೊಡನೆಯೇ ಗದೆಯಿಂದ ಯುದ್ಧಮಾಡು.
ಪುರುಷನಾಗು ! ಸಮಾಹಿತನಾಗಿ ಯುದ್ಧಮಾಡು !
ಒಂದುವೇಳೆ ಮನಸ್ಸಿನ ವೇಗವುಳ್ಳವನಾಗಿದ್ದರೂ ಇಂದು
ನೀನು ಜೀವಂತವಾಗಿರಲಾರೆ !”

ದುರ್ಯೋಧನನಿಗೆ ಇದನ್ನು ಸಹಿಸಿಕೊಳ್ಳಲಾಗಲಿಲ್ಲ. ನೀರಿನಲ್ಲಿದ್ದ ಅವನು ಬಿಲದಲ್ಲಿದ್ದ ಮಹಾನಾಗದಂತೆ ಭುಸುಗುಟ್ಟುತ್ತಿದ್ದನು. ಶ್ರೇಷ್ಠ ಕುದುರೆಯು ಚಾವಟಿಯನ್ನು ಹೇಗೋ ಹಾಗೆ ಪುನಃ ಪುನಃ ಚುಚ್ಚುತ್ತಿದ್ದ ಅವನ ಆ ಮಾತೆಂಬ ಚಾವಟಿಯೇಟುಗಳನ್ನು ಅವನು ಸಹಿಸಿಕೊಳ್ಳಲಾರದೇ ಹೋದನು. ಆ ವೀರ್ಯವಾನನು ಲೋಹಮಯ-ಬಹುಭಾರ-ಕಾಂಚನಾಂಗದಗಳಿಂದ ವಿಭೂಷಿತವಾಗಿದ್ದ ಗದೆಯನ್ನು ಹಿಡಿದು ನಾಗೇಂದ್ರನಂತೆ ಭುಸುಗುಟ್ಟುತ್ತಾ, ನೀರನ್ನು ಅಲ್ಲೋಲಕಲ್ಲೋಲಗೊಳಿಸುತ್ತಾ ವೇಗದಿಂದ ಸರೋವರದ ತಳದಿಂದ ಮೇಲೆದ್ದನು. ಸ್ತಂಭಿತ ನೀರನ್ನು ಒಡೆದು ಉಕ್ಕಿನ ಗದೆಯನ್ನು ಹೆಗಲಮೇಲಿರಿಸಿಕೊಂಡು ಅವನು ಸೂರ್ಯನಂತೆ ಸುಡುತ್ತಾ ಸರೋವರದಿಂದ ಮೇಲೆ ಬಂದನು. ಆಗ ಮಹಾಬಲ ಧಾರ್ತರಾಷ್ಟ್ರನು ಬಂಗಾರದಿಂದ ಪರಿಷ್ಕೃತಗೊಂಡ ಆ ಲೋಹಮಯ ಭಾರ ಗದೆಯನ್ನು ಕೈಗೆತ್ತಿಕೊಂಡನು. ಶಿಖರವುಳ್ಳ ಪರ್ವತದಂತೆ ಗದೆಯನ್ನು ಹಿಡಿದಿದ್ದ



ಅವನು ಪ್ರಜೆಗಳ ಮೇಲೆ ಸಂಕ್ರುದ್ಧನಾಗಿ ನಿಂತಿದ್ದ ಶೂಲಪಾಣಿಯಂತೆ ಕಂಡನು. ಗದೆಯನ್ನು ಹಿಡಿದಿದ್ದ ಭಾರತನು ತಾಪವನ್ನುಂಟುಮಾಡುವ ಭಾಸ್ಕರನಂತೆ ಕಾಣುತ್ತಿದ್ದನು. ಹಾಗೆ ಗದೆಯನ್ನು ಹಿಡಿದು ಮೇಲೆ ಬರುತ್ತಿರುವ ಆ ಮಹಾಬಾಹು ಅರಿಂದಮನನ್ನು ನೋಡಿ ಸರ್ವಭೂತಗಳೂ ದಂಡವನ್ನು ಹಿಡಿದ ಅಂತಕನೇ ಮೇಲೇರಿ ಬರುತ್ತಿದ್ದಾನೋ ಎಂದು ಅಭಿಪ್ರಾಯಪಟ್ಟರು. ಸರ್ವ ಪಾಂಚಾಲರಿಗೆ ಅವನು ವಜ್ರವನ್ನು ಹಿಡಿದ ಶಕ್ರನಂತೆ ಮತ್ತು ಶೂಲವನ್ನು ಹಿಡಿದ ಹರನಂತೆ ಕಂಡನು. ಮೇಲೆದ್ದುಬರುತ್ತಿದ್ದ ಅವನನ್ನು ನೋಡಿ ಎಲ್ಲೆಡೆಯೂ ಹರ್ಷವುಂಟಾಯಿತು. ಪಾಂಚಾಲ-ಪಾಂಡವರು ಅನ್ಯೋನ್ಯರ ಅಂಗೈಗಳಿಗೆ ಹೊಡೆದು ಚಪ್ಪಾಳೆತಟ್ಟಿದರು.

ಅದು ತನಗೆ ಅಪಹಾಸ್ಯವೆಂದು ತಿಳಿದ ದುರ್ಯೋಧನನು ಸಿಟ್ಟಿನಿಂದ ಕಣ್ಣುಗಳನ್ನು ಮೇಲೆಮಾಡಿ ಸುಟ್ಟುಬಿಡುವನೋ ಎಂಬಂತೆ ಪಾಂಡವರನ್ನು ನೋಡಿದನು. ಹುಬ್ಬನ್ನು ಗಂಟಿಕ್ಕಿ ಅವುಡುಗಚ್ಚುತ್ತಾ ಅವನು ಕೇಶವಸಹಿತರಾದ ಪಾಂಡವರಿಗೆ ಹೇಳಿದನು:

> “ಪಾಂಡವರೇ! ನೀವು ಮಾಡುವ ಈ ಅಪಹಾಸ್ಯಕ್ಕೆ ಪ್ರತೀಕಾರವನ್ನು ಇಂದೇ ಪಡೆಯುವಿರಿ! ಸದ್ಯದಲ್ಲಿಯೇ ನೀವು ಪಾಂಚಾಲರೊಂದಿಗೆ ಹತರಾಗಿ ಯಮಕ್ಷಯಕ್ಕೆ ಹೋಗುವಿರಿ!”

ರಕ್ತದಿಂದ ತುಂಬಿಕೊಂಡಿದ್ದ ದುರ್ಯೋಧನನು ನೀರಿನಿಂದ ಮೇಲೆದ್ದು ಗದಾಪಾಣಿಯಾಗಿ ನಿಂತನು. ರಕ್ತಮಿಶ್ರಿತ ನೀರಿನ್ನು ಸುರಿಸುತ್ತಿದ್ದ ಅವನ ಶರೀರವು ಲೋಹಮಯ ನದಿಯನ್ನು ಸುರಿಸುತ್ತಿದ್ದ ಪರ್ವತದಂತೆ ತೋರುತ್ತಿತ್ತು. ಅಲ್ಲಿ ಮೇಲೆದ್ದು ನಿಂತಿದ್ದ ಅವನು ಕ್ರುದ್ಧ ವೈವಸ್ವತನಂತೆ ಮತ್ತು ಶೂಲಪಾಣಿ ರುದ್ರನಂತೆ ಪಾಂಡವರಿಗೆ ತೋರಿದನು. ಗೂಳಿಯಂತೆ ಹರ್ಷದಿಂದ ಮೇಘಸ್ವರದಲ್ಲಿ ಕೂಗುತ್ತಾ ಆ ವೀರ್ಯವಾನನು ಗದೆಯಿಂದ ಪಾರ್ಥರನ್ನು ಯುದ್ಧಕ್ಕೆ ಆಹ್ವಾನಿಸಿದನು.

ದುರ್ಯೋಧನನು ಹೇಳಿದನು:

> “ಯುಧಿಷ್ಠಿರ! ನೀವು ಒಬ್ಬೊಬ್ಬರಾಗಿಯೇ ನನ್ನೊಡನೆ ಯುದ್ಧಮಾಡಿರಿ! ವೀರ! ಯುದ್ಧದಲ್ಲಿ ಅನೇಕರು ಒಬ್ಬನೊಡನೆ, ಅದರಲ್ಲೂ ವಿಶೇಷವಾಗಿ, ಕವಚವನ್ನು ಬಿಚ್ಚಿಟ್ಟಿದ್ದ, ಬಳಲಿರುವ, ನೀರಿನಿಂದ ಮೇಲೆದ್ದುಬಂದಿರುವ, ದೇಹದಲ್ಲಿ ತುಂಬಾಗಾಯಗೊಂಡಿರುವ, ವಾಹನ-ಸೈನಿಕರನ್ನು ಕಳೆದುಕೊಂಡಿರುವವನೊಡನೆ, ಯುದ್ಧಮಾಡುವುದು ನ್ಯಾಯವಲ್ಲ!”

ಯುಧಿಷ್ಠಿರನು ಹೇಳಿದನು:

“ಸುಯೋಧನ! ಯುದ್ಧದಲ್ಲಿ ಅಭಿಮನ್ಯುವನ್ನು ಅನೇಕ ಮಹಾರಥರು ಕೊಲ್ಲುವಾಗ ಈ ಪ್ರಜ್ಞೆಯು ನಿನಗೆ ಏಕೆ ಇರಲಿಲ್ಲ? ವೀರ! ಕವಚವನ್ನು ಧರಿಸು! ತಲೆಗೂದಲನ್ನು ಕಟ್ಟಿಕೋ! ಇನ್ನ್ಯಾವುದಾದರೂ ನಿನ್ನಲ್ಲಿ ಇಲ್ಲದಿದ್ದರೆ ಅದನ್ನೂ ನೀನು ಪಡೆದುಕೊಳ್ಳಬಹುದು. ನಾನು ಪುನಃ ನಿನಗೆ ನಿನಗಿಷ್ಟವಾದುದೊಂದನ್ನು ಕೊಡುತ್ತಿದ್ದೇನೆ. ಐವರು ಪಾಂಡವರಲ್ಲಿ ಯಾರೊಡನೆ ಯುದ್ಧಮಾಡಲು ಇಚ್ಛಿಸುವೆಯೋ ಅವನನ್ನು ಸಂಹರಿಸಿ ರಾಜನಾಗು ಅಥವಾ ಹತನಾಗಿ ಸ್ವರ್ಗವನ್ನು ಪಡೆ! ನಿನ್ನನ್ನು ಜೀವಂತ ಬಿಡುವುದರ ಹೊರತಾಗಿ ಯುದ್ಧದಲ್ಲಿ ನಿನಗೆ ಪ್ರಿಯವಾದ ಬೇರೆ ಏನನ್ನು ಮಾಡಬಲ್ಲೆವು?”

ಆಗ ದುರ್ಯೋಧನನು ಕಾಂಚನ ಕವಚ ಮತ್ತು ಕಾಂಚನಪರಿಷ್ಕೃತ ವಿಚಿತ್ರ ಶಿರಸ್ತ್ರಾಣವನ್ನು ಧರಿಸಿದನು. ಶಿರಸ್ತ್ರಾಣವನ್ನು ಕಟ್ಟಿದ, ಶುಭಕಾಂಚನ ಕವಚವನ್ನು ಧರಿಸಿದ ಅವನು ಕಾಂಚನಪರ್ವತದಂತೆ ರಾರಾಜಿಸಿದನು. ಸಂಗ್ರಾಮಮೂರ್ಧನಿಯಲ್ಲಿ ಹಾಗೆ ಗದೆಯನ್ನು ಹಿಡಿದು ಸನ್ನದ್ಧನಾಗಿರುವ ದುರ್ಯೋಧನನು ಪಾಂಡವರೆಲ್ಲರಿಗೆ ಹೇಳಿದನು:

“ಭ್ರಾತೃಗಳಾದ ನಿಮ್ಮಲ್ಲಿ ಒಬ್ಬನು ನನ್ನೊಡನೆ ಗದಾಯುದ್ಧಮಾಡಲಿ! ನಾನಾದರೋ ಸಹದೇವನೊಡನೆ ಅಥವಾ ಭೀಮನೊಡನೆ ಅಥವಾ ನಕುಲನೊಂದಿಗೆ ಅಥವಾ ಫಲ್ಗುನನೊಂದಿಗೆ ಅಥವಾ ನಿನ್ನೊಡನೆ ಯುದ್ಧಮಾಡಬಲ್ಲೆ. ರಣರಂಗದಲ್ಲಿ ಯುದ್ಧಮಾಡಿ ನಾನು ವಿಜಯವನ್ನು ಪಡೆಯುತ್ತೇನೆ. ಕಾಂಚನಪಟ್ಟಿಯಿರುವ ಈ ಗದೆಯಿಂದ ನಾನು ಇಂದು ನಮ್ಮ ಈ ಸುದುರ್ಗಮ ವೈರದ ಅಂತ್ಯವನ್ನು ಕಾಣುತ್ತೇನೆ. ಗದಾಯುದ್ಧದಲ್ಲಿ ನನ್ನ ಸಮಾನರು ಯಾರೂ ಇಲ್ಲವೆಂದು ನಾನು ಯೋಚಿಸುತ್ತಾ ಬಂದಿದ್ದೇನೆ. ನನ್ನನ್ನು ಎದುರಿಸುವ ಎಲ್ಲರನ್ನೂ ಗದೆಯಿಂದ ಸಂಹರಿಸುತ್ತೇನೆ. ನನ್ನೊಡನೆ ಇಂದು ಯುದ್ಧಮಾಡುವವನು ಗದೆಯನ್ನೆತ್ತಿಕೊಳ್ಳಲಿ!”

ಹೀಗೆ ಮತ್ತೆ ಮತ್ತೆ ದುರ್ಯೋಧನನು ಗರ್ಜಿಸುತ್ತಿರಲು ಯುಧಿಷ್ಠಿರನ ಮೇಲೆ ಸಂಕ್ರುದ್ಧನಾಗಿ ವಾಸುದೇವನು ಇದನ್ನು ಹೇಳಿದನು:

“ಯುಧಿಷ್ಠಿರ! ಯುದ್ಧದಲ್ಲಿ ಎಂಥಹ ವರವನ್ನು ನೀನು ಕೊಟ್ಟುಬಿಟ್ಟೆ! ಒಂದುವೇಳೆ ಅವನು ಅರ್ಜುನ, ನಕುಲ, ಸಹದೇವ ಅಥವಾ ನಿನ್ನೊಡನೆ ಯುದ್ಧಮಾಡಲು ಬಯಸಿದರೆ

ಏನಾಗುತ್ತದೆ? “ನಮ್ಮೈವರಲ್ಲಿ ಒಬ್ಬನನ್ನೇ ಕೊಂದು ನೀನು ರಾಜನಾಗು!” ಎಂದು ಹೇಳಿ ಇದೇನು ಸಾಹಸಮಾಡಿಬಿಟ್ಟೆ? ಭೀಮಸೇನನನ್ನು ಸಂಹರಿಸಲು ಬಯಸಿ ಇವನು ಕಳೆದ ಹದಿಮೂರು ವರ್ಷಗಳು ಭೀಮಸೇನನ ಲೋಹದ ಮೂರ್ತಿಯನ್ನು ಮಾಡಿಕೊಂಡು ಅದರೊಡನೆ ಗದಾಯುದ್ಧದ ಅಭ್ಯಾಸಮಾಡಿಕೊಂಡು ಬಂದಿರುವನು! ಈಗ ನಾವು ನಿನ್ನ ಕಾರ್ಯವನ್ನು ಹೇಗೆ ಪೂರೈಸಿಕೊಡಬಲ್ಲೆವು? ಕೇವಲ ದಯಾಪೂರ್ಣನಾಗಿ ಈ ದುಃಸ್ಸಾಹಸವನ್ನು ನೀನು ಮಾಡಿರುವೆ! ವೃಕೋದರನಲ್ಲದೇ ಇವನೊಂದಿಗೆ ಯುದ್ಧಮಾಡಬಲ್ಲ ಬೇರೆ ಯಾರನ್ನೂ ನಾನು ಕಾಣೆ. ಇವನೂ ಕೂಡ ಚೆನ್ನಾಗಿ ಅಭ್ಯಾಸವನ್ನು ಮಾಡಿಲ್ಲ. ಹಿಂದಿನಂತೆಯೇ ಈಗ ಕೂಡ ಪುನಃ ದ್ಯೂತವನ್ನು ಪ್ರಾರಂಭಿಸಿಬಿಟ್ಟೆಯಲ್ಲ! ಇಂದಿನ ಈ ಜೂಜಾಟವು ಶಕುನಿಯೊಡನಾಡಿನ ಅಂದಿನದಂತೆ ವಿಷಮವಾದುದು. ಭೀಮನು ಬಲಶಾಲಿ ಮತ್ತು ಸಮರ್ಥ. ಸುಯೋಧನನು ಕುಶಲನು. ನೋಡಿದರೆ ಬಲಶಾಲಿ ಮತ್ತು ಕುಶಲಿ ಇಬ್ಬರಲ್ಲಿ ಕುಶಲಿಯೇ ಅಧಿಕನೆನಿಸಿಕೊಳ್ಳುತ್ತಾನೆ. ಅತ್ಯಂತ ವಿಷಮ ಪ್ರದೇಶದಲ್ಲಿ ಕಷ್ಟಪಡುತ್ತಿರುವ ಶತ್ರುವನ್ನು ನೀನು ಸಮಪ್ರದೇಶಕ್ಕೆ ತಂದು ಇಟ್ಟಿರುವೆ.

ಸಮಪ್ರದೇಶದಲ್ಲಿದ್ದ ನಮ್ಮನ್ನು ವಿಷಮಪ್ರದೇಶಕ್ಕೆ ಕೊಂಡೊಯ್ದು ಮಹಾ ಕಷ್ಟದಲ್ಲಿ ಸಿಕ್ಕಿಸಿದೆ. ಯಾರುತಾನೇ ಸರ್ವ ಶತ್ರುಗಳನ್ನೂ ಸೋಲಿಸಿ ಒಂಟಿಗನಾಗಿರುವ ವೈರಿಗೆ ಒಂದೇ ಒಂದು ಪಣದಲ್ಲಿ ರಾಜ್ಯವನ್ನು ಕೊಡಲು ಬಯಸುತ್ತಾನೆ? ಯುದ್ಧದಲ್ಲಿ ದುರ್ಯೋಧನನೊಡನೆ, ಅದರಲ್ಲೂ ವಿಶೇಷವಾಗಿ ಅಭ್ಯಾಸಮಾಡಿರುವ ಇವನೊಡನೆ, ಗದಾಪಾಣಿಯಾಗಿ ಯುದ್ಧಮಾಡುವ ನರೋತ್ತಮನನ್ನು ನಾನು ಈ ಲೋಕಗಳಲ್ಲಿ ಯಾರನ್ನೂ ಕಾಣುತ್ತಿಲ್ಲ. ಫಲ್ಗುನನಾಗಲೀ, ನೀನಾಗಲೀ, ಮಾದ್ರೀಪುತ್ರರಾಗಲೀ ಯುದ್ಧದಲ್ಲಿ ಈ ಗದಾಪಾಣಿಯನ್ನು ಎದುರಿಸಲು ಸಮರ್ಥರೆಂದು ನನಗನ್ನಿಸುವುದಿಲ್ಲ. ಹೇಗೆ ತಾನೇ ನೀನು ಶತ್ರುವಿಗೆ "ನಮ್ಮಲ್ಲಿ ಒಬ್ಬನನ್ನು ಸಂಹರಿಸಿ ರಾಜನಾಗು!" ಎಂದು ಹೇಳಿಬಿಟ್ಟೆ? ವೃಕೋದರನೇ ಇವನನ್ನು ಎದುರಿಸಿದರೂ ನ್ಯಾಯರೀತಿಯಲ್ಲಿ ಯುದ್ಧಮಾಡುವ ನಮಗೆ ವಿಜಯದ ಸಂದೇಹವೇ ಇದೆ. ಏಕೆಂದರೆ ಮಹಾಬಲ ದುರ್ಯೋಧನನು ಗದಾಯುದ್ಧದಲ್ಲಿ ಪರಿಣಿತನಾಗಿದ್ದಾನೆ."

ಭೀಮನು ಹೇಳಿದನು:

> “ಮಧುಸೂದನ! ವಿಷಾದಪಡಬೇಡ! ಅತ್ಯಂತ ದುರ್ಗಮ ವೈರದ ದಡವನ್ನು ನಾನು ಇಂದು ಸೇರಿಯೇ ತೀರುತ್ತೇನೆ! ಸುಯೋಧನನನ್ನು ನಾನು ಯುದ್ಧದಲ್ಲಿ ಸಂಹರಿಸುತ್ತೇನೆ ಎನ್ನುವುದರಲ್ಲಿ ಸಂಶಯವೇ ಇಲ್ಲ! ಧರ್ಮರಾಜನ ಕಣ್ಣೆದುರಿಗೆ ವಿಜಯವು ನಿಶ್ಚಯವಾದುದು! ನನ್ನ ಈ ಗದೆಯು ಅವನ ಗದೆಗಿಂತ ಒಂದೂವರೆಯಷ್ಟು ಹೆಚ್ಚು ಭಾರವಾಗಿದೆ. ಧಾರ್ತರಾಷ್ಟ್ರನ ಗದೆಯು ನನ್ನ ಗದೆಗೆ ಸಮಾನವಲ್ಲ. ವ್ಯಥೆಪಡೆಯದಿರು! ಯುದ್ಧದಲ್ಲಿ ನಾನಾ ಶಸ್ತ್ರಗಳನ್ನು ಧರಿಸಿರುವ ಮೂರುಲೋಕಗಳ ಅಮರರೊಂದಿಗೆ ಕೂಡ ನಾನು ಸಂತೋಷದಿಂದ ಯುದ್ಧಮಾಡಬಲ್ಲೆನು. ಇನ್ನು ರಣದಲ್ಲಿ ಸುಯೋಧನನೇನು?”

ಹಾಗೆ ಮಾತನಾಡುತ್ತಿದ್ದ ವೃಕೋಧರನನ್ನು ಸಂತೋಷದಿಂದ ಗೌರವಿಸಿ ವಾಸುದೇವನು ಈ ಮಾತುಗಳನ್ನಾಡಿದನು:

> “ಮಹಾಬಾಹೋ! ನಿನ್ನನ್ನೇ ಆಶ್ರಯಿಸಿ ಯುಧಿಷ್ಠಿರನು ಶತ್ರುಗಳನ್ನು ಕಳೆದುಕೊಂಡು ಬೆಳಗುತ್ತಿರುವ ತನ್ನ ಸಂಪತ್ತನ್ನು ಪಡೆಯುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ನಿನ್ನಿಂದಾಗಿ ರಣದಲ್ಲಿ ಧೃತರಾಷ್ಟ್ರನ ಸರ್ವಸುತರೂ, ರಾಜರೂ,

ರಾಜಪುತ್ರರೂ, ಆನೆಗಳೂ ಹತರಾಗಿ ಬಿದ್ದಿದ್ದಾರೆ. ಮಹಾಯುದ್ಧದಲ್ಲಿ ನಿನ್ನನ್ನು ಎದುರಿಸಿ ಕಲಿಂಗರು, ಮಾಗಧರು, ಪೂರ್ವದವರು, ಗಾಂಧಾರರು ಮತ್ತು ಕುರವರು ಹತರಾಗಿದ್ದಾರೆ. ದುರ್ಯೋಧನನನ್ನು ಕೂಡ ಸಂಹರಿಸಿ ವಿಷ್ಣುವು ಶಚೀಪತಿಗೆ ಹೇಗೋ ಹಾಗೆ ನೀನು ಧರ್ಮರಾಜನಿಗೆ ಈ ಸಾಗರಮೇಖಲೆ ಭೂಮಿಯನ್ನು ಸಮರ್ಪಿಸು. ರಣದಲ್ಲಿ ನಿನ್ನನ್ನು ಎದುರಿಸಿ ಪಾಪಿ ಧಾರ್ತರಾಷ್ಟ್ರನು ವಿನಾಶಹೊಂದುತ್ತಾನೆ. ಅವನ ಎಡ ತೊಡೆಯನ್ನು ಮುರಿದು ನೀನು ಪ್ರತಿಜ್ಞೆಯನ್ನು ಪೂರೈಸಿಕೊಳ್ಳುವೆ. ಸದಾ ಪ್ರಯತ್ನಪೂರ್ವಕವಾಗಿ ಧೃತರಾಷ್ಟ್ರಜನೊಡನೆ ಯುದ್ಧಮಾಡಬೇಕು. ಏಕೆಂದರೆ ಅವನು ಕುಶಲನು, ಬಲಿಷ್ಠನು ಮತ್ತು ನಿತ್ಯವೂ ಯುದ್ಧಕಲೆಯನ್ನು ಸಂಪೂರ್ಣವಾಗಿ ತಿಳಿದಿರುವನು.”

ಆಗ ಸಾತ್ಯಕಿಯು ಭೀಮಸೇನನನ್ನು ವಿವಿಧ ಮಾತುಗಳಿಂದ ಪ್ರಶಂಸಿಸಿದನು. ಧರ್ಮರಾಜನ ನಾಯಕತ್ವದಲ್ಲಿದ್ದ ಪಾಂಚಾಲರೂ ಪಾಂಡವೇಯರೂ ಎಲ್ಲರೂ ಭೀಮಸೇನನ ಆ ಮಾತನ್ನು ಗೌರವಿಸಿದರು. ಆಗ ಭೀಮಬಲ ಭೀಮನು ಸೃಂಜಯರೊಡನೆ

ಸುಡುತ್ತಿರುವ ಭಾಸ್ಕರನಂತೆ ನಿಂತಿರುವ ಯುಧಿಷ್ಠಿರನಿಗೆ ಹೇಳಿದನು:

“ರಣದಲ್ಲಿ ನಾನೇ ಇವನೊಡನೆ ಯುದ್ಧಮಾಡಲು ಬಯಸುತ್ತೇನೆ. ಏಕೆಂದರೆ ಈ ಪುರುಷಾಧಮನು ರಣದಲ್ಲಿ ನನ್ನನ್ನು ಗೆಲ್ಲಲು ಶಕ್ತನಿಲ್ಲ. ಖಾಂಡವದಲ್ಲಿ ಅರ್ಜುನನು ಅಗ್ನಿಯನ್ನು ಸುರಿಸಿದಂತೆ ನನ್ನ ಹೃದಯದಲ್ಲಿ ಚೆನ್ನಾಗಿ ಹುದುಗಿರುವ ಕ್ರೋಧಾಗ್ನಿಯನ್ನು ಇಂದು ನಾನು ಧಾರ್ತರಾಷ್ಟ್ರ ಸುಯೋಧನನ ಮೇಲೆ ಸುರಿಯುತ್ತೇನೆ. ಇಂದು ಈ ಪಾಪಿಯನ್ನು ಗದೆಯಿಂದ ಸಂಹರಿಸಿ ನಿನ್ನ ಹೃದಯದಲ್ಲಿ ನೆಟ್ಟಿಕೊಂಡಿರುವ ಮುಳ್ಳನ್ನು ಕಿತ್ತುಹಾಕುತ್ತೇನೆ. ಸುಖಿಯಾಗಿರು! ಇಂದು ಕೀರ್ತಿಮಯೀ ಮಾಲೆಯನ್ನು ನಿನಗೆ ತೊಡಿಸುತ್ತೇನೆ. ಸುಯೋಧನನನ್ನು ಪ್ರಾಣ-ಸಂಪತ್ತು-ರಾಜ್ಯಗಳಿಂದ ಇಂದು ಮೋಕ್ಷಗೊಳಿಸುತ್ತೇನೆ. ತನ್ನ ಮಗನು ನನ್ನಿಂದ ಹತನಾದುದನ್ನು ಕೇಳಿ ರಾಜಾ ಧೃತರಾಷ್ಟ್ರನೂ ಕೂಡ ಇಂದು ಶಕುನಿಯ ಬುದ್ಧಿಯಿಂದ ಹುಟ್ಟಿದ ಅಶುಭ ಕರ್ಮಗಳನ್ನು ನೆನಪಿಸಿಕೊಳ್ಳುತ್ತಾನೆ!”

ಹೀಗೆ ಹೇಳಿ ಆ ಭರತಶ್ರೇಷ್ಠ ವೀರ್ಯವಾನನು ಗದೆಯನ್ನು ಮೇಲೆತ್ತಿ ಶಕ್ರನು ವೃತ್ರನನ್ನು ಯುದ್ಧಕ್ಕೆ ಆಹ್ವಾನಿಸುವಂತೆ ಮೇಲೆದ್ದುನಿಂತನು.

ಹಿಂಡಿನಿಂದ ಬೇರ್ಪಟ್ಟ ಸಲಗದಂತೆ ಒಂಟಿಯಾಗಿದ್ದ ಮಹಾಬಲ ಧಾರ್ತರಾಷ್ಟ್ರನನ್ನು ನೋಡಿ ಪಾಂಡವರೆಲ್ಲರೂ ಹರ್ಷಿತರಾದರು. ಗದೆಯನ್ನು ಎತ್ತಿಹಿಡಿದು ಶಿಖರಯುಕ್ತ ಕೈಲಾಸದಂತೆ ನಿಂತಿರುವ ದುರ್ಯೋಧನನನ್ನು ನೋಡಿ ಭೀಮಸೇನನು ಹೇಳಿದನು:

> “ನೀನು ಮತ್ತು ರಾಜಾ ಧೃತರಾಷ್ಟ್ರರು ನಮ್ಮ ಮೇಲೆ ವಾರಣಾವತಲ್ಲಿ ಎಸಗಿದ ದುಷ್ಕೃತಗಳನ್ನು ಸ್ಮರಿಸಿಕೋ! ದುಷ್ಟಾತ್ಮನ್! ಸಭಾಮಧ್ಯದಲ್ಲಿ ರಜಸ್ವಲೆ ದ್ರೌಪದಿಯನ್ನು ಕಾಡಿದುದು ಮತ್ತು ಶಕುನಿಯ ಬುದ್ಧಿನಿಶ್ಚಯದಂತೆ ದ್ಯೂತದಲ್ಲಿ ರಾಜನನ್ನು ಗೆದ್ದುದು – ಇವು ಮತ್ತು ಇನ್ನೂ ಅನೇಕ ಪಾಪಗಳನ್ನೆಸಗಿರುವೆ! ನಿರಪರಾಧಿ ಪಾರ್ಥರ ಮೇಲೆಸಗಿದ ಅವುಗಳ ಮಹಾಫಲವನ್ನು ನೋಡು! ನೀನು ಮಾಡಿದುದರಿಂದಾಗಿ ನಮ್ಮೆಲ್ಲರ ಪಿತಾಮಹ ಗಾಂಗೇಯನು ಹತನಾಗಿ ಶರತಲ್ಪದಲ್ಲಿ ಮಲಗಿದ್ದಾನೆ. ದ್ರೋಣನು ಹತನಾದನು. ಕರ್ಣನೂ ಶಲ್ಯನೂ ಹತರಾದರು. ವೈರದ ಆದಿಕರ್ತ ಶಕುನಿಯೂ ಯುದ್ಧದಲ್ಲಿ ಮಡಿದನು. ನಿನ್ನ ಶೂರ ಭ್ರಾತರರೂ, ಸೈನಿಕರೊಂದಿಗೆ ಪುತ್ರರೂ, ಸಮರದಿಂದ ಹಿಂದಿರುಗದ ಶೂರ ರಾಜರೂ ಹತರಾದರು. ಇವರು ಮತ್ತು

ಅನ್ಯ ಅನೇಕ ಕ್ಷತ್ರಿಯರ್ಷಭರೂ ಹತರಾದರು. ದ್ರೌಪದಿಗೆ ಕ್ಲೇಶವನ್ನು ತಂದ ಪಾಪಿ ಪ್ರತಿಕಾಮಿಯೂ ಹತನಾದನು. ನೀನೊಬ್ಬನೇ ಕುಲಘ್ನ ಅಧಮ ಪುರುಷ ಉಳಿದುಕೊಂಡಿದ್ದೀಯೆ. ನಿನ್ನನ್ನು ಇಂದು ಗದೆಯಿಂದ ಕೊಲ್ಲುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ಇಂದು ರಣದಲ್ಲಿ ನಿನ್ನ ದರ್ಪವೆಲ್ಲವನ್ನೂ, ರಾಜ್ಯದಮೇಲಿನ ಅತ್ಯಾಶೆಯನ್ನೂ, ಪಾಂಡವರ ಮೇಲೆಸಗಿದ ದುಷ್ಕೃತಗಳನ್ನೂ ನಾಶಗೊಳಿಸುತ್ತೇನೆ!”

ದುರ್ಯೋಧನನು ಹೇಳಿದನು:

“ವೃಕೋದರ! ವೃಥಾ ಕೊಚ್ಚಿಕೊಳ್ಳುವುದರಿಂದ ಏನಾಗಲಿಕ್ಕಿದೆ? ಇಂದು ನನ್ನೊಡನೆ ಯುದ್ಧಮಾಡು! ನಿನ್ನಲ್ಲಿರುವ ಯುದ್ಧಶ್ರದ್ಧೆಯನ್ನು ಇಂದು ನಾನು ನಾಶಗೊಳಿಸುತ್ತೇನೆ! ಪಾಪಿ! ಹಿಮಾಲಯ ಶಿಖರಾಕಾರದ ಮಹಾ ಗದೆಯನ್ನು ಹಿಡಿದು ಗದಾಯುದ್ಧಕ್ಕೆ ನಿಂತಿರುವ ನನ್ನನ್ನು ನೀನು ನೋಡುತ್ತಿಲ್ಲವೇ? ಇಂದು ಗದಾಪಾಣಿಯಾಗಿರುವ ನನ್ನನ್ನು ಯಾವ ಶತ್ರುವು ಗೆಲ್ಲುವ ಉತ್ಸಾಹತಾಳಿರುತ್ತಾನೆ? ನ್ಯಾಯರೀತಿಯಲ್ಲಿ ಯುದ್ಧಮಾಡುವ

ದೇವ ಪುರಂದರನೂ ಈ ಉತ್ಸಾಹತೋರಿಸಲಿಕ್ಕಿಲ್ಲ!
ಶರತ್ಕಾಲದ ನಿರ್ಜಲ ಮೇಘದಂತೆ ವ್ಯರ್ಥವಾಗಿ
ಗರ್ಜಿಸಬೇಡ! ನಿನ್ನಲ್ಲಿ ಎಷ್ಟು ಬಲವಿದೆಯೆಂದು
ತಿಳಿದುಕೊಂಡಿರುವೆಯೋ ಅದನ್ನು ಯುದ್ಧದಲ್ಲಿ ಪ್ರದರ್ಶಿಸು!"

ಅವನ ಆ ಮಾತನ್ನು ಕೇಳಿ ವಿಜಯೇಚ್ಛ ಸೃಂಜಯರೊಂದಿಗೆ ಪಾಂಚಾಲರೆಲ್ಲರೂ ಆ ಮಾತನ್ನು ಗೌರವಿಸಿದರು. ಚಪ್ಪಾಳೆಶಬ್ಧಗಳಿಂದ ಮಾನವರು ಮದಿಸಿದ ಆನೆಯನ್ನು ಉದ್ರೇಕಗೊಳಿಸುವಂತೆ ರಾಜ ದುರ್ಯೋಧನನನ್ನು ಮತ್ತೆ ಮತ್ತೆ ಅವರು ಹರ್ಷಗೊಳಿಸಿದರು. ಆಗ ಜಯೈಷಿ ಪಾಂಡವರ ಆನೆಗಳು ಘೀಳಿಟ್ಟವು. ಕುದುರೆಗಳು ಕೆನೆದವು, ಮತ್ತು ಶಸ್ತ್ರಗಳು ಪ್ರಜ್ವಲಿಸಿದವು.

## ಬಲದೇವನ ತೀರ್ಥಯಾತ್ರೆ

ಮಹಾತ್ಮ ಪಾಂಡವರು ಉಪಪ್ಲವ್ಯದಲ್ಲಿ ವಾಸಿಸಿರುವಾಗ ಸರ್ವದೇಹಿಗಳ ಹಿತಾರ್ಥ ಶಾಂತಿಗಾಗಿ ಮಹಾಬಾಹು ಮಧುಸೂದನನನ್ನು ಧೃತರಾಷ್ಟ್ರನ ಬಳಿ ಕಳುಹಿಸಲಾಗಿತ್ತು. ಅವನು ಹಸ್ತಿನಾಪುರಕ್ಕೆ ಹೋಗಿ ಧೃತರಾಷ್ಟ್ರನನ್ನು ಸಂಧಿಸಿ ತಥ್ಯವೂ ವಿಶೇಷವಾಗಿ ಹಿತವೂ ಆದ ಮಾತುಗಳನ್ನಾಡಿದನು. ಆದರೆ ರಾಜನು

ಅದರಂತೆ ಮಾಡಲಿಲ್ಲ. ಅಲ್ಲಿ ಶಾಂತಿಯನ್ನು ಪಡೆಯದೇ ಮಹಾಬಾಹು ಪುರುಷಸತ್ತಮ ಕೃಷ್ಣನು ಉಪಪ್ಲವ್ಯಕ್ಕೆ ಹಿಂದಿರುಗಿದನು. ಧಾರ್ತರಾಷ್ಟ್ರನಿಂದ ಕಳುಹಿಸಲ್ಪಟ್ಟ ಕೃಷ್ಣನು ಹಿಂದಿರುಗಿ ಪಾಂಡವರಿಗೆ ಇದನ್ನು ಹೇಳಿದನು:

> "ಕಾಲಚೋದಿತ ಕುರುಗಳು ನನ್ನ ಮಾತಿನಂತೆ ಮಾಡುವುದಿಲ್ಲ. ಪಾಂಡವೇಯರೇ! ಪುಷ್ಯನಕ್ಷತ್ರದಲ್ಲಿ ನನ್ನೊಡನೆ ಹೊರಡಿ!"

ಆಗ ಸೇನಗಳ ವಿಭಜನೆಯು ನಡೆಯುತ್ತಿರಲು ಬಲಿಗಳಲ್ಲಿ ಶ್ರೇಷ್ಠ ಮಹಾಮನಸ್ವಿ ರೌಹಿಣೇಯನು ತಮ್ಮ ಕೃಷ್ಣನಿಗೆ ಹೇಳಿದನು:

> "ಮಹಾಬಾಹೋ! ಮಧುಸೂದನ! ಕೌರವರಿಗೂ ಸಹಾಯಮಾಡು!"

ಕೃಷ್ಣನು ಆ ಮಾತಿನಂತೆ ಮಾಡಲಿಲ್ಲ. ಆಗ ಕೋಪಗೊಂಡ ಹಲಧರನು ಅನುರಾಧಾ ನಕ್ಷತ್ರಯೋಗದಂದು ಸರ್ವ ಯಾದವರೊಡಗೂಡಿ ಸರಸ್ವತೀ ನದಿಗೆ ತೀರ್ಥಯಾತ್ರೆಗೆ ಹೊರಟನು. ಭೋಜ ಕೃತವರ್ಮನಾದರೋ ದುರ್ಯೋಧನನನ್ನು ಆಶ್ರಯಿಸಿದನು. ಯುಯುಧಾನ ಸಾತ್ಯಕಿಯ ಸಹಿತ ವಾಸುದೇವನು ಪಾಂಡವರನ್ನು ಸೇರಿದನು. ಶೂರ ರೌಹಿಣೇಯನು ಹೊರಟುಹೋದ ನಂತರ ಪುಷ್ಯಾ

ನಕ್ಷತ್ರದಲ್ಲಿ ಮಧುಸೂದನನು ಪಾಂಡವೇಯರನ್ನು ಮುಂದೆಮಾಡಿಕೊಂಡು ಕುರುಗಳನ್ನು ಎದುರಿಸಿ ಹೊರಟನು.

ಹೊರಟ ರಾಮನು ದಾರಿಯಲ್ಲಿಯೇ ನಿಂತು ತೀರ್ಥಯಾತ್ರೆಗೆ ಬೇಕಾಗುವ ಸಕಲ ಸಾಮಗ್ರಿಗಳನ್ನೂ, ಉಪಕರಣಗಳನ್ನೂ, ಅಗ್ನಿಗಳನ್ನೂ, ಯಾಜಕರನ್ನೂ ದ್ವಾರಕೆಯಿಂದ ತರಿಸಿಕೊಂಡನು. ಚಿನ್ನ, ಬೆಳ್ಳಿ, ಗೋವುಗಳು, ವಸ್ತ್ರಗಳು, ಕುದುರೆಗಳು, ಅನೆಗಳು, ರಥಗಳು, ಒಂಟೆಗಳು ಮತ್ತು ವಾಹನಗಳು – ತೀರ್ಥಯಾತ್ರೆಗೆಂದು ಎಲ್ಲವನ್ನೂ ಬೇಗ ಸೇವಕರಿಂದ ತರಿಸಿಕೊಂಡನು. ಸರಸ್ವತೀ ನದಿಯ ತೀರಕ್ಕೆ ಶೀಘ್ರವಾಗಿ ಪ್ರಯಾಣಿಸಬೇಕೆಂದೂ ಅದಕ್ಕೆ ನೂರಾರು ದ್ವಿಜರ್ಷಭರನ್ನೂ ಋತ್ವಿಜರನ್ನೂ ಕರೆತರಬೇಕೆಂದು ಆಜ್ಞೆಯಿತ್ತನು. ಹೀಗೆ ಕುರುಗಳ ಯುದ್ಧವು ನಡೆಯುವಾಗ ಬಲದೇವನು ಸೇವಕರಿಗೆ ಆಜ್ಞೆಯನ್ನಿತ್ತು ತೀರ್ಥಯಾತ್ರೆಗೆ ಹೊರಟನು. ಅವನು ಋತ್ವಿಜರು, ಸುಹೃದಯರು ಮತ್ತು ಅನ್ಯ ದ್ವಿಜಸತ್ತಮರೊಡನೆ ರಥ-ಆನೆ-ಕುದುರೆ-ಸೇವಕರೊಡನೆ, ಮತ್ತು ಅನೇಕ ಎತ್ತು, ಕತ್ತೆ ಮತ್ತು ಒಂಟೆಗಳನ್ನು ಕಟ್ಟಿದ್ದ ಯಾನಗಳಿಂದ ಪರಿವೃತನಾಗಿ ಸರಸ್ವತಿಯ ಪ್ರತಿಸ್ರೋತ ಸಮುದ್ರದ ಕಡೆ ಪ್ರಯಾಣಿಸಿದನು. ಯಾವ ದೇಶಗಳಲ್ಲಿ ಅವನು ಹೋದನೋ ಅಲ್ಲಿ ರೋಗಿಗಳಿಗೂ, ವೃದ್ಧರಿಗೂ, ಶಿಶುಗಳಿಗೂ, ಅಂಗವಿಕಲರಿಗೂ,

ಬಳಲಿದವರಿಗೂ ಕೊಡಲು ಬೇಕಾದ ವಸ್ತುಗಳನ್ನು ಸಂಗ್ರಹಿಸಿಕೊಂಡು ಹೋಗಿದ್ದನು. ಎಲ್ಲೆಲ್ಲಿ ದ್ವಿಜರು ಯಾವುದನ್ನು ಬಯಸುತ್ತಿದ್ದರೋ ಅದನ್ನೇ ಅವರಿಗೆ ಅವನು ಕೊಡುತ್ತಿದ್ದನು. ಅವನು ತಂಗಿದಲ್ಲೆಲ್ಲಾ ರೌಹಿಣೇಯನ ಶಾಸನದಂತೆ ಎಲ್ಲರಿಗೂ ಭೋಜನ-ಪಾನೀಯಗಳ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಸುಖಾಪೇಕ್ಷೀ ವಿಪ್ರರ ಸತ್ಕಾರಾರ್ಥವಾಗಿ ಅಲ್ಲಿ ಮಹಾಬೆಲೆಯ ವಸ್ತ್ರಗಳ ಮತ್ತು ಮಂಚ ಮೊದಲಾದವುಗಳ ವ್ಯವಸ್ಥೆಗಳನ್ನೂ ಮಾಡಲಾಗಿತ್ತು. ಎಲ್ಲೆಲ್ಲಿ ವಿಪ್ರ-ಕ್ಷತ್ರಿಯರು ಮಲಗುತ್ತಿದ್ದರೋ ಅಲ್ಲಲ್ಲಿ ಅವನು ಸರ್ವ ವ್ಯವಸ್ಥೆಗಳನ್ನೂ ಮಾಡಿಸಿದ್ದುದು ಕಾಣುತ್ತಿತ್ತು. ಜನರಿಗೆ ಯಥಾಸುಖವಾಗಿ ಎಲ್ಲವೂ ಅಲ್ಲಿ ಸಿದ್ಧವಾಗಿದ್ದವು. ಪ್ರಯಾಣಿಕರಿಗೆ ವಾಹನಗಳೂ ಬಾಯಾರಿದವರಿಗೆ ಪಾನೀಯಗಳೂ ದೊರಕುತ್ತಿದ್ದವು. ಹಸಿದು ಬಂದವರಿಗೆ ಸ್ವಾದಿಷ್ಟ ಭೋಜನ ಮತ್ತು ಅತಿಥಿಗಳಿಗೆ ವಸ್ತ್ರಾಭರಣ ಉಡುಗರೆಗಳೂ ದೊರೆಯುತ್ತಿದ್ದವು. ಅವನೊಂದಿಗೆ ಹೋಗಿದ್ದ ಎಲ್ಲರಿಗೂ ಯಾತ್ರೆಯು ಸ್ವರ್ಗದಂತೆ ಸುಖಮಯವಾಗಿಯೇ ಇದ್ದಿತು. ನಿತ್ಯವೂ ಪ್ರಮೋದವಾಗಿತ್ತು. ಶುಭ-ಸ್ವಾದ ಭಕ್ಷಗಳಿದ್ದವು. ನೂರಾರು ಜನರಿಂದ ಮುತ್ತಲ್ಪಟ್ಟ ನಾನಾತರಗದ ಅಂಗಡಿಗಳೂ ಇದ್ದವು. ಆ ಮಾರ್ಗವು ನಾನಾ ವೃಕ್ಷ-ಲತೆಗಳಿಂದಲೂ ನಾನಾ ರತ್ನಗಳಿಂದಲೂ ವಿಭೂಷಿತವಾಗಿತ್ತು.

ಹಲಭೃತನೆಂದು ಪ್ರತೀತನಾಗಿದ್ದ ರಾಮನು ಪುಣ್ಯತೀರ್ಥಗಳಲ್ಲಿ ನಿಯಮಸ್ಥನಾಗಿ ಉಳಿಯುತ್ತಾ ದ್ವಿಜರಿಗೆ ಯಜ್ಞದಕ್ಷಿಣೆಗಳನ್ನೂ ದಾನಮಾಡಿದನು. ರಾಮನು ದ್ವಿಜಾತಿಪ್ರವರರಿಗೆ ವಸ್ತ್ರಗಳನ್ನು ಹೊದಿಸಿದ್ದ, ಕೊಂಬುಗಳಿಗೆ ಸುವರ್ಣವನ್ನು ಕಟ್ಟಿದ್ದ ಸಾವಿರಾರು ಹಾಲುಕರೆಯುವ ಹಸುಗಳನ್ನೂ, ನಾನಾ ದೇಶಗಳಲ್ಲಿ ಹುಟ್ಟಿದ್ದ ಕುದುರೆಗಳನ್ನೂ, ರಥಗಳನ್ನೂ, ದಾಸಿಯರನ್ನೂ, ರತ್ನ-ಮಣಿ-ಹವಳಗಳನ್ನೂ, ಶ್ರೇಷ್ಠ ಸುವರ್ಣವನ್ನೂ, ಪರಿಶುದ್ಧ ಬೆಳ್ಳಿಯನ್ನೂ, ಉಕ್ಕಿನ ಮತ್ತು ತಾಮ್ರದ ಪಾತ್ರೆಗಳನ್ನೂ, ನೀಡಿದನು. ಹೀಗೆ ಆ ಮಹಾತ್ಮನು ಸರಸ್ವತೀ ನದಿಯ ಶ್ರೇಷ್ಠ ತೀರ್ಥಗಳಲ್ಲಿ ಅಪಾರ ಧನವನ್ನು ದಕ್ಷಿಣೆಗಳನ್ನಾಗಿತ್ತನು. ಆ ಅಪ್ರತಿಮ ಪ್ರಭಾವಿಯು ಕ್ರಮೇಣವಾಗಿ ಕುರುಕ್ಷೇತ್ರಕ್ಕೂ ಆಗಮಿಸಿದನು.

ಮೊದಲು ಯದುಪ್ರವೀರನು ಋತ್ವಿಜ-ಸುಹೃದ್ಗಣಗಳೊಂದಿಗೆ ಪುಣ್ಯ ಪ್ರಭಾಸಕ್ಷೇತ್ರಕ್ಕೆ ಹೋದನು. ಅಲ್ಲಿ ಯಕ್ಷ್ಮ(ಕ್ಷಯರೋಗ) ದಿಂದ ಪೀಡಿತ ಉಡುರಾಜ ಚಂದ್ರನು ಶಾಪದಿಂದ ವಿಮುಕ್ತನಾಗಿ ಪುನಃ ತೇಜಸ್ಸನ್ನು ಪಡೆದು ಜಗತ್ತೆಲ್ಲವನ್ನೂ ಬೆಳಗಿಸಿದನು. ಅವನಿಗೆ ಪ್ರಭೆಯನ್ನು ನೀಡಿದ ಇದು ಭೂಮಿಯಲ್ಲಿ ಪ್ರಭಾಸವೆಂಬ ಶ್ರೇಷ್ಠತೀರ್ಥವೆನಿಸಿಕೊಂಡಿತು. ಅನಂತರ ಬಲರಾಮನು ಚಮಸೋದ್ಭೇದಕ್ಕೆ ಹೋದನು.

ಹಲಾಯುಧನು ಅಲ್ಲಿ ವಿಶಿಷ್ಟ ದಾನಗಳನ್ನಿತ್ತು ಒಂದು ರಾತ್ರಿ ತಂಗಿ ವಿಧಿವತ್ತಾಗಿ ಸ್ನಾನಮಾಡಿದನು. ಅನಂತರ ಕೇಶವಾಗ್ರಜನು ವರಗಳನ್ನೀಯುವ ಉದಪಾನಕ್ಕೆ ಹೋದನು. ಅಲ್ಲಿ ಕಾಲಿಡುತ್ತಲೇ ಮಹಾ ಫಲಗಳು ದೊರೆಯುತ್ತವೆ. ಔಷಧಿಗಳ ಸ್ನಿಗ್ಧತ್ವದಿಂದಾಗಿ ಸಿದ್ಧರು ಇದೇ ಪ್ರದೇಶದಲ್ಲಿ ಸರಸ್ವತಿಯು ನಷ್ಟಳಾದಳೆಂದು ತಿಳಿದಿದ್ದಾರೆ. ಹಲಾಯುಧನು ಆ ನದಿಗೆ ಹೋಗಿ ಅಲ್ಲಿ ತ್ರಿತನ ಉದಪಾನಕ್ಕೆ ಹೋದನು. ಮುಸಲಾಯುಧನು ಪ್ರಹೃಷ್ಟನಾಗಿ ಅಲ್ಲಿ ನೀರನ್ನು ಮುಟ್ಟಿ, ದ್ವಿಜರನ್ನು ಪೂಜಿಸಿ ಬಹಳ ದ್ರವ್ಯವನ್ನು ದಾನವನ್ನಾಗಿತ್ತನು. ಅಲ್ಲಿ ಮಹಾತಪಸ್ವಿ ಧರ್ಮಪರ ತ್ರಿತನಿದ್ದನು. ಬಾವಿಯಲ್ಲಿ ವಾಸಿಸಿದ ಆ ಮಹಾತ್ಮನು ಅಲ್ಲಿಯೇ ಸೋಮವನ್ನು ಕುಡಿದನು. ಅಲ್ಲಿಯೇ ಅವನ ಸಹೋದರರಿಬ್ಬರು ಅವನನ್ನು ಬಿಟ್ಟು ಮನೆಗಳಿಗೆ ಹೊರಟು ಹೋದರು. ಆಗ ಬ್ರಾಹ್ಮಣಸತ್ತಮ ತ್ರಿತನು ಅವರಿಬ್ಬರನ್ನೂ ಶಪಿಸಿದನು. ಹಲಾಯುಧನು ಆ ನೀರನ್ನು ಸ್ಪರ್ಶಿಸಿ ದ್ವಿಜರನ್ನು ಪೂಜಿಸಿ ವಿವಿಧ ದಾನಗಳನ್ನಿತ್ತನು. ಉದಪಾನವನ್ನು ನೋಡಿ ಪುನಃ ಪುನಃ ಅದನ್ನು ಪ್ರಶಂಸಿಸುತ್ತಾ ಆ ಅದೀನಾತ್ಮನು ಸರಸ್ವತಿಯು ಕಣ್ಮರೆಯಾಗಿದ್ದ ವಿನಶನ ಪ್ರದೇಶವನ್ನು ತಲುಪಿದನು. ದ್ವೇಷದಿಂದ ಸರಸ್ವತಿಯು ನಷ್ಟಳಾಗಿ ಹೋಗಿದ್ದ ಆ ಸ್ಥಳವನ್ನು ಋಷಿಗಳು ನಿತ್ಯವೂ ವಿನಶನವೆಂದು ಕರೆಯುತ್ತಾರೆ. ಬಲರಾಮನು ಆ ಸರಸ್ವತಿಯಲ್ಲಿ ನೀರನ್ನು

ಮುಟ್ಟಿ ಸರಸ್ವತೀ ತಟದಲ್ಲಿದ್ದ ಶ್ರೇಷ್ಠ ಸುಭೂಮಿಕಕ್ಕೆ ಹೋದನು. ಅಲ್ಲಿ ವಿಮಲ-ಶುಭ್ರ-ದೋಷರಹಿತ-ವಿಮಲಾನನೆ ಅಪ್ಸರೆಯರೂ ಕೂಡ ಕ್ರೀಡೆಗಳನ್ನು ಆಡುತ್ತಾರೆ. ಗಂಧರ್ವರೊಡನೆ ದೇವತೆಗಳು ಪ್ರತಿಮಾಸವೂ ಬ್ರಾಹ್ಮಣಸೇವಿತ ಆ ಪುಣ್ಯತೀರ್ಥಕ್ಕೆ ಬರುತ್ತಾರೆ. ಅಲ್ಲಿ ಗಂಧರ್ವ ಮತ್ತು ಅಪ್ಸರ ಗಣಗಳು ಒಟ್ಟಾಗಿ ಬಂದು ಸಂತೋಷಪಡುತ್ತಿರುವುದು ಕಂಡುಬರುತ್ತದೆ. ಅಲ್ಲಿ ದೇವತೆಗಳು ಮತ್ತು ಬಳ್ಳಿಗಳನ್ನಾಶ್ರಯಿಸಿರುವ ಪಿತೃಗಳು ತಮ್ಮ ಮೇಲೆ ಪುನಃ ಪುನಃ ದಿವ್ಯ ಪುಣ್ಯ ಪುಷ್ಪಗಳ ಮಳೆಯಾಗುತ್ತಿರುವುದರಿಂದ ಆನಂದಪಡುತ್ತಾರೆ. ಆ ಶ್ರೇಷ್ಠ ಸರಸ್ವತೀ ತಟವು ಅಪ್ಸರೆಯರ ಶುಭ ಕ್ರೀಡಾಭೂಮಿಯಾಗಿದ್ದು ಸುಭೂಮಿಕಾ ಎಂದು ವಿಖ್ಯಾತವಾಗಿದೆ.

ಮಾಧವನು ಅಲ್ಲಿ ಸ್ನಾನಮಾಡಿ ವಿಪ್ರರಿಗೆ ಧನವನ್ನು ದಾನಮಾಡಿ, ದಿವ್ಯ ಗೀತವನ್ನೂ ವಾದ್ಯಗಳ ನಿಃಸ್ವನವನ್ನೂ ಕೇಳಿದನು. ದೇವ-ಗಂಧರ್ವ-ರಾಕ್ಷಸರ ವಿಪುಲ ಛಾಯೆಗಳನ್ನು ನೋಡಿ ರೋಹಿಣೀಸುತನು ಗಂಧರ್ವರ ತೀರ್ಥಕ್ಕೆ ಬಂದನು. ಅಲ್ಲಿ ವಿಶ್ವಾವಸುವೇ ಮೊದಲಾದ ತಪಸಾನ್ವಿತರು ಸುಮನೋರಮ ನೃತ್ಯ-ವಾದ್ಯ-ಗೀತೆಗಳನ್ನು ಮಾಡುತ್ತಿರುತ್ತಾರೆ. ಹಲಧರನು ಅಲ್ಲಿ ವಿಪ್ರರಿಗೆ ವಿವಿಧ ಸಂಪತ್ತುಗಳನ್ನು – ಆಡು, ಕುರಿ, ಹಸು, ಕತ್ತೆ ಮತ್ತು ಒಂಟೆಗಳನ್ನೂ, ಸುವರ್ಣ-ರಜತಗಳನ್ನೂ ದಾನವನ್ನಾಗಿತ್ತನು. ದ್ವಿಜರಿಗೆ ಬೇಕಾದ

ಭೋಜನಗಳನ್ನಿತ್ತು ಮಹಾಧನಗಳಿಂದ ತೃಪ್ತಿಗೊಳಿಸಿ ಮಾಧವನು ಸ್ತುತಿಸುತ್ತಿರುವ ವಿಪ್ರರೊಂದಿಗೆ ಮುಂದುವರೆದನು. ಆ ಗಂಧರ್ವತೀರ್ಥದಿಂದ ಅವನು ಗರ್ಗಸ್ರೋತ ಮಹಾತೀರ್ಥಕ್ಕೆ ಆಗಮಿಸಿದನು. ಅಲ್ಲಿ ಭಾವಿತಾತ್ಮ ವೃದ್ಧ ಗರ್ಗನು ತಪಸ್ಸಿನಿಂದ ಕಾಲಜ್ಞಾನವನ್ನೂ, ನಕ್ಷತ್ರಗಳ ಗತಿಯನ್ನೂ, ದಾರುಣ ಮತ್ತು ಶುಭ ಉತ್ಪಾತಗಳನ್ನೂ ತಿಳಿದುಕೊಂಡಿದ್ದನು. ಸರಸ್ವತಿಯ ಶುಭ ತೀರ್ಥದಲ್ಲಿ ಆ ಮಹಾತ್ಮನಿದ್ದುದರಿಂದ ಆ ತೀರ್ಥವು ಗರ್ಗಸ್ರೋತವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಅಲ್ಲಿ ಸುವ್ರತ ಋಷಿಗಳು ಕಾಲಜ್ಞಾನಕ್ಕಾಗಿ ಮಹಾಭಾಗ ಗರ್ಗನನ್ನು ನಿತ್ಯವೂ ಉಪಾಸಿಸುತ್ತಿರುತ್ತಾರೆ. ನೀಲಾವಾಸ ಬಲರಾಮನು ಅಲ್ಲಿ ಹೋಗಿ ಭಾವಿತಾತ್ಮ ಮುನಿಗಳಿಗೆ ವಿಧಿವತ್ತಾಗಿ ಧನವನ್ನು ದಾನವನ್ನಾಗಿತ್ತು, ದ್ವಿಜರಿಗೆ ಉತ್ತಮ ಭಕ್ಷಗಳ ಬೋಜನಗಳನ್ನಿತ್ತು ಅಲ್ಲಿಂದ ಮಹಾಯಶಸ್ವಿ ಶಂಖತೀರ್ಥಕ್ಕೆ ಹೋದನು.

ಬಲಶಾಲೀ ತಾಲಧ್ವಜನು ಶ್ವೇತಪರ್ವತದ ಬಳಿ ಋಷಿಗಣಗಳಿಂದ ಸೇವಿಸಲ್ಪಟ್ಟಿದ್ದ ಮಹಾಮೇರುವಿನಂತೆ ಎತ್ತರವಾಗಿದ್ದ, ಸರಸ್ವತೀ ತಟದಲ್ಲಿ ಹುಟ್ಟಿದ್ದ, ಮಹಾಶಂಖವೆಂಬ ವೃಕ್ಷವನ್ನು ನೋಡಿದನು. ಅಲ್ಲಿ ಯಕ್ಷರೂ, ವಿದ್ಯಾಧರರೂ, ಅಮಿತೌಜಸ ರಾಕ್ಷಸರೂ, ಅಮಿತ

ಬಲಶಾಲೀ ಪಿಶಾಚರೂ ಮತ್ತು ಸಹಸ್ರಾರು ಸಿದ್ಧರೂ ಇದ್ದರು. ಅವರೆಲ್ಲರೂ ವ್ರತ-ನಿಯಮಗಳೊಂದಿಗೆ ಆಹಾರವನ್ನು ತೊರೆದು ಆ ವನಸ್ಪತಿಯ ಫಲವನ್ನು ಕಾಲ ಕಾಲದಲ್ಲಿ ಭುಂಜಿಸುತ್ತಿದ್ದರು. ಅವರವರ ನಿಯಮಗಳನ್ನು ಪಾಲಿಸುತ್ತಾ ಪ್ರತ್ಯೇಕ ಪ್ರತ್ಯೇಕವಾಗಿ ಅವರುಗಳು ಮನುಷ್ಯರಿಗೆ ಅದೃಶ್ಯರಾಗಿ ಅಲ್ಲಿ ಸಂಚರಿಸುತ್ತಿದ್ದರು. ಈ ರೀತಿ ಸರಸ್ವತೀ ತೀರದಲ್ಲಿರುವ ಆ ವನಸ್ಪತಿಯು ಈ ಲೋಕದಲ್ಲಿ ಪಾವನ ತೀರ್ಥವೆಂದು ಲೋಕವಿಶ್ರುತವಾಗಿದೆ. ಆ ಯಶಸ್ವೀ ತೀರ್ಥದಲ್ಲಿ ಯದುಶಾರ್ದೂಲನು ತಾಮ್ರದ ಪಾತ್ರೆಗಳನ್ನೂ ವಿವಿಧ ವಸ್ತ್ರಗಳನ್ನೂ ದಾನವನ್ನಾಗಿತ್ತನು. ಅಲ್ಲಿ ದ್ವಿಜರನ್ನು ಪೂಜಿಸಿ ಮತ್ತು ತಪೋಧನರಿಂದ ಪೂಜಿಸಲ್ಪಟ್ಟು ಹಲಾಯುಧನು ಪುಣ್ಯ ದ್ವೈತವನಕ್ಕೆ ಬಂದನು.

ಅಲ್ಲಿ ಬಲರಾಮನು ನಾನಾವೇಷಗಳನ್ನು ಧರಿಸಿದ್ದ ಮುನಿಗಳನ್ನು ನೋಡಿ, ನೀರಿನಲ್ಲಿ ಸ್ನಾನಮಾಡಿ, ದ್ವಿಜರನ್ನು ಪೂಜಿಸಿದನು. ಅಲ್ಲಿ ಕೂಡ ವಿಪ್ರರಿಗೆ ಪುಷ್ಕಳ ಭೋಗವಸ್ತುಗಳನ್ನು ದಾನವನ್ನಾಗಿತ್ತು ಬಲರಾಮನು ಸರಸ್ವತಿಯ ದಕ್ಷಿಣ ತೀರದ ಕಡೆ ಪ್ರಯಾಣಿಸಿದನು.
ಅನತಿದೂರದಲ್ಲಿಯೇ ಅವನು ನಾಗಧನ್ವ ಎಂಬ ತೀರ್ಥಕ್ಕೆ ಆಗಮಿಸಿದನು. ಅಲ್ಲಿ ಅನೇಕ ಪನ್ನಗಗಳಿಂದ ಆವೃತನಾದ ಮಹಾದ್ಯುತಿ ಪನ್ನಗರಾಜ ವಾಸುಕಿಯ ನಿವೇಶನವಿದೆ. ಅಲ್ಲಿ ಹದಿನಾಲ್ಕು ಸಹಸ್ರ

ಸಿದ್ಧ-ಋಷಿಗಳು ವಾಸಿಸುತ್ತಾರೆ. ಅಲ್ಲಿ ದೇವತೆಗಳು ಒಟ್ಟಾಗಿ ಪನ್ನಗೋತ್ತಮ ವಾಸುಕಿಯನ್ನು ಸರ್ವಪನ್ನಗಗಳ ರಾಜನಾಗಿ ಯಥಾವಿಧಿಯಾಗಿ ಅಭಿಷೇಕಿಸಿದರು. ಅಲ್ಲಿದ್ದ ಸರ್ಪಗಳಿಂದ ಯಾವ ಭಯವೂ ಇಲ್ಲ. ತನ್ನದೇ ತೇಜಸ್ಸಿನಿಂದ ಬೆಳಗುತ್ತಿದ್ದ ಬಲರಾಮನು ಅಲ್ಲಿ ಕೂಡ ವಿಧಿವತ್ತಾಗಿ ವಿಪ್ರರಿಗೆ ರತ್ನಸಂಚಯಗಳನ್ನು ದಾನವನ್ನಾಗಿತ್ತು ಪೂರ್ವ ದಿಕ್ಕಿಗೆ ಪ್ರಯಾಣಿಸಿದನು.

ಅನೇಕ ತೀರ್ಥಗಳಲ್ಲಿ ಮಿಂದು ಹೃಷ್ಟನಾಗಿ ಲಾಂಗಲಿಯು ದ್ವಿಜರಿಗೆ ಧನವನ್ನು ದಾನವನ್ನಾಗಿತ್ತು ತಪಸ್ವಿಗಳೊಡನೆ ಮುಂದುವರೆದನು. ಅಲ್ಲಿದ್ದ ಋಷಿಸಂಘಗಳಿಗೆ ಅಭಿವಂದಿಸಿ ಹಲಾಯುಧ ರಾಮನು ಋಷಿಗಳಿಂದ ಸೇವಿತ ಮಹಾ ತೀರ್ಥಕ್ಕೆ ಆಗಮಿಸಿದನು. ಅಲ್ಲಿ ನೈಮಿಷಾರಣ್ಯವಾಸಿಗಳಾಗಿದ್ದ ಮಹಾತ್ಮ ಋಷಿಗಳಿಗೋಸ್ಕರವಾಗಿ ಸರಸ್ವತಿಯು ಪೂರ್ವಕ್ಕೆ ತಿರುಗಿ ಹರಿಯುತ್ತಿದ್ದಳು. ಬಲರಾಮನು ತಿರುಗಿದ್ದ ಆ ಶ್ರೇಷ್ಠ ನದಿಯನ್ನು ನೋಡಿ ವಿಸ್ಮಿತನಾದನು. ಅಲ್ಲಿದ್ದ ಅನೇಕ ಲತಾಕುಂಜಗಳನ್ನೂ ಮತ್ತು ಆ ನದಿಯು ತಿರುಗಿಕೊಂಡಿರುವುದನ್ನೂ ನೋಡಿ ಮಹಾತ್ಮ ರಾಮನಿಗೆ ಅಚ್ಚರಿಯುಂಟಾಯಿತು. ಯದುನಂದನನು ಅಲ್ಲಿ ಕೂಡ ವಿಧಿವತ್ತಾಗಿ ಸ್ನಾನಾಚಮನೀಯಗಳನ್ನು ಮಾಡಿ ದ್ವಿಜಾತಿಯವರಿಗೆ ವಿವಿಧ

ಭಾಂಡಗಳನ್ನು ದಾನಮಾಡಿದನು. ಬ್ರಾಹ್ಮಣರಿಗೆ ವಿವಿಧ ಭಕ್ಷ್ಯ-ಪಾನೀಯಗಳನ್ನು ಒದಗಿಸಿಕೊಟ್ಟನು. ದ್ವಿಜಾತಿಯವರಿಂದ ಗೌರವಿಸಲ್ಪಟ್ಟ ಹಲಾಯುಧ ಬಲರಾಮನು ಮುಂದೆ ಪ್ರಯಾಣ ಬೆಳೆಸಿ ನಾನಾ ದ್ವಿಜಗಣ ಸಹಸ್ರರಿಂದ ಕೂಡಿದ್ದ ಸರಸ್ವತಿಯ ತೀರ್ಥಗಳಲ್ಲಿಯೇ ಅತಿ ಶ್ರೇಷ್ಠವಾದ ಸಪ್ತಸಾರಸ್ವತೀ ತೀರ್ಥಕ್ಕೆ ಬಂದನು. ಆ ಕ್ಷೇತ್ರವು ಬದರ, ಇಂಗುದ, ಕಾಶ್ಮರ್ಯ, ಪ್ಲಕ್ಷ, ಅಶ್ವತ್ಥ, ವಿಭೀತಕ, ಪನಸ, ಪಲಾಶ, ಕರೀರ, ಪೀಲು, ಮೊದಲಾದ ಸರಸ್ವತೀ ತೀರದಲ್ಲಿ ಬೆಳೆಯುವ ಇನ್ನೂ ಅನೇಕ ವೃಕ್ಷಗಳಿಂದ, ಪರೂಷಕವನಗಳು, ಬಿಲ್ವ, ಆಮ್ರ, ಅತಿಮುಕ್ತ, ಪಾರಿಜಾತ ಮೊದಲಾದ ವೃಕ್ಷವನಗಳಿಂದ ಶೋಭಿತವಾಗಿದ್ದು. ಅಲ್ಲಿ ಸಾಕಷ್ಟು ಬಾಳೆಯ ವನಗಳಿದ್ದು ಸುಂದರವಾಗಿ ಮನೋರಮವಾಗಿದ್ದವು. ಅಲ್ಲಿ ಕೇವಲ ವಾಯು-ನೀರು-ಫಲ-ಪರ್ಣಗಳನ್ನು ತಿನ್ನುವ ದಂತಲೂಖಲಿಕರೂ, ಆಶ್ಮಕುಟ್ಟರೂ ಮತ್ತು ಅನೇಕ ವಾನಪ್ರಸ್ಥರೂ ಸೇರಿಕೊಂಡಿದ್ದರು. ಸ್ವಾಧ್ಯಾಯಿಗಳ ಮಂತ್ರಘೋಷಗಳಿಂದ ಮೊಳಗುತ್ತಿತ್ತು. ಜಿಂಕೆಗಳ ನೂರಾರು ಗುಂಪುಗಳು ಸುತ್ತಲೂ ಸಂಚರಿಸುತ್ತಿದ್ದವು. ಅಹಿಂಸಾವ್ರತನಿಷ್ಠ ಧರ್ಮನಿಷ್ಠ ಅನೇಕ ಜನರಿದ್ದ ಅಲ್ಲಿಯೇ ಮಹಾಮುನಿ ಸಿದ್ಧ ಮಂಕಣನು ತಪಸ್ಸು ಮಾಡುತ್ತಿದ್ದನು.

ಹಲಾಯುಧರಾಮನು ಅಲ್ಲಿ ತಂಗಿ ಆಶ್ರಮವಾಸಿಗಳನ್ನು ಪೂಜಿಸಿ ಮಂಕಣಕನಿಗೆ ಪ್ರೀತಿಯಿಂದ ಶುಭಕರ್ಮಗಳನ್ನು ಮಾಡಿದನು. ದ್ವಿಜಾತಿಯವರಿಗೆ ದಾನಗಳನ್ನು ನೀಡಿ ರಾತ್ರಿಯಲ್ಲಿ ಅಲ್ಲಿಯೇ ಕಳೆದು ಲಾಂಗಲಿಯು ಬೆಳಿಗ್ಗೆ ಎದ್ದು ಮುನಿಸಂಘಗಳನ್ನು ಪೂಜಿಸಿದನು. ಸರ್ವ ಮುನಿಗಳ ಅನುಜ್ಞೆಯನ್ನು ಪಡೆದು, ನೀರಿನಲ್ಲಿ ಸ್ನಾನಾಚಮಗಳನ್ನು ಪೂರೈಸಿ ಮಹಾಬಲ ರಾಮನು ತೀರ್ಥಗಳ ಸಲುವಾಗಿ ತ್ವರೆಮಾಡಿ ಮುಂದುವರೆದನು. ಅನಂತರ ಹಲಾಯುಧನು ಮಹಾಮುನಿಯು ಮುಕ್ತನಾಗಿದ್ದ ಕಪಾಲಮೋಚನ ಎಂಬ ಹೆಸರಿನ ಔಶನಸ ತೀರ್ಥಕ್ಕೆ ಹೋದನು. ಹಿಂದೆ ರಾಮನು ಎಸೆಯಲ್ಪಟ್ಟ ರಾಕ್ಷಸನ ಮಹಾಶಿರಸ್ಸು ಮಹೋದರನೆಂಬ ಮುನಿಯ ಮೊಣಕಾಲಿಗೆ ಅಂಟಿಕೊಂಡುಬಿಟ್ಟಿತ್ತು. ಅಲ್ಲಿಯೇ ಹಿಂದೆ ಮಹಾತ್ಮ ಕಾವ್ಯನು ತಪಸ್ಸನ್ನು ತಪಿಸುತ್ತಿದ್ದಾಗ ಆ ಮಹಾತ್ಮನಿಗೆ ಅಖಿಲ ನೀತಿಗಳೂ ಕಾಣಿಸಿಕೊಂಡವು. ಅಲ್ಲಿಯೇ ಅವನು ದೈತ್ಯ-ದಾನವರ ಯುದ್ಧದ ಕುರಿತು ಯೋಚಿಸುತ್ತಿದ್ದನು. ಬಲರಾಮನು ಆ ಉತ್ತಮ ತೀರ್ಥಪ್ರವರವನ್ನು ತಲುಪಿ ವಿಧಿವತ್ತಾಗಿ ಮಹಾತ್ಮ ಬ್ರಾಹ್ಮಣರಿಗೆ ಸಂಪತ್ತನ್ನು ದಾನವಾಗಿತ್ತನು.

ಅಲ್ಲಿ ಅನೇಕ ದಾನಗಳನ್ನಿತ್ತು ವಿಪ್ರರನ್ನು ಪೂಜಿಸಿ ವೃಷ್ಣಿಪ್ರವರ ಮಾಧವನು ರುಷಂಗುವಿನ ಆಶ್ರಮಕ್ಕೆ ಹೋದನು. ಅಲ್ಲಿಯೇ

ಆರ್ಷ್ಟಿಷೇಣನು ಘೋರ ತಪಸ್ಸನ್ನು ತಪಿಸಿದ್ದನು ಮತ್ತು ಮಹಾಮುನಿ ವಿಶ್ವಾಮಿತ್ರನು ಬ್ರಾಹ್ಮಣ್ಯವನ್ನು ಪಡೆದುಕೊಂಡನು. ಅನಂತರ ಹಲಧರನು ಬ್ರಾಹ್ಮಣರಿಂದ ಸುತ್ತುವರೆಯಲ್ಪಟ್ಟು ರುಷಂಗುವು ದೇಹತ್ಯಾಗಮಾಡಿದ ಸ್ಥಳಕ್ಕೆ ಹೋದನು. ರುಷಂಗು ಬ್ರಾಹ್ಮಣನು ವೃದ್ಧನೂ ನಿತ್ಯ ತಪೋನಿರತನೂ ಆಗಿದ್ದನು. ಬಹಳಷ್ಟು ಚಿಂತಿಸಿ ಅವನು ದೇಹತ್ಯಾಗಮಾಡಲು ನಿಶ್ಚಯಿಸಿದನು. ಆಗ ಆ ಮಹಾತಪಸ್ವಿ ರುಷಂಗುವು ತನ್ನ ಮಕ್ಕಳೆಲ್ಲರನ್ನೂ ಕರೆದು "ನನ್ನನ್ನು ಪೃಥೂದಕಕ್ಕೆ ಕೊಂಡೊಯ್ಯಿರಿ!" ಎಂದು ಹೇಳಿದನು. ಆ ತಪೋಧನರು ಅತ್ಯಂತ ವೃದ್ಧನಾಗಿದ್ದ ತಪೋಧನ ರುಷಂಗುವನ್ನು ಸರಸ್ವತಿಯ ಆ ತೀರ್ಥಕ್ಕೆ ಕೊಂಡೊಯ್ದರು. ಪುತ್ರರು ಆ ಧೀಮಂತನನ್ನು ನೂರಾರು ತೀರ್ಥಗಳಿಂದ ಕೂಡಿದ್ದ, ವಿಪ್ರಸಂಘಗಳು ಸೇವಿಸುತ್ತಿದ್ದ ಪುಣ್ಯ ಸರಸ್ವತೀ ತೀರ್ಥಕ್ಕೆ ಕರೆತಂದರು. ಅಲ್ಲಿ ವಿಧಿವತ್ತಾಗಿ ಸ್ನಾನಮಾಡಿದ ಆ ಸುಮಹಾತಪಸ್ವಿ ಋಷಿಸತ್ತಮನು ತೀರ್ಥಗುಣಗಳನ್ನು ತಿಳಿದು ಸುಪ್ರೀತನಾಗಿ ಸಮೀಪದಲ್ಲಿದ್ದ ಎಲ್ಲಮಕ್ಕಳಿಗೂ ಹೇಳಿದನು:

> "ಸರಸ್ವತಿಯ ಉತ್ತರತೀರದ ಪ್ರಥೂದಕದಲ್ಲಿ ಯಾರು ಜಪಿಸುತ್ತಾ ತಮ್ಮ ಶರೀರವನ್ನೂ ತ್ಯಜಿಸುತ್ತಾರೋ ಅವರಿಗೆ ಮುಂದೆ ಮರಣವು ಕಾಡುವುದಿಲ್ಲ!"

ಅಲ್ಲಿ ಧರ್ಮಾತ್ಮ ಹಲಾಯುಧನು ಮುಳುಗಿ ಸ್ನಾನಾಚಮನೀಯಗಳನ್ನು ಪೂರೈಸಿ ಆ ವಿಪ್ರವತ್ಸಲನು ವಿಪ್ರರಿಗೆ ಅನೇಕ ದಾನಗಳನ್ನಿತ್ತನು.

ಅನಂತರ ಬಲವಾನ್ ಪ್ರತಾಪವಾನ್ ಬಲಭದ್ರನು ಸಿಂಧುದ್ವೀಪಕ್ಕೆ ಹೋದನು. ಅಲ್ಲಿಯೇ ಲೋಕಪಿತಾಮಹ ಭಗವಂತನು ಲೋಕಾಲೋಕಗಳನ್ನು ಸೃಷ್ಟಿಸಿದ್ದನು. ಅಲ್ಲಿಯೇ ಸಂಶಿತವ್ರತ ಋಷಿಸತ್ತಮ ಆರ್ಷ್ಟಿಷೇಣನು ಮಹಾತಪಸ್ಸಿನಿಂದ ಬ್ರಾಹ್ಮಣ್ಯವನ್ನು ಪಡೆದಿದ್ದನು. ಅಲ್ಲಿಯೇ ರಾಜರ್ಷಿ ಸಿಂಧುದ್ವೀಪ, ಮಹಾಮುನಿ ದೇವಾಪಿ, ಮತ್ತು ಮಹಾಮುನಿ ಮಹಾತಪಸ್ವೀ ಉಗ್ರತೇಜಸ್ವೀ ಮಹಾತಪಸ್ವೀ ಭಗವಾನ್ ವಿಶ್ವಾಮಿತ್ರರು ಬ್ರಾಹ್ಮಣ್ಯವನ್ನು ಪಡೆದಿದ್ದರು. ಹಿಂದೆ ಕೃತಯುಗದಲ್ಲಿ ದ್ವಿಜೋತ್ತಮ ಆರ್ಷ್ಟಿಷೇಣನು ಗುರುಕುಲದಲ್ಲಿ ವಾಸಿಸಿಕೊಂಡು ನಿತ್ಯವೂ ಅಧ್ಯಯನದಲ್ಲಿ ತೊಡಗುತ್ತಿದ್ದನು. ನಿತ್ಯವೂ ಗುರುಕುಲದಲ್ಲಿ ವಾಸಿಸಿಕೊಂಡಿದ್ದರೂ ಅವನ ವೇದ-ಆಗಮಗಳ ವಿದ್ಯೆಯು ಸಂಪೂರ್ಣವಾಗಲೇ ಇಲ್ಲ. ನಿರ್ವಿಣ್ಣನಾದ ಅವನು ಮಹಾತಪಸ್ಸನ್ನು ತಪಿಸಿದನು. ಅವನ ಆ ತಪಸ್ಸಿನಿಂದ ಅವನಿಗೆ ಅನುತ್ತಮ ವೇದಗಳು ಪ್ರಾಪ್ತವಾದವು. ಆ ಋಷಿಸತ್ತಮನು ವಿದ್ವಾಂಸನೂ, ವೇದಯುಕ್ತನೂ ಸಿದ್ಧನೂ ಆದನು. ಅಲ್ಲಿದ್ದ ತೀರ್ಥಕ್ಕೆ ಆ ಸುಮಹಾತಪಸ್ವಿಯು ಈ ಮೂರು

ವರಗಳನ್ನಿತ್ತನು:

“ಇಂದಿನಿಂದ ಮಹಾನದಿಯ ಈ ತೀರ್ಥದಲ್ಲಿ ಸ್ನಾನಮಾಡುವ ಮನುಷ್ಯನು ಅಶ್ವಮೇಧದ ಪುಷ್ಕಲ ಫಲವನ್ನು ಪಡೆಯುತ್ತಾನೆ. ಇಂದಿನಿಂದ ಇಲ್ಲಿ ಸರ್ಪಭಯವು ಇರುವುದಿಲ್ಲ. ಮತ್ತು ಅಲ್ಪ ಯತ್ನದಿಂದಲೇ ಪುಷ್ಕಲ ಫಲವು ಪ್ರಾಪ್ತವಾಗುತ್ತದೆ.” ಹೀಗೆ ಹೇಳಿ ಆ ಮಹಾತೇಜಸ್ವಿ ಮುನಿಯು ತ್ರಿದಿವಕ್ಕೆ ತೆರಳಿದನು. ಹೀಗೆ ಆ ಭಗವಾನ್ ಪ್ರತಾಪವಾನ್ ಆರ್ಷ್ಟಿಷೇಣನು ಸಿದ್ಧನಾದನು. ಅದೇ ತೀರ್ಥದಲ್ಲಿ ಸಿಂಧುದ್ವೀಪ ಮತ್ತು ದೇವಾಪಿಗಳು ಮಹಾ ಬ್ರಾಹ್ಮಣ್ಯವನ್ನು ಪಡೆದರು. ಅಲ್ಲಿಯೇ ಜಿತೇಂದ್ರಿಯ ಕೌಶಿಕನೂ ಕೂಡ ತಪೋನಿರತನಾಗಿದ್ದು, ಉತ್ತಮವಾಗಿ ತಪಿಸಿದ ತಪಸ್ಸಿನಿಂದ ಬ್ರಾಹ್ಮಣತ್ವವನ್ನು ಪಡೆದುಕೊಂಡನು. ಆ ಶ್ರೇಷ್ಠ ತೀರ್ಥದಲ್ಲಿ ರಾಮನು ವಿವಿಧ ಸಂಪತ್ತುಗಳನ್ನು – ಹಾಲುನೀಡುವ ಹಸುಗಳನ್ನೂ, ವಾಹನಗಳನ್ನೂ, ಹಾಸಿಗೆಗಳನ್ನೂ, ದಾನವನ್ನಾಗಿತ್ತನು. ಹಾಗೆಯೇ ದ್ವಿಜೋತ್ತಮರನ್ನು ಪೂಜಿಸಿ ಅವನು ಶೋಭಿಸುವ ವಸ್ತ್ರಾಲಂಕಾರಗಳನ್ನೂ, ಭಕ್ಷ್ಯ-ಪಾನೀಯಗಳನ್ನೂ ಸಂತೋಷದಿಂದ ದಾನವಿತ್ತನು.

ಬ್ರಹ್ಮಯೋನಿಯಿಂದ ಯದುನಂದನನು ಆಕೀರ್ಣಕ್ಕೆ ಹೋದನು. ಅಲ್ಲಿ ಪಶುಗೋಸ್ಕರವಾಗಿ ಮಹಾತಪಸ್ವಿ ದಾಲ್ಭ್ಯ ಬಕನು ವಿಚಿತ್ರವೀರ್ಯನ ಮಗ ಧೃತರಾಷ್ಟ್ರನ ರಾಷ್ಟ್ರವನ್ನೇ ಹೋಮಮಾಡಿದನು. ಅದೇ ತೀರ್ಥದಲ್ಲಿ ಉದಾರಬುದ್ಧಿ ಬೃಹಸ್ಪತಿಯು ಅಸುರರ ವಿನಾಶಕ್ಕಾಗಿ ಮತ್ತು ದಿವೌಕಸರ ವೃದ್ಧಿಗಾಗಿ ಮಾಂಸವನ್ನು ಆಹುತಿಯನ್ನಾಗಿತ್ತು ಹೋಮಿಸಿದನು. ಆಗ ಅಸುರರು ಕ್ಷೀಣಿಸಿದರು ಮತ್ತು ಯುದ್ಧದಲ್ಲಿ ವಿಜಯೋಲ್ಲಸಿತ ದೇವತೆಗಳಿಂದ ಭಗ್ನರಾದರು. ಅಲ್ಲಿ ಕೂಡ ವಿಧಿವತ್ತಾಗಿ ಬಲರಾಮನು ಬ್ರಾಹ್ಮಣರಿಗೆ ಕುದುರೆ-ಆನೆ-ಹೇಸರಗತ್ತೆಗಳ ರಥ-ಬೆಲೆಬಾಳುವ ರತ್ನ-ಧನ-ದಾನ್ಯಗಳನ್ನು ಹೇರಳವಾಗಿ ನೀಡಿ ಯಾಯಾತ ತೀರ್ಥಕ್ಕೆ ಹೋದನು. ಅಲ್ಲಿ ನಹುಷನ ಮಗ ಮಹಾತ್ಮ ಯಯಾತಿಯು ಯಜ್ಞಮಾಡಿದಾಗ ಸರಸ್ವತಿಯು ಹಾಲು ತುಪ್ಪಗಳನ್ನು ನೀರಾಗಿ ಹರಿಸಿದ್ದಳು. ಅಲ್ಲಿಯೇ ಯಾಗಮಾಡಿ ಪುರುಷವ್ಯಾಘ್ರ ಪೃಥಿವೀಪತಿ ಯಯಾತಿಯು ಪುಷ್ಕಲ ಲೋಕಗಳನ್ನು ಪಡೆದು ಮುದಿತನಾಗಿ ಮೇಲೆ ಏರಿದನು. ಯಯಾತಿಯು ಯಜಮಾನನಾಗಿದ್ದಾಗ ಅಲ್ಲಿ ಸರಸ್ವತಿಯು ಮಹಾತ್ಮ ಬ್ರಾಹ್ಮಣರು ಬಯಸಿದುದೆಲ್ಲವನ್ನೂ ಒದಗಿಸಿಕೊಟ್ಟಳು. ಎಲ್ಲೆಲ್ಲಿ ವಿಪ್ರರು ಯಾವ್ಯಾವ ಆಸೆಗಳನ್ನು ಬಯಸಿದರೋ ಅಲ್ಲಲ್ಲಿ ಆ ಸರಿತಶ್ರೇಷ್ಠೆಯು ಅನೇಕ ರಸಗಳನ್ನು ಸೃಷ್ಟಿಸಿದಳು. ಗಂಧರ್ವರೊಂದಿಗೆ ದೇವತೆಗಳೂ ಕೂಡ ಆ

ಯಜ್ಞದ ವೈಭವವನ್ನು ಕಂಡು ಪ್ರೀತರಾದರು. ಆ ಯಜ್ಞಸಂಪದವನ್ನು ನೋಡಿ ಮನುಷ್ಯರು ವಿಸ್ಮಿತರಾದರು.

ಅನಂತರ ತಾಲಕೇತು ಬಲರಾಮನು ಮಹಾಭಯಂಕರ ವೇಗದಿಂದ ಹರಿಯುವ ವಸಿಷ್ಠಾಪವಾಹ ತೀರ್ಥಕ್ಕೆ ಹೋದನು. ಅಲ್ಲಿಯೂ ಕೂಡ ಸ್ನಾನಾಚಮನೀಯಗಳನ್ನು ಮಾಡಿ ಅನೇಕ ವಿಧದ ದಾನಗಳನ್ನು ನೀಡಿ ಆರ್ಯಕರ್ಮದ ಧರ್ಮವನ್ನು ಪಡೆದು ಸೋಮನ ಮಹಾತೀರ್ಥಕ್ಕೆ ಹೋದನು. ಅಲ್ಲಿ ಹಿಂದೆ ಸಾಕ್ಷಾತ್ ಸೋಮನು ವಿಧಿವತ್ತಾಗಿ ರಾಜಸೂಯಯಾಗವನ್ನು ನೆರವೇರಿಸಿದ್ದನು. ಆ ಮುಖ್ಯಕ್ರತುವಿನಲ್ಲಿ ಧೀಮಾನ್ ವಿಪ್ರಮುಖ್ಯ ಮಹಾತ್ಮ ಅತ್ರಿಯು ಹೋತಾರನಾಗಿದ್ದನು, ಆ ಯಜ್ಞದ ಕೊನೆಯಲ್ಲಿ ದೇವತೆಗಳೊಂದಿಗೆ ದಾನವ-ದೈತ್ಯ-ರಾಕ್ಷಸರ ಮಹಾ ತಾರಕ ಎಂಬ ಹೆಸರಿನ ಅತಿ ತೀವ್ರ ಸಂಗ್ರಾಮವು ನಡೆಯಿತು. ಆ ಸಂಗ್ರಾಮದಲ್ಲಿ ಸ್ಕಂದನು ತಾರಕನೆಂಬುವವನನ್ನು ಸಂಹರಿಸಿದನು. ಆ ಸೋಮತೀರ್ಥದಲ್ಲಿಯೇ ದೈತ್ಯರನ್ನು ಅಂತ್ಯಗೊಳಿಸಿದ ಮಹಾಸೇನನು ದೇವತೆಗಳ ಸೇನಾಪತ್ಯವನ್ನು ಪಡೆದುಕೊಂಡನು. ಅಶ್ವತ್ಥವೃಕ್ಷವಿರುವ ಅಲ್ಲಿಯೇ ಸಾಕ್ಷಾತ್ ಕಾರ್ತಿಕೇಯ ಕುಮಾರನು ಸದಾ ನೆಲಸಿರುತ್ತಾನೆ.

ಹಿಂದೆ ಪೂರ್ವದಲ್ಲಿ ಅಪಾಂಪತಿ ವರುಣನು ಸುರಗಣಗಳಿಂದ

ಅಭಿಷಿಕ್ತನಾದ ತೀರ್ಥವು ಔಜಸ ಎಂಬ ಹೆಸರಿನ ತೀರ್ಥವು. ಆ ಶ್ರೇಷ್ಠ ತೀರ್ಥದಲ್ಲಿ ಸ್ನಾನಮಾಡಿ ಸ್ಕಂದನನ್ನು ಅರ್ಚಿಸಿ ಲಾಂಗಲಿ ಬಲರಾಮನು ಬ್ರಾಹ್ಮಣರಿಗೆ ಚಿನ್ನ-ವಸ್ತ್ರ-ಆಭರಣಗಳನ್ನು ದಾನಮಾಡಿದನು. ಆ ಪೂಜ್ಯ ಶ್ರೇಷ್ಠ ತೀರ್ಥದಲ್ಲಿ ನೀರನ್ನು ಮುಟ್ಟಿ ರಾತ್ರಿಯನ್ನು ಕಳೆದ ಲಾಂಗಲಿಯು ಪ್ರೀತಮನಸ್ಕನಾಗಿ ಹರ್ಷಿತನಾದನು. ರಾಮನು ಅಲ್ಲಿ ಕೂಡ ಸ್ನಾನಮಾಡಿ, ವಿವಿಧ ಸಂಪತ್ತುಗಳನ್ನು ದಾನವನ್ನಾಗಿತ್ತು, ಅಗ್ನಿಯು ಶಮೀ ಮರದಲ್ಲಿ ಕಾಣದಂತೆ ಅಡಗಿಕೊಂಡಿದ್ದ ಆ ಅಗ್ನಿತೀರ್ಥಕ್ಕೆ ಹೋದನು.

ಲೋಕಾಲೋಕಗಳು ವಿನಾಶವಾಗತೊಡಗಿದಾಗ ದೇವತೆಗಳೆಲ್ಲರೂ ಸೇರಿ ಸರ್ವಲೋಕಪಿತಾಮಹ ಮಹಾತ್ಮನ ಬಳಿಸಾರಿ ಹೇಳಿದರು:

> “ಭಗವಾನ್! ಅಗ್ನಿಯು ಕಾಣದಂತಾಗಿದ್ದಾನೆ. ಕಾರಣವೇನೆಂದು ತಿಳಿಯದು! ಸರ್ವಲೋಕಗಳ ಕ್ಷಯವಾಗಬಾರದೆಂದು ಅಗ್ನಿಯನ್ನು ಹುಡುಕಿಕೊಡಬೇಕು!”

ಭೃಗುವಿನ ಶಾಪದಿಂದ ಅತ್ಯಂತ ಭೀತನಾಗಿ ಪ್ರತಾಪವಾನ್ ಭಗವಾನ್ ಜಾತವೇದನು ಶಮೀವೃಕ್ಷದಲ್ಲಿ ಸೇರಿಕೊಂಡು ಅದೃಶ್ಯನಾಗಿಬಿಟ್ಟಿದ್ದನು. ವಹ್ನಿಯು ಹಾಗೆ ಪ್ರನಷ್ಟನಾಗಲು ವಾಸವನೊಂದಿಗೆ ಸರ್ವ ದೇವತೆಗಳೂ ತುಂಬಾ ದುಃಖಿತರಾಗಿ ನಷ್ಟನಾದ ಅಗ್ನಿಯನ್ನು

ಹುಡುಕಿದರು. ಅನಂತರ ಅಗ್ನಿತೀರ್ಥಕ್ಕೆ ಬಂದು ಅಲ್ಲಿ ಶಮೀವೃಕ್ಷದ ಪೊಟರೆಯಲ್ಲಿ ಯಥಾವಿಧಿಯಾಗಿ ವಾಸಿಸುತ್ತಿದ್ದ ಜ್ವಲನನನ್ನು ನೋಡಿದರು. ಬೃಹಸ್ಪತಿಯೇ ಮೊದಲಾದ ಸರ್ವ ದೇವತೆಗಳೂ ವಾಸವನೊಂದಿಗೆ ಜ್ವಲನನನ್ನು ಕಂಡು ಹರ್ಷಿತರಾದರು. ಅವರು ಪುನಃ ಹಿಂದಿರುಗಲು, ಬ್ರಹ್ಮವಾದಿ ಭೃಗುವು ಏನು ಹೇಳಿ ಶಾಪವನ್ನಿತ್ತಿದ್ದನೋ ಹಾಗೆಯೇ ಅಗ್ನಿಯು ಸರ್ವಭಕ್ಷಕನಾದನು.

ಬಲರಾಮನು ಅಲ್ಲಿ ಸ್ನಾನಮಾಡಿ ಎಲ್ಲಿ ಸರ್ವಲೋಕಪಿತಾಮಹ ಭಗವಾನನು ಸೃಷ್ಟಿಸಿದನೋ ಆ ಬ್ರಹ್ಮಯೋನಿಗೆ ಹೋದನು. ಹಿಂದೆ ಪ್ರಭು ಬ್ರಹ್ಮನು ದೇವತೆಗಳೊಂದಿಗೆ ಅಲ್ಲಿ ಸ್ನಾನಮಾಡಿ ಯಥಾವಿಧಿಯಾಗಿ ದೇವತೆಗಳ ಆಹಾರಗಳನ್ನು ಸೃಷ್ಟಿಸಿದನು. ಅಲ್ಲಿ ಸ್ನಾನಮಾಡಿ ವಿವಿಧ ಸಂಪತ್ತುಗಳನ್ನು ದಾನವಾಗಿತ್ತು ಬಲರಾಮನು ಕುಬೇರತೀರ್ಥಕ್ಕೆ ಹೋದನು. ಅಲ್ಲಿ ಪ್ರಭು ಐಲಬಿಲ ಕುಬೇರನು ಮಹಾ ತಪಸ್ಸನ್ನು ತಪಿಸಿ ಧನಾಧಿಪತ್ಯವನ್ನು ಪಡೆದಿದ್ದನು. ಅಲ್ಲಿಯೇ ಧನ-ನಿಧಿಗಳು ಕುಬೇರನನ್ನು ಸೇವಿಸತೊಡಗಿದವು. ಲಾಂಗಲಿಯು ಅಲ್ಲಿ ಹೋಗಿ ಸ್ನಾನಮಾಡಿ ವಿಧಿವತ್ತಾಗಿ ಬ್ರಾಹ್ಮಣರಿಗೆ ಧನವನ್ನಿತ್ತನು. ಅಲ್ಲಿಯೇ ಹಿಂದೆ ಸುಮಹಾತ್ಮ ಕುಬೇರನು ವಿಪುಲ ತಪಸ್ಸನ್ನು ತಪಿಸಿದ್ದ ಉತ್ತಮ ಕಾನನವನ್ನು ನೋಡಿದನು. ಅಲ್ಲಿಯೇ ರಾಜಾ ಕುಬೇರನು

ಧನಾಧಿಪತ್ಯವನ್ನೂ ಅಮಿತತೇಜಸ್ವಿ ರುದ್ರನೊಂದಿಗೆ ಸಖ್ಯವನ್ನೂ ಪಡೆದಿದ್ದನು. ಅಲ್ಲಿಯೇ ಮಹಾಬಾಹು ಧನಪತಿಯು ಸುರತ್ವವನ್ನೂ, ಲೋಕಪಾಲತ್ವವನ್ನೂ, ನಲಕೂಬರನೆನ್ನುವ ಪುತ್ರನನ್ನೂ ಪಡೆದನು. ಅಲ್ಲಿಯೇ ಮರುದ್ಗಣಗಳಿಂದ ಅಭಿಷಿಕ್ತನಾದ ಅವನು ನೈರುತ್ಯದ ಮತ್ತು ಐಶ್ವರ್ಯಗಳ ಅಧಿಪತ್ಯವನ್ನೂ, ಹಂಸಯುಕ್ತ-ಮನೋರಮ-ದಿವ್ಯ ಪುಷ್ಪಕ ವಿಮಾನವನ್ನು ಪಡೆದನು. ಶ್ವೇತಗಂಧಾನುಲಿಪ್ತ ಬಲರಾಮನು ಅಲ್ಲಿ ಸ್ನಾನಮಾಡಿ, ಪುಷ್ಕಲ ದಾನಗಳನ್ನಿತ್ತು ತ್ವರೆಮಾಡಿ ರಾಮತೀರ್ಥಕ್ಕೆ ಹೋದನು. ಬದರಪಾಚನವೆಂಬ ಹೆಸರಿದ್ದ ಅದು ಸರ್ವ ಸತ್ತ್ವಗಳಿಂದ ಕೂಡಿತ್ತು. ಸದಾ ಶುಭ ಪುಷ್ಪ-ಫಲಬರಿತವಾಗಿದ್ದ ಆ ತೀರ್ಥವನ್ನು ಅವನು ಸೇರಿದನು. ವೃಷ್ಣಿಪ್ರವರ ಬಲರಾಮನು ಅಲ್ಲಿಕೂಡ ಸ್ನಾನಮಾಡಿ ಮಹಾದ್ವಿಜರಿಗೆ ಸಂಪತ್ತುಗಳನ್ನಿತ್ತು ಆತ್ಮಸಮಾಹಿತನಾಗಿ ಶಕ್ರತೀರ್ಥಕ್ಕೆ ಹೋದನು. ಬಲರಾಮನು ಇಂದ್ರತೀರ್ಥಕ್ಕೆ ಹೋಗಿ ಅಲ್ಲಿ ಯಥಾವಿಧಿಯಾಗಿ ಸ್ನಾನಮಾಡಿ ಧನರತ್ನಾದಿಗಳನ್ನು ವಿಪ್ರರಿಗೆ ದಾನವನ್ನಾಗಿತ್ತನು. ಅಲ್ಲಿಯೇ ಅಮರರಾಜನು ನೂರು ಕ್ರತುಗಳನ್ನು ನೆರವೇರಿಸಿದ್ದನು ಮತ್ತು ದೇವೇಶನು ಬೃಹಸ್ಪತಿಗೆ ವಿಪುಲ ಧನವನ್ನು ದಾನಮಾಡಿದ್ದನು. ವೇದಪಾರಂಗರು ಹೇಳಿರುವಂತೆ ಎಲ್ಲವನ್ನೂ ಸಜ್ಜುಗೊಳಿಸಿ ವಿವಿಧ ದಕ್ಷಿಣೆಗಳನ್ನಿತ್ತು ಅವನು ನಿರರ್ಗಲವಾಗಿ ಅಲ್ಲಿ ಕ್ರತುಗಳನ್ನು

ಪೂರೈಸಿದನು. ನೂರು ಕ್ರತುಗಳನ್ನು ವಿಧಿವತ್ತಾಗಿ ಪೂರೈಸಿ ಆ ಮಹಾದ್ಯುತಿಯು ಶತಕ್ರತುವೆಂದು ವಿಖ್ಯಾತನಾದನು. ಸರ್ವಪಾಪಗಳನ್ನೂ ತೊಳೆಯುವ ಆ ಶುಭ, ಪುಣ್ಯ, ಸನಾತನ ತೀರ್ಥವು ಇಂದ್ರತೀರ್ಥವೆಂಬ ಹೆಸರಿನಿಂದ ಖ್ಯಾತವಾಯಿತು. ಅಲ್ಲಿ ಕೂಡ ವಿಧಿವತ್ತಾಗಿ ಸ್ನಾನಮಾಡಿ ಮುಸಲಾಯುಧನು ಪಾನೀಯ-ವಸ್ತ್ರ-ಭೋಜನಗಳಿಂದ ಬ್ರಾಹ್ಮಣರನ್ನು ಪೂಜಿಸಿ, ಅಲ್ಲಿಂದ ತೀರ್ಥಶ್ರೇಷ್ಠ ಶುಭ ರಾಮತೀರ್ಥಕ್ಕೆ ಹೋದನು. ಅಲ್ಲಿ ಮಹಾತಪಸ್ವಿ ಮಹಾಭಾಗ ಭಾರ್ಗವ ರಾಮನು ಪೃಥ್ವಿಯ ಸರ್ವ ಕ್ಷತ್ರಿಯ ಪುಂಗವರನ್ನೂ ಸಂಹರಿಸಿ ಮುನಿಸತ್ತಮ ಕಶ್ಯಪನನ್ನು ಉಪಾಧ್ಯಾಯನನ್ನಾಗಿ ಗೌರವಿಸಿ ವಾಜಪೇಯ ಮತ್ತು ನೂರು ಅಶ್ವಮೇಧಗಳನ್ನು ನಡೆಸಿದ್ದನು ಮತ್ತು ಸಾಗರಗಳೊಂದಿಗೆ ಈ ಪೃಥ್ವಿಯನ್ನು ದಕ್ಷಿಣಾರ್ಥವಾಗಿ ಕೊಟ್ಟಿದ್ದನು.

ಆ ಪುಣ್ಯ ತೀರ್ಥ ಶುಭ ದೇಶದಲ್ಲಿ ಅಲ್ಲಿ ಯಥಾನ್ಯಾಯವಾಗಿ ಸ್ನಾನಮಾಡಿ ದ್ವಿಜರನ್ನು ಪೂಜಿಸಿ, ದ್ವಿಜರಿಗೆ ಧನ-ಸಂಪತ್ತುಗಳನ್ನಿತ್ತು, ಮುನಿಗಳಿಗೆ ಅಭಿವಂದಿಸಿ ಶುಭಾನನ ಬಲರಾಮನು ಯಮುನಾ ತೀರ್ಥಕ್ಕೆ ಆಗಮಿಸಿದನು. ಅಲ್ಲಿಯೇ ಅದಿತಿಯ ಪುತ್ರ ಮಹಾಭಾಗ ಸಿತಪ್ರಭ ವರುಣನು ರಾಜಸೂಯ ಯಾಗವನ್ನು ಮಾಡಿದ್ದನು. ಸಂಗ್ರಾಮದಲ್ಲಿ ಮನುಷ್ಯ-ದೇವತೆಗಳನ್ನು ಜಯಿಸಿ ಪರವೀರಹ

ವರುಣನು ಆ ಶ್ರೇಷ್ಠಕ್ರತುವನ್ನು ಕೈಗೊಂಡಿದ್ದನು. ಆ ಶ್ರೇಷ್ಠ ಕ್ರತುವು ನಡೆಯುತ್ತಲೇ ಮೂರುಲೋಕಗಳನ್ನು ನಾಶಪಡಿಸುವ ದೇವ-ದಾನವ ಸಂಗ್ರಾಮವು ಪ್ರಾರಂಭವಾಯಿತು. ಶ್ರೇಷ್ಠ ಕ್ರತು ರಾಜಸೂಯವು ಮುಗಿದನಂತರ ಕ್ಷತ್ರಿಯರಲ್ಲಿ ಮಹಾಘೋರ ಸಂಗ್ರಾಮವು ಹುಟ್ಟುತ್ತದೆ. ಆ ಶ್ರೇಷ್ಠ ತೀರ್ಥದಲ್ಲಿ ಹಲಾಯುಧ ಮಾಧವ ರಾಮನು ಸ್ನಾನಮಾಡಿ ದ್ವಿಜರಿಗೆ ಸಂಪತ್ತನ್ನು ದಾನಮಾಡಿದನು. ಕಮಲೇಕ್ಷಣ ವನಮಾಲಿಯು ದ್ವಿಜರಿಂದ ಸ್ತುತಿಸಲ್ಪಟ್ಟು ಹೃಷ್ಟನಾಗಿ ಅಲ್ಲಿಂದ ಆದಿತ್ಯತೀರ್ಥಕ್ಕೆ ಹೋದನು. ಅಲ್ಲಿಯೇ ಭಗವಾನ್ ಜ್ಯೋತಿರ್ಮಯ ಭಾಸ್ಕರನು ಯಜ್ಞಮಾಡಿ ನಕ್ಷತ್ರಗಳ ಅಧಿಪತ್ಯವನ್ನೂ ಪ್ರಭಾವವನ್ನೂ ಪಡೆದನು. ಆ ಪುಣ್ಯ ಶಿವೆ ಸರಸ್ವತೀ ನದಿಯ ತೀರದ ತಿರ್ಥದಲ್ಲಿಯೇ ವಾಸವನೊಂದಿಗೆ ಸರ್ವ ದೇವತೆಗಳೂ, ವಿಶ್ವೇ ದೇವರೂ, ಮರುತ-ಗಂಧರ್ವ-ಅಪ್ಸರೆಯರೂ, ದ್ವೈಪಾಯನ, ಶುಕ, ಮಧುಸೂದನ ಕೃಷ್ಣ, ಯಕ್ಷ-ರಾಕ್ಷಸ-ಪಿಶಾಚಿಗಳೂ, ಇನ್ನೂ ಅನೇಕ ಸಹಸ್ರರು ಯೋಗಸಿದ್ಧಿಗಳನ್ನು ಪಡೆದರು. ಹಿಂದೆ ವಿಷ್ಣುವು ಅಸುರ ಮಧು-ಕೈಟಭರನ್ನು ಸಂಹರಿಸಿ ಈ ಉತ್ತಮ ತೀರ್ಥಪ್ರವರಲ್ಲಿ ಸ್ನಾನಮಾಡಿದ್ದನು. ಧರ್ಮಾತ್ಮ ದ್ವೈಪಾಯನನೂ ಕೂಡ ಅಲ್ಲಿಯೇ ಸ್ನಾನಮಾಡಿ ಪರಮ ಯೋಗ-ಸಿದ್ಧಿಗಳನ್ನೂ ಪರಮ ಗತಿಯನ್ನೂ ಪಡೆದನು. ಮಹಾತಪಸ್ವಿ ಅಸಿತ ದೇವಲನು ಕೂಡ ಅಲ್ಲಿಯೇ

ಪರಮಯೋಗವನ್ನಾಶ್ರಯಿಸಿ ಋಷಿಯೋಗವನ್ನು ಪಡೆದನು.

ಮಹಾತ್ಮ ಪರಮ ಆರ್ಯಕರ್ಮಿ ಹಲನು ಅಲ್ಲಿ ಕೂಡ ಸ್ನಾನಮಾಡಿ ದ್ವಿಜರಿಗೆ ವಿತ್ತವನ್ನು ದಾನವನ್ನಾಗಿತ್ತು ಧರ್ಮವನ್ನು ಗಳಿಸಿ, ಮಹಾ ಸೋಮತೀರ್ಥಕ್ಕೆ ಹೋದನು. ಅಲ್ಲಿಯೇ ತಾರಕಾಮಯ ಮಹಾ ಸಂಗ್ರಾಮವೂ ನಡೆದಿತ್ತು. ಅಲ್ಲಿ ಕೂಡ ಸ್ನಾನಮಾಡಿ ದಾನಗಳನ್ನಿತ್ತು ಆತ್ಮವಾನ್ ಬಲರಾಮನು ಧರ್ಮಾತ್ಮ ಸಾರಸ್ವತ ಮುನಿಯ ತೀರ್ಥಕ್ಕೆ ಬಂದನು. ಅಲ್ಲಿ ಕೂಡ ಮಹಾಬಲ ಕೇಶವನ ಅಣ್ಣ ರೌಹಿಣೇಯನು ಸಂಪತ್ತನ್ನು ದಾನವನ್ನಾಗಿತ್ತು ಸಂತೋಷದಿಂದ ಕ್ರಮೇಣವಾಗಿ ವೃದ್ಧಕನ್ಯೆಯೆಂದು ಮಹಾಖ್ಯಾತಿಹೊಂದಿದ್ದ ತೀರ್ಥಕ್ಕೆ ಹೋದನು. ಅಲ್ಲಿರುವಾಗಲೇ ಹಲಾಯುಧನು ಶಲ್ಯನು ಹತನಾದುದನ್ನು ಕೇಳಿದ್ದನು. ಅಲ್ಲಿ ಕೂಡ ಪರಂತಪನು ದ್ವಿಜಾತಿಗಳಿಗೆ ದಾನಗಳನ್ನಿತ್ತನು. ಪಾಂಡವರಿಂದ ಸಂಗ್ರಾಮದಲ್ಲಿ ಹತನಾದ ಶಲ್ಯನ ಕುರಿತು ಶೋಕಿಸಿದನು. ಅನಂತರ ಸಮಂತಪಂಚಕ ದ್ವಾರದಿಂದ ಹೊರಟು ಮಾಧವ ರಾಮನು ಕುರುಕ್ಷೇತ್ರದ ಫಲಗಳ ಕುರಿತು ಋಷಿಗಣಗಳನ್ನು ಪ್ರಶ್ನಿಸಿದನು. ಯದುಸಿಂಹನು ಕುರುಕ್ಷೇತ್ರಫಲದ ಕುರಿತು ಕೇಳಲು ಆ ಮಹಾತ್ಮರು ಅವನಿಗೆ ಯಥಾವತ್ತಾಗಿ ಎಲ್ಲವನ್ನೂ ತಿಳಿಸಿಹೇಳಿದರು. ಅನಂತರ ಸಾತ್ವತನು ಕುರುಕ್ಷೇತ್ರವನ್ನು ನೋಡಿ ಅಲ್ಲಿ ದಾನಗಳನ್ನಿತ್ತು

ಅಲ್ಲಿಯೇ ಇದ್ದ ದಿವ್ಯ ಮಹಾ ಆಶ್ರಮವೊಂದಕ್ಕೆ ಹೋದನು. ಆ ಪುಣ್ಯಾಶ್ರಮದಲ್ಲಿ ಹಿಪ್ಪೆ, ಮಾವು, ಅಶ್ವತ್ಥ, ಆಲ, ಚಿರಬಿಲ್ವ, ಹಲಸು, ಮತ್ತಿ ಮೊದಲಾದ ವೃಕ್ಷಸಂಕುಲಗಳಿದ್ದವು. ಪುಣ್ಯಲಕ್ಷಣಗಳಿಂದ ಕೂಡಿದ್ದ ಆ ಮುಖ್ಯ ಆಶ್ರಮವನ್ನು ಕಂಡು ಯಾದವಶ್ರೇಷ್ಠನು ಅಲ್ಲಿದ್ದ ಋಷಿಗಳೆಲ್ಲರನ್ನೂ "ನಿಮ್ಮ ಈ ಆಶ್ರಮವು ಯಾರದ್ದು?" ಎಂದು ಪ್ರಶ್ನಿಸಿದನು. ಅವರೆಲ್ಲ ಮಹಾತ್ಮರು ಹಲಾಯುಧನಿಗೆ ಹೇಳಿದರು:

> "ರಾಮ! ಹಿಂದೆ ಈ ಆಶ್ರಮವು ಯಾರದ್ದಾಗಿತ್ತೆಂದು ನಾವು ವಿಸ್ತರಿಸಿ ಹೇಳುತ್ತೇವೆ. ಕೇಳು. ಹಿಂದೆ ಇಲ್ಲಿ ದೇವ ವಿಷ್ಣುವು ಉತ್ತಮ ತಪಸ್ಸನ್ನು ತಪಿಸಿದನು. ಇಲ್ಲಿಯೇ ಅವನು ವಿವಿಧ ಸನಾತನ ಯಜ್ಞಗಳನ್ನು ನೆರವೇರಿಸಿದನು. ಇಲ್ಲಿಯೇ ಕೌಮಾರ್ಯದಿಂದಲೇ ಬ್ರಹ್ಮಚಾರಿಣಿಯಾಗಿದ್ದ ಯೋಗಯುಕ್ತಳಾಗಿ ತಪಃಸಿದ್ಧಿಯನ್ನು ಪಡೆದು ಸ್ವರ್ಗವನ್ನು ಸೇರಿದ ಸಿದ್ಧೆ ತಪಸ್ವಿನೀ ಬ್ರಾಹ್ಮಣಿಯು ಇರುತ್ತಿದ್ದಳು. ಅವಳು ಮಹಾತ್ಮ ಶಾಂಡಿಲ್ಯನ ಮಗಳು. ಧೃತವ್ರತೆ, ಸಾಧ್ವೀ, ಬ್ರಹ್ಮಚಾರಿಣೀ ಮತ್ತು ನಿಯತೆಯಾಗಿದ್ದಳು. ಅವಳು ಪರಮಯೋಗವನ್ನು ಪಡೆದು ಅನುತ್ತಮ ಸ್ವರ್ಗಕ್ಕೆ ಹೋದಳು. ಈ ಆಶ್ರಮದಲ್ಲಿ ಅಶ್ವಮೇಧದ ಶುಭ ಫಲವನ್ನು ಪಡೆದು

ಸ್ವರ್ಗಕ್ಕೆ ಹೋದ ಆ ಮಹಾಭಾಗೆಯನ್ನು ನಿಯತಾತ್ಮರು ಪೂಜಿಸುತ್ತಾರೆ.”

ಹಿಮಾಲಯದ ಪಾರ್ಶ್ವದಲ್ಲಿದ್ದ ಅ ಪುಣ್ಯಾಶ್ರಮಕ್ಕೆ ಹೋಗಿ ನೋಡಿ ಯದುಪುಂಗವನು ಅಲ್ಲಿದ್ದ ಋಷಿಗಳನ್ನು ಅಭಿವಂದಿಸಿದನು. ನಂತರ ಎಲ್ಲವನ್ನೂ ಭುಜಗಳ ಮೇಲೆ ಹೊತ್ತು ಪರ್ವತವನ್ನು ಏರಲು ಉಪಕ್ರಮಿಸಿದನು. ಆ ಪರ್ವತದಮೇಲೆ ಸ್ವಲ್ಪ ದೂರ ಹೋಗುತ್ತಲೇ ಬಲಶಾಲಿ ತಾಲಧ್ವಜನು ಪುಣ್ಯವಾದ ಶ್ರೇಷ್ಠ ತೀರ್ಥ, ಸರಸ್ವತಿಯ ಉಗಮಸ್ಥಾನ, ಪ್ಲಕ್ಷಪ್ರಸ್ರವಣವನ್ನು ನೋಡಿ ಪರಮ ವಿಸ್ಮಿತನಾದನು. ನಂತರ ಅವನು ತೀರ್ಥಪ್ರವರ ಉತ್ತಮ ಕಾರಪಚನವನ್ನು ತಲುಪಿದನು. ಅಲ್ಲಿ ಕೂಡ ಬಹಾಬಲ ಹಲಾಯುಧನು ದಾನವನ್ನು ನೀಡಿ ಶೀತಲ ನೀರಿನಲ್ಲಿ ಸ್ನಾನಮಾಡಿ ಅಲ್ಲಿಂದ ಮುಂದುವರೆದನು. ಕಾರಪಚನದಿಂದ ಅವನು ಯಮುನೆಯ ತೀರದಲ್ಲಿದ್ದ ಮಿತ್ರಾವರುಣರ ಆಶ್ರಮವನ್ನು ತಲುಪಿ ಪರಮಪ್ರೀತನಾದನು. ಅಲ್ಲಿ ಹಿಂದೆ ಇಂದ್ರ, ಅಗ್ನಿ ಮತ್ತು ಯಮರು ಪ್ರಸನ್ನತೆಯನ್ನು ಪಡೆದುಕೊಂಡಿದ್ದರು. ಅಲ್ಲಿ ಕೂಡ ಆ ಧರ್ಮಾತ್ಮ ಮಹಾಬಲ ಯದುಪುಂಗವನು ಸ್ನಾನಮಾಡಿ, ಋಷಿಗಳು ಮತ್ತು ಸಿದ್ಧರ ಸಹಿತ ಕುಳಿತು ಶುಭ್ರ ಕಥೆಗಳನ್ನು ಕೇಳಿದನು.

ಹಾಗೆ ಅವರೊಡನೆ ಉಳಿದುಕೊಂಡಿರಲು, ರಾಮನಿದ್ದ ಪ್ರದೇಶಕ್ಕೆ

ಭಗವಾನ್ ಋಷಿ ನಾರದನು ಆಗಮಿಸಿದನು. ಆ ಮಹಾತಪಸ್ವಿಯು ಜಟಾಮಂಡಲವನ್ನು ಧರಿಸಿದ್ದನು. ಸ್ವರ್ಣವರ್ಣದ ನಾರುಮಡಿಯನ್ನುಟ್ಟಿದ್ದನು. ಹೇಮದಂಡವನ್ನೂ ಕಮಂಡಲುವನ್ನೂ ಹಿಡಿದಿದ್ದನು. ನೃತ್ಯಗೀತೆಗಳಲ್ಲಿ ಕುಶಲನಾಗಿದ್ದ ದೇವಬ್ರಾಹ್ಮಣಪೂಜಿತನಾಗಿದ್ದ ಅವನು ಸುಖಶಬ್ಧವುಳ್ಳ ಕಚ್ಛಪೀ ಎಂಬ ಮನೋರಮ ವೀಣೆಯನ್ನು ಹಿಡಿದಿದ್ದನು. ನಿತ್ಯವೂ ಕಲಹಗಳನ್ನುಂಟುಮಾಡುವ ಆ ಕಲಹಪ್ರಿಯನು ರಾಮನು ಇದ್ದ ಪ್ರದೇಶಕ್ಕೆ ಆಗಮಿಸಿದನು. ಅವರೆಲ್ಲರೂ ಮೇಲೆದ್ದು ಯತವ್ರತನನ್ನು ಪೂಜಿಸಿದರು. ನಂತರ ಅವನು ಕುರುಗಳ ಸಮಾಚಾರವೇನೆಂದು ದೇವರ್ಷಿಯನ್ನು ಪ್ರಶ್ನಿಸಿದನು. ಸರ್ವಧರ್ಮಗಳನ್ನು ತಿಳಿದಿರುವ ನಾರದನು ಕುರುಸಂಕ್ಷಯದ ಕುರಿತು ನಡೆದಂತೆ ಎಲ್ಲವನ್ನೂ ಹೇಳಿದನು.

ಆಗ ರೌಹಿಣೇಯನು ದೀನಸ್ವರದಲ್ಲಿ ನಾರದನಿಗೆ ಹೇಳಿದನು:

> “ತಪೋಧನ! ಕ್ಷತ್ರಿಯರಿಗೆ ಎಂಥಹ ದುರವಸ್ಥೆಯುಂಟಾಯಿತು! ಅಲ್ಲಿದ್ದ ನೃಪರಿಗೇನಾಯಿತು? ಈ ಹಿಂದೆ ನಾನು ಇದರ ಕುರಿತು ಅಲ್ಲಲ್ಲಿ ಕೇಳುತ್ತಿದ್ದೆನು. ಆದರೆ ನನ್ನಲ್ಲಿ ವಿಸ್ತಾರವಾಗಿ ನಿನ್ನಿಂದ ಕೇಳಲು ಕುತೂಹಲವುಂಟಾಗಿದೆ.”



ನಾರದನು ಹೇಳಿದನು:

"ಎಲ್ಲರಿಗಿಂತ ಮೊದಲು ಭೀಷ್ಮನು ಹತನಾದನು. ಅನಂತರ ದ್ರೋಣ, ಸಿಂಧುಪತಿ, ವೈಕರ್ತನ ಕರ್ಣ ಮತ್ತು ಅವನ ಮಹಾರಥ ಪುತ್ರರು ಹತರಾದರು. ರೌಹಿಣೇಯ! ಭೂರಿಶ್ರವ, ವೀರ್ಯವಾನ್ ಮದ್ರರಾಜ, ಮತ್ತು ಇನ್ನೂ ಇತರ ಅನೇಕ ಮಹಾಬಲ, ಸಮರದಿಂದ ಹಿಂದಿರುಗದೇ ಇದ್ದ, ರಾಜರು ಮತ್ತು ರಾಜಪುತ್ರರು ಕೌರವನ ಪ್ರೀತಿಗಾಗಿ ಪ್ರಿಯ

ಪ್ರಾಣಗಳನ್ನು ತೊರೆದರು. ನಾನು ನಿನಗೆ ಹೇಳುವುದನ್ನು ಕೇಳು. ಅಲ್ಲಿ ಧಾರ್ತರಾಷ್ಟ್ರನ ಬಲದಲ್ಲಿ ಉಳಿದಿರುವವರು ಕೃಪ, ವೀರ್ಯವಾನ್ ಭೋಜ ಮತ್ತು ವಿಕ್ರಾಂತ ಅಶ್ವತ್ಥಾಮ. ಸೇನೆಗಳು ಭಗ್ನವಾಗಿ ದಿಕ್ಕಾಪಾಲಾಗಿ ಹೋಗಿವೆ. ಸೇನೆಯು ಹತವಾಗಲು ಮತ್ತು ಕೃಪಾದಿಗಳು ಪಲಾಯನಗೈಯಲು ತುಂಬಾ ದುಃಖಿತನಾದ ದುರ್ಯೋಧನನು ದ್ವೈಪಾಯನವೆಂಬ ಹೆಸರಿನ ಸರೋವರವನ್ನು ಹೊಕ್ಕಿದನು. ನೀರನ್ನು ಸ್ತಂಭಿಸಿ ಮಲಗಿದ್ದ ಧಾರ್ತರಾಷ್ಟ್ರನನ್ನು ಕೃಷ್ಣನೊಂದಿಗೆ ಪಾಂಡವರು ಉಗ್ರ ಮಾತುಗಳಿಂದ ನಿಂದಿಸಿದರು. ಎಲ್ಲ ಕಡೆಗಳಿಂದ ಮಾತಿನ ಬಾಣಗಳಿಂದ ಚುಚ್ಚಲ್ಪಟ್ಟ ಬಲವಾನ್ ವೀರ ದುರ್ಯೋಧನನು ಮಹಾ ಗದೆಯನ್ನು ಹಿಡಿದು ಮೇಲೆದ್ದು ಬಂದನು. ಈಗ ಅವನು ಭೀಮನೊಡನೆ ಯುದ್ಧಮಾಡಲು ಹೋಗುತ್ತಿದ್ದಾನೆ. ಅವರಿಬ್ಬರ ನಡುವೆ ಸುದಾರುಣ ಯುದ್ಧವು ನಡೆಯಲಿಕ್ಕಿದೆ. ನಿನ್ನಲ್ಲಿ ಕುತೂಹಲವಿದ್ದರೆ ಈಗಲೇ ಹೊರಡು! ತಡಮಾಡಬೇಡ! ನಿನಗೆ ಇಷ್ಟವಾದರೆ ನಿನ್ನ ಶಿಷ್ಯರ ನಡುವೆ ನಡೆಯುವ ಮಹಾಘೋರ ಯುದ್ಧವನ್ನು ನೋಡು!”

ನಾರದನ ಮಾತನ್ನು ಕೇಳಿ ಅವನು ತನ್ನೊಂದಿಗೆ ಬಂದಿದ್ದ ದ್ವಿಜರ್ಷಭರೆಲ್ಲರನ್ನು ಪೂಜಿಸಿ, ಕಳುಹಿಸಿಕೊಟ್ಟನು, ತನ್ನ ಅನುಯಾಯಿಗಳಿಗೆ ದ್ವಾರಕೆಗೆ ತೆರಳಿ ಎಂದು ಆದೇಶವನ್ನಿತ್ತನು. ಶ್ರೇಷ್ಠ ಪರ್ವತ ಶುಭ ಪ್ಲಕ್ಷಪ್ರಸ್ರವಣದಿಂದ ಕೆಳಗಿಳಿದು, ತೀರ್ಥಗಳ ಮಹಾಫಲಗಳ ಕುರಿತು ಕೇಳಿ ಪ್ರೀತಮನಸ್ಕನಾದ ಅಚ್ಯುತ ರಾಮನು ವಿಪ್ರರ ಸನ್ನಿಧಿಯಲ್ಲಿ ಈ ಗೀತೆಯನ್ನು ಹಾಡಿದನು:

> "ಸರಸ್ವತೀ ತೀರದಲ್ಲಿ ವಾಸಿಸುವುದರಿಂದ ಮನಸ್ಸಿಗೆ ಉಂಟಾಗು ಆಹ್ಲಾದವು ಮತ್ತೆಲ್ಲಿ ಲಭಿಸುತ್ತದೆ? ಸರಸ್ವತೀ ತೀರದಲ್ಲಿ ವಾಸಿಸುವುದರಿಂದ ಲಭಿಸುವ ಗುಣವು ಮತ್ತೆಲ್ಲಿ ದೊರೆಯುತ್ತದೆ? ಸರಸ್ವತೀ ತೀರದಲ್ಲಿದ್ದುಕೊಂಡು ಸ್ವರ್ಗಕ್ಕೆ ಹೋದ ಜನರು ಅಲ್ಲಿಯೂ ಕೂಡ ಸದಾ ಸರಸ್ವತೀ ನದಿಯನ್ನು ಸ್ಮರಿಸಿಕೊಂಡಿರುತ್ತಾರೆ! ಸರ್ವನದಿಗಳಲ್ಲಿ ಸರಸ್ವತಿಯು ಪುಣ್ಯೆಯು. ಸರಸ್ವತಿಯು ಸದಾ ಲೋಕಸುಖಕ್ಕಾಗಿ ಹರಿಯುವಳು. ಸರಸ್ವತಿಯನ್ನು ಸೇರಿದ ದುಷ್ಕೃತ ಜನರು ಇಲ್ಲಿಯಾಗಲೀ ಅಲ್ಲಿಯಾಗಲೀ ಸದಾ ಶೋಕಿಸುವುದಿಲ್ಲ."

ಅನಂತರ ಪ್ರೀತಿಯಿಂದ ಮತ್ತೆ ಮತ್ತೆ ಸರಸ್ವತಿಯನ್ನು ನೋಡುತ್ತಾ ಆ ಪರಂತಪನು ಕುದುರೆಗಳನ್ನು ಹೂಡಿದ್ದ ಶುಭ್ರ ರಥವನ್ನೇರಿದನು.

ಶೀಘ್ರಗಾಮಿ ಆ ರಥದಲ್ಲಿ ಕುಳಿತು ಯದುಪುಂಗವನು ಶಿಷ್ಯರ ಯುದ್ಧವನ್ನು ನೋಡುವ ಸಲುವಾಗಿ ಅವರ ಸಮೀಪಕ್ಕೆ ಆಗಮಿಸಿದನು.

## ಬಲದೇವನ ಆಗಮನ

ಆ ಸುದಾರುಣ ಯುದ್ಧವು ಪ್ರಾರಂಭವಾಗಲಿದ್ದಾಗ, ಸರ್ವ ಮಹಾತ್ಮ ಪಾಂಡವರೂ ಕುಳಿತುಕೊಂಡಿರುವಾಗ, ತನ್ನ ಶಿಷ್ಯರ ನಡುವೆ ಯುದ್ಧವು ನಡೆಯಲಿದೆಯೆಂದು ಕೇಳಿದ ಹಲಾಯುಧ ಬಲರಾಮನು ಅಲ್ಲಿಗೆ ಆಗಮಿಸಿದನು. ಅವನನ್ನು ನೋಡಿ ಪರಮಪ್ರೀತ ನರಾಧಿಪರು ಪೂಜಿಸಿ "ರಾಮ ! ಶಿಷ್ಯರ ಕೌಶಲ ಯುದ್ಧವನ್ನು ನೋಡು !" ಎಂದು ಹೇಳಿದರು. ಆಗ ರಾಮನು ಕೃಷ್ಣ, ಮತ್ತು ಗದಾಪಾಣಿಗಳಾಗಿ ನಿಂತಿದ್ದ ಪಾಂಡವ ಮತ್ತು ಕೌರವ್ಯ ದುರ್ಯೋಧನನನ್ನು ನೋಡಿ ಹೀಗೆಂದನು:

> "ನಾನು ಹೊರಟುಹೋಗಿ ಇಂದಿಗೆ ನಲವತ್ತೆರಡು ದಿನಗಳಾದವು. ಪುಷ್ಯ ನಕ್ಷತ್ರದಲ್ಲಿ ಹೋದ ನಾನು ಶ್ರವಣ ನಕ್ಷತ್ರದಲ್ಲಿ ಹಿಂದಿರುಗಿದ್ದೇನೆ. ಮಾಧವ ! ಶಿಷ್ಯರಿಬ್ಬರ ನಡುವಿನ ಗದಾಯುದ್ಧವನ್ನು ನೋಡಲು ಬಯಸುತ್ತೇನೆ."

ಆಗ ರಾಜಾ ಯುಧಿಷ್ಠಿರನು ಹಲಾಯುಧನನ್ನು ಆಲಂಗಿಸಿ ಸ್ವಾಗತಿಸಿ ಯಥಾವತ್ತಾಗಿ ಅವನ ಕುಶಲವನ್ನು ಕೇಳಿದನು. ಮಹೇಷ್ವಾಸ

ಕೃಷ್ಣಾರ್ಜುನರು ಕೂಡ ಹಲಾಯುಧನನ್ನು ನಮಸ್ಕರಿಸಿ ಅತ್ಯಂತಪ್ರಸನ್ನರಾಗಿ ಪ್ರೇಮಪೂರ್ವಕವಾಗಿ ಆಲಂಗಿಸಿಕೊಂಡರು. ಶೂರ ಮಾದ್ರೀಪುತ್ರರಿಬ್ಬರೂ ಮತ್ತು ಹಾಗೆಯೇ ದ್ರೌಪದಿಯ ಐವರು ಮಕ್ಕಳೂ ಮಹಾಬಲ ರೌಹಿಣೇಯನನ್ನು ನಮಸ್ಕರಿಸಿ ನಿಂತುಕೊಂಡರು. ಆಗ ಭೀಮಸೇನ ಮತ್ತು ಬಲವಾನ್ ದುರ್ಯೋಧನರು ಕೂಡ ಗದೆಗಳನ್ನು ಮೇಲೆತ್ತಿ ಬಲರಾಮನನ್ನು ಗೌರವಿಸಿದರು. ಪುನಃ ಪುನಃ ಅವನನ್ನು ಅಲ್ಲಿಗೆ ಸ್ವಾಗತಿಸಿ “ಮಹಾಬಾಹೋ! ಯುದ್ಧವನ್ನು ನೋಡು!” ಎಂದು ನರಾಧಿಪರು ರೌಹಿಣೇಯ ರಾಮನಿಗೆ ಹೇಳಿದರು. ಆಗ ರಾಮನು ಪಾಂಡವ-ಸೃಂಜಯರನ್ನು ಆಲಂಗಿಸಿ ಪಾಂಡವರ ಮತ್ತು ಎಲ್ಲರ ಕುಶಲವನ್ನೂ ಕೇಳಿದನು. ಹಾಗೆಯೇ ಅವರೂ ಸಹ ಅವನ ಯೋಗಕ್ಷೇಮಗಳನ್ನು ವಿಚಾರಿಸಿದರು. ಮಹಾಮನ ಹಲಿಯೂ ಕೂಡ ಸರ್ವ ಕ್ಷತ್ರಿಯರನ್ನು ಪ್ರತಿಯಾಗಿ ಅಭಿನಂದಿಸಿ ವಯಸ್ಸಿಗೆ ತಕ್ಕಂತೆ ಕುಶಲಸಂಯುಕ್ತ ಮಾತುಗಳನ್ನಾಡಿದನು. ಪ್ರೇಮದಿಂದ ಜನಾರ್ದನ-ಸಾತ್ಯಕಿಯರನ್ನು ಆಲಂಗಿಸಿ ಅವರ ನೆತ್ತಿಗಳನ್ನು ಆಘ್ರಾಣಿಸಿ ಕುಶಲಪ್ರಶ್ನೆಗಳನ್ನು ಕೇಳಿದನು. ಉಪೇಂದ್ರರಿಬ್ಬರು ದೇವೇಶ ಬ್ರಹ್ಮನನ್ನು ಹೇಗೋ ಹಾಗೆ ಮುದದಿಂದ ಅವರಿಬ್ಬರೂ ವಿಧಿವತ್ತಾಗಿ ಹಿರಿಯನನ್ನು ಪೂಜಿಸಿದರು. ಆಗ ಧರ್ಮಸುತನು ರೌಹಿಣೇಯನಿಗೆ “ರಾಮ! ಸಹೋದರರ ಈ ಮಹಾಯುದ್ಧವನ್ನು ನೋಡು!” ಎಂದನು.



ಮಹಾರಥರಿಂದ ಗೌರವಿಸಲ್ಪಟ್ಟು ಪರಮಪ್ರೀತನಾದ ಮಹಾಬಾಹು ಶ್ರೀಮಾನ್ ಕೇಶವಪೂರ್ವಜನು ಅವರ ಮಧ್ಯ ಕುಳಿತುಕೊಂಡನು. ನೀಲವಸ್ತ್ರವನ್ನುಟ್ಟಿದ್ದ ಬಿಳಿಯ ಬಣ್ಣದ ಬಲರಾಮನು ರಾಜರ ಮಧ್ಯದಲ್ಲಿ ಕುಳಿತು ಆಕಾಶದಲ್ಲಿ ನಕ್ಷತ್ರಗಣಗಳ ಮಧ್ಯದಲ್ಲಿದ್ದ ನಿಶಾಕರ ಚಂದ್ರನಂತೆ ಶೋಭಿಸಿದನು. ಆಗ ಧೃತರಾಷ್ಟ್ರನ ನಿನ್ನ ಪುತ್ರರ ವೈರವನ್ನು ಅಂತ್ಯಗೊಳಿಸುವ ರೋಮಹರ್ಷಣ ತುಮುಲಯುದ್ಧವು ಪ್ರಾರಂಭವಾಯಿತು.

## ಭೀಮ-ದುರ್ಯೋಧನರ ಯುದ್ಧಾರಂಭ

ಯುದ್ಧಕಾಮಿಯಾಗಿದ್ದ ಮಹಾಬಾಹು ವೀರ್ಯವಾನ್ ದುರ್ಯೋಧನನು ರಾಮನ ಸಾನ್ನಿಧ್ಯವನ್ನು ನೋಡಿ ಅತ್ಯಂತ ಹರ್ಷಿತನಾದನು. ಲಾಂಗಲಿ ಬಲರಾಮನನ್ನು ನೋಡಿ ರಾಜ ಯುಧಿಷ್ಠಿರನು ಎದ್ದು ಪರಮ ಪ್ರೀತಿಯಿಂದ ಬರಮಾಡಿಕೊಳ್ಳಲು ರಾಮನು ಅವನಿಗೆ ಹೇಳಿದನು:

> “ವಿಶಾಂಪತೇ! ಭೂಮಿಯಲ್ಲಿ ಪ್ರಜಾಪತಿಯ ಉತ್ತರವೇದಿಯೆಂದು ದೇವಲೋಕದಲ್ಲೂ ಪ್ರಸಿದ್ಧವಾದ ಸಮಂತಪಂಚಕಕ್ಕೆ ನಾವು ಶೀಘ್ರವಾಗಿ ಹೋಗೋಣ! ತ್ರೈಲೋಕ್ಯಗಳಲ್ಲಿಯೂ ಮಹಾಪುಣ್ಯತಮವಾಗಿರುವ ಆ

ಸನಾತನ ಕ್ಷೇತ್ರದಲ್ಲಿ ಯುದ್ಧಮಾಡಿ ನಿಧನಗೊಂಡವರು
ಸ್ವರ್ಗಕ್ಕೆ ಸೇರುತ್ತಾರೆ ಎನ್ನುವುದು ನಿಶ್ಚಯ!”

ಹಾಗೆಯೇ ಆಗಲೆಂದು ಹೇಳಿ ಮಹಾರಾಜ ಯುಧಿಷ್ಠಿರನು ಸಮಂತಪಂಚಕಾಭಿಮುಖವಾಗಿ ಹೊರಟನು. ಆಗ ದುರ್ಯೋಧನನು ಮಹಾಗದೆಯನ್ನೆತ್ತಿಕೊಂಡು ಕಾಲ್ನಡುಗೆಯಲ್ಲಿಯೇ ಪಾಂಡವರೊಂದಿಗೆ ಅಲ್ಲಿಗೆ ಹೊರಟನು. ಹಾಗೆ ಕವಚಧಾರಿಯಾಗಿ ಗದೆಯನ್ನು ಹಿಡಿದು ಹೋಗುತ್ತಿದ್ದ ದುರ್ಯೋಧನನನ್ನು ನೋಡಿ ಅಂತರಿಕ್ಷದಲ್ಲಿದ್ದ ದೇವತೆಗಳು “ಸಾಧು! ಸಾಧು!” ಎಂದು ಹೇಳಿ ಗೌರವಿಸಿದರು. ವಾತಿಕ ಚಾರಣರೂ ಅವನನ್ನು ನೋಡಿ ಹರ್ಷಿತರಾದರು. ಪಾಂಡವರಿಂದ ಸುತ್ತುವರೆದಿದ್ದ ಕುರುರಾಜನು ಮದಿಸಿದ ಆನೆಯ ನಡುಗೆಯಲ್ಲಿ ಅವರೊಡನೆ ಹೋಗುತ್ತಿದ್ದನು. ಆಗ ಸರ್ವದಿಕ್ಕುಗಳೂ ಶಂಖ-ಭೇರಿಗಳ ನಿನಾದಗಳಿಂದಲೂ ಶೂರರ ಮಹಾಸ್ವನ ಸಿಂಹನಾದಗಳಿಂದಲೂ ಮೊಳಗಿದವು. ಪಶ್ಚಿಮಾಭಿಮುಖವಾಗಿ ಹೋಗಿ ಸಮಂತಪಂಚಕವನ್ನು ತಲುಪಲು ಎಲ್ಲ ಕಡೆಗಳಿಂದ ಎಲ್ಲರೂ ದುರ್ಯೋಧನನನ್ನು ಸುತ್ತುವರೆದರು. ಸರಸ್ವತಿಯ ದಕ್ಷಿಣದಲ್ಲಿದ್ದ ಆ ಉತ್ತಮ ತೀರ್ಥದಲ್ಲಿ ಮರಳಿಲ್ಲದಿದ್ದ ಪ್ರದೇಶವನ್ನು ಯುದ್ಧಕ್ಕೆ ಆರಿಸಿಕೊಂಡರು. ಆಗ ಮಹಾಕೋಟಿ ಗದೆಯನ್ನು ಹಿಡಿದಿದ್ದ ಕವಚಧ್ರೀ ಭೀಮನು ಗರುಡನ

ರೂಪದಲ್ಲಿ ಹೊಳೆಯುತ್ತಿದ್ದನು.

ರಣದಲ್ಲಿ ಕಿರೀಟವನ್ನು ಕಟ್ಟಿಕೊಂಡು ಕಾಂಚನ ಕವಚವನ್ನು ಧರಿಸಿದ್ದ ದುರ್ಯೋಧನನು ಕಾಂಚನ ಗಿರಿಯಂತೆ ಶೋಭಿಸಿದನು. ಆ ಯುದ್ಧದಲ್ಲಿ ಕವಚಧಾರಿಗಳಾದ ವೀರ ಭೀಮ-ದುರ್ಯೋಧನರಿಬ್ಬರೂ ಕ್ರೋಧಿತ ಆನೆಗಳಂತೆಯೇ ಪ್ರಕಾಶಿಸಿದರು. ರಣಮಂಡಲದ ಮಧ್ಯದಲ್ಲಿ ನಿಂತಿದ್ದ ಆ ಇಬ್ಬರು ಸಹೋದರ ನರರ್ಷಭರು ಉದಯಿಸುತ್ತಿರುವ ಚಂದ್ರ-ಸೂರ್ಯರಂತೆ ಶೋಭಿಸಿದರು. ಪರಸ್ಪರರನ್ನು ವಧಿಸಲು ಇಚ್ಛಿಸುತ್ತಿದ್ದ ಆ ಇಬ್ಬರೂ ಕ್ರುದ್ಧ ಮಹಾಗಜಗಳಂತೆ ಉರಿಯುತ್ತಿರುವ ಕಣ್ಣುಗಳಿಂದ ಅನ್ಯೋನ್ಯರನ್ನು ದುರುಗುಟ್ಟಿ ನೋಡುತ್ತಿದ್ದರು. ಸಂಪ್ರಹೃಷ್ಟಮನಸ್ಕನಾದ ಕೌರವನು ಗದೆಯನ್ನು ಎತ್ತಿಕೊಂಡು ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು, ದೀರ್ಘನಿಟ್ಟುಸಿರು ಬಿಡುತ್ತಾ ಕಟವಾಯಿಯನ್ನು ನೆಕ್ಕಿದನು.

ಆಗ ದುರ್ಯೋಧನನು ಗದೆಯನ್ನೆತ್ತಿಕೊಂಡು ಭೀಮಸೇನನ್ನು ನೋಡಿ ಒಂದು ಆನೆಯು ಇನ್ನೊಂದು ಆನೆಯನ್ನು ಸೆಣೆಸಾಡಲು ಕರೆಯುವಂತೆ ಕರೆದನು. ಹಾಗೆಯೇ ಭೀಮನು ಲೋಹಮಯವಾದ ಗದೆಯನ್ನು ಎತ್ತಿಕೊಂಡು ವನದಲ್ಲಿ ಒಂದು ಸಿಂಹವು ಇನ್ನೊಂದು ಸಿಂಹವನ್ನು ಆಹ್ವಾನಿಸುವಂತೆ ದುರ್ಯೋಧನನ್ನು ಹೋರಾಟಕ್ಕೆ ಆಹ್ವಾನಿಸಿದನು.

ಗದೆಗಳನ್ನು ಹಿಡಿದು ಕೈಗಳನ್ನು ಮೇಲೆತ್ತಿದ್ದ ದುರ್ಯೋಧನ-ವೃಕೋದರರು ರಣದಲ್ಲಿ ಶಿಖರಗಳಿಂದೊಡಗೂಡಿದ ಪರ್ವತಗಳಂತೆ ಪ್ರಕಾಶಿಸಿದರು. ಇಬ್ಬರೂ ಸಂಕ್ರುದ್ಧರಾಗಿದ್ದರು. ಇಬ್ಬರೂ ಭಯಂಕರ ಪರಾಕ್ರಮಿಗಳಾಗಿದ್ದರು. ಇಬ್ಬರೂ ಗದಾಯುದ್ಧದಲ್ಲಿ ಬಲರಾಮನ ಶಿಷ್ಯರಾಗಿದ್ದರು. ಇಬ್ಬರೂ ಮಾಡುವುದರಲ್ಲಿ ಯಮ-ವಾಸವರಂತಿದ್ದರು. ಇಬ್ಬರೂ ವರುಣನ ಮಹಾಬಲವನ್ನು ಪಡೆದಿದ್ದರು. ಯುದ್ಧದಲ್ಲಿ ಇಬ್ಬರೂ ವಾಸುದೇವ, ಬಲರಾಮ ಮತ್ತು ವೈಶ್ರವಣನಂತಿದ್ದರು. ಇಬ್ಬರೂ ಮಧು-ಕೈಟಬರಂತಿದ್ದರು. ಇಬ್ಬರು ಪರಂತಪರೂ ಯುದ್ಧದಲ್ಲಿ ಸುಂದೋಪಸುಂದರಂತಿದ್ದರು. ಕಾಲ ಮತ್ತು ಮೃತ್ಯುವಿನ ಸಮನಾಗಿದ್ದರು. ಶರತ್ಕಾಲದಲ್ಲಿ ವೈಥುನೇಚ್ಛೆಯಿಂದ ಹೆಣ್ಣಾನೆಯ ಸಮಾಗಮಕ್ಕೆ ಮದದಿಂದ ಕೊಬ್ಬಿದ ಎರಡು ಗಂಡಾನೆಗಳು ಪರಸ್ಪರ ಸಂಘರ್ಷಿಸುವಂತೆ ಆ ಬಲೋನ್ಮತ್ತರು ಹೊಡೆದಾಡಿಕೊಳ್ಳಲು ಅನುವುಮಾಡಿಕೊಳ್ಳುತ್ತಿದ್ದರು.

ಆ ಇಬ್ಬರು ಭರತರ್ಷಭರೂ ಮದಿಸಿದ ಆನೆಗಳಂತೆ ಸೆಣೆಸಾಡಲು ನೋಡುತ್ತಿದ್ದರು. ವಿಷಸರ್ಪಗಳಂತೆ ಇಬ್ಬರೂ ಉರಿಯುತ್ತಿರುವ ಕ್ರೋಧವಿಷವನ್ನು ಕಾರುತ್ತಿದ್ದರು. ವಿಕ್ರಮದಿಂದ ಸಮನ್ವಿತರಾದ ಆ ಇಬ್ಬರು ಭರತಶಾರ್ದೂಲ ಅರಿಂದಮರೂ ಕ್ರುದ್ಧರಾಗಿ ಪರಸ್ಪರರನ್ನು

ದುರುಗುಟ್ಟಿ ನೋಡುತ್ತಿದ್ದರು. ಇಬ್ಬರು ಪರಂತಪರೂ ಗದಾಯುದ್ಧದಲ್ಲಿ ಸಿಂಹಗಳಂತೆ ದುರಾಧರ್ಷರಾಗಿದ್ದರು. ಉಗುರು ಮತ್ತು ಕೋರೆದಾಡೆಗಳೇ ಆಯುಧವಾಗಿದ್ದ ವ್ಯಾಘ್ರದಂತೆ ಆ ಇಬ್ಬರು ವೀರರೂ ದುಃಸಾದ್ಯರಾಗಿದ್ದರು. ಪ್ರಜಾಸಂಹಾರದ ಪ್ರಳಯಕಾಲದಲ್ಲಿ ಕ್ಷೋಭೆಗೊಂಡ ಎರಡು ಸಮುದ್ರಗಳೋಪಾದಿಯಲ್ಲಿ ಅವರನ್ನು ಮೀರಲು ಅಸಾಧ್ಯವಾಗಿತ್ತು. ಕ್ರುದ್ಧರಾದ ಆ ಮಹಾರಥರು ಎರಡು ಅಂಗಾರಕಗ್ರಹಗಳಂತೆ ಪರಸ್ಪರರನ್ನು ಸುಡುತ್ತಿದ್ದರು. ಆ ಇಬ್ಬರು ಮಹಾಬಲ ಕುರುಶ್ರೇಷ್ಠರೂ ಪ್ರಳಯಕಾಲದಲ್ಲಿ ಉದಯಿಸುವ ಪ್ರಖರ ಕಿರಣಗಳ ಇಬ್ಬರು ಸೂರ್ಯರಂತೆ ಕಾಣುತ್ತಿದ್ದರು. ಆ ಇಬ್ಬರು ಮಹಾಬಾಹುಗಳು ಕೋಪಗೊಂಡ ಹುಲಿಗಳಂತೆ, ಗುಡುಗುವ ಮೋಡಗಳಂತೆ ಮತ್ತು ಸಿಂಹ-ಕೇಸರಿಗಳಂತೆ ತೋರುತ್ತಿದ್ದರು. ಕುಪಿತ ಗಜಗಳಂತೆ ಮತ್ತು ಪ್ರಜ್ವಲಿಸುವ ಅಗ್ನಿಗಳಂತಿದ್ದ ಆ ಮಹಾತ್ಮರು ಶಿಖರಗಳುಳ್ಳ ಪರ್ವತಗಳಂತೆ ತೋರುತ್ತಿದ್ದರು. ರೋಷಾವೇಸದಿಂದ ಇಬ್ಬರ ತುಟಿಗಳೂ ಅದುರುತ್ತಿದ್ದವು. ಒಬ್ಬರನ್ನೊಬ್ಬರು ತೀಕ್ಷ್ಣದೃಷ್ಟಿಯಿಂದ ನೋಡುತ್ತಿದ್ದರು. ಆ ಇಬ್ಬರು ನರೋತ್ತಮರೂ ಗದೆಗಳನ್ನು ಹಿಡಿದು ಹೊಡೆದಾಡಿದರು. ಇಬ್ಬರೂ ಪರಮಸಂಹೃಷ್ಟರಾಗಿದ್ದರು. ಪರಮ ಸಮ್ಮತಿಯನ್ನು ಹೊಂದಿದ್ದರು. ಉತ್ತಮ ಕುದುರೆಗಳಂತೆ ಕೆನೆಯುತ್ತಿದ್ದರು. ಆನೆಗಳಂತೆ

ಘೂಳಿಡುತ್ತಿದ್ದರು. ಗೂಳಿಗಳಂತೆ ಗುಟುಕುಹಾಕುತ್ತಿದ್ದರು. ದುರ್ಯೋಧನ-ವೃಕೋದರರರು ಬಲೋನ್ಮತ್ತ ದೈತ್ಯರಂತೆಯೇ ಪ್ರಕಾಶಿಸಿದ್ದರು.

ಆಗ ದುರ್ಯೋಧನನು ಸೃಂಜಯರೊಂದಿಗೆ ಉರಿಯುತ್ತಿರುವ ಭಾಸ್ಕರನಂತೆ ನಿಂತಿದ್ದ ಯುಧಿಷ್ಠಿರನಿಗೆ ಇದನ್ನು ಹೇಳಿದನು:

> "ನೃಪಸತ್ತಮರೇ! ನಿಶ್ಚಯವಾಗಿರುವ ನನ್ನ ಮತ್ತು ಭೀಮ ಇಬ್ಬರ ಮಹಾಯುದ್ಧವನ್ನು ಹತ್ತಿರದಲ್ಲಿಯೇ ಕುಳಿತು ನೋಡಿರಿ!"

ಆಗ ಆ ಮಹಾರಾಜಮಂಡಲವು ಕುಳಿತುಕೊಳ್ಳಲು ದಿವಿಯಲ್ಲಿಯ ಆದಿತ್ಯಮಂಡಲದಂತೆ ಕಂಡಿತು. ಅವರ ಮಧ್ಯೆ ಕೇಶವಪೂರ್ವಜನು ಎಲ್ಲಕಡೆಗಳಿಂದ ಗೌರವಿಸಿಕೊಳ್ಳುತ್ತಾ ಕುಳಿತಿದ್ದನು. ರಾಜರ ಮಧ್ಯದಲ್ಲಿದ್ದ ಆ ನೀಲವಸ್ತ್ರಧಾರಿ ಬಿಳೀಪ್ರಭೆಯುಳ್ಳ ರಾಮನು ರಾತ್ರಿಯಲ್ಲಿ ನಕ್ಷತ್ರಗಳಿಂದ ಆವೃತನಾದ ಸಂಪೂರ್ಣ ಚಂದ್ರನಂತೆ ಕಂಡನು. ಆಗ ಗದೆಗಳನ್ನು ಹಿಡಿದಿದ್ದ ದುರಾಸದರಾದ ಅವರಿಬ್ಬರೂ ಅನ್ಯೋನ್ಯರನ್ನು ವಾಗ್ಯುದ್ಧದಿಂದ ನೋಯಿಸತೊಡಗಿದರು. ಅನ್ಯೋನ್ಯರಿಗೆ ಅಪ್ರಿಯವಾದವುಗಳನ್ನು ಹೇಳಿ ಆ ಕುರುಪುಂಗವ ವೀರರಿಬ್ಬರೂ ವೃತ್ರ-ಶಕ್ರರ ಯುದ್ಧವೋ ಎಂಬಂತೆ ಪರಸ್ಪರರನ್ನು

ದುರುಗುಟ್ಟಿ ನೋಡುತ್ತಾ ನಿಂತರು.

ಹರ್ಷದಿಂದ ಮೇಘದಂತೆ ಗರ್ಜಿಸುತ್ತಾ ಮತ್ತು ಹೋರಿಯಂತೆ ಗುರುಟು ಹಾಕುತ್ತಾ ರಣದಲ್ಲಿ ಯುದ್ಧಕ್ಕೆ ಮಹಾತ್ಮ ಕುರುರಾಜನು ಭೀಮನನ್ನು ಯುದ್ಧಕ್ಕೆ ಕರೆಯುತ್ತಿರಲು ಅಲ್ಲಿ ಘೋರರೂಪದ ವಿವಿಧ ಚಿಹ್ನೆಗಳು ಕಾಣಿಸಿಕೊಂಡವು. ಸುನಿರ್ಘಾತಗಳೊಂದಿಗೆ ಚಂಡಮಾರುತಗಳು ಬೀಸಿದವು. ಧೂಳಿನ ಮಳೆಯೇ ಸುರಿಯಿತು. ದಿಕ್ಕುಗಳೆಲ್ಲರಲ್ಲೂ ಕತ್ತಲೆಯು ಕವಿಯಿತು. ನಭಸ್ಥಲವನ್ನು ಸೀಳುವಂತೆ ನೂರಾರು ರೋಮಹರ್ಷಣ ಉಲ್ಕೆಗಳು ಮಹಾಧ್ವನಿಯೊಂದಿಗೆ ನಿರ್ಘಾತಗಳೊಂದಿಗೆ ಬಿದ್ದವು. ಪರ್ವತಿಥಿಯಲ್ಲದಿದ್ದರೂ ರಾಹುವು ಸೂರ್ಯನನ್ನು ನುಂಗಿದನು. ವನ-ವೃಕ್ಷಗಳೊಡನೆ ಭೂಮಿಯು ಮಹಾಕಂಪನದೊಂದಿಗೆ ನಡುಗಿತು. ಕಲ್ಲುಗಳನ್ನು ಸುರಿಸುವ ಬಿರುಸಾದ ಸುಂಟರಗಾಳಿಗಳು ಕೆಳಗೆ ಬೀಸತೊಡಗಿದವು. ಪರ್ವತಗಳ ಶಿಖರಗಳೇ ಕಳಚಿ ಭೂಮಿಯ ಮೇಲೆ ಬಿದ್ದವು. ಬಹುವಿಧ ಆಕಾರಗಳ ಮೃಗಗಳು ಹತ್ತು ದಿಕ್ಕುಗಳಲ್ಲಿಯೂ ಓಡ ತೊಡಗಿದವು. ಘೋರರೂಪೀ ಗುಳ್ಳೇನರಿಗಳು ಪ್ರದೀಪ್ತ ಮುಖಗಳಿಂದ ಸುದಾರುಣವಾಗಿ ಕೂಗತೊಡಗಿದವು. ಮಹಾಘೋರ ರೋಮಾಂಚಕಾರೀ ನಿರ್ಘಾತಗಳುಂಟಾದವು. ಉರಿಯುತ್ತಿದ್ದ ಆಗ್ನೇಯ ದಿಕ್ಕಿನಲ್ಲಿ

ಮೃಗಗಳು ಅಶುಭವಾಗಿ ಕೂಗತೊಡಗಿದವು. ಎಲ್ಲ ಕಡೆಗಳಲ್ಲಿ ಬಾವಿಗಳಲ್ಲಿದ್ದ ನೀರು ಉಕ್ಕಿಬಂದಿತು. ಆಗ ಅಶರೀರ ಮಹಾನಾದಗಳು ಕೇಳಿಬಂದವು.

ಇವೇ ಮೊದಲಾದ ನಿಮಿತ್ತಗಳು ಕಾಣಿಸಿಕೊಳ್ಳಲು ವೃಕೋದರನು ಯುಧಿಷ್ಠಿರನಿಗೆ ಹೇಳಿದನು:

> “ಈ ಮಂದಾತ್ಮ ಸುಯೋಧನನು ರಣದಲ್ಲಿ ನನ್ನನ್ನು ಗೆಲ್ಲಲು ಶಕ್ತನಿಲ್ಲ. ಖಾಂಡವದ ಮೇಲೆ ಅಗ್ನಿಯು ಹೇಗಿ ಸುರಿಯಲ್ಪಟ್ಟಿತೋ ಹಾಗೆ ಇಂದು ನಾನು ಹೃದಯದಲ್ಲಿ ಬಹುಕಾಲ ನಿಗೂಢವಾಗಿದ್ದ ಕ್ರೋಧವನ್ನು ಕೌರವೇಂದ್ರ ಸುಯೋಧನನ ಮೇಲೆ ಸುರಿಯುತ್ತೇನೆ. ಪಾಂಡವ! ಈ ಪಾಪಿ ಕುರುಕುಲಾಧಮನನ್ನು ಗದೆಯಿಂದ ಸಂಹರಿಸಿ ನಿನ್ನ ಹೃದಯದಲ್ಲಿ ಹುದುಗಿರುವ ಮುಳ್ಳನ್ನು ಇಂದು ಕಿತ್ತುಹಾಕುತ್ತೇನೆ. ರಣರಂಗದಲ್ಲಿ ಈ ಪಾಪಕರ್ಮಿಯನ್ನು ಕೊಂದು ನಾನು ಇಂದು ನಿನಗೆ ಕೀರ್ತಿಮಯೀ ಮಾಲೆಯನ್ನು ಹಾಕುತ್ತೇನೆ. ಇಂದು ಗದೆಯಿಂದ ಇವನ ದೇಹವನ್ನು ನೂರಾರು ಚೂರುಗಳನ್ನಾಗಿ ಒಡೆಯದೇ ನಾನು ಪುನಃ ವಾರಣಸಾಹ್ವಯ ನಗರವನ್ನು ನಾನು ಪ್ರವೇಶಿಸುವುದಿಲ್ಲ.

ಮಲಗಿರುವಾಗ ಸರ್ಪಗಳನ್ನು ಬಿಟ್ಟು ಕಚ್ಚಿಸಿದುದು, ಭೋಜನದಲ್ಲಿ ವಿಷವನ್ನಿತ್ತಿದುದು, ಪ್ರಮಾಣಕೋಟಿಯಲ್ಲಿ ಮುಳುಗಿಸಿದುದು, ಜತುಗೃಹದಲ್ಲಿ ಸುಟ್ಟಿದುದು, ಸಭೆಯಲ್ಲಿ ಅಪಮಾನಸಿದುದು, ಸರ್ವವನ್ನೂ ಅಪಹರಿಸಿದುದು, ಒಂದು ವರ್ಷದ ಅಜ್ಞಾತವಾಸ ಮತ್ತು ವನವಾಸಗಳ – ಈ ಇಲ್ಲ ದುಃಖಗಳ ಕೊನೆಗಾಣಿಸುತ್ತೇನೆ. ಈ ಒಂದು ಹಗಲಿನಲ್ಲಿಯೇ ನಾನಿವನನ್ನು ಸಂಹರಿಸಿ ನನ್ನ ಋಣದಿಂದ ಮುಕ್ತನಾಗುತ್ತೇನೆ. ಇಂದು ಈ ದುರ್ಮತಿ ಧಾರ್ತರಾಷ್ಟ್ರನ ಆಯುಷ್ಯ ಮತ್ತು ಮಾತಪಿತೃಗಳ ದರ್ಶನವು ಸಮಾಪ್ತವಾಗುವುದು. ಇಂದು ಶಂತನುವಿನ ಕುಲಕ್ಕೆ ಕಳಂಕಪ್ರಾಯನಾದ ಈ ಕುರುರಾಜನು ಪ್ರಾಣಗಳನ್ನೂ, ಸಂಪತ್ತನ್ನೂ, ರಾಜ್ಯವನ್ನೂ ತೊರೆದು ನೆಲದ ಮೇಲೆ ಮಲಗುತ್ತಾನೆ. ನನ್ನಿಂದ ತನ್ನ ಮಗನು ಹತನಾದನೆಂದು ಕೇಳಿ ಇಂದು ರಾಜಾ ಧೃತರಾಷ್ಟ್ರನೂ ಕೂಡ ಶಕುನಿಯ ಬುದ್ಧಿಯಿಂದ ಹುಟ್ಟಿದ್ದ ಅಶುಭಕರ್ಮಗಳನ್ನು ಸ್ಮರಿಸಿಕೊಳ್ಳುತ್ತಾನೆ!”

ಹೀಗೆ ಹೇಳಿ ವೀರ್ಯವಾನನು ಗದೆಯನ್ನು ಎತ್ತಿ ಶಕ್ರನು ವೃತ್ರನನ್ನು ಆಹ್ವಾನಿಸಿದಂತೆ ಯುದ್ಧಕ್ಕೆ ನಿಂತನು. ಶಿಖರವನ್ನು ಹೊತ್ತಿದ್ದ

ಕೈಲಾಸದಂತೆ ನಿಂತಿದ್ದ ದುರ್ಯೋಧನನನ್ನು ನೋಡಿ ಭೀಮಸೇನನು ಪುನಃ ಕ್ರುದ್ಧನಾಗಿ ಅವನಿಗೆ ಹೀಗೆ ಹೇಳಿದನು:

"ವಾರಣಾವತದಲ್ಲಿ ರಾಜ ಧೃತರಾಷ್ಟ್ರ ಮತ್ತು ನೀನು ನಮ್ಮ ಮೇಲೆಸಗಿದ ದುಷ್ಕೃತಗಳನ್ನು ಸ್ಮರಿಸಿಕೋ! ರಜಸ್ವಲೆಯಾಗಿದ್ದಾಗ ಸಭೆಯಲ್ಲಿ ದ್ರೌಪದಿಯು ಕಷ್ಟಗಳನ್ನನುಭವಿಸಿದಳು. ಸೌಬಲನ ಮೂಲಕ ನೀನು ದ್ಯೂತದಲ್ಲಿ ರಾಜಾ ಯುಧಿಷ್ಠಿರನನ್ನು ವಂಚಿಸಿದೆ. ನಿನ್ನಿಂದಾಗಿ ನಾವು ವನದಲ್ಲಿ ಮಹಾ ದುಃಖಗಳನ್ನನುಭವಿಸಿದೆವು. ವಿರಾಟನಗರದಲ್ಲಿ ನಾವು ಭೂಗತರಾದವರಂತೆ ವಾಸಿಸಿದೆವು. ದುರ್ಮತೇ! ಅದೃಷ್ಟವಶಾತ್ ಈ ಎಲ್ಲ ಯಾತನೆಗಳಿಂದ ನಾನು ನಿನ್ನನ್ನು ಸರಿಯಾಗಿ ನೋಡುತ್ತಿದ್ದೇನೆ. ನೀನು ಮಾಡಿದ ಕರ್ಮಗಳಿಂದಾಗಿ ಗಾಂಗೇಯನು ಯಾಜ್ಞಸೇನಿಯಿಂದ ಹತನಾಗಿ ಶರತಲ್ಪದಲ್ಲಿ ಮಲಗಿದ್ದಾನೆ. ದ್ರೋಣ, ಕರ್ಣ ಮತ್ತು ಶಲ್ಯರು ಹತರಾದರು. ಈ ವೈರಾಗ್ನಿಗೆ ಮೂಲಕಾರಣನಾದ ಶಕುನಿಯೂ ಹತನಾದನು. ದ್ರೌಪದಿಗೆ ಕ್ಲೇಶವನ್ನುಂಟುಮಾಡಿದ್ದ ಪಾಪಿ ಪ್ರಾತಿಕಾಮಿಯೂ, ವಿಕ್ರಾಂತ ಯೋಧರಾದ ನಿನ್ನ ಸಹೋದರ ಶೂರರೆಲ್ಲರೂ ಹತರಾದರು.

ನಿನ್ನ ಕಾರಣದಿಂದಾಗಿ ಇವರು ಮತ್ತು ಇನ್ನೂ ಅನೇಕ ನೃಪರು ಹತರಾದರು. ಇಂದು ನಾನು ನಿನ್ನನ್ನು ಗದೆಯಿಂದ ಸಂಹರಿಸುತ್ತೇನೆ ಎನ್ನುವುದರಲ್ಲಿ ಸಂಶಯವೇ ಇಲ್ಲ!"

ಹೀಗೆ ಮಾತನಾಡುತ್ತಿದ್ದ ವೃಕೋದರನಿಗೆ ದುರ್ಯೋಧನನು ಸ್ವಲ್ಪವೂ ಭಯವಿಲ್ಲದೆ ಹೇಳಿದನು:

"ಕುಲಾಧಮ ವೃಕೋದರ! ಹೀಗೇಕೆ ಬಹಳವಾಗಿ ಕೊಚ್ಚಿಕೊಳ್ಳುತ್ತಿರುವೆ? ಯುದ್ಧಮಾಡು! ಇಂದು ನಿನ್ನಲ್ಲಿರುವ ಯುದ್ಧಶ್ರದ್ಧೆಯನ್ನು ಇಲ್ಲವಾಗಿಸುತ್ತೇನೆ! ಸಾಮಾನ್ಯ ಮನುಷ್ಯರನ್ನು ಮಾತಿನಿಂದ ಹೆದರಿಸುವಂತೆ ದುರ್ಯೋಧನನನ್ನು ನೀನು ಹೆದರಿಸಲಾರೆಯೆನ್ನುವುದನ್ನು ತಿಳಿದುಕೋ! ನಿನ್ನೊಡನೆ ಗದಾಯುದ್ಧಮಾಡಬೇಕೆಂಬ ಆಸೆಯು ಬಹುಕಾಲದಿಂದ ನನ್ನ ಹೃದಯದಲ್ಲಿತ್ತು. ಅದೃಷ್ಟವಿಶೇಷದಿಂದ ಇಂದು ನನಗೆ ಆ ಅವಕಾಶವನ್ನು ದೇವತೆಗಳೇ ಒದಗಿಸಿಕೊಟ್ಟಿದ್ದಾರೆ. ಅಧಿಕ ಮಾತುಗಳಿಂದ ಕೊಚ್ಚಿಕೊಳ್ಳುವುದರಿಂದ ಏನಾಗುತ್ತದೆ? ನಿನ್ನ ಮಾತನ್ನು ಕೃತಿಯಲ್ಲಿ ತೋರಿಸು! ತಡಮಾಡಬೇಡ!"

ಅವನ ಆ ಮಾತನ್ನು ಕೇಳಿ ಅಲ್ಲಿ ಸೇರಿ ಕುಳಿತಿದ್ದ ಸೋಮಕರೂ ಇತರ

ರಾಜರೂ ಅವನನ್ನು ಪ್ರಶಂಸಿಸಿದರು. ಸರ್ವರ ಪ್ರಶಂಸೆಗೊಳಗಾದ ದುರ್ಯೋಧನನ ರೋಮಗಳು ನಿಮಿರಿನಿಂತವು. ಕುರುನಂದನನು ಪುನಃ ಯುದ್ಧಕ್ಕೆ ತನ್ನ ಧೀರಮನಸ್ಸನ್ನು ತೊಡಗಿಸಿದನು. ಆನೆಯನ್ನು ಉನ್ಮತ್ತವಾಗಿಸುವಂತೆ ನರಾಧಿಪರು ಚಪ್ಪಾಳೆಗಳನ್ನು ಹೊಡೆದು ದುರ್ಯೋಧನನ್ನು ಇನ್ನೂ ಹರ್ಷಗೊಳಿಸಿದರು. ಆಗ ವೃಕೋದರನು ಗದೆಯನ್ನು ಮೇಲೆತ್ತಿ ವೇಗದಿಂದ ಧಾರ್ತರಾಷ್ಟ್ರನನ್ನು ಆಕ್ರಮಣಿಸಿದನು. ಆಗ ಆನೆಗಳು ಘೀಳಿಟ್ಟವು. ಕುದುರೆಗಳೂ ಕೆನೆದವು. ಜಯೈಷಿಗಳಾದ ಪಾಂಡವರ ಶಸ್ತ್ರಗಳು ದೇದೀಪ್ಯಮಾನವಾಗಿ ಬೆಳಗುತ್ತಿದ್ದವು.

ದುರ್ಯೋಧನನು ಹಾಗೆ ಬರುತ್ತಿದ್ದ ಭೀಮಸೇನನನ್ನು ನೋಡಿ ಜೋರಾಗಿ ಕೂಗುತ್ತಾ ವೇಗದಿಂದ ಅವನನ್ನು ಆಕ್ರಮಣಿಸಿದನು. ಕೊಂಬುಗಳುಳ್ಳ ಎರಡು ಎತ್ತುಗಳಂತೆ ಅವರು ಪರಸ್ಪರರ ಮೇಲೆ ಎರಗಿದರು. ಅವರ ಪ್ರಹಾರಗಳಿಂದ ಮಹಾ ನಿರ್ಘಾತ ಘೋಷಗಳುಂಟಾದವು. ಅವರಿಬ್ಬರ ಆ ತುಮುಲ ಯುದ್ಧವು ಜಯಿಸಲು ಹೋರಾಡುತ್ತಿದ್ದ ಇಂದ್ರ-ಪ್ರಹ್ರಾದರ ಯುದ್ಧದಂತೆ ನಡೆಯಿತು. ಗದೆಗಳನ್ನು ಹಿಡಿದಿದ್ದ ಆ ಮನಸ್ವಿ ಮಹಾತ್ಮರಿಬ್ಬರೂ ರಕ್ತದಿಂದ ತೋಯ್ದು ಹೋದ ಹೂಬಿಟ್ಟ ಕಿಂಶುಕ ವೃಕ್ಷಗಳಂತೆ ಕಾಣುತ್ತಿದ್ದರು. ಸುದಾರುಣವಾದ ಆ ಮಹಾಯುದ್ಧವು ನಡೆಯುತ್ತಿರಲು



ಆಕಾಶವು ಮಿಣುಕು ಹುಳುಗಳಿಂದ ತುಂಬಿಕೊಂಡಂತೆ ತೋರುತ್ತಿತ್ತು. ಹಾಗೆ ಆ ಅತಿ ತುಮುಲ ಸಂಕುಲ ಯುದ್ಧವು ನಡೆಯುತ್ತಿರಲು ಯುದ್ಧದಲ್ಲಿ ತೊಡಗಿದ್ದ ಇಬ್ಬರು ಅರಿಂದಮರೂ ಬಳಲಿದರು. ಸ್ವಲ್ಪಹೊತ್ತು ವಿಶ್ರಮಿಸಿ ಪುನಃ ಆ ಪರಂತಪರಿಬ್ಬರೂ ಗದೆಗಳನ್ನೆತ್ತಿಕೊಂಡು ಪರಸ್ಪರರನ್ನು ಹೊಡೆಯತೊಡಗಿದರು.

ಸಮಾನಬಲರಾದ, ಮಹಾವೀರ್ಯ ನರರ್ಷಭರು ದಣಿವಾರಿಸಿಕೊಂಡು ಹೆಣ್ಣಾನೆಯ ಸಲುವಾಗಿ ಎರಡು ಮದಗಜಗಳು ಸೆಣೆಸಾಡುವಂತೆ ಪುನಃ ಗದೆಗಳನ್ನು ಹಿಡಿದು ಯುದ್ದದಲ್ಲಿ ತೊಡಗಿದುದನ್ನು ನೋಡಿ



ದೇವ-ಗಂಧರ್ವ-ದಾನವರೆಲ್ಲರೂ ಪರಮ ವಿಸ್ಮಿತರಾದರು. ದುರ್ಯೋಧನ-ವೃಕೋದರರಿಬ್ಬರೂ ಗದೆಗಳನ್ನು ಹಿಡಿದುದನ್ನು ನೋಡಿ ಸರ್ವಭೂತಗಳಲ್ಲಿ ಯಾರಿಗೆ ವಿಜಯವಾಗುವುದೆಂದು ಸಂಶಯವುಂಟಾಯಿತು. ಬಲಿಗಳಲ್ಲಿ ಶ್ರೇಷ್ಠರಾದ ಅವರಿಬ್ಬರು ಸಹೋದರರೂ ಅನ್ಯೋನ್ಯರ ನ್ಯೂನತೆಗಳನ್ನು ಹುಡುಕುತ್ತಾ ಆಕಾಶದತ್ತ ಹಾರತೊಡಗಿದರು. ಯಮದಂಡದಂತಿದ್ದ, ಮೇಲೆತ್ತಿದ್ದ ಇಂದ್ರನ ವಜ್ರಾಯುಧದಂತಿದ್ದ ಆ ಭಾರವಾದ ರೌದ್ರ ಕಿಡಿಗಳನ್ನು ಕಾರುತ್ತಿದ್ದ ಗದೆಯನ್ನು ಪ್ರೇಕ್ಷಕರು ನೋಡಿದರು. ಭೀಮನು ರಣದಲ್ಲಿ ಗದೆಯನ್ನು ತಿರುಗಿಸುತ್ತಿದ್ದಾಗ ಮುಹೂರ್ತಕಾಲ ಘೋರ ತುಮುಲ ಶಬ್ಧವು ಕೇಳಿಬರುತ್ತಿತ್ತು. ಪಾಂಡವನು ಹಾಗೆ ವೇಗದಿಂದ ಅನೇಕರೀತಿಗಳಲ್ಲಿ

ಗದೆಯನ್ನು ತಿರುಗಿಸುತ್ತಿರುವುದನ್ನು ನೋಡಿ ಧಾರ್ತರಾಷ್ಟ್ರನೂ ವಿಸ್ಮಿತನಾದನು. ವಿವಿಧ ಮಂಡಲ ಮಾರ್ಗಗಳಲ್ಲಿ ಸಂಚರಿಸುತ್ತಿದ್ದ ವೀರ ವೃಕೋದರನು ಇನ್ನೂ ಹೆಚ್ಚಾಗಿ ಶೋಭಿಸಿದನು. ಪರಸ್ಪರರನ್ನು ಅರಕ್ಷಣಗೊಳಿಸಲು ಪ್ರಯತ್ನಿಸುತ್ತಿದ್ದ ಅವರಿಬ್ಬರೂ ತಿನಿಸಿಗಾಗಿ ಕಚ್ಚಾಡುವ ಬೆಕ್ಕುಗಳಂತೆ ಪುನಃ ಪುನಃ ಅನ್ಯೋನ್ಯರನ್ನು ಗಾಯಗೊಳಿಸುತ್ತಿದ್ದರು.

ಭೀಮಸೇನನು ಬಹುವಿಧದ ಮಾರ್ಗಗಳನ್ನು, ವಿಚಿತ್ರ ಮಂಡಲಗಳನ್ನು ಮತ್ತು ವಿವಿಧ ಸ್ಥಾನಗಳನ್ನು, ಗೋಮೂತ್ರಕವೇ ಮೊದಲಾದ ವಿಚಿತ್ರ ಗತ-ಪ್ರತ್ಯಾಗತಗಳನ್ನು ಬಳಸುತ್ತಿದ್ದನು. ಗದಾಯುದ್ಧವಿಶಾರದರಾದ ಅವರಿಬ್ಬರೂ ಶತ್ರುವಿನ ಎಡ ಮತ್ತು ಬಲಪಕ್ಕಗಳಿಗೆ ಧಾವಿಸುತ್ತಾ ಪ್ರಹಾರಗಳಿಂದ ತಪ್ಪಿಸಿಕೊಂಡು ವ್ಯರ್ಥಗೊಳಿಸುತ್ತಿದ್ದರು. ಅಭಿದ್ರವಣ (ವೇಗದಿಂದ ಎದುರಾಳಿಗೆ ಅಭಿಮುಖನಾಗಿ ಹೋಗುವುದು), ಆಕ್ಷೇಪ (ಎದುರಾಳಿಯನ್ನು ಬೀಳಿಸುವುದು), ಅವಸ್ಥಾನ (ಹಂದಾಡದೇ ಸ್ಥಿರವಾಗಿರುವುದು), ಸವಿಗ್ರಹ (ಶತ್ರುವು ಮೇಲೆದ್ದನಂತರ ಅವನೊಂದಿಗೆ ಪುನಃ ಯುದ್ಧಮಾಡುವುದು), ಪರಾವರ್ತನ (ಶತ್ರುವಿನ ಸುತ್ತಲೂ ಸಂಚರಿಸುವುದು), ಸಂವರ್ತ (ತನ್ನ ಸುತ್ತಲೂ ಸಂಚರಿಸುತ್ತಿರುವ ಶತ್ರುವನ್ನು ತಡೆಯುವುದು), ಅವಪ್ಲುತ (ದೇಹವನ್ನು

ಬಗ್ಗಿಸಿಕೊಂಡು ನಡೆದು ಪ್ರಹಾರದಿಂದ ತಪ್ಪಿಸಿಕೊಳ್ಳುವುದು), ಉಪಪ್ಲುತ (ಹಿಂದಕ್ಕೆ ಸರಿದು ಪ್ರಹಾರದಿಂದ ತಪ್ಪಿಸಿಕೊಳ್ಳುವುದು), ಉಪನ್ಯಸ್ತ (ಪ್ರಹರಿಸುವುದು), ಅಪನ್ಯಸ್ತ (ಹಿಂದೆ ತಿರುಗಿ ಆಯುಧವಿರುವ ಕೈಯನ್ನು ಹಿಂದೆಮಾಡಿ ಹಿಮ್ಮುಖನಾಗಿಯೇ ಪ್ರಹರಿಸುವುದು) – ಇವೇ ಕ್ರಮಗಳನ್ನು ಬಳಸಿ ಹೋರಾಡುತ್ತಿದ್ದರು. ಹೀಗೆ ಆ ಇಬ್ಬರು ಕುರುಸತ್ತಮರೂ ಪರಸ್ಪರರನ್ನು ವಂಚಿಸುತ್ತಾ ಪುನಃ ಪುನಃ ಸಂಚರಿಸುತ್ತಿದ್ದರು. ಗದೆಗಳನ್ನು ಹಿಡಿದು ಮಂಡಲಾಕಾರಗಳಲ್ಲಿದ್ದು ಮಂಡಲಾಕಾರಗಳಲ್ಲಿ ತಿರುಗುತ್ತಾ ಆ ಮಹಾಬಲಶಾಲಿಗಳು ಆಟವಾಡುತ್ತಿರುವವರೋ ಎಂಬಂತೆ ತೋರುತ್ತಿತ್ತು. ಧಾರ್ತರಾಷ್ಟ್ರನು ಮಂಡಲದ ಬಲಭಾಗದ ಸಂಚರಿಸುತ್ತಿದ್ದರೆ ಭೀಮಸೇನನು ಎಡಭಾಗದಲ್ಲಿದ್ದನು.

ಹೀಗೆ ರಣಮೂರ್ಧನಿಯಲ್ಲಿ ಸಂಚರಿಸುತ್ತಿರುವಾಗ ದುರ್ಯೋಧನನು ಭೀಮನ ಪಕ್ಕೆಯನ್ನು ಗದೆಯಿಂದ ಪ್ರಹರಿಸಿದನು. ಅವನ ಹೊಡೆತವನ್ನು ಗಣನೆಗೆ ತೆಗೆದುಕೊಳ್ಳದೇ ಭೀಮನು ಆ ಭಾರವಾದ ಗದೆಯನ್ನು ಜೋರಾಗಿ ತಿರುಗಿಸತೊಡಗಿದನು. ಮೇಲೆ ಎತ್ತಿಹಿಡಿದಿರುವ ಭೀಮಸೇನನ ಆ ಗದೆಯು ಇಂದ್ರನ ವಜ್ರಾಯುಧದಂತೆ ಮತ್ತು ಯಮದಂಡದಂತೆ ಕಂಡಿತು. ಭೀಮಸೇನನು ಗದೆಯನ್ನು

ತಿರುಗಿಸುತ್ತಿರುವುದನ್ನು ನೋಡಿದ ದುರ್ಯೋಧನನು ತನ್ನ ಘೋರಗದೆಯನ್ನು ಮೇಲೆತ್ತಿ ಅವನ ಮೇಲೆ ಪ್ರಹರಿಸಿದನು. ಅವನ ಗದೆಯು ಮಾರುತನ ವೇಗದಿಂದ ಹೋಗುತ್ತಿರುವಾಗ ತುಮುಲ ಶಬ್ಧವೂ ಬೆಂಕಿಯ ಕಿಡಿಗಳೂ ಹುಟ್ಟಿಕೊಂಡವು. ವಿವಿಧ ಮಾರ್ಗಗಳಲ್ಲಿ ಮತ್ತು ಮಂಡಲಗಳಲ್ಲಿ ಸಂಚರಿಸುತ್ತಿದ್ದ ತೇಜಸ್ವೀ ಸುಯೋಧನನು ಭೀಮನಿಗಿಂತ ಹೆಚ್ಚಾಗಿ ಶೋಭಿಸಿದನು. ಭೀಮನು ಅತ್ಯಂತ ರಭಸದಿಂದ ತಿರುಗಿಸುತ್ತಿದ್ದ ಆ ಮಾಹಾ ಗದೆಯು ಮಹಾಧ್ವನಿಗೈಯುತ್ತಾ ಧೂಮಸಹಿತ ಜ್ವಾಲೆಗಳನ್ನು ಉಗುಳುತ್ತಿತ್ತು. ಭೀಮಸೇನನಿಂದ ತಿರುಗಿಸಲ್ಪಡುತ್ತಿದ್ದ ಆ ಗದೆಯನ್ನು ನೋಡಿ ಸುಯೋಧನನು ಲೋಹಮಯವಾದ ತನ್ನ ಭಾರ ಗದೆಯನ್ನೂ ತಿರುಗಿಸಿ ಬಹಳವಾಗಿ ಶೋಭಿಸಿದನು. ಮಾರುತವೇಗದಲ್ಲಿ ಬರುತ್ತಿದ್ದ ಆ ಮಹಾತ್ಮನ ಗದೆಯನ್ನು ನೋಡಿ ಸರ್ವ ಪಾಂಡವ-ಸೋಮಕರಲ್ಲಿ ಭಯವು ಆವರಿಸಿತು. ಆ ಅರಿಂದಮರಿಬ್ಬರೂ ಸಮರದಲ್ಲಿ ಸುತ್ತಲೂ ಕುಳಿತವರಿಗೆ ಯುದ್ಧಕ್ರೀಡೆಯನ್ನು ಪ್ರದರ್ಶಿಸುತ್ತಿದ್ದರು. ಮರುಕ್ಷಣಗಳಲ್ಲಿಯೇ ಗದೆಗಳಿಂದ ಪರಸ್ಪರರನ್ನು ಅಪ್ಪಳಿಸುತ್ತಿದ್ದರು.

ಎರಡು ಮದಿಸಿದ ಆನೆಗಳು ಕೊಂಬುಗಳಿಂದ ಸೆಣಸಾಡಿ ರಕ್ತಸಿಕ್ತವಾಗುವಂತೆ ಅವರಿಬ್ಬರೂ ರಕ್ತದಿಂದ ತೋಯ್ದುಹೋಗಿದ್ದರು.

ದಿನವು ಕಳೆಯುತ್ತಾ ಬಂದಾಗ ಹೀಗೆ ವೃತ್ರ-ವಾಸವರ ನಡುವೆ ಹೇಗೋ ಹಾಗೆ ಅವರಿಬ್ಬರ ನಡುವೆ ಘೋರ ಕ್ರೂರ ಯುದ್ಧವು ನಡೆಯಿತು. ಭೀಮನು ನಿಂತಿರುವುದನ್ನು ನೋಡಿ ದುರ್ಯೋಧನನು ವಿಚಿತ್ರ ಮಾರ್ಗಗಳಲ್ಲಿ ಸಂಚರಿಸುತ್ತಾ ಕೌಂತೇಯನನ್ನು ಆಕ್ರಮಣಿಸಿದನು. ಮಹಾವೇಗದಿಂದ ಬರುತ್ತಿದ್ದ ಕ್ರುದ್ಧನ ಆ ಬಂಗಾರದಿಂದ ಪರಿಷ್ಕೃತ ಗದೆಯನ್ನು ಕ್ರುದ್ಧನಾದ ಭೀಮನು ಪ್ರಹರಿಸಿದನು. ವಜ್ರಾಯುಧಗಳಂತೆ ಸಂಘರ್ಷಿಸಿದ ಆ ಎರಡು ಗದೆಗಳಿಂದ ಅಗ್ನಿಯ ಕಿಡಿಗಳಿಂದ ಕೂಡಿದ ಮಹಾ ಶಬ್ಧವು ಕೇಳಿಬಂದಿತು. ಭೀಮಸೇನನಿಂದ ಪ್ರಹರಿಸಲ್ಪಟ್ಟ ಆ ಗದೆಯು ವೇಗದಿಂದ ಬೀಳಲು ಭೂಮಿಯೇ ಕಂಪಿಸಿತು. ಮದಿಸಿದ ಆನೆಯೊಂದು ಇನ್ನೊಂದು ಮದಿಸಿದ ಆನೆಯನ್ನು ನೋಡಿ ಕ್ರುದ್ಧಗೊಳ್ಳುವಂತೆ ರಣದಲ್ಲಿ ಭೀಮನ ಗದೆಯು ತನ್ನ ಗದೆಗೆ ಹೊಡೆದುದನ್ನು ನೋಡಿ ಕೌರವ್ಯನು ಸಹಿಸಿಕೊಳ್ಳಲಿಲ್ಲ. ಅವನನ್ನು ಕೊಲ್ಲಲು ನಿಶ್ಚಯಿಸಿ ದುರ್ಯೋಧನನು ಮಂಡಲದ ಎಡಭಾದಲ್ಲಿ ಸಂಚರಿಸಿ ಗದೆಯಿಂದ ಭೀಮವೇಗದಲ್ಲಿ ಕೌಂತೇಯನ ನೆತ್ತಿಯಮೇಲೆ ಹೊಡೆದನು. ಅವನಿಂದ ಹಾಗೆ ಹೊಡೆಯಲ್ಪಟ್ಟ ಭೀಮನು ಸ್ವಲ್ಪವೂ ತತ್ತರಿಸಲಿಲ್ಲ. ಅದೊಂದು ಅದ್ಭುತವಾಗಿತ್ತು. ಗದೆಯಿಂದ ಹೊಡೆಯಲ್ಪಟ್ಟರೂ ಹೆಜ್ಜೆಯನ್ನು ಕಿತ್ತಿಡದೇ ಅಕಂಪನನಾಗಿದ್ದ ಭೀಮನನ್ನು ನೋಡಿ ಜನರಲ್ಲಿ ಆಶ್ಚರ್ಯವುಂಟಾಯಿತು ಮತ್ತು

ಸರ್ವಸೇನೆಗಳೂ ಅವನನ್ನು ಗೌರವಿಸಿದವು. ಆಗ ಭೀಮಪರಾಕ್ರಮಿ ಭೀಮನು ಹೇಮಪರಿಷ್ಕೃತವಾದ ಭಾರ ಗದೆಯನ್ನು ದುರ್ಯೋಧನನ ಮೇಲೆ ಎಸೆದನು. ಸ್ವಲ್ಪವೂ ಗಾಬರಿಗೊಳ್ಳದೇ ಮಹಾಬಲ ದುರ್ಯೋಧನನು ತನ್ನ ಚಲನ ಲಾಘವದಿಂದ ಆ ಪ್ರಹಾರದಿಂದ ತಪ್ಪಿಸಿಕೊಂಡನು. ಅದು ಮಹಾ ವಿಸ್ಮಯವಾಗಿತ್ತು. ಭೀಮನಿಂದ ಎಸೆಯಲ್ಪಟ್ಟ ಗದೆಯು ವ್ಯರ್ಥವಾಗಿ ಮಹಾನಿರ್ಘಾತಧ್ವನಿಯೊಂದಿಗೆ ಬಿದ್ದು ಭೂಮಿಯನ್ನು ನಡುಗಿಸಿತು. ಗದೆಯು ಕೆಳಗೆ ಬಿದ್ದುದನ್ನು ತಿಳಿದು ಕೌಶಿಕ ಮಾರ್ಗಗಳನ್ನು ಬಳಸಿ ಪುನಃ ಪುನಃ ಕುಪ್ಪಳಿಸುತ್ತಾ ದುರ್ಯೋಧನನು ಭೀಮಸೇನನನ್ನು ಮೋಸಗೊಳಿಸಿದನು.

ಹಾಗೆ ಭೀಮಸೇನನನ್ನು ವಂಚಿಸುತ್ತಾ ಮಹಾಬಲ ಕುರುಸತ್ತಮನು ಕ್ರುದ್ಧನಾಗಿ ಗದೆಯಿಂದ ಭೀಮನ ವಕ್ಷಸ್ಥಳಕ್ಕೆ ಹೊಡೆದನು. ಗದೆಯಿಂದ ಹೊಡೆಯಲ್ಪಟ್ಟ ಭೀಮನು ಮಹಾರಣದಲ್ಲಿ ಮೂರ್ಛೆಹೊಂದಿದಂತವನಾಗಿ ಏನು ಮಾಡಬೇಕೆಂದು ತಿಳಿಯದೇ ಹೋದನು. ಅದು ಹಾಗೆ ನಡೆಯುತ್ತಿರಲು ಸೋಮಕ-ಪಾಂಡವರು ಬಹಳ ಹತಸಂಕಲ್ಪರಾಗಿ ದುಃಖಿತರಾದರು. ಆ ಹೊಡೆತದಿಂದ ಆನೆಯಂತೆ ರೋಷಿತನಾದನಾದ ಭೀಮನು ಒಂದು ಆನೆಯು ಇನ್ನೊಂದು ಆನೆಯನ್ನು ಆಕ್ರಮಣಿಸುವಂತೆ ದುರ್ಯೋಧನನ ಮೇಲೆ

ಎರಗಿದನು. ಸಿಂಹವು ಕಾಡಾನೆಯನ್ನು ಹೇಗೋ ಹಾಗೆ ಭೀಮನು ರಭಸದಿಂದ ದುರ್ಯೋಧನನ ಮೇಲೆ ಆಕ್ರಮಣಿಸಿದನು. ಗದೆಯನ್ನು ಪ್ರಹರಿಸುವುದರಲ್ಲಿ ವಿಶಾರದನಾದ ಅವನು ದುರ್ಯೋಧನನನ್ನು ಸಮೀಪಿಸಿ ಗದೆಯನ್ನೊಮ್ಮೆ ತಿರುಗಿಸಿ ಅವನ ಮೇಲೆ ಬಿಸುಟನು. ಹಾಗೆ ಭೀಮಸೇನನು ದುರ್ಯೋಧನನ ಪಕ್ಕೆಯನ್ನು ಹೊಡೆಯಲು ಆ ಪ್ರಹಾರದಿಂದ ವಿಹ್ವಲನಾಗಿ ದುರ್ಯೋಧನು ಮಂಡಿಯೂರಿ ನೆಲದ ಮೇಲೆ ಕುಸಿದನು. ಆ ಭರತಶ್ರೇಷ್ಠನು ಮಂಡಿಯೂರಿ ನೆಲದಲ್ಲಿ ಕುಸಿಯಲು ಸೃಂಜಯರ ಹರ್ಷೋದ್ಗಾರವು ಗಗನಕ್ಕೇರಿತು.

ಸೃಂಜಯರ ಆ ನಿನಾದವನ್ನು ಕೇಳಿ ದುರ್ಯೋಧನನು ಅಸಹನೆಯಿಂದ ಕುಪಿತನಾದನು. ಕ್ರುದ್ಧ ನಾಗದಂತೆ ಭುಸುಗುಟ್ಟುತ್ತಾ ಆ ಮಹಾಬಾಹುವು ಕಣ್ಣುಗಳಿಂದ ಸುಟ್ಟುಬಿಡುವನೋ ಎಂಬಂತೆ ಭೀಮಸೇನನನ್ನು ದಿಟ್ಟಿಸಿ ನೋಡಿದನು. ಆಗ ಆ ಭರತಶ್ರೇಷ್ಠನು ರಣದಲ್ಲಿ ಭೀಮಸೇನನ ಶಿರವನ್ನು ಜಜ್ಜಿಬಿಡುವನೋ ಎಂಬಂತೆ ಗದೆಯನ್ನು ಹಿಡಿದು ಆಕ್ರಮಣಿಸಿದನು. ಅವನು ಭೀಮನ ಹಣೆಯ ಮೂಳೆಯ ಮೇಲೆ ಹೊಡೆಯಲು ಪರ್ವತದಂತಿದ್ದ ಭೀಮನು ಸ್ವಲ್ಪವೂ ವಿಚಲಿತನಾಗಲಿಲ್ಲ. ರಣದಲ್ಲಿ ಗದೆಯಿಂದ ಹೊಡೆಯಲ್ಪಟ್ಟ ಪಾರ್ಥನು ಹಣೆಯಿಂದ ರಕ್ತವನ್ನು ಸುರಿಸುತ್ತಾ ಕಪೋಲಗಳಿಂದ ಮದೋದಕವನ್ನು

ಸುರಿಸುವ ಆನೆಯಂತೆ ಶೋಭಿಸಿದನು. ಆಗ ಭೀಮನು ವೀರವಿನಾಶಿಯಾದ, ಲೋಹಮಯವಾದ, ವಜ್ರಯುಧ ಮತ್ತು ಸಿಡಿಲಿನ ಶಬ್ಧದಿಂದ ಕೂಡಿದ್ದ ಗದೆಯನ್ನು ಹಿಡಿದು ಬಲ ಮತ್ತು ವಿಕ್ರಮಗಳಿಂದ ಶತ್ರುವನ್ನು ಹೊಡೆದನು. ಭೀಮಸೇನನಿಂದ ಹೊಡೆಯಲ್ಪಟ್ಟ ದುರ್ಯೋಧನನನ ದೇಹದ ಕೀಲುಗಳೆಲ್ಲವೂ ಸಡಿಲವಾಗಿ, ಮಹಾವನದಲ್ಲಿ ಭಿರುಗಾಳಿಯ ಆಘಾತಕ್ಕೆ ಸಿಲುಕಿದ ಪುಷ್ಪಭರಿತ ಸಾಲವೃಕ್ಷದಂತೆ ಅವನು ತತ್ತರಿಸಿ ನೆಲದಮೇಲೆ ಬಿದ್ದನು. ದುರ್ಯೋಧನನು ಭೂಮಿಯ ಮೇಲೆ ಬಿದ್ದುದನ್ನು ನೋಡಿ ಪಾಂಡವರು ಹರ್ಷದಿಂದ ಜಯೋದ್ಗಾರಗೈದರು. ಆಗ ದುರ್ಯೋಧನನು ಪುನಃ ಚೇತರಿಸಿಕೊಂಡು ಸರೋವರದಿಂದ ಹೊರಬರುವ ಆನೆಯಂತೆ ನೆಗೆದು ನಿಂತನು. ನಿತ್ಯವೂ ಸಿಟ್ಟಿನಲ್ಲಿರುತ್ತಿದ್ದ ಆ ಮಹಾರಥ ಪಾರ್ಥಿವನು ಪಳಗಿದ ಯೋಧನಂತೆ ಸುತ್ತುತ್ತಾ ಮುಂದೆ ನಿಂತಿದ್ದ ಪಾಂಡವನನ್ನು ಹೊಡೆದನು. ವಿಹ್ವಲಾಂಗನಾದ ಭೀಮನು ನೆಲದ ಮೇಲೆ ಬಿದ್ದನು.

ಯುದ್ಧದಲ್ಲಿ ಭೀಮನನ್ನು ನೆಲಕ್ಕೆ ಕೆಡವಿದ ಕೌರವನು ಓಜಸ್ಸಿನಿಂದ ಸಿಂಹನಾದಗೈದನು. ಸಿಡಿಲಿನ ತೇಜಸ್ಸಿನಿಂದ ಬಿದ್ದ ಆ ಗದೆಯು ಭೀಮನ ಶರೀರವನ್ನು ರಕ್ಷಿಸುತ್ತಿದ್ದ ಕವಚವನ್ನು ಭೇದಿಸಿತು. ಆಗ ಅಂತರಿಕ್ಷದಲ್ಲಿ ಹರ್ಷಧ್ವನಿಗಳನ್ನು ಮಾಡುತ್ತಿದ್ದ ದೇವತೆಗಳ ಮತ್ತು

ಅಪ್ಸರೆಯರ ದೊಡ್ಡ ಕೋಲಾಹಲವುಂಟಾಯಿತು. ಮೇಲಿನಿಂದ ಅಮರರು ಸುರಿಸಿದ ವಿಚಿತ್ರ ಪುಷ್ಪಗಳ ಅನುತ್ತಮ ಮಳೆಯು ಬಿದ್ದಿತು. ಭೂಮಿಯಮೇಲೆ ಆ ನರೋತ್ತಮನು ಬಿದ್ದುದನ್ನು, ಬಲದಿಂದ ಕುಗ್ಗದೇ ಇದ್ದ ಕೌರವನನ್ನು, ಮತ್ತು ದೃಢಕವಚವು ಒಡೆದುಹೋದುದನ್ನೂ ನೋಡಿ ಪಾಂಡವರಲ್ಲಿ ಮಹಾಭಯವು ಆವರಿಸಿತು. ಕ್ಷಣದಲ್ಲಿಯೇ ಪುನಃ ಚೇತರಿಸಿಕೊಂಡ ವೃಕೋದರನು ರಕ್ತಸಿಕ್ತವಾದ ಮುಖವನ್ನು ಒರೆಸಿಕೊಳ್ಳುತ್ತಾ ಧೈರ್ಯತಾಳಿ ಕಣ್ಣುಗಳನ್ನು ಹೊರಳಿಸಿ ಬಲಪೂರ್ವಕವಾಗಿ ಜರ್ಝರಿತ ಶರೀರವನ್ನು ಸ್ವಾಧೀನಕ್ಕೆ ತಂದುಕೊಂಡು ಪುನಃ ಯುದ್ಧಸನ್ನದ್ಧನಾಗಿ ನಿಂತನು.

ಕುರುಮುಖ್ಯರ ಆ ಸಂಗ್ರಾಮವು ಮುಕ್ತಾಯವಾಗದಿರುವುದನ್ನು ನೋಡಿ ಅರ್ಜುನನು ಯಶಸ್ವಿ ವಾಸುದೇವನಿಗೆ ಇಂತೆಂದನು:

> “ಜನಾರ್ದನ! ನಿನ್ನ ಅಭಿಪ್ರಾಯದಲ್ಲಿ ಈ ಇಬ್ಬರು ವೀರರಲ್ಲಿ ಯಾರು ಹೆಚ್ಚಿನವರು? ಯಾರಲ್ಲಿ ಯಾವ ಗುಣವು ಅಧಿಕವಾಗಿದೆ ಎನ್ನುವುದನ್ನು ಹೇಳು!”

ವಾಸುದೇವನು ಹೇಳಿದನು:

> “ಶಿಕ್ಷಣದಲ್ಲಿ ಇಬ್ಬರೂ ಸಮಾನರೇ. ಆದರೆ ಭೀಮನು ಹೆಚ್ಚು

ಬಲಶಾಲಿ. ಧಾರ್ತರಾಷ್ಟ್ರನು ವೃಕೋದರನಿಗಿಂತಲೂ ಹೆಚ್ಚು ಪ್ರಯತ್ನಶೀಲ. ಆದರೆ ಭೀಮಸೇನನು ಧರ್ಮಪೂರ್ವಕವಾಗಿಯೇ ಯುದ್ಧಮಾಡುತ್ತಿದ್ದರೆ ಜಯಿಸುವುದಿಲ್ಲ. ಅನ್ಯಾಯದಿಂದ ಯುದ್ಧಮಾಡಿದರೆ ಮಾತ್ರ ಸುಯೋಧನನನ್ನು ಇವನು ಸಂಹರಿಸಬಲ್ಲನು. ದೇವತೆಗಳು ಅಸುರರನ್ನು ಮಾಯೆಯಿಂದಲೇ ಸೋಲಿಸಿದರೆಂದು ನಾವು ಕೇಳಿದ್ದೇವೆ. ಸಖ ಶಕ್ರನು ವಿರೋಚನನನ್ನು ಮಾಯೆಯಿಂದಲೇ ಸೋಲಿಸಿದನು. ಬಲಸೂದನನು ಮಾಯೆಯಿಂದಲೇ ವೃತ್ರನ ತೇಜಸ್ಸನ್ನು ಅಪಹರಿಸಿದನು. ಭೀಮನಾದರೋ ದ್ಯೂತದ ಸಮಯದಲ್ಲಿ "ಯುದ್ಧದಲ್ಲಿ ಸುಯೋಧನನ ತೊಡೆಯನ್ನು ಗದೆಯಿಂದ ಒಡೆಯುತ್ತೇನೆ!" ಎಂದು ಪ್ರತಿಜ್ಞೆಮಾಡಿದ್ದನು. ಆ ಪ್ರತಿಜ್ಞೆಯನ್ನು ಅರಿಕರ್ಶನ ಭೀಮನು ಈಗ ಪರಿಪಾಲಿಸಲಿ. ಮಾಯಾವಿ ರಾಜನನ್ನು ಮಾಯೆಯಿಂದಲೇ ಸಂಹರಿಸಲಿ. ಒಂದುವೇಳೆ ಭೀಮಸೇನನು ಬಲವನ್ನೇ ಉಪಯೋಗಿಸಿ ನ್ಯಾಯರೀತಿಯಲ್ಲಿ ಹೊಡೆದಾಡುತ್ತಿದ್ದರೆ ರಾಜ ಯುಧಿಷ್ಠಿರನಿಗೆ ವಿಷಮ ಪರಿಸ್ಥಿತಿಯುಂಟಾಗುತ್ತದೆ. ಪುನಃ ನಿನಗೆ ಇದನ್ನು ಹೇಳುತ್ತಿದ್ದೇನೆ. ಕೇಳು. ಧರ್ಮರಾಜನ ಅಪರಾಧದಿಂದಾಗಿ ನಮಗೆ ಪುನಃ ಭಯವು ಆವರಿಸಿದೆ. ಮಹತ್ಕಾರ್ಯವನ್ನೆಸಗಿ

ಭೀಷ್ಮನೇ ಮೊದಲಾದ ಕುರುಮುಖ್ಯರನ್ನು ಸಂಹರಿಸಿ, ಜಯವನ್ನು ಪಡೆದು ನಾವು ವೈರಕ್ಕೆ ಪ್ರತೀಕಾರವನ್ನೆಸಗಿದ ಯಶಸ್ಸನ್ನು ಪಡೆದಿದ್ದೆವು. ಗಳಿಸಿದ ವಿಜಯವನ್ನೇ ಅವನು ಪುನಃ ಸಂಶಯಕ್ಕೀಡುಮಾಡಿಬಿಟ್ಟಿದ್ದಾನೆ! ಒಬ್ಬನನ್ನೇ ಜಯಿಸುವ ಈ ರೀತಿ ಪಣವನ್ನಿಟ್ಟಿರುವ ಧರ್ಮರಾಜನ ಬುದ್ಧಿಯು ನಿಶ್ಚಯವಾಗಿಯೂ ವಿವೇಕವಿಲ್ಲದ ಬುದ್ಧಿಯೇ ಸರಿ! ಸುಯೋಧನನು ವೀರ, ಕಾರ್ಯಶಾಲೀ ಮತ್ತು ದೃಢಚಿತ್ತನು. ಇದರ ಕುರಿತು ಉಶಸನನು ಹೇಳಿದ ಪುರಾತನ ಗೀತೆಯೊಂದು ಕೇಳಿಬರುತ್ತದೆ. ತತ್ತ್ವಾರ್ಥಸಹಿತವಾಗಿರುವ ಆ ಶ್ಲೋಕವನ್ನೇ ಹೇಳುವೆನು. ಕೇಳು! ಜೀವದ ಮೇಲಿನ ಆಸೆಯಿಂದಾಗಿ ಯುದ್ಧವನ್ನು ಬಿಟ್ಟುಹೋಗಿದ್ದ, ಜೀವದಿಂದುಳಿದಿರುವ ಶತ್ರುಗಳು ಒಂದು ವೇಳೆ ಪುನಃ ಯುದ್ಧಕ್ಕೆ ಬಂದರೆ ಅಂತವರ ವಿಷಯದಲ್ಲಿ ಹೆಚ್ಚು ಭಯಪಡಬೇಕು. ಏಕೆಂದರೆ, ಅವರು ಜೀವದ ಮೇಲಿನ ಹಂಗನ್ನೇ ತೊರೆದು ಕೇವಲ ಜಯಗಳಿಸುವುದೊಂದರಲ್ಲಿಯೇ ತಮ್ಮ ಅಭ್ಯಾಸ ಮತ್ತು ಪ್ರಯತ್ನಗಳನ್ನು ಕೇಂದ್ರೀಕರಿಸುತ್ತಾರೆ. ಈ ಸುಯೋಧನನಾದರೋ ಭಗ್ನಮನೋರಥನಾಗಿದ್ದನು. ಸೈನ್ಯವನ್ನು ಕಳೆದುಕೊಂಡು ಸರೋವರವನ್ನು ಸೇರಿದ್ದನು.

ಪರಾಜಿತನಾಗಿ ವನವನ್ನು ಸೇರಿದ್ದನು. ರಾಜ್ಯವನ್ನು ಉಳಿಸಿಕೊಳ್ಳುವುದರಲ್ಲಿ ನಿರಾಶನಾಗಿಹೋಗಿದ್ದನು. ಇಂಥವನನ್ನು ತಿಳಿದವನು ಯಾರು ತಾನೇ ಪುನಃ ದ್ವಂದ್ವಯುದ್ಧಕ್ಕೆ ಆಹ್ವಾನಿಸುತ್ತಾರೆ? ಜಯಿಸಿರುವ ಈ ರಾಜ್ಯವನ್ನು ಸುಯೋಧನನು ಪುನಃ ಕಸಿದುಕೊಳ್ಳುವುದಿಲ್ಲವೇ? ಈ ಹದಿಮೂರು ವರ್ಷಗಳು ಗದಾಯುದ್ಧದಲ್ಲಿ ಶ್ರಮಪಟ್ಟು ಅಭ್ಯಾಸಮಾಡಿರುವ ಸುಯೋಧನನು ಭೀಮನನ್ನು ಕೊಲ್ಲಲು ಬಯಸಿ ಅಡ್ಡವಾಗಿ ನಡೆಯಿಡುತ್ತಿದ್ದಾನೆ; ಮೇಲಕ್ಕೂ ನೆಗೆಯುತ್ತಿದ್ದಾನೆ! ಭೀಮಸೇನನು ಇವನನ್ನು ಅನ್ಯಾಯದಿಂದ ಸಂಹರಿಸದೇ ಇದ್ದರೆ ಧಾರ್ತರಾಷ್ಟ್ರ ಕೌರವನೇ ನಿಮ್ಮೆಲ್ಲರಿಗೂ ರಾಜನಾಗುತ್ತಾನೆ!”

ಮಹಾತ್ಮ ಕೇಶವನನ್ನು ಕೇಳಿದ ಧನಂಜಯನಾದರೋ ಭೀಮಸೇನನಿಗೆ ತೋರಿಸುತ್ತಾ ಕೈಯಿಂದ ತನ್ನ ಎಡತೊಡೆಯನ್ನು ಹೊಡೆದುಕೊಂಡನು. ಸಂಜ್ಞೆಯನ್ನು ಗ್ರಹಿಸಿದ ಭೀಮಸೇನನು ಆಗ ರಣದಲ್ಲಿ ಗದೆಯಿಂದ ಯಮಕವೇ ಮೊದಲಾದ ವಿಚಿತ್ರ ಮಂಡಲಗಳಲ್ಲಿ ತಿರುಗಿಸತೊಡಗಿದನು. ಶತ್ರುವನ್ನು ಭ್ರಾಂತಗೊಳಿಸುವುದಕ್ಕೋ ಎನ್ನುವಂತೆ ದಕ್ಷಿಣ, ಮಂಡಲ, ಸವ್ಯ, ಗೋಮೂತ್ರಕ ರೀತಿಗಳಲ್ಲಿ

ಸಂಚರಿಸತೊಡಗಿದನು. ಗದಾಮಾರ್ಗ ವಿಶಾರದನಾದ ದುರ್ಯೋಧನನೂ ಕೂಡ ಭೀಮಸೇನನನ್ನು ಕೊಲ್ಲಲೋಸುಗ ಲಘುವಾಗಿ ಚಿತ್ರ ರೀತಿಗಳಲ್ಲಿ ಸಂಚರಿಸತೊಡಗಿದನು. ವೈರದ ಅಂತ್ಯವನ್ನು ಹುಡುಕುತ್ತಾ ಚಂದನ ಅಗರುಗಳ ಲೇಪಿತಗೊಂಡ ಘೋರ ಗದೆಗಳನ್ನು ತಿರುಗಿಸುತ್ತಿದ್ದ ಅವರು ರಣದಲ್ಲಿ ಕ್ರುದ್ಧರಾದ ಇಬ್ಬರು ಅಂತಕರಂತೆ ತೋರುತ್ತಿದ್ದರು. ಅನ್ಯೋನ್ಯರನ್ನು ಕೊಲ್ಲಲು ಕಾತೊರೆಯುತ್ತಿದ್ದ ಆ ಇಬ್ಬರು ಪ್ರವೀರ ಪುರುಷರ್ಷಭರು ನಾಗಗಳನ್ನು ತಿನ್ನಲು ಬಯಸಿ ಹೋರಾಡುತ್ತಿದ್ದ ಎರಡು ಗರುಡಗಳಂತೆ ತೋರಿದರು. ವಿಚಿತ್ರ ಮಂಡಲಗಳಲ್ಲಿ ತಿರುಗುತ್ತಿದ್ದ ನೃಪ ಮತ್ತು ಭೀಮರ ಗದೆಗಳ ಸಂಘರ್ಷದಿಂದಾಗಿ ಅಲ್ಲಿ ಬೆಂಕಿಯ ಕಿಡಿಗಳು ಕಾಣಿಸಿಕೊಂಡವು. ಭಿರುಗಾಳಿಯಿಂದ ಪ್ರಕ್ಷುಬ್ಧಗೊಂಡ ಎರಡು ಸಮುದ್ರಗಳು ಅಲೆಗಳಿಂದ ಪರಸ್ಪರರನ್ನು ಅಪ್ಪಳಿಸುವಂತೆ ಆ ಶೂರ ಬಲಶಾಲಿಗಳು ರಣದಲ್ಲಿ ಒಬ್ಬರನ್ನೊಬ್ಬರು ಹೊಡೆಯುತ್ತಿದ್ದರು. ಅವರಿಬ್ಬರ ಹೊಡೆತಗಳು ಮದಿಸಿದ ಆನೆಗಳ ಹೊಡೆತಗಳಂತಿದ್ದವು. ಗದೆಗಳ ಪ್ರಹಾರದಿಂದ ಆದ ಶಬ್ಧವು ಸಿಡಿಲಿನ ಶಬ್ಧದಂತೆ ಕೇಳಿಬರುತ್ತಿತ್ತು. ತುಂಬಾ ದಾರುಣವಾಗಿ ಹೊಡೆದಾಡುತ್ತಿದ್ದ ಆ ಅರಿಂದಮರಿಬ್ಬರೂ ಬಹಳವಾಗಿ ಬಳಲಿದ್ದರು. ಮುಹೂರ್ತಕಾಲ ವಿಶ್ರಮಿಸಿ ದಣಿವಾರಿಸಿಕೊಂಡು ಪುನಃ ಆ ಪರಂತಪರಿಬ್ಬರೂ ತಮ್ಮ ಮಹಾ ಗದೆಗಳನ್ನು ಹಿಡಿದು ಕ್ರುದ್ಧರಾಗಿ

ಪ್ರಹರಿಸತೊಡಗಿದರು. ಪರಸ್ಪರರನ್ನು ಗದೆಗಳ ಹೊಡೆತದಿಂದ ಗಾಯಗೊಳಿಸುವ ಘೋರರೂಪದ ಮಹಾ ಯುದ್ಧವು ಅವರಿಬ್ಬರ ನಡುವೆ ನಡೆಯಿತು.

ಕೆಸರಿನಲ್ಲಿ ಬಿದ್ದಿರುವ ಎರಡು ಕಾಡುಕೋಣಗಳು ಪರಸ್ಪರ ಹೊಡೆದಾಡುವಂತೆ ಆ ಇಬ್ಬರು ವೃಷಭಾಕ್ಷ ತರಸ್ವಿ ವೀರರು ಅನ್ಯೋನ್ಯರೊಡನೆ ಹೊಡೆದಾಡುತ್ತಿದ್ದರು. ಸರ್ವಾಂಗಗಳೂ ಜರ್ಜರತವಾಗಿ ರಕ್ತದಿಂದ ತೋಯ್ದುಹೋಗಿದ್ದ ಅವರಿಬ್ಬರೂ ಹಿಮವತ್ಪರ್ವತದಲ್ಲಿ ಹೂಬಿಟ್ಟಿರುವ ಕಿಂಶುಕ ವೃಕ್ಷಗಳಂತೆ ಕಾಣುತ್ತಿದ್ದರು. ಭೀಮನು ದುರ್ಯೋಧನನಿಗೆ ಪ್ರಹರಿಸಲು ಅವಕಾಶಕೊಟ್ಟವನಂತೆ ಕಾಣಲು ದುರ್ಯೋಧನನು ನಸುನಕ್ಕು ಒಡನೆಯೇ ಅವನ ಮೇಲೆ ಬಿದ್ದನು. ರಣದಲ್ಲಿ ತನ್ನ ಮೇಲೆ ಎರಗಿ ಬರುತ್ತಿದ್ದವನನ್ನು ಕಂಡು ವೃಕೋದರನು ಅವನ ಮೇಲೆ ಗದೆಯನ್ನು ಬೀಸಿ ಎಸೆದನು. ಮೇಲೆ ಬೀಳುತ್ತಿರುವ ಗದೆಯನ್ನು ನೋಡಿ ದುರ್ಯೋಧನನು ತಾನಿದ್ದ ಸ್ಥಳದಿಂದ ಸರಿಯಲು ಅದು ವ್ಯರ್ಥವಾಗಿ ಭೂಮಿಯ ಮೇಲೆ ಬಿದ್ದಿತು. ಆ ಪ್ರಹಾರದಿಂದ ತಪ್ಪಿಸಿಕೊಂಡ ದುರ್ಯೋಧನನು ಒಡನೆಯೇ ಭೀಮಸೇನನನ್ನು ಗದೆಯಿಂದ ಹೊಡೆದನು. ಭೀಮನ ದೇಹದಿಂದ ರಕ್ತವು ಧಾರಾಕಾರವಾಗಿ

ಸೋರತೊಡಗಿತು. ಜೋರಾದ ಆ ಪೆಟ್ಟಿನಿಂದ ಅವನು ಮೂರ್ಛೆಗೊಂಡವನಂತಾದನು. ರಣದಲ್ಲಿ ಪಾಂಡವನನ್ನು ತಾನು ಪೀಡಿಸಿದೆನೆಂದು ದುರ್ಯೋಧನನು ತಿಳಿದುಕೊಂಡಿದ್ದರೂ ಶರೀರದಲ್ಲಿ ಅತಿ ನೋವುಂಟಾದರೂ ಭೀಮನು ಅದನ್ನು ಸಹಿಸಿಕೊಂಡನು. ರಣದಲ್ಲಿ ಪ್ರಹಾರಕ್ಕೊಳಗಾಗಿ ಭೀಮನು ಕ್ಷಣಕಾಲ ನಿಂತಿದ್ದರೂ ದುರ್ಯೋಧನನು ಪುನಃ ಪ್ರಹರಿಸಲು ನಿಂತಿದ್ದಾನೆಂದೇ ತಿಳಿದುಕೊಂಡನು.

ಆಗ ಮುಹೂರ್ತಕಾಲ ಚೇತರಿಸಿಕೊಂಡ ಭೀಮಸೇನನು ನಿಂತಿದ್ದ ದುರ್ಯೋಧನನನ್ನು ವೇಗದಿಂದ ಆಕ್ರಮಣಿಸಿದನು. ತನ್ನ ಮೇಲೆ ಬೀಳುತ್ತಿದ್ದ ಕುಪಿತ ಭೀಮನನ್ನು ನೋಡಿ ದುರ್ಯೋಧನನು ಅವನ ಪ್ರಹಾರವನ್ನು ವ್ಯರ್ಥಗೊಳಿಸಲು ಪ್ರಯತ್ನಿಸಿದನು. ದುರ್ಯೋಧನನು ಚಲಿಸುತ್ತಿರುವ ವೃಕೋದರನಿಗೆ ಮೋಸಮಾಡಲು ಬಯಸಿ ನಿಂತಲ್ಲಿಯೇ ಮೇಲೆ ನೆಗೆಯಲು ನಿಶ್ಚಯಿಸಿದನು. ದುರ್ಯೋಧನ ಇಂಗಿತವನ್ನು ತಿಳಿದ ಭೀಮಸೇನನು ಅವನನ್ನು ಸಿಂಹನಂತೆ ಆಕ್ರಮಣಿಸಲು ನಿರ್ಧರಿಸಿದನು. ವಂಚಿಸಲು ಪುನಃ ಮೇಲೆ ಹಾರಿದ್ದ ಅವನ ತೊಡೆಗಳನ್ನು ಭೀಮನು ಗದೆಯಿಂದ ವೇಗವಾಗಿ ಹೊಡೆದನು. ಆ ಭೀಮಕರ್ಮಿಯಿಂದ ಪ್ರಹರಿಸಲ್ಪಟ್ಟ ಗದೆಯು ಸಿಡಿಲಿನಂತೆ ಸಿಡಿದು

ನೋಡಲು ಬಹು ಸುಂದರವಾಗಿದ್ದ ದುರ್ಯೋಧನನ ತೊಡೆಗಳನ್ನು ಮುರಿದುಹಾಗಿತು. ಭೀಮಸೇನನಿಂದ ತೊಡೆಗಳು ಮುರಿಯಲ್ಪಟ್ಟ ಆ ನರವ್ಯಾಘ್ರ ದುರ್ಯೋಧನನು ಜೋರಾಗಿ ಕೂಗುತ್ತಾ ವಸುಧೆಯ ಮೇಲೆ ಬಿದ್ದನು.

ಆ ವೀರ ಸರ್ವಮಹೀಕ್ಷಿತರ ಅಧಿಪತಿಯು ಬೀಳಲು ಸಿಡಿಲುಗಳೊಡನೆ ಚಂಡಮಾರುತಗಳು ಬೀಸತೊಡಗಿದವು. ಕೆಸರಿನ ಮಳೆಯು ಸುರಿಯಿತು. ವೃಕ್ಷ, ಪರ್ವತ ಕಂದರಗಳಿಂದ ಕೂಡಿದ ಭೂಮಿಯು ನಡುಗಿತು. ಮಹಾಶಬ್ಧದಿಂದ ಕೂಡಿದ ದೇದೀಪ್ಯಮಾನವಾದ ನಿರ್ಘಾತ ಭಯಂಕರ ಮಹಾ ಉಲ್ಕೆಯು ಬಿದ್ದಿತು. ದುರ್ಯೋಧನನು ಕೆಳಕ್ಕೆ ಬೀಳಲು ಮಘವ ಇಂದ್ರನು ರಕ್ತಮಳೆಗಳನ್ನೂ ಕೆಸರಿನ ಮಳೆಗಳನ್ನೂ ಸುರಿಸಿದನು. ಆಕಾಶದಲ್ಲಿ ಯಕ್ಷ-ರಾಕ್ಷಸ- ಪಿಶಾಚಿಗಳ ಮಹಾನಾದವು ಕೇಳಿಬಂದಿತು. ಅಂತರಿಕ್ಷದ ಆ ಘೋರ ಶಬ್ಧಗಳೊಂದಿಗೆ ಎಲ್ಲ ದಿಕ್ಕುಗಳಿಂದ ಮೃಗ- ಪಕ್ಷಿಗಳ ಘೋರತಮ ಶಬ್ಧವು ಬಹಳವಾಗಿ ಕೇಳಿಬಂದಿತು. ದುರ್ಯೋಧನನು ಬೀಳಲು ಅಲ್ಲಿ ಉಳಿದಿದ್ದ ಕುದುರೆಗಳೂ ಆನೆಗಳೂ ಮನುಷ್ಯರೊಂದಿಗೆ ಮಹಾನಾದದಿಂದ ಕೂಗಿಕೊಂಡವು. ಅವನು ಬೀಳಲು ಭೇರಿ-ಶಂಖ-ಮೃದಂಗಗಳ ಮತ್ತು ಭೂಮಿಯ ಒಳಗಿನಿಂದಲೂ ಮಹಾಧ್ವನಿಯು ಕೇಳಿಬಂದಿತು.

ಬಹುಪಾದದಗಳಿಂದ ಬಹುಭುಜಗಳಿಂದ ಕೂಡಿದ್ದ ಘೋರವಾಗಿ ಕಾಣುತ್ತಿದ್ದ ನರ್ತಿಸುವ ಕಬಂಧಗಳಿಂದ ಎಲ್ಲ ದಿಕ್ಕುಗಳೂ ತುಂಬಿಹೋಗಿದ್ದವು. ಅವನು ಕೆಳಗುರುಳಲು ಧ್ವಜವಂತ, ಅಸ್ತ್ರವಂತ, ಮತ್ತು ಶಸ್ತ್ರವಂತ ವೀರರು ನಡುಗಿದರು. ಬಾವಿ ಸರೋವರಗಳು ರಕ್ತವನ್ನೇ ತುಂಬಿಕೊಂಡವು. ನದಿಗಳು ಮಹಾವೇಗದಿಂದ ಹರಿಯತೊಡಗಿ ಪ್ರವಾಹಗಳುಂಟಾದವು. ದುರ್ಯೋಧನನು ಕೆಳಕ್ಕೆ ಬೀಳಲು ಪುರುಷರು ಸ್ತ್ರೀಯರ ಲಕ್ಷಣಗಳನ್ನೂ ಸ್ತ್ರೀಯರು ಪುರುಷ ಲಕ್ಷಣಗಳನ್ನೂ ಪಡೆದುಕೊಂಡರು. ಆ ಅದ್ಭುತ ಉತ್ಪಾತಗಳನ್ನು ನೋಡಿ ಪಾಂಚಾಲ ಪಾಂಡವರೆಲ್ಲರೂ ಒಟ್ಟಿಗೇ ಅವಿಗ್ನಮನಸ್ಕರಾದರು. ಆ ಅದ್ಭುತ ಯುದ್ಧವನ್ನು ಪ್ರಶಂಸಿಸುತ್ತಾ ದೇವತೆಗಳೂ, ಗಂಧರ್ವ-ಅಪ್ಸರೆಯರೂ ತಮಗಿಷ್ಟವಾದಲ್ಲಿಗೆ ತೆರಳಿದರು. ಹಾಗೆಯೇ ಸಿದ್ಧರೂ, ವಾತಿಕ-ಚಾರಣರೂ ಆ ನರಸಿಂಹರಿಬ್ಬರನ್ನು ಪ್ರಶಂಸಿಸುತ್ತಾ ಎಲ್ಲಿಂದ ಬಂದಿದ್ದರೋ ಅಲ್ಲಿಗೆ ತೆರಳಿದರು.

ಮಹಾಶಾಲವೃಕ್ಷದಂತಿದ್ದ ದುರ್ಯೋಧನನು ಬಿದ್ದುದನ್ನು ನೋಡಿ ಪಾಂಡವರೆಲ್ಲರೂ ಹರ್ಷಿತರಾದರು. ಸಿಂಹದಿಂದ ಕೆಳಗುರುಳಿಸಲ್ಪಟ್ಟ ಮದಿಸಿದ ಆನೆಯಂತಿದ್ದ ಅವನನ್ನು ನೋಡಿ ಅಲ್ಲಿದ್ದ ಸೋಮಕರೆಲ್ಲರು

ಕೂಡ ರೋಮಾಂಚಿತರಾದರು. ದುರ್ಯೋಧನನನ್ನು ಹೊಡೆದ ಪ್ರತಾಪವಾನ್ ಭೀಮಸೇನನು ಕೆಳಗೆ ಬಿದ್ದಿದ್ದ ಕೌರವೇಂದ್ರನ ಬಳಿ ಹೋಗಿ ಹೀಗೆ ಹೇಳಿದನು:

> "ಮೂಢ! ದುರ್ಮತೇ! ಹಿಂದೆ ಸಭೆಯಲ್ಲಿ ಏಕವಸ್ತ್ರಳಾಗಿದ್ದ ದ್ರೌಪದಿಯನ್ನು "ಹಸು! ಹಸು!" ಎಂದು ಹೇಳಿಕೊಂಡು ಹಾಸ್ಯಮಾಡಿದೆಯಲ್ಲವೇ? ಆ ಅಪಮಾನದ ಫಲವನ್ನು ಇಂದು ನೀನು ಪಡೆದಿದ್ದೀಯೆ!"

ಹೀಗೆ ಹೇಳಿ ಅವನು ಎಡಗಾಲಿನಿಂದ ಅವನ ಕಿರೀಟವನ್ನು ಒದೆದನು. ರಾಜಸಿಂಹನ ಶಿರವನ್ನೂ ಕಾಲಿನಿಂದ ತುಳಿದನು. ಹಾಗೆಯೇ ಕ್ರೋಧಸಂರಕ್ತನಾದ ಭೀಮನು ಪುನಃ ಈ ಮಾತುಗಳನ್ನಾಡಿದನು.

> "ಯಾರು ನಮ್ಮ ಮುಂದೆ "ಹಸು! ಹಸು!" ಎಂದು ಹೇಳಿಕೊಂಡು ಕುಣಿದಾಡುತಿದ್ದನೋ ಅವನ ಎದಿರು ನಾವು ಪ್ರತಿಯಾಗಿ ಪುನಃ "ಹಸು! ಹಸು!" ಎಂದು ಹೇಳಿಕೊಳ್ಳುತ್ತಾ ನರ್ತಿಸುತ್ತೇವೆ! ಮೋಸ, ಬೆಂಕಿ, ಅಕ್ಷದ್ಯೂತ, ಮತ್ತು ವಂಚನೆಗಳು ನಮ್ಮಲ್ಲಿಲ್ಲ. ನಮ್ಮದೇ ಬಾಹುಬಲವನ್ನು ಆಶ್ರಯಿಸಿ ನಾವು ಶತ್ರುಗಳನ್ನು ಸದೆಬಡಿದಿದ್ದೇವೆ."



ವೈರದ ಅಂತಿಮ ಚರಣವನ್ನು ದಾಟಿದ್ದ ವೃಕೋದರನು ನಸುನಗುತ್ತಾ ಯುಧಿಷ್ಠಿರ, ಕೇಶವ, ಸೃಂಜಯರು, ಧನಂಜಯ ಮತ್ತು ಮಾದ್ರವತೀಸುತರಿಗೆ ಹೇಳಿದನು:

> “ರಜಸ್ವಲೆ ದ್ರೌಪದಿಯನ್ನು ಎಳೆದುತಂದು ಯಾರು ಅವಳನ್ನು ಅವಸ್ತ್ರಳನ್ನಾಗಿ ಮಾಡಲು ಪ್ರಯತ್ನಿಸಿದರೋ ಆ ಧಾರ್ತರಾಷ್ಟ್ರರು ಇಂದು ಯಾಜ್ಞಸೇನಿಯ ತಪಃಫಲದಿಂದ

ರಣದಲ್ಲಿ ಹತರಾಗಿರುವುದನ್ನು ನೋಡಿ! ಹಿಂದೆ ನಮ್ಮನ್ನು ಯಾರು ಎಣ್ಣೆಯಿಲ್ಲದ ಎಳ್ಳಿಗೆ ಸಮಾನ ನಪುಂಸಕರೆಂದು ಕರೆದಿದ್ದರೋ ಆ ಕ್ರೂರ ರಾಜ ಧೃತರಾಷ್ಟ್ರನ ಪುತ್ರರು ತಮ್ಮ ಪಂಗಡದವರೊಂದಿಗೆ ಮತ್ತು ಅನುಯಾಯಿಗಳೊಂದಿಗೆ ಹತರಾಗಿದ್ದಾರೆ. ಇನ್ನು ಬೇಕಾದರೆ ಸ್ವರ್ಗ ಅಥವಾ ನರಕಕ್ಕೆ ಹೋದರೂ ವ್ಯತ್ಯಾಸವಿಲ್ಲ!"

ಪುನಃ ಅವನು ಗದೆಯನ್ನು ಹೆಗಲ ಮೇಲಿರಿಸಿಕೊಂಡು ಭೂಮಿಯ ಮೇಲೆ ಬಿದ್ದಿದ್ದ ರಾಜನನ್ನು ನೋಡಿ ಎಡಗಾಲಿನಿಂದ ದುರ್ಯೋಧನನ ಶಿರವನ್ನು ಮೆಟ್ಟಿ "ಮೋಸಗಾರ!" ಎಂದು ಕೂಗಿದನು.

ಕುರುಪಾರ್ಥಿವನ ತಲೆಯನ್ನು ಹರ್ಷಿತನಾದ ಕ್ಷುದ್ರಾತ್ಮ ಭೀಮಸೇನನು ಕಾಲಿನಿಂದ ತುಳಿದುದನ್ನು ನೋಡಿದ ಧರ್ಮಾತ್ಮ ಸೋಮಕರಿಗೆ ಸಂತಸವಾಗಲಿಲ್ಲ. ಅವರು ಅವನನ್ನು ಅಭಿನಂದಿಸಲೂ ಇಲ್ಲ. ದುರ್ಯೋಧನನನ್ನು ಹಾಗೆ ಹೊಡೆದು ಬಹಳವಾಗಿ ಕೊಚ್ಚಿಕೊಳ್ಳುತ್ತಾ ಕುಣಿಯುತ್ತಿದ್ದ ವೃಕೋದರನಿಗೆ ಧರ್ಮರಾಜನು ಹೇಳಿದನು:

"ಅನಘ! ಕಾಲಿನಿಂದ ಇವನ ತಲೆಯನ್ನು ಮೆಟ್ಟಬೇಡ! ನಿನ್ನಿಂದ ಧರ್ಮದ ಉಲ್ಲಂಘನೆಯಾಗದಿರಲಿ! ರಾಜನಾಗಿರುವ, ನಮ್ಮ ದಾಯಾದಿಯಾಗಿರುವ ಮತ್ತು ಕೆಳಗೆ

ಬಿದ್ದಿರುವ ಅವನೊಡನೆ ಈ ರೀತಿ ವರ್ತಿಸುವುದು ಸರಿಯಲ್ಲ! ಅಮಾತ್ಯರನ್ನು, ಸಹೋದರರರನ್ನು ಮತ್ತು ಪ್ರಜೆಗಳನ್ನು ಕಳೆದುಕೊಂಡ ಇವನು ಪಿಂಡಪ್ರದಾನಮಾಡುವವರೂ ಇಲ್ಲದಂತವನಾಗಿ ಸಂಪೂರ್ಣವಾಗಿ ನಾಶಹೊಂದಿದ್ದಾನೆ. ನಮ್ಮ ಸಹೋದರನಾಗಿರುವವನಿಗೆ ಹೀಗೆ ಮಾಡುವುದು ಸರಿಯಲ್ಲ. ಈ ಮೊದಲು ಜನರು "ಭೀಮಸೇನನು ಧಾರ್ಮಿಕ!" ಎಂದು ಹೇಳುತ್ತಿದ್ದರು. ಹಾಗಿದ್ದಾಗ ಭೀಮಸೇನ! ನೀನು ಏಕೆ ರಾಜನನ್ನು ಮೆಟ್ಟಿ ತುಳಿಯುತ್ತಿರುವೆ?"

ರಾಜಾ ದುರ್ಯೋಧನನನ್ನು ನೋಡಿ ಕುಂತೀಪುತ್ರನು ಅವನ ಬಳಿಹೋಗಿ ಕಣ್ಣುಗಳಲ್ಲಿ ಕಣ್ಣೀರುತುಂಬಿದವನಾಗಿ ಈ ಮಾತನ್ನಾಡಿದನು:

"ಕುರುಸತ್ತಮ! ಹೀಗೆ ನಾವು ನಿನ್ನನ್ನು ಮತ್ತು ನೀನು ನಮ್ಮನ್ನು ಕೊಲ್ಲಲು ಮುಂದಾದುದು ಬಲಶಾಲೀ ಧಾತ್ರನು ನಮಗೆ ವಿಧಿಸಿದುದಲ್ಲದೇ ಇನ್ನೇನು? ನಿನ್ನದೇ ಅಪರಾಧಗಳಿಂದ – ಲೋಭ, ಮದ ಮತ್ತು ಬಾಲಬುದ್ಧಿ – ಇವುಗಳಿಂದ ನೀನು ಈ ರೀತಿಯ ಮಹಾ ವ್ಯಸನವನ್ನು ಪಡೆದಿರುವೆ! ಮಿತ್ರರನ್ನೂ, ಸಹೋದರರರನ್ನೂ, ಪಿತೃಗಳನ್ನೂ, ಪುತ್ರರನ್ನೂ, ಪೌತ್ರರನ್ನೂ

ಮತ್ತು ಆಚಾರ್ಯರನ್ನೂ ಸಾವಿಗೀಡುಮಾಡಿ ಕೊನೆಯಲ್ಲಿ ನೀನು ನಿಧನಹೊಂದಿದೆ. ನಿನ್ನ ಅಪರಾಧದಿಂದ ನಿನ್ನ ಮಹಾರಥ ಸಹೋದರರು ಮತ್ತು ಅನ್ಯ ದಾಯಾದಿಗಳು ನಮ್ಮಿಂದ ಹತರಾದರು. ದೈವವನ್ನು ಮೀರುವುದು ಸಾಧ್ಯವಿಲ್ಲ! ವಿಧವೆಯರಾಗಿ ಶೋಕದಿಂದ ವಿಹ್ವಲರಾಗಿರುವ ಧೃತರಾಷ್ಟ್ರನ ಸೊಸೆಯಂದಿರೂ ಮತ್ತು ಮೊಮ್ಮಕ್ಕಳ ಪತ್ನಿಯರೂ ನಿಂದಿಸದಿರಲಿ!"

ಹೀಗೆ ಹೇಳಿ ಅತ್ಯಂತ ದುಃಖಿತನಾದ ಪಾರ್ಥಿವ ಧರ್ಮಪುತ್ರ ಯುಧಿಷ್ಠಿರನು ನಿಟ್ಟುಸಿರು ಬಿಡುತ್ತಾ ಬಹಳ ಹೊತ್ತಿನವರೆಗೆ ವಿಲಪಿಸಿದನು.

ದುರ್ಯೋಧನನ ತಲೆಯನ್ನು ಭೀಮಸೇನನು ಒದೆದುದನ್ನು ಕಂಡು ಬಲಶಾಲೀ ರಾಮನು ಅತ್ಯಂತ ಕ್ರೋಧಿತನಾದನು. ನರೇಂದ್ರರ ಮಧ್ಯದಲ್ಲಿ ಹಲಾಯುಧನು ಬಾಹುಗಳನ್ನು ಮೇಲೆತ್ತಿ ಘೋರ ಆರ್ತಸ್ವರದಲ್ಲಿ "ಭೀಮ! ಧಿಕ್ಕಾರ! ಧಿಕ್ಕಾರ!" ಎಂದು ಕೂಗಿದನು.

"ಧಿಕ್ಕಾರ! ಶುದ್ಧವಿಕ್ರಮನನ್ನು ನಾಭಿಯ ಕೆಳಗೆ ಹೊಡೆದುದಕ್ಕೆ ಧಿಕ್ಕಾರ! ಗದಾಯುದ್ಧದಲ್ಲಿ ವೃಕೋದರನು ಮಾಡಿದುದನ್ನು ಈ ಹಿಂದೆ ಯಾರೂ ಕಂಡಿರಲಿಲ್ಲ! ನಾಭಿಯ ಕೆಳಗೆ

ಹೊಡೆಯಬಾರದೆಂದು ಗದಾಯುದ್ಧ ಶಾಸ್ತ್ರದ ನಿಶ್ಚಯ! ಶಸ್ತ್ರಗಳ ಕುರಿತು ಮೂಢನಾದ ಇವನು ಸ್ವಚ್ಛಂದವಾಗಿ ವರ್ತಿಸಿದ್ದಾನೆ!”

ಅವನು ಹೀಗೆ ಹೇಳುತ್ತಿದ್ದಂತೆಯೇ ಅವನಲ್ಲಿ ಮಹಾ ರೋಷವು ಉದ್ಭವಿಸಿತು. ನೇಗಿಲನ್ನೆತ್ತಿಕೊಂಡು ಆ ಬಲಶಾಲಿಯು ಭೀಮನನ್ನು ಆಕ್ರಮಿಸ ಹೊರಟನು. ಆಗ ಬಾಹುಗಳನ್ನು ಮೇಲಿತ್ತಿದ್ದ ಆ ಮಹಾತ್ಮನ ರೂಪವು ಅನೇಕ ಧಾತುಗಳು ಸುರಿದು ಬಣ್ಣದ ಲೇಪನಗೊಂಡಿದ್ದ ಮಹಾ ಶ್ವೇತಗಿರಿಯಂತೆ ತೋರಿತು. ಮೇಲೇಳುತ್ತಿದ್ದ ಅವನನ್ನು ವಿನಯಾನತ ಕೇಶವನು ಉಬ್ಬಿದ ಉರುಟು ಬಾಹುಗಳಿಂದ ಬಲವನ್ನುಪಯೋಗಿಸಿ ಪ್ರಯತ್ನಪಟ್ಟು ಹಿಡಿದುಕೊಂಡನು. ಕಪ್ಪು ಮತ್ತು ಶ್ವೇತವರ್ಣಗಳ ಆ ಇಬ್ಬರು ಯದುವರರು ಸಾಯಂಕಾಲ ಆಕಾಶದಲ್ಲಿ ಕಾಣುವ ಚಂದ್ರ-ಸೂರ್ಯರಂತೆ ಶೋಭಿಸಿದರು.
ಕುಪಿತನಾಗಿರುವವನನ್ನು ಸಂತವಿಸುತ್ತಾ ಕೇಶವನು ಈ ಮಾತುಗಳನ್ನಾಡಿದನು:

“ಆತ್ಮವೃದ್ಧಿ, ಮಿತ್ರವೃದ್ಧಿ, ಮಿತ್ರನ ಶತ್ರುವಿನ ನಾಶ, ಮಿತ್ರನ ಮಿತ್ರನ ವೃದ್ಧಿ, ಶತ್ರುವಿನ ಮಿತ್ರನ ನಾಶ – ಈ ಆರು ಆತ್ಮವೃದ್ಧಿಗೆ ಸಾಧನಗಳಾಗುತ್ತವೆ. ತನ್ನ ವಿಷಯದಲ್ಲಿಯೂ

ಮತ್ತು ತನ್ನ ಮಿತ್ರನ ವಿಷಯದಲ್ಲಿಯೂ ಇದಕ್ಕೆ ವಿಪರೀತವಾದುದಾದರೆ ಮನೋವ್ಯಥೆಯುಂಟಾಗುತ್ತದೆ. ಬೇಗನೇ ಅದನ್ನು ನಿವಾರಿಸಲು ಪ್ರಯತ್ನಿಸಬೇಕು. ಶುದ್ಧಪೌರುಷ ಪಾಂಡವರು ನಮ್ಮ ಸಹಜ ಮಿತ್ರರು. ನಮ್ಮ ಸೋದರತ್ತೆಯ ಮಕ್ಕಳಾದುದರಿಂದ ಅವರು ನಮ್ಮವರು. ಶತ್ರುಗಳಿಂದ ಬಹಳವಾಗಿ ಪೀಡಿತರಾಗಿರುವರು. ಪ್ರತಿಜ್ಞಾಪಾಲನೆಯು ಕ್ಷತ್ರಿಯನ ಧರ್ಮವೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ಸಭಾತಲದಲ್ಲಿ ಭೀಮನು “ಮಹಾಯುದ್ಧದಲ್ಲಿ ಗದೆಯಿಂದ ಸುಯೋಧನನ ತೊಡೆಯನ್ನು ಸೀಳುತ್ತೇನೆ!” ಎಂದು ಪ್ರತಿಜ್ಞೆಮಾಡಿದ್ದನು. ಹಿಂದೆ ಮಹರ್ಷಿ ಮೈತ್ರೇಯನೂ ಕೂಡ “ಭೀಮನು ಗದೆಯಿಂದ ನಿನ್ನ ತೊಡೆಯನ್ನು ಒಡೆಯುತ್ತಾನೆ!” ಎಂದು ಶಪಿಸಿದ್ದನು. ಆದುದರಿಂದ ಇದರಲ್ಲಿ ದೋಷವನ್ನೇನೂ ನಾನು ಕಾಣುತ್ತಿಲ್ಲ. ಕೋಪಗೊಳ್ಳದಿರು! ಪಾಂಡವರೊಂದಿಗೆ ಶರೀರಸಂಬಂಧವಿದೆ. ವಿವಾಹದ ಮೂಲಕವೂ ಅವರೊಂದಿಗೆ ನಮ್ಮ ಸಂಬಂಧವಿದೆ. ಅವರ ವೃದ್ಧಿಯು ನಮ್ಮ ವೃದ್ಧಿಯೂ ಒಂದೇ. ಪುರುಷರ್ಷಭ! ಕ್ರೋಧಿತನಾಗಬೇಡ!”

ಆಗ ಬಲರಾಮನು ಹೇಳಿದನು:

"ಸಂಪತ್ತನ್ನು ಅತಿಯಾಗಿ ಆಸೆಪಡುವುದರಿಂದ ಮತ್ತು ಅತಿಯಾದ ದೇಹಕಾಮವನ್ನು ಬಯಸುವುದರಿಂದ ಸತ್ಪುರುಷರು ಆಚರಿಸುವ ಧರ್ಮವು ಸಂಕುಚಿತವಾಗುತ್ತದೆ. ಯಾರು ಧರ್ಮ-ಅರ್ಥಗಳನ್ನೂ, ಧರ್ಮ-ಕಾಮಗಳನ್ನೂ, ಕಾಮ-ಅರ್ಥಗಳನ್ನೂ ಪರಸ್ಪರ ಕುಂಠಿತವಾಗದಂತೆ ಧರ್ಮ-ಅರ್ಥ-ಕಾಮ ಈ ಮೂರನ್ನೂ ಯಥೋಚಿತವಾಗಿ ಅನುಸರಿಸುತ್ತಾನೋ ಅವನು ಅತ್ಯಂತ ಸುಖವನ್ನು ಹೊಂದುತ್ತಾನೆ. ಗೋವಿಂದ! ಭೀಮಸೇನನು ಬೇಕಂತಲೇ ಧರ್ಮವನ್ನು ಅವಹೇಳಿಸಿ ಎಲ್ಲವನ್ನೂ ವ್ಯಾಕುಲಗೊಳಿಸಿದ್ದಾನೆ. ಈ ವಿಷಯದಲ್ಲಿ ನೀನು ನಿನಗೆ ತೋರಿದ ಧರ್ಮವನ್ನು ನನಗೆ ಹೇಳುತ್ತಿರುವೆ!"

ಕೃಷ್ಣನು ಹೇಳಿದನು:

"ನೀನು ಧರ್ಮಾತ್ಮ. ಸತತವೂ ಧರ್ಮವತ್ಸಲ. ಕ್ರೋಧರಹಿತನೆಂದು ಲೋಕದಲ್ಲಿ ಪ್ರಖ್ಯಾತನಾಗಿರುವೆ! ಆದುದರಿಂದ ಶಾಂತನಾಗು. ಕ್ರೋಧಿಸಬೇಡ! ಕಲಿಯುಗವು ಪ್ರಾಪ್ತವಾದುದನ್ನೂ ಪಾಂಡವ ಭೀಮಸೇನನ ಪ್ರತಿಜ್ಞೆಯನ್ನೂ

> ಗಮನಿಸು. ಪಾಂಡವ ಭೀಮನು ವೈರ ಮತ್ತು ಪ್ರತಿಜ್ಞೆಗಳ ಋಣಗಳಿಂದ ಮುಕ್ತನಾಗಲಿ!"

ಕೇಶವನಿಂದ ವ್ಯಾಜರೂಪವಾದ ಧರ್ಮದ ವಿವರಣೆಯನ್ನು ಕೇಳಿ ರಾಮನಿಗೆ ಸಮಾಧಾನವಾಗಲಿಲ್ಲ. ರಾಜಸಂಸದಿಯಲ್ಲಿ ಅವನು ಈ ಮಾತುಗಳನ್ನಾಡಿದನು:

> "ಧರ್ಮಾತ್ಮ ರಾಜಾ ಸುಯೋಧನನನ್ನು ಅಧರ್ಮದಿಂದ ಕೊಂದು ಪಾಂಡವ ಭೀಮನು ಈ ಲೋಕದಲ್ಲಿ ವಂಚನೆಯ ಯುದ್ಧಮಾಡುವವನು ಎಂದು ಪ್ರಖ್ಯಾತನಾಗುತ್ತಾನೆ! ಹತನಾದ ಧರ್ಮಾತ್ಮ ನ್ಯಾಯಯೋಧೀ ನರಾಧಿಪ ರಾಜಾ ದುರ್ಯೋಧನನಾದರೋ ಶಾಶ್ವತ ಗತಿಯನ್ನು ಹೊಂದುತ್ತಾನೆ. ಯುದ್ಧದೀಕ್ಷೆಯನ್ನು ಕೈಗೊಂಡು ಪ್ರವೇಶಿಸಿ ರಣಯಜ್ಞವನ್ನು ಪಸರಿಸಿ ಶತ್ರುಗಳೆಂಬ ಅಗ್ನಿಯಲ್ಲಿ ಆತ್ಮಾಹುತಿಯನ್ನಿತ್ತು ಇವನು ಯಶಸ್ಸೆಂಬ ಅವಭೃತವನ್ನು ಹೊಂದಿದನು."

ಹೀಗೆ ಹೇಳಿ ರಥವನ್ನೇರಿ ಶ್ವೇತಗಿರಿಯ ಶಿಖರಪ್ರಾಯನಾದ ಪ್ರತಾಪವಾನ್ ರೌಹಿಣೇಯನು ದ್ವಾರಕೆಯ ಕಡೆ ಪ್ರಯಾಣಿಸಿದನು. ರಾಮನು ದ್ವಾರವತಿಗೆ ತೆರಳುತ್ತಿರುವುವನ್ನು ನೋಡಿ ಪಾಂಚಾಲರು, ಸರ್ವ ವಾರ್ಷ್ಣೇಯರು ಮತ್ತು ಪಾಂಡವರು ಅತಿ ಪ್ರಸನ್ನರಾಗಲಿಲ್ಲ. ಆಗ

ದೀನನಾಗಿ ಚಿಂತಾಪರನಾಗಿ ಶೋಕದಿಂದ ಭಗ್ನ ಸಂಕಲ್ಪನಾಗಿ ಮುಖವನ್ನು ಕೆಳಗೆಮಾಡಿಕೊಂಡಿದ್ದ ಯುಧಿಷ್ಠಿರನಿಗೆ ವಾಸುದೇವನು ಹೇಳಿದನು:

> “ಧರ್ಮರಾಜ! ಏಕೆ ಹೀಗೆ ನೀನು ಅಧರ್ಮಕಾರ್ಯಕ್ಕೆ ಒಪ್ಪಿಗೆಯನ್ನಿತ್ತೆ? ಬಂಧುಗಳನ್ನು ಕಳೆದುಕೊಂಡು ಪ್ರಜ್ಞಾಹೀನನಾಗಿ ಅವನು ಕೆಳಗೆ ಬಿದ್ದಿದ್ದನು. ಧರ್ಮಜ್ಞನಾದ ನೀನು ದುರ್ಯೋಧನನ ಶಿರವನ್ನು ಭೀಮಸೇನನು ಪಾದಗಳಿಂದ ತುಳಿಯುವುದನ್ನು ಏಕೆ ಉಪೇಕ್ಷಿಸಲಿಲ್ಲ?”

ಯುಧಿಷ್ಠಿರನು ಹೇಳಿದನು:

> “ಕೃಷ್ಣ! ವೃಕೋದರನು ಕ್ರೋಧದಿಂದ ಕಾಲಿನಿಂದ ರಾಜನನ್ನು ಮೆಟ್ಟಿದಿದು ನನಗೂ ಇಷ್ಟವಾಗಲಿಲ್ಲ. ಕುಲಕ್ಷಯದಲ್ಲಿ ಯಾವ ಸಂತೋಷವೂ ಇಲ್ಲ! ಧೃತರಾಷ್ಟ್ರನ ಮಕ್ಕಳು ನಮ್ಮನ್ನು ನಿತ್ಯವೂ ವಂಚನೆಗಳಿಂದ ಮೋಸಗೊಳಿಸುತ್ತಿದ್ದರು. ಅನೇಕ ಕಠೋರಮಾತುಗಳನ್ನಾಡಿ ನಮ್ಮನ್ನು ವನಕ್ಕೆ ಕೂಡ ಕಳುಹಿಸಿದರು. ಭೀಮಸೇನನ ಹೃದಯದಲ್ಲಿದ್ದ ಆ ಅತೀವ ದುಃಖವು ಅವನನ್ನು ಈ ರೀತಿ ನಡೆಸಿಕೊಂಡಿತು. ಹೀಗೆ ಯೋಚಿಸಿ ನಾನು ಅವನ ಈ ಕೆಲಸವನ್ನು ಉಪೇಕ್ಷಿಸಲಿಲ್ಲ.

ಆದುದರಿಂದ ಪ್ರಜ್ಞೆಗಳಿಲ್ಲದ ಲುಬ್ಧನಾದ ಕಾಮವಶಾನುಗನಾದ ದುರ್ಯೋಧನನಿಗೆ ಧರ್ಮ ಅಥವಾ ಅಧರ್ಮ ಕಾರ್ಯವನ್ನೆಸಗಿ ಪಾಂಡವ ಭೀಮನು ತನ್ನ ಆಸೆಯನ್ನು ಪೂರೈಸಿಕೊಂಡಿದ್ದಾನೆ!"

ಧರ್ಮರಾಜನು ಹೀಗೆ ಹೇಳಲು ಯದುಕುಲೋದ್ವಹ ವಾಸುದೇವನು ಬಹಳ ಕಷ್ಟದಿಂದ "ನಿನಗಿಷ್ಟವಾದಂತಾಗಲಿ!" ಎಂದು ಹೇಳಿದನು. ವಾಸುದೇವನು ಹೀಗೆ ಹೇಳಲು ಭೀಮನು ಯುದ್ಧದಲ್ಲಿ ಮಾಡಿದುದೆಲ್ಲವನ್ನೂ ಅನುಮೋದಿಸಿದನು. ಅಸಹನಶೀಲ ಭೀಮಸೇನನಾದರೋ ದುರ್ಯೋಧನನನ್ನು ಸಂಹರಿಸಿ ಸಂತೋಷದಿಂದ ಅಂಜಲೀಬದ್ಧನಾಗಿ ಅಣ್ಣನ ಎದುರು ನಮಸ್ಕರಿಸಿ ನಿಂತುಕೊಂಡನು. ಆ ಮಹಾತೇಜಸ್ವಿಯು ವಿಜಯದ ಹರ್ಷದಿಂದ ಕಣ್ಣುಗಳನ್ನರಳಿಸಿಕೊಂಡು ಧರ್ಮರಾಜ ಯುಧಿಷ್ಠಿರನಿಗೆ ಹೇಳಿದನು:

"ರಾಜನ್! ಇಂದು ನಿನಗಾಗಿ ಈ ಪೃಥ್ವಿಯು ಕಂಟಕರನ್ನು ಕಳೆದುಕೊಂಡು ಕ್ಷೇಮವಾಗಿದೆ. ಸ್ವಧರ್ಮವನ್ನು ಪಾಲಿಸಿಕೊಂಡು ಇದರ ಮೇಳೆ ಪ್ರಶಾಸನ ಮಾಡು! ಯಾವ ಮೋಸಪ್ರಿಯನು ನಿನಗೆ ಮೋಸಗೈದನೋ ಆ ವೈರಿಯು ಇಗೋ ಹತನಾಗಿ ಭೂಮಿಯ ಮೇಲೆ ಮಲಗಿದ್ದಾನೆ.

> ಕಠೋರಮಾತುಗಳನ್ನಾಡುತ್ತಿದ್ದ ನಿನ್ನ ಶತ್ರುಗಳಾದ ದುಃಶಾಸನನೇ ಮೊದಲಾಗಿ ರಾಧೇಯ, ಶಕುನಿ ಎಲ್ಲರೂ ಹತರಾಗಿದ್ದಾರೆ. ರತ್ನಸಮಾಕೀರ್ಣಳಾದ ಮಹಿಯು ವನಪರ್ವತಗಳೊಂದಿಗೆ ಹತಶತ್ರುವಾದ ನಿನ್ನನ್ನು ಉಪಾಸಿಸುತ್ತಾಳೆ!"

ಯುಧಿಷ್ಠಿರನು ಹೇಳಿದನು:

> "ನಿನ್ನ ವೈರವು ಕೊನೆಗೊಂಡಿತು. ರಾಜಾ ಸುಯೋಧನನು ಹತನಾದನು. ಕೃಷ್ಣನ ಸಲಹೆಗಳನ್ನು ಅನುಸರಿಸಿ ನಾವು ಈ ವಸುಂಧರೆಯನ್ನು ಗೆದ್ದೆವು! ಒಳ್ಳೆಯದಾಯಿತು! ನೀನು ಮಾತೃ ಋಣ ಮತ್ತು ಕ್ರೋಧ ಋಣ ಇವೆರಡರಿಂದಲೂ ಮುಕ್ತನಾಗಿರುವೆ! ಒಳ್ಳೆಯದಾಯಿತು! ದುರ್ಧರ್ಷನನ್ನು ಗೆದ್ದಿರುವೆ! ಒಳ್ಳೆಯದಾಯಿತು! ಶತ್ರುವನ್ನು ಕೆಳಗುರುಳಿಸಿರುವೆ!"

ವನದಲ್ಲಿ ಮದಿಸಿದ ಕಾಡಾನೆಯನ್ನು ಸಿಂಹವು ಹೇಗೋ ಹಾಗೆ ಯುದ್ಧದಲ್ಲಿ ದುರ್ಯೋಧನನನ್ನು ಭೀಮಸೇನನು ಹೊಡೆದುರುಳಿಸಲು ಕೃಷ್ಣನೊಂದಿಗೆ ಪಾಂಡವರು ಹರ್ಷಿತರಾದರು. ಕುರುನಂದನನು ಹತನಾಗಲು ಪಾಂಚಾಲರು ಮತ್ತು ಸೃಂಜಯರು ಉತ್ತರೀಯಗಳನ್ನು

ಮೇಲೆ ಹಾರಿಸಿದರು ಮತ್ತು ಸಿಂಹನಾದಗೈದರು. ಹರ್ಷಿತರಾಗಿ ಕುಣಿದಾಡುತ್ತಿದ್ದ ಅವರ ಭಾರವನ್ನು ವಸುಂಧರೆಗೂ ಸಾಧ್ಯವಾಗಲಿಲ್ಲ. ಕೆಲವರು ಧನುಸ್ಸುಗಳನ್ನು ಟೇಂಕರಿಸಿದರು. ಇನ್ನು ಕೆಲವರು ಶಿಂಜನಿಗಳನ್ನು ಮೀಟುತ್ತಿದ್ದರು. ಕೆಲವರು ಮಹಾಶಂಖಗಳನ್ನು ಊದಿದರೆ ಇನ್ನು ಕೆಲವರು ದುಂದುಭಿಗಳನ್ನು ಮೊಳಗಿಸಿದರು. ಕೆಲವರು ಕುಣಿದಾಡಿದರು. ಕೆಲವರು ಪರಿಹಾಸಮಾಡಿ ನಗುತ್ತಿದ್ದರು. ಆ ವೀರರು ಭೀಮಸೇನನ ಕುರಿತಾಗಿ ಈ ಮಾತುಗಳನ್ನಾಡುತ್ತಿದ್ದರು:

> "ಇಂದು ರಣದಲ್ಲಿ ಗದೆಯಲ್ಲಿ ಅತಿ ಪರಿಶ್ರಮಮಾಡಿರುವ ಕೌರವೇಂದ್ರನನ್ನು ಕೊಂದು ದುಷ್ಕರವಾದ ಮಹಾ ಕಾರ್ಯವನ್ನು ಎಸಗಿರುವೆ! ಮಹಾಸಮರದಲ್ಲಿ ಇಂದ್ರನು ವೃತ್ರನ ವಧೆಗೈದಂತೆ ನೀನು ಶತ್ರುವಿನ ವಧೆಗೈದೆಯೆಂದು ಜನರು ಭಾವಿಸಿದ್ದಾರೆ. ವಿವಿಧ ಮಾರ್ಗಗಳಲ್ಲಿ ಮತ್ತು ಮಂಡಲಾಕಾರಗಳಲ್ಲಿ ಎಲ್ಲಕಡೆ ತಿರುಗುತ್ತಿದ್ದ ಈ ಶೂರ ದುರ್ಯೋಧನನನ್ನು ವೃಕೋದರನಲ್ಲದೆ ಬೇರೆ ಯಾರು ಸಂಹರಿಸಬಲ್ಲವರಾಗಿದ್ದರು? ಇತರರಿಗೆ ಸುದುರ್ಗಮವಾಗಿದ್ದ ಈ ವೈರವೆಂಬ ಸಮುದ್ರವನ್ನು ನೀನು ದಾಟಿರುವೆ! ಈ ರೀತಿಯ ವಿಜಯವನ್ನು ಸಂಪಾದಿಸಲು ಬೇರೆ ಯಾರಿಗೂ

ಸಾಧ್ಯವಾಗುತ್ತಿರಲಿಲ್ಲ. ವೀರ! ಒಳ್ಳೆಯದಾಯಿತು! ಮದಿಸಿದ ಆನೆಯಂತೆ ನೀನು ಸಂಗ್ರಾಮದಲ್ಲಿ ದುರ್ಯೋಧನನ ತಲೆಯನ್ನು ನಿನ್ನ ಕಾಲಿನಿಂದ ಒದೆದು ತುಳಿದೆ! ಒಳ್ಳೆಯದಾಯಿತು ನೀನು ಸಿಂಹವು ಎಮ್ಮೆಯ ರಕ್ತವನ್ನು ಹೀರಿ ಕುಡಿಯುವಂತೆ ಅದ್ಭುತವಾಗಿ ಯುದ್ಧಮಾಡಿ ದುಃಶಾಸನನ ರಕ್ತವನ್ನು ಕುಡಿದೆ! ಒಳ್ಳೆಯದಾಯಿತು! ಧರ್ಮಾತ್ಮ ರಾಜಾ ಯುಧಿಷ್ಠಿರನ ಕುರಿತು ಅಪರಾಧವೆಸಗಿದವರ ತಲೆಯ ಮೇಲೆ ಸಾಹಸದಿಂದ ನಿನ್ನ ಕಾಲನ್ನು ಮೆಟ್ಟಿದೆ. ಭೀಮ! ಒಳ್ಳೆಯದಾಯಿತು! ದುರ್ಯೋಧನನನ್ನು ವಧಿಸಿ ಶತ್ರುಗಳ ಮೇಲೆ ಅಧಿಕಾರವನ್ನು ಸ್ಥಾಪಿಸಿದ ನಿನ್ನ ಈ ಮಹಾ ಯಶಸ್ಸು ಭೂಮಿಯಲ್ಲಿಯೇ ಪ್ರಥಿತವಾಗಿರುತ್ತದೆ! ವೃತ್ರನು ಹತನಾಗಲು ಶಕ್ರನನ್ನು ವಂದಿಮಾಗಧರು ಹೇಗೆ ಗೌರವಿಸಿ ಆನಂದಿಸಿದರೋ ಹಾಗೆ ಅಮಿತ್ರನನ್ನು ಸಂಹರಿಸಿದ ನಿನ್ನನ್ನು ನಾವು ಗೌರವಿಸಿ ಆನಂದಿಸುತ್ತಿದ್ದೇವೆ. ದುರ್ಯೋಧನನ ವಧೆಯ ಸಮಯದಲ್ಲಿ ಹರ್ಷಗೊಂಡು ನಿಮಿರಿ ನಿಂತಿದ್ದ ನಮ್ಮ ರೋಮಕೋಟಿಗಳು ಈಗಲೂ ಕೂಡ ಹರ್ಷಗೊಂಡು ಹಾಗೆಯೇ ನಿಂತಿವೆ ಎನ್ನುವುದನ್ನು ತಿಳಿ!”

ಅಲ್ಲಿ ನೆರೆದಿದ್ದ ವೀರಯೋಧರು ಭೀಮಸೇನನನ್ನು ಈ ರೀತಿ ಹೇಳಿ ಪ್ರಶಂಸಿಸಿದರು.

ಹಾಗೆ ಒಟ್ಟಾಗಿ ಹರ್ಷದಿಂದ ಹೇಳುತ್ತಿದ್ದ ಪಾಂಚಾಲ-ಪಾಂಡವ ಪುರುಷವ್ಯಾಘ್ರರಿಗೆ ಮಧುಸೂದನನು ಹೇಳಿದನು:

> "ಜನಾಧಿಪರೇ! ಹತನಾಗಿರುವ ಶತ್ರುವನ್ನು ಪುನಃ ಪುನಃ ಕಠೋರ ಮಾತುಗಳಿಂದ ಪೀಡಿಸುವುದು ಸರಿಯಲ್ಲ. ಈ ಮಂದಬುದ್ಧಿಯು ಈಗಾಗಲೇ ಹತನಾಗಿಹೋಗಿದ್ದಾನೆ! ಎಂದು ಪಾಪಿಗಳ ಸಹಾಯದಿಂದ ಸುಹೃದಯರ ಆದೇಶಗಳನ್ನು ಮೀರಿದನೋ ಅಂದೇ ಈ ಪಾಪಿ ಲುಬ್ಧನು ಹತನಾದನು. ವಿದುರ, ದ್ರೋಣ, ಕೃಪ, ಗಾಂಗೇಯ, ಮತ್ತು ಸೃಂಜಯರು ಎಷ್ಟೇ ಹೇಳಿದರೂ ಇವನು ಪಾಂಡವರಿಗೆ ಅವರ ಪಿತ್ರಾಂಶವನ್ನು ನೀಡಲಿಲ್ಲ! ಈ ಪುರುಷಾಧಮನು ಈಗ ಯಾರ ಮಿತ್ರನಾಗಿರಲೂ ಶತ್ರುವಾಗಿರಲೂ ಯೋಗ್ಯನಾಗಿಲ್ಲ. ಕಟ್ಟಿಗೆಯಂತೆ ಬಿದ್ದಿರುವ ಇವನನ್ನು ಕಠಿಣವಾದ ಮಾತುಗಳಿಂದ ಬಗ್ಗಿಸಲು ಪ್ರಯತ್ನಿಸುವುದರಿಂದ ಏನು ಪ್ರಯೋಜನ? ವಸುಧಾಧಿಪರೇ! ಬೇಗ ರಥಗಳನ್ನೇರಿ! ಹೋಗೋಣ! ಒಳ್ಳೆಯದಾಯಿತು ಈ ಪಾಪಾತ್ಮನು ತನ್ನ

ಅಮಾತ್ಯರು ಮತ್ತು ಬಂಧು-ಬಾಂಧವರನೆ ಹತನಾಗಿದ್ದಾನೆ!”

ಕೃಷ್ಣನ ಈ ನಿಂದನೆಯನ್ನು ಕೇಳಿ ನೃಪ ದುರ್ಯೋಧನನು ಕೋಪವನ್ನು ತಡೆದುಕೊಳ್ಳಲಾರದೇ ಎದ್ದು ಕುಳಿತನು. ಎರಡು ಕೈಗಳನ್ನೂ ನೆಲಕ್ಕೆ ಒತ್ತಿಕೊಂಡು ಮೇಲೆದ್ದು ಪೃಷ್ಠವನ್ನು ಊರಿ ಕುಳಿತನು. ಹುಬ್ಬನ್ನು ಗಂಟಿಕ್ಕಿ ಕೃಷ್ಣನನ್ನು ದುರುಗುಟ್ಟಿ ನೋಡಿದನು. ಶರೀರದ ಅರ್ಧಭಾಗವು ಮೇಲೆ ಎದ್ದಿದ್ದ ಅವನ ರೂಪವು ಬಾಲವನ್ನು ಕತ್ತರಿಸಿಕೊಂಡು ಕೃದ್ಧನಾದ ಹೆಡೆಯಿತ್ತಿದ ವಿಷಸರ್ಪದಂತೆ ಕಾಣುತ್ತಿತ್ತು. ಆಗ ತನಗಾಗುತ್ತಿದ್ದ ಪ್ರಾಣಾಂತಕವಾಗಿರುವ ಘೋರ ವೇದನೆಯನ್ನೂ ಲೆಕ್ಕಿಸದೇ ದುರ್ಯೋಧನನು ವಾಸುದೇವನನ್ನು ಕಠೋರ ಮಾತುಗಳಿಂದ ನಿಂದಿಸಿದನು:

“ಕಂಸನ ದಾಸನ ಮಗನೇ! ಗದಾಯುದ್ಧದಲ್ಲಿ ಅಧರ್ಮಪೂರ್ವಕವಾಗಿ ನನ್ನನ್ನು ಕೆಳಗುರುಳಿಸಿದುದರಿಂದ ನಿನಗೆ ಸ್ವಲ್ಪವೂ ನಾಚಿಕೆಯಿಲ್ಲವೇ? ತೊಡೆಯನ್ನು ಮುರಿಯುವಂತೆ ಮೋಸದಿಂದ ಭೀಮನಿಗೆ ನೆನಪು ಮಾಡುವಾಗ ನೀನು ಅರ್ಜುನನೊಡನೆ ಏನು ಹೇಳಿದೆಯೆಂಬುದು ನನಗೆ ತಿಳಿದಿದೆ. ನಿಜವಾಗಿ ಯುದ್ಧಮಾಡುತ್ತಿದ್ದ ಸಹಸ್ರಾರು ಮಹೀಪಾಲರನ್ನು ಅನೇಕ

ಕುಟಿಲೋಪಾಯಗಳ ಮೂಲಕ ಸಂಹಾರ ಮಾಡಿಸಿರುವ ನಿನಗೆ ಲಜ್ಜೆಯೂ ಇಲ್ಲ, ಕರುಣೆಯೂ ಇಲ್ಲ. ಅನುದಿನವೂ ಮಹಾ ಶೂರರೊಡನೆ ಮಹಾ ಯುದ್ಧವನ್ನು ಮಾಡುತ್ತಿದ್ದ ಪಿತಾಮಹನನ್ನು ಶಿಂಖಂಡಿಯನ್ನು ಎದುರಿಗೆ ತಂದು ಸಂಹರಿಸಿದೆ! ದುರ್ಬುದ್ಧಿಯೇ! ಅಶ್ವತ್ಥಾಮವೆಂಬ ಆನೆಯನ್ನು ಕೊಂದು ಅವನೇ ಸತ್ತನೆಂದು ಹೇಳಿ ಆಚಾರ್ಯನಿಂದ ಶಸ್ತ್ರತ್ಯಾಗಮಾಡಿಸಿದುದು ನನಗೆ ತಿಳಿದಿಲ್ಲವೇ? ಅಂತಹ ವೀರ್ಯವಾನನನ್ನು ಕ್ರೂರಿ ಧೃಷ್ಟದ್ಯುಮ್ನನು ಕೊಂದುದನ್ನು ನೀನು ನೋಡಿದೆ! ಆದರೆ ಅದನ್ನು ನೀನು ತಡೆಯಲಿಲ್ಲ! ಪಾಂಡುಪುತ್ರ ಅರ್ಜುನನ ವಧೆಗೆಂದು ಪಡೆದಿದ್ದ ಶಕ್ತಿಯನ್ನು ಘಟೋತ್ಕಚನ ವಧೆಗೆ ಬಳಸುವ ಕುತ್ರಂತ್ರವನ್ನು ನೀನು ಮಾಡಿದೆ. ನಿನಗಿಂತ ಪಾಪಿಗಳು ಇನ್ಯ್ಯಾರಿದ್ದಾರೆ? ಬಾಹುವು ತುಂಡಾಗಿ ಪ್ರಾಯೋಪವೇಶಮಾಡಿದ್ದ ಬಲಶಾಲೀ ಭೂರಿಶ್ರವನನ್ನು ನಿನ್ನದೇ ಸೂಚನೆಯಂತೆ ದುರಾತ್ಮ ಶೈನೇಯನು ಸಂಹರಿಸಿದನು! ಕರ್ಣನು ಪಾರ್ಥನ ಸಂಹಾರವೆಂಬ ಉತ್ತಮ ಕರ್ಮವನ್ನು ಮಾಡಹೊರಟಿದ್ದಾಗ ನೀನು ಪನ್ನಗೇಂದ್ರನ ಮಗ ಅಶ್ವಸೇನನನ್ನು ಮೋಸದಿಂದ ತಡೆದೆ! ಮತ್ತೆ ಸಮರದಲ್ಲಿ ಹುಗಿದುಹೋಗಿದ್ದ ರಥಚಕ್ರವನ್ನು

ಮೇಲೆತ್ತಲು ಪ್ರಯತ್ನಿಸುವ ಸಂದಿಗ್ಧ ಸಮಯದಲ್ಲಿ ನರಾಗ್ರ ಕರ್ಣನಿದ್ದಾಗ ನೀನು ಅವನನ್ನು ಕೊಲ್ಲಿಸಿದೆ! ಒಂದು ವೇಳೆ ನೀನು ನನ್ನೊಡನೆ, ಕರ್ಣನೊಡನೆ ಅಥವಾ ಭೀಷ್ಮದ್ರೋಣರೊಡನೆ ಸಮರದಲ್ಲಿ ನಿಜವಾದ ಯುದ್ಧವನ್ನೇ ಮಾಡಿದ್ದೆಯಾದರೆ ವಿಜಯವು ಖಂಡಿತವಾಗಿಯೂ ನಿನ್ನದಾಗುತ್ತಿರಲಿಲ್ಲ! ಪುನಃ ಸ್ವಧರ್ಮದಲ್ಲಿ ನಿರತರಾಗಿರುವ ನಮ್ಮವರಾದ ಇತರ ಪಾರ್ಥಿವರನ್ನೂ ನೀನು ಅನಾರ್ಯವಾದ ಕುಟಿಲಮಾರ್ಗಗಳನ್ನು ಬಯಸಿ ಸಂಹರಿಸಿದೆ!”

ವಾಸುದೇವನು ಹೇಳಿದನು:

“ಗಾಂಧಾರೇ! ಪಾಪಮಾರ್ಗಗಳಲ್ಲಿ ನಡೆಯುತ್ತಿದ್ದ ನೀನು ಸಹೋದರರು, ಮಕ್ಕಳು, ಬಾಂಧವರು ಮತ್ತು ಸ್ನೇಹಿತ ಗಣಗಳೊಂದಿಗೆ ಹತನಾಗಿದ್ದೀಯೆ! ನಿನ್ನ ದುಷ್ಕೃತಗಳಿಂದಾಗಿಯೇ ಭೀಷ್ಮ-ದ್ರೋಣರೂ ಹತರಾದರು. ನಿನ್ನ ನಡತೆಯನ್ನೇ ಅನುಸರಿಸಿದ ಕರ್ಣನೂ ಕೂಡ ಯುದ್ಧದಲ್ಲಿ ಹತನಾದನು. ಮೂಢ! ಲೋಭದಿಂದ ಮತ್ತು ಶಕುನಿಯ ನಿಶ್ಚಯದಂತೆ ನೀನು ಪಾಂಡವರ ಪಿತ್ರಾರ್ಜಿತ

ಅರ್ಧರಾಜ್ಯವನ್ನು ಅವರಿಗೆ ಕೊಡು ಎಂದು ಬೇಡಿಕೊಂಡರೂ ಕೊಡಲಿಲ್ಲ. ದುರ್ಬುದ್ಧೇ! ನೀನು ಭೀಮಸೇನನಿಗೆ ವಿಷವನ್ನುಣಿಸಿದೆ. ಪಾಂಡವರೆಲ್ಲರನ್ನೂ ಅವರ ತಾಯಿಯೊಂದಿಗೆ ಜತುಗೃಹದಲ್ಲಿ ಸುಡಲು ಪ್ರಯತ್ನಿಸಿದೆ. ದುಷ್ಟಾತ್ಮ! ರಜಸ್ವಲೆ ಯಾಜ್ಞಸೇನಿಯನ್ನು ದ್ಯೂತದ ಸಭೆಗೆ ಎಳೆದುತಂದ ಅಪರಾಧಕ್ಕಾಗಿ ನಿನ್ನನ್ನು ಅಂದೇ ಸಂಹರಿಸಬೇಕಿತ್ತು! ಜೂಜನ್ನು ಅರಿತಿರದ ದಧರ್ಮಜ್ಞನನ್ನು ಅಕ್ಷವಿದ್ಯೆಯನ್ನು ಚೆನ್ನಾಗಿ ತಿಳಿದಿದ್ದ ಸೌಬಲನ ಮೂಲಕ ಮೋಸದಿಂದ ಜಯಿಸಿದ ಕಾರಣ ನೀನಿಂದು ರಣದಲ್ಲಿ ಹತನಾಗಿದ್ದೀಯೆ! ವನದಲ್ಲಿ ಪಾಂಡವರು ಬೇಟೆಗೆಂದು ಹೋಗಿದ್ದಾಗ ತೃಣಬಿಂದುವಿನ ಆಶ್ರಮದಲ್ಲಿ ಪಾಪಿ ಜಯದ್ರಥನ ಮೂಲಕ ಕೃಷ್ಣೆಯನ್ನು ಪೀಡಿಸಿದುದು ಮತ್ತು ಬಾಲಕ ಅಭಿಮನ್ಯು ಒಬ್ಬನನ್ನೇ ಅನೇಕರು ಯುದ್ಧದಲ್ಲಿ ಸಂಹರಿಸಿದುದು – ಈ ದೋಷ ಪಾಪಗಳಿಂದಾಗಿ ನೀನು ಇಂದು ರಣದಲ್ಲಿ ಹತನಾಗಿದ್ದೀಯೆ!”

ದುರ್ಯೋಧನನು ಹೇಳಿದನು:

“ಕಲಿತಿದ್ದೇನೆ! ವಿಧಿವತ್ತಾಗಿ ದಾನಗಳನ್ನಿತ್ತಿದ್ದೇನೆ! ಶತ್ರುಗಳ

ತಲೆಯನ್ನು ಮೆಟ್ಟಿ ಸಾಗರಪರ್ಯಂತವಾದ ಭೂಮಿಯನ್ನು ಆಳಿದ್ದೇನೆ! ಇವೆಲ್ಲವನ್ನೂ ನನಗಿಂತಲೂ ಹೆಚ್ಚು ಮಾಡಿದವರು ಯಾರಿದ್ದಾರೆ? ಸ್ವಧರ್ಮದಲ್ಲಿಯೇ ದೃಷ್ಟಿಯಿಟ್ಟುಕೊಂಡಿರುವ ಕ್ಷತ್ರಬಂಧುಗಳಿಗೆ ಇಷ್ಟವಾದ ನಿಧನವು ನನಗೆ ಪ್ರಾಪ್ತವಾಗಿದೆ. ಇದಕ್ಕಿಂತಲೂ ಹೆಚ್ಚಿನದು ಯಾರಿಗೆ ದೊರಕಿದೆ? ನೃಪರಿಗೆ ಸುಲಭವಲ್ಲದ ದೇವತೆಗಳಿಗೆ ತಕ್ಕುದಾದ ಮನುಷ್ಯ ಭೋಗಗಳನ್ನು ನಾನು ಅನುಭವಿಸಿದ್ದೇನೆ. ಉತ್ತಮ ಐಶ್ವರ್ಯವನ್ನು ಪಡೆದುಕೊಂಡೆನು. ಇವುಗಳನ್ನು ನನಗಿಂತಲೂ ಹೆಚ್ಚು ಪಡೆದಿರುವವರು ಯಾರಿದ್ದಾರೆ? ಸುಹೃದಯರೊಡನೆ ಮತ್ತು ಅನುಯಾಯಿಗಳೊಡನೆ ನಾನು ಸ್ವರ್ಗಕ್ಕೆ ಹೋಗುತ್ತಿದ್ದೇನೆ. ನೀವುಗಳು ಸಂಕಲ್ಪಗಳಿಲ್ಲದೇ ಶೋಕಿಸುತ್ತಾ ಜೀವಿಸುವಿರಿ!"

ಕುರುರಾಜನ ಈ ಮಾತುಗಳನ್ನು ಮುಗಿಸುತ್ತಿದ್ದಂತೆಯೇ ಪುಣ್ಯ ಸುಗಂಧಯುಕ್ತ ಪುಷ್ಪಗಳ ಮಹಾವೃಷ್ಟಿಯಾಯಿತು. ಗಂಧರ್ವರು ವಾದ್ಯಗಳನ್ನು ನುಡಿಸಿದರು ಮತ್ತು ಅಪ್ಸರಗಣಗಳು ಹಾಡಿದರು. ಸಿದ್ಧರು ಪುನಃ ಪುನಃ "ಸಾಧು! ಸಾಧು!" ಎಂದು ಉದ್ಗರಿಸಿದರು. ಪುಣ್ಯಗಂಧಯುಕ್ತವಾದ, ಮೃದುವಾದ, ಸುಖಕರವಾದ

ಮಂದವಾಯುವು ಬೀಸಿತು. ದಿಕ್ಕುಗಳು ಪ್ರಕಾಶಗೊಂಡವು. ಆಕಾಶವು ವೈಡೂರ್ಯದಂತೆ ಹೊಳೆಯಿತು. ದುರ್ಯೋಧನನನ್ನು ಗೌರವಿಸುವಂತಹ ಈ ಅದ್ಭುತಗಳನ್ನು ನೋಡಿ ವಾಸುದೇವ ಪುರಃಸರರಾದ ಅವರು ಅತ್ಯಂತ ಲಜ್ಜಿತರಾದಿರು. ಭೀಷ್ಮ, ದ್ರೋಣ, ಕರ್ಣ ಮತ್ತು ಭೂರಿಶ್ರವಸರು ಅಧರ್ಮದಿಂದ ಹತರಾದುದನ್ನು ಕೇಳಿ ಶೋಕಾರ್ತರಾಗಿ ದುಃಖಿಸಿದರು. ದೀನಚೇತಸ ಪಾಂಡವರು ಅಪಾರ ಚಿಂತೆಯಲ್ಲಿರುವುದನ್ನು ಕಂಡ ಕೃಷ್ಣನು ಮೋಡಗಳ ಗುಡುಗಿನಂತಹ ಧ್ವನಿಯಲ್ಲಿ ಈ ಮಾತುಗಳನ್ನಾಡಿದನು:

> “ಅತಿ ಶೀಘ್ರವಾಗಿ ಅಸ್ತ್ರಗಳನ್ನು ಪ್ರಯೋಗಿಸಬಲ್ಲ ಈ ಎಲ್ಲ ಮಹಾರಥ ವಿಕ್ರಾಂತರನ್ನೂ ನ್ಯಾಯಯುದ್ಧದಲ್ಲಿ ನೀವು ಸಂಹರಿಸಲು ಶಕ್ಯರಾಗಿರಲಿಲ್ಲ. ಆದುದರಿಂದ ನಾನು ಉಪಾಯಗಳನ್ನು ಬಳಸಿದುದರಿಂದ ಅವರು ಹತರಾದರು. ಅನ್ಯಥಾ ಪಾಂಡವರಿಗೆ ಜಯವು ಎಂದೂ ಗಳಿಸುತ್ತಿರಲಿಲ್ಲ! ಆ ಎಲ್ಲ ನಾಲ್ವರು ಮಹಾತ್ಮರೂ ಭೂಮಿಯಲ್ಲಿ ಅತಿರಥರಾಗಿದ್ದರು. ಧರ್ಮಪೂರ್ವಕವಾಗಿ ಅವರನ್ನು ಸಂಹರಿಸಿಸಲು ಸ್ವಯಂ ಲೋಕಪಾಲರಿಗೂ ಶಕ್ಯವಿರಲಿಲ್ಲ. ಹಾಗೆಯೇ ಯುದ್ಧದಲ್ಲಿ ಶ್ರಮವನ್ನೇ ಕಾಣದ ಗದಾಪಾಣಿ

ಧಾರ್ತರಾಷ್ಟ್ರನನ್ನು ಧರ್ಮಪೂರ್ವಕ ಸಂಹರಿಸಲು ದಂಡಾಪಾಣಿ ಕಾಲನಿಗೂ ಶಕ್ಯವಿಲ್ಲವಾಗಿತ್ತು. ಈ ರೀತಿಯಾಗಿ ಸಂಹರಿಸಿದೆವೆಂದು ನೀನು ನೊಂದುಕೊಳ್ಳಬಾರದು. ಅಧಿಕ ಬಲಶಾಲೀ ಶತ್ರುಗಳನ್ನು ಅನೇಕ ಮಿಥ್ಯೋಪಾಯಗಳಿಂದ ವಧಿಸಬೇಕಾಗುತ್ತದೆ. ಹಿಂದೆ ಅಸುರಘಾತಿ ದೇವತೆಗಳೂ ಕೂಡ ಇದೇ ಮಾರ್ಗವನ್ನು ಅನುಸರಿಸಿದ್ದರು. ಸಾಧುಗಳೆಲ್ಲರೂ ಇದೇ ಮಾರ್ಗವನ್ನು ಅನುಸರಿಸುತ್ತಾರೆ. ಕೃತಕೃತ್ಯರಾಗಿದ್ದೇವೆ. ಸಾಯಂಕಾಲವೂ ಆಗಿದೆ. ನಾವೆಲ್ಲರೂ ನಮ್ಮ ನಮ್ಮ ನಿವಾಸಗಳಿಗೆ ತೆರಳಲು ಬಯಸುತ್ತಿದ್ದೇವೆ. ನರಾಧಿಪರೇ! ಕುದುರೆ-ಆನೆ-ರಥಗಳೊಂದಿಗೆ ಎಲ್ಲರೂ ವಿಶ್ರಮಿಸೋಣ!”

ವಾಸುದೇವನ ಮಾತನ್ನು ಕೇಳಿ ತುಂಬಾ ಹರ್ಷಿತರಾಗಿ ಪಾಂಡವರೊಂದಿಗೆ ಪಾಂಚಾಲರು ಸಿಂಹಗಳ ಹಿಂದಿನಂತೆ ಗರ್ಜಿಸಿದರು. ದುರ್ಯೋಧನನು ಹತನಾದುದನ್ನು ನೋಡಿ ಹರ್ಷಗೊಂಡ ಆ ಪುರುಷರ್ಷಭರು ಶಂಖಗಳನ್ನೂ ಮಾಧವನು ಪಾಂಚಜನ್ಯವನ್ನೂ ಜೋರಾಗಿ ಊದಿ ಮೊಳಗಿಸಿದರು.

ಅನಂತರ ಪರಿಘಾಯುಧಗಳಂತಹ ತೋಳುಗಳುಳ್ಳ ಮಹೀಕ್ಷಿತರು

ಎಲ್ಲರೂ ಪ್ರಹೃಷ್ಟರಾಗಿ ಶಂಖಗಳನ್ನು ಊದುತ್ತಾ ನಿವಾಸಗಳಿಗೆ ತೆರಳಿದರು. ಕೌರವ ಶಿಬಿರದ ಕಡೆ ಬರುತ್ತಿದ್ದ ಪಾಂಡವರನ್ನು ಯುಯುತ್ಸು ಮತ್ತು ಸಾತ್ಯಕಿಯರು ಹಿಂಬಾಲಿಸಿ ಬಂದರು. ಧೃಷ್ಟದ್ಯುಮ್ನ, ಶಿಖಂಡೀ, ಸರ್ವ ದ್ರೌಪದೇಯರು ಮತ್ತು ಅನ್ಯ ಮಹೇಷ್ವಾಸರೆಲ್ಲರೂ ತಮ್ಮ ಶಿಬಿರಗಳಿಗೆ ತೆರಳಿದರು. ನಾಟಕವು ಮುಗಿದನಂತರ ಜನರೆಲ್ಲರೂ ಹೊರಟುಹೋಗಿರುವ ರಂಗಮಂಟಪದಂತಿದ್ದ, ಸ್ವಾಮಿಯನ್ನು ಕಳೆದುಕೊಂಡ ದುರ್ಯೋಧನನ ಶಿಬಿರವನ್ನು ಪಾರ್ಥರು ಪ್ರವೇಶಿಸಿದರು. ಉತ್ಸವವು ಮುಗಿದ ಪಟ್ಟಣದಂತೆಯೂ, ಸರ್ಪಗಳಿಲ್ಲದ ಸರೋವರದಂತೆಯೂ ಆ ಶಿಬಿರವು ಸ್ತ್ರೀಯರು, ನಪುಂಸಕರು ಮತ್ತು ವೃದ್ಧ ಅಮಾತ್ಯರಿಂದ ಕೂಡಿತ್ತು. ಮೊದಲು ದುರ್ಯೋಧನನ ಎದುರು ಹೋಗುತ್ತಿದ್ದ ಸೇವಕರು ಮಲಿನ ಕಾಷಾಯವಸ್ತ್ರಗಳನ್ನುಟ್ಟು ಕೈಮುಗಿದು ಅಲ್ಲಿಗೆ ಬರುತ್ತಿದ್ದ ಪಾಂಡವರನ್ನು ಎದುರಿಸಿದರು. ಕುರುರಾಜನ ಶಿಬಿರವನ್ನು ತಲುಪಿ ರಥಸತ್ತಮ ಪಾಂಡವರು ರಥಗಳಿಂದ ಕೆಳಗಿಳಿದರು. ಆಗ ನಿತ್ಯವೂ ಯಾರ ಪ್ರಿಯ ಮತ್ತು ಹಿತಗಳಲ್ಲಿ ನಿರತನಾಗಿದ್ದನೋ ಆ ಗಾಂಡೀವಧನ್ವಿಗೆ ಕೇಶವನು ನುಡಿದನು:

"ಭರತಸತ್ತಮ! ನೀನು ಮೊದಲು ಗಾಂಡೀವವನ್ನೂ ಅಕ್ಷಯ

ತೂಣೀರಗಳನ್ನೂ ಕೆಳಗಿಳಿಸು. ನಂತರ ನೀನೂ ಇಳಿ. ನಿನ್ನ ನಂತರ ನಾನು ಕೆಳಗಿಳಿಯುತ್ತೇನೆ. ಅನಘ! ಇದರಿಂದ ನಿನಗೆ ಶ್ರೇಯಸ್ಸುಂಟಾಗುತ್ತದೆ."

ವೀರ ಪಾಂಡುಪುತ್ರ ಧನಂಜಯನು ಅದರಂತೆಯೇ ಮಾಡಿದನು. ಅನಂತರ ಮೇಧಾವೀ ಕೃಷ್ಣನು ಕುದುರೆಗಳ ಕಡಿವಾಣಗಳನ್ನು ಬಿಸುಟು ಗಾಂಡೀವಧನ್ವಿಯ ರಥದಿಂದ ಕೆಳಗಿಳಿದನು. ಆ ಸುಮಹಾತ್ಮ ಭೂತಗಳ ಈಶ್ವರನು ಕೆಳಗಿಳಿಯುತ್ತಲೇ ಗಾಂಡೀವಧನ್ವಿಯ ದಿವ್ಯ ಧ್ವಜದಿಂದ ಕಪಿಯು ಅಂತರ್ಧಾನನಾದನು. ದ್ರೋಣ-ಕರ್ಣಾದಿಗಳ ದಿವ್ಯಾಸ್ತ್ರಗಳಿಂದ ದಹಿಸಲ್ಪಟ್ಟಿದ್ದ ಆ ಮಹಾರಥವು ಈಗ ಅಗ್ನಿಯಿಂದ ಪ್ರತೀಪ್ತವಾಗಿ ಪ್ರಜ್ವಲಿಸಿ ಉರಿಯತೊಡಗಿತು. ಗಾಂಡೀವಧನ್ವಿಯ ಆ ರಥವು ಬತ್ತಳಿಕೆ, ಕಡಿವಾಣ, ಕುದುರೆಗಳು, ನೊಗ, ಮೂಕಿಗಳ ಸಮೇತವಾಗಿ ಭಸ್ಮೀಭೂತವಾಗಿ ಭೂಮಿಯ ಮೇಲೆ ಬಿದ್ದಿತು.

ಹೀಗೆ ಅದು ಭಸ್ಮೀಭೂತವಾದುದನ್ನು ನೋಡಿ ಪಾಂಡುಸುತರು ವಿಸ್ಮಿತರಾದರು. ಅರ್ಜುನನು ಕೈಮುಗಿದು ಪ್ರಣಯಪೂರ್ವಕವಾಗಿ ಕೃಷ್ಣನ ಕಾಲುಗಳನ್ನು ಮುಟ್ಟಿ ನಮಸ್ಕರಿಸಿ ಹೇಳಿದನು:

"ಗೋವಿಂದ! ಭಗವನ್! ಈ ರಥವು ಹೇಗೆ ಬೆಂಕಿಹತ್ತಿ ಭಸ್ಮವಾಗಿಹೋಯಿತು? ಈ ಮಹದಾಶ್ಚರ್ಯವು ಹೇಗೆ



ನಡೆಯಿತು? ಇದನ್ನು ನಾನು ಕೇಳಬಹುದೆಂದು ನಿನಗನ್ನಿಸಿದರೆ ನನಗೆ ಹೇಳು!”

ವಾಸುದೇವನು ಹೇಳಿದನು:

“ಅರ್ಜುನ! ಇದರ ಮೊದಲೇ ಇದು ಅನೇಕ ವಿಧದ ಅಸ್ತ್ರಗಳಿಂದ ಸುಡಲ್ಪಟ್ಟಿತ್ತು. ಆದರೆ ಸಮರದಲ್ಲಿ ನಾನು ಕುಳಿತುಕೊಂಡಿದ್ದುದರಿಂದ ಅದು ಭಸ್ಮವಾಗಿರಲಿಲ್ಲ. ನೀನು

ಕೃತಕೃತ್ಯನಾದುದರಿಂದ ಇಂದು ಇದನ್ನು ನಾನು ವಿಮುಕ್ತಗೊಳಿಸಿದ್ದೇನೆ. ಬ್ರಹ್ಮಾಸ್ತ್ರದಿಂದ ಮೊದಲೇ ಸುಟ್ಟುಹೋಗಿದ್ದ ಇದು ಈಗ ಭಸ್ಮೀಭೂತವಾಯಿತು!”

ಬಳಿಕ ಭಗವಾನ್ ಕೇಶವನು ಮುಗುಳ್ನಗುತ್ತಾ ರಾಜ ಯುಧಿಷ್ಠಿರನನ್ನು ಆಲಂಗಿಸಿ ಹೇಳಿದನು:

“ಕೌಂತೇಯ! ದೈವವಶಾತ್ ನೀನು ವಿಜಯಿಯಾಗಿರುವೆ! ದೈವವಶದಿಂದ ನಿನ್ನ ಶತ್ರುಗಳು ಸೋತಿದ್ದಾರೆ! ದೈವವಶದಿಂದ ಗಾಂಡೀವಧನ್ವಿ, ಪಾಂಡವ ಭೀಮಸೇನ, ನೀನು ಮತ್ತು ಪಾಂಡವ ಮಾದ್ರೀಪುತ್ರರೀರ್ವರೂ ಕುಶಲಿಗಳಾಗಿರುವಿರಿ! ವೀರರಿಗೆ ಕ್ಷಯಕಾರಕವಾಗಿದ್ದ ಈ ಸಂಗ್ರಾಮದಲ್ಲಿ ದ್ವೇಷಿಗಳನ್ನು ಸಂಹರಿಸಿ ಮುಕ್ತರಾಗಿರುವಿರಿ! ಮುಂದೆಮಾಡಬೇಕಾದ ಕಾರ್ಯಗಳನ್ನು ಶೀಘ್ರವಾಗಿ ಮಾಡು! ಹಿಂದೆ ಗಾಂಡೀವಧನ್ವಿಯೊಂದಿಗೆ ನಾನು ಉಪಪ್ಲವ್ಯಕ್ಕೆ ಬಂದಿದ್ದಾಗ ಮಧುಪರ್ಕವನ್ನಿತ್ತು ನೀನು ನನಗೆ ಹೀಗೆ ಹೇಳಿದ್ದೆಯಲ್ಲವೇ? “ಕೃಷ್ಣ! ಈ ಭ್ರಾತಾ ಧನಂಜಯನು ನಿನ್ನ ಸಖನೂ ಹೌದು. ಸರ್ವ ಆಪತ್ತುಗಳಿಂದ ಇವನನ್ನು ರಕ್ಷಿಸಬೇಕು!” ಎಂದು. ನಿನ್ನ ಮಾತಿಗೆ ಹಾಗೆಯೇ ಆಗಲೆಂದೂ

ನಾನು ನಿನಗೆ ಹೇಳಿದ್ದೆ. ಆ ಶೂರ ಸತ್ಯಪರಾಕ್ರಮಿ ಸವ್ಯಸಾಚಿಯು ಸಹೋದರರೊಂದಿಗೆ ವಿಜಯಿಯೂ ಸುರಕ್ಷಿತನೂ ಆಗಿದ್ದಾನೆ ಮತ್ತು ಈ ರೋಮಾಂಚಕಾರೀ ವೀರಕ್ಷಯ ಸಂಗ್ರಾಮದಿಂದ ಮುಕ್ತನಾಗಿದ್ದಾನೆ.”

ಕೃಷ್ಣನು ಹೀಗೆ ಹೇಳಲು ಧರ್ಮರಾಜ ಯುಧಿಷ್ಠಿರನು ರೋಮರೋಮಗಳಲ್ಲಿಯೂ ಹರ್ಷತುಂದಿಲನಾಗಿ ಜನಾರ್ದನನಿಗೆ ಉತ್ತರಿಸಿದನು:

“ಅರಿಮರ್ದನ! ದ್ರೋಣ-ಕರ್ಣರ ಬ್ರಹ್ಮಾಸ್ತ್ರಗಳನ್ನು ನೀನಲ್ಲದೇ ಬೇರೆ ಯಾರೂ – ಸಾಕ್ಷಾತ್ ವಜ್ರೀ ಪುರಂದರನೂ – ಸಹಿಸಿಕೊಳ್ಳಲಾಗುತ್ತಿರಲಿಲ್ಲ! ನಿನ್ನ ಪ್ರಸಾದದಿಂದ ಸಂಗ್ರಾಮದಲ್ಲಿ ಅನೇಕರನ್ನು ನಾವು ಜಯಿಸಿದೆವು ಮತ್ತು ಮಹಾರಣವನ್ನು ಹೊಕ್ಕಿದ ಪಾರ್ಥನು ಎಂದೂ ಪರಾಙ್ಮುಖನಾಗಲಿಲ್ಲ! ಹಾಗೆಯೇ ನಿನ್ನ ಶುಭ ತೇಜಸ್ಸಿನ ಗತಿಯಿಂದಾಗಿ ನಾನು ಮತ್ತೆ ಮತ್ತೆ ಅನೇಕ ಕರ್ಮಗಳ ಶುಭಫಲಗಳನ್ನು ಪಡೆಯುತ್ತಿದ್ದೇನೆ. ಉಪಪ್ಲವ್ಯದಲ್ಲಿ ನನಗೆ ಮಹರ್ಷಿ ಕೃಷ್ಣದ್ವೈಪಾಯನನು “ಧರ್ಮವೆಲ್ಲಿರುವುದೋ ಅಲ್ಲಿ ಕೃಷ್ಣನಿರುವನು ಮತ್ತು ಎಲ್ಲಿ ಕೃಷ್ಣನಿರುವನೋ ಅಲ್ಲಿ

ಜಯವಿದೆ!" ಎಂದು ಹೇಳಿದ್ದನು."

ಹೀಗೆ ಮಾತನಾಡಿಕೊಳ್ಳುತ್ತಾ ಆ ವೀರರು ದುರ್ಯೋಧನನ ಶಿಬಿರವನ್ನು ಪ್ರವೇಶಿಸಿದರು. ಪ್ರವೇಶಿಸಿ ಕೋಶಗಳನ್ನೂ ರತ್ನಸಂಚಯಗಳನ್ನೂ ತಮ್ಮದಾಗಿಸಿಕೊಂಡರು. ಅಲ್ಲಿದ್ದ ಬೆಳ್ಳಿ, ಬಂಗಾರ, ಮಣಿ-ಮೌಕ್ತಿಕಗಳು, ಆಭೂಷಣಗಳು, ಕಂಬಳಿ ಮತ್ತು ಜಿನಗಳು, ಅಸಂಖ್ಯ ದಾಸೀ-ದಾಸರು, ರಾಜ್ಯೋಪಕರಣಗಳು, ಮತ್ತು ಅಕ್ಷಯ ಧನವನ್ನು ಪಡೆದು ಆ ಮಹೇಷ್ವಾಸರು ಹರ್ಷೋದ್ಗಾರಗೈದರು. ಆ ವೀರ ಪಾಂಡವರೆಲ್ಲರೂ ಸಾತ್ಯಕಿಯೊಂದಿಗೆ ರಥಗಳಿಂದ ಕುದುರೆಗಳನ್ನು ಬಿಚ್ಚಿ ಅವುಗಳನ್ನು ಸಂತೈಸಿ ಒಂದೆಡೆ ಕುಳಿತುಕೊಂಡರು. ಆಗ ಮಹಾಯಶಸ್ವಿ ವಾಸುದೇವನು

"ನಮ್ಮ ಮಂಗಲಾರ್ಥವಾಗಿ ನಾವು ಶಿಬಿರದ ಹೊರಗೇ ರಾತ್ರಿಯನ್ನು ಕಳೆಯಬೇಕು!"

ಎಂದನು.

ಹಾಗೆಯೇ ಆಗಲೆಂದು ಹೇಳಿ ಸಾತ್ಯಕಿಯೊಡನೆ ಸರ್ವ ಪಾಂಡವರೂ ವಾಸುದೇವನ ಸಹಿತ ಮಂಗಲಾರ್ಥವಾಗಿ ಶಿಬಿರದಿಂದ ಹೊರ ಬಂದರು. ಶತ್ರುಗಳನ್ನು ಸಂಹರಿಸಿದ್ದ ಪಾಂಡವರು ಪುಣ್ಯ

ಅಮೋಘವತೀ ನದಿಯನ್ನು ತಲುಪಿ ಅದರ ದಡದಲ್ಲಿ ಆ ರಾತ್ರಿಯನ್ನು ಕಳೆಯಲು ತಂಗಿದರು. ಆಗ ಯಾದವನನ್ನು ಹಸ್ತಿನಾಪುರಕ್ಕೆ ಕಳುಹಿಸಲಾಯಿತು. ಪ್ರತಾಪವಾನ್ ವಾಸುದೇವನು ಶೀಘ್ರವಾಗಿ ದಾರುಕನೊಡನೆ ರಥವನ್ನೇರಿ ರಾಜಾ ಅಂಬಿಕಾಸುತನಿದ್ದಲ್ಲಿಗೆ ಹೊರಟನು. ಸೈನ್ಯಸುಗ್ರೀವರನ್ನು ಕಟ್ಟಿದ್ದ ರಥದಲ್ಲಿ ಹೊರಟಿದ್ದ ಅವನಿಗೆ

> “ಪುತ್ರರನ್ನು ಕಳೆದುಕೊಂಡ ಯಶಸ್ವಿನೀ ಗಾಂಧಾರಿಯನ್ನು ಸಮಾಧಾನಗೊಳಿಸು !”

ಎಂದು ಕೇಳಿಕೊಂಡರು. ಪಾಂಡವರಿಂದ ಆ ಸಲಹೆಯನ್ನು ಪಡೆದು ಕೃಷ್ಣನು ಬಹಳಬೇಗ ಹತಪುತ್ರಳಾಗಿದ್ದ ಗಾಂಧಾರಿಯ ಬಳಿ ಬಂದನು.

ಗದಾಯುದ್ಧದಲ್ಲಿ ಭೀಮಸೇನನು ಒಪ್ಪಂದವನ್ನು ಮುರಿದು ಮಹಾಬಲ ದುರ್ಯೋಧನನನ್ನು ಅನ್ಯಾಯದಿಂದ ಸಂಹರಿಸಿದುದನ್ನು ನೋಡಿ ಯುಧಿಷ್ಠಿರನಿಗೆ ಮಹಾ ಭಯವು ಆವರಿಸಿತು. ಮೂರು ಲೋಕಗಳನ್ನೂ ದಹಿಸಬಲ್ಲ ಘೋರ ತಪಸ್ಸಿನಿಂದ ಯುಕ್ತಳಾಗಿದ್ದ ತಪಸಾನ್ವಿತೆ ಮಹಾಭಾಗೆ ಗಾಂಧಾರಿಯ ಕುರಿತು ಅವನು ಚಿಂತಿಸಿದನು. ಹೀಗೆ ಚಿಂತಿಸುತ್ತಿರುವಾಗ ಗಾಂಧಾರಿಯ ಭುಗಿಲೇಳುವ ಕೋಪವನ್ನು ಮೊದಲೇ ಪ್ರಶಮನಗೊಳಿಸಬೇಕು ಎಂದು ಅವನ ಬುದ್ಧಿಗೆ

ಹೊಳೆಯಿತು.

“ಈ ರೀತಿಯಲ್ಲಿ ನಾವು ಅವಳ ಪುತ್ರನನ್ನು ವಧಿಸಿದೆವೆನ್ನುವುದನ್ನು ಕೇಳಿ ಕ್ರುದ್ಧಮನಸ್ಸಿನಿಂದಲೇ ಉದ್ಭವಿಸಿದ ಅಗ್ನಿಯಿಂದ ಅವಳು ನಮ್ಮನ್ನು ಭಸ್ಮಮಾಡಿಬಿಡುತ್ತಾಳೆ! ನ್ಯಾಯಮಾರ್ಗದಲ್ಲಿ ಯುದ್ಧಮಾಡುತ್ತಿದ್ದ ತನ್ನ ಮಗನನ್ನು ಅನ್ಯಾಯಮಾರ್ಗದಿಂದ ಕೊಲ್ಲಲಾಯಿತೆನ್ನುವುದನ್ನು ಕೇಳಿ ಆ ತೀವ್ರ ದುಃಖವನ್ನು ಗಾಂಧಾರಿಯು ಹೇಗೆ ಸಹಿಸಿಕೊಳ್ಳುವಳು?”

ಹೀಗೆ ಬಹಳವಾಗಿ ಚಿಂತಿಸಿ ಭಯಶೋಕಸಮನ್ವಿತನಾದ ಧರ್ಮರಾಜನು ವಾಸುದೇವನಿಗೆ ಈ ಮಾತನ್ನಾಡಿದನು:

“ಗೋವಿಂದ! ಮನಸ್ಸಿನಿಂದಲೂ ಪಡೆದುಕೊಳ್ಳಲು ಅಸಾಧ್ಯವಾಗಿದ್ದ ಈ ನಿಷ್ಕಂಟಕ ರಾಜ್ಯವನ್ನು ನಾವು ನಿನ್ನ ಅನುಗ್ರಹದಿಂದಲೇ ಪಡೆದುಕೊಂಡಿದ್ದೇವೆ. ರೋಮಹರ್ಷಣ ಸಂಗ್ರಾಮದಲ್ಲಿ ಪ್ರತ್ಯಕ್ಷ ನೀನೇ ಮಹಾ ಪ್ರಹಾರಗಳಿಗೆ ಈಡಾದೆ! ಹಿಂದೆ ದೇವಾಸುರ ಯುದ್ಧದಲ್ಲಿ ಅಮರದ್ವೇಷಿಗಳ ವಧೆಗಾಗಿ ಹೇಗೆ ಸಹಾಯವನ್ನಿತ್ತು ಅಮರದ್ವೇಷಿಗಳನ್ನು ಸಂಹರಿಸಿದೆಯೋ ಹಾಗೆ ನಮಗೂ ಸಾರಥ್ಯದ

ಸಹಾಯವನ್ನಿತ್ತು ನಮ್ಮನ್ನು ರಕ್ಷಿಸಿದೆ. ಒಂದುವೇಳೆ ನೀನು ಮಹಾರಣದಲ್ಲಿ ಫಲ್ಗುನನ ನಾಥನಾಗಿರದಿದ್ದರೆ ಈ ಸೇನಾಸಮುದ್ರವನ್ನು ನಾವು ರಣದಲ್ಲಿ ಗೆಲ್ಲಲು ಹೇಗೆ ಶಕ್ಯರಾಗುತ್ತಿದ್ದೆವು? ನಮ್ಮ ಹಿತೈಷಿಯಾಗಿದ್ದುಕೊಂಡು ನೀನು ವಿಪುಲ ಗದಾಪ್ರಹಾರಗಳನ್ನೂ, ಪರಿಘ-ಶಕ್ತಿ-ಭಿಂಡಿಪಾಲ-ತೋಮರ-ಪರಶುಗಳ ಪೆಟ್ಟುಗಳನ್ನೂ ಸಹಿಸಿಕೊಂಡಿರುವೆ ಮತ್ತು ಕಠೋರ ಮಾತುಗಳ ನಿಂದನೆಗಳನ್ನೂ ಪಡೆದಿರುವೆ. ದುರ್ಯೋಧನನು ಹತನಾಗಿ ಅವೆಲ್ಲವುಗಳೂ ಸಫಲವಾದಂತಾದವು,

ನಿತ್ಯವೂ ಉಗ್ರತಪಸ್ಸಿನಿಂದ ಕೃಶಳಾಗಿರುವ ಆ ಮಹಾಭಾಗೆ ಗಾಂಧಾರಿಯ ಕ್ರೋಧವನ್ನು ನೀನು ತಿಳಿದಿರುವೆ! ಮಕ್ಕಳು ಮೊಮ್ಮಕ್ಕಳ ವಧೆಯನ್ನು ಕೇಳಿ ನಿಶ್ಚಯವಾಗಿಯೂ ಅವಳು ನಮ್ಮನ್ನು ಸುಟ್ಟುಬಿಡುತ್ತಾಳೆ! ಅವಳನ್ನು ಪ್ರಸನ್ನಗೊಳಿಸುವ ಕಾಲವು ಬಂದೊದಗಿದೆಯೆಂದು ನನಗನ್ನಿಸುತ್ತದೆ. ಪುರುಷೋತ್ತಮ! ಪುತ್ರವ್ಯಸನದಿಂದ ಬೆಂದು ಕ್ರೋಧದಿಂದ ಉರಿಯುವ ದೃಷ್ಟಿಯ ಅವಳನ್ನು ನೋಡಲು ನೀನಲ್ಲದೇ ಬೇರೆ ಯಾವ ಪುರುಷನಿಗೆ ಶಕ್ಯ? ಕ್ರೋಧದಿಂದ

ಉರಿಯುತ್ತಿರುವ ಗಾಂಧಾರಿಯನ್ನು ಪ್ರಶಮನಗೊಳಿಸಲು ನೀನು ಅಲ್ಲಿಗೆ ಹೋಗಬೇಕೆಂದು ನನಗನ್ನಿಸುತ್ತದೆ. ನೀನೇ ಲೋಕಗಳ ಹುಟ್ಟು ಮತ್ತು ಅಂತ್ಯ, ಕರ್ತ ಮತ್ತು ವಿಕರ್ತ. ಯುಕ್ತಿ ಮತ್ತು ಕಾರಣಗಳ ಸಂಯುಕ್ತವಾದ ಮತ್ತು ಸಮಯೋಚಿತ ಮಾತುಗಳನ್ನು ಬಲ್ಲೆ! ಬೇಗನೇ ನೀನು ಗಾಂಧಾರಿಯನ್ನು ಶಾಂತಗೊಳಿಸಬಲ್ಲೆ! ಅಲ್ಲಿ ಪಿತಾಮಹ ಭಗವಾನ್ ಕೃಷ್ಣ ವ್ಯಾಸನೂ ಇದ್ದಾನೆ. ಗಾಂಧಾರಿಯ ಕ್ರೋಧವನ್ನು ಕಡೆಗಾಣಿಸುವುದು ಪಾಂಡವರ ಹಿತೈಷಿಯಾದ ನಿನ್ನ ಸರ್ವಥಾ ಕರ್ತವ್ಯವೂ ಆಗಿರುತ್ತದೆ!”

ಧರ್ಮರಾಜನ ಮಾತನ್ನು ಕೇಳಿ ಯದುಕುಲೋದ್ವಹನು ದಾರುಕನನ್ನು ಕರೆದು ರಥವನ್ನು ಸಜ್ಜುಗೊಳಿಸಿ ತರುವಂತೆ ಹೇಳಿದನು. ಕೇಶವನ ಮಾತನ್ನು ಕೇಳಿ ದಾರುಕನು ತ್ವರೆಮಾಡಿ ರಥವನ್ನು ಸಜ್ಜುಗೊಳಿಸಿ ಮಹಾತ್ಮ ಕೇಶವನಿಗೆ ರಥವನ್ನು ತಂದು ನಿವೇದಿಸಿದನು. ಆ ರಥವನ್ನು ಏರಿ ಯಾದವಶ್ರೇಷ್ಠ ಕೇಶವನು ತ್ವರೆಮಾಡಿ ಹಸ್ತಿನಾಪುರಕ್ಕೆ ತೆರಳಿದನು. ಪ್ರಯಾಣದ ನಂತರ ಭಗವಾನ್ ರಥೀ ವೀರ್ಯವಾನ್ ಮಾಧವನು ನಾಗಸಾಹ್ವಯವನ್ನು ತಲುಪಿ ಪ್ರವೇಶಿಸಿದನು. ರಥಘೋಷದಿಂದ ದಿಕ್ಕುಗಳನ್ನು ಮೊಳಗಿಸುತ್ತಾ ಆ ವೀರನು ನಗರವನ್ನು ಪ್ರವೇಶಿಸಿ

ಧೃತರಾಷ್ಟ್ರನಿಗೆ ತಿಳಿಸಿ ಉತ್ತಮ ರಥದಿಂದ ಕೆಳಗಿಳಿದನು. ಆ ಅಧೀನಾತ್ಮನು ಧೃತರಾಷ್ಟ್ರನ ಅರಮನೆಯನ್ನು ಪ್ರವೇಶಿಸಿ ಮೊದಲೇ ಅಲ್ಲಿಗೆ ಆಗಮಿಸಿದ್ದ ಋಷಿಸತ್ತಮ ವ್ಯಾಸನನ್ನು ನೋಡಿದನು. ಕೇಶವ ಜನಾರ್ದನನು ಕೃಷ್ಣ ದ್ವೈಪಾಯನನ ಮತ್ತು ರಾಜನ ಪಾದಗಳಿಗೆ ನಮಸ್ಕರಿಸಿ ಗಾಂಧಾರಿಯನ್ನೂ ಅಭಿವಂದಿಸಿದನು. ಬಳಿಕ ಯಾದವಶ್ರೇಷ್ಠ ಅಧೋಕ್ಷಜನು ರಾಜ ಧೃತರಾಷ್ಟ್ರನ ಕೈಗಳನ್ನು ಹಿಡಿದು ಜೋರಾಗಿ ಅಳತೊಡಗಿದನು. ಮುಹೂರ್ತಕಾಲ ಶೋಕದಿಂದ ಕಂಬನಿಯನ್ನು ಸುರಿಸಿ ನೀರಿನಿಂದ ಕಣ್ಣುಗಳನ್ನು ಒರೆಸಿಕೊಂಡು ಯಥಾವಿಧಿಯಾಗಿ ಆಚಮನವನ್ನು ಮಾಡಿ ಅರಿಂದಮನು ಧೃತರಾಷ್ಟ್ರನಿಗೆ ಸಮಯೋಚಿತವಾದ ಈ ಮಾತನ್ನಾಡಿದನು:

> “ಪ್ರಭೋ! ನಿನಗೆ ತಿಳಿಯದೇ ಇರುವ ನಡೆದುಹೋದ ಮತ್ತು ನಡೆಯಲಿರುವ ವಿಷಯಗಳೇ ಇಲ್ಲ! ಕಾಲವು ಹೇಗೆ ನಡೆದುಕೊಳ್ಳುತ್ತದೆ ಎನ್ನುವುದೂ ನಿನಗೆ ಚೆನ್ನಾಗಿ ತಿಳಿದಿದೆ. ನಿನ್ನ ಚಿತ್ತಾನುವರ್ತಿಗಳಾದ ಸರ್ವ ಪಾಂಡವರೂ ಈ ಕುಲಕ್ಷಯ ಮತ್ತು ಕ್ಷತ್ರಿಯರ ನಾಶವಾಗಬಾರದೆಂದು ಪ್ರಯತ್ನಿಸಿದರು. ತಾಳ್ಮೆಯಿಂದ ಧರ್ಮವತ್ಸಲ ಯುಧಿಷ್ಠಿರನು ಸಹೋದರರೊಂದಿಗೆ ನಿಬಂಧನೆಯನ್ನು ಮಾಡಿಕೊಂಡು

ವಂಚನೆಯ ದ್ಯೂತದಲ್ಲಿ ಸೋತು ವನವಾಸವನ್ನು ಅನುಭವಿಸಿದನು. ನಾನಾವೇಷಗಳಿಂದ ತಮ್ಮನ್ನು ಅಡಗಿಸಿಕೊಂಡು ಅಜ್ಞಾತವಾಸವನ್ನೂ ನಡೆಸಿದರು. ದುರ್ಬಲರಂತೆ ಅವರು ನಿತ್ಯವೂ ಇನ್ನೂ ಅನ್ಯ ಅನೇಕ ಕ್ಲೇಶಗಳನ್ನು ಅನುಭವಿಸಿದರು. ಯುದ್ಧಕಾಲವು ಬಂದಾಗ ಸ್ವತಃ ನಾನೇ ಬಂದು ಸರ್ವಲೋಕಗಳ ಸಾನ್ನಿಧ್ಯದಲ್ಲಿ ಐದು ಗ್ರಾಮಗಳನ್ನು ನಿನ್ನಿಂದ ಯಾಚಿಸಿದೆ. ಕಾಲಪ್ರೇರಿತನಾದ ನೀನು ಲೋಭದಿಂದ ಅವುಗಳನ್ನು ಬಿಟ್ಟುಕೊಡಲಿಲ್ಲ. ನಿನ್ನ ಅಪರಾಧದಿಂದಾಗಿ ಸರ್ವ ಕ್ಷತ್ರಿಯರೂ ನಾಶಹೊಂದಿದ್ದಾರೆ. ಭೀಷ್ಮ, ಸೋಮದತ್ತ, ಬಾಹ್ಲೀಕ, ಕೃಪ, ದ್ರೋಣ, ಮತ್ತು ಧೀಮತ ವಿದುರ ಇವರು ನಿತ್ಯವೂ ನಿನ್ನಿಂದ ಶಾಂತಿಯನ್ನು ಯಾಚಿಸುತ್ತಿದ್ದರು. ಅದನ್ನೂ ನೀನು ಮಾಡಲಿಲ್ಲ. ಕಾಲದ ಪ್ರಭಾವದಿಂದ ಬುದ್ಧಿಯನ್ನು ಕಳೆದುಕೊಂಡಿರುವವರೆಲ್ಲರೂ ಮೋಹಪರವಶರಾಗುತ್ತಾರೆ. ಹಾಗೆಯೇ ಹಿಂದೆ ಇದರ ಕುರಿತು ನಿರ್ಧರಿಸಬೇಕಾಗಿರುವಾಗ ನೀನು ಮೂಢನಾಗಿದ್ದೆ. ಇದು ಕಾಲದ ಪ್ರಭಾವವಲ್ಲದೇ ಮತ್ತೇನು? ಎಲ್ಲವೂ ದೈವದ ಅಧೀನವಾಗಿದೆ.

ಮಹಾರಾಜ! ಈ ದೋಷವನ್ನು ಪಾಂಡವರ ಮೇಲೆ ಹೊರಿಸಬೇಡ! ಧರ್ಮದಲ್ಲಿಯಾಗಲೀ, ನ್ಯಾಯದಲ್ಲಿಯಾಗಲೀ ಮತ್ತು ಸ್ನೇಹದಲ್ಲಿಯಾಗಲೀ ಮಹಾತ್ಮ ಪಾಂಡವರು ಸ್ವಲ್ಪವೂ ಗಡಿಯನ್ನು ದಾಟಿಲ್ಲ. ಇವೆಲ್ಲವೂ ನಿನ್ನದೇ ದೋಷಗಳ ಫಲವೆಂದು ತಿಳಿದುಕೊಂಡು ನೀನು ಪಾಂಡುಪುತ್ರರ ಮೇಲೆ ಅಸೂಯೆಪಡಬಾರದು! ನಿನಗೆ ಮತ್ತು ಗಾಂಧಾರಿಗೆ ಇಂದು ಪುತ್ರಕೃತ ಫಲಗಳಾದ ಕುಲ, ವಂಶ ಮತ್ತು ಪಿಂಡಗಳು ಪಾಂಡವರಿಂದಲೇ ನಡೆಯಬೇಕಾಗಿದೆ. ಈ ಎಲ್ಲ ವಿಷಯಗಳನ್ನೂ ಸಮಾಲೋಚಿಸಿ, ನಿನ್ನ ತಪ್ಪುಗಳನ್ನು ಮನಗಂಡು ಶುಭಭಾವನೆಗಳಿಂದ ಪಾಂಡವರ ಕುರಿತು ಯೋಚಿಸು. ನಿನಗೆ ನಮಸ್ಕರಿಸುತ್ತೇನೆ. ನಿನ್ನ ಮೇಲೆ ಸ್ವಭಾವತಃ ಧರ್ಮರಾಜನಲ್ಲಿ ಭಕ್ತಿ ಮತ್ತು ಸ್ನೇಹಭಾವಗಳೇ ಇವೆ ಎನ್ನುವುದು ನಿನಗೆ ತಿಳಿದೇ ಇದೆ. ತನಗೆ ಅಪಕಾರಗಳನ್ನೆಸಗಿದ ಶತ್ರುಗಳೊಂದಿಗೆ ಕದನವನ್ನಾಡಿ ಹಗಲೂ ರಾತ್ರಿ ಅವನು ಸುಡುತ್ತಿದ್ದಾನೆ. ಅವನಿಗೆ ಸುಖವೆಂಬುದೇ ಇಲ್ಲವಾಗಿದೆ. ನಿನ್ನ ಮತ್ತು ಯಶಸ್ವಿನೀ ಗಾಂಧಾರಿಯ ಕುರಿತೂ ಚಿಂತಿಸುತ್ತಿರುವ ಅವನಿಗೆ ಶಾಂತಿಯೆಂಬುದೇ ಇಲ್ಲವಾಗಿದೆ. ಪುತ್ರಶೋಕದಿಂದ ಸಂತಪ್ತರಾಗಿರುವ, ಮತ್ತು ಬುದ್ಧಿ-ಇಂದ್ರಿಯಗಳು

ವ್ಯಾಕುಲಗೊಂಡಿರುವ ನಿಮ್ಮನ್ನು ಸಂದರ್ಶಿಸಲು ಅತ್ಯಂತ ನಾಚಿಕೊಂಡ ಅವನು ಇಲ್ಲಿಗೆ ಈಗ ಬಂದಿರುವುದಿಲ್ಲ.”

ಧೃತರಾಷ್ಟ್ರನಿಗೆ ಹೀಗೆ ಹೇಳಿ ಯದೂತ್ತಮನು ಶೋಕಕರ್ಶಿತ ಗಾಂಧಾರಿಗೆ ಈ ಪರಮ ವಾಕ್ಯಗಳನ್ನಾಡಿದನು:

“ಸೌಬಲೇಯಿ! ಸುವ್ರತೇ! ನಾನು ಏನನ್ನು ಹೇಳಲಿರುವೆನೋ ಅದನ್ನು ಮನಸ್ಸಿಟ್ಟು ಕೇಳು! ಇಂದು ಈ ಲೋಕದಲ್ಲಿ ನಿನ್ನ ಸಮನಾಗಿರುವವರು ಇಲ್ಲ. ನನ್ನ ಸನ್ನಿಧಿಯಲ್ಲಿ ಸಭೆಯಲ್ಲಿ ಎರಡೂ ಪಕ್ಷಗಳಿಗೆ ಹಿತಕರವಾದ ಧರ್ಮಾರ್ಥಸಹಿತ ಮಾತುಗಳನ್ನು ನೀನು ಆಡಿದ್ದುದು ಮತ್ತು ಅದನ್ನು ನಿನ್ನ ಮಕ್ಕಳು ಕೇಳದೇ ಇದ್ದುದು ನನಗೆ ತಿಳಿದಿದೆ. ಆಗ ಜಯಾರ್ಥಿಯಾದ ದುರ್ಯೋಧನನಿಗೆ ನೀನು ಕಠಿಣವಾದ ಈ ಮಾತನ್ನಾಡಿದ್ದೆ: “ಮೂಢ! ನನ್ನ ಮಾತನ್ನು ಕೇಳು! ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ!” ಇಗೋ! ನೀನು ಹೇಳಿದಂತೆಯೇ ನಡೆದುಹೋಯಿತು! ಇದನ್ನು ತಿಳಿದು ನೀನು ಮನಸ್ಸಿಗೆ ಶೋಕವನ್ನು ಹಚ್ಚಿಸಿಕೊಳ್ಳಬೇಡ! ಪಾಂಡವರ ವಿನಾಶಕ್ಕಾಗಿ ಎಂದೂ ನಿನ್ನ ಬುದ್ಧಿಯನ್ನು ತೊಡಗಿಸಬೇಡ! ತಪಸ್ಸಿನ ಬಲದಿಂದ ನೀನು ಕ್ರೋಧದಿಂದ ಉರಿಯುವ

ದೃಷ್ಟಿಯಿಂದ ಸಚರಾಚರ ಭೂಮಿಯನ್ನೇ ಭಸ್ಮಮಾಡಲು ಶಕ್ತಳಾಗಿರುವೆ!"

ವಾಸುದೇವನ ಮಾತನ್ನು ಕೇಳಿ ಗಾಂಧಾರಿಯು ಹೀಗೆ ಹೇಳಿದಳು:

"ಕೇಶವ! ನೀನು ಹೇಳಿದುದು ಸರಿ! ಸುಟ್ಟುಬಿಡುವ ಕಡೆಗೇ ನನ್ನ ಬುದ್ಧಿಯು ಹರಿಯುತ್ತಿತ್ತು. ನಿನ್ನ ಮಾತನ್ನು ಕೇಳಿ ಅದು ಸ್ಥಿರಗೊಂಡಿತು. ಪುತ್ರರನ್ನು ಕಳೆದುಕೊಂಡ ಈ ಅಂಧವೃದ್ಧ ರಾಜನಿಗೆ ಆ ವೀರಪಾಂಡವರೊಂದಿಗೆ ನೀನೇ ಗತಿಯಾಗು!"

ಹೀಗೆ ಹೇಳಿ ಸೀರೆಯ ಸೆರಗಿನಿಂದ ಮುಖವನ್ನು ಮುಚ್ಚಿಕೊಂಡು ಪುತ್ರಶೋಕದಿಂದ ಸಂತಪ್ತಳಾಗಿದ್ದ ಗಾಂಧಾರಿಯು ಜೋರಾಗಿ ರೋದಿಸಿದಳು. ಹೀಗೆ ಶೋಕಕರ್ಶಿತಳಾದ ಅವಳನ್ನು ಕೇಶವನು ಯುಕ್ತಿಯುಕ್ತ ಮಾತುಗಳಿಂದ ಸಮಾಧಾನಪಡೆಸಿದನು. ಗಾಂಧಾರೀ ಮತ್ತು ಧೃತರಾಷ್ಟ್ರರನ್ನು ಸಮಾಧಾನಗೊಳಿಸುತ್ತಿದ್ದ ಮಾಧವ ಕೇಶವನು ದ್ರೌಣಿ ಅಶ್ವತ್ಥಾಮನ ಸಂಕಲ್ಪಭಾವವನ್ನು ಅರಿತುಕೊಂಡನು. ಅವನು ಕೂಡಲೇ ಮೇಲೆದ್ದು ದ್ವೈಪಾಯನನ ಪಾದಗಳಿಗೆ ತಲೆಬಾಗಿ ನಮಸ್ಕರಿಸಿ ರಾಜೇಂದ್ರ ಕೌರವನಿಗೆ ಹೀಗೆಂದನು:

"ಕುರುಶ್ರೇಷ್ಠ! ನಿನ್ನ ಅನುಮತಿಯನ್ನು ಕೇಳುತ್ತೇನೆ. ಮನಸ್ಸನ್ನು

ಶೋಕದಲ್ಲಿ ತೊಡಗಿಸಿಕೊಳ್ಳಬೇಡ. ದ್ರೌಣಿಯಲ್ಲಿ ಪಾಪಕಾರೀ ಅಭಿಪ್ರಾಯವು ಹುಟ್ಟಿಕೊಂಡಿರುವುದರಿಂದ ನಾನು ಬೇಗನೆ ಮೇಲೆದ್ದಿದ್ದೇನೆ. ರಾತ್ರಿಯಲ್ಲಿ ಪಾಂಡವರನ್ನು ವಧಿಸುವ ಬುದ್ಧಿಯು ಅವನಲ್ಲಿದೆ ಎಂದು ನನಗೆ ಕಾಣುತ್ತಿದೆ."

ಆ ಮಾತನ್ನು ಕೇಳಿದ ಗಾಂಧಾರೀ ಸಹಿತನಾದ ಧೃತರಾಷ್ಟ್ರನು ಕೇಶವನಿಗೆ ಹೇಳಿದನು:

"ಶೀಘ್ರವಾಗಿ ಹೋಗು! ಪಾಂಡವರನ್ನು ಪರಿಪಾಲಿಸು! ಜನಾರ್ದನ! ಬೇಗನೆ ನಾನು ನಿನ್ನೊಂದಿಗೆ ಮತ್ತೆ ಭೇಟಿಯಾಗುತ್ತೇನೆ. ಅಚ್ಯುತ! ದಾರುಕನೊಡನೆ ತ್ವರೆಮಾಡಿ ಅಲ್ಲಿಗೆ ಪ್ರಯಾಣಮಾಡು!"

ವಾಸುದೇವನು ಹೊರಟುಹೋದ ನಂತರ ಅಮೇಯಾತ್ಮ ಲೋಕನಮಸ್ಕೃತ ವ್ಯಾಸನು ಜನೇಶ್ವರ ಧೃತರಾಷ್ಟ್ರನನ್ನು ಸಮಾಧಾನಗೊಳಿಸತೊಡಗಿದನು. ಕೃತಕೃತ್ಯನಾದ ಧರ್ಮಾತ್ಮ ವಾಸುದೇವನೂ ಕೂಡ ಪಾಂಡವರನ್ನು ರಕ್ಷಿಸಲೋಸುಗ ಹಸ್ತಿನಾಪುರದಿಂದ ಶಿಬಿರದ ಕಡೆ ಪ್ರಯಾಣಿಸಿದನು. ರಾತ್ರಿಯಲ್ಲಿ ಶಿಬಿರವನ್ನು ತಲುಪಿ ಪಾಂಡವರನ್ನು ಕಂಡು ಅವರಿಗೆ ನಡೆದುದೆಲ್ಲವನ್ನೂ ಹೇಳಿ ಅವರೊಂದಿಗೆ ಸಾವಧಾನದಿಂದಿದ್ದನು.

ಭಗ್ನೋರುವಾದ ದುರ್ಯೋಧನನು ಕೆಳಗೆ ಬಿದ್ದಕೂಡಲೇ ಧೂಳಿನಿಂದ ಮುಚ್ಚಿಹೋದನು. ಕೆದರಿ ಹೋಗಿದ್ದ ತಲೆಗೂದಲನ್ನು ಸರಿಮಾಡಿಕೊಳ್ಳುತ್ತಾ ಅವನು ಹತ್ತು ದಿಕ್ಕುಗಳನ್ನೂ ನೋಡಿದನು. ಕಷ್ಟದಿಂದ ತಲೆಗೂದಲನ್ನು ಕಟ್ಟಿಕೊಂಡು ಹಾವಿನಂತೆ ಭುಸುಗುಟ್ಟುತ್ತಾ ಕೋಪದಿಂದ ಕೆಂಪಾದ ಮತ್ತು ಕಂಬನಿದುಂಬಿದ ಕಣ್ಣುಗಳಿಂದ ಸಂಜಯನ ಕಡೆ ನೋಡಿದನು. ಮದೋನ್ಮತ್ತ ಆನೆಯಂತೆ ತನ್ನೆರಡು ಕೈಗಳನ್ನೂ ನೆಲದ ಮೇಲೆ ಬಡಿಯುತ್ತಾ ಚದುರಿಹೋಗಿದ್ದ ತಲೆಗೂದಲನ್ನು ಅಲ್ಲಾಡಿಸುತ್ತಾ, ಹಲ್ಲುಗಳನ್ನು ಕಟಕಟನೆ ಕಡಿಯುತ್ತಾ, ನಿಟ್ಟುಸಿರು ಬಿಡುತ್ತಾ ಪಾಂಡವ ಜ್ಯೇಷ್ಠನನ್ನು ನಿಂದಿಸುತ್ತಾ ಸಂಜಯನಿಗೆ ಹೇಳಿದನು:

> “ಅಸ್ತ್ರಧಾರಿಗಳಲ್ಲಿ ಶ್ರೇಷ್ಠ ಭೀಷ್ಮ ಶಾಂತನವ, ಗೌತಮ, ಶಕುನಿ, ದ್ರೋಣ, ಅಶ್ವತ್ಥಾಮ, ಶಲ್ಯ, ಶೂರ ಕೃತವರ್ಮ ಇವರುಗಳ ರಕ್ಷಣೆಯಲ್ಲಿದ್ದ ನಾನೇ ಈ ಅವಸ್ಥೆಯನ್ನು ಹೊಂದಿದ್ದೇನೆ! ಕಾಲವನ್ನು ಅತಿಕ್ರಮಿಸುವುದು ಕಷ್ಟ! ಹನ್ನೊಂದು ಅಕ್ಷೋಹಿಣೀ ಸೇನೆಗಳ ಒಡೆಯನಾದ ನನಗೇ ಈ ದಶೆಯು ಪ್ರಾಪ್ತವಾಯಿತೆಂದರೆ ಬರುವಂತಹ ಕಾಲವನ್ನು ಹಿಂದೆಕಳುಹಿಸಲು ಸಾಧ್ಯವೇ ಇಲ್ಲ! ಸಂಗರದಲ್ಲಿ ನನ್ನವರು ಯಾರಾದರೂ ಜೀವಂತ ಉಳಿದಿದ್ದರೆ ಅವರಿಗೆ ಭೀಮಸೇನನು

ನನ್ನನ್ನು ಹೇಗೆ ಗದಾಯುದ್ಧದ ನಿಯಮಗಳನ್ನು ಉಲ್ಲಂಘಿಸಿ ಸಂಹರಿಸಿದನೆನ್ನುವುದನ್ನು ಹೇಳಬೇಕು! ಪಾಂಡವರು ಭೂರಿಶ್ರವ, ಕರ್ಣ, ಭೀಷ್ಮ ಮತ್ತು ದ್ರೋಣರ ಕುರಿತು ಅನೇಕ ಕ್ರೂರ ಕರ್ಮಗಳನ್ನೆಸಗಿದ್ದಾರೆ. ಅಕೀರ್ತಿಯನ್ನುಂಟುಮಾಡುವ ಈ ಕ್ರೂರಕರ್ಮಗಳನ್ನು ಮಾಡಿರುವುದರಿಂದ ಪಾಂಡವರು ಸತ್ಪುರುಷರ ನಿಂದನೆಗೆ ಒಳಗಾಗುತ್ತಾರೆ ಎಂದು ನನ್ನ ಅಭಿಪ್ರಾಯ. ವಂಚನೆಯಿಂದ ಪಡೆದುಕೊಂಡ ವಿಜಯದಿಂದ ಸತ್ತ್ವಯುಕ್ತನಾದ ಯಾರು ತಾನೇ ಸಂತೋಷಪಡುತ್ತಾನೆ? ನಿಯಮವನ್ನು ಉಲ್ಲಂಘಿಸುವವನನ್ನು ಯಾವ ವಿಧ್ವಾಂಸನು ತಾನೇ ಸಮ್ಮಾನಿಸ ಬಯಸುತ್ತಾನೆ? ಪಾಪಿ ಪಾಂಡುಪುತ್ರ ವೃಕೋದರನು ಸಂತೋಷಪಡುವಂತೆ ಅಧರ್ಮದಿಂದ ಜಯವನ್ನು ಪಡೆದ ಯಾವ ಪಂಡಿತನು ತಾನೇ ಸಂತೋಷಪಟ್ಟಾನು? ಭೀಮಸೇನನು ಕೋಪದಿಂದ ತೊಡೆಮುರಿದಿದ್ದ ನನ್ನ ತಲೆಯನ್ನು ಕಾಲಿನಿಂದ ತುಳಿದನು. ಇದಕ್ಕಿಂತಲೂ ವಿಚಿತ್ರವಾದು ಬೇರಾವುದಿದೆ? ಸಂಜಯ! ತೇಜಸ್ಸಿನಿಂದ ಬೆಳಗುತ್ತಿರುವ, ಸಂಪತ್ತಿನಿಂದ ಕೂಡಿರುವ ಮತ್ತು ಬಂಧುಗಳ ಮಧ್ಯವಿರುವವನಿಗೆ ಹೀಗೆ ಮಾಡುವ ನರನು ಸನ್ಮಾನ್ಯನೇ ಸರಿ! ನನ್ನ ಮಾತಾಪಿತರಿಬ್ಬರೂ

ಕ್ಷತ್ರಧರ್ಮವನ್ನು ತಿಳಿದವರು. ದುಃಖಾರ್ತರಾಗಿರುವ ಅವರಿಗೆ ನನ್ನ ಈ ಮಾತುಗಳನ್ನು ತಿಳಿಸಬೇಕು. ನಾನು ಯಜ್ಞಗಳನ್ನು ಮಾಡಿದ್ದೇನೆ. ಭೃತ್ಯರನ್ನು ಸಾಕಿಸಲಹಿದ್ದೇನೆ. ಸಾಗರದೊಂದಿಗೆ ಈ ಭೂಮಿಯನ್ನು ಆಳಿದ್ದೇನೆ. ಜೀವಂತವಿರುವಾಗಲೇ ಅಮಿತ್ರರ ತಲೆಗಳನ್ನು ಮೆಟ್ಟಿದ್ದೇನೆ. ಯಥಾಶಕ್ತಿ ದಾನಮಾಡಿದ್ದೇನೆ. ಮಿತ್ರರಿಗೆ ಪ್ರಿಯವಾದುದನ್ನು ಮಾಡಿದ್ದೇನೆ. ಅಮಿತ್ರರೆಲ್ಲರನ್ನೂ ಬಾಧಿಸಿದ್ದೇನೆ. ನನ್ನ ಹಾಗೆ ಸುಖಾಂತ್ಯವನ್ನು ಪಡೆದಿರುವವ ಬೇರೆ ಯಾರಿದ್ದಾರೆ? ಪರರಾಷ್ಟ್ರಗಳ ರಾಜರನ್ನು ಗೆದ್ದು ದಾಸರನ್ನಾಗಿಸಿ ಭೋಗಿಸಿದ್ದೇನೆ. ಪ್ರಿಯರಾದವರಿಗೆ ಒಳ್ಳೆಯದನ್ನು ಮಾಡಿದ್ದೇನೆ. ನನಗಿಂತಲೂ ಸುಖಾಂತ್ಯವನ್ನು ಹೊಂದಿರುವವರು ಯಾರಿದ್ದಾರೆ? ಸರ್ವಬಾಂಧವರನ್ನೂ ಸಮ್ಮಾನಿಸಿದ್ದೇನೆ. ಜನರು ನನ್ನನ್ನು ಮನ್ನಿಸಿ ಸಂಪೂಜಿಸಿದ್ದಾರೆ. ಧರ್ಮಾರ್ಥಕಾಮಗಳನ್ನು ಸೇವಿಸಿದ್ದೇನೆ. ನನಗಿಂತಲೂ ಸುಖಾಂತ್ಯವನ್ನು ಹೊಂದಿರುವವರು ಯಾರಿದ್ದಾರೆ? ನೃಪಮುಖ್ಯರನ್ನೇ ನನ್ನ ಆಜ್ಞಾಧಾರಕರನ್ನಾಗಿ ಮಾಡಿಕೊಂಡಿದ್ದೇನೆ. ಅವರಿಂದ ಸುದುರ್ಲಭವಾದ ಗೌರವವನ್ನೂ ಪಡೆದುಕೊಂಡಿದ್ದೇನೆ. ನನಗಿಂತಲೂ

ಸುಖಾಂತ್ಯವನ್ನು ಹೊಂದಿರುವವರು ಯಾರಿದ್ದಾರೆ? ವಿಧಿವತ್ತಾಗಿ ನನ್ನ ಅಧೀನಗೊಳಿಸಿಕೊಂಡಿದ್ದೇನೆ ಮತ್ತು ದಾನಮಾಡಿದ್ದೇನೆ. ರೋಗರಹಿತ ಆಯುಸ್ಸನ್ನು ಪಡೆದಿದ್ದೇನೆ. ಸ್ವಧರ್ಮದಿಂದ ಲೋಕಗಳನ್ನು ಜಯಿಸಿದ್ದೇನೆ. ನನಗಿಂತಲೂ ಸುಖಾಂತ್ಯವನ್ನು ಹೊಂದಿರುವವರು ಯಾರಿದ್ದಾರೆ? ಅದೃಷ್ಟವಶಾತ್ ನಾನು ಯಾವಾಗಲೂ ಯುದ್ಧದಲ್ಲಿ ಗೆಲ್ಲಲ್ಪಡಲಿಲ್ಲ. ಸೇವಕರಂತೆ ಯಾವಾಗಲೂ ಶತ್ರುಗಳಿಗೆ ಶರಣಾಗಲಿಲ್ಲ. ಅದೃಷ್ಟವಶಾತ್ ನನ್ನಲ್ಲಿದ್ದ ವಿಪುಲ ಸಂಪತ್ತು ನಾನು ತೀರಿಹೋದ ನಂತರವೇ ಅನ್ಯರ ವಶವಾಗುತ್ತದೆ. ಸ್ವಧರ್ಮದಲ್ಲಿ ನಿರತರಾಗಿರುವ ಕ್ಷತ್ರಬಂಧುಗಳಿಗೆ ಇಷ್ಟವಾದ ನಿಧನವನ್ನೇ ನಾನು ಪಡೆದಿದ್ದೇನೆ. ನನಗಿಂತಲೂ ಸುಖಾಂತ್ಯವನ್ನು ಹೊಂದಿರುವವರು ಯಾರಿದ್ದಾರೆ? ಒಳ್ಳೆಯದಾಯಿತು ನಾನು ವೈರತ್ವದಿಂದ ಹಿಂದೆಸರಿಯಲಿಲ್ಲ. ಸಾಮಾನ್ಯನಂತೆ ಜಯಿಸಲ್ಪಡಲಿಲ್ಲ. ಒಳ್ಳೆಯದಾಯಿತು ನನ್ನ ಬುದ್ಧಿಯು ಯಾವುದೇ ರೀತಿಯಲ್ಲಿ ದಾರಿ ತಪ್ಪಿ ಪರಾಜಿತನಾಗಲಿಲ್ಲ. ಮಲಗಿದ್ದವನನ್ನು ಕೊಲ್ಲುವಂತೆ, ಮತ್ತೇರಿದವನನ್ನು ಕೊಲ್ಲುವಂತೆ ಅಥವಾ ವಿಷವನ್ನು ಕೊಟ್ಟು ಕೊಲ್ಲುವಂತೆ ಧರ್ಮವನ್ನು ಮೀರಿ ಅಧರ್ಮದಿಂದ ಭೀಮನು

ನನ್ನನ್ನು ಸಂಹರಿಸಿದನು. ಅಶ್ವತ್ಥಾಮ, ಕೃತವರ್ಮ ಮತ್ತು ಕೃಪ ಶಾರದ್ವತರಿಗೆ ನನ್ನ ಈ ಮಾತನ್ನು ತಿಳಿಸಬೇಕು. ಅಧರ್ಮದಿಂದ ನಡೆದುಕೊಂಡಿರುವ ಮತ್ತು ಅನೇಕಬಾರಿ ಒಪ್ಪಂದಗಳನ್ನು ಮುರಿದಿರುವ ಪಾಂಡವರನ್ನು ಯಾವ ಕಾರಣಕ್ಕೂ ನಂಬಬಾರದು."

ಬಳಿಕ ದುರ್ಯೋಧನನು ವಾರ್ತೆಗಳನ್ನು ಕೊಂಡೊಯ್ಯುವ ದೂತರಿಗೆ ಹೀಗೆ ಹೇಳಿದನು:

"ರಣದಲ್ಲಿ ಭೀಮನಿಂದ ಅಧರ್ಮಪೂರ್ವಕವಾಗಿ ಹತನಾದ ನಾನು ಸ್ವರ್ಗಗತರಾಗಿರುವ ದ್ರೋಣ, ಶಲ್ಯ, ಕರ್ಣ, ವೃಷಸೇನ, ಶಕುನಿ, ಜಲಸಂಧ, ಭಗದತ್ತ, ಸೌಮದತ್ತಿ, ಜಯದ್ರಥ, ದುಃಶಾಸನನೇ ಮೊದಲಾದ ನನ್ನ ಆತ್ಮಸಮಾನ ಸಹೋದರರು, ದುಃಶಾಸನನ ಮತ್ತು ನನ್ನ ಮಗ ಲಕ್ಷ್ಮಣ ಮತ್ತು ಇನ್ನೂ ಅನೇಕ ಅನೇಕ ಸಹಸ್ರ ನನ್ನವರನ್ನು ಹಿಂಬಾಲಿಸಿ, ಸಂಗಡಿಗರನ್ನು ಕಳೆದುಕೊಂಡ ದಾರಿಹೋಕನಂತೆ ಏಕಾಕಿಯಾಗಿ ಹೋಗುತ್ತಿದ್ದೇನೆ. ಸಹೋದರರೂ ಪತಿಯೂ ಹತರಾದರೆನ್ನುವುದನ್ನು ಕೇಳಿ ನನ್ನ ತಂಗಿ ದುಃಶಲೆಯು ದುಃಖಾರ್ತಳಾಗಿ ರೋದಿಸುವುದಿಲ್ಲವೇ?

ಅವಳ ಭವಿಷ್ಯವೇನು? ರೋದಿಸುತ್ತಿರುವ
ಸೊಸೆಯಂದಿರಿಂದಲೂ ಮೊಮ್ಮಕ್ಕಳ ಪತ್ನಿಯರಿಂದಲೂ
ಆವೃತನಾದ ಗಾಂಧಾರೀಸಹಿತನಾದ ನನ್ನ ವೃದ್ಧ ಪಿತನು
ಯಾವ ಗತಿಯನ್ನು ಪಡೆಯುತ್ತಾನೆ? ಪುತ್ರನನ್ನೂ ಪತಿಯನ್ನೂ
ಕಳೆದುಕೊಂಡ ಕಲ್ಯಾಣೀ ಪೃಥುಲೋಚನೆ ಲಕ್ಷ್ಮಣನ
ತಾಯಿಯೂ ಕೂಡ ಬೇಗನೇ ವಿನಾಶವನ್ನು
ಹೊಂದುವುದಿಲ್ಲವೇ? ಪರಿವ್ರಾಜಕ ವಾಗ್ವಿಶಾರದ
ಚಾರ್ವಾಕನೇನಾದರೂ ಇದನ್ನು ತಿಳಿದರೆ ನಿಶ್ಚಯವಾಗಿಯೂ
ಆ ಮಹಾಭಾಗನು ಇದಕ್ಕೆ ಪ್ರತೀಕಾರವನ್ನು ಮಾಡುತ್ತಾನೆ.
ಮೂರುಲೋಕಗಳಲ್ಲಿಯೂ ಪುಣ್ಯವೆಂದು ವಿಶ್ರುತವಾಗಿರುವ
ಈ ಸಮಂತಪಂಚಕದಲ್ಲಿ ಸಾವನ್ನಪ್ಪಿ ನಾನು
ಶಾಶ್ವತಲೋಕಗಳನ್ನು ಪಡೆಯುತ್ತೇನೆ."

ನೃಪತಿಯ ಈ ಪ್ರಲಾಪವನ್ನು ಕೇಳಿ ಕಂಬನಿದುಂಬಿದ ಸಹಸ್ರಾರು ಜನರು ಹತ್ತು ದಿಕ್ಕುಗಳಿಗೂ ಓಡಿಹೋದರು. ಆಗ ಸಾಗರವನಗಳೊಂದಿಗೆ, ಚರಾಚರಗಳೊಂದಿಗೆ ಪೃಥ್ವಿಯು ಘೋರರೂಪವನ್ನು ತಾಳಿ ಸಿಡಿಲಿನ ಶಬ್ಧದೊಂದಿಗೆ ನಡುಗತೊಡಗಿತು. ದೂತರು ದ್ರೋಣಪುತ್ರನ ಬಳಿಹೋಗಿ ಗದಾಯುದ್ಧದಲ್ಲಿ ನಡೆದುದನ್ನೂ ಪಾರ್ಥಿವನ ಸಂಹಾರವನ್ನೂ ನಡೆದಂತೆ

ವರದಿಮಾಡಿದರು. ಆರ್ತರಾಗಿದ್ದ ಆ ದೂತರು ಅವೆಲ್ಲವನ್ನೂ ದ್ರೋಣಪುತ್ರನಿಗೆ ವರದಿಮಾಡಿ, ಬಹಳ ಹೊತ್ತು ಅದರ ಕುರಿತೇ ಚಿಂತಿಸುತ್ತಾ ಎಲ್ಲಿಂದ ಬಂದಿದ್ದರೋ ಅಲ್ಲಿಗೆ ಹೊರಟು ಹೋದರು.

# ಹದಿನೆಂಟನೇ ದಿನದ ಯುದ್ಧ: ಅಶ್ವತ್ಥಾಮನಿಗೆ ಕುರುಸೇನಾಪತ್ಯದ ಅಭಿಷೇಕ

ವಾರ್ತಾವಾಹಿಗಳಿಂದ ದುರ್ಯೋಧನನು ಹತನಾದನೆಂದು ಕೇಳಿ ಹತರಾಗದೇ ಉಳಿದಿದ್ದ ಆದರೆ ನಿಶಿತ ಬಾಣಗಳಿಂದ, ಗದೆ-ತೋಮರ-ಶಕ್ತಿಗಳ ಹೊಡೆತದಿಂದ ಗಾಯಗೊಂಡಿದ್ದ ಕೌರವರ ಮಹಾರಥರು – ಅಶ್ವತ್ಥಾಮ, ಕೃಪ ಮತ್ತು ಸಾತ್ವತ ಕೃತವರ್ಮರು – ತ್ವರೆಮಾಡಿ ವೇಗಶಾಲೀ ಕುದುರೆಗಳೊಂದಿಗೆ ರಣರಂಗಕ್ಕೆ ತಲುಪಿದರು. ಅಲ್ಲಿ ಅವರು ಚಂಡಮಾರುತದಿಂದ ವನದಲ್ಲಿ ಮುರಿದುಬಿದ್ದ ಮಹಾಶಾಲ ವೃಕ್ಷದಂತೆ ಕೆಳಗೆ ಬಿದ್ದಿದ್ದ ಮಹಾತ್ಮ ಧಾರ್ತರಾಷ್ಟ್ರನನ್ನು ನೋಡಿದರು. ಅರಣ್ಯದಲ್ಲಿ ವ್ಯಾಧನಿಂದ ಕೆಳಗುರುಳಿಸಲ್ಪಟ್ಟ ಮಹಾಗಜದಂತೆ ಅವನು ರಕ್ತದಲ್ಲಿ ತೋಯ್ದುಹೋಗಿ ನೆಲದಮೇಲೆ ಚಡಪಡಿಸುತ್ತಿದ್ದನು. ರಕ್ತದ

ಕೋಡಿಯಲ್ಲಿಯೇ ಮುಳುಗಿ ಹೋಗಿ ಪ್ರಾಣಸಂಕಟದಿಂದ ಹೊರಳಾಡುತ್ತಿದ್ದ ಅವನು ತನ್ನ ಇಚ್ಛೆಯಿಂದಲೇ ಕೆಳಗೆ ಬಿದ್ದಿದ್ದ ಸೂರ್ಯನ ಚಕ್ರದಂತೆ ಕಾಣುತ್ತಿದ್ದನು. ಮೇಲೆದ್ದ ಬಿರುಗಾಳಿಯಿಂದ ಒಣಗಿದ ಸಾಗರದಂತೆ ಮತ್ತು ಹಿಮದಿಂದ ಆವೃತವಾದ ಆಕಾಶಮಂಡಲದಿಂದ ಕೂಡಿದ ಪೂರ್ಣಚಂದ್ರನಂತೆ ದುರ್ಯೋಧನನು ಕಾಣುತ್ತಿದ್ದನು. ಮಾತಂಗಸಮ ವಿಕ್ರಮಿಯಾಗಿದ್ದ ಆ ದೀರ್ಘಭುಜ ನೃಪತಿಸತ್ತಮನು ಧೂಳಿನಿಂದ ತುಂಬಿಹೋಗಿದ್ದು, ಧನವನ್ನು ಕಸಿದುಕೊಳ್ಳುವ ಇಚ್ಛೆಯಿಂದ ಸೇವಕರು ಮುತ್ತುವಂತೆ ಸುತ್ತಲೂ ಘೋರ ಭೂತಗಣಗಳಿಂದಲೂ ಮಾಂಸಾಶಿ ಮೃಗ-ಪಕ್ಷಿಗಳಿಂದಲೂ ಆವೃತನಾಗಿದ್ದನು. ಕೆಳಗುರುಳಿ ಸಿಟ್ಟಾಗಿದ್ದ ವ್ಯಾಘ್ರನಂತಿದ್ದ ಆ ನರವ್ಯಾಘ್ರನು ಕ್ರೋಧದಿಂದ ಗಂಟುಕಟ್ಟಿದ್ದ ಹುಬ್ಬುಗಳು ಬಾಯಿಯವರೆಗೂ ಪ್ರಸರಿಸಿದ್ದವು. ಕಣ್ಣುಗಳು ಹೊರಚಾಚಿದಂತಿದ್ದವು. ಭೂತಲದಲ್ಲಿ ಬಿದ್ದಿರುವ ಆ ನೃಪನನ್ನು ಕಂಡು ಕೃಪನೇ ಮೊದಲಾದ ಆ ಮಹೇಷ್ವಾಸ ಮಹಾರಥರಿಗೆ ಮೋಹವು ಆವೇಶಗೊಂಡಿತು. ರಥದಿಂದ ಕೆಳಗಿಳಿದು ರಾಜಸನ್ನಿಧಿಗೆ ಓಡಿಬಂದು ದುರ್ಯೋಧನನನ್ನು ನೋಡಿ ಎಲ್ಲರೂ ನೆಲದ ಮೇಲೆ ಕುಳಿತುಕೊಂಡರು.

ಆಗ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ದ್ರೌಣಿಯು ನಿಟ್ಟುಸಿರು

ಬಿಡುತ್ತಾ ಸರ್ವ ಲೋಕೇಶ್ವರೇಶ್ವರ ಭರತಶ್ರೇಷ್ಠನಿಗೆ ಹೀಗೆಂದನು:

“ಪುರುಷವ್ಯಾಘ್ರ! ನಿನ್ನಂತವನೇ ಕೆಸರಿನಿಂದ
ಒರಳಾಡುತ್ತಿರುವಂತಾಯಿತೆಂದರೆ ಮನುಷ್ಯನಿಗೆ
ಸಹಿಸಲಾಗದಂತದು ಕಿಂಚಿತ್ತೂ ಇಲ್ಲವೆಂದಾಯಿತಲ್ಲವೇ?
ಹಿಂದೆ ನೃಪತಿಯಾಗಿ ಇಡೀ ಮೇದಿನಿಗೇ ಆಜ್ಞೆನೀಡುತ್ತಿದ್ದ
ನೀನು ಇಂದು ಏಕಾಂಗಿಯಾಗಿ ನಿರ್ಜನ ವನದಲ್ಲಿ ಹೇಗಿರುವೆ?
ದುಃಶಾಸನನನ್ನು ಕಾಣುತ್ತಿಲ್ಲ. ಮಹಾರಥ ಕರ್ಣನೂ
ಕಾಣುತ್ತಿಲ್ಲ. ಸರ್ವ ಸುಹೃದ್ಗಣಗಳನ್ನೂ ಕಾಣುತ್ತಿಲ್ಲ!
ಹೀಗೇಕಾಯಿತು? ಕೆಸರಿನಲ್ಲಿ ಹೊರಳಾಡುತ್ತಾ ನೀನು
ಮಲಗಿರುವುದನ್ನು ನೋಡಿದರೆ ಕೃತಾಂತನು ಲೋಕಗಳನ್ನು
ನಡೆಸುವ ಮತ್ತು ದುಃಖವನ್ನು ತಂದೊಡ್ಡುವುದನ್ನು
ಅರಿತುಕೊಳ್ಳುವುದು ಕಷ್ಟಸಾಧ್ಯ ಎಂದೆನಿಸುತ್ತದೆ.
ಮೂರ್ಧಾಭಿಷಿಕ್ತರಾದ ರಾಜರ ಮುಂದಾಳುವಾಗಿದ್ದ ಈ
ಪರಂತಪನು ಹುಲ್ಲಿನೊಂದಿಗೆ ಮಿಶ್ರಣವಾಗಿರುವ ಧೂಳನ್ನು
ತಿನ್ನುತ್ತಿದ್ದಾನೆ! ಕಾಲದ ವೈಪರೀತ್ಯವನ್ನಾದರೂ ನೋಡಿ! ನಿನ್ನ
ಆ ಅಮಲ ಚತ್ರವೆಲ್ಲಿ? ನಿನ್ನ ಆ ಚಾಮರವೆಲ್ಲಿ?
ಪಾರ್ಥಿವೋತ್ತಮ! ನಿನ್ನ ಆ ಮಹಾಸೇನೆಯು ಎಲ್ಲಿ
ಹೋಯಿತು? ಲೋಕಗುರುವಾಗಿದ್ದ ನಿನಗೆ ಈ

ದಶೆಯುಂಟಾಯಿತೆಂದರೆ ಆಗು ಹೋಗುಗಳ ಕಾರಣಗಳನ್ನು ತಿಳಿದುಕೊಳ್ಳುವುದು ಕಷ್ಟವೆಂದಾಯಿತಲ್ಲವೇ? ಸಂಪತ್ತಿನಲ್ಲಿ ಶಕ್ರನೊಡನೆ ಕೂಡ ಸ್ಪರ್ಧಿಸುವಂತಿದ್ದ ನಿನಗೇ ಈ ವ್ಯಸನವುಂಟಾಯಿತೆಂದರೆ ಸರ್ವ ಮನುಷ್ಯರಲ್ಲಿ ಸಂಪತ್ತು ಅನಿಶ್ಚಿತವಾದುದು ಎನ್ನುವುದು ನಿಶ್ಚಯ!”

ವಿಶೇಷವಾಗಿ ದುಃಖಿತನಾಗಿದ್ದ ಅವನ ಆ ಮಾತನ್ನು ಕೇಳಿ ದುರ್ಯೋಧನನು ಶೋಕದಿಂದ ಉಕ್ಕಿಬರುತ್ತಿದ್ದ ಕಣ್ಣೀರನ್ನು ಎರಡೂ ಕೈಗಳಿಂದ ಒರೆಸಿಕೊಳ್ಳುತ್ತಾ ಕೃಪನೇ ಮೊದಲಾದ ಆ ಸರ್ವ ವೀರರಿಗೆ ಸಮಯಕ್ಕೆ ತಕ್ಕುದಾದ ಈ ಮಾತನ್ನಾಡಿದನು:

“ಕಾಲದ ಉರುಳುವಿಕೆಯಿಂದ ಸರ್ವಭೂತಗಳ ವಿನಾಶವಾಗುತ್ತದೆ. ಇದೇ ಮನುಷ್ಯಧರ್ಮವೆಂದೂ ಇದನ್ನು ಧಾತಾರನೇ ನಿರ್ಧರಿಸಿದ್ದಾನೆಂದೂ ಹೇಳುತ್ತಾರೆ. ಅದೇ ವಿನಾಶವನ್ನು ನಾನು ನಿಮ್ಮ ಸಮಕ್ಷಮದಲ್ಲಿ ಹೊಂದಿದ್ದೇನೆ. ಪೃಥ್ವಿಯನ್ನು ಪಾಲಿಸುತ್ತಿದ್ದ ನಾನು ಈ ಪರಿಸ್ಥಿತಿಯನ್ನು ಹೊಂದಿದ್ದೇನೆ. ಒಳ್ಳೆಯದಾಯಿತು! ನಾನು ಯುದ್ಧದಿಂದ ಎಂದೂ ಹಿಂದೆಸರಿಯಲಿಲ್ಲ! ಒಳ್ಳೆಯದಾಯಿತು! ಪಾಪಿಷ್ಟರು ನನ್ನನ್ನು ಮೋಸದಿಂದಲೇ ಕೊಂದರು! ಒಳ್ಳೆಯದಾಯಿತು!

ನಾನು ನಿತ್ಯವೂ ಉತ್ಸಾಹದಿಂದಲೇ ಯುದ್ಧಮಾಡಿದೆ! ಒಳ್ಳೆಯದಾಯಿತು! ನನ್ನ ಜ್ಞಾತಿಬಾಂಧವರೆಲ್ಲರೂ ಯುದ್ಧದಲ್ಲಿ ಹತನಾದ ನಂತರವೇ ನಾನು ಹತನಾದೆನು! ಒಳ್ಳೆಯದಾಯಿತು! ಈ ಜನಕ್ಷಯಯುದ್ಧದಿಂದ ಮುಕ್ತರಾಗಿರುವ ನಿಮ್ಮನ್ನು ನಾನು ನೋಡುತ್ತಿದ್ದೇನೆ! ಕುಶಲರಾಗಿರುವಿರಿ ಮತ್ತು ಕಾರ್ಯಸಮರ್ಥರಾಗಿದ್ದೀರಿ ಎಂದು ನೋಡಿ ಅತ್ಯಂತ ಸಂತೋಷವೂ ಆಗಿದೆ. ನನ್ನ ನಿಧನದ ಕುರಿತು ಸ್ನೇಹಭಾವದಿಂದ ನೀವು ಪರಿತಪಿಸಬೇಕಾಗಿಲ್ಲ! ವೇದಗಳಿಗೆ ಪ್ರಮಾಣವಿವೆಯೆಂದಾದರೆ ನಾನು ಅಕ್ಷಯ ಲೋಕಗಳನ್ನು ಗೆದ್ದುಕೊಂಡಿದ್ದೇನೆ! ಕೃಷ್ಣನ ಪ್ರಭಾವವನ್ನು ತಿಳಿದುಕೊಂಡಿದ್ದರೂ ಅವನ ಪ್ರೇರಣೆಗೆ ಬಾರದೇ ನಾನು ಕ್ಷತ್ರಧರ್ಮದಲ್ಲಿಯೇ ನಿರತನಾಗಿದ್ದೆ! ಆ ಕ್ಷತ್ರಧರ್ಮದ ಫಲವನ್ನು ನಾನು ಪಡೆದುಕೊಂಡಿದ್ದೇನೆ. ಅದರಲ್ಲಿ ಶೋಕಿಸುವಂತಾದ್ದು ಏನೂ ಇಲ್ಲ. ನೀವು ನಿಮಗೆ ಅನುರೂಪವಾದ ರೀತಿಗಳಲ್ಲಿ ಯುದ್ಧಮಾಡಿರುವಿರಿ! ನಿತ್ಯವೂ ನನ್ನ ವಿಜಯಕ್ಕೆ ಪ್ರಯತ್ನಿಸಿದರೂ ದೈವವನ್ನು ಅತಿಕ್ರಮಿಸಲು ಯಾರಿಗೂ ಸಾಧ್ಯವಿಲ್ಲ!”

ಹೀಗೆ ಹೇಳಿ ಪ್ರಾಣಪ್ರಯಾಣದಿಂದ ತುಂಬಾ ವಿಹ್ವಲನಾಗಿದ್ದ

ರಾಜೇಂದ್ರನು ಕಣ್ಣೀರು ಮತ್ತು ವ್ಯಾಕುಲಗಳು ಅವನ ಕಣ್ಣುಗಳನ್ನು ತುಂಬಿರಲು ಸುಮ್ಮನಾದನು. ಹಾಗೆ ಬಾಷ್ಪಶೋಕಸಮನ್ವಿತನಾದ ರಾಜನನ್ನು ನೋಡಿ ದ್ರೌಣಿಯು ಜಗತ್ ಕ್ಷಯದಲ್ಲಿ ವಹ್ನಿಯು ಹೇಗೋ ಹಾಗೆ ಕ್ರೋಧದಿಂದ ಪ್ರಜ್ವಲಿಸಿದನು. ಅವನಾದರೋ ಕೈಯಿಂದ ಕೈಯನ್ನು ಉಜ್ಜಿಕೊಳ್ಳುತ್ತಾ ರಾಜನಿಗೆ ಈ ಬಾಷ್ಪವಿಹ್ವಲ ಮಾತುಗಳನ್ನಾಡಿದನು:

> "ಆ ಕ್ಷುದ್ರರು ಅತ್ಯಂತ ಕ್ರೂರಕರ್ಮದಿಂದ ನನ್ನ ತಂದೆಯನ್ನು ಸಂಹರಿಸಿದಾಗಲೂ ಇಂದು ನಿನ್ನ ಈ ಪರಿಸ್ಥಿತಿಯನ್ನು ನೋಡಿ ಪರಿತಾಪಪಡುವಷ್ಟು ಪರಿತಪಿಸಿರಲಿಲ್ಲ. ಪ್ರಭೋ! ನಾನು ಪೂರೈಸಿದ ಇಷ್ಟಿಗಳ, ದಾನ-ಧರ್ಮ ಮತ್ತು ಸುಕೃತಗಳ ಮೇಲೆ ಆಣೆಯನ್ನಿಟ್ಟು ಹೇಳುವ ಈ ನನ್ನ ಸತ್ಯವಚನವನ್ನು ಕೇಳು! ಇಂದು ನಾನು ವಾಸುದೇವನು ನೋಡುತ್ತಿದ್ದಂತೆಯೇ ಸರ್ವಪಾಂಚಾಲರನ್ನು ಸರ್ವೋಪಾಯಗಳನ್ನು ಬಳಸಿ ಪ್ರೇತರಾಜನ ನಿವೇಶನಕ್ಕೆ ಕಳುಹಿಸುತ್ತೇನೆ. ನೀನು ನನಗೆ ಅನುಜ್ಞೆಯನ್ನು ನೀಡಬೇಕು!"

ಮನಸ್ಸಿಗೆ ಸಂತೋಷವನ್ನುಂಟುಮಾಡಿದ ದ್ರೋಣಪುತ್ರನ ಆ ಮಾತನ್ನು ಕೇಳಿ ಕೌರವನು ಕೃಪನಿಗೆ

"ಆಚಾರ್ಯ ! ಶೀಘ್ರವಾಗಿ ಜಲಪೂರ್ಣ ಕಲಶವನ್ನು ತರಿಸಿ !"

ಎಂದು ಹೇಳಿದನು. ರಾಜನ ಆ ಮಾತನ್ನು ಕೇಳಿ ಬ್ರಾಹ್ಮಣಸತ್ತಮನು ಪೂರ್ಣಕಲಶವನ್ನು ಹಿಡಿದು ರಾಜನ ಬಳಿಬಂದನು. ಅವನಿಗೆ ದುರ್ಯೋಧನನು ಹೇಳಿದನು:

"ದ್ವಿಜಶ್ರೇಷ್ಠ ! ನಿಮಗೆ ಮಂಗಳವಾಗಲಿ ! ನನಗೆ ಪ್ರಿಯವಾದುದನ್ನು ಬಯಸುವಿರಾದರೆ ನನ್ನ ಆಜ್ಞೆಯಂತೆ ದ್ರೋಣಪುತ್ರನನ್ನು ಸೇನಪತ್ಯದಿಂದ ಅಭಿಷೇಕಿಸಿರಿ ! ರಾಜನ ನಿಯೋಗದಂತೆ ಯುದ್ಧಮಾಡಬೇಕು ! ಅದರಲ್ಲೂ ವಿಶೇಷವಾಗಿ ಕ್ಷತ್ರಧರ್ಮದಿಂದ ವರ್ತಿಸುವ ಬ್ರಾಹ್ಮಣನು ಹೀಗೇ ಮಾಡಬೇಕೆಂದು ಧರ್ಮವಿದರು ತಿಳಿಸುತ್ತಾರೆ."

ರಾಜನ ಮಾತನ್ನು ಕೇಳಿ ಶಾರದ್ವತ ಕೃಪನು ರಾಜನ ನಿಯೋಗದಂತೆ ದ್ರೌಣಿಯನ್ನು ಸೇನಾಪತಿಯಾಗಿ ಅಭಿಷೇಕಿಸಿದನು. ಹಾಗೆ ಅಭಿಷಿಕ್ತನಾದ ಅಶ್ವತ್ಥಾಮನು ನೃಪೋತ್ತಮನನ್ನು ಆಲಂಗಿಸಿ ಸರ್ವ ದಿಶಗಳಲ್ಲಿಯೂ ಪ್ರತಿಧ್ವನಿಯಾಗುವಂತೆ ಸಿಂಹನಾದ ಮಾಡುತ್ತಾ ಹೊರಟುಹೋದನು. ರಕ್ತದಿಂದ ತೋಯ್ದುಹೋಗಿದ್ದ ದುರ್ಯೋಧನನಾದರೋ ಸರ್ವಭೂತಗಳಿಗೂ ಭಯಂಕರವಾಗಿದ್ದ ಆ ರಾತ್ರಿಯನ್ನು ಅಲ್ಲಿಯೇ ಕಳೆದನು. ಅಲ್ಲಿಂದ ಶೀಘ್ರವಾಗಿ ಹೊರಟುಹೋದ ಅವರು

ಶೋಕಸಂವಿಗ್ನಮನಸ್ಕರಾಗಿ ಚಿಂತಾಧ್ಯಾನಪರರಾದರು.

# ಸೌಪ್ತಿಕ ಪರ್ವ




## ರಾತ್ರಿ ಮಲಗಿದ್ದ ಪಾಂಡವ ಸೇನೆಯನ್ನು ಆಕ್ರಮಣಿಸಲು ಅಶ್ವತ್ಥಾಮನು ನಿಶ್ಚಯಿಸಿದುದು

ಅನಂತರ ವೀರ ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರು ಒಟ್ಟಾಗಿ

ದಕ್ಷಿಣಾಭಿಮುಖವಾಗಿ ಪ್ರಯಾಣಿಸುತ್ತಾ ಸೂರ್ಯಾಸ್ತಮನದ ವೇಳೆಯಲ್ಲಿ ಶಿಬಿರಗಳ ಬಳಿ ಆಗಮಿಸಿದರು. ಭೀತರಾದ ಅವರು ಗಹನವನಪ್ರದೇಶವನ್ನು ಸೇರಿ ತ್ವರೆಮಾಡಿ ಕುದುರೆಗಳನ್ನು ಬಿಚ್ಚಿ ಯಾರಿಗೂ ಕಾಣದಂತೆ ಒಂದೆಡೆ ಕುಳಿತುಕೊಂಡರು. ಸೇನಾಡೇರೆಗಳ ಅನತಿದೂರದಲ್ಲಿಯೇ ಕುಳಿತುಕೊಂಡಿದ್ದ ಅವರು ನಿಶಿತ ಶಸ್ತ್ರಗಳಿಂದ ಪ್ರಹೃತರಾಗಿ ಶರೀರಾದ್ಯಂತ ಕ್ಷತವಿಕ್ಷತರಾಗಿದ್ದರು. ಜಯೋಲ್ಲಾಸಿತರಾದ ಪಾಂಡವರ ಘೋರ ನಿನಾದವನ್ನು ಕೇಳಿ ಪಾಂಡವರನ್ನೇ ಬಾರಿ ಬಾರಿಗೂ ಚಿಂತಿಸುತ್ತಾ ಸುದೀರ್ಘವಾದ ಬಿಸಿಬಿಸಿಯಾದ ನಿಟ್ಟುಸಿರನ್ನು ಬಿಡುತ್ತಿದ್ದರು. ಅವರೇನಾದರೂ ತಮ್ಮನ್ನು ಹಿಂಬಾಲಿಸಿ ಬರಬಹುದೆಂಬ ಭಯದಿಂದ ಪುನಃ ಪೂರ್ವಾಭಿಮುಖವಾಗಿ ಓಡಿದರು. ಮುಹೂರ್ತಕಾಲ ಹೋಗಲು ಕುದುರೆಗಳು ಬಳಲಿದವು ಮತ್ತು ಬಾಯಾರಿದವು. ರಾಜನ ವಧೆಯಿಂದುಂಟಾದ ಕೋಪವನ್ನು ಸಹಿಸಿಕೊಳ್ಳಲಾಗದೇ ಆ ಮಹೇಷ್ವಾಸರು ಸಂತಪ್ತರಾಗಿ ಮುಹೂರ್ತಕಾಲ ಸುಮ್ಮನೇ ಕುಳಿತುಕೊಂಡರು.

ಅವರು ಕುಳಿತಿದ್ದ ಅನತಿ ದೂರದಲ್ಲಿ ನಾನಾ ವೃಕ್ಷ-ಲತೆಗಳಿಂದ ಕೂಡಿದ್ದ ಘೋರವನವೊಂದನ್ನು ನೋಡಿದರು. ಮುಹೂರ್ತಕಾಲ ವಿಶ್ರಮಿಸಿದ ಅವರು ಉತ್ತಮ ಕುದುರೆಗಳಿಗೆ ನೀರುಕುಡಿಸಿ

ಸೂರ್ಯಾಸ್ತದ ಸಮಯದಲ್ಲಿ ಆ ಮಹಾವನವನ್ನು ಪ್ರವೇಶಿಸಿದರು. ಆ ಅರಣ್ಯದಲ್ಲಿ ನಾನಾ ಮೃಗಗಣಗಳು ವಾಸಿಸುತ್ತಿದ್ದವು. ನಾನಾ ಪಕ್ಷಿಸಮಾಕುಲಗಳಿದ್ದವು. ನಾನಾದ್ರುಮಲತೆಗಳಿಂದ ಮುಚ್ಚಿಕೊಂಡಿತ್ತು. ನಾನಾವಿಷಜಂತುಗಳಿಂದ ತುಂಬಿತ್ತು. ನೂರಾರು ಕಮಲಪುಷ್ಪಗಳಿಂದ ಮತ್ತು ನೀಲೋತ್ಪಲಗಳಿಂದ ಮುಚ್ಚಿಹೋಗಿದ್ದ ನಾನಾವಿಧದ ಸರೋವರ-ಕೊಳಗಳಿಂದ ಶೋಭಿಸುತ್ತಿತ್ತು. ಆ ಘೋರ ವನವನ್ನು ಪ್ರವೇಶಿಸಿ ಸುತ್ತಲೂ ನೋಡುತ್ತಿದ್ದ ಅವರು ಸಹಸ್ರ ರೆಂಬೆಗಳಿಂದ ವಿಶಾಲವಾಗಿ ಹರಡಿದ್ದ ಆಲದ ಮರವನ್ನು ಕಂಡರು. ಮನುಜರಲ್ಲಿ ಶ್ರೇಷ್ಠ ಆ ಮಹಾರಥರು ಆಲದಮರದ ಬಳಿಹೋಗಿ ಆ ಶ್ರೇಷ್ಠ ವನಸ್ಪತಿಯನ್ನು ನೋಡಿದರು. ಅವರು ರಥಗಳಿಂದ ಕೆಳಗಿಳಿದು ಕುದುರೆಗಳನ್ನು ಬಿಚ್ಚಿದರು. ಯಥಾನ್ಯಾಯವಾಗಿ ಅವರು ಸ್ನಾನಾಚಮನಾದಿಗಳನ್ನು ಮಾಡಿ ಸಂಧ್ಯಾವಂದನೆಯನ್ನೂ ಪೂರೈಸಿದರು. ಆಗ ದಿವಾಕರನು ಪರ್ವತಶ್ರೇಷ್ಠನನ್ನು ಸೇರಿ ಅಸ್ತನಾಗಲು ಸರ್ವ ಜಗತ್ತಿನ ಧಾತ್ರೀ ಶರ್ವರಿಯು ಆವರಿಸಿದಳು. ಗ್ರಹನಕ್ಷತ್ರತಾರೆಗಳಿಂದ ಅಲಂಕೃತವಾಗಿ ಹರಡಿದ್ದ ನಭೆಯು ಅಂಶುಕದಂತೆ ಎಲ್ಲೆಡೆ ಪ್ರೇಕ್ಷಣೀಯವಾಗಿ ಹೊಳೆಯುತ್ತಿತ್ತು. ರಾತ್ರಿಯಲ್ಲಿ ಸಂಚರಿಸುವ ಪ್ರಾಣಿಗಳು ಇಚ್ಛಾನುಸಾರವಾಗಿ ಸಂಚರಿಸಲೂ ಕೂಗಲೂ ತೊಡಗಿದವು. ಹಗಲಲ್ಲಿ ಸಂಚರಿಸುವ ಪ್ರಾಣಿಗಳು ನಿದ್ರಾವಶವಾದವು.

ಕತ್ತಲೆಯು ಕವಿಯುತ್ತಲೇ ರಾತ್ರಿಸಂಚರಿಸುವ ಮಾಂಸಾಹಾರಿ ಪ್ರಾಣಿಗಳು ಸಂತೋಷದಿಂದ ಘೋರವಾಗಿ ಸುದಾರುಣವಾಗಿ ಕೂಗತೊಡಗಿದವು. ಆ ಘೋರ ರಾತ್ರಿಯ ಪ್ರಾರಂಭದಲ್ಲಿ ದುಃಖಶೋಕಸಮನ್ವಿತರಾದ ಕೃತವರ್ಮ, ಕೃಪ, ಮತ್ತು ದ್ರೌಣಿಯರು ಒಂದೇ ಸಾಲಿನಲ್ಲಿ ಕುಳಿತುಕೊಂಡರು. ಆಲದ ಮರದ ಸಮೀಪದಲ್ಲಿ ಕುಳಿತಿದ್ದ ಅವರು ಅತಿಕ್ರಮಿಸಲು ಸಾಧ್ಯವಾಗದ ಕುರುಪಾಂಡವರ ಕ್ಷಯದ ಕುರಿತೇ ಮಾತನಾಡಿಕೊಳ್ಳುತ್ತಾ ಶೋಕಿಸುತ್ತಿದ್ದರು. ವಿವಿಧ ಶರಗಳಿಂದ ಗಾಢವಾಗಿ ಕ್ಷತವಿಕ್ಷತರಾಗಿದ್ದ ಅವರು ಬಳಲಿದ್ದು ನಿದ್ದೆಯಿಂದ ತೂಕಡಿಸುತ್ತಾ ನೆಲದ ಮೇಲೆಯೇ ಕುಳಿತಿದ್ದರು. ಆಗ ಸುಖೋಚಿತರಾಗಿದ್ದ ಮತ್ತು ದುಃಖಕ್ಕೆ ಅನರ್ಹರಾಗಿದ್ದ ಮಹಾರಥ ಕೃಪ-ಕೃತವರ್ಮರು ನಿದ್ರಾವಶರಾಗಿ ಆಯಾಸ-ಶೋಕಸಮನ್ವಿತರಾಗಿ ನೆಲದ ಮೇಲೆಯೇ ಮಲಗಿಕೊಂಡರು.

ಆದರೆ ಕ್ರೋಧ-ಅಸಹನೆಗಳ ವಶನಾಗಿದ್ದ ದ್ರೋಣಪುತ್ರನಿಗೆ ಮಾತ್ರ ನಿದ್ದೆಯು ಬರಲಿಲ್ಲ. ಅವನು ಸರ್ಪದಂತೆ ಸುದೀರ್ಘವಾಗಿ ನಿಟ್ಟುಸಿರು ಬಿಡುತ್ತಾ ಎಚ್ಚೆತ್ತೇ ಇದ್ದನು. ಅತಿಕೋಪದಿಂದ ಸುಡುತ್ತಾ ನಿದ್ರೆಯೇ ಬರದಿದ್ದ ಆ ಮಹಾಬಾಹುವು ಘೋರವಾಗಿ ಕಾಣುತ್ತಿದ್ದ ಆ ವನವನ್ನೇ ವೀಕ್ಷಿಸುತ್ತಿದ್ದನು. ನಾನಾ ಪ್ರಾಣಿಗಳಿಂದ ಕೂಡಿದ್ದ ಆ ವನಪ್ರದೇಶವನ್ನು ನೋಡುತ್ತಿದ್ದ ಆ ಮಹಾಬಾಹುವು ಆಲದ ಮರದಲ್ಲಿ ವಾಸಿಸುತ್ತಿದ್ದ

ಕಾಗೆಗಳ ಗುಂಪನ್ನು ಕಂಡನು. ಸಹಸ್ರಾರು ಕಾಗೆಗಳು ಆ ಮರದ ಪ್ರತ್ಯೇಕ ಪ್ರತ್ಯೇಕ ರೆಂಬೆಗಳನ್ನು ಆಶ್ರಯಿಸಿ ಸುಖವಾಗಿ ನಿದ್ರೆಮಾಡುತ್ತಾ ರಾತ್ರಿಯನ್ನು ಕಳೆಯುತ್ತಿದ್ದವು. ಸುತ್ತಲೂ ನಿಃಶಬ್ಧವಾಗಿದ್ದು ಆ ಕಾಗೆಗಳು ಮಲಗಿರಲು ಒಮ್ಮೆಲೇ ಅಲ್ಲಿ ಮಹಾಸ್ವರದ, ಮಹಾಕಾಯದ, ಹಳದೀ ಬಣ್ಣದ ಕಣ್ಣುಳ್ಳ, ಪಿಂಗಲ ಹುಬ್ಬುಗಳುಳ್ಳ, ಸುದೀರ್ಘ ಕೊಕ್ಕು-ಉಗುರುಗಳುಳ್ಳ, ಗರುಡನಂತಹ ವೇಗವುಳ್ಳ ಘೋರ ಗೂಬೆಯೊಂದು ಕಂಡುಬಂದಿತು. ಆಗ ಶಬ್ಧವನ್ನು ಮೃದುವಾಗಿಸಿ, ಅಡಗಿಕೊಂಡೇ ಆ ಪಕ್ಷಿಯು ಆಲದಮರದ ರೆಂಬೆಗಳ ಮೇಲೆ ಹಾರಿ ಹುಡುಕತೊಡಗಿತು. ಆಲದಮರದ ರೆಂಬೆಯಿಂದ ರೆಂಬೆಗೆ ಹಾರುತ್ತಾ ಆ ಕಾಗೆಗಳ ಅಂತಕ ಪಕ್ಷಿಯು ಮಲಗಿದ್ದ ಅನೇಕ ಕಾಗೆಗಳನ್ನು ಸಂಹರಿಸಿತು. ಕಾಲುಗಳೇ ಆಯುಧವಾಗಿದ್ದ ಆ ಗೂಬೆಯು ಕೆಲವು ಕಾಗೆಗಳ ರೆಕ್ಕೆಗಳನ್ನು ಕತ್ತರಿಸಿತು. ಕೆಲವು ಕಾಗೆಗಳ ತಲೆಗಳನ್ನು ಕತ್ತರಿಸಿತು. ಕೆಲವು ಕಾಗೆಗಳ ಕಾಲುಗಳನ್ನು ಮುರಿಯಿತು. ಕ್ಷಣದಲ್ಲಿಯೇ ಆ ಬಲವಾನ್ ಪಕ್ಷಿಯು ತನ್ನ ದೃಷ್ಟಿ ಪಥದಲ್ಲಿ ಬಂದ ಕಾಗೆಗಳೆಲ್ಲವನ್ನೂ ಕೊಂದುಹಾಕಿತು. ಆ ವಟವೃಕ್ಷದ ಮಡಲವು ಸತ್ತುಹೋದ ಕಾಗೆಗಳಿಂದಲೂ ಮತ್ತು ಅವುಗಳ ಛಿನ್ನ-ಛಿನ್ನ ಅವಯವಗಳಿಂದಲೂ ತುಂಬಿಹೋಯಿತು. ಶತ್ರುಸೂದನ ಆ ಗೂಬೆಯು ಬೇಕಾದಂತೆ ಶತ್ರುಗಳನ್ನು ಸಂಹರಿಸಿ ಪ್ರತೀಕಾರಮಾಡಿ ಆನಂದಿಸಿತು.

ಗೂಬೆಯು ರಾತ್ರಿಯಲ್ಲಿ ವಂಚನೆಯಿಂದ ಮಾಡಿದ ಆ ಕ್ರೂರ ಕರ್ಮವನ್ನು ನೋಡಿದ ದ್ರೌಣಿಯು ತಾನೂ ಕೂಡ ಹಾಗೆ ಮಾಡಬೇಕೆಂಬ ಸಂಕಲ್ಪದಿಂದ ಒಬ್ಬನೇ ಯೋಚಿಸತೊಡಗಿದನು.

"ಯುದ್ಧದಲ್ಲಿ ನಾನು ಏನು ಮಾಡಬೇಕೆನ್ನುವುದನ್ನು ಈ ಪಕ್ಷಿಯೇ ನನಗೆ ಉಪದೇಶಿಸಿದಂತಿದೆ! ಶತ್ರುಗಳ ವಿನಾಶಕಾರ್ಯಕ್ಕೆ ಸಮಯವು ಬಂದೊದಗಿದೆಯೆಂದು ನನಗನ್ನಿಸುತ್ತದೆ. ವಿಜಯದ ಉತ್ಸಾಹದಿಂದ ಬಲವಂತರಾಗಿರುವ ಗುರಿಯಿಟ್ಟು ಪ್ರಹರಿಸಬಲ್ಲ ವಿಜಯಶಾಲಿ ಪಾಂಡವರನ್ನು ಸಂಹರಿಸಲು ಇಂದು ನನಗೆ ಶಕ್ಯವಿಲ್ಲ. ಆದರೆ ರಾಜ ದುರ್ಯೋಧನ ಸಮಕ್ಷಮದಲ್ಲಿ ಅವರನ್ನು ವಧಿಸುತ್ತೇನೆಂದು ನಾನು ಪ್ರತಿಜ್ಞೆಗೈದಿದ್ದೇನೆ. ಆತ್ಮವಿನಾಶಕಾರಿ ಪತಂಗಾಗ್ನಿಸಮ ವೃತ್ತಿಯನ್ನನುಸರಿಸಿ ಅವರೊಡನೆ ನ್ಯಾಯರೀತಿಯಲ್ಲಿ ಯುದ್ಧಮಾಡಿದರೆ ಪ್ರಾಣತ್ಯಾಗವಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ವಂಚನೆಯಿಂದಲೂ ಶತ್ರುಗಳ ಮಹಾಕ್ಷಯವು ಸಾಧ್ಯವಾಗುತ್ತದೆ. ಅರ್ಥಸಿದ್ಧಿಯ ಸಂಶಯವಿದ್ದಾಗ ನಿಃಸಂಶಯವಾಗಿ ಅರ್ಥಸಿದ್ಧಿಯನ್ನುಂಟು ಮಾಡಬಲ್ಲ ಮಾರ್ಗವನ್ನು ಅನುಸರಿಸಬೇಕೆಂದು ಅರ್ಥಶಾಸ್ತ್ರವಿಶಾರದ

ಅನೇಕ ಜನರು ಅಭಿಪ್ರಾಯಪಡುತ್ತಾರೆ. ಕ್ಷತ್ರಧರ್ಮವನ್ನು ಅನುಸರಿಸಿ ನಡೆದುಕೊಳ್ಳುವ ಮನುಷ್ಯನು ಲೋಕನಿಂದಿತವಾದುದನ್ನು ಅಥವಾ ಲೋಕವು ದೂಷಿತವೆಂದು ಹೇಳುವುದನ್ನು ಕರ್ತವ್ಯವೆಂದು ಪಾಲಿಸಬಹುದು. ಅಕೃತಾತ್ಮ ಪಾಂಡವರೆಲ್ಲರೂ ಕೂಡ ಪದೇ ಪದೇ ನಿಂದನೀಯ ಕುತ್ಸಿತ ಕಾರ್ಯಗಳನ್ನು ಮಾಡುತ್ತಲೇ ಬಂದಿದ್ದಾರೆ. ಇದೇ ವಿಷಯದ ಮೇಲೆ ಹಿಂದೆ ಧರ್ಮಚಿಂತಕ ತತ್ತ್ವದರ್ಶಿಗಳು ನ್ಯಾಯದೃಷ್ಟಿಯ ತತ್ತ್ವಾರ್ಥಗಳನ್ನು ಈ ಎರಡು ಶ್ಲೋಕಗಳ ಗೀತೆಯಲ್ಲಿ ತಿಳಿಸಿಕೊಟ್ಟಿದ್ದಾರೆ. ಶತ್ರುಗಳು ಬಳಲಿರುವಾಗ, ಚದುರಿಹೋಗಿರುವಾಗ, ಊಟಮಾಡುತ್ತಿರುವಾಗ, ಪ್ರಯಾಣಮಾಡುತ್ತಿರುವಾಗ, ಎಲ್ಲಿಯಾದರೂ ಪ್ರವೇಶಿಸುತ್ತಿರುವಾಗ ಶತ್ರುಸೇನೆಯನ್ನು ಸಂಹರಿಸಬಹುದು. ಅರ್ಥಸಿದ್ಧಿಯನ್ನು ಬಯಸುವ ಕ್ಷತ್ರಿಯನು ಅರ್ಧರಾತ್ರಿಯಲ್ಲಿ ನಿದ್ರಾವಶರಾಗಿರುವ, ಸೇನಾನಾಯಕನನ್ನು ಹೊಂದಿರದ, ಮತ್ತು ಯೋಧರು ಒಟ್ಟಾಗಿರದ ಸೇನೆಯನ್ನು ಸಂಹರಿಸಬೇಕು."

ಹೀಗೆ ಪ್ರತಾಪವಾನ್ ದ್ರೋಣಪುತ್ರನು ರಣದಲ್ಲಿ ಮಲಗಿರುವ ಪಾಂಡವರನ್ನು ಪಾಂಚಾಲರೊಂದಿಗೆ ಸಂಹರಿಸಲು ನಿಶ್ಚಯಿಸಿದನು. ಆ

ಕ್ರೂರ ಬುದ್ಧಿಯನ್ನನುಸರಿಸಿ ಪುನಃ ಪುನಃ ನಿರ್ಧಾರಕ್ಕೆ ಬಂದು ಅವನು ಮಲಗಿದ್ದ ಸೋದರಮಾವನನ್ನೂ ಬೋಜ ಕೃತವರ್ಮನನ್ನೂ ಎಚ್ಚರಿಸಿದನು. ನಾಚಿಕೆಗೊಂಡ ಅವರು ಅವನಿಗೆ ಆಗ ಯುಕ್ತವಾದ ಯಾವ ಉತ್ತರವನ್ನೂ ಕೊಡದೇ ಹೋದರು. ಆಗ ಅಶ್ವತ್ಥಾಮನು ಮುಹೂರ್ತಕಾಲ ಯೋಚಿಸಿ ಕಣ್ಣೀರುತುಂಬಿ ವಿಹ್ವಲನಾಗಿ ಹೇಳಿದನು:

> “ಯಾರಿಗಾಗಿ ನಾವು ಪಾಂಡವರೊಂದಿಗೆ ವೈರವನ್ನು ಕಟ್ಟಿಕೊಂಡೆವೋ ಆ ಏಕವೀರ ಮಹಾಬಲ ರಾಜಾ ದುರ್ಯೋಧನನು ಹತನಾದನು. ಹನ್ನೊಂದು ಅಕ್ಷೌಹಿಣೀ ಸೇನೆಗೆ ಒಡೆಯನಾಗಿದ್ದ ಆ ಶುದ್ಧವಿಕ್ರಮನು ಯುದ್ಧದಲ್ಲಿ ಅನೇಕ ಕ್ಷುದ್ರರಿಂದ ಸುತ್ತುವರೆಯಲ್ಪಟ್ಟು ಏಕಾಂಗಿಯಾಗಿ ಭೀಮಸೇನನಿಂದ ಕೆಳಗುರುಳಿಸಲ್ಪಟ್ಟನು. ಮೂರ್ಧಾಭಿಷಿಕ್ತನಾಗಿದ್ದವನ ಶಿರವನ್ನು ಪಾದದಿಂದ ಒದೆದು ವೃಕೋದರನು ಅತಿ ಹೀನ ಮತ್ತು ಕ್ರೂರ ಕಾರ್ಯವನ್ನೆಸಗಿದನು. ಪಾಂಚಾಲರು ಸಂತೋಷದಿಂದ ಸಿಂಹನಾದಮಾಡುತ್ತಿದ್ದಾರೆ. ಅಟ್ಟಹಾಸದಿಂದ ನಗುತ್ತಿದ್ದಾರೆ. ಪ್ರಹೃಷ್ಟರಾಗಿ ನೂರಾರು ಶಂಖಗಳನ್ನು ಊದುತ್ತಿದ್ದಾರೆ. ದುಂದುಭಿಗಳನ್ನು ಬಾರಿಸುತ್ತಿದ್ದಾರೆ. ವಾದ್ಯಘೋಷಗಳ ತುಮುಲ ಶಬ್ಧವು ಶಂಖನಿನಾದಗಳಿಂದ ಕೂಡಿ ಗಾಳಿಯಲ್ಲಿ

ತೀಲಿ ಘೋರವಾಗಿ ದಿಕ್ಕುಗಳಲ್ಲಿ ಮೊಳಗುತ್ತಿವೆ. ಕುದುರೆಗಳ ಹೇಂಕಾರವೂ, ಆನೆಗಳ ಘೀಂಕಾರವೂ, ಶೂರರ ಸಿಂಹನಾದಗಳೂ ಜೋರಾಗಿ ಕೇಳಿಬರುತ್ತಿವೆ. ಆನಂದತುಂದಿಲರಾಗಿ ಪೂರ್ವದಿಕ್ಕಿನಕಡೆ ಜೋರಾಗಿ ಗರ್ಜಿಸುತ್ತಾ ಹೋಗುತ್ತಿರುವವರ ರಥಚಕ್ರಗಳ ರೋಮಾಂಚಕಾರೀ ಶಬ್ಧಗಳೂ ಕೇಳಿಬರುತ್ತಿವೆ. ಧಾರ್ತರಾಷ್ಟ್ರರೊಂದಿಗೆ ಪಾಂಡವರು ನಡೆಸಿದ ಈ ಕದನದ ಮಹಾ ಸಂಹಾರಕಾರ್ಯದಲ್ಲಿ ನಾವು ಮೂವರು ಮಾತ್ರ ಉಳಿದುಕೊಂಡಿದ್ದೇವೆ. ನಮ್ಮಲ್ಲಿ ಕೆಲವರಿಗೆ ನೂರು ಆನೆಗಳ ಬಲವಿದ್ದಿತು. ಕೆಲವರು ಸರ್ವಾಸ್ತ್ರಕೋವಿದರಾಗಿದ್ದರು. ಅವರು ಪಾಂಡವರಿಂದ ಹತರಾದರೆಂದರೆ ಇದು ಕಾಲದ ವೈಪರಿತ್ಯವೆಂದೇ ನಾವು ಭಾವಿಸಬೇಕಾಗುತ್ತದೆ. ನಿಶ್ಚಯವಾಗಿಯೂ ಈ ಕಾರ್ಯದ ಪರಿಣಾಮವು ಹೀಗೆಯೇ ಆಗಬೇಕೆಂದಿತ್ತೇನೋ! ಈ ದುಷ್ಕರ ಕಾರ್ಯವನ್ನು ನಿಷ್ಠೆಯಿಂದ ಮಾಡಿದ್ದರೂ ಪರಿಣಾಮವು ಹೀಗಾಯಿತಲ್ಲ! ಮೋಹದಿಂದ ನಿಮ್ಮ ಪ್ರಜ್ಞೆಯು ನಷ್ಟವಾಗಿ ಹೋಗದೇ ಇದ್ದರೆ ನಮ್ಮ ಕಡೆಯ ಎಲ್ಲವೂ ನಾಶವಾಗಿರುವಾಗ ನಮಗೆ ಶ್ರೇಯಸ್ಕರವಾದ ಏನನ್ನು ಮಾಡಬೇಕು ಎನ್ನುವುದನ್ನು ನೀವು

ಹೇಳಬೇಕು!”

ಕೃಪನು ಹೇಳಿದನು:

“ಮಹಾಭುಜ! ನೀನು ಹೇಳಿದ ಎಲ್ಲವನ್ನೂ ನಾನು ಕೇಳಿದೆನು. ಈಗ ನೀನು ನನ್ನ ಮಾತುಗಳಲ್ಲಿ ಕಿಂಚಿತ್ತನ್ನಾದರೂ ಕೇಳು! ಮನುಷ್ಯರೆಲ್ಲರೂ ಎರಡು ಕರ್ಮಗಳಿಂದ ಬದ್ಧರಾಗಿರುತ್ತಾರೆ – ದೈವ ಮತ್ತು ಪುರುಷಕರ್ಮ. ಇವೆರಡರ ಹೊರತಾಗಿ ಯಾವುದರಿಂದಲೂ ಬದ್ಧನಾಗಿರುವುದಿಲ್ಲ. ದೈವವೊಂದರಿಂದಲೇ ಕಾರ್ಯಗಳು ಸಿದ್ಧಿಸುವುದಿಲ್ಲ. ಹಾಗೆಯೇ ಕೇವಲ ಕರ್ಮಗಳನ್ನು ಮಾಡುವುದರಿಂದಲೂ ಕಾರ್ಯಗಳು ಸಿದ್ಧಿಸುವುದಿಲ್ಲ. ಈ ಎರಡೂ ಒಂದುಗೂಡಿದಾಗಲೇ ಕಾರ್ಯಗಳು ಸಿದ್ಧಿಯಾಗುತ್ತವೆ. ಈ ಎರಡರಿಂದಲೇ ಉತ್ತಮ ಮತ್ತು ಅಧಮ ಕರ್ಮಗಳೆಲ್ಲವೂ ಬದ್ಧವಾಗಿವೆ. ಎಲ್ಲೆಡೆ ಕಾಣುವ ಆಗುಹೋಗುಗಳೂ ಇವುಗಳಿಂದಲೇ ನಡೆಯುತ್ತವೆ. ಪರ್ಜನ್ಯನು ಪರ್ವತದ ಮೇಲೆ ಮಳೆಸುರಿಸಿದರೆ ಯಾವ ಫಲವು ದೊರಕುತ್ತದೆ? ಹಾಗೆಯೇ ಫಲವತ್ತಾದ ಭೂಮಿಯಮೇಲೆ ಮಳೆಸುರಿಸದೇ ಯಾವ ಫಲವು ದೊರಕುತ್ತದೆ? ದೈವಬಲವಿಲ್ಲದ

ಪುರುಷಪ್ರಯತ್ನವೂ ಪುರುಷಯತ್ನವಿಲ್ಲದ ದೈವಬಲವೂ ಸರ್ವಪ್ರಕಾರದಲ್ಲಿ ವ್ಯರ್ಥವಾಗುತ್ತದೆ. ಆದರೆ ಮೊದಲನೆಯ ದೈವವಿಲ್ಲದ ಪುರುಷಪ್ರಯತ್ನವು ವ್ಯರ್ಥವೆನ್ನುವುದು ನಿಶ್ಚಯವೇ ಸರಿ! ಚೆನ್ನಾಗಿ ಉತ್ತಿರುವ ಹೊಲದಲ್ಲಿ ಮಳೆಸುರಿದರೆ ಬೀಜವು ಮಹಾಫಲದಾಯಕವಾಗುತ್ತದೆ. ಹಾಗೆಯೇ ಮನುಷ್ಯನ ಕಾರ್ಯಸಿದ್ಧಿಯು ದೈವದ ಸಹಯೋಗದಿಂದಲೇ ಸಾಧ್ಯ. ಇವೆರಡರಲ್ಲಿ ದೈವವು ಸ್ವಯಂ ನಿಶ್ಚಯಿಸಿ ವರ್ತಿಸುತ್ತದೆ. ತಮ್ಮ ಸಾಮರ್ಥ್ಯವನ್ನು ಅವಲಂಬಿಸಿರುವವರು ಪುರುಷಪ್ರಯತ್ನವೇ ಹೆಚ್ಚೆಂದು ತಿಳಿತು ನಡೆಯುತ್ತಿರುತ್ತಾರೆ. ಮನುಷ್ಯರ ಸರ್ವ ಕಾರ್ಯಾರ್ಥಗಳೂ ಇವೆರಡರಿಂದ ನಡೆಯುತ್ತಿರುವಂತೆ ಮತ್ತು ನಿಲ್ಲುತ್ತಿರುವಂತೆ ಕಾಣುತ್ತವೆ. ಪುರುಷಪ್ರಯತ್ನವೂ ಕೂಡ ದೈವಸಂಕಲ್ಪದಿಂದಲೇ ಮಾಡಲ್ಪಡುತ್ತದೆ. ದೈವದ ಪ್ರೇರಣೆಗೆ ಅನುಸಾರವಾಗಿ ಕಾರ್ಯವನ್ನು ಮಾಡುತ್ತಿದ್ದರೆ ಅದು ಫಲವನ್ನು ನೀಡುತ್ತದೆ. ದಕ್ಷ ಮನುಷ್ಯರ ಪ್ರಯತ್ನಗಳೂ ಕೂಡ ದೈವದಿಂದ ವರ್ಜಿತಗೊಂಡರೆ ಅಫಲವಾಗುತ್ತದೆ ಎನ್ನುವುದಕ್ಕೆ ಅನೇಕ ಉದಾಹರಣೆಗಳು ಲೋಕದಲ್ಲಿ ಕಾಣಸಿಗುತ್ತವೆ. ಆಲಸ್ಯ ಮನುಷ್ಯರು ಇದು

ಹೀಗಾಗುತ್ತದೆಯೆಂದು ತಿಳಿದು ಪ್ರಯತ್ನವನ್ನೇ ಮಾಡಲು ಹಿಂಜರಿಯುತ್ತಾರೆ. ಪ್ರಾಜ್ಞರಿಗೆ ಅದು ಸರಿಯೆನಿಸುವುದಿಲ್ಲ. ಪ್ರಾಯಶಃ ಭುವಿಯಲ್ಲಿ ಮಾಡುವ ಕರ್ಮಗಳು ಅಫಲವಾದಂತೆ ಕಾಣುತ್ತವೆ. ಆದರೆ ಕರ್ಮಗಳನ್ನು ಮಾಡದೇ ಇದ್ದರೆ ಪುನಃ ಪುನಃ ದುಃಖಗಳು ದೊರೆಯುತ್ತವೆ. ಕರ್ಮಗಳಲ್ಲಿ ತೊಡಗಿರುವುದೇ ಮಹಾಫಲದಾಯಕವೆಂದು ಕಾಣುತ್ತದೆ. ಪ್ರಯತ್ನಮಾಡದೇ ಕೇವಲ ದೈವೇಚ್ಛೆಯಿಂದಲೇ ಫಲವನ್ನು ಅನುಭವಿಸುವವರು ಅಥವಾ ಪ್ರಯತ್ನಮಾಡುತ್ತಿದ್ದರೂ ಫಲವನ್ನು ಅನುಭವಿಸದೇ ಇರತಕ್ಕವರು - ಈ ಇಬ್ಬರನ್ನೂ ಲೋಕದಲ್ಲಿ ಕಾಣುವುದು ದುರ್ಲಭ. ದಕ್ಷನಾದವನು ಸುಖವಾಗಿ ಜೀವಿಸಬಹುದು. ಆದರೆ ಆಲಸಿಯು ಸುಖವನ್ನು ಪಡೆಯುವುದಿಲ್ಲ. ಈ ಜೀವಲೋಕದಲ್ಲಿ ದಕ್ಷರಾಗಿರುವವರು ಪ್ರಾಯಶಃ ಹಿತೈಷಿಗಳೂ ಆಗಿರುತ್ತಾರೆ. ಒಂದುವೇಳೆ ದಕ್ಷನಾದವನು ಕರ್ಮಗಳನ್ನು ಪ್ರಾರಂಭಿಸಿ ಫಲವನ್ನು ಪಡೆಯದೇ ಇದ್ದರೆ ಅವನು ನಿಂದನೆಗೆ ಒಳಗಾಗುವುದಿಲ್ಲ. ಅದಕ್ಕೆ ಕಿಂಚಿತ್ತಾದರೂ ಫಲವು ಲಭಿಸಿಯೇ ಲಭಿಸುತ್ತದೆ. ಆದರೆ ಕರ್ಮಗಳನ್ನು ಮಾಡದೆಯೇ ಕೇವಲ ಅದೃಷ್ಟವಶದಿಂದ ಫಲವನ್ನು

ಅನುಭವಿಸುವವನು ಲೋಕನಿಂದನೆಗೆ ಒಳಗಾಗುತ್ತಾನೆ. ಅಂಥವನನ್ನು ಪ್ರಾಯಶಃ ಜನರು ದ್ವೇಷಿಸುತ್ತಾರೆ. ಹೀಗೆ ದೈವ ಮತ್ತು ಪುರುಷಕಾರಗಳ ಸಹಯೋಗವನ್ನು ಅನಾದರಿಸಿ ಅದಕ್ಕೆ ವಿರುದ್ಧವಾಗಿ ವರ್ತಿಸುವವನು ತನಗೆ ತಾನೇ ಅನರ್ಥವನ್ನು ತಂದುಕೊಳ್ಳುತ್ತಾನೆ. ಪ್ರಯತ್ನವನ್ನು ಮಾಡುತ್ತಾ ಕಾರ್ಯಸಿದ್ಧಿಗೆ ದೈವದ ಒಲುಮೆಯನ್ನು ಪಡೆದುಕೊಳ್ಳಬೇಕೆಂಬುದು ಬುದ್ಧಿವಂತರ ನೀತಿಯಾಗಿದೆ. ಪುರುಷಪ್ರಯತ್ನವಿಲ್ಲದೇ ಅದೃಷ್ಟದ ನಿರೀಕ್ಷಣೆ ಅಥವಾ ಪ್ರಯತ್ನಿಸಿದರೂ ದೈವದ ಒಲುಮೆಯಿಲ್ಲದೇ ಇರುವುದು – ಈ ಎರಡು ಕಾರಣಗಳಿಂದಲೂ ಮನುಷ್ಯನ ಪ್ರಯತ್ನಗಳು ನಿಷ್ಫಲವಾಗುತ್ತವೆ. ಪುರುಷಪ್ರಯತ್ನವಿಲ್ಲದೇ ಈ ಲೋಕದಲ್ಲಿ ಯಾವ ಕರ್ಮಗಳೂ ಸಿದ್ಧಿಸುವುದಿಲ್ಲ. ದೇವತೆಗಳಿಗೆ ನಮಸ್ಕರಿಸಿ ಪ್ರಯತ್ನಿಸುವ ದಕ್ಷ ದಾಕ್ಷಿಣ್ಯಸಂಪನ್ನನು ಸಿದ್ಧಿಯನ್ನು ಪಡೆಯುತ್ತಾನೆ. ಎಂದೂ ಅಸಫಲತೆಯನ್ನು ಹೊಂದುವುದಿಲ್ಲ. ಈ ಸಮ್ಯಕ್ಪ್ರಯತ್ನವು ಪುನಃ ವೃದ್ಧರ ಸೇವೆಯನ್ನು ಮಾಡುವವರಿಗೆ, ಶ್ರೇಯಸ್ಕರವಾದುದೇನೆಂದು ವೃದ್ಧರಿಂದ ಕೇಳಿ ಅವರ ಹಿತವಚನದಂತೆ ಮಾಡುವವರಿಗೆ ಮಾತ್ರ ಸಾಧ್ಯವಾಗುತ್ತದೆ. ಸಿದ್ಧಿಯಾಗುವ ಕಾರ್ಯದ ಕುರಿತು

ವೃದ್ಧಸಮ್ಮತರನ್ನು ಸದಾ ಕೇಳಬೇಕು. ಯಾವುದರಿಂದ ಸಿದ್ಧಿಯುಂಟಾಗುತ್ತದೆಯೆಂದು ಹೇಳುವ ಅವರೇ ಆ ದೈವಯೋಗದ ಪರಮ ಮೂಲರು. ವೃದ್ಧರ ವಚನವನ್ನು ಕೇಳಿ ಯಾರು ಪ್ರಯತ್ನವನ್ನು ಪ್ರಾರಂಭಿಸುತ್ತಾರೋ ಅವರು ಬೇಗ ಉತ್ತಮ ಫಲವನ್ನು ಪಡೆದುಕೊಳ್ಳುತ್ತಾರೆ. ರಾಗ-ಕ್ರೋಧ-ಭಯ-ಲೋಭಗಳಿಂದ ಅರ್ಥಸಿದ್ಧಿಯನ್ನು ಪಡೆಯಲು ಬಯಸುವ ಮಾನವನು ಅದನ್ನು ಪಡೆಯದೇ ಅಪಮಾನಕ್ಕೂ ಗುರಿಯಾಗುತ್ತಾನೆ ಮತ್ತು ಶೀಘ್ರವಾಗಿ ಐಶ್ವರ್ಯದಿಂದಲೂ ಭ್ರಷ್ಟನಾಗುತ್ತಾನೆ. ಈ ದುರ್ಯೋಧನನಾದರೋ ಮಹಾಲೋಭಿ. ಮುಂದೇನಾಗುವುದೆಂಬುದರ ಬಗೆಗೆ ತಿಳುವಳಿಕೆಯಿಲ್ಲದವನು. ಅಸಮರ್ಥನು. ದುಡುಕುವವನು. ಮೂಢತ್ವದಿಂದಾಗಿ ಯೋಚನೆಯನ್ನೇ ಮಾಡದವನು. ಅವನಿಗೆ ಹಿತವಾಗಬೇಕೆಂಬ ಮನಸ್ಸಿದ್ದವರ ಮಾತುಗಳೆಲ್ಲವನ್ನೂ ಅವನು ಅನಾದರಿಸಿ, ದುಷ್ಟರೊಡನೆ ಸಮಾಲೋಚನೆ ನಡೆಸಿ, ಬೇಡವೆಂದು ಎಷ್ಟು ಹೇಳಿದರೂ ಗುಣದಲ್ಲಿ ಅವನಿಗಿಂತಲೂ ವರಿಷ್ಟರಾದ ಪಾಂಡವರೊಂದಿಗೆ ವೈರವನ್ನು ಸಾಧಿಸಿದನು. ಮೊದಲಿನಿಂದಲೂ ಅವನು ದುಃಶೀಲನಾಗಿದ್ದನು. ದೈನ್ಯವೆಂಬುದೇ ಇರಲಿಲ್ಲ. ಮಿತ್ರರ ವಚನದಂತೆ

ಮಾಡುತ್ತಿರಲಿಲ್ಲ. ಅದರ ಕಾರಣದಿಂದಲೇ ಅವನು ಈ ವಿಪತ್ತಿಗೆ ಒಳಗಾಗಿದ್ದಾನೆ. ನಾವು ಕೂಡ ಆ ಪಾಪಪುರುಷನನ್ನೇ ಅನುಸರಿಸಿ ನಡೆದುಕೊಂಡು ಬಂದೆವು. ಅದರಿಂದಲೇ ನಾವು ಈ ಮಹಾ ದಾರುಣ ದುಃಖವನ್ನು ಅನುಭವಿಸುತ್ತಿದ್ದೇವೆ. ಈ ವ್ಯಸನದಿಂದ ಸಂತಾಪಗೊಂಡಿರುವ ನನ್ನ ಬುದ್ಧಿಯು ಎಷ್ಟೇ ಯೋಚಿಸಿದರೂ ನಮಗೆ ಶ್ರೇಯಸ್ಕರವಾದುದೇನೂ ತಿಳಿಯುತ್ತಿಲ್ಲ. ತಿಳಿದಿರುವವರು ಮೋಹಗೊಂಡಿರುವಾಗ ಸುಹೃದಯರನ್ನು ಕೇಳಬೇಕು. ಅವರು ಏನನ್ನು ಹೇಳುತ್ತಾರೋ ಅದೇ ಅವರಿಗೆ ಕರ್ತವ್ಯವಾಗುತ್ತದೆ. ಆದುದರಿಂದ ನಾವು ಒಟ್ಟಾಗಿ ಧೃತರಾಷ್ಟ್ರ, ಗಾಂಧಾರೀ ಮತ್ತು ಮಹಾಮತಿ ವಿದುರರ ಬಳಿಹೋಗಿ ಅವರನ್ನು ಕೇಳೋಣ. ನಮ್ಮ ಕೇಳಿಕೆಗೆ ಅವರು ನಮಗೆ ಶ್ರೇಯಸ್ಕರವಾದುದನ್ನೇ ಹೇಳಿಯಾರು. ಅನಂತರ ನಾವು ಅವರ ಸಲಹೆಯಂತೆ ಮಾಡಬೇಕು. ಇದು ನನ್ನ ಬುದ್ಧಿಯ ನಿಶ್ಚಯವಾಗಿರುತ್ತದೆ. ಕಾರ್ಯಗಳನ್ನು ಆರಂಭಿಸದೇ ಇದ್ದರೆ ಯಾವ ಪ್ರಯೋಜನವೂ ಇಲ್ಲ. ಒಂದು ವೇಳೆ ಪುರುಷಪ್ರಯತ್ನದಿಂದಲೂ ಕಾರ್ಯವು ಸಿದ್ಧಿಯಾಗದಿದ್ದರೆ ಅವರು ದೈವೋಪಹತರೆಂದೇ ತಿಳಿದುಕೊಳ್ಳಬೇಕು. ಈ

ವಿಷಯದಲ್ಲಿ ಪುನಃ ವಿಮರ್ಶಿಸುವ ಅವಶ್ಯಕತೆಯೇ ಇಲ್ಲ.”

ಕೃಪನ ಆ ಧರ್ಮಾರ್ಥಸಂಹಿತ ಶುಭ ಮಾತುಗಳನ್ನು ಕೇಳಿ ದುಃಖಶೋಕಸಮನ್ವಿತನಾದ ಅಶ್ವತ್ಥಾಮನು ಪ್ರಜ್ವಲಿಸುತ್ತಿರುವ ಅಗ್ನಿಯಂತೆ ಶೋಕದಿಂದ ದಹಿಸುತ್ತಾ ಮನಸ್ಸನ್ನು ಕ್ರೂರವನ್ನಾಗಿಸಿಕೊಂಡು ಅವರಿಬ್ಬರಿಗೂ ಉತ್ತರಿಸಿದನು:

“ಪ್ರತಿಯೊಬ್ಬ ಪುರುಷನಿಗೂ ಅವನಿಗಿರುವ ಬುದ್ಧಿಯು ಉತ್ತಮವಾದುದೆಂದು ಅನ್ನಿಸುತ್ತದೆ. ಎಲ್ಲರೂ ತಮ್ಮ ತಮ್ಮ ಬುದ್ಧಿಯಿಂದ ಪ್ರತ್ಯೇಕವಾಗಿ ತೃಪ್ತರಾಗಿರುತ್ತಾರೆ. ಲೋಕದಲ್ಲಿ ಎಲ್ಲರೂ ತಮ್ಮ ತಮ್ಮನ್ನೇ ಅತಿ ಬುದ್ಧಿವಂತರೆಂದು ತಿಳಿದುಕೊಂಡಿರುತ್ತಾರೆ. ಎಲ್ಲರೂ ತಮ್ಮ ಮತವೇ ಬಹುಮತವೆಂದು ತಿಳಿದುಕೊಂಡಿರುತ್ತಾರೆ. ಎಲ್ಲರೂ ತಮ್ಮ ಬುದ್ಧಿಯನ್ನೇ ಪ್ರಶಂಸೆಮಾಡಿಕೊಳ್ಳುತ್ತಾರೆ. ಎಲ್ಲರೂ ತಮ್ಮ ಪ್ರಜ್ಞೆಯೇ ಸಾಧುವಾದುದೆಂದೂ ಪ್ರತಿಷ್ಠಿತವಾದುದೆಂದೂ ಹೇಳಿಕೊಳ್ಳುತ್ತಿರುತ್ತಾರೆ. ಇತರರ ಬುದ್ಧಿಯನ್ನು ನಿಂದಿಸುತ್ತಾರೆ. ಮತ್ತು ತಮ್ಮದನ್ನು ಪ್ರಶಂಸಿಸಿಕೊಳ್ಳುತ್ತಿರುತ್ತಾರೆ. ಕಾರಣಾಂತರದಿಂದ ಯೋಗವಶಾತ್ ಇಬ್ಬರ ಬುದ್ಧಿಯೂ ಹೊಂದಿಕೊಂಡರೆ ಆಗ ಅವರು ಅನ್ಯೋನ್ಯರಿಂದ

ಸಂತುಷ್ಟರಾಗುತ್ತಾರೆ. ಒಬ್ಬರು ಮತ್ತೊಬ್ಬರನ್ನು ಗೌರವಿಸುತ್ತಾರೆ. ಆದರೆ ಕಾಲಯೋಗದಿಂದ ಅದೇ ಮನುಷ್ಯರ ವಿಚಾರಗಳಲ್ಲಿ ವಿಪರ್ಯಾಸಗಳುಂಟಾದರೆ ಅನ್ಯೋನ್ಯರಲ್ಲಿ ಒಡಕು ಉಂಟಾಗುತ್ತದೆ. ವಿಶೇಷವಾಗಿ ಮನುಷ್ಯರ ಚಿತ್ತಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಚಿತ್ತಗಳ ವ್ಯತ್ಯಾಸಗಳಿಂದಾಗಿ ಒಬ್ಬೊಬ್ಬರಿಗೆ ಒಂದೊಂದುರೀತಿಯ ಯೋಚನೆಗಳುಂಟಾಗುತ್ತವೆ. ಕುಶಲ ವೈದ್ಯನು ಯಥಾವಿಧಿಯಾಗಿ ವ್ಯಾಧಿಯನ್ನು ತಿಳಿದುಕೊಂಡು ಆ ರೋಗಕ್ಕೆ ತಕ್ಕುದಾದ ಚಿಕಿತ್ಸೆಯನ್ನು ಮಾಡುವ ಹಾಗೆ ಮನುಷ್ಯರು ಪ್ರತಿಯೊಂದು ಉದ್ದೇಶಕ್ಕೂ ಯೋಚನೆಮಾಡಿ ಕಾರ್ಯಗತರಾಗುತ್ತಾರೆ. ಆದರೆ ಸ್ವಯಂ ಬುದ್ಧಿಯನ್ನುಪಯೋಗಿಸುವವನನ್ನು ಇತರ ಮನುಷ್ಯರು ನಿಂದಿಸುತ್ತಾರೆ! ಮನುಷ್ಯನು ಯೌವನದಲ್ಲಿ ಬೇರೊಂದು ರೀತಿಯ ಬುದ್ಧಿಯಿಂದ ಮೋಹಿತನಾಗುತ್ತಾನೆ. ಮಧ್ಯವಯಸ್ಸಿನಲ್ಲಿ ಬೇರೊಂದರಿಂದ ಮತ್ತು ವೃದ್ಧಾಪ್ಯದಲ್ಲಿ ಇನ್ನೊಂದರಿಂದ ಅವನ ಬುದ್ಧಿಯು ಪ್ರಭಾವಿತಗೊಳ್ಳುತ್ತದೆ. ಮನುಷ್ಯನು ಘೋರ ವ್ಯಸನವನ್ನು ಅಥವಾ ಅಷ್ಟೇ ಮಹತ್ತರ ಸಮೃದ್ಧಿಯನ್ನು ಹೊಂದಿದಾಗ ಅವನ ಬುದ್ಧಿಯು

ವಿಕೃತವಾಗುತ್ತದೆ. ಹೀಗೆ ಒಬ್ಬನೇ ಮನುಷ್ಯನಲ್ಲಿ ವಯಸ್ಸಿಗೆ ತಕ್ಕಂತೆ ಮತ್ತು ಸಂದರ್ಭಕ್ಕೆ ತಕ್ಕಂತೆ ಬುದ್ಧಿಯು ಬದಲಾಗುತ್ತಾ ಇರುತ್ತದೆಯಾದುದರಿಂದ ಎಷ್ಟೋ ವೇಳೆ ಅವನ ನಿರ್ಧಾರಗಳು ಅವನಿಗೇ ಇಷ್ಟವಾಗುವುದಿಲ್ಲ. ತನಗೆ ತಿಳಿದಂತೆ ಯಾವುದು ಒಳ್ಳೆಯದೆಂದು ಕಾಣುತ್ತಾನೋ ಅದನ್ನೇ ನಿಶ್ಚಯಿಸುತ್ತಾನೆ. ಆ ಬುದ್ಧಿಯೇ ಅವನನ್ನು ಕಾರ್ಯಪ್ರವೃತ್ತನನ್ನಾಗಿ ಮಾಡುತ್ತದೆ. ಆದುದರಿಂದ ಎಲ್ಲ ಮನುಷ್ಯರು ತಮಗೆ ಒಳ್ಳೆಯದೆಂದು ನಿಶ್ಚಯಿಸಿದುದನ್ನು – ಅದು ಮರಣವನ್ನೇ ತರುವಂತಹುದಾದರೂ, ಸಂತೋಷದಿಂದ ಕೈಗೊಳ್ಳುತ್ತಾರೆ. ಹಾಗೆ ಎಲ್ಲರೂ ತಮ್ಮ ತಮ್ಮ ಯುಕ್ತಿ ಮತ್ತು ಪ್ರಜ್ಞೆಗೆ ತಕ್ಕಂತೆ ವಿವಿಧ ಕರ್ಮಗಳಲ್ಲಿ ತೊಡಗುತ್ತಾರೆ ಮತ್ತು ಅವು ತಮ್ಮ ಹಿತದಲ್ಲಿಯೇ ಇದೆ ಎಂದು ತಿಳಿಯುತ್ತಾರೆ. ಇಂದು ವ್ಯಸನದಿಂದ ನನ್ನ ಮತಿಯಲ್ಲಿ ಹುಟ್ಟಿದ, ಶೋಕವಿನಾಶಿನೀ ವಿಚಾರವನ್ನು ನಿಮಗೆ ಹೇಳುತ್ತೇನೆ. ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿ ಅವುಗಳಿಗೆ ಕರ್ಮಗಳನ್ನು ವಿಭಜಿಸಿ ಕೊಟ್ಟನು. ಒಂದೊಂದು ವರ್ಣಕ್ಕೂ ವಿಶೇಷ ಗುಣಗಳನ್ನೂ ಕಲ್ಪಿಸಿದನು. ಬ್ರಾಹ್ಮಣನಿಗೆ ಅವ್ಯಗ್ರ ದಮವನ್ನೂ, ಕ್ಷತ್ರಿಯನಿಗೆ ಉತ್ತಮ ತೇಜಸ್ಸನ್ನೂ, ವೈಶ್ಯನಿಗೆ

ದಕ್ಷತೆಯನ್ನೂ ಮತ್ತು ಶೂದ್ರನಿಗೆ ಸರ್ವವರ್ಣದವರಿಗೆ ಅನುಕೂಲವಾಗಿರುವಂತೆ ಗುಣಗಳನ್ನಿತ್ತನು. ನಿಯಂತ್ರಣದಲ್ಲಿರದ ಬ್ರಾಹ್ಮಣನು ಒಳ್ಳೆಯವನಲ್ಲ. ತೇಜಸ್ಸಿಲ್ಲದ ಕ್ಷತ್ರಿಯನು ಅಧಮನು. ದಕ್ಷನಲ್ಲದ ವೈಶ್ಯ ಮತ್ತು ಪ್ರತಿಕೂಲನಾದ ಶೂದ್ರ ಇವರು ನಿಂದನೀಯರು. ನಾನು ಸುಪೂಜಿತ ಶ್ರೇಷ್ಠ ಬ್ರಾಹ್ಮಣರ ಕುಲದಲ್ಲಿ ಹುಟ್ಟಿದೆನು. ಆದರೆ ಮಂದಭಾಗ್ಯವು ನನ್ನನ್ನು ಕ್ಷತ್ರಧರ್ಮವನ್ನು ಅನುಸರಿಸುವಂತೆ ಮಾಡಿತು. ಕ್ಷತ್ರಧರ್ಮವನ್ನು ಚೆನ್ನಾಗಿ ತಿಳಿದುಕೊಂಡಿರುವ ನಾನು ಒಂದು ವೇಳೆ ಬ್ರಾಹ್ಮಣ್ಯಧರ್ಮವನ್ನು ಅನುಸರಿಸಿ ಅತ್ಯಂತ ಮಹತ್ತರ ಕಾರ್ವವನ್ನು ಮಾಡಿದರೂ ಅದು ಸತ್ಪುರುಷರ ಮಾನ್ಯತೆಯನ್ನು ಪಡೆಯುವುದಿಲ್ಲ. ಯುದ್ಧದಲ್ಲಿ ದಿವ್ಯ ಧನುಸ್ಸನ್ನೂ ದಿವ್ಯ ಅಸ್ತ್ರಗಳನ್ನೂ ಧರಿಸಿದ ಮತ್ತು ತಂದೆಯು ಕೊಲ್ಲಲ್ಪಟ್ಟುದನ್ನು ನೋಡಿದ ನಾನು, ಈಗ ಹೇಗೆ ತಾನೇ ಯಾಗಗಳಲ್ಲಿ ಮಂತ್ರಗಳನ್ನು ಹೇಳಿಕೊಂಡಿರಲಿ? ಆದುದರಿಂದ ಇಂದು ನನಗಿಷ್ಟವಾದ ಕ್ಷತ್ರಧರ್ಮವನ್ನು ಗೌರವಿಸಿ ರಾಜ ದುರ್ಯೋಧನನ ಮತ್ತು ಮಹಾದ್ಯುತಿ ತಂದೆಯ ಹೆಜ್ಜೆಗಳಲ್ಲಿ ನಡೆಯುತ್ತೇನೆ. ವಿಜಯದಿಂದ ಉಬ್ಬಿರುವ ಪಾಂಚಾಲರು ಇಂದು ನಮ್ಮನ್ನು ಗೆದ್ದೆವೆಂದು

ತಿಳಿದು ಹರ್ಷಸಮನ್ವಿತರಾಗಿ ಮತ್ತು ಹೋರಾಟದಿಂದ ಬಳಲಿ ಕುದುರೆಗಳನ್ನೂ ಕವಚಗಳನ್ನೂ ಕಳಚಿ ಆತಂಕದ ಭಯವೇನೂ ಇಲ್ಲದೇ ನಿದ್ರಿಸುತ್ತಿದ್ದಾರೆ. ರಾತ್ರಿಯಲ್ಲಿ ತಮ್ಮ ಶಿಬಿರಗಳಲ್ಲಿ ತಮ್ಮವರೊಂದಿಗೆ ಮಲಗಿರುವ ಅವರ ಶಿಬಿರಗಳ ಮೇಲೆ ಇಂದು ದುಷ್ಕರ ಮುತ್ತಿಗೆಯನ್ನು ಹಾಕಿ ಅವರನ್ನು ಸಂಹರಿಸುತ್ತೇನೆ. ಎಚ್ಚರವಿಲ್ಲದೆ ಪ್ರೇತಗಳಂತೆ ಮಲಗಿರುವ ಅವರನ್ನು ವಿಕ್ರಮದಿಂದ ಮಘವಾನ್ ಇಂದ್ರನು ದಾನವರನ್ನು ಹೇಗೋ ಹಾಗೆ ಸಂಹರಿಸುತ್ತೇನೆ. ಧೃಷ್ಟದ್ಯುಮ್ನನ ನಾಯಕತ್ವದಲ್ಲಿರುವ ಅವರೆಲ್ಲರನ್ನೂ ಒಟ್ಟಿಗೇ ಇಂದು ವಿಕ್ರಮದಿಂದ ಒಣಹುಲ್ಲಿನ ಮೆದೆಗಳನ್ನು ಬೆಂಕಿಯು ಭಸ್ಮಮಾಡುವಂತೆ ಸಂಹರಿಸುತ್ತೇನೆ. ಪಾಂಚಾಲರನ್ನು ಸಂಹರಿಸಿದ ನಂತರವೇ ನಾನು ಮನಃಶಾಂತಿಯನ್ನು ಪಡೆಯುತ್ತೇನೆ. ಸಂಕ್ರುದ್ಧ ಸ್ವಯಂ ಪಿನಾಕಪಾಣಿ ರುದ್ರನು ಪ್ರಾಣಿಗಳ ಮಧ್ಯೆ ಸಂಚರಿಸುವಂತೆ ಇಂದು ನಾನು ರಣದಲ್ಲಿ ಪಾಂಚಾಲರನ್ನು ಸಂಹರಿಸುತ್ತಾ ಸಂಚರಿಸುತ್ತೇನೆ. ಇಂದು ಸಂಕ್ರುದ್ಧನಾಗಿ ಪಾಂಚಾಲರೆಲ್ಲರನ್ನು ಕತ್ತರಿಸಿ ಕೊಂದು ರಣದಲ್ಲಿ ಪಾಂಡುಸುತರನ್ನು ಕಾಡುತ್ತೇನೆ. ಇಂದು ಅವರಲ್ಲಿ ಒಬ್ಬೊಬ್ಬರನ್ನೂ ಸಂಹರಿಸಿ, ಭೂಮಿಯು ಪಾಂಚಾಲರೆಲ್ಲರ

ಮೃತಶರೀರಗಳನ್ನು ಹೊರುವಂತೆ ಮಾಡಿ ನನ್ನ ತಂದೆಯ ಋಣವನ್ನು ತೀರಿಸಿಕೊಳ್ಳುತ್ತೇನೆ. ದುರ್ಯೋಧನ, ಕರ್ಣ, ಭೀಷ್ಮ ಮತ್ತು ಸೈಂಧವರು ಹೋದ ದುರ್ಗಮ ಮಾರ್ಗದಲ್ಲಿ ಇಂದು ಪಾಂಚಾಲರನ್ನು ಕೂಡ ಕಳುಹಿಸುತ್ತೇನೆ. ಇಂದಿನ ರಾತ್ರಿಯು ಕಳೆಯುವುದರಲ್ಲಿ ಕತ್ತಲೆಯಲ್ಲಿ ನಾನು ಪಾಂಚಾಲರಾಜ ಧೃಷ್ಟದ್ಯುಮ್ನನ ಶಿರವನ್ನು ಬಲವನ್ನುಪಯೋಗಿಸಿ ಪಶುವೊಂದರ ಶಿರದಂತೆ ಅರೆಯುತ್ತೇನೆ. ಇಂದಿನ ರಾತ್ರಿ ಮಲಗಿರುವ ಪಾಂಚಾಲ-ಪಾಂಡವರನ್ನು ನಾನು ಎಳೆದ ನಿಶಿತ ಖಡ್ಗದಿಂದ ತುಂಡರಿಸುತ್ತೇನೆ. ಇಂದಿನ ರಾತ್ರಿ ಮಲಗಿರುವ ಆ ಪಾಂಚಾಲಸೇನೆಯನ್ನು ಸಂಹರಿಸಿ ನಾನು ಕೃತಕೃತ್ಯನೂ ಸುಖಿಯೂ ಆಗುತ್ತೇನೆ!”

ಕೃಪನು ಹೇಳಿದನು:

“ಅಚ್ಯುತ! ಒಳ್ಳೆಯದಾಯಿತು! ನಿನ್ನಲ್ಲಿ ಪ್ರತೀಕಾರವನ್ನು ಮಾಡುವ ಯೋಚನೆಯುಂಟಾಗಿದೆ! ಸ್ವಯಂ ವಜ್ರಪಾಣಿಯೂ ನಿನ್ನನ್ನು ತಡೆಯಲು ಶಕ್ತನಿಲ್ಲ! ಆದರೆ ಇಂದಿನ ರಾತ್ರಿ ಕವಚ-ಧ್ವಜಗಳನ್ನು ಕಳಚಿ ವಿಶ್ರಮಿಸು. ಬೆಳಗಾಗುತ್ತಲೇ ನಾವಿಬ್ಬರೂ

ನಿನ್ನನ್ನು ಅನುಸರಿಸಿ ಯುದ್ಧಮಾಡುತ್ತೇವೆ. ಸಾತ್ವತ ಕೃತವರ್ಮ ಮತ್ತು ನಾನು ಕವಚಗಳನ್ನು ಧರಿಸಿ ರಥಗಳನ್ನೇರಿ ಶತ್ರುಗಳನ್ನು ಎದುರಿಸುವ ನಿನ್ನನ್ನು ಅನುಸರಿಸುತ್ತೇವೆ. ನಮ್ಮಿಬ್ಬರ ಜೊತೆಗೆ ನೀನು ವಿಕ್ರಮದಿಂದ ರಣದಲ್ಲಿ ಪಾಂಚಾಲರನ್ನು ಎದುರಿಸಿ ಅವರ ಅನುಯಾಯಿಗಳೊಂದಿಗೆ ಶತ್ರುಗಳನ್ನು ಜಯಿಸಬಲ್ಲೆ! ಮಗೂ! ಈ ರಾತ್ರಿ ವಿಶ್ರಮಿಸು! ಈ ವಿಕ್ರಾಂತಕ್ಕೆ ನೀನು ಶಕ್ತನಾಗಿದ್ದೀಯೆ! ಬೇಗನೆ ಏಳುವಿಯಂತೆ. ಇಂದು ರಾತ್ರಿ ಮಲಗಿಕೋ! ವಿಶ್ರಮಿಸು. ಸ್ವಸ್ಥಚಿತ್ತನಾಗಿ ನಿದ್ರಿಸು! ಒಟ್ಟಿಗೇ ಸಮರದಲ್ಲಿ ಶತ್ರುಗಳನ್ನು ವಧಿಸುತ್ತೀಯೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ವರಾಯುಧವನ್ನು ಹಿಡಿದಿರುವ ನಿನ್ನನ್ನು ದೇವತೆಗಳ ಪಾವಕಿಯು ಕೂಡ ಗೆಲ್ಲಲು ಇಚ್ಛಿಸುವುದಿಲ್ಲ! ಕೃಪನೊಂದಿಗೆ ಮತ್ತು ಕೃತವರ್ಮನನ್ನು ಕೂಡಿಕೊಂಡು ಯುದ್ಧದಲ್ಲಿ ಸಂರಬ್ಧನಾಗಿ ಬರುತ್ತಿರುವ ದ್ರೌಣಿಯನ್ನು ಯಾರುತಾನೇ ಎದುರಿಸಿಯಾರು? ಯೋಧನು ದೇವರಾಜನೇ ಆದರೂ ಎದುರಿಸಲಾರನು. ವ್ಯಾಕುಲವಿಲ್ಲದೇ ಈ ರಾತ್ರಿ ನಿದ್ದೆಮಾಡಿ ವಿಶ್ರಾಂತಿಪಡೆಯೋಣ! ಬೆಳಗಾಗುತ್ತಲೇ ನಾವು ಶತ್ರುಗಳನ್ನು ಸಂಹರಿಸೋಣ! ನಿನ್ನಲ್ಲಿ ದಿವ್ಯಾಸ್ತ್ರಗಳಿವೆ ಮತ್ತು ನನ್ನಲ್ಲಿಯೂ ಇವೆ ಎನ್ನುವುದರಲ್ಲಿ ಸಂಶಯವಿಲ್ಲ. ಮಹೇಷ್ವಾಸ

ಸಾತ್ವತನು ಕೂಡ ನಿತ್ಯವೂ ಯುದ್ಧದಲ್ಲಿ ಕೋವಿದನಾಗಿದ್ದಾನೆ. ಸೇರಿರುವ ಸರ್ವ ಶತ್ರುಗಳನ್ನೂ ನಾವು ಒಟ್ಟಿಗೇ ಸಮರದಲ್ಲಿ ಹೊಡೆದು ಸಂಹರಿಸಿ ಪುಷ್ಕಲ ಸಂತೋಷವನ್ನು ಹೊಂದೋಣ! ಅವ್ಯಗ್ರನಾಗಿ ನೀನು ವಿಶ್ರಮಿಸು. ಈ ರಾತ್ರಿ ಸುಖವಾಗಿ ನಿದ್ರಿಸು! ತ್ವರೆಮಾಡಿ ರಥವನ್ನೇರಿ ಹೋಗುವ ನಿನ್ನನ್ನು ಧನ್ವಿಗಳೂ ಪರತಾಪಿಗಳೂ ಆದ ನಾನು ಮತ್ತು ಕೃತವರ್ಮ ಇಬ್ಬರೂ ಕವಚಗಳನ್ನು ಧರಿಸಿ ರಥವನ್ನೇರಿ ನಿನ್ನನ್ನು ಅನುಸರಿಸಿ ಬರುತ್ತೇವೆ. ಅವರ ಶಿಬಿರಕ್ಕೆ ಹೋಗಿ ನೀನು ನಿನ್ನ ಹೆಸರನ್ನು ಕೂಗಿ ಯುದ್ಧಕ್ಕೆ ಅವರನ್ನು ಕರೆಯಬೇಕು. ಆಗ ನೀನು ಶತ್ರುಗಳೊಂದಿಗೆ ಮಹಾ ಕದನವನ್ನು ಹೋರಾಡುವೆಯಂತೆ! ಪ್ರಭಾತವಾಗುತ್ತಲೇ ಶುಭ್ರದಿನದಲ್ಲಿ ನೀನು ಅವರೊಂದಿಗೆ ಕದನವಾಡಿ ಮಹಾಸುರರನ್ನು ಸಂಹರಿಸುತ್ತಾ ವಿಹರಿಸಿದ ಇಂದ್ರನಂತೆ ರಣರಂಗದಲ್ಲಿ ವಿಹರಿಸುವಿಯಂತೆ! ಕ್ರುದ್ಧ ಸರ್ವದಾನವಸೂದನ ಇಂದ್ರನು ದೈತ್ಯಸೇನೆಯನ್ನು ಹೇಗೋ ಹಾಗೆ ಪಾಂಚಾಲರ ಸೇನೆಗಳನ್ನು ರಣದಲ್ಲಿ ಗೆಲ್ಲಲು ನೀನುಬ್ಬನೇ ಶಕ್ತ! ಕೃತವರ್ಮ ಮತ್ತು ನನ್ನಿಂದ ರಕ್ಷಿತನಾದ ನಿನ್ನನ್ನು ಯುದ್ಧದಲ್ಲಿ ಸಾಕ್ಷಾದ್ ಸ್ವಯಂ ವಿಭು ವಜ್ರಪಾಣಿಯೂ

ಸಹಿಸಿಕೊಳ್ಳಲಾರನು. ನಾನಾಗಲೀ ಕೃತವರ್ಮನಾಗಲೀ ಸಮರದಲ್ಲಿ ಪಾಂಡವರನ್ನು ಸೋಲಿಸದೇ ರಣದಿಂದ ಎಂದೂ ಹಿಂದಿರುಗುವುದಿಲ್ಲ, ಸಮರದಲ್ಲಿ ಪಾಂಡವರೊಂದಿಗೆ ಕ್ಷುದ್ರ ಪಾಂಚಾಲರನ್ನು ಎಲ್ಲರನ್ನೂ ಸಂಹರಿಸಿ ಹಿಂದಿರುಗುತ್ತೇವೆ ಅಥವಾ ನಾವೇ ಹತರಾಗಿ ಸ್ವರ್ಗಕ್ಕೆ ಹೋಗುತ್ತೇವೆ! ಬೆಳಗಾಗುತ್ತಲೇ ನಿನ್ನ ಸರ್ವ ಉಪಾಯಗಳಲ್ಲಿ ನಾವು ಸಹಾಯಮಾಡುತ್ತೇವೆ. ಸತ್ಯವನ್ನೇ ಹೇಳುತ್ತಿದ್ದೇನೆ!”

ಸೋದರಮಾವನ ಈ ಹಿತಮಾತನ್ನು ಕೇಳಿ ಕ್ರೋಧದಿಂದ ಕಣ್ಣುಗಳು ಉಬ್ಬಿದ ದ್ರೌಣಿಯು ಈ ಮಾತುಗಳನ್ನಾಡಿದನು:

“ಆತುರನಾದವನಿಗೆ, ಕುಪಿತನಾದ ಮನುಷ್ಯನಿಗೆ, ಉದ್ದೇಶಗಳ ಕುರಿತು ಚಿಂತಿಸುವವನಿಗೆ ಮತ್ತು ಆಸೆಗಳಿರುವವನಿಗೆ ಎಲ್ಲಿಂದ ನಿದ್ರೆಬರಬೇಕು? ಈ ನಾಲ್ಕರಲ್ಲಿ ಒಂದನ್ನು ಪಡೆದಿದ್ದರೂ ಅದು ನಿದ್ರೆಯನ್ನು ನಾಶಗೊಳಿಸುವಾಗ ಇಂದು ಈ ನಾಲ್ಕನ್ನೂ ಹೊಂದಿ ನಾನು ಪೀಡೆಗೊಳಗಾಗಿರುವುದು ನಿನಗೆ ಕಾಣುತ್ತಿಲ್ಲವೇ? ತಂದೆಯ ವಧೆಯನ್ನು ಸ್ಮರಿಸಿಕೊಂಡು ಆಗುವ ಈ ದುಃಖಕ್ಕೆ ಲೋಕದಲ್ಲಿ ಯಾವ ಹೆಸರಿದೆ? ಇಂದು ನನ್ನ ಹೃದಯವನ್ನು ಸುಡುತ್ತಿರುವ ಈ ದುಃಖವು ರಾತ್ರಿಯಾಗಲೀ

ಹಗಲಾಗಲೀ ಶಾಂತವಾಗುವುದಿಲ್ಲ. ಪಾಪಿಗಳಿಂದ ನನ್ನ ತಂದೆಯು ಹತನಾದುದನ್ನು ವಿಶೇಷತಃ ನೀನು ಪ್ರತ್ಯಕ್ಷವಾಗಿ ನೋಡಿದ್ದೀಯೆ. ಅದು ನನ್ನ ಮರ್ಮಗಳನ್ನು ಕತ್ತರಿಸುತ್ತಿದೆ. "ದ್ರೋಣನು ಹತನಾದನು!" ಎಂದು ಪಾಂಚಾಲರು ಹೇಳಿದುದನ್ನು ಕೇಳಿಯೂ ನನ್ನಂಥವನು ಮುಹೂರ್ತಕಾಲವಾದರೂ ಲೋಕದಲ್ಲಿ ಹೇಗೆ ಜೀವವನ್ನಿಟ್ಟುಕೊಂಡಿರಬಲ್ಲನು? ಧೃಷ್ಟದ್ಯುಮ್ನನನ್ನು ಕೊಲ್ಲುವವರೆಗೆ ನನಗೆ ಜೀವನದಲ್ಲಿ ಉತ್ಸಾಹವಿಲ್ಲ! ನನ್ನ ತಂದೆಯನ್ನು ಕೊಂದಿರುವುದರಿಂದ ಆ ಪಾಂಚಾಲನು ತನ್ನ ಅನುಯಾಯಿಗಳೊಂದಿಗೆ ವಧಿಸಲ್ಪಡಬೇಕು! ನಾನು ಕೇಳಿದಂತೆ ತೊಡೆಮುರಿದು ಬಿದ್ದಿರುವ ರಾಜನ ವಿಲಾಪವನ್ನು ಕೇಳಿದ ಬೇರೆ ಯಾವ ಹೃದಯವು, ಅವನು ಎಷ್ಟೇ ಕ್ರೂರನಾಗಿದ್ದರೂ, ಸುಡುವುದಿಲ್ಲ? ತೊಡೆಮುರಿದಿರುವ ನೃಪತಿಯ ಆ ಮಾತುಗಳನ್ನು ಕೇಳಿದ ಯಾರ ಕಣ್ಣುಗಳು, ಅವನು ಎಷ್ಟೇ ನಿಷ್ಕರುಣಿಯಾಗಿದ್ದರೂ, ಕಂಬನಿಯನ್ನು ಸುರಿಸುವುದಿಲ್ಲ? ನನ್ನ ಮಿತ್ರಪಕ್ಷನಾಗಿರುವವನು ನಾನು ಜೀವಿತವಾಗಿರುವಾಗಲೇ ಸೋತುಹೋದನೆಂದರೆ ಭರತದಲ್ಲಿರುವ ಸಮುದ್ರದಂತೆ ನನ್ನ ಶೋಕವು

ಉಕ್ಕಿಬರುತ್ತದೆ! ಏಕಾಗ್ರಮನಸ್ಕನಾಗಿರುವ ನನಗೆ ಇಂದು ನಿದ್ರೆಯೆಲ್ಲಿಂದ? ಸುಖವೆಲ್ಲಿಂದ? ಮಾವ! ವಾಸುದೇವ-ಅರ್ಜುನರು ರಕ್ಷಿಸುತ್ತಿರುವವರೆಗೆ ಮಹೇಂದ್ರನು ಕೂಡ ಅವರನ್ನು ಸೋಲಿಸಲಾರನೆಂದು ನನಗೆ ಗೊತ್ತು. ಆದುದರಿಂದ ನನ್ನ ಈ ಕಾರ್ಯದಿಂದ ಹಿಂದೆಸರಿಯುವುದು ಎಂದಿಗೂ ಸಾಧ್ಯವಿಲ್ಲ. ಈ ಲೋಕದಲ್ಲಿ ನನ್ನ ಈ ಕಾರ್ಯದಿಂದ ತಡೆಯುವವನನ್ನು ಯಾರನ್ನೂ ಕಾಣೆ! ಇದು ನನ್ನ ನಿಶ್ಚಯ! ಈ ಯೋಚನೆಯು ಒಳ್ಳೆಯದು ಎಂದು ನನಗನ್ನಿಸುತ್ತಿದೆ. ವಾರ್ತಾಕಾರರು ಹೇಳಿದ ನನ್ನ ಮಿತ್ರರ ಪರಾಭವ ಮತ್ತು ಪಾಂಡವರ ವಿಜಯವು ನನ್ನ ಹೃದಯವನ್ನು ಸುಡುತ್ತಿದೆ. ನಾನಾದರೋ ಇಂದು ಕದನಗೈದು ಮಲಗಿರುವ ಶತ್ರುಗಳನ್ನು ಸಂಹರಿಸುತ್ತೇನೆ. ನಂತರವೇ ನಾನು ಉದ್ವೇಗಗಳಿಲ್ಲದೇ ನಿದ್ರಿಸುತ್ತೇನೆ ಮತ್ತು ವಿಶ್ರಮಿಸುತ್ತೇನೆ!”

ಕೃಪನು ಹೇಳಿದನು:

“ಬುದ್ಧಿಯಿಲ್ಲದ ಪುರುಷನು ತನ್ನ ಇಂದ್ರಿಯಗಳನ್ನು ನಿಯಂತ್ರಿಸಿಕೊಂಡಿರದಿದ್ದರೆ ಗುರುವಿನ ಶುಶ್ರೂಷೆಯನ್ನು ಮಾಡಿದ್ದರೂ ಧರ್ಮಾರ್ಥಗಳನ್ನು ತಿಳಿದುಕೊಳ್ಳುವುದಿಲ್ಲ

ಎಂದು ನನ್ನ ದೃಢ ವಿಚಾರ. ಹಾಗೆಯೇ ಮೇಧಾವಿಯು ವಿನದಿಂದ ಕಲಿಯದಿದ್ದರೆ ಅವನೂ ಕೂಡ ಧರ್ಮಾರ್ಥನಿಶ್ಚಯವೇನನ್ನೂ ತಿಳಿದುಕೊಳ್ಳಲಾರ. ಶುಶ್ರೂಷೆಮಾಡಿರುವ ನಿಯತೇಂದ್ರಿಯ ಮೇಧಾವೀ ಪುರುಷನು ಸರ್ವ ಆಗಮಗಳನ್ನೂ ತಿಳಿದುಕೊಂಡಿರುತ್ತಾನೆ ಮತ್ತು ಸ್ವೀಕರಿಸಬೇಕಾದುದನ್ನು ವಿರೋಧಿಸುವುದಿಲ್ಲ. ಆದರೆ ನೀತಿಮಾರ್ಗದಲ್ಲಿ ಕರೆದೊಯ್ಯಲು ಅಸಾಧ್ಯನಾದ ಮತ್ತು ಇತರರನ್ನು ಅಪಮಾನಗೊಳಿಸುವ ದುರಾತ್ಮ ಪಾಪಪುರುಷನು ತೋರಿಸಲ್ಪಟ್ಟ ಕಲ್ಯಾಣಮಾರ್ಗವನ್ನು ತ್ಯಜಿಸಿ ಬಹುಪಾಪಕಾರೀ ಕರ್ಮಗಳನ್ನೇ ಮಾಡುತ್ತಾನೆ. ಹೇಳಿ-ಕೇಳುವವರು ಇರುವವನನ್ನು ಸುಹೃದಯರು ಪಾತಕಕರ್ಮಗಳನ್ನು ಮಾಡದಂತೆ ತಡೆಯುತ್ತಾರೆ. ಭಾಗ್ಯಶಾಲಿಯು ಪಾಪಕರ್ಮಗಳಿಂದ ಹಿಂದೆಸರಿಯುತ್ತಾನೆ. ದುರ್ಭಾಗ್ಯಶಾಲಿಯು ಹಿಂದೆಸರಿಯುವುದಿಲ್ಲ. ಮನಸ್ಸು ಕದಡಿದವನು ನಯವಾದ ಮಾತುಗಳಿಂದ ಹೇಗೋ ಹಾಗೆ ಸುಹೃದಯರ ಮಾತನ್ನು ಕೇಳಿದವನು ಸುಪ್ರಸನ್ನನಾಗುತ್ತಾನೆ. ಕೇಳದವನು ನಾಶಗೊಳ್ಳುತ್ತಾನೆ. ಹಾಗೆಯೇ ಪ್ರಾಜ್ಞನಾದ ಸುಹೃದಯನು ಪಾಪ ಕರ್ಮವನ್ನು ಮಾಡಲು ಹೊರಡುವಾಗ

ಪ್ರಾಜ್ಞರು ಅವನನ್ನು ಯಥಾಶಕ್ತಿ ತಡೆಯಲು ಪುನಃ ಪುನಃ ಪ್ರಯತ್ನಿಸುತ್ತಿರುತ್ತಾರೆ. ಮಗೂ! ಕಲ್ಯಾಣಕರವಾದುದರ ಕುರಿತು ಬುದ್ಧಿಮಾಡಿ ನಿನ್ನನ್ನು ನೀನೇ ನಿಯಂತ್ರಿಸಿಕೋ! ಯಾವುದರಿಂದ ನೀನು ಪಶ್ಚಾತ್ತಾಪಪಡಬೇಕಾಗುವುದಿಲ್ಲವೋ ಆ ನನ್ನ ಮಾತನ್ನು ಕೇಳು! ಮಲಗಿರುವವರನ್ನು, ಶಸ್ತ್ರಗಳನ್ನು ಕೆಳಗಿಟ್ಟವರನ್ನು, ರಥಗಳಿಂದ ಕುದುರೆಗಳನ್ನು ಬಿಚ್ಚಿರುವವರನ್ನು, ನಾನು ನಿನ್ನವನೆಂದು ಹೇಳುವವರನ್ನು, ಶರಣಾಗತರಾದವರನ್ನು, ಕೂದಲು ಬಿಚ್ಚಿರುವವರನ್ನು, ಮತ್ತು ವಾಹನಗಳನ್ನು ಕಳೆದುಕೊಂಡಿರುವವರನ್ನು ವಧಿಸುವುದು ಧರ್ಮದ ದೃಷ್ಟಿಯಲ್ಲಿ ಪ್ರಶಂಸನೀಯವಲ್ಲ. ಇಂದು ಪಾಂಚಾಲರು ಕವಚಗಳನ್ನು ಕಳಚಿ ಮಲಗಿದ್ದಾರೆ. ಎಲ್ಲರೂ ಪ್ರೇತಗಳಂತೆ ಎಚ್ಚರವಿಲ್ಲದೇ ರಾತ್ರಿಯಲ್ಲಿ ವಿಶ್ರಮಿಸುತ್ತಿದ್ದಾರೆ. ಆ ಅವಸ್ಥೆಯಲ್ಲಿರುವ ಅವರ ಮೇಲೆ ಯಾವ ಕ್ರೂರ ಮನುಷ್ಯನು ದ್ರೋಹವೆಸಗುತ್ತಾನೋ ಅವನು ಅಗಾಧ, ವಿಶಾಲ, ದಾಟಲು ಅಸಾಧ್ಯ ಮಹಾನರಕದಲ್ಲಿ ಬೀಳುತ್ತಾನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಲೋಕದಲ್ಲಿ ನೀನು ಸರ್ವಾಸ್ತ್ರಗಳನ್ನು ತಿಳಿದಿರುವವರಲ್ಲಿ ಶ್ರೇಷ್ಠನೆಂದು ವಿಶ್ರುತನಾಗಿರುವೆ. ನಿನ್ನಲ್ಲಿ ಸೂಕ್ಷ್ಮವಾದ ಕಿಲ್ಬಿಷವೂ

ಇದೂವರೆಗೆ ಲೋಕದಲ್ಲಿ ತಿಳಿದಿಲ್ಲ. ಪುನಃ ನಾಳೆ ರವಿಯು ಉದಿಸಿ ಸರ್ವಭೂತಗಳನ್ನು ಪ್ರಕಾಶಗೊಳಿಸಲು ಸೂರ್ಯಸಂಕಾಶನಾದ ನೀನು ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲುವಿಯಂತೆ. ಬಿಳಿಯ ಬಟ್ಟೆಯ ಮೇಲೆ ರಕ್ತದ ಕಲೆಯಿರುವುದು ಎಷ್ಟು ಅಸಂಭವವೋ ಹಾಗೆ ನಿನ್ನಿಂದ ನಿಂದನೀಯ ಕರ್ಮವು ಮಾಡಲ್ಪಡುತ್ತದೆ ಎನ್ನುವುದೂ ಕೂಡ ಅಸಂಭವವೆಂದು ನನಗನ್ನಿಸುತ್ತದೆ!"

ಅಶ್ವತ್ಥಾಮನು ಹೇಳಿದನು:

"ಮಾವ! ನೀನು ಏನು ಹೇಳಿರುವೆಯೋ ಅದು ಯಥಾರ್ಥವಾಗಿಯೇ ಇದೆ. ಆದರೆ ಪಾಂಡವರು ಈ ಮೊದಲೇ ಧರ್ಮದ ಗಡಿಯನ್ನು ನೂರಾರು ಚೂರುಗಳನ್ನಾಗಿ ಒಡೆದುಬಿಟ್ಟಿದ್ದಾರೆ! ಭೂಮಿಪಾಲರ ಪ್ರತ್ಯಕ್ಷದಲ್ಲಿ ಮತ್ತು ನಿನ್ನ ಸನ್ನಿಧಿಯಲ್ಲಿ ಕೂಡ ಶಸ್ತ್ರಗಳನ್ನು ತ್ಯಜಿಸಿದ್ದ ನನ್ನ ತಂದೆಯನ್ನು ಧೃಷ್ಟದ್ಯುಮ್ನನು ಕೆಳಗುರುಳಿಸಿದನು! ರಥಿಗಳಲ್ಲಿ ಶ್ರೇಷ್ಠ ಕರ್ಣನೂ ಕೂಡ ಅವನ ರಥವು ಹುದುಗಿ ಮಹಾವ್ಯಸನದಲ್ಲಿದ್ದಾಗ ಗಾಂಡೀವಧನ್ವಿಯಿಂದ ಹತನಾದನು. ಹಾಗೆಯೇ ಶಾಂತನವ ಭೀಷ್ಮನೂ ಕೂಡ

ಶಸ್ತ್ರಗಳನ್ನು ಬಿಸುಟು ನಿರಾಯುಧನಾಗಿದ್ದಾಗ ಶಿಖಂಡಿಯನ್ನು ಮುಂಡಿಟ್ಟುಕೊಂಡಿದ್ದ ಗಾಂಡೀವಧನ್ವಿಯಿಂದ ಹತನಾದನು. ಮಹೇಷ್ವಾಸ ಭೂರಿಶ್ರವನೂ ಕೂಡ ರಣದಲ್ಲಿ ಪ್ರಾಯೋಪವೇಶನಾಗಿದ್ದಾಗ ಭೂಮಿಪಾಲರು ಬೇಡಬೇಡವೆಂದು ಕೂಗಿ ಹೇಳುತ್ತಿದ್ದರೂ, ಯುಯುಧಾನನಿಂದ ಬೀಳಿಸಲ್ಪಟ್ಟನು. ದುರ್ಯೋಧನನು ಕೂಡ ಭೀಮನೊಡನೆಯ ಗದಾಯುದ್ಧದಲ್ಲಿ ಭೂಮಿಪಾಲರು ನೋಡುತ್ತಿದ್ದಂತೆಯೇ ಅಧರ್ಮದಿಂದ ಕೆಳಗುರುಳಿಸಲ್ಪಟ್ಟನು. ಅನೇಕ ಮಹಾರಥರಿಂದ ಸುತ್ತುವರೆಯಲ್ಪಟ್ಟಿದ್ದ ಏಕಾಕೀ ನರವ್ಯಾಘ್ರನನ್ನು ಭೀಮಸೇನನು ಅಧರ್ಮದಿಂದಲೇ ಉರುಳಿಸಿದನು! ನನ್ನ ರಾಜನು ಹೀಗೆ ತೊಡೆಯೊಡೆದು ವಿಲಪಿಸುತ್ತಿದ್ದಾನೆ ಎಂದು ದೂತರು ಹೇಳಿದುದನ್ನು ಕೇಳಿದ ನನ್ನ ಮರ್ಮಗಳು ಕತ್ತರಿಸಿದಂತಾಗುತ್ತಿತ್ತು. ಹೀಗೆ ಪಾಪಿ ಪಾಂಚಾಲರೇ ಅಧರ್ಮಿಗಳಾಗಿದ್ದುಕೊಂಡು ಧರ್ಮದ ಸೇತುವೆಯನ್ನು ಒಡೆದಿರುವರು. ಮರ್ಯಾದೆಗಳನ್ನು ಒಡೆದಿರುವ ಅವರನ್ನೇ ನೀನು ಏಕೆ ನಿಂದಿಸುತ್ತಿಲ್ಲ? ಪಿತೃಹಂತಕರಾದ ಪಾಂಚಾಲರನ್ನು ರಾತ್ರಿವೇಳೆ ಮಲಗಿರುವಾಗಲೇ ಕೊಂದು ಕೀಟ ಅಥವಾ ಪತಂಗದ

ಜನ್ಮವು ದೊರಕಿದರೂ ನನಗೆ ಇಷ್ಟವಾದುದೇ! ನಾನು ಬಯಸಿದ ಈ ಕಾರ್ಯವನ್ನು ಇಂದೇ ಮಾಡಿ ಮುಗಿಸಲು ನಾನು ಅವಸರಪಡುತ್ತಿದ್ದೇನೆ. ಹಾಗೆ ತ್ವರೆಯಲ್ಲಿರುವ ನನಗೆ ನಿದ್ರೆಯೆಲ್ಲಿಂದ ಮತ್ತು ಸುಖವೆಲ್ಲಿಂದ? ಅವರ ವಧೆಯ ಕುರಿತು ಮನಸ್ಸುಮಾಡಿರುವ ನನ್ನನ್ನು ತಡೆಯುವ ಪುರುಷನು ಈ ಲೋಕದಲ್ಲಿ ಇದೂವರೆಗೆ ಹುಟ್ಟಿಲ್ಲ ಮತ್ತು ಮುಂದೆ ಹುಟ್ಟುವುದೂ ಇಲ್ಲ!”

ಹೀಗೆ ಹೇಳಿ ಪ್ರತಾಪವಾನ್ ದ್ರೋಣಪುತ್ರನು ಏಕಾಂತದಲ್ಲಿ ಕುದುರೆಗಳನ್ನು ಹೂಡಿ ಶತ್ರುಗಳಿಗೆ ಅಭಿಮುಖನಾಗಿ ಹೊರಟನು. ಆಗ ಅವನನ್ನುದ್ದೇಶಿಸಿ ಭೋಜ ಮತ್ತು ಶಾರದ್ವತ ಇಬ್ಬರು ಮಹಾತ್ಮರೂ

“ರಥವನ್ನೇಕೆ ಸಜ್ಜುಗೊಳಿಸುತ್ತಿರುವೆ? ಏನನ್ನು ಮಾಡಲು ಬಯಸುತ್ತಿರುವೆ?”

ಎಂದು ಕೇಳಿದರು.

“ನಾವಿಬ್ಬರೂ ನಿನ್ನ ಸಹಾಯಕ್ಕಾಗಿಯೇ ಜೊತೆಗೂಡಿ ಬಂದಿದ್ದೇವೆ. ನಿನ್ನ ಸುಖ-ದುಃಖಗಳೆರಡರಲ್ಲೂ ನಾವು ಸಮಭಾಗಿಗಳು. ನಮ್ಮನ್ನು ನೀನು ಶಂಕಿಸಬಾರದು!”

ಅಶ್ವತ್ಥಾಮನಾದರೋ ತಂದೆಯ ವಧೆಯನ್ನು ಸ್ಮರಿಸಿಕೊಂಡು ಸಂಕ್ರುದ್ಧನಾಗಿ ತಾನು ಏನು ಮಾಡಲು ಹೊರಟಿರುವನೆಂದು ಅವರಿಬ್ಬರಿಗೆ ಸ್ಪಷ್ಟವಾಗಿಯೇ ಹೇಳಿದನು:

> "ನೂರುಸಾವಿರ ಯೋಧರನ್ನು ನಿಶಿತ ಶರಗಳಿಂದ ಸಂಹರಿಸಿ ಶಸ್ತ್ರವನ್ನು ತ್ಯಜಿಸಿದ ನನ್ನ ತಂದೆಯನ್ನು ಧೃಷ್ಟದ್ಯುಮ್ನನು ಸಂಹರಿಸಿದನು. ಅದೇರೀತಿಯಲ್ಲಿ ಇಂದು ಕವಚಗಳನ್ನು ಕಳಚಿಟ್ಟಿರುವ ಪಾಪಿ ಪಾಂಚಾಲರಾಜನ ಪುತ್ರನನ್ನು ಪಾಪ ಕರ್ಮದಿಂದಲೇ ನಾನು ಸಂಹರಿಸುತ್ತೇನೆ. ಪಶುವಿನಂತೆ ನನ್ನಿಂದ ಹತನಾಗುವ ಪಾಪಿ ಪಾಂಚಾಲನು ಶಸ್ತ್ರಗಳಿಂದ ಹೋರಾಡಿ ಸೋತವನಿಗೆ ದೊರೆಯುವ ಲೋಕಗಳನ್ನು ಯಾವ ರೀತಿಯಲ್ಲಿಯೂ ಪಡೆಯಕೂಡದೆಂದೇ ನನ್ನ ನಿಶ್ಚಯವಾಗಿದೆ. ರಥವರ್ಯರಾದ ಪರಂತಪರಾದ ನೀವಿಬ್ಬರೂ ಬೇಗನೇ ಕವಚಗಳನ್ನು ಧರಿಸಿ, ಖಡ್ಗ ಮತ್ತು ಕಾರ್ಮುಕಗಳನ್ನು ಹಿಡಿದು ಸನ್ನದ್ಧರಾಗಿ ರಥವನ್ನೇರಿ ನನ್ನ ಪ್ರತೀಕ್ಷೆಯಲ್ಲಿರಿ!"

ಹೀಗೆ ಹೇಳಿ ರಥವನ್ನೇರಿ ಅವನು ಶತ್ರುಗಳಿದ್ದ ಕಡೆ ಹೊರಟುಹೋದನು. ಅವನನ್ನು ಕೃಪ ಮತ್ತು ಸಾತ್ವತ ಕೃತವರ್ಮರು ಅನುಸರಿಸಿ ಹೋದರು. ಶತ್ರುಗಳ ಅಭಿಮುಖವಾಗಿ ಪ್ರಯಾಣಿಸುತ್ತಿದ್ದ

ಅವರು ಸಮಿದ್ಧೆಗಳ ಆಹುತಿಯನ್ನು ಪಡೆದು ಪ್ರಜ್ವಲಿಸುವ ತ್ರೇತಾಗ್ನಿಗಳಂತೆಯೇ ಪ್ರಕಾಶಿಸುತ್ತಿದ್ದರು. ನಿರಾತಂಕರಾಗಿ ಜನರು ಮಲಗಿದ್ದ ಆ ಶಿಬಿರದ ಸಮೀಪಕ್ಕೆ ಉತ್ತಮ ರಥದಲ್ಲಿ ಹೋಗಿ ದ್ರೌಣಿಯು ಅದರ ದ್ವಾರಪ್ರದೇಶದಲ್ಲಿ ನಿಂತುಕೊಂಡನು.

# ಹದಿನೆಂಟನೇ ದಿನದ ರಾತ್ರಿ ಅಶ್ವತ್ಥಾಮನು ಪಾಂಡವ ಶಿಬಿರದಲ್ಲಿದ್ದವರೆಲ್ಲರನ್ನೂ ಸಂಹರಿಸಿದುದು

## ಅಶ್ವತ್ಥಾಮನ ಶಿವಾರ್ಚನೆ

ಕೃತವರ್ಮನನ್ನೂ ಮತ್ತು ಮಹಾರಥ ಕೃಪನನ್ನೂ ಬರಹೇಳಿ ಕೋಪದಿಂದ ಪರೀತಾತ್ಮ ದ್ರೌಣಿಯು ಶಿಬಿರದ ದ್ವಾರವನ್ನು ತಲುಪಿದನು. ಅಲ್ಲಿ ಅವನು ದ್ವಾರವನ್ನು ಆವರಿಸಿ ನಿಂತಿರುವ ಚಂದ್ರ-ಸೂರ್ಯರ ಸಮಾನ ಬೆಳಗುತ್ತಿರುವ ಮೈನವಿರೇಳಿಸುವ ಮಹಾಕಾಯದ ಭೂತವೊಂದನ್ನು ನೋಡಿದನು. ಅವನು ಮಹಾರಕ್ತವನ್ನು ಸುರಿಸುತ್ತಿರುವ ವ್ಯಾಘ್ರಚರ್ಮವನ್ನು ಉಟ್ಟಿದ್ದನು. ಕೃಷ್ಣಾಜಿನವನ್ನೇ ಉತ್ತರೀಯವನ್ನಾಗಿ ಹೊದ್ದಿದ್ದನು. ಸರ್ಪವೇ ಅವನ



ಯಜ್ಞೋಪವೀತವಾಗಿತ್ತು. ಅವನ ನೀಳ ದಪ್ಪ ಬಾಹುಗಳು ನಾನಾಪ್ರಕಾರದ ಆಯುಧಗಳನ್ನು ಎತ್ತಿ ಹಿಡಿದಿದ್ದವು. ಮಹಾಸರ್ಪಗಳೇ ಅವನ ತೋಳ್ಬಂದಿಗಳಾಗಿದ್ದವು. ಮುಖದ ಸುತ್ತಲೂ ಜ್ವಾಲೆಗಳ ಮಾಲೆಯಿದ್ದಿತು. ಕೋರೆದಾಡೆಗಳಿಂದ ಕೂಡಿದ್ದ ಅವನ ಕರಾಳ

ವದನದಲ್ಲಿನ ತೆರೆದ ಬಾಯಿಯು ಭಯವನ್ನುಂಟುಮಾಡುತ್ತಿತ್ತು. ಸಹಸ್ರಾರು ವಿಚಿತ್ರ ಕಣ್ಣುಗಳಿಂದ ವಿಭೂಷಿತನಾಗಿದ್ದನು. ಅವನ ಶರೀರವನ್ನೂ ವೇಷವನ್ನೂ ವರ್ಣಿಸಲು ಯಾರಿಗೂ ಶಕ್ಯವಾಗದಂತಿತ್ತು. ಅವನನ್ನು ನೋಡಿ ಪರ್ವತಗಳು ಕೂಡ ಭಯದಿಂದ ಸ್ಫೋಟಗೊಳ್ಳುತ್ತಿದ್ದವೇನೋ! ಅವನ ಮೂಗಿನ ಹೊಳ್ಳೆಗಳಿಂದಲೂ, ಕಿವಿಗಳಿಂದಲೂ, ಸಹಸ್ರ ಕಣ್ಣುಗಳಿಂದಲೂ ಮತ್ತು ಎಲ್ಲೆಡೆಗಳಿಂದಲೂ ಮಹಾಜ್ವಾಲೆಗಳು ಹೊರಹೊಮ್ಮುತ್ತಿದ್ದವು. ಅವನ ತೇಜಸ್ಸಿನ ಕಿರಣಗಳಿಂದ ನೂರಾರು ಸಹಸ್ರಾರು ಶಂಖ-ಚಕ್ರ-ಗದೆಗಳನ್ನು ಧರಿಸಿದ್ದ ಹೃಷೀಕೇಶರು ಪ್ರಕಟವಾಗುತ್ತಿದ್ದರು. ಲೋಕಭಯಂಕರನಾದ ಆ ಅದ್ಭುತ ಭೂತನನ್ನು ನೋಡಿದ ದ್ರೌಣಿಯು ಸ್ವಲ್ಪವೂ ವ್ಯಥಿತನಾಗದೇ ದಿವ್ಯಾಸ್ತ್ರಗಳಿಂದ ಅವನನ್ನು ಮುಸುಕಿದನು. ಸಮುದ್ರದಲ್ಲಿರುವ ವಡವಾಗ್ನಿಯು ಜಲರಾಶಿಗಳನ್ನೇ ಕುಡಿದುಬಿಡುವಂತೆ ದ್ರೌಣಿಯು ಪ್ರಯೋಗಿಸಿದ ಶರಗಳೆಲ್ಲವನ್ನೂ ಆ ಮಹಾಭೂತನು ನುಂಗಿಬಿಟ್ಟನು. ಆ ಶರಸಮೂಹಗಳು ನಿರರ್ಥಕವಾದುದನ್ನು ನೋಡಿದ ಅಶ್ವತ್ಥಾಮನು ಉರಿಯುತ್ತಿದ್ದ ಅಗ್ನಿಯ ಶಿಖೆಯಂತಿರುವ ರಥಶಕ್ತಿಯನ್ನು ಅವನ ಮೇಲೆ ಪ್ರಯೋಗಿಸಿದನು. ಯುಗಾಂತದಲ್ಲಿ ಸೂರ್ಯನನ್ನು ಅಪ್ಪಳಿಸಿ ನುಚ್ಚುನೂರಾಗಿ ಆಕಾಶದಿಂದ ಕೆಳಕ್ಕೆ ಬೀಳುವ ಮಹಾ ಉಲ್ಕೆಯಂತೆ ದೀಪ್ತಾಗ್ರದ ಆ ರಥಶಕ್ತಿಯು ಆ ಮಹಾಪುರುಷನಿಗೆ ಬಡಿದು ಸೀಳಿ

ಕೆಳಗೆ ಬಿದ್ದಿತು. ಆಗ ಅಶ್ವತ್ಥಾಮನು ಬಂಗಾರದ ಹಿಡಿಯಿದ್ದ ಆಕಾಶದಂತೆ ಹೊಳೆಯುತ್ತಿದ್ದ ದಿವ್ಯ ಖಡ್ಗವನ್ನು ಬಿಲದಲ್ಲಿದ್ದ ಬೆಳಗುವ ಸರ್ಪವನ್ನು ಹೊರಕ್ಕೆಳೆಯುವಂತೆ ಒರೆಯಿಂದ ಹೊರತೆಗೆದನು. ಆ ಧೀಮಂತನು ಶ್ರೇಷ್ಠ ಖಡ್ಗವನ್ನು ಮಹಾಪುರುಷನ ಮೇಲೆ ರಭಸದಿಂದ ಎಸೆಯಲು ಅದು ಮುಂಗುಸಿಯು ಬಿಲವನ್ನು ಸೇರುವಂತೆ ಆ ಮಹಾಪುರುಷನಲ್ಲಿ ಲೀನವಾಯಿತು. ಆಗ ಕುಪಿತ ದ್ರೌಣಿಯು ಇಂದ್ರನ ಧ್ವಜದಂತೆ ಪ್ರಜ್ವಲಿಸುತ್ತಿದ್ದ ಗದೆಯನ್ನು ಅವನ ಮೇಲೆ ಎಸೆಯಲು, ಅದನ್ನೂ ಕೂಡ ಆ ಮಹಾಭೂತನು ನುಂಗಿಬಿಟ್ಟನು. ಆಯುಧಗಳೆಲ್ಲವೂ ಮುಗಿದು ಹೋಗಿ ದಿಕ್ಕುಕಾಣದೇ ಅತ್ತಿತ್ತ ಹುಡುಕುತ್ತಿರುವಾಗ ಅಶ್ವತ್ಥಾಮನು ಅಸಂಖ್ಯಾತ ಜನಾರ್ದನರಿಂದ ಆಕಾಶವು ತುಂಬಿಹೋಗಿರುವುದನ್ನು ನೋಡಿದನು.

ಆ ಮಹಾ ಅದ್ಭುತವನ್ನು ನೋಡಿ, ನಿರಾಯುಧನಾಗಿದ್ದ ದ್ರೋಣಪುತ್ರನು ಪರಿತಪಿಸುತ್ತಾ ಕೃಪನು ಹೇಳಿದ್ದ ಮಾತನ್ನು ನೆನಪಿಸಿಕೊಂಡು ತನ್ನಲ್ಲಿಯೇ ಹೀಗೆ ಹೇಳಿಕೊಂಡನು:

> “ಅಪ್ರಿಯವಾದರೂ ಹಿತವಾದುದನ್ನು ಹೇಳುವ ಸುಹೃದಯರನ್ನು ಕೇಳದವನು ಕೃಪ-ಕೃತವರ್ಮರನ್ನು ಮೀರಿ ನಡೆದ ನನ್ನಂತೆ ಕಷ್ಟವನ್ನು ಹೊಂದಿ ಪಶ್ಚಾತ್ತಾಪ ಪಡುತ್ತಾನೆ!

ಶಾಸ್ತ್ರಗಳು ಕಂಡು ಹೇಳಿರುವುದನ್ನು ಮೀರಿ ಅವಧ್ಯರನ್ನು ಸಂಹರಿಸಲು ಹೊರಟವನು ಧರ್ಮಮಾರ್ಗದಿಂದ ಭ್ರಷ್ಟನಾಗಿ ಕೆಟ್ಟಮಾರ್ಗದಲ್ಲಿಯೇ ಹೋಗಿ ನಾಶಹೊಂದುತ್ತಾನೆ! ಗೋವು, ಬ್ರಾಹ್ಮಣ, ನೃಪ, ಸ್ತ್ರೀ, ಸಖ, ತಾಯಿ, ಗುರು, ವೃದ್ಧ, ಬಾಲಕ, ಜಡ, ಅಂಧ, ಮಲಗಿರುವವನು, ಹೆದರಿದವನು, ಹಾಸಿಗೆಯಿಂದ ಮೇಲೆದ್ದವನು, ಉನ್ಮತ್ತನಾದವನು, ಮತ್ತು ಹುಚ್ಚ – ಇವರ ಮೇಲೆ ಎಂದೂ ಶಸ್ತ್ರಗಳನ್ನು ಎತ್ತಿ ಪ್ರಹರಿಸಕೂಡದೆಂದು ಗುರುಗಳು ಈ ಮೊದಲೇ ಮನುಷ್ಯರಿಗೆ ಉಪದೇಶಿಸಿದ್ದಾರೆ. ಶಾಸ್ತ್ರವು ತೋರಿಸಿಕೊಟ್ಟ ಸನಾತನ ಮಾರ್ಗವನ್ನು ಉಲ್ಲಂಘಿಸಿ ಕೆಟ್ಟ ಮಾರ್ಗವನ್ನು ಹಿಡಿದು ಮಾಡಬಾರದುದನ್ನು ಮಾಡಲು ಪ್ರಾರಂಭಿಸಿ ನಾನು ಇಂತಹ ಘೋರ ಆಪತ್ತಿಗೆ ಒಳಗಾಗಿದ್ದೇನೆ. ಮಹಾಕಾರ್ಯವನ್ನು ಮಾಡಲು ಹೋಗಿ ಭಯದಿಂದ ಅಥವಾ ಶಕ್ತಿ-ಬಲಗಳಿಲ್ಲದೇ ಅಶಕ್ಯನಾಗಿ ಹಿಂದಿರುಗುವುದು ಘೋರತರ ಆಪತ್ತೆಂದು ತಿಳಿದವರು ಹೇಳುತ್ತಾರೆ.  ಮನುಷ್ಯಪ್ರಯತ್ನವು ದೈವಸಂಕಲ್ಪಕ್ಕಿಂತಲೂ ಹೆಚ್ಚಿನದಲ್ಲವೆಂದೂ ಹೇಳುತ್ತಾರೆ. ಮನುಷ್ಯನು ಮಾಡುವ ಕರ್ಮವು ಒಂದು ವೇಳೆ ದೈವಬಲದಿಂದ ಸಿದ್ಧಿಸದಿದ್ದರೆ ಅವನು ಧರ್ಮಮಾರ್ಗವನ್ನು

ಬಿಟ್ಟು ಹೋದುದಕ್ಕಾಗಿ ವಿಪತ್ತನ್ನು ಎದುರಿಸಬೇಕಾಗುತ್ತದೆ. ಭಯದ ಕಾರಣದಿಂದಾಗಿ ಆರಂಭಿಸಿದ ಕಾರ್ಯದಿಂದ ಹಿಂದೆ ಸರಿದರೆ ಆ ಪ್ರತಿಜ್ಞೆಯು ಅಜ್ಞಾನದಿಂದ ಮಾಡಿದುದು ಎಂದು ತಿಳಿದವರು ಹೇಳುತ್ತಾರೆ. ಕೆಟ್ಟ ಕಾರ್ಯವನ್ನು ಮಾಡಲು ಹೊರಟಿರುವುದರಿಂದಲೇ ನನಗೆ ಈ ಭಯವು ಆವರಿಸಿದೆ. ಆದರೆ ಈ ದ್ರೋಣ ಸುತನು ಎಂದೂ ಯುದ್ಧದಿಂದ ಹಿಂದಿರುಗುವವನಲ್ಲ! ಈ ಮಹಾಭೂತನಾದರೋ ದೈವದಂಡದಂತೆ ಎದ್ದು ನಿಂತಿದ್ದಾನೆ! ನಾನು ಎಷ್ಟೇ ಯೋಚಿಸಿದರೂ ಇವನು ಯಾರೆಂದು ನನಗೆ ತಿಳಿಯುತ್ತಿಲ್ಲ! ಕಲ್ಮಷ ಬುದ್ಧಿಯಿಂದ ನಾನು ಅಧರ್ಮಮಾರ್ಗದಲ್ಲಿ ಹೊರಟಿರುವುದರಿಂದಲೇ ಇದು ಆಗಿದೆಯೆನ್ನುವುದು ಖಂಡಿತ! ಅದನ್ನು ವಿರೋಧಿಸಿಯೇ ನನಗೆ ಈ ಘೋರ ಫಲವು ದೊರಕಿದೆಯೆಂದು ಕಾಣುತ್ತದೆ. ನಾನು ಯುದ್ಧದಿಂದ ಹಿಂದೆಸರಿಯಬೇಕೆಂಬುದೇ ದೈವವಿಹಿತವಾಗಿರಬಹುದು. ದೈವಾನುಕೂಲವಿಲ್ಲದೇ ಎಂದೂ ನಾನು ಯುದ್ಧವನ್ನು ಮುಂದುವರೆಸಲು ಸಾಧ್ಯವಾಗುವುದಿಲ್ಲ! ಆದುದರಿಂದ ಇಂದು ನಾನು ಪ್ರಭು ಮಹಾದೇವನ ಶರಣು ಹೋಗುತ್ತೇನೆ. ಅವನೇ ಈ ಘೋರ ದೈವದಂಡವನ್ನು ನಾಶಗೊಳಿಸುತ್ತಾನೆ.

ಈಗ ಕಪರ್ದಿ, ದೇವದೇವ, ಉಮಾಪತಿ, ಕಪಾಲಮಾಲಿ, ರುದ್ರ, ಭಗನೇತ್ರಹರ, ಹರನನ್ನು ಶರಣುಹೊಗುತ್ತೇನೆ. ಅವನೇ ತಪಸ್ಸು ಮತ್ತು ವಿಕ್ರಮಗಳಿಂದ ದೇವತೆಗಳನ್ನು ಅತಿಶಯಿಸಿದ್ದಾನೆ. ಆದುದರಿಂದ ಆ ಗಿರಿಶ, ಶೂಲಪಾಣಿಯ ಚರಣಗಳಿಗೆ ಬೀಳುತ್ತೇನೆ!"

ಹೀಗೆ ಯೋಚಿಸಿ ದ್ರೋಣಪುತ್ರನು ರಥದಿಂದ ಕೆಳಗಿಳಿದು ಕೈಜೋಡಿಸಿ ನಿಂತು ಸ್ತುತಿಸಲು ಉಪಕ್ರಮಿಸಿದನು. ದ್ರೌಣಿಯು ಹೇಳಿದನು:

"ಉಗ್ರ, ಸ್ಥಾಣು, ಶಿವ, ರುದ್ರ, ಶರ್ವ, ಈಶಾನ, ಈಶ್ವರ, ಗಿರಿಶ, ವರದ, ದೇವ, ಭವ, ಭಾವನ, ಅವ್ಯಯ, ಶಿತಿಕಂಠ, ಅಜ, ಶಕ್ರ, ಕ್ರಥ, ಕ್ರತುಹರ, ಹರ, ವಿಶ್ವರೂಪ, ವಿರೂಪಾಕ್ಷ, ಬಹುರೂಪ, ಉಮಾಪತಿ, ಶ್ಮಶಾನವಾಸಿ, ದೃಪ್ತ, ಮಹಾಗಣಪತಿ, ಪ್ರಭು, ಖಟ್ವಾಂಗಧಾರಿ, ಮುಂಡ, ಜಟಿಲ, ಬಹ್ಮಚಾರಿಣಿ, ಮತ್ತು ತ್ರಿಪುರಘಾತಿನಿಯನ್ನು ಪರಿಶುದ್ಧ ಮನಸ್ಸಿನಿಂದ ಕೂಡಿದವನಾಗಿ ದುರ್ಬಲರಿಗೆ ದುಷ್ಕರವಾದ ಆತ್ಮೋಪಹಾರ ವಿಧಾನದಿಂದ ಪೂಜಿಸುತ್ತೇನೆ. ಸ್ತುತ, ಸ್ತುತ್ಯ, ಸ್ತೂಯಮಾನ, ಅಮೋಘ, ಚರ್ಮವಾಸಸ, ವಿಲೋಹಿತ, ನೀಲಕಂಠ, ಅಪೃಕ್ತ, ದುರ್ನಿವಾರಣ, ಶುಕ್ರ, ವಿಶ್ವಸೃಜ, ಬ್ರಹ್ಮ,

ಬ್ರಹ್ಮಚಾರಿಣೆ, ವ್ರತವಂತ, ತಪೋನಿತ್ಯ, ಅನಂತ, ತಪಸ್ವಿಗಳ ಗತಿ, ಬಹುರೂಪ, ಗಣಾಧ್ಯಕ್ಷ, ತ್ರ್ಯಕ್ಷ, ಪಾರಿಷದಪ್ರಿಯ, ಗಣಾಧ್ಯಕ್ಷ, ಈಕ್ಷಿತಮುಖ, ಗೌರೀಹೃದಯವಲ್ಲಭ, ಕುಮಾರನ ತಂದೆ, ಪಿಂಗ, ಗೋವೃಷನನ್ನೇ ಉತ್ತಮ ವಾಹನವಾಗುಳ್ಳ ತನುವಾಸಸ, ಉಗ್ರ, ಆಭೂಷಣತತ್ಪರ, ಪರ, ತಿಳಿಯಲು ಅಸಾಧ್ಯ ಪರೇಭ್ಯ, ಇಷ್ವಸ್ತ್ರೋತ, ಭರ್ತಾರ, ದಕ್ಷಿಣ ದಿಗಂತ, ಹಿರಣ್ಯಕವಚ, ದೇವ ಚಂದ್ರಮೌಲಿವಿಭೂಷಿತ ದೇವನನ್ನು ಪರಮ ಸಮಾಧಿಯಲ್ಲಿದ್ದುಕೊಂಡು ಶರಣುಹೊಗುತ್ತೇನೆ. ಈ ಸುದುಸ್ತರ ಘೋರ ಆಪತ್ತನ್ನು ಪಾರುಮಾಡಲು ನಾನು ಇಂದು ಶುಚಿ ಸರ್ವಭೂತೋಪಹಾರದಿಂದ ಆ ಶುಚಿ ಶಿವನನ್ನು ಅರ್ಚಿಸುತ್ತೇನೆ.”

ತ್ಯಾಗಾತ್ಮಕ ಮನಸ್ಸಿನಿಂದ ಅಶ್ವತ್ಥಾಮನು ದೃಢನಿಶ್ಚಿತನಾಗಿರುವವನೆಂದು ತಿಳಿದು ಆ ಮಹಾತ್ಮನ ಎದಿರು ಸುವರ್ಣಮಯ ವೇದಿಯೊಂದು ಕಾಣಿಸಿಕೊಂಡಿತು. ಆಗ ಆ ವೇದಿಯಲ್ಲಿ ಆಕಾಶ, ದಿಕ್ಕುಗಳು ಮತ್ತು ಉಪದಿಕ್ಕುಗಳನ್ನೂ ಜ್ವಾಲೆಗಳಿಂದ ತುಂಬಿಸುತ್ತಿರುವ ಯಜ್ಞೇಶ್ವರನು ಉದಯಿಸಿದನು. ಆಗ ಅಲ್ಲಿಂದ ಉರಿಯುತ್ತಿರುವ ಮುಖ-ಕಣ್ಣುಗಳುಳ್ಳ, ಅನೇಕ ಪಾದ-ಶಿರ-ಭುಜಗಳುಳ್ಳ ಆನೆ ಮತ್ತು ಪರ್ವತಗಳಂತಿರುವ ಮಹಾಕಾಯಗಳು

ಉದ್ಭವಿಸಿದವು. ಅವುಗಳು ನಾಯಿ, ಹಂದಿ ಮತ್ತು ಒಂಟೆಗಳ, ಕುದುರೆ, ನರಿ ಮತ್ತು ಹಸುಗಳ ರೂಪವನ್ನು ಹೊಂದಿದ್ದವು. ಕೆಲವು ಕರಡಿ ಮತ್ತು ಬೆಕ್ಕುಗಳ ಮುಖವನ್ನು ಹೊಂದಿದ್ದವು. ಇನ್ನು ಕೆಲವಕ್ಕೆ ಹುಲಿ ಮತ್ತು ಚಿರತೆಯ ಮುಖಗಳಿದ್ದವು. ಕಾಗೆಗಳ ಮುಖಗಳು, ಕಪಿಗಳ ಮುಖಗಳು, ಗಿಳಿಗಳ ಮುಖಗಳು, ಹೆಬ್ಬಾವಿನ ಮುಖಗಳು ಮತ್ತು ಬಿಳಿಯ ಹಂಸಗಳ ಮುಖಗಳನ್ನು ಹೊಂದಿದ್ದವು. ಮರಕುಟುಕಹಕ್ಕಿಗಳ ಮುಖ, ನವಿಲಿನ ಮುಖ, ಆಮೆ, ಮೊಸಳೆ, ಮತ್ತು ಮೊಲಗಳ ಮುಖಗಳನ್ನು ಹೊಂದಿದ್ದವು. ಮಹಾಮಕರಗಳ ಮುಖ, ತಿಮಿಂಗಿಲುಗಳ ಮುಖ ಮತ್ತು ಹಾಗೆಯೇ ಸಿಂಹ, ಕ್ರೌಂಚ, ಕಾಡುಪಾರಿವಾಳಗಳ ಮುಖಗಳನ್ನು ಹೊಂದಿದ್ದವು. ಪಾರಿವಾಳಗಳ ಮುಖಗಳನ್ನು ಮತ್ತು ನೀರುಕಾಗೆಗಳ ಮುಖಗಳನ್ನು ಹೊಂದಿದ್ದವು. ಕೆಲವರ ಕೈಗಳಲ್ಲಿ ಕಿವಿಗಳಿದ್ದವು. ಕೆಲವರಿಗೆ ಸಹಸ್ರಾರು ಕಣ್ಣುಗಳಿದ್ದವು. ನೂರಾರು ಹೊಟ್ಟೆಗಳಿದ್ದವು. ಕೆಲವರಲ್ಲಿ ಮಾಂಸಗಳೇ ಇರಲಿಲ್ಲ. ಕೆಲವರಿಗೆ ಕಾಗೆ ಮತ್ತು ಗಿಡುಗದ ಮುಖಗಳಿದ್ದವು. ಕೆಲವಕ್ಕೆ ಶಿರಗಳೇ ಇರಲಿಲ್ಲ. ಕೆಲವಕ್ಕೆ ಕರಡಿಯ ಮುಖಗಳಿದ್ದು ಭೀಷಣವಾಗಿ ತೋರುತ್ತಿದ್ದವು. ಉರಿಯುತ್ತಿರುವ ಕಣ್ಣು ನಾಲಿಗೆಗಳಿದ್ದವು. ಪ್ರಜ್ವಲಿಸುತ್ತಿರುವ ಮುಖಗಳಿದ್ದವು. ಕೆಲವಕ್ಕೆ ಟಗರಿನ ಮುಖಗಳಿದ್ದವು. ಇನ್ನು ಕೆಲವಕ್ಕೆ ಮೇಕೆಯ ಮುಖಗಳಿದ್ದವು. ಕೆಲವಕ್ಕೆ ಶಂಖದ ಕಾಂತಿಯಿದ್ದಿತು. ಕೆಲವು ಶಂಖದಂತ ಮುಖಗಳನ್ನು,

ಶಂಖದಂತ ಕಿವಿಗಳನ್ನು ಹೊಂದಿದ್ದವು. ಕೆಲವು ಶಂಖಗಳ ಮಾಲೆಗಳನ್ನು ಧರಿಸಿದ್ದವು. ಕೆಲವರ ಧ್ವನಿಯು ಶಂಖಧ್ವನಿಗೆ ಸಮನಾಗಿತ್ತು. ಕೆಲವು ಜಟೆಗಳನ್ನು ಧರಿಸಿದ್ದವು. ಐದು ಜುಟ್ಟುಗಳಿದ್ದವು. ಬೋಳಾಗಿದ್ದವು. ತೆಳು ಹೊಟ್ಟೆಗಳಿದ್ದವು. ಕೆಲವಕ್ಕೆ ನಾಲ್ಕು ಹಲ್ಲುಗಳಿದ್ದವು. ನಾಲ್ಕು ನಾಲಿಗೆಗಳಿದ್ದವು. ಕೆಲವಕ್ಕೆ ಶಂಖದಂತಹ ಕಿವಿಗಳಿದ್ದವು. ಕಿರೀಟಗಳನ್ನು ಧರಿಸಿದ್ದವು. ಕೆಲವು ಸೊಂಟಕ್ಕೆ ಸುತ್ತಿಕೊಂಡಿದ್ದವು. ಗುಂಗುರು ಕೂದಲಿನವಾಗಿದ್ದವು. ಕೆಲವಕ್ಕೆ ಮುಂಡಾಸಗಳಿದ್ದವು. ಕೆಲವು ಮುಕುಟಗಳನ್ನು ಧರಿಸಿದ್ದವು. ಸುಂದರಮುಖವುಳ್ಳ ಕೆಲವು ಅಲಂಕೃತಗೊಂಡಿದ್ದವು. ಕೆಲವು ಕಮಲಗಳಿಂದ ಮಾಡಿದ ಕಿರೀಟಗಳನ್ನು ಧರಿಸಿದ್ದವು. ಕೆಲವು ನೈದಿಲೆಗಳ ಕಿರೀಟಗಳನ್ನು ಧರಿಸಿದ್ದವು. ಆ ನೂರಾರು ಸಹಸ್ರಾರು ಭೂತಗಳು ಮಹಾತ್ಮೆಗಳಿಂದ ಕೂಡಿದ್ದವು. ಶತಘ್ನಿಗಳನ್ನೂ ಚಕ್ರಗಳನ್ನೂ ಹಿಡಿದಿದ್ದವು. ಮುಸಲಗಳನ್ನು ಹಿಡಿದಿದ್ದವು. ಕೆಲವು ಭುಶುಂಡೀ ಮತ್ತು ಪಾಶಗಳನ್ನು ಹಿಡಿದಿದ್ದರೆ ಕೆಲವು ಗದೆಗಳನ್ನು ಹಿಡಿದಿದ್ದವು. ರಣೋತ್ಕಟರಾದ ಕೆಲವು ಬೆನ್ನಿಗೆ ವಿಚಿತ್ರಬಾಣಗಳುಳ್ಳ ಭತ್ತಳಿಕೆಗಳನ್ನು ಕಟ್ಟಿಕೊಂಡಿದ್ದವು. ಅವು ಧ್ವಜ, ಪತಾಕೆ, ಘಂಟೆ ಮತ್ತು ಪರಶು ಮೊದಲಾದ ಆಯುಧಗಳನ್ನೂ ಹೊಂದಿದ್ದವು. ಮಹಾಪಾಶಗಳನ್ನು ಮೇಲಿತ್ತಿ ಹಿಡಿದಿದ್ದವು. ಹಾಗೆಯೇ ದೊಣ್ಣೆಗಳನ್ನು

ಹಿಡಿದಿದ್ದವು. ಕೆಲವು ಕಂಬಗಳನ್ನೂ ಕೆಲವು ಖಡ್ಗಗಳನ್ನೂ ಹಿಡಿದಿದ್ದವು. ಕೆಲವು ಸರ್ಪಗಳಿಂದ ಮಾಡಿದ್ದ ಎತ್ತರ ಕಿರೀಟಗಳನ್ನು ಧರಿಸಿದ್ದವು. ಕೆಲವು ಮಹಾಸರ್ಪಗಳನ್ನೇ ತೋಳ್ಬಂದಿಯನ್ನಾಗಿ ಧರಿಸಿದ್ದವು. ವಿಚಿತ್ರ ಆಭರಣಗಳನ್ನು ಧರಿಸಿದ್ದವು. ಕೆಲವು ಧೂಳಿನಿಂದ ಮುಚ್ಚಿಕೊಂಡಿದ್ದರೆ ಕೆಲವು ಕೆಸರನ್ನು ಲೇಪಿಸಿಕೊಂಡಿದ್ದವು. ಎಲ್ಲವೂ ಬಿಳಿಯ ವಸ್ತ್ರ ಮತ್ತು ಬಿಳೀ ಮಾಲೆಗಳನ್ನು ಧರಿಸಿದ್ದವು. ಕೆಲವರ ದೇಹಗಳು ನೀಲಿ ವರ್ಣದ್ದಾಗಿದ್ದರೆ ಕೆಲವರ ದೇಹಗಳು ಪಿಂಗಲವರ್ಣದ್ದಾಗಿದ್ದವು. ಕೆಲವು ತಮ್ಮ ತಲೆಗಳನ್ನು ಬೋಳಿಸಿಕೊಂಡಿದ್ದವು. ಅ ಕನಕಪ್ರಭೆಯುಳ್ಳ ಪಾರಿಷದರು ಪ್ರಹೃಷ್ಟರಾಗಿ ಭೇರೀ, ಶಂಖ, ಮೃದಂಗ, ಝರ್ಝರ, ಆನಕ ಮತ್ತು ಗೋಮುಖಗಳನ್ನು ಬಾರಿಸುತ್ತಿದ್ದರು. ಆ ಮಹಾಬಲರಲ್ಲಿ ಕೆಲವು ಹಾಡುತ್ತಿದ್ದರೆ ಇನ್ನು ಇತರರು ನರ್ತಿಸುತ್ತಿದ್ದರು. ಇನ್ನೂ ಕೆಲವರು ಹಾರುತ್ತಿದ್ದರು, ನೆಗೆಯುತ್ತಿದ್ದರು ಮತ್ತು ಕುಪ್ಪಳಿಸುತ್ತಿದ್ದರು. ವೇಗವಾಗಿ ಓಡುತ್ತಿದ್ದವು. ಹಾಗೆ ಓಡುವಾಗ ಕೆಲವರ ಉದ್ದ ಕೂದಲುಗಳು ಗಾಳಿಯಿಂದಾಗಿ ಹಾರುತ್ತಿದ್ದವು. ಮದಿಸಿದ ಆನೆಗಳಂತೆ ಪುನಃ ಪುನಃ ಘೀಳಿಡುತ್ತಿದ್ದವು. ಅತ್ಯಂತ ಭಯಂಕರರಾಗಿದ್ದ, ಘೋರರೂಪದ ಗಣಗಳು ಶೂಲ-ಪಟ್ಟಿಶಗಳನ್ನು ಹಿಡಿದಿದ್ದವು. ನಾನಾ ಬಣ್ಣದ ವಸ್ತ್ರಗಳನ್ನೂ, ಮಾಲೆಗಳನ್ನೂ, ಲೇಪನಗಳನ್ನೂ ಧರಿಸಿದ್ದವು. ಕೆಲವು ಶೂರರು ಮತ್ತು ಸಹಿಸಲು ಅಸಾಧ್ಯ ವಿಕ್ರಮವುಳ್ಳವರು ಶತ್ರುಗಳ

ಹಂತಾರರಂತೆ ತಮ್ಮ ಬಣ್ಣಬಣ್ಣದ ರತ್ನಗಳ ತೋಳ್ಬಂದಿಗಳನ್ನು ಧರಿಸಿದ್ದ ಕೈಗಳನ್ನು ಮೇಲಿತ್ತಿದ್ದವು. ರಕ್ತ-ವಸೆಗಳನ್ನು ಕುಡಿಯುತ್ತಿದ್ದವು. ಮಾಂಸ-ಕರುಳುಗಳನ್ನು ತಿನ್ನುತ್ತಿದ್ದವು. ಕೆಲವಕ್ಕೆ ಶಿಖೆಗಳಿದ್ದವು. ಕೆಲವು ಬೆಟ್ಟ ಕಣಗಿಲೇ ಹೂಗಳನ್ನು ಮುಡಿದಿದ್ದವು. ಕೆಲವು ಬಡಕಲಾಗಿದ್ದರೆ ಕೆಲವರಿಗೆ ಗಡಿಗೆಯಂತಹ ಹೊಟ್ಟೆಯಿದ್ದಿತು. ಅತಿ ಕುಳ್ಳರಿದ್ದರು. ಅತಿ ಎತ್ತರದವರೂ ಇದ್ದರು. ಬಲಶಾಲಿಗಳೂ ಭೈರವರೂ ಇದ್ದರು. ಕೆಲವರು ವಿಕಾರರೂಪವುಳ್ಳವರಾಗಿದ್ದರು. ಕೆಲವರಿಗೆ ಉದ್ದವಾದ ಕಪ್ಪು ತುಟಿಗಳಿದ್ದವು. ಕೆಲವಕ್ಕೆ ಅತಿ ದೊಡ್ಡ ಲಿಂಗಗಳಿದ್ದವು. ಬೆಲೆಬಾಳುವ ಅನೇಕ ಮುಕುಟಗಳನ್ನು ಧರಿಸಿದ್ದವು, ಕೆಲವು ಬೋಳುತಲೆಗಳುಳ್ಳವದಾಗಿದ್ದರೆ ಕೆಲವುಗಳಿಗೆ ಜುಟ್ಟುಗಳಿದ್ದವು. ಅವು ಸೂರ್ಯ-ಚಂದ್ರ-ಗ್ರಹ-ನಕ್ಷತ್ರಗಳೊಂದಿಗೆ ಆಕಾಶವನ್ನೇ ಭೂಮಿಯಮೇಲೆ ಬೀಳುವಂತೆ ಮಾಡಬಲ್ಲವರಾಗಿದ್ದವು. ಚತುರ್ವಿಧ ಭೂತಗಣಗಳನ್ನೂ ಸಂಹರಿಸಲು ಉತ್ಸುಕವಾಗಿದ್ದವು. ಹರನ ಹುಬ್ಬುಗಂಟನ್ನೂ ಸಹಿಸಿಕೊಳ್ಳಬಲ್ಲ ಅವು ಸದಾ ನಿರ್ಭಯವಾಗಿದ್ದವು. ಬಯಸಿದಂತೆ ಮಾಡುವ ಆ ಸಿದ್ಧರು ತ್ರೈಲೋಕ್ಯಗಳ ಈಶ್ವರರಿಗೂ ಈಶ್ವರರಂತಿದ್ದರು. ನಿತ್ಯವೂ ಆನಂದದಿಂದ ಮುದಿತರಾಗಿದ್ದ ಆ ವಾಗೀಶ್ವರರು ಮತ್ಸರಗಳಿಂದ ವಿಹೀನರಾಗಿದ್ದರು. ಅಷ್ಟಗುಣ ಐಶ್ವರ್ಯಗಳನ್ನು ಪಡೆದಿದ್ದ ಅವರು ನಿರಭಿಮಾನಿಗಳಾಗಿದ್ದರು.

ಅವರ ಕರ್ಮಗಳಿಂದ ಭಗವಾನ್ ಹರನು ನಿತ್ಯವೂ ವಿಸ್ಮಿತಗೊಳ್ಳುತ್ತಿದ್ದನು. ಮನಸ್ಸು, ಮಾತು, ಮತ್ತು ಕರ್ಮಗಳ ಮೂಲಕವಾಗಿ ಭಕ್ತಿಯಿಂದ ನಿತ್ಯವೂ ಆರಾಧಿಸುವ ಆ ಭಕ್ತರನ್ನು ಭಗವಾನನು ಮನಸ್ಸು, ಮಾತು ಮತ್ತು ಕರ್ಮಗಳ ಮೂಲಕವಾಗಿ, ತನ್ನ ಔರಸಪುತ್ರರ ಹಾಗೆ, ರಕ್ಷಿಸುತ್ತಾನೆ. ಅನ್ಯ ಬ್ರಹ್ಮದ್ವೇಷಿಗಳ ರಕ್ತ-ವಸೆಗಳನ್ನು ಅವರು ಕ್ರುದ್ಧರಾಗಿ ಸದಾ ಕುಡಿಯುತ್ತಿರುತ್ತಾರೆ. ಅವರು ನಿತ್ಯವೂ ಇಪ್ಪತ್ನಾಲ್ಕು ಅಂಶಗಳುಳ್ಳ ಸೋಮವನ್ನು ಕುಡಿಯುತ್ತಾರೆ. ಶ್ರುತಿ, ಬ್ರಹ್ಮಚರ್ಯ, ತಪಸ್ಸು ಮತ್ತು ಸಮಗಳಿಂದ ಶೂಲಾಂಕನನ್ನು ಆರಾಧಿಸಿ ಭವನ ಸಾಯುಜ್ಯವನ್ನೇ ಪಡೆದಿದ್ದಾರೆ. ತನ್ನಂತೆಯೇ ಇರುವ ಈ ಭೂತಗಣಗಳೊಂದಿಗೆ ಮತ್ತು ಪಾರ್ವತಿಯೊಂದಿಗೆ ಭೂತ ಭವ್ಯ ಭವಿಷ್ಯತ್ತುಗಳ ಪ್ರಭುವಾದ ಭಗವಾನ್ ಮಹೇಶ್ವರನು ಹವಿಸ್ಸನ್ನು ಸ್ವೀಕರಿಸುತ್ತಾನೆ. ನಾನಾವಿಧವಾದ ವಿಚಿತ್ರ ಅಟ್ಟಹಾಸಗಳಿಂದ, ಸಿಂಹನಾದಗಳಿಂದ, ಗರ್ಜನೆಯಿಂದ ಮತ್ತು ವಾದ್ಯಘೋಷಗಳಿಂದ ಪ್ರಪಂಚವನ್ನೇ ಭಯಪಡಿಸುತ್ತಾ ಅವು ಅಶ್ವತ್ಥಾಮನ ಬಳಿ ಬಂದವು. ಮಹಾದೇವನನ್ನು ಸಂಸ್ತುತಿಸುತ್ತಿದ್ದ ಆ ಸುವರ್ಚಸರು ತಮ್ಮ ಪ್ರಭೆಯನ್ನು ಸುತ್ತಲೂ ಹರಡುತ್ತಿದ್ದರು. ಮಹಾತ್ಮ ದ್ರೌಣಿಯ ಮಹಿಮೆಯನ್ನು ವರ್ಧಿಸಲು ಬಯಸುತ್ತಿದ್ದರು.

ಅವನ ತೇಜಸ್ಸು ಎಷ್ಟೆಂದು ಮತ್ತು ಮಲಗಿದ್ದವರ ನಾಶವು ಹೇಗೆ

ನಡೆಯುವುದೆಂದು ಪರೀಕ್ಷಿಸಲು ಅವರು ಬಂದಿದ್ದರು. ಹಾಗೆ ಭಯಂಕರವಾದ, ಉಗ್ರರೂಪಗಳ, ಪರಿಘಾಯುಧಗಳನ್ನೂ, ಕೊಳ್ಳಿಗಳನ್ನೂ, ತ್ರಿಶೂಲಗಳನ್ನೂ, ಪಟ್ಟಿಶಗಳನ್ನು ಹಿಡಿದಿದ್ದ ಆ ಘೋರರೂಪದ ಭೂತಗಣಗಳು ಅವನನ್ನು ಸುತ್ತುವರೆದು ನಿಂತವು. ದರ್ಶನಮಾತ್ರದಿಂದಲೇ ಮೂರುಲೋಕಗಳಿಗೂ ಭಯವನ್ನುಂಟುಮಾಡುವ ಅವರನ್ನು ನೋಡಿಯೂ ಮಹಾಬಲ ಅಶ್ವತ್ಥಾಮನು ಸ್ವಲ್ಪವೂ ವ್ಯಥೆಗೊಳ್ಳಲಿಲ್ಲ.

ಆಗ ಧನುಷ್ಪಾಣಿಯಾಗಿದ್ದ, ಗೋಧಾಂಗುಲಿತ್ರಗಳನ್ನು ಧರಿಸಿದ್ದ ದ್ರೌಣಿಯು ಸ್ವಯಂ ತನ್ನನ್ನೇ ತಾನು ಶಿವನಿಗೆ ಉಪಹಾರವನ್ನಾಗಿ ಅರ್ಪಿಸಿದನು. ಆ ಆತ್ಮಸಪರ್ಪಣಕರ್ಮದಲ್ಲಿ ಧನುಸ್ಸೇ ಸಮಿತ್ತಾಗಿತ್ತು. ನಿಶಿತ ಶರಗಳೇ ಪವಿತ್ರಗಳಾಗಿದ್ದವು. ಅಶ್ವತ್ಥಾಮನ ಶರೀರವೇ ಹವಿಸ್ಸಾಗಿತ್ತು. ಆಗ ಮಹಾಮನ್ಯು ಪ್ರತಾಪವಾನ್ ದ್ರೋಣಪುತ್ರನು ಸೋಮ ಮಂತ್ರಪೂರ್ವಕವಾಗಿ ತನ್ನ ಶರೀರವನ್ನೇ ಹವಿಸ್ಸನ್ನಾಗಿ ಅಗ್ನಿಯಲ್ಲಿ ಸಮರ್ಪಿಸಿಕೊಂಡನು. ಆ ರೌದ್ರಕರ್ಮಿ ಅಚ್ಯುತ ರುದ್ರನನ್ನು ತನ್ನ ರೌದ್ರ ಕರ್ಮಗಳಿಂದಲೇ ತಣಿಸುತ್ತಾ ಕೈಮುಗಿದು ಆ ಮಹಾತ್ಮನನ್ನು ಸ್ತುತಿಸಿದನು:

“ಭಗವನ್! ಆಂಗಿರಸ ಕುಲದಲ್ಲಿ ಹುಟ್ಟಿದ ನಾನು ಈ ನನ್ನ

ದೇಹವನ್ನು ಅಗ್ನಿಯಲ್ಲಿ ಆಹುತಿಯನ್ನಾಗಿ ಅರ್ಪಿಸುತ್ತಿದ್ದೇನೆ. ಬಲಿರೂಪವಾಗಿ ನನ್ನನ್ನು ಸ್ವೀಕರಿಸು! ಮಹಾದೇವ! ವಿಶ್ವಾತ್ಮಾ! ಈ ಆಪತ್ತಿನಲ್ಲಿ ಭಕ್ತಿಯಿಂದ ಪರಮ ಸಮಾಧಿಯಿಂದ ನಿನ್ನ ಎದುರು ನನ್ನನ್ನು ಸಮರ್ಪಿಸುತ್ತಿದ್ದೇನೆ. ಸರ್ವಭೂತಗಳೂ ನಿನ್ನಲ್ಲಿವೆ. ಸರ್ವಭೂತಗಳಲ್ಲಿಯೂ ನೀನಿರುವೆ. ಎಲ್ಲ ಪ್ರಧಾನಗುಣಗಳೂ ನಿನ್ನಲ್ಲಿ ಏಕತ್ರವಾಗಿ ನೆಲೆಸಿವೆ. ಸರ್ವಭೂತಾಶ್ರಯನೇ! ವಿಭೋ! ಶತ್ರುಗಳನ್ನು ಪರಾಭವಗೊಳಿಸಲು ನನಗೆ ಅಶಕ್ಯವೆಂದಾದರೆ ನನ್ನನ್ನೇ ಬಲಿಗೊಡಲು ಸಿದ್ಧನಾಗಿರುವ ನನ್ನನ್ನು ಸ್ವೀಕರಿಸು!"

ಹೀಗೆ ಹೇಳಿ ದ್ರೌಣಿಯು ಪ್ರಜ್ವಲಿಸುತ್ತಿರುವ ಅಗ್ನಿಯಿಂದ ದೇದೀಪ್ಯಮಾನವಾಗಿರುವ ವೇದಿಯನ್ನು ಹತ್ತಿ ದೇಹದ ಮೇಲಿನ ಮೋಹವನ್ನು ಸಂಪೂರ್ಣವಾಗಿ ತೊರೆದು ಧಗಧಗನೆ ಉರಿಯುತ್ತಿರುವ ಅಗ್ನಿಯನ್ನು ಪ್ರವೇಶಿಸಿದನು. ಕೈಗಳೆರಡನ್ನೂ ಮೇಲೆತ್ತಿ ಹಂದಾಡದೇ ಹವಿಸ್ಸಾಗಿ ಕುಳಿತಿದ್ದ ಅವನನ್ನು ನೋಡಿ ಸಾಕ್ಷಾತ್ ಭಗವಾನ್ ಮಹಾದೇವನು ನಸುನಗುತ್ತಾ ಹೇಳಿದನು:

"ಅಕ್ಲಿಷ್ಟಕರ್ಮಿ ಕೃಷ್ಣನು ಸತ್ಯ, ಶೌಚ, ಸರಳತೆ, ತ್ಯಾಗ, ತಪಸ್ಸು, ನಿಯಮ, ಕ್ಷಮೆ, ಭಕ್ತಿ, ಧೈರ್ಯ, ಬುದ್ಧಿ ಮತ್ತು ಮಾತುಗಳಿಂದ

ಯಥೋಚಿತವಾಗಿ ನನ್ನನ್ನು ಆರಾಧಿಸಿದ್ದಾನೆ. ಆದುದರಿಂದ ಕೃಷ್ಣನಿಗಿಂತಲೂ ಪ್ರಿಯನಾದವನು ಬೇರೆ ಯಾರೂ ನನಗಿಲ್ಲ. ಅವನನ್ನು ಸಮ್ಮಾನಿಸಲೋಸುಗ ಮತ್ತು ನಿನ್ನನ್ನು ಪರೀಕ್ಷಿಸಲೋಸುಗ ನಾನು ಪಾಂಚಾಲರನ್ನು ಎಲ್ಲರೀತಿಗಳಿಂದ ರಕ್ಷಿಸುತ್ತಿದ್ದೆನು. ನಿನ್ನ ಮೇಲೆ ಅನೇಕ ಮಾಯೆಗಳನ್ನೂ ಪ್ರಯೋಗಿಸಿದೆನು. ಇದೂವರೆಗೆ ಪಾಂಚಾಲರನ್ನು ರಕ್ಷಿಸಿ ಅವನಿಗೆ ಸಮ್ಮಾನಮಾಡಿಯಾಯಿತು. ಕಾಲನ ವಶರಾಗಿರುವ ಇವರು ಇನ್ನು ಜೀವಿತವಾಗಿರಲಾರರು!"

ಹೀಗೆ ಹೇಳಿ ಭಗವಾನನು ತನ್ನ ಶರೀರದಿಂದ ಅವನ ಶರೀರದೊಳಗೆ ಪ್ರವೇಶಿಸಿದನು ಮತ್ತು ಅವನಿಗೆ ಉತ್ತಮ ವಿಮಲಖಡ್ಗವನ್ನು ಪ್ರದಾನಿಸಿದನು. ಭಗವಂತನ ಆವೇಶವಾದೊಡನೆಯೇ ಅಶ್ವತ್ಥಾಮನು ಇನ್ನೂ ಹೆಚ್ಚು ತೇಜಸ್ಸಿನಿಂದ ಬೆಳಗಿದನು. ದೇವಸೃಷ್ಟಿಯ ತೇಜಸ್ಸಿನಿಂದ ಅವನು ಯುದ್ಧದಲ್ಲಿ ಕಲ್ಲಿನ ಅಂಶವೇ ಆದನು. ಸಾಕ್ಷಾದ್ ಈಶ್ವರನಂತೆ ಶತ್ರುಶಿಬಿರದೊಳಗೆ ಪ್ರವೇಶಿಸುತ್ತಿದ್ದ ಅವನನ್ನು ಅದೃಶ್ಯರೂಪದಲ್ಲಿ ಭೂತಗಣಗಳೂ ರಾಕ್ಷಸಗಣಗಳೂ ಅನುಸರಿಸಿ ಹೋದರು.

## ಹದಿನೆಂಟನೆಯ ದಿನದ ರಾತ್ರಿಯುದ್ಧ

ಮಹಾತ್ಮ ದ್ರೋಣಪುತ್ರನು ಆ ಶಿಬಿರವನ್ನು ಪ್ರವೇಶಿಸಲಾಗಿ ಕೃಪ ಮತ್ತು ಕೃತವರ್ಮರು ಶಿಬಿರದ್ವಾರದಲ್ಲಿಯೇ ಉಳಿದುಕೊಂಡರು. ಪ್ರಯತ್ನಶೀಲರಾದ ಆ ಮಹರಥರಿಬ್ಬರನ್ನೂ ನೋಡಿ ಪ್ರಹೃಷ್ಟನಾದ ಅಶ್ವತ್ಥಾಮನು ಮೆಲ್ಲನೇ ಈ ಮಾತನ್ನಾಡಿದನು:

> "ಪ್ರಯತ್ನಶೀಲರಾದ ನೀವಿಬ್ಬರೂ ಸರ್ವಕ್ಷತ್ರಿಯರ ನಾಶಕ್ಕೆ ಸಮರ್ಥರಾಗಿರುವಿರಿ. ಹೀಗಿರುವಾಗ ಅಳಿದುಳಿದವರ ಮತ್ತು ಅದರಲ್ಲೂ ವಿಶೇಷವಾಗಿ ಮಲಗಿರುವವರ ನಾಶದ ಕುರಿತು ಹೇಳುವುದೇನಿದೆ? ನಾನು ಶಿಬಿರವನ್ನು ಪ್ರವೇಶಿಸಿ ಕಾಲನಂತೆ ಸಂಚರಿಸುತ್ತೇನೆ. ಆದರೆ ನನ್ನಿಂದ ಯಾವನೊಬ್ಬ ಮಾನವನೂ ಜೀವಂತನಾಗಿ ತಪ್ಪಿಸಿಕೊಂಡು ಹೋಗಬಾರದು!"

ಹೀಗೆ ಹೇಳಿ ದ್ರೌಣಿಯು ಪಾರ್ಥರ ಅ ಮಹಾ ಶಿಬಿರವನ್ನು ದ್ವಾರದ ಮೂಲಕವಾಗಿ ಹೋಗದೇ ಬೇರೊಂದು ಕಡೆಯಿಂದ ನೆಗೆದು, ತನಗಾಗಿ ಸ್ವಲ್ಪವೂ ಭಯಗೊಳ್ಳದೇ, ಪ್ರವೇಶಿಸಿದನು. ಆ ಬಿಡಾರವನ್ನು ಚೆನ್ನಾಗಿ ತಿಳಿದಿದ್ದ ಮಹಾಬಾಹುವು ಮೆಲ್ಲನೇ ಧೃಷ್ಟದ್ಯುಮ್ನನ ನಿಲಯದ ಬಳಿಸಾರಿದನು. ಅವನಾದರೋ ರಣದಲ್ಲಿ ಬಲವನ್ನುಪಯೋಗಿಸಿ ಮಹಾಕರ್ಮಗಳನ್ನೆಸಗಿ ಬಳಲಿ ಸ್ವಸೈನ್ಯದಿಂದ ಸುತ್ತುವರೆಯಲ್ಪಟ್ಟು ಸಂಪೂರ್ಣ ವಿಶ್ವಾಸದಿಂದ ಮಲಗಿದ್ದನು. ಧೃಷ್ಟದ್ಯುಮ್ನನ ಆ

ನಿಲಯವನ್ನು ಪ್ರವೇಶಿಸಿ ದ್ರೌಣಿಯು ಶಯನದಲ್ಲಿ ಮಲಗಿದ್ದ ಪಾಂಚಾಲ್ಯನನ್ನು ಹತ್ತಿರದಿಂದ ನೋಡಿದನು. ಅವನು ಶ್ರೇಷ್ಠ ಹೂವಿನ ಹಾರಗಳಿಂದ ಸಮಲಂಕೃತನಾಗಿದ್ದನು. ಧೂಪ-ಚಂದನ-ಚೂರ್ಣಗಳಿಂದ ಸುವಾಸಿತವಾಗಿದ್ದ ಬಹುಮೂಲ್ಯ ಹಚ್ಚಡವನ್ನು ಹೊದ್ದು ಶುದ್ಧ ರೇಷ್ಮೆಯಿಂದ ಮಾಡಲ್ಪಟ್ಟ ದೊಡ್ಡ ಹಾಸಿಗೆಯ ಮೇಲೆ ಮಲಗಿದ್ದನು. ನಿಶ್ಚಿಂತನಾಗಿ ಭಯರಹಿತನಾಗಿ ಹಾಸಿಗೆಯ ಮೇಲೆ ಮಲಗಿದ್ದ ಆ ಮಹಾತ್ಮನನ್ನು ಅವನು ಕಾಲಿನಿಂದ ಒದೆದು ಎಬ್ಬಿಸಿದನು. ಚರಣಸ್ಪರ್ಶದಿಂದ ಎಚ್ಚೆದ್ದ ಅಮೇಯಾತ್ಮ ರಣದುರ್ಮದನು ಮಹಾರಥ ದ್ರೋಣಪುತ್ರನನ್ನು ಗುರುತಿಸಿದನು. ಶಯನದಿಂದ ಮೇಲೇಳುತ್ತಿದ್ದ ಅವನನ್ನು ಮಹಾಬಲ ಅಶ್ವತ್ಥಾಮನು ತನ್ನೆರಡು ಕೈಗಳಿಂದ ಅವನ ತಲೆಗೂದಲನ್ನು ಹಿಡಿದು ಮೇಲೆತ್ತಿ ಅತ್ಯಂತ ರಭಸದಿಂದ ನೆಲಕ್ಕೆ ಅಪ್ಪಳಿಸಿದನು. ಬಲಪೂರ್ವಕವಾಗಿ ಒಮ್ಮಿಂದೊಮ್ಮೆಲೇ ಅಪ್ಪಳಿಸಲ್ಪಟ್ಟ ಪಾಂಚಾಲ್ಯನು ನಿದ್ರೆಯ ಜಡದಿಂದಾಗಿ ಅವನಿಂತ ತಪ್ಪಿಸಿಕೊಳ್ಳಲು ಅಶಕ್ಯನಾದನು. ಅವನ ಕಂಠ ಮತ್ತು ಎದೆಯನ್ನು ಎರಡೂ ಪಾದಗಳಿಂದ ಮೆಟ್ಟಿ ಹಿಡಿದು ಅಶ್ವತ್ಥಾಮನು ಚಡಪಡಿಸುತ್ತಿದ್ದ ಮತ್ತು ಕೂಗಿಕೊಳ್ಳುತ್ತಿದ್ದ ಧೃಷ್ಟದ್ಯುಮ್ನನನ್ನು ಪಶುವಂತೆ ಹೊಡೆಯತೊಡಗಿದನು. ತನ್ನ ಉಗುರುಗಳಿಂದಲೇ ದ್ರೌಣಿಯನ್ನು ಪರಚುತ್ತಾ ಧೃಷ್ಟದ್ಯುಮ್ನನು

ಅಸ್ಪಷ್ಟವಾಗಿ ಕೂಗಿಕೊಂಡನು:

> “ಆಚಾರ್ಯಪುತ್ರ! ಬೇಗನೇ ಶಸ್ತ್ರದಿಂದ ನನ್ನನ್ನು ಕೊಲ್ಲು! ನೀನು ಹೀಗೆ ಮಾಡಿದರೆ ನಾನು ಸುಕೃತರ ಲೋಕಗಳಿಗೆ ಹೋಗಬಲ್ಲೆ!”

ಅವನ ಆ ಅವ್ಯಕ್ತ ಮಾತುಗಳನ್ನು ಕೇಳಿ ದ್ರೌಣಿಯು ಹೇಳಿದನು:

> “ಕುಲಪಾಂಸಕನೇ! ಆಚಾರ್ಯರನ್ನು ಸಂಹರಿಸಿದವರಿಗೆ ಯಾವ ಪುಣ್ಯ ಲೋಕಗಳೂ ಇಲ್ಲ! ಆದುದರಿಂದ ದುರ್ಮತೇ! ನೀನು ಶಸ್ತ್ರದಿಂದಾದ ವಧೆಗೆ ಅರ್ಹನಲ್ಲ!”

ಹೀಗೆ ಹೇಳುತ್ತಾ ಆ ಕ್ರುದ್ಧ ವೀರನು ಮದಿಸಿದ ಆನೆಯು ಸಿಂಹವನ್ನು ಹೇಗೋ ಹಾಗೆ ಭಯಂಕರ ಕಾಲುಗಳಿಂದ, ಮೊಣಕಾಲುಗಳಿಂದ ಮತ್ತು ಮಂಡಿಗಳಿಂದ ಅವನ ಮರ್ಮಸ್ಥಾನಗಳಲ್ಲಿ ಪ್ರಹರಿಸಿ ಸಂಹರಿಸಿದನು.

ವಧಿಸಲ್ಪಡುತ್ತಿದ್ದ ಆ ವೀರನ ಶಬ್ಧದಿಂದ ನಿವಾಸದಲ್ಲಿದ್ದ ಸ್ತ್ರೀಯರು ಮತ್ತು ಅನ್ಯ ರಕ್ಷಕರು ಎಚ್ಚೆತ್ತರು. ಪ್ರಹರಿಸುತ್ತಿದ್ದ ಆ ಅತಿಮಾನುಷ ವಿಕ್ರಮನನ್ನು ನೋಡಿ ಇವನು ಯಾವುದೋ ಭೂತವಿರಬಹುದೆಂದು ಬಗೆದು ಭಯದಿಂದ ಉದ್ವಿಗ್ನರಾಗಿ ಮಾತೇ ಹೊರಡದೇ ಸುಮ್ಮನಾಗಿದ್ದರು. ತನ್ನ ಉಪಾಯದಂತೆ ಅವನನ್ನು ಯಮಕ್ಷಯಕ್ಕೆ



ಕಳುಹಿಸಿ ಆ ತೇಜಸ್ವೀ ಅಶ್ವತ್ಥಾಮನು ತನ್ನ ಸುಂದರ ರಥದ ಬಳಿಬಂದು ಅದನ್ನೇರಿದನು. ಶತ್ರುಗಳನ್ನು ಸಂಹರಿಸಲು ಬಯಸಿದ್ದ ಆ ಬಲಶಾಲಿಯು ಅವನ ಭವನದಿಂದ ಹೊರಬಂದು ರಥದಿಂದ ದಿಕ್ಕುಗಳನ್ನು ಮೊಳಗಿಸುತ್ತಾ ಇನ್ನೊಂದು ಶಿಬಿರವನ್ನು ಪ್ರವೇಶಿಸಿದನು. ಮಹಾರಥ ದ್ರೋಣಪುತ್ರನು ಹೊರಟುಹೋಗಲು ಅಲ್ಲಿದ್ದ ರಕ್ಷಕರೆಲ್ಲರೂ ಸ್ತ್ರೀಯರೊಂದಿಗೆ ಗಟ್ಟಿಯಾಗಿ ಅಳತೊಡಗಿದರು. ರಾಜನು ಹತನಾದುದನ್ನು ನೋಡಿ ಅತ್ಯಂತ ಶೋಕಪರಾಯಣರಾದ ಧೃಷ್ಟದ್ಯುಮ್ನನ ಕ್ಷತ್ರಿಯರೆಲ್ಲರೂ ಕೂಗಿಕೊಳ್ಳತೊಡಗಿದರು.

ಅವರ ಆ ಶಬ್ಧದಿಂದಾಗಿ ಸಮೀಪದಲ್ಲಿದ್ದ ಕ್ಷತ್ರಿಯರ್ಷಭರು ಬೇಗನೆ

ಸನ್ನದ್ಧರಾಗಿ ಇದೇನೆಂದು ವಿಚಾರಿಸತೊಡಗಿದರು. ಭಾರದ್ವಾಜ ಅಶ್ವತ್ಥಾಮನನ್ನು ನೋಡಿ ಭಯಭೀತರಾದ ಸ್ತ್ರೀಯರಾದರೋ ದೀನಕಂಠದಿಂದ “ಬೇಗನೇ ಓಡಿಹೋಗಿರಿ!” ಎಂದು ಕೂಗಿಕೊಂಡರು.

> “ಪಾಂಚಾಲರಾಜನನ್ನು ಸಂಹರಿಸಿ ರಥವನ್ನೇರಿ
> ನಿಂತಿರುವವನು ರಾಕ್ಷಸನೋ ಅಥವಾ ಮನುಷ್ಯನೋ
> ಎನ್ನುವುದನ್ನು ನಾವು ತಿಳಿಯಲಾರೆವು!”

ಆಗ ಆ ಯೋಧಮುಖ್ಯರು ಒಡನೆಯೇ ಅಶ್ವತ್ಥಾಮನನ್ನು ಸುತ್ತುವರೆಯಲು ಅವನು ರುದ್ರಾಸ್ತ್ರದಿಂದ ತನ್ನ ಮೇಲೆ ಆಕ್ರಮಣಿಸುತ್ತಿದ್ದ ಅವರೆಲ್ಲರನ್ನೂ ಸಂಹರಿಸಿದನು. ಧೃಷ್ಟದ್ಯುಮ್ನ ಮತ್ತು ಅವನ ಅನುಯಾಯಿಗಳನ್ನು ಸಂಹರಿಸಿ ಅವನು ಶಯನದಲ್ಲಿ ಮಲಗಿದ್ದ ಉತ್ತಮೌಜಸನನ್ನು ಹತ್ತಿರದಿಂದ ನೋಡಿದನು. ಓಜಸ್ಸಿನಿಂದ ಮತ್ತು ಪಾದದಿಂದ ಅವನ ಕಂಠ ಮತ್ತು ಎದೆಗಳನ್ನು ಮೆಟ್ಟಿ ಧೃಷ್ಟದ್ಯುಮ್ನನನ್ನು ಕೊಂದ ಹಾಗೆಯೇ ಕೂಗಿಕೊಳ್ಳುತ್ತಿದ್ದ ಆ ಅರಿಂದಮನನ್ನು ಸಂಹರಿಸಿದನು.

ಉತ್ತಮೌಜಸನು ರಾಕ್ಷಸನಿಂದ ಹತನಾದನೆಂದು ತಿಳಿದ ಯುಧಾಮನ್ಯುವು ಗದೆಯನ್ನು ಮೇಲೆತ್ತಿ ವೇಗದಿಂದ ದ್ರೌಣಿಯ ಎದೆಗೆ ಅಪ್ಪಳಿಸಿದನು. ಮುಂದೆ ಧಾವಿಸಿ ಬಂದ ಯುಧಾಮನ್ಯುವನ್ನೂ ಹಿಡಿದು



ನೆಲದ ಮೇಲೆ ಬೀಳಿಸಿ ವಿಲಿವಿಲಿ ಒದ್ದಾಡುತ್ತಿರುವ ಅವನನ್ನು ಪಶುವಂತೆ ಹೊಡೆದು ಸಂಹರಿಸಿದನು. ಅವನನ್ನು ಕೊಂದ ಹಾಗೆಯೇ ಆ ವೀರನು ಅಲ್ಲಲ್ಲಿ ಮಲಗಿದ್ದ ಇತರ ಮಹಾರಥರನ್ನೂ ವಿಲಿವಿಲಿ ಒದ್ದಾಡುವಂತೆ ಮಾಡಿ ಯಜ್ಞದಲ್ಲಿ ಪಶುಗಳನ್ನು ಹೇಗೋ ಹಾಗೆ ಹಿಸುಕಿ ಸಂಹರಿಸಿದನು. ಆಗ ಆ ಖಡ್ಗಯುದ್ಧವಿಶಾರದನು ಖಡ್ಗವನ್ನು

ತೆಗೆದುಕೊಂಡು ಶಿಬಿರದ ಒಂದೊಂದು ಭಾಗದಲ್ಲಿಯೂ ಪ್ರತ್ಯೇಕ ಪ್ರತ್ಯೇಕ ಮಾರ್ಗಗಳಲ್ಲಿ ಸಂಚರಿಸುತ್ತಾ ಅನ್ಯರನ್ನೂ ಸಂಹರಿಸಿದನು. ಹಾಗೆಯೇ ಆಯುಧಗಳನ್ನು ಕೆಳಗಿಟ್ಟು ಬಳಲಿ ಮಲಗಿದ್ದ ಮಧ್ಯಗೌಲ್ಮಿಕರ ಗುಲ್ಮವನ್ನು ನೋಡಿ ಅವರೆಲ್ಲರನ್ನೂ ಕ್ಷಣಮಾತ್ರದಲ್ಲಿ ಸಂಹರಿಸಿದನು. ಶ್ರೇಷ್ಠ ಖಡ್ಗದಿಂದ ಯೋಧರನ್ನೂ, ಕುದುರೆಗಳನ್ನೂ ಮತ್ತು ಆನೆಗಳನ್ನೂ ತುಂಡರಿಸುತ್ತಿದ್ದ ಅವನ ಸರ್ವಾಂಗಗಳೂ ರಕ್ತದಿಂದ ತೋಯ್ದು ಕಾಲವು ಸೃಷ್ಟಿಸಿದ ಅಂತಕನಂತೆಯೇ ತೋರುತ್ತಿದ್ದನು. ಅವರು ವಿಲವಿಲನೆ ಒದ್ದಾಡುತ್ತಿರುವುದರಿಂದ, ಕತ್ತಿಯನ್ನು ಬಾರಿ ಬಾರಿ ಮೇಲೆತ್ತುತ್ತಿದ್ದುದರಿಂದ ಮತ್ತು ಖಡ್ಗವನ್ನು ಪ್ರಹರಿಸುತ್ತಿದ್ದುದರಿಂದ – ಈ ಮೂರು ಕಾರಣಗಳಿಂದ ಅವನು ರಕ್ತಸಿಕ್ತನಾದನು.

ಕೆಂಪುಬಣ್ಣವನ್ನು ತಾಳಿದ್ದ ಅವನ ದೇಹ ಮತ್ತು ಯುದ್ಧದಲ್ಲಿ ಬಳಸುತ್ತಿದ್ದ ಕೆಂಪಾಗಿ ಹೊಳೆಯುತ್ತಿದ್ದ ಖಡ್ಗದಿಂದ ಅವನು ಪರಮ ಭೀಷಣ ಅಮಾನುಷ ಆಕಾರವನ್ನು ತಾಳಿದನು. ಅವರು ಕೂಡ ಶಬ್ಧದಿಂದ ಮೋಹಿತರಾಗಿ ಎಚ್ಚೆತ್ತು ಅನ್ಯೋನ್ಯರನ್ನು ನಿರೀಕ್ಷಿಸುತ್ತಾ ದ್ರೌಣಿಯನ್ನು ನೋಡಿ ವ್ಯಥಿತರಾದರು. ಅವನ ಆ ರೂಪವನ್ನು ನೋಡಿ ಶತ್ರುಕರ್ಶನ ಕ್ಷತ್ರಿಯರು ಅವನೊಬ್ಬ ರಾಕ್ಷಸನೆಂದೇ ತಿಳಿದು ಕಣ್ಣುಗಳನ್ನು ಮುಚ್ಚಿಕೊಂಡರು. ಘೋರರೂಪದ ಕಾಲನಂತೆ

ಶಿಬಿರದಲ್ಲಿ ಸಂಚರಿಸುತ್ತಿದ್ದ ಅವನನ್ನು ದ್ರೌಪದೀಪುತ್ರರು ಮತ್ತು ಅಳಿದುಳಿದ ಸೋಮಕರು ನೋಡಿದರು. ಅವನ ಶಬ್ಧದಿಂದ ಎಚ್ಚೆತ್ತ ಆ ಮಹಾರಥ ದ್ರೌಪದೇಯರು ಧೃಷ್ಟದ್ಯುಮ್ನನು ಹತನಾದುದನ್ನು ಕೇಳಿ ಧನುಸ್ಸನ್ನು ಹಿಡಿದು ಭಯಗೊಳ್ಳದೇ ಶರವ್ರಾತಗಳಿಂದ ಭಾರದ್ವಾಜ ಅಶ್ವತ್ಥಾಮನನ್ನು ಮುಸುಕಿದರು. ಅವರ ಆ ನಿನಾದದಿಂದ ಸಂಪೂರ್ಣವಾಗಿ ಎಚ್ಚೆತ್ತ ಪ್ರಭದ್ರಕರೂ ಮತ್ತು ಶಿಖಂಡಿಯೂ ದ್ರೋಣಪುತ್ರನನ್ನು ಶಿಲೀಮುಖಗಳಿಂದ ಪ್ರಹರಿಸಿದರು. ಭಾರದ್ವಾಜನಾದರೋ ಅವರನ್ನು ನೋಡಿ ಬಲವತ್ತಾಗಿ ನಿನಾದಿಸಿ ಶರವರ್ಷಗಳನ್ನು ಸುರಿಸಿ ಆ ಸುದುರ್ಜಯರನ್ನು ಸಂಹರಿಸಿದನು. ಆಗ ತಂದೆಯ ವಧೆಯನ್ನು ನೆನಪಿಸಿಕೊಂಡು ಪರಮ ಸಂಕ್ರುದ್ಧನಾದ ಅಶ್ವತ್ಥಾಮನು ರಥದಿಂದ ಕೆಳಗಿಳಿದು ತ್ವರೆಮಾಡಿ ಆಕ್ರಮಣಿಸಿದನು.

ಸಹಸ್ರಚಂದ್ರಗಳುಳ್ಳ ವಿಶಾಲ ಗುರಾಣಿಯನ್ನು ಮತ್ತು ಬಂಗಾರದಿಂದ ಪರಿಷ್ಕೃತಗೊಂಡಿದ್ದ ವಿಶಾಲ ದಿವ್ಯ ಖಡ್ಗವನ್ನು ಹಿಡಿದು ಬಲಶಾಲೀ ಅಶ್ವತ್ಥಾಮನು ಸಂಯುಗದಲ್ಲಿ ದ್ರೌಪದೇಯರನ್ನು ಖಡ್ಗದಿಂದ ಆಕ್ರಮಣಿಸುತ್ತಾ ಸಂಚರಿಸಿದನು. ಆಗ ಆ ನರಶಾರ್ದೂಲನು ರಣದಲ್ಲಿ ಪ್ರತಿವಿಂಧ್ಯನ ಹೊಟ್ಟೆಯನ್ನು ತಿವಿಯಲು ಅವನು ಹತನಾಗಿ ಭೂಮಿಯ ಮೇಲೆ ಬಿದ್ದನು. ಪ್ರತಾಪವಾನ್ ಸುತಸೋಮನಾದರೋ ದ್ರೌಣಿಯನ್ನು ಪ್ರಾಸದಿಂದ ಹೊಡೆದು ಪುನಃ ಖಡ್ಗವನ್ನೆತ್ತಿ ದ್ರೋಣಪುತ್ರನನ್ನು

ಆಕ್ರಮಣಿಸಿದನು. ನರರ್ಷಭನು ಖಡ್ಗವನ್ನು ಹಿಡಿದಿದ್ದ ಸುತಸೋಮನ ಬಾಹುವನ್ನು ಕತ್ತರಿಸಿ ಪುನಃ ಅವನ ಪಕ್ಕೆಗೆ ಹೊಡೆಯಲು ಅವನು ಹೃದಯವೊಡೆದು ಬಿದ್ದನು. ವೀರ್ಯವಾನ್ ನಾಕುಲಿ ಶತಾನೀಕನಾದರೋ ತನ್ನೆರಡು ಭುಜಗಳಿಂದಲೂ ರಥಚಕ್ರವನ್ನು ಮೇಲೆತ್ತಿ ರಭಸದಿಂದ ಅಶ್ವತ್ಥಾಮನ ಎದೆಯಮೇಲೆ ಪ್ರಹರಿಸಿದನು. ಆ ದ್ವಿಜನಾದರೋ ಚಕ್ರವನ್ನು ಬಿಸುಟ ಶತಾನೀಕನನ್ನು ಹೊಡೆಯಲು ಅವನು ವಿಹ್ವಲನಾಗಿ ಭೂಮಿಯ ಮೇಲೆ ಬೀಳಿಸಿ ಅವನ ಶಿರವನ್ನು ಅಪಹರಿಸಿದನು. ಆಗ ಶ್ರುತಕರ್ಮನು ಪರಿಘವನ್ನು ಹಿಡಿದು ದ್ರೌಣಿಯನ್ನು ಬೆನ್ನಟ್ಟಿ ಅವನ ಎಡಗೈಯನ್ನು ಬಲವಾಗಿ ಪ್ರಹರಿಸಿದನು. ಅಶ್ವತ್ಥಾಮನಾದರೋ ಶ್ರುತಕರ್ಮನನ್ನು ಶ್ರೇಷ್ಠ ಖಡ್ಗದಿಂದ ಹೊಡೆದು ಸಂಹರಿಸಲು ಅವನು ಹತನಾಗಿ ವಿಕೃತ ಮುಖವುಳ್ಳವನಾಗಿ ವಿಮೂಢನಾಗಿ ನೆಲದ ಮೇಲೆ ಬಿದ್ದನು.ಆ ಶಬ್ಧವನ್ನು ಕೇಳಿದ ಮಹಾಧನ್ವಿ ವೀರ ಶ್ರುತಕೀರ್ತಿಯು ಅಶ್ವತ್ಥಾಮನ ಬಳಿಸಾರಿ ಅವನನ್ನು ಶರವರ್ಷಗಳಿಂದ ಮುಚ್ಚಿದನು. ಅವನ ಶರವರ್ಷಗಳನ್ನು ಕೂಡ ಗುರಾಣಿಯಿಂದ ತಡೆದು ಅಶ್ವತ್ಥಾಮನು ಕುಂಡಲಗಳೊಂದಿಗೆ ಹೊಳೆಯುತ್ತಿದ್ದ ಅವನ ಶಿರವನ್ನು ಶರೀರದಿಂದ ಬೇರ್ಪಡಿಸಿದನು.

ಆಗ ಭೀಷ್ಮಹಂತಕ ಶಿಖಂಡಿಯು ಸರ್ವ ಪ್ರಭದ್ರಕರೊಂದಿಗೆ ನಾನಾ ಪ್ರಹರಣಗಳಿಂದ ಬಲಶಾಲೀ ಅಶ್ವತ್ಥಾಮನನ್ನು ಎಲ್ಲ ಕಡೆಗಳಿಂದ

ಮುತ್ತಿದನು. ಮತ್ತು ಶಿಲೀಮುಖದಿಂದ ಅವನ ಹುಬ್ಬುಗಳ ಮಧ್ಯೆ ಹೊಡೆದನು. ಅದರಿಂದ ಕ್ರೋಧಸಮಾವಿಷ್ಟನಾದ ಮಹಾಬಲಿ ದ್ರೋಣಪುತ್ರನು ಶಿಖಂಡಿಯ ಬಳಿಸಾರಿ ಖಡ್ಗದಿಂದ ಅವನನ್ನು ಎರಡಾಗಿ ಸೀಳಿದನು. ಶಿಖಂಡಿಯನ್ನು ಸಂಹರಿಸಿ ಕ್ರೋಧಾವಿಷ್ಟನಾದ ವೇಗವಾನ್ ಪರಂತಪನು ಪ್ರಭದ್ರಕ ಗಣಗಳೆಲ್ಲವನ್ನೂ ಆಕ್ರಮಣಿಸಿದನು. ಹಾಗೆಯೇ ಉಳಿದಿದ್ದ ವಿರಾಟನ ಸೇನೆಯನ್ನೂ ಆಕ್ರಮಣಿಸಿದನು. ಆ ಮಹಾಬಲನು ದ್ರುಪದನ ಪುತ್ರರು, ಪೌತ್ರರು ಮತ್ತು ಸುಹೃದರನ್ನು ಬಿಡದೇ ಹುಡುಕಿ ಹುಡುಕಿ ಘೋರ ಕದನವನ್ನು ನಡೆಸಿದನು. ಖಡ್ಗಪ್ರಹರಣದಲ್ಲಿ ವಿಶಾರದನಾದ ದ್ರೌಣಿಯು ಅನ್ಯ ಯೋಧರ ಬಳಿಗೆ ಹೋಗಿ ನಿದ್ರಿಸುತ್ತಿದ್ದ ಎಲ್ಲರನ್ನೂ ಕತ್ತಿಯಿಂದ ಕತ್ತರಿಸಿ ಹಾಕಿದನು.

ಅವರು ನಸುನಗುತ್ತಾ ಕುಳಿತಿರುವ, ಕೆಂಪು ಮುಖ ಮತ್ತು ಕಣ್ಣುಗಳುಳ್ಳ, ಕೆಂಪು ಮಾಲೆ ಮತ್ತು ಲೇಪನಗಳನ್ನು ಧರಿಸಿರುವ, ಕೆಂಪು ವಸ್ತ್ರವನ್ನು ಉಟ್ಟಿರುವ, ಪಾಶವನ್ನು ಹಿಡಿದಿರುವ ಏಕಾಂಗೀ, ಶಿಖಂಡಿನೀ, ಕಾಲೀ ಕಾಲರಾತ್ರಿಯನ್ನು ನೋಡಿದರು. ಅವಳು ಮನುಷ್ಯ-ಕುದುರೆ-ಕುಂಜರಗಳನ್ನು ಪಾಶಗಳಲ್ಲಿ ಕಟ್ಟಿ ಎಳೆದುಕೊಂಡು ಹೋಗುತ್ತಿದ್ದಳು. ಅವಳು ಬೋಳುತಲೆಯ ವಿವಿಧ ಪ್ರೇತಗಳನ್ನು ಪಾಶಗಳಲ್ಲಿ ಬಂಧಿಸಿ ಸೆಳೆದುಕೊಂಡು ಹೋಗುತ್ತಿದ್ದಳು. ಆ ಯೋಧಪ್ರಮುಖರು ಮಲಗಿದ್ದಾಗ

ನಿತ್ಯವೂ ಕೊಂಡೊಯ್ಯುತ್ತಿದ್ದ ಕಾಳಿಯನ್ನು ಮತ್ತು ಸಂಹರಿಸುತ್ತಿದ್ದ ದ್ರೌಣಿಯನ್ನು ಸ್ವಪ್ನದಲ್ಲಿ ಕಾಣುತ್ತಿದ್ದರು. ಕುರುಪಾಂಡವ ಸೇನೆಗಳ ಸಂಗ್ರಾಮವು ಪ್ರಾರಂಭವಾದಾಗಿನಿಂದಲೇ ಅವರು ಆ ಕಾಳಿಯ ಮತ್ತು ದ್ರೌಣಿಯ ಕೃತ್ಯಗಳನ್ನು ಕನಸಿನಲ್ಲಿ ಕಾಣುತ್ತಿದ್ದರು. ಮೊದಲೇ ದೈವದಿಂದ ಹತರಾದ ಅವರನ್ನು ದ್ರೌಣಿಯು ನಂತರ ಕೆಳಗುರುಳಿಸಿ, ಸರ್ವಭೂತಗಳನ್ನೂ ಭಯಗೊಳಿಸುವಂತೆ ಭೈರವ ಕೂಗನ್ನು ಕೂಗಿದನು. ದೈವದಿಂದ ಪೀಡಿತರಾದ ಆ ವೀರರು ಹಿಂದೆ ಕನಸಿನಲ್ಲಿ ಕಂಡ ಕಾಲಿಕೆಯನ್ನು ಸ್ಮರಿಸಿಕೊಂಡು ಇದು ಅದೇ ಎಂದು ಅಂದುಕೊಂಡರು. ಆಗ ಆ ಕೋಲಾಹಲದಿಂದ ಪಾಂಡವೇಯರ ಶಿಬಿರದಲ್ಲಿದ್ದ ನೂರಾರು ಸಹಸ್ರಾರು ಧನ್ವಿಗಳು ಎಚ್ಚೆತ್ತರು. ಕಾಲವು ಸೃಷ್ಟಿಸಿದ ಅಂತಕನಂತೆ ದ್ರೌಣಿಯು ಅವರಲ್ಲಿ ಕೆಲವರನ್ನು ತುಂಡರಿಸಿದನು. ಕೆಲವರನ್ನು ಪಾದಗಳಿಂದ ತುಳಿದು ಕೊಂದನು. ಇನ್ನು ಕೆಲವರನ್ನು ಪಕ್ಕೆಗಳಲ್ಲಿ ತಿವಿದು ಕೊಂದನು. ಆ ಶಿಬಿರ ಪ್ರದೇಶವು ಅತಿ ಉಗ್ರರೀತಿಯಲ್ಲಿ ಉಂಡೆಯಾಗಿಬಿಟ್ಟಿದ್ದ, ಆತುರದಿಂದ ಜೋರಾಗಿ ಕೂಗುತ್ತಿದ್ದ ಯೋಧರಿಂದಲೂ, ಅನ್ಯ ಆನೆ-ಕುದುರೆಗಳಿಂದಲೂ ತುಂಬಿಹೋಯಿತು.

> “ಇದೇನಿದು? ಇವನ್ಯಾರು? ಏನು ಶಬ್ಧ? ಇವನೇನು ಮಾಡುತ್ತಿರುವನು?”



ಎಂದು ಕೂಗಿಕೊಳ್ಳುತ್ತಿರುವ ಅವರಿಗೆ ದ್ರೌಣಿಯು ಅಂತಕನಾದನು.

ಪ್ರಹರಿಗಳಲ್ಲಿ ಶ್ರೇಷ್ಠ ದ್ರೌಣಿಯು ಶಸ್ತ್ರಗಳನ್ನು ಕೆಳಗಿಟ್ಟಿದ್ದ, ಶಸ್ತ್ರಗಳನ್ನು ತೊಟ್ಟಿದ್ದ ಆದರೆ ಗಾಬರಿಗೊಂಡಿದ್ದ ಪಾಂಡು-ಸೃಂಜಯರನ್ನು ಮೃತ್ಯುಲೋಕಕ್ಕೆ ಕಳುಹಿಸಿದನು. ನಿದ್ರೆಯಿಂದ ಕುರುಡರಾಗಿ ಸಂಜ್ಞೆಗಳನ್ನು ಕಳೆದುಕೊಂಡಿದ್ದ ಅವರು ಭಯಾತುರರಾಗಿ ಶಸ್ತ್ರಗಳನ್ನು ಅಲ್ಲಲ್ಲಿಯೇ ಬಿಸುಟು ಹಾರಿ ಅಲ್ಲಲ್ಲಿಯೇ ಅಡಗಿಕೊಳುತ್ತಿದ್ದರು. ಕೆಲವರ

ತೊಡೆಗಳು ಕಂಭಗಳಂತಾಗಿ ಬಗ್ಗಿಸಲಾಗದೇ ಹಿಡಿದುಕೊಂಡಿದ್ದವು. ದುಃಖದಿಂದ ಅವರ ಉತ್ಸಾಹಗಳು ಉಡುಗಿಹೋಗಿದ್ದವು. ನಡುಗಿ ಜೋರಾಗಿ ಕೂಗಿಕೊಳ್ಳುತ್ತಾ ಪರಸ್ಪರರನ್ನು ಅಪ್ಪಿಕೊಳ್ಳುತ್ತಿದ್ದರು. ಅನಂತರ ದ್ರೌಣಿಯು ಪುನಃ ಭಯಂಕರ ಶಬ್ಧವುಳ್ಳ ರಥವನ್ನೇರಿ ಧನುಷ್ಪಾಣಿಯಾಗಿ ಅನ್ಯರನ್ನೂ ಶರಗಳಿಂದ ಯಮಕ್ಷಯಕ್ಕೆ ಕಳುಹಿಸಿದನು. ಹಾರುತ್ತಿದ್ದ ಮತ್ತು ತನ್ನ ಮೇಲೆ ಬೀಳುತ್ತಿದ್ದ ನರೋತ್ತಮ ಶೂರರನ್ನು ಅವರೆಷ್ಟೇ ದೂರದಲ್ಲಿದ್ದರೂ ಸಂಹರಿಸಿ ಕಾಲರಾತ್ರಿಗೆ ನಿವೇದಿಸುತ್ತಿದ್ದನು. ಅದೇ ರೀತಿಯಲ್ಲಿ ರಥದ ಎದಿರು ನಿಂತ ಶತ್ರುಗಳನ್ನು ಮರ್ದಿಸಿದನು. ವಿವಧ ಶರವರ್ಷಗಳನ್ನು ಅವರ ಮೇಲೆ ಸುರಿಸಿದನು. ಪುನಃ ಅವನು ಶತಚಂದ್ರರ ಚಿತ್ರಗಳಿರುವ ಗುರಾಣಿಯನ್ನೂ ಆಕಾಶವರ್ಣದ ಖಡ್ಗವನ್ನೂ ತಿರುಗಿಸುತ್ತಾ ಸಂಚರಿಸುತ್ತಿದ್ದನು. ಹಾಗೆ ಯುದ್ಧದುರ್ಮದ ದ್ರೌಣಿಯು ಆ ಶಿಬಿರವನ್ನು ಒಂದು ಸಲಗವು ಮಹಾಸರೋವರವನ್ನು ಅಲ್ಲೋಲಕಲ್ಲೋಲಗೊಳಿಸುವಂತೆ ಧ್ವಂಸಮಾಡಿದನು. ನಿದ್ರೆ ಮತ್ತು ಬಳಲಿಕೆಯಿಂದ ವಿಚೇತಸರಾಗಿದ್ದ ಯೋಧರು ಆ ಶಬ್ಧದಿಂದ ಎಚ್ಚೆತ್ತು ಭಯಾರ್ತರಾಗಿ ಅಲ್ಲಿಂದಲ್ಲಿಗೆ ಓಡಿಹೋಗುತ್ತಿದ್ದರು. ಇತರರು ವಿಸ್ವರವಾಗಿ ಕೂಗಿಕೊಳ್ಳುತ್ತಿದ್ದರು. ಬಾಯಿಗೆ ಬಂದಂತೆ ಮಾತನಾಡಿಕೊಳ್ಳುತ್ತಿದ್ದರು. ಕೆಲವರಿಗೆ ಶಸ್ತ್ರಗಳಾಗಲೀ ಕವಚಗಳಾಗಲೀ

ದೊರೆಯುತ್ತಲೇ ಇರಲಿಲ್ಲ. ಕೆಲವರು ಕೂದಲುಬಿಚ್ಚಿಕೊಂಡಿದ್ದರು. ಇನ್ನು ಕೆಲವರು ಪರಸ್ಪರರನ್ನು ಗುರುತಿಸುತ್ತಿರಲಿಲ್ಲ. ಇತರರು ಭೀತರಾಗಿ ಕುಪ್ಪಳಿಸುತ್ತಿದ್ದರೆ ಇನ್ನು ಕೆಲವರು ಅಲ್ಲಲ್ಲಿಯೇ ಸುತ್ತುತ್ತಿದ್ದರು. ಕೆಲವರು ಮಲವಿಸರ್ಜನೆ ಮಾಡಿದರೆ ಇನ್ನು ಕೆಲವರು ಮೂತ್ರವಿಸರ್ಜನೆ ಮಾಡಿದರು. ಆನೆ-ಕುದುರೆಗಳು ಕಟ್ಟನ್ನು ಬಿಚ್ಚಿಕೊಂಡು ಓಡಿಹೋಗಲು ಅನ್ಯರಿಗೆ ಮಹಾ ವ್ಯಾಕುಲವನ್ನುಂಟುಮಾಡುತ್ತಿದ್ದವು. ಅಲ್ಲಿ ಕೆಲವರು ಭೀತರಾಗಿ ನೆಲದಮೇಲೆಯೇ ಅಡಗಿರಲು ಅವರನ್ನೇ ಓಡಿಹೋಗುತ್ತಿದ್ದ ಆನೆ-ಕುದುರೆಗಳು ತುಳಿದು ಸಾಯಿಸುತ್ತಿದ್ದವು. ಅಲ್ಲಿ ಹಾಗೆ ನಡೆಯುತ್ತಿರುವಾಗ ರಾಕ್ಷಸರು ತೃಪ್ತರಾಗಿ ಮುದದಿಂದ ನಾದಗೈಯುತ್ತಿದ್ದರು.

ಮುದಿತ ಭೂತಸಂಘಗಳಿಂದ ಪ್ರೇರಿತ ಆ ಶಬ್ಧವು ಜೋರಾಗಿ ದಿಕ್ಕುಗಳೆಲ್ಲವನ್ನೂ ಆಕಾಶವನ್ನೂ ತುಂಬಿತು. ಅವರ ಆರ್ತಸ್ವರವನ್ನು ಕೇಳಿ ಬೆದರಿದ ಆನೆ-ಕುದುರೆಗಳು ಕಟ್ಟುಗಳನ್ನು ಕಿತ್ತುಕೊಂಡು ಶಿಬಿರದಲ್ಲಿದ್ದ ಜನರನ್ನು ತುಳಿದು ನಾಶಗೊಳಿಸಿದವು. ಅಲ್ಲಿ ಓಡಿಹೋಗುತ್ತಿದ್ದ ಅವುಗಳ ಕಾಲುಗಳಿಂದ ಮೇಲೇರಿದ ಧೂಳು ಶಿಬಿರದಲ್ಲಿ ಕವಿದ ರಾತ್ರಿಯ ಕತ್ತಲೆಯನ್ನು ದ್ವಿಗುಣಗೊಳಿಸಿತು. ಹಾಗೆ ಕಪ್ಪಾಗಲು ಎಲ್ಲಕಡೆ ಜನರು ಪ್ರಮೂಢರಾದರು. ತಂದೆಯಂದಿರು ಮಕ್ಕಳನ್ನೂ ಸಹೋದರರು ಸಹೋದರರನ್ನೂ ಗುರುತಿಸಲಾರದೇ

ಹೋದರು. ಸವಾರರಿಲ್ಲದ ಆನೆಗಳು ಆನೆಗಳನ್ನು ಮತ್ತು ಕುದುರೆಗಳು ಕುದುರೆಗಳನ್ನು ಆಕ್ರಮಿಣಿಸಿ, ಕಾಲಿನಿಂದ ತುಳಿದು ನಾಶಗೊಳಿಸುತ್ತಿದ್ದವು. ಅವುಗಳು ಪರಸ್ಪರರನ್ನು ಒಡೆದು ಕೆಳಗುರುಳಿಸುತ್ತಿದ್ದವು ಮತ್ತು ಕೊಲ್ಲುತ್ತಿದ್ದವು. ಇತರರನ್ನು ಕೆಳಗೆ ಬೀಳಿಸಿ ತುಳಿದು ಸಾಯಿಸುತ್ತಿದ್ದವು. ಕಾಲನಿಂದ ಪ್ರಚೋದಿತರಾದ ಆ ನರರು ಕತ್ತಲೆಯಿಂದ ಆವೃತರಾಗಿ ಮತ್ತು ನಿದ್ರೆಯಿಂದ ಬುದ್ಧಿಕಳೆದುಕೊಂಡು ತಮ್ಮವರನ್ನೇ ಕೊಲ್ಲುತ್ತಿದ್ದರು. ದ್ವಾರಪಾಲಕರು ದ್ವಾರಗಳನ್ನು ಮತ್ತು ಗೌಲ್ಮಿಕರು ಗುಲ್ಮಗಳನ್ನು ಬಿಟ್ಟು ಯಥಾಶಕ್ತಿಯಾಗಿ, ಯಾವ ದಿಕ್ಕಿನಲ್ಲಿ ಓಡಿಹೋಗುತ್ತಿದ್ದೇವೆಂಬ ವಿಚಾರವಿಲ್ಲದೇ, ಓಡುತ್ತಿದ್ದರು. ಅವರು ಅನ್ಯೋನ್ಯರನ್ನು ಗುರುತಿಸದೇ ಸಂಹರಿಸುತ್ತಿದ್ದರು. ದೈವದಿಂದಾಗಿ ಬುದ್ಧಿಯನ್ನೇ ಕಳೆದುಕೊಂಡು ಅಪ್ಪಾ! ಮಗನೇ! ಎಂದು ಕೂಗಿಕೊಳ್ಳುತ್ತಿದ್ದರು. ಮಲಗಿದ್ದ ಬಾಂಧವರನ್ನೂ ಬಿಟ್ಟು ದಿಕ್ಕಾಪಾಲಾಗಿ ಓಡಿ ಹೋಗುತ್ತಿದ್ದರು. ಆಗ ಜನರು ಗೋತ್ರ-ನಾಮಗಳನ್ನು ಹೇಳಿಕೊಂಡು ಅನ್ಯೋನ್ಯರನ್ನು ಕರೆಯುತ್ತಿದ್ದರು. ಕೆಲವರು ಹಾಹಾಕಾರವನ್ನು ಮಾಡುತ್ತಾ ನೆಲದಮೇಲೆ ಮಲಗಿಕೊಂಡಿದ್ದರು. ರಣಮತ್ತ ದ್ರೋಣಪುತ್ರನು ಅವರೆಲ್ಲಿರುವರೆಂದು ತಿಳಿದು ತುಳಿದು ಕೊಲ್ಲುತ್ತಿದ್ದನು. ಪುನಃ ಪುನಃ ಅವನಿಂದ ವಧಿಸಲ್ಪಡುತ್ತಿದ್ದ ಇನ್ನು ಕೆಲವು ಕ್ಷತ್ರಿಯರು ಭಯಪೀಡಿತರಾಗಿ ಶಿಬಿರದಿಂದ ಹೊರಗೆ ಹೋಗಲು

ಪ್ರಯತ್ನಿಸುತ್ತಿದ್ದರು. ಜೀವದ ಆಸೆಯಿಂದ ಶಿಬಿರದ ಹೊರಗೆ ಹೋಗಲು ಪ್ರಯತ್ನಿಸುತ್ತಿದ್ದ ಅವರನ್ನು ಕೃತವರ್ಮ ಮತ್ತು ಕೃಪರು ದ್ವಾರಪ್ರದೇಶದಲ್ಲಿಯೇ ಕೊಲ್ಲುತ್ತಿದ್ದರು. ಅವರ ಯಂತ್ರ-ಕವಚಗಳು ಕಳಚಿಹೋಗಿದ್ದವು. ಕೂದಲು ಕೆದರಿದ್ದವು. ಕೆಲವರು ಬಿಟ್ಟುಬಿಡಿರೆಂದು ಕೈಮುಗಿದು ಭಯದಿಂದ ನಡುಗುತ್ತಾ ನೆಲದಲ್ಲಿ ಉರುಳುತ್ತಿದ್ದರು.

ಆದರೆ ದುರ್ಮತಿ ಕೃಪ ಮತ್ತು ಹಾರ್ದಿಕರು ಅವರಲ್ಲಿ ಯಾರನ್ನೂ ಶಿಬಿರದಿಂದ ಹೊರಗೆ ಹೋಗಲು ಬಿಡಲಿಲ್ಲ. ಅದಕ್ಕೂ ಹೆಚ್ಚಾಗಿ ದ್ರೋಣಪುತ್ರನಿಗೆ ಪ್ರಿಯವಾದುದನ್ನು ಮಾಡಲು ಬಯಸಿ ಶಿಬಿರದ ಮೂರು ಕಡೆಗಳಲ್ಲಿ ಬೆಂಕಿಯನ್ನು ಹೊತ್ತಿಸಿದರು. ಅದರ ಬೆಳಕಿನಲ್ಲಿ ಪಿತೃನಂದನ ಅಶ್ವತ್ಥಾಮನು ಖಡ್ಗವನ್ನು ಕೈಯಲ್ಲಿ ಹಿಡಿದು ಸಂಚರಿಸಿದನು. ಆ ದ್ವಿಜವರನು ತನ್ನ ಮೇಲೆ ಬೀಳುತ್ತಿದ್ದ ಕೆಲವು ವೀರರನ್ನೂ, ಓಡಿಹೋಗುತ್ತಿದ್ದ ಇತರರನ್ನೂ ಖಡ್ಗದಿಂದ ಪ್ರಾಣವಿಲ್ಲದಂತೆ ಮಾಡಿದನು. ಆ ವೀರ್ಯವಾನನು ಕೆಲವರನ್ನು ಖಡ್ಗದಿಂದ ಮಧ್ಯದಲ್ಲಿಯೇ ಸೀಳಿದನು. ದ್ರೋಣಸುತನು ಸಂರಬ್ಧನಾಗಿ ಸೇನೆಯನ್ನು ಎಳ್ಳಿನ ಹೊಲದಂತೆ ಕಡಿದು ಕೆಳಗುರುಳಿಸಿದನು. ಬಹಳವಾಗಿ ಗಾಯಗೊಂಡು ಕಿರುಚುತ್ತಾ ಬಿದ್ದಿದ್ದ ಉತ್ತಮ ಆನೆ, ಕುದುರೆ ಮತ್ತು ಮನುಷ್ಯರ ರಾಶಿಗಳಿಂದ ಮೇದಿನಿಯು ತುಂಬಿಹೋಯಿತು. ಸಹಸ್ರಾರು ಮನುಷ್ಯರು ಹತರಾಗಿ ಬೀಳುತ್ತಿರಲು

ಅನೇಕ ಶಿರವಿಲ್ಲದ ದೇಹಗಳು ಎದ್ದುನಿಲ್ಲುತ್ತಿದ್ದವು. ಎದ್ದು ಬೀಳುತ್ತಿದ್ದವು. ಆಯುಧಗಳಿದ್ದ ಮತ್ತು ಅಂಗದಗಳನ್ನು ಧರಿಸಿದ್ದ ಬಾಹುಗಳನ್ನು ಮತ್ತು ಶಿರಗಳನ್ನು, ಆನೆಯ ಸೊಂಡಿಲಿನಂತಿರುವ ತೊಡೆಗಳನ್ನೂ, ಕೈಗಳನ್ನೂ, ಪಾದಗಳನ್ನೂ ಅವನು ಕತ್ತರಿಸಿದನು. ದ್ರೌಣಿಯು ಕೆಲವರ ಪೃಷ್ಠಭಾಗಗಳನ್ನು, ಕೆಲವರ ಶಿರಸ್ಸುಗಳನ್ನು ಮತ್ತು ಇನ್ನು ಕೆಲವರ ಪಕ್ಕೆಗಳನ್ನು ಕತ್ತರಿಸಿದನು. ಇನ್ನು ಕೆಲವು ಓಡಿಹೋಗುತ್ತಿದ್ದವರ ತಲೆಗಳನ್ನು ಹಿಂದು-ಮುಂದಾಗಿಸಿದನು. ಕೆಲವರನ್ನು ಕಟಿಪ್ರದೇಶದಲ್ಲಿ ಕತ್ತರಿಸಿದನು. ಕೆಲವರ ಕಿವಿಗಳನ್ನು ಕತ್ತರಿಸಿದನು. ಅನ್ಯರ ಕುತ್ತಿಗೆಯಮೇಲೆ ಹೊಡೆದು ತಲೆಯು ಶರೀರದೊಳಕ್ಕೆ ಸೇರಿಕೊಳ್ಳುವಂತೆ ಮಾಡುತ್ತಿದ್ದನು. ಹೀಗೆ ಅವನು ಅನೇಕ ಮನುಷ್ಯರನ್ನು ಸಂಹರಿಸುತ್ತಾ ಸಂಚರಿಸುತ್ತಿರಲು ರಾತ್ರಿಯ ಕತ್ತಲೆಯು ಘೋರವೂ ನೋಡಲು ದಾರುಣವಾಗಿಯೂ ಕಂಡಿತು.

ಇನ್ನೂ ಪ್ರಾಣವಿಟ್ಟುಕೊಂಡಿದ್ದವರ ಕೆಲವರು ಮತ್ತು ಅನ್ಯ ಸಹಸ್ರಾರು ಹತರಾದ ನರ, ಕುದುರೆ, ಆನೆಗಳಿಂದ ಭೂಮಿಯು ತುಂಬಿಕೊಂಡು ನೋಡಲು ಭಯಂಕರವಾಗಿತ್ತು. ಯಕ್ಷ-ರಾಕ್ಷಸರಿಂದ ಮತ್ತು ಕ್ರುದ್ಧ ದ್ರೋಣಪುತ್ರನಿಂದ ಧ್ವಂಸಗೊಳ್ಳುತ್ತಿದ್ದ ರಥ-ಕುದುರೆ-ಆನೆಗಳು ದಾರುಣವಾಗಿ ಕತ್ತರಿಸಲ್ಪಟ್ಟು ಭೂಮಿಯ ಮೇಲೆ ಬೀಳುತ್ತಿದ್ದವು. ಕೆಲವರು ತಾಯಿಯರನ್ನೂ, ಕೆಲವರು ತಂದೆಯರನ್ನೂ ಮತ್ತು ಕೆಲವರು

ಸೋದರರನ್ನೂ ಕೂಗಿ ಕರೆಯುತ್ತಿದ್ದರು. ಕೆಲವರು ಹೀಗೆ ಅಂದುಕೊಳ್ಳುತ್ತಿದ್ದರು:

“ಈ ರೀತಿ ಮಲಗಿರುವವರನ್ನು ರಾಕ್ಷಸರಂತೆ ಕ್ರೂರವಾಗಿ ಧಾಳಿನಡೆಸಿದಂತೆ ರಣದಲ್ಲಿ ಕ್ರುದ್ಧ ಧಾರ್ತರಷ್ಟ್ರರೂ ಮಾಡಲಿಲ್ಲ! ಪಾರ್ಥರು ಇಲ್ಲಿ ಇಲ್ಲವೆಂದು ತಿಳಿದೇ ಇವರು ನಮ್ಮೊಂದಿಗೆ ಕದನವಾಡುತ್ತಿದ್ದಾರೆ! ಯಾರನ್ನು ಜನಾರ್ದನನು ರಕ್ಷಿಸುತ್ತಿದ್ದಾನೋ ಆ ಕೌಂತೇಯನನ್ನು ದೇವ-ಅಸುರ-ಗಂಧರ್ವರಿಂದಲೂ, ಯಕ್ಷ-ರಾಕ್ಷಸರಿಂದಲೂ ಗೆಲ್ಲಲು ಶಕ್ಯವಿಲ್ಲ! ಬ್ರಹ್ಮಣ್ಯನೂ, ಸತ್ಯವಾಗ್ಮಿಯೂ, ಜಿತೇಂದ್ರಿಯನೂ, ಸರ್ವಭೂತಗಳ ಮೇಲೆ ಅನುಕಂಪನಾಗಿರುವ ಪಾರ್ಥ ಧನಂಜಯನು ಮಲಗಿರುವವರನ್ನು, ಪ್ರಮತ್ತರಾಗಿರುವವರನ್ನು, ಶಸ್ತ್ರವನ್ನು ಕೆಳಗಿಟ್ಟವರನ್ನು, ಕೈಮುಗಿದು ಕೇಳಿಕೊಳ್ಳುವವರನ್ನು, ಓಡಿಹೋಗುತ್ತಿರುವವರನ್ನು ಮತ್ತು ತಲೆ ಬಿಚ್ಚಿಕೊಂಡಿರುವವರನ್ನು ಕೊಲ್ಲುವುದಿಲ್ಲ! ಕ್ರೂರಕರ್ಮಿಗಳಾದ ರಾಕ್ಷಸರೇ ನಮ್ಮ ಮೇಲೆ ಈ ಘೋರ ಕೃತ್ಯವನ್ನೆಸಗುತ್ತಿದ್ದಾರೆ!”

ಹೀಗೆ ವಿಲಪಿಸುತ್ತಾ ಅನೇಕ ಜನರು ಭೂಮಿಯ ಮೇಲೆ ಮಲಗಿದ್ದರು. ಸ್ವಲ್ಪವೇ ಸಮಯದಲ್ಲಿ ಕೂಗಿಕೊಳ್ಳುತ್ತಿದ್ದ ಮತ್ತು ವಿಲಪಿಸುತ್ತಿದ್ದ ಮನುಷ್ಯರ ಮಹಾ ತುಮುಲ ಶಬ್ಧವು ಉಡುಗಿಹೋಯಿತು.

ಮೇಲೆದ್ದಿದ್ದ ಆ ತುಮುಲ ಘೋರ ಧೂಳು ಕೂಡ ರಕ್ತದಿಂದ ಭೂಮಿಯು ತೋಯ್ದುಹೋಗಲು ಕ್ಷಣಮಾತ್ರದಲ್ಲಿ ಅದೃಶ್ಯವಾಯಿತು. ಕೃದ್ಧನಾದ ಪಶುಪತಿಯು ಪಶುಗಳನ್ನು ಹೇಗೋ ಹಾಗೆ ಅಶ್ವತ್ಥಾಮನು ಪ್ರಾಣವುಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ, ಉದ್ವಿಗ್ನರಾಗಿದ್ದ, ನಿರುತ್ಸಾಹಿಗಳಾಗಿದ್ದ ಸಹಸ್ರಾರು ಜನರನ್ನು ಕೆಳಗುರುಳಿಸಿದನು. ಅನ್ಯೋನ್ಯರನ್ನು ಅಪ್ಪಿಕೊಂಡು ಮಲಗಿದ್ದವರನ್ನು, ಓಡಿಹೋಗುತ್ತಿರುವವರನ್ನು, ಅಡಗಿಕೊಂಡಿದ್ದವರನ್ನು ಮತ್ತು ಯುದ್ಧಮಾಡುತ್ತಿದ್ದವರನ್ನು ಎಲ್ಲರನ್ನೂ ದ್ರೌಣಿಯು ಸಂಹರಿಸಿದನು. ಕೆಲವರು ಬೆಂಕಿಯಲ್ಲಿ ಸುಟ್ಟುಹೋದರು. ಕೆಲವರನ್ನು ಅಶ್ವತ್ಥಾಮನು ವಧಿಸಿದನು. ಇನ್ನು ಕೆಲವು ಯೋಧರು ಪರಸ್ಪರರನ್ನು ಕೊಂದು ಯಮಸಾದನಕ್ಕೆ ಹೋದರು. ಆ ರಾತ್ರಿಯ ಅರ್ಧಭಾಗವು ಕಳೆಯುವುದರೊಳಗಾಗಿ ದ್ರೌಣಿಯು ಪಾಂಡವರ ಆ ಮಹಾಸೇನೆಯನ್ನು ಯಮನಿವೇಶನಕ್ಕೆ ಕಳುಹಿಸಿದನು. ಆ ರಾತ್ರಿಯು ನಿಶಾಚರ ಪ್ರಾಣಿಗಳ ಹರ್ಷವನ್ನು ಹೆಚ್ಚಿಸುತ್ತಿದ್ದರೆ ಮನುಷ್ಯ-ಆನೆ-ಕುದುರೆಗಳಿಗೆ ರೌದ್ರವೂ ಕ್ಷಯಕಾರಿಯೂ ಆಗಿತ್ತು. ಅಲ್ಲಿ ಅನೇಕ ವಿಧದ ರಾಕ್ಷಸರೂ ಪಿಶಾಚಿಗಳೂ

ನರಮಾಂಸಗಳನ್ನು ಭಕ್ಷಿಸುತ್ತಿರುವುದು ಮತ್ತು ರಕ್ತವನ್ನು ಕುಡಿಯುತ್ತಿರುವುದು ಕಾಣುತ್ತಿತ್ತು. ಕಪ್ಪಾಗಿದ್ದ, ಹಳದಿ ಬಣ್ಣದ, ರೌದ್ರರಾಗಿ ತೋರುತ್ತಿದ್ದ, ಪರ್ವತದಂತಹ ಹಲ್ಲುಗಳುಳ್ಳ, ಧೂಳಿನಿಂದ ತುಂಬಿಕೊಂಡಿದ್ದ, ಜಟಾಧಾರಿಗಳಾಗಿದ್ದ, ಅಗಲ ಹಣೆಗಳನ್ನು ಹೊಂದಿದ್ದ, ಐದು ಕಾಲುಗಳುಳ್ಳ, ದೊಡ್ಡ ದೊಡ್ಡ ಹೊಟ್ಟೆಗಳನ್ನುಳ್ಳ, ಹಿಂದುಮುಂದಾದ ಬೆರಳುಗಳುಳ್ಳ, ಕಠೋರರಾದ, ವಿರೂಪರಾದ, ಭೈರವ ಸ್ವರವುಳ್ಳ, ದೊಡ್ಡ ಶರೀರವುಳ್ಳ, ಹ್ರಸ್ವ ಶರೀರವುಳ್ಳ, ನೀಲಕಂಠಗಳುಳ್ಳ, ವಿಭೀಷಣರಾದ, ಕ್ರೂರರೂ, ದುರ್ಧರ್ಷರೂ, ನಿರ್ದಯಿಗಳೂ ಆದ ಆ ರಾಕ್ಷಸರು ವಿವಿಧರೂಪಗಳಲ್ಲಿ ಕಾಣುತ್ತಿದ್ದರು. ರಕ್ತವನ್ನು ಕುಡಿದು ಹರ್ಷಗೊಂಡ ಕೆಲವರು “ಇದು ಉತ್ತಮವಾಗಿದೆ! ಇದು ರುಚಿಯಾಗಿದೆ! ಪವಿತ್ರವಾಗಿದೆ!” ಎಂದು ಹೇಳಿಕೊಳ್ಳುತ್ತಾ ಗುಂಪಿನಲ್ಲಿ ನರ್ತಿಸುತ್ತಿದ್ದರು. ಮೇದಸ್ಸು, ಮಜ್ಜೆ, ಅಸ್ಥಿ, ರಕ್ತ ಮತ್ತು ಮಾಂಸಗಳನ್ನು ತುಂಬಾ ಆತುರವಾಗಿ ತಿನ್ನುವ ಮಾಂಸಜೀವಿ ಕ್ರವ್ಯಾದರು ಯೋಧರ ಮಾಂಸವನ್ನು ಯಥೇಚ್ಛವಾಗಿ ತಿನ್ನುತ್ತಿದ್ದರು. ಹೊಟ್ಟೆಯೇ ಇಲ್ಲದ ಕೆಲವರು ವಸೆಯನ್ನು ಕುಡಿದು ಓಡಿಹೋಗುತ್ತಿದ್ದರು. ಹಸಿ ಮಾಂಸವನ್ನು ತಿನ್ನುತ್ತಿದ್ದ ಆ ರೌದ್ರ ಕ್ರವ್ಯಾದಗಳಿಗೆ ಅನೇಕ ಮುಖಗಳಿದ್ದವು. ಆ ಗುಂಪುಗಳಲ್ಲಿ ಹತ್ತುಸಾವಿರ, ಲಕ್ಷ, ಹತ್ತು ಲಕ್ಷ ಘೋರರೂಪಿ ಮಹಾ ಕ್ರೂರಕರ್ಮಿ

ರಾಕ್ಷಸರಿದ್ದರು. ಆ ಮಹಾಜನಸಂಹಾರದಿಂದ ತೃಪ್ತರಾಗಿ ಮುದಿತರಾಗಿದ್ದ ಆ ಭೂತಗಳು ಅನೇಕ ಸಂಖ್ಯೆಗಳಲ್ಲಿ ಸೇರಿಕೊಂಡಿದ್ದವು.

ಪ್ರಾತಃಕಾಲವಾಗುತ್ತಲೇ ದ್ರೌಣಿಯು ಶಿಬಿರದಿಂದ ಹೊರಡಲು ಅನುವಾಗಲು, ರಕ್ತದಿಂದ ತೋಯ್ದುಹೋಗಿದ್ದ ಅವನ ಖಡ್ಗದ ಹಿಡಿಯು ಅವನ ಕೈಯೊಂದಿಗೆ ಅಂಟಿಕೊಂಡಿತ್ತು! ಆಗ ಖಡ್ಗದ ಹಿಡಿ ಮತ್ತು ಅವನ ಕೈ ಒಂದೇ ಎಂಬಂತೆ ಕಾಣುತ್ತಿತ್ತು. ಯುಗಾಂತದಲ್ಲಿ ಸರ್ವಭೂತಗಳನ್ನು ಭಸ್ಮಮಾಡಿದ ಪಾವಕನು ಹೇಗೋ ಹಾಗೆ ಆ ಜನಕ್ಷಯದಲ್ಲಿ ಶತ್ರುಗಳನ್ನು ನಿಃಶೇಷರನ್ನಾಗಿ ಮಾಡಿದ ಅಶ್ವತ್ಥಾಮನು ವಿರಾಜಿಸಿದನು. ಪ್ರತಿಜ್ಞೆ ಮಾಡಿದಂತೆ ಆ ಕೃತ್ಯವನ್ನು ಮಾಡಿ ತಂದೆಗೆ ದುರ್ಗಮ ಪದವಿಯನ್ನು ಇತ್ತು ಅವನು ಚಿಂತಾಶೋಕಗಳಿಂದ ವಿಮುಕ್ತನಾದನು.  ರಾತ್ರಿ ಜನರು ಮಲಗಿದ್ದಾಗ ಶಿಬಿರವನ್ನು ಹೇಗೆ ಪ್ರವೇಶಿಸಿದ್ದನೋ ಹಾಗೆಯೇ ಅವರನ್ನು ಕೊಂದ ನರರ್ಷಭನು ನಿಃಶಬ್ಧನಾಗಿ ಹೊರಬಂದನು. ಆ ವೀರ್ಯವಾನನು ಶಿಬಿರದಿಂದ ಹೊರಬಂದು ಅವರಿಬ್ಬರನ್ನೂ ಸೇರಿ ಹೃಷ್ಟನಾಗಿ ಅವರಿಗೂ ಹರ್ಷವನ್ನು ತರುತ್ತಾ ತಾನು ಮಾಡಿದ ಕರ್ಮವೆಲ್ಲವನ್ನೂ ಹೇಳಿಕೊಂಡನು. ಆಗ ಅವರಿಬ್ಬರು ಪ್ರಿಯಕರರೂ ಅವನಿಗೆ ಪ್ರಿಯವಾದುದನ್ನು ಮಾಡಲೋಸುಗ ತಾವೂ ಕೂಡ ಸಹಸ್ರಾರು

ಪಾಂಚಾಲರನ್ನು ಮತ್ತು ಸೃಂಜಯರನ್ನು ಕೊಂದ ವಿಷಯವನ್ನು ಹೇಳಿಕೊಂಡರು. ಮೂವರೂ ಆನಂದದಿಂದ ಜೋರಾಗಿ ಗರ್ಜಿಸಿ ಚಪ್ಪಾಳೆ ತಟ್ಟಿದರು. ಈ ವಿಧವಾಗಿ ಆ ರಾತ್ರಿ ಮೈಮರೆತು ಮಲಗಿದ್ದ ಸೋಮಕರ ತುಂಬಾ ದಾರುಣ ಜನಕ್ಷಯವು ನಡೆದುಹೋಯಿತು. ಕಾಲವನ್ನು ಅತಿಕ್ರಮಿಸುವುದು ನಿಸ್ಸಂಶಯವಾಗಿಯೂ ಅಶಕ್ಯವಾದುದು. ನಮ್ಮವರ ಜನಕ್ಷಯವನ್ನು ಮಾಡಿದ ಅವರು ಹೀಗೆ ಹತರಾದರು.

ಪಾರ್ಥ, ಧೀಮತ ಕೇಶವ ಮತ್ತು ಸಾತ್ಯಕಿಯರ ಭಯದಿಂದಾಗಿ ಅವನು ಈ ಕಾರ್ಯವನ್ನು ಮೊದಲೇ ಮಾಡಲಿಲ್ಲ. ಅವರಿಲ್ಲದಿರುವುದರಿಂದಲೇ ಈಗ ದ್ರೋಣಪುತ್ರನಿಗೆ ಈ ಕಾರ್ಯವು ಸಾಧ್ಯವಾಯಿತು. ಅವರ ಸಮಕ್ಷಮದಲ್ಲಿ ಸಂಹರಿಸಲು ಮರುತ್ಪತಿ ಇಂದ್ರನಿಗೂ ಸಾಧ್ಯವಾಗುತ್ತಿರಲಿಲ್ಲ! ಜನರು ಮಲಗಿರುವಾಗ ಈ ರೀತಿಯ ಘಟನೆಯು ನಡೆದುಹೋಯಿತು! ಪಾಂಡವರಿಗೆ ಮಹಾವಿನಾಶಕಾರಿಯಾದ ಈ ಜನಕ್ಷಯವನ್ನು ಮಾಡಿ ಆ ಮಹಾರಥರು ಅನ್ಯೋನ್ಯರನ್ನು ಸೇರಿ “ಒಳ್ಳೆಯದಾಯಿತು! ಒಳ್ಳೆಯದಾಯಿತು!” ಎಂದು ಅಂದುಕೊಂಡರು. ಅವರಿಬ್ಬರ ಅಭಿನಂದನೆಗಳನ್ನು ಹರ್ಷದಿಂದ ಸ್ವೀಕರಿಸಿ, ಅವರಿಬ್ಬರನ್ನೂ ಆಲಂಗಿಸಿ, ದ್ರೌಣಿಯು ಆನಂದದಿಂದ ಈ ಮಹಾಸತ್ವಪೂರ್ಣಮಾತನ್ನು ಹೇಳಿದನು:

"ನನ್ನಿಂದ ಸರ್ವ ಪಾಂಚಾಲರೂ ಎಲ್ಲ ದ್ರೌಪದೇಯರೂ ಹತರಾದರು. ಉಳಿದ ಸೋಮಕರೂ ಮತ್ಸ್ಯರು ಎಲ್ಲರೂ ಹತರಾದರು. ಈಗ ನಾವು ಕೃತಕೃತ್ಯರಾದೆವು. ತಡಮಾಡದೇ ಅಲ್ಲಿಗೆ ಹೋಗೋಣ. ಒಂದು ವೇಳೆ ನಮ್ಮ ರಾಜನು ಜೀವಂತನಾಗಿದ್ದರೆ ಅವನಿಗೆ ಈ ಪ್ರಿಯವಿಷಯವನ್ನು ತಿಳಿಸೋಣ!"

## ದುರ್ಯೋಧನನ ಪ್ರಾಣತ್ಯಾಗ

ಅವರು ಸರ್ವ ಪಾಂಚಾಲರನ್ನೂ ದ್ರೌಪದೇಯರನ್ನೂ ಸಂಹರಿಸಿ ಒಟ್ಟಾಗಿ ದುರ್ಯೋಧನನು ಎಲ್ಲಿ ಹತನಾಗಿದ್ದನೋ ಅಲ್ಲಿಗೆ ಹೋದರು. ಅಲ್ಲಿಗೆ ಹೋಗಿ ನರಾಧಿಪನಿಗೆ ಸ್ವಲ್ಪವೇ ಪ್ರಾಣವು ಉಳಿದಿದೆಯೆನ್ನುವುದನ್ನು ನೋಡಿ ರಥದಿಂದ ಇಳಿದು ನಿನ್ನ ಮಗನನ್ನು ಸುತ್ತುವರೆದು ಕುಳಿತರು. ತೊಡೆಯೊಡೆದು ಕಷ್ಟದಿಂದ ಪ್ರಾಣವನ್ನು ಹಿಡಿದುಕೊಂಡು ನಿಶ್ಚೇತನನಾಗಿ ರಕ್ತವನ್ನು ಕಾರುತ್ತಾ, ನೆಲದಮೇಲಿದ್ದ ದುರ್ಯೋಧನನನ್ನು ಅವರು ನೋಡಿದರು. ಅನೇಕ ಘೋರ ತೋಳ-ನರಿಗಳು ಅವನನ್ನು ಕಚ್ಚಿ ತಿನ್ನಲು ಸುತ್ತುವರೆದು ಹತ್ತಿರ-ಹತ್ತಿರಕ್ಕೆ ಹೋಗುತ್ತಿದ್ದವು. ಮಾಂಸವನ್ನು ತಿನ್ನಲು ಮುಂದೆ ಬರುತ್ತಿರುವ ಆ

ಶ್ವಾಪದಗಳನ್ನು ಬಹಳ ಕಷ್ಟದಿಂದ ತಡೆಯುತ್ತಾ ಅವನು ಗಾಢವೇದನೆಯಿಂದ ಮತ್ತು ಮಹಾ ನೋವಿನಿಂದ ಹೊರಳಾಡುತ್ತಿದ್ದನು. ತನ್ನದೇ ರಕ್ತದಲ್ಲಿ ತೋಯ್ದು ನೆಲದಮೇಲೆ ಮಲಗಿದ್ದ ಆ ಮಹಾತ್ಮನನ್ನು ಅಳಿದುಳಿದಿದ್ದ ಆ ಮೂವರು ವೀರರೂ ಶೋಕಾರ್ತರಾಗಿ ಸುತ್ತುವರೆದರು. ರಕ್ತದಿಂದ ತೋಯ್ದು ನಿಟ್ಟುಸಿರುಬಿಡುತ್ತಿದ್ದ ಅಶ್ವತ್ಥಾಮ, ಕೃಪ ಮತ್ತು ಸಾತ್ವತ ಕೃತವರ್ಮ ಈ ಮೂವರು ಮಹಾರಥರಿಂದ ಸುತ್ತುವರೆದಿದ್ದ ರಾಜನು ಮೂರು ಅಗ್ನಿಗಳಿಂದ ಆವೃತವಾದ ಯಜ್ಞವೇದಿಯಂತೆ ತೋರಿದನು. ರಾಜನಿಗೆ ಉಚಿತವಲ್ಲದಂತೆ ಮಲಗಿರುವ ಅವನನ್ನು ನೋಡಿ ಸಹಿಸಿಕೊಳ್ಳಲಾರದ ದುಃಖದಿಂದ ಆ ಮೂವರೂ ರೋದಿಸಿದರು. ರಣದಲ್ಲಿ ಮಲಗಿದ್ದ ರಾಜನ ಮುಖದಿಂದ ರಕ್ತವನ್ನು ತನ್ನ ಎರಡೂ ಕೈಗಳಿಂದ ಒರೆಸುತ್ತಾ ಕೃಪನು ಪರಿವೇದಿಸಿದನು.

ಕೃಪನು ಹೇಳಿದನು:

> “ಹನ್ನೊಂದು ಅಕ್ಷೌಹಿಣೀ ಸೇನೆಯ ಅಧಿಪತಿಯಾಗಿದ್ದ ಈ ದುರ್ಯೋಧನನು ಹತನಾಗಿ ರಕ್ತದಿಂದ ತೋಯ್ದು ಮಲಗಿದ್ದಾನೆ ಎಂದರೆ ದೈವಕ್ಕೆ ಯಾವುದೂ ಕಷ್ಟಸಾಧ್ಯವಲ್ಲ ಅಲ್ಲವೇ? ಸುವರ್ಣದ ಕಾಂತಿಯುಳ್ಳ, ಸುವರ್ಣದಿಂದ

ವಿಭೂಷಿತವಾಗಿರುವ ಗದೆಯು ಗದಾಪ್ರಿಯನಾದ ಇವನ ಸಮೀಪದಲ್ಲಿ ನೆಲದಮೇಲೆ ಬಿದ್ದಿರುವುದನ್ನು ನೋಡು! ರಣರಣದಲ್ಲಿಯೂ ಈ ಗದೆಯು ಈ ಶೂರನನ್ನು ಬಿಟ್ಟಿರಲಿಲ್ಲ. ಈಗ ಸ್ವರ್ಗಕ್ಕೆ ಹೋಗುತ್ತಿರುವಾಗಲೂ ಈ ಯಶಸ್ವಿನಿಯನ್ನು ಬಿಟ್ಟಿಲ್ಲ! ಶಯನದಲ್ಲಿ ಮಲಗಿರುವ ಧರ್ಮಪತ್ನಿಯಂತೆ ಅತೀವ ಪ್ರೀತಿಯಿಂದ ಈ ವೀರನ ಪಕ್ಕದಲ್ಲಿಯೇ ಇರುವ ಈ ಸುವರ್ಣವಿಭೂಷಿತ ಗದೆಯನ್ನು ನೋಡು! ಮೂರ್ಧಾವಸಿಕ್ತರ ಮುಂಭಾಗದಲ್ಲಿ ಹೋಗುತ್ತಿದ್ದ ಈ ಪರಂತಪನು ಹತನಾಗಿ ಮಣ್ಣನ್ನು ಮುಕ್ಕುತ್ತಿದ್ದಾನೆ. ಕಾಲದ ಈ ವೈಪರೀತ್ಯವನ್ನಾದರೂ ನೋಡು! ಹಿಂದೆ ಯಾರಿಂದ ಶತ್ರುಗಳು ಹತರಾಗಿ ನೆಲಕ್ಕುರುಳುತ್ತಿದ್ದರೋ ಆ ಕುರುರಾಜನೇ ಇಂದು ಶತ್ರುಗಳಿಂದ ಹತನಾಗಿ ನೆಲದಮೇಲೆ ಮಲಗಿದ್ದಾನೆ! ಯಾವ ರಾಜನನ್ನು ನೂರಾರು ಗುಂಪುಗಳಲ್ಲಿ ಜನರು ಭಯದಿಂದ ನಮಸ್ಕರಿಸುತ್ತಿದ್ದರೋ ಅವನು ಕ್ರವ್ಯಾದಿಗಳಿಂದ ಸುತ್ತುವರೆಯಲ್ಪಟ್ಟು ವೀರಶಯನದಲ್ಲಿ ಮಲಗಿದ್ದಾನೆ! ಧಿಕ್ಕಾರ! ಯಾವ ಈಶ್ವರನನ್ನು ಹಿಂದೆ ನೃಪರು ಸಂಪತ್ತಿಗಾಗಿ ಉಪಾಸಿಸುತ್ತಿದ್ದರೋ ಅವನು ಸದ್ಯದಲ್ಲಿ ಹತನಾಗಿ ಮಲಗಿದ್ದಾನೆ! ಕಾಲದ ಈ

ವಿಪರ್ಯಾಸವನ್ನಾದರೂ ನೋಡು!”

ಆಗ ಮಲಗಿದ್ದ ಆ ನೃಪಶ್ರೇಷ್ಠನನ್ನು ನೋಡಿ ಅಶ್ವತ್ಥಾಮನು ಕರುಣೆಯಿಂದ ಪರಿವೇದಿಸಿದನು.

“ರಾಜಶಾರ್ದೂಲ! ನೀನು ಸರ್ವಧನುಷ್ಮತರಲ್ಲಿ ಮುಖ್ಯನೆಂದೂ, ಸಂಕರ್ಷಣನ ಶಿಷ್ಯನಾದ ನಿನ್ನನ್ನು ಯುದ್ಧದಲ್ಲಿ ಧನಾಧ್ಯಕ್ಷನ ಸಮಾನನೆಂದೂ ಹೇಳುತ್ತಾರೆ! ಹೀಗಿರುವಾಗ ಬಲಶಾಲಿಗಳಲ್ಲಿ ನಿತ್ಯವೂ ಮೋಸಗಾರನಾದ ಪಾಪಾತ್ಮ ಭೀಮಸೇನನು ನಿನ್ನಲ್ಲಿರುವ ಛಿದ್ರವನ್ನು ಕಂಡುಕೊಂಡನು! ಯುದ್ಧದಲ್ಲಿ ನೀನು ಭೀಮಸೇನನಿಂದ ಹತನಾಗಿರುವುದನ್ನು ನೋಡಿ ಈ ಲೋಕದಲ್ಲಿ ಕಾಲವೇ ಬಲವತ್ತರವೆಂದೆನಿಸುವುದಿಲ್ಲವೇ? ಸರ್ವಧರ್ಮಜ್ಞನಾದ ನಿನ್ನನ್ನು ಕ್ಷುದ್ರ ಪಾಪಿ ಮಂದ ವೃಕೋದರನು ಮೋಸದಿಂದ ಕೊಂದನೆಂದರೆ ಕಾಲವನ್ನು ಅತಿಕ್ರಮಿಸುವುದು ಅಸಾಧ್ಯವೆಂದಲ್ಲವೇ? ಧರ್ಮಯುದ್ಧಕ್ಕೆ ನಿನ್ನನ್ನು ಕರೆದು ರಣದಲ್ಲಿ ಭೀಮಸೇನನು ಅಧರ್ಮದಿಂದ ನಿನ್ನ ತೊಡೆಯನ್ನು ಒಡೆದನು! ಅಧರ್ಮದಿಂದ ನಿನ್ನನ್ನು ಹೊಡೆದು ಕಾಲಿನಿಂದ ನಿನ್ನ ಶಿರವನ್ನು ಒದೆದುದಕ್ಕೂ ಉಪೇಕ್ಷೆಮಾಡದ ಕ್ಷುದ್ರ

ಯುಧಿಷ್ಠಿರನಿಗೂ ಧಿಕ್ಕಾರವಿರಲಿ! ಎಂದಿನವರೆಗೆ ಪ್ರಾಣಿಗಳಿರುವವೋ ಅಲ್ಲಿಯವರೆಗೆ ಯುದ್ಧಗಳಲ್ಲಿ ಯೋಧರು ಈ ಪಾತಿತನು ಮೋಸಗಾರನು ಎಂದು ವೃಕೋದರನಿಗೆ ಹೇಳುತ್ತಾರೆ! ಯದುನಂದನ ರಾಮನು ಸದಾ "ವೀರ್ಯವಾನ್ ದುರ್ಯೋಧನನನ ಸಮನಾದವನು ಗದಾಯುದ್ಧದಲ್ಲಿ ಇಲ್ಲ!" ಎಂದು ಹೇಳುತ್ತಿರಲಿಲ್ಲವೇ? ಸಂಸದಿಗಳಲ್ಲಿ ವಾರ್ಷ್ಣೇಯನು "ಗದಾಯುದ್ಧದಲ್ಲಿ ಕೌರವ್ಯನು ನನ್ನ ಪ್ರಧಾನ ಶಿಷ್ಯ!" ಎಂದು ಹೇಳುತ್ತಿರಲಿಲ್ಲವೇ? ಶತ್ರುವನ್ನು ಎದುರಿಸಿ ಹತನಾದ ಕ್ಷತ್ರಿಯನಿಗೆ ಯಾವ ಪ್ರಶಸ್ತ ಗತಿಯು ದೊರೆಯುತ್ತದೆಯೆಂದು ಪರಮಋಷಿಗಳು ಹೇಳುತ್ತಾರೋ ಆ ಉತ್ತಮ ಗತಿಯನ್ನು ನೀನೂ ಪಡೆದಿರುವೆ. ದುರ್ಯೋಧನ! ನಿನ್ನ ಕುರಿತು ನಾನು ಶೋಕಿಸುತ್ತಿಲ್ಲ! ಪುತ್ರರನ್ನು ಕಳೆದುಕೊಂಡ ಗಾಂಧಾರಿ ಮತ್ತು ನಿನ್ನ ತಂದೆಯ ಕುರಿತು ಶೋಕಿಸುತ್ತಿದ್ದೇನೆ! ಶೋಕಿಸುತ್ತಾ ಅವರಿಬ್ಬರೂ ಈ ಭೂಮಿಯಲ್ಲಿ ಭಿಕ್ಷುಕರಂತೆ ಸುತ್ತುವರಲ್ಲ ಎಂದು ಶೋಕಿಸುತ್ತಿದ್ದೇನೆ! ವಾರ್ಷ್ಣೇಯ ಕೃಷ್ಣನಿಗೆ ಮತ್ತು ದುರ್ಮತಿ ಅರ್ಜುನನಿಗೆ ಧಿಕ್ಕಾರ! ಧರ್ಮಜ್ಞರೆಂದು ಗೌರವಿಸಲ್ಪಡುವ ಅವರಿಬ್ಬರೂ ನಿನ್ನ ವಧೆಯನ್ನು ಉಪೇಕ್ಷಿಸಲಿಲ್ಲ. ನರಾಧಿಪ ಪಾಂಡವರೆಲ್ಲರೂ ಕೂಡ ಏನು

ಹೇಳಿಕೊಳ್ಳುತ್ತಾರೆ? ನಮ್ಮಿಂದ ದುರ್ಯೋಧನನು ಹೇಗೆ ಹತನಾದನು ಎಂದು ಹೇಗೆತಾನೇ ಹೇಳಿಕೊಳ್ಳುತ್ತಾರೆ? ಗಾಂಧಾರೇ! ಶತ್ರುಗಳನ್ನು ಧರ್ಮದಿಂದಲೇ ಎದುರಿಸಿ ಹೋರಾಡಿ ಹತನಾದ ಪ್ರಾಯಶಃ ನೀನೇ ಧನ್ಯ! ಹತಪುತ್ರಳಾದ ಮತ್ತು ಬಂಧು-ಬಾಂಧವರನ್ನು ಕಳೆದುಕೊಂಡಿರುವ ಗಾಂಧಾರೀ ಮತ್ತು ದುರ್ಧರ್ಷ ಪ್ರಜ್ಞಾಚಕ್ಷುವು ಯಾವ ಗತಿಯನ್ನು ಹೊಂದುತ್ತಾರೆ? ಪಾರ್ಥಿವನಾದ ನಿನ್ನನ್ನು ಹಿಂದೆಬಿಟ್ಟು ಸ್ವರ್ಗಕ್ಕೆ ಹೋಗಿರದ ಕೃತವರ್ಮ, ನಾನು ಮತ್ತು ಮಹಾರಥ ಕೃಪ – ಈ ನಮಗೆ ಧಿಕ್ಕಾರವಿರಲಿ! ಸರ್ವಕಾಮನೆಗಳನ್ನು ಒದಗಿಸಿಕೊಡುತ್ತಿದ್ದ, ಪ್ರಜಾಹಿತ ರಕ್ಷಕನನ್ನು ಅನುಸರಿಸದ ನರಾಧಮರಂತಿರುವ ಈ ನಮಗೆ ಧಿಕ್ಕಾರವಿರಲಿ! ನಿನ್ನ ವೀರ್ಯದಿಂದಲೇ ಕೃಪನಿಗೆ, ನನಗೆ ಮತ್ತು ನನ್ನ ತಂದೆಗೆ ಸೇವಕರೊಂದಿಗೆ ಸಂಪದ್ಭರಿತ ಭವನಗಳು ಲಭಿಸಿದ್ದವು. ನಿನ್ನ ಪ್ರಸಾದದಿಂದಲೇ ನಾವುಗಳು ಮಿತ್ರರು ಮತ್ತು ಬಂಧುಗಳೊಡನೆ ಭೂರಿದಕ್ಷಿಣೆಗಳನ್ನಿತ್ತು ಅನೇಕ ಮುಖ್ಯ ಕ್ರತುಗಳನ್ನು ಮಾಡುವಂಥವರಾಗಿದ್ದೆವು. ನಿನ್ನಿಂದ ಇಷ್ಟೊಂದು ಸಹಾಯ-ಸಂಪತ್ತುಗಳನ್ನು ಪಡೆದಿರುವ ನಾವು ನಿನ್ನ ಮೊದಲೇ ಹೊರಟುಹೋಗಿರುವ

ಸರ್ವಪಾರ್ಥಿವರಂತೆ ಏಕೆ ಹೋಗುತ್ತಿಲ್ಲ? ಪರಮಗತಿಯನ್ನನುಸರಿಸಿ ಹೋಗುತ್ತಿರುವ ನಿನ್ನನ್ನು ನಾವು ಮೂವರು ಮಾತ್ರ ಅನುಸರಿಸಿ ಬರುತ್ತಿಲ್ಲ ಎಂದು ನಾವು ಪರಿತಪಿಸುತ್ತಿದ್ದೇವೆ. ನಿನ್ನನ್ನು ಕಳೆದುಕೊಂಡ ನಾವು ನಿನ್ನ ಸುಕೃತಗಳನ್ನು ಸ್ಮರಿಸಿಕೊಳ್ಳುತ್ತಾ ಸ್ವರ್ಗಹೀನರಾಗಿ, ಸಂಪತ್ತುಗಳನ್ನು ಕಳೆದುಕೊಂಡು ಸುತ್ತುತ್ತಿರುತ್ತೇವೆ. ನಿನ್ನನ್ನು ಅನುಸರಿಸಿ ಬರದೇ ಇರುವ ನಮ್ಮ ಈ ಕೃತ್ಯಕ್ಕೆ ಯಾವ ಹೆಸರಿದೆ? ನೀನಿಲ್ಲದೇ ದುಃಖದಿಂದ ಈ ಭೂಮಿಯನ್ನು ಸುತ್ತುವ ನಮಗೆ ಎಲ್ಲಿಯ ಶಾಂತಿ ಮತ್ತು ಎಲ್ಲಿಯ ಸುಖ? ನೀನಾದರೋ ಈ ಮೊದಲೇ ಹೋಗಿರುವ ಮಹಾರಥರನ್ನು ಸೇರಿ ಯಥಾಶ್ರೇಷ್ಠವಾಗಿ ಯಥಾಜ್ಯೇಷ್ಠವಾಗಿ ನನ್ನ ಮಾತಿನಿಂದ ಗೌರವಿಸು! ಸರ್ವಧನುಷ್ಮತರಿಗೆ ಕೇತುಪ್ರಾಯನಾದ ಆಚಾರ್ಯನನ್ನು ಸಂಪೂಜಿಸಿ ಇಂದು ನಾನು ಧೃಷ್ಟದ್ಯುಮ್ನನನ್ನು ಸಂಹರಿಸಿದೆ ಎನ್ನುವುದನ್ನು ಹೇಳು. ಈ ಮೊದಲೇ ಸ್ವರ್ಗಕ್ಕೆ ಹೊರಟುಹೋಗಿರುವ ಪಾರ್ಥಿವಸತ್ತಮರನ್ನು – ಸುಮಹಾರಥ ಬಾಹ್ಲಿಕ ರಾಜ, ಸೈಂಧವ, ಸೋಮದತ್ತ ಮತ್ತು ಭೂರಿಶ್ರವರನ್ನು ನನ್ನ ಈ ಮಾತಿನಿಂದ ಆಲಂಗಿಸಿ ಅವರ ಕುಶಲವನ್ನು ಪ್ರಶ್ನಿಸು.”

ಹೀಗೆ ಹೇಳಿ ಅಶ್ವತ್ಥಾಮನು ತೊಡೆಯೊಡೆದು ಅಚೇತಸನಾಗಿದ್ದ ರಾಜನನ್ನು ದಿಟ್ಟಿಸಿನೋಡುತ್ತಾ ಪುನಃ ಈ ಮಾತನ್ನಾಡಿದನು:

> "ದುರ್ಯೋಧನ! ನೀನಿನ್ನೂ ಜೀವಿಸಿರುವೆ! ಕೇಳಲು ಇಂಪಾಗಿರುವ ಈ ಮಾತನ್ನು ಕೇಳು. ಈಗ ಪಾಂಡವರಲ್ಲಿ ಕೇವಲು ಏಳುಮಂದಿ ಮತ್ತು ಧಾರ್ತರಾಷ್ಟ್ರರಲ್ಲಿ ನಾವು ಮೂವರು ಮಾತ್ರ ಉಳಿದುಕೊಂಡಿದ್ದೇವೆ! ಅವರು ಐವರು ಸಹೋದರರು, ವಾಸುದೇವ ಮತ್ತು ಸಾತ್ಯಕಿ. ಹಾಗೆಯೇ ನಾನು, ಕೃತವರ್ಮ ಮತ್ತು ಶಾರದ್ವತ ಕೃಪ. ದ್ರೌಪದೇಯರೆಲ್ಲರೂ ಹತರಾಗಿದ್ದಾರೆ. ಧೃಷ್ಟದ್ಯುಮ್ನನೂ, ಅವನ ಮಕ್ಕಳೂ, ಪಾಂಚಾಲರೂ ಮತ್ತು ಅಳಿದುಳಿದಿದ್ದ ಮತ್ಸ್ಯರು ಎಲ್ಲರೂ ಹತರಾಗಿದ್ದಾರೆ. ಪ್ರತೀಕಾರ ಮಾಡಿದುದನ್ನು ನೋಡು! ಪಾಂಡವರೂ ಹತಪುತ್ರರಾಗಿದ್ದಾರೆ. ಶಿಬಿರದಲ್ಲಿ ಮಲಗಿರುವ ಅವರೆಲ್ಲರೂ ಸೈನಿಕ-ವಾಹನಗಳೊಂದಿಗೆ ಹತರಾಗಿದ್ದಾರೆ. ರಾತ್ರಿ ಶಿಬಿರವನ್ನು ಪ್ರವೇಶಿಸಿ ನಾನು ಪಾಪಕರ್ಮಿ ಧೃಷ್ಟದ್ಯುಮ್ನನನ್ನು ಪಶುವಂತೆ ಗುದ್ದಿ ಕೊಂದೆನು."

ಮನಸ್ಸಿಗೆ ಪ್ರಿಯವಾದ ಆ ಮಾತನ್ನು ಕೇಳಿ ದುರ್ಯೋಧನನು ಪುನಃ

ಚೇತರಿಸಿಕೊಂಡು ಈ ಮಾತನ್ನಾಡಿದನು:

> "ಅಶ್ವತ್ಥಾಮ! ಗಾಂಗೇಯ, ಕರ್ಣ ಮತ್ತು ನಿನ್ನ ತಂದೆ ಇವರು ಮಾಡಲಾಗದ ಕಾರ್ಯವನ್ನು ಇಂದು ನೀನು ಕೃಪ-ಭೋಜರನ್ನು ಕೂಡಿಕೊಂಡು ಮಾಡಿದ್ದೀಯೆ! ಶಿಖಂಡಿಯೊಡನೆ ಆ ಕ್ಷುದ್ರ ಸೇನಾಪತಿಯು ನಿನ್ನಿಂದ ಹತನಾದನೆಂದರೆ ಇಂದು ನಾನು ನನ್ನನ್ನು ಮಘವತ ಇಂದ್ರನ ಸಮನೆಂದೇ ಅಂದುಕೊಳ್ಳುತ್ತೇನೆ! ಒಳ್ಳೆಯದಾಗಲಿ! ನಿಮಗೆ ಮಂಗಳವಾಗಲಿ! ನಾವು ಪುನಃ ಸ್ವರ್ಗದಲ್ಲಿ ಸಂಧಿಸೋಣ!"

ಎಂದು ಹೇಳಿ ಮಹಾಮನಸ್ವಿ ಕುರುರಾಜನು ಸುಮ್ಮನಾದನು. ಕೂಡಲೇ ಆ ವೀರನು ಸುಹೃದಯರಿಗೆ ಶೋಕವನ್ನು ವಹಿಸಿಕೊಟ್ಟು ಪ್ರಾಣಗಳನ್ನು ತೊರೆದನು.

ಹಾಗೆಯೇ ಆಗಲೆಂದು ಅವರು ಆ ನೃಪನನ್ನು ಆಲಂಗಿಸಿ, ಪುನಃ ಪುನಃ ಅವನನ್ನು ನೋಡುತ್ತಾ ತಮ್ಮ ತಮ್ಮ ರಥಗಳನ್ನು ಏರಿದರು.

ಹೀಗೆ ಬೆಳಗಿನಜಾವದಲ್ಲಿ ದುರ್ಯೋಧನನ ಕರುಣಾಜನಕ ಮಾತನ್ನು ಕೇಳಿ ಸಂಜಯನು ಶೋಕಾರ್ತನಾಗಿ ಹಸ್ತಿನಾಪುರಕ್ಕೆ ಓಡಿ ಬಂದನು. ಅಂದು ದುರ್ಯೋಧನನು ಸ್ವರ್ಗಕ್ಕೆ ಹೊರಟುಹೋಗಲು ಶೋಕಾರ್ತನಾದ ಅವನಿಗೆ ಋಷಿಯು ಕೊಟ್ಟಿದ್ದ ಆ ದಿವ್ಯದರ್ಶಿತ್ವವು

ಕಳೆದುಹೋಯಿತು. ಸಂಜಯನು ಹೇಳಿದ ಈ ಪುತ್ರ-ಬಂಧುಗಳ ವಧೆಯ ವಾರ್ತೆಯನ್ನು ಕೇಳಿ ಆ ನೃಪತಿಯು ದೀರ್ಘವಾದ ಬಿಸಿ ನಿಟ್ಟುಸಿರು ಬಿಡುತ್ತಾ ಚಿಂತಾಮಗ್ನನಾದನು.

# ಪಾಂಡವರು ಅಶ್ವತ್ಥಾಮನಿಗೆ ಪ್ರತೀಕಾರವನ್ನೆಸಗಿದುದು

## ಯುಧಿಷ್ಠಿರ ಶೋಕ

ಆ ರಾತ್ರಿಯು ಕಳೆಯಲು ಮಲಗಿರುವಾಗ ನಡೆದ ಕದನದ ಕುರಿತು ಧೃಷ್ಟದ್ಯುಮ್ನನ ಸಾರಥಿಯು ಧರ್ಮರಾಜನಿಗೆ ವರದಿಮಾಡಿದನು.

> “ಮಹಾರಾಜ! ರಾತ್ರಿ ದ್ರೌಪದೇಯರು ದ್ರುಪದನ ಮಕ್ಕಳೊಂದಿಗೆ ಮೈಮರೆತು ನಿಶ್ಚಿಂತೆಯಿಂದ ತಮ್ಮ ತಮ್ಮ ಶಿಬಿರಗಳಲ್ಲಿ ಮಲಗಿದ್ದರು. ರಾತ್ರಿವೇಳೆ ಶಿಬಿರಕ್ಕೆ ಧಾಳಿಯಿಟ್ಟ ಕೃತವರ್ಮ, ಗೌತಮ ಕೃಪ ಮತ್ತು ಅಶ್ವತ್ಥಾಮರ ಕ್ರೂರ ಪಾಪದಿಂದ ನಾವುಗಳು ಹತರಾದೆವು! ಅವರು ಪ್ರಾಸ-ಶಕ್ತಿ-ಪರಶುಗಳಿಂದ ಸಹಸ್ರಾರು ನರ-ಗಜ-ಅಶ್ವಗಳನ್ನು ಕತ್ತರಿಸಿ ನಿನ್ನ ಸೇನೆಯನ್ನು ನಿಃಶೇಷಗೊಳಿಸಿದರು. ಮಹಾವನವನ್ನು

ಪರಶುಗಳಿಂದ ತುಂಡರಿಸುವಾಗ ಹೇಗೋ ಹಾಗೆ ನಿನ್ನ ಸೇನೆಯಲ್ಲಿ ಮಹಾಶಬ್ಧವು ಕೇಳಿಬರುತ್ತಿತ್ತು. ಕೃತವರ್ಮನು ಬೇರೆ ಕಡೆ ಗಮನಹರಿಸಿದ್ದಾಗ ಆ ಸೇನೆಯಲ್ಲಿ ನಾನೊಬ್ಬನೇ ಹೇಗೋ ಮಾಡಿಕೊಂಡು ಉಳಿದುಕೊಂಡೆನು.”

ಆ ಅಮಂಗಳಕರ ವಾಕ್ಯವನ್ನು ಕೇಳಿ ಯುಧಿಷ್ಠಿರನು ಪುತ್ರಶೋಕಸಮನ್ವಿತನಾಗಿ ನೆಲದಮೇಲೆ ಬಿದ್ದನು. ಕೆಳಗೆ ಬೀಳುವುದರೊಳಗೆ ಅವನನ್ನು ಸಾತ್ಯಕಿ, ಭೀಮಾರ್ಜುನರು ಮತ್ತು ಮಾದ್ರೀಪುತ್ರ ಪಾಂಡವರಿಬ್ಬರೂ ಹಿಡಿದು ತಡೆದರು. ಚೇತರಿಸಿಕೊಂಡ ಕೌಂತೇಯನು ಆತುರದಿಂದ ಶೋಕವಿಹ್ವಲ ಸ್ವರದಲ್ಲಿ

“ಶತ್ರುಗಳನ್ನು ಜಯಿಸಿ ನಂತರ ಅವರಿಂದಲೇ ಸೋತೆವು!”

ಎಂದು ಪರಿವೇದಿಸಿದನು.

“ದಿವ್ಯದೃಷ್ಟಿಯಿರುವವರಿಗೂ ಪರಿಣಾಮಗಳ ಗತಿಯನ್ನು ತಿಳಿಯುವುದು ಕಷ್ಟ. ಸೋತ ಅವರು ಗೆದ್ದುಬಿಟ್ಟರು. ವಿಜಯಿಗಳಾಗಿದ್ದ ನಾವು ಸೋತುಹೋದೆವು! ಭ್ರಾತೃಗಳನ್ನು, ಸ್ನೇಹಿತರನ್ನು, ಪಿತೃಗಳನ್ನು, ಪುತ್ರರನ್ನು, ಸುಹೃದಯರ ತಂಡಗಳನ್ನು, ಬಂಧುಗಳನ್ನು, ಅಮಾತ್ಯರನ್ನು ಮತ್ತು ಮೊಮ್ಮಕ್ಕಳನ್ನು ಸಂಹರಿಸಿ ನಮ್ಮೆಲ್ಲರನ್ನೂ ಅವರು

ಪರಾಜಿತಗೊಳಿಸಿದರು. ಅನರ್ಥಗಳೂ ಅರ್ಥಸದೃಶವಾಗಿರುತ್ತವೆ. ಹಾಗೆಯೇ ಅರ್ಥಗಳೂ ಅನರ್ಥಗಳಾಗಿ ಕಾಣುತ್ತವೆ. ಈ ಜಯವು ಪರಾಜಯಕರವಾಗಿದೆ. ಆದುದರಿಂದ ಈ ಜಯವು ಪರಾಜಯವೇ ಸರಿ! ಯಾವ ದುರ್ಮತಿಯು ವಿಜಯಿಯಾಗಿಯೂ ಪಶ್ಚಾತ್ತಾಪಪಡುತ್ತಾನೋ ಅವನು ಹೇಗೆ ತಾನೇ ವಿಜಯಿಯಾದೆನೆಂದು ಒಪ್ಪಿಕೊಳ್ಳಬಹುದು? ನಾನು ಶತ್ರುಗಳಿಂದ ಜಯಿಸಲ್ಪಟ್ಟಿದ್ದೇನೆ! ಸುಹೃದಯರ ವಧೆಯ ಪಾಪವನ್ನೆಸಗಿ ನಾವು ಗಳಿಸಿದ ಜಯಕ್ಕೆ ಧಿಕ್ಕಾರ! ವಿಜಯಗಳಿಸಿದವರನ್ನು ಎಚ್ಚರಿಕೆಯಿಂದಿದ್ದ ಜಿತಾಕಾಂಕ್ಷಿ ಶತ್ರುಗಳು ಸೋಲಿಸಿಬಿಟ್ಟರು! ಯುದ್ಧದಲ್ಲಿ ಕರ್ಣಿ-ನಾಲೀಕಗಳೇ ಹಲ್ಲಾಗಿದ್ದ, ಖಡ್ಗವೇ ನಾಲಿಗೆಯಂತಿದ್ದ, ಧನುಸ್ಸೇ ಬಾಯಿಯಂತಿದ್ದ, ರೌದ್ರ ಟೇಂಕಾರವೇ ಗರ್ಜನೆಯಂತಿದ್ದ, ಕ್ರುದ್ಧ ನರಸಿಂಹ ಕರ್ಣನೊಡನೆ ಹೋರಾಡುವಾಗಲೂ ಪಲಾಯನ ಮಾಡದಿದ್ದ ನಮ್ಮವರು ಮೈಮರೆತು ಮಲಗಿರುವಾಗ ಹತರಾದರಲ್ಲ! ಯಾರ ರಥವು ಸಾಗರದಂತಿತ್ತೋ, ಯಾರ ಶರವರ್ಷಗಳು ಅಲೆಗಳಿಂತಿದ್ದವೋ, ಅಲಂಕಾರಗಳೇ ಸಾಗರದ

ರತ್ನಗಳಂತಿದ್ದವೋ, ವಾಹನಗಳೇ ಸಮುದ್ರದಿಂದೆದ್ದ ಕುದುರೆಗಳಂತಿದ್ದವೋ, ಯಾರ ಶಕ್ತಿ-ಋಷ್ಟಿಗಳು ಸಾಗರದ ಮೀನುಗಳಂತಿದ್ದವೋ, ಯಾರ ಧ್ವಜಗಳೇ ಹಾವು-ಮೊಸಳೆಗಳಂತಿದ್ದವೋ, ಯಾರ ಧನುಸ್ಸೇ ಸುಳಿಯಂತಿತ್ತೋ, ಯಾರ ಮಹಾ ಬಾಣಗಳು ಸಮುದ್ರದ ನೊರೆಗಳಂತಿದ್ದವೋ, ಯಾರ ಸಂಗ್ರಾಮವು ಚಂದ್ರೋದಯದಲ್ಲಿ ಉಕ್ಕಿಬರುವ ಅಲೆಯಂತಿದ್ದಿತೋ, ಯಾರ ಟೇಂಕಾರ ಮತ್ತು ರಥಚಕ್ರಗಳ ಶಬ್ಧಗಳು ಸಮುದ್ರದ ಗರ್ಜನೆಯಂತಿದ್ದವೋ ಆ ದ್ರೋಣನೆಂಬ ಸಮುದ್ರವನ್ನೇ ನಮ್ಮ ಕಡೆಯ ಯೋಧರು ಬಗೆ ಬಗೆಯ ಶಸ್ತ್ರಗಳನ್ನೇ ನೌಕೆಗಳನ್ನಾಗಿಸಿಕೊಂಡು ದಾಟಿದರು. ಆ ರಾಜಪುತ್ರರೇ ಇಂದು ಪ್ರಮಾದದಿಂದ ಹತರಾಗಿದ್ದಾರೆ! ಈ ಜೀವಲೋಕದಲ್ಲಿ ನರರಿಗೆ ಪ್ರಮಾದಕ್ಕಿಂತಲೂ ಹೆಚ್ಚಿನ ಮೃತ್ಯುವು ಬೇರೆ ಯಾವುದೂ ಇರಲಿಕ್ಕಿಲ್ಲ! ಪ್ರಮತ್ತನಾದ ನರನನ್ನು ಅರ್ಥಗಳು ಎಲ್ಲಕಡೆಗಳಿಂದಲೂ ತ್ಯಜಿಸಿ ಅವನನ್ನು ಅನರ್ಥಗಳೇ ಮುತ್ತಿಕೊಳ್ಳುತ್ತವೆ. ಎತ್ತರದಲ್ಲಿ ಹಾರಾಡುತ್ತಿದ್ದ ಯಾರ ಉತ್ತಮ ಧ್ವಜಗಳೇ ಹೊಗೆಯಂತಿದ್ದವೋ, ಯಾರ ಶರವೃಷ್ಟಿಗಳೇ ಜ್ವಾಲೆಗಳಂತಿದ್ದವೋ, ಯಾರ ಕೋಪವೇ ಚಂಡಮಾರುತದಂತೆ ಬೆಂಕೆಯನ್ನು ಉರಿಸುತ್ತಿತ್ತೋ, ಯಾರ

ಟೇಂಕಾರ-ಚಪ್ಪಾಳೆ ಮತ್ತು ರಥಚಕ್ರಗಳ ಶಬ್ಧಗಳೂ ಉರಿಯುತ್ತಿರುವ ಬೆಂಕಿಯ ಚಟ ಚಟಾ ಶಬ್ಧದಂತಿದ್ದವೋ, ಯಾರ ನಾನಾವಿಧದ ಶಸ್ತ್ರಗಳು ಹೋಮದ ಆಹುತಿಗಳಂತಿದ್ದವೋ, ಮಹಾರಣದಲ್ಲಿ ಕಾಡ್ಗಿಚ್ಚಿನಂತಿದ್ದ ಭೀಷ್ಮನ ಕೋಟಿಗಟ್ಟಲೇ ಶಸ್ತ್ರವೇಗಗಳನ್ನು ಸಹಿಸಿದ್ದ ನಮ್ಮ ರಾಜಪುತ್ರರು ಇಂದು ಪ್ರಮಾದದಿಂದ ಹತರಾದರು! ಪ್ರಮತ್ತನಾಗಿರುವ ನರನಿಗೆ ವಿದ್ಯೆ, ತಪಸ್ಸು, ಸಂಪತ್ತು ಅಥವಾ ವಿಪುಲ ಯಶಸ್ಸು ದೊರೆಯಲಾರದು! ಜಾಗರೂಕತೆಯಿಂದ ಸರ್ವ ಶತ್ರುಗಳನ್ನೂ ಸಂಹರಿಸಿ ಸುಖಪಡುತ್ತಿರುವ ಮಹೇಂದ್ರನನ್ನಾದರೂ ನೋಡಿರಿ! ಸಮೃದ್ಧ ವರ್ತಕರು ಮಹಾಸಮುದ್ರವನ್ನು ದಾಟಿ ಹಳ್ಳವನ್ನು ಕಂಡು ತಾತ್ಸಾರಭಾವದಿಂದ ಅಜಾಗರೂಕರಾಗಿದ್ದು ಆ ಪುಟ್ಟ ಹಳ್ಳದಲ್ಲಿಯೇ ಮುಳುಗಿಹೋಗುವಂತೆ ಯಾವ ವಿಶೇಷಕಾರಣವೂ ಇಲ್ಲದೇ ಕೇವಲ ಅಜಾಗರೂಕತೆಯಿಂದಾಗಿ ಇಂದ್ರೋಪಮ ರಾಜಪುತ್ರ-ಪೌತ್ರರು ಹತರಾದುದನ್ನು ನೋಡು! ಮಲಗಿರುವಾಗ ಕುಪಿತ ಶತ್ರುಗಳಿಂದ ಹತರಾದ ಅವರು ನಿಸ್ಸಂಶಯವಾಗಿ ಸ್ವರ್ಗಕ್ಕೇ ಹೋಗಿ ಪ್ರಪನ್ನರಾಗಿರಬೇಕು! ಸಾಧ್ವೀ ಕೃಷ್ಣೆಯು

ಶೋಕಾರ್ಣವದಲ್ಲಿ ಮುಳುಗಿ ಹೇಗೆ ನಾಶಗೊಳ್ಳುವುದಿಲ್ಲ ಎಂದು ಈಗ ನಾನು ಶೋಕಿಸುತ್ತಿದ್ದೇನೆ. ಸಹೋದರರು, ಪುತ್ರರು ಹಾಗೂ ವೃದ್ಧ ತಂದೆ ಪಾಂಚಾಲರಾಜನೂ ನಾಶಗೊಂಡರೆನ್ನುವುದನ್ನು ಕೇಳಿ ಅವಳು ನಿಶ್ಚಯವಾಗಿಯೂ ಭೂಮಿಯ ಮೇಲೆ ಮೂರ್ಛಿತಳಾಗಿ ಬೀಳುತ್ತಾಳೆ! ಶೋಕದಿಂದಾಗಿ ಅವಳು ಒಣಗಿದ ಕಡ್ಡಿಯಂತಾಗಿಬಿಟ್ಟಿದ್ದಾಳೆ! ಸುಖಗಳಿಗೆ ಅರ್ಹಳಾಗಿರುವ ಅವಳು ಮುಂದೇನಾಗುವಳೆಂದು ನಾನು ಊಹಿಸಲೂ ಅಸಮರ್ಥನಾಗಿದ್ದೇನೆ. ಪುತ್ರಕ್ಷಯ ಮತ್ತು ಭ್ರಾತೃವಧೆಗಳ ಕುರಿತು ಕೇಳಿ ಶೋಕಾಗ್ನಿಯಲ್ಲಿ ಬೆಂದುಹೋಗುತ್ತಾಳೆ!”

ಹೀಗೆ ಆರ್ತನಾಗಿ ಪರಿವೇದಿಸುತ್ತಾ ಆ ಕುರುಗಳ ರಾಜನು ನಕುಲನಿಗೆ ಹೇಳಿದನು:

“ಹೋಗು! ಮಂದಭಾಗ್ಯಳಾದ ಆ ರಾಜಪುತ್ರಿಯನ್ನು ತಾಯಿಯ ಕಡೆಯ ಸ್ತ್ರೀಯರ ಸಮೇತವಾಗಿ ಇಲ್ಲಿಗೆ ಕರೆದುಕೊಂಡು ಬಾ!”

ಧರ್ಮದಲ್ಲಿ ಧರ್ಮನಿಗೆ ಸಮನಾಗಿದ್ದ ರಾಜನ ಆ ಮಾತನ್ನು ಸ್ವೀಕರಿಸಿ ಮಾದ್ರೀಸುತನು ರಥದಲ್ಲಿ ಕುಳಿತು ಪಾಂಚಾಲರಾಜನ ದೇವಿಯರು

ಮತ್ತು ಪತ್ನಿಯರಿರುವಲ್ಲಿಗೆ ಹೋದನು. ಮಾದ್ರೀಸುತನನ್ನು ಕಳುಹಿಸಿಕೊಟ್ಟು ಆಜಮೀಢನು ಶೋಕಾರ್ದಿತ ಸುಹೃದಯರ ಸಹಿತ ರೋದಿಸುತ್ತಲೇ ಭೂತಗಣಗಳಿಂದ ತುಂಬಿಹೋಗಿದ್ದ ಸುತರು ಅಸುನೀಗಿದ್ದ ಸ್ಥಳಕ್ಕೆ ಹೋದನು. ಅವನು ಅಲ್ಲಿಗೆ ಪ್ರವೇಶಿಸಿ ರಕ್ತದಲ್ಲಿ ತೋಯ್ದು ಹೋಗಿದ್ದ ಮತ್ತು ನೆಲದಮೇಲೆ ಮಲಗಿದ್ದ, ಶಿರಗಳನ್ನು ಕಳೆದುಕೊಂಡು ಉಗ್ರವಾಗಿ ಕಾಣುತ್ತಿದ್ದ, ಪುತ್ರರ, ಸುಹೃದಯರ ಮತ್ತು ಸಖರ ತುಂಡು ತುಂಡಾಗಿದ್ದ ಮೃತ ಶರೀರಗಳನ್ನು ನೋಡಿದನು. ಅವರನ್ನು ನೋಡಿ ಧರ್ಮಭೃತರಲ್ಲಿ ಶ್ರೇಷ್ಠ ಕೌರವಾಗ್ರ್ಯ ಯುಧಿಷ್ಠಿರನು ತುಂಬಾ ಆರ್ತರೂಪನಾಗಿ ಜೋರಾಗಿ ಕೂಗಿಕೊಂಡು ಮೂರ್ಛಿತನಾಗಿ ಅನುಯಾಯಿಗಳೊಡನೆ ನೆಲದ ಮೇಲೆ ಬಿದ್ದುಬಿಟ್ಟನು. ರಣದಲ್ಲಿ ಮಕ್ಕಳೂ, ಮೊಮ್ಮಕ್ಕಳೂ, ಸ್ನೇಹಿತರೂ ಹತರಾದುದನ್ನು ನೋಡಿ ಮಹಾದುಃಖದಿಂದ ಅವನು ಸಂತಪ್ತನಾಗಿಹೋದನು. ಪುತ್ರ-ಪೌತ್ರರನ್ನೂ, ಸಹೋದರರರನ್ನೂ, ಸ್ವಜನರನ್ನೂ ಸ್ಮರಿಸಿಕೊಳ್ಳುತ್ತಿದ್ದ ಆ ಮಹಾತ್ಮನ ಶೋಕವು ಇನ್ನೂ ಹೆಚ್ಚಾಯಿತು. ಕಂಬನಿಗಳಿಂದ ಕಣ್ಣುಗಳು ತುಂಬಿಹೋಗಿದ್ದ, ನಡುಗುತ್ತಾ ಎಚ್ಚರದಪ್ಪುತ್ತಿದ್ದ ಅವನನ್ನು ತುಂಬಾ ವ್ಯಾಕುಲಗೊಂಡಿದ್ದ ಸುಹೃದಯರು ಸಂತಯಿಸತೊಡಗಿದರು.

## ಅಶ್ವತ್ಥಾಮನ ಸಂಹಾರವಾಗದಿದ್ದರೆ ತಾನು ಸಾಯುವೆನೆಂದು

## ದ್ರೌಪದಿಯು ಪ್ರಾಯೋಪವೇಶಕ್ಕೆ ಕುಳಿತುಕೊಂಡಿದುದು

ಅದೇ ಕ್ಷಣದಲ್ಲಿ ಆದಿತ್ಯವರ್ಚಸ ರಥದಲ್ಲಿ ನಕುಲನು ಪರಮ ಆರ್ತೆ ಕೃಷ್ಣೆಯನ್ನು ಅಲ್ಲಿಗೆ ಕರೆತಂದನು. ಉಪಪ್ಲವ್ಯಕ್ಕೆ ಹೋಗಿದ್ದ ಅವಳು ತನ್ನ ಪುತ್ರರೆಲ್ಲರ ವಿನಾಶದ ಮಹಾ ಅಪ್ರಿಯ ವಿಷಯವನ್ನು ಕೇಳಿ ವ್ಯಥಿತಳಾಗಿದ್ದಳು. ಚಂಡಮಾರುತಕ್ಕೆ ಸಿಲುಕಿದ ಬಾಳೆಯ ಮರದಂತೆ ಶೋಕಾರ್ತಳಾಗಿದ್ದ ಕೃಷ್ಣೆಯು ರಾಜನ ಬಳಿಸೇರಿ ಭೂಮಿಯ ಮೇಲೆ ಬಿದ್ದಳು. ಅರಳಿದ ಕಮಲದ ದಳಗಳಂಥಹ ವಿಶಾಲ ಕಣ್ಣುಗಳಿದ್ದ ಅವಳ ಮುಖವು ಶೋಕಕರ್ಶಿತಗೊಂಡು ಒಡನೆಯೇ ರಾಹುಗ್ರಸ್ತ ಚಂದ್ರನಂತೆ ಕಾಂತಿಹೀನವಾಯಿತು. ಅವಳು ಕೆಳಗೆ ಬೀಳುತ್ತಿರುವುದನ್ನು ನೋಡಿ ಸತ್ಯವಿಕ್ರಮಿ ಕುಪಿತ ವೃಕೋದರನು ಅವಳಿದ್ದಲ್ಲಿಗೆ ಹಾರಿ ತನ್ನ ಎರಡೂ ಕೈಗಳಿಂದ ಅವಳನ್ನು ಹಿಡಿದುಕೊಂಡನು.

ಭೀಮಸೇನನಿಂದ ಸಮಾಧಾನಗೊಳಿಸಲ್ಪಟ್ಟ ಭಾಮಿನಿ ಕೃಷ್ಣೆಯು ರೋದಿಸುತ್ತಾ ಭ್ರಾತರರೊಂದಿಗಿದ್ದ ಪಾಂಡವನಿಗೆ ಹೇಳಿದಳು:

> “ರಾಜನ್! ಅದೃಷ್ಟವಶಾತ್ ನೀನು ಕ್ಷತ್ರಧರ್ಮದಂತೆ ನಿನ್ನ ಮಕ್ಕಳನ್ನು ಯಮನಿಗಿತ್ತು ಇಂದು ಈ ಅಖಿಲ ಭೂಮಿಯನ್ನು ಭೋಗಿಸುವಂತವನಾಗಿದ್ದೀಯೆ! ಒಳ್ಳೆಯದಾಯಿತು! ನೀನು ಕುಶಲಿಯಾಗಿದ್ದುಕೊಂಡು ಈ ಇಡೀ ಭೂಮಿಯನ್ನು ಪಡೆದು

ಮತ್ತ ಮಾತಂಗದಂತೆ ನಡೆಯುತ್ತಿದ್ದ ಸೌಭದ್ರನನ್ನು ಸ್ಮರಿಸಿಕೊಳ್ಳುತ್ತಿಲ್ಲ! ಒಳ್ಳೆಯದಾಯಿತು! ನನ್ನ ಶೂರ ಮಕ್ಕಳು ಧರ್ಮದಿಂದಾಗಿ ಮಡಿದಿದ್ದಾರೆ ಎನ್ನುವುದನ್ನು ಕೇಳಿ ಉಪಪ್ಲವ್ಯದಲ್ಲಿದ್ದ ನನಗೇನಾಗಿರಬಹುದೆಂದು ನೀನು ಯೋಚಿಸುತ್ತಿಲ್ಲ! ಪಾಪಕರ್ಮಿ ದ್ರೌಣಿಯು ಮಲಗಿದ್ದವರನ್ನು ಸಂಹರಿಸಿದನು ಎನ್ನುವುದನ್ನು ಕೇಳಿ ಬೆಂಕಿಯು ಕಟ್ಟಿಗೆಯನ್ನು ಸುಡುವಂತೆ ಶೋಕವು ನನ್ನನ್ನು ಸುಡುತ್ತಿದೆ! ಪಾಂಡವರೇ! ಕೇಳಿಕೊಳ್ಳಿ! ಪಾಪಕರ್ಮವನ್ನೆಸಗಿದ ದ್ರೌಣಿಯ ಮತ್ತು ಅವನ ಅನುಯಾಯಿಗಳ ಜೀವವನ್ನು ನೀನು ಯುದ್ಧದಲ್ಲಿ ವಿಕ್ರಮದಿಂದ ಅಪಹರಿಸದೇ ಇದ್ದರೆ, ದ್ರೌಣಿಯು ಅವನ ಪಾಪಕರ್ಮದ ಫಲವನ್ನು ಪಡೆಯದೇ ಇದ್ದರೆ, ಇಲ್ಲಿಯೇ ನಾನು ಪ್ರಾಯೋಪವೇಶವನ್ನು ಮಾಡುತ್ತೇನೆ!”

ಪಾಂಡವ ಧರ್ಮರಾಜ ಯುಧಿಷ್ಠಿರನಿಗೆ ಹೀಗೆ ಹೇಳಿ ಯಾಜ್ಞಸೇನಿ ಯಶಸ್ವಿನೀ ಕೃಷ್ಣೆಯು ಪ್ರಾಯೋಪವೇಶಕ್ಕಾಗಿ ಕುಳಿತಳು. ಹಾಗೆ ಕುಳಿತಿದ್ದ ತನ್ನ ಪ್ರಿಯ ಮಹಿಷೀ ಚಾರುದರ್ಶನೆ ದ್ರೌಪದಿಗೆ ಧರ್ಮಾತ್ಮಾ ರಾಜರ್ಷಿ ಪಾಂಡವನು ಹೇಳಿದನು:

“ಶುಭೇ! ಧರ್ಮಜ್ಞೇ! ನಿನ್ನ ಪುತ್ರರು ಮತ್ತು ಸಹೋದರರು

ಧರ್ಮಾನುಸಾರವಾಗಿ ಯುದ್ಧಮಾಡಿ ಧರ್ಮಮಾರ್ಗದಲ್ಲಿಯೇ ನಿಧನವನ್ನು ಹೊಂದಿದ್ದಾರೆ. ಅವರ ಕುರಿತು ದುಃಖಿಸಬಾರದು. ದ್ರೋಣಪುತ್ರನು ಇಲ್ಲಿಂದ ದೂರದಲ್ಲಿರುವ ವನಕ್ಕೆ ಹೊರಟುಹೋಗಿದ್ದಾನೆ. ಅವನು ಅಲ್ಲಿ ಯುದ್ಧದಲ್ಲಿ ಹತನಾದುದು ನಿನಗಾದರೋ ಹೇಗೆ ತಿಳಿಯಬೇಕು?"

ದ್ರೌಪದಿಯು ಹೇಳಿದಳು:

"ದ್ರೋಣಪುತ್ರನ ಶಿರದಲ್ಲಿ ಸಹಜವಾದ ಮಣಿಯೊಂದಿದೆಯೆಂದು ಕೇಳಿದ್ದೇವೆ. ಯುದ್ಧದಲ್ಲಿ ಆ ಪಾಪಿಯನ್ನು ಸಂಹರಿಸಿ ಅವನ ಮಣಿಯನ್ನು ಅಪಹರಿಸಿದುದನ್ನು ನಾನು ನೋಡಬೇಕು! ರಾಜನ್! ಅದು ನಿನ್ನ ಶಿರದಲ್ಲಿರುವಂತೆ ಮಾಡಿದರೆ ಮಾತ್ರ ನಾನು ಜೀವಿಸಿರಬಲ್ಲೆ!"

## ಭೀಮನು ಅಶ್ವತ್ಥಾಮನನ್ನು ವಧಿಸಲು ಹೋದುದು

ರಾಜ ಪಾಂಡವನಿಗೆ ಹೀಗೆ ಹೇಳಿ ಚಾರುದರ್ಶನೆ ಕೃಷ್ಣೆಯು ಭೀಮಸೇನನ ಬಳಿಬಂದು ಕುಪಿತಳಾಗಿ ಈ ಮಾತನ್ನಾಡಿದಳು:

"ಭೀಮ! ಕ್ಷತ್ರಧರ್ಮವನ್ನು ನೆನಪಿಸಿಕೊಂಡು ನನ್ನನ್ನು ಕಾಪಾಡಬೇಕಾಗಿದೆ. ಮಘವಾನನು ಶಂಬರನನ್ನು ಹೇಗೋ ಹಾಗೆ ಆ ಪಾಪಿಷ್ಟನನ್ನು ನೀನು ಕೊಲ್ಲು! ವಿಕ್ರಮದಲ್ಲಿ ನಿನ್ನ ಸಮಾನ ಪುರುಷನು ಯಾರೂ ಇಲ್ಲ! ವಾರಣಾವತ ನಗರದಲ್ಲಿ ಹಿಡಿಂಬನನ್ನು ನೋಡಿ ಪರಮವ್ಯಸನಕ್ಕೆ ಸಿಲುಕಿದ್ದ ಪಾರ್ಥರಿಗೆ ನೀನು ದ್ವೀಪಪ್ರಾಯನಾಗಿ ಅವರನ್ನು ರಕ್ಷಿಸಿದೆಯೆಂದು ಸರ್ವಲೋಕಗಳಲ್ಲಿ ವಿಖ್ಯಾತವಾಗಿದೆ. ಹಾಗೆಯೇ ವಿರಾಟನಗರದಲ್ಲಿ ಕೀಚಕನಿಂದ ಬಹಳ ಪೀಡೆಗೊಳಗಾಗಿದ್ದ ನನ್ನನ್ನು ಮಘವಾನನು ಪೌಲೋಮಿಯನ್ನು ಹೇಗೋ ಹಾಗೆ ಆ ಕಷ್ಟದಿಂದ ನನ್ನನ್ನು ಪಾರುಮಾಡಿದ್ದೆ! ಹಿಂದೆ ಇನ್ನೂ ಅನ್ಯ ಮಹಾಕರ್ಮಗಳನ್ನು ಮಾಡಿದ್ದಂತೆ ನೀನು ದ್ರೌಣಿಯನ್ನು ಸಂಹರಿಸಿ ಸುಖಿಯಾಗಿರು!"

ಹಾಗೆ ಬಹುವಿಧವಾಗಿ ದುಃಖದಿಂದ ಪರಿವೇದಿತಳಾಗಿದ್ದ ಅವಳನ್ನು ನೋಡಿ ಮಹಾಬಲ ಕೌಂತೇಯ ಭೀಮಸೇನನು ಸಹಿಸಿಕೊಳ್ಳಲಾರದಾದನು. ಅವನು ಸುಂದರ ಚಿತ್ರಿತ ಮಾರ್ಗಣಗುಣವುಳ್ಳ ಧನುವನ್ನೆತ್ತಿಕೊಂಡು ಕಾಂಚನದ ವಿಚಿತ್ರಭಾಗಗಳನ್ನುಳ್ಳ ಮಹಾರಥವನ್ನು ಏರಿದನು. ನಕುಲನನ್ನು ಸಾರಥಿಯನ್ನಾಗಿ ಮಾಡಿಕೊಂಡು ದ್ರೋಣಪುತ್ರನ ವಧೆಯನ್ನು

ನಿಶ್ಚಯಿಸಿ ಶರದೊಂದಿಗೆ ಚಾಪವನ್ನು ಟೇಂಕರಿಸಿ ಕೂಡಲೇ ಅಶ್ವಗಳನ್ನು ಓಡಿಸಿದನು. ಪ್ರಚೋದಿತಗೊಂಡ ಆ ವಾಯುವೇಗದ ಶೀಘ್ರಗಾಮಿ ಕುದುರೆಗಳು ತ್ವರಿತ ವೇಗದಿಂದ ಮುಂದುವರೆದವು. ಪ್ರತಿಜ್ಞೆಯಿಂದ ಚ್ಯುತನಾಗದ ವೀರ್ಯವಾನ್ ಭೀಮನು ಶಿಬಿರದಿಂದ ಹೊರಟು ದ್ರೋಣಪುತ್ರನ ರಥದ ಮಾರ್ಗದಲ್ಲಿಯೇ ಪ್ರಯಾಣಮಾಡಿದನು.

## ಭೀಮನನ್ನು ಹಿಂಬಾಲಿಸಿ ಯುಧಿಷ್ಠಿರ ಮತ್ತು ಕೃಷ್ಣಾರ್ಜುನರು ಹೋದುದು

ಆ ದುರ್ಧರ್ಷನು ಹೊರಟುಹೋಗಲು ಯದುಗಳ ಋಷಭ ಪುಂಡರೀಕಾಕ್ಷನು ಕುಂತೀಪುತ್ರ ಯುಧಿಷ್ಠಿರನಿಗೆ ಹೇಳಿದನು:

> “ಭಾರತ! ನಿನ್ನ ಈ ಭ್ರಾತಾ ಪಾಂಡವ ಭರತನು ಪುತ್ರಶೋಕದ ಭಾರವನ್ನು ಹೊತ್ತು ಯುದ್ಧದಲ್ಲಿ ದ್ರೌಣಿಯನ್ನು ಸಂಹರಿಸಲು ಬಯಸಿ ಹೋಗುತ್ತಿದ್ದಾನೆ! ನಿನ್ನ ಎಲ್ಲ ಸಹೋದರರಲ್ಲಿ ಭೀಮನು ನಿನಗೆ ಅತ್ಯಂತ ಪ್ರಿಯನಾದವನು. ಇಂದು ಅವನು ಕಷ್ಟಕ್ಕೆ ಸಿಲುಕಲಿದ್ದಾನೆ. ಅವನ ಸಹಾಯಕ್ಕೆ ನೀನು ಏಕೆ ಏನನ್ನೂ ಮಾಡುತ್ತಿಲ್ಲ? ಪರಪುರಂಜಯ ದ್ರೋಣನು ತನ್ನ ಮಗನಿಗೆ ನೀಡಿದ್ದ ಬ್ರಹ್ಮಶಿರ ಎಂಬ ಅಸ್ತ್ರವು ಇಡೀ ಭೂಮಿಯನ್ನೇ ದಹಿಸಿಬಿಡಬಲ್ಲದು.

ಸರ್ವಧನುಷ್ಮತರಲ್ಲಿ ಕೇತುಪ್ರಾಯನಾದ ಆ ಮಹಾಭಾಗ ಆಚಾರ್ಯನು ಪ್ರೀತಿಯಿಂದ ಧನಂಜಯನಿಗೆ ಆ ಅಸ್ತ್ರವನ್ನು ಪ್ರತಿಪಾಲಿಸಿದ್ದನು. ಅದನ್ನು ಸಹಿಸಿಕೊಳ್ಳಲಾರದ ಅವನ ಪುತ್ರನು ಆ ಅಸ್ತ್ರವನ್ನು ಕೇಳಿಕೊಳ್ಳಲು ದ್ರೋಣನು ಅಸಂತೋಷನಾಗಿಯೇ ಅದನ್ನು ತನ್ನ ಮಗನಿಗೆ ಉಪದೇಶಿಸಿದ್ದನು. ತನ್ನ ಮಗನು ಚಪಲನೆಂದು ತಿಳಿದಿದ್ದ ಆ ಮಹಾತ್ಮ ಸರ್ವಧರ್ಮವಿದು ಆಚಾರ್ಯನು ಮಗನಿಗೆ ಸತತವೂ ಈ ಅನುಶಾಸನವಿತ್ತಿದ್ದನು: “ಮಗೂ! ರಣದಲ್ಲಿ ಪರಮ ಆಪತ್ತಿನಲ್ಲಿ ಸಿಲುಕಿಕೊಂಡಿದ್ದಾಗಲೂ ನೀನು ಈ ಅಸ್ತ್ರವನ್ನು ಉಪಯೋಗಿಸಕೂಡದು. ಅದರಲ್ಲೂ ವಿಶೇಷವಾಗಿ ಮನುಷ್ಯರ ಮೇಲೆ ಪ್ರಯೋಗಿಸಬಾರದು!” ಇದನ್ನು ಹೇಳಿದ ಗುರು ದ್ರೋಣನು ನಂತರ ಮಗನಿಗೆ “ನೀನು ಯಾವಾಗಲೂ ಸತ್ಪುರುಷರ ಮಾರ್ಗದಲ್ಲಿ ನಡೆಯುವವನಲ್ಲ ಎಂದು ನನಗೆ ತಿಳಿದಿದೆ!” ಎಂದೂ ಹೇಳಿದ್ದನು. ತಂದೆಯ ಆ ಅಪ್ರಿಯ ಮಾತನ್ನು ಸ್ವೀಕರಿಸಿ ದುಷ್ಟಾತ್ಮ ಅಶ್ವತ್ಥಾಮನು ಸರ್ವಕಲ್ಯಾಣಗಳಿಂದ ನಿರಾಶನಾಗಿ ಶೋಕಿಸುತ್ತಾ ಭೂಮಿಯಲ್ಲಿ ಅಲೆಯತೊಡಗಿದನು. ನೀವು ವನದಲ್ಲಿದ್ದಾಗ ಅವನು ದ್ವಾರಕೆಗೂ ಬಂದಿದ್ದ ಮತ್ತು ವೃಷ್ಣಿಗಳು ಅವನನ್ನು

ಪರಮ ಗೌರವದಿಂದ ಸತ್ಕರಿಸಿದ್ದರು. ಒಮ್ಮೆ ಅವನು ದ್ವಾರವತಿಯ ಹತ್ತಿರ ಸಮುದ್ರತೀರದಲ್ಲಿ ವಾಸಿಸುತ್ತಿದ್ದಾಗ ಏಕಾಂಗಿಯಾಗಿದ್ದ ನನ್ನನ್ನು ಒಂಟಿಯಾಗಿ ಸಂಧಿಸಿ ನಗುತ್ತಾ ಇದನ್ನು ಹೇಳಿದ್ದನು: “ಕೃಷ್ಣ! ಸತ್ಯಪರಾಕ್ರಮಿ ಮತ್ತು ಭಾರತರ ಆಚಾರ್ಯ ನನ್ನ ತಂದೆಯು ಉಗ್ರತಪಸ್ಸನ್ನು ಆಚರಿಸಿ ಅಗಸ್ತ್ಯನಿಂದ ದೇವಗಂಧರ್ವ ಪೂಜಿತ ಬ್ರಹ್ಮಶಿರ ಎಂಬ ಹೆಸರಿನ ಅಸ್ತ್ರವನ್ನು ಪಡೆದುಕೊಂಡಿದ್ದನು. ತಂದೆಯಲ್ಲಿದ್ದ ಆ ಅಸ್ತ್ರವು ಇಂದು ನನ್ನಲ್ಲಿಯೂ ಇದೆ. ನನ್ನಿಂದ ಈ ದಿವ್ಯಾಸ್ತ್ರವನ್ನು ಪಡೆದುಕೊಂಡು ನೀನು ನನಗೆ ರಣದಲ್ಲಿ ರಿಪುಹರಣಮಾಡಬಲ್ಲ ಚಕ್ರವನ್ನು ದಯಪಾಲಿಸು!” ಹೀಗೆ ಕೈಮುಗಿದು ನನ್ನ ಅಸ್ತ್ರವನ್ನು ಕೇಳುತ್ತಿದ್ದ ಅವನಿಗೆ ಪ್ರಯತ್ನಪಟ್ಟು ಪ್ರೀತಿಯಿಂದಲೇ ನಾನು ಹೇಳಿದೆ: “ದೇವ-ದಾನವ-ಗಂಧರ್ವ-ಮನುಷ್ಯ-ಪಕ್ಷಿ-ಉರಗಗಳಲ್ಲಿ ನನ್ನ ವೀರ್ಯದ ನೂರನೆಯ ಒಂದು ಭಾಗದಷ್ಟು ಸಮನಾದವರು ಯಾರೂ ಇಲ್ಲ. ಇದು ನನ್ನ ಧನುಸ್ಸು. ಇದು ಚಕ್ರ. ಇದು ಗದೆ. ನೀನು ನನ್ನಿಂದ ಯಾವ ಅಸ್ತ್ರವನ್ನು ಪಡೆಯಲಿಚ್ಛಿಸುವೆಯೋ ಆ ಅಸ್ತ್ರಗಳನ್ನು ನಾನು ನಿನಗೆ ಕೊಡುತ್ತೇನೆ. ಯಾವುದನ್ನು ಎತ್ತಿಕೊಳ್ಳಲು ಅಥವಾ ರಣದಲ್ಲಿ ಪ್ರಯೋಗಿಸಲು ನಿನಗೆ

ಸಾಧ್ಯವಾಗುವುದೋ ಅದನ್ನು ನೀನು, ನನಗೆ ಕೊಡಬೇಕೆಂದು ಬಯಸಿರುವ ಆ ಅಸ್ತ್ರವನ್ನು ಕೊಡದೇ, ನನ್ನಿಂದ ಪಡೆದುಕೊಳ್ಳಬಹುದು.” ನನ್ನೊಡನೆ ಸ್ಪರ್ಧಿಸುತ್ತಿದ್ದ ಅವನು ಸುಂದರ ವಜ್ರಮಯ ನಾಭಿಯ, ಸಹಸ್ರ ಅರೆಗಳ ಚಕ್ರವನ್ನು ಆರಿಸಿಕೊಂಡನು. ಚಕ್ರವನ್ನು ಎತ್ತಿಕೋ ಎಂದು ನಾನು ಹೇಳಿದ ನಂತರ ಬೇಗನೇ ಹಾರಿಬಂದು ಅವನು ಎಡಗೈಯಿಂದ ಚಕ್ರವನ್ನು ಹಿಡಿದುಕೊಂಡನು. ಆದರೆ ಅವನಿಗೆ ಅದನ್ನು ಎತ್ತುವುದಿರಲಿ ಅದಿದ್ದ ಸ್ಥಳದಿಂದ ಅಲುಗಿಸಲು ಕೂಡ ಅವನಿಗೆ ಸಾಧ್ಯವಾಗಲಿಲ್ಲ! ಆಗ ಅವನು ಬಲಗೈಯನ್ನೂ ಮುಂದೆ ಚಾಚಿ ಎರಡೂ ಕೈಗಳಿಂದ ಚಕ್ರವನ್ನು ಮೇಲೆತ್ತಲು ಪ್ರಯತ್ನಿಸಿದನು. ಸರ್ವ ಪ್ರಯತ್ನದಿಂದಲೂ ಅವನಿಗೆ ಅದನ್ನು ಹಿಡಿದೆತ್ತಲು ಸಾಧ್ಯವಾಗಲಿಲ್ಲ. ಹೀಗೆ ಸರ್ವಬಲವನ್ನುಪಯೋಗಿಸಿಯೂ ಅದನ್ನು ಅಲುಗಾಡಿಸಲು ಅಥವಾ ಎತ್ತಲು ಸಾಧ್ಯವಾಗದಿದ್ದಾಗ ಪರಮ ದುರ್ಮನನಾದ ದ್ರೌಣಿಯು ಪರಮ ಯತ್ನವನ್ನು ಮಾಡಿ ಆಯಾಸಗೊಂಡು ಹಿಂದೆ ಸರಿದನು. ಹಿಂದೆಸರಿದ ಮತ್ತು ಅದರಿಂದಾಗಿ ಮನಸ್ಸನ್ನು ಕೆಡಿಸಿಕೊಂಡಿದ್ದ ಉದ್ವಿಗ್ನ ಅಶ್ವತ್ಥಾಮನಿಗೆ ನಾನು ಹೀಗೆ ಹೇಳಿದ್ದೆನು: “ದೇವ-

ಮನುಷ್ಯರಲ್ಲಿ ಅತ್ಯಂತ ಪ್ರಾಮಾಣಿಕನೆಂದು ಖ್ಯಾತಿಗೊಂಡಿರುವ, ಗಾಂಡೀವಧನ್ವಿ, ಶ್ವೇತಾಶ್ವ, ಕಪಿಪ್ರವರನನನ್ನು ಧ್ವಜದಲ್ಲಿಟ್ಟಿಕೊಂಡಿರುವ, ಸಾಕ್ಷಾತ್ ದೇವದೇವೇಶ ಶಿತಿಕಂಠ ಉಮಾಪತಿ ಶಂಕರನನ್ನು ದ್ವಂದ್ವಯುದ್ಧದಲ್ಲಿ ಪರಾಜಯಗೊಳಿಸಲು ಪ್ರಯತ್ನಿಸಿ ತೃಪ್ತಿಗೊಳಿಸಿದ ಅರ್ಜುನನಿಗಿಂತ ಹೆಚ್ಚಿನ ಪ್ರಿಯ ಪುರುಷನು ಈ ಭುವಿಯಲ್ಲಿ ಬೇರೆ ಯಾರೂ ಇಲ್ಲ. ನನ್ನ ಪತ್ನಿಯರು ಮತ್ತು ಮಕ್ಕಳಲ್ಲಿಕೂಡ ಅವನಿಗೆ ನಾನು ಕೊಡಲಾರದವರು ಯಾರೂ ಇಲ್ಲ. ಬ್ರಾಹ್ಮಣ! ನನಗೆ ಅತ್ಯಂತ ಸುಹೃದನಾದ ಅಕ್ಲಿಷ್ಟಕರ್ಮಿ ಪಾರ್ಥನೂ ಕೂಡ ನೀನು ನನ್ನೊಡನೆ ಕೇಳಿದಂತೆ ಇದೂವರೆಗೂ ಕೇಳಿಲ್ಲ. ಹನ್ನೆರಡು ವರ್ಷಗಳು ಹಿಮವತ್ಪರ್ವತದಲ್ಲಿ ಬ್ರಹ್ಮಚರ್ಯದಿಂದ ಘೋರ ತಪಸ್ಸನ್ನು ಮಾಡಿದ ನನ್ನಿಂದ ಸಮಾನವ್ರತಚಾರಿಣಿ ರುಕ್ಮಿಣಿಯಲ್ಲಿ ಜನಿಸಿದ ಸನತ್ಕುಮಾರನ ತೇಜಸ್ಸುಳ್ಳ ಪ್ರದ್ಯುಮ್ನನೆಂಬ ನನ್ನ ಮಗನಿದ್ದಾನೆ. ಮೂಢ! ಆ ನನ್ನ ಮಗನೂ ಕೂಡ ಇಂದು ನೀನು ನನ್ನಿಂದ ಕೇಳಿದ ಈ ದಿವ್ಯವಾದ ಅಪ್ರತಿಮ ಚಕ್ರವನ್ನು ಇದೂವರೆಗೆ ಕೇಳಲಿಲ್ಲ! ನೀನು ಕೇಳಿದ ಇದನ್ನು ಎಂದೂ ಅತಿಬಲನಾದ ರಾಮನೂ, ಗದನೂ, ಸಾಂಬನೂ ನನ್ನನ್ನು

ಕೇಳಲಿಲ್ಲ! ನೀನು ಕೇಳುವ ಇದನ್ನು ದ್ವಾರಕಾವಾಸಿಗಳಲ್ಲಿ ಮತ್ತು ವೃಷ್ಣಿ-ಅಂಧಕ ಮಹಾರಥರಲ್ಲಿ ಬೇರೆ ಯಾರೂ ಮೊದಲು ಕೇಳಿರಲಿಲ್ಲ! ಅಯ್ಯಾ! ಭಾರತಾಚಾರ್ಯಪುತ್ರ! ಸರ್ವಯಾದವರಿಂದ ಸನ್ಮಾನಿತನಾಗಿರುವ ರಥಿಗಳಲ್ಲಿ ಶ್ರೇಷ್ಠನಾದ ನೀನು ಯಾರೊಡನೆ ಯುದ್ಧಮಾಡಲು ಬಯಸುತ್ತಿರುವೆ?" ನಾನು ಇದನ್ನು ಕೇಳಲು ದ್ರೌಣಿಯು ನನಗೆ ಉತ್ತರಿಸಿದ್ದನು: "ಕೃಷ್ಣ! ನಿನ್ನನ್ನು ಪೂಜಿಸಿ ನಿನ್ನೊಡನೆಯೇ ಯುದ್ಧಮಾಡಲು ಬಯಸಿದ್ದೆ. ಅಜೇಯನೆನಿಸಿಕೊಳ್ಳಬೇಕೆಂದೇ ನಾನು ನಿನ್ನ ದೇವದಾನವಪೂಜಿತ ಚಕ್ರವನ್ನು ಕೇಳಿದೆನು. ನಾನು ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ನಿನ್ನಿಂದ ನಾನು ಈ ದುರ್ಲಭ ಕಾಮನೆಯನ್ನು ಪಡೆಯದೇ ಹಿಂದಿರುಗುತ್ತೇನೆ. ನನ್ನನ್ನು ಮಂಗಳಕರ ಮಾತಿನಿಂದ ಬೀಳ್ಕೊಡು! ಸುಂದರ ನಾಭಿಯುಳ್ಳ ಇದನ್ನು ವೃಷ್ಣಿಗಳಲ್ಲಿ ಋಷಭನಾದ ನೀನೇ ಧರಿಸಬೇಕು. ಈ ಅಪ್ರತಿಮ ಚಕ್ರವನ್ನು ತಿರುಗಿಸಲು ಭುವಿಯಲ್ಲಿ ಬೇರೆ ಯಾರಿಗೂ ಸಾಧ್ಯವಾಗಲಾರದು!" ನನಗೆ ಹೀಗೆ ಹೇಳಿ ಬಾಲಕ ದ್ರೌಣಿಯು ಎರಡು ಕುದುರೆಗಳನ್ನೂ, ಧನವನ್ನೂ, ವಿವಿಧರತ್ನಗಳನ್ನೂ ತೆಗೆದುಕೊಂಡು ಹೊರಟು ಹೋದನು. ಅವನು ಮಹಾಕೋಪಿಷ್ಟ. ದುರಾತ್ಮ. ಚಪಲ

ಮತ್ತು ಕ್ರೂರಿ ಕೂಡ. ಬ್ರಹ್ಮಶಿರಾಸ್ತ್ರವನ್ನು ತಿಳಿದಿರುವ ಅವನಿಂದ ವೃಕೋದರನನ್ನು ರಕ್ಷಿಸು!”

ಹೀಗೆ ಹೇಳಿ ಯೋದ್ಧರಲ್ಲಿ ಶ್ರೇಷ್ಠ ಯಾದವ ನಂದನನು ಹೇಮಮಾಲೆಗಳಿಂದ ಅಲಂಕೃತಗೊಂಡಿದ್ದ ಪರಮ ಕಾಂಬೋಜದ ತುರಗಗಳನ್ನು ಕಟ್ಟಿದ್ದ, ಸರ್ವ ಶ್ರೇಷ್ಠ ಆಯುಧಗಳಿಂದ ಭರಿತವಾಗಿದ್ದ ಮಹಾರಥವನ್ನೇರಿದನು. ಉದಯಿಸುವ ಸೂರ್ಯನ ಎಣೆಗೆಂಪಿನ ಬಣ್ಣದ ಆ ಶ್ರೇಷ್ಠ ರಥದ ಬಲಭಾಗಕ್ಕೆ ಸೈನ್ಯವನ್ನು ಎಡಭಾಗಕ್ಕೆ ಸುಗ್ರೀವವನ್ನೂ ಕಟ್ಟಲಾಗಿತ್ತು. ಅವುಗಳ ಹಿಂದೆ ಮೇಘಪುಷ್ಪ ಮತ್ತು ಬಲಾಹಕಗಳನ್ನು ಕಟ್ಟಲಾಗಿತ್ತು. ಆ ರಥದ ಮೇಲೆ ವಿಶ್ವಕರ್ಮನಿಂದ ನಿರ್ಮಿತವಾದ ನಾನಾರತ್ನವಿಭೂಷಿತ ದಿವ್ಯ ಮಾಯಾ ಧ್ವಜವು ಮೇಲೆದ್ದು ಕಾಣುತ್ತಿತ್ತು. ಆ ಧ್ವಜದಲ್ಲಿ ಪ್ರಭಾಮಂಡಲರಶ್ಮಿವಂತ, ಸರ್ಪಗಳ ಶತ್ರು ಸತ್ಯವತ ವೈನತೇಯನು ಪ್ರಕಾಶಿಸುತ್ತಿದ್ದನು. ಸರ್ವಧನುಷ್ಮತರ ಕೇತುಪ್ರಾಯನಾದ ಹೃಷೀಕೇಶ, ಸತ್ಯಕರ್ಮಿ ಅರ್ಜುನ ಮತ್ತು ಕುರುರಾಜ ಯುಧಿಷ್ಠಿರರು ಆ ರಥವನ್ನೇರಿದರು. ರಥಸ್ಥನಾಗಿದ್ದ ಶಾಂಗ್ರಧನ್ವಿ ದಾಶಾರ್ಹನ ಎರಡೂ ಕಡೆಗಳಲ್ಲಿ ಕುಳಿತಿದ್ದ ಆ ಇಬ್ಬರು ಮಹಾತ್ಮರು ವಾಸವನ ಪಕ್ಕಗಳಲ್ಲಿದ್ದ ಅಶ್ವಿನೀ ಕುಮಾರರಂತೆ ತೋರಿದರು. ಅವರಿಬ್ಬರನ್ನೂ ಕುಳ್ಳಿರಿಸಿಕೊಂಡು ದಾಶಾರ್ಹನು ಆ ಲೋಕಪೂಜಿತ ರಥಕ್ಕೆ ಹೂಡಿದ್ದ ವೇಗಶಾಲೀ ಶ್ರೇಷ್ಠ

ಕುದುರೆಗಳನ್ನು ತಿವಿದು ಪ್ರಚೋದಿಸಿದನು. ಪಾಂಡವರಿಬ್ಬರು ಮತ್ತು ಯಮಗಳ ಋಷಭನು ಕುಳಿತಿದ್ದ ಉತ್ತಮ ಸ್ಯಂದನವನ್ನು ಆ ಕುದುರೆಗಳು ಎಳೆಯುತ್ತಾ ಹಾರಿ-ಕುಪ್ಪಳಿಸಿ ಓಡತೊಡಗಿದವು. ಶಾಂಗ್ರಧನ್ವಿಯನ್ನು ಎತ್ತಿಕೊಂಡು ಹೋಗುತ್ತಿದ್ದ ಆ ಶೀಘ್ರಗಾಮೀ ಕುದುರೆಗಳ ಖುರಪುಟಗಳಿಂದ ಪರ್ವತಗಳು ಬೀಳುತ್ತಿರುವವೋ ಎನ್ನುವಂತೆ ಮಹಾಶಬ್ಧವುಂಟಾಯಿತು. ಆ ನರವ್ಯಾಘ್ರರು ವೇಗದಿಂದ ಹೋಗಿ ಕ್ಷಣದಲ್ಲಿಯೇ ಮಹೇಷ್ವಾಸ ಭೀಮಸೇನನನ್ನು ಸಮೀಪಿಸಿದರು.

## ಅಶ್ವತ್ಥಾಮ-ಅರ್ಜುನರ ಪರಸ್ಪರರ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದುದು

ಕೋಪದಿಂದ ಉರಿಯುತ್ತಾ ಶತ್ರುವಿಗಾಗಿ ಮುನ್ನುಗ್ಗುತ್ತಿದ್ದ ಕೌಂತೇಯನನ್ನು ತಡೆಯಲು ಆ ಮಹಾರಥರಿಗೆ ಸಾಧ್ಯವಾಗಲಿಲ್ಲ. ಶ್ರೀಮಂತ ದೃಢಧನ್ವಿ ಕೃಷ್ಣ-ಅರ್ಜುನ-ಯುಧಿಷ್ಠಿರರರು ನೋಡುತ್ತಿದ್ದಂತೆಯೇ ಭೀಮಸೇನನು ಅತ್ಯಂತವೇಗವಾಗಿ ಕುದುರೆಗಳನ್ನು ಓಡಿಸುತ್ತಾ ಮಹಾತ್ಮರ ಪುತ್ರಹಂತಕ ದ್ರೌಣಿಯು ಎಲ್ಲಿ ಇರುವನೆಂದು ಕೇಳಿದ್ದನೋ ಆ ಭಾಗೀರಥೀತೀರವನ್ನು ತಲುಪಿದನು. ಅಲ್ಲಿ ನದೀತೀರದಲ್ಲಿ ಋಷಿಗಳೊಂದಿಗೆ ಕುಳಿತಿದ್ದ ಯಶಸ್ವಿ, ಮಹಾತ್ಮ, ಕೃಷ್ಣದ್ವೈಪಾಯನ ವ್ಯಾಸನನ್ನು ಕಂಡನು. ಅಲ್ಲೇ ಹತ್ತಿರದಲ್ಲಿ ತುಪ್ಪವನ್ನು

ಬಳಿದುಕೊಂಡಿದ್ದ, ಕುಶಚೀರಣವನ್ನು ಧರಿಸಿದ್ದ, ಧೂಳಿನಿಂದ ತುಂಬಿಕೊಂಡಿದ್ದ, ಕೆದರಿದ ಕೂದಲಿದ್ದ ಕ್ರೂರಕರ್ಮಿ ದ್ರೌಣಿಯನ್ನು ನೋಡಿದನು. ಶರವನ್ನು ಹೂಡಿದ ಧನುಸ್ಸನ್ನು ಹಿಡಿದು ಮಹಾಬಾಹು ಕೌಂತೇಯ ಭೀಮಸೇನನು ಅವನನ್ನು ಎದುರಿಸಿ ನಿಲ್ಲು ನಿಲ್ಲೆಂದು ಕೂಗಿ ಹೇಳಿದನು. ಬಾಣವನ್ನು ಹೂಡಿ ಧನುಸ್ಸನ್ನು ಹಿಡಿದಿದ್ದ ಭೀಮನನ್ನು ಮತ್ತು ಹಿಂದೆ ರಥದಲ್ಲಿ ನಿಂತಿದ್ದ ಸಹೋದರರೀರ್ವರು ಮತ್ತು ಜನಾರ್ದನರನ್ನು ನೋಡಿ ದ್ರೌಣಿಯು ವ್ಯಥಿತಾತ್ಮನಾಗಿ ಕಾಲವು ಸನ್ನಿಹಿತವಾಗಿದೆಯೆಂದು ಭಾವಿಸಿದನು. ಆ ಅದೀನಾತ್ಮ ದ್ರೌಣಿಯು ದಿವ್ಯ ಪರಮಾಸ್ತ್ರವನ್ನು ಧ್ಯಾನಿಸಿ, ಎಡಗೈಯಿಂದ ಜೊಂಡುಹುಲ್ಲನ್ನು ಹಿಡಿದುಕೊಂಡು ಅದರ ಮೇಲೆ ದಿವ್ಯಾಸ್ತ್ರವನ್ನು ಮಂತ್ರಿಸಿ ಪ್ರಯೋಗಿಸಿದನು.

ದಿವ್ಯಾಯುಧಧಾರಿಗಳಾಗಿ ನಿಂತಿರುವ ಆ ಶೂರರನ್ನು ಸಹಿಸಿಕೊಳ್ಳಲಾರದೇ ಅಶ್ವತ್ಥಾಮನು ರೋಷದಿಂದ “ಅಪಾಂಡವಾಯ!” ಎಂಬ ದಾರುಣ ವಚನವನ್ನು ಹೇಳಿ ಅದನ್ನು ಪ್ರಯೋಗಿಸಿದನು. ಹೀಗೆ ಹೇಳಿ ಪ್ರತಾಪವಾನ್ ದ್ರೋಣಪುತ್ರನು ಸರ್ವಲೋಕವನ್ನು ಪ್ರಮೋಹಗೊಳಿಸಲು ಆ ಅಸ್ತ್ರವನ್ನು ಪ್ರಯೋಗಿಸಿದನು. ಆಗ ಆ ಜೊಂಡುಹುಲ್ಲಿನಲ್ಲಿ ಅಗ್ನಿಯು ಹುಟ್ಟಿಕೊಂಡಿತು. ಕಾಲಾಂತಕಯಮನಿಗೆ ಸಮಾನ ಆ ಅಗ್ನಿಯು ಮೂರು

ಲೋಕಗಳನ್ನೂ ದಹಿಸಿಬಿಡುವುದೋ ಎಂಬಂತೆ ಕಾಣುತ್ತಿತ್ತು.ಇಂಗಿತದಿಂದಲೇ ದ್ರೌಣಿಯ ಅಭಿಪ್ರಾಯವನ್ನು ತಿಳಿದುಕೊಂಡ ಮಹಾಬಾಹು ದಾಶಾರ್ಹನು ಅರ್ಜುನನಿಗೆ ಹೇಳಿದನು:

> "ಅರ್ಜುನ! ಅರ್ಜುನ! ದ್ರೋಣನಿಂದ ಉಪದೇಶಿಸಲ್ಪಟ್ಟ ನಿನ್ನ ಹೃದಯದಲ್ಲಿ ನೆಲೆಸಿರುವ ದಿವ್ಯಾಸ್ತ್ರದ ಸಮಯವು ಬಂದೊದಗಿದೆ! ಸಹೋದರರನ್ನು ಮತ್ತು ನಿನ್ನನ್ನು ರಕ್ಷಿಸಿಕೊಳ್ಳಲು ಮತ್ತು ಈ ಅಸ್ತ್ರವನ್ನು ನಿವಾರಿಸಲು ಬ್ರಹ್ಮಾಸ್ತ್ರವನ್ನು ಪ್ರಯೋಗಿಸು!"

ಕೇಶವನು ಹೀಗೆ ಹೇಳಲು ತಕ್ಷಣವೇ ಪರವೀರಹ ಪಾಂಡವನು ಶರದೊಂದಿಗೆ ಧನುಸ್ಸನ್ನು ಹಿಡಿದು ರಥದಿಂದಿಳಿದನು. ಮೊದಲು ಆಚಾರ್ಯಪುತ್ರನಿಗೆ ತದನಂತರ ತನಗೆ, ಸಹೋದರರಿಬ್ಬರಿಗೆ ಮತ್ತು ಸರ್ವರಿಗೂ ಸ್ವಸ್ತಿ ಎಂದು ಹೇಳಿ ಪರಂತಪನು ದೇವತೆಗಳಿಗೂ ಗುರುಗಳೆಲ್ಲರಿಗೂ ನಮಸ್ಕರಿಸಿ ಶಿವನನ್ನು ಧ್ಯಾನಿಸಿ ಅಸ್ತ್ರವನ್ನು ಶಾಮ್ಯಗೊಳಿಸುವ ಅಸ್ತ್ರವನ್ನು ಪ್ರಯೋಗಿಸಿದನು. ಗಾಂಡೀವಧನ್ವಿಯು ಸೃಷ್ಟಿಸಿದ ಆ ಅಸ್ತ್ರವು ಕೂಡಲೇ ಯುಗಾಂತದ ಅಗ್ನಿಯೋಪಾದಿಯಲ್ಲಿ ಮಹಾಜ್ವಾಲೆಗಳಿಂದ ಪ್ರಜ್ವಲಿಸಿತು. ಹಾಗೆಯೇ ತಿಗ್ಮತೇಜಸ್ಸಿದ್ದ ದ್ರೋಣಪುತ್ರನ ಅಸ್ತ್ರವೂ ತೇಜೋಮಂಡಲದಿಂದ ಕೂಡಿಕೊಂಡು

ಮಹಾಜ್ವಾಲೆಯೊಂದಿಗೆ ಪ್ರಜ್ವಲಿಸಿತು. ಸಿಡಿಲಿನ ಶಬ್ಧದಂತೆ ಅನೇಕ ಶಬ್ಧಗಳುಂಟಾದವು. ಸಹಸ್ರಾರು ಉಲ್ಕೆಗಳು ಬಿದ್ದವು. ಸರ್ವಭೂತಗಳಲ್ಲಿ ಮಹಾಭಯವು ಹುಟ್ಟಿಕೊಂಡಿತು. ಭಯಂಕರ ಶಬ್ಧಗಳಿಂದ ತುಂಬಿಹೋಗಿದ್ದ ಆಕಾಶವು ಜ್ವಾಲೆಗಳ ಪಂಕ್ತಿಗಳಿಂದ ಆವೃತವಾಯಿತು. ಪರ್ವತ-ವನ-ವೃಕ್ಷಗಳೊಂದಿಗೆ ಇಡೀ ಭೂಮಿಯು ನಡುಗಿತು.

## ನಾರದ-ವ್ಯಾಸರು ಅಸ್ತ್ರಗಳನ್ನು ಹಿಂತೆಗೆದುಕೊಳ್ಳಲು ಹೇಳಿದುದು

ಆ ಅಸ್ತ್ರಗಳ ತೇಜಸ್ಸಿನಿಂದ ಲೋಕಗಳು ಸುಡಲ್ಪಡುತ್ತಿರಲು ಇಬ್ಬರು ಮಹರ್ಷಿಗಳು ಒಟ್ಟಿಗೇ ಅಲ್ಲಿ ಕಾಣಿಸಿಕೊಂಡರು. ನಾರದ ಮತ್ತು ಭರತರ ಪಿತಾಮಹ ಧರ್ಮಾತ್ಮ ವ್ಯಾಸ ಈ ಇಬ್ಬರೂ ಭಾರದ್ವಾಜ ಮತ್ತು ಧನಂಜಯರನ್ನು ಶಾಂತಗೊಳಿಸಲು ಕಾಣಿಸಿಕೊಂಡರು. ಸರ್ವಭೂತಹಿತೈಷಿಣಿಯರಾದ ಸರ್ವಧರ್ಮಜ್ಞರಾದ ಅವರಿಬ್ಬರು ಮುನಿಗಳೂ ಪರಮತೇಜಸ್ಸಿನಿಂದ ಉರಿಯುತ್ತಿದ್ದ ಆ ಎರಡು ಅಸ್ತ್ರಗಳ ಮಧ್ಯೆ ನಿಂತುಕೊಂಡರು. ಆ ಇಬ್ಬರು ಯಶಸ್ವೀ ಋಷಿವರರೂ ಆ ಎರಡು ಮಹಾಸ್ತ್ರಗಳ ನಡುವೆ ಪ್ರಜ್ವಲಿಸುತ್ತಿರುವ ಅಗ್ನಿಗಳಂತೆ ಕಂಡರು. ಯಾವುದೇ ಪ್ರಾಣಿಗಳಿಂದಲು ಕೆಣಕಲು ಅಸಾಧ್ಯರಾಗಿದ್ದ,



ದೇವದಾನವರಿಂದ ಗೌರವಿಸಲ್ಪಟ್ಟಿದ್ದ ಅವರಿಬ್ಬರೂ ಲೋಕಗಳ ಹಿತವನ್ನು ಬಯಸಿ ಆ ಅಸ್ತ್ರಗಳ ತೇಜಸ್ಸನ್ನು ತಣಿಸಲು ಬಂದಿದ್ದರು.

ಋಷಿಗಳು ಹೇಳಿದರು:

> "ಈ ಹಿಂದೆ ಆಗಿಹೋಗಿದ್ದ ನಾನಾಶಸ್ತ್ರಗಳನ್ನು
> ತಿಳಿದುಕೊಂಡಿದ್ದ ಮಹಾರಥರು ಈ ಅಸ್ತ್ರವನ್ನು ಮನುಷ್ಯರ
> ಮೇಲೆ ಎಂದೂ ಪ್ರಯೋಗಿಸಿರಲಿಲ್ಲ!"

ಅಗ್ನಿಸಮತೇಜಸ್ಸಿನ ಅವರೀರ್ವರನ್ನು ನೋಡಿದೊಡನೆಯೇ ತ್ವರೆಮಾಡಿ ನರಶಾರ್ದೂಲ ಧನಂಜಯನು ತನ್ನ ದಿವ್ಯ ಶರವನ್ನು ಉಪಸಂಹಾರಗೊಳಿಸಿದನು. ಮಾತನಾಡುವವರಲ್ಲಿ ಶ್ರೇಷ್ಠನಾದ ಅವನು ಕೈಮುಗಿದು ಆ ಋಷಿಗಳಿಗೆ ಹೇಳಿದನು:

> "ಅಸ್ತ್ರದಿಂದ ಅಸ್ತ್ರವು ಪ್ರಶಮನಗೊಳ್ಳಲಿ ಎಂದೇ ನಾನು
> ಇದನ್ನು ಪ್ರಯೋಗಿಸಿದ್ದೆನು. ಈ ಪರಮಾಸ್ತ್ರವನ್ನು ಹಿಂದೆ
> ತೆಗೆದುಕೊಂಡಿದ್ದೇ ಆದರೆ ಪಾಪಕರ್ಮಿ ದ್ರೌಣಿಯು ಅಸ್ತ್ರದ
> ತೇಜಸ್ಸಿನಿಂದ ನಮ್ಮೆಲ್ಲರನ್ನೂ ಅಶೇಷವಾಗಿ
> ಭಸ್ಮಮಾಡಿಬಿಡುತ್ತಾನೆ ಎನ್ನುವುದು ನಿಶ್ಚಯ! ಈ
> ಸಂದರ್ಭದಲಿ ನಮ್ಮ ಮತ್ತು ಲೋಕಗಳ ಸರ್ವಥಾ ಹಿತವನ್ನು

ಗಮನದಲ್ಲಿಟ್ಟುಕೊಂಡು ದೇವಸಂಕಾಶರಾದ ನೀವಿಬ್ಬರೂ ಇದನ್ನು ಬಗೆಹರಿಸಬೇಕಾಗಿದೆ.”

ಹೀಗೆ ಹೇಳಿ ಧನಂಜಯನು ಯುದ್ಧದಲ್ಲಿ ದೇವತೆಗಳಿಗೂ ಹಿಂದೆ ತೆಗೆದುಕೊಳ್ಳಲು ಕಷ್ಟಕರವಾದ ಆ ಅಸ್ತ್ರವನ್ನು ಪುನಃ ಹಿಂದೆ ತೆಗೆದುಕೊಂಡನು. ರಣದಲ್ಲಿ ಪ್ರಯೋಗಿಸಿದ ಆ ಪರಮಾಸ್ತ್ರವನ್ನು ಹಿಂದೆ ತೆಗೆದುಕೊಳ್ಳಲು ಪಾಂಡವ ಅರ್ಜುನನಲ್ಲದೇ ಸಾಕ್ಷಾತ್ ಶತಕ್ರತುವಿಗೂ ಸಾಧ್ಯವಾಗುತ್ತಿರಲಿಲ್ಲ. ಬ್ರಹ್ಮತೇಜಸ್ಸಿನಿಂದ ಹುಟ್ಟಿದ್ದ ಅದನ್ನು ಅಕೃತಾತ್ಮನು ಪ್ರಯೋಗಿಸಿದರೆ ಬ್ರಹ್ಮಚರ್ಯವ್ರತದಲ್ಲಿದ್ದವನ ಹೊರತಾಗಿ ಬೇರೆಯಾರಿಗೂ ಅದನ್ನು ಹಿಂದೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಬ್ರಹ್ಮಚರ್ಯವ್ರತನಿಷ್ಠನಾಗಿರದವನು ಅದನ್ನು ಪ್ರಯೋಗಿಸಿ ಪುನಃ ಹಿಂದೆತೆಗೆದುಕೊಳ್ಳಲು ಪ್ರಯತ್ನಿಸಿದರೆ ಅನುಯಾಯಿಗಳೊಂದಿಗೆ ಅವನ ಶಿರವನ್ನು ಅದು ಕತ್ತರಿಸಿಬಿಡುತ್ತದೆ. ಅರ್ಜುನನು ಬ್ರಹ್ಮಚಾರಿಯಾಗಿದ್ದನು. ವ್ರತನಿರತನಾಗಿದ್ದನು. ಮಹಾಕಷ್ಟಗಳನ್ನು ಪಡೆದಿದ್ದಾಗಲೂ ಪರಮ ವ್ಯಸನಗಳು ಬಂದಿದ್ದಾದರೂ ಆ ಅಸ್ತ್ರವನ್ನು ಇದೂವರೆಗೆ ಪ್ರಯೋಗಿಸದೇ ಇದ್ದನು. ಅಂತಹ ಸತ್ಯವ್ರತಧರ ಶೂರ ಬ್ರಹ್ಮಚಾರಿ ಮತ್ತು ಗುರುವನ್ನು ಅನುಸರಿಸುತ್ತಿದ್ದ ಪಾಂಡವ ಅರ್ಜುನನು ಆ ಅಸ್ತ್ರವನ್ನು ಪುನಃ ಹಿಂದೆತೆಗೆದುಕೊಂಡನು.

ದ್ರೌಣಿಯೂ ಕೂಡ ತನ್ನ ಎದುರು ನಿಂತಿದ್ದ ಆ ಇಬ್ಬರು ಋಷಿಗಳನ್ನು ನೋಡಿ ಯುದ್ಧದಲ್ಲಿ ಪ್ರಯೋಗಿಸಿದ್ದ ಆ ಘೋರ ಅಸ್ತ್ರವನ್ನು ಪುನಃ ಹಿಂದೆ ತೆಗೆದುಕೊಳ್ಳಲು ಶಕ್ಯನಾಗಲಿಲ್ಲ. ಸಂಯುಗದಲ್ಲಿ ಆ ಪರಮಾಸ್ತ್ರವನ್ನು ಪ್ರತಿಸಂಹಾರಮಾಡಲು ಅಶಕ್ತನಾದ ದ್ರೌಣಿಯು ದೀನಮನಸ್ಕನಾಗಿ ದ್ವೈಪಾಯನನಿಗೆ ಹೇಳಿದನು:

> “ಮುನೇ! ಭೀಮಸೇನನನ ಭಯದಿಂದ ಉತ್ತಮ ವ್ಯಸನದಿಂದ ಆರ್ತನಾಗಿ ಪ್ರಾಣತ್ರಾಣವನ್ನುಳಿಸಿಕೊಳ್ಳುವುದಕ್ಕಾಗಿ ಈ ಅಸ್ತ್ರವನ್ನು ನಾನು ಪ್ರಯೋಗಿಸಿದೆ. ಭೀಮಸೇನನು ಸಂಯುಗದಲ್ಲಿ ಅಧರ್ಮದಿಂದ ಮತ್ತು ಮಿಥ್ಯಾಚಾರ ಮೋಸದಿಂದ ಧಾರ್ತರಾಷ್ಟ್ರನನ್ನು ಸಂಹರಿಸಿದನು. ಆದುದರಿಂದ ಅಕೃತಾತ್ಮನಾದ ನಾನು ಈ ಅಸ್ತ್ರವನ್ನು ಪ್ರಕಟಿಸಿದೆನು. ಆದರೆ ಈಗ ಈ ಅಸ್ತ್ರವನ್ನು ಉಪಸಂಹಾರ ಮಾಡಲು ನಾನು ಶಕ್ಯನಿಲ್ಲ. ಪಾಂಡವರಿಲ್ಲದಂತಾಗಲಿ ಎಂದು ಹೇಳಿ ಅಗ್ನಿತೇಜಸ್ಸನ್ನು ಅನುಮಂತ್ರಿಸಿ ಈ ದುರಾಸದ ದಿವ್ಯ ಅಸ್ತ್ರವನ್ನು ನಾನು ಪ್ರಕಟಿಸಿದೆನು. ಪಾಂಡವೇಯರ ಅಂತ್ಯವಾಗಲೆಂದು ಅಭಿಮಂತ್ರಿಸಿದ್ದ ಇದು ಇಂದು ಪಾಂಡುಸುತರೆಲ್ಲರನ್ನೂ ಜೀವಹೀನರನ್ನಾಗಿ ಮಾಡುತ್ತದೆ. ರೋಷಾವಿಷ್ಟ ಚೇತನದಿಂದ ರಣದಲ್ಲಿ ಪಾರ್ಥರನ್ನು

ವಧೆಮಾಡಲು ನಿಶ್ಚಯಿಸಿ ಈ ಅಸ್ತ್ರವನ್ನು ಸೃಷ್ಟಿಸಿದ ನಾನು ಪಾಪವನ್ನೆಸಗಿದ್ದೇನೆ!”

ವ್ಯಾಸನು ಹೇಳಿದನು:

“ಮಗೂ! ಪಾರ್ಥ ಧನಂಜಯನೂ ಕೂಡ ಬ್ರಹ್ಮಶಿರ ಅಸ್ತ್ರವನ್ನು ತಿಳಿದಿದ್ದಾನೆ. ಆದರೆ ರೋಷದಿಂದ ಯುದ್ಧದಲ್ಲಿ ನಿನ್ನ ವಧೆಗೆಂದು ಇದನ್ನು ಅವನು ಪ್ರಯೋಗಿಸಲಿಲ್ಲ. ರಣದಲ್ಲಿ ನಿನ್ನ ಅಸ್ತ್ರವನ್ನು ಅಸ್ತ್ರದಿಂದ ಪ್ರತಿಶಮನಗೊಳಿಸುವ ಸಲುವಾಗಿ ಅರ್ಜುನನು ಇದನ್ನು ಪ್ರಯೋಗಿಸಿ ಪುನಃ ಪ್ರತಿಸಂಹಾರಗೊಳಿಸಿದ್ದಾನೆ. ನಿನ್ನ ತಂದೆಯ ಉಪದೇಶದಿಂದ ಬ್ರಹ್ಮಾಸ್ತ್ರವನ್ನು ಪಡೆದುಕೊಂಡಿದ್ದರೂ ಮಹಾಬಾಹು ಧನಂಜಯನು ಕ್ಷತ್ರಧರ್ಮದಿಂದ ವಿಚಲಿತನಾಗಲಿಲ್ಲ. ಇಂತಹ ಧೃತಿಮತನಾದ, ಸಾಧುವಾದ, ಸರ್ವಾಸ್ತ್ರವಿದುವಾದ, ಸತ್ಪುರುಷನಾದ ಅರ್ಜುನನನ್ನು ಭ್ರಾತೃ-ಬಂಧುಗಳೊಂದಿಗೆ ವಧಿಸಲು ನೀನು ಏಕೆ ಬಯಸುತ್ತಿರುವೆ? ಯಾವದೇಶದಲ್ಲಿ ಬ್ರಹ್ಮಶಿರವು ಇನ್ನೊಂದು ಪರಮಾಸ್ತ್ರದಿಂದ ನಾಶಗೊಳ್ಳುತ್ತದೆಯೋ ಆ ರಾಷ್ಟ್ರದಲ್ಲಿ ಹನ್ನೆರಡು ವರ್ಷಗಳ ಪರ್ಯಂತ ಮಳೆಯು ಸುರಿಯುವುದಿಲ್ಲ. ಇದೇ ಕಾರಣದಿಂದ

ಮಹಾಬಾಹು ಪಾಂಡವನು ಶಕ್ತಿವಂತನಾಗಿದ್ದರೂ ಪ್ರಜಾಹಿತವನ್ನು ಬಯಸಿ ನಿನ್ನ ಈ ಅಸ್ತ್ರವನ್ನು ವಿನಾಶಗೊಳಿಸಲಿಲ್ಲ. ಪಾಂಡವರನ್ನು, ರಾಷ್ಟ್ರವನ್ನು ಮತ್ತು ನಿನ್ನನ್ನು ಕೂಡ ಸದಾ ಸಂರಕ್ಷಿಸಲೋಸುಗ ಈ ದಿವ್ಯಾಸ್ತ್ರವನ್ನು ಉಪಸಂಹರಿಸು! ನಿನ್ನ ರೋಷವು ತಣಿಯಲಿ. ಪಾರ್ಥರು ನಿರಾಮಯರಾಗಲಿ. ರಾಜರ್ಷಿ ಪಾಂಡವನು ಅಧರ್ಮದಿಂದ ಯಾರನ್ನೂ ಜಯಿಸಲು ಇಚ್ಛಿಸುವವನಲ್ಲ. ನಿನ್ನ ಶಿರಸ್ಸಿನಲ್ಲಿ ಇರುವ ಮಣಿಯನ್ನು ಇವರಿಗೆ ಕೊಟ್ಟುಬಿಡು. ಇದನ್ನು ತೆಗೆದುಕೊಂಡು ಪ್ರತಿಯಾಗಿ ಪಾಂಡವರು ನಿನ್ನ ಪ್ರಾಣವನ್ನು ನೀಡುತ್ತಾರೆ.”

ದ್ರೌಣಿಯು ಹೇಳಿದನು:

“ಇದೂವರೆಗೆ ಪಾಂಡವರು ಸಂಗ್ರಹಿಸಿಟ್ಟಿಕೊಂಡಿರುವ ರತ್ನಗಳಿಗಿಂತ ಮತ್ತು ಕೌರವ್ಯನ ಸಂಪತ್ತಿಗಿಂತ ನನ್ನ ಈ ಮಣಿಯು ಹೆಚ್ಚಿನ ಮೌಲ್ಯದ್ದಾಗಿದೆ. ಈ ಮಣಿಯನ್ನು ಧರಿಸಿದವನಿಗೆ ಶಸ್ತ್ರ-ವ್ಯಾಧಿ-ಹಸಿವೆ ಮತ್ತು ಆಶ್ರಯಗಳ ಭಯವಿರುವುದಿಲ್ಲ. ದೇವತೆಗಳ, ದಾನವರ, ನಾಗಗಳ ಅಥವಾ ಯಾರ ಭಯವೂ ಇರುವುದಿಲ್ಲ. ರಾಕ್ಷಸರ

ಭಯವಿರುವುದಿಲ್ಲ ಮತ್ತು ತಸ್ಕರ ಭಯವಿರುವುದಿಲ್ಲ. ಇಂತಹ ವೀರ್ಯವುಳ್ಳ ಮಣಿಯನ್ನು ನಾನು ಎಂದೂ ಬಿಟ್ಟುಕೊಡುವುದಿಲ್ಲ! ಹೀಗಿದ್ದರೂ ಭಗವಾನನಾದ ನೀನು ಹೇಳಿದ ಕಾರ್ಯವನ್ನು ಮಾಡಬೇಕಾಗಿದೆ. ನಾನು ಮತ್ತು ನನ್ನ ಮಣಿಯು ಇಲ್ಲಿವೆ. ಆದರೆ ಈ ಜೊಂಡುಹುಲ್ಲು ಮಾತ್ರ ಪಾಂಡವೇಯರ ಗರ್ಭಗಳ ಮೇಲೆ ಬೀಳುತ್ತದೆ. ಇದನ್ನು ಅಮೋಘಗೊಳಿಸಲು ನನಗೆ ಸಾಧ್ಯವಿಲ್ಲ!"

ವ್ಯಾಸನು ಹೇಳಿದನು:

"ಹಾಗೆಯೇ ಮಾಡು! ಎಂದೂ ನಿನ್ನ ಬುದ್ಧಿಯನ್ನು ಬೇರೆ ಕಾರ್ಯಗಳಲ್ಲಿ ತೊಡಗಿಸಬೇಡ. ಪಾಂಡವೇಯರ ಗರ್ಭಗಳಲ್ಲಿ ಇದನ್ನು ವಿಸರ್ಜಿಸಿ ಶಾಂತನಾಗು!"

ದ್ವೈಪಾಯನನ ಮಾತನ್ನು ಕೇಳಿ ತುಂಬಾ ಆತುರದಲ್ಲಿದ್ದ ಅಶ್ವತ್ಥಾಮನು ಆ ಪರಮಾಸ್ತ್ರವನ್ನು ಗರ್ಭಗಳ ಮೇಲೆ ಪ್ರಯೋಗಿಸಿದನು.

## ಕೃಷ್ಣನು ಅಶ್ವತ್ಥಾಮನನ್ನು ಶಪಿಸಿದುದು

ಆ ಪಾಪಕರ್ಮಿಯು ಅಸ್ತ್ರವನ್ನು ವಿಸೃಜಿಸುದುದನ್ನು ತಿಳಿದು ಹೃಷೀಕೇಶನು ಹರ್ಷಗೊಂಡು ದ್ರೌಣಿಗೆ ಈ ಮಾತನ್ನಾಡಿದನು:

> “ಗಾಂಡೀವಧನ್ವಿಯ ಸೊಸೆ ವಿರಾಟನ ಮಗಳು ಹಿಂದೆ ಉಪಪ್ಲವ್ಯಕ್ಕೆ ಹೋದಾಗ ವ್ರತವಂತ ಬ್ರಾಹ್ಮಣನೋರ್ವನು ಅವಳನ್ನು ನೋಡಿ ಹೇಳಿದ್ದನು: “ಕುರುಗಳು ಕ್ಷೀಣಿಸಿಹೋಗುವಾಗ ನಿನ್ನ ಮಗನು ಹುಟ್ಟುತ್ತಾನೆ. ಗರ್ಭಸ್ಥನಾಗಿರುವ ಇವನ ಹೆಸರು ಪರಿಕ್ಷಿತನೆಂದೇ ಆಗುತ್ತದೆ!” ಆ ಸಾಧುವಿನ ಮಾತು ಸತ್ಯವೇ ಆಗುತ್ತದೆ. ಅವಳ ಮಗ ಪರಿಕ್ಷಿತನು ಪುನಃ ವಂಶಕರನಾಗುವನು.”

ಹೀಗೆ ಹೇಳಿದ ಸಾತ್ವತಶ್ರೇಷ್ಠ ಗೋವಿಂದನಿಗೆ ಪರಮಕುಪಿತ ದ್ರೌಣಿಯು ಈ ಉತ್ತರವನ್ನಿತ್ತನು:

> “ಕೇಶವ! ಪಕ್ಷಪಾತದಿಂದ ಇದೇನು ನೀನು ಹೇಳುತ್ತಿರುವೆಯೋ ಅದು ಹಾಗೆ ಆಗುವುದಿಲ್ಲ! ನನ್ನ ಮಾತು ಅನ್ಯಥಾ ಆಗುವುದಿಲ್ಲ. ನೀನು ಯಾರನ್ನು ರಕ್ಷಿಸಲು ಇಚ್ಛಿಸುತ್ತಿರುವೆಯೋ ಆ ವಿರಾಟಪುತ್ರಿಯ ಗರ್ಭದ ಮೇಲೆ ನಾನು ಪ್ರಯೋಗಿಸಿದ ಅಸ್ತ್ರವು ಈಗಾಗಲೇ ಬಿದ್ದಿದೆ!”

ವಾಸುದೇವನು ಹೇಳಿದನು:

> “ಪರಮಾಸ್ತ್ರದ ಪತನವು ಅಮೋಘವಾಗುತ್ತದೆ. ಮೃತನಾಗಿ ಹುಟ್ಟುವ ಆ ಗರ್ಭವು ದೀರ್ಘ ಆಯುಸ್ಸನ್ನು ಪಡೆಯುತ್ತಾನೆ.

ನಿನ್ನನ್ನಾದರೋ ಸರ್ವ ಮನೀಷಿಣರು ಕಾಪುರುಷ, ಪಾಪಿ, ಪಾಪಕರ್ಮಗಳನ್ನು ಮಾಡಿದವ ಮತ್ತು ಬಾಲಜೀವಿತಘಾತಕನೆಂದೂ ತಿಳಿಯುತ್ತಾರೆ. ಆದುದರಿಂದ ನೀನು ನಿನ್ನ ಪಾಪಕರ್ಮದ ಫಲವನ್ನು ಹೊಂದುತ್ತೀಯೆ. ಮೂರು ಸಾವಿರ ವರ್ಷಗಳು ಈ ಭೂಮಿಯಲ್ಲಿ ಅಲೆಯುತ್ತೀಯೆ. ಆಗ ನಿನ್ನೊಡನೆ ಯಾರೂ ಏನನ್ನೂ ಮಾತನಾಡುವುದಿಲ್ಲ. ನಿರ್ಜನಪ್ರದೇಶಗಳಲ್ಲಿ ಅಸಹಾಯಕನಾಗಿ ನೀನು ಅಲೆದಾಡುತ್ತೀಯೆ. ಕ್ಷುದ್ರ! ಇನ್ನು ಮುಂದೆ ನೀನು ಜನರ ಮಧ್ಯೆ ವಾಸಮಾಡಲಾರೆ! ಕೀವು ಮತ್ತು ರಕ್ತದ ದುರ್ಗಂಧದಿಂದ ಕೂಡಿದ ನೀನು ದುರ್ಗ-ಕಾಂತಾರಗಳಲ್ಲಿ ವಾಸಿಸುವೆ. ಸರ್ವವ್ಯಾಧಿಸಮನ್ವಿತನಾಗಿ ಸಂಚರಿಸುತ್ತಿರುತ್ತೀಯೆ. ವೀರ ಪರಿಕ್ಷಿತನಾದರೋ ವಯಸ್ಕನಾಗಿ ವೇದವ್ರತಗಳನ್ನು ಪಡೆಯುತ್ತಾನೆ. ಶಾರದ್ವತ ಕೃಪನಿಂದ ಸರ್ವಾಸ್ತ್ರಗಳನ್ನು ಪಡೆದುಕೊಳ್ಳುತ್ತಾನೆ. ಪರಮಾಸ್ತ್ರಗಳನ್ನು ತಿಳಿದುಕೊಂಡು ಕ್ಷತ್ರಧರ್ಮದಲ್ಲಿದ್ದುಕೊಂಡು ಆ ಧರ್ಮಾತ್ಮನು ಅರವತ್ತು ವರ್ಷಗಳು ವಸುಧೆಯನ್ನು ಪಾಲಿಸುತ್ತಾನೆ. ಇನ್ನುಮುಂದೆ ಆ ಮಹಾಬಾಹುವೇ ಕುರುರಾಜನಾಗುತ್ತಾನೆ. ನೀನು ನೋಡುತ್ತಿರುವಂತೆಯೇ

ಇವನು ಪರಿಕ್ಷಿತನೆಂಬ ಹೆಸರಿನ ನೃಪತಿಯಾಗುತ್ತಾನೆ. ನನ್ನ ತಪಸ್ಸಿನ ಮತ್ತು ಸತ್ಯದ ವೀರ್ಯವನ್ನು ನೋಡು!"

ವ್ಯಾಸನು ಹೇಳಿದನು:

"ನಮ್ಮೆಲ್ಲರನ್ನು ಅನಾದರಿಸಿ ನೀನು ಈ ದಾರುಣಕರ್ಮವನ್ನೆಸಗಿದೆ! ಸದ್ಬ್ರಾಹ್ಮಣನಾಗಿದ್ದು ನೀನು ಈ ರೀತಿ ನಡೆದುಕೊಂಡೆ! ಕ್ಷುದ್ರಕರ್ಮಿಯೇ! ಆದುದರಿಂದ ದೇವಕೀಪುತ್ರನಾಡಿದ ಉತ್ತಮ ವಚನದಂತೆಯೇ ನಡೆಯುತ್ತದೆ. ಅದರಲ್ಲಿ ಸಂಶಯವೇ ಇಲ್ಲ."

ಅಶ್ವತ್ಥಾಮನು ಹೇಳಿದನು:

"ಬ್ರಹ್ಮನ್! ನಾನು ಇನ್ನುಮುಂದೆ ಮನುಷ್ಯರಲ್ಲಿ ನಿನ್ನೊಡನೆ ಮಾತ್ರ ಇದ್ದುಬಿಡುತ್ತೇನೆ. ಭಗವಾನ್ ಪುರುಷೋತ್ತಮನು ಹೇಳಿದುದು ಸತ್ಯವಾಗಲಿ!"

## ಅಶ್ವತ್ಥಾಮನ ಮಣಿಯನ್ನು ದ್ರೌಪದಿಗೆ ಒಪ್ಪಿಸಿದುದು

ಆಗ ದ್ರೌಣಿಯು ಮಹಾತ್ಮ ಪಾಂಡವರಿಗೆ ಮಣಿಯನ್ನಿತ್ತು, ಅವರೆಲ್ಲರೂ ನೋಡುತ್ತಿರಲು ವಿಮನಸ್ಕನಾಗಿ ವನಕ್ಕೆ ತೆರಳಿದನು. ಪಾಂಡವರೂ ಕೂಡ ಶತ್ರುವನ್ನು ನಾಶಪಡಿಸಿ, ದ್ರೋಣಪುತ್ರನ ಸಹಜ ಮಣಿಯನ್ನು



ತೆಗೆದುಕೊಂಡು, ಗೋವಿಂದನನ್ನು ಮುಂದಿರಿಸಿಕೊಂಡು ಕೃಷ್ಣದ್ವೈಪಾಯನ ಮತ್ತು ಮಹಾಮುನಿ ನಾರದರೊಂದಿಗೆ, ಪಯೋಪವೇಶಮಾಡಿದ್ದ ದ್ರೌಪದಿಯ ಬಳಿಗೆ ತ್ವರೆಮಾಡಿ ಧಾವಿಸಿದರು. ಆಗ ಆ ಪುರುಷವ್ಯಾಘ್ರರು ಅನಿಲೋಪಮ ಅಶ್ವಗಳೊಂದಿಗೆ ದಾಶಾರ್ಹನೊಡಗೂಡಿ ಪುನಃ ಶಿಬಿರಕ್ಕೆ ಬಂದರು. ತ್ವರೆಮಾಡಿ ಆ ಎರಡೂ ರಥಗಳಿಂದಿಳಿದು ಸ್ವಯಂ ಆರ್ತರಾಗಿದ್ದ ಮಹಾರಥರು ಅತ್ಯಂತ ಆರ್ತಳಾಗಿದ್ದ ದ್ರೌಪದಿ ಕೃಷ್ಣೆಯನ್ನು ನೋಡಿದರು. ಆನಂದರಹಿತಳಾಗಿ ದುಃಖಶೋಕಸಮನ್ವಿತಳಾಗಿದ್ದ ಅವಳನ್ನು ಸುತ್ತುವರೆದು ಪಾಂಡವರು ಕೇಶವನೊಂದಿಗೆ ಕುಳಿತುಕೊಂಡರು. ಆಗ ರಾಜನ ಅನುಜ್ಞೆಯಂತೆ ಮಹಾಬಲ ಭೀಮಸೇನನು ಅವಳಿಗೆ ಆ ದಿವ್ಯ ಮಣಿಯನ್ನಿತ್ತು ಈ ಮಾತನ್ನಾಡಿದನು:

> “ಭದ್ರೇ! ಪುತ್ರಹಂತಕನನ್ನು ಗೆದ್ದು ನಿನಗೋಸ್ಕರ ತಂದಿರುವ ಇದೋ ಈ ಮಣಿ! ಶೋಕವನ್ನು ತೊರೆದು ಎದ್ದೇಳು! ಕ್ಷತ್ರಧರ್ಮವನ್ನು ಸ್ಮರಿಸಿಕೋ! ಸಂಧಿಗಾಗಿ ವಾಸುದೇವನು ಪ್ರಯಾಣಮಾಡುವಾಗ ನೀನು ಮಧುಘಾತಿನಿಗೆ ಈ ಮಾತುಗಳನ್ನು ಹೇಳಿದ್ದೆ: “ನನಗೆ ಪತಿಗಳಿಲ್ಲ! ಪುತ್ರರಿಲ್ಲ! ಸಹೋದರರೂ ಇಲ್ಲ! ರಾಜನೊಂದಿಗೆ ಶಾಂತಿಯನ್ನು ಬಯಸುವ ಗೋವಿಂದ ನೀನೂ ಕೂಡ ನನ್ನ ಪಾಲಿಗಿಲ್ಲ!”

ಕ್ಷತ್ರಧರ್ಮಕ್ಕೆ ಅನುರೂಪ ಈ ಧೀರ ವಾಕ್ಯಗಳನ್ನು ನೀನು ಪುರುಷೋತ್ತಮನೊಡನೆ ಹೇಳಿದ್ದೆ. ಅದನ್ನು ಸ್ಮರಿಸಿಕೋ! ರಾಜ್ಯವನ್ನು ಅಪಹರಿಸಿದ್ದ ಪಾಪಿ ದುರ್ಯೋಧನನು ಹತನಾಗಿದ್ದಾನೆ. ಚಡಪಡಿಸುತ್ತಿದ್ದ ದುಃಶಾಸನನ ರಕ್ತವನ್ನು ನಾನು ಕುಡಿದಿದ್ದೇನೆ. ವೈರದ ಋಣವನ್ನು ನಾವು ಪೂರೈಸಿದ್ದೇವೆ. ನಮ್ಮ ಮೇಲೆ ನಿಂದನೀಯ ಮಾತುಗಳ್ಯಾವುವೂ ಇಲ್ಲ. ದ್ರೋಣಪುತ್ರನನ್ನು ಗೆದ್ದು ಬ್ರಾಹ್ಮಣನೆನ್ನುವ ಗೌರವದಿಂದ ಅವನನ್ನು ಬಿಟ್ಟುಬಿಟ್ಟೆವು. ಮಣಿಯನ್ನು ತ್ಯಜಿಸಿದ ಮತ್ತು ಆಯುಧವನ್ನು ಭೂಮಿಯಮೇಲಿಟ್ಟ ಅವನ ಯಶಸ್ಸು ಬಿದ್ದುಹೋಗಿ ಶರೀರಮಾತ್ರ ಉಳಿದುಕೊಂಡಿದೆ.”

ದ್ರೌಪದಿಯು ಹೇಳಿದಳು:

“ಪುತ್ರಋಣದಿಂದ ಮುಕ್ತಳಾಗಿದ್ದೇನೆ. ಆ ಗುರುಪುತ್ರನು ನನಗೂ ಗುರುವೇ. ಭಾರತ! ರಾಜನು ಈ ಮಣಿಯನ್ನು ಧರಿಸಲಿ!”

ಆಗ ರಾಜನು ದ್ರೌಪದಿಯ ವಚನದಂತೆ ಗುರುವಿನ ಪ್ರಸಾದವೆಂದು ಅದನ್ನು ಸ್ವೀಕರಿಸಿ ತನ್ನ ಶಿರದಲ್ಲಿ ಧರಿಸಿಕೊಂಡನು. ಪ್ರಭು

ಮಹಾರಾಜನು ಆ ದಿವ್ಯ ಶ್ರೇಷ್ಠ ಮಣಿಯನ್ನು ಶಿರದಲ್ಲಿ ಧರಿಸಿ ಮೇಲೆ ಚಂದ್ರನಿರುವ ಪರ್ವತದಂತೆ ಶೋಭಿಸಿದನು. ಆಗ ಪುತ್ರಶೋಕಾರ್ತಳಾಗಿದ್ದ ಮನಸ್ವಿನೀ ಕೃಷ್ಣೆಯು ಮೇಲೆದ್ದಳು.

## ಕೃಷ್ಣನು ಯುಧಿಷ್ಠಿರನಿಗೆ ರುದ್ರನ ಮಹಾತ್ಮೆಯನ್ನು ತಿಳಿಸಿದುದು

ಮಲಗಿದ್ದ ಸರ್ವಸೇನೆಗಳೂ ಆ ಮೂವರು ಮಹಾರಥರಿಂದ ಹತವಾದವೆಂದು ಶೋಕಿಸುತ್ತಿದ್ದ ರಾಜಾ ಯುಧಿಷ್ಠಿರನು ದಾಶಾರ್ಹನಿಗೆ ಹೇಳಿದನು:

> “ಕೃಷ್ಣ! ಅಕ್ಲಿಷ್ಟಕರ್ಮಿಗಳಾಗಿದ್ದ ನನ್ನ ಮಹಾರಥ ಪುತ್ರರೆಲ್ಲರೂ ಕ್ಷುದ್ರ, ಪಾಪಿ ದ್ರೌಣಿಯಿಂದ ಹೇಗೆ ಹತರಾದರು? ಹಾಗೆಯೇ ಕೃತಾಸ್ತ್ರರಾಗಿದ್ದ, ಸಹಸ್ರಶತ ಯೋಧರೊಂದಿಗೆ ಹೋರಾಡಬಲ್ಲವರಾಗಿದ್ದ ದ್ರುಪದನ ಮಕ್ಕಳೂ ಕೂಡ ದ್ರೋಣಪುತ್ರನಿಂದ ಹತರಾದರು. ರಣದಲ್ಲಿ ಮಹೇಷ್ವಾಸ ದ್ರೋಣನು ಯಾರ ಕಡೆ ಮುಖವನ್ನು ಕೂಡ ತಿರುಗಿಸುತ್ತಿರಲಿಲ್ಲವೋ ಅಂತಹ ರಥಶ್ರೇಷ್ಠ ಧೃಷ್ಟದ್ಯುಮ್ನನನ್ನು ಅವನು ಹೇಗೆ ಸಂಹರಿಸಿದನು? ಏಕಾಂಗಿಯಾಗಿ ಶಿಬಿರದಲ್ಲಿದ್ದ ಎಲ್ಲರನ್ನೂ ವಧಿಸಿದ ಆ

ಗುರುಸುತನು ಯಾವ ಕರ್ಮವನ್ನು ಮಾಡಿ ಆ ಶಕ್ತಿಯನ್ನು ಪಡೆದನು?"

ವಾಸುದೇವನು ಹೇಳಿದನು:

"ದ್ರೌಣಿಯು ದೇವದೇವನಿಗೂ ಈಶ್ವರನಾದ ಅವ್ಯಯನನ್ನು ಶರಣು ಹೋದನು. ಅದರಿಂದಾಗಿ ಅವನೊಬ್ಬನೇ ಅನೇಕರನ್ನು ಸಂಹರಿಸಬಲ್ಲವನಾದನು. ಮಹಾದೇವನು ಪ್ರಸನ್ನನಾದರೆ ಅಮೃತತ್ವವನ್ನೂ ದಯಪಾಲಿಸುವನು. ಗಿರೀಶನು ಇಂದ್ರನನ್ನೂ ಸೋಲಿಸುವಂತಹ ವೀರ್ಯವನ್ನು ಕೊಡುತ್ತಾನೆ. ನಾನು ಮಹಾದೇವನನ್ನು ತತ್ತ್ವಶಃ ತಿಳಿದುಕೊಂಡಿದ್ದೇನೆ. ಹಿಂದೆ ಅವನು ಮಾಡಿದ ಅನೇಕ ಕರ್ಮಗಳೂ ನನಗೆ ತಿಳಿದಿವೆ. ಭೂತಗಳ ಆದಿ, ಮಧ್ಯ ಮತ್ತು ಅಂತ್ಯಗಳು ಅವನೇ! ಅವನಿಂದಲೇ ಈ ಜಗತ್ತೆಲ್ಲವೂ ಕರ್ಮಗಳಲ್ಲಿ ತೊಡಗಿವೆ. ಪಿತಾಮಹ ವಿಭುವು ಭೂತಗಳನ್ನು ಸೃಷ್ಟಿಸಲು ಇಚ್ಛಿಸಿದಾಗ ಪ್ರಪ್ರಥಮವಾಗಿ ಇವನನ್ನೇ ನೋಡಿ "ಕೂಡಲೇ ಭೂತಗಳನ್ನು ಸೃಷ್ಟಿಸು!" ಎಂದು ಹೇಳಿದನು. ಮಹಾತಪಸ್ವಿ ಹರಿಕೇಶನು ಹಾಗೆಯೇ ಆಗಲೆಂದು ಹೇಳಿ ತಾನು ಸೃಷ್ಟಿಸಿದ ಭೂತಗಳಲ್ಲಿ ದೋಷಗಳನ್ನೇ ಕಂಡು

ನೀರಿನಲ್ಲಿ ಮುಳುಗಿ ದೀರ್ಘಕಾಲ ತಪಸ್ಸನ್ನು ತಪಿಸಿದನು. ಮಹಾಕಾಲದವರೆಗೆ ಪ್ರತೀಕ್ಷೆಯಲ್ಲಿದ್ದ ಪಿತಾಮಹನು ಇನ್ನೊಬ್ಬ ಸರ್ವಭೂತಗಳ ಸೃಷ್ಟಾರನನ್ನು ಮನಸ್ಸಿನಿಂದಲೇ ಸೃಷ್ಟಿಸಿದನು. ನೀರಿನಲ್ಲಿ ಮಗ್ನನಾಗಿರುವ ಗಿರೀಶನನ್ನು ನೋಡಿ ಅವನು ತಂದೆಗೆ "ನನಗೆ ಅಗ್ರಜನಾದವನು ಅನ್ಯನಿದ್ದರೆ ನಾನು ಪ್ರಜೆಗಳನ್ನು ಸೃಷ್ಟಿಸುವುದಿಲ್ಲ!" ಎಂದನು. ಅವನಿಗೆ ಪಿತನು "ನಿನ್ನ ಅಗ್ರಜನಾಗಿ ಇನ್ನೊಬ್ಬ ಪುರುಷನಿಲ್ಲ. ಸ್ಥಾಣುವಾದರೋ ಜಲದಲ್ಲಿ ಮಗ್ನನಾಗಿದ್ದಾನೆ. ನಿಶ್ಚಿಂತೆಯಿಂದ ಸೃಷ್ಟಿಯನ್ನು ಮಾಡು!" ಎಂದನು. ಅವನು ಏಳುಪ್ರಕಾರದ ಭೂತಗಳನ್ನೂ, ದಕ್ಷಾದಿ ಪ್ರಜಾಪತಿಗಳನ್ನೂ ಸೃಷ್ಟಿಸಿ ಎಲ್ಲವನ್ನೂ ನಾಲ್ಕು ಪ್ರಕಾರವಾಗಿ ವಿಂಗಡಿಸಿದನು. ಪ್ರಜೆಗಳೆಲ್ಲವೂ ಸೃಷ್ಟಿಯಾದೊಡನೆಯೇ ಹಸಿದು ಪ್ರಜಾಪತಿಯನ್ನೇ ತಿನ್ನಲು ಬಯಸಿ ಧಾವಿಸಿದವು. ಭಕ್ಷಣೆಯಾಗುವವನೆಂಬ ಭಯದಿಂದ ಶರಣಾರ್ಥಿಯಾಗಿ ಅವನು ಪಿತಾಮಹನ ಬಳಿಸಾರಿ "ಭಗವಾನ್! ಇವರಿಂದ ನನನ್ನು ರಕ್ಷಿಸಬೇಕು ಮತ್ತು ಇವುಗಳಿಗೆ ವೃತ್ತಿಗಳನ್ನು ವಿಧಿಸಬೇಕು" ಎಂದು ಕೇಳಿಕೊಂಡನು. ಆಗ ಅವನು ಅವುಗಳಿಗೆ ಅನ್ನ, ಔಷಧಿ ಮೊದಲಾದ ಸ್ಥಾವರ ಪದಾರ್ಥಗಳನ್ನೂ, ಬಲಶಾಲೀ

ಜಂಗಮ ಪ್ರಾಣಿಗಳಿಗೆ ದುರ್ಬಲ ಪ್ರಾಣಿಗಳನ್ನೂ ವಿಧಿಸಿದನು. ಅನ್ನಗಳನ್ನು ಪಡೆದ ಪ್ರಜೆಗಳು ತುಷ್ಟರಾಗಿ ಹಿಂದಿರುಗಿ, ಪ್ರೀತಿಮತ್ತರಾಗಿ ತಮ್ಮ ತಮ್ಮ ಯೋನಿಗಳಲ್ಲಿ ವೃದ್ಧಿಸಿದರು. ಪ್ರಜಾಸಂಕುಲಗಳು ವೃದ್ಧಿಸುತ್ತಿರಲು ಮತ್ತು ಲೋಕಗುರುವು ತುಷ್ಟನಾಗಿರಲು ಜ್ಯೇಷ್ಠನು ನೀರಿನಿಂದ ಮೇಲೆದ್ದು ಪ್ರಜಾಗಣಗಳನ್ನು ನೋಡಿದನು. ಬಹುರೂಪೀ ಪ್ರಜೆಗಳು ತಮ್ಮದೇ ತೇಜಸ್ಸಿನಿಂದ ವೃದ್ಧಿಸುತ್ತಿರುವುದನ್ನು ನೋಡಿ ಭಗವಾನ್ ರುದ್ರನು ಕ್ರೋಧದಿಂದ ತನ್ನ ಲಿಂಗವನ್ನು ಕಿತ್ತು ಬಿಸುಟನು. ಹಾಗೆ ಬಿಸುಟ ಲಿಂಗವು ಭೂಮಿಯಲ್ಲಿಯೇ ಪ್ರತಿಷ್ಠಿತವಾಯಿತು. ಅವನನ್ನು ಶಾಂತಗೊಳಿಸಲೋಸುಗ ಅವ್ಯಯ ಬ್ರಹ್ಮನು ಈ ಮಾತನ್ನಾಡಿದನು: “ಶರ್ವ! ಬಹಳಕಾಲ ನೀರಿನಲ್ಲಿದ್ದುಕೊಂಡು ನೀನು ಏನು ಮಾಡಿದೆ?” “ಇನ್ನೊಬ್ಬನಿಂದ ಈ ಪ್ರಜೆಗಳು ಸೃಷ್ಟಿಸಲ್ಪಟ್ಟಿದ್ದಾರೆ. ಈಗ ಇದರಿಂದ ನಾನೇನು ಮಾಡಲಿ? ಪಿತಾಮಹ! ಪ್ರಜೆಗಳಿಗೋಸ್ಕರವಾಗಿ ನಾನು ತಪಸ್ಸುಮಾಡಿ ಅನ್ನವನ್ನು ಪಡೆದುಕೊಂಡೆನು. ಪ್ರಜೆಗಳು ಸತತವಾಗಿ ಪರಿವರ್ತನೆಗೊಳ್ಳುವಂತೆ ಔಷಧಿಗಳೂ ಪರಿವರ್ತಿಸುತ್ತಿರುತ್ತವೆ.” ಕೋಪದಿಂದ ಹೀಗೆ ಹೇಳಿ

ಮಹಾತಪಸ್ವಿ ಭವನು ವಿಮನಸ್ಕನಾಗಿ ತಪಸ್ಸನ್ನು ತಪಿಸಲು ಮುಂಜವಂತ ಗಿರಿಯ ತಪ್ಪಲಿಗೆ ಹೊರಟು ಹೋದನು.

ದೇವಯುಗವು ಮುಗಿಯಲು ದೇವತೆಗಳು ವೇದಪ್ರಮಾಣಾನುಸಾರವಾಗಿ ವಿಧಿವತ್ತಾಗಿ ಯಜ್ಞವನ್ನು ಮಾಡಲು ಬಯಸಿ ಸಂಕಲ್ಪಗೊಂಡರು. ಅವ್ಯಗ್ರ ದೇವತೆಗಳು ಯಜ್ಞೋಚಿತ ಪ್ರದೇಶವನ್ನೂ, ಹವಿಸ್ಸುಗಳನ್ನೂ, ದ್ರವ್ಯಗಳನ್ನೂ, ಯಜ್ಞಸಾಧನಗಳನ್ನೂ ಸಿದ್ಧಪಡೆಸಿಕೊಂಡರು. ದೇವತೆಗಳಿಗೆ ರುದ್ರನು ಎಲ್ಲಿರುವನೆಂದು ತಿಳಿಯದೇ ಇದ್ದುದರಿಂದ ಅವರು ದೇವ ಸ್ಥಾಣುವಿಗೆ ಹವಿರ್ಭಾಗವನ್ನು ಕಲ್ಪಿಸಲಿಲ್ಲ. ಹಾಗೆ ಅಮರರು ಯಜ್ಞದಲ್ಲಿ ತನಗೆ ಹವಿರ್ಭಾಗವನ್ನು ಕಲ್ಪಿಸದೇ ಇರಲು ಕೃತ್ತಿವಾಸ ಶಿವನು ಅವರನ್ನು ದಂಡಿಸಲು ಬಯಸಿ ಮೊದಲು ಧನುಸ್ಸನ್ನು ಸೃಷ್ಟಿಸಿದನು. ಲೋಕಯಜ್ಞ, ಕ್ರಿಯಾಯಜ್ಞ, ಸನಾತನ ಗೃಹಯಜ್ಞ, ಪಂಚಭೂತಮಯ ಯಜ್ಞ ಮತ್ತು ಐದನೆಯದು ಮನುಷ್ಯ ಯಜ್ಞ. ಯಜ್ಞೈಷೀ ಕಪರ್ದಿಯು ಲೋಕಯಜ್ಞದಿಂದ ಧನುಸ್ಸನ್ನು ನಿರ್ಮಿಸಿದನು. ಅವನು ಸೃಷ್ಟಿಸಿದ ಧನುಸ್ಸು ಐದು ಮಾರುಗಳಷ್ಟು ಉದ್ದವಾಗಿತ್ತು. ವಷಟ್ಕಾರವೇ ಅವನ ಧನುಸ್ಸಿನ ಮೌರ್ವಿಯಾಯಿತು. ನಾಲ್ಕು ಯಜ್ಞಾಂಗಗಳು ಅವನ ಕವಚಗಳಾದವು. ಆಗ ಕ್ರುದ್ಧನಾದ

ಮಹಾದೇವನು ಕಾರ್ಮುಕವನ್ನೆತ್ತಿಕೊಂಡು ದೇವತೆಗಳು ಎಲ್ಲಿ ಸೇರಿದ್ದರೋ ಅಲ್ಲಿಗೆ ಬಂದನು. ಆ ಬ್ರಹ್ಮಚಾರಿ ಅವ್ಯಯನು ಹಿಡಿದ ಕಾರ್ಮುಕವನ್ನು ನೋಡಿ ದೇವೀ ಪೃಥ್ವಿಯು ವ್ಯಥೆಪಟ್ಟಳು ಮತ್ತು ಪರ್ವತಗಳು ನಡುಗಿದವು. ಪವನನು ಬೀಸಲಿಲ್ಲ. ಅಗ್ನಿಯು ಪ್ರಜ್ವಲಿಸಲಿಲ್ಲ. ಆಕಾಶದಲ್ಲಿ ನಕ್ಷತ್ರಮಂಡಲವು ಸಂವಿಗ್ನಗೊಂಡು ಸುತ್ತತೊಡಗಿತು. ಭಾಸ್ಕರನು ಹೊಳೆಯಲಿಲ್ಲ. ಚಂದ್ರನು ತನ್ನ ಮಂಡಲವನ್ನೇ ಬಿಟ್ಟು ಬಂದನು. ಸರ್ವ ಆಕಾಶವೂ ಕತ್ತಲೆಯಿಂದ ತುಂಬಿಕೊಂಡಿತು. ಉದ್ವಿಗ್ನರಾದ ದೇವತೆಗಳಿಗೆ ವಿಷಯವೇನೆಂದೇ ತಿಳಿಯಲಿಲ್ಲ. ಅವರಿಗೆ ಯಜ್ಞವೇ ಕಾಣುತ್ತಿರಲಿಲ್ಲ. ವೇದಗಳು ಹೊಳೆಯಲಿಲ್ಲ. ಆಗ ರುದ್ರನು ಆ ಯಜ್ಞದ ಹೃದಯಕ್ಕೆ ಬಾಣದಿಂದ ಹೊಡೆದನು. ಯಜ್ಞನಾದರೋ ಜಿಂಕೆಯ ರೂಪತಾಳಿ ಅಗ್ನಿಯೊಂದಿಗೆ ಪಲಾಯನಮಾಡಿದನು. ಅವನು ಅದೇರೂಪದಿಂದ ಆಕಾಶವನ್ನು ಸೇರಿ ಪ್ರಕಾಶಿಸಿದನು. ರುದ್ರನೂ ನಭಸ್ತಲದಲ್ಲಿ ಅದನ್ನು ಹಿಂಬಾಲಿಸಿ ಹೋದನು. ಯಜ್ಞನು ಹೊರಟುಹೋಗಲು ಏನೂ ತಿಳಿಯದ ಸುರರು ಸಂಜ್ಞಾಹೀನರಾದರು. ಸಂಜ್ಞೆಗಳನ್ನು ಕಳೆದುಕೊಂಡ

ದೇವತೆಗಳಿಗೆ ಏನೂ ತಿಳಿಯದಾಯಿತು. ಕ್ರುದ್ಧ ತ್ರ್ಯಂಬಕನು ಧನುಸ್ಸಿನ ತುದಿಯಿಂದ ಸವಿತುವಿನ ಬಾಹುಗಳನ್ನೂ, ಭಗನ ಕಣ್ಣುಗಳನ್ನೂ, ಪೂಷ್ಣನ ಹಲ್ಲುಗಳನ್ನೂ ಕಿತ್ತುಹಾಕಿದನು. ಆಗ ಎಲ್ಲ ದೇವತೆಗಳೂ ಯಜ್ಞಾಂಗಗಳೂ ಓಡಿ ಹೋದರು. ಕೆಲವರು ಅಲ್ಲಿಯೇ ತಲೆತಿರುಗಿ ಪ್ರಾಣಹೋದವರಂತೆ ಬಿದ್ದರು. ಓಡಿಹೋಗುತ್ತಿದ್ದ ಅವರೆಲ್ಲರನ್ನೂ ಶಿತಿಕಂಠನು ಅವಹೇಳನ ಮಾಡುತ್ತಾ ಧನುಸ್ಸಿನ ತುದಿಯನ್ನು ಮುಂದೆ ಚಾಚಿ ದೇವತೆಗಳನ್ನು ತಡೆದನು. ಆಗ ಅಮರರಿಂದ ಪ್ರೇರಿತಳಾದ ವಾಣಿಯು ಧನುಸ್ಸಿನ ಮೌರ್ವಿಯನ್ನು ಕತ್ತರಿಸಿದಳು. ಮೌರ್ವಿಯು ತುಂಡಾಗಲು ಆ ಧನುಸ್ಸು ಒಡನೆಯೇ ಮೇಲಕ್ಕೆ ಚಿಮ್ಮಿ ನೆಟ್ಟನೆ ನಿಂತಿತು. ಧನುಸ್ಸಿನಿಂದ ವಿಹೀನನಾದ ದೇವಶ್ರೇಷ್ಠನನ್ನು ಆಗ ದೇವತೆಗಳು ಯಜ್ಞನೊಂದಿಗೆ ಶರಣು ಹೊಕ್ಕರು. ಪ್ರಭುವು ಅವರನ್ನು ಕ್ಷಮಿಸಿದನು. ಆಗ ಪ್ರಸನ್ನನಾದ ಭಗವಾನನು ತನ್ನ ಕೋಪವನ್ನು ಜಲಾಶಯದಲ್ಲಿ ಬಿಸುಟನು. ಅದು ಬಡವಾಗ್ನಿಯಾಗಿ ನಿತ್ಯವೂ ಸಮುದ್ರವನ್ನು ಒಣಗಿಸುತ್ತಿರುತ್ತದೆ. ಅವನು ಭಗನ ಕಣ್ಣುಗಳನ್ನೂ, ಸವಿತುವಿನ ಬಾಹುಗಳನ್ನೂ, ಪೂಷ್ಣನ ಹಲ್ಲುಗಳನ್ನೂ ಮತ್ತು ಯಜ್ಞನನ್ನೂ

ಹಿಂದಿರುಗಿಸಿದನು. ಅನಂತರ ಸರ್ವವೂ ಪುನಃ ಸ್ವಸ್ಥವಾಯಿತು. ಎಲ್ಲ ಯಜ್ಞಗಳಲ್ಲಿಯೂ ದೇವತೆಗಳು ಮಹಾದೇವನಿಗೆ ಹವಿಸ್ಸಿನ ಭಾಗವನ್ನು ಕಲ್ಪಿಸಿದರು.

ಅವನು ಕ್ರುದ್ಧನಾದರೆ ಸರ್ವ ಭುವನಗಳೂ ಅಸ್ವಸ್ಥವಾಗುತ್ತವೆ. ಅವನು ಪ್ರಸನ್ನನಾದರೆ ಪುನಃ ಸ್ವಸ್ಥವಾಗುತ್ತವೆ. ವೀರ್ಯವಾನ್ ದ್ರೌಣಿಯ ಮೇಲೆ ಅವನು ಪ್ರಸನ್ನನಾಗಿದ್ದನು. ಆದುದರಿಂದಲೇ ನಿನ್ನ ಮಹಾರಥ ಪುತ್ರರೆಲ್ಲರೂ, ಅನ್ಯ ಅನೇಕ ಶೂರರೂ, ಅನುಯಾಯಿಗಳೊಂದಿಗೆ ಪಾಂಚಾಲರೂ ಅವನಿಂದ ಹತರಾದರು. ದ್ರೌಣಿಯು ತನ್ನ ಪರಾಕ್ರಮದಿಂದ ಇದನ್ನು ಮಾಡಲಿಲ್ಲ. ಆದುದರಿಂದ ಇದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ಮಹಾದೇವನ ಪ್ರಸಾದವೆಂದು ತಿಳಿದು ಅನಂತರದ ಕಾರ್ಯಗಳನ್ನು ಮಾಡು!”